# ಕ್ರಿಸ್ತನ ಜೀವಿತ

ಭಾಗ - 2



# ಕ್ರಿಸ್ತನ ಜೀವಿತ

ಪಾಸ್ಟರ್ ರಸಲ್ಲರ ಲೇಖನಿಯಿಂದ ಬಂದ
ಕ್ರಿಸ್ತನ ಜೀವನ ಚರಿತ್ರೆ

## ಭಾಗ – 2

ಸತ್ಯವೇದ ವಿದ್ಯಾರ್ಥಿಗಳ
ಒಂದು ಪ್ರಕಟಣೆ




For Private Circulation Only

NOT FOR SALE

**Jesus Loves Ministry**

For free indepth Bible study contact

#1 BETHESDA, 1st floor, Janani Enclave, 1st cross, survey no 108/3,
Karivobanahalli, Andrahalli main road, Bangalore 560091

8867768876 rajudawn1874@gmail.com

Available Languages : Kannada, English, Hindi, Tamil and Telugu

# ಮುನ್ನುಡಿ

ಯೇಸುವು ತನ್ನ ಹಿಂಬಾಲಕರಾಗಬೇಕೆಂದು ತನ್ನ ಮೊದಲ ಶಿಷ್ಯರನ್ನು ಕರೆದಾಗ ಅವರು ತಮ್ಮ ಜೀವಿತದಲ್ಲಿ ಒಂದು ಆಶ್ಚರ್ಯಕರವಾದ ಬದಲಾವಣೆಗಳ ಅನುಭವ ಪಡೆಯಬೇಕಿತ್ತು. ವೈಯಕ್ತಿಕವಾದ ಯಜ್ಞಾರ್ಪಣೆಯ ಜೀವಿತವನ್ನು ನಡೆಸುವುದಕ್ಕಾಗಿ ಅವರು ತಮ್ಮ ಮೀನುಗಾರರ ಹಾಗೂ ಸುಂಕದವರ ವೃತ್ತಿಯನ್ನು ತ್ಯಜಿಸಬೇಕಾಯಿತು. ಗುರುವಿನ ಪಾದದ ಬಳಿಯಲ್ಲಿ ಕುಳಿತು ಆತನಿಂದಲೇ ನೇರವಾಗಿ ಕಲಿತುಕೊಳ್ಳುವುದು ಅವರಿಗೆ ಒಂದು ಅದ್ಭುತವಾದ ಅನುಭವವಾಗಿರಬೇಕು. ಅಪೋಸ್ತಲರು ಆದಿ ಕ್ರೈಸ್ತ ಸಭೆಯ ನಾಯಕರುಗಳಾಗಿ ಬೆಳೆಯುತ್ತಿರಲು, ಆತನ ವಿಶೇಷ ವರ್ತನೆಗಳು ಹಾಗೂ ಆತನು ಜನರೊಂದಿಗೆ ನಡಕೊಳ್ಳುವ ವಿಧಾನಗಳು ಅವರಿಗೆ ಒಂದು ಮಾದರಿಯಾದವು. ಯೇಸುವಿನ ಮಾತನ್ನು ಕೇಳುವುದು ಮಾತ್ರವಲ್ಲದೆ ಆತನು ನಡೆಸಿದ ತನ್ನ ಪ್ರತಿಷ್ಠಾರ್ಪಿತವಾದ ಜೀವನದ ರೀತಿಗಳಿಗೆ ಸಾಕ್ಷಿಗಳಾಗುವುದು ಸಹ ಅವರಿಗೆ ಮುಖ್ಯವಾಗಿತ್ತು. ಆತನ ಮಾತಿನ ಸ್ವರಶೈಲಿಯು ಸಹ ಅವರ ಹೃದಯ ಮತ್ತು ಮನಸ್ಸಿನ ಮೇಲೆ ಮಹತ್ತರವಾದ ಪರಿಣಾಮ ಬೀರಿರಬೇಕು.

ಯೇಸುವಿನೊಂದಿಗೆ ಜೀವಿಸುತ್ತಿದ್ದವರಿಗೆ ಆತನ ಜೀವಿತವು ಪರಿಣಾಮ ಬೀರಿದ್ದಂತೆ ತಮಗೂ ಪರಿಣಾಮ ಬೀರಬಹುದೆಂದು ಈ ದಿನದಲ್ಲಿ ಯಾರಾದರೂ ಒಬ್ಬರು ನಿರೀಕ್ಷಿಸಬಹುದಾದರೂ ಹೇಗೆ? ನಮಗೆ ಕೇವಲ ಆತನು ಹೇಗೆ ರೋಗಿಗಳು ಹಾಗೂ ಬಡವರೊಂದಿಗೆ ಮೃದುವಾದ ರೀತಿಯಲ್ಲಿ ಬಳಕೆಯಾಗಿದ್ದನೆಂಬುದನ್ನು ವರ್ಣಿಸುವ ಮಾತುಗಳನ್ನು ಓದಲು ಮಾತ್ರ ಸಾಧ್ಯ. ಆದರೆ ಪ್ರತಿಯೊಂದು ಘಟನೆಗಳು ನಡೆದಾಗ ಅದರ ಸುತ್ತಲಿದ್ದ ವಾತಾವರಣ ಮತ್ತು ಅಲ್ಲಿನ ನಿರ್ದಿಷ್ಟ ಸಂದರ್ಭಗಳ ವಿವರಣೆಗಳನ್ನು ನಾವು ಪಡೆಯದೆ ಹೋಗುತ್ತೇವೆ. ಅತ್ಯುತ್ತಮವೆಂದರೆ, ನಮಗೆ ದೊರಕಿರುವ ವಿಷಯಗಳು ಪರೋಕ್ಷವಾಗಿ ಬಂದಿರುವಂತವುಗಳು. ಇದರ ಪರಿಣಾಮವಾಗಿ ಕರ್ತನ ಕಡೆಗೆ ಭಕ್ತಿ ತೋರಲು ಮತ್ತು ಆತನ ನಿಮಿತ್ತ ತ್ಯಾಗಗಳನ್ನು ಮಾಡಲು ಈಗಿನ ನವ್ಯಕಾಲದ ಕ್ರೈಸ್ತನಿಗೆ ಕಷ್ಟಕರವಾಗಿ ತೋರಬಹುದು. ಆದರೆ ಸುವಾರ್ತಾ ಯುಗದ ಅಂತ್ಯದಲ್ಲಿರುವ ನಾವು ನಮ್ಮ ರಕ್ಷಕನನ್ನು ತಿಳಿದು ಆತನನ್ನು ಅರಿತುಕೊಳ್ಳಲು ಸಾಧ್ಯವಾದಷ್ಟೂ ಉತ್ತಮ ಪ್ರಯತ್ನವನ್ನು ಮಾಡುತ್ತಿದ್ದೇವೆ. ಕರ್ತನು ತನ್ನ ಭಕ್ತರಿಗಾಗಿ ವಿಶೇಷ ಏರ್ಪಾಟುಗಳನ್ನು ಮಾಡಿರುವುದಕ್ಕಾಗಿ ಆತನಿಗೆ ಹೃದಯ ಪೂರ್ವಕವಾಗಿ ಅಭಾರಿಗಳಾಗಿದ್ದೇವೆ. ಪುನರಾಗಮಿಸಿರುವ ನಮ್ಮ ಕರ್ತನು ಆ ವಿವೇಕಿಯೂ ನಂಬಿಗಸ್ತನೂ ಆದ ಸೇವಕನ ಲೇಖನಿಯ ಮೂಲಕ ಪ್ರವಾಹದೋಪಾದಿಯಲ್ಲಿ ಸತ್ಯವನ್ನು ಬಿಡುಗಡೆ ಮಾಡಿದ್ದಾನೆ. ಯೇಸುವಿನ ಬಗ್ಗೆ ಪ್ರತ್ಯಕ್ಷವಾದ ತಿಳುವಳಿಕೆ ನಮಗೆ ಇಲ್ಲದಿದ್ದರೂ. ಆತನ ವಿಮೋಚನಾ ಕಾರ್ಯಗಳ ವಿಷಯವಾಗಿ ಆಳವಾದ ಪರಿಜ್ಞಾನವನ್ನು ಹೊಂದುವುದರ ಮೂಲಕ ನಮಗಾದ ನಷ್ಟವು ಹೆಚ್ಚಿನ ರೀತಿಯಲ್ಲಿ ಸರಿದೂಗಲ್ಪಟ್ಟಿದೆ. ಈ ಪರಿಜ್ಞಾನವು ಬಹು ನಂಬಿಗಸ್ತರಾಗಿ ಸೇವೆ ಮಾಡಿದ ಆದಿ ಕ್ರೈಸ್ತರ ತ್ಯಾಗಮಯ ಜೀವಿತದ ಶೈಲಿಯಲ್ಲಿ ನಡೆಸಲು ನಮ್ಮನ್ನು ಚೈತನ್ಯಗೊಳಿಸಬೇಕು.

ನಾವು ದೇವರ ಯೋಜನೆಯನ್ನು ಹೆಚ್ಚು ಕೂಲಂಕುಷವಾಗಿ ಅರಿಯಲು ಪ್ರಯತ್ನಿಸುವಾಗ ನಮಗೆ ತಿಳಿದುಬಂದದ್ದೇನೆಂದರೆ, ಯೇಸುವಿನ ಜೀವಿತದ ಅಧ್ಯಯನವು ಇಲ್ಲದೆ ದೇವರ ವಿಷಯದ ಅರ್ಥಪೂರ್ಣ ಪರಿಜ್ಞಾನ ಸಂಪೂರ್ಣವಾಗುವುದಿಲ್ಲವೆಂಬುದು. ಈ ಕಾರಣದಿಂದಾಗಿ ನಮ್ಮಲ್ಲಿ ಪ್ರತಿಯೊಬ್ಬರೂ ಆತನ ಜೀವಿತದ ಪ್ರತಿಯೊಂದು ಸಂಗತಿಗಳ ಬಗ್ಗೆ ಆಮೂಲಾಗ್ರವಾಗಿ ಪರಿಚಿತರಾಗಿರುವುದು ಅವರಿಗೆ ವಿವೇಕಕರ. ಅಪೋಸ್ತಲನು ಸಭೆಗೆ ಬುದ್ಧಿಮಾತಾಗಿ ಹೇಳಿರುವುದು – "ನೀವು ಮನಗುಂದಿದವರಾಗಿ ಬೇಸರಗೊಳ್ಳದಂತೆ ಆತನನ್ನು ಆಲೋಚಿಸಿರಿ. ಆತನು ಪಾಪಿಗಳಿಂದ ಎಷ್ಟೋ ವಿರೋಧವನ್ನು ಸಹಿಸಿಕೊಂಡನು." ನಮ್ಮ ಕರ್ತನ ವಿಷಯವಾಗಿ ಈ ವಿಧವಾದ ಪರಿಗಣನೆಗಿಂತ ನಮ್ಮ ಜೀವಿತಕ್ಕೆ ಇನ್ನೂ ಹೆಚ್ಚು ಘನವಾದ ಅಧ್ಯಯನ ಹಾಗೂ ಕಾರ್ಯರೂಪ ಮಾರ್ಗದರ್ಶಿಯು ಬೇರೊಂದಿಲ್ಲ. ನಾವು ಹೇಗೆ ಜೀವಿಸಬೇಕು, ಹೇಗೆ ಸೇವೆ ಮಾಡಬೇಕು, ಹೇಗೆ ದೇವರ ಹೋಲಿಕೆಯ ಗುಣಗಳನ್ನು ನಮ್ಮಲ್ಲಿ ವೃದ್ಧಿಗೊಳಿಸಬಹುದೆಂಬುದನ್ನು ಆತನು ನಮಗೆ ಬೋಧಿಸಿದ್ದಾನೆ.

ಮುಂದಿನ ಪುಟಗಳಲ್ಲಿ "ಸುವಾರ್ತೆಗಳಲ್ಲಿರುವ ಸಾಮರಸ್ಯವನ್ನು ನೀವು ನೋಡುವಿರಿ, ಅದು ನಾಲ್ಕು ಸುವಾರ್ತೆಗಳಲ್ಲಿರುವ ಕಾಲಾನುಕ್ರಮದ ವಿವರಗಳು. ಈ ಕ್ರಮವನ್ನೇ ಅನುಸರಿಸಿ ನಾವು ಇದಕ್ಕೆ ಹೊಂದಿಕೊಂಡಂತೆ ಲೇಖನವನ್ನು ಪ್ರಸ್ತುತಪಡಿಸುತ್ತಿದ್ದೇವೆ. ಹೀಗೆ ಪ್ರಕಟಿಸಿರುವ ಈ ಲೇಖನಗಳನ್ನು ಪರಿಶೀಲಿಸುವಾಗ ಸತ್ಯವೇದದ ಪ್ರತಿಯೊಂದು ವಾಕ್ಯಭಾಗಗಳ ವಿಷಯವಾದ ಲೇಖನಗಳು ಇಲ್ಲದಿರುವುದನ್ನು ನೀವು ಗಮನಿಸಿ. ಆದಾಗ್ಯೂ ಈ ವಾಕ್ಯ ಭಾಗಗಳನ್ನು ದಾಟಿಹೋಗದಂತೆಯೂ, ಎಕ್ಸ್‌ಪಾಂಡೆಡ್ ಬಿಬ್ಲಿಕಲ್ ಕಾಮೆಂಟರಿ ಎಂಬ ಗ್ರಂಥವನ್ನಾಗಲಿ ಇಲ್ಲವೇ ಅಧಿಕ ಉಪಯುಕ್ತವಾದ ಗ್ರಂಥ ಮೂಲಗಳನ್ನು ಬಳಸಬೇಕೆಂಬುದಾಗಿಯೂ ಸಹೋದರರನ್ನು ನಾವು ಪ್ರೇರೇಪಿಸುತ್ತೇವೆ. ಇದರ ಜೊತೆಯಲ್ಲಿ ಈ ಪುಸ್ತಕದೊಂದಿಗೆ ಒಂದು ಸೀಡಿ ಸೇರಿಸಿದ್ದೇವೆ. ಈ ಸೀಡಿಯಲ್ಲಿ "ಅಡೋಬ್ ಪೀಡಿಎಫ್ ಫೈಲ್" ಮತ್ತು "ಮೈಕ್ರೋಸಾಫ್ಟ್ ವರ್ಡ್ ಫೈಲ್‌ಗಳಿದ್ದು, ಇವುಗಳು ಈ ಪುಸ್ತಕದ ಎಲ್ಲಾ ಲೇಖನಗಳನ್ನು ಒಳಗೊಂಡಿರುತ್ತದೆ. ಲ್ಯಾಪ್‌ಟಾಪ್ ಕಂಪ್ಯೂಟರ್‌ನ್ನು ಬಳಸಲು ಇಚ್ಛಿಸುವವರಿಗೆ ಇದು ಸಹಾಯಕಾರಿ. ವೈಯಕ್ತಿಕ ಅಧ್ಯಯನಕ್ಕೆ ಒಂದು ಲೇಖನವನ್ನು ಸಹ ಪ್ರಿಂಟ್ ತೆಗೆದುಕೊಂಡು ಅದಕ್ಕೆ ಸಿದ್ಧತೆ ಮಾಡಿಕೊಳ್ಳಬಹುದು. ಯಾವ ವಿಧದಲ್ಲಿಯೂ ಈ ಸೀಡಿ ಉಪಯೋಗ ಮಾಡ ಬಯಸಿದರೂ ಅದು ಉಪಯುಕ್ತವಾಗಿ ಪರಿಣಮಿಸುವುದೆಂದು ನಮ್ಮ ನಿರೀಕ್ಷೆ.

ಕ್ರಿಸ್ತನಲ್ಲಿ ನಿಮ್ಮ ಸಹೋದರರು,

ಚಿಕಾಗೋ ಸತ್ಯವೇದ ವಿಧ್ಯಾರ್ಥಿಗಳು,
ಪುಸ್ತಕ ಮರುಪ್ರಕಾಶನ ಸಮಿತಿ – 2007

# ಅನುವಾದಕರ ನುಡಿ

ಕ್ರಿಸ್ತನ ಜೀವಿದ ವಿಷಯವಾಗಿ ಪಾಸ್ಟರ್ ರಸಲ್ಲರು ಬರೆದ ಲೇಖನಗಳನ್ನು ಸಂಗ್ರಹಿಸಿ "ಲೈಫ್ ಆಫ್ ಕ್ರೈಸ್ಟ್" ಎಂಬ ಗ್ರಂಥವನ್ನು ಶಿಕಾಗೋ ಸತ್ಯವೇದ ವಿಧ್ಯಾರ್ಥಿಗಳ ಮರು-ಪ್ರಕಾಶನ ಸಮಿತಿಯು ಪ್ರಕಟಮಾಡಿದ್ದು ಅದನ್ನು ಸತ್ಯವೇದ ವಿಧ್ಯಾರ್ಥಿಗಳು ಎಲ್ಲೆಡೆ ಆಸಕ್ತಿಯಿಂದ ಅಧ್ಯಯನ ಮಾಡುತ್ತಿರುವುದು ಸಂತೋಷಕರವಾದ ವಿಷಯ. ಈ ಗ್ರಂಥವನ್ನು ಕನ್ನಡ ಭಾಷೆಗೆ ಅನುವಾದಿಸಿ ಅದನ್ನು ಕೇವಲ ಕನ್ನಡ ಮಾತ್ರ ತಿಳಿದಿರುವ ಸಹೋದರರಿಗೆ ಒದಗಿಸಿಕೊಡುವುದು ಬಹು ದಿನಗಳಿಂದ ಇದ್ದ ಬಯಕೆ. ಈ ಗ್ರಂಥವು ಸುಮಾರು 580 ಪುಟಗಳಷ್ಟಿದ್ದು ಅದರ ಪೂರ್ಣ ಅನುವಾದವು 2-3 ವರುಷಗಳು ತೆಗೆದುಕೊಳ್ಳುವ ಸಂಭವವಿರುವುದರಿಂದಲೂ ಹಾಗೂ ವರುಷ ವರುಷಕ್ಕೆ ಅನುವಾದಗೊಂಡ ಪಾಠಗಳನ್ನು ಸಹೋದರರ ಪ್ರಯೋಜನಾರ್ಥ ಭಾಗಭಾಗವಾಗಿ ಪ್ರಕಟಿಸುವುದು ಉಚಿತವೆಂದು ತೋರಿದ್ದರಿಂದಲೂ ಈ ಗ್ರಂಥದ ಮೊದಲನೆಯ ಭಾಗವನ್ನು ಕಳೆದ ವರುಷ ಪ್ರಕಟಿಸಲಾಗಿತ್ತು. ಈ ವರುಷದಲ್ಲಿ ಅನುವಾದಗೊಂಡದ್ದನ್ನು ಎರಡನೆಯ ಭಾಗವಾಗಿ ಈಗ ಪ್ರಕಟ ಮಾಡಲಾಗುತ್ತಿದೆ. ಅಲ್ಲದೆ ಈ ಗ್ರಂಥದ ಎರಡನೇ ಭಾಗದ ಪಿ.ಡಿ.ಎಫ್. ರೂಪದ ಪ್ರತಿಯನ್ನು www.dawnbiblestudents.com ನಲ್ಲಿಯೂ ಸಹ ಪ್ರಕಟಿಸಲಾಗಿದೆ.

ಈ ಗ್ರಂಥದ ಪೂರ್ಣ ಪ್ರಕಟನೆಯ ಮುನ್ನ ಈ ಮೊದಲನೆಯ ಮತ್ತು ಎರಡನೆಯ ಭಾಗವನ್ನು ಕರಡು ಪ್ರತಿಯಾಗಿ ಈ ವಿಷಯಗಳನ್ನು ಬೋಧಿಸುವವರ ಹಾಗು ಇದನ್ನು ವೈಯುಕ್ತಿಕವಾಗಿ ಅಧ್ಯಯನ ಮಾಡುವವರ ಪ್ರಯೋಜನಾರ್ಥವಾಗಿ ಬಿಡುಗಡೆ ಮಾಡಲಾಗುತ್ತಿದೆ. ಈ ಗ್ರಂಥದ ವಿಷಯಗಳನ್ನು ಬೋಧಿಸಿದವರೂ ಹಾಗೂ ಅಧ್ಯಯನ ಮಾಡಿದವರು ಇದರಲ್ಲಿ ಕಂಡುಬಂದ ಲೋಪದೋಷಗಳನ್ನು ತಿಳಿಸಿದ್ದಲ್ಲಿ ಅಲ್ಲದೆ ಉತ್ತಮ ಅನುವಾದಕ್ಕೆ ಸಲಹೆ ಮಾಡಿದಲ್ಲಿ ಅವರಿಗೆ ಬಹು ಅಭಾರಿ. ಪೂರ್ಣ ಗ್ರಂಥದ ಪ್ರಕಟನೆ ಮಾಡುವಾಗ ಅವುಗಳನ್ನು ಪರಿಗಣಿಸಲಾಗುವುದು.

ಈ ಗ್ರಂಥದ ಎರಡನೆಯ ಭಾಗದ ಅನುವಾದ ಕಾರ್ಯಕ್ಕೆ ಎಲ್ಲಾ ವಿಧವಾದ ಅನುಕೂಲ ಆಶೀರ್ವಾದಗಳನ್ನು ನೀಡಿದ ಪರಲೋಕದ ನಮ್ಮ ತಂದೆ ದೇವರಾದ ಯೆಹೋವನಿಗೆ ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಮೂಲಕ ಮೊದಲನೆಯದಾಗಿ ಸ್ತೋತ್ರ. ಹಾಗೂ ಶ್ರಮವಹಿಸಿ ಮುದ್ರಣಕ್ಕೆ ಸಿದ್ಧಮಾಡಿಕೊಟ್ಟ ಸಹೋದರರಾದ ನಂಜಪ್ಪನವರಿಗೂ ಹಾಗು ಸಹೋದರರಾದ ದಯಾಶಂಕರ್‌ರವರಿಗೂ ಮತ್ತು ಇದರ ಮುದ್ರಣದ ಜವಾಬ್ದಾರಿ ಹೊತ್ತ ಮುದ್ರಣ ಸಂಸ್ಥೆಗೆ ಮತ್ತು ಅದರ ಮಾಲೀಕರಿಗೆ ಮಾತ್ರವಲ್ಲದೆ ಇದಕ್ಕೆ ಪ್ರಾರ್ಥನಾಪೂರ್ವಕವಾಗಿ ಪ್ರೋತ್ಸಾಹಿಸಿದವರೆಲ್ಲರಿಗೂ ಅನುವಾದಕರು ಬಹು ಅಭಾರಿ.

ಈ ಗ್ರಂಥದ ಎರಡನೇ ಭಾಗವನ್ನೂ ಸಹ ಓದಿ ಅಧ್ಯಯನ ಮಾಡಿ ಇದರಲ್ಲಿರುವುದನ್ನು ಅಭ್ಯಾಸಿಸಿ ಕ್ರಿಸ್ತನ ವಿಷಯವಾಗಿ ಪೂರ್ಣವಾದ ತಿಳಿವಳಿಕೆಯನ್ನು ಹೊಂದಿ ಅನುದಿನವೂ ಆತನ ಸಾರೂಪ್ಯಕ್ಕೆ ಸಾಗುತ್ತಾ ಅಂತ್ಯದಲ್ಲಿ ಕ್ರಿಸ್ತನಲ್ಲಿರುವ ಜೀವಾಶೀರ್ವಾದಗಳಿಗೆ ಭಾಧ್ಯರಾಗಿ ಪರಲೋಕದ ತಮ್ಮ ತಂದೆ ದೇವರಿಗೆ ತಮ್ಮ ರಕ್ಷಕನ ಮೂಲಕವಾಗಿ ಮಹಿಮೆಯುಂಟಾಗುವ ಹಾಗೆ ನಡೆಯಲೆಂಬ ಪ್ರಾರ್ಥನೆಯೊಡನೆ ಇದನ್ನು ಪ್ರಕಟ ಮಾಡಲಾಗಿದೆ.

ಕ್ರಿಸ್ತನ ಸೇವೆಯಲ್ಲಿ ತಮ್ಮ ಸಹೋದರ
**ಜೆ. ಜಯಪ್ರಸಾದ್**

# ವಿಷಯ ಸೂಚಿ

ಮುನ್ನುಡಿ ........................................ iii

ಅನುವಾದಕರ ನುಡಿ ........................................ iv

ವಿಷಯಸೂಚಿ ........................................ v

ಪಠ್ಯ ವಿಷಯ ಸೂಚಿ ........................................ vi & vii

## ಪ ಠ್ಯ   ವಿ ಷ ಯ ಸೂ ಚಿ


| ಕ್ರ. ಸಂ. | ಪಾಠ | ರಿಪ್ರಿಂಟ್ಸ್ ಪುಟ | ಪುಟ |
|---|---|---|---|
| 01 | ಕರುಣಾಲಯ | 3500 | 02–08 |
| 02 | ಇವುಗಳಿಗಿಂತಲೂ ದೊಡ್ಡದಾದ ಕಾರ್ಯಗಳು | 2433 | 09-13 |
| 03 | ಸಬ್ಬತ್ ವಿಷಯವಾದ ಕರ್ತವ್ಯಗಳು ಹಾಗೂ ಸವಲತ್ತುಗಳು | 3752 | 15-21 |
| 04 | ಹನ್ನೆರಡು ಮಂದಿಯನ್ನು ಆರಿಸಿಕೊಂಡದ್ದು | 1735 | 22-22 |
| 05 | ಹನ್ನೆರಡು ಮಂದಿ ಅಪೋಸ್ತಲರು | 1521 | 23-39 |
| 06 | ಪರಿಪೂರ್ಣನಾದ ಆ ಮನುಷ್ಯನನ್ನು ಗುರುತಿಸಿ! ಇಗೊ ಆ ನೀತಿವಂತನು | 2585 | 43-54 |
| 07 | ಭೂಮಿಗೆ ಉಪ್ಪೂ ಮತ್ತು ಲೋಕಕ್ಕೆ ಬೆಳಕೂ | 2099 | 54-57 |
| 08 | ನಿಮ್ಮ ನೀತಿಯು | 3243 | 57-59 |
| 09 | ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ (ಪರಿಪೂರ್ಣನಾಗಿರುವಂತೆ ದೋಷವಿಲ್ಲದಿರುವದು (ಪರಿಪೂರ್ಣರಾಗಿರುವದು) | 4558 | 60-62 |
| 10 | ಪ್ರಾರ್ಥನೆ – ಒಂದು ವಿಶೇಷ ಸೌಲಭ್ಯ | 5021 | 63-66 |
| 11 | ಉಚಿತ ಹಾಗು ಅನುಚಿತ ಮಹತ್ವಾಕಾಂಕ್ಷೆಗಳು | 4566 | 66-68 |
| 12 | ರಾಜಾಜ್ಞೆಯೂ ಸುವರ್ಣ ಸೂತ್ರವೂ | 2589 | 68-74 |
| 13 | ಹೇಗೆ ಕಿವಿಗೊಡಬೇಕೆಂಬುದನ್ನು ಗಮನಿಸಿ | 3746 | 74-80 |
| 14 | ಯೇಸುವಿನಲ್ಲಿರುವ ಪುನರುತ್ಥಾನ ಶಕ್ತಿ | 3754 | 81-87 |
| 15 | ನಿರಾಶನಾದ ಪ್ರವಾದಿಯ ಬುದ್ಧಿವಂತಿಕೆಯ ವಿಧಾನ | 2620 | 88-92 |
| 16 | ತಿಳುವಳಿಕೆಯು ಜವಾಬ್ದಾರಿಯನ್ನು ಹೆಚ್ಚಿಸುತ್ತದೆ | 2623 | 93-99 |
| 17 | ಎರಡು ವಿಧವಾದ ಪಾಪಿಗಳು | 2625 | 100-104 |
| 18 | "ಅವರು ನಿಷ್ಕಾರಣವಾಗಿ ನನ್ನನ್ನು ಹಗೆಮಾಡಿದರು" | 4608 | 106-107 |
| 19 | ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪುಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪುಹೊಂದುವಿ" | 1937 | 108-113 |
| 20 | "ನನಗೆ ತಾಯಿಯೂ ತಮ್ಮಂದಿರೂ ಯಾರು?" | 0943 | 113-114 |
| 21 | ಒಳ್ಳೆಯ ನೆಲದಲ್ಲಿನ ಒಳ್ಳೆಯ ಬೀಜ | 4634 | 117-119 |
| 22 | ಗೋದಿ ಮತ್ತು ಹಣಜಿ | 4635 | 119-121 |
| 23 | ಪರಲೋಕರಾಜ್ಯದ ಚಿತ್ರಣಗಳು | 4636 | 121-124 |
| 24 | ಬಹುಮಾನವಾಗಿ ಲಭಿಸುವ ಆ ರಾಜ್ಯ | 5047 | 124-127 |
| 25 | ವಿರೋಧಿಯಾದ ಸೈತಾನನ ಮೇಲಿನ ಅಧಿಕಾರ | 4577 | 129-131 |
| 26 | ನಂಬಿಕೆ: ಆಶೀರ್ವಾದದ ಸಾಧನ | 4588 | 133-135 |
| 27 | ಬೆಳೆಯು ಬಹಳ – ಕೆಲಸದವರು ಸ್ವಲ್ಪ | 2635 | 138-141 |
| 28 | ಪರಲೋಕರಾಜ್ಯವು ಸಮೀಪಿಸಿತು | 4593 | 141-143 |
| 29 | ಬಹು ದುಬಾರಿಯಾದ ವ್ಯವಹಾರಗಳು | 3325 | 145-150 |
| 30 | ಆತನು ಹಸಿದವರಿಗೆ ಆಹಾರವನ್ನು ಕೊಡುವನು | 3779 | 152-157 |
| 31 | "ಸ್ವಾಮೀ ನನ್ನನ್ನು ಕಾಪಾಡು" ಎಂದು ಪೇತ್ರನು ಕೂಗಿಕೊಂಡನು | 4618 | 159-160 |
| 32 | "ಜೀವಕೊಡುವ ರೊಟ್ಟಿ ನಾನೇ;" | 2651 | 162168 |
| 33 | ರಕ್ತ ಮತ್ತು ಮಾಂಸ | 0611 | 168-170 |
| 34 | "ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು;" | 1710 | 171-173 |
| 35 | ಮನುಷ್ಯನದಲ್ಲ ಇದು ದೇವರ ನುಡಿ | 5096 | 175-178 |

## ಪ ಠ್ಯ ವಿ ಷ ಯ ಸೂ ಚಿ


| ಕ್ರ.ಸಂ. | ಪಾಠ | ರಿಪ್ರಿಂಟ್ಸ್ ಪುಟ | ಪುಟ |
|---|---|---|---|
| 36 | ಈತನು (ಕ್ರಿಸ್ತನು)...ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು | 3337 | 179-184 |
| 37 | ಎಲ್ಲಾ ಚೆನ್ನಾಗಿ ಮಾಡಿದ್ದಾನೆ | 5103 | 184-187 |
| 38 | ಆಕಾಶದಲ್ಲಿ ಒಂದು ಸೂಚನೆ | 5111 | 188-191 |
| 39 | ಆ ಮಹತ್ತರವಾದ ಪ್ರಶ್ನೆ | 5120 | 193-196 |
| 40 | (ಯೇಸುವಿನ) ಪ್ರಕಾಶ ರೂಪದರ್ಶನ | 1761 | 197-198 |
| 41 | ನಂಬುವವನಿಗೆ ಎಲ್ಲಾ ಆಗುವದು | 5128 | 200-202 |
| 42 | ಪರಲೋಕರಾಜ್ಯದಲ್ಲಿ ಚಿಕ್ಕವನು ಮತ್ತು ಹೆಚ್ಚಿನವನು | 2660 | 205-209 |
| 43 | ಏಳೆಪ್ಪತ್ತು ಸಾರಿ ಕ್ಷಮಿಸು | 5134 | 209-211 |
| 44 | “ಆಕಾಶದಿಂದ ಬೆಂಕಿಬಿದ್ದು ಇವರನ್ನು ನಾಶಮಾಡಲಿ ಎಂದು ನಾವು ಹೇಳುವದಕ್ಕೆ ನಿನಗೆ ಮನಸ್ಸುಂಟೋ” | 4701 | 212-214 |
| 45 | “ಆತನ ಸೇವಕರು ಆತನಿಗೆ ಸೇವೆಮಾಡುವರು” | 5370 | 214-216 |
| 46 | ಪರ್ಣಶಾಲೆಗಳ ಹಬ್ಬದಲ್ಲಿ | 2437 | 219-224 |
| 47 | ಪರ್ಣಶಾಲೆಗಳ ಹಬ್ಬ | 3508 | 224-230 |
| 48 | “ನಿಮಗೆ ನಿಜವಾಗಿಯೂ ಬಿಡುಗಡೆಯಾಗುವದು” | 2438 | 233-239 |
| 49 | “ನಾನು ಕುರುಡನಾಗಿದ್ದೆನು ಈಗ ಕಾಣುತ್ತದೆ” | 4148 | 239-245 |
| 50 | ಎಪ್ಪತ್ತು ಮಂದಿ ಸೇವಕರನ್ನು ನೇಮಿಸಿದುದು | 5362 | 246-249 |
| 51 | “ನನ್ನ ನೆರೆಯವನು ಯಾರು” | 3803 | 250-256 |
| 52 | ಉತ್ತಮ ಭಾಗವನ್ನು ಆರಿಸಿಕೊಳ್ಳುವದು | (ಹಾರ್ವೆಸ್ಟ್ ಗ್ಲೀನಿಂಗ್ ಗ್ರಂಥ 2) ಪುಟ 80 | 256-258 |
| 53 | ಬೆಳಕಿನ ಪ್ರಭುವಿನ ಪ್ರತಿಸ್ಪರ್ಧಿಯಗಿ ಅಂಧಕಾರದ ಅಧಿಪತಿ | 5377 | 260-262 |
| 54 | ಅಯ್ಯೋ ಫರಿಸಾಯರೇ! | 5389 | 263-266 |
| 55 | ಒಳ್ಳೆಯ ರೀತಿಯ ಅರಿಕೆಗೆ ಪ್ರತಿಯಾಗಿ ಕೆಟ್ಟ ಅರಿಕೆ | 5390 | 268-271 |
| 56 | “ನಿಮ್ಮ ಗಂಟು ಇದ್ದಲ್ಲಿಯೇ...” | 5396 | 271-274 |
| 57 | “ತಮ್ಮ ಯಜಮಾನನಿಗಾಗಿ ಕಾಯುತ್ತಿರುವ ಮನುಷ್ಯರಂತೆ ಇರ್ರಿ.” | 3354 | 275-280 |

# ಕ್ರಿಸ್ತನ ಜೀವಿತ

## ಭಾಗ – 2

# ಭಾಗ – 2

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31, ಪಸ್ಕ | ಯೆರೂಸಲೇಮ್ | ಹಬ್ಬದಲ್ಲಿ ಭಾಗವಹಿಸಿದುದು, ಒಬ್ಬ ಮನುಷ್ಯನನ್ನು ಗುಣಪಡಿಸಿದ್ದು, ಫರಿಸಾಯರನ್ನು ಗದರಿಸಿದ್ದುದು | –– | –– | –– | 5:1–47 |

## ಯೋಹಾನ 5:1–47

ಇದಾದ ಮೇಲೆ ಯೆಹೂದ್ಯರದೊಂದು ಜಾತ್ರೆ ಬಂದದರಿಂದ ಯೇಸು ಯೆರೂಸಲೇಮಿಗೆ ಹೋದನು. ಯೆರೂಸಲೇಮಿನಲ್ಲಿ ಕುರೀ ಅಗಸೇಬಾಗಲಿನ ಹತ್ತರದಲ್ಲಿ ಒಂದು ಕೊಳವಿದೆ; ಇದಕ್ಕೆ ಇಬ್ರಿಯ ಮಾತಿನಲ್ಲಿ ಬೇತ್ಸಥಾ ಎಂದು ಹೆಸರು. ಅಲ್ಲಿ ಐದು ಮಂಟಪಗಳಿವೆ; ಇವುಗಳಲ್ಲಿ ಬಹುಮಂದಿ ರೋಗಿಗಳು ಕುರುಡರೂ ಕುಂಟರೂ ಮೈ ಒಣಗಿದವರೂ ಬಿದ್ದುಕೊಂಡಿರುವರು. ಅಲ್ಲಿ ಮೂವತ್ತೆಂಟು ವರುಷದಿಂದ ರೋಗಿಯಾಗಿದ್ದ ಒಬ್ಬ ಮನುಷ್ಯನಿದ್ದನು. ಅವನು ಬಿದ್ದಿರುವದನ್ನು ಯೇಸು ಕಂಡು ಇವನು ಹೀಗಾಗಿ ಬಹು ಕಾಲವಾಗಿದೆ ಎಂದು ತಿಳಿದು––ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ ಎಂದು ಅವನನ್ನು ಕೇಳಿದ್ದಕ್ಕೆ ಆ ರೋಗಿಯು––ಸ್ವಾಮಿ, ನೀರು ಉಕ್ಕುವಾಗ ನನ್ನನ್ನು ಕೊಳದೊಳಗೆ ಇಳಿಸುವವರು ಒಬ್ಬರೂ ಇಲ್ಲ; ನಾನು ಬರುವದರೊಳಗೆ ನನಗಿಂತ ಮುಂದಾಗಿ ಮತ್ತೊಬ್ಬನು ಇಳಿಯುತ್ತಾನೆ ಅಂದನು. ಯೇಸು ಅವನಿಗೆ–ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ಹೇಳಿದನು. ಆ ಕ್ಷಣವೇ ಆ ಮನುಷ್ಯನು ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದನು.

ಆದರೆ ಆ ದಿವಸ ಸಬ್ಬತ್ ದಿನವಾಗಿತ್ತು; ಹೀಗಿರುವದರಿಂದ ಯಹೂದ್ಯರು ಸ್ವಸ್ಥವಾದವನಿಗೆ – ಈ ಹೊತ್ತು ಸಬ್ಬತ್ ದಿನವಾಗಿದೆ; ನೀನು ಹಾಸಿಗೆಯನ್ನು ಹೊರುವುದು ಸರಿಯಲ್ಲವೆಂದು ಹೇಳಿದ್ದಕ್ಕೆ ಅವನು––ನನ್ನನ್ನು ಸ್ವಸ್ಥ ಮಾಡಿದವನೇ ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ ಎಂದು ನನಗೆ ಹೇಳಿದನು ಅಂದನು. ಹೊತ್ತುಕೊಂಡು ನಡೆ ಎಂದು ನಿನಗೆ ಹೇಳಿದ ಮನುಷ್ಯನು ಯಾರೆಂದು ಅವನನ್ನು ಕೇಳಿದರು. ಆದರೆ ಅವನಾರೆಂಬದು ಸ್ವಸ್ಥವಾದವನಿಗೆ ತಿಳಿದಿರಲಿಲ್ಲ; ಆ ಸ್ಥಳದಲ್ಲಿ ಜನರ ಗುಂಪು ಇದ್ದದರಿಂದ ಯೇಸು ಸರಕೊಂಡುಹೋಗಿದ್ದನು. ಇದಾದ ಮೇಲೆ ಯೇಸು ಅವನನ್ನು ದೇವಾಲಯದಲ್ಲಿ ಕಂಡುಕೊಂಡು––ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪ ಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು ಅಂದನು. ಆ ಮನುಷ್ಯನು ಅಲ್ಲಿಂದ ಹೋಗಿ––ನನ್ನನ್ನು ಸ್ವಸ್ಥಮಾಡಿದವನು ಯೇಸುವೇ ಎಂದು ಯೆಹೂದ್ಯರಿಗೆ ತಿಳಿಸಿದನು. ಆದಕಾರಣ ಯೆಹೂದ್ಯರು–ಯೇಸು ಸಬ್ಬತ್ ದಿನದಲ್ಲಿ ಇಂಥ ಕೆಲಸಗಳನ್ನು ಮಾಡುತ್ತಾನಲ್ಲಾ ಎಂದು ಆತನನ್ನು ಹಿಂಸಿಸುವವರಾದರು. ಅದಕ್ಕೆ ಯೇಸು––ನನ್ನ ತಂದೆಯು ಇಂದಿನ ವರೆಗೂ ಕೆಲಸ ಮಾಡುತ್ತಾನೆ, ನಾನೂ ಕೆಲಸಮಾಡುತ್ತೇನೆ ಅಂದನು. ಈ ಮಾತನ್ನು ಹೇಳಿದ್ದರಿಂದ ಆತನು ಸಬ್ಬತ್ ದಿನವನ್ನು ಅಲಕ್ಷ್ಯ ಮಾಡಿದ್ದಲ್ಲದೆ ದೇವರನ್ನು ತನ್ನ ತಂದೆ ಎಂದು ಹೇಳಿ ತನ್ನನ್ನು ದೇವರಿಗೆ ಸರಿಗಟ್ಟಿಕೊಂಡನೆಂದು ಯೆಹೂದ್ಯರು ಆತನನ್ನು ಕೊಲ್ಲುವುದಕ್ಕೆ ಮತ್ತಷ್ಟು ಪ್ರಯತ್ನ ಮಾಡಿದರು.

ಅದಕ್ಕೆ ಯೇಸು ಅವರಿಗೆ—ನಿಮಗೆ ನಿಜನಿಜವಾಗಿ ಹೇಳುತ್ತೇನೆ, ತಂದೆಯು ಮಾಡುವುದನ್ನು ಕಂಡು ಮಗನು ಮಾಡುತ್ತಾನೆ ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು; ಆತನು ಮಾಡುವುದನ್ನೆಲ್ಲಾ ಹಾಗೆಯೇ ಮಗನೂ ಮಾಡುತ್ತಾನೆ. ತಂದೆಯು ಮಗನ ಮೇಲೆ ಮಮತೆಯಿಟ್ಟು ತಾನು ಮಾಡುವುದನ್ನೆಲ್ಲಾ ಅವನಿಗೆ ತೋರಿಸಿತ್ತಾನೆ. ಇದಲ್ಲದೆ ಇವುಗಳಿಗಿಂತ ದೊಡ್ಡ ಕೆಲಸಗಳನ್ನು ಅವನಿಗೆ ತೋರಿಸುವನು; ಅವುಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುವದು. ತಂದೆಯು ಹೇಗೆ ಸತ್ತವರನ್ನು ಎಬ್ಬಿಸಿ ಬದುಕಿಸುತ್ತಾನೋ ಹಾಗೆಯೇ ಮಗನು ಸಹ ತನಗೆ ಬೇಕಾದವರನ್ನು ಬದುಕಿಸುತ್ತಾನೆಂದು ತಿಳುಕೊಳ್ಳಿರಿ. ಇದಲ್ಲದೆ ತಂದೆಯು ಯಾವನಿಗೂ ತೀರ್ಪುಮಾಡುವುದೂ ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ; ಎಲ್ಲರೂ ತನಗೆ ಮಾನಕೊಡುವ ಪ್ರಕಾರವೇ ಮಗನಿಗೂ ಮಾನ ಕೊಡಬೇಕೆಂದು ತಂದೆಯು ಇಚ್ಛೈಸುತ್ತಾನೆ. ಮಗನಿಗೆ ಮಾನ ಕೊಡದವನು ಅವನನ್ನು ಕಳುಹಿಸಿದ ತಂದೆಗೂ ಮಾನ ಕೊಡದವನಾಗಿದ್ದಾನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳುಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವುದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಸತ್ತವರು ದೇವಕುಮಾರನ ಧ್ವನಿಯನ್ನು ಕೇಳುವ ಕಾಲ ಬರುತ್ತದೆ, ಈಗಲೇ ಬಂದಿದೆ; ಕೇಳಿದವರು ಬದುಕುವರು. ತಂದೆಯು ತಾನು ಹೇಗೆ ಸ್ವತಃ ಜೀವವುಳ್ಳವನಾಗಿದ್ದಾನೋ ಹಾಗೆಯೇ ಮಗನೂ ಸ್ವತಃ ಜೀವವುಳ್ಳವನಾಗಿರುವಂತೆ ಮಾಡಿದನು. ಮತ್ತು ಮಗನು ಮನುಷ್ಯ ಕುಮಾರನಾಗಿರುವುದರಿಂದ ತೀರ್ಪುಮಾಡುವ ಅಧಿಕಾರವನ್ನು ಅವನಿಗೆ ಕೊಟ್ಟನು. ಅದಕ್ಕೆ ಆಶ್ಚರ್ಯ ಪಡಬೇಡಿರಿ; ಸಮಾಧಿ ಗಳಲ್ಲಿರುವವರೆಲ್ಲರು ಆತನ ಧ್ವನಿಯನ್ನು ಕೇಳಿ ಎದ್ದು ಹೊರಗೆ ಬರುವ ಕಾಲ ಬರುತ್ತದೆ. ಒಳ್ಳೇದನ್ನು ಮಾಡಿದವನಿಗೆ ಜೀವಕ್ಕಾಗಿ ಪುನರುತ್ಥಾನವಾಗುವದು; ಕೆಟ್ಟದ್ದನ್ನು ನಡಿಸಿದವರಿಗೆ ತೀರ್ಪಿಗಾಗಿ ಪುನರುತ್ಥಾನವಾಗುವದು.

ನನ್ನಷ್ಟಕ್ಕೆ ನಾನೇ ಏನೂ ಮಾಡಲಾರೆನು; ತಂದೆ ಹೇಳಿದ್ದನ್ನು ಕೇಳಿ ನ್ಯಾಯತೀರಿಸುತ್ತೇನೆ; ಮತ್ತು ಸ್ವಂತ ಚಿತ್ತವನ್ನು ನೆರವೇರಬೇಕೆಂದು ಅಪೇಕ್ಷಿಸದೆ ನನ್ನನ್ನು ಕಳುಹಿಸಿದಾತನ ಚಿತ್ತ ನೆರವೇರಬೇಕೆಂದು ಅಪೇಕ್ಷಿಸುವದರಿಂದ ನಾನು ಮಾಡುವ ತೀರ್ಪು ನ್ಯಾಯವಾಗಿದೆ. ನನ್ನ ವಿಷಯವಾಗಿ ನಾನೇ ಸಾಕ್ಷಿಹೇಳಿಕೊಂಡರೆ ನನ್ನ ಸಾಕ್ಷಿ ನಿಜವಾಗದು. ನನ್ನ ವಿಷಯವಾಗಿ ಸಾಕ್ಷಿ ಹೇಳುವವನು ಮತ್ತೊಬ್ಬನಿದ್ದಾನೆ; ಆತನು ನನ್ನ ವಿಷಯವಾಗಿ ಹೇಳುವ ಸಾಕ್ಷಿ ನಿಜವೆಂದು ಬಲ್ಲೆನು. ನೀವು ಯೋಹಾನನ ಬಳಿಯಲ್ಲಿ ಕೇಳಿಕೊಂಡು ಬರುವುದಕ್ಕೆ ಕಳುಹಿಸಿದಿರಿ; ಅವನು ಸತ್ಯಕ್ಕೆ ಸಾಕ್ಷಿ ಹೇಳಿದನು. ನಾನಂತೂ ನನಗೆ ಬೇಕಾದ ಸಾಕ್ಷಿಯನ್ನು ಮನುಷ್ಯರಿಂದ ತಕ್ಕೊಳ್ಳುವದಿಲ್ಲ; ಆದರೂ ನಿಮಗೆ ರಕ್ಷಣೆ ಆಗಬೇಕೆಂದು ಇದನ್ನು ಹೇಳಿದ್ದೇನೆ. ಯೋಹಾನನು ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಅವನು ಕೊಡುವ ಬೆಳಕಿನಲ್ಲಿ ಸ್ವಲ್ಪ ಕಾಲ ವಿನೋದಗೊಳ್ಳುವುದಕ್ಕೆ ಮನಸ್ಸು ಮಾಡಿದಿರಿ. ನನಗಂತೂ ಯೋಹಾನನಿಗಿಂತ ಹೆಚ್ಚಿನ ಸಾಕ್ಷಿ ಉಂಟು; ಹೇಗೆಂದರೆ ಪೂರೈಸುವುದಕ್ಕೆ ತಂದೆ ನನಗೆ ಕೊಟ್ಟಿರುವ ಕೆಲಸಗಳು, ಅಂದರೆ ನಾನು ಮಾಡುವ ಕೆಲಸಗಳೇ, ತಂದೆಯು ನನ್ನನ್ನು ಕಳುಹಿಸಿಕೊಟ್ಟನೆಂಬದಾಗಿ ನನ್ನ ವಿಷಯದಲ್ಲಿ ಸಾಕ್ಷಿಕೊಡುತ್ತವೆ. ಇದಲ್ಲದೆ ನನ್ನನ್ನು ಕಳುಹಿಸಿಕೊಟ್ಟ ತಂದೆಯು ನನ್ನ ವಿಷಯವಾಗಿ ಸಾಕ್ಷಿಹೇಳಿದ್ದಾನೆ. ನೀವು ಎಂದಾದರೂ ಆತನ ಧ್ವನಿಯನ್ನು ಕೇಳಿದ್ದೂ ಇಲ್ಲ, ಆತನ ರೂಪವನ್ನು ನೋಡಿದ್ದೂ ಇಲ್ಲ, ಆತನ ವಾಕ್ಯವು ನಿಮ್ಮಲ್ಲಿ ನೆಲೆಗೊಂಡದ್ದೂ ಇಲ್ಲ; ಆತನು ಕಳುಹಿಸಿಕೊಟ್ಟವನ ಮಾತನ್ನು ನೀವು ನಂಬದೆ ಇದ್ದೀರಷ್ಟೆ. ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳಾಗಿವೆ. ಆದರೂ ಜೀವ ಹೊಂದುವದಕ್ಕಾಗಿ ನನ್ನ ಬಳಿಗೆ ಬರುವದಕ್ಕೆ ನಿಮಗೆ ಮನಸ್ಸಿಲ್ಲ.

ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವುದಿಲ್ಲ. ಆದರೆ ನಿಮ್ಮನ್ನು ನಾನು ಬಲ್ಲೆನು, ದೇವರಲ್ಲಿ ನಿಮಗೆ ಪ್ರೀತಿಯಿಲ್ಲವೆಂದು ನನಗೆ ತಿಳಿದದೆ. ನಾನು ನನ್ನ ತಂದೆಯ ಹೆಸರಿನ ಮೇಲೆ ಬಂದಿದ್ದೇನೆ; ನನ್ನನ್ನು ನೀವು ಒಪ್ಪಿಕೊಳ್ಳುವದಿಲ್ಲ; ಮತ್ತೊಬ್ಬನು ಸ್ವಂತ ಹೆಸರಿನ ಮೇಲೆ ಬಂದರೆ ಅವನನ್ನು ಒಪ್ಪಿಕೊಳ್ಳುವಿರಿ. ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ? ನಾನು ತಂದೆಯ ಮುಂದೆ ನಿಮ್ಮ ಮೇಲೆ ತಪ್ಪುಹೊರಿಸುವೆನೆಂದು ನೆನಸಬೇಡಿರಿ; ನೀವು ಆಶ್ರಯಿಸಿಕೊಂಡಿರುವ ಮೋಶೆಯೇ ನಿಮ್ಮ ಮೇಲೆ ತಪ್ಪು ಹೊರಿಸುವವನು. ಅವನು ನನ್ನ ವಿಷಯವಾಗಿ ಬರೆದನು; ಆದದರಿಂದ ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ. ಅವನು ಬರೆದ ಮಾತುಗಳನ್ನು ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬೀರಿ? ಅಂದನು.

# ಕರುಣಾಲಯ

**ರೀಪ್ರಿಂಟ್ಸ್ ಪುಟ 3500**

## ಯೋಹಾನ 5:1–15

**“ಬಹು ಜನರ ಗುಂಪು ರೋಗಿಗಳಲ್ಲಿ ಆತನು ನಡೆಸಿದ ಸೂಚಕಕಾರ್ಯಗಳನ್ನು ನೋಡಿದ್ದರಿಂದ ಆತನ ಹಿಂದೆ ಹೋಗುತ್ತಿತ್ತು.”**

ಬೇತ್ಸಥಾ ಎಂಬ ಶಬ್ದವು “ಕರುಣಾಲಯ” ಎಂಬುದನ್ನು ಸೂಚಿಸುತ್ತದೆ. ಯೆರೂಸಲೇಮಿನ ಗೋಡೆಯ ಹತ್ತಿರವಿದ್ದ ಒಂದು ವಿಶಾಲವಾದ ಕೊಳಕ್ಕೆ ಹೊಂದಿಕೊಂಡಂತಿರುವ ಐದು ಮಂಟಪಗಳಿಗೆ ಈ ಹೆಸರನ್ನು ಕೊಡಲಾಗಿತ್ತು. ಈ ಕೊಳಕ್ಕೆ ಭೂಮಿಯೊ–ಳಗಿನ ಜಲಾಶಯದಿಂದ ಹೊರಡುವ ಬುಗ್ಗೆಯೊಂದರಿಂದ ನೀರು ಒದಗುತ್ತಿದ್ದು ಆ ಭೂಗರ್ಭದ ಜಲಾಶಯವು ಕೆಲವು ವಿಧವಾದ ಅನಿಲಗಳನ್ನು ಚಲಿಸದಂತೆ ತಡೆದು ತನ್ನೊಳಗೆ ಹಿಡಿದಿಟ್ಟುಕೊಂಡಿರುತ್ತಿತ್ತು. ಕೆಲವೊಂದು ಸಾರಿ (ಪೆಟ್ರೋಲಿಯಂ) ಎಣ್ಣೆಯ ಬಾವಿಗಳು ತನ್ನಲ್ಲಿ ಅಡಗಿರುವ (ಅನಿಲಗಳನ್ನು) ಹೊರಹಾಕುವಂತೆ, ಈ ಅನಿಲಗಳು ಜಲಾಶಯದಲ್ಲಿ ಶೇಖರಣೆಯಾಗಿ ಒತ್ತಡ ಉಂಟಾದಾಗ ಅವುಗಳು ರಭಸವಾಗಿ (ಗುಳ್ಳೆಗಳಂತೆ) ಬುಗ್ಗೆಯ ನೀರಿನೊಂದಿಗೆ ಹೊರದೂಡಲ್ಪಡು–ತ್ತಿದ್ದವು. ಈ ಅನಿಲದೊಡನೆ ಬೆರೆತ ನೀರು ಅಸಮ ಕಾಲಗಳಲ್ಲಿ ಉಕ್ಕಿ ಹರಿದು ಬರುತ್ತಿತ್ತು. ಮತ್ತು ಇಂಥ ಸಮಯಗಳಲ್ಲಿ ಒಳಉಕ್ಕುವ ಅನಿಲಮಿಶ್ರವಾದ ನೀರಿನ ರಭಸದಿಂದ ಕೊಳವು ಕಲಕಿದಂತಾಗಿ ನೀರು ಬಿಸಿಯಗಿ ಕುದಿಯ ತೊಡಗುತ್ತಿತ್ತು.

ಈ ಅಸಾಧಾರಣ ವಿದ್ಯಮಾನವನ್ನು ಅರಿಯದೆ ಹಲವರು ಈ ಕೊಳದ ನೀರಿನ ತಳಮಳವು ಒಂದು ಅದ್ಭುತವೆಂದು ತಿಳಿದು ಇದನ್ನು ಪರಲೋಕದಿಂದ ಬಂದ ಒಬ್ಬ ದೇವದೂತನು ಮಾಡುವ ಕಾರ್ಯಕ್ಕೆ ಇದನ್ನು ಆರೋಪಿಸಿ ಹೇಳುತ್ತಿದ್ದರು. ಭಾಗಶಃ ನಂಬಿಕೆಯು ಉಂಟುಮಾಡುವ ಚೈತನ್ಯದಾಯಕವಾದ ಪ್ರಭಾದಿಂದಲೂ ಮತ್ತು ಭಾಗಶಃ ಕೆಲವು ಔಷಧಿಯ ಗುಣದಿಂದ ಕೂಡಿದ ಅನಿಲವು ಉಂಟುಮಾಡುವ ಗುಣಕಾರೀ ಪ್ರಭಾವದಿಂದ ಬಹುಶಃ ಈ ಕೊಳವು ಆ ಪ್ರಾಂತದಲ್ಲೆಲ್ಲಾ ಬಹು ಪ್ರಸಿದ್ಧಿಯಾಗುವಂತೆ ಮಾಡಿತ್ತು. ಕೊಳವು ಉಕ್ಕಿದ ಕೂಡಲೇ ಅದರೊಳಗೆ ಇಳಿಯುವವರಿಗೆ ಮಾತ್ರ ಅಲ್ಲಿ ಉಕ್ಕಿ ಏಳುವ ಅನಿಲದಿಂದ ಲಾಭಉಂಟಾಗುವುದೆಂಬ ಸಲಹೆಯು ಆ ಮೂಲಕ ಲಾಭಪಡೆದವರಿಂದ ಪ್ರಚಾರವಾಗಿತ್ತು. ಅನಿಲ ಪೂರಿತವಾದ ನೀರು ಒಂದು ಸಾರಿ ಕೊಳವನ್ನು ತಲುಪಿದ ಕೂಡಲೇ ಅನಿಲವು ತ್ವರಿತವಾಗಿ ವಾತಾವರಣದಲ್ಲಿ ಕೂಡಿಕೊಳ್ಳಲು ಅಲ್ಲಿ ಯಾರು ಮೊದಲು ಇಳಿಯುವರೋ ಅವರು ಉಸಿರನ್ನು ಎಳೆದುಕೊಳ್ಳುವದರಿಂದ ಆಗ ಬಿಡುಗಡೆಯಾದ ಆಮ್ಲಜನಕ ಅಥವಾ

ಯಾವುದೇ ಶುಭಕಾರಿ ಅನಿಲದ ಮೂಲಕ ತಮ್ಮ ದೇಹದ ಮೇಲೆ ಹಿತಕಾರಿ ಪರಿಣಾಮಗಳನ್ನು ಪಡಕೊಳ್ಳುವರು. ಈ ದಿನದಲ್ಲೂ ಲೋಕದ ಹಲವಾರು ಭಾಗಗಳಲ್ಲಿ ಇಂಥ ಅನೇಕ ಬುಗ್ಗೆಗಳು ಇರುವುದಾಗಿ ತಿಳಿದುಬಂದಿದೆ. ಮತ್ತು ಇವುಗಳಲ್ಲಿ ಹಲವು ಬುಗ್ಗೆಗಳು ಔಷಧಿಯ ಗುಣವುಳ್ಳವುಗಳಾಗಿದ್ದು ಅವುಗಳಲ್ಲಿ ಯಾವುದೇ ಒಂದು ಅದ್ಭುತ ನಡೆದಿರುವದೆಂಬ ಸಂದೇಹ–ವಿರುವುದಿಲ್ಲ. ಈ ವಿಷಯವಾಗಿ ಅಮೇರಿಕನ್ ಸೈಕ್ಲೋಪೀಡಿಯ ಎಂಬ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ:

"ಔಷಧಿಗುಣಗಳಿಂದ ತುಂಬಿದ ನೀರು ಪ್ರಪಂಚದ ಹಲವು ಭಾಗಗಳಲ್ಲಿರುವುದು ಬಹು ಸಾಮಾನ್ಯವಾದ ಸಂಗತಿ; ಮತ್ತು ಜನರು ಬಹು ದೂರದಿಂದ ಗುಣಹೊಂದಲು ಅಲ್ಲಿಗೆ ಬರುವರು. ನೌಪ್ಲಿಯ ಹಾಗೂ ಡೊಡೊರದ ಕ್ಷಾರಗುಣವುಳ್ಳ ನೀರಿನ ಬುಗ್ಗೆಗಳ ಸಂಗತಿಗಳಂತೆಯೇ, ಇವುಗಳ ಬಳಿಯಲ್ಲೇ ವಿಶೇಶವಾಗಿ ಏಸ್ಕುಲಾಪಿಯಸ್ ದೇವತೆಯ ಅರ್ಚಕರು ತಮ್ಮ ದೇವಸ್ಥಾನವನ್ನು ಕಟ್ಟಿಕೊಳ್ಳುತ್ತಿದ್ದರು. ಕಾಕಸ್ ಮೇಲಿನ ಯುದ್ಧದಲ್ಲಿ ಗಾಯಗೊಂಡ ಗ್ರೀಕ್ ಸೈನಿಕರು ಸ್ಮರ್ನ ಬಳಿಯಲ್ಲಿರುವ ಅಗಮೆಮ್ನಾನಿನ ಬುಗ್ಗೆಯ ಮೂಲಕ ಗುಣಹೊಂದಿದ್ದರು."

ನಮ್ಮ ಪಾಠದಲ್ಲಿ ಹೆಸರಿಸಿ ಹೇಳಿರುವ ಹಾಗೆ, ಈ ರೀತಿಯ ಒಂದು ಬುಗ್ಗೆಯು ಕಿಸ್ಸಿಂಜೆನ್ ಎಂಬಲ್ಲಿರುವುದು. ಅದರಲ್ಲಿ ಪ್ರತಿದಿನ ಅದೇ ಸಮಯದಲ್ಲಿ ಗಾಳಿಯ ರಭಸದ ಶಬ್ದವಾದೊಡನೆ ಗುಳ್ಳೆಗಳು ಏಳತೊಡಗುವವು ಮತ್ತು ಅನಿಲವು ಬಿಡುಗಡೆಯಾಗಿ ಮೇಲೇಳುವ ಆ ಸಮಯದಲ್ಲೇ ಅದು ಬಹು ಪರಿಣಾಮ–ಕಾರಿಯಾಗಿರುವುದು. ವೈಯೋಮಿನ್ ಹಾಗೂ ಇತರೆಡೆ ಮತ್ತು ಐಸ್ಲೆಂಡಿನಲ್ಲಿಯೂ ಸಹ ಕಾಲಕಾಲಕ್ಕೆ ಉಕ್ಕಿ ಅಲುಗಾಡುವಂಥ ಗುಣವುಳ್ಳ ಬಿಸಿನೀರಿನ ಬುಗ್ಗೆಗಳಿರುವವು.

## ಪುಟದ ಅಂಚಿನಲ್ಲಿ ಬರೆದ ನಕಲುಗಾರನ ಟಿಪ್ಪಣಿ

ಕೊಳದಲ್ಲಿನ ಉಕ್ಕುವ ನೀರಿನಿಂದ ಗುಣಹೊಂದಲು ಬಯಸುವವರಿಗೆ ಸೌಕರ್ಯಮಾಡಿಕೊಡುವ ಸಲುವಾಗಿ ಒಂದು ಆರೋಗ್ಯಧಾಮವಾಗಿ ಸಾರ್ವಜನಿಕರ ಪ್ರಯೋಜನಾರ್ಥವಾಗಿ ಐದು ಮಂಟಪಗಳಿಂದ ಕೂಡಿದ ಈ ಕರುಣಾಲಯವನ್ನು ಕಟ್ಟಲಾಗಿತ್ತು. ಮತ್ತು ಇದು ರೋಗಿಗಳು ಕುರುಡರು ಕೈಕಾಲು ಬತ್ತಿದವರು ಚಲಿಸಲಾಗದವರು ದೊಡ್ಡ ಗುಂಪಾಗಿ ಮಂಟಪಗಳಲ್ಲಿ ಕಾಯುತ್ತಿರುವುದಕ್ಕೆ ಕಾರಣವನ್ನು ಅಂದರೆ ಅವರು ಉಕ್ಕುವ ನೀರಿನಿಂದ ಲಾಭಪಡೆಯುವ ಅವಕಾಶಕ್ಕಾಗಿ ಕಾಯುತ್ತಿದ್ದರು ಎಂಬುದನ್ನು ವಿವರಿಸಿ ಹೇಳುತ್ತದೆ. (ಸತ್ಯವೇದದ) ಪುರಾತನ ಗ್ರೀಕ್ ಹಸ್ತಪ್ರತಿಗಳಲ್ಲಿ ಮೂರನೆ ವಚನದ ಕಡೆಯ ಏಳು ಪದಗಳು ಹಾಗೂ ನಾಲ್ಕನೇ ವಚನವೆಲ್ಲವನ್ನು ಕೈಬಿಡಲಾಗಿರುವು–ದೆಂಬುದನ್ನು ಈ ಸಂಬಂಧವಾಗಿ ಗಮನಿಸಬೇಕು. ಇವುಗಳು ಆತ್ಮಪ್ರೇರಿತವಾದವುಗಳಾಗಿ ಅಪೋಸ್ತಲನಾದ ಯೋಹಾನನಿಂದ ಬರೆಯಲ್ಪಟ್ಟದ್ದಲ್ಲ ಆದರೆ ನಂತರದಲ್ಲಿ ಆತನ ಮಾತಿಗೆ ಸೇರಿಸಲ್ಪಟ್ಟದ್ದಾಗಿರುವುದು. ಇದು ಆಗ ಅಲ್ಲಿದ್ದ ಜನರ ಒಂದು ಅನಿಸಿಕೆಯನ್ನೋ ಅಥವಾ ತನ್ನ ಅನಿಸಿಕೆಯನ್ನೋ ವಿವರಿಸಿ ನಕಲುಗಾರನು ಪುಟದ ಅಂಚಿನಲ್ಲಿ ತನ್ನ ಟಿಪ್ಪಣಿಯಾಗಿ ಬರೆದಿರುವ ಸಂಭವವಿರುವುದು. ನಂತರದ ನಕಲುಗಾರರು ಇದನ್ನು ಹಸ್ತಪ್ರತಿಯ ಮುಖ್ಯಭಾಗದಲ್ಲಿ ಬರೆಯಲು ಬಿಟ್ಟುಹೋದುದನ್ನು ಹೀಗೆ ಅಂಚಿನಲ್ಲಿ ಬರೆಯಲಾಗಿರುವುದೆಂದು ಯೋಚಿಸಿ ಇದನ್ನು ಹೀಗೆ ಮುಖ್ಯಭಾಗದಲ್ಲಿ ಸೇರಿಸಿದ್ದು ಮತ್ತು ಈ ಹಸ್ತಪ್ರತಿಯಿಂದ ನಕಲು ಮಾಡಲ್ಪಟ್ಟದ್ದು ನಮಗೆ ಬಂದಿರುವುದು. ಬಹು ಪುರಾತನವಾದ ಗ್ರೀಕ್ ಹಸ್ತಪ್ರತಿಯು ಪತ್ತೆಯಾದ ಈ ಐವತ್ತು ವರುಷಗಳ ಹಿಂದಿದ್ದ ಯಾರಿಗೂ ಈ ಮಾತುಗಳು ದೈವಪ್ರೇರಿತವಾದ ವಾಕ್ಯದ ಭಾಗವಾಗಿರದೆ ಬಹುಶಃ ಆಕಸ್ಮಿಕವಾಗಿ ಅದಕ್ಕೆ ಸೇರಿಸಿದ್ದಾಗಿರುವುದೆಂದು ತಿಳಿದಿರಲಿಲ್ಲ.

ನಮ್ಮ ಕಡೆಯ ಪಾಠವು ನಮ್ಮ ಕರ್ತನು ಗಲಿಲಾಯದಲ್ಲಿದ್ದುದನ್ನು ಮತ್ತು ಆತನು ಮಾಡಿದ ಎರಡನೆಯ ಅದ್ಭುತವನ್ನು ತೋರಿಸಿಕೊಟ್ಟಿತ್ತು. ಈ ಪಾಠದಲ್ಲಿ ಆತನು ಮತ್ತೆ ಯೆರೂಸಲೇಮಿನಲ್ಲಿ ಇರುವುದನ್ನು ಕಂಡುಕೊಳ್ಳುತ್ತೇವೆ. ಯೆಹೂದ್ಯರಲ್ಲಿ ಬಳಕೆಯಲ್ಲಿದ್ದಂತೆ ಆತನು ಅಲ್ಲಿಗೆ ವಾರ್ಷಿಕವಾಗಿ ನಡೆಯುವ ಹಬ್ಬಗಳಲ್ಲಿ ಒಂದನ್ನು ಆಚರಿಸಲು ಹೋಗಿದ್ದನು. ಆತನು "ಕರುಣಾಲಯ" ಎನ್ನಿಸಿಕೊಳ್ಳುತ್ತಿದ್ದ ಬೇತೆಸ್ಥವನ್ನು ದಾಟಿಹೋಗತ್ತಿದ್ದನು ಮತ್ತು ಈ ಪಾಠದಲ್ಲಿ ಗಮನಿಸಿರುವ ಅದ್ಭುತವನ್ನು ಮಾಡಲು ಅಲ್ಲಿ ನಿಂತುಕೊಂಡನು. ಆ ಸನ್ನಿವೇಶವನ್ನು ನಮ್ಮ ಮನಸ್ಸುಗಳು ಉತ್ತಮವಾಗಿ ಗ್ರಹಿಸುವಂತಾಗುವದಕ್ಕಾಗಿ ನಾವು ಇಂಥ ಎರಡು ಸಾಮಾಜಿಕ ವ್ಯವಸ್ಥೆಗಳ ವಿಷಯವಾಗಿ ನವೀನ ಕಾಲದ ಲೇಖಕರು ನೀಡಿರುವ ವಿವರಣೆಗಳನ್ನು ಉಲ್ಲೇಖಿಸುವವರಾಗಿದ್ದೇವೆ: ಬೋವೆಟ್ ಎಂಬುವರು ಗಲಿಲಾಯ ಸಮುದ್ರ ತೀರದ ತಿಬೇರಿಯದ ಹತ್ತಿರವಿದ್ದ ಇಬ್ರಾಹಿಮ್ ಸ್ನಾನದ ಮನೆಯ ವಿಷಯವಾಗಿ ಹೀಗೆ ಹೇಳಿರುವನು:

"ಬುಗ್ಗೆಯನ್ನು ಒಳಗೊಂಡ ರಂಧ್ರದ ಸುತ್ತಲು ಇದ್ದ ಹಲವಾರು ಮಂಟಪಗಳಲ್ಲಿ ಹೇಳಲಸಾಧ್ಯವಾದ ತೀವ್ರ ಶೋಚನೀಯ ಸ್ಥಿತಿಲ್ಲಿ ನರಳುತ್ತಿದ್ದ ಜನರು ದೋಲಿಯ ಮೇಲೆ ಅಥವಾ ಕಂಬಳಿಯಲ್ಲಿ ಸುತ್ತಲ್ಪಟ್ಟವರಾಗಿ ಒಬ್ಬರ ಮೇಲೊಬ್ಬರು ಒತ್ತಾಗಿ ಬಿದ್ದುಕೊಂಡಿದ್ದುದನ್ನು ನಾವು ನೋಡುತ್ತೇವೆ."

ಲೂರ್ದಿಸ್ ಎಂಬ ಅಂದವಾದ ಗವಿಯ ಬಳಿಯಲ್ಲಿದ್ದ ಗುಂಪುಗಳ ವಿಷಯವಾಗಿ ಝೋಲ ಎಂಬುವರು ಹೀಗೆ ವರ್ಣಿಸಿದ್ದಾರೆ:

"ಪೂರ್ಣವಾಗಿ ಕೊಳಚೆಯ ಸ್ಥಿತಿಯಲ್ಲಿದ್ದ ಕಲ್ಲುಹಾಸಿನ ಇಳಿಜಾರಿನ ಸುತ್ತಲೂ ವ್ಯಥೆಯುಳ್ಳ ಮಾನವರ ಗುಂಪು ಮುತ್ತಿರುತ್ತಿತ್ತು. ಯಾವ ಕ್ರಮವೂ ಇರುತ್ತಿರಲಿಲ್ಲ, ಎಲ್ಲಾ ವಿಧವಾದ ರೋಗಗ್ರಸ್ತರು ಒತ್ತಾಗಿ ಬಿದ್ದಿರುತ್ತಿದ್ದರು; ನಡುಕ ಹುಟ್ಟಿಸುವಂತಿದ್ದ, ಅತಿ ವಿರಳವೂ, ಭೀತಿಯೂ ಉಂಟು ಮಾಡುವಂತಿದ್ದ ಘೋರವಾದ ವ್ಯಾದಿಯುಳ್ಳವರು ಒಟ್ಟಿಗೆ ಸೇರಿದ್ದ ಒಂದು ಭಯಾನಕ ಸ್ಥಳವನ್ನು ಶುಚಿಮಾಡುತ್ತಿರುವಂತೆ ಅಲ್ಲಿ ಕಾಣುತ್ತಿತ್ತು."

## ಆತನ ಶಕ್ತಿಯ ಒಂದು ಸೂಚನೆಯು ಅಥವಾ ಸಂಕೇತವು

ಈ ಕರುಣಾಲಯದ ಮಂಟಪಗಳನ್ನು ದಾಟಿ ಹೋಗುವಾಗ ಇಂಥ ಒಂದು ಚಿತ್ರಣವು ನಮ್ಮ ಪ್ರಿಯ ವಿಮೋಚಕ ಕಣ್ಣಿಗೆ ಎದುರಾಯಿತು. ತನ್ನ ಮುಂದೆ ನಿಸ್ಸಾಯಕರಾಗಿ ನರಳುತ್ತಿದ್ದವರ ವಿಷಯವಾಗಿ ಆತನಿಗಿದ್ದ ಅನುಕಂಪದ ಪ್ರಮಾಣವನ್ನು ವರ್ಣಿಸುವುದಕ್ಕೆ ಬದಲಾಗಿ ಅದನ್ನು ಉತ್ತಮವಾಗಿ ಊಹೆ ಮಾಡಿಕೊಳ್ಳಲು ಸಾಧ್ಯ. ಇಂಥ  ನೋವು ನರಳಾಟ ವ್ಯಥೆ ಸಂಕಷ್ಟಗಳ ದೃಶ್ಯವು (ಪರಿಪೂರ್ಣತೆಯಿಂದ) ಬಿದ್ದು ಹೋಗಿರುವ ನಮ್ಮ ಹೃದಯಗಳನ್ನು ಸೂಕ್ಷ್ಮವಾಗಿಯೂ ಆಳವಾಗಿಯೂ ತಟ್ಟುವಂತಾಗಿದ್ದರೆ ಇಂಥ ಸನ್ನಿವೇಶಗಳ ಎದುರಿನಲ್ಲಿ ನಮ್ಮ ಕರ್ತನಿಗೆ ಅದೆಷ್ಟು ಅಧಿಕ ತೀವ್ರತೆಯುಳ್ಳ ಅನುಕಂಪ ಉಂಟಾಗಿರಬೇಕು?. ಲೋಕವನ್ನು ಎಷ್ಟೋ ಪ್ರೀತಿಮಾಡಿ ತನ್ನ ತಂದೆಯ ಬಳಿಯಲ್ಲಿದ್ದ ಮಹಿಮಾ ಸ್ಥಾನವನ್ನು ಬಿಟ್ಟು ಮನುಷ್ಯ ಸ್ವಭಾವವನ್ನು ಪಡೆದುಕೊಂಡು ನಮ್ಮನ್ನು ಕಟ್ಟಕಡೆಯದಾಗಿ ಪಾಪ ಮತ್ತು ಅದಕ್ಕಾದ ದಂಡನೆ, ವ್ಯಾಧಿಮರಣಗಳಿಂದ ವಿಮೋಚಿಸುವ ಸಲುವಾಗಿ ಸಾವನ್ನನುಭವಿಸಲು ಬಂದಿದ್ದ ಆತನು ತನ್ನ ಮುಂದಿದ್ದ ಅಲುಗಾಡುವ ನೀರಿನಿಂದ ಲಾಭಪಡೆಯುವ ಅವಕಾಶವನ್ನು ಹೊಂದಲು ಕಾಯುತ್ತಾ ಒಬ್ಬರ ಮೇಲೆ ಒಬ್ಬರು ಒತ್ತಾಗಿ ಬಿದ್ದುಕೊಂಡಿದ್ದ ನರಳಾಟದ ಗುಂಪಿನ ವಿಷಯವಾಗಿ ಅನುಕಂಪವುಳ್ಳವನಾಗಿದ್ದನೆಂಬುದನ್ನು ನಾವು ಖಚಿತಪಡಿಸಿಕೊಳ್ಳಬಹುದು. ಇಷ್ಟೆಲ್ಲಾ ಅನುಕಂಪವಿದ್ದಾಗ್ಯೂ ಸಹ ನಮ್ಮ ಕರ್ತನು ಗುಣಪಡಿಸಿದ್ದುದು ಕೇವಲ ಒಬ್ಬನನ್ನು. ನಾವು ತೀರ್ಮಾನಿಸುವಂತೆ, ಇದು ನಿಜವಾಗಿಯೂ ಆತನು ಯಾವಾಗಲೂ ಅನುಸರಿಸುತ್ತಿದ್ದ ಪದ್ಧತಿ. ಆತನು ತನ್ನ ಉಪದೇಶದಲ್ಲಿ ದೃಷ್ಟಾಂತಕೊಟ್ಟು ಹೀಗೆ ಇದನ್ನು ಹೇಳಿರುವನು. ಹೇಗೆಂದರೆ ಇಸ್ರಾಯೇಲಿನಲ್ಲಿ ಬರವಿದ್ದ ಕಾಲದಲ್ಲಿ ಅನೇಕ ವಿಧವೆಯರಿದ್ದರೂ ದೇವರ ಏರ್ಪಾಟಿನ ಮೂಲಕವಾಗಿ ಎಲೀಯನು ಕೇವಲ ಚಾರೆಪ್ತದ ವಿಧವೆಯ ಬಳಿಗೆ ಮಾತ್ರ ಕಳುಹಿಸಲ್ಪಟ್ಟಿದ್ದನು ಮತ್ತು ಇಸ್ರಾಯೇಲಿನಲ್ಲಿ ಬಹು ಮಂದಿ ಕುಷ್ಠರೋಗಿಗಳಿದ್ದರೂ ಎಲೀಷನು ಕೇವಲ ಸಿರಿಯ ದೇಶದವನಾದ ನಾಮಾನನ್ನು ಮಾತ್ರ ಗುಣಪಡಿಸಿದ್ದನು. ಹೀಗೆಯೇ ಈ ಕರುಣಾಲಯದಲ್ಲಿ ರೋಗಿಗಳ ಬಹು ದೊಡ್ಡ ಗುಂಪಿತ್ತಾದರೂ ಯೇಸು ಸ್ವಸ್ಥಪಡಿಸಿದ್ದುದು ಕೇವಲ ಒಬ್ಬನ್ನು ಮಾತ್ರ.

ಇದಕ್ಕೆ ಕಾರಣವನ್ನು ಕಂಡುಹಿಡಿಯುವುದು ಕಷ್ಟವೇನಲ್ಲ. ನಮ್ಮ ಕರ್ತನು ತನ್ನ ಮೊದಲನೆಯ ಬರುವಿಕೆಯ ಕಾಲದಲ್ಲಿ ಲೋಕದಲ್ಲಿದ್ದುದು ಅದನ್ನು ಪಾಪ ಮರಣ ಮತ್ತು ಸೈತಾನನ ಅಧಿಕಾರದಿಂದ ಬಿಡಿಸುವ ಸಲುವಾಗಿರದೆ ಲೋಕವನ್ನು ವಿಮೋಚಿಸುವ ಸಲುವಾಗಿತ್ತು; ಅಲ್ಲದೆ ಆ ಸಮಯದಲ್ಲಿ ಆತನು ಯಾವುದರಿಂದಾದರೂ ಬಿಡುಗಡೆಯನ್ನು ಅನುಗ್ರಹಿಸಿದ್ದಲ್ಲಿ ಅದು ಕೇವಲ ಭಾಗಶಃವಾಗಿಯೂ ನಿದರ್ಶನವಾಗಿಯೂ ಇರುತ್ತಿತ್ತು. ಅದು ತನ್ನಲ್ಲಿರುವ ಶಕ್ತಿಯನ್ನು ತನ್ನ ಮೇಲೆ ನಂಬಿಕೆಯನ್ನು ಉಂಟುಮಾಡಲು ಹಾಗೂ ಯಾರು ಕೇಳಿ ನಂಬುವ ಕಿವಿಗಳನ್ನು ಮತ್ತು ನೋಡಿ ನಂಬುವ ಕಣ್ಣುಗಳನ್ನು ಪಡೆದಿರುತ್ತಾರೋ ಅವರಿಗೆ ತನ್ನ ವಿಮೋಚನಾ ಕಾರ್ಯದ ಬಗ್ಗೆ ನಂಬಿಕೆ ಉಂಟುಮಾಡುವ ಉದ್ದೇಶಕ್ಕಾಗಿತ್ತು. ಈ ಕೆಲವರು ಮಾತ್ರ ಕೇಳಿದವರಾಗಿದ್ದರು, ಆದರೆ ಮಿಕ್ಕ ಉಳಿದವರು ಕುರುಡರಾಗಿ ಈ ದಿನದವರೆಗೂ ಆ ಶ್ರೇಷ್ಠ ಮೆಸ್ಸೀಯನನ್ನು ತಿಳಿದುಕೊಳ್ಳಲಿಲ್ಲ. ತನ್ನ ನಿಗಧಿತ ಸಮಯದಲ್ಲಿ ಇಸ್ರಾಯೇಲ್ಯರೆಲ್ಲರನ್ನೂ ಈ ಅಂಧಕಾರದಿಂದ ಬಿಡಿಸಿ ರಕ್ಷಿಸುವನೆಂಬುದಕ್ಕೆ ದೇವರಿಗೆ ಸ್ತೋತ್ರವಾಗಲಿ. (ರೋಮಾ. 11:25–26) ಆತನು ಇಸ್ರಾಯೇಲ್ಯರನ್ನು ಮಾತ್ರವಲ್ಲದೆ ಭೂಲೋಕದ ಮಾನವಕುಲ ದವರೆಲ್ಲರನ್ನೂ ಈ ಅಂಧಕಾರದಿಂದ ಬಿಡಿಸಿ ರಕ್ಷಿಸುವನು–"ಕುರುಡರ ಕಣ್ಣು ಕಾಣುವದು ಕಿವುಡರ ಕಿವಿ ಕೇಳವುದು"–ಯೆಶಾಯ 35:5

## ಸೈತಾನನು ಪರೋಕ್ಷ ಶೋಷಣೆಗಾರನು

ಮಾನವನಿಗೆ ಒದಗಿರುವ ಸಕಲ ವಿಧವಾದ ಮಾನಸಿಕ ಶಾರೀರಿಕ ಹಾಗೂ ನೈತಿಕವಾದ ಸಂಕಷ್ಟಗಳ ಮೂಲ ಜಾಡು ಸೈತಾನನು ನಮ್ಮ ಆದಿ ತಂದೆತಾಯಿಗಳ ಮೇಲೆ ಪ್ರಯೋಗಿಸಿದ ಮೊದಲ ಮರಳುಗೊಳಿಸುವಿಕೆಯಲ್ಲಿದೆ ಎಂಬುದನ್ನೂ ಹಾಗೂ ಅಸ್ವಸ್ಥತೆಯ ಪ್ರತಿಯೊಂದು ಸಂಗತಿಯೂ ಹೆಚ್ಚುಕಡಿಮೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಸೈತಾನನ ಕೆಲಸವೆಂದು ಒಪ್ಪಿಕೊಂಡು, ಪ್ರತಿಯೊಬ್ಬ ರೋಗಿಯ ವಿಷಯದಲ್ಲೂ "ಸೈತಾನನು ಆವನನ್ನು ಬಂಧಿಸಿರುವನು" ಎಂದು ಸೂಕ್ತವಾಗಿ ಹೇಳಲು ಮನಸ್ಸುಳ್ಳವರಾಗಿರುವೆವೆಂದು ನಾವು ಧಾರಾಳವಾಗಿ ಒಪ್ಪಿಕೊಳ್ಳುತ್ತೇವಾದರೂ, ಸೈತಾನನ್ನು ಬಂಧಿಸುವ ಹಾಗೂ ಆತನು ಬಂಧಿಸಿರುವವರನ್ನು ಬಿಡುಗಡೆ ಮಾಡುವ ಕಾಲವು ಪೂರ್ಣವಾಗಿ ಬಂದಿರುವುದು ಎಂದು ಹೇಳುವವರಲ್ಲಿ ನಾವು ಸೇರಿದವರಲ್ಲ. ದೇವರ ಏರ್ಪಾಡಿನ ಪ್ರಕಾರ ಆ ಸಮಯವು ಮುಂದಿರುವುದು; ಅದು (ಕ್ರಿಸ್ತನ) ಸಾವಿರ ವರುಷದ (ಆಳ್ವಿಕೆಯ) ಕಾಲಗಳಿಗೆ ನಿಗಧಿತವಾಗಿರುವುದು. ನಮ್ಮ ಕರ್ತನು ರೋಗಿಗಳೆಲ್ಲರ ವಿಷಯದಲ್ಲೂ ಅದ್ಭುತಗಳನ್ನು ನಡೆಸಲಿಲ್ಲವಾದ್ದರಿಂದ ಈದಿನದಲ್ಲಿರುವ ರೋಗಿಗಳೆಲ್ಲರನ್ನೂ ಸಹಜವಾದ (ವೈದ್ಯಕೀಯ ಚಿಕಿತ್ಸೆಯ) ವಿಧಾನದಿಂದಲೋ ಇಲ್ಲವೇ ಅದ್ಭುತ ಶಕ್ತಿಯಿಂದಲೋ ಗುಣಪಡಿಸುವುದನ್ನು ನಮಗೂ ನಿರೀಕ್ಷಿಸಲಾಗದು. ಸೈತಾನನೂ ಹಾಗು ಕೇಡುವಿಪತ್ತುಗಳೆಲ್ಲವೂ ಸರ್ವಶಕ್ತನ ಅಧೀನದಲ್ಲಿವೆ ಎಂಬುದನ್ನೂ, ಕರ್ತನ ಪ್ರತಿಷ್ಠಿತರ ಮತ್ತು ಅವರ ಒಳಿತಿಗಾಗಿ ಆತನು ಅವೆಲ್ಲವುಗಳನ್ನು ಮಾರ್ಪಡಿಸಲು ಸಮರ್ಥನೂ ಅದಕ್ಕೆ ಇಚ್ಛೆಯುಳ್ಳವನೂ ಎಂಬುದನ್ನು ನೆನೆಯುವುದು ನಮಗೆ ಆದರಣೆ ನೀಡುವುದು. ಹೀಗಾಗಿ ಅವರ ಮೇಲೆ ಬರಮಾಡುವ ಸಂಗತಿಗಳೆಲ್ಲವೂ ಅವರಿಗೆ ಬಹು ಆಶೀರ್ವಾದಕರವಾಗಿ ಫಲಿಸುತ್ತದೆ.

ನಮ್ಮ ಕರ್ತನು ಮಾಡಿದ ಅದ್ಭುತಗಳೆಲ್ಲವೂ ಮುಂಬರಲಿರುವ ಆತನ ಮಹಿಮೆಯನ್ನು ಮುಂದಾಗಿ ತೋರ್ಪಡಿಸಿರುವವೆಂಬುದು  ನಮಗೆ ಪ್ರತ್ಯೇಕವಾಗಿ ಹೇಳಲ್ಪಟ್ಟಿದೆ. ಹೀಗೆ ಅವುಗಳು ನಮ್ಮ ಪ್ರಿಯ ವಿಮೋಚಕನು ಬಹು ಶೀಘ್ರದಲ್ಲೇ ತನ್ನ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಲೋಕದ ವಿಷಯವಾಗಿ ನೆರವೇರಿಸಲಿರುವ ಪಾಪ ರೋಗ ಮರಣಗಳಿಂದ

ಬಿಡಿಸಿ ಉದ್ಧರಿಸುವ ಮಹಾ ಕಾರ್ಯಗಳಿಗೆ ಇವು ಬುದ್ಧಿ ಪಾಠ ಅಥವಾ ಚಿತ್ರಣ ಇಲ್ಲವೇ ನಿದರ್ಶನಗಳಾಗಿದ್ದವು. ಆಗ ನಾವು ಆತನ ಸಭೆಯಾಗಿ ಆತನಿಗೆ ಸಹಕಾರಿಗಳಾಗಿ ಆತನ ಬಲಾಧಿಕಾರ ಮಹಾ ಪ್ರಭಾವ ಮತ್ತು ವಿಶೇಷ ಸೌಭಾಗ್ಯಗಳಲ್ಲಿ ಪಾಲನ್ನು ಹೊಂದುವೆವು. ಆತನ ಮೊದಲ ಬರುವಿಕೆಯಲ್ಲಿ ಆತನ ಆದ್ಭುತ ಶಕ್ತಿಯ ಮೂಲಕವಾಗಿ ಲಾಭ ಹೊಂದಿದ್ದವರನ್ನು ಆ ಕಾಲದಲ್ಲಿದ್ದ ರೋಗಿಗಳು ದುರ್ಬಲರು ಹಾಗೂ ಕುರುಡರು ಇವರೆಲ್ಲರಿಗೆ ಹೋಲಿಸಿದ್ದಲ್ಲಿ ಅವರು ಕೇವಲ ಬೆರಳೆಣಿಕೆಯಲ್ಲಿದ್ದರು. ಅಲ್ಲದೆ ಆ ಅದ್ಭುತಗಳು ಕರ್ತನು ಮುಂದೆ ಪಡೆಯಲಿರುವ ಅಧಿಕಾರಗಳಿಗೆ ನಿದರ್ಶನಗಳಾಗಿದ್ದುದರ ಹೊರತಾಗಿ ಆತನು ಮತ್ತು ಆತನ ಅಪೋಸ್ತಲರು ನೂತನ ಕಾಲದ ವ್ಯವಸ್ಥೆಗಳನ್ನು ಸ್ಥಾಪಿಸಲಿರುವ ತಂದೆಯ (ದೇವರ) ಪ್ರತಿನಿಧಿಗಳೆಂಬುದಕ್ಕೆ ಸಾಕ್ಷಿಯಾಗಿರುವ ಉದ್ದೇಶವುಳ್ಳವುಗಳಾಗಿದ್ದವು. ಸುವಾರ್ತಾಯುಗವು ಅದರ ಹಿಂದಿದ್ದ ಯೆಹೂದ್ಯರ (ಧರ್ಮಶಾಸ್ತ್ರದ) ಯುಗ ಹಾಗೂ ಅದರಲ್ಲಿನ ಮೋಶೆಯ ಆಜ್ಞಾವಿಧಿಗಳಿಗಿಂತಲೂ ಬಹು ಭಿನ್ನವಾಗಿರುವುದು.

## ಆಯಲ್ಪಟ್ಟವರ ವಿಷಯವಾದ ಗುಣಪಡಿಸುವಿಕೆ

ಕರ್ತನು ತನ್ನ ಅಧಿಕಾರ ಮತ್ತು ಮುಂಬರುವ ಮಹಿಮೆಯನ್ನು ತೋರ್ಪಡಿಸುವ ಸಲುವಾಗಿ ಈ ಮನುಷ್ಯನು ಆ ಒಂದು ದೊಡ್ಡ ಗುಂಪಿನೊಳಗಿಂದ ಆಯಲ್ಪಡುವಂಥ ಅಥವಾ ಆರಿಸಿಕೊಳ್ಳುವ ಅನುಗ್ರಹ ಹೊಂದಿದವನೆಂದು ಈ ಮನುಷ್ಯನ ವಿಷಯವಾಗಿ ನಾವು ಮಾತನಾಡುವುದು ಸೂಕ್ತವೇ. ಕರ್ತನು ಇತರರಿಗಿಂತಲೂ ಈತನನ್ನೇ ಏಕೆ ಇಷ್ಟಪಟ್ಟು ಆದುಕೊಂಡ – ನೆಂಬುದನ್ನು ವಿವರಣೆಯಲ್ಲಿ ತಿಳಿಸಿರುವುದಿಲ್ಲ. ಹೇಗೂ ನಾವು ವಿವೇಚನಾಪೂರ್ವಕವಾಗಿ ಭಾವಿಸಬಹುದೆಂದರೆ, ಈತನ ಮೂವತ್ತೆಂಟು ವರುಷಗಳ ದುರ್ಬಲತೆಯು ಆತನ ಪಾಪಕ್ಕೆ ಗಣನೀಯವಾಗಿ ಪಶ್ಚಾತಾಪವನ್ನು ಉಂಟುಮಾಡಿ ನೀತಿ ಹೊಂದುವ ಬಗ್ಗೆ ಮಹತ್ತಾದ ಬಯಕೆಯನ್ನು ಉಂಟು ಮಾಡಿತ್ತೆಂಬುದು; ಮೂವತ್ತೆಂಟು ವರುಷಗಳು ಬಾಧೆಪಡುವುದರ ಮೂಲಕವಾಗಿ ಆತನು ಕೆಲವು ಅಮೂಲ್ಯವಾದ ಪಾಠಗಳನ್ನು ಕಲಿತ್ತಿದ್ದನು; ಮತ್ತು ಈ ಕಾರಣವಾಗಿ ಈತನು ಗುಣಹೊಂದುವ ಲಾಭಕರ ಸ್ಥಿತಿಗೆ ತಲುಪಿದ್ದರಿಂದ ಇವನು ಇದಕ್ಕೆ ಅನುಗ್ರಹಿತನಾದ ನೆಂಬುದು. ಹೀಗೆಯೇ ಈ ಕಾಲದಲ್ಲಿಯೂ ಕರ್ತನು ಕೃಪಾನುಗ್ರಹಗಳನ್ನು ಹಂಚಿಕೊಡುತ್ತಿದ್ದಾನೆಂಬುದು ಸತ್ಯ. ನೀಡಲು ಸಾಧ್ಯವಾದ ಯಾವ ವಿಧವಾದ ಶಾರೀರಿಕ ಆಶೀರ್ವಾದಗಳಿ – ಗಿಂತಲೂ ಇವುಗಳು ನಿಜವಾಗಿಯೂ ಬಹು ಅಮೂಲ್ಯ ವಾದಂಥವುಗಳು.

ಕರ್ತನು ಏಕೆ ಇತರರಿಗಿಂತಲೂ ಹೆಚ್ಚಾಗಿ ಕೆಲವರಿಗೆ ತನ್ನ ಕೃಪೆ ಹಾಗೂ ಸತ್ಯದ ಪರಿಜ್ಞಾನವನ್ನು ಅನುಗ್ರಹಿಸುವನೆಂಬುದನ್ನು ತಿಳಿದುಕೊಳ್ಳಲು ಮೊದಮೊದಲಿಗೆ ಸಾಧ್ಯವಾಗದಿರಬಹುದು, ಆದರೆ ನಾವು ನಿರ್ಭಯವಾಗಿ ಭಾವಿಸಬಹುದೆಂದರೆ ಇದರಲ್ಲಿ ಒಂದು ಪಾಠವಿರುತ್ತದೆಂಬುದು; ಮತ್ತು ಆ ಪಾಠವು ಹೃದಯದಲ್ಲಿನ ಪ್ರಾಮಾಣಿಕತೆ, ಪಾಪಕ್ಕಾಗಿ ಪಶ್ಚಾತಾಪ ಹಾಗು (ದೇವರ ವಿಷಯವಾದ) ಒಂದು ಬಯಕೆ ಅಥವಾ "ದೇವರನ್ನು ಬಯಸುವ" ನಿಟ್ಟಿನಲ್ಲಿರುವುದು. ದೇವರು ಕೆಲವು ವಿಶೇಷಾನುಗ್ರಹ ಗಳನ್ನು ದಯಪಾಲಿಸಲಿರುವನೆಂದರೆ ಅದು ಗೊತ್ತುಗುರಿಯಿಲ್ಲದ ರೀತಿಯಲ್ಲಾಗಿರದೆ ಕೆಲವು ಮಟ್ಟಿನ ನಂಬಿಕೆ ಇಲ್ಲವೇ ಅರ್ಹತೆಗಳ ಅನುಸಾರವಾಗಿರುವುದೆಂದು ನಾವು ನಿಸ್ಸಂದೇಹವಾಗಿ ಭಾವಿಸ – ಬಹುದು. ಸ್ವಸ್ಥಮಾಡಲ್ಪಟ್ಟಿದ್ದ ಈ ಮನುಷ್ಯನ ವಿಷಯವಾಗಿ ಈತನು ತನ್ನ ಸುತ್ತಲಿದ್ದ ಇತರ ಎಲ್ಲರಿಗಿಂತಲೂ ಅಧಿಕವಾದ ನಂಬಿಕೆಯುಳ್ಳವನಾಗಿದ್ದನೆಂಬುದು ದಾಖಲೆಯಾಗಿಲ್ಲವೆಂಬು– ದನ್ನು ನಾವು ಗಮನಿಸೋಣ. ಬದಲಾಗಿ, ಅಲ್ಲಿನ ಸನ್ನಿವೇಶವು ತೋರಿಸಿಕೊಡುವುದೆಂದರೆ ಆತನಲ್ಲಿ ನಂಬಿಕೆ ಇರಲಿಲ್ಲ ಹಾಗು ತನ್ನನ್ನು ಗುಣಪಡಿಸಿದವರು ಯಾರೆಂಬುದನ್ನು ಮುಂದೆ ತಾನು ತಿಳಿಯುವವರೆಗೂ ಕರ್ತನನ್ನು ಸಹ ಆತನು ತಿಳಿದಿರಲಿಲ್ಲ.

## "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?"

ಈಗಾಗಲೇ ತಿಳಿಸಿರುವಂತೆ, "ನಾನು ತಂದೆಯ ಬಳಿಗೆ ಹೋಗುವುದರಿಂದ ನೀವು ಇದಕ್ಕಿಂತಲೂ ಹೆಚ್ಚಾದ ಕಾರ್ಯ – ಗಳನ್ನು ಮಾಡುವಿರಿ" ಎಂದು ನಮ್ಮ ಕರ್ತನು ತನ್ನ ಹಿಂಬಾಲಕರಿಗೆ ಹೇಳಿದ ಮಾತು ಈ ಸುವಾರ್ತಾಯುಗದ ಪರ್ಯಂತರ ನೆರವೇರುತ್ತಲಿರುವುದು. ಅದೇನೆಂದರೆ, ಮನೋನೇತ್ರವನ್ನು ತೆರೆಯವಾಡುವುದು ಸಹಜವಾದ ಕಣ್ಣುಗಳನ್ನು ತೆರೆಯಮಾಡುವುದಕಿಂತಲೂ ಹೆಚ್ಚಾದುದು; ಕೇಳುವ ಕಿವಿಯನ್ನು ದಯಪಾಲಿಸುವುದು ಸಹಜವಾದ ಕಿವಿಯನ್ನು ತೆರೆಯುವುದಕ್ಕಿಂತಲೂ ಹೆಚ್ಚಾದುದು; ಪಾಪವನ್ನು ಪರಿಹರಿಸಿ ಗುಣಪಡಿಸುವುದು ಕುಷ್ಠವೆಂಬ ಅದರ ಛಾಯಾರೂಪದ ರೋಗವನ್ನು ಗುಣಪಡಿಸುವುದಕ್ಕಿಂತಲೂ ಹೆಚ್ಚಾದುದು; (ಪರಿಪೂರ್ಣತೆಯಿಂದ) ಬಿದ್ದುಹೋಗಿರುವ ಕಾರಣದಿಂದ ಎಲ್ಲಾ ಮಾನವ ಜನಾಂಗದ ಮೇಲೆ ಬಂದಿರುವ ಕುಂಟುತನ ಹಾಗೂ ದುರ್ಬಲತೆಯನ್ನು ನಿವಾರಿಸುವುದು ಸಹಜವಾದ ಕೈಕಾಲುಗಳಿಗೆ ಬಲವನ್ನು ಹಿಂದಿರುಗಿಸಿ ಕೊಡುವುದಕ್ಕಿಂತಲೂ ಹೆಚ್ಚಾದುದು. ಈ ಆಲೋಚನೆಯ ಅನುಸಾರವಾಗಿ ನಾವು ಈಗ ಗಮನಿಸಿ ಹೇಳುವುದೆಂದರೆ, "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?" ಎಂದು ಕರ್ತನು ತಾನು ಗುಣಪಡಿಸಿದವನಿಗೆ ಕೇಳಿದಂತೆಯೇ ಈ ವಿಷಯವು ಹೀಗೆ ಅವನ ಇಚ್ಛೆಯ ಮೇಲೆ ಅವಲಂಬಿತವಾಗಿರುವಂತೆ ಮಾಡಿರುವನು. ಈಗ ನೈತಿಕ ಅಸ್ವಸ್ಥತೆಯಿಂದ ಗುಣಮಾಡಲ್ಪಟ್ಟು ಆತ್ಮಿಕವಾದ ಜ್ಞಾನಪ್ರಕಾಶ, ಮುಂತಾದುದನ್ನು ಹೊಂದಿದವರ ವಿಷಯವು ಹೀಗೆಯೇ ಇರುವುದು. ಸಹಾಯ ಸಹಕಾರದ ಸಂಗತಿಗಳು ಅವರಲ್ಲಿಯೇ ಇರುವುದು. ಅವರು ಕೇಳುವ ಕಿವಿಯನ್ನು ಕಾಣುವ ಕಣ್ಣನ್ನು ಹೊಂದಿ ಕ್ರಿಸ್ತನಲ್ಲಿರುವ ದೇವರ ವರದ ವಿಷಯವಾಗಿ ಅರಿತುಕೊಂಡು ಅದನ್ನು ಅರ್ಥಮಾಡಿಕೊಳ್ಳಬೇಕೆಂದಿದ್ದರೆ, ಆಗ ಅವರ ಮುಂದೆ ಬರುವ ಪ್ರಶ್ನೆಯೆಂದರೆ: "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?"

ಎಷ್ಟು ಮಂದಿ ನೈತಿಕವಾದ ಕುಷ್ಠರೋಗಿಗಳು ಮಾನಸಿಕವಾದ ಕುರುಡರು ಭಾಗಶಃ ಕಿವುಡರು ದೇವರ ಕೃಪೆಯ ವಿಷಯವಾಗಿ ಸ್ವಲ್ಪವಾಗಿ ದೃಷ್ಟಿಸಿ ನೋಡಿ ಅದನ್ನು ಕೇಳಿದವರಾಗಿ ಅದರ ವಿಷಯವಾಗಿ ಗ್ರಹಿಸಿಕೊಂಡಿರಲು ಸಾಧ್ಯವಿದೆ. ಮತ್ತು ಯಾರು ತಾವು ಅರಿತಿರುವ ಈ ಅಲ್ಪವಾದ ಸಂಗತಿಗಳನ್ನು ಅಂಗೀಕರಿಸಿಕೊಂಡು ಪೂರ್ಣ ಸ್ವಸ್ಥತೆಯನ್ನು ಹೊಂದಬೇಕೆಂಬ ಬಯಕೆಯುಳ್ಳವರಾಗಿರುವರೋ ಅವರು ಕೃಪೆಯಿಂದ ಕೃಪೆಗೆ, ಜ್ಞಾನದಿಂದ ಜ್ಞಾನಕ್ಕೆ, ಯಶಸ್ಸಿನಿಂದ ಯಶಸ್ಸಿಗೆ ಸಾಗುತ್ತಾ ಕಡೆಯಲ್ಲಿ ಅವರು ದೇವರಿಗೆ ಬಾಧ್ಯರಾಗಿ ಕ್ರಿಸ್ತನೊಂದಿಗೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗಲು ಕರ್ತನು ತನ್ನ "ಚಿಕ್ಕ ಹಿಂಡಿಗೆ" ದಯಪಾಲಿಸಿರುವ ಶ್ರೇಷ್ಠ ಆಶೀರ್ವಾದಗಳನ್ನು ಪೂರ್ಣವಾಗಿ ಪಡೆಯಬಹುದು. ಹೇಗೆಂದರೆ ನಾವು ಆತನೊಂದಿಗೆ ಬಾಧೆಯಲ್ಲಿ ಪಾಲುಗಾರರಾಗಿದ್ದರೆ ಆತನೊಡನೆ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು.

ಈ ಆಲೋಚನೆಯ ಅನುಸಾರ, ನಾವೆಲ್ಲರೂ ನಮ್ಮ ಪ್ರಭಾವವನ್ನು ಬಳಸಿಕೊಂಡು ನಮ್ಮ ಸಂಪರ್ಕಕ್ಕೆ ಬರುವಂಥ, ದೇವರ ಕೃಪೆಯ ವಿಷಯವಾಗಿ ಕಂಡು ಕೇಳಿ ಅಥವಾ ಗ್ರಹಿಸಿಕೊಂಡು ಮನನಮಾಡಿಕೊಳ್ಳಲು ಬಲವಿಲ್ಲದ ಎಲ್ಲರಿಗೂ ನಮ್ಮ ಅನುಭವಕ್ಕೆ ಬಂದಂತೆಯೇ "ಅಗತ್ಯವಿರುವ ಪ್ರತಿಯೊಂದು ಸಮಯಗಳಿಗೂ ಸಾಕಾಗುವಷ್ಟು ಕೃಪೆಯನ್ನು" ನೀಡುವ ವಾಗ್ದಾನಪೂರ್ಣವಾದ ದೇವರ ಸಹಾಯವನ್ನು ಅಂಗೀಕರಿಸಿ ಕೊಳ್ಳುವಂತೆ ಒತ್ತಾಯ ಮಾಡೋಣ. ಕೇವಲ ಯಾರು ಈ ಪ್ರಶ್ನೆಗಳಿಗೆ ದೃಡವಾಗಿ ಉತ್ತರಿಸುವವರೋ ಅವರ ಬಗ್ಗೆ ನಮ್ಮ ಪರಿಶ್ರಮವನ್ನು ವಿನಿಯೋಗಿಸುವುದು ನಮಗೆ ಯೋಗ್ಯವಾದುದು. ಮನಸ್ಸಿನ ಚಿತ್ತವು ಕರ್ತನ ಕಡೆಗೆ ತಿರುಗಿಸಲ್ಪಡಬೇಕು ಇಲ್ಲವಾದಲ್ಲಿ ಆತನ ಆಶೀರ್ವಾದವು ಹೃದಯಗಳಿಗಾಗಲೀ ಅಥವಾ ಜೀವನದಲ್ಲಾಗಲೀ ಬರಲು ಸಾಧ್ಯವಾಗದು; "ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?" ಎಂಬ ಈ ಪ್ರಶ್ನೆಗೆ ದೃಢವಾಗಿ ಉತ್ತರಿಸಲು ಸಿದ್ಧವಿಲ್ಲದೇ ಇದ್ದಲ್ಲಿ ಕರ್ತನು ಪಾಪ ಪೀಡಿತವಾದ ಹೃದಯಗಳಲ್ಲಿ ಕೃಪೆಯ ವಿಷಯವಾದ ಅದ್ಭುತವನ್ನು ನಡೆಸುವನೆಂಬುದನ್ನು ನಾವು ನಿರೀಕ್ಷಿಸಲು ಸಾಧ್ಯವಿಲ್ಲ. ಈ ರೀತಿಯಲ್ಲಿ ಮನಸ್ಸುಮಾಡುವವರು ಮಾತ್ರ ಈ ಕಾಲದಲ್ಲಿ ಲಾಭ ಹೊಂದಬಹುದು ಏಕೆಂದರೆ ಇದೇ ದೇವರು ಅನುಸರಿಸುವ ಕ್ರಮ. ದೇವರು ಬಯಸುವುದು ಯಾರನ್ನೆಂದರೆ ಕೇವಲ ಆತ್ಮೀಕ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತನ್ನನ್ನು ಆರಾಧಿಸುವವರನ್ನು. ನಮ್ಮ ಕರ್ತನು ತನ್ನ ಮೊದಲನೇ ಬರುವಿಕೆಯಲ್ಲಿ ತನ್ನ ಉಪದೇಶವನ್ನು ಕೇಳಿದ ಹಲವರ ವಿಷಯವಾಗಿ, "ನೀವು ಜೀವವನ್ನು ಪಡಕೊಳ್ಳಲು ನನ್ನ ಬಳಿಗೆ ಬರುವುದಿಲ್ಲ" ಎಂದು ಮತ್ತೊಮ್ಮೆ ಈ ವಿಧವಾಗಿ ಸಾಕ್ಷಿ ನುಡಿದಿದ್ದಾನೆ. ಕರ್ತನ ಬಳಿಗೆ ಬರುವುದು ಎಂದರೆ ಆತನು ಮಾಡಿರುವ ಏರ್ಪಾಡುಗಳನ್ನು ಅಂಗೀಕರಿಸಿಕೊಂಡು ಆತನ ಪ್ರಶ್ನೆಗೆ ಹೀಗೆ ಉತ್ತರಿಸುವುದು: "ಹೌದು ಕರ್ತನೇ, ನನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟು."

ಇಂಥಹ ಗುಣಪಡಿಸುವಿಕೆಯು ಒಂದು ಕ್ಷಣದಲ್ಲಿ ಉಂಟಾಗುವಂತದಲ್ಲ ಆದರೆ ಅದು ಕ್ರಮೇಣ ನೆರವೇರುವಂಥದ್ದು. ಅವರು ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಪ್ರೀತಿಯಲ್ಲಿಯೂ ಬೆಳೆಯುತ್ತಾ ಬರುವರು ಮತ್ತು ಆ ಕೃಪಾಕಾರ್ಯವು ಪೂರ್ಣವಾಗುವುದು ಮೊದಲನೇ ಪುನರುತ್ಥಾನದಲ್ಲಿ ಉಂಟಾಗುವ ಮಾರ್ಪಡುವಿಕೆಯ ಮೂಲಕವಾಗಿ. ಈಗಿನ ಕಾಲದಲ್ಲಿ ಯಾರು ಈ ಪ್ರಶ್ನೆಗೆ ದೃಢವಾಗಿ ಉತ್ತರಿಸಿ ತಾವು ಇನ್ನು ಮೇಲೆ ಶರೀರಭಾವವನ್ನು ಅನುಸರಿಸದೆ ಆತ್ಮನನ್ನು ಅನುಸರಿಸಿ ನಡೆಯಲು ಶ್ರದ್ಧೆಯಿಂದ ಬಯಸುವರೆಂಬುದನ್ನು ತೋರಿಸಿ ಕೊಡುವವರೋ ಅವರಿಗೆ ಕರ್ತನು ಇದನ್ನು ವಾಗ್ದಾನ ಮಾಡಿರುವನು. ಇವರು ಆ ಘನ ವೈದ್ಯನ ಪರಿಪಾಲನೆಯಲ್ಲಿದ್ದು ಕಡೆಯಲ್ಲಿ ಇವರನ್ನು ಆತನು ತನ್ನ ಹೋಲಿಕೆಗೆ ತಂದು ಸಂಪೂರ್ಣವಾಗಿ ಸ್ವಸ್ಥರನ್ನಾಗಿ ಮಾಡುವನು.

## ಉತ್ತಮವಾದ ಕರುಣಾಲಯ

ಈಗ ನಡೆಯುತ್ತಿರುವ ಸಭೆಯ ಆಯ್ಕೆ, ಸಂಪೂರ್ಣವಾಗಿ ಸ್ವಸ್ಥತೆಯನ್ನು ಹೊಂದಲು ಈಗ ಇರುವ ಅನುಗ್ರಹ ಅನುಕೂಲಕರ ಸನ್ನಿವೇಶಗಳು ಸ್ವಲ್ಪ ಸಮಯದಲ್ಲೇ ಮೊದಲನೇ ಪುನರುತ್ಥಾನದಲ್ಲಿ ಪೂರ್ಣಗೊಂಡು ಆನಂತರದಲ್ಲಿ ಇನ್ನೂ ಅಧಿಕವಾಗಿರುವ ಸಾಮಾನ್ಯ ಆಶೀರ್ವಾದಗಳು ಲೋಕದವ–ರೆಲ್ಲರಿಗಾಗಿ ತೆರೆಯಲ್ಪಡುವುದು; ಇದಕ್ಕಾಗಿ ದೇವರಿಗೆ ಸ್ತೋತ್ರ. ಸತ್ಯವೇದದಲ್ಲಿರುವ ಆಶೀರ್ವಾದವೇನೆಂದರೆ ದೇವರ ನಿಗದಿತ ಕಾಲದಲ್ಲಿ ದೇವರ ನಿವಾಸವು ಮನುಷ್ಯರೊಡನೆ ಇರುವುದು, ಆತನು ಅವರೊಡನೆ ವಾಸಿಸುವನು. ಆದರೆ ಇದು ಇನ್ನೂ ನೆರವೇರಿರುವುದಿಲ್ಲ. ಮಾನವ ಸಂತತಿಯು ಇನ್ನೂ ಶಾಪದ ವಶದಲ್ಲಿರುವುದು, ಸೈತಾನನು ಈಗಲೂ "ಇಹಲೋಕಾದಿಪತಿ" ಆಗಿರುವನು. ನಾವು ಇನ್ನೂ "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವಂತೆ ಭೂಲೋಕದಲ್ಲಿಯೂ ನೆರವೇರಲಿ" ಎಂದು ಪ್ರಾರ್ಥಿಸುತ್ತಾ ಅದಕ್ಕಾಗಿ ಕಾಯುತ್ತಲಿದ್ದೇವೆ. ದೇವರ ನಿವಾಸವು ಅಥವಾ ಮನೆಯು ಭೂಲೋಕದಲ್ಲಿ (ಕ್ರಿಸ್ತನ) ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಸ್ಥಾಪನೆಯಾಗುವುದು. ಅದು ಕೇವಲ ಕೆಲವರಾದ ಆಯಲ್ಪಟ್ಟ ಸಭೆಗೆ ಮಾತ್ರವಾಗಿರದೆ ವಾಗ್ದಾನ ಸಹಿತವಾದ ಆ ಉತ್ಕೃಷ್ಟವಾದ ಒಡಂಬಡಿಕೆಯ ಅನುಸಾರವಾಗಿ ದೇವರು "ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವಾದ" ಮಾಡುವುದರ ಮುಖಾಂತರ ಉಂಟಾಗುವುದು. ಅದು ದೇವರು ಆಯಲ್ಪಟ್ಟ ತನ್ನ ಸಭೆಯ ಮೂಲಕವಾಗಿ, ಶಿರಸ್ಸನ್ನೂ ದೇಹವನ್ನು ಒಳಗೊಂಡಿರುವ ಕ್ರಿಸ್ತನ ಮೂಲಕವಾಗಿ ಅಂದರೆ ನಿಜರೂಪದಲ್ಲಿನ ಅಬ್ರಹಾಮನ ಸಂತತಿಯ ಮೂಲಕವಾಗಿ ನೇರವೇರಿಸುವನು. (ಆದಿಕಾಂಡ 3:29)

ಓಹ್, ಹೌದು; ಎಂಥಾ ಭವ್ಯವಾದ ದಿನವದು! "ದೇವರು ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು." ಹೌದು, ಆತನ ಜನರ ಮೇಲಿರುವ ನಿಂದೆಯೆಲ್ಲಾ ಸಹ ಇಲ್ಲವಾಗುವುದು. ಆನಂತರ ದೇವ ಜನರು ನಿಂದನೆಗೊಳಗಾಗುವುದಿಲ್ಲ, ಕರ್ತನಿಗೆ ಬಾಯಾಗಿರುವವರ ವಿಷಯವಾಗಿ, "ನೀವು ದೇವರ ಪ್ರೀತಿ ಆತನ ಕನಿಕರ ಹಾಗು (ದೋಷ ಪರಿಹರಿಸಲ್ಪಟ್ಟು) ವಿಶೇಷವಾದ ಸಂಧಾನವಾಗುವುದರ ಮೌಲ್ಯದ ಬಗ್ಗೆ ಹೇಳುವಿರಿ; ಆದರೆ ನಾವು

ಪಾಪ ಶ್ರಮಸಂಕಟ, ಸಾವು ದುಃಖಗಳು ಲೋಕದಲ್ಲಿ ಸತತವಾಗಿ ಆಳ್ವಿಕೆ ನಡೆಸುತ್ತಿರುವುದನ್ನು ನೋಡುತ್ತೇವೆ." ಎಂದು ಹೇಳಲಾಗುವುದಿಲ್ಲ. ಆ ನಿಂದನೆಯು ಕೊನೆಗೊಳ್ಳುವುದು, ಸೈತಾನು ಕಟ್ಟಿಹಾಕಲ್ಪಡುವನು, ದೇವಜ್ಞಾನವು ಲೋಕದಲ್ಲಿ ತುಂಬಿಕೊಳ್ಳುವುದು ಹಾಗು ದುಃಖ ಕಣ್ಣೀರು, ನೋವುನರಳಾಟ ಇವೆಲ್ಲವುಗಳ ಒರಸುವಿಕೆಯು ಆರಂಭವಾಗುವದು. ಮತ್ತು ಈ ಅನುಗ್ರಹವಾದವುಗಳೆಲ್ಲವನ್ನೂ ಯಾರು ಸರಿಯಾದ ರೀತಿಯಲ್ಲಿ ಪಡೆದು ಅವುಗಳಿಗೆ ಯೋಗ್ಯವಾಗಿ ನಡೆದುಕೊಳ್ಳುವರೋ ಅವರಲ್ಲಿ ಆಶೀರ್ವಾದಗಳು ಕ್ರಮೇಣವಾಗಿ ಪೂರ್ಣವಾಗುತ್ತಾ ಬಂದು ಆ ಸಾವಿರ ವರುಷದ ಅಂತ್ಯದಲ್ಲಿ, ನಿರಂತರವಾದ ಕಾಲಗಳು ಉದಯವಾಗುವ ಸಮಯದಲ್ಲಿ ಪುನರುದ್ಧಾರ ಕಾರ್ಯವು ಸಂಪೂರ್ಣವಾಗಿ ಪರಿಪೂರ್ಣವಾದ ರೀತಿಯಲ್ಲಿ ನೆರವೇರಲ್ಪಡುವುದು. ಯಾರು ಆಗ ದೇವರ ಏರ್ಪಾಡುಗಳನ್ನು ಅಲಕ್ಷಮಾಡಿ ಅವುಗಳನ್ನು ತಿರಸ್ಕರಿಸುವರೋ ಅವರ ಅಸ್ಥಿತ್ವವನ್ನು ಅಳಿಸಿಹಾಕಲಾಗುವುದನ್ನು ದಯಾಪೂರಿತವಾಗಿ ಏರ್ಪಡಿಸಲಾಗಿ–ರುವುದು. –– ಅ.ಕೃ. 3:23

## ಅಂದು ಸಬ್ಬತ್ ದಿನವಾಗಿತ್ತು.

ನಮ್ಮ ಕರ್ತನು ಆ ಅದ್ಭುತವನ್ನು ಮಾಡಿದಾಗ ಗುಣಹೊಂದಿದವನಿಗೆ––ನಿನ್ನ ಹಾಸಿಗೆಯನ್ನು ಎತ್ತಿಕೊಂಡು ನಡೆ ಎಂದು ಸೂಚಿಸಿದ್ದನು ಹಾಗು ಅವನು ಅದರಂತೆ ಮಾಡಿದ್ದನು. ಆ ಕಾಲದಲ್ಲಿನ ಪದ್ಧತಿಯ ಮೇರೆಗೆ ಹಾಸಿಗೆಯು ಬಹು ಹಗುರವಾಗಿ ಮೆತ್ತನೆಯದಾಗಿರುವ ಅಥವಾ ಹಿತಕರವಾಗಿದ್ದು ಆ ಆದೇಶವನ್ನು ಪಾಲಿಸಲು ನಿಜವಾದ ಪರಿಶ್ರಮವೇನೂ ಬೇಕಿಲ್ಲದಿರುವ ಸಂಭವವಿತ್ತು. ಆದುದರಿಂದ ಅದು ಯೆಹೂದ್ಯರ ನಿಯಮದ ಪ್ರಕಾರ ಸಬ್ಬತ್ ನಿಬಂಧನೆಗಳ ಉಲ್ಲಂಘನೆಯಾಗುತ್ತಿರಲಿಲ್ಲ. ನಮ್ಮ ಕರ್ತನು ಆ ನಿಬಂಧನೆಯನ್ನು ಮೀರುವುದಾಗಲೀ ಇಲ್ಲವೇ ಹಾಗೆ ಮಾಡಲು ಉಪದೇಶಿಸುವುದಾಗಲಿ ಮಾಡಿರಲಿಲ್ಲ; ಏಕೆಂದರೆ ಆತನು ಒಬ್ಬ ಯೆಹೂದ್ಯನಾದರಿಂದ ಇತರ ಯಾವ ಯೆಹೂದ್ಯನಂತೆಯೇ ಆ ಆಜ್ಞಾವಿಧಿಗಳಿಗೆ ತನ್ನನ್ನೂ ಒಳಪಡಿಸಿಕೊಂಡಿದ್ದನು. ಆ ಮನುಷ್ಯನಿಗೆ ಹಾಸಿಗೆಯನ್ನು ಹೊತ್ತುಕೊಂಡು ಹೋಗಲು ಸೂಚಿಸಿದುದರಲ್ಲಿ ಆತನ ಉದ್ದೇಶವು ಎರಡು ಬಗೆಯಲ್ಲಿರುವ ಸಂಭವವಿತ್ತು:– (1) ಆ ಕಾರ್ಯವು ಸ್ವತಃ ಆ ಅದ್ಭುತಕ್ಕೆ ಸಾಕ್ಷಿಯಾಗಿರುವುದು; ಅದು ಪ್ರತ್ಯಕ್ಷವಾಗಿದ್ದುದು ಮಾತ್ರವಲ್ಲದೆ (2) ಪರೋಕ್ಷವಾಗಿ ಧರ್ಮಶಾಸ್ತ್ರ ಪಂಡಿತರ ಹಾಗು ನ್ಯಾಯಶಾಸ್ತ್ರಿಗಳ ಗಮನ ಸೆಳೆಯುವ ಸಲುವಾಗಿಯೂ ಇತ್ತು. ಏಕೆಂದರೆ ಆ (ಸಬ್ಬತ್) ದಿನದ ವಿಷಯವಾಗಿ ಅವರು ಹಾಕಿದ ಕೆಲವು ನಿರ್ಬಂಧಗಳು ಮೋಶೆಯ ವಿಧಿಯ ಅನುಸಾರವಾಗಿರಲಿಲ್ಲ. ನಮ್ಮ ಕರ್ತನು ಅವರಿಗೆ ಒಂದು ಬುದ್ಧಿಪಾಠವನ್ನು ಕಲಿಸಲು ಈ ಅವಕಾಶವನ್ನು ಉಪಯೋಗಿಸುವವನಿದ್ದನು. ಇದು ತನ್ನಲ್ಲಿರುವ ಅಧಿಕಾರದ ವಿಷಯವಾಗಿ ಮಾತ್ರವಲ್ಲದೆ ಆಜ್ಞಾವಿಧಿಗಳನ್ನು ಸರಿಯಾಗಿ ಪಾಲಿಸುವ ವಿಷಯವಾಗಿಯೂ ಇತ್ತು; ಅಂದರೆ ದೇವರು ಅದನ್ನು ಕಲ್ಪಿಸಿದ್ದುದು ಮಾನವಕುಲದ ಒಳಿತಿಗಾಗಿ, ನೈತಿಕ ಬಂಧಗಳನ್ನು ವಿಧಿಸುವುದಕ್ಕಾಗಿ ಅಲ್ಲ. ನಮ್ಮ ಕರ್ತನು ಒಂದು ಸಂದರ್ಭದಲ್ಲಿ ಇದನ್ನು ವಿವರಿಸುತ್ತಾ ಫರಿಸಾಯರು ಮತ್ತು ಶಾಸ್ತ್ರಿಗಳಿಗೆ––ಅವರು ತಮ್ಮ ವ್ಯಾಖ್ಯಾನಗಳ ಮೂಲಕ ಧರ್ಮಶಾಸ್ತ್ರವಿಧಿಗಳನ್ನು ಸಾಮಾನ್ಯ ಜನರಿಗೆ ಒಂದು ಭಾರವಾದ ಹೊರೆಯನ್ನಾಗಿ ಮಾಡಿರುವರೆಂದೂ, ಧರ್ಮಶಾಸ್ತ್ರದಲ್ಲಿ ಅಲ್ಪವಾದ ವಿಷಯಗಳನ್ನು ಅನಗತ್ಯವಾಗಿ ದೊಡ್ಡದನ್ನಾಗಿ ಮಾಡಿ, ಅದರಲ್ಲಿನ ಉತ್ಕೃಷ್ಟವಾದ ವಿಷಯಗಳಾದ ನೀತಿ ನ್ಯಾಯ ಪ್ರೀತಿ ಕರುಣೆ ಇವುಗಳನ್ನು ಅವರು ಪೂರ್ಣವಾಗಿ ಅಲಕ್ಷಿಸಿರುವರೆಂದು ಹೇಳಿದ್ದನು.

ಈ ವಿವರಣೆಯಲ್ಲಿ ಕೇವಲ ಈ ಮೇಲಿನ ಫಲಿತಾಂಶ –ವನ್ನು ಪಡೆದದ್ದಾಯಿತೆಂದು ನಾವು ನೋಡುತ್ತೇವೆ. ತನ್ನ ಹಾಸಿಗೆಯನ್ನು ಹೊತ್ತುಕೊಂಡು ಹೊದುದಕ್ಕೆ ಫರಿಸಾಯರು ಮತ್ತು ಶಾಸ್ತ್ರಿಗಳು ಆ ಮನುಷ್ಯನ್ನು ಖಂಡಿಸಿದರು ಮತ್ತು ಆತನು ಪ್ರತಿಯಾಗಿ ಅವರಿಗೆ ತಾನು ಹೀಗೆ ಮಾಡಿದುದರಲ್ಲಿ ತನ್ನನ್ನು ಪೂರ್ಣವಾಗಿ ಸಮರ್ಥಿಸಿಕೊಂಡಿದ್ದನು. ಯಾಕೆಂದರೆ ತನ್ನನ್ನು ಮೂವತ್ತೆಂಟು ವರುಷಗಳಿಂದ ಬಾಧಿಸಿದ್ದ ವ್ಯಾಧಿಯನ್ನು ಗುಣಪಡಿಸಿದವನು ಈ ವಿಷಯದಲ್ಲಿ ಸಾಕಷ್ಟು ಸಮಂಜಸವಾದ ಹಾಗೂ ವಿವೇಕಪೂರ್ಣವಾದ ಅಧಿಕಾರವುಳ್ಳವನಾಗಿದ್ದಿರ ಬೇಕೆಂದು ತಿಳಿದು ಕೇವಲ ಆತನ ಆದೇಶವನ್ನು ಪಾಲಿಸುತ್ತಿದ್ದನು. ನಮ್ಮ ಕರ್ತನ ಅದ್ಭುತವು ತನ್ನನ್ನು ಗುರುತಿಸಿಕೊಳ್ಳಲು ತಾನು ವಿಶೇಷವಾಗಿ ಆಶಿಸುವ ವರ್ಗದ ಗಮನವನ್ನು ಹೀಗೆ ಸೆಳೆಯುವ ಸಲುವಾಗಿದ್ದವು. ಅವು ಯಾವವೆಂದರೆ, ಆ ಕಾಲದಲ್ಲಿ ವಿಶೇಷವಾಗಿ ಆತನನ್ನು ಅಂಗೀಕರಿಸುವರೋ ಅಲ್ಲವೋ ಎಂಬ ಪರೀಕ್ಷೆಗೆ ಒಳಗಾಗಿದ್ದ ಆ ಜನಾಂಗದ ನಾಯಕರು ಮತ್ತು ಪ್ರತಿನಿಧಿಗಳು; ಮತ್ತು ಎರಡನೆಯದಾಗಿ, ತನ್ನ ಉಪದೇಶ ಸತ್ಕಾರ್ಯಗಳಿಗೂ ಹಾಗೂ ಸತ್ಕಾರ್ಯ ರಹಿತವಾದ ಫರಿಸಾಯರ ಉಪದೇಶಗಳಿಗೂ ಇರುವ ವ್ಯತ್ಯಾಸವನ್ನು ಇತರರಿಗೆ ಇನ್ನೊಂದು ರೀತಿಯಲ್ಲಿ ಹೆಚ್ಚಾಗಿ ತೋರ್ಪಡಿಸುವ ಸಲುವಾಗಿದ್ದವು.

ತನಗೆ ಉಪಶಮನ ದೊರಕಿದುದರ ಸಂಬಂಧವಾಗಿ ನಡೆದ ಘಟನೆಗಳ ಬಗ್ಗೆ ಗುಣಹೊಂದಿದ ಆ ಮನುಷ್ಯನು ಎಷ್ಟು ವಿಸ್ಮಯಚಕಿತನಾಗಿದ್ದನೆಂದರೆ ಆ ಕ್ಷಣಕ್ಕೆ ತನಗಾಗಿ ಅದ್ಭುತ ನಡೆಸಿದಾತನನ್ನು ಹುಡುಕಲು ಅಥವಾ ಆತನು ಯಾರೆಂಬುದನ್ನು ತಿಳುಕೊಳ್ಳಲು ಮರೆತೇ ಹೋಗಿದ್ದನು; ಮತ್ತು ನಮ್ಮ ಕರ್ತನು ಅಲ್ಲಿ ನೆರೆದಿದ್ದ ರೋಗಿಗಳ ದೊಡ್ಡ ಗುಂಪನ್ನು ನಿರಾಕರಿಸಲು ಮನಸಿಲ್ಲದೆ ಮೆಲ್ಲಗೆ ಅಲ್ಲಿಂದ ಸರಕೊಂಡು ಹೋಗಿದ್ದನು. ಹೀಗಾಗಿ ಆ ಅದ್ಭುತದ ವಿಷಯವು ತಿಳಿದು ಬಂದಾಗ ಅಲ್ಲಿ ಗುಣಪಡಿಸಿದಾತನು ಕಂಡುಬಂದಿರಲಿಲ್ಲ. ಹೊಸದಾದ ವ್ಯವಸ್ಥೆಯ ಬಗ್ಗೆ ಹಾಗು ಅದರಲ್ಲಿ ತಾನು ದೇವರ ಪ್ರತಿನಿಧಿ ಎನ್ನುವ ವಿಷಯಕ್ಕೆ ಗಮನ ಸೆಳೆಯುವ ಸಲುವಾಗಿಯೂ ಮತ್ತು ದೇವರ ಮಹಿಮೆಗಾಗಿಯೂ ಆತನು ಈ ಅದ್ಭುತವನ್ನು ಮಾಡಿದ್ದನು. ಇದಕ್ಕೆ ಅನುಗುಣವಾಗಿ ಆತನು ಗುಣಪಡಿಸಿದ್ದು ಆ ಗುಂಪಿನಲ್ಲಿ ಗುಣಹೊಂದಲು ಬಹು ಅರ್ಹನಾಗಿದ್ದವನು ಎಂಬುದನ್ನು ನಾವು ಭಾವಿಸಿಕೊಳ್ಳಬಹುದು. ಬಹುಶಃ ತನಗೆ ದೊರೆತ ಉಪಶಮನಕ್ಕಾಗಿ ದೇವರಿಗೆ ಉಪಕಾರ ಸ್ತುತಿಯನ್ನು ಸಲ್ಲಿಸಲು ದೇವಾಲಯಕ್ಕೆ ಹೋಗಿದ್ದ ಈ ಮನುಷ್ಯನ್ನು ಯೇಸುವು ಮತ್ತೆ

ವಿಶೇಷವಾಗಿ ಸಂಧಿಸಿದ್ದನೆಂಬ ಅಂಶದಲ್ಲಿ ಅಡಕವಾಗಿರುವು – ದೆಂದರೆ ಈತನಲ್ಲಿ ಸಾಮಾನ್ಯವಾದ ಗುಣಗಳಿಗಿಂತಲೂ ಹೆಚ್ಚಿನದು ಇರುವುದನ್ನು ಅತನು ನೋಡಿದ್ದನೆಂಬುದು. ಇದು ಆತನಿಗೆ ಗುಣಪಡಿಸುವಂತೆ ಯೇಸುವನ್ನು ನಡೆಸಿತಲ್ಲದೆ ಆತನಿಗೆ ತನ್ನನ್ನು ತೋರ್ಪಡಿಸಿಕೊಳ್ಳುವಂತೆಯೂ ಮಾಡಿತ್ತು.

## "ಹೋಗು ಇನ್ನು ಮೇಲೆ ಪಾಪಮಾಡಬೇಡ"

ನಮ್ಮ ಕರ್ತನು ದೇವಾಲಯುದಲ್ಲಿ ಸ್ವಸ್ಥವಾದ ಮನುಷ್ಯನನ್ನು ಅಭಿನಂದಿಸಿ ತಾನು ಆವನನ್ನು ಗುಣಪಡಿಸಲು ಸಮರ್ಥನೆಂಬುದನ್ನು ತೋರಿಸಿದ್ದು ಮಾತ್ರವಲ್ಲದೆ ಆತನು ಈ ಅಸ್ವಸ್ಥತೆಯ ಸ್ಥಿತಿಗೆ ಬರಲು ಕಾರಣವಾದ ಆತನ ಮೂವತ್ತೆಂಟು ವರುಷಗಳ ಹಿಂದಿನ ಪಾಪದ ವಿಷಯವಾಗಿಯೂ ಸಹ ತನಗೆ ತಿಳಿದಿತ್ತೆಂಬುದು ತೋರಿಸಿಕೊಟ್ಟಿದ್ದರಲ್ಲಿ ಬಹು ಮಹತ್ವ– ವಿದ್ದಿರಬೇಕು. ಆತನು ಅವನಿಗೆ––"ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪ ಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು." ಎಂದು ಹೇಳಿದನು. ನಮ್ಮ ವಿಮೋಚಕನು ಹೇಳಿದ ಬುದ್ಧಿವಾದದಲ್ಲಿ ಒಂದು ಅಮೂಲ್ಯವಾದ ಪಾಠವಿರುವುದು. ಅದು ಆ ಬಡ ಮನುಷ್ಯನಿಗೆ ಸಹಾಯಕಾರಿ ಮಾತ್ರವಲ್ಲದೆ ಅದಕ್ಕಿಂತಲೂ ಹೆಚ್ಚು ಅಮೂಲ್ಯವಾದ ಹಾಗು ಸಹಾಯಕಾರಿಯಾದ ಪಾಠವು ಕರ್ತನ ಕೃಪೆಯ ಮೂಲಕವಾಗಿ ಪಾಪವೆಂಬ ರೋಗದಿಂದ ಗುಣಹೊಂದಿ ನೀತಿವಂತರೆಂದು ನಿರ್ಣಯಿಸಲ್ಪಟ್ಟು ದೇವರ ಮಕ್ಕಳಾಗಿ ದೇವರ ಮನೆತನಕ್ಕೆ ಅಂಗೀಕರಿಸಲ್ಪಟ್ಟವರಿಗೂ ಇರುವುದು. (ಆದಾಮನ) ಮೂಲ ಪಾಪಕ್ಕೆ ಬಂದ ದಂಡನೆಯು ಬಹು ಕಠಿಣವಾಗಿದ್ದು ಆದಾಮನ ಸಂತತಿಯ ಪ್ರತಿಯೊಬ್ಬನೂ ಅದರಲ್ಲಿ ಸೇರಿರುವನು. ಆದರೂ ದೇವರು (ಆ ದೋಷವನ್ನು ಪರಿಹರಿಸಿ) ಒಂದು ಮಹಾ ಸಂಧಾನವನ್ನು ಏರ್ಪಡಿಸಿರುವನು ಮತ್ತು ಈ ಮೂಲಕವಾಗಿ ಕಡೆಯಲ್ಲಿ ಪ್ರತಿಯೊಬ್ಬ ಸೃಷ್ಟಿಯೂ ಈ ಎಲ್ಲಾ ದಂಡನೆ ಹಾಗೂ ಅದರ ಫಲಗಳಿಂದ ತಪ್ಪಿಸಿಕೊಳ್ಳುವ ಪೂರ್ಣಾವಕಾಶವನ್ನು ಪಡೆಯುವನು. ಆದರೆ ಹೀಗೆ ಬಿಡುಗಡೆಯಾದ ನಂತರ ನಮ್ಮ ಮೇಲೆ ಒಂದು ಹೊಸ ಜವಾಬ್ದಾರಿ ಬರುವುದು. ಆಪೋಸ್ತಲನು ಪ್ರಕಟಿಸಿ ಹೇಳಿರುವಂತೆ– –ಸತ್ಯದ ಪರಿಜ್ಞಾನವನ್ನು ಹೊಂದಿದ ಮೇಲೆ ನಾವು ಬೇಕೆಂದು ಪಾಪಮಾಡಿದರೆ ಪಾಪಪರಿಹಾರಕ್ಕಾಗಿ ಇನ್ನು ಯಾವ ಯಜ್ಞವೂ ಇರುವುದಿಲ್ಲ; ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದಿರುವುದು. (ಇಬ್ರೀಯ 10:27) (ಆದಾಮನ) ಮೂಲ ಪಾಪದ ಸಂಬಳವೆಂದರೆ ಮಾನವ ಕುಲವೆಲ್ಲವೂ ಅನುಭವಿಸುತ್ತಿರುವ ಮರಣ ಹಾಗು ಅದರೊಂದಿಗೆ ಬಂದಿರುವ ನೋವು ನರಳಾಟಗಳು. ನಾವು ಎಲ್ಲಾ ವಿಧವಾದ ಪಾಪಗಳಿಂದ ವಿಮೋಚಿತರಾಗಿ ನೀತಿವಂತರೆಂಬ ನಿರ್ಣಯ ಹೊಂದಿದ ಮೇಲೆ ಮನಃಪೂರ್ವಕವಾಗಿ ಬೇಕೆಂದು ಮಾಡುವ ಇಚ್ಛಾಪೂರ್ವಕವಾದ ಪಾಪಗಳಿಗೆ ಬರುವ ದಂಡನೆಯು ಬಹು ಕ್ರೂರವಾದುದು ಅಂದರೆ (ಆದಾಮನಿಗೆ ಉಂಟಾದ) ಮೂಲ ದಂಡನೆಗಿಂತಲೂ ಬಹು ಕಠಿಣವಾದುದು. ಇದು ಮರಣವೆಂಬ ಅದೇ ರೀತಿಯ ದಂಡನೆಯಾದರೂ ಅದು ಎರಡನೆಯ ಮರಣವಾಗಿರುವುದು; ಇದರಿಂದ ವಿಮೋಚಿತರಾಗಲು ದೇವರು ಯಾವ ಏರ್ಪಾಡನ್ನೂ ಮಾಡಿಲ್ಲವೆಂಬುದನ್ನು ಖಂಡಿತವಾಗಿ ಹೇಳಿರುವನು. ಹೀಗಾಗಿ ಕ್ರಿಸ್ತನು ಮತ್ತೆ ಮರಣಹೊಂದತಕ್ಕವನಲ್ಲ. ನಾವು ಬಿಡುಗಡೆ ಹೊಂದಿದವರಾಗಿ ನೀತಿವಂತರೆಂದು ನಿರ್ಣಯಿಸಲ್ಪಟ್ಟ ಮೇಲೆ ಮನಪೂರ್ವಕವಾಗಿ ಪಾಪಮಾಡಿದರೆ ಅದು ಒಂದು ಪ್ರಮಾಣದ ಬಲಹೀನತೆಯು ಮತ್ತು ಅಪರಿಪೂರ್ಣತೆಯ ದೆಸೆಯಿಂದ ಶೋಧಿತರಾಗಿದ್ದಲ್ಲಿ ಅದಕ್ಕಾಗಿ ನಮಗೆ ಪೆಟ್ಟುಗಳು ಬೀಳುವುದನ್ನು ನಿರೀಕ್ಷಿಸಬಹುದು; ಆದರೆ ಈ ಒಂದು ಬಗೆಯ ಶೋಧನೆ ಅಥವಾ ಬಲಹೀನತೆಯನ್ನುಳಿದು ನಾವು ಮನಪೂರ್ವಕವಾಗಿ ಬೇಕೆಂದು ಪಾಪಮಾಡಿದಲ್ಲಿ ದೇವರ ಕನಿಕರ ಹಾಗೂ ಕ್ಷಮಾಪಣೆಯ ವಿಷಯವಾಗಿ ನಾವು ಮುಂದೇನೂ ನಿರೀಕ್ಷಿಸುವಂತಿಲ್ಲ, ಏಕೆಂದರೆ ನಾವು (ಆದಾಮನ) ಮೂಲ ಪಾಪದ ವಿಷಯವಾಗಿ ಇಷ್ಟನ್ನೆಲ್ಲಾ ಅನುಭವಿಸಿದ ನಂತರ ಇಲ್ಲಿ ನಾವು ಹೀಗೆ ಒಂದು ಹೊಸದಾದ ಹಾಗು ವೈಯುಕ್ತಿಕವಾದ ದಂಡನೆಗೆ ಒಳಗಾಗುತ್ತೇವೆ. ಮತ್ತು ಈ ಹೊಸದಾದ ಮತ್ತು ಅಕ್ಷಮ್ಯವಾದ ನೀತಿ ಮೀರುವಿಕೆಗೆ ಇರುವ ದಂಡನೆಯು ಮರಣ, ಅದರಿಂದ ಹಿಂದಿರುಗಲು ನಿರೀಕ್ಷಿಸಲಾಗದಂತ ಮರಣ.

*****

# “ಇವುಗಳಿಗಿಂತಲೂ ದೊಡ್ಡದಾದ ಕಾರ್ಯಗಳು”

**ರೀಪ್ರಿಂಟ್ಸ್ ಪುಟ 2433**

## ಯೋಹಾದ 5:17–27

**“ಈತನು ನಿಜವಾಗಿಯೂ ಲೋಕರಕ್ಷಕನಾದ ಕ್ರಿಸ್ತನು” – ಯೋಹಾನ 4:42**

ಯೇಸುವು ಮತ್ತೆ ಯೂದಾಯದಲ್ಲಿದ್ದನು. ಆತನಿಗೆ ವಾಡಿಕೆಯಾಗಿದ್ದಂತೆ ಬಹುಶಃ ಪಸ್ಕ ಹಬ್ಬವನ್ನು ಆಚರಿಸುವ ಸಲುವಾಗಿದ್ದಿರಬಹುದು. ಈ ವಾರ್ಷಿಕವಾದ ಜನಸೇರುವಿಕೆಯು ಪರಿಶುದ್ಧ ನಾಡಿನ ಎಲ್ಲಾ ಭಾಗಗಳಿಂದಲೂ, ಸುತ್ತಲಿರುವ ಎಲ್ಲಾ ದೇಶಗಳಿಂದಲೂ ಬರುವ ಭಕ್ತರಾದ ಯೆಹೂದ್ಯರನ್ನು ತಲುಪಲು ಒಂದು ಅತ್ಯುತ್ತಮವಾದ ಅವಕಾಶ ಉಂಟು ಮಾಡುತ್ತಿತ್ತು.

ನಮ್ಮ ಕರ್ತನು ಯೆರೂಸಲೇಮಿನಲ್ಲಿ ಪ್ರಶಾಂತವಾದ ಸಬ್ಬತ್ ದಿನದಲ್ಲಿ ನಡೆದಾಡುತ್ತಾ ಬೆಥೆಸ್ಥಾ ಕೊಳಕ್ಕೆ ಬಂದಿದ್ದನು. ಈ ಕೊಳವು ತನ್ನಲ್ಲಿದ್ದ ರೋಗಗುಣಪಡಿಸುವಿಕೆಯ ಲಕ್ಷಣಗಳಿಗೆ ಇದು ಆಶ್ಚರ್ಯಕರ ಕೀರ್ತಿಯನ್ನು ಪಡೆದಿತ್ತು. ಈ ಕಾರಣದಿಂದ ಅದರ ಮಂಟಪಗಳು ಮತ್ತು ಇತರ ಜಾಗಗಳಲ್ಲಿ ವಿವಿಧ ಜಾಡ್ಯಗಳಿಂದ ಕೂಡಿದ ರೋಗಿಗಳು ಒತ್ತಾಗಿ ಕೂಡಿಬಂದು ಆ ನೀರಿನಲ್ಲಿ ನಡೆಯುವ ಅದ್ಭುತವೆಂದು ಪರಿಗಣಿಸಲಾದ ಕಾರ್ಯದ ಲಾಭಪಡೆಯಲು ಕಾಯುತ್ತಿದ್ದರು. ಇಂದು ತಿಳಿಯಲಾದ ಮರಿಯಳ ಕೊಳವು ಹಿಂದೆ ಬೆಥೆಸ್ದ ಕೊಳವೆಂದು ತಿಳಿಯಲಾಗಿತ್ತು ಮತ್ತು ಈ ಮರಿಯಳ ಕೊಳದ ನೀರಿನ ವಿಶಿಷ್ಟವಾದ ಚಲನವು ಬಹು ಪರಿಚಿತವಾಗಿರುವುದು. ಯಾತ್ರಿಕರು ಹೇಳಿರುವ ನಂಬಲರ್ಹವಾದ ಮಾತುಗಳು ತಿಳಿಸುವುದೆಂದರೆ, ಇದರಲ್ಲಿನ ಬುಗ್ಗೆಯಿಂದ ನೀರು ಐದು ನಿಮಿಷಗಳೊಳಗೆ ಹನ್ನೆರಡು ಅಂಗುಲಗಳಷ್ಟು ಎತ್ತರಕ್ಕೆ ಏರಿ ಆನಂತರ ಅತಿ ಬೇಗನೇ ಕೆಳಗಿಳಿಯುವುದೆಂದು. ಇದೇ ರೀತಿಯ ಬಿಟ್ಟುಬಿಟ್ಟು ನಡೆಯುವ ವಿಶಿಷ್ಟತೆಯುಳ್ಳ ಬೇರೆ ಬುಗ್ಗೆಗಳೂ ಇರುತ್ತವೆ. ಇವುಗಳಲ್ಲಿ ಒಂದು ಜರ್ಮನಿಯ ಕಸಿಂಜೆನ್ ಎಂಬಲ್ಲಿರುವುದು. ಅದು ಹರಿಯುವಾಗ ಅದರಲ್ಲಿ ಬಿಡುಗಡೆಯಾದ ಅನಿಲವು ಸೇರಿದ್ದು, ಇದರ ನೀರಿನಲ್ಲಿ ಚಲನೆ ಉಂಟಾಗುವಾಗ ಅದು ಬಹು ಅಮೂಲ್ಯವಾದುದೆಂಬ ಕೀರ್ತಿಯನ್ನು ಪಡೆದಿರುವುದು; ಬಹುಶಃ ಇದರಲ್ಲಿ ಅನಿಲವು ಕೂಡಿರುವ ಕಾರಣದಿಂದಾಗಿರಬಹುದು.

ಬಿಟ್ಟುಬಿಟ್ಟು ಚಲನೆ ಉಂಟಾಗುವ ಬೆಥೆಸ್ದ ಕೊಳದ ನೀರಿನ ವಿಷಯವು ಈ ಅಧ್ಯಾಯದ 7ನೇ ವಚನದಲ್ಲಿ ಉಲ್ಲೇಖವಾಗಿದೆ; ಆದರೆ ದೇವದೂತನು ನೀರನ್ನು ಕಲಕುವ ಮುಂತಾದ ವಿಷಯವಿರುವ ಮೂರನೇ ವಚನದ ಕಡೆಯ ಏಳು ಪದಗಳನ್ನು ಹಾಗೂ ನಾಲ್ಕನೆಯ ವಚನದ ಎಲ್ಲಾ ಪದಗಳನ್ನು ಪುರಾತನ ಗ್ರೀಕ್ (ಸಿನಾಯಿಟಿಕ್ ಹಾಗೂ ವೆಟಿಕನ್) ಪ್ರತಿಗಳಲ್ಲಿ ಬಿಟ್ಟುಬಿಡಲಾಗಿದೆ. ಈ ಬುಗ್ಗೆಯ ನೀರಿನ ವಿಷಯವಾಗಿ ಅದ್ಭುತವೇನೂ ಇಲ್ಲದಿರುವ ಸಂಭವವಿದೆ. ಆದರೆ ಇಲ್ಲಿ ಹರಿಯುವ ನೀರಿನ ಒಂದು ವೈಚಿತ್ರ್ಯವೆಂದರೆ ಈ ಕೊಳದ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಬಿಟ್ಟುಬಿಟ್ಟು ಒಳಹರಿವು ಉಂಟಾಗುವುದು: ಅಥವಾ ಇಲ್ಲಿ ಅನಿಲವು ಈ ಕ್ರಿಯೆಯನ್ನು ನಡೆಸಿರುವ ಸಾಧ್ಯತೆಯಿರುವುದು. ಅಲ್ಲಿ ಅನುಭವಕ್ಕೆ ಬಂದಿದ್ದ ಸ್ವಸ್ಥತೆಯು ಈ ದಿನಗಳಲ್ಲಿ ಕರೆಯಲ್ಪಡುವ ಮನೋಚಿಕಿತ್ಸೆಗೆ ಸಂಬಂಧಿಸಿರುವುದು ಬಹಳವಾಗಿ ಸಂಭವ–ವಿರುವುದು. ಇದು ಮನಸ್ಸಿನಲ್ಲಿ ನಡೆಯುವ ಒಂದು ಹಿತಕರ ಕ್ರಿಯೆಯಾಗಿದ್ದು ಅದರ ಫಲವು ಶಾರೀರಿಕ ಅವಯವಗಳ ಮೇಲೂ ಉಂಟಾಗುವದು.

ಕೊಳದ ನೀರಿನ ಚಲನೆಗಾಗಿ ಕಾದುಕೊಂಡು ಉಪಶಮನವನ್ನು ನಿರೀಕ್ಷಿಸುತ್ತಿದ್ದ ಗುಂಪಿನವರೆಲ್ಲರನ್ನು ಒಟ್ಟಾರೆ ಸ್ವಸ್ಥಪಡಿಸಲು ನಮ್ಮ ಕರ್ತನು ತೆಗೆದುಕೊಂಡ ಕ್ರಮದ ಬಗ್ಗೆ ನಮಗೆ ತಿಳಿದಿರುವುದಿಲ್ಲ. ಇಲ್ಲವೇ ಆತನು ನಮ್ಮ ಪಠ್ಯದ ವಿಷಯವಾದ ಸ್ವಸ್ಥತೆಯ ಅಂದರೆ ಮೂವತ್ತೆಂಟು ವರುಷಗಳ ಹಳೆಯದಾದ ರೋಗದಿಂದ ಉಪಶಮನ ಹೊಂದಲು ಯಾವ ಸ್ಪಷ್ಟವಾದ ನಿರೀಕ್ಷೆಯೂ ಇಲ್ಲದ, ಅಲ್ಲಿದ್ದ ಬಹು ಪಾಲು ಜನರಗಿಂತಲೂ ಅತಿ ಅಸಹಾಯಕ ಸ್ಥಿತಿಯಲ್ಲಿದ್ದವನನ್ನು ಸ್ವಸ್ಥಪಡಿಸಿದ್ದನ್ನು ಹೊರತುಪಡಿಸಿ ಬೇರೆ ಯಾರಿಗಾದರೂ ಆತನು ತನ್ನ ದಯೆಕರುಣೆಗಳನ್ನು ತೋರಿದನೆಂಬುದರ ಬಗ್ಗೆ ನಮಗೆ ತಿಳಿದು ಬಂದಿಲ್ಲ. ಅಲ್ಲದೆ ಅಸಹಾಯಕನಾದ ಈ ಒಬ್ಬನು ವಿವರವಾಗಿ ಹೇಳಿಕೊಂಡ ಹಾಗೆ ತಾನು ಕೊಳವನ್ನು ತಲುಪುವುದಕ್ಕಿಂತ ಮೊದಲೇ ತನಗಿಂತಲೂ ಕಡಿಮೆ ನಿಶಕ್ತರು ಮುಂದಾಗಿ ಹೋಗಿ ಕೊಳದಿಂದ ಲಾಭಪಡೆಯುತ್ತಿದ್ದುದರಿಂದ ಕೊಳದ ಬಳಿಯಲ್ಲಿದ್ದು ಗುಣಪಡಿಸಿಕೊಳ್ಳುವ ತನ್ನ ನಿರೀಕ್ಷೆಗೆ ಯಾವ ಆಧಾರವೂ ಇರಲಿಲ್ಲ. ಹೃದಯ ವೇದನೆಯಿಂದ ಬಳಲಿದವನಾಗಿ ಯಾವ ನಿರೀಕ್ಷೆಯೂ ಸಹಾಯವೂ ಇಲ್ಲದ ಈತನಿಗೆ ಕರ್ತನು ತಾನೇ ಸಂಬೋಧಿಸಿ ಹೇಳಿದ್ದು, “ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?” ಆತನು ಕೂಡಲೇ ತಾನು ಸ್ವಸ್ಥವಾಗಲು ಕಾತುರದಿಂದಿರುವೆನೆಂದು ಉತ್ತರಿಸಿದನು ಮತ್ತು ನಮ್ಮ ಕರ್ತನು ತನ್ನ ಶಕ್ತಿಯ ಮೇಲೆ ಮೊದಲೇ ಆತನಿಗೆ ನಂಬಿಕೆಯಿತ್ತೆಂಬುದನ್ನು ತೋರ್ಪಡಿಸು–ವವರೆಗೂ ಕಾಯದೆ ಆ ಮನುಷ್ಯನಿಗೆ ವಿಧೇಯತೆಯ ಮೂಲಕ ತನ್ನ ನಂಬಿಕೆಯನ್ನು ಪ್ರಮಾಣಿಸಿ ತೋರ್ಪಡಿಸಲು ಅವಕಾಶ ನೀಡಿದನು. ಆತನು ವಿಧೇಯನಾಗಿ ತನಗೆ ಉಪಕಾರ ಮಾಡಿದವನು ಯಾರೆಂಬುದನ್ನೂ ಸಹ ತಿಳಿಯದೆ ತನ್ನ ನಂಬಿಕೆ–ಯನ್ನು ಉಪಯೋಗಿಸಿಕೊಂಡು ದೋಲಿಯನ್ನು ಎತ್ತಿಕೊಂಡು ಆಶ್ಚರ್ಯದಿಂದ ವಿಸ್ಮಯವುಳ್ಳವನಾಗಿ ಹೊರಟು ಹೋದನು.

ಈ ಸುವಾರ್ತಾ ಯುಗದ ಪರ್ಯಂತರವೂ ನಮ್ಮ ಕರ್ತನು ನಡೆಸಿದ ಮಹತ್ತರವಾದ ಅದ್ಭುತಗಳೂ ಹೀಗೆಯೇ ಇರುವವು. ಅತಿ ಬಲಹೀನರಲ್ಲಿ ಹಾಗೂ ಒಳ್ಳೆಯದನ್ನು ಮಾಡಲು ಸಾಮರ್ಥ್ಯವಿಲ್ಲದೆ ಅತಿ ನಿರಾಶರಾದವರಲ್ಲಿಯೂ ಕೆಲವರು

ನಂಬಿಕೆ ಹಾಗೂ ವಿಧೇಯತೆಯ ಮೂಲಕ ನೈತಿಕವಾಗಿ ಗುಣಹೊಂದಿ ಬಲಗೊಂಡು ಪುನಶ್ಚೇತನವನ್ನು ಪಡೆದು ಮಾರ್ಪಾಡಾಗಿರುವರು. ಆದರೂ ಲೋಕದಲ್ಲಿರುವ ಮನುಕುಲದವರೆಲ್ಲರಿಗೆ ಹೋಲಿಸಿದ್ದಲ್ಲಿ ಇಂಥವರ ಸಂಗತಿಗಳು ವಿರಳ. ಅಲ್ಲದೆ ಹೀಗೆಯೇ ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಪಾಪದಿಂದ ಕೇವಲ ಅಲ್ಪ ಬಾಧಿತರಿಗೂ ಸಹ ಕ್ರಮೇಣ ಆ ಘನ ವೈದ್ಯನನ್ನು ಪರಿಚಯ ಮಾಡಿಕೊಡಲಾಗುವದು.

ಈ ಅದ್ಭುತವು ಯೇಸುವಿಗೆ ಫರಿಸಾಯರಿಂದ ವಿರೋಧವನ್ನು ತಂದುಕೊಟ್ಟಿತು. ಅವರು ತಮ್ಮ ಹೃದಯದ ತಪ್ಪು ಮನೋಭಾವದ ಕಾರಣದಿಂದ ಸಬ್ಬತ್ ದಿನದ ನಿಜವಾದ ಧ್ಯೇಯೋದ್ದೇಶಗಳನ್ನು ತಪ್ಪಾಗಿ ತಿಳಿದವರಾಗಿ ದೈವವಿಧಿ–ನಿಯಮಗಳಿಗೆ ಹಿರಿಯರಿಂದ ಬಂದ ಸಂಪ್ರದಾಯಗಳನ್ನು ಲಗತ್ತಿಸಿ ಅದರ ನಿಜವಾದ ಅರ್ಥಾಭಿಪ್ರಾಯಗಳು ಕಳೆದು ಹೋಗುವಂತೆ ಮಾಡಿ ಅವುಗಳನ್ನು ಕೇವಲ ತೋರಿಕೆಯ ಆಚರಣೆಯನ್ನಾಗಿ ಮಾಡಿದ್ದರು. ನಮ್ಮ ಕರ್ತನು ತಾನು ಮಾಡಿದ ಅನೇಕ ಅದ್ಭುತಗಳನ್ನು ಇತರ ದಿನಗಳಿಗಿಂತಲೂ ಸ್ಪಷ್ಟವಾಗಿ ಸಬ್ಬತ್ ದಿನದಲ್ಲಿಯೇ ಮಾಡಿದನೆಂಬುದು ಆತನು ಸಬ್ಬತ್ ದಿನಕ್ಕೆ ಅಗೌರವವನ್ನು ತರುವುದಕ್ಕೆ ಇಲ್ಲವೇ ಪರಿಸಾಯರನ್ನು ಪ್ರಚೋದಿಸುವ ಬಯಕೆಯನ್ನು ವ್ಯಕ್ತಪಡಿಸುವುದಕ್ಕೆ ಸೂಚನೆ–ಯಾಗಿತ್ತೆಂಬುದನ್ನು ನಾವು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಬದಲಾಗಿ ನಾವು ಭಾವಿಸುವುದೇಂದರೆ ಗಮನಾರ್ಹವಾಗಿರುವ ಅದ್ಭುತಗಳನ್ನು ಈ ಸಬ್ಬತ್ ದಿನಗಳಲ್ಲಿ ಮಾಡಿದ್ದುದು ಮಾನವ ಕುಲಕ್ಕೆ ಮಹತ್ತರವಾಗಿರುವ ನಿಜರೂಪದ ಆಶೀರ್ವಾದಗಳು ಭೂಲೋಕ ಚರಿತ್ರೆಯ ಏಳನೇ ಸಾವಿರ ವರುಷವಾದ (ಕ್ರಿಸ್ತನ) ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಅಂದರೆ ಏಳನೇ ಮಹಾ ದಿನವಾದ ಸಬ್ಬತ್ ಕಾಲದಲ್ಲಿ ಬರುವುದನ್ನು ತೋರಿಸಿಕೊಡುವದಕ್ಕಾಗಿ ಎಂಬುದು. "ಯೇಸು ಈ ಮೊದಲನೆಯ ಸೂಚಕಕಾರ್ಯವನ್ನು ಮಾಡಿ (ಮುಂಬರುವ) ತನ್ನ ಮಹಿಮೆಯನ್ನು (ಮೊದಲೇ) ತೋರ್ಪಡಿಸಿದನು." – ಯೋಹಾನ 2:11

ತಮ್ಮದೇ ಆದ ಸಾಕ್ಷಿಯ ಪ್ರಕಾರ ಯಾವ ತಪ್ಪನ್ನೂ ಮಾಡದೇ ಬಹುವಾಗಿ ಒಳ್ಳೆಯದನ್ನೇ ಮಾಡುತ್ತಿದ್ದ ಈ ಒಬ್ಬನನ್ನು ಯೆಹೂದ್ಯರು ಕೊಲ್ಲಲು ಬಯಸಿದ ಕಾರಣವೆಂದರೆ ಈತನು ಧರ್ಮಶಾಸ್ತ್ರವನ್ನು ಭಿನ್ನವಾದ ರೀತಿಯಲ್ಲಿ ವ್ಯಾಖ್ಯಾನ ಮಾಡಿ ಹಿರಿಯರಿಂದ ಬಂದ ಸಂಪ್ರದಾಯಗಳನ್ನು ಅಲ್ಲಗಳೆದಿದ್ದ–ನೆಂಬುದು. ಯೆಹೂದ್ಯರ ಈ ನಡವಳಿಕೆಯು ಈಗಿನ ಕಾಲದಲ್ಲಿನ ತಮ್ಮ ಪಂಗಡವನ್ನು ಅತಿ ಕಟ್ಟುನಿಟ್ಟಾಗಿ ಪರಿಗಣಿಸುವ ಕ್ರೈಸ್ತರ ವರ್ಗಕ್ಕೆ ಒಂದು ಹೋಲಿಕೆಯಿರುವುದು. ತಮ್ಮ ಮತಪಂಗಡದ ತತ್ವಗಳು ಹಾಗು ಸಂಪ್ರದಾಯಗಳಿಗೆ ಹಾನಿಯುನ್ನು ಉಂಟುಮಾಡದ ಇವರನ್ನು ಅಕ್ಷರಶಹಃ ಕೊಲ್ಲಲು ಅವರು ಬಯಸದಿದ್ದರೂ ಇವರ ಚಾರಿತ್ರ್ಯಾವಧೆ ಮಾಡುವಲ್ಲಿ ಸ್ವಲ್ಪವೂ ಹಿಂಜರಿಯರು. ಹೀಗೆ ಮಾಡುವುದರಿಂದಾದರೂ ಒಂದು ವೇಳೆ ತಮ್ಮ ಮತಪದ್ಧತಿಯ ಮಿಥ್ಯೆಗಳನ್ನು ಕಾಪಾಡಿಕೊಳ್ಳುವುದು ಸಾಧ್ಯವಾಗಬಹುದೆಂಬುದು ಅವರ ಅಭಿಪ್ರಾಯ.

ತನಗಿರುವ ಅಧಿಕಾರದ ವಿಷಯದಲ್ಲಿ ನಮ್ಮ ಕರ್ತನು ನೀಡಿದ ಉತ್ತರವು ಅವರಿಗೆ ಇನ್ನೂ ಸಿಟ್ಟೇರುವಂತೆ ಮಾಡಿತು. ಅನೇಕರು ಅಲೋಚಿಸುವುದಾಗಿ ತೋರಿಬಂದಂತೆ, ಇದು ಆತನು ತನ್ನನ್ನು ಯೆಹೋವನೆಂದು ಪ್ರಕಟಮಾಡಿಕೊಂಡನೆಂಬ ಕಾರಣಕ್ಕಾಗಿ ಅಲ್ಲ; ಆದರೆ ತಾನು ಯೆಹೋವನ ಮಗನೆಂಬುದನ್ನು ಹಾಗೂ ತನ್ನ ತಂದೆಯೇ ಕೆಲಸ ಮಾಡಲು ತನಗೆ ನೀಡಿರುವನು ಎಂದು ಪ್ರಕಟಮಾಡಿದ್ದ ಕಾರಣದಿಂದಾಗಿತ್ತು. ಇಲ್ಲವೇ ಯೆಹೂದ್ಯರು ಈ ವಿಷಯದಲ್ಲಿ ಆತನನ್ನು ತಪ್ಪಾಗಿ ತಿಳಿದುಕೊಂಡಿದ್ದರೆಂದಲ್ಲ; ಅವರ ಸಿಟ್ಟಿಗೆ ಕಾರಣವೆಂದರೆ ಆತನು ತನ್ನನ್ನು ದೇವರ ಮಗನೆಂದು ಹೇಳಿಕೊಂಡಿದ್ದರಲ್ಲಿ ತಮಗಿಂತಲೂ ಬಹು ಅಧಿಕವಾದ ಒಂದು ಸ್ಥಾನಮಾನಗಳನ್ನು ಆತನು ಪಡಕೊಂಡಿದ್ದನೆಂದು ಹೇಳಿಕೊಂಡಿರುವನೆಂಬ ಅವರ ಭಾವನೆ. ಹೀಗೆ ಹೇಳಿಕೊಳ್ಳುವುದರಲ್ಲಿ ಯೆಹೋವನಿಗೆ ಅತಿ ಸನಿಹವಾದ ಗುಣಸಂಬಂಧಗಳನ್ನು ಹೊಂದಿದ್ದನೆಂಬುದು ಇಲ್ಲಿ ಅಡಕವಾಗಿರುವುದು. ಈ ರೀತಿಯಲ್ಲಿ ಕರೆದುಕೊಳ್ಳುವುದು ಒಂದು ದೇವದೂಷಣೆಯೆಂದು ಅವರು ಪರಿಗಣಿಸಿದ್ದರು. ನಮ್ಮ ದಿನದ ಫರಿಸಾಯರ ಉತ್ತರಾಧಿಕಾರಿಗಳು ನಮ್ಮ ಕರ್ತನು ಹೇಳಿ–ಕೊಂಡಿದ್ದಕ್ಕಿಂತಲೂ ಇನ್ನೂ ಮುಂದೆ ಹೋಗಿ ಆತನು ಎಂದೂ ಹೇಳಿಕೊಳ್ಳದನ್ನು ಆತನ ವಿಷಯವಾಗಿ ಹೇಳಿಕೊಂಡಿರುವರು; ಅದೇನೆಂದರೆ ಆತನೇ ತಂದೆ ಎಂದೂ ಮತ್ತು ಆತನು ಯಾವಾಗಲೂ ತಂದೆಯಾಗಿದ್ದು ಮಗನೂ ಸಹ ಆಗಿರುವನೆಂದೂ ಅಲ್ಲದೆ ಈ ಇಬ್ಬರೂ ಒಂದೇ ವ್ಯಕ್ತಿಯಾಗಿದ್ದು ಅವರು ಕೇವಲ ಒಂದೇ ಮನಸ್ಸು ಉದ್ದೇಶ ಭಾವ ಚಿತ್ತದ ಸಾಮರಸ್ಯದಿಂದ ಕೂಡಿರುವ ಇಬ್ಬರು ವ್ಯಕ್ತಿಗಳಲ್ಲವೆಂಬುದು. ದೇವರ ಮಕ್ಕಳೆಂದು ಹೇಳಿಕೊಂಡು ದೇವವಾಕ್ಯದಲ್ಲಿರುವ ಈ ಶಬ್ದದ ಪ್ರಭಾವ ಮಹತ್ವಗಳನ್ನು ಅನ್ವಯ ಮಾಡಿಕೊಳ್ಳುವ ಈ ದಿನದ ಸಹೋದರರನ್ನು ಇವರು ಬಹು ಅಪರಾಧೀ ಭಾವದಿಂದ ನೋಡುವರು. ಅನೇಕರಿಗೆ ಚೆನ್ನಾಗಿ ತಿಳಿದಿರುವ ಹಾಗೆ, ಓಹಿಯೊದಲ್ಲಿರುವ ಕ್ರೈಸ್ತಧರ್ಮ ಶಿಕ್ಷಣಶಾಲೆಯ (ಸೆಮಿನರಿ) ಒಬ್ಬ ಪ್ರಮುಖ ದೈವಶಾಸ್ತ್ರ ಪಂಡಿತರು ಹಾಗು ಪ್ರಾಧ್ಯಾಪಕರು ಸತ್ಯವೇದಾದ್ಯಯನ ಪಾಠಮಾಲೆಯ (ಸ್ಟಡೀಸ್ ಇನ್ ದ ಸ್ಕ್ರಿಪ್ಚರ್ಸ್) ವಿಷಯವಾಗಿ ಅವಾಚ್ಯಭಾಷೆಯಲ್ಲಿ ವಿಮರ್ಶೆ ಮಾಡಿ ಪ್ರಕಟಿಸಿರುವರು. ಅದರಲ್ಲಿನ ಅವರ ಮುಖ್ಯವಾದ ಅಂಶವೆಂದರೆ ಸತ್ಯವೇದದಲ್ಲಿ ನಿರೂಪಿಸಿ ನಮಗೆ ನೀಡಿರುವ ಅಮೂಲ್ಯವೂ ಉತ್ಕೃಷ್ಟವೂ ಆದ ವಾಗ್ದಾನಗಳ ಆಧಾರದ ಮೇಲೆ ಕ್ರೈಸ್ತಸಭೆಗೆ ನೀಡಿರುವ ಉನ್ನತ (ಸ್ಥಾನದ) ಕರೆಯ ವಿಷಯವಾದ ನಿರೀಕ್ಷೆಯು ಒಂದು ಅಡಚಣೆಯಾದುದೆಂಬಂತೆ ಹಾಸ್ಯಾಸ್ಪದವಾಗಿ ಹೇಳಿರುವುದು. ಅಪೋಸ್ತಲನು ಪ್ರಕಟಿಸಿ ಹೇಳಿರುವಂತೆ ಇದರ ಉದ್ದೇಶವು "ನಾವು ದೈವಸ್ವಭಾವದಲ್ಲಿ ಪಾಲನ್ನು ಹೊಂದುವ ವರಾಗಬೇಕೆನ್ನುವ ಉದ್ದೇಶ..." – 2ನೇ ಪೇತ್ರ 1:4

"ಮಗನು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು" ಎಂಬ ಹೇಳಿಕೆಯು ಹಾಗಿರುವಂತೆಯೇ ಕುತೂಹಲನೂ ಆತ್ಮ ಪ್ರೇರಿತನೂ ಆದ ಇದೇ ಬೋಧಕನು ನುಡಿದಿರುವ ಇತರ ಮಾತುಗಳಿಂದ ಸಾಕ್ಷ್ಯಾಧಾರ ಹೊಂದದೆ ಹೋಗಿದ್ದಲ್ಲಿ ಇದು ತ್ರೈಯೇಕವನ್ನು ನಂಬುವವರ ಸಾಧಾರಣವಾದ ಆಭಿಪ್ರಾಯಕ್ಕೆ

ತದ್ವಿರುದ್ಧವಾಗಿರುತ್ತಿತ್ತು; ಅದೇನಂದರೆ ಮಗನೇ ತಂದೆಯಾಗಿರುವ ನೆಂಬದು. ಕ್ಯಾಟೆಕಿಸಮ್ ಎಂಬ ಅವರ ಪ್ರಶ್ನೋತ್ತರ ಗ್ರಂಥದಲ್ಲಿ ಹೇಳಿರುವ "ಬಲಾಧಿಕಾರದಲ್ಲಿಯೂ ಮಹಿಮೆಯಲ್ಲಿಯೂ ಸಮಾನರು" ಎಂಬ ಹೇಳಿಕೆಯು ಒಂದಕ್ಕೊಂದು ನೇರವಾಗಿ ತದ್ವಿರುದ್ಧವಾಗಿರುವುದು. ಹೀಗಿದ್ದರೂ ತಂದೆಯು ಮಗನ ಮೇಲೆ ಮಮತೆ (ಫಿಲಿಯೋ ಎಂಬ ಶಬ್ದವು ವಾತ್ಸಲ್ಯವೆಂದಾಗುತ್ತದೆ) ಇಡುತ್ತಾನೆ ಮತ್ತು ಈ ವಾತ್ಸಲ್ಯದ ಪರಿಣಾಮವಾಗಿ ಈತನ ಮೂಲಕವಾಗಿ ದೊಡ್ಡ ಅದ್ಭುತಕಾರ್ಯಗಳನ್ನು ಆಶ್ಚರ್ಯಗಳನ್ನು ತೋರಿಸುವನು, ತೋರಿಸುತ್ತಿರುವನು ಹಾಗೂ ಮುಂದೆಯೂ ತೋರಿಸುವನು. ನಮ್ಮ ಕರ್ತನು (ಮಕ್ಕಳೆಂಬ ಮನೆತನದವರಲ್ಲಿ) ಹಿರಿಯ ಸಹೋದರನಾಗಿ ವಾಗ್ದಾನ ಮಾಡಿರುವುದೆಂದರೆ ತಂದೆಯು ತನಗೆ ತಿಳಿಸಿರುವುದನ್ನೆಲ್ಲಾ ಪ್ರತಿಯಾಗಿ ತಾನು ನಮಗೂ ತಿಳಿಸಿಕೊಡುವನು. ಪ್ರಕಟನೆಯ ಗ್ರಂಥದಲ್ಲಿ ಇದನ್ನು ನಮ್ಮ ಗಮನಕ್ಕೆ ಪರಿಣಾಮಕಾರಿಯಾಗಿ ತರಲಾಗಿರುವುದು; ಈ ಹೇಳಿಕೆಯಲ್ಲಿ ವ್ಯಕ್ತವಾಗಿರುವುದೆಂದರೆ "ಯೇಸು ಕ್ರಿಸ್ತನ ಪ್ರಕಟನೆಯು. ಆತನು ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತೋರಿಸುವುದಕ್ಕಾಗಿ ದೇವರಿಂದ ಈ ಪ್ರಕಟನೆಯನ್ನು ಹೊಂದಿದನು; ಇದಲ್ಲದೆ ಆತನು ತನ್ನ ದೂತನನ್ನು ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು." – (ಯೋಹಾನ 15:15; ಪ್ರಕಟನೆ 1:1) ಮುಂದೆ ಒಂದು ನಿಗಧಿತ ಕಾಲದಲ್ಲಿ ತನ್ನ ಮೊದಲನೇ ಬರುವಿಕೆಯಲ್ಲಿ ತಾನು ಮಾಡಿದ ಯಾವ ಕಾರ್ಯಗಳಿಗಿಂತಲೂ ದೊಡ್ಡದಾದ ಕಾರ್ಯದಲ್ಲಿ ನಾವು ಸಹ ಆತನೊಡನೆ ಪಾಲನ್ನು ಹೊಂದುವುವೆವೆಂಬುದನ್ನು ನಮ್ಮ ಮದಲಿಂಗನೂ ನಮ್ಮ ನಾಯಕನೂ ಆದ ನಮ್ಮ ಹಿರಿಯ ಸಹೋದರನು ನಮಗೆ ಹೆಚ್ಚಿನ ವಾಗ್ದಾನವನ್ನು ಮಾಡಿದ್ದಾನೆ. – ಯೋಹಾನ 14:12

ಕರ್ತನು ಹೇಳಿರುವ ದೊಡ್ಡ ಕಾರ್ಯಗಳಲ್ಲಿ ಸತ್ತವರನ್ನು ಬದುಕಿಸುವುದೂ ತಿಳಿಸಲಾಗಿರುವುದು. ಆತನು ಹೇಳಿಕೊಂಡಿ–ರುವಂತೆ, ತಂದೆಯು ಸತ್ತವರನ್ನು ಎಬ್ಬಿಸಿ ಬದುಕಿಸಲು ಅಧಿಕಾರವುಳ್ಳವನಾಗಿರುವಂತೆ ಮಗನಿಗೂ ಈ ಅಧಿಕಾರವನ್ನು ಅನುಗ್ರಹಿಸಿರುವನು. ಇಲ್ಲವೇ ಈ ಹೇಳಿಕೆಯಲ್ಲಿ ನಮ್ಮ ಕರ್ತನು ಲಾಜರನನ್ನು ನಾಯಿನ್ ಹಳ್ಳಿಯ ವಿಧವೆಯ ಮಗನನ್ನು ಹಾಗೂ ಯಾಯೀರನ ಮಗಳನ್ನು ಎಬ್ಬಿಸಿದುದು ಉಲ್ಲೇಖವಾಗಿರು–ವುದೆಂದು ನಾವು ಕಲ್ಪಿಸಿಕೊಳ್ಳಬೇಕಿಲ್ಲ. ಅತಿ ಹೆಚ್ಚೆಂದರೆ ಇವರುಗಳನ್ನು ಜೀವದಿಂದ ಎಬ್ಬಿಸಿರುವುದು ಪುನರುತ್ಥಾನ ಎಂಬುದರ ಪೂರ್ಣವಾದ ಅರ್ಥದಲ್ಲಿ ಇರುವುದಿಲ್ಲ. ಈ ವ್ಯಕ್ತಿಗಳು ಮರಣದಿಂದ ಪರಿಪೂರ್ಣವಾದ ಜೀವಹೊಂದಲು ಪೂರ್ಣ ರೀತಿಯಲ್ಲಿ ಎಬ್ಬಿಸಲ್ಪಡಲಿಲ್ಲ. ಬದಲಾಗಿ ನಾವು ನಿಜಕ್ಕೂ ಕಲ್ಪಿಸಿಕೊಳ್ಳಬೇಕಿರುವುದೇನೆಂದರೆ, ಮುಂದೆ ಸಭೆಯು ಪ್ರಭಾವ ಮಾನ ನಿರ್ಲಯತ್ವಗಳನ್ನು ಹೊಂದಸಲುವಾಗಿ ಭವಿಷ್ಯತ್ತಿನಲ್ಲಿ ಆಗುವ ಪುನರುತ್ಥಾನವನ್ನು ಮತ್ತು ಆನಂತರದಲ್ಲಿ ಸಾವಿರ ವರುಷದ ಕಾಲದಲ್ಲಿ (ನ್ಯಾಯತೀರ್ಪಿಗೆ ಒಳಗಾಗುವ) ಲೋಕದವರಿಗೆ ಆಗುವ ಪುನರುತ್ಥಾನವನ್ನು ನಮ್ಮ ಕರ್ತನು ಮುಂದಾಗಿ ನೋಡಿ ಹೇಳುತ್ತಿದ್ದನೆಂಬುದು.

ಈ ಅಂಶವನ್ನು 22ನೇ ವಚನದಲ್ಲಿ ರುಜುವಾತು ಪಡಿಸಲಾಗಿದೆ; ಅದೇನೆಂದರೆ ನ್ಯಾಯತೀರ್ಪಿನ ಅಧಿಕಾರವನ್ನೆಲ್ಲಾ ಮಗನಿಗೆ ವರ್ಗಾಯಿಸಿರುವುದು. ಪುನರುತ್ಥಾನದ ನಂತರ ದೊರಕುವ ಜೀವವು ನ್ಯಾಯವಿಚಾರಣೆಯನ್ನು ಯಶಸ್ಸಿನಿಂದ ದಾಟಿಬಂದವರಿಗೆ ಪ್ರತಿಫಲವಾಗಿ ದೊರಕುವಂಥದ್ದು. ಮೊದಲನೇ ಪುನರುತ್ಥಾನವು ಈ ಸುವಾರ್ತಾಯುಗದಲ್ಲಿ ಉನ್ನತ (ಸ್ಥಾನದ) ಕರೆಯ ಹಾಗೂ ಪ್ರಭಾವ ಮಾನ ನಿರ್ಲಯತ್ವಗಳನ್ನು ದೊರಕಿಸುವ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರಿಗೆ ಇರುವ ಷರತ್ತಿನ ಅನುಸಾರ ಈಗ ನಡೆಯುತ್ತಿರುವ ನ್ಯಾಯವಿಚಾರಣೆ ಯಲ್ಲಿ "ಜಯಶಾಲಿಗಳಾದವರಿಗೆ" ದೊರಕುವ ಪ್ರತಿಫಲ. ಸಭೆಯು ಈ ಸುವಾರ್ತಾಯುಗದಲ್ಲಿ ನೀಡಲಾಗಿರುವ ಉನ್ನತ (ಸ್ಥಾನದ) ಕರೆಯ ಸಂಬಂಧವಾದ ವಿಧಿಗಳ ಅನುಸಾರವಾದ ನ್ಯಾಯವಿಚಾರಣೆಯೆಂಬ ಪರೀಕ್ಷಾಸಮಯದಲ್ಲಿದೆ. ಕರ್ತನು ತನ್ನ ಯಜ್ಞದ ಮೂಲಕ ವಿಮೋಚಿಸಿರುವ ಲೋಕದವರಿಗೂ ಸಹ ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ನ್ಯಾಯವಿಚಾರಣೆ ಮಾಡುವನು. ಲೋಕದವರಿಗಾಗುವ ನ್ಯಾಯವಿಚಾರಣೆಯಲ್ಲಿ ತನ್ನೊಡನೆ ಸಹಕಾರಿಗಳನ್ನಾಗಿ ಮಾಡಿಕೊಳ್ಳುವ ವಾಗ್ದಾನವನ್ನು ಈಗ ನ್ಯಾಯವಿಚಾರಣೆಗೆ ಒಳಗಾಗಿರುವ ಮದಲಗಿತ್ತಿ ಎಂಬ ವರ್ಗದವರಿಗೆ ಆತನು ನೀಡಿದ್ದಾನೆ. (1 ಕೊರಿಂಥ 6:2) ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಮರಣದಿಂದ ಎಬ್ಬಿಸಲ್ಪಟ್ಟು ನ್ಯಾಯವಿಚಾರಣೆಗೆ ಒಳಗಾಗುವ ಲೋಕದವರು ನೀತಿನಿಯಮಾ–ನುಸಾರ ಗುಣಗಳನ್ನು ತಮ್ಮಲ್ಲಿ ವೃದ್ಧಿಪಡಿಸಿ ಕೊಂಡವರಾಗಿ ನ್ಯಾಯಾಧಿಪತಿಯಿಂದ ಪೂರ್ಣವಾಗಿ ಅಂಗೀಕರಿಸಲ್ಪಟ್ಟಾಗ ಪುನರುತ್ಥಾನದ ಪೂರ್ಣ ಹಂತವನ್ನು ತಲುಪಿ ಆ ಸಾವಿರ ವರುಷ ಕಾಲದ ಅಂತ್ಯದಲ್ಲಿ ತಮ್ಮ ವಿಚಾರಣೆಯ ದಿನವು ಮುಗಿಯುವಾಗ ಪರಿಪೂರ್ಣವಾಗಿಯೂ ನಿರಂತರವಾಗಿಯೂ ಇರುವ ಜೀವದೊಳಗೆ ಸೇರುವರು. ಉಳಿದವರು ಎರಡನೆಯ ಮರಣದಲ್ಲಿ (ಜೀವದಿಂದ) ತೆಗೆದುಹಾಕಲ್ಪಡುವರು.

ಲೋಕಕ್ಕಾಗುವ ನ್ಯಾಯವಿಚಾರಣೆಯು ನಮ್ಮ ಕರ್ತನ ಮೊದಲನೇ ಬರುವಿಕೆಯ ಸಮಯದಲ್ಲಿ ಪ್ರಾರಂಭವಾಗಲಿಲ್ಲ –ವೆಂಬುದಕ್ಕೆ ಆತನ ಈ ಮಾತುಗಳೇ ನಮಗೆ ಸಾಕ್ಷಿಯಾಗಿವೆ: "ಲೋಕಕ್ಕೆ ತೀರ್ಪುಮಾಡುವುದಕ್ಕಾಗಿ ನಾನು ಬಂದಿಲ್ಲ;" (ಯೋಹಾನ 12:47) ಹಾಗೂ ಪುನಃ ಆತನು ಪ್ರಕಟಮಾಡಿ ಹೇಳಿರುವುದು: "...ಅದು ಯಾವದೆಂದರೆ, ನಾನು ಆಡಿದ ಮಾತುಗಳು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪು ಮಾಡುವುದು." ಅಂದರೆ, ಏಳು ಸಾವಿರ–ವರುಷ–ದಿನಗಳ ಕಡೇ (ಸಾವಿರ ವರುಷದ) ದಿನ. ಇದಕ್ಕೆ ಪೂರ್ಣವಾಗಿ ಹೊಂದಿಸಿ–ಕೊಂಡೇ ಅಪೊಲಸ್ತಲನು ಪ್ರಕಟಿಸಿ ಹೇಳಿರುವುದು, "...ಆತನು ನಿಷ್ಕರ್ಶೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವುದಕ್ಕೆ ಒಂದು ದಿವಸವನ್ನು ಗೊತ್ತುಮಾಡಿದ್ದಾನೆ." – ಯೋಹಾನ 12:48; ಅ,ಕೃ. 17:31; 1 ಕೊರಿಂಥ. 6:2.

ಇದರ ಅನುಸಾರವಾಗಿಯೇ ವಚನ 17 ಹಾಗೂ ಇಬ್ರೀಯ 4:4,10ರಲ್ಲಿನ ಹೇಳಿಕೆಗಳಿರುವುದೂ ಸಹ. ಮನುಷ್ಯನು

ನಿಬಂಧನೆಯನ್ನು ಮೀರಿದವನಾದಾಗ ದೇವರು ತನ್ನ ಸೃಷ್ಟಿ ಕಾರ್ಯವನ್ನು ಮುಗಿಸಿ, ಆ ಕಾರ್ಯದಲ್ಲಿ ಮುಂದುವರಿಯು–ವುದನ್ನು ಬಿಟ್ಟು ವಿಶ್ರಮಿಸಿಕೊಂಡನು. ಆತನು ಅದನ್ನು ಕೈಬಿಟ್ಟು ಅದರ (ಸೃಷ್ಟಿ) ಮೇಲೆ ಶಾಪವನ್ನು ಬರಮಾಡಿದನು. ಅಂದರೆ ತನ್ನ ಕೈಗೆಲಸಗಳಲ್ಲಿ ಮುಖ್ಯವಾದುದರ ಮೇಲೆ ಮರಣ ದಂಡನೆಯನ್ನು ವಿಧಿಸಿದನು. ಆದರೆ ಆತನು ಆ ಸಂಗತಿಯನ್ನು ಕೈಬಿಟ್ಟರೂ ಈ ಮಾತಿನ ಒಂದು ಅರ್ಥದಲ್ಲಿ ಹೇಳುವುದಾದರೆ ಆತನು ಅದರಲ್ಲಿನ ತನ್ನ ಉದ್ದೇಶವನ್ನು ಬಿಟ್ಟುಕೊಡಲಿಲ್ಲ. ಆದರೆ ಆತನು ಒಂದು ಸ್ತ್ರೀಸಂತತಿಯನ್ನು ಎಬ್ಬಿಸಿ ಅದು ಕಡೆಯದಾಗಿ ಆ ಕೆಡುಕನನ್ನು (ಸೈತಾನನ ತಲೆಯನ್ನು) ಜಜ್ಜಿಹಾಕಿ ಮಾನವ ಕುಲವನ್ನು ಆತನ (ಕೆಡುಕನ) ಅಧಿಕಾರದಿಂದ ಬಿಡಿಸುವುದನ್ನು ಉದ್ದೇಶಿಸಿ ಅದನ್ನು ಮುಂದಾಗಿ ತಿಳಿಸಿರುವನು. ಇದರಲ್ಲಿ ಮರಣದಂಡನೆಯು ಹಿಂದೆಗೆಯಲ್ಪಟ್ಟು ಪುನರುತ್ಥಾನವಾಗುವುದು ಅಡಕವಾಗಿರುವುದು. ನಮ್ಮ ಕರ್ತನಾದ ಯೇಸುವು ವ್ಯಕ್ತಿಯಾಗಿ ಆ ಸ್ತ್ರೀಸಂತತಿಯಾಗಿದ್ದನು. ಆದರೆ ನಾವು ಈಗಾಗಲೇ ನೋಡಿರುವಂತೆ ದೇವರ ಯೋಜನೆಯುಲ್ಲಿ "ಆತನ ದೇಹವಾಗಿರುವ" ಸಭೆಯೂ ಸಹ ಇದರಲ್ಲಿ ಸೇರಿರುವುದು. ಏದೇನಿನಲ್ಲಿ ಮಾಡಿದ ವಾಗ್ದಾನದಲ್ಲಿ "ಸರ್ಪವು ಹಿಮ್ಮಡಿಯನ್ನು ಕಚ್ಚುವುದು" ಎಂಬುದನ್ನು ಸೂಚಿಸುವ ಮೂಲಕ ಶಿರಸ್ಸು ಹಾಗೂ ದೇಹದಿಂದ ಕೂಡಿರುವ ಕ್ರಿಸ್ತನೆಂಬವನ ಸಂಕಟಗಳನ್ನು ತಿಳಿಸಲಾಗಿರುವುದು. ಇದು ಸುವಾರ್ತಾಯುಗದ ಪರ್ಯಂತರ ಮುಂದುವರೆಯುತ್ತಿರುವುದು; ದುಷ್ಟಶಕ್ತಿಗಳಿಂದ ಯೇಸು ಶಿಲುಬೆಗೆ ಹಾಕಲ್ಪಟ್ಟವನಾಗಿ ಈ ಮೂಲಕವಾಗಿ ತನ್ನನ್ನು ತಾನೇ ಪಾಪಪರಿಹಾರ ಯಜ್ಞವನ್ನಾಗಿ ಅರ್ಪಿಸಿಕೊಂಡನು ಮತ್ತು ಆತನ ದೇಹದ ಅಂಗಗಳಾಗಿರುವವರೂ ಆತನೊಡನೆ ಶ್ರಮಸಂಕಟ–ಗಳನ್ನು ಅನುಭವಿಸುತ್ತಿರುವರು, "ಕ್ರಿಸ್ತನ ಸಂಕಟಗಳೊಳಗೆ ಉಳಿದುದ್ದನ್ನು... ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ." – ಕೊಲೊಸ್ಸೆ 1:24

ಕ್ರಿಸ್ತನೆಂಬ ಆ ಮಹಾ ಸಂತತಿಯಾದಾತನು ಪೂರ್ಣವಾಗಿ ಮಹಿಮೆಯನ್ನು ಹೊಂದುವ ಹಾಗೂ ಆತನ ದೇಹದ ಅಂಗಗಳಾಗಿರುವವರೆಲ್ಲರೂ ಆ ಶಿರಸ್ಸಾಗಿರುವಾತನ ಮಹಿಮೆಯಲ್ಲಿ ಪಾಲನ್ನು ಹೊಂದುವ ಸಮಯವು ಬೇಗನೆ ಬರುವುದು. ಮತ್ತು ಆನಂತರ ಅಪೋಸ್ತಲನು ಪ್ರಕಟಮಾಡಿ ಹೇಳಿರುವಂತೆ: "ಶಾಂತಿದಾಯಕನಾದ ದೇವರು ಶೀಘ್ರದಲ್ಲೇ ಸೈತಾನನ್ನು ನಿಮ್ಮ ಕಾಲುಗಳ ಕೆಳಗೆ ಹಾಕಿ ತುಳಿಸಿಬಿಡುವನು." (ರೋಮಾ. 16:20) ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಸೈತಾನನು ಬಂಧಿತನಾಗಿ, ವಿಮೋಚಿಸಲ್ಪಟ್ಟ ಮಾನವಕುಲವು ನ್ಯಾಯತೀರ್ವಿಕೆಗೆ ಒಳಗಾಗುವಾಗ (ಶಿರಸ್ಸು ಹಾಗು ದೇಹದಿಂದ ಕೂಡಿರುವ) ಈ ದಿವ್ಯ ವಿಮೋಚಕನನ್ನೇ ತಂದೆಯು ಅದರ ನ್ಯಾಯಾಧಿಪತಿಯನ್ನಾಗಿ ನೇಮಿಸಿದ್ದಾನೆ. ಇದರ ಶಿರಸ್ಸು ಹಾಗೂ ಒಡೆಯನೂ ಆಗಿರುವಾತನು ತನ್ನ ಸ್ವಂತ ರಕ್ತದಿಂದ ಲೋಕವನ್ನು ವಿಮೋಚಿಸಿರುವನು. ಸತ್ಯದ ಪರಿಜ್ಞಾನದ ಮೂಲಕವಾಗಿ ನೀತಿಯ ಶಿಕ್ಷಣ ಪಡೆದು ತಿದ್ದುಪಾಟು ಹೊಂದಲು ಇಚ್ಛಿಸುವವರೆಲ್ಲರನ್ನು ಮರಳಿ ತನ್ನ ವಶಕ್ಕೆ ಪಡೆದು ಮಿಕ್ಕ ಉಳಿದವರನ್ನು ಜನರೊಳಗಿಂದ ನಾಶಮಾಡುವನು. (ಅ.ಕೃ. 3:23) ಅಪೋಸ್ತಲನು ಬರವಸೆ ನೀಡಿ ಹೇಳಿರುವಂತೆ, ಆತನು ಹೀಗೆ ವಿರೋಧಿಸುವ ಎಲ್ಲಾ ಅಧಿಕಾರವನ್ನು ದೊರೆತನವನ್ನು ಬಲವನ್ನು ತೆಗೆದು ಹಾಕಿ ರಾಜ್ಯವನ್ನು ತಂದೆಯಾದ ದೇವರಿಗೆ ಒಪ್ಪಿಸಿಕೊಡುವನು. ಹೀಗೆ ತಂದೆಯು ಮನುಷ್ಯನು (ಅವಿಧೇಯನಾಗಿ) ಬಿದ್ದುಹೋಗುವವರೆಗೂ ಕಾರ್ಯವನ್ನು ನಿರ್ವಹಿಸುತ್ತಿದ್ದನು ಮತ್ತು ಆತಂತರ ಮನುಷ್ಯನನ್ನು ಮರುಸಂಧಾನಕ್ಕೆ ತರುವ ಕಾರ್ಯವನ್ನು ಅಲ್ಲದೆ ಮಾನವಕುಲಕ್ಕೆ ನ್ಯಾಯತೀರ್ವಿಕೆ ಮಾಡುವುದನ್ನೂ ಸಹ ಮಗನಿಗೆ ಒಪ್ಪಿಸಿರುವನು. ತನ್ನ ಪ್ರತಿನಿಧಿಯಾದ ಮಗನ ಮೂಲಕವಾಗಿ ಎಲ್ಲವನ್ನು ಹೊಸದನ್ನಾಗಿ ಮಾಡಿದ ನಂತರ ಆತನು (ತಂದೆಯು) ಮನುಕುಲವನ್ನು ಪುನಃ ತನ್ನ ದೈವಾಧಿಕಾರವ್ಯಾಪ್ತಿಗೆ ಅಂಗೀಕರಿಸಿಕೊಳ್ಳುವನು. – 1 ಕೊರಿಂಥ 15:24; ಪ್ರಕಟನೆ 21:5

ಅದುದರಿಂದ ಕೆಲವರು ಹೇಳುವಂತೆ, "ತಂದೆಯ ಹಾಗೆ ಯೇಸುವು ನಮ್ಮ ನ್ಯಾಯಾಧಿಪತಿ" ಎಂದು ಹೇಳುವುದು ಒಂದು ದೊಡ್ಡ ತಪ್ಪು. ಏಕೆಂದರೆ ತಂದೆಯು ಯಾರಿಗೂ ತೀರ್ಪು ಮಾಡುವುದೂ ಇಲ್ಲ "ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ" ಎಂಬ ಸ್ವತಃ ನಮ್ಮ ಕರ್ತನ ಮಾತುಗಳೇ ನಮಗೆ ಭರವಸೆಯಾಗಿ ನೀಡಲ್ಪಟ್ಟಿದೆ. ಈ ಸುವಾರ್ತಾಯುಗದಲ್ಲಿ ಸಭೆಯ ನ್ಯಾಯತೀರ್ವಿಕೆಯು ಮುಂದುವರೆಯುತ್ತಿರುವುದು ವಚನ 24ರಲ್ಲಿ ಉಲ್ಲೇಖವಾಗಿದೆ. ಯಾರು ಈಗ (ಸತ್ಯ ವಾಕ್ಯವನ್ನು) ಕೇಳಿ ಅದನ್ನು ನಂಬಿ ತಮ್ಮ ಸಾಮರ್ಥ್ಯಾನುಸಾರ ಅದಕ್ಕೆ ವಿಧೇಯರಾಗುವರೋ ಅವರು ಹೀಗೆ ಈಗ ನಡೆಯುತ್ತಿರುವ ನ್ಯಾಯವಿಚಾರಣೆಯಲ್ಲಿ ವಿಶ್ವಾಸಪೂರ್ಣರಾಗಿ ತೇರ್ಗಡೆ ಹೊಂದಿದುದರ ಫಲವಾಗಿ ನಿತ್ಯಜೀವ ಹೊಂದುವ ಆಶ್ವಾಸನೆಯನ್ನು ಪಡೆಯುವರು. ಅವರಿಗೆ ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಲೋಕದವರಿಗೆ ಸಾಧಾರಣವಾಗಿರುವ ನ್ಯಾಯ ತೀರ್ವಿಕೆಗೆ ಒಳಗಾಗುವ ಅಗತ್ಯವಿರುವುದಿಲ್ಲ ಎಂಬ ಬರವಸೆ ನೀಡಲಾಗಿರುವುದು; ಯಾಕೆಂದರೆ ಈ (ಸುವಾರ್ತಾಯುಗದ) ಕಾಲದಲ್ಲಿ ನಡೆಯುತ್ತಿರುವ ನ್ಯಾಯತೀರ್ವಿಕೆಯ ಫಲವಾಗಿ ಅವರು ಮರಣದಿಂದ ಪಾರಾಗಿ ಜೀವಕ್ಕೆ ಸೇರಿರುವರು. ಈ ವಚನದಲ್ಲಿರುವ "ಖಂಡನೆ" ಎಂಬ ಶಬ್ದವು ನ್ಯಾಯವಿಚಾರಣೆ ಎಂಬುದನ್ನು ಸೂಚಿಸುವುದಾಗಿದ್ದು, ಸತ್ಯವೇದದ ಪುನರ್ವಿ ಮರ್ಶಿತ ಭಾಷಾಂತರದಲ್ಲಿ (ರಿವೈಸ್ಡ್ ವರ್ಷನ್) ಇದನ್ನು ಹೀಗೆಯೇ ಅನುವಾದಿಸಲಾಗಿದೆ. – 1 ಕೊರಿಂಥ 11:32 ಹೋಲಿಸಿ ನೋಡಿ.

ವಚನ 25ರಲ್ಲಿ ಸಾವಿರ ವರುಷದ ಸಮಯದಲ್ಲಿ ಮಾನವ ಕುಲದವರೆಲ್ಲರಿಗಿರುವ ಸಾಧಾರಣವಾದ ನ್ಯಾಯವಿಚಾರಣೆಯ ಬಗ್ಗೆ ವಿಶೇಶವಾಗಿ ಉಲ್ಲೇಖವಾಗಿರುವುದು. ಆಗ ಸತ್ತವರೆಲ್ಲರೂ ದೇವಕುಮಾರನ ಧ್ವನಿಯನ್ನು ಕೇಳಿ ಸತ್ಯದ ಪರಿಜ್ಞಾನವನ್ನು ಪಡೆಯುವರು; ಹಾಗೂ ಅದನ್ನು ಕೇಳಿದವರು (ಆ ಪರಿಜ್ಞಾನಕ್ಕೆ ವಿಧೇಯರಾದವರು) ಬದುಕುವರು; ಅವರನ್ನು ಸಮಾಧಿಯಿಂದ ಮಾತ್ರವಲ್ಲದೆ ಪಾಪದ ಮೂಲಕವಾಗಿ ಉಂಟಾದ ಎಲ್ಲಾ ವಿಧವಾದ ಮಾನಸಿಕ ನೈತಿಕ ಹಾಗೂ ಶಾರೀರಿಕ ದೋಷ ಬಲಹೀನತೆಗಳಿಂದ ಬಿಡಿಸಿ ರಕ್ಷಿಸಿ ಪರಿಪೂರ್ಣತೆಯುಳ್ಳ ಜೀವ ಹೊಂದುವುದಕ್ಕಾಗಿ ಎಬ್ಬಿಸಲಾಗುವುದು. ಈ ನ್ಯಾಯ–

ವಿಚಾರಣೆಯ ಕಾರ್ಯವು ಈ ಸುವಾರ್ತಾಯುಗದಲ್ಲಿ ಚಿಕ್ಕ ಹಿಂಡಿನವರಲ್ಲಿ ಆರಂಭವಾಗಿರುವುದೆಂಬ ಅಂಶವು ಸತ್ತವರು ಮನುಷ್ಯಕುಮಾರನ ಧ್ವನಿಯನ್ನು ಕೇಳುವ ಕಾಲವು ಈಗಾಗಲೇ ಪ್ರಾರಂಭವಾಗಿರುವುದು; ಅಂದರೆ, ಈಗ ನಡೆಯುತ್ತಿರುವುದು ಎಂಬ ಹೇಳಿಕೆಯಲ್ಲಿ ಸೂಚಿತವಾಗಿರುವುದು. ದೇವರ ದೃಷ್ಟಿಯಲ್ಲಿ ಲೋಕವೆಲ್ಲವೂ ಸತ್ತದ್ದಾಗಿರುವುದು ಎಂದು ಹೇಳಲ್ಪಟ್ಟಿರುವುದು; ಏಕೆಂದರೆ ಹತ್ತರಲ್ಲಿ ಒಂಭತ್ತು ಭಾಗದವರು ಈಗಾಗಲೇ ಪೂರ್ಣವಾಗಿ ಮರಣದಂಡನೆಯ ತೀರ್ಪಿನಲ್ಲಿರುವರು. ಈ ಅಭಿಪ್ರಾಯದಿಂದಲೇ ನಮ್ಮ ಕರ್ತನು, "ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ" ಎಂದು ಒಬ್ಬನಿಗೆ ಹೇಳಿದ್ದನು.

ತಾನು ಮನುಷ್ಯನಾಗಿ ಈ ಒಂದು ವಿಶೇಷವಾದ ಕಾರ್ಯವನ್ನು ಮಾಡಿರುವುದನ್ನು ತನ್ನ ಮಾತನ್ನು ಕೇಳುತ್ತಿರುವವರಿಗೆ ಮನವರಿಕೆಯಾಗಲು ಸಾಧ್ಯವಾಗಿಲ್ಲವೆಂಬು – ದನ್ನು ನಮ್ಮ ಕರ್ತನು ಗ್ರಹಿಸಿಕೊಂಡಿದ್ದನು. ಆದುದರಿಂದ ಆತನು ಇದನ್ನು ವಿವರಿಸಲು: ತಂದೆಯು ಹೇಗೆ ಸ್ವತಃ (ಅಮರತ್ವವುಳ್ಳ) ಜೀವವುಳ್ಳವನಾಗಿರುವನೋ ಹಾಗೆಯೇ ಮಗನೂ ಸಹ ಸ್ವತಃ (ಅಮರತ್ವವುಳ್ಳ) ಜೀವವುಳ್ಳವನಾಗಿರುವಂತೆ (ವಾಗ್ದಾನವನ್ನು) ಮಾಡಿರುವನು ಹಾಗೂ ಇದರ ಜೊತೆಯಲ್ಲಿ ಮನುಷ್ಯಕುಮಾರನು, ಪ್ರವಾದಿಗಳು ಪ್ರಕಟಿಸಿರುವಂತೆ, ದೈವ ಚಿತ್ತವಾಗಿರುವ ನ್ಯಾಯತೀರ್ವಿಕೆಯ ಕಾರ್ಯವನ್ನು ಸಹ ನಿರ್ವಹಿಸಬೇಕೆಂದು ಆಜ್ಞಾಪಿಸಿರುವನು (ಅಧಿಕಾರ ನೀಡಿರುವನು) ಎಂದು ಹೇಳಿರುವನು. ತಂದೆಯಿಂದ ಮಗನಿಗೆ ಈ ಶ್ರೇಷ್ಠವಾದ ಗೌರವ ನೀಡಲಾಗಿರುವ ಕಾರಣದಿಂದ "ಎಲ್ಲರೂ ತನಗೆ ಮಾನಕೊಡುವ ಪ್ರಕಾರ ಮಗನಿಗೂ ಮಾನಕೊಡಬೇಕೆಂದು ತಂದೆಯು ಇಚ್ಛೈಸುತ್ತಾನೆ." ಎಂದು (ರಿವೈಸ್ಡ್ ವರ್ಷನ್ನಿನ ವಚನ 23ರಲ್ಲಿ) ನಮಗೆ ತಿಳಿಸಲಾಗಿದೆ. ಈ ಹೇಳಿಕೆಯನ್ನು ವಿವರಿಸಿ ತೋರಿಸಲು: ಮಗನು ತಂದೆಯ ಪ್ರತಿನಿಧಿಯಾಗಿ ಈ ವಿಶೇಷ ಕಾರ್ಯವನ್ನು ನಿರ್ವಹಿಸುವ ಗೌರವಸ್ಥಾನಕ್ಕೆ ನೇಮಿಸಲ್ಪಟ್ಟಿರುವುದನ್ನು ಹೀಗೆ ಹೇಳಲಾಗಿದೆ, "ಮಗನಿಗೆ ಮಾನಕೊಡದವನು ಅವನನ್ನು ಕಳುಹಿಸಿದ ತಂದೆಗೂ ಮಾನಕೊಡದವನಾಗಿದ್ದಾನೆ."

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31 | ಯೆರೂಸಲೇಮಿನಿಂದ ಹಿಂದಿರುಗಿ ಬಂದಾಗ(?) | ಶಿಷ್ಯರು ಸಬ್ಬತ್ ದಿನದಲ್ಲಿ ಗೋದಿಕಾಳಿನ ತೆನೆಯನ್ನು ಮುರಿದು ಕೊಳ್ಳುತ್ತಿದ್ದುದು | 12:1–8 | 2:23–28 | 6:1–5 | –– |
| | ಗಲಿಲಾಯ; ಗಲಿಲಾಯ ಸಮುದ್ರ | ಕೈಬತ್ತಿದವನನ್ನು ಗುಣಪಡಿಸಿದುದು; ಸಮುದ್ರದಡದ ಬಳಿಗೆ ನಿರ್ಗಮಿಸಿದುದು; ಸ್ವಸ್ಥಪಡಿಸಿದುದು | 12:9–21 | 3:1–12 | 6:6–11 | –– |

## ಮತ್ತಾಯ 12:1–21

ಆ ಕಾಲದಲ್ಲಿ ಯೇಸು ಸಬ್ಬತ್ ದಿನದಲ್ಲಿ ಪೈರಿನ ಹೊಲಗಳನ್ನು ಹಾದುಹೋಗುತ್ತಿರುವಾಗ ಆತನ ಶಿಷ್ಯರು ಹಸಿದು ತೆನೆಗಳನ್ನು ಮುರುಕೊಂಡು ತಿನ್ನುತ್ತಿದ್ದರು. ಫರಿಸಾಯರು ಅದನ್ನು ಕಂಡು––ನೋಡು, ನಿನ್ನ ಶಿಷ್ಯರು ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವನ್ನು ಮಾಡುತ್ತಾರೆ ಎಂದು ಆತನಿಗೆ ಹೇಳಿದರು. ಆತನು ಅವರಿಗೆ–ದಾವೀದನು ತಾನೂ ತನ್ನ ಸಂಗಡ ಇದ್ದವರೂ ಹಸಿದಾಗ ಏನು ಮಾಡಿದನೆಂಬದನ್ನು ನೀವು ಓದಲಿಲ್ಲವೋ. ಅವನು ದೇವರ ಮಂದಿರದೊಳಗೆ ಹೋಗಿ ಯಾಜಕರೂ ಮಾತ್ರವೇ ಹೊರತು ತಾನಾಗಲಿ ತನ್ನ ಸಂಗಡ ಇದ್ದವರಾಗಲಿ ತಿನ್ನಬಾರದಾಗಿದ್ದ ನೈವೇದ್ಯದ ರೊಟ್ಟಿಗಳನ್ನು ತಿಂದನಲ್ಲವೇ. ಇದಲ್ಲದೆ ಸಬ್ಬತ್ ದಿನದಲ್ಲಿ ಯಾಜಕರು ದೇವಾಲಯದಲ್ಲಿ ಸಬ್ಬತ್ ದಿನವನ್ನು ಮಿಕ್ಕಾದ ದಿನಗಳಂತೆ ಮಾಡಿದಾಗ್ಯೂ ಅವರು ತಪ್ಪಿಗೆ ಗುರಿಯಾಗುವುದಿಲ್ಲ. ಇದನ್ನು ನೀವು ಧರ್ಮಶಾಸ್ತ್ರದಲ್ಲಿ ಓದಲಿಲ್ಲವೋ? ಆದರೆ ಇಲ್ಲಿ ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆಂದು ನಿಮಗೆ ಹೇಳುತ್ತೇನೆ. ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬದರ ಅರ್ಥವನ್ನು ನೀವು ತಿಳಿದಿದ್ದರೆ ನಿರಪರಾಧಿಗಳನ್ನು ಅಪರಾಧಿಗಳೆಂದು ತೀರ್ಪುಮಾಡುತ್ತಿದ್ದಿಲ್ಲ. ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ ಎಂದು ಹೇಳಿದನು. ಆತನು ಅಲ್ಲಿಂದ ಹೊರಟು ಸಭಾಮಂದಿರಕ್ಕೆ ಹೋದಾಗ ಅಲ್ಲಿ ಕೈಬತ್ತಿದವನೊಬ್ಬನಿದ್ದನು. ಆಗ ಅವರು ಅತನ ಮೇಲೆ ತಪ್ಪುಹೊರಿಸಬೇಕೆಂದು ಆತನನ್ನು––ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವದು ಸರಿಯೋ ಎಂದು ಕೇಳಿದರು. ಅದಕ್ಕಾತನು–– ನಿಮ್ಮಲ್ಲಿ ಯಾರಿಗಾದರೂ ಒಂದೇ ಒಂದು ಕುರಿ ಇದ್ದು ಅದು ಸಬ್ಬತ್ ದಿನದಲ್ಲಿ ಕುಣಿಯೊಳಗೆ ಬಿದ್ದರೆ ಅವನು ಅದನ್ನು ಹಿಡಿದು ಮೇಲಕ್ಕೆ ತೆಗೆಯದೆ ಇರುವನೇ? ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚು. ಆದಕಾರಣ ಸಬ್ಬತ್ ದಿನದಲ್ಲಿ ಒಳ್ಳೇ ಕೆಲಸ ಮಾಡುವುದು ತಕ್ಕದ್ದೇ ಸರಿ ಎಂದು ಉತ್ತರಕೊಟ್ಟು ಆ ಮನುಷ್ಯನಿಗೆ––ನಿನ್ನ ಕೈಚಾಚು ಎಂದು ಹೇಳಿದನು; ಅವನು ಚಾಚಿದನು. ಅದು ಸಂಪೂರ್ಣ ವಾಸಿಯಾಗಿ ಮತ್ತೊಂದರ ಹಾಗಾಯಿತು. ಆದರೆ ಫರಿಸಾಯರು ಹೊರಕ್ಕೆ ಹೋಗಿ ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು. ಯೇಸು ಅದನ್ನು ತಿಳಿದು ಅಲ್ಲಿಂದ ಹೊರಟು ಹೋದನು. ಆನೇಕರು ಆತನ ಹಿಂದೆ ಹೋದರು. ಆತನು ಅವರೆಲ್ಲರನ್ನು ಸ್ವಸ್ಥಮಾಡಿ ತಾನು

ಇಂಥವನೆಂಬದಾಗಿ ಯಾರಿಗೂ ಪ್ರಕಟಿಸಬಾರದೆಂದು ಅವರಿಗೆ ಖಂಡಿತವಾಗಿ ಹೇಳಿದನು. ಹೀಗೆ ಯೆಶಾಯನೆಂಬ ಪ್ರವಾದಿಯ ಮುಖಾಂತರ ಹೇಳಿಸಿರುವ ಮಾತು ನೆರವೇರಿತು; ಅದೇನೆಂದರೆ– ಇಗೋ, ನನ್ನ ಸೇವಕನು; ಈತನನ್ನು ನಾನು ಆರಿಸಿಕೊಂಡೆನು; ಈತನು ನನಗೆ ಇಷ್ಟನು; ನನ್ನ ಪ್ರಾಣ ಪ್ರಿಯನು. ಈತನಲ್ಲಿ ನನ್ನ ಆತ್ಮವನ್ನು ಇರಿಸುವೆನು; ಈತನು ಅನ್ಯಜನಗಳಿಗೂ ನ್ಯಾಯವಿಧಿಯನ್ನು ಸಾರುವನು. ಈತನು ಜಗಳವಾಡುವದಿಲ್ಲ, ಕೂಗಾಡುವುದಿಲ್ಲ; ಬೀದಿಗಳಲ್ಲಿ ಈತನ ಧ್ವನಿಯು ಯಾರಿಗೂ ಕೇಳಿಸುವುದಿಲ್ಲ. ಜಜ್ಜಿದ ದಂಟನ್ನು ಮುರಿದುಹಾಕದೆಯೂ ಆರಿಹೋಗುತ್ತಿರುವ ದೀಪವನ್ನು ನಂದಿಸದೆಯೂ ನ್ಯಾಯವನ್ನು ದಿಗ್ವಿಜಯಕ್ಕಾಗಿ ಕಳುಹಿಸಿ ಕೊಡುವನು. ಅನ್ಯಜನರೂ ಈತನ ಹೆಸರನ್ನು ಕೇಳಿ ನಿರೀಕ್ಷೆಯಿಂದಿರುವರು.

## ಮಾರ್ಕ 2:23 ರಿಂದ 3:12

ಯೇಸು ಸಬ್ಬತ್ ದಿನದಲ್ಲಿ ಪೈರಿನ ಹೊಲಗಳನ್ನು ಹಾದು ಹೋಗುತ್ತಿರುವಾಗ, ಆತನ ಶಿಷ್ಯರು ನಡೆಯುತ್ತಾ ತೆನೆಗಳನ್ನು ಮುರುಕೊಂಡರು. ಫರಿಸಾಯರು ಆತನನ್ನು––ನೋಡು, ಇವರು ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವನ್ನು ಯಾಕೆ ಮಾಡುತ್ತಾರೆ ಎಂದು ಕೇಳಿದರು. ಆತನು ಅವರಿಗೆ–ದಾವೀದನು ತಾನೂ ತನ್ನ ಸಂಗಡ ಇದ್ದವರೂ ಕೊರತೆಯುಳ್ಳವರಾಗಿ ಹಸಿದಾಗ ಏನು ಮಾಡಿದನೆಂಬುದನ್ನು ನೀವು ಎಂದಾದರೂ ಓದಲಿಲ್ಲವೋ? ಅವನು ಮಹಾಯಾಜಕನಾದ ಅಬಿಯಾತರನ ಕಾಲದಲ್ಲಿ ದೇವರಮಂದಿರದೊಳಕ್ಕೆ ಹೋಗಿ ಯಾಜಕರು ಹೊರತು ಮತ್ತಾರೂ ತಿನ್ನಬಾರದ ನೈವೇದ್ಯದ ರೊಟ್ಟಿಗಳನ್ನು ತಾನು ತಿಂದು ತನ್ನ ಸಂಗಡ ಇದ್ದವರಿಗೂ ಕೊಟ್ಟನಲ್ಲಾ? ಎಂದು ಹೇಳಿದನು. ಮತ್ತು ಆತನು––ಸಬ್ಬತ್ ದಿನವು ಮನುಷ್ಯರಿಗೋಸ್ಕರ ಉಂಟಾಯಿತೇ ಹೊರತು ಮನುಷ್ಯರು ಸಬ್ಬತ್ ದಿನಕ್ಕೋಸ್ಕರ ಉಂಟಾಗಲಿಲ್ಲ; ಹೀಗಿರಲಾಗಿ ಮನುಷ್ಯಕುಮಾರನು ಸಬ್ಬತ್ ದಿನಕ್ಕೂ ಒಡೆಯನಾಗಿದ್ದಾನೆ ಅಂದನು. ಇನ್ನೊಂದು ಸಮಯದಲ್ಲಿ ಯೇಸು ಸಭಾಮಂದಿರಕ್ಕೆ ಹೋದಾಗ ಅಲ್ಲಿ ಕೈಬತ್ತಿಹೋದವನೊಬ್ಬನಿದ್ದನು. ಅವರು ಆತನ ಮೇಲೆ ತಪ್ಪುಹೊರಿಸಬೇಕೆಂದು ಆಲೋಚಿಸಿ ಸಬ್ಬತ್ ದಿನದಲ್ಲಿ ಅವನನ್ನು ಸ್ವಸ್ಥ ಮಾಡುವನೋ ಏನೋ ಎಂದು ಆತನನ್ನು ಹೊಂಚಿನೋಡುತ್ತಾ ಇದ್ದರು. ಆತನು ಕೈಬತ್ತಿದವನಿಗೆ–ಎದ್ದು ನಡುವೆ ಬಾ ಎಂದು ಹೇಳಿ ಅವರಿಗೆ––ಸಬ್ಬತ್ ದಿನದಲ್ಲಿ ಯಾವದನ್ನು ಮಾಡುವದು ನ್ಯಾಯ? ಮೇಲನ್ನು ಮಾಡುವದೋ, ಕೇಡನ್ನು ಮಾಡುವದೋ? ಪ್ರಾಣವನ್ನು ಉಳಿಸುವುದೋ, ತೆಗೆಯುವುದೋ? ಎಂದು ಹೇಳಲು ಅವರು ಸುಮ್ಮನಿದ್ದರು. ಆಗ ಆತನು ಅವರ ಮನಸ್ಸು ಕಲ್ಲಾಗಿರುವುದನ್ನು ಕಂಡು ದುಃಖಪಟ್ಟು ಕೋಪದಿಂದ ಸುತ್ತಲೂ ಅವರನ್ನು ನೋಡಿ ಆ ಮನುಷ್ಯನಿಗೆ––ನಿನ್ನ ಕೈಚಾಚು ಎಂದು ಹೇಳಿದನು. ಅವನು ಚಾಚಿದನು; ಕೈ ವಾಸಿಯಾಯಿತು. ಫರಿಸಾಯರು ಹೊರಕ್ಕೆ ಹೋಗಿ ಕೂಡಲೆ ಹೆರೋದ್ಯರನ್ನು ಕೂಡಿಕೊಂಡು ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು. ಯೇಸು ತನ್ನ ಶಿಷ್ಯರ ಕೂಡ ಆ ಸ್ಥಳವನ್ನು ಬಿಟ್ಟು ಸಮುದ್ರದ ಬಳಿಗೆ ಹೋದನು. ಗಲಿಲಾಯದಿಂದ ಬಹುಜನರು ಆತನ ಹಿಂದೆ ಹೋದರು. ಇದಲ್ಲದೆ ಆತನು ಇಂಥಿಂಥ ಕೆಲಸಗಳನ್ನು ಮಾಡುತ್ತಾನೆಂದು ಕೇಳಿ ಬಹುಜನರು ಯೂದಾಯದಿಂದಲೂ ಯೆರೂಸಲೇಮಿ– ನಿಂದಲೂ ಇದುಮಾಯದಿಂದಲೂ ಯೊರ್ದನ್ ಹೊಳೆಯ ಆಚೆಯಿಂದಲೂ ತೂರ್ ಸೀದೋನ್ ಪಟ್ಟಣಗಳ ಸುತ್ತಲಿ– ನಿಂದಲೂ ಆತನ ಬಳಿಗೆ ಬಂದರು. ಜನರು ಗುಂಪಾಗಿದ್ದರಿಂದ ಮೈಮೇಲೆ ಬಿದ್ದು ನೂಕಾರೆಂದು ಆತನು ತನಗೆ ಒಂದು ದೋಣಿಯು ಸಿದ್ಧವಾಗಿರಲೀ ಎಂಬದಾಗಿ ಶಿಷ್ಯರಿಗೆ ಹೇಳಿದನು. ಯಾಕೆಂದರೆ ಆತನು ಅನೇಕರನ್ನು ಸ್ವಸ್ಥಮಾಡಿದ್ದರಿಂದ ರೋಗಪೀಡಿತರಾಗಿದ್ದವರೆಲ್ಲರೂ ಆತನನ್ನು ಮುಟ್ಟಬೇಕೆಂದು ಮೇಲೆ ಬೀಳುತ್ತಿದ್ದರು. ಮತ್ತು ದೆವ್ವಗಳು ಆತನನ್ನು ಕಂಡಾಗಲೆಲ್ಲಾ ಆತನ ಪಾದಕ್ಕೆ ಬಿದ್ದು––ನೀನು ದೇವಕುಮಾರನೆಂದು ಕೂಗುತ್ತಿದ್ದವು. ಆದರೆ ಆತನು ತಾನು ಇಂಥವನೆಂಬದಾಗಿ ಯಾರಿಗೂ ಪ್ರಕಟಿಸಬಾರದೆಂದು ಅವರಿಗೆ ಬಹು ಖಂಡಿತವಾಗಿ ಹೇಳಿದನು.

## ಲೂಕ 6:1–11

ಒಂದಾನೊಂದು ಸಬ್ಬತ್ ದಿನದಲ್ಲಿ ಯೇಸು ಪೈರಿನ ಹೊಲಗಳನ್ನು ಹಾದುಹೋಗುತ್ತಿರುವಾಗ ಆತನ ಶಿಷ್ಯರು ತೆನೆಗಳನ್ನು ಮುರಿದು ಕೈಗಳಲ್ಲಿ ಹೊಸಗಿಕೊಂಡು ತಿನ್ನುತ್ತಿದ್ದರು. ಆದರೆ ಫರಿಸಾಯರಲ್ಲಿ ಕೆಲವರು––ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವನ್ನು ನೀವು ಯಾಕೆ ಮಾಡುತ್ತೀರಿ ಎಂದು ಕೇಳಿದ್ದಕ್ಕೆ ಯೇಸು ಅವರಿಗೆ – ದಾವೀದನು ತಾನೂ ತನ್ನ ಸಂಗಡ ಇದ್ದವರೂ ಹಸಿದಾಗ ಏನು ಮಾಡಿದನೆಂಬದನ್ನು ನೀವು ಓದಲಿಲ್ಲವೋ? ಅವನು ದೇವರ ಮಂದಿರದೊಳಕ್ಕೆ ಹೋಗಿ ಯಾಜಕರು ಮಾತ್ರವೇ ಹೊರತು ಮತ್ತಾರೂ ತಿನ್ನಬಾರದ ನೈವೇದ್ಯದ ರೊಟ್ಟಿಗಳನ್ನು ಈಸಿಕೊಂಡು ತಿಂದು ತನ್ನ ಸಂಗಡ ಇದ್ದವರಿಗೂ ಕೊಟ್ಟನಲ್ಲಾ? ಎಂದು ಉತ್ತರಕೊಟ್ಟು ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ ಎಂದು ಅವರಿಗೆ ಹೇಳಿದನು. ಮತ್ತೊಂದು ಸಬ್ಬತ್ ದಿನದಲ್ಲಿ ಆತನು ಸಭಾಮಂದಿರಕ್ಕೆ ಹೋಗಿ ಉಪದೇಶಮಾಡುತ್ತಿದ್ದಾಗ ಅಲ್ಲಿ ಬಲಗೈ ಬತ್ತಿದವನೊಬ್ಬನು ಇದ್ದನು. ಶಾಸ್ತ್ರಿಗಳೂ ಫರಿಸಾಯರೂ ಆತನ ಮೇಲೆ ತಪ್ಪು ಹೊರಿಸುವದಕ್ಕೆ ಆಸ್ಪದ ಸಿಕ್ಕಬೇಕೆಂದು ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವನೋ ಏನೋ ಎಂದು ಆತನನ್ನು ಹೊಂಚಿ ನೋಡುತ್ತಿದ್ದರು. ಆದರೆ ಆತನು ಅವರ ಯೋಚನೆಗಳನ್ನು ತಿಳಿದು ಕೈ ಬತ್ತಿಹೋಗಿದ್ದ ಆ ಮನುಷ್ಯನಿಗೆ–ಎದ್ದು ನಡುವೆ ಬಂದು ನಿಂತುಕೋ ಎಂದು ಹೇಳಿದನು. ಅವನು ಎದ್ದು ನಿಂತುಕೊಂಡನು. ಆಗ ಯೇಸು ಅವರಿಗೆ––ನಿಮ್ಮನ್ನು ಒಂದು ಮಾತು ಕೇಳುತ್ತೇನೆ; ಸಬ್ಬತ್ ದಿನದಲ್ಲಿ ಯಾವದನ್ನು ಮಾಡುವದು ನ್ಯಾಯ? ಮೇಲನ್ನು ಮಾಡುವದೋ, ಕೇಡನ್ನು ಮಾಡುವದೋ? ಪ್ರಾಣವನ್ನು ಉಳಿಸುವದೋ, ಹಾಳು ಮಾಡುವದೋ ಎಂದು ಹೇಳಿ ಸುತ್ತಲೂ ಅವರೆಲ್ಲರನ್ನು ನೋಡಿ ಆ ಮನುಷ್ಯನಿಗೆ––ನಿನ್ನ ಕೈಚಾಚು ಎಂದು ಹೇಳಿದನು. ಆದರೆ ಅವರಲ್ಲಿ ದುರ್ಬುದ್ಧಿ ತುಂಬಿದ್ದರಿಂದ–ಈ ಯೇಸುವಿಗೆ ಏನು ಮಾಡೋಣ ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು.

# ಸಬ್ಬತ್ ವಿಷಯವಾದ ಕರ್ತವ್ಯಗಳು ಹಾಗೂ ಸವಲತ್ತುಗಳು

**ರೀಪ್ರಿಂಟ್ಸ್ ಪುಟ 3752**

## ಮತ್ತಾಯ 12:1–14

**"ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು" – ವಿಮೋಚನಾಕಾಂಡ 20:8**

ಸಬ್ಬತ್ ದಿನದ ವಿಷಯವಾದ ಸರಿಯಾದ ಅಭಿಪ್ರಾಯವನ್ನು ಯಾರೂ ಹೊಂದಿಲ್ಲ. ಕೆಲವರು ಮೋಶೆಯ ಧರ್ಮಶಾಸ್ತ್ರವಿಧಿಗಳ ಅಧೀನದಲ್ಲಿರುವ ಯೆಹೂದ್ಯರೆಂದು ತಮ್ಮನ್ನು ತಾವೇ ಪರಿಗಣಿಸಿಕೊಳ್ಳುವರು; ಇತರರು ಇದಕ್ಕೆ ವಿರುದ್ಧವಾದ ಅತಿರೇಕಕ್ಕೆ ಹೋಗಿ ನಾವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ ಕೃಪೆಗೆ ಅಧೀನರಾಗಿದ್ದೇವೆಂದು ಹೇಳಿ ಸಬ್ಬತ್ ದಿನವನ್ನು ಪೂರ್ಣವಾಗಿ ಅಲ್ಲಗಳೆಯುವರು. ನಾವು ನಂಬಿರುವ ಸರಿಯಾದ ಅಭಿಪ್ರಾಯವು ಯಾವುದೆಂದರೆ, ನಾವು ಪ್ರತಿಪಾದಿಸಲು ಯತ್ನಿಸಲಿರುವ ಹಾಗೆ, ಅದು ಇವೆರಡು ಅತಿರೇಕಗಳ ನಡುವೆ ಇರುವಂಥದ್ದು.

ಯಾಕೋಬನ ಮೂಲಕವಾಗಿ ಬಂದ ಅಬ್ರಹಾಮನ ಮಕ್ಕಳಾದ ಯಹೂದ್ಯ ಜನಾಂಗದವರನ್ನು ದೇವರು ಲೋಕದಲ್ಲಿ ತನ್ನ ವಿಶೇಷ ಸ್ವತ್ತನ್ನಾಗಿ ತೆಗದುಕೊಂಡನು. ಅವರೊಡನೆ ಆತನು ಮೋಶೆಯ ಮೂಲಕವಾಗಿ ಸೀನಾಯಿಯಲ್ಲಿ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯನ್ನು ಮಾಡಿಕೊಂಡನು. ಅವರಿಗಾಗಿ ಆತನು ತನ್ನ ದೂತರನ್ನು ಪ್ರವಾದಿಗಳನ್ನು ಹಾಗೂ ಕಡೆಯಲ್ಲಿ ತನ್ನ ಮಗನನ್ನು ಕಳುಹಿಸಿದನು. ಬೇರೆ ಯಾವ ಜನಾಂಗದರೊಡನೆಯೂ ಅಲ್ಲದೆ ಅವರೊಡನೆ ತಾನು ಮಾಡಿದ ಒಪ್ಪಂದವೇನೆಂದರೆ, ಧರ್ಮಶಾಸ್ತ್ರವಿಧಿಗಳನ್ನು ಕೈಗೊಂಡು ನಡೆದರೆ ಅವರು ತನ್ನ ಅನುಗ್ರಹವನ್ನು ಹೊಂದಿ ತಮ್ಮ ಕುರಿದನದ ಹಿಂಡು, ತಮ್ಮ ದೇಶ ಹಾಗೂ ಜನರಿಗೆ ರೋಗಬಾಧೆ ಬರ ಅಭಾವ ಇವುಗಳಿಗೆ ಬದಲಾಗಿ ದೇವಾಶೀರ್ವಾದ ಉಂಟಾಗುವುದು. ಬೇರೆ ಯಾವ ಜನಾಂಗಕ್ಕೂ ಸೀನಾಯಿಯಲ್ಲಿ ನೇಮಿಸಿದ ಆಜ್ಞಾ–ವಿಧಿಗಳನ್ನು ಕೊಡಲಿಲ್ಲ, ಬೇರೆ ಯಾವ ಜನಾಂಗದವ–ರೊಡನೆಯೂ ಈ ಒಡಂಬಡಿಕೆಯನ್ನು ಮಾಡಿಕೊಳ್ಳಲಿಲ್ಲ. ಲಿಖಿತವಾಗಿರುವ ಹಾಗೆ, "ಭೂಮಿಯ ಸಕಲಕುಲಗಳೊಳಗೆ ನಿಮ್ಮನ್ನು ಮಾತ್ರ ನನ್ನವರೆಂದು ಅರಿತುಕೊಂಡಿದ್ದೇನೆ (ಮಾನ್ಯತೆ ನೀಡಿದ್ದೇನೆ)." – ಆಮೋಸ 3:2

ಯೆಹೂದ್ಯರು ಯೇಸುವನ್ನು ತಿರಸ್ಕರಿಸಿದಾಗ ಮತ್ತು ಯೇಸುವು ಶಿಲುಬೆಯ ಮೇಲೆ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯನ್ನು ಅಂತ್ಯಗೊಳಿಸಿದಾಗ, ಕೆಲವರು ಊಹಿಸಿರುವುದಾಗಿ ತೋರುವಂತೆ, ಧರ್ಮಶಾಸ್ತ್ರವು ಲೋಕದ ಬೇರೆ ಜನಾಂಗಕ್ಕೆ ವಿಸ್ತರಿಸಲ್ಪಟ್ಟಿತ್ತೆಂಬದು ಸೂಚಿತವಾಗಿರುವುದಿಲ್ಲ. ಪ್ರತಿಯಾಗಿ ಅದು ಇದಕ್ಕೆ ಬಹು ತದ್ವಿರುದ್ಧವಾಗಿರುವುದು. ಇಲ್ಲವೇ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯು ಕ್ರೈಸ್ತಸಭೆಗೆ ವಿಸ್ತರಿಸಲ್ಪಡಲಿಲ್ಲ. ಕ್ರಿಸ್ತನ ಹಿಂಬಾಲಕರು ಯೆಹೂದ್ಯ ಜನಾಂಗದವರಿಂದಲೂ ಹಾಗೂ ಬೇರೆ ಜನಾಂಗದವರಿಂದಲೂ ಆಯ್ಕೆಯಾಗಿದ್ದಾರೆ. ಏಕೆಂದರೆ ನಾವು ಓದುವುದು: "ನಂಬುವವರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮ ಮಾರ್ಗಕ್ಕೆ (ಧರ್ಮಶಾಸ್ತ್ರದ ಒಡಂಬಡಿಕೆಗೆ) ಅಂತ್ಯವಾಯಿತು. (ರೋಮಾ. 10:4) ಯಾರು ಈ ಅಂಶವನ್ನು ಸ್ಪಷ್ಟವಾಗಿ ಗ್ರಹಿಸಿರುವರೋ ಅವರಿಗೆ ಸಬ್ಬತ್ತಿನ ಹಾಗೂ ಧರ್ಮಶಾಸ್ತ್ರದ ಇತರ ಪ್ರತಿಯೊಂದು ಮುಖ್ಯಲಕ್ಷಣಗಳ ವಿಷಯವಾಗಿರುವ ಸರಿಯಾದ ಅಭಿಪ್ರಾಯಕ್ಕೆ ಇದು ತಳಹದಿಯಾಗಿರುವುದು; ಯಾರಿಗೆ ಇದನ್ನು ಗ್ರಹಿಸಲು ಸಾಧ್ಯವಾಗಿಲ್ಲವೋ ಅವರು ಗೊಂದಲದಲ್ಲೇ ಇರುವರು.

## "ಈ ಲೋಕದ ರಾಜ್ಯಗಳು"

ಇದಕ್ಕನುಸಾರವಾಗಿ ಹೇಳವುದಾದರೆ, ಐರೋಪ್ಯ ರಾಷ್ಟ್ರಗಳಿಗಾಗಲೀ ಹಾಗೂ ಅಮೇರಿಕ ದೇಶಕ್ಕಾಗಲೀ ಅವರು ಯಹೂದ್ಯರ ಸಬ್ಬತ್ತನ್ನಾಗಲೀ ಅಥವಾ ಬೇರೆ ಯಾವ ಸಬ್ಬತ್ತನ್ನಾಗಲೀ ಆಚರಿಸುವುದನ್ನು ಜಾರಿಗೊಳಿಸಬೇಕೆಂದು ಒತ್ತಾಯಿಸುವುದು ನಮಗೆ ಸಂಬಂಧಿಸಿದುದಲ್ಲ. ನಾಗರಿಕ ಜಗತ್ತನ್ನು "ಕ್ರೈಸ್ತಸಾಮ್ರಾಜ್ಯ" ಆಥವಾ ಕ್ರಿಸ್ತನ ರಾಜ್ಯವೆಂದು ಕರೆಯಲ್ಪಡುವುದು ನಿಜವೇ. ಆದರೆ ಇದು ಆ ಹೆಸರಿನ ಒಂದು ತಪ್ಪಾದ ಪ್ರಯೋಗ. ಲೋಕದ ರಾಜ್ಯಗಳು ಈಗಲೂ "ಈ ಪ್ರಪಂಚದ ದೇವರ" ಆಧಿಪತ್ಯದಲ್ಲಿರುವುದು. (2 ಕೊರಿಂಥ 4:4) ಅವು ಈ ಲೋಕದ ರಾಜ್ಯಗಳು, ದೇವರ ರಾಜ್ಯವಲ್ಲ. ದೇವರಿಗೆ ಇವುಗಳ ಅಸ್ತಿತ್ವಗಳಿರುವ ಅರಿವು ಇರುವುದು ಮತ್ತು ಕೆಲವು ಕಾಲಗಳು ಅವುಗಳು ಇರುವುದಕ್ಕೆ ಅನುಮತಿ ನೀಡಿರುವನು; ಆದರೆ ಎಂದೂ ಅವುಗಳ ಮೇಲೆ ಅಧಿಕಾರವನ್ನು ಸ್ಥಾಪಿಸಲು ಪ್ರಯತ್ನಿಸಿಲ್ಲ, ಇಲ್ಲವೇ ತನ್ನನ್ನು ಪ್ರತಿನಿಧಿಸುವ ಈ ಅಪೂರ್ಣವಾದ ಆಡಳಿತಗಳಿಗೆ ತನ್ನನ್ನು ಜವಾಬ್ದಾರನನ್ನಾಗಿ ಎಂದೂ ಮಾಡಿಕೊಂಡಿಲ್ಲ. ಏಕೆಂದರೆ ಅವುಗಳು ಆತನ ರಾಜ್ಯವಲ್ಲ. ಪರಲೋಕದ ದೇವರು ತನ್ನ ರಾಜ್ಯವನ್ನು ಮಹಿಮೆಹೊಂದಿದ ಶಿರಸ್ಸು ಮತ್ತು ದೇಹದಿಂದ ಕೂಡಿದ ಮೆಸ್ಸೀಯನ ಮೂಲಕ ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಸ್ಥಾಪಿಸುವಾಗ ಅಲ್ಲಿನ ಸ್ಥಿತಿಗತಿ ಹಾಗೂ ವ್ಯವಸ್ಥೆಗಳು ಈ ಲೋಕದ ರಾಜ್ಯದವುಗಳಿಗೆ ತೀರಾ ವಿರುದ್ಧವಾಗಿರುವುದು. ಆದುದರಿಂದ ದೇವರು ಈ ಲೋಕದ ರಾಜ್ಯಗಳಿಗೆ ಸಬ್ಬತ್ ದಿನ ಮುಂತಾದುವುಗಳನ್ನು ಆಚರಿಸಲು ಆಜ್ಞಾಪಿಸುತ್ತಿಲ್ಲ. ಈ ವಿಷಯದಲ್ಲಿ ಅವರು ಏನನ್ನಾದರೂ ಮಾಡಿದ್ದರೆ ಅದು ಅವರ ಸ್ವಇಚ್ಛೆಯಿಂದಾದುದು ಆಜ್ಞೆಯ ಮೂಲಕವಾದುದಲ್ಲ; ಏಕೆಂದರೆ ಅವರು ಮೋಶೆಯ ಧರ್ಮಶಾಸ್ತ್ರದ ಅಧೀನದಲ್ಲಿರುವುದಿಲ್ಲ ಮತ್ತು ಅವರಿಗೆ ಬೇರೆ ಯಾವ ಆಜ್ಞಾವಿಧಿಗಳನ್ನೂ ನೀಡಲಾಗಿರುವುದಿಲ್ಲ.

ಯೇಸುವು ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆ –ಯನ್ನು ಶಿಲುಬೆಗೆ ಜಡಿದು ಅದನ್ನು ಅಂತ್ಯಗೊಳಿಸಿದ್ದರಿಂದ ಕ್ರೈಸ್ತ

ನಂಬಿಕೆಯುಳ್ಳ ಆತನ ಹಿಂಬಾಲಕರು ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯ ಅಧೀನದಲ್ಲಿರುವುದಿಲ್ಲ, ಆದರೆ ಅಪೋಸ್ತಲನು ಪ್ರಕಟಿಸಿ ಹೇಳಿರುವಂತೆ: "ನೀವು ಧರ್ಮಶಾಸ್ತ್ರಕ್ಕೆ ಅಧೀನರಲ್ಲ, ಕೃಪೆಗೆ ಅಧೀನರಾಗಿದ್ದೀರಷ್ಟೆ." (ರೋಮಾ. 6:14) ದೇವರೊಡನೆ ಇರುವ ನಮ್ಮ ಸಂಬಂಧವು ಸೀನಾಯಿಯಲ್ಲಿ ಮೋಶೆಯ ಕೈಯಿಂದ ಇಸ್ರಾಯೇಲ್ಯರೊಡನೆ ಮಾಡಿಕೊಂಡ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಗೆ ಮೊದಲು ಪ್ರಚಲಿತವಾಗಿದ್ದ ಸಂಬಂಧಗುಣಗಳಿಗೆ ಸಮಾನವಾದದ್ದು. ಅದು ಅಬ್ರಹಾಮ ಇಸಾಕ ಮತ್ತು ಯಾಕೋಬ್ಯರು ಅನುಸರಿಸಿ ಅನುಭವಿಸಿದಂಥ ಅಬ್ರಹಾಮನ ಒಡಂಬಡಿಕೆಯಲ್ಲಿನ ವಿಧಿಗಳ ಅನುಸಾರವಾದ ಕೃಪೆಗೆ ಸಂಬಂಧಿಸುದುದು; ನಾವು ನಿಜವಾಗಿರುವ ವಾಗ್ದಾನದ ಸಂತತಿ. (ಗಲಾತ್ಯ 3:29) ಅಬ್ರಹಾಮ ಇಸಾಕ ಯಾಕೋಬ್ಯರು ಧರ್ಮಶಾಸ್ತ್ರವಿಧಿಗಳಿಲ್ಲದೆ ಏಳಿಗೆಯಾಗಿದ್ದರೋ? ಹೌದು! ಆತ್ಮಿಕ ಇಸ್ರಾಯೇಲ್ಯರು ಇಂಥದ್ದೇ ಸನ್ನಿವೇಶದಲ್ಲಿ ಇನ್ನೂ ಅಧಿಕವಾಗಿ ಏಳಿಗೆಯಾಗ ಬಹುದು; ಏಕೆಂದರೆ ನಾವು ಈಗ ದಿವ್ಯ ವಿಮೋಚಕನೊಡನೆ ನಂಬಿಕೆಯ ಮೂಲಕವಾಗಿರುವ ನಮ್ಮ ವಿಶೇಷ ಸಂಬಂಧದ ಹಾಗೂ ಆತನಲ್ಲಿ ಕೇಂದ್ರೀಕೃತವಾಗಿರುವ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳ ಕಾರಣ ಎಲ್ಲಾ ವಿಧದಲ್ಲಿಯೂ ಹೆಚ್ಚು ಅನುಕೂಲಕರ ಸನ್ನಿವೇಶದಲ್ಲಿದ್ದೇವೆ. ಈ ವಾಗ್ದಾನಗಳು ಆತನ ದೇಹದ ಅಂಗಗಳಾಗಿ ಆತನಿಂದ ಅಂಗೀಕರಿಸಲ್ಪಟ್ಟಿರುವರೆಲ್ಲರಿಗೂ ಅನ್ವಯವಾಗುವುದು; ಇವರು ಆತನ ಮದಲಗಿತ್ತಿ ಎಂಬ ಗುಂಪಿಗೆ ಸೇರಿದವರು.

## "ಮಗನು ಬಿಡುಗಡೆ ಮಾಡಿದವರು"

ತಾವು ಒಂದು ನಿಯಮಗಳಿಗೆ ವಿಧೇಯರಾಗುವುದರ ಮೂಲಕವಾಗಿ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯಿಂದ ಬಿಡುಗಡೆಮಾಡಲ್ಪಟ್ಟವರೆಂಬ ಅಂಶಕ್ಕೆ ಭೀತಿಗೊಳ್ಳುವ ಪ್ರವೃತ್ತಿ ಕೆಲವರಲ್ಲಿರುವುದು. ಧರ್ಮಶಾಸ್ತ್ರ ನಿಯಮಗಳಿಲ್ಲದೇ ಅಬ್ರಹಾಮ ಇಸಾಕ ಯಾಕೋಬರು ದೇವರಿಂದ ಮನ್ನಣೆಪಡೆದಿದ್ದರೆಂಬ ವಿಷಯವನ್ನು ಹೇಳುವುದರ ಮೂಲಕವಾಗಿ ಅಂಥವರನ್ನು ಸಂತೈಸಬೇಕು. ದೇವರಲ್ಲಿನ ಅವರ ನಂಬಿಕೆಯು ತಮ್ಮ ಶಕ್ತಿಜ್ಞಾನಾನುಸಾರವಾಗಿ ದೇವರ ಚಿತ್ತವನ್ನು ನೆರವೇರಿಸುವ ಕರ್ತವ್ಯದ ಮೇಲೆ ರೂಪುಗೊಂಡಿರುತ್ತದೆ. ನಮ್ಮ ವಿಷಯಾಗಿಯೂ ಇದು ಸತ್ಯವಾಗಿರುತ್ತದೆ; ದೇವರ ಮಕ್ಕಳಾಗಿ, ಆತನ ಮನೆತನದವರಾಗಿ ಅಂಗೀಕರಿಸಲ್ಪಟ್ಟು ಆತನ ಆತ್ಮದಲ್ಲಿ ಪಾಲನ್ನು ಹೊಂದಿದವರಾಗಿರಲಾಗಿ ಇನ್ನು ಮುಂದೆ ಪ್ರೀತಿಯು ನಮ್ಮ ನಡವಳಿಕೆಯಲ್ಲಿನ ನಿಯಮವಾಗಿರಬೇಕು. ಅಲ್ಲದೆ ನಮ್ಮ ವಿಷಯದಲ್ಲಿ ಪ್ರೀತಿಯಿಂದಲೇ ಧರ್ಮಶಾಸ್ತ್ರದ ನಿಯಮವು ನೆರವೇರುವುದು. ಅಂದರೆ, ನಾವು ದೇವರ ಮನೆತನದವರಾಗಿ ಪುತ್ರಭಾವವನ್ನು ಪಡೆದಲ್ಲಿ ಅದು ನಾವು ಪ್ರೀತಿಯ ಆತ್ಮವನ್ನು ಪಡೆದಿರುವೆವೆಂಬುದು ಅಡಕವಾಗಿರುತ್ತದೆ. ಏಕೆಂದರೆ ದೇವರು ಪ್ರೀತಿಸ್ವರೂಪಿ; ಮತ್ತು ದೇವರ ಮೇಲಿನ ಈ ಪ್ರೀತಿಯು ನಮ್ಮಲ್ಲಿ ಬೆಳೆದ ಹಾಗೆಲ್ಲಾ ಅದು ದೇವರನ್ನು ಅನುಸರಿಸುವವರೆಲ್ಲರ ಮೇಲೆ ನಮಗಿರುವ ಪ್ರೀತಿಯನ್ನೂ, (ದೇವರಿಗೆ) ತನ್ನ ಸೃಷ್ಟಿಯ ಮೇಲೆ ತನಗಿರುವಂಥ ಪ್ರೀತಿಯು ನಮ್ಮಲ್ಲಿರುವುದನ್ನೂ ಸೂಚಿಸುತ್ತದೆ. ಇದು ಒಂದು ಸಹಾನುಭೂತಿಯುಳ್ಳ ಪ್ರೀತಿ. ಈ ವಿಧವಾದ ಪ್ರೀತಿಯು ನಾವು ನಮ್ಮ ಸಾಮರ್ಥ್ಯದ ಪ್ರಕಾರ ದೇವರ ಚಿತ್ತವನ್ನು ಕೈಗೊಂಡು ನಡೆದು ಆ ಚಿತ್ತವನ್ನು ನೆರವೇರಿಸುವವರಾಗುವಂತೆ ಮಾಡುತ್ತದೆ. ದೇವರು ನಮ್ಮಲ್ಲಿರುವ ಉದ್ದೇಶ ಪರಿಶ್ರಮಗಳ ಅನುಸಾರ ನಮ್ಮೊಡನೆ ನಡಕೊಳ್ಳುವವನಾಗಿ ಉದ್ದೇಶಪೂರ್ವಕ–ವಲ್ಲದ ನಮ್ಮ ದೋಷಬಲಹೀನತೆಗಳನ್ನು ಮುಚ್ಚಿಹಾಕುವವನಾಗಿ, ಹೃದಯಪೂರ್ವಕವಾದ ನಮ್ಮ ಸೇವೆ ಹಾಗು ಅದರ ವಿಷಯವಾದ ಮನಸಂಕಲ್ಪಗಳನ್ನು ದೇವರ ನಿಯಮದ ಪರಿಪೂರ್ಣವಾದ ರೀತಿಯ ಕೈಗೊಳ್ಳುವಿಕೆಯೆಂದು ಎಣಿಸುವವ–ನಾಗಿದ್ದಾನೆ. ಇದನ್ನು ಅಪೋಸ್ತಲನು ಈ ವಿಧದಲ್ಲಿ ಹೇಳಿರುವನು: "ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನುಸಾರವಾಗಿ ನಡೆಯುವವರಾದ ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವುದಕ್ಕೆ ಮಾರ್ಗ–ವಾಯಿತು." (ರೋಮಾ. 8:4) ದೇವರ ಆಜ್ಞೆಗಳನ್ನು ಅದರ ಉದ್ದೇಶ/ಒಳಾರ್ಥಗಳ ಪ್ರಕಾರ ಕೈಗೊಂಡು ನಡೆಯುವಾಗ ನಮ್ಮಲ್ಲಿ ಕಂಡುಬರುವ ಕುಂದುಕೊರತೆಗಳು ಎಷ್ಟೇ ಇದ್ದರೂ ನಮ್ಮ ಅನುದಿನದ ನಡವಳಿಕೆಗಳು ಈ ನಿಟ್ಟಿನಲ್ಲಿದ್ದು ಅವು ನಮ್ಮ ಸಾಮರ್ಥ್ಯಾನುಸಾರವಾಗಿದ್ದಲ್ಲಿ ನಾವು ಆಗ ಆಜ್ಞೆಗಳನ್ನು ಪೂರ್ಣವಾಗಿ ನೆರವೇರಿಸುವವರೆಂದು ಎಣಿಸಲ್ಪಡುವೆವು.

ಈ ದೃಷ್ಟಿಯಿಂದ ದೇವರು ಇಸ್ರಾಯೇಲ್ಯರೊಡನೆ ಬಳಕೆಯಲ್ಲಿಲ್ಲವೆಂಬುದನ್ನು ಇಲ್ಲವೇ ಬೇರೆ ಯಾವ ಜನಾಂಗಗಳನ್ನೂ ತನ್ನವರನ್ನಾಗಿ ಅಂಗೀಕರಿಸಿಕೊಂಡಿಲ್ಲ–ವೆಂಬುದನ್ನು ನಾವು ನೋಡುತ್ತೇವೆ. ಬದಲಾಗಿ ಆತನು ಒಂದು ಹೊಸ ಜನಾಂಗವನ್ನು ರಚಿಸುತ್ತಿದ್ದು ಅದರ ಪ್ರಜೆಗಳನ್ನು ಪ್ರತಿಯೊಂದು ಜನಾಂಗ ಕುಲ ಪ್ರಜೆ ಮತ್ತು ಭಾಷೆಯವರಿಂದ ಕೂಡಿಸುತ್ತಿದ್ದಾನೆ. ಆ ಹೊಸ ಜನಾಂಗವು ಕ್ರೈಸ್ತಸಭೆ. ಇದರ ವಿಷಯವಾಗಿ ಅಪೋಸ್ತಲನು ಹೇಳಿರುವುದು, "...ದೇವರಾದು ಕೊಂಡ ಜನಾಂಗವೂ ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ." (1 ಪೇತ್ರ 2:9) ಈ ಪ್ರಸ್ತುತ ಕಾಲದಲ್ಲಿ ಈ ಜನಾಂಗವು ಪೂರ್ಣಗೊಳ್ಳುವುದು ಮತ್ತು ಭೂಲೋಕದ ಎಲ್ಲಾ ಕುಲಗಳನ್ನು ಆಳ್ವಿಕೆಮಾಡಿ ಆಶೀರ್ವದಿಸಲು ಪ್ರಭಾವ ಮಾನ ನಿರ್ಲಯತ್ವ–ಗಳೊಡನೆ ಉದಯಿಸುವುದು. ದೇವರು ಅನುಸರಿಸುತ್ತಿರುವ ನಡಾವಳಿ ನೀಡುತ್ತಿರುವ ಶಿಕ್ಷಣ ಪರಿಶೋಧನೆ ಮುಂತಾದವು–ಗಳೆಲ್ಲವೂ ಈ ಹೊಸ ಜನಾಂಗದ ಪರವಾಗಿರುವುದು. ಹೌದು, ನಾವು ನೋಡಿರುವಂತೆ, ಆತನು ತನ್ನನ್ನು ಹಾಗೂ ನೆರೆಯವರನ್ನು ಪ್ರೀತಿಸುವ ವಿಷಯವಾದ ಆಜ್ಞೆಯನ್ನು ಬಿಟ್ಟು ಬೇರೆ ಯಾವ ಆಜ್ಞೆಯನ್ನೂ ನಮಗೆ ವಿಧಿಸಿಲ್ಲ. ನಮ್ಮನ್ನು ಪರಿಶುದ್ಧ ಜನಾಂಗವಾಗಿ ಅಂಗೀಕರಿಸುವುದಕ್ಕೆ ಮೊದಲು ನಾವು ಪ್ರೀತಿಯ ವಿಷಯವಾದ ಅದರ ಆಜ್ಞೆಯನ್ನು ಒಪ್ಪಿಕೊಂಡವರಾಗಿ ಹಾಗೂ ಸ್ವಾರ್ಥವು ಅಂಧಕಾರದ ಕೃತ್ಯಗಳ ಒಂದು ಭಾಗವೆಂದು ಗ್ರಹಿಸಿಕೊಂಡಿದ್ದೇವೆ. ಅಲ್ಲದೆ ಕ್ರಿಸ್ತನ ಅನುಭವಶಾಲೆಯಲ್ಲಿ ಪ್ರೀತಿಯೆಂಬುದರ ಪೂರ್ಣ ಅರ್ಥವನ್ನು ಮತ್ತು ಅದನ್ನು ದೇವರ

ವಿಷಯವಾಗಿಯೂ ಮತ್ತು ನಮ್ಮ ಜೊತೆಗಿರುವ ಮನುಷ್ಯರ ವಿಷಯವಾಗಿ ಅದನ್ನು ಬಳಸುವುದನ್ನು ಹೆಚ್ಚು ಹೆಚ್ಚಾಗಿ ಕಲಿತುಕೊಳ್ಳುತ್ತಿದ್ದೇವೆ. ಈ ಪಾಠಗಳು ಇನ್ನೂ ಮುಂದುವರಿ–ಯುತ್ತಿರುವುದಾದರೂ ನಾವು ಪರಲೋಕದ ನಿತ್ಯವಾದ ಸ್ಥಿತಿಗೆ ಸೇರಿದವರಾಗಿ ಆ ರಾಜ್ಯದಲ್ಲಿ ಭಾಗಿಗಳಾಗುವದಕ್ಕೆ ಮಾರ್ಪಡಲು ಯೋಗ್ಯರೆಂದು ಎಣಿಸಲ್ಪಡುವುದಕ್ಕೆ ಮೊದಲು ಇವುಗಳು ಒಂದು ವಿಧದಲ್ಲಿ ಪೂರ್ಣತೆಯನ್ನು ಅಥವಾ ಸಫಲತೆಯನ್ನು ತಲುಪಬೇಕು.

## ಕರ್ತನೊಡನೆ ನಮಗಿರುವ ಸಂಬಂಧ

ಹಾಗಾದರೆ ವಂಶಪಾರಂಪರ್ಯವಾಗಿ ಬಂದ ಇಸ್ರಾಯೇಲ್ಯರಿಗೆ ಕೊಡಲ್ಪಟ್ಟಿರುವ ದಶಾಜ್ಞೆ ಮುಂತಾದವುಗಳು ವ್ಯಕ್ತವಾಗಿರುವ ಧರ್ಮಶಾಸ್ತ್ರವು ನಮಗೆ ಸಂಬಂಧಿಸಿಲ್ಲವೇ? ಇಲ್ಲ, ನಾವು ದರ್ಮಶಾಸ್ತ್ರ ನಿಯಮಗಳಿಂದ ಬಿಡುಗಡೆಯಾಗಿದ್ದೇವೆ; ಇದಕ್ಕಾಗಿ ದೇವರಿಗೆ ಸ್ತೋತ್ರ! ಹೀಗಿದ್ದರೂ ನಾವು ಬಿಡಗಡೆ ಹೊಂದಿರುವ ಈ ನೇಮವಿಧಿಗಳನ್ನು ಪರಿಶೀಲನೆ ಮಾಡುವು–ದರಿಂದ ಶ್ರೇಷ್ಠವಾದ ಆಶೀರ್ವಾದಗಳನ್ನು ಪಡೆಯ ಬಹುದು. ಏಕೆಂದರೆ ನಾವು ತಿಳಿದಿರುವಂತೆ ಅವು ನ್ಯಾಯವೂ ಪರಿಶುದ್ಧವೂ ಹಿತಕರವೂ ಆದವುಗಳು; ಅವುಗಳು ತೆಗೆದು ಹಾಕಲ್ಪಟ್ಟ ಕಾರಣ ಅವುಗಳು ದೋಷಪೂರಿತವಾದವುಗಳೆಂತಲ್ಲ, ಆದರೆ ಮಾನವನು ಅಪರಿಪೂರ್ಣನಾಗಿದ್ದು ಅವುಗಳನ್ನು ಕೈಗೊಂಡು ನಡೆದು ಅವುಗಳ ಮೂಲಕ ಜೀವವನ್ನು ಪಡಕೊಳ್ಳಲು ಅಸಮರ್ಥನಾಗಿದ್ದ ಕಾರಣದಿಂದ ಅವು ತೆಗೆದುಹಾಕಲ್ಪಟ್ಟವು. ಹೀಗಿರುವಲ್ಲಿ ಈ ಪರಿಪೂರ್ಣ ಆಜ್ಞಾವಿಧಿಗಳನ್ನು ವೀಕ್ಷಿಸುವಾಗ ನಾವು ಅವುಗಳ ಅಕ್ಷರಶಃವಾದ ಹೊರಗಣ ಅರ್ಥಗಳನ್ನು ಹುಡುಕುವವರಾಗದೇ ಅವುಗಳ ಒಳಾರ್ಥಭಾವಗಳನ್ನು ಹಾಗೂ ಅವುಗಳು ಏನನ್ನು ಸೂಚಿಸುವುದೆಂಬುದನ್ನು ವಿಶೇಷವಾಗಿ ಹುಡುಕುವವರಾಗಬೇಕು. ನಾವು ನೂತನ ಸೃಷ್ಟಿಗಳಾಗಿ ಅವುಗಳ ಮಹತ್ವಗಳನ್ನು ಖಚಿತ ಪಡಿಸಿಕೊಂಡ ನಂತರ ನಾವು ಜೀವವನ್ನು ಪಡಕೊಳ್ಳಲು ಅವುಗಳನ್ನು ಅವಲಂಬಿಸಿಲ್ಲ. ಆದರೆ ದೇವರ ಯಜ್ಞದ ಕುರಿಯಾದಾತನ ರಕ್ತವು ನಮ್ಮ ಅನುದ್ದೇಶಿತವಾದ ಬಲಹೀನತೆ ನ್ಯೂನ್ಯತೆ ಹಾಗೂ ಅಪರಿಪೂರ್ಣತೆಗಳನ್ನು ಸರಿದೂಗಿಸಿರುವುದು. ಹೀಗಿರುವುದರಿಂದ ಈ ಧರ್ಮಶಾಸ್ತ್ರದ ನೇಮವಿಧಿಗಳ ಒಳಾರ್ಥ ಗಳಿಂದ ಕಲೆಹಾಕಲು ಸಾಧ್ಯವಾದ ಎಲ್ಲಾ ಆಶೀರ್ವಾದಕರವಾದ ಅಂಶಗಳಿಗೆ ನಾವು ನಮ್ಮ ಜೀವಿತವನ್ನು ಸರಿ ಹೊಂದಿಸಿ ಕೊಳ್ಳಬೇಕು.

ನಾವುಗಳು ಇವುಗಳ ಮೂಲಕವಾಗಿ ರಕ್ಷಣೆಗೆ ಬಾಧ್ಯ ರಾಗಲು ಇದನ್ನು ಮಾಡಬಾರದು. ನಾವು ಪಾಪ ಪರಿಹಾರವನ್ನು ಹೊಂದಿ ಮುನ್ನಡೆದು ಪವಿತ್ರಾತ್ಮದಿಂದ ನೂತನ ಜೀವವನ್ನು ಪಡೆದವರಾಗಿ ನೂತನ ಸ್ವಭಾವವನ್ನು ಹೊಂದಿ ರಕ್ಷಣೆಯನ್ನು ಪಡಕೊಂಡವರಾಗಿರಲಾಗಿ ಇನ್ನು ಮೇಲೆ ಧರ್ಮಶಾಸ್ತ್ರ ನಿಯಮಗಳ ಮೂಲಕ ನೀತಿವಂತರಾಗುವುದನ್ನು ಬಯಸು ವಂತಿಲ್ಲ; ಯಾಕೆಂದರೆ ಕ್ರಿಸ್ತನ ರಕ್ತದ ಮೂಲಕವಾಗಿ ನಾವು ನೀತಿವಂತರಾಗಿದ್ದೇವೆ. ನಾವು ಈಗ ನೂತನ ಸೃಷ್ಟಿಗಳಾಗಿ ಪರಲೋಕದಲ್ಲಿರುವ ನಮ್ಮ ತಂದೆಯನ್ನು ಮೆಚ್ಚಿಸಲು ಯತ್ನಿಸಬೇಕು, ಅಲ್ಲದೆ ವಂಶಪಾರಂಪರ್ಯವಾಗಿ ಬಂದ ಇಸ್ರಾಯೇಲ್ಯರಿಗೆ ನೀಡಿದಂಥ ಧರ್ಮಶಾಸ್ತ್ರವು ನಮಗೆ ದೇವರ ಚಿತ್ತದ ವಿಷಯವಾಗಿ ಏನಾದರೂ ಸ್ಪಷ್ಟವಾದ ವಿಚಾರಗಳನ್ನು ಒದಗಿಸಿದಲ್ಲಿ ಅದಕ್ಕೆ ಆನಂದಪಟ್ಟವರಾಗಿ ನಮ್ಮ ಶಕ್ತಿಯಾನುಸಾರ ಮಾಡಲು ಸಾಧ್ಯವಾದವುಗಳೆಲ್ಲವನ್ನು ಮಾಡುವವರಾಗಬೇಕು.

ಹೀಗೆ ನಾವು ದಶಾಜ್ಞೆಗಳ ಕಡೆಗೆ ಕಣ್ಣನ್ನು ಹೊರಳಿಸಿದಾಗ, "ಹೌದು, ಆ ನಿಯಮಗಳು ಪರಿಪೂರ್ಣವಾದವುಗಳು" ಎಂದು ಹೇಳುತ್ತೇವೆ. ಮತ್ತು ನಾವು ಅವುಗಳನ್ನು ಬಹು ನಿಕಟವಾಗಿ ಪರಿಶೀಲಿಸಿದಾಗ ಅವುಗಳ ಮಹತ್ವದ ಆಳವನ್ನು ಗ್ರಹಿಸುವವ–ರಾಗುತ್ತೇವೆ. ದೃಷ್ಟಾಂತವಾಗಿ ಹೇಳುವುದಾದರೆ, ಈ ಆಜ್ಞೆಗಳಲ್ಲಿ ಮೊದಲನೇ ಮತ್ತು ಎರಡನೆಯವುಗಳು ಯಾವುದೇ ಮೂರ್ತಿಯನ್ನು ಮಾಡಿಕೊಂಡು ಅದನ್ನು ಆರಾಧಿಸುವುದನ್ನು ಬಹಿಷ್ಕರಿಸಿರುವುದು ಮಾತ್ರವಲ್ಲದೆ ದೇವರನ್ನು ಬಿಟ್ಟು ಬೇರೆ ಯಾವುದನ್ನೂ ಆರಾಧಿಸುವುದನ್ನು ಹಾಗೆಯೇ ಬಹಿಷ್ಕರಿಸ–ಲಾಗಿರುವುದು. ಅದು ಹೆಂಡತಿ ಅಥವಾ ಮಕ್ಕಳು ಅಥವಾ ಧನ ಇಲ್ಲವೇ ತಮ್ಮನ್ನೇ, ಮುಂತಾದವುಗಳು ಆಗಿರಬಹುದು. ಇದನ್ನು ಸಬ್ಬತ್ ದಿನದ ವಿಷಯವಾದ ನಾಲ್ಕನೆಯ ಆಜ್ಞೆಗೆ ಅನ್ವಯಿಸಿದ್ದಲ್ಲಿ ಆ ಒಂದು ದಿನವನ್ನು ಆಚರಿಸುವ ಕಟ್ಟುಪಾಡು ತಮಗೆ ಇರುವುದಿಲ್ಲವೆಂಬುದನ್ನು ಆತ್ಮಿಕ ಇಸ್ರಾಯೇಲ್ಯರು ಗ್ರಹಿಸುವು–ದಾದರೂ ಈ ಆಜ್ಞೆಯಲ್ಲಿನ ಒಳಾರ್ಥ ಅಥವಾ ಉದ್ದೇಶ ಅಥವಾ ಗುರಿ ಇವುಗಳನ್ನು ತಿಳಿದುಕೊಂಡು ಈ ಒಳಾರ್ಥಗಳಿಗೆ ತಮ್ಮನ್ನು ಹೊಂದಿಸಿಕೊಂಡು ಅದರ ಅನುಸಾರವಾಗಿ ನಡೆಯಲು ಬಯಸು ವರು. ಈ ದಿನದ ಪಾಠವು ತೋರಿಸುವಂತೆ ಇಸ್ರಾಯೇಲ್ಯರು ಈ ಮೂರು ಆಜ್ಞೆಗಳ ಹೊರಗಣ ಅರ್ಥವನ್ನು ಮಾತ್ರ ಹಿಡಿದು ಕೊಂಡರು; ಆದರೆ ಅದರ ನಿಜವಾಗ ಒಳಾರ್ಥ ತಿಳಿಯುವುದನ್ನು ಪೂರ್ಣವಾಗಿ ಕಳೆದುಕೊಂಡುಬಿಟ್ಟರು ಮತ್ತು ಈ ದಿನದಲ್ಲಿನ ಕ್ರೈಸ್ತರಲ್ಲಿ ಹಲವರು ಹೀಗೆಯೇ ಕೇವಲ ಈ ಆಜ್ಞೆಯ ವಿಷಯ ವಾದ ಯೆಹೂದ್ಯರ ಅಭಿಪ್ರಾಯಗಳನ್ನು ಹಿಡಿದುಕೊಂಡು ಅದರ ನಿಜವಾದ ಒಳಾರ್ಥಉದ್ದೇಶಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿರುವರು.

## "ನಂಬಿರುವ ನಾವಾದರೋ ಆ (ಸಬ್ಬತ್ತೆಂಬ) ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ."

ಆತ್ಮಿಕ ಇಸ್ರಾಯೇಲ್ಯರಾದ ನಾವು ಕರ್ತನಾದ ಯೇಸುವನ್ನು ನಮ್ಮ ವಿಮೋಚಕನೂ, ನಮ್ಮ ದೋಷಗಳನ್ನು ಪರಿಹರಿಸಿ ನಮಗೆ ಜೀವ ಕೊಡುವವನೂ ಎಂದು ಅಂಗೀಕರಿಸಿ ಕೊಂಡ ಆ ಕೂಡಲೇ ನಂಬಿಕೆಯ ಮೂಲಕ ಸೇರುವ ಸಬ್ಬತ್ತೆಂಬ ವಿಶ್ರಾಂತಿಯ ನಿಜಾರ್ಥವನ್ನು ಅಪೋಸ್ತಲನು ಉಲ್ಲೇಖಿಸಿದ್ದಾನೆ. ನಾವು ನಂಬುವುದಕ್ಕೆ ಆರಂಭಿಸಿದ ಕೂಡಲೇ ಈ ವಿಶ್ರಾಂತಿಯಲ್ಲಿ ಸೇರಲು ಆರಂಭಿಸುತ್ತೇವೆ ಮತ್ತು ಆನಂತರ ನಾವು ಕರ್ತನಿಗೆ ನಂಬಿಗಸ್ತರಾಗಿದ್ದು ಆತನ ಪ್ರೀತಿಯಲ್ಲಿ ನೆಲೆಗೊಂಡಿದ್ದಲ್ಲಿ ನಮ್ಮ ಸಬ್ಬತ್ತು ಎಂದಿಗೂ ಕೊನೆಗೊಳ್ಳುವುದಿಲ್ಲ. "ನಂಬಿರುವ ನಾವಾದರೋ ಆ ವಿಶ್ರಾಂತಿಯಲ್ಲಿ ಸೇರುತ್ತಲೇ ಇದ್ದೇವೆ." – ಇಬ್ರಿಯ 4:3

ನಮ್ಮ ನಂಬಿಕೆಯ ವಿಷಯವಾದ ಪಾತಗಳ ಕಲಿಯು–ವಿಕೆಯು ವಾರದ ಎಲ್ಲಾ ದಿನಗಳಲ್ಲಿಯೂ ಮುಂದುವರಿಯಲ್ಪಡ–ಬೇಕು ಮತ್ತು ಹೀಗೆ ಆತ್ಮಿಕ ಇಸ್ರಾಯೇಲ್ಯರು ಪ್ರತಿದಿನವೂ ಸಬ್ಬತ್ತನ್ನು ಆಚರಿಸುವರು; ಅಂದರೆ ಕ್ರಿಸ್ತನು ಪೂರ್ಣಗೊಳಿಸಿದ ಕಾರ್ಯಗಳಲ್ಲಿ (ನಂಬಿ) ವಿಶ್ರಮಿಸುವುದು, (ರಕ್ಷಣೆಗಾಗಿ ಮಾಡುವ) ನಮ್ಮ ಎಲ್ಲಾ ಕಾರ್ಯಗಳಿಂದ ವಿಶ್ರಮಿಸುವುದು, ಮತ್ತು ನಮ್ಮನ್ನು ಧರ್ಮಶಾಸ್ತ್ರದ ಮೂಲಕವಾಗಿ ನೀತಿವಂತರನ್ನಾಗಿ ಮಾಡಿಕೊಳ್ಳುವ ಎಲ್ಲಾ ಪ್ರಯತ್ನಗಳಿಂದ ವಿಶ್ರಮಿಸಿಕೊಳ್ಳುವುದು. ನಮ್ಮ ಕರ್ತನು ಮಾಡಿದ ಸೇವೆಯು ಒಂದು ನಿರಂತರವಾದ ಸಬ್ಬತ್ತಿನ ವಿಷಯವಾಗಿತ್ತಲ್ಲವೇ? ಈ ದಿನಗಳಲ್ಲಿರುವ ಕರ್ತನ ಜನರು ನಂಬಿಕೆಯ ಮೂಲಕವಾಗಿ ಹೀಗೆಯೇ ಕರ್ತನಲ್ಲಿ ವಿಶ್ರಮಿಸುವವರಾಗಿ ನಮ್ಮನ್ನು ಲೋಕದಲ್ಲಿ ತನಗೆ ರಾಯಭಾರಿಗಳಾಗಿರಲು ಕಳುಹಿಸಿದಾತನ ಕಾರ್ಯಗಳನ್ನು ಮಾಡುವುದರಲ್ಲಿ ಸತತವಾಗಿ ಮುಂದುವರಿದು ಪ್ರತಿದಿನವನ್ನೂ ನಾವು ಹೀಗೆ ಸಬ್ಬತ್ ದಿನವನ್ನಾಗಿ ಮಾಡಿಕೊಳ್ಳಬೇಕಿರು–ವುದಲ್ಲವೇ? ಹೀಗೆ ಜೀವಿತದ ಎಲ್ಲಾ ಪರಿಶ್ರಮಗಳು ನಮಗಾಗಿ ಪ್ರತಿಷ್ಠಿತವನ್ನಾಗಿ ಮಾಡುತ್ತದೆ. ನಾವು ತಿನ್ನುವುದಾಗಲೀ ಇಲ್ಲವೇ ಕುಡಿಯುವುದಾಗಲೀ, ಉಜ್ಜಿ ಸ್ವಚ್ಛಮಾಡುವುದಾಗಲೀ ಇಲ್ಲವೇ ಕೆತ್ತುವುದಾಗಲೀ, ಬರೆಯುವುದಾಗಲೀ ಇಲ್ಲವೇ ಮಾತನಾಡುವು–ದಾಗಲೀ, ಮಲಗುವುದಾಗಲೀ ಇಲ್ಲವೇ ಏಳುವದಾಗಲೀ, ಇವೆಲ್ಲವುಗಳನ್ನು ನಾವು ದೇವರ ಮಹಿಮೆಗಾಗಿ ಮಾಡಬೇಕು. ಅಂದರೆ ಎಲ್ಲವನ್ನೂ ಆತನಿಗಾಗಿಯೋ ಎಂಬಂತೆ ಮಾಡುವುದು ಮತ್ತು ಇದನ್ನೆಲ್ಲಾ ಮಾಡುವಾಗ ನಮ್ಮ ಹೃದಯಗಳಲ್ಲಿ ಸಬ್ಬತ್ ವಿಶ್ರಾಂತಿಯನ್ನು ಕಾಪಾಡಿಕೊಂಡಿರುವುದು. ಇದು ದೇವರ ಪ್ರೀತಿ ಹಾಗೂ ಪರಿಪಾಲನೆಯಲ್ಲಿ ವಿಶ್ರಮಿಸಿಕೊಳ್ಳುವುದು; ಇದು ನಮ್ಮ ಕರ್ತನಾದ ಕ್ರಿಸ್ತ ಯೇಸುವಿಗೆ ಇರುವ ಸಂಬಂಧದ ಮೂಲಕವಾಗಿ ನಮಗೆ ಅನ್ವಯವಾಗುತ್ತದೆ.

## ಭಾನುವಾರವನ್ನು ಆಚರಿಸುವ ಔಚಿತ್ಯ

ಹೀಗಿರುವಲ್ಲಿ ಇಲ್ಲಿ ಏಳುವ ಪ್ರಶ್ನೆಯೆಂದರೆ: ನಿಜವಾದ ವಿಶ್ರಾಂತಿಯನ್ನು ಕಂಡವರಾಗಿ ಅದನ್ನು ಅನುಭವಿಸುತ್ತಿರುವ ಕರ್ತನ ಜನರು ಕ್ರೈಸ್ತರಾಜ್ಯಗಳು ನಾಗರೀಕರಿಗೆ ಕಾನೂನನ್ನಾಗಿ ಮಾಡಿರುವ ಸಬ್ಬತ್ತನ್ನಾಗಲೀ ಅಥವಾ ಭಾನುವಾರವನ್ನಾಗಲೀ ಆಚರಿಸಬೇಕೇ? ನಮ್ಮ ಉತ್ತರ, ಹೌದು! ಅದು ಈ ಮುಂದಿನ ಮೂರು ಕಾರಣಗಳಿಗಾಗಿ:

(1) ಕ್ರೈಸ್ತರಾಗಿ ನಮ್ಮ ಮನಃಸಾಕ್ಷಿಗೆ ವಿರೋಧವಾಗಿಲ್ಲದಿದ್ದಲ್ಲಿ ಮತ್ತು ಈ ಮನುಷ್ಯರ ಕಾನೂನುಗಳಲ್ಲಿನ ಈ ವಿಷಯಗಳು ನಮ್ಮ ಮನಃಸಾಕ್ಷಿಯನ್ನು ಸ್ಪಷ್ಟವಾಗಿ ಉಲ್ಲಂಘಿಸುವುದಿಲ್ಲವೋ, ಮನುಷ್ಯರು ಮಾಡಿರುವ ಈ ಎಲ್ಲಾ ಕಾನೂನು ಕಟ್ಟಳೆಗಳಿಗೆ ನಾವು ವಿಧೇಯರಾಗಬೇಕೆಂಬುದು ದೈವನಿಯಮ.

(2) ನಿಶ್ಚಯವಾಗಿ ಬೇರೆಯವರು ತಮ್ಮ ಪರಿಶ್ರಮಗಳಿಂದ ಏಳರಲ್ಲಿ ಒಂದು ದಿನ ವಿಶ್ರಮಿಸ ಸಮರ್ಥರಾದರೆ, ಕರ್ತನ ಜನರು ಹಾಗೆಯೇ ಮಾಡಲು ಸಮರ್ಥರು, ಹಾಗು ಲೋಕದವರಿ–ಗಿಂತಲೂ ನಿಜವಾಗಿ ಉತ್ತಮವಾಗಿ ಇವುಗಳನ್ನು ಉಪಯೋಗ ಮಾಡಿಕೊಳ್ಳಲು ಸಮರ್ಥರು, ಏಕೆಂದರೆ ದೇವರ ಮತ್ತು ಆತನ ವಾಕ್ಯಗಳ ವಿಷಯವಾಗಿ ನಮಗಿರುವ ಉತ್ತಮ ಪರಿಜ್ಞಾನದ ಕಾರಣ ನಾವು ಲೌಕಿಕ ಸಂಗತಿಗಳಿಂದ ತೆಗೆದುಕೊಳ್ಳುವ ಈ (ವಿಶ್ರಾಂತಿಯ) ಸಮಯವನ್ನು ಉತ್ತಮವಾಗಿಯೂ ವಿವೇಕಯುಕ್ತವಾಗಿಯೂ ಉಪಯೋಗಿಸಲು ನಮಗೆ ಸಾಧ್ಯ.

(3) ಲೋಕದ ಅಂದರೆ ಹೆಸರಿಗಾಗಿರುವ ಕ್ರೈಸ್ತರಾಜ್ಯಗಳು ಈ ವಿಷಯದಲ್ಲಿ ತಪ್ಪನ್ನು ಮಾಡಿದವರಾಗಿ ಏಳರಲ್ಲಿ ಒಂದು ದಿನವನ್ನು ಧಾರ್ಮಿಕವಾಗಿ ವಿಶ್ರಾಂತಿ ದಿನವನ್ನಾಗಿ ಆಚರಿಸುವ ಯೆಹೂದ್ಯರ ಧರ್ಮಶಾಸ್ತ್ರ ನಿಯಮವು ತಮಗೂ ಆಚರಿಸುವ ಹೊಣೆಯಿರುವುದೆಂಬ ಅಂಶದಿಂದ ಆತ್ಮಿಕ ಇಸ್ರಾಯೇಲ್ಯರು ಅಧಿಕವಾಗಿ ಲಾಭಪಡೆದಿರುವರು. ಹೀಗೆ ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಎಲ್ಲಾ ಕಾರ್ಯಗಳು, ಅಂದರೆ ಲೋಕದವರಲ್ಲಿನ ತಪ್ಪುಗಳು ಹಾಗೂ ಅಜ್ಞಾನಗಳೂ ಸಹ, ಅನುಕೂಲವಾಗುತ್ತವೆ.

ತಮ್ಮ ಶಾರೀರಿಕ ಪರಿಶ್ರಮಗಳಿಂದ ವಿಶೇಷವಾಗಿ ವಿಶ್ರಮಿಸುವುದು ಹಾಗೂ ಅದನ್ನು ಪ್ರಮುಖವಾಗಿ ಆತ್ಮಿಕ ಕಾರ್ಯಗಳನ್ನು ಮಾಡುವುದರಲ್ಲಿಯೂ ಅವುಗಳಲ್ಲಿ ಆನಂದಿಸುವುದರಲ್ಲಿಯೂ ಹಾಗು ಅದರಿಂದ ಪುನಶ್ಚೇತನ–ಗೊಳ್ಳುವದರಲ್ಲಿಯೂ ತೊಡಗಿಸಿಕೊಳ್ಳಲು ಅನುಕೂಲವಿರುವ ಈ ಸೌಕರ್ಯಗಳನ್ನು ಉಪಯೋಗಿಸಿ ಆನಂದಿಸುವುದು ಮಾತ್ರವಲ್ಲದೆ ಇದಕ್ಕೂ ಮಿಗಿಲಾಗಿ ಲೋಕವು ತಮ್ಮನ್ನು ಗಮನಿಸುತ್ತಿರುವುದನ್ನೂ ಹಾಗೂ ದೈವವಿಧಿಯ ಬೆಂಬಲ–ವಿರುದೆಂದು ಲೋಕದವರು ಭಾವಿಸುವ ಈ ನಾಗರಿಕ ಕಾನೂನು ಕಟ್ಟಳೆಗಳನ್ನು ಉಲ್ಲಂಘಿಸುವುದರ ಮೂಲಕ ಒಳ್ಳೆಯ ವಿಷಯಗಳ ಕಡೆಗಿರುವ ತಮ್ಮ ಪ್ರಭಾವಗಳಲ್ಲಿ ಅವರು ವಿಶೇಷವಾಗಿ ಹಸ್ತಕ್ಷೇಪ ಮಾಡಲು ಕಾರಣವಾಗುತ್ತದೆಂಬುದನ್ನು ಗ್ರಹಿಸುವವರಾಗಬೇಕು. ಆದುದರಿಂದ ಆತ್ಮಿಕ ಇಸ್ರಾಯೇಲ್ಯರೆಲ್ಲರಿಗೆ ನಮ್ಮ ಬುದ್ಧಿಮಾತೇನೆಂದರೆ, ಅತ್ಯಗತ್ಯವಾದ ಹಾಗೂ ಕರುಣೆಯ ದೃಷ್ಟಿಯಿಂದ ಅಗತ್ಯವಿರುವ ಕೆಲಸಗಳನ್ನು ಹೊರತು ಪಡಿಸಿ ಬೇರೆ ಎಲ್ಲಾ ಕೆಲಸಗಳನ್ನು ನಿಲ್ಲಿಸಿ ಅವರು ಭಾನುವಾರವನ್ನು ಸಬ್ಬತ್ತನ್ನಾಗಿ ಉಳಿದ ತಮ್ಮ ನೆರೆಹೊರೆಯವರು ಆಚರಿಸುವುದಕ್ಕಿಂತಲೂ ಬಹು ಕಟ್ಟುನಿಟ್ಟಾಗಿ ಅಥವಾ ಅದಕ್ಕಿಂತಲೂ ಹೆಚ್ಚು ಕಟ್ಟುನಿಟ್ಟಾಗಿ ಆಚರಿಸುವವರಾಗಬೇಕು; ಹೀಗೆ ಈ ಅಮೂಲ್ಯವಾದ ದಿನವು ಕರ್ತನಿಂದ ಬಂದ ಒಂದು ವರದಾನವಾಗಿ (ಕ್ರಿಸ್ತನ) ಕೃಪೆಯಲ್ಲಿಯೂ ಪರಿಜ್ಞಾನದಲ್ಲಿಯೂ ಪ್ರೀತಿಯಲ್ಲಿಯೂ ಅಭಿವೃದ್ಧಿ ಹೊಂದಲು ಒಂದು ವಿಶೇಷ ಸವಲತ್ತಿನಿಂದ ಕೂಡಿದ ಅವಕಾಶವಾಗುವದು. ನಮ್ಮ ಮನೆಗಳು ವಿಶ್ರಾಂತಿಗೆ ನೇಮಕವಾದ ದಿನಗಳಲ್ಲಿ ನಾಗರಿಕ ಜಗತ್ತಿನಲ್ಲೆಲ್ಲಾ ಬಹು ಪ್ರಶಾಂತವಾಗಿರಲಿ, ನಮ್ಮ ವಾಸಸ್ಥಳಗಳಲ್ಲಿ ಕೈಗೆಲಸದ ಯಾವ ಸದ್ದುಗದ್ದಲಗಳಾಗಲೀ ಪ್ರಾಪಂಚಿಕವಾದ ಉಲ್ಲಾಸ ಧ್ವನಿಗಳಾಗಲೀ ಕೇಳಿಸದೇ ಇರಲಿ; ಆದರೆ ನಿರೀಕ್ಷೆ ಪ್ರೀತಿ ಹಾಗೂ ನಂಬಿಕೆಯ ಸಂಬಂಧವಾದ ನಮ್ಮ ಆನಂದಿಸುವಿಕೆಗಳು ಯತೇಚ್ಛವಾಗಿರಲಿ, ನಮ್ಮ ಹೃದಯದ ಉಲ್ಲಾಸವು ಹರ್ಷಭರಿತವಾದ ಮಾತುಗಳಿಂದಲೂ ಸ್ವರಗಳಿಂದಲೂ ನೋಟಗಳಿಂದಲೂ ತೋರ್ಪಡಲಿ, ಹೀಗೆ ನಮ್ಮ ಸೌಮ್ಯಭಾವಗಳು ಕರ್ತನಲ್ಲಿರುವ ನಮ್ಮ ಸಂತೋಷ ಸಹಿತವಾಗಿ ನಮ್ಮೊಡನೆ ಬಳಕೆಯಲ್ಲಿರುವ ಎಲ್ಲರಿಗೂ ತೋರ್ಪಡುವಂತಾಗಲಿ;

ಆಗ ನಾವು ಯೇಸುವಿನೊಡನೆ ಇದ್ದು ಆತನಿಂದ ಕಲಿತವರೆಂದು ಅವರಿಗೆ ತಿಳಿದುಬರುವುದು. (ಅ.ಕೃ 4:13) ಕೆಲವು ದಿನಗಳಲ್ಲಿ ನಶಿಸಿಹೋಗುವ ಆಹಾರಕ್ಕಾಗಿ ನಾವು ದುಡಿಯುವುದು ಅಗತ್ಯವಾದರೂ ನಮ್ಮ ಹೃದಯಗಳು ಸಬ್ಬತ್ ದಿನಕ್ಕೆ ಒಡೆಯನಾಗಿರುವ ಶ್ರೇಷ್ಠನಾದ ಕರ್ತನಲ್ಲಿಯೂ ಆತನು ನೆರವೇರಿಸಿ ಪೂರ್ಣಗೊಳಿಸಿದ ಕಾರ್ಯಗಳಲ್ಲಿಯೂ ವಿಶ್ರಮಿಸುವವರಾಗಿದ್ದು, ನಮ್ಮ ದೃಷ್ಟಿಯಲ್ಲಿ ಹೀಗೆ ಪ್ರತಿಯೊಂದು ದಿನವೂ ನಂಬಿಕೆಯ ಮೂಲಕವಾಗಿ ವಿಶ್ರಮಿಸುವ ಸಬ್ಬತ್ ದಿನವಾಗಿರುವುದೆಂದು ನಮ್ಮ ಬಹು ಸನಿಹದ ಒಡನಾಟವಿರುವ ನೆರೆಯವರು ಹಾಗು ಮಿತ್ರರಿಗೆ ಅದನ್ನು ವಿವರಿಸಿ ಹೇಳಬಹುದು.

ಇಂದು ಇರುವ ನಾವುಗಳು ಯೆಹೂದ್ಯರಿಗೆ ಸೂಕ್ತವಾಗಿಯೂ ಅವಶ್ಯವಾಗಿಯೂ ಇರುವ ಅವರ ಎಲ್ಲಾ ನೇಮವಿಧಿಗಳನ್ನು ಬಾಹ್ಯರೂಪದಲ್ಲಿ ಆಚರಿಸಲು ಯತ್ನಿಸ-ಬೇಕೆಂಬುದನ್ನು ಇದು ಸೂಚಿಸುವುದಿಲ್ಲ. ದೃಷ್ಟಾಂತವಾಗಿ ಹೇಳವುದಾದರೆ, ರಸ್ತೆ ಸಾರಿಗೆ ವಾಹನದ ಕಾರ್ಯವನ್ನು ನಿರ್ವಹಿಸುವುದು ನಾಲ್ಕನೆಯ ದಶಾಜ್ಞೆಯ ಉಲ್ಲಂಘನೆ-ಯಾಗುತ್ತದೆಂಬುದರಲ್ಲಿ ಸಂಶಯವಿಲ್ಲ; ಯೆಹೂದ್ಯರ ನೇಮ-ವಿಧಿಗಳ ಅಧಿಕಾರಕ್ಕೆ ನಾವುಗಳು ಒಳಗಾಗಿದ್ದಲ್ಲಿ ರಸ್ತೆ ಸಾರಿಗೆ ವಾಹನವನ್ನು ನಡೆಸುವುದಕ್ಕಿಂತಲೂ ಅದರಲ್ಲಿ ಪ್ರಯಾಣಿಸು-ವುದೂ ನಮಗೆ ಪೂರ್ಣವಾಗಿ ಅನುಚಿತಕರವೂ ಪಾಪಕರವೂ ಆಗಿರುತ್ತಿತ್ತು. ನಾವು ಧರ್ಮಶಾಸ್ತ್ರಕ್ಕೆ ಅಧೀನರಾಗದೆ ಕೃಪೆಗೆ ಆಧೀನರಾಗಿರುವುದರಿಂದಲೂ ಹಾಗೂ ಭಾನುವಾರದಲ್ಲಿ ಪ್ರಯಾಣಿಸುವುದು ನಾಗರಿಕ ಕಾನೂನಲ್ಲಿ ನಿಷೇಧಿಸಿಲ್ಲ-ವಾದ್ದರಿಂದಲೂ ಇಲ್ಲವೇ ಅದು ಕೆಟ್ಟದ್ದೆಂದು ನಮ್ಮ ಸಂಗಡಿಗರು ಎಣಿಸದಿರುವುದರಿಂದಲೂ ಈ ಸಂಗತಿ ಹಾಗೂ ಇಂಥದ್ದೇ ಸಂಗತಿಗಳ ಸೂಕ್ತವಾದ ಉಪಯೋಗ ಮಾಡಿಕೊಳ್ಳಬಾರದು ಮತ್ತು ಸಬ್ಬತ್ತಿನಲ್ಲಿ ಸಾರಿಗೆ ಸೌಕರ್ಯದಿಂದ ಪ್ರಯೋಜನ ಪಡೆಯಬಾರದು ಎಂಬುದಕ್ಕೆ ನಮಗೆ ಯಾವ ಕಾರಣವೂ ಇರುವುದಿಲ್ಲ.

## ಫರಿಸಾಯರ ರೀತಿಯ ಸಬ್ಬತ್

ನಮ್ಮ ಪಾಠದ ವಿಷಯವು ಯೆಹೂದ್ಯರ ಧರ್ಮಶಾಸ್ತ್ರ ನಿಯಮವನ್ನು ಪಾಲಿಸಬೇಕಿದ್ದ ಅಂದಿನ ಸಮಯಕ್ಕೆ ಅನ್ವಯಿಸುವದಾಗಿದ್ದು, ಅಲ್ಲಿಯೂ ನಾಲ್ಕನೇ ದಶಾಜ್ಞೆಯ ಸರಿಯಾಗಿಯೂ ನಿಜವಾಗಿಯೂ ಸೂಕ್ತವಾದ ವ್ಯಾಖ್ಯಾನವು ಬಹು ಹೆಚ್ಚಾಗಿ ನಾವು ಗಮನಿಸಿ ಹೇಳಿರುವ ರೀತಿಯಲ್ಲೇ ಇರುವುದಾಗಿಯೂ ಇದ್ದು, ಅದು ಇಂದಿನ ಯೆಹೂದ್ಯ ಬೋಧಕರು ಅರ್ಥೈಸಿ ಹೇಳಿರುವ ವಿಪರೀತವಾದ ರೀತಿಯ ಆಚರಣೆಯಂಥದಲ್ಲವೆಂದು ನಮಗೆ ತೋರಿಬಂದಿರುವುದು. ಆಗಿನವುಗಳಿಗೆ ಮತ್ತು ಈಗಿನವುಗಳಿಗೆ ಇರುವ ವ್ಯತ್ಯಾಸವೆಂದರೆ, ಧರ್ಮಶಾಸ್ತ್ರದ ನಿಯಮದ ಅಧೀನದಲ್ಲಿದ್ದ ಯೆಹೂದ್ಯರಿಗೆ ಸಬ್ಬತ್ತಿನಲ್ಲಿ ಲೌಕಿಕ ಸಂಬಂಧದ ಕಾರ್ಯಗಳನ್ನು ಮಾಡುವುದು ನಿಷೇಧವಾಗಿತ್ತು, ನಮಗಾದರೋ ಲೌಕಿಕ ನೇಮಾಚಾರಗಳು ಆಜ್ಞೆಯಾಗಿ ಹೇಳದೆ ಮಿತಿಗೊಳಿಸಿರುವ ಕಾರ್ಯಗಳ ಹೊರತು, ಅಂಥ ನಿಷೇಧವೇನೂ ಇರುವುದಿಲ್ಲ. ನಾವು ಆತ್ಮಿಕ ಸಂಬಂಧವಾಗಿ ದೊರೆತಿರುವ ಸವಲತ್ತುಗಳನ್ನು ಹೆಚ್ಚು ಪೂರ್ಣವಾಗಿ ಬಳಸಿಕೊಳ್ಳಲು ಪ್ರಾಪಂಚಿಕ ಪರಿಶ್ರಮಗಳಿಂದ ದೂರವಿರಲು ಹರ್ಷಿಸುತ್ತೇವೆ.

ಯೇಸು ಮತ್ತು ಆತನ ಶಿಷ್ಯರು ಗೋದಿಯ ಹೊಲದ ಮಧ್ಯದಲ್ಲಿ (ಹಳೆಯ ಇಂಗ್ಲೀಷ್ ಭಾಷೆಯಲ್ಲಿ ಕರೆಯಲ್ಪಡುವ ದಾನ್ಯ ಬೆಳೆಯುವ ಒಂದು ಹೊಲ) ಜನರು ಹಾದು ಹೋಗುವ ಕಾಲುದಾರಿಯಲ್ಲಿದ್ದುದನ್ನು ನಮ್ಮ ಪಾಠವು ಚಿತ್ರಿಸುತ್ತದೆ. ಗೋದಿಯ ಕಾಳು ಬಲಿತದ್ದಾಗಿಯೋ ಅಥವಾ ಸ್ವಲ್ಪ ಬಲಿತದ್ದಾಗಿಯೋ ಇರಲು ಆ ಶಿಷ್ಯರು ಹಸಿದವರಾಗಿ ತೆನೆಯಲ್ಲಿರುವ ಕೆಲವನ್ನು ಕಿತ್ತುಕೊಂಡು ತಿನ್ನುವ ಸಲುವಾಗಿ ಅದರ ಹೊಟ್ಟನ್ನು ತೆಗೆಯಲು ಕೈಯಿಂದ ಹೊಸಕುತ್ತಿದ್ದರು. ಫರಿಸಾಯರು ದೇವರ ಆಜ್ಞೆಯ ತಿರುಳನ್ನು ಅರಿಯುವುದರ ಬದಲು ಅದರ ಹೊರ ಕವಚವನ್ನು ಗಮನಿಸುವವರಾಗಿದ್ದು, ಅವುಗಳ ನಿಜಭಾವ ಅಥವಾ ಒಳಾರ್ಥಗಳನ್ನು ಪೂರ್ಣವಾಗಿ ಅಲಕ್ಷಿಸುವವರಾಗಿ ಬಾಹ್ಯಾಚಾರಗಳಿಗೆ ಹೆಚ್ಚು ಗಮನ ಕೊಡುವವರಾಗಿದ್ದರು. ಅಲ್ಲಿ ಅವರು ಯೇಸುವಿನ ಶಿಷ್ಯರು ನಿಯಮ ಮೀರುವವರೆನ್ನುವದಕ್ಕೂ ಹಾಗು ಯೇಸುವು ಅವರ ಬೋಧಕನಾಗಿ ಇದಕ್ಕೆ ಅವರನ್ನು ಖಂಡಿಸಲಿಲ್ಲವಾದ್ದರಿಂದ ಅತನೂ ಇವರಿಗಿಂತ ಹೆಚ್ಚಿನವನಲ್ಲವೆಂಬುದಕ್ಕೆ ಗಮನ ಸೆಳೆದು ತಮ್ಮ ಧಾರ್ಮಿಕ ಶ್ರದ್ಧೆಯನ್ನು ಆಡಂಬರವಾಗಿ ತೋರಿಸಲು ಒಂದು ಅವಕಾಶವನ್ನು ಕಂಡೆವೆಂದು ಭಾವಿಸಿದ್ದರು. ಈ ನಮ್ಮ ದಿನಗಳಲ್ಲಿಯೂ ಇದೇ ಮನೋಭಾವವನ್ನು ನಾವು ಆಗಾಗ್ಗೆ ನೋಡುತ್ತೇವೆ. ಈ ದಿನಗಳಲ್ಲಿ ಕೆಲವರು ಸಬ್ಬತ್ ದಿನದಲ್ಲಿ ಸಾರಿಗೆ ವಾಹನದಲ್ಲಿ ಪ್ರಯಾಣಿಸಬಾರದೆಂಬುದಕ್ಕೆ ಕಟ್ಟುನಿಟ್ಟಾಗಿ ಜಾಗರೂಕರಾಗಿರುವರಾದರೂ ತಮ್ಮ ಮನಸ್ಸುಗಳನ್ನು ಪ್ರಾಪಂಚಿಕವಾದ ಮಾತ್ರವಲ್ಲದೆ ಇನ್ನೂ ಕೀಳಾದ ವಿಷಯಗಳಲ್ಲಿ ಅಂದರೆ ಕೆಟ್ಟದ್ದವುಗಳಲ್ಲಿ ಬಹುಶಃ ಮಾರನೆಯ ದಿನ ತಮ್ಮ ನೆರೆಯವರಿಂದ ಹೇಗೆ (ಸ್ವಾರ್ಥ) ಲಾಭ ಪಡೆಯಬಹುದೆಂಬ ವಿಷಯಗಳಲ್ಲಿ ಹರಿದಾಡಲು ಬಿಡದಿರುವಲ್ಲಿ ಅಷ್ಟು ಜಾಗರೂಕರಾಗಿರುವುದಿಲ್ಲ. ಇದು ಕಪಟ, ದೇವರ ದೃಷ್ಟಿಯಲ್ಲಿ ಅತಿ ಘೋರವಾದ ಪಾಪ.

ಯೆಹೂದ್ಯರು ದೇವರ ಮತ್ತು ಮನುಷ್ಯರ ಸಂಬಂಧದ ಧರ್ಮಶಾಸ್ತ್ರ ನಿಯಮಗಳ ನಿಜವಾದ ಸಾರಾಂಶ ಹಾಗೂ ಭಾವಾರ್ಥಗಳನ್ನು ಅಲಕ್ಷಿಸುವವರಾಗಿ, ಅದರ ಅಲ್ಪವಾದ ಹಾಗೂ ಪ್ರಾಮುಖ್ಯವಲ್ಲದ ವಿಷಯಗಳನ್ನು ಉತ್ಪ್ರೇಕ್ಷಿಸಿ ಹೇಗೆ ದೊಡ್ಡದನ್ನಾಗಿ ಮಾಡಿಕೊಂಡಿರುವರು ಎಂಬುದು ನಿಜವಾಗಿಯೂ ಹಾಸ್ಯಾಸ್ಪದವಾಗಿದೆ. ಉದಾಹರಣೆಯಾಗಿ ಹೇಳುವುದಾದರೆ: ಒಬ್ಬ ವ್ಯಕ್ತಿಯ ಮುಖದ ಮೇಲಿರುವ ನೊಣವನ್ನು ಹಿಡಿಯುವುದು, ಧರ್ಮಬೋಧಕರಾದ ರಬ್ಬಿಗಳು ನಿರ್ಣಯಿಸಿರುವ ಪ್ರಕಾರ, ಬೇಟೆಯಾಡಿದಂತೆ ಆಗುತ್ತದೆ; ಆದುದರಿಂದ ಅದನ್ನು ಸಬ್ಬತ್ ದಿನದಲ್ಲಿ ನಿಷೇಧಿಸಲಾಗಿತ್ತು. ಎರಡು ಕೈಗಳಿಂದ ಕಾಳನ್ನು ಹೊಸಕಿ ಅದರ ಹೊಟ್ಟನ್ನು ಊದುವುದು, ತೆನೆಯನ್ನು ಒಕ್ಕಿ ಹೊಟ್ಟನ್ನು ತೂರಿ ಕಾಳನ್ನು

ಬೇರ್ಪಡಿಸಿದಂತಾಗುತ್ತದೆ; ಅದುದರಿಂದ ಅದು ಸಬ್ಬತ್ ವಿಶ್ರಾಂತಿಯ ಉಲ್ಲಂಘನೆಯಾಗಿತ್ತು. ನಮ್ಮ ಕರ್ತನು ಈ ಆಕ್ಷೇಪಣೆಯನ್ನು ಒಪ್ಪಲಿಲ್ಲ, ಆದರೆ ತನ್ನ ಶಿಷ್ಯರು ಹೀಗೆ ಮಾಡಿದ್ದಕ್ಕೆ ತನ್ನ ಒಪ್ಪಿಗೆಯಿರುವುದು ಮಾತ್ರವಲ್ಲದೆ ಫರಿಸಾಯರು ಮಾನ್ಯ ಮಾಡಿರುವಂತೆ ಇತರರು ಅನುಸರಿಸುವ ಕ್ರಮಾನುಸಾರ ಇವರು (ಶಿಷ್ಯರು) ಹೀಗೆ ಮಾಡುವುದಕ್ಕೆ ಪೂರ್ಣವಾಗಿ ನ್ಯಾಯಸಮ್ಮತರು ಎಂಬುದನ್ನು ಬದಲಾಗಿ ತೋರಿಸಿಕೊಟ್ಟನು. ಯಾವುದು ಅತ್ಯಗತ್ಯ ಹಾಗೂ ಕರುಣೆಯೆಂದು ಎನ್ನಿಸಿಕೊಳ್ಳುತ್ತದೆಂಬುದಕ್ಕೆ ನಮ್ಮ ಕರ್ತನು ಕೊಟ್ಟ ನಿದರ್ಶನವೆಂದರೆ ಸತ್ಯವೇದದಲ್ಲಿ ನಿರೂಪಿಸಿ ಹೇಳಿರುವಂತೆ ಯಾಜಕರು ಮಾತ್ರ ತಿನ್ನಲು ಮಾನ್ಯವಾದ ನೈವೇದ್ಯದ ರೊಟ್ಟಿಗಳನ್ನು ದಾವೀದನು ತನ್ನ ಹಸಿವಿನ ಕಾರಣದಿಂದ ತಿಂದಿದ್ದ ಸಂಗತಿ ಹಾಗೂ ದೇವಾಲಯದಲ್ಲಿ ಯಾಜಕರು ಮತ್ತು ಲೇವಿಯರು ಸಬ್ಬತ್ತಿನಲ್ಲಿ ಆರಾಧನೆಯ ಸಂಬಂಧವಾಗಿ ನಡೆಸುವ ಪರಿಶ್ರಮ ಕಾರ್ಯಗಳ ಸಂಗತಿ. ನಮ್ಮ ಕರ್ತನು ಮಾನ್ಯವಾಗಿರುವ ಈ ಸಂಗತಿಗಳನ್ನು ತಾರ್ಕಿಕವಾಗಿ ತೆಗೆದುಕೊಂಡು ಸಬ್ಬತ್ ಆಚರಣೆಯನ್ನು ನಿಬಂಧಿಸುತ್ತಿರುವ ಸರಿಯಾದ ಮೂಲ ತತ್ವಗಳನ್ನು ತೋರಿಸಿಕೊಟ್ಟನು. ಸಬ್ಬತ್ ದಿನದಲ್ಲಿ ಕೊಯ್ಲು ಮಾಡುವುದು ಒಕ್ಕುವುದು ತೂರುವುದು ನ್ಯಾಯಸಮ್ಮತವೆಂದು ಅತನು ಹೇಳಲಿಲ್ಲ; ಆತನ ವಾದವೆಂದರೆ, ಶಿಷ್ಯರು ತಮ್ಮ ಹಸಿವನ್ನು ತೀರಿಸಿಕೊಂಡದ್ದರಲ್ಲಿ ಸಬ್ಬತ್ ನಿಯಮವನ್ನು ಉಲ್ಲಂಘಿಸಿ ಅಪರಾದಿಗಳಾದರೆಂದು ಧರ್ಮಶಾಸ್ತ್ರ ನಿಯಮಗಳ ವಿಷಯವಾಗಿ ಈ ವಿಧವಾದ ವ್ಯಾಖ್ಯಾನ ಮಾಡಿ ಅವುಗಳನ್ನು ಅರ್ಥೈಸಬಾರದೆಂಬುದು.

## “ಸಬ್ಬತ್ ದಿನಕ್ಕೆ ಸಹ ಒಡೆಯನು”

ಆದರೆ ತಮ್ಮ ನಿಲುವು ಶಾಸ್ತ್ರವಚನಗಳ ಪ್ರಕಾರ ಸಮರ್ಥನೀಯವಲ್ಲವೆಂದು ಅವರಿಗೆ ಮನದಟ್ಟು ಮಾಡಿಕೊಟ್ಟ ನಂತರ ನಮ್ಮ ಕರ್ತನು ಧರ್ಮಶಾಸ್ತ್ರದ ನಿಯಮಗಳ ಒಬ್ಬ ವ್ಯಾಖ್ಯಾನಕಾರನಾಗಿ ತನ್ನ ಅಧಿಕಾರವನ್ನು ಸಮರ್ಥಿಸಿಕೊಂಡು ಅವರಿಗೆ ಹೀಗೆ ಹೇಳಿದನು, “ಆದರೆ ಇಲ್ಲಿ ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆಂದು ನಿಮಗೆ ಹೇಳುತ್ತೇನೆ.” ಸಬ್ಬತ್ ದಿನದಲ್ಲಿ ಲೇವಿಯರಿಗೆ ದೇವಾಲಯದಲ್ಲಿ ಸೇವೆಮಾಡುವುದು ಸಮಂಜಸವಾದುದಾದರೆ, ಯೇಸುವು ದೇವರ ಮಗನೂ, ದೇವರಿಗೆ ಬಾಯಿಯೂ ಆಗಿರಲಾಗಿ ದೇವಾಲಯಕ್ಕಿಂತಲೂ ಹೆಚ್ಚಿನವನಾಗಿದ್ದನು ಮತ್ತು ಆದುದರಿಂದ ಆತನ ಶಿಷ್ಯರು ತನ್ನ ಸೇವೆಯಲ್ಲಿ ಏನು ಮಾಡಿದರೂ ಅದಕ್ಕೆ ಆತನ ಮನ್ನಣೆಯನ್ನು ಪಡೆದು ಸುರಕ್ಷಿತರಾಗಿ ಸಮಾಧಾನದಿಂದಿರಬಹುದು. ಇಂಥಹ ಒಂದು ಹೇಳಿಕೆಯನ್ನು ತನ್ನ ವೈರಿಗಳ ಎದುರಲ್ಲಿ ನೀಡಿ ಅವರ ಸವಾಲುಗಳೇ ಇಲ್ಲದಂತೆ ಮಾಡಿದ ನಮ್ಮ ಕರ್ತನು ಎಂಥ ಒಂದು ವ್ಯಕ್ತಿತ್ವವುಳ್ಳವನಾಗಿರಬೇಕು! ಆತನು ಮಾತನಾಡಿದಂತೆ ಬೇರೆ ಯಾವ ಮನುಷ್ಯನೂ ಮಾತನಾಡದಿದ್ದುದು ಮಾತ್ರವಲ್ಲದೆ ಆತನು ನೋಟಕ್ಕೆ ಸಹ (ಪರಿಪೂರ್ಣತೆಯಿಂದ) ಬಿದ್ದು ಹೋದ ಮನುಕುಲದ ಸದಸ್ಯರಿಗಿಂತಲೂ ಉತ್ಕೃಷ್ಟವಾಗಿದ್ದಿರಬೇಕೆಂಬುದು ನಮಗೆ ಮನದಟ್ಟಾಗಿರುವುದು.

ಆತನ ಹೇಳಿಕೆಯನ್ನು (ವಚನ 8) ಮತ್ತೆ ಗಮನಿಸಿ, “ಮನುಷ್ಯ ಕುಮಾರನು ಸಬ್ಬತ್ ದಿನಕ್ಕೆ ಒಡೆಯನೂ ಆಗಿದ್ದಾನೆ.” ಸಬ್ಬತ್ ದಿನದ ಒಡೆಯನಾಗಿಯೂ ಮಹಾ ಬೋಧಕನಾಗಿಯೂ ಆತನು ಧರ್ಮಶಾಸ್ತ್ರದ ಈ ನಿಯಮವನ್ನು ನೆರವೇರಿಸದೇ ಹೊರತು ಈ ನಿಯಮದ ಮುಖ್ಯಲಕ್ಷಣವನ್ನು ಶಿಲುಬೆಗೆ ಜಡಿದು ಅದನ್ನು ರದ್ದುಗೊಳಿಸುವ ಹಕ್ಕು ನಿಜವಾಗಿಯೂ ಇರಲಿಲ್ಲ. ಆದರೆ ಸಬ್ಬತ್ ದಿನದ ಒಡೆಯನಾಗಿರಲಾಗಿ ಆತನು ಯೆಹೂದ್ಯರಿಗೆ ಇದರ ನಿಜವಾದ ಮಹತ್ವವನ್ನು ಪ್ರತಿಪಾದಿಸಿ ಹೇಳಲು ಯೋಗ್ಯನಾದ ಬೋಧಕನಾಗಿದ್ದನು. ದೇವರು ಪ್ರವಾದಿಗಳ ಮೂಲಕವಾಗಿ ನೀಡಿರುವ ಈ ಸಾಕ್ಷಿಯ ಕಡೆಗೆ ತನ್ನನ್ನು ಟೀಕೆಮಾಡುವವರ ಗಮನ ಸೆಳೆದನು: “ನನಗೆ ಯಜ್ಞವು ಬೇಡ, ಕರುಣೆಯೇ ಬೇಕು;” (ಹೊಶೇಯ 6:6) ಅವರು ಈ ಆದೇಶಕ್ಕೆ ಲಕ್ಷ್ಯಕೊಟ್ಟಿದ್ದೇಯಾದರೆ ಅವರ ಆಲೋಚನೆಗಳು ಹೆಚ್ಚು ಕನಿಕರವುಳ್ಳದ್ದಾಗಿ ದೇವರ ಈ ಮನೋಭಾವಕ್ಕೆ ಹೆಚ್ಚು ಹೊಂದಿಕೊಂಡಂತೆ ಇರುತ್ತಿದ್ದರು ಮತ್ತು ಇವುಗಳು ಅವರನ್ನು ತನ್ನ ಶಿಷ್ಯರನ್ನು ನಿಂದಿಸದಂತೆ ತಡೆಯುತ್ತಿದ್ದವೆಂದು ನಮ್ಮ ಕರ್ತನು ಸಾರಿ ಹೇಳಿದನು. ಶಿಷ್ಯರು ಸಬ್ಬತ್ ದಿನದ ನಿಯಮವನ್ನು ಯಾವ ವಿಧವಾಗಿಯೂ ಉಲ್ಲಂಘನೆಮಾಡಿದುದರ ದೋಷದಿಂದ ಪೂರ್ಣವಾಗಿ ಮುಕ್ತರಾಗಿದ್ದರೆಂದು ಕರ್ತನು ಸಾರಿ ಹೇಳಿದ್ದನು.

ಹೀಗೆಯೇ ಹಲವು ವಿಮರ್ಶಕರ ಹಾಗೂ ತಪ್ಪು ಹುಡುಕುವವರಲ್ಲಿರುವ ದೊಡ್ಡ ನ್ಯೂನ್ಯತೆಯೆಂದರೆ ಅದು ಕರುಣೆಯ  ಕೊರತೆ, ಪ್ರೀತಿಯ ಕೊರತೆ. ಪ್ರೀತಿಯು ಧರ್ಮಶಾಸ್ತ್ರ ನಿಯಮಗಳನ್ನು ನೆರವೇರಿಸುತ್ತದೆ ಮತ್ತು ಯಾವನು ಇದನ್ನು ಅತಿ ಹೆಚ್ಚಾಗಿ ಪಡೆದಿರುವನೋ ಅವನು ಈ ಗುಣಮಟ್ಟದ ಅತಿ ಸಮೀಪಕ್ಕೆ ಬರುವನು. ನಮ್ಮ ಸ್ನೇಹಿತರು, ನಮ್ಮ ಸಹೋದರರು, ಲೋಕದವರು, ನಮ್ಮ ಶತ್ರುಗಳು ಇವರ ಕಡೆಗಿರುವ ನಮ್ಮ ಕರುಣಾಭಾವದ  ಮೂಲಕ ನಮ್ಮಲ್ಲಿರುವ ಪ್ರೀತಿಯು ಯಾವಾಗಲೂ ಸೂಚಿತವಾಗುತ್ತದೆ. ಸಭಾಮಂದಿರದಲ್ಲಿ ನೋಡುವುದಾದರೆ, ಇದೇ ಪ್ರಶ್ನೆ ಉದ್ಭವವಾಗಿ ಯಾವ ನಿಯಮಗಳಿಗೂ ಮಿಗಿಲಾಗಿರುವ ಪ್ರೀತಿಯ ಪ್ರಾಬಲ್ಯವನ್ನು ತೋರ್ಪಡಿಸಲಾಯಿತು. ಅಲ್ಲಿ ಕೈಬತ್ತಿಹೋದ ಒಬ್ಬ ಮನುಷ್ಯನಿದ್ದನು ಮತ್ತು ಫರಿಸಾಯರು ಯೇಸುವನ್ನು ಪರೀಕ್ಷಿಸಿ ಆತನಲ್ಲಿ ದೋಷವನ್ನು ಕಂಡುಹಿಡಿಯುವ ಸಲುವಾಗಿ ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವುದು ಸರಿಯೋ ಅಲ್ಲವೋ ಎಂದು ವಿಚಾರಿಸಿದರು. ಯಾವುದಾದರೂ ಒಂದು ವಿಷಯದಲ್ಲಿ ಆತನ ಮೇಲೆ ದೋಷಾರೋಪಣೆ ಮಾಡಬೇಕೆಂದಿದ್ದರು; ತನ್ನ ಶಿಷ್ಯರ ಪರವಾದ ಆತನ ಪ್ರತಿಪಾದನೆಯು ಪೂರ್ಣಗೊಂಡಿರಲು, ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವ ವಿಷಯದಲ್ಲಿ ತಾನೇ ಏನಾದರೂ ಸಿಕ್ಕಿಬೀಳುವನೋ?

ನಮ್ಮ ಕರ್ತನ ಉತ್ತರವು ಆಗತಾನೇ ಉಲ್ಲೇಖಿಸಿ ಹೇಳಿದ ಪ್ರವಾದನಾವಚನಕ್ಕೆ ಅನುಗುಣವಾಗಿತ್ತು; ಅದೇನೆಂದರೆ ದೇವರ ಎಣಿಕೆಯಲ್ಲಿ ಕರುಣೆಯು ಯಜ್ಞಕ್ಕಿಂತಲೂ ಉತ್ತಮ–ವಾದುದೆನ್ನುವುದು ಮತ್ತು ಆತನು ಮುಂದೆಹೋಗಿ ಬಾಧಿತನಾದ

ಆ ಮನುಷ್ಯನಿಗೆ ಕರುಣೆಯನ್ನು ತೋರಿಸಿದನು. ಹೇಗೂ, ಮೊದಲನೆಯದಾಗಿ ಆತನು ಅವರ ಜೀವನಕ್ರಮದಿಂದಲೇ ಅವರಲ್ಲಿ ಸ್ಥಿರತೆಯಿಲ್ಲವೆಂಬುದನ್ನು ತೋರಿಸಿಕೊಟ್ಟನು: ಹೇಗೆಂದರೆ, ಅವರಿಗೆ ಒಂದೇ ಒಂದು ಕುರಿಯಿರಲಾಗಿ ಅದು ಸಬ್ಬತ್ ದಿನದಲ್ಲಿ ಕುಣಿಯೊಳಗೆ ಬಿದ್ದರೆ ಅಲ್ಲಿಂದ ಅದನ್ನು ಮೇಲೆತ್ತದೆ ಇರುವರೇ. ಆ ಕುರಿಯ ಮೇಲಿನ ಪ್ರೀತಿಯಿಂದ ಇಲ್ಲವಾದರೂ ಅದರ ಬೆಲೆಯ ದೆಸೆಯಿಂದಾದರೂ ಅದನ್ನು ಮೇಲೆತ್ತಿ ಕಾಪಾಡುವರು. ನಮ್ಮ ಕರ್ತನು ಕೇಳಿದ್ದುದು: "ಕುರಿಗಿಂತಲೂ ಮನುಷ್ಯನು ಎಷ್ಟೋ ಹೆಚ್ಚು (ಬೆಲೆಯುಳ್ಳವ–ನಲ್ಲವೇ?) ಆದುದರಿಂದ ಸಬ್ಬತ್ ದಿನದಲ್ಲಿ ಒಳ್ಳೆಯದನ್ನು ಮಾಡುವುದು ತಕ್ಕದ್ದೇ ಸರಿ....." ಪ್ರಾಣಿಗಿಂತಲೂ ಮನುಷ್ಯನು ಹೆಚ್ಚು ಬೆಲೆಯುಳ್ಳವನಲ್ಲವೇ ಎಂಬ ಈ ಪ್ರಶ್ನೆಗೆ ಉತ್ತರಿಸಲು ಲೋಕದವರಿಗೆ ಕಷ್ಟವಿದ್ದಂತೆ ತೋರುತ್ತದೆ; ಆದರೆ ದೇವಜನರಾದ ಆತ್ಮಿಕ ಇಸ್ರಾಯೇಲ್ಯರು ಇದಕ್ಕೆ ಕೂಡಲೇ ಉತ್ತರಿಸಬೇಕು. ದೇವರ ಕೃಪೆಯಿಂದ ಮನುಷ್ಯರಿಗೆ ತನ್ನನ್ನು ಈಡಾಗಿ ಅರ್ಪಿಸಿ–ಕೊಂಡಾಗಲೇ ಕರ್ತನು ಮನುಷ್ಯರ ಬೆಲೆಯನ್ನು ನಿಗಧಿಪಡಿಸಿ–ದನು. ಆತನಲ್ಲಿರುವ ಆತ್ಮವನ್ನು ಪಡೆದಿರುವವರು ತಮ್ಮ ಜೊತೆ ಮನುಷ್ಯರಿಗೆ ಶಾರೀರಿಕ ಹಾಗೂ ಆತ್ಮಿಕ ವಿಷಯಗಳಲ್ಲಿ ತಮಗೆ ಸಾಧ್ಯವಿರುವುದೆಲ್ಲವನ್ನೂ ಮಾಡುವುದು ತಮಗೆ ದೊರೆತಿರುವ ಒಂದು ಸೌಭಾಗ್ಯವೆಂದು ಅಧಿಕ ಅಧಿಕವಾಗಿ ಎಣಿಸಬೇಕು.

ಫರಿಸಾಯರ ಪ್ರತಿಯೊಂದು ವಿಷಯಗಳೂ ಉತ್ತರಿಸ–ಲ್ಪಟ್ಟಿದ್ದವು; ಯೂದಾಯಕ್ಕಿಂತಲೂ ಗಲಿಲಾಯದಲ್ಲಿ ಕಡಿಮೆ ಜನಪ್ರಿಯರಾಗಿದ್ದ ಅವರಿಗೆ ಮಹಾ ಬೋಧಕನಾದ ಕರ್ತನೊಡನೆ ನಡೆದ ಸಂಘರ್ಷದ ದೆಸೆಯಿಂದ ಜನರಲ್ಲಿ ತಮ್ಮ ಪ್ರಭಾವವು ಕಡಿಮೆಯಾಯಿತೆಂದು ಅನಿಸಿತ್ತು. ಆದುದರಿಂದ ಯೇಸುವು ಬತ್ತಿಹೋದ ಕೈಯನ್ನು ಮಾತಿನಿಂದ ಸ್ವಸ್ಥಪಡಿಸಿದಾಗ ಅವರು ಕೋಪಗೊಂಡು ಈತನನ್ನು ಹೇಗೆ ನಾಶಮಾಡ ಬಹುದೆಂದು ಸಮಾಲೋಚನೆ ಮಾಡಲು ಸಭಾಮಂದಿರದಿಂದ ಹೊರಗೆ ಹೋದರು. ಅವರು ಉಗ್ರವಾದ ಪಂಥಾಭಿಮಾನಿಗಳಾಗಿದ್ದು ತಮ್ಮ ಸ್ವಂತ ಪ್ರಾಮುಖ್ಯತೆಯನ್ನು ಪೂರ್ಣ ಮನಗೊಂಡಿದ್ದರು. ತಮಗೆ ದಕ್ಕೆತರುವ ಯಾವ ಸಂಗತಿಯೇ ಆಗಲಿ ಅದು ದೇವರ ಮತ್ತು ಆತನ ದ್ಯೇಯೋದ್ದೇಶಗಳಿಗೆ ಹಾನಿಯುಂಟು ಮಾಡುವುದೆಂದೂ, ತಾವು ಸಂಪ್ರದಾಯಸ್ಥ ವರ್ಗದವರಾದ್ದರಿಂದ ಯಾರಾದರೂ ನಡೆನುಡಿಗಳಿಂದ ಸರಿಸಾಟಿಯಾಗದೆ ತಮಗಿಂತಲೂ ಹೆಚ್ಚಿನವರಾಗಿ ತೋರ್ಪಡಿಸಿಕೊಂಡಲ್ಲಿ ಇಸ್ರಾಯೇಲ್ಯರಲ್ಲಿ ಅವರ ಪ್ರಭಾವವು ಅಧಿಕವಾಗಿ ಹಬ್ಬದಂತೆ ತಡೆಯಲು ಅಂಥವರನ್ನು ಕೊಲೆಮಾಡುವುದರಲ್ಲಿಯೂ ತಮ್ಮನ್ನು ಪೂರ್ಣವಾಗಿ ಸಮರ್ಥಿಸಿಕೊಳ್ಳುವವ–ರಾಗಿದ್ದರು. ಧರ್ಮದ ವಿಷಯದಲ್ಲಿ ಬಾಹ್ಯವಾಗಿ ಬಹು ಆಸಕ್ತರಂತೆ ತೋರ್ಪಡಿಸಿಕೊಳ್ಳುವ ಹಲವರಲ್ಲಿಯೂ ಇದೇ ಮನೋಭಾವವು ಈ ದಿನದಲ್ಲಿಯೂ ಪ್ರಚಲಿತವಾಗಿರು–ವುದೆಂಬುದು ನಮಗೆ ಜಿಗುಪ್ಸೆ ಉಂಟುಮಾಡುತ್ತದೆ. ಅವರು ಪ್ರೀತಿ ಕರುಣೆಯ ವಿಷಯಗಳಲ್ಲಿ ಬಹು ಕೊರತೆಯುಳ್ಳವರಾಗಿದ್ದು ತಾವು ಗುರುತಿಸಿಕೊಂಡಿರುವ ಪಂಥದ ಪದ್ಧತಿಗಳಿಗೆ ತಮ್ಮನ್ನು ಎಷ್ಟು ಒಳಪಡಿಸಿಕೊಂಡಿರುವವರೆಂದರೆ ಕರ್ತನ ದೇಹದ ಅಂಗಗಳು ಪ್ರಸ್ತುತ ಪಡಿಸುವ ಸತ್ಯವು ಲೋಕದಲ್ಲಿ ತಮ್ಮ ಘನತೆ ಗೌರವಗಳನ್ನು ತಗ್ಗಿಸುವಂತೆ ತೋರಿಬಂದರೆ ಅಂಥವರನ್ನು ತಮಗೆ ಅವಕಾಶ ದೊರೆತಷ್ಟೂ ಹಿಂಸೆಪಡಿಸುವದರಲ್ಲಿ ಮನಸ್ಸುಳ್ಳವರಾಗಿರುವರು. ಪ್ರಿಯ ಮಿತ್ರರೆ, ನಾವಾದರೋ ಒಡೆಯನ ಮಾತನ್ನು ಸ್ಮರಿಸುವವರಾಗಿ ಕರ್ತನಿಗಿರುವ ನಮ್ಮ ಸಂಬಂಧವನ್ನು ಗ್ರಹಿಸಿಕೊಂಡವರಾಗಿ ಅದನ್ನು ಮನನ–ಮಾಡಿಕೊಳ್ಳೋಣ, ಅವುಗಳ ನಿಜಾಭಿಪ್ರಾಯಗಳನ್ನು ನಾವು ಅನುಸರಿಸುವವರಾಗೋಣ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31 | ಕಪೆರ್ನೌಮ್ ಸಮೀಪದ ಬೆಟ್ಟ | ಹನ್ನೆರಡು ಮಂದಿಯನ್ನು ಅಪೋಸ್ತಲರನ್ನಾಗಿ ಆದುಕೊಂಡದ್ದು | –– | 3:13–19 | 6:12–16 | –– |

## ಮಾರ್ಕ 3:13–19

ಆ ಮೇಲೆ ಯೇಸು ಬೆಟ್ಟವನ್ನು ಹತ್ತಿ ತನಗೆ ಬೇಕಾದವರನ್ನು ಹತ್ತರಕ್ಕೆ ಕರೆಯಲು ಅವರು ಆತನ ಬಳಿಗೆ ಬಂದರು. ಆತನು ಹನ್ನೆರಡು ಮಂದಿಯನ್ನು ಆರಿಸಿ ಅವರು ತನ್ನ ಸಂಗಡ ಇರಬೇಕೆಂತಲೂ ದೆವ್ವಗಳನ್ನು ಬಿಡಿಸುವ ಅಧಿಕಾರವುಳ್ಳವರಾಗಿ ಸುವಾರ್ತೆಯನ್ನು ಸಾರುವುದಕ್ಕೆ ತಾನು ಅವರನ್ನು ಕಳುಹಿಸುವೆನೆಂತಲೂ ಆ ಹನ್ನೆರಡು ಮಂದಿಯನ್ನು ಆರಿಸಿ ನೇಮಿಸಿದನು. ಸೀಮೋನನೆಂಬವನಿಗೆ ಪೇತ್ರನೆಂದು ಹೆಸರನ್ನು ಇಟ್ಟನು. ಜೆಬೆದಾಯನ ಮಗನಾದ ಯಾಕೋಬನಿಗೂ ಯಾಕೋಬನ ತಮ್ಮನಾದ ಯೋಹಾನನಿಗೂ ಬೊವನೆರ್ಗೆಸ್ ಅಂದರೆ ಗುಡುಗಿನ ಮರಿಗಳು ಎಂದು ಹೆಸರಿಟ್ಟನು. ಉಳಿದವರು ಯಾರೆಂದರೆ, ಅಂದ್ರೇಯ, ಫಿಲಿಪ್ಪ, ಬಾರ್ತಲೊಮಾಯ, ಮತ್ತಾಯ, ತೋಮ, ಅಲ್ಫಾಯನ ಮಗನಾದ ಯಾಕೋಬ, ತದ್ದಾಯ, ಮತಾಭಿಮಾನಿ ಎಂದು ಹೆಸರುಗೊಂಡ ಸೀಮೋನ, ಯೇಸುವನ್ನು ಹಿಡುಕೊಟ್ಟ ಇಸ್ಕರಿಯೋತ ಯೂದ ಇವರೇ.

## ಲೂಕ 6:12–16

ಆ ದಿವಸಗಳಲ್ಲಿ ಆತನು ಪ್ರಾರ್ಥನೆ ಮಾಡುವದಕ್ಕಾಗಿ ಬೆಟ್ಟಕ್ಕೆ ಹೋಗಿ ರಾತ್ರಿಯನ್ನೆಲ್ಲಾ ಪ್ರಾರ್ಥನೆಯಲ್ಲೇ ಕಳೆದನು. ಬೆಳಗಾದ ಮೇಲೆ ಆತನು ತನ್ನ ಶಿಷ್ಯರನ್ನು ಕರೆದು ಅವರಲ್ಲಿ 12 ಮಂದಿಯನ್ನು ಆರಿಸಿಕೊಂಡು ಅವರಿಗೆ ಅಪೋಸ್ತಲರೆಂತ ಹೆಸರಿಟ್ಟನು. ಅವರು ಯಾರೆಂದರೆ–ಆತನಿಂದ ಪೇತ್ರನೆಂಬ ಹೆಸರನ್ನು ಹೊಂದಿದ ಸೀಮೋನ, ಅವನ ತಮ್ಮನಾದ ಅಂದ್ರೇಯ, ಯಾಕೋಬ, ಯೋಹಾನ, ಫಿಲಿಪ್ಪ, ಬಾರ್ತೊಲೊಮಾಯ, ಮತ್ತಾಯ, ತೋಮ, ಅಲ್ಫಾಯನ ಮಗನಾದ ಯಾಕೋಬ ಮತಾಭಿಮಾನಿ ಅನ್ನಿಸಿಕೊಂಡ ಸೀಮೋನ, ಯಾಕೋಬನ ಮಗನಾದ ಯೂದ, ಆತನನ್ನು ಹಿಡಿದುಕೊಡುವ ದ್ರೋಹಿಯಾದ ಇಸ್ಕರಿಯೋತ ಯೂದ, ಇವರೇ.

# ಹನ್ನೆರಡು ಮಂದಿಯನ್ನು ಆರಿಸಿಕೊಂಡದ್ದು

**ರೀಪ್ರಿಂಟ್ಸ್ ಪುಟ 1735**

## ಮಾರ್ಕ 3:6–19

**“ನಾನು ನಿಮ್ಮನ್ನು ಆರಿಸಿ ತೆಗೆದುಕೊಂಡೆನು. ನೀವು ಹೊರಟುಹೋಗಿ ಫಲಕೊಡುವವರಾಗಬೇಕೆಂತಲೂ... ನಿಮ್ಮನ್ನು ನೇಮಿಸಿದ್ದೇನೆ” ಯೋಹಾನ 15:16**

ಹನ್ನೆರಡು ಅಪೋಸ್ತಲರನ್ನು ನೇಮಿಸುವಿಕೆ ಎಂಬ ಪಾಠದ ಮುಖ್ಯವಾದ ಅಂಶಗಳ ಪೂರ್ಣವಾದ ನಿರೂಪಣೆಗಾಗಿ 1893ನೇ ಇಸವಿಯ ಮೇ ತಿಂಗಳಿನ 1ನೇ ದಿನಾಂಕದ ನಮ್ಮ ಪತ್ರಿಕೆಯನ್ನು ನೋಡಿ; 1893ರ ಜೂನ್ ತಿಂಗಳಿನ 15ನೇ ದಿನಾಂಕದ ಕಡೆಯ ಪುಟವನ್ನು ಸಹ ನೋಡಿ.

ಮೇಲೆ ಹೇಳಿದ ಆರಿಸಿಕೊಳ್ಳುವಿಕೆಯಲ್ಲಿ ಇರುವ ಇತರ ಕುತೂಹಲಕಾರಿಯಾದ ಅಂಶಗಳು ಯಾವುವೆಂದರೆ: (1) ತನ್ನ ಕಾರ್ಯಗಳಿಗೆ ವಿರೋಧವಾಗಿ ಅಲ್ಲದೆ ತನ್ನ ಜೀವಕ್ಕೂ ವಿರೋಧವಾಗಿ ಒಳಸಂಚುಗಳು ನಡೆಯುತ್ತಿದ್ದಾಗ್ಯೂ ಸಹ, ತನ್ನ ಕಾರ್ಯವನ್ನು ಮುಂದುವರಿಕೊಂಡು ಹೋಗುವಲ್ಲಿ ನಮ್ಮ ಕರ್ತನ ದೃಢಚಿತ್ತ. – ವಚನ 1–5.

(2) ತನ್ನ ಕರ್ತವ್ಯದ ನಿರ್ವಹಣೆಗೆ ಅಗತ್ಯವಿದ್ದಲ್ಲಿ ಮಾತ್ರ ಆಯಾ ಜಾಗಗಳಲ್ಲಿ ಇಳಿದುಕೊಂಡು ಅನಂತರದಲ್ಲಿ ಅಲ್ಲಿಂದ ತಾನು ಹಿಂದೆಗೆದುಕೊಳ್ಳುತ್ತಿದ್ದುದರಲ್ಲಿ ಆತನು ತೆಗೆದುಕೊಳ್ಳುತ್ತಿದ್ದ ಮುಂಜಾಗ್ರತಾ ಕ್ರಮವನ್ನು ನಾವು ಗಮನಿಸುತ್ತೇವೆ. ಆತನು ಅನಗತ್ಯವಾಗಿ ತನ್ನನ್ನು ಅಪಾಯಕ್ಕೆ ಗುರಿಮಾಡಿಕೊಂಡು ನಂತರ ಆತನು ತನ್ನ ರಕ್ಷಣೆಗಾಗಿ ದೇವರ ಏರ್ಪಾಟಿನ ಮೂಲಕವಾದ ಆತನ ಆಶ್ಚರ್ಯಕರವಾದ ಮಧ್ಯಪ್ರವೇಶಿಸುವಿಕೆಯನ್ನು ಎದುರುನೋಡುತ್ತಾ ಆ ನಂತರ ಇಂತಹ ಮಧ್ಯಪ್ರವೇಶಿಸುವಿಕೆಗಳ ಉದ್ದೇಶವು ತನ್ನ ಮರಣದ ಸಮಯವು ಇನ್ನೂ ಬಂದಿಲ್ಲದ ಕಾರಣವಾಗಿತ್ತೆಂದು ಹೇಳಿಕೊಳ್ಳುತ್ತಿರಲಿಲ್ಲ. “ತನ್ನ ಸಮಯವು ಬರುವವರೆಗೂ” ತಾನು ಸುರಕ್ಷಿತನಾಗಿ ಉಳಿದುಕೊಳ್ಳಲು ಆತನು ಸಹಜವಾದ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದು, ಆನಂತರ (ತನ್ನ ಸಮಯವು ಬಂದಾಗ) ಆತನು ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯಂತೆ ಬಾಯಿತೆರೆಯದೆ ತನ್ನ ಜೀವವನ್ನು ಕಾಪಾಡಿಕೊಳ್ಳಲು ಕೇವಲ ಅಲ್ಪಯತ್ನವನ್ನಾದರೂ ಮಾಡದೆ ಇದ್ದನು. – ವಚನ 6–7

(3) ಆತನು ಕ್ಷಣಮಾತ್ರದಲ್ಲಿ ಮಾಡುತ್ತಿದ್ದ ಸಂಪೂರ್ಣವಾದ ಸ್ವಸ್ಥಪಡಿಸುವಿಕೆಯು ಆತನಲ್ಲಿ ಅದ್ಭುತವಾಗಿ ಗುಣಪಡಿಸುವಿಕೆಯ ವರವಿರುವುದಕ್ಕೆ ಸಾಕ್ಷಿಯಾಗಿದ್ದವು. ಆತನ ಬಾಯಿಮಾತಿನ ಆದೇಶದಿಂದಲೇ ಆ ಮನುಷ್ಯನ ಬತ್ತಿಹೋದ ಕೈ ಸ್ವಸ್ಥವಾಗಿ ಇತರ ಕೈಗಳಂತೆ ಆಯಿತು. – ವಚನ 5.

(4) ಆತನ ಅದ್ಭುತ ಕಾರ್ಯಗಳು ಯೆಹೂದ್ಯರು ಮತ್ತು ಅನ್ಯರು ಮುಂತಾದ ಹಲವಾರು ವರ್ಗಗಳ ಜನರ ದೊಡ್ಡ ಗುಂಪಿನ ಗಮನವನ್ನು ಸೆಳೆಯುತ್ತಿತ್ತು. ಹೀಗೆ ಇದರಿಂದ ಸುವಾರ್ತೆಗೆ ಜನಪ್ರಿಯತೆ ಉಂಟಾಗಿ, ಮುಂದೆ ಅದು ಸಾರಲ್ಪಡಲು ಅನುಕೂಲಕರವಾದ ಸನ್ನಿವೇಶವನ್ನು ನಿರ್ಮಾಣ ಮಾಡಿಕೊಟ್ಟಿತು. – ವಚನ 7–8.

(5) ಆತನು ಹಲವಾರು ರೋಗಿಗಳನ್ನು ಗುಣಪಡಿಸುತ್ತಿದರಲ್ಲಿ ಆತನಲ್ಲಿದ ಶಕ್ತಿಯು ಒಂದು ಪ್ರಮಾಣದಲ್ಲಿ ಹೊರಟು ಆ ಗುಣಪಡಿಸುವಿಕೆಯನ್ನು ನೆರವೇರಿಸುತ್ತಿತ್ತೆಂದು ವಚನ 9–10 ಸೂಚಿಸುತ್ತವೆ. ಹೀಗೆ ಇತರರನ್ನು ಆಶೀರ್ವದಿಸಲು ಆತನು ತನ್ನ ಶಕ್ತಿಯನ್ನು ವಿನಿಯೋಗಿಸಿಕೊಂಡು ತನ್ನನ್ನು ನಿಶ್ಯಕ್ತನನ್ನಾಗಿ ಮಾಡಿಕೊಂಡನು. (ಲೂಕ 6:19; 8:43–44 ಸಹ ನೋಡಿ) ಆದುದರಿಂದ ಆತನು ಈ ವಿಧವಾದ ಸೇವೆಯನ್ನು ಸತತವಾಗಿ ಮಾಡಿ ತನ್ನ ಶಕ್ತಿಯು ಬಳಲಿಹೋಗಿರುವುದಾಗಿ ತನಗೆ ಅನ್ನಿಸಿದಾಗ ತಾನು ವಿಶ್ರಮಿಸಿಕೊಂಡು ಶಾರೀರಿಕವಾಗಿ ಹಾಗೂ ಆತ್ಮಿಕವಾಗಿ ಪುನಃಶ್ಚೇತನಗೊಳ್ಳಲು ತನ್ನನ್ನು (ಏಕಾಂತವಾದ ಸ್ಥಳಗಳಿಗೆ) ಹಿಂದೆಗೆದುಕೊಳ್ಳುತ್ತಿದ್ದನು.

(6) ಕ್ರಿಸ್ತನ ವಿಷಯವಾಗಿ ಅಶುದ್ಧಾತ್ಮಗಳು ಕೊಡುತ್ತಿದ್ದ ಸಾಕ್ಷಿಯ ವಿವರಗಳಿಗಾಗಿ, ನಮ್ಮ ಜೂನ್ 15ರ ಪತ್ರಿಕೆಯನ್ನು ನೋಡಿ.

*****

# ಹನ್ನೆರಡು ಮಂದಿ ಅಪೊಸ್ತಲರು

**ರೀಪ್ರಿಂಟ್ಸ್ ಪುಟ 1521**

## ಅವರ ಕರೆಯುವಿಕೆ, ಸೇವಾಕಾರ್ಯಸ್ಥಾನ ಹಾಗೂ ಅಧಿಕಾರಾದೇಶ

**"ಅದಕ್ಕೆ ಯೇಸು–ಹನ್ನೆರಡು ಮಂದಿಯಾದ ನಿಮ್ಮನ್ನು ನಾನು ಆರಿಸಿ ತೆಗೆದುಕೊಂಡೆನಲ್ಲವೋ?"**

**– ಯೋಹಾನ 6:70**

ನಮ್ಮ ಕರ್ತನು ತನ್ನ ದೇಹವಾದ ಸಭೆಗೆ ಯೋಗ್ಯನಾದ ಶಿರಸ್ಸಾಗಿ ದೇವರಿಂದ ನೇಮಿತನಾದವನೆಂಬುದನ್ನು ಅಂಗೀಕರಿಸಿ–ಕೊಂಡವರಾಗಿರಲು, ಆತನು ಎಂಥಾ ತೀವ್ರವಾದ ಕಾಳಜಿ ಹಾಗೂ ವಿವೇಕಪೂರ್ಣವಾದ ಮುಂದಾಲೋಚನೆಯಿಂದ ಆ ದೇಹದ ಹಿತಾಸಕ್ತಿಗಳೆಲ್ಲವುಗಳ ಬಗ್ಗೆ ಸಭೆಯ ಅರ್ಹತಾಪರೀಕ್ಷೆಯ ಕಾಲವಾದ ಸುವಾರ್ತಾಯುಗದ ಅಂತ್ಯದವರೆಗೂ ಗಮನ ನೀಡಿರುವುದನ್ನು ಗುರುತಿಸಿಕೊಳ್ಳೋಣ.

ಅರಣ್ಯದಲ್ಲಿನ ತನ್ನ ನಾಲ್ವತ್ತು ದಿನಗಳ ಧ್ಯಾನ ಹಾಗೂ ವಿಶಿಷ್ಟವಾದ ಶೋಧನೆಯ ನಂತರ ಕೂಡಲೇ ನಮ್ಮ ಕರ್ತನು ಬರಲಿರುವ ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಿದ್ದುದಾಗಿ ನಾವು ಕಂಡುಕೊಳ್ಳುತ್ತೇವೆ; ಹಾಗೂ ತನ್ನ ಮಾತನ್ನು ಹರ್ಷದಿಂದ ಕೇಳಿ, ನಂಬಿ ಬಂದು ಶಿಷ್ಯರಾದವರಲ್ಲಿ ನೂತನ ದೈವೀಕ ವ್ಯವಸ್ಥೆಯಲ್ಲಿ ಅಪೊಸ್ತಲರಾಗಲು ಹನ್ನೆರಡು ಮಂದಿಯನ್ನು ಆತನು ಆರಿಸಿಕೊಂಡನು. ಇವರು ದೀನವೃತ್ತಿಯ ಜೀವನವನ್ನು ಸಾಗಿಸುತ್ತಿದ್ದವರಾಗಿದ್ದರು; ನಾಲ್ವರು ಮೀನುಗಾರರು, ಬಹಿಷ್ಕೃತರಾದ ಸುಂಕದವರಲ್ಲಿ ಒಬ್ಬನಿದ್ದನು; ಇತರರ ಕರೆಯುವಿಕೆಯ ವಿಷಯವಾಗಿ ತಿಳಿಸಲ್ಪಟ್ಟಿಲ್ಲ.

ಹನ್ನೆರಡು ಮಂದಿಯ ಆಯ್ಕೆಯ ವಿಷಯದಲ್ಲಿ ಹೇಳುವುದಾದರೆ, ತಮಗಿರುವುದೆಲ್ಲವನ್ನು ಬಿಟ್ಟು ತನ್ನನ್ನು ಹಿಂಬಾಲಿಸಲು ಕರ್ತನು ವಿಭಿನ್ನ ಸನ್ನಿವೇಶಗಳಲ್ಲಿ ಪ್ರತಿಯೊಬ್ಬನನ್ನು ವೈಯುಕ್ತಿಕವಾಗಿ ಕರೆದುದ್ದನ್ನೂ, ಅದರಂತೆ ಅವರು ಪ್ರಾಮಾಣಿಕವಾಗಿ ನಡೆದುಕೊಂಡದ್ದನ್ನೂ ನಾವು ತಿಳಿದುಕೊಂಡವರಾಗಿದ್ದೇವೆ. (ಮತ್ತಾಯ 4:17–22; ಮಾರ್ಕ 1:16–20; 3:13–19; ಲೂಕ 5:9–11 ನೋಡಿ) ಅವರನ್ನು ಆತನು ಅಪೊಸ್ತಲರನ್ನಾಗಿ ಅವರ ಸೇವಾಸ್ಥಾನಕ್ಕೆ ಪ್ರತಿಷ್ಠಿಸಿದ ವಿಶೇಷ ಸಂದರ್ಭಗಳೂ ಸಹ ಇದ್ದವು. ಇವುಗಳ ಒಂದು ವಿವರವನ್ನು ನೀಡಿ ಲೂಕನು––ಈ ಸಂಗತಿಗೆ ಮೊದಲು ಆತನು ಪ್ರಾರ್ಥಿಸು–ವುದಕ್ಕಾಗಿ ಪರ್ವತ ಪ್ರದೇಶಕ್ಕೆ ತೆರಳಿ ಆ ರಾತ್ರಿಯೆಲ್ಲಾ ಆತನು ಪ್ರಾರ್ಥನೆಯಲ್ಲಿ ಕಳೆದನೆಂದೂ ಹೇಳಿದ್ದಾನೆ; ಇದು ಆತನು ಭವಿಷ್ಯತ್ತಿನ ಸಭೆಯ ಹಿತಾಸಕ್ತಿಗಳ ವಿಷಯದಲ್ಲಿ ದೇವರಲ್ಲಿ ಸಮಾಲೋಚನೆ ಮಾಡಸಲುವಾಗಿತ್ತೆಂಬುದು ಸ್ಪಷ್ಟ. "ಬೆಳಗಾದ ಮೇಲೆ ಆತನು ತನ್ನ ಅನುಯಾಯಿಗಳನ್ನು {ಗ್ರೀಕ್ ಭಾಷೆಯ, ಮಾಥೆತಾಸ್ (mathetas) ಅಂದರೆ ವಿಧ್ಯಾರ್ಥಿ ಅಥವಾ ಶಿಷ್ಯ) ಹತ್ತರಕ್ಕೆ ಕರೆದು ಅವರಲ್ಲಿ ಹನ್ನೆರಡು ಮಂದಿಯನ್ನು ಆರಿಸಿ ಕೊಂಡು ಅವರಿಗೆ ಅಪೋಲಸ್ತಲರೆಂತ (ಅಪೋಸ್ಟೋಲೋಸ್ ಅಂದರೆ ಕಳುಹಿಸಲ್ಪಟ್ಟವನು) ಹೆಸರಿಟ್ಟನು – ಲೂಕ 6:12,13. ಹೀಗೆ ಈ ಹನ್ನೆರಡು ಮಂದಿ ಅಪೊಸ್ತಲರು ಕರ್ತನ ಶಿಷ್ಯರಲ್ಲಿ ಒಂದು ವಿಶಿಷ್ಟವಾದ ಮತ್ತು ಪ್ರತ್ಯೇಕವಾದ ವರ್ಗವೆಂದು ಗುರುತಿಸಲ್ಪಟ್ಟರು. ಈ ಹನ್ನೆರಡು ಮಂದಿಯ ಹಾಗೂ ಇತರ ಶಿಷ್ಯರಿಗೆ ಇರುವ ಭೇದವನ್ನು 17ನೇ ವಚನವು ಸಹ ಬಹು ಸ್ಪಷ್ಟಗೊಳಿಸುತ್ತದೆ.

ಹೀಗೆ ಆಯಲ್ಪಡದ ಇತರ ಶಿಷ್ಯರೂ ಸಹ ಕರ್ತನಿಗೆ ಪ್ರಿಯರಾಗಿದ್ದರು ಮತ್ತು ಒಟ್ಟಾರೆಯಾಗಿ ಕಾರ್ಯದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅವರು ನಿಸ್ಸಂದೇಹ ವಾಗಿ ಈ ನೇಮಕದ ವಿಷಯದಲ್ಲಿ ಪೂರ್ಣ ಸಹಾನುಭೂತಿ–ಯುಳ್ಳವರಾಗಿದ್ದರು. ಈ ಆಯ್ಕೆಯನ್ನು ಮಾಡುವಲ್ಲಿ ಕರ್ತನು ನಿಸ್ಸಂದೇಹವಾಗಿ ಆ ಹನ್ನೆರಡು ಮಂದಿಯು ಹೃದಯ ಪೂರ್ವಕವಾಗಿ ಇಚ್ಛೆಯುಳ್ಳವರಾಗಿದ್ದುದನ್ನು ಮಾತ್ರವಲ್ಲದೆ ತಮ್ಮ ಮುಂದೆ ಇದ್ದ ಆರಂಭ ಕಾರ್ಯಕ್ಕೆ ಅವರಿಗೆ ಇದ್ದ ಸನ್ನಿವೇಶಗಳು ಹಾಗು ವೈಯುಕ್ತಿಕವಾದ ಅರ್ಹತೆಗಳನ್ನು ಸಹ ಗ್ರಹಿಸಿಕೊಡಿದ್ದನು. ಹೀಗೆ ಉದಾಹರಣೆಯಾಗಿ ಹೇಳುವುದಾದರೆ, ತಮಗಿರುವು–ದೆಲ್ಲವನ್ನು ಬಿಟ್ಟು ತನ್ನನ್ನು ಹಿಂಬಾಲಿಸಲು ಜೆಬೆದಾಯನ ಮಕ್ಕಳನ್ನು ಕರೆದಾಗ ಆತನು ಅವರ ತಂದೆಯನ್ನು ಕರೆಯಲಿಲ್ಲ. (ಆತನನ್ನು) ಹಿಂಬಾಲಿಸುವುದೆಂದರೆ ಆತನ ಬೋಧನೆ ಮುಂತಾದವುಗಳನ್ನು ಅನುಸರಿಸುವುದು ಮಾತ್ರವಲ್ಲದೆ ಕರ್ತನ ಸೇವೆಯಲ್ಲಿ ಆತನೊಡನೆ ತೊಡಗಿಸಿಕೊಳ್ಳುವ ಅಥವಾ ಆತನ ಆದೇಶವನ್ನು ಅನುಸರಿಸುವ ಸಲುವಾಗಿ ತಮ್ಮ ವ್ಯಾಪಾರೋದ್ಯಮ ಮನೆ ಸ್ನೇಹಿತರು ಹಾಗೂ ಅವರ ಪ್ರಾಪಂಚಿಕವಾದ ಯೋಜನೆಗಳು ಮತ್ತು ಏಳಿಗೆಯನ್ನು ಬಿಟ್ಟುಬಿಡುವುದನ್ನೂ ಒಳಗೊಂಡಿರುವುದು.

ನಮ್ಮ ಕರ್ತನು ಆ ಸಮಯದಲ್ಲಿ ಅಪೊಸ್ತಲರನ್ನು ವಿಧಿವತ್ತಾಗಿ ಪ್ರತ್ಯೇಕಿಸಿದಾಗ ಅದಕ್ಕೆ ಇದ್ದ ವಿಶೇಷ ಪ್ರಾಮುಖ್ಯತೆಯ ಬಗ್ಗೆ ಅವರಿಗೆ ಹೆಚ್ಚು ಪ್ರಕಟಮಾಡಿರುವ ಸಂಭವವೇನಿರುವುದಿಲ್ಲ; ಇದನ್ನು ಗ್ರಹಿಸಿಕೊಳ್ಳುವುದು ಸಹ ಅವರಿಗೆ ಅಸಾಧ್ಯವಾಗಿರುತ್ತಿತ್ತು. ಆದರೆ ಕರ್ತನಿಗೆ ವಿಶೇಷ ರಾಯಭಾರಿಗಳಾಗಲು ದೀನವೃತ್ತಿಯ ಜೀವಿತದಿಂದ ಆಯಲ್ಪಟ್ಟ ಈ ಪ್ರಿಯ ಸಹೋದರರು ತಮಗೆ ಬಡತನದಾರಿರ್ದ್ಯ ಹಾಗೂ ಹಿಂಸೆಗಳು ಸದ್ಯಕ್ಕೆ ತಮಗೆ ಖಂಡಿತವಾಗಿ ದೊರೆಯಲಿರುವ ಪ್ರತಿಫಲಗಳೆಂಬ ಅಂಶವನ್ನು ಉಪೇಕ್ಷಿಸಿ, ತಮಗೆ ಲಭಿಸಿದ ವಿಶೇಷ ಸೌಭಾಗ್ಯದ ಬಗ್ಗೆ ಮನವರಿಕೆ ಮಾಡಿಕೊಂಡಿದ್ದರು. ಮುಂದಿನ ಕಾಲದಲ್ಲಿ ದೊರೆಯಲಿರುವ ಪ್ರತಿಫಲದ ವಿಷಯವಾಗಿ ಸ್ಪಷ್ಟವಾಗಿ ಗ್ರಹಿಸಿರಲು ಅವರಿಗೆ ಆಗ ಸಾಧ್ಯವಾಗಿರಲಾರದು.

ಆ ಸಮಯದಲ್ಲಿ ಹನ್ನೆರಡು ಮಂದಿಯನ್ನು ಆರಿಸಿಕೊಂಡಿದ್ದರಲ್ಲಿ ನಮ್ಮ ಕರ್ತನ ಉದ್ದೇಶವೇನಾಗಿತ್ತೆಂದರೆ, ಅಪೋಸ್ತಲರಾಗಿ ಮುಂದೆ ತಮ್ಮ ಕಾರ್ಯವನ್ನು ಪ್ರಾರಂಭಿಸಲು ಸಮರ್ಥರಾಗುವಂತೆ ಅವರಿಗೆ ಬೋಧನೆ ಮಾಡಿ ತರಬೇತುಗೊಳಿಸುವುದು; ಏಕೆಂದರೆ ಪಂಚಾಶತ್ತಮ ದಿನದ ವರೆಗೂ ಅವರು ಆ ಕಾರ್ಯವನ್ನು ಪೂರ್ಣವಾಗಿ ಪ್ರಾರಂಭಿಸಲಾಗಲಿಲ್ಲ. (ಅಪೋಸ್ತಲರಾಗಿ) ತಾವು ನೇಮಕಗೊಂಡ ನಂತರ ಆ ಹನ್ನೆರಡು ಮಂದಿಯು ಪೂರ್ಣವಾಗಿ ಕರ್ತನ ಮಾರ್ಗದರ್ಶದಲ್ಲಿ ಆತನ ಸಂಗಡ ಹೆಚ್ಚಾಗಿ ಇರುತ್ತಿದ್ದು ಆತನ ನಡತೆ, ಆತನು ಸಾರುತಿದ್ದ ಸುವಾರ್ತೆ ಮತ್ತು ಆತನು ಅನುಸರಿಸುತ್ತಿದ್ದ ವಿಧಾನಗಳನ್ನು ಜಾಗ್ರತೆಯಿಂದ ಅಧ್ಯಯನ ಮಾಡುತ್ತಿದ್ದರು.

## ಅಪೋಸ್ತಲರ ಕಾರ್ಯಭಾರ

ಅಪೋಸ್ತಲರ ಕಾರ್ಯಭಾರವು ಪ್ರಮುಖವಾಗಿ ಕರ್ತನ ಹಾಗೂ ಇಡೀ ಸಭೆಯ ರೀತಿಯದ್ದೇ ಆಗಿದ್ದು, ಅದು ದೇವರ ರಾಜ್ಯದ ಸುವಾರ್ತೆಯನ್ನು ಸಾರುವುದಾಗಿತ್ತು. (ಯೆಶಾಯ 61:1,2; ಲೂಕ 4:17–21; ಮತ್ತಾಯ 10:5–8; ಮಾರ್ಕ 3:14–15; ಲೂಕ 10:1–17 ನೋಡಿ) ಮತ್ತು ತಮ್ಮೊಡನೆ ಕರ್ತನು ಇರುವಾಗ ಅಲ್ಲದೆ ಆನಂತರದಲ್ಲಿಯೂ ಅವರು ತಮ್ಮನ್ನು ಈ ಕೆಲಸಕ್ಕೆ ಆಸಕ್ತಿಯಿಂದ ಅರ್ಪಿಸಿಕೊಂಡಿದ್ದರು. ಈ ಕೆಲಸದಲ್ಲಿ ಅವರಿಗೆ ದೊರೆತ ಯಶಸ್ಸು ಆ ಸಮಯದಲ್ಲಿ ಕರ್ತನು ಈ ಸೇವೆಗೆ ನೇಮಿಸಿದ ಅಪೋಸ್ತರಲ್ಲದ ಆ ಎಪ್ಪತ್ತು ಮಂದಿಯ ಯಶಸ್ಸಿಗಿಂತ ಹೆಚ್ಚು ಗಣನೀಯವಾಗಿತ್ತೆಂಬುದು ನಮಗೆ ತಿಳಿಸಲ್ಪಟ್ಟಿಲ್ಲ. (ಲೂಕ 10:17) ಆದರೆ ಸುವಾರ್ತೆಯನ್ನು ಸಾರುವ ಈ ಕಾರ್ಯಭಾರದ ಜೊತೆಗೆ ಕರ್ತನು ಆ ಹನ್ನೆರಡು ಮಂದಿಯನ್ನು ಮುಂದಿನ ಒಂದು ವಿಶೇಷ ಕಾರ್ಯಕ್ಕೆ ಅಂದರೆ ತನ್ನ ಮರಣಾ ನಂತರದಲ್ಲಿ ಅವರು ತನ್ನ ವಿಷಯವಾಗಿ ಸಾಕ್ಷಿಗಳಾಗಬೇಕೆಂಬುದಕ್ಕೆ ಅವರನ್ನು ಸಿದ್ಧಮಾಡುತ್ತಿರುವುದಾಗಿ ಅವರಿಗೆ ಮುಂದೆ ತೋರಿಸಿಕೊಟ್ಟಿದ್ದನು. ಅವರು ಆತನ ಸೇವೆಯ ಆರಂಭದಿಂದಲೂ ಆತನೊಡನೆ ಇದ್ದು ಆತನ ಉಪದೇಶ ಹಾಗೂ ಕಾರ್ಯೋದ್ದೇಶಗಳನ್ನು ತಿಳಿದವರಾಗಿರುವರೆಂದು ಜನರು ತಮ್ಮ ಮೇಲೆ ಭರವಸವಿಡುವುದಕ್ಕೆ ಸಹ ಅವರು ಸಾಕ್ಷಿಗಳಾಗಬೇಕಿತ್ತು. (ಯೋಹಾನ 15:27; ಲೂಕ 24:48) ಇದು ಮಾತ್ರವಲ್ಲದೆ ದೇವರ ಏರ್ಪಾಟಿನಲ್ಲಿ ಈ ಹನ್ನೆರಡು ಮಂದಿ ಒಂದು ಕ್ಲುಪ್ತಕಾಲದಲ್ಲಿ ಮೇಲಿನಿಂದ ಶಕ್ತಿಯನ್ನು ಹೊಂದಿದ ನಂತರ ಸುವಾರ್ತಾಯುಗದ ಸಭೆಯ ಸಂಸ್ಥಾಪಕರೂ ಹಾಗೂ ಅದರ ವಿಶೇಷ ಬೋಧಕರೂ ಆಗಿರಬೇಕೆಂದೂ ಸಹ ಅವರು ಆಯಲ್ಪಟ್ಟರು.

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಈ ಹನ್ನೆರಡು ಮಂದಿಯನ್ನು ಕರ್ತನು ಆದುಕೊಂಡದ್ದರಲ್ಲಿ ಅಥವಾ ನೇಮಿಸಿದ್ದರಲ್ಲಿ ಆತನ ಉದ್ದೇಶವು: ಇವರನ್ನು ಹೀಗೆ ತರಬೇತುಗೊಳಿಸಿ ಅಧಿಕಾರ ನೀಡಿ ದೇವರ ವಿಷಯವಾದ ಸತ್ಯಾರ್ಥಗಳನ್ನು ಇವರ ಸಾಕ್ಷಿಯ ಮೂಲಕವಾಗಿ ಸ್ಥಿರಪಡಿಸಿ, ಇವರ ಮೂಲಕವಾಗಿ ನೀತಿಗೆ ಹಸಿದು ಬಾಯಾರಿದವರು ಆ ಸತ್ಯಾರ್ಥಗಳ ವಿಷಯವಾಗಿ ಮನವರಿಕೆಮಾಡಿಕೊಳ್ಳುವಂತಾಗಿ, ಹಾಗೂ ಇಂಥವರಿಂದ "ತನ್ನ ಹೆಸರಿಗಾಗಿ ಒಂದು ಜನವನ್ನು" (ಅಂದರೆ ಕ್ರಿಸ್ತನ ಮದಲಗಿತ್ತಿಯಾದ ಸಭೆಯಾಗಿ) ಆರಿಸಿಕೊಂಡು ಅವರು ಕ್ರಿಸ್ತನೊಡನೆ ಸಹ–ಬಾಧ್ಯರಾಗಿ ಆತನ ರಾಜ್ಯದಲ್ಲಿ ಉನ್ನತ ಸ್ಥಾನಕ್ಕೆ ಏರುವಂತೆ ಅವರಿಗೆ ತರಬೇತು ನೀಡಿ ಅವರನ್ನು ಸಿದ್ಧಗೊಳಿಸುವುದಾಗಿತ್ತು. ಈ ಹನ್ನೆರಡು ಮಂದಿಯನ್ನು ಆರಿಸಿಕೊಂಡ ಉದ್ದೇಶವು ಕರ್ತನು ತಾನು ಶಿಲುಬೆಯಲ್ಲಿ ಮರಣ ಹೊಂದುವುದಕ್ಕೆ ಮೊದಲು ಮಾಡಿದ ಪ್ರಾರ್ಥನೆಯಲ್ಲಿ ಅಡಕವಾಗಿರುವುದು. (ಯೋಹಾನ 17:6–9, 20–21 ನೋಡಿ) – "ಲೋಕದೊಳಗಿಂದ ನೀನು ನನಗೆ ಕೊಟ್ಟ ಮನುಷ್ಯರಿಗೆ (ಅಪೋಸ್ತಲರಿಗೆ) ನಿನ್ನ ಹೆಸರನ್ನು ತಿಳಿಯಪಡಿಸಿದೆನು. ಇವರು ನಿನ್ನವರಾಗಿದ್ದರು, ನೀನು ಇವರನ್ನು ನನಗೆ ಕೊಟ್ಟೆ; ಮತ್ತು ಇವರು ನಿನ್ನ ವಾಕ್ಯವನ್ನು ಕೈಕೊಂಡು ನಡೆದಿದ್ದಾರೆ. ನೀನು ನನಗೆ ಕೊಟ್ಟಿದ್ದೆಲ್ಲಾ ನಿನ್ನಿಂದಲೇ ಬಂದದೆ ಎಂದು ಈಗ ಇವರು ತಿಳುಕೊಂಡಿದ್ದಾರೆ; ಹೇಗೆಂದರೆ ನೀನು ನನಗೆ ಕೊಟ್ಟ ಮಾತುಗಳನ್ನು (ಬೋಧನೆಗಳನ್ನು) ನಾನು ಇವರಿಗೆ ಕೊಟ್ಟಿದ್ದೇನೆ; ಇವರು ಆ ಮಾತುಗಳನ್ನು ಕೈಕೊಂಡು ನನ್ನನ್ನು ನಿನ್ನ ಬಳಿಯಿಂದ ಹೊರಟುಬಂದವನೆಂದು ನಿಜವಾಗಿ ತಿಳಿದು ನೀನೇ ನನ್ನನ್ನು ಕಳುಹಿಸಿಕೊಟ್ಟಿರುವುದಾಗಿ ನಂಬಿದ್ದಾರೆ. ನಾನು ಇವರಿಗೋಸ್ಕರ ಕೇಳಿಕೊಳ್ಳುತ್ತೇನೆ ನೀನು ನನಗೆ ಕೊಟ್ಟವರಿಗೋಸ್ಕರವೇ ಕೇಳಿಕೊಳ್ಳುತ್ತೇನೆ......ಆದರೆ ಇವರಿಗೋಸ್ಕರ (ಅಪೋಸ್ತಲರು) ಮಾತ್ರವಲ್ಲದೆ ಇವರ ವಾಕ್ಯದಿಂದ ನನ್ನನ್ನು ನಂಬುವವರಿಗೋಸ್ಕರ (ಇಡೀ ಸುವಾರ್ತಾಯುಗದ ಮತ್ತು ಅದರ ಅಂತ್ಯದ ವರೆಗೂ ಇರುವ ಸಭೆಗೆ) ಸಹ ಕೇಳಿಕೊಳ್ಳುತ್ತೇನೆ. ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದು ಲೋಕವು ನಂಬುವದಕ್ಕಾಗಿ ಅವರೆಲ್ಲರೂ (ಹೃದಯದಲ್ಲಿ ಉದ್ದೇಶದಲ್ಲಿ ಹಾಗೂ ಪ್ರೀತಿಯಲ್ಲಿ) ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ. (ಆನಂತರ ಆತನು ಈ ಆಯ್ಕೆಯ ಅಂದರೆ ಅಪೋಸ್ತಲರು ಹಾಗೂ ಸಂಪೂರ್ಣವಾದ ಕ್ರಿಸ್ತನ ದೇಹ ಎರಡನ್ನು ಆದುಕೊಂಡುದರ ಅಂತಿಮ ಉದ್ದೇಶವನ್ನು ಈ ಮುಂದಿನ ಮಾತಿನಲ್ಲಿ ಹೇಳಿದ್ದಾನೆ) ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀಯೆಂದು ಲೋಕವು (ದೇವರು ಲೋಕದವರು ಪಾಪಿಗಳಾಗಿದ್ದಾಗಲೇ ಅವರ ಮೇಲೆ ಎಷ್ಟೋ ಪ್ರೀತಿಯನ್ನು ಇಟ್ಟು ನಾನು ಅವರನ್ನು ವಿಮೋಚಿಸಿ ಅವರನ್ನು ಪುನರುದ್ಧಾರಗೊಳಿಸಲು ಕಳುಹಿಸಿಕೊಟ್ಟಿದ್ದೀ ಎಂಬುದನ್ನು) ನಂಬುವುದಕ್ಕಾಗಿ... ಕೇಳಿಕೊಳ್ಳುತ್ತೇನೆ.

ಅಪೋಸ್ತಲರ ಸಂಖ್ಯೆಯು ಯಾಕೋಬನ ಮಕ್ಕಳ ಸಂಖ್ಯೆಯನ್ನು ಹೋಲುತ್ತದೆ. ಇಸ್ರಾಯೇಲ್ಯರ ಹನ್ನೆರಡು ಕುಲಗಳ ಸಂಸ್ಥಾಪಕರೂ ಹಾಗೂ ಪ್ರತಿನಿಧಿಗಳು ಛಾಯಾರೂಪವಾಗಿ ಅವರಲ್ಲಿದ್ದ ಗುಣಸ್ವಭಾವಗಳು ಒಂದು ಹಂತದಲ್ಲಿ ಇಡೀ ಸುವಾರ್ತಾಯುಗದ ಸಭೆಗೆ ಸೂಚನೆಯಾಗಿರುವುದು ಮತ್ತು ಇನ್ನೊಂದು ಹಂತದಲ್ಲಿ ಸಂಪೂರ್ಣವಾಗಿ ಲೋಕವನ್ನು ಸೂಚಿಸುವುದು. (ದೇವದರ್ಶನ ಗುಡಾರದ ಛಾಯಾರೂಪಗಳು

ಎಂಬ ಪುಸ್ತಕವನ್ನು ನೋಡಿ) ಅಲ್ಲದೆ ಪ್ರಕಟನಾ ಗ್ರಂಥದಲ್ಲಿ ಈ ಹನ್ನೆರಡು ಅಪೋಸ್ತಲರನ್ನು ಮಹಿಮಾ ಪದವಿಗೆ ಸೇರಿದ ಸಭೆಯಾದ ಹೊಸ ಯೆರೂಸಲೇಮಿನ ಅಸ್ತಿವಾರಗಳನ್ನಾಗಿ ಹೆಸರಿಸಲಾಗಿದೆ. (ಪ್ರಕಟನೆ 21:14; ಎಫೆಸ 2:20, 21) ಹೀಗೆಯೇ ಕೇವಲ ಅಸ್ತಿವಾರಗಳಾಗಿ ಸಭೆಗೆ ಆಧಾರವಾಗಿರುವವರನ್ನೇ ಅಂತ್ಯದಲ್ಲಿ ಅಸ್ತಿವಾರಗಳಾಗಿ ಇಡೀ ಲೋಕಕ್ಕೆ ಆಧಾರವಾಗುವಂತೆ ರೂಪಿಸಲಾಗಿದೆ. ಆದರೆ ಈ ಅಸ್ತಿವಾರವನ್ನು ಮರಳಿನ ಮೇಲೆ ಹಾಕಿದ್ದಲ್ಲಿ ಅದರ ಮೇಲೆ ಎಬ್ಬಿಸಲಾಗುವ ಕಟ್ಟಡವು ಬಹು ಸುರಕ್ಷಿತವಾಗಿದ್ದು ನಿತ್ಯವಾಗಿ ನಿಲ್ಲುವಂಥದ್ದಾಗಿರುವುದಿಲ್ಲ. (ಮತ್ತಾಯ 7:25–27) ಆದರೆ ಆ ಅಸ್ತಿವಾರವನ್ನು ಮರಳಿನ ಮೇಲೆ ಹಾಕದೆ ದೃಢವಾಗಿಯೂ ನಿಶ್ಚಲವಾಗಿಯೂ ಇರುವ ಬಂಡೆಯಾದ ಕ್ರಿಸ್ತ ಯೇಸುವಿನ ಮೇಲೆ ಹಾಕಲಾಗಿರುವುದು. – ಮತ್ತಾಯ 16:16–18; 1 ಪೇತ್ರ 2:4–8.

ಕರ್ತನ ಸೇವೆಯ ಆರಂಭದಲ್ಲೇ ಎಲ್ಲಾ ಹನ್ನೆರಡು ಮಂದಿಯನ್ನು ಆದುಕೊಂಡದ್ದು ಅವರು ಆರಂಭದಿಂದಲೂ ತನ್ನ ಜೊತೆಯಲ್ಲಿದ್ದ ಕಾರಣ ತನಗೆ ಸಾಕ್ಷಿಯಾಗಿರಬೇಕೆಂಬುದಕ್ಕಾಗಿತ್ತು. ಅವರಲ್ಲಿ ಒಬ್ಬನು (ಯೂದನು) ವಿಶ್ವಾಸಘಾತುಕನಾಗಿ ನಡಕೊಂಡದ್ದರಿಂದ ಅವನು ತೆಗೆದುಹಾಕಲ್ಪಟ್ಟು, ಕರ್ತನು ಅವನ ಜಾಗಕ್ಕೆ ತಾನು ಪುನರುತ್ಥಾನವಾಗಿ ಪರಲೋಕಕ್ಕೆ ಏರಿಹೋದ ನಂತರ ತನ್ನ ಮಹಿಮೆಯನ್ನು ಕಂಡು ಅದಕ್ಕೆ ಸಾಕ್ಷಿಯಾದ ಪೌಲನನ್ನು ಒದಗಿಸಿಕೊಟ್ಟನು. (ಅ.ಕೃ. 26:13; 1 ಕೊರಿಂಥ 15:8) ಮತ್ತು ಹೀಗೆ ಕರ್ತನ ಸೇವೆ ಮರಣ ಪುನರುತ್ಥಾನಗಳನ್ನು ಕಂಡು ಕೇಳಿ ಅದಕ್ಕೆ ಸಾಕ್ಷಿಗಳಾಗಿದ್ದ ಹನ್ನೊಂದು ಮಂದಿ ಹಾಗೂ ತಾನು ಪ್ರಭಾವಸ್ಥಾನಕ್ಕೆ ಏರಿಸಲ್ಪಟ್ಟದ್ದಕ್ಕೆ ಸಾಕ್ಷಿಯಾಗಿದ್ದ ಹನ್ನೆರಡನೆಯವನ ಸಾಕ್ಷಿಪ್ರಮಾಣಗಳು (ಸುವಾರ್ತಾ) ಯುಗದ ಅಂತ್ಯದ ವರೆಗಿನ ಇಡೀ ಸಭೆಯ ನಂಬಿಕೆಗೆ ದೃಢವಾದ ಅಸ್ತಿವಾರವಾಗಿತ್ತು. ಯೂದನ ಸ್ಥಾನಕ್ಕೆ ಮತ್ತೀಯನನ್ನು ಆಯ್ಕೆಮಾಡಿಕೊಂಡದ್ದು ಕರ್ತನ ಆದೇಶವಿಲ್ಲದೆಯೇ ಆತನ ಕಾರ್ಯೋದ್ದೇಶಗಳನ್ನು ನೆರವೇರಿಸುವಲ್ಲಿ ಹನ್ನೊಂದು ಮಂದಿಯ ಕಡೆಯಿಂದಾದ ಮಾನವಗುಣದ ಅಧಿಕಪ್ರಸಂಗತನದ ಒಂದು ತಪ್ಪಾಗಿತ್ತು. (ಅ.ಕೃ. 1:23–26) ಇದು ನಡೆದದ್ದು ಪವಿತ್ರಾತ್ಮನು ಬಂದಿಳಿದ ಪಂಚಾಶತ್ತಮ ದಿನದ ಹಿಂದಿನ ದಿನದಂದು. ಆ ಹನ್ನೊಂದು ಮಂದಿ ಇಬ್ಬರನ್ನು ಆದುಕೊಂಡು ಅವರಲ್ಲಿ ತನಗೆ ಒಪ್ಪಿಗೆಯಾಗುವವನನ್ನು ತಾವು ಎತ್ತುವ ಚೀಟು ಯಾವನ ಮೇಲೆ ಬೀಳುವುದೋ ಆ ಮೂಲಕ ಸೂಚಿಸಬೇಕೆಂದು ಕರ್ತನನ್ನು ಕೇಳಿಕೊಂಡರು; ಸಹಜವಾಗಿ ಚೀಟು ಅವರಲ್ಲಿ ಒಬ್ಬನ ಮೇಲೆ ಬೀಳಬೇಕಿತ್ತು; ಆದರೆ ಅದು ಕರ್ತನ ಚಿತ್ತದ ಸೂಚನೆಯಾಗಿರಲಿಲ್ಲ; ಅಲ್ಲದೆ ಕರ್ತನು ಅವರ ಆಯ್ಕೆಯನ್ನು ಸುಲಭವಾಗಿ ನಿರ್ಲಕ್ಷಿಸಿ, ಮುಂದೆ ಒಂದು ನಿಗದಿತ ಕಾಲದಲ್ಲಿ ಪೌಲನನ್ನು ಆದುಕೊಂಡದ್ದರಲ್ಲಿ ತನ್ನ ಆಯ್ಕೆಯನ್ನು ಸೂಚಿಸಿದನು. ಮತ್ತು ನಂತರದಲ್ಲಿ ತನ್ನ ಪ್ರಕಟನೆಯ ಗ್ರಂಥದಲ್ಲಿ ಅವರನ್ನು ಹೊಸ ಯೆರೂಸಲೇಮಿನ ಹನ್ನೆರಡು ಅಸ್ತಿವಾರಗಳನ್ನಾಗಿ ವರ್ಣನೆ ಮಾಡಿದ್ದಾನೆ, ಹದಿಮೂರನ್ನಾಗಿ ಅಲ್ಲ. ಮತ್ತೀಯನು ಬಹು ಉತ್ಕೃಷ್ಟನಾದ ಸಹೋದರನಾಗಿದ್ದ ಸಂಭವವಿತ್ತು, ಆದರೆ ಅವನು ಒಬ್ಬ ಅಪೋಸ್ತಲನಾಗಿರಲಿಲ್ಲ.

ಆದರೆ ನಾವು ವಿಚಾರಿಸುವುದೇನೆಂದರೆ, ಸಭೆಯ ಮುಖ್ಯ ಸೇವಾಸ್ಥಾನಕ್ಕೆ ಭರ್ತಿಮಾಡಲು ಈ ಸಾಧಾರಣರಾದ ಹನ್ನೆರಡು ಮಂದಿಯನ್ನು ಅಪೋಸ್ತಲರನ್ನಾಗಿ ನೇಮಿಸಿದ್ದಕ್ಕೆ ಯಾವ ಸಾಕ್ಷ್ಯಾಧಾರಗಳಿವೆ? ನಿಜ, ನಮ್ಮ ಕರ್ತನು ಪುನರುತ್ಥಾನವಾಗಿ ಹಾಗು ದಿವಾರೋಹಣವಾದ ನಂತರ ಅಪೋಸ್ತಲರು ಬಾಲ್ಯಾವಸ್ಥೆಯಲ್ಲಿದ್ದ ಸಭೆಗೆ ಬಲವೂ ಆದರಣೆಯೂ ಆಗಿದ್ದರೆಂಬುದನ್ನು ನಾವು ನೋಡುತ್ತೇವೆ. ಕರ್ತನ ಶಿಷ್ಯರಾಗಿ ಸತತವಾಗಿ ಆತನ ಜೊತೆಗಾರರಾಗಿದ್ದು, ಆತನ ಅದ್ಭುತಕಾರ್ಯಗಳಿಗೆ ಪ್ರತ್ಯಕ್ಷಸಾಕ್ಷಿಗಳಾಗಿದ್ದು, ಆತನಿಗಾದ ನಿಂದನೆಯನ್ನು ತಾವೂ ಅನುಭವಿಸುವುದರಲ್ಲಿ ತಮ್ಮ ಶ್ರದ್ಧೆ ನಂಬಿಗಸ್ತಿಕೆಗಳನ್ನು ಪ್ರಮಾಣೀಕರಿಸಿ ತೋರಿಸಿದ ಅವರಲ್ಲಿ ತಮ್ಮ ಕಾಲದ ಭಕ್ತರು ಬಹು ಸಹಜವಾಗಿ ತಮ್ಮ ನಂಬಿಕೆಗೆ ಆಸರೆಯನ್ನು ಕಂಡುಕೊಂಡು, ಅವರ ಉಪದೇಶದಲ್ಲಿ ತಾವು ವಿಶ್ರಮಿಸಿದವರಾಗಿ, ಅವರ ನಿದರ್ಶನಗಳಿಂದ ಧೈರ್ಯವನ್ನು ತಂದು ಕೊಂಡವರಾಗಿ ಅವರ ಬುದ್ಧಿಮಾತುಗಳಿಗೆ ವಿವೇಕದಿಂದ ಲಕ್ಷ್ಯಕೊಡುವವರಾಗಿದ್ದರು. ಆದರೆ ಅವರಿಂದ ಎಂದಾದರೂ ಇಂಥ ಸಹಾಯಗಳಿಗಿಂತಲೂ ಹೆಚ್ಚಿನದನ್ನು ನಿರೀಕ್ಷಿಸಲು ಉದ್ದೇಶಿಸಲ್ಪಟ್ಟಿದ್ದರೋ? ಅವರು ಎಂದಾದರೂ ಅಧಿಕಾರವುಳ್ಳ ಬೋಧಕರಾಗಿ ಅವರ ಮಾತುಗಳು ಇತರರಿಗಿಂತ ಹೆಚ್ಚಾಗಿ ದೇವರ ಮನಸ್ಸನ್ನು ವ್ಯಕ್ತಗೊಳಿಸಲು ಉದ್ದೇಶಿಸಲ್ಪಟ್ಟಿದ್ದರೋ?

ನಮ್ಮ ಉತ್ತರ, ಹೌದು! ಸಭೆಯು ಅವರನ್ನು ಹೀಗೆ ಪರಿಗಣಿಸಬೇಕೆಂಬುದನ್ನೂ ಹಾಗೂ ಅಭಿಷಕ್ತರ ಪೂರ್ಣ ಮಂಡಲಿಗೆ ಉಪಯುಕ್ತವಾದ ಸೇವೆಯನ್ನು ಅವರಿಂದ ಮಾಡಿಸಲ್ಪಡಬೇಕೆಂದು ಕರ್ತನು ಸ್ಪಷ್ಟವಾಗಿ ಸೂಚಿಸಿ ಹೇಳಿರುವನು. ಆತನೇ ಸಾಕ್ಷಿಯಾಗಿ ಹೇಳಿರುವುದನ್ನು ಕೇಳೋಣ: (1) ಈಗಾಗಲೇ ಗಮನಿಸಿರುವಂತೆ, ಈ ಮನುಷ್ಯರು ಇತರ ಶಿಷ್ಯರಿಗಿಂತಲೂ ವಿಭಿನ್ನವಾದ ಒಂದು ವರ್ಗವಾಗಿ ಪ್ರತ್ಯೇಕಿಸಲ್ಪಟ್ಟು ಅವರು ಇತರರಿಗಿಂತಲೂ ಭಿನ್ನವಾಗಿರಲು ಅವರಿಗೆ ಅಪೊಸ್ತಲರೆಂಬ ಮಹತ್ವವುಳ್ಳ ಒಂದು ವಿಶಿಷ್ಟವಾದ ಹೆಸರನ್ನು ನೀಡಲು ವಿಶೇಷವಾಗಿ ಕರೆಯಲ್ಪಟ್ಟು ವಿಧಿವತ್ತಾಗಿ ನೇಮಿಸಲ್ಪಟ್ಟದ್ದನ್ನು ನಾವು ನೋಡುತ್ತೇವೆ.

(2) ನಮ್ಮ ಕರ್ತನ ಭೂಲೋಕದಲ್ಲಿನ ಸೇವಾಕಾಲದಲ್ಲಿ ಅಪೋಸ್ತಲರ ಕೆಲಸವು "ಆ ಎಪ್ಪತ್ತು" ಮಂದಿಯವರದಕ್ಕಿಂತಲೂ ಭಿನ್ನವಾದುದೇನೂ ಅಲ್ಲವಾದರೂ ಇಲ್ಲವೇ ಅವರ ಪರಿಶ್ರಮವು ಏನಾದರೂ ಸ್ವಲ್ಪ ಹೆಚ್ಚಿನ ಆಶೀರ್ವಾದಕ್ಕೆ ಸೂಚಕವಾಗೇನೂ ಇರಲಿಲ್ಲವಾದೂ (ಲೂಕ 9:6; 10:17) ಅವರು ಹೆಚ್ಚು ನೇರವಾಗಿ ಹಾಗೂ ಸತತವಾಗಿ ಆತನಿಂದ ತರಬೇತುಹೊಂದುತ್ತಿದ್ದರು. ಮತ್ತು ಅವರಲ್ಲಿ ಕೆಲವರು ಇಲ್ಲವೇ ಎಲ್ಲರೂ ಆತನ ಮೂರುವರೆ ವರುಷದ ಸೇವಾಕಾಲದಲ್ಲಿನ ಗಮನಾರ್ಹವಾದ ಪ್ರತಿಯೊಂದು ಮುಖ್ಯಲಕ್ಷಣ ಹಾಗೂ ಘಟನೆಗಳಿಗೆ ಸಾಕ್ಷಿಗಳಾಗಿರಲು ಆದುಕೊಳ್ಳಲ್ಪಟ್ಟಿದ್ದರು. ಆತನ ಉಪದೇಶ ಮತ್ತು ಆತನ ವೈಯುಕ್ತಿಕವಾದ ಗುಣಲಕ್ಷಣ ಹಾಗೂ ಜೀವಿಸಿದ ರೀತಿ ಅಲ್ಲದೆ ಆತನು ಮಾಡಿದ ಅದ್ಭುತಗಳು ಮತ್ತು ಆ ದಿನದಲ್ಲಿ ಆತನು ಮಾಡಿದ ಉಪದೇಶಗಳ ಹಾಗೂ ಕಾರ್ಯಗಳಿಂದ ಉಂಟಾದ

ಪರಿಣಾಮಗಳಿಗೆ ಅವರು ಸಾಕ್ಷಿಯಾಗಿದ್ದರು. ಆತನು ಮಾಡಿದ ಕಡೆಯ ಪಸ್ಕದ ಭೋಜನದಲ್ಲಿ ಭಾಗವಹಿಸಿ ಮತ್ತು ಆ ಮಹತ್ವಪೂರ್ಣವಾದ ಗಳಿಗೆಯಲ್ಲಿ ಆತನಿಂದ ಉಪದೇಶವನ್ನು ಪಡೆಯಲು ಇವರು ಮಾತ್ರ ಕರೆಯಲ್ಪಟ್ಟಿದ್ದರು ಈ ಉಪದೇಶವು ಆ ಭೋಜನದ ಛಾಯಾರೂಪದ ಮಹತ್ವಗಳ ಮತ್ತು ಅದರ ಆಚಾರಕ್ರಮದ ಸ್ವರೂಪವನ್ನು ಬದಲಾವಣೆ ಮಾಡಿ ಇನ್ನು ಮುಂದೆ ಅದನ್ನು ಲೋಕದ ಪಾಪವನ್ನು ಹೊತ್ತುಕೊಂಡು ಹೋಗುವ ದೇವರ ನಿಜರೂಪದ ಯಜ್ಞದ ಕುರಿಯನ್ನು ಸ್ಮರಿಸುವದನ್ನಾಗಿ ಮಾಡಿದನು. ಗೆತ್ಸೆಮೆನೆ ತೋಟದಲ್ಲಿ ಆತನು ಅನುಭವಿಸಿದ ಮನೋವ್ಯಥೆಗಳು ಆತನಿಗಾದ ನಂಬಿಕೆದ್ರೋಹ, ಬಂಧಿಸಲ್ಪಟ್ಟದ್ದು ಹಾಗೂ ತಾನು ತಿಳಿದಿದ್ದಂತೆ ತನಗೆ ಮುಂದೆ ಕಾದಿದ್ದ ವಿಧಿಗೆ ತನ್ನನ್ನು ಮೌನವಾಗಿ ಒಪ್ಪಿಸಿಕೊಟ್ಟಿದ್ದಕ್ಕೆ ಅವರು ಸಾಕ್ಷಿಯಾಗಿದ್ದರು. ಆತನನ್ನು ಶಿಲುಬೆಗೆ ಹಾಕಿದ ಸನ್ನಿವೇಶಗಳು, ಆತನ ಸಾವು ಮತ್ತು ಹೂಣುವಿಕೆ ಮಾತ್ರವಲ್ಲದೆ ಆತನ ಪುನರುತ್ಥಾದ ಸಂಗತಿಗಳಿಗೆ ಸಹ ಅವರು ಸಾಕ್ಷಿಗಳಾಗಿದ್ದರು.

(3) ತನ್ನ ಪುನರುತ್ಥಾನದ ನಂತರದಲ್ಲಿ ಕರ್ತನು ಕೂಡಲೇ ತನ್ನ ಮರಣದಲ್ಲಿ ನಿಲ್ಲಲ್ಪಟ್ಟ ಕಾರ್ಯವನ್ನು ಮುಂದುವರೆಸಿದ್ದನ್ನು ನಾವು ಕಂಡು ಕೊಳ್ಳುತ್ತೇವೆ. ಅದೇನೆಂದರೆ ತನಗೆ ಸಾಕ್ಷಿಗಳಾಗಿರಲು ಆದುಕೊಂಡ ಅಪೋಸ್ತಲರನ್ನು ಮುಂದೆ ಇನ್ನೂ ಹೆಚ್ಚಿನ ರೀತಿಯಲ್ಲಿ ಪೂರ್ಣವಾದ ಸಭೆಗೆ ನಂಬಲರ್ಹವಾದ ಸಾಕ್ಷಿಗಳಾಗಿರಲು ಸಿದ್ಧಗೊಳಿಸುತ್ತಿದ್ದುದು. ಅಪೋಸ್ತಲರನ್ನಲ್ಲದ ಇತರ ಅನೇಕರಿಗೆ ಆತನು ಕಾಣಿಸಿಕೊಂಡಾಗ್ಯೂ ಅಲ್ಲದೆ ಒಂದು ಸಮಯದಲ್ಲಿ ಐದು ನೂರಕ್ಕೂ ಹೆಚ್ಚಿನವರಿಗೆ ಕಾಣಿಸಿಕೊಂಡಾಗ್ಯೂ (1 ಕೊರಿಂಥ 15:5–8) ತಾನು ಪುನರುತ್ಥಾನವಾದ ಸಂಗತಿಯನ್ನು ಅಪೋಸ್ತಲರಿಗೆ ಬಹು ಸ್ಪಷ್ಟವಾಗಿ ಸ್ಥಾಪಿಸುವದರಲ್ಲಿ ವಿಶೇಷವಾದ ಜಾಗ್ರತೆಯನ್ನು ವಹಿಸಿದ್ದುದನ್ನು ನಾವು ಕಂಡುಕೊಳ್ಳುತ್ತೇವೆ. ತನ್ನ ಪುನರುತ್ಥಾನದ ಸಂಗತಿಯನ್ನು ಪ್ರತಿಯೊಬ್ಬ ಅಪೋಸ್ತಲನಿಗೂ ತಿಳಿಸಲು ಸಮಾಧಿಯ ಬಳಿಗೆ ಮೊದಲು ಬಂದ ಸ್ತ್ರೀಯರಿಗೆ ಹೇಳಿ ಕಳುಹಿಸಿದ್ದುದರಲ್ಲಿ ಆತನು ತನ್ನ "ಹನ್ನೊಂದು" ಮಂದಿಯಲ್ಲಿ ಪ್ರತಿಯೊಬ್ಬನನ್ನು ತಾನು ಭೇಟಿ ಮಾಡಲು, ಮತ್ತು ಆತನು ಪೇತ್ರನನ್ನು ವಿಶೇಷವಾಗಿ ಹೆಸರಿಸಿದ್ದರಲ್ಲಿ ಹಿಂದೆ ಆತನು ಅಪನಂಬಿಗಸ್ತನಾಗಿದ್ದ ಕಾರಣ ಅಧೈರ್ಯದಿಂದ ಕುಂದಿಹೋಗ–ಬಾರದೆಂಬುದರಲ್ಲಿಯೂ; (ಮಾರ್ಕ16:7) ಎಮ್ಮಾಹುವಿಗೆ ಹೋಗುವ ದಾರಿಯಲ್ಲಿ ಇಬ್ಬರಿಗೆ ಗ್ರಹಿಸಿಕೊಳ್ಳಲಾಗುವಂತೆ ಅವರ ಮನಸ್ಸುಗಳನ್ನು ತೆರೆದುದರಲ್ಲಿಯೂ (ಲೂಕ 24:27, 32); ಸಂಶಯ ಪಟ್ಟ ತೋಮನಿಗೆ ಮುಟ್ಟಲಾಗುವ ಸಾಕ್ಷ್ಯಾಧಾರದಿಂದ ತೃಪ್ತಿ ಪಡಿಸಿದ್ದುದರಲ್ಲಿಯೂ; ವಿಶೇಷವಾಗಿ ಪೇತ್ರನ ಕಾರ್ಯ ಭಾರವನ್ನು ಮತ್ತೆ ದೃಡಪಡಿಸಿದ್ದರಲ್ಲಿಯೂ; ಅವರೆಲ್ಲರಿಗೂ ಮನವರಿಕೆಯಾಗುವಂತೆಮಾಡಿ ಅವರನ್ನು ಮತ್ತೆ ಕೆಲಸಕ್ಕೆ ಕಳುಹಿಸಿಕೊಟ್ಟುದ್ದರಲ್ಲಿ ಆತನು ವಹಿಸಿದ್ದ ಜಾಗರೂಕತೆಯನ್ನು ನಾವು ಕಂಡುಕೊಳ್ಳುತ್ತೇವೆ. – ಯೋಹಾನ 20:26–28; 21:15–17; ಅ.ಕೃ. 1:1–2; ಲೂಕ 24:52.

(4) ಕರ್ತನು ದಿವಾರೋಹಣವಾದುದಕ್ಕೆ ಸಾಕ್ಷಿಯಾಗಲು ಹನ್ನೊಂದು ಮಂದಿಯನ್ನು ಆದುಕೊಂಡಿದ್ದುದನ್ನು ಮತ್ತು ಆ ಸಂದರ್ಭದಲ್ಲಿ ಯಾರಾದರೂ ಇತರರು ಇದ್ದದಕ್ಕೆ ಸಾಕ್ಷಿಪುರಾವೆಗಳಿಲ್ಲದಿರುವುದನ್ನು ನಾವು ಕಂಡುಕೊಂಡಿದ್ದೇವೆ. ಅ.ಕೃ. 1:1–13; ಹೋಲಿಸಿ ನೋಡಿ, ಅದರಲ್ಲಿ ವಿಶೇಷವಾಗಿ ವಚನ 2,4,9,11 ಗಮನಿಸಿ. "ಗಲಿಲಾಯದವರೇ" ಎಂದು ವ್ಯಕ್ತವಾಗಿರುವಲ್ಲಿ "ಆ ಹನ್ನೊಂದು ಮಂದಿ" ಸೂಚಿತವಾಗಿದ್ದಾರೆ; ಅವರೆಲ್ಲರೂ ಗಲಿಲಾಯದವರಾಗಿದ್ದರು. ಲೂಕ 24:48–51 ಮತ್ತು ಮತ್ತಾಯ 28:16–19 ಸಹ ನೋಡಿ.

ಕರ್ತನನ್ನು ಇತರರು ಕಂಡಿದ್ದಾಗ್ಯೂ ಆತನ ಪುನರುತ್ಥಾನಕ್ಕೆ ಅಪೋಸ್ತಲರು ಹೀಗೆ ವಿಶೇಷ ಸಾಕ್ಷಿಗಳಾಗಿದ್ದರು; ಮತ್ತು ಅವರುಗಳು ಹೀಗೆ ಸಮರ್ಥ ಸಾಕ್ಷಿಗಳಾಗಿ ಅವರ ಸಾಕ್ಷಿಪ್ರಮಾಣಗಳ ಮೇಲೆ ನಂಬಿಕೆಯು ಸುಸ್ಪಷ್ಟವಾಗಿ ಸ್ಥಾಪಿತವಾಗಬೇಕೆಂಬುದನ್ನು ಕರ್ತನು ನಿಶ್ಚಯಮಾಡಿದ್ದನು. ಪೇತ್ರನು ಹೇಳುವುದು: "ಆತನು ಯೆಹೂದ್ಯರ ಸೀಮೆಯಲ್ಲಿಯೂ ಯೆರೂಸಲೇಮಿನಲ್ಲಿಯೂ ಮಾಡಿದ ಎಲ್ಲಾ ಕಾರ್ಯಗಳಿಗೆ ನಾವು ಸಾಕ್ಷಿಗಳಾಗಿದ್ದೇವೆ. ಆತನನ್ನು ಮರದ ಕಂಬಕ್ಕೆ ತೂಗಹಾಕಿ ಕೊಂದರು. ದೇವರು ಆತನನ್ನು ಮೂರನೆಯ ದಿನದಲ್ಲಿ ಎಬ್ಬಿಸಿ ಪ್ರತ್ಯಕ್ಷನಾಗುವಂತೆ ಮಾಡಿದನು; ಆತನು ಎಲ್ಲರಿಗೆ ಪ್ರತ್ಯಕ್ಷನಾಗದೆ ದೇವರು ಮುಂಚಿತವಾಗಿ ಆರಿಸಿ ಕೊಂಡಿದ್ದ ಸಾಕ್ಷಿಗಳಾದ ನಮಗೆ ಪ್ರತ್ಯಕ್ಷನಾದನು. ಆತನು ಸತ್ತವರೊಳಗಿಂದ ಜೀವಿತನಾಗಿ ಎದ್ದು ಬಂದ ಮೇಲೆ ನಾವು ಆತನ ಸಂಗಡ ಅನ್ನಪಾನಗಳನ್ನು ತಕ್ಕೊಂಡೆವು. ಆತನೇ ಜೀವಿತರಿಗೂ ಸತ್ತವರಿಗೂ ನ್ಯಾಯಾಧಿಪತಿಯಾಗಿ ದೇವರಿಂದ ನೇಮಕವಾದವನು ಎಂಬುದನ್ನು ಜನರಿಗೆ ಸಾರಿ ಸಾಕ್ಷಿಹೇಳಬೇಕೆಂದು ದೇವರು ನಮಗೆ ಅಪ್ಪಣೆಕೊಟ್ಟನು." ಅ.ಕೃ. 10:39–43. ನೋಡಿ ಮತ್ತು ಅ.ಕೃ. 13:31; 1 ಕೊರಿಂಥ 15:3–8 ಸಹ ನೋಡಿ.

(5) ಅಪೋಸ್ತಲರ ಸಾಕ್ಷಿಯು ಮೊದಲಿಗೆ ಯೆಹೂದ್ಯರಿಗೆ ಸೀಮಿತವಾಗಿದ್ದರೂ ನಮ್ಮ ಕರ್ತನು ತನ್ನ ಪುನರುತ್ಥಾನದ ನಂತರ ಅವರಿಗೆ––"ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳ ಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ" ಎಂದು ಹೇಳಿದನು. ಮತ್ತು ಆಗ ಆತನು ಇದಕ್ಕೆ ಸೇರಿಸಿ ಇನ್ನೂ ಹೇಳಿದ್ದು: "ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ.... ದೇವರು ಮೇಲಣ ಲೋಕದಿಂದ ನಿಮಗೆ ಶಕ್ತಿಯನ್ನು ಹೊದಿಸುವ ತನಕ ಈ ಪಟ್ಟಣದಲ್ಲೇ (ಯೆರೂಸಲೇಮಿನಲ್ಲೇ) ಕಾದುಕೊಂಡಿರ್ರಿ...ಆದರೆ ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿ–ನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯ ವರೆಗೂ ನನಗೆ ಸಾಕ್ಷಿಗಳಾಗಿರಬೇಕು." (ಲೂಕ 24:47–48; ಅ.ಕೃ. 1:8) ಅಪೋಸ್ತಲರ ಜೀವಿತ ಕಾಲದಲ್ಲಿ ಭೂಲೋಕದ ಕಟ್ಟಕಡೆಯ ಭಾಗವನ್ನು––ಅಂದರೆ ಉದಾಹರಣೆಗಾಗಿ, ಅಮೇರಿಕ ದೇಶವನ್ನು––ತಲುಪಿ ಅಲ್ಲಿ ಹೀಗೆ ಸೇವೆಮಾಡಲು ಅವರಿಗೆ ಸಾಧ್ಯವಾಗದ ಕಾರಣ ಅವರ ದೊಡ್ಡ ಪಾಲಿನ ಸಾಕ್ಷಿ ಕಾರ್ಯವನ್ನು ತಮ್ಮ ಕಾಲದಲ್ಲಿ ಮತ್ತು ತಮ್ಮ ಮರಣಾನಂತರದಲ್ಲಿಯೂ ಬರವಣಿಗೆಗಳ ಮೂಲಕವಾಗಿ

ನೆರವೇರಿಸಲಾಗಿತ್ತೆಂಬುದು ಸ್ಪಷ್ಟ. ಹೀಗೆ ಅವರು ನಮಗೆ ಸಾಕ್ಷಿ ನೀಡಿದ್ದಾರೆ ಹಾಗೂ ಅವರಿಗೆ ನಿರ್ವಹಿಸಲು ಕರ್ತನಿಂದ ನೀಡಲಾದ ಈ ಕಾರ್ಯಭಾರವು ಮತ್ತು ಅವರು ಆತನಿಂದ ಹೊಂದಿದ ನಿರ್ಧಿಷ್ಟವಾದ ತರಬೇತು ಅವರ ಸಾಕ್ಷಿಯನ್ನು ಅತ್ಯುತ್ತಮ ರೀತಿಯಲ್ಲಿ ಸಮರ್ಥಿಸುವಂಥವುಗಳಾಗಿದ್ದು ಅವುಗಳ ವಿಶ್ವಾರ್ಹತೆಗೆ ಭರವಸೆ ನೀಡುವಂಥವುಗಳಾಗಿದ್ದವು.

(6) ವಾಗ್ದಾನಮಾಡಲ್ಪಟ್ಟ ಶಕ್ತಿಗಾಗಿ ಕಾದಿರಬೇಕೆಂಬ ಅಪ್ಪಣೆಗೆ ವಿಧೇಯರಾಗಿ ಅಪೋಸ್ತಲರು ಹಾಗು ಇತರ ಸುಮಾರು ನೂರಿಪ್ಪತ್ತು ಮಂದಿ ಶಿಷ್ಯರು ಯೆರೂಸಲೇಮಿನಲ್ಲಿ ಮೇಲಂತಸ್ತಿನ ಕೊಠಡಿಯಲ್ಲಿ ಪಂಚಾಶತ್ತಮ ದಿನದಂದು ವಾಗ್ದಾತ್ತ ಆಶೀರ್ವಾದವು ಅಂದರೆ ಪವಿತ್ರಾತ್ಮದಲ್ಲಿ ಸ್ನಾನವಾಗಿ "ಮೇಲಿನಿಂದ ಶಕ್ತಿಯು ಹೊದಿಸಲ್ಪಡುವ" ವರೆಗೂ ದಿನವೂ ಪ್ರಾರ್ಥನೆ ಮಾಡುವವರಾಗಿ ಕಾದುಕೊಂಡಿದ್ದರು. (ಅ. ಕೃ. 1:14) ಅಪೋಸ್ತಲರಿಗೆ ವಿಶೇಷವಾಗಿ ವಾಗ್ದಾನಮಾಡಲ್ಪಟ್ಟ ಈ ಶ್ರೇಷ್ಠವಾದ ಆಶೀರ್ವಾದದಲ್ಲಿ ಅಲ್ಲಿದ್ದ ಎಲ್ಲಾ ನಂಬಿಗಸ್ತರಾದ ಆತ್ಮಗಳು ಸ್ಪಷ್ಟವಾಗಿ ಅವರೊಂದಿಗೆ ಪಾಲನ್ನು ಹೊಂದಿದ್ದವು. "ಆಗ ಅವರೆಲ್ಲರೂ ಆ ಆತ್ಮ ತಮತಮಗೆ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾಡುವದಕ್ಕೆ ಪ್ರಾರಂಭಿಸಿದರು. ಹೀಗಿದ್ದರೂ ಅಪೋಸ್ತಲರ ಕೃತ್ಯಗಳು 2:7ರ ಅನುಸಾರ, "ಆ ಹನ್ನೊಂದು ಮಂದಿ" (ಇವರೆಲ್ಲರೂ ಗಲಿಲಾಯದವರು) ಸಾರ್ವಜನಿಕವಾಗಿ ಮಾತನಾಡುವವರಾಗಿದ್ದಂತೆ ಕಾಣುತ್ತದೆ. ಆಗ ದೈವೀಕ ಸತ್ಯಾರ್ಥಗಳ ವಿಷಯವಾಗಿ ಅವರ ಮನಸ್ಸಿನಲ್ಲಿ ಸಂಪೂರ್ಣವಾದ ದರ್ಶನಗಳುಂಟಾಗಿ ಅವರ ಹೃದಯಗಳಲ್ಲಿ ಇದು ಸ್ತೋತ್ರ ಹರ್ಷಾನಂದವನ್ನು ಅವರಿಗೆ ತಂದಿತ್ತೆಂಬುದು ಅಲ್ಲಿ ಸ್ಪಷ್ಟವಾಗಿತ್ತು. ಇದರಿಂದ ಅಲ್ಲಿ ನೆರೆದಿದ್ದ ವಿವಿಧ ಭಾಷೆಯ ಜನರಿಗೆ ಅವರವರ ಭಾಷೆಯಲ್ಲಿ ನುಡಿಯುವ ವರವನ್ನು ಆ ಆತ್ಮನು ಅದ್ಭುತವಾದ ರೀತಿಯಲ್ಲಿ ಅವರಿಗೆ ನೀಡಿದ್ದ ಪ್ರಕಾರ ಅವರು ತಮ್ಮ ಹೃದಯಗಳಲ್ಲಿ ಹೇರಳವಾಗಿ ತುಂಬಿದ್ದ ಆಶ್ಚರ್ಯಕರವಾದ ಸಜೀವವಾಕ್ಯಗಳನ್ನು ನುಡಿಯುತ್ತಿದ್ದರು. ಈ (ಪವಿತ್ರಾತ್ಮದ) ಶಕ್ತಿಯು ಬಂದ ಫಲವಾಗಿ ಆ ದಿನದಲ್ಲಿ ಮೂರು ಸಾವಿರ ಜನರು ಪರಿವರ್ತನೆಯಾಗಿದ್ದರು. ಆ ದಿನದಲ್ಲಿ ನಂಬಿಗಸ್ತರಾಗಿ ಕಾಯುತ್ತಿದ್ದವರೆಲ್ಲರೂ ವಿಶೇಷವಾದ ಆತ್ಮಧಾರೆಯನ್ನು ಹೊಂದಿದವರಾದಾಗ್ಯೂ ಅನ್ಯಜನರೂ ಸಹ ಮುಂದೆ ಅದೇ ಆತ್ಮಧಾರೆಯನ್ನು ಹೊಂದಿದರು. (ಅ.ಕೃ. 10:44–47) ಮತ್ತು ಅಲ್ಲಿಂದೀಚೆಗೆ ಇದು ಪ್ರತಿಷ್ಠಿತರಾದ ನಂಬಿಗಸ್ತರಲ್ಲಿ ಮುಂದುವರೆಯುತ್ತಲಿದೆ. ಮತ್ತು "ಆ ಹನ್ನೊಂದು ಮಂದಿಯಲ್ಲಿ" ಎಲ್ಲರೂ ಅಲ್ಲಿ ಇದ್ದು ಅವರಲ್ಲಿ ಒಬ್ಬನಾದರೂ ಆತ್ಮದ ಈ ವರವನ್ನು ಹೊಂದಲು ವಿಫಲವಾಗಲಿಲ್ಲವೆಂಬುದನ್ನು ನಮಗೆ ನಿರ್ಧಿಷ್ಟವಾದ ರೀತಿಯಲ್ಲಿ ಖಚಿತಮಾಡಲ್ಪಟ್ಟಿದೆ. ಇಲ್ಲವಾದ್ದಲ್ಲಿ ಅವರನ್ನು ಅಪೋಸ್ತಲರೆಂದು ಗುರುತಿಸಲು ಆಸ್ಪದವಿರುತ್ತಿರಲಿಲ್ಲ. – ಅ.ಕೃ. 1:13–14; 2:1 ನೋಡಿ.

(7) ಕರ್ತನು ಒಬ್ಬ ಯೂದನನ್ನು ಅಪೋಸ್ತಲರಲ್ಲಿ ಕಾಣಿಸಿಕೊಳ್ಳುವಂತೆ ಬಿಟ್ಟಿದ್ದರೂ ತಾನು ಪ್ರತ್ಯಕ್ಷನಾಗಿರುವುದನ್ನು ಕಾಣುವ ಹಾಗು ವೈಯುಕ್ತಿಕವಾಗಿ ನೀಡಿದ ಉಪದೇಶವನ್ನು ಕೇಳುವ ಸೌಭಾಗ್ಯಗಳೂ ಅಲ್ಲದೆ ಪಂಚಾಶತ್ತಮ ದಿನದಲ್ಲಿ ಇತರರು ಹೊಂದಿದಂಥ ಪವಿತ್ರಾತ್ಮಧಾರೆ ಮುಂತಾದವುಗಳು ಸಂಪೂರ್ಣವಾಗಿ ನೆರವೇರುವವರೆಗೂ ಸಹ ತಾರ್ಸ ಪಟ್ಟಣದ ಸೌಲನನ್ನು ನೂತನ ವ್ಯವಸ್ಥೆಯ ಈ ಸತ್ಯಾರ್ಥಗಳ ವಿಷಯಗಳಲ್ಲಿ ತಿಳುವಳಿಕೆ ಇಲ್ಲದವನಂತೆ ಬಿಟ್ಟದ್ದು ಗಮನಾರ್ಹವಾಗಿದ್ದಂತೆ ತೋರುತ್ತದೆ. ನಾವು ಈಗ ಇದನ್ನು ಗ್ರಹಿಸುವ ಸೌಭಾಗ್ಯ ಪಡೆದಿರುವಂತೆ ಆಗ (ಕರ್ತನ) ಮತ್ತೊಂದು ವಿವೇಕ–ಪೂರ್ಣವಾದ ಕಾರ್ಯನೀತಿಯ ಒಂದು ಅತ್ಯಂತ ಚಮತ್ಕಾರದ ನಡೆಯು ಸಹ ಅಲ್ಲಿತ್ತು; ಏಕೆಂದರೆ ಪೌಲನು ಕರ್ತನು ಹೊಂದಿದ ಮಹಿಮೆಗೆ ಸಾಕ್ಷಿಯಾಗ ಮಾಡಲ್ಪಟ್ಟಿದ್ದನು. ಅಂದರೆ ಅವನು "ದಿನ ತುಂಬದೆ ಹುಟ್ಟಿದ ಶಿಶುವಾಗಿ", ಸಭೆಯು ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟು ಮಹಿಮಾ ಪದವಿಯನ್ನು ಹೊಂದಿ ಕರ್ತನ ಸಾರೂಪ್ಯವನ್ನು ಪಡೆದು ಅತನಿರುವಂತೆ ಆತನನ್ನು ನೋಡುವ ಕಾಲಕ್ಕೆ ಮೊದಲೇ ಸತ್ತವರೊಳಗಿಂದ ಎಬ್ಬಿಸಲ್ಪಟ್ಟವನಂತಾಗಿ ಕರ್ತನ ಮಹಿಮೆಯನ್ನು ಕಂಡವನಾಗಿದ್ದನು. (1 ಕೊರಿಂಥ 15:8; 1ಯೋಹಾನ 3:2) ಮತ್ತು ಪೌಲನು ಸಮರ್ಥನೂ ನಂಬಲರ್ಹನೂ ಆದ ಸಾಕ್ಷಿಯಾಗು–ವುದಕ್ಕೆ ಇದ್ದ ಕೊರತೆಯನ್ನು ನೀಗುವುದಕ್ಕಿಂತಲೂ ಹೆಚ್ಚಿನದನ್ನು ಕರ್ತನು ತನ್ನ ದರ್ಶನಗಳ ಹಾಗು ತಾನು ಪ್ರಕಟಿಸಿಕೊಳ್ಳುವುದರ ಮೂಲಕವಾಗಿ ಆತನಿಗೆ ಮಾಡಿದ್ದನು. – 2 ಕೊರಿಂಥ 12:1–4,7; ಗಲಾತ್ಯ 1:11–12; 2:2.

ಅಲ್ಲದೆ ಕರ್ತನು ತಾನೇ ನಮಗೆ ಹೀಗೆ ಸಾಕ್ಷಿ ಹೇಳಿದ್ದಾನೆ (ಅ.ಕೃ. 9:15), "...ಆ ಮನುಷ್ಯನು ಅನ್ಯಜನರಿಗೂ ಅರಸುಗಳಿಗೂ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ." ಕನಿಷ್ಠ ಪಕ್ಷ ಇವೆಲ್ಲವುಗಳೂ ಆರಿಸಲ್ಪಟ್ಟ ಹನ್ನೆರಡು ಮಂದಿಗಳಲ್ಲಿ ಒಬ್ಬನನ್ನಾಗಿ ನಿಲ್ಲಿಸುವುದಕ್ಕೆ ಬೇಕಿದ್ದವುಗಳನ್ನು ಪೌಲನಿಗೆ ಹೀಗೆ ಒದಗಿಸಿಕೊಡಲಾಗಿತ್ತು. ಕರ್ತನ ಈ ಸಾಕ್ಷಿ ಹಾಗೂ ಸತ್ಯಕ್ಕೆ ಸಾಕ್ಷಿ ನೀಡುವಲ್ಲಿ ಪೌಲನಲ್ಲಿದ್ದ ಪ್ರಸಂಶನಾರ್ಹವಾದ ಆಸಕ್ತಿ ಅಲ್ಲದೆ ಆತನಲ್ಲಿ ತೋರಿಬಂದ ಪವಿತ್ರಾತ್ಮನ ಶಕ್ತಿಯ ಜೊತೆಗೆ ತನ್ನ ವಿಷಯವಾಗಿ ಪೌಲನು ತಾನೇ ನುಡಿದಿರುವ ಸಾಕ್ಷಿಯು ಹೀಗಿದೆ: "ಸಹೋದರರೇ, ನಾನು ಸಾರಿದ ಸುವಾರ್ತೆಯಂತೂ ಮನುಷ್ಯ ಕಲ್ಪನೆಯಲ್ಲವೆಂದು ನಿಮಗೆ ತಿಳಿಯಪಡಿಸುತ್ತೇನೆ. ನಾನು ಅದನ್ನು ಮನುಷ್ಯನಿಂದ ಹೊಂದಲಿಲ್ಲ, ನನಗೆ ಯಾರೂ ಉಪದೇಶಿಸಲಿಲ್ಲ, ಯೇಸು ಕ್ರಿಸ್ತನೇ ಅದನ್ನು ನನಗೆ ಪ್ರಕಟಿಸಿದನು." (ಗಲಾತ್ಯ 1:11–12) ಆತನು ಮತ್ತೂ ಹೇಳಿರುವುದೇನೆಂದರೆ: "ಸುನ್ನತಿಯಾದವರಲ್ಲಿ ಅಪೋಸ್ತಲತನವನ್ನು ನಡಿಸುವದಕ್ಕೋಸ್ಕರ ಪೇತ್ರನನ್ನು ಪ್ರೇರಿಸಿದಾತನು ಅನ್ಯಜನರಲ್ಲಿ ಅದನ್ನು ನಡಿಸುವುದಕ್ಕೋಸ್ಕರ ನನ್ನನ್ನೂ ಪ್ರೇರಿಸಿದನು." (ಗಲಾತ್ಯ 2:8)

ಎಲ್ಲರಿಗಿಂತ ಮೊದಲಾಗಿ ಪೌಲನು ಅನ್ಯಜನರಿಗೆ ಅಪೋಸ್ತಲನಾಗಿದ್ದನು ಹಾಗೂ ಇತರರು ಹೆಚ್ಚು ವಿಶೇಷವಾಗಿ ಯೆಹೂದ್ಯರಿಗೆ ಅಪೋಸ್ತಲರಾಗಿದ್ದರು. ಆದುದರಿಂದ ಪೌಲನು ತನ್ನ ಹಲವಾರು ಪತ್ರಿಕೆಗಳ ಮೂಲಕವಾಗಿ ನಮಗೆ ಹೇಳಲು ಇತರರಿಗಿಂತಲೂ ಹೆಚ್ಚಾದ ವಿಷಯಗಳನ್ನು ಹೊಂದಿದ್ದನು. ಆದರೆ ತಮ್ಮ ದಿನಗಳಲ್ಲಿ ಆ ಹನ್ನೊಂದು ಮಂದಿಯು ಸಭೆಯಲ್ಲಿ

ಈತನಿಗಿಂತಲೂ ಪ್ರಖ್ಯಾತರಾಗಿದ್ದರು. ಪೌಲನೇ ಹೇಳಿರುವಂತೆ ಪೇತ್ರ ಯಾಕೋಬ ಯೋಹಾನರು ಅವರಲ್ಲಿ ಸಭಾಸ್ತಂಭಗಳೆಂದು ಹೆಸರುಗೊಂಡಿದ್ದರು. (ಗಲಾತ್ಯ 2:9) ಪೌಲನು ಹೊಸ ಸ್ಥಳಗಳಲ್ಲಿನ ಸಭಾನ್ವೇಶಣೆಯಲ್ಲಿ ಮುನ್ನುಗ್ಗುವವನಾಗಿದ್ದನು ಮತ್ತು ಅನ್ಯಜನರಲ್ಲಿ ಅವನ ಕಾರ್ಯವು ಯಾವ ವಿಧದಲ್ಲಿಯೂ ಅಲ್ಪವಾಗಿರಲಿಲ್ಲ ಇಲ್ಲವೇ ಮನುಷ್ಯರ ಎಣಿಕೆಯಲ್ಲಿ ಅದು ಗೌರವವುಳ್ಳ ಕಾರ್ಯವೇನೂ ಆಗಿರಲ್ಲಿಲ್ಲ. ಅದು ಆತನನ್ನು ಎಲ್ಲಾ ಬಗೆಯ ಅಪಾಯ ಹಿಂಸೆ ಮತ್ತು ಅವಮಾನಕ್ಕೆ ಗುರಿಯಾಗ ಮಾಡಿತ್ತು. ಸಭೆಯಲ್ಲಿಯೂ ಸಹ ಆತನ ಆಸಕ್ತಿಯು ಪೂರ್ಣವಾಗಿ ಗ್ರಹಿಸಿ ಪ್ರಸಂಶಿಸಲ್ಪಟ್ಟಿರಲಿಲ್ಲ; ಹೀಗಾಗಿ ತನ್ನ ಅಪೋಸ್ತಲತನಕ್ಕೆ ಆತನು ಸಾಕ್ಷ್ಯಾಧಾರಗಳನ್ನು ಒದಗಿಸುತ್ತಿದ್ದ ಸನ್ನಿವೇಶಗಳಿದ್ದು ಮತ್ತು ತಾನು ಅಧಿಕಾರದಲ್ಲಿ ಮತ್ತು ಬಲದಲ್ಲಿ ಇತರರಿಗಿಂತಲೂ "ಒಂದರಲ್ಲೂ ಕಡಿಮೆಯಲ್ಲ" ಎಂಬುದನ್ನು ಹೀಗೆ ಅವರ ಜ್ಞಾಪಕಕ್ಕೆ ತಂದು ಪ್ರಮಾಣಮಾಡಿ ತೋರಿಸಬೇಕಾಗುತ್ತಿತ್ತು. – 1 ಕೊರಿಂಥ 9:1; 2 ಕೊರಿಂಥ 11:5.

ನಾವು ಮುಂದುವರಿದು ಸಭೆಯಲ್ಲಿ ಅಪೋಸ್ತಲರ ಸೇವಾಸ್ಥಾನದ ವಿಷಯವಾಗಿ ವಿಚಾರಮಾಡಿ ನೋಡೋಣ: ನಾವು ಕೇವಲ ಕರ್ತನು ನೀಡಿದ ಐತಿಹಾಸಿಕ ಮಹತ್ವವುಳ್ಳ ಸಾಕ್ಷಿ ಹಾಗೂ ಆತನ ಉಪದೇಶಗಳನ್ನು ಮಾತ್ರ ಅವಲಂಬಿಸ–ಬೇಕಿರುವುದೇ? ಅಥವಾ ಇದಕ್ಕೂ ಹೆಚ್ಚಾದುದನ್ನು ಅವರ ಸಾಕ್ಷಿ ಒಳಗೊಂಡಿರುವುದೇ?

ಸ್ಪಷ್ಟವಾಗಿ ಹೇಳುವುದಾದರೆ, ಅವರು ತಾವು ತಿಳಿದಿರುವ ಸಂಗತಿಗಳೆಲ್ಲವುಗಳಿಗೆ ಹಾಗು ಪವಿತ್ರಾತ್ಮನ ವಿಶೇಷ ಮಾರ್ಗ ದರ್ಶನದಲ್ಲಿ ಕಲಿತುಕೊಂಡಿದ್ದ ವಿಷಯಗಳಿಗೆ ಸಾಕ್ಷಿಗಳಾಗ ಬೇಕಿತ್ತು. ಅವರು ಹೀಗೆ ಮಾಡುವುದರ ಮೂಲಕ ಮಾತ್ರ ತಮ್ಮ ವಶಕ್ಕೆ ಒಪ್ಪಿಸಿರುವಂಥ ವಿಷಯಗಳಲ್ಲಿ ನಂಬಿಗಸ್ತರಾದ ಮನೇವಾರ್ತೆಯವರಾಗಬಹುದಿತ್ತು. "ಜನರು ನಮ್ಮನ್ನು.... ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆ ಯವರೆಂತಲೂ ಎಣಿಸಬೇಕು." (1 ಕೊರಿಂಥ 4:1) ಕರ್ತನು ಈ ಮುಂದೆ ಹೇಳಿರುವುದರಲ್ಲಿ ಇದೇ ಉದ್ದೇಶವು ವ್ಯಕ್ತವಾಗಿದೆ: "ನಾನು ನಿಮ್ಮನ್ನು ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ಮಾಡುವೆನು." ಮತ್ತೆ "ನನ್ನ ಕುರಿಮರಿಗಳನ್ನು" ಮತ್ತು "ಕುರಿಗಳನ್ನು ಮೇಯಿಸು." ಇನ್ನೊಮ್ಮೆ ಪೌಲನು ಹೇಳಿರುವುದು: "ಆ ಮರ್ಮವು {ಸಭೆಯನ್ನು ಉನ್ನತ ಪದವಿಗೆ (ಅಂದರೆ ಶಿರಸ್ಸು ದೇಹವನ್ನೊಳಗೊಂಡ ಕ್ರಿಸ್ತನೆಂಬುವವನ ದೇಹದ ಅಂಗಗಳಾಗುವುದಕ್ಕೆ) ಕರೆದಿರುವ ವಿಷಯವಾಗಿರುವ ಗಾಢವಾದ ಸುವಾರ್ತಾ ಸತ್ಯಾರ್ಥಗಳು} ಈ ಕಾಲದಲ್ಲಿ ಪರಿಶುದ್ಧರಿಗೂ (ನೀತಿವಂತರೆಂದು ನಿರ್ಣಯ ಹೊಂದಿ ಪ್ರತಿಷ್ಠಿತರಾಗಿ ಪರಿಶುದ್ಧರೆಂದು ಎಣಿಸಲ್ಪಟ್ಟವರು) ಅಪೋಸ್ತಲರಿಗೂ ಪ್ರವಾದಿಗಳಿಗೂ ತಿಳಿಸಲ್ಪಟ್ಟಂತೆ ಬೇರೆ ಕಾಲಗಳಲ್ಲಿದ್ದ ಜನರಿಗೆ ತಿಳಿಸಲ್ಪಡಲಿಲ್ಲ." ಮತ್ತು ಹೀಗೆ ಇದನ್ನು ಅವರಿಗೆ ತಿಳಿಸುವಲ್ಲಿ ಅದರ ಉದ್ದೇಶವೇನಾಗಿತ್ತೆಂದರೆ "ಸಮಸ್ತವನ್ನು ಸೃಷ್ಟಿಸಿದ ದೇವರಲ್ಲಿ ಆದಿಯಿಂದ ಮರೆಯಾಗಿದ್ದ ಮರ್ಮವು (ಕ್ರಿಸ್ತನೊಂದಿಗೆ ಸಹಬಾಧ್ಯರಾಗುವುದೆಂಬ ಈ ಮರ್ಮದಲ್ಲಿ ಪಾಲುಗಾರರಾಗುವ ಸೌಭಾಗ್ಯವನ್ನು ಪಡೆಯಲು ಇರುವ ಷರತ್ತು ವಿಧಿಗಳು) ಪ್ರಕಟವಾಗುವ ವಿಧ ಎಂಥದ್ದೆಂಬುದನ್ನು ತಿಳಿಸುವ ಹಾಗೆ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು." (ಎಫೆಸ್ಸ 3:3–11) ಮತ್ತು ಪುನಃ ಯೇಸುಕ್ರಿಸ್ತನು ಮುಖ್ಯವಾದ ಮೂಲೆಗಲ್ಲಾಗಿದ್ದು ಅಪೋಸ್ತಲರು ಹಾಗೂ ಪ್ರವಾದಿಗಳೆಂಬ ಅಸ್ತಿವಾರದ ಮೇಲೆ ಸಭೆಯು ಹೇಗೆ ಕಟ್ಟಲ್ಪಡುವುದೆಂದು ಹೇಳಿದ ನಂತರ (ಎಫೆಸ್ಸ 2:20–22) ಆತನು ಹೇಳಿರುವುದು "ಹೀಗಿರುವುದರಿಂದ (ದೇವರ ಆಲಯವಾಗಿರುವ ಸಭೆಯನ್ನು ಕಟ್ಟುವದಕ್ಕಾಗಿ) ಅನ್ಯಜನರಾಗಿರುವ ನಿಮ್ಮ ನಿಮಿತ್ತ ಕ್ರಿಸ್ತ ಯೇಸುವಿನ ಸೆರೆಯವನಾದ ಪೌಲನೆಂಬ....." (ಎಫೆಸ್ಸ 3:1)

ಅಪೋಸ್ತಲರು ಕ್ರಿಸ್ತನ ಚಾರಿತ್ರಿಕ ವಿಷಯದಲ್ಲಿ ಸಾಕ್ಷಿನೀಡುವುದು ಮಾತ್ರವಲ್ಲದೆ ಪವಿತ್ರಾತ್ಮನಿಂದ ಉಂಟಾದ ಪ್ರಭಾವದ ಮೂಲಕವಾಗಿ ದೇವರ ಅಗಾಧವಾದ ವಿಷಯಗಳನ್ನು ಗ್ರಹಿಸಿಕೊಂಡವರಾಗಿ ಅದನ್ನು ಬೋಧಿಸಲು ಅವರನ್ನು ವಿಶೇಷವಾಗಿ ಸಿದ್ಧಗೊಳಿಸಿ ಅದಕ್ಕೆ ಅಧಿಕಾರ ನೀಡಿದುದನ್ನು ನಾವು ನೋಡುತ್ತೇವೆ. ಅವರು ತಮ್ಮ ವಶಕ್ಕೆ ಅನುಗ್ರಹಿಸಲಾದ ಆಶೀರ್ವಾದಗಳನ್ನು ಪೂರ್ಣ ಸಭೆಯ ಒಳಿತಿಗಾಗಿ ಅದರ ಭಕ್ತಿವೃದ್ಧಿಗಾಗಿ ಹಾಗು ಅದನ್ನು ಕಟ್ಟಿ ಅಭಿವೃದ್ಧಿಪಡಿಸಲು ವಿವೇಕವುಳ್ಳ ನಂಬಿಗಸ್ತರಾದ ಮನೇವಾರ್ತೆಯವರಾಗಿ ಇದನ್ನು ನೆರವೇರಿಸಿದರು. "ಉಚಿತವಾಗಿ ಹೊಂದಿದ್ದೀರಿ ಉಚಿತವಾಗಿ ಕೊಡಿರಿ" ಎಂದು ಒಡೆಯನು ಹೇಳಿರುವನು, ಮತ್ತು ಈ ಆದೇಶವನ್ನು ಪಾಲಿಸುವಲ್ಲಿ ಅವರು ಬಹು ಜಾಗರೂಕರಾಗಿದ್ದರು. ಅಲ್ಲದೆ ಇವರ ಮೂಲಕವಾಗಿ ಇದೇ ಆಶೀರ್ವಾದಗಳು "ಲೋಕದ ಕಟ್ಟಕಡೆಯವರೆಗೂ" ಇರುವ ನಮಗೂ ಬಂದಿರುವುದು.

ಆದರೆ ನಾವು ಭಯಭಕ್ತಿಯುಳ್ಳವರಾಗಿ ವಿವೇಚನೆಯಿಂದ ವಿಚಾರಣೆಮಾಡುವಲ್ಲಿ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಕೇಳುವುದೆನೆಂದರೆ, ಈ ಅಪೋಸ್ತಲರು ಯಾವುದೇ ಅರ್ಥದಲ್ಲಿ ಸಭೆಯ ಒಡೆಯರೆಂದು ಎಣಿಸಲ್ಪಟ್ಟಿರುವರೋ? ಅಥವಾ ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಸಭೆಯ ಒಡೆಯನೂ ಶಿರಸ್ಸೂ ಆದವನು ನಿರ್ಗಮಿಸಿದಾಗ ಅವರಲ್ಲಿ ಯಾರಾದರೂ ಆ ಶಿರಸ್ಸಿನ ಸ್ಥಾನವನ್ನು ತೆಗೆದುಕೊಂಡರೋ? ಇಲ್ಲವೇ ಶಿರಸ್ಸಾದವನ ಸ್ಥಾನವನ್ನು ತೆಗೆದುಕೊಂಡು ಸಭೆಯ ಆಡಳಿತ ನಿರ್ವಹಣಾ ಕಾರ್ಯಗ್ರಹಣ ಮಾಡಲು ಅವರೆಲ್ಲರೂ ಒಟ್ಟಾಗಿ ಒಂದು ಸಂಯುಕ್ತವಾದ ಶಿರಸ್ಸಾಗಿ ನೇಮಿಸಲ್ಪಟ್ಟರೋ? ಅಥವಾ ಅವರು ಇಲ್ಲವೇ ಅವರಲ್ಲಿ ಯಾರಾದರೂ ಪೋಪನು ಹೇಳಿಕೊಳ್ಳುವಂತೆ ಕ್ರಿಸ್ತನಿಗೆ ಬದಲಾಗಿ ಆತನ ದೇಹವಾಗಿರುವ ಸಭೆಗೆ ಉತ್ತರಾಧಿಕಾರಿಯಾದರೋ?

ಇಂಥಾ ಊಹಾಪೋಹಗಳಿಗೆ ವಿರುದ್ಧವಾಗಿ ಎಫೆಸ್ಸ 4:4–5 ವಚನಗಳಲ್ಲಿ ಪೌಲನ ಸರಳವಾದ ಹೇಳಿಕೆಯು ನಮಗಿರುವುದು; ಅದೇನೆಂದರೆ "ನಾವು "ಒಂದೇ ದೇಹಕ್ಕೆ" ಸೇರಿದವರು ಮತ್ತು ನಮಗೆ "ಒಬ್ಬನೇ ಕರ್ತನು"; ಆದುದರಿಂದ ಆ ದೇಹದ ವಿವಿಧ ಅಂಗಗಳಲ್ಲಿ ಇತರರಿಗೆ ಹೋಲಿಸಿದಲ್ಲಿ ಕೆಲವರಿಗೆ ಎಷ್ಟೇ ಮಹತ್ವವಿದ್ದರೂ ಆ ಒಬ್ಬನನ್ನೇ ಕರ್ತ

ನನ್ನಾಗಿಯೂ ಶಿರಸ್ಸನ್ನಾಗಿಯೂ ಮಾನ್ಯಮಾಡಬೇಕು. ಕರ್ತನು ಇದನ್ನು ಜನರ ಗುಂಪಿಗೂ ಮತ್ತು ತನ್ನ ಶಿಷ್ಯರಿಗೂ ಉದ್ದೇಶಿಸಿ ಹೀಗೆ ಹೇಳಿರುವನು: "ಶಾಸ್ತ್ರಿಗಳು ಮತ್ತು ಫರಿಸಾಯರಿಗೆ ಬೋಧಕರೆನ್ನಿಸಿಕೊಳ್ಳುವುದು ಇಷ್ಟ. ಆದರೆ ನೀವು ಬೋಧಕರೆನ್ನಿಸಿ ಕೊಳ್ಳಬೇಡಿರಿ; ಒಬ್ಬನೇ ನಿಮ್ಮ ಬೋಧಕನು" (ಮತ್ತಾಯ 23:1–2, 6–8) ಮತ್ತು ಪುನಃ ತನ್ನ ಶಿಷ್ಯರನ್ನು ಉದ್ದೇಶಿಸಿ ಯೇಸು ಹೇಳಿದ್ದು, "ಜನಗಳನ್ನಾಳುವವರೆನಿಸಿಕೊಳ್ಳುವವರು ಅವರ ಮೇಲೆ ಅಹಂಕಾರದಿಂದ ದೊರೆತನ ಮಾಡುತ್ತಾರೆ ಎಂದು ನೀವು ಬಲ್ಲಿರಷ್ಟೆ; ಆದರೆ ನಿಮ್ಮಲ್ಲಿ ಹಾಗಿರಬಾರದು; ನಿಮ್ಮಲ್ಲಿ ದೊಡ್ಡವನಾಗಬೇಕೆಂದಿರುವವನು ನಿಮ್ಮ ಸೇವಕನಾಗಿರಬೇಕು; ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ಎಲ್ಲರ ಆಳಾಗಿರಬೇಕು. ಮನುಷ್ಯಕುಮಾರನು ಸಹ ಸೇವೆಮಾಡಿಸಿ ಕೊಳ್ಳುವುದಕ್ಕೆ ಬರಲಿಲ್ಲ, ಸೇವಮಾಡುವುದಕ್ಕೂ ಅನೇಕರನ್ನು ಬಿಡಿಸಿಕೊಳ್ಳಲು ತನ್ನ ಪ್ರಾಣವನ್ನು ಈಡು ಕೊಡುವುದಕ್ಕೂ ಬಂದನು ಎಂದು ಹೇಳಿದನು." ಮಾರ್ಕ 10:42–45.

ಅಪೋಸ್ತಲರನ್ನು ಆದಿಸಭೆಯು ಎಂದಾದರೂ ಸಭೆಯ ಒಡೆಯರೆಂದು ಎಣಿಸಿತ್ತೆಂಬುದಕ್ಕೆ ಇಲ್ಲವೇ ಅಪೋಸ್ತಲರು ಎಂದಾದರೂ ಇಂಥ ಅಧಿಕಾರವನ್ನಾಗಲೀ ಅಥವಾ ಗೌರವ ವನ್ನಾಗಲೀ ತೆಗೆದುಕೊಂಡಿದ್ದರೆಂಬುದಕ್ಕೆ ನಮಗೆ ಸಾಕ್ಷ್ಯಾಧಾರ ವಿರುವುದಿಲ್ಲ. ಅವರ ಸೇವಾ ವಿಧಾನವು ಪೋಪರು ಸಂಕಲ್ಪಿಸಿದ ದೊರೆತನವೆಂಬ ವಿಷಯಕ್ಕಿಂತಲೂ ನಿಜವಾಗಿಯೂ ಬಹು ಭಿನ್ನವಾಗಿತ್ತು. ನಿದರ್ಶನವಾಗಿ, ಪೋಪನ ಅನುಯಾಯಿಗಳು ಹೇಳಿಕೊಂಡಿರುವಂತೆ, ಪೇತ್ರನು ಎಂದೂ "ಅಪೋಸ್ತಲರಲ್ಲಿ ಅಗ್ರಗಣ್ಯನು" ಎಂಬ ಶೈಲಿಯಲ್ಲಿ ತನ್ನನ್ನು ಕರೆದುಕೊಂಡಿರಲಿಲ್ಲ ಇಲ್ಲವೇ ಅವರು ಎಂದಾದರೂ ತಮ್ಮಲ್ಲಿ ಒಬ್ಬರಿಗೊಬ್ಬರು ಈ ಬಿರುದನ್ನು ಕೊಟ್ಟುಕೊಂಡಿರಲಿಲ್ಲ ಅಥವಾ ಸಭೆಯಿಂದ ಇಂಥ ಗೌರವವನ್ನು ಪಡೆದುಕೊಂಡಿರಲಿಲ್ಲ. ಅವರು ತಮ್ಮಲ್ಲಿ ಒಬ್ಬರನ್ನೊಬ್ಬರು ಹೆಸರಿಸುವಾಗ ಅಥವಾ ಉಲ್ಲೇಖಿಸುವಾಗ ಕೇವಲ ಪೇತ್ರ, ಯೋಹಾನ ಅಥವಾ ಪೌಲನೆಂದು ಇಲ್ಲವೇ ಸಹೋದರನಾದ ಪೇತ್ರ, ಯೋಹಾನ ಅಥವಾ ಪೌಲನೆಂದು ಕರೆಯುತ್ತಿದ್ದರು. ಹಾಗೂ ಸಭೆಯವರೆಲ್ಲವೂ ಹೀಗೆಯೇ ಕ್ರಿಸ್ತನಲ್ಲಿರುವ ಸಹೋದರ ಅಥವಾ ಸಹೋದರಿ ಎಂದು ತಮ್ಮೊಳಗೆ ಹೆಸರಿಸಿಕೊಳ್ಳುತ್ತಿದ್ದರು. (ಅ.ಕೃ 9:17; 21:20; ರೋಮಾ 16:23; 1 ಕೊರಿಂಥ 7:15; 8:11; 2 ಕೊರಿಂಥ 8:18; 2 ಥೆಸ. 3:6, 15; ಫಿಲೆಮೋನ 7,16 ನೋಡಿ) ಮತ್ತು ಕರ್ತನೂ ಸಹ ಅವರೆಲ್ಲರನ್ನು ಸಹೋದರರೆಂದು ಕರೆಯುವಲ್ಲಿ ನಾಚಿಕೊಳ್ಳಲಿಲ್ಲವೆಂದು ಬರೆಯಲ್ಪಟ್ಟಿದೆ. (ಇಬ್ರೀಯ 2:11) ಕರ್ತನು ತನ್ನ ದೊರೆತನವನ್ನಾಗಲೀ ಅಧಿಕಾರವನ್ನಾಗಲೀ ಪ್ರಯೋಗಿಸುವಲ್ಲಿ ತನ್ನ ಪ್ರಧಾನ್ಯತೆಯನ್ನು ವ್ಯಕ್ತಗೊಳಿಸುವ ಮನೋಭಾವದಿಂದ ಬಹು ದೂರವಿದ್ದನು.

ಅಲ್ಲಿ "ಬಿಷೋಪರುಗಳು" ಎಂಬ ಸಭಾಧ್ಯಕ್ಷರುಗಳು (ಅಪೋಸ್ತಲರುಗಳಂತೆ ಸ್ವಸ್ಥಳದಲ್ಲಿಯೂ ಮತ್ತು ಪರಸ್ಥಳ ಗಳಲ್ಲಿಯೂ ಸಭೆಗಳ ಸಮಾನ್ಯವಾದ ಮೇಲ್ವಿಚಾರಕರಾಗಿದ್ದವರು) ಹಾಗೂ "ಸಭಾಹಿರಿಯರು" (ವಯಸ್ಸಿನಲ್ಲಿ ಹಿರಿಯರಾಗಿ ಸತ್ಯದ ಪರಿಜ್ಞಾನದಲ್ಲಿ ಹೆಚ್ಚು ಮುಂದುವರಿದವ ರಾಗಿದ್ದು ಸ್ಥಳೀಯ ಸಭೆಗಳ ಸಾಮಾನ್ಯ ಮೇಲ್ವಿಚಾರಕರಾಗಿದ್ದವರು – ಅ.ಕೃ. 14:23) ಅಲ್ಲದೆ "ಡೀಕನರುಗಳು" ಎಂಬ ಸಭಾಸೇವಕರು (ಹಲವಾರು ಸಭೆಗಳ ಲೌಕೀಕ ಹಾಗೂ ಶಾರೀರಿಕ ಸಂಬಂಧದ ವಿಷಯದಲ್ಲಿ ಕಾರ್ಯಗಳನ್ನು ನಿರ್ವಹಿಸುತ್ತಿದ್ದವರು – ಅ.ಕೃ 6:1–3) ಮತ್ತು "ಸೌವಾರ್ತಿಕರು" (ದೇವರ ವಾಕ್ಯವನ್ನು ಸಾರುತ್ತಾ ಊರಿಂದೂರಿಗೆ ಪ್ರಯಾಣಿಸುತ್ತಿದ್ದವರು) ಇದ್ದದ್ದು ನಿಜ. ಆದರೆ ಅವರುಗಳು ಈ ಸೇವಾಸ್ಥಾನಗಳ ಹೆಸರನ್ನು ತಮ್ಮ ಗೌರವಕ್ಕಾಗಿ ಎಂದೂ ಬಳಸಿಕೊಂಡಿರಲಿಲ್ಲ. ಈ ಸಭಾಸೇವೆಯನ್ನು ಮಾಡುವುದಕ್ಕೆ ಬೇಕಿರುವ ಯೋಗ್ಯತೆಗಳನ್ನು 1 ತಿಮೋಥೆ 3:1–13; 2 ತಿಮೋಥೆ 4:1–5 ರಲ್ಲಿ ಸ್ಪಷ್ಟವಾಗಿ ನಿರೂಪಿಸಲಾಗಿದೆ.

ಇಲ್ಲವೇ ಆದಿಸಭೆಯಲ್ಲಿನ ಪ್ರಮುಖರಾದ ಈ ಸೇವಕರುಗಳಲ್ಲಿ ಯಾರಾದರೂ ಯಾಜಕ ವಸ್ತ್ರಗಳನ್ನು ಧರಿಸಿಕೊಂಡವರಾಗಿ ಅಥವಾ ಶಿಲುಬೆ, ಜಪಮಣಿ, ಮುಂತಾದವು ಗಳನ್ನು ಹಿಡಿದುಕೊಂಡು ಹೋಗಿ ಜನರಿಂದ ಭಯಭಕ್ತಿ ಗೌರವಗಳನ್ನು ಗಳಿಸಲು ಯತ್ನಿಸುವವರಾಗಿರಲಿಲ್ಲ; ಏಕೆಂದರೆ ನಿಮ್ಮಲ್ಲಿ ಮೊದಲನೆಯವನಾಗಬೇಕೆಂದಿರುವವನು ಎಲ್ಲರ ಸೇವಕನಾಗಿರಬೇಕೆಂದು ಕರ್ತನು ಅವರಿಗೆ ಉಪದೇಶಿಸಿದ್ದನು. ಹೀಗೆ, ನಿದರ್ಶನವಾಗಿ ಹೇಳುವುದಾದರೆ, ಸಭೆಯು ಹಿಂಸೆಗೆ ಒಳಗಾಗಿ ಯೆರೂಸಲೇಮಿನಿಂದ ಹೊರಗೆ ಅಟ್ಟಲ್ಪಟ್ಟು ಚದುರಿಸಲ್ಪಟ್ಟಾಗ ಆ ಹನ್ನೊಂದು ಮಂದಿ ಧೈರ್ಯವಾಗಿ ತಮ್ಮ ಸ್ಥಳಗಳಲ್ಲಿದ್ದು ಎಂಥದ್ದೇ ಬಂದರು ಅಗತ್ಯವಿದ್ದವುಗಳೆಲ್ಲವನ್ನು ಮಾಡಲು ಇಚ್ಛಿಸುವವರಾಗಿದ್ದರು. ಏಕೆಂದರೆ ಇಂಥ ಪರೀಕ್ಷಾ ಸಮಯಗಳಲ್ಲಿ ಪರಸ್ಥಳಗಳಲ್ಲಿದ್ದ ಸಭೆಯು ಯೆರೂಸಲೇಮಿ–ನಲ್ಲಿದ್ದ ಇವರಿಂದ ಸಹಾಯ ಪ್ರೋತ್ಸಾಹಗಳನ್ನು ಎದುರು ನೋಡುತ್ತಿದ್ದರು. ಇವರೇನಾದರೂ ಓಡಿಹೋಗಿದ್ದಲ್ಲಿ ಇಡೀ ಸಭೆಯು ಭಯಭ್ರಾಂತಿಯಿಂದ ಕಂಗಾಲಾಗುತ್ತಿತ್ತು. ಅಲ್ಲದೆ ಯಾಕೋಬನು ಹೆರೋದನ ಕತ್ತಿಯಿಂದ ಹತನಾದುದ್ದನ್ನೂ, ಪೇತ್ರನನ್ನು ಇದೇ ಗತಿಹೊಂದಲು ಸೆರೆಗೆ ಹಾಕಲ್ಪಟ್ಟು ಇಬ್ಬರು ಸೈನಿಕರೊಂದಿಗೆ ಸರಪಣಿಗಳಿಂದ ಕಟ್ಟಲ್ಪಟ್ಟದ್ದನ್ನೂ, (ಅ.ಕೃ 12:1–6) ಹಾಗೂ ಪೌಲ ಸೀಲರು ಕೊರಡೆಗಳಿಂದ ಬಹಳ ಪೆಟ್ಟುಗಳನ್ನು ತಿಂದು ಸೆರೆಮನೆಯೊಳಗೆ ಹಾಕಲ್ಪಟ್ಟು ಕಾಲುಗಳಿಗೆ ಕೋಳಗಳು ಹಾಕಿದ್ದುದಾಗಿಯೂ ಮತ್ತು ಪೌಲನು "ಹಿಂಸೆಯೆಂಬ ಮಹಾ ಹೋರಾಟವನ್ನು" ಸಹಿಸಿಕೊಂಡದ್ದನ್ನೂ ನಾವು ಕಂಡು ಕೊಳ್ಳುತ್ತೇವೆ. (ಅ.ಕೃ. 16:23–24; 2 ಕೊರಿಂಥ 11:23–33). ಇವರು ಸಭೆಯಲ್ಲಿ ದೊರೆತನ ಮಾಡುವವರಂತೆ ಕಂಡು ಬಂದಿದ್ದರೇ ಅಥವಾ ದೊರೆತನ ಮಾಡುವವರಂತೆ ನಡೆದು ಕೊಂಡಿದ್ದರೇ? ಹಾಗಿರಲಿಲ್ಲವೆಂಬುದು ನಮ್ಮ ಯೋಚನೆ.

ಪೇತ್ರನು ಸಭಾಹಿರಿಯರಿಗೆ "ದೇವರ ಮಂದೆಯನ್ನು ಕಾಯಲು" (ಇಂದಿನ ಸಭಾಸೇವಕರು ಹೇಳುವಂತೆ, ಆತನು ನಿಮ್ಮ ಮಂದೆ, ನಿಮ್ಮ ಜನ, ನಿಮ್ಮ ಸಭೆಯೆಂದು ಹೇಳದೆ, ದೇವರ ಮಂದೆಯೆಂದು ಹೇಳಿದ್ದನು) ಬುದ್ಧಿಮಾತನ್ನು ಬರೆಯುವಾಗ ಈ ವಿಷಯವನ್ನು ಬಹು ವಿಶದವಾಗಿ ಹೇಳಿದ್ದಾನೆ; ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನ ಮಾಡುವವರಂತೆ

ನಡಯದೆ ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಲು; ಅಂದರೆ ದೀನಭಾವದವರಾಗುವಲ್ಲಿಯೂ ನಂಬಿಗಸ್ತಿಕೆಯನ್ನು ತೋರುವಲ್ಲಿಯೂ ಆಸಕ್ತರಾಗಿರುವಲ್ಲಿಯೂ ಮತ್ತು ಭಯಭಕ್ತಿ ತೋರುವಲ್ಲಿಯೂ ಮಾದರಿಗಳಾಗಿ ನಡೆಯಲು ಹೇಳಿದ್ದಾನೆ. (1 ಪೇತ್ರ 5:1–3) ಮತ್ತು ಪೌಲನು ಹೇಳಿರುವುದು: "ಹಾಗಾಗದೆ ದೇವರು ಅಪೋಸ್ತಲರಾದ ನಮ್ಮನ್ನು ಮರಣವಿಧಿ ಹೊಂದಿದ–ವರನ್ನೋ ಎಂಬಂತೆ ಕಡೆಯವರಾಗಿ ತೋರಿಸಿದ್ದಾನೆಂದು ನನಗೆ ತೋಚುತ್ತದೆ; ನಾವು ದೇವದೂತರಿಗೂ ಮನುಷ್ಯರಿಗೂ ಅಂತೂ ಜಗತ್ತಿಗೆಲ್ಲಾ ನೋಟವಾದೆವು. ನಾವಂತೂ ಕ್ರಿಸ್ತನ ನಿಮಿತ್ತ ಹುಚ್ಚರಾಗಿದ್ದೇವೆ, ನೀವೋ ಕ್ರಿಸ್ತನಲ್ಲಿ ಬುದ್ಧಿವಂತರಾಗಿದ್ದೀರಿ; ನಾವು ಬಲಹೀನರು, ನೀವು ಬಲಿಷ್ಠರು; ನೀವು ಮಾನಶಾಲಿಗಳು, ನಾವು ಮಾನಹೀನರು; ಈ ಗಳಿಗೆಯವರೆಗೂ ನಾವು ಹಸಿದವರೂ ಬಾಯಾರಿಕೆಯುಳ್ಳವರೂ ಮೈಗೆ ವಸ್ತ್ರವಿಲ್ಲದವರೂ ಗುದ್ದು ತಿನ್ನುವವರೂ ಮನೆಯಿಲ್ಲದವರೂ ಸ್ವಂತ ಕೈಗಳಿಂದ ಕೆಲಸಮಾಡಿ ದುಡಿಯುವವರೂ ಆಗಿದ್ದೇವೆ. ಬೈಸಿಕೊಂಡು ಹರಸುತ್ತೇವೆ; ಹಿಂಸೆಪಟ್ಟು ಸಹಿಸಿಕೊಳ್ಳುತ್ತೇವೆ; ಅಪಕೀರ್ತಿಹೊಂದಿ ಆದರಿಸುತ್ತೇವೆ. ನಾವು ಈಗಿನವರೆಗೂ ಲೋಕದ ಕಸವೋ ಎಲ್ಲಾದರ ಹೊಲಸೋ ಎಂಬಂತೆ ಆಗಿದ್ದೇವೆ." (1 ಕೊರಿಂಥ 4:9–13) ಇವೆಲ್ಲವುಗಳಲ್ಲಿ ಅಧಿಕವಾಗಿ ಅವರು ದೊರೆತನ ಮಾಡುವವರಂತೇನೂ ಇರಲಿಲ್ಲ, ಅವರು ಹಾಗೇನಾದರೂ ಇದ್ದರೆ? ದೇವರ ಸ್ವಾಸ್ತ್ಯದ (ಸಭೆಯ) ಮೇಲೆ ದೊರೆತನ ಮಾಡುವುದನ್ನು ಅಭಿಲಾಷಿಸಲು ಸಹೋದರರಲ್ಲಿ ಕೆಲವರು ಮಾಡುತ್ತಿದ್ದ ಆಲೋಚನೆಗೆ ವಿರೋಧವಾಗಿ ಪೌಲನು ವ್ಯಂಗ್ಯವಾಗಿ ಹೇಳಿರುವುದೇನೆಂದರೆ; "ಈಗಾಗಲೇ ನೀವು ತೃಪ್ತರಾದಿರಿ, ಈಗಾಗಲೇ ಐಶ್ವರ್ಯವಂತರಾದಿರಿ, ನಮ್ಮ ಸಹಾಯವಿಲ್ಲದೆ ಅರಸರಾದಿರಿ." ಇದನ್ನು ಮುಂದುವರೆಸುತ್ತಾ ಉಪದೇಶಿಸುವ–ವನಾಗಿ ಇರುವ ಸರಿಯಾದ ಒಂದೇ ಮಾರ್ಗವೆಂದರೆ ಅದು ದೀನತೆಯದು ಎಂದು ಆತನು ಹೀಗೆ ಹೇಳಿರುವನು: ಈ ವಿಷಯದಲ್ಲಿ "ನನ್ನನ್ನು ಅನುಸರಿಸುವವರಾಗಿರಿ" ಹಾಗು ಮತ್ತೆ "ಜನರು ನಮ್ಮನ್ನು ಕ್ರಿಸ್ತನ ಕೈಕೆಳಗಿನವರೆಂತಲೂ ದೇವರು ತಿಳಿಸಿರುವ ಸತ್ಯಾರ್ಥಗಳ ವಿಷಯದಲ್ಲಿ ಮನೆವಾರ್ತೆಯವ–ರೆಂತಲೂ ಎಣಿಸಬೇಕು." 1 ಕೊರಿಂಥ 4:8,1

ಅಲ್ಲದೆ ಅದೇ ಅಪೋಸ್ತಲನು ಮತ್ತೆ ಇದಕ್ಕೆ ಸೇರಿಸಿ ಹೇಳಿರುವುದು: "ದೇವರು ನಮ್ಮನ್ನು ಯೋಗ್ಯರೆಂದೆಣಿಸಿ ಸುವಾರ್ತೆಯನ್ನು ನಮ್ಮ ವಶಕ್ಕೆ ಒಪ್ಪಿಸಿದನಲ್ಲಾ ಎಂದು ಯೋಚಿಸುವವರಾಗಿ ಮನುಷ್ಯರನ್ನು ಮೆಚ್ಚಿಸಬೇಕೆನ್ನದೆ ಹೃದಯವನ್ನು ಪರಿಶೋಧಿಸುವ ದೇವರನ್ನೇ ಮೆಚ್ಚಿಸಬೇಕೆಂದು ಮಾತಾಡುತ್ತೇವೆ. ನಿಮಗೆ ತಿಳಿದಿರುವ ಪ್ರಕಾರ ನಾವು ಎಂದಿಗೂ ಮುಖಸ್ತುತಿಯನ್ನು ಮಾಡುವವರಾಗಿ ಕಾಣಬಂದಿಲ್ಲ, ಮತ್ತು ದ್ರವ್ಯಾಶೆಯನ್ನು ಮರೆಮಾಡುವುದಕ್ಕಾಗಿ ವೇಷವನ್ನು ಹಾಕಿಕೊಂಡವರಾಗಿಲ್ಲ; ಇದಕ್ಕೆ ದೇವರೇ ಸಾಕ್ಷಿ. ಇದಲ್ಲದೆ ನಾವು ಕ್ರಿಸ್ತನ ಅಪೋಸ್ತಲರಾಗಿರುವದರಿಂದ ನಮಗೆ ಗೌರವವನ್ನು ಕೊಡಬೇಕೆಂದು ಹೇಳಬಹುದಾಗಿದ್ದರೂ ಮನುಷ್ಯರಿಂದ ಬರುವ ಮಾನವನ್ನು ನಿಮ್ಮಿಂದಾಗಲಿ ಇತರರಿಂದಾಗಲಿ ಹೊಂದಲಪೇಕ್ಷಿಸು–ವವರಾಗಿಲ್ಲ. ತಾಯಿಯು ಮಕ್ಕಳನ್ನು ಪೋಷಿಸುತ್ತಾಳೋ ಎಂಬಂತೆ ನಾವು ನಿಮ್ಮ ಮಧ್ಯದಲ್ಲಿ ವಾತ್ಸಲ್ಯದಿಂದ ನಡಕೊಂಡಿದ್ದೆವು." – 1 ಥೆಸಲೋನಿಕ 2:4–7

ಇಲ್ಲವೇ ಅಪೋಸ್ತಲರು ಎಂದಾದರೂ ಉಪದೇಶಿಸುವ ಅಥವಾ ಸಭಾಪಾಲನೆ ಮಾಡುವ ಕಾರ್ಯದ ಪೂರ್ಣಾಧಿಕಾರ ತಮ್ಮದೇ ಎಂದು ಹೇಳಿಕೊಂಡಿದ್ದಿಲ್ಲ; ಅಥವಾ ಹಾಗೆ ಮಾಡಬೇಕೆಂದು ಕರ್ತನು ಅವರಿಗೆ ಎಂದೂ ತಿಳಿಸಿಲ್ಲ. ಪೌಲನು ಹೇಳುವುದು: "ಆತನು (ಕ್ರಿಸ್ತನು) ಕೆಲವರನ್ನು ಅಪೋಸ್ತಲರನ್ನಾಗಿಯೂ ಕೆಲವರನ್ನು ಪ್ರವಾದಿಗಳನ್ನಾಗಿಯೂ ಕೆಲವರನ್ನು ಸೌವಾರ್ತಿಕರನ್ನಾಗಿಯೂ ಕೆಲವರನ್ನು ಸಭಾಪಾಲಕರನ್ನಾಗಿಯೂ ಉಪದೇಶಿಗಳನ್ನಾಗಿಯೂ ಅನುಗ್ರಹಿಸಿದನು. ನಾವೆಲ್ಲರು ನಂಬಿಕೆಯಿಂದಲೂ ದೇವಕುಮಾರನ ವಿಷಯವಾದ ಜ್ಞಾನದಿಂದಲೂ ಉಂಟಾಗುವ ಐಕ್ಯವನ್ನು ಹೊಂದಿ ಪ್ರವೀಣತೆಗೆ ಬಂದವರಾಗಿ ಕ್ರಿಸ್ತನ ಪರಿಪೂರ್ಣತೆಯೆಂಬ ಪ್ರಮಾಣವನ್ನು ಮುಟ್ಟುವ ತನಕ ದೇವಜನರನ್ನು ಯೋಗ್ಯಸ್ಥಿತಿಗೆ ತರುವ ಕೆಲಸಕ್ಕೋಸ್ಕರವೂ ಸಭೆಯ ಸೇವೆಗೋಸ್ಕರವೂ ಕ್ರಿಸ್ತನ ದೇಹವು ಅಭಿವೃದ್ಧಿಯಾಗುವದಕ್ಕೋಸ್ಕರವೂ ಆತನು ಇವರನ್ನು ಅನುಗ್ರಹಿಸಿದನು. ನಾವು ಇನ್ನು ಮೇಲೆ ಕೂಸುಗಳಾಗಿರಬಾರದು; ದುರ್ಜನರ ವಂಚನೆಗೂ ದುರ್ಬೋಧಕರ ಕುಯುಕ್ತಿಗೂ ಒಳಬಿದ್ದು ನಾನಾ ಉಪದೇಶಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿಕೊಂಡು ಹೋಗುವವರ ಹಾಗಿರಬಾರದು. ಪ್ರೀತಿಯಿಂದ ಸತ್ಯವನ್ನನುಸರಿಸುತ್ತಾ ಬೆಳೆದು ಎಲ್ಲಾ ವಿಷಯಗಳಲ್ಲಿಯೂ ಕ್ರಿಸ್ತನ ಐಕ್ಯವನ್ನು ಹೊಂದುತ್ತಾ ಬರಬೇಕು." – ಎಫೆಸ್ಸ 4:11–15

ದೇವರು ಆದಿಸಭೆ ಹಾಗೂ ಅಲ್ಲಿಂದೀಚೆಗೆ ಸುವಾರ್ತಾ – ಯುಗದ ಪರ್ಯಂತರವಾದ ಸಭೆ ಈ ಎರಡರಲ್ಲೂ ವಿಧವಿಧವಾದ ಸಹಾಯಕರನ್ನು ಎಬ್ಬಿಸಿ ಅವರ ಪರಿಶ್ರಮವನ್ನು ಹೇರಳವಾಗಿ ಆಶೀರ್ವದಿಸಿರುವನು. ಆದರೆ ಆತ್ಮಿಕ ವಿಷಯಗಳಲ್ಲಿ ನಮಗೆ ಸೇವೆಮಾಡುವದಕ್ಕಾಗಿ ಅಪೋಸ್ತಲರಿಗೆ ವಿಶೇಷವಾದ ಅಧಿಕಾರ ನೀಡಿ ಅವರನ್ನು ಸಭೆ ಮುನ್ನಡೆಸುವ ಸ್ಥಾನದಲ್ಲಿ ಪ್ರಮುಖರನ್ನಾಗಿ ಇರಿಸಿರುವುದನ್ನು ಸ್ಪಷ್ಟವಾಗಿ ಸೂಚಿಸಲಾಗಿ–ರುವುದು. ವಿವಿಧ ಕ್ರಮದ ಹಾಗೂ ವರ್ಗದ ಉಪದೇಶಕರ ನೇಮಕ ಮತ್ತು ಕರ್ತನು ವೈಯುಕ್ತಿವಾಗಿ ಅದರ ಮೇಲ್ವಿಚಾರಣೆ ಮಾಡುತ್ತಿರುವುದು ಪೌಲನ ಈ ಮಾತಿನಲ್ಲಿ ಸ್ಪಷ್ಟವಾಗಿ ಸೂಚಿತವಾಗಿದೆ: "ದೇವರು ತನ್ನ ಸಭೆಯಲ್ಲಿ ಮೊದಲನೇದಾಗಿ ಅಪೋಸ್ತಲರನ್ನು, ಎರಡನೇದಾಗಿ ಪ್ರವಾದಿಗಳನ್ನು, ಮೂರನೇದಾಗಿ ಉಪದೇಶಕರನ್ನು ಇಟ್ಟಿದ್ದಾನೆ; ಆ ಮೇಲೆ ಮಹತ್ಕಾರ್ಯ ಮಾಡುವ ಶಕ್ತಿಯನ್ನೂ ನಾನಾ ರೋಗಗಳನ್ನು ವಾಸಿಮಾಡುವ ವರವನ್ನೂ ಪರಸಹಾಯ ಮಾಡುವ ಗುಣವನ್ನೂ ಕಾರ್ಯಗಳನ್ನು ನಿರ್ವಹಿಸುವ ಜ್ಞಾನವನ್ನೂ ವಿವಿಧ ವಾಣಿಗಳನ್ನಾಡುವ ವರಗಳನ್ನು ಅವರಿಗೆ ಕೊಟ್ಟಿದ್ದಾನೆ. ಎಲ್ಲರೂ ಅಪೋಸ್ತಲರೋ? ಎಲ್ಲರೂ ಪ್ರವಾದಿಗಳೋ? ಎಲ್ಲರೂ ಉಪದೇಶಕರೋ? ಎಲ್ಲರೂ ಮಹತ್ಕಾರ್ಯಗಳನ್ನು ಮಾಡುವವರೋ? ರೋಗ ವಾಸಿಮಾಡುವ ವರಗಳು ಎಲ್ಲರಿಗೂ ಉಂಟೋ?" (1 ಕೊರಿಂಥ 12:28–29) ಇಲ್ಲ: ಖಂಡಿತ–ವಾಗಿಯೂ ಇಲ್ಲ; ಮತ್ತು ನಾವು ಕರ್ತನಿಂದ ನಡೆಸಲ್ಪಡುವ

ವರಾದಲ್ಲಿ, ಸಭೆಯಲ್ಲಿ ಉಪದೇಶ ಮಾಡಿ ಅದರ ಭಕ್ತಿವೃದ್ಧಿಯನ್ನು ಉಂಟುಮಾಡುವುದಕ್ಕಾಗಿ "ದೇವರು ನೇಮಿಸಿರುವವರ" ವಿಷಯದಲ್ಲಿ ಆತನ ನೇಮಕದ ಕ್ರಮವನ್ನು ನಾವು ಗುರುತಿಸಿಕೊಳ್ಳಬೇಕು. ಮತ್ತು ಕ್ರಿಸ್ತನಲ್ಲಿರುವ ಅಪ್ರಮೇಯವಾದ ಐಶ್ವರ್ಯದ ವಿಷಯವಾಗಿ (ಕರ್ತನ) ದೇಹದ ಅಂಗಗಳಾದವರಲ್ಲಿ ಪ್ರತಿಯೊಬ್ಬನೂ ಸಾರಿಹೇಳಬಹುದಾದರೂ, ಇದರಲ್ಲಿ ಅಪೋಸ್ತಲರು ಮೊದಲಿಗರೆಂಬುದನ್ನು ನಾವು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. – ಇಬ್ರೀಯ 5:12

ಅಪೋಸ್ತಲರಿಗಿರುವ ಈ ಮೊದಲ ಸ್ಥಾನವನ್ನು ಗುರುತಿಸುವಲ್ಲಿ ನಾವು ಕರ್ತನು ಸಭೆಯ ಭಕ್ತಿವೃದ್ಧಿಗಾಗಿ ದಯಪಾಲಿಸಿರುವ ಇತರ ಸಹಾಯಗಳ ಹಾಗೂ ಸಹಾಯಕರುಗಳ ಸೇವೆಯನ್ನು ಕಡೆಗಣಿಸುವುದಾಗಲೀ ಇಲ್ಲವೇ ಅದಕ್ಕೆ ಅಪಚಾರ ತರುವುದನ್ನಾಗಲೀ ಮಾಡಿರುವುದಿಲ್ಲ. ಹೀಗೆ ಉದಾಹರಣೆಗಾಗಿ ಹೇಳುವುದಾದರೆ, "ಸೌವಾರ್ತಿಕರಾದ" ಮಾರ್ಕ ಲೂಕ ಹಾಗು ಸ್ತೆಫನನ ಸಾಕ್ಷಿಗಳು ಅಪೋಸ್ತಲರಷ್ಟೇ ವಿಶ್ವಾಸಾರ್ಹವಾದವುಗಳು. ಏಕೆಂದರೆ ಅವರೆಲ್ಲರೂ "ಒಂದೇ ಮನಸ್ಸುಳ್ಳವರಾಗಿದ್ದು ಆ ಒಂದೇ ವಿಷಯವನ್ನು ಹೇಳುವವರಾಗಿದ್ದರು." ಮತ್ತು ಸುವಾರ್ತಾಯುಗದ ಪರ್ಯಂತರವಾಗಿ ಕರ್ತನು ಎಬ್ಬಿಸಿರುವ ನಂಬಿಗಸ್ತರಾದ ಇಂಥಾ ಸಾಕ್ಷಿಗಳಿಗೆ ಅಪೋಸ್ತಲರು ತಾವು ವಿಶ್ರಮಿಸಿಕೊಳ್ಳಲು ಕರೆಯಲ್ಪಡುವದಕ್ಕೆ ಮೊದಲು ತಮ್ಮ ಹೊಣೆಗಾರಿಕೆಯನ್ನು ವಹಿಸಿಕೊಟ್ಟಿರುವರು. –2 ತಿಮೋಥೆ 4:1–6

ಹೀಗೆ ಅನ್ಯಜನರಿಗೋಸ್ಕರವಾಗಿರುವ ಈ ಘನವಂತನಾದ ಅಪೋಸ್ತಲನು ತನ್ನ ಅವಧಿಯು ಮುಕ್ತಾಯವಾಗುವುದಕ್ಕಿರುವಾಗ ತನ್ನ ಕಾರ್ಯಭಾರದ ಹಿತಾಸಕ್ತಿಗಳೆಲ್ಲವನ್ನು ಸಭೆಯ "ಹಿರಿಯರಿಗೆ" (ಕ್ರಿಯಾಶೀಲರಾಗಿ ನಂಬಿಗಸ್ತಿಕೆಯಲ್ಲಿ ಮುಂದುವರಿದವರಿಗೆ) ವಹಿಸಿಕೊಡುವುದನ್ನು ನಾವು ಕಂಡುಕೊಳ್ಳುತ್ತೇವೆ. ಆತನು ವಹಿಸಿಕೊಟ್ಟ ಹೊಣೆಗಾರಿಕೆಯು ಆಗ ಜೀವಿಸುತ್ತಿದ್ದವರಿಗೆ ಮಾತ್ರವಲ್ಲದೆ ಅಲ್ಲಿಂದೀಚೆಗೆ ನಮ್ಮ ಕಾಲದವರೆಗೂ ಅದು ಅನ್ವಯಿಸಿರುವುದು. ಕರ್ತನಿಗೂ ಹಾಗೂ ಸಭೆಗೂ ಸೇವಮಾಡುವುದರಲ್ಲಿ ತಾನು ಹೇಗೆ ನಂಬಿಗಸ್ತನಾಗಿದ್ದ–ನೆಂಬುದನ್ನು ಪ್ರಕಟಮಾಡಿ ಹೇಳಿದ ನಂತರ, ಈ ಮಹಾ ಕಾರ್ಯದ ವಿಷಯವಾಗಿ ಭಿನ್ನವಿಸುತ್ತಾ ಆತನು ಅವರಿಗೆ ಹೇಳಿರುವುದು: "ಅವನು ಮಿಲೇತದಿಂದ ಎಫೆಸಕ್ಕೆ ಹೇಳಿಕಳುಹಿಸಿ ಅಲ್ಲಿಯ ಸಭೆಯ ಹಿರಿಯರನ್ನು ಕರೆಸಿದನು.... ದೇವರು ಸ್ವರಕ್ತದಿಂದ ಸಂಪಾದಿಸಿಕೊಂಡ ಸಭೆಯನ್ನು ಪರಿಪಾಲಿಸುವುದಕ್ಕಾಗಿ ಪವಿತ್ರಾತ್ಮನು ನಿಮ್ಮನ್ನೇ ಆ ಹಿಂಡಿನಲ್ಲಿ ಅಧ್ಯಕ್ಷರಾಗಿ ಇಟ್ಟಿರುವದರಿಂದ ನಿಮ್ಮ ವಿಷಯದಲ್ಲಿಯೂ ಎಲ್ಲಾ ಹಿಂಡಿನ ವಿಷಯದಲ್ಲಿಯೂ ಎಚ್ಚರಿಕೆಯಾಗಿರಿ. ನಾನು ಹೋದ ಮೇಲೆ ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ನಾನು ಬಲ್ಲೆನು; ಅವು ಹಿಂಡನ್ನು ಕನಿಕರಿಸುವುದಿಲ್ಲ. ಇದಲ್ಲದೆ ನಿಮ್ಮಲ್ಲಿಯೂ ಕೆಲವರು ಎದ್ದು ವ್ಯತ್ಯಾಸ ಬೋಧನೆಗಳನ್ನು ಮಾಡಿ ಯೇಸುವಿನ ಶಿಷ್ಯರನ್ನು ತಮ್ಮ ಹಿಂದೆ ಎಳಕೊಳ್ಳುವರು. ಆದಕಾರಣ ನಾನು ಕಣ್ಣೀರುಸುರಿಸುತ್ತಾ ಮೂರು ವರುಷ ಹಗಲಿರುಳು ಎಡೆಬಿಡದೆ ಪ್ರತಿಯೊಬ್ಬನಿಗೆ ಬುದ್ಧಿಹೇಳಿದೆನೆಂದು ನೀವು ಜ್ಞಾಪಕಮಾಡಿಕೊಂಡು ಎಚ್ಚರವಾಗಿರಿ. ನಾನೀಗ ನಿಮ್ಮನ್ನು ಕರ್ತನಿಗೂ ಆತನ ಕೃಪಾವಾಕ್ಯಕ್ಕೂ ಒಪ್ಪಿಸಿಕೊಡುತ್ತೇನೆ. ಆತನು ನಿಮ್ಮಲ್ಲಿ ಭಕ್ತಿವೃದ್ಧಿಯನ್ನುಂಟು ಮಾಡುವದಕ್ಕೂ ಪವಿತ್ರರಾದ ವರೆಲ್ಲರಲ್ಲಿ ನಿಮಗೆ ಹಕ್ಕನ್ನು ಅನುಗ್ರಹಿಸುವದಕ್ಕೂ ಶಕ್ತನಾಗಿದ್ದಾನೆ. ನಾನು ಯಾರ ಬೆಳ್ಳಿಭಂಗಾರವನ್ನಾಗಲಿ ಉಡಿಗೆತೊಡಿಗೆಯನ್ನಾಗಲಿ ಬಯಸಲಿಲ್ಲ. ಈ ಕೈಗಳೇ ಕೆಲಸಮಾಡಿ ನನ್ನ ಕೊರತೆಗಳನ್ನು ನನ್ನ ಜೊತೆಯಲ್ಲಿದ್ದವರ ಕೊರತೆಗಳನ್ನೂ ನೀಗಿದ್ದನ್ನು ನೀವೇ ಬಲ್ಲಿರಿ. ಎಲ್ಲಾ ವಿಷಯಗಳಲ್ಲಿ ನಾನು ನಿಮಗೆ ಮಾದರಿ ತೋರಿಸಿದ್ದೇನೆ. ನೀವೂ ಹಾಗಯೇ ದುಡಿದು ಬಲವಿಲ್ಲದವರಿಗೆ ಉಪಕಾರಮಾಡಬೇಕು; ಮತ್ತು ತೆಗೆದುಕೊಳ್ಳುವುದಕ್ಕಿಂತ ಕೊಡುವುದೇ ಹೆಚ್ಚಿನ ಭಾಗ್ಯವೆಂಬದಾಗಿ ಕರ್ತನಾದ ಯೇಸು ತಾನೇ ಹೇಳಿದ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡಿರಬೇಕು ಅಂದನು." – ಅ.ಕೃ. 20:17, 28–35.

ಮತ್ತು ಇದರಂತೆಯೆ ಪೇತ್ರನು "ಸಭಾಹಿರಿಯರನ್ನು" ಪ್ರೋತ್ಸಾಹಿಸುವವನಾಗಿ ಹೀಗೆ ಬುದ್ಧಿಮಾತನ್ನು ಹೇಳಿದ್ದಾನೆ: "ಸಭೆಯ ಹಿರಿಯರೇ, ಜೊತೆಹಿರಿಯವನಾದ ನಾನು ಕ್ರಿಸ್ತನ ಬಾಧೆಗಳನ್ನು ಕಣ್ಣಾರೆ ಕಂಡವನೂ ಇನ್ನು ಮುಂದೆ ಪ್ರತ್ಯಕ್ಷವಾಗುವ ಪ್ರಭಾವದಲ್ಲಿ ಪಾಲುಗಾರನೂ ಆಗಿದ್ದು ನಿಮ್ಮನ್ನು ಎಚ್ಚರಿಸಿ ಹೇಳುವುದೇನೆಂದರೆ ನಿಮ್ಮಲ್ಲಿರುವ ದೇವರ ಮಂದೆಯನ್ನು ಕಾಯಿರಿ. ಬಲಾತ್ಕಾರದಿಂದಲ್ಲ ದೇವರ ಚಿತ್ತದ ಪ್ರಕಾರ ಇಷ್ಟ ಪೂರ್ವಕವಾಗಿಯೂ ನೀಚವಾದ ದ್ರವ್ಯಾಶೆಯಿಂದಲ್ಲ ಸಿದ್ಧಮನಸ್ಸಿನಿಂದಲೂ, ಮೇಲ್ವಿಚಾರಣೆಮಾಡಿರಿ. ದೇವರು ನಿಮ್ಮ ವಶದಲ್ಲಿಟ್ಟಿರುವ ಸಭೆಗಳ ಮೇಲೆ ದೊರೆತನಮಾಡುವವರಂತೆ ನಡೆಯದೆ ಮಂದೆಗೆ ಮಾದರಿಯಾಗಿಯೇ ನಡೆದುಕೊಳ್ಳಿರಿ." – 1 ಪೇತ್ರ 5:1–3

ಆದರೆ ಸಭೆಯಲ್ಲಿ ಪವಿತ್ರಾತ್ಮನಿಂದ ನೇಮಿಸಲ್ಪಟ್ಟಿರುವದಕ್ಕೆ ಕಾರಣವಿರುವುದಾಗಿ ನಾವು ನಂಬುವಂಥ ಈ ಬೋಧಕರ ವಿಷಯದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವಾಗ ಇವರ ಬೋಧನೆಗಳನ್ನು ಕರ್ತನ ಹಾಗು ಅಪೋಸ್ತಲರ ಬೋಧನೆ–ಯಂತೆಯೇ ಕಾಣಬೇಕಾದುದು ನಮ್ಮ ಕರ್ತವ್ಯವಾಗಿರುವುದು. ಇವರು ಸಭೆಯ ಮುಖ್ಯಸ್ಥರಾಗಿ ಮತ್ತು ನಮಗೆ ದೇವರ ಯೋಜನೆಯ ಅಗಾಧವಾದ ವಿಷಯಗಳಲ್ಲಿ ಉಪದೇಶಿಸುವದಕ್ಕೆ ವಿಶೇಷವಾದ ಅಧಿಕಾರ ಹೊಂದಿದವರೆಂದು ಇವರ ಬಗ್ಗೆ ಆತನು ಸ್ಪಷ್ಟವಾಗಿ ಸೂಚಿಸಿ ಹೇಳಿದ್ದಾನೆ. ಈ ಸಂಗತಿಗಳು ಆತನು ಸ್ವತಃ ಪ್ರತ್ಯಕ್ಷನಾಗಿರುವ ದಿನಗಳಲ್ಲಿ ಪ್ರಕಟಮಾಡುವುದಕ್ಕೆ ತಕ್ಕ ಸಮಯವಾಗಿರಲಿಲ್ಲ. ಆದರೆ ಅದನ್ನು ನಂತರದಲ್ಲಿ ಆತನು ತನ್ನ ಪರಿಶುದ್ಧ ಅಪೋಸ್ತಲರ ಹಾಗೂ ಪ್ರವಾದಿಗಳಿಗೆ ತಿಳಿಯಪಡಿಸಿದನು. (ಯೋಹಾನ 16:12; ಎಫೆಸ 3:5) ಹೀಗೆ ದೈವ ಪ್ರೇರಿತವಾಗಿ ಕರ್ತನಿಂದ ಆದುಕೊಂಡ ಅಪೋಸ್ತಲರ ಮೂಲಕವಾಗಿ ಮೊದಲು ಪ್ರಕಟವಾದ ಸತ್ಯಾರ್ಥಗಳು ಅವರು ಒಂದು ವೇಳೆ ತಾವೇ ಬಿದ್ದುಹೋದರೂ ಅವುಗಳನ್ನು ರದ್ದುಮಾಡಲು ಸಾಧ್ಯವಾಗುವುದಿಲ್ಲ. (ಆದರೆ ಅವರಲ್ಲಿ ಯಾರೂ ಬಿದ್ದುಹೋಗಲಿಲ್ಲವೆಂಬುದು ಪ್ರಕಟನೆ 21:14ರಿಂದ ವ್ಯಕ್ತವಾಗುತ್ತದೆ.) ಇದನ್ನು ನಿಶ್ಚಿತವಾದ ರೀತಿಯಲ್ಲಿ ಪೌಲನು ಗಲಾತ್ಯ 1:8–12 ರಲ್ಲಿ ಹೇಳಿದ್ದಾನೆ.

ಆದಿಸಭೆಯುವರು ಅಪೋಸ್ತಲರಲ್ಲಿದ್ದ ದೈವಭಕ್ತಿ ಉತ್ಕೃಷ್ಟವಾದ ಆತ್ಮಿಕ ಜ್ಞಾನವಿವೇಕಗಳನ್ನು ಸೂಕ್ತವಾದ ಪವಿತ್ರಭಾವದಿಂದ ನೋಡುತ್ತಿದ್ದರು ಹಾಗೂ ಇವರು ತಮಗಾಗಿ ಕರ್ತನು ವಿಶೇಷವಾಗಿ ಆದುಕೊಂಡ ರಾಯಭಾರಿಗಳೆಂದು ಮಾನ್ಯತೆ ನೀಡಿ, ಅವರು ನಿಜವಾಗಿಯೂ ಹಾಗೆಯೇ ಇರುವಲ್ಲಿ, ಅವರಿಂದ ಕಲಿತುಕೊಳ್ಳಲು ಅವರ ಪಾದಗಳ ಬಳಿಯಲ್ಲಿ ಕುಳಿತುಕೊಂಡಿದ್ದರು. ಇದನ್ನು ವಿವಾದವಿಲ್ಲದ ಶೂನ್ಯ ಮನಸ್ಸಿನಿಂದ ಮಾಡದೆ ಇವರಲ್ಲಿದ್ದ ಆತ್ಮವನ್ನು ಪರೀಕ್ಷಿಸಿ ಅವರ ಸಾಕ್ಷಿಗಳನ್ನು ಪ್ರಮಾಣೀಕರಿಸಿ ನೊಡುವವರಾಗಿದ್ದರು. (1 ಯೋಹಾನ 4:1; 1 ಥೆಸಲೋನಿಕ 5:21; ಯೆಶಾಯ 8:20) ಮತ್ತು ಅಪೋಸ್ತಲರು ಅವರಿಗೆ ಉಪದೇಶ ಮಾಡುವಾಗ ತಮ್ಮ ನಿರೀಕ್ಷೆಗೆ ಕಾರಣವನ್ನು ವಿಚಾರಿಸಿ ತಿಳಿದುಕೊಳ್ಳವುದಕ್ಕೆ ಈ ಅಗತ್ಯವಾದ ಮನೋಭಾವವನ್ನು ಬೆಳೆಸಿಕೊಳ್ಳಲು ಪ್ರೋತ್ಸಾಹಿಸು ವವರಾಗಿದ್ದರು. ಅವರು ಇದಕ್ಕೆ ಸಿದ್ದರಾಗಿದ್ದು ಇದನ್ನು ಮನವೊಲಿಸುವ ಮನುಷ್ಯ ಜ್ಞಾನದಿಂದಾಗಲೀ (ಅಂದರೆ ಮನುಷ್ಯರ ತತ್ವವಿಚಾರಗಳಿಂದಾಗಲೀ ಸೂತ್ರಗಳಿಂದಾಗಲೀ) ಮಾಡಲಿಲ್ಲ; ಆದರೆ ಸಭೆಯ ನಂಬಿಕೆಯು ಮಾನುಷಜ್ಞಾನದ ಮೇಲೆ ಆಧಾರಗೊಂಡಿರದೆ ದೇವರ ಶಕ್ತಿಯ ಮೇಲೆ ಅಧಾರಗೊಂಡಿರಬೇಕೆಂಬದಕ್ಕಾಗಿ ಪವಿತ್ರಾತ್ಮನನ್ನೂ ಮತ್ತು ಅದರ ಬಲವನ್ನೂ ತೋರ್ಪಡಿಸುವವರಾಗಿ ಇದನ್ನು ಮಾಡುತ್ತಿದ್ದರು. (1 ಕೊರಿಂಥ 2:4–5) ಅವರು ಅಂಧಶ್ರದ್ಧೆ ಮೂಢನಂಬಿಕೆಗಳಿಂದ ಕೂಡಿದ ಶ್ರದ್ಧಾಭಕ್ತಿಯನ್ನು ತಮ್ಮಲ್ಲಿ ಬೆಳೆಸಿಕೊಂಡವರಾಗಿರಲಿಲ್ಲ.

ಬೆರೋಯದವರು "...ಥೆಸಲೋನಿಕದವರಿಗಿಂತ ಸದ್ಗುಣ –ವುಳ್ಳವರಾಗಿದ್ದು ದೇವರ ವಾಕ್ಯವನ್ನು ಶುದ್ಧಮನಸ್ಸಿನಿಂದ ಅಂಗೀಕರಿಸಿ ಇವರು ಹೇಳುವ ಮಾತು ಹೌದೋ ಏನೋ ಎಂಬ ವಿಷಯವನ್ನು ಪ್ರತಿದಿನವೂ ಶಾಸ್ತ್ರಗ್ರಂಥಗಳನ್ನು ಶೋಧಿಸು–ತ್ತಿದ್ದರು." ಎಂದು ನಾವು ಓದುತ್ತೇವೆ. ಮತ್ತು ತಾವು ಸಾರುವ ಸುವಾರ್ತೆಯು ಪೂರ್ವಕಾಲದಲ್ಲಿನ ಪ್ರವಾದಿಗಳು ಗೂಢವಾಗಿ ವ್ಯಕ್ತಪಡಿಸಿದಂತದ್ದೇ ಎಂಬುದನ್ನು ತೋರಿಸಿ ಕೊಡುವುದು ಅವರ ಸತತ ಪ್ರಯತ್ನವಾಗಿತ್ತು. "ದೇವರು ನಿಮಗೆ ತೋರಿಸಿರುವ ಕೃಪೆಯನ್ನು ಕುರಿತು ಮುಂತಿಳಿಸಿದ ಪ್ರವಾದಿಗಳು ಈ ರಕ್ಷಣೆಯ ವಿಷಯದಲ್ಲಿ ಸೂಕ್ಷ್ಮವಾಗಿ ವಿಚಾರಿಸಿ ಪರಿಶೋಧನೆ ಮಾಡಿದರು. ತಮ್ಮಲ್ಲಿದ್ದ ಕ್ರಿಸ್ತನ ಆತ್ಮನು ಕ್ರಿಸ್ತನಿಗೆ ಬರಬೇಕಾದ ಬಾಧೆಗಳನ್ನೂ ಅವುಗಳ ತರುವಾಯ ಉಂಟಾಗುವ ಪ್ರಭಾವವನ್ನು ಮುಂದಾಗಿ ತಿಳಿಸಿದಾಗ ಆತನು ಯಾವ ಕಾಲವನ್ನು ಇಲ್ಲವೇ ಎಂಥ ಕಾಲವನ್ನು ಸೂಚಿಸುವನೆಂಬುದನ್ನು ಅವರು ಪರಿಶೋಧನೆ ಮಾಡಿದರು. ಈ ಸಂಗತಿಗಳನ್ನು ಮುಂತಿಳಿಸುವದರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ (ಕ್ರಿಸ್ತನ ದೇಹವಾಗಿರು ವವರು) ಸೇವೆಮಾಡುವವರಾಗಿದ್ದರೆಂಬುದು ಅವರಿಗೆ ಪ್ರಕಟವಾಯಿತು. ಅವರು ಮುಂದಾಗಿ ತಿಳಿಸಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ (ಅಪೋಸ್ತಲರ) ಮೂಲಕ ನಿಮಗೆ ಪ್ರಸಿದ್ಧಿ ಮಾಡಲ್ಪಟ್ಟಿದೆ..." (1 ಪೇತ್ರ 1:10–12) ಈ ಸುವಾರ್ತೆಯು ಕರ್ತನು ಸ್ವತಃ ತಾನೇ ಪ್ರಕಾಶಕ್ಕೆ ತಂದ ಜೀವ ಮತ್ತು ನಿರ್ಲಯತ್ವಗಳ ವಿಷಯವಾಗಿಯೇ ಇತ್ತು; ಪವಿತ್ರಾತ್ಮನ ನಡಿಸುವಿಕೆ ಹಾಗೂ ಮಾರ್ಗದರ್ಶನದ ಮೂಲಕವಾಗಿ ಅಪೋಸ್ತಲರಿಂದ ಇದನ್ನು ಹೆಚ್ಚು ವಿಸ್ತಾರ ಮಾಡಲ್ಪಟ್ಟು ಇದರ ಎಲ್ಲಾ ಪ್ರತಿಯೊಂದು ವಿವರಗಳನ್ನೂ ಸಭೆಯು ಕಂಡು ಕೊಳ್ಳುವಂತೆ ಮಾಡಲಾಗಿತ್ತು. ಇದು ವಿಶೇಷ ಪ್ರಕಟನೆಯ ಮೂಲಕವೋ ಅಥವಾ ಇತರ ಹೆಚ್ಚು ಸಹಜವಾದ ವಿಧಾನದಿಂದಲೋ, ಈ ಎರಡು ವಿಧಾನಗಳ ಮೂಲಕ ವಾಗಿಯೂ ಕರ್ತನು ಅಪೋಸ್ತಲರಿಗೆ ಮತ್ತು ಇವರ ಮೂಲಕ ಪೂರ್ಣವಾದ ಸಭೆಗೆ ಮಾಡಿದ ವಾಗ್ದಾನವು ಹೀಗೆ ನೆರವೇರಲ್ಪಟ್ಟಿತ್ತು. ಅದೇನೆಂದರೆ: "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಸದ್ಯಕ್ಕೆ ಅದನ್ನು ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು (ಮೊದಲನೆಯದಾಗಿ ಅಪೋಸ್ತಲರನ್ನು ಮತ್ತು ಅವರ ಮೂಲಕವಾಗಿ ಇಡೀ ಸಭೆಯನ್ನು) ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿ ಸತ್ಯಕ್ಕೆ ಸೇರಿಸುವನು. ಆತನು ತನ್ನಷ್ಟಕ್ಕೆ ತಾನೇ ಮಾತನಾಡದೆ (ಅಂದರೆ ಅವನು ನಿಮಗೋಸ್ಕರವಾಗಿರುವ ನನ್ನ ದೂತನಾಗಿ) ಕೇಳಿದ ಮಾತುಗಳನ್ನೇ ಆಡುವನು; ಮತ್ತು ಮುಂದಾಗುವ ಸಂಗತಿಗಳನ್ನು ನಿಮಗೆ ತಿಳಿಸುವನು. ಆತನು ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುತ್ತಾ ನನ್ನನ್ನೇ ಮಹಿಮೆಪಡಿಸುವನು. ತಂದೆಗೆ ಇರುವುದೆಲ್ಲಾ ನನ್ನದು (ಆತನ ಸಂಕಲ್ಪವೇ ನನ್ನ ಸಂಕಲ್ಪವು, ಆತನ ಮಾರ್ಗವೇ ನನ್ನ ಮಾರ್ಗವು ಆಗಿರಲಾಗಿ ನಮ್ಮಿಬ್ಬರ ನಡುವೆ ಯಾವುದೇ ಬಿನ್ನಾಭಿಪ್ರಾಯ ವಿರುವುದಿಲ್ಲ); ಆದುದರಿಂದಲೇ ನನ್ನದರೊಳಗಿಂದ ತೆಗೆದುಕೊಂಡು ನಿಮಗೆ ತಿಳಿಸುವನೆಂದು ಹೇಳಿದೆನು." – ಯೋಹಾನ 16:12–15

ಆದುದರಿಂದ ಅಪೋಸ್ತಲರ ಸಾಕ್ಷಿಗಳು ಮೋಶೆಯ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ಸಾಕ್ಷಿಗಳಿಗೆ ಒಪ್ಪುವುದೇ ಎಂದು ಶಾಸ್ತ್ರವಚನಗಳನ್ನು ಹುಡುಕಿ ನೋಡುವುದು ಮತ್ತು ಅವುಗಳನ್ನು ಕರ್ತನ ಉಪದೇಶಗಳಿಗೆ ಸಹ ಹೋಲಿಸಿ ನೋಡುವುದು ಬೆರೋಯದವರಿಗೆ ಸೂಕ್ತವಾಗಿತ್ತು. ನಮ್ಮ ಕರ್ತನೂ ಸಹ ತನ್ನ ಸಾಕ್ಷಿಯನ್ನು ಮೋಶೆಯ ಧರ್ಮಶಾಸ್ತ್ರ ಮತ್ತು ಪ್ರವಾದಿಗಳಿಗೆ ಹೀಗೆಯೇ ಹೋಲಿಸಿ ನೋಡಿ ಪ್ರಮಾಣೀಕರಿಸಲು ಕರೆನೀಡಿ ಹೀಗೆ ಹೇಳಿದ್ದನು: "ಶಾಸ್ತ್ರದಿಂದ ನಿತ್ಯಜೀವ ದೊರೆಯುವುದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿ ಕೊಡುವವುಗಳಾಗಿವೆ." ಇಡೀ ದೇವರ ಸಾಕ್ಷಿಪ್ರಮಾಣಗಳು ಅವು ಧರ್ಮಶಾಸ್ತ್ರದಿಂದಾಗಲೀ ಪ್ರವಾದಿಗಳಿಂದಾಗಲೀ ಕರ್ತನಿಂದಾ–ಗಲೀ ಇಲ್ಲವೇ ಅಪೋಸ್ತಲರಿಂದಾಗಲೀ ತಿಳಿಸಲ್ಪಟ್ಟದ್ದಾಗಿದ್ದರೂ ಅವು ಪರಸ್ಪರ ಹೊಂದಾಣಿಕೆಯಾಗಿರಬೇಕು. ಇವುಗಳು ಪೂರ್ಣ ಹೊಂದಾಣಿಕೆಯಲ್ಲಿರುವುದೇ ಅವು ದೈವ ಪ್ರೇರಿತವೆಂಬುದಕ್ಕೆ ಪ್ರಮಾಣವಾಗಿದೆ. ಮತ್ತು ಇವು ಪರಸ್ಪರ ಹೊಂದಾಣಿಕೆ–ಯಾಗಿರುವುದನ್ನು ನಾವು ಕಂಡುಕೊಂಡಿರುವುದಕ್ಕಾಗಿ ದೇವರಿಗೆ ಸ್ತೋತ್ರ. ಹೀಗೆ ಹಳೆ ಒಡಂಬಡಿಕೆಯ ಮತ್ತು ಹೊಸ ಒಡಂಬಡಿಕೆಯ ಎಲ್ಲಾ ವಚನಗಳೂ ನಮ್ಮ ಕರ್ತನೂ ತಾನೇ ಹೆಸರಿಸಿರುವಂತೆ "ದೇವರ ವೀಣೆ" (ಪ್ರಕಟನೆ 15:2) ಯಾಗಿ

ರೂಪುಗೊಂಡಿರುವುದು. ಹಾಗು ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ಹಲವಾರು ಸಾಕ್ಷಿಪ್ರಮಾಣಗಳು ಆ ವೀಣೆಯ ಹಲವಾರು ತಂತಿಗಳಾಗಿ ನಮ್ಮ ಹೃದಯಗಳಲ್ಲಿರುವ ಪವಿತ್ರಾತ್ಮನ ಮೂಲಕವಾಗಿ ಶೃತಿ ಮಾಡಲ್ಪಟ್ಟು ದೇವರ ಸತ್ಯಾರ್ಥಗಳನ್ನು ಶ್ರದ್ಧೆಯಿಂದ ಅನ್ವೇಶಿಸುವವರಾದ ನಮ್ಮ ಕೈಬೆರಳುಗಳಿಂದ ಮೀಟಿದಾಗ ಈ ಮರ್ತ್ಯ ಕಿವಿಗಳಿಗೆ ಎಂದೂ ಬೀಳದಂಥ ಬಹು ಆಹ್ಲಾದಕರ ದಾಟಿಯ ಮಧುರವಾದ ಸಂಗೀತವಾಗುತ್ತದೆ. "ಮೋಶೆಯ ಹಾಗೂ ಯಜ್ಞನ ಕುರಿಯ ಹಾಡಿನ" ಅತಿ ಇಂಪಾದ ಸಂಗೀತ ಮಾಧುರ್ಯಕ್ಕಾಗಿ ದೇವರಿಗೆ ಸ್ತೋತ್ರ. ಅದನ್ನು ನಾವು ಆತನ ಪರಿಶುದ್ಧ ಅಪೋಸ್ತಲರ ಮತ್ತು ಪ್ರವಾದಿಗಳ ಸಾಕ್ಷಿವಚನಗಳ ಮೂಲಕವಾಗಿ ಕಲಿತುಕೊಂಡಿದ್ದೇವೆ. ಇವರಲ್ಲಿ ಕರ್ತನಾದ ಯೇಸುವೇ ಮುಖ್ಯನಾದವನು.

ಆದರೆ ಕರ್ತನ ಮತ್ತು ಅಪೋಸ್ತಲರ ಸಾಕ್ಷಿಗಳು ಧರ್ಮಶಾಸ್ತ್ರ ಮತ್ತು ಪ್ರವಾದಿಗಳಿಗೆ ಹೊಂದಾಣಿಕೆಯಾಗಿರ–ಬೇಕಿದ್ದರೂ ಅವುಗಳು ಹಳೆಯ ಸಂಗತಿಗಳ ಸಹಿತವಾಗಿ ಹೊಸ ಸಂಗತಿಗಳಿಗೆ ಸಾಕ್ಷಿ ನೀಡುವುದನ್ನು ನಾವು ನಿರೀಕ್ಷಿಸಬೇಕು, ಏಕೆಂದರೆ ಇದನ್ನು ಹೀಗೆ ನಿರೀಕ್ಷಿಸಲು ಪ್ರವಾದಿಗಳು ನಮ್ಮನ್ನು ನಡೆಸಿದ್ದಾರೆ. (ಮತ್ತಾಯ 13:35; ಕೀರ್ತನೆ 78:2; ಧರ್ಮೋ. 18:15,18; ದಾನಿಯೇಲ 12:9) ಮತ್ತು ಹೀಗೆ ಅವರು ಇದುವರೆಗೆ ಗುಪ್ತವಾಗಿದ್ದ ಹಿಂದಿನ ಪ್ರವಾದನೆಗಳ ಸತ್ಯಾರ್ಥಗಳನ್ನು ವಿವರಿಸಿರುವುದು ಮಾತ್ರವಲ್ಲದೆ ಹೊಸ ಸತ್ಯಾರ್ಥಗಳನ್ನೂ ಪ್ರಕಟಮಾಡಿರುವುದನ್ನು ಕಂಡು ಕೊಂಡಿರುತ್ತೇವೆ.

ಇಲ್ಲಿ ನಾವು ಕ್ರಿಸ್ತ ವಿರೋಧಿಯ ಮಹಾ ಸಂಘಟನೆಯಾದ ರೋಮನ್ (ಕೆಥೋಲಿಕ) ಸಭೆಯು ತಾನು ಮುಂದುವರಿದು ಹೆಚ್ಚಾಗಿ ಹೇಳಿಕೊಳ್ಳುವುದನ್ನು ಗಮನಿಸಬೇಕಾದುದು ಸೂಕ್ತ; ಅದೇನೆಂದರೆ, ಪೇತ್ರನೆಂಬ ಬಂಡೆಯ ಮೇಲೆ ಸುವಾರ್ತಾ ಯುಗದ ಸಭೆಯು ಕಟ್ಟಲ್ಪಟ್ಟಿರುವುದೆಂದೂ ಅಲ್ಲದೆ ಆತನಿಗೂ ಮತ್ತು ಆತನ ಉತ್ತರಾಧಿಕಾರಿಯಾದ ಪೋಪರಿಗೂ ಪರಲೋಕ ರಾಜ್ಯದ ಬೀಗದ ಕೈಯನ್ನೂ ಹಾಗೂ ಅದನ್ನು ತೆರೆಯುವ ಮತ್ತು ಮುಚ್ಚುವ ಅಧಿಕಾರವನ್ನು ವಿಶ್ವಾಸಪೂರ್ಣವಾಗಿ ನೀಡಲಾಗಿದ್ದು ಮತ್ತು ಈ ಮೂಲಕವಾಗಿ ಅವರು ತಾವು ಇಚ್ಛಿಸುವ ಯಾರನ್ನಾದರೂ ಸೇರಿಸಿಕೊಳ್ಳುವ ಹಾಗೂ ತಾವು ಇಷ್ಟಪಡುವ ಯಾವ ಸಂಗತಿಯನ್ನಾದರೂ ಯಾರ ಮೇಲಾದರೂ ಅದನ್ನು ಕಟ್ಟುಪಾಡನ್ನಾಗಿ ಮಾಡುವ ಅಥವಾ ಅದು ಬಿಚ್ಚಲ್ಪಟ್ಟು ಅದರಿಂದ ವಿಮುಕ್ತರನ್ನಾಗಿ ಮಾಡುವ ಅಧಿಕಾರಕೊಡಲಾಗಿರುವುದೆಂಬುದು.

ಈ ತತ್ವಬೋಧೆಗೆ ಆಧಾರವಾಗಿರುವ ವಾಕ್ಯಭಾಗವು ಇರುವುದು ಮತ್ತಾಯ 16:15–19ರಲ್ಲಿ. "ಆದರೆ ನೀವು ನನ್ನನ್ನು ಯಾರೆನ್ನುತ್ತೀರಿ..." ಎಂಬ ಕರ್ತನ ಪ್ರಶ್ನೆಗೆ ಪೇತ್ರನು ಉತ್ತರವಾಗಿ, "ನೀನು ಬರಬೇಕಾದ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು." ಎಂದು ಹೇಳಿದನು. ಮತ್ತು ಕರ್ತನು ಉತ್ತರವಾಗಿ ಹೇಳಿದ್ದು, "ನೀನು ಪೇತ್ರನು (ಪೆತ್ರೋಸ್ ಅಂದರೆ ಒಂದು ಗುಂಡುಕಲ್ಲು), ಈ ಬಂಡೆಯ ಮೇಲೆ (ಪೇತ್ರಾ ಅಂದರೆ ವಿಸ್ತಾರ ವಾದ ಬಂಡೆ) ನನ್ನ ಸಭೆಯನ್ನು ಕಟ್ಟುವೆನು." ಹೀಗೆ ಯೆಶಾಯ 8:14 ವಚನದಂಥ ಅನೇಕ ಹಳೆ ಒಡಂಬಡಿಕೆಯ ವಾಕ್ಯಭಾಗಳ ಉಲ್ಲೇಖನಗಳಿಗೆ ಹೊಂದಿಕೊಂಡಂತೆ, ಕರ್ತನನ್ನು ಆ ವಿಸ್ತಾರ ವಾದ ಮಹಾ ಬಂಡೆಯನ್ನಾಗಿ ತೋರಿಸಲಾಗಿದ್ದು ಸಭೆಯು ಅದರ ಮೇಲೆ ಕಟ್ಟಲಾಗಿರುವುದು. ಪೇತ್ರನು ಆಗತಾನೇ ಅರಿಕೆ ಮಾಡಿದ ಕ್ರಿಸ್ತನೆಂಬ ನಮ್ಮ ರಕ್ಷಣಾಬಂಡೆಯಾದ ಈ ಬಂಡೆಯ ಮೇಲೆ ಕಟ್ಟಲಾಗಿರುವ ಭವ್ಯವಾದ ದೇವಾಲಯದ ಜೀವವುಳ್ಳ ಕಲ್ಲುಗಳಲ್ಲಿ ಒಬ್ಬನಾಗಿರುವನು. ಮತ್ತು ಪೇತ್ರನು ತನ್ನನ್ನೂ ಸೇರಿಸಿಕೊಂಡು ಎಲ್ಲಾ ಜೀವವುಳ್ಳ ಕಲ್ಲುಗಳಿಗೂ ಹಾಗೂ ಮಹಾ ಬಂಡೆಯಾದ ಕ್ರಿಸ್ತ ಯೇಸುವಿಗೂ ಇರುವ ಸಂಬಂಧವನ್ನು ಧಾರಾಳವಾಗಿ ಒಪ್ಪಿಕೊಂಡವನಾಗಿ ಹೀಗೆ ಹೇಳಿದ್ದಾನೆ, "ಆ ಕಲ್ಲನ್ನು ಮನುಷ್ಯರು ನಿರಾಕರಿಸಿದರೂ ದೇವರು ಅದನ್ನು ಆಯಲ್ಪಟ್ಟದ್ದೂ ಮಾನ್ಯವಾದ್ದೂ ಎಂದು ಎಣಿಸಿದನು. ನೀವು ಸಹ ಜೀವ ವುಳ್ಳ ಕಲ್ಲುಗಳಾಗಿದ್ದು ಆತ್ಮ ಸಂಬಂಧವಾದ ಮಂದಿರವಾಗಲಿಕ್ಕೆ ಕಟ್ಟಲ್ಪಡುತ್ತಾ ಇದ್ದೀರಿ." ಮುಂತಾದವುಗಳು. (1 ಪೇತ್ರ 2:4,5)

ನಮ್ಮ ಕರ್ತನು ಹೇಳಿದ ಅನೇಕ ಸಾಮ್ಯಗಳಲ್ಲಿ ತೋರಿಸಿ ಕೊಟ್ಟಿರುವಂತೆ, ಸುವಾರ್ತಾಯುಗದ ಸಭೆಯು ಪರಲೋಕ ರಾಜ್ಯವಾಗಿದ್ದು (ಮತ್ತಾಯ 13) ಅದು ಆರಂಭದ ಸಿದ್ಧತೆಯ ಹಂತದಲ್ಲಿರುವುದು. ಮತ್ತು ಅದರ ವಿಶೇಷ ಸೌಲಭ್ಯ ಸವಲತ್ತು ಮತ್ತು ಅಧಿಕಾರಗಳನ್ನು ಹೊಂದುವ ಅವಕಾಶವು ಯೆಹೂದ್ಯರು ಮತ್ತು ಅನ್ಯಜನರು ಈ ಇಬ್ಬರಿಗೂ ಕೆಲವೇ ಸಮಯಗಳಲ್ಲಿ ತೆರೆಯಲ್ಪಡಲಾಗುತ್ತಿತ್ತು. ಸಭೆಗೆ ಇದರ ಬಾಗಿಲನ್ನು ತೆರೆದಿರು ವವನು ನಿಜವಾಗಿಯೂ ಕರ್ತನೇ; ತನ್ನ ಹೆಸರಿನಲ್ಲಿ ಈ ಕಾರ್ಯವನ್ನು ಮಾಡುವುದಕ್ಕೆ ಪೇತ್ರನು ಕೇವಲ ಕರ್ತನು ಆದುಕೊಂಡ ಸಾಧನ. ಪಂಚಾಶತ್ತಮ ದಿನದಂದು ಮಾಡಿದ ತನ್ನ ಉಪದೇಶದ ಮೂಲಕ ಅದರ (ಪರಲೋಕ ರಾಜ್ಯದ) ಬಾಗಿಲನ್ನು ಯೆಹೂದ್ಯರಿಗೆ ತೆರೆಯಮಾಡಿ (ಅ.ಕೃ. 2:14,40) ಮತ್ತು ಮೂರುವರೆ ವರ್ಷದ ನಂತರ ಅದೇ ಬಾಗಿಲನ್ನು ಕೊರ್ನೇಲ್ಯನ ಮನೆಯಲ್ಲಿ ಮಾಡಿದ ಉಪದೇಶದ ಮೂಲಕ ಅನ್ಯಜನರಿಗೂ ತೆರೆದನು. (ಅ.ಕೃ. 10:33,36) ಈ ಗೌರವಯುತವಾದ ಸೇವೆಯನ್ನು ಸಾಂಕೇತಿಕವಾಗಿ "ಪರಲೋಕ ರಾಜ್ಯದ ಬೀಗದ ಕೈ" ಉಪಯೋಗ ಮಾಡಿರುವುದೆಂದು ಉಲ್ಲೇಖಿಸಲಾಗಿದೆ. (ಮತ್ತಾಯ 16:19) ಆದರೆ ಒಂದು ಸಾರಿ ಈ ಬಾಗಿಲು ತೆರೆಯಲ್ಪಟ್ಟ ಮೇಲೆ ಅದನ್ನು ಪೇತ್ರನಾಗಲೀ ಇಲ್ಲವೇ ಬೇರೆ ಯಾವ ಮನುಷ್ಯನೇ ಆಗಲಿ ಇದನ್ನು ಮುಚ್ಚಲು ಸಾಧ್ಯವಿಲ್ಲ. ತಾನು "ದಾವೀದನ ಬೀಗದ ಕೈಯನ್ನು" ಹೊಂದಿರುವೆನೆಂದು ನಮ್ಮ ಕರ್ತನು ಪ್ರಕಟಿಸಿದ್ದಾನೆ. (ಪ್ರಕಟನೆ 3:7) ಮತ್ತು ಸುವಾರ್ತಾ ಯುಗದ ಅಂತ್ಯದಲ್ಲಿ ಆದುಕೊಳ್ಳಲ್ಪಟ್ಟ ನಂಬಿಗಸ್ತರಾದ ಸಭೆಯ ಕಡೆಯ ಸದಸ್ಯನು ಪ್ರಭಾವಸ್ಥಾನಕ್ಕೆ ಸೇರುವವರೆಗೂ ತನ್ನ ರಾಜ್ಯದ ಬಾಗಿಲು ಮುಚ್ಚಲಾಗುವುದಿಲ್ಲ. ಪೇತ್ರನು ಉಪಯೋಗಿಸಿದ ಬೀಗದ ಕೈ ಎಂಬುದು ಆಗ ಪ್ರಕಟವಾಗಲು ನಿಗದಿತವಾದ (ಪರಲೋಕ ರಾಜ್ಯವೆಂಬ) ಹೊಸ ವ್ಯವಸ್ಥೆಯ ಸತ್ಯಾರ್ಥಗಳು. ಅದನ್ನು ಮೊದಲು ಪವಿತ್ರಾತ್ಮನ ಮೂಲಕವಾಗಿ ಪೇತ್ರನ ಮನಸ್ಸಿಗೆ ಸ್ಪಷ್ಟಪಡಿಸಲಾಗಿತ್ತು.

ಭೂಲೋಕ ಮತ್ತು ಪರಲೋಕಗಳಲ್ಲಿ ಕಟ್ಟುವ ಹಾಗೂ

ಬಿಚ್ಚುವ ಸಾಮರ್ಥ್ಯವನ್ನು ಪೇತ್ರನಿಗೆ ಮಾತ್ರವಲ್ಲದೆ ಎಲ್ಲಾ ಅಪೋಸ್ತಲರಿಗೂ ಅನುಗ್ರಹ ಮಾಡಲ್ಪಟ್ಟಿತ್ತು. ಮತ್ತು ಸತ್ಯವನ್ನು ಸಭೆಗೆ ಪ್ರಸ್ತುತ ಪಡಿಸಲು ಹೇಳಬೇಕಾದ ಮಾತುಗಳನ್ನು ದೇವರು ಅಪೋಸ್ತಲರಿಗೆ ಹೇಗೆ ಮಾರ್ಗದರ್ಶನ ಮಾಡಿರುವನೆಂದರೆ ಅವರ ಉಪದೇಶಗಳ ಮೇಲೆ ನಂಬಿಸ್ತರೆಲ್ಲರೂ ಪೂರ್ಣವಾಗಿ ಭರವಸವಿಡುವಂತಾಯಿತೆಂಬುದು ಸೂಚಿತವಾಗಿರುವುದೆಂದು ನಮ್ಮ ನಂಬಿಕೆ. ಅವರು ಯಾವುದನ್ನು ಸಭೆಯ ಕರ್ತವ್ಯವೆಂದು ಕಟ್ಟುಪಾಡು ಮಾಡುವರೋ ಅದನ್ನು ಪರಲೋಕದಲ್ಲಿಯೂ ಮಾನ್ಯಮಾಡಲಾಗುವುದೆಂದು ನಾವು ತಿಳಿದುಕೊಳ್ಳಬಹುದು; ಮತ್ತು ಮೋಶೆಯ ಧರ್ಮಶಾಸ್ತ್ರ ಮುಂತಾದವುಗಳ ವಿಷಯವಾಗಿ ಯಾವುದನ್ನು ಅವರು (ರದ್ದುಪಡಿಸಲು) ಬಿಚ್ಚುವರೋ ಅವರು ಹಾಗೆ ಮಾಡಲು ತಿಳಿಯಲಶಖ್ಯವಾದ ದೈವಿಕ ರೀತಿಯಲ್ಲಿ ಅವರಿಗೆ ಮಾರ್ಗದರ್ಶನ ಮಾಡಲ್ಪಟ್ಟು ಪರಲೋಕದಲ್ಲಿಯೂ ಅದು ಬಿಚ್ಚಲ್ಪಡಲಾಗುವುದೆಂದು ಅಥವಾ ರದ್ಧುಪಡಿಸ-ಲಾಗುವುದೆಂದು ನಾವು ತಿಳಿದುಕೊಳ್ಳಬಹುದು.

## ಅಪೋಸ್ತಲಿಕ ಪ್ರೇರಣೆ

ಕರ್ತನು ಹನ್ನೆರಡು ಮಂದಿ ಅಪೋಸ್ತಲರನ್ನು ಸಭೆಯ ಸೇವೆಗೆ ಎಂಥಾ ವಿಶೇಷವಾದ ರೀತಿಯಲ್ಲಿ ಆರಿಸಿಕೊಂಡು ಅಧಿಕಾರ ನೀಡಿ ಅವರಿಗೆ ಕಾರ್ಯಭಾರವನ್ನು ವಹಿಸಿರುವನೆಂಬುದನ್ನು ಗಮನಿಸಿದವರಾಗಿ ನಾವು ಮಾಡುವ ಮುಂದಿನ ವಿಚಾರಣೆಯೆಂದರೆ, ನಾವು ಪವಿತ್ರಾತ್ಮ ಪ್ರೇರಣೆಯೆಂದು ಪರಿಗಣಿಸಬೇಕಿರುವುದು ಅವರ ಬಾಯಿಂದ ಬಂದ ಉಪದೇಶವನ್ನೋ ಅಥವಾ ಇನ್ನಾವುದನ್ನೋ ಎಂಬುದು. ನಮ್ಮ ವಿಚಾರಣೆಯನ್ನು ಮುಂದುವರಿಸುತ್ತಾ ನಾವು ಈ ಮುಂದಿನ ಹೇಳಿಕೆಗಳಿಗೆ ಗಮನವನ್ನು ಸೆಳೆಯುವವರಾಗಿದ್ದೇವೆ:–

(1) ಪವಿತ್ರಾತ್ಮನನ್ನು ಸಹಾಯಕನನ್ನಾಗಿ ಕಳುಹಿಸಿಕೊಡುವ ವಾಗ್ದಾನವು ಅಪೋಸ್ತಲರ ಸೇವೆಯ ಮೂಲಕವಾಗಿ ಇಡೀ ಸಭೆಗೆ ಕಡೆಯದಾಗಿ ತಲುಪುವುದಿದ್ದರೂ ಅದನ್ನು ವಿಶೇಷವಾಗಿ ನೀಡಲಾಗಿದ್ದು ಅಪೋಸ್ತಲರಿಗೆ. (ಯೋಹಾನ 16:13–15) ಇದನ್ನು ಕಡೆಯ ಭೋಜನ ಮಾಡಿದ್ದ ಆ ರಾತ್ರಿ ಯೂದನು ಹೊರಗೆ ತೆರಳಿದ ನಂತರ ಹನ್ನೊಂದು ಮಂದಿಗೆ ನೀಡಲಾಗಿತ್ತು. (ಯೋಹಾನ 13:31) ಹಾಗೂ ಪೌಲನು ಹನ್ನೆರಡನೆಯವನಾಗಿ ನೇಮಕಗೊಂಡಾಗ ಆತನಿಗೆ ಇಷ್ಟೇ ಪರಿಣಾಮಕಾರಿಯಾಗಿ ಇದು ಅನ್ವಯಿಸುವಂಥದ್ದಾಗಿದ್ದು ಹಾಗೆಯೇ ಅದು ನೆರವೇರಲ್ಪಟ್ಟಿತ್ತು. ಆ ವಾಗ್ದಾನವನ್ನು ಹೀಗೆ ಓದಲಾಗುವುದು: "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು... ಮತ್ತು ಮುಂದಾಗುವ ಸಂಗತಿಯನ್ನು ನಿಮಗೆ ತಿಳಿಸುವನು." – ಯೋಹಾನ 14:26; 16:13

ಹೀಗೆ ನಾವು ಕಲಿತಿರುವುದೇನಂದರೆ, ಅಪೋಸ್ತಲರಿಗೆ ಉಂಟಾದ ಪವಿತ್ರಾತ್ಮ ಪ್ರೇರಣೆಯು ಮೂರು ಬಗೆಯ ಗುಣ ಲಕ್ಷಣಗಳಿಂದ ಕೂಡಿದ್ದು, ಅದು (ಅ) ದೇವರ ಯೋಜನೆ ಉದ್ದೇಶಗಳೆಲ್ಲವುಗಳ ವಿಷಯಗಳಲ್ಲಿ ಸತ್ಯಕ್ಕೆ ನಡೆಸುವಂಥದ್ದಾಗಿ-ರುವುದು (ಆ) ಕರ್ತನು ಅವರೊಡನೆ ಇದ್ದಾಗ ಆತನು ಮಾಡಿದ ಉಪದೇಶಗಳೆಲ್ಲವನ್ನು ಅವರ ನೆನಪಿಗೆ ತಂದು ಮತ್ತೆ ಅದನ್ನು ಮರುಕಳುಹಿಸುವಂತೆ ಮಾಡಿ ಅವರನ್ನು ಪುನಶ್ಚೇತನಗೊಳ್ಳುವಂತೆ ಮಾಡುವುದು. ಮತ್ತು (ಇ) ಮುಂದಾಗುವ ಸಂಗತಿಗಳನ್ನು ವಿಶೇಷವಾಗಿ ಪ್ರಕಟಿಸುವುದು. ಅಂದರೆ, ಕರ್ತನು ಅವರಿಗೆ ಹೇಳಬೇಕಾಗಿದ್ದ ಇನ್ನೂ ಅನೇಕ ಸಂಗತಿಗಳನ್ನು ತಿಳಿಸುವುದು. ಆದರೆ ಆತನ ಮರಣ ಪುನರುತ್ಥಾನಗಳು ನೆರವೇರಲ್ಪಟ್ಟು, ಪವಿತ್ರಾತ್ಮನು ಇಳಿದು ಬರುವವರೆಗೂ ಅವರಿಗೆ ಅದನ್ನು ಹೊರಲು ಸಾಧ್ಯವಿರಲಿಲ್ಲ. – ಯೊಹಾನ 16:12

(2) ಇವುಗಳಲ್ಲಿ ಎರಡನೆಯ ಪ್ರಸ್ತಾವನೆಯಾದ (ಕ್ರಿಸ್ತನು ಹೇಳಿದ ಸಂಗತಿಗಳನ್ನು) ನೆನಪಿಗೆ ತರುವ ವಿಷಯವನ್ನು ಆರಂಭಿಸುವಲ್ಲಿ, ನಮಗೆ ಬರುವ ಆಲೋಚನೆಯೆಂದರೆ ಈ ವಾಗ್ದಾನವು ಅವರು (ಅಪೋಸ್ತಲರು) ಕೇಳಿದ್ದ ಆ ಸಂಗತಿಗಳನ್ನು ಅದೇ ಕ್ರಮದಲ್ಲಿ ಹಾಗೂ ಅದೇ ಪದಬಂದಗಳಲ್ಲಿ ವ್ಯಕ್ತಪಡಿಸಿ ಹೇಳಲೇಬೇಕೆನ್ನುವುದು ಇಲ್ಲಿ ಅಡಕವಾಗಿಲ್ಲವೆಂಬುದು. ಮತ್ತು ಅವರ ಲೇಖನಗಳೂ ಇಂಥ ಹೇಳಿಕೆಗಳಿಗೆ ಪ್ರಮಾಣವಾಗಿರು-ವುದಿಲ್ಲ. ಆದಾಗ್ಯೂ ಈ ವಾಗ್ದಾನವೇ ಸ್ವತಃ ಅವರು ನೀಡಿರುವ ವಿವರಣೆಗಳ ಸತ್ಯತೆಗೆ ಒಂದು ಪ್ರಮಾಣವಾಗಿರುವುದು. ಪ್ರತಿ ನಾಲ್ಕು ಸುವಾರ್ತೆಗಳಲ್ಲಿಯೂ ಕರ್ತನ ಭೂಲೋಕ ಜೀವಿತ ಹಾಗು ಸೇವಾಕಾರ್ಯಗಳ ಚಾರಿತ್ರಿಕವಾದ ವಿವರಣೆಗಳಿದ್ದು ಪ್ರತಿಯೊಂದರಲ್ಲಿಯೂ ಅದರ ಲೇಖಕರ ಸ್ವಂತ ವ್ಯಕ್ತಿತ್ವವು ಎದ್ದುಕಾಣುತ್ತದೆ. ಪ್ರತಿಯೊಬ್ಬನೂ ತನ್ನದೇ ಆದ ವಿಧಾನದಲ್ಲಿ ಮತ್ತು ಶೈಲಿಯಲ್ಲಿ ತನಗೆ ಅತಿ ಮುಖ್ಯವಾದುದೆಂದು ತೋರುವ ಸಂಗತಿಗಳನ್ನು ದಾಖಲಿಸಿದ್ದಾನೆ; ಮತ್ತು ಕರ್ತನ ಮೇಲ್ವಿಚಾರಣೆ-ಯಲ್ಲಿ ಎಲ್ಲವೂ ಒಂದುಗೂಡಿ (ಅ) ನಜರೇತಿನ ಯೇಸುವೇ ಪ್ರವಾದಿಗಳು ಸೂಚಿಸಿದ ಮೆಸ್ಸೀಯನೆಂಬ ಗುರುತು ಮಾಡಿ ಹೇಳಿ (ಆ) ಆತನ ವಿಷಯವಾದ ಪ್ರವಾದನೆಗಳು ನೆರವೇರಿದ್ದನ್ನು ಹಾಗೂ (ಇ) ಆತನ ಜೀವಿತದ ಸಂಗತಿಗಳ ಹಾಗೂ ಆತನ ಉಪದೇಶದಲ್ಲಿನ ದೈವಪ್ರೇರಣೆಯ ವಿಷಯವಾಗಿ ಸಭೆಯ ನಂಬಿಕೆಯನ್ನು ಸ್ಥಿರಪಡಿಸಲು ಅಗತ್ಯವಾದ ಒಂದು ಪೂರ್ಣ ವಿವರಣೆಯನ್ನು ಒದಗಿಸಿದ್ದಾರೆ. ಆ ಪ್ರೇರಣೆಯು ಬಾಯಮಾತಿನ ಹೇಳಿಕೆಯ ರೂಪವಾಗಿದ್ದಲ್ಲಿ (ಅಂದರೆ ಒಂದೊಂದು ಮಾತನ್ನೂ ಹಾಗೆಯೇ ಹೇಳಿದ್ದಲ್ಲಿ) ಆ ನಾಲ್ಕು ಜನರೂ ಒಂದೇ ಸಂಗತಿಗಳನ್ನು ಮತ್ತೆ ಬರೆದು ತೋರಿಸುವ ಅಗತ್ಯವಿರುತ್ತಿರಲಿಲ್ಲ. ಆದರೆ ಪ್ರತಿಯೊಬ್ಬನೂ ಹೀಗೆ ವೈಯುಕ್ತಿಕವಾಗಿ ತನ್ನ ಬರವಣಿಗೆಗಳ ಮೂಲಕ ವ್ಯಕ್ತಗೊಳಿಸುವ ಸ್ವಾತಂತ್ರ್ಯವನ್ನು ಬಳಸಿಕೊಂಡವನಾಗಿ ತಾನು ದಾಖಲಿಸಲು ಯೋಗ್ಯವಾದ ಅತಿ ಮುಖ್ಯವಾದ ಘಟನೆಗಳನ್ನು ಆಯ್ಕೆಮಾಡುವಲ್ಲಿ ಕರ್ತನು ಹೇಗೆ ಈ ವಿಷಯಗಳ ಮೇಲ್ವಿಚಾರಣೆ ಮಾಡಿರುವನೆಂದರೆ ಅವುಗಳಲ್ಲಿ ಮುಖ್ಯವಾದ ಯಾವ ಘಟನೆಯೂ ಬಿಟ್ಟುಹೋಗದೆ ಅಗತ್ಯವಿರುವದೆಲ್ಲವೂ ವಿಶ್ವಾಸಪೂರ್ಣವಾಗಿ ದಾಖಲಿಸಿದ್ದು ಅವೆಲ್ಲವೂ ಪೂರ್ಣವಾಗಿ ನಂಬಲರ್ಹವಾಗಿರುವುದೆಂಬುದು ಗಮನಾರ್ಹ. ಇದು ಲೇಖಕರ ಪ್ರಾಮಾಣಿಕತೆ ಹಾಗೂ

ಸಂಗತಿಗಳನ್ನು ಮತ್ತೆ ಅವರ ನೆನಪಿಗೆ ತರುವ ಪವಿತ್ರಾತ್ಮನ ವಾಗ್ದಾನದ ಪ್ರಭಾವ ಇವೆರಡರ ಮೂಲಕವಾಗಿ ರುಜುವಾತಾ–ಗಿರುವುದು. ಈ ಸಂಬಂಧದಲ್ಲಿ ಅಪೋಸ್ತಲನಾದ ಯೋಹಾನನು ಇತರ ಮೂವರಾದ ಮತ್ತಾಯ ಮಾರ್ಕ ಮತ್ತು ಲೂಕ ಇವರಿಗೆ ಪೂರಕವಾಗಿ ಇವರುಗಳು ಬರೆಯದೆ ಬಿಟ್ಟಿರುವ ಮುಖ್ಯವಾದ ಉಪದೇಶಗಳು ಹಾಗು ಸನ್ನಿವೇಶ ಸಂಗತಿಗಳನ್ನು ಬರೆದು ತಿಳಿಸಿರುವುದು ಗಮನಾರ್ಹವಾದ ಅಂಶ. ನಿಮ್ಮ ಬ್ಯಾಗ್‌ಸ್ಟರ್ ಅಥವಾ ಆಕ್ಸ್‌ಫೋರ್ಡ್ ಪ್ರಕಾಶನದ "ಟೀಚರ್ಸ್ ಬೈಬಲ್" ಇದರಲ್ಲಿರುವ ಸುವಾರ್ತೆಗಳಲ್ಲಿ ಹೊಂದಾಣಿಸಲಾದ ಸಂಗತಿಗಳ ಪಟ್ಟಿಯ ಕಡೆ ಕಣ್ಣು ಹಾಯಿಸಿದಲ್ಲಿ ಇದು ತೋರಿಬರುತ್ತದೆ.

(3) ವಾಗ್ದಾನದಲ್ಲಿನ ಮತ್ತೊಂದು ಪ್ರಸ್ತಾವನೆಯೆಂದರೆ, "ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವುದು" (ಅಥವಾ ಸತ್ಯಕ್ಕೆ ಸಂಬಂಧಿಸಿದ ಎಲ್ಲಾ ಸಂಗತಿಗಳ ವಿಷಯವಾಗಿ ಅವರಿಗೆ ಉಪದೇಶಿಸುವುದು). ಈ ವಾಗ್ದಾನದಲ್ಲಿ ಅಪೊಸ್ತಲರೆಲ್ಲರ ಬರವಣಿಗೆಗಳಲ್ಲಿ ಈ ಸಂಗತಿಯು ರುಜುವಾತಾಗಿರುವುದನ್ನು ನಾವು ಇಲ್ಲಿ ನೋಡುತ್ತೇವೆ; ಅವರು ಕಲಿಯದಿರುವ ಸಾಧಾರಣವಾದ ಜನರಾದರೂ ಶಾಸ್ತ್ರವಚನಗಳ ಮೇಲಿನ ಅವರ ಅರ್ಥವಿವರಣಾ ಸಾಮರ್ಥ್ಯವು ಬಹು ಅಪೂರ್ವವಾದುದು. ಅವರು ತಮ್ಮ ಕಾಲದ ಮಾತ್ರವಲ್ಲದೆ ಅಲ್ಲಿಂದೀಚೆಗೂ ಅತಿ ವಿವೇಕವುಳ್ಳ ಶಾಸ್ತ್ರಜ್ಞರುಗಳ ಜ್ಞಾನವನ್ನೂ ಕಂಗೆಡುವಂತೆ ಮಾಡಲು ಸಮರ್ಥರಾಗಿದ್ದರು. ಧರ್ಮಶಾಸ್ತ್ರ ಪ್ರವಾದಿಗಳು ಹಾಗೂ ಕರ್ತನ ಉಪದೇಶಗಳ ಬಗೆಗಿನ ತಮ್ಮ ತರ್ಕಬದ್ಧವಾದ ವಾದಸರಣಿಯ ಎದುರಿನಲ್ಲಿ ಮಿಥ್ಯೆಯನ್ನು ಪ್ರತಿಪಾದಿಸುವ ಯಾವ ವಾಗ್ಮಿಯೂ ನಿಲ್ಲಲು ಸಾಧ್ಯವಿಲ್ಲದ್ದಾಗಿತ್ತು. ಯೆಹೂದ್ಯರ ಅಧಿಕಾರಿಗಳು ಹಿರಿಯರು ಮತ್ತು ಶಾಸ್ತ್ರಿಗಳು ಇದನ್ನು ಗಮನಿಸಿದ್ದರು ಮತ್ತು "ಇವರು ಯೇಸುವಿನ ಸಂಗಡ ಇದ್ದವರೆಂದು ಗುರುತು ಹಿಡಿದರು." ಅಂದರೆ ಅವರು ಆತನ ಬೋಧನೆಗಳಲ್ಲಿ ಕಲಿತವರಾಗಿದ್ದು ಆತನ ಮನೋಭಾವವನ್ನು ಪಡೆದವರಾಗಿದ್ದರು. – ಅ.ಕೃ. 4:5–6, 13.

ಅಪೋಸ್ತಲರು ಬರೆದ ಪತ್ರಿಕೆಗಳಲ್ಲಿನ ಬಹು ದೊಡ್ಡ ಭಾಗವು ವಿಶೇಷವಾಗಿ ಪೌಲನ ಪತ್ರಿಕೆಗಳು ಹಳೆ ಒಡಂಬಡಿಕೆ–ಯಲ್ಲಿನ ಆತ್ಮಪ್ರೇರಿತವಾಗಿ ಬರೆದ ಸಂಗತಿಗಳ ಹಾಗು ಕರ್ತನ ಉಪದೇಶಗಳ ಮೇಲಿನ ಇಂಥ ತಾರ್ಕಿಕವಿಚಾರ ವಾದಗಳನ್ನು ಒಳಗೊಂಡಿರುವುದನ್ನು ನಾವು ಗಮನಿಸಿದ್ದೇವೆ. ಮತ್ತು ಯಾರು ಅವರು (ಅಪೋಸ್ತಲರು) ಪ್ರಸ್ತುತಪಡಿಸಿರುವ ವಿಷಯಗಳ ವಾದಸರಣಿಗಳನ್ನು ಅನುಸರಿಸಿ ಅವರ ಮನೋಭಾವವನ್ನು ಹೊಂದಿರುವರೋ ಅವರು ಇವರುಗಳ (ಅಪೋಸ್ತಲರ) ಮೂಲಕವಾಗಿ ಅದೇ ಸತ್ಯಪೂರ್ಣವಾದ ನಿರ್ಣಯಗಳ ಕಡೆಗೆ ನಡೆಸಲ್ಪಟ್ಟವರಾಗಿದ್ದು ಆ ಮೂಲಕವಾಗಿ ನಮ್ಮ ನಂಬಿಕೆಯು ಮಾನುಷ ಜ್ಞಾನದ ಮೇಲೆ ಆಧಾರಗೊಂಡಿರದೆ ದೇವರ ಶಕ್ತಿಯಲ್ಲಿ ಆಧಾರಗೊಂಡಿರುವಂತೆ ಮಾಡಲಾಗಿರುವುದು. (1 ಕೊರಿಂಥ 2:1,4–5) ಆದರೆ ಈ ವಿಧವಾದ ಬೋಧನೆಗಳಲ್ಲಿ ಹಾಗು ಚಾರಿತ್ರಿಕ ಸಹಿತವಾದ ಸಾಕ್ಷಿಗಳಲ್ಲಿ ವಚನದ ನಂತರ ವಚನವಾಗಿ ಹೇಳಿಬರೆಸಿರುವದಕ್ಕೆ ಹಾಗೂ ಈ ಅಪೋಸ್ತಲರು ಕೇವಲ ಯಾಂತ್ರಿಕವಾಗಿ ರಂಜಿಸಿ ಹೇಳಿರುವರೆಂಬುದಕ್ಕೆ ಯಾವ ಪುರಾವೆಗಳೂ ನಮಗೆ ಕಾಣುವುದಿಲ್ಲ; ಆದರೆ ತಾವು ಶುಭವಾರ್ತೆಯನ್ನು ಸಾರಿ ಹೇಳಲು ಪವಿತ್ರವಾದ ಆಸಕ್ತಿಯುಳ್ಳವ–ರಾಗಿ ಸತ್ಯದ ಪರಿಜ್ಞಾನದಿಂದಲೂ ಸತ್ಯದ ಆತ್ಮನಿಂದ ತುಂಬಿದವ–ರೆಂದು ಸ್ಪಷ್ಟವಾಗಿ ತೋರಿಸುವವರಾಗಿದ್ದಾರೆ. ಇದು ಅವರು ಬರೆದಿರುವ ಪತ್ರಿಕೆಗಳ ಎಲ್ಲಾ ಪುಟಗಳಲ್ಲಿ ಈ ಆಸಕ್ತಿಜ್ವಾಲೆಯ ಹೊಳಪು ಕಾಣಬಂದಿದ್ದು ಅದೇ ಪವಿತ್ರವಾದ ಆಸಕ್ತಿಜ್ವಾಲೆಯು ದೇವಜನರೆಲ್ಲರ ಹೃದಯಗಳನ್ನೂ ಬೆಳಗಿಸಿರುವುದು.

(4) ಈ ವಾಗ್ದಾನದಲ್ಲಿನ ಕಡೆಯ ಪ್ರಸ್ತಾವನೆಯು ಅವರಿಗೆ (ಅವರ ಮೂಲಕವಾಗಿ ಇಡೀ ಸಭೆಗೆ ಅನ್ವಯವಾಗಿರುವ) ಮುಂದಾಗುವ ಸಂಗತಿಗಳನ್ನು ತಿಳಿಸಿಕೊಡುವ ವಿಷಯ ವಾಗಿರುವದು. ಹೀಗೆ ಅವರು ಸಭೆಗೆ ಪ್ರವಾದಿಗಳು ಅಥವಾ ದರ್ಶಿಗಳೂ ಸಹ ಆಗಿದ್ದರು. ಅಪೋಸ್ತಲರ ಮನಸ್ಸುಗಳನ್ನು ಉತ್ಕೃಷ್ಟವಾದ ರೀತಿಯಲ್ಲಿ ಬೆಳಗುವಂತೆ ಮಾಡಿ ಅಥವಾ ಮಾನಸಿಕ ಶಕ್ತಿಯನ್ನು ಜಾಗೃತಗೊಳಿಸಿ, ಧರ್ಮಶಾಸ್ತ್ರದ ಪ್ರವಾದಿಗಳ ಹಾಗು ಕರ್ತನ ಉಪದೇಶಗಳ ಅರ್ಥವಿವರಣೆಗಳ ವಿಷಯವಾಗಿ ಸರಿಯಾದ ನಿರ್ಣಯಗಳಿಗೆ ಬರುವಂತೆ ಅವರನ್ನು ನಡೆಸುವುದರ ಮೂಲಕವಾಗಿ ಮುಂದಾಗುವ ಕೆಲವು ಸಂಗತಿಗಳನ್ನು ಅವರಿಗೆ ಸ್ಪಷ್ಟವಾಗಿ ತೋರಿಸಿಕೊಡಲಾಗಿತ್ತು.

ಆದರೆ ಇದಕ್ಕಿಂತಲೂ ಹೆಚ್ಚಿನದು ಅಗತ್ಯವಾಗಿದ್ದರಿಂದ ಅದನ್ನು ಪವಿತ್ರಾತ್ಮನಿಂದ ವಿಶೇಷವಾದ ದರ್ಶನಗಳನ್ನು ಹಾಗು ಪ್ರಕಟನೆಗಳನ್ನು ನೀಡುವುದರ ಮೂಲಕ ಮುಂದೆ ಬರುವ ಸಂಗತಿಗಳನ್ನು ಸೂಚಿಸುವಂತೆ ಅವರಿಗೆ (ಅಪೊಸ್ತಲರಿಗೆ) ಅನುಗ್ರಹಿಸೋಣವಾಗಿತ್ತು. ಅವುಗಳಲ್ಲಿ ಈ ಮುಂದಿನವುಗಳು ಇದ್ದವು.

(ಅ) ಪರ್ವತದ ಮೇಲೆ ಉಂಟಾದ (ಕ್ರಿಸ್ತನ) ರೂಪಾಂತರದಲ್ಲಿ ಕಂಡಂತೆ, ಆ ದೇವರ ರಾಜ್ಯದಲ್ಲಿನ ಭೂಲೋಕದ ಮತ್ತು ಪರಲೋಕದ ಹಂತಗಳಲ್ಲಿ ಮುಂದೆ ಬರುವ ವೈಭವಗಳ ದರ್ಶನ – ಮತ್ತಾಯ 17:2–9. 'ಸ್ಟಡೀಸ್ ಇನ್ ದ ಸ್ಕ್ರಿಪ್ಚರ್ಸ್' ಗ್ರಂಥ 'ವಾಲ್ಯೂಮ್' ಒಂದರ 14ನೇ ಅಧ್ಯಾಯವನ್ನು ನೋಡಿ;

(ಆ) ಪೌಲನಿಗಾದ ಮೂರನೇ ಆಕಾಶದ ಅಥವಾ ಸಾವಿರ ವರುಷದ (ಆಳ್ವಿಕೆಯ) ರಾಜ್ಯದ ದರ್ಶನ. (ಎಫೆಸ 3:3–6; 2 ಕೊರಿಂಥ 12:1–4) ಆತನ ಜೀವಿತ ಹಾಗು ಲೇಖನಗಳ ಮೇಲೆ ಇದು ಬಹು ಅದ್ಭುತವಾದ ಪ್ರಭಾವ ಬೀರಿದ್ದಾಗ್ಯೂ ಆಗ ಅದು ನೆರವೇರುವ ಸಮಯವಲ್ಲವಾದ್ದರಿಂದ ಆ ದಿನದಲ್ಲಿ ಅದನ್ನು ವಿವರವಾಗಿ ಬರೆಯಲು ಆತನಿಗೆ ಅಪ್ಪಣೆಯಾಗಲಿಲ್ಲ.

(ಇ) ಮೆಕದೋನ್ಯದವನು ತನಗೆ ನೆರವಾಗಬೇಕೆಂದು ಪೌಲನ ಸೇವೆಯನ್ನು ಕೋರಿದ ದರ್ಶನ. – ಅ.ಕೃ. 16:9–10;

(ಈ) ಅನ್ಯಜನಗಳಿಗೂ ದೇವರ ರಾಜ್ಯದ ಬಾಗಿಲನ್ನು ತೆರೆಯಲು ಬೀಗದ ಕೈಯನ್ನು ತಾನು ಉಪಯೋಗಿಸಲು ಆದೇಶಿಸುವ ಸಲುವಾಗಿ ಪೇತ್ರನಿಗಾದ ಶುದ್ಧಾಶುದ್ಧ ಪ್ರಾಣಿಗಳ

ದರ್ಶನ. ಇದರಲ್ಲಿ ಕೊರ್ನೇಲ್ಯನು ಮೊದಲನೆ ಕ್ರೈಸ್ತಮತಾವಲಂಬಿ (ಅ.ಕೃ. 10); ಹಾಗು,

(ಉ) ಪತ್ಮೋಸ್ ದ್ವೀಪದಲ್ಲಿ ಯೋಹಾನನಿಗಾದ ಗಮನಾರ್ಹವಾದ ಪ್ರಕಟನೆಗಳು. ಅದು ಕ್ರೈಸ್ತತ್ವದ ಹಾದಿಯ ಅಂತ್ಯದ ವರೆಗಿನ ಎಲ್ಲಾ ಪ್ರಮುಖ ಗುಣಲಕ್ಷಣಗಳನ್ನು ಸಾಂಕೇತಿಕ ಭಾಷೆಯಲ್ಲಿ ವರ್ಣಿಸುವ ಸರಣಿ ರೂಪದ ದರ್ಶನಗಳನ್ನು ಒಳಗೊಂಡಿತ್ತು. ಇದು ಬಹುತೇಕ ಪೂರ್ವಕಾಲದ ಪ್ರವಾದನೆಗಳ ಭಾಗಗಳಂತ್ತಿದ್ದು ಯೋಹಾನನು ಈ ದರ್ಶನಗಳನ್ನು ನೋಡಿ ನಂಬಿಗಸ್ತನಾಗಿ ಅವುಗಳನ್ನು ಸಭೆಯ ಮುಂದಿನ ಪ್ರಯೋಜನಕ್ಕಾಗಿ ಬರೆದಿಟ್ಟರೂ ಆತನ ದಿನದಲ್ಲಿ ಆ ಮುದ್ರೆಗಳು ತೆರೆಯಲ್ಪಡಲಿಲ್ಲವಾದ ಕಾರಣ ಅವುಗಳನ್ನು ಆತನು ಗ್ರಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಅದರಲ್ಲಿ ಅಡಕವಾಗಿದ್ದ ಸತ್ಯಾರ್ಥಗಳನ್ನು ಅರಿತುಕೊಳ್ಳಲು ಆ ಕಾಲದಲ್ಲಿದ್ದ ಕರ್ತನ ಮನೆತನದವರಿಗೆ ಅದು ತಕ್ಕ ಸಮಯವಾಗಿರಲಿಲ್ಲ. ಆದರೆ ಈಗ ಅದು ಕರ್ತನ ಮನೆತನದವರಿಗೆ ಒದಗತಕ್ಕ ಆಹಾರವಾಗಿರಲಾಗಿ ಸಭೆಗೆ ಅಪೋಸ್ತಲರ ಗೌರವಸ್ಥಾನ ಹಾಗೂ ಅವರ ಸೇವೆಯ ಮುಖ್ಯತ್ವಗಳು ಇವುಗಳಿಂದ ದೊರೆಯುವ ಪುನಶ್ಚೇತನ ಹಾಗು ಬಲಗಳಲ್ಲಿ ಪಾಲುಗಾರರಾಗಿರುವ ಎಲ್ಲರಿಗೂ ಹೆಚ್ಚುಹೆಚ್ಚಾಗಿ ಅರಿತುಕೊಳ್ಳುವಂತಾಗಿದೆ. ಇವುಗಳನ್ನು ಪ್ರತಿಪಾದಿಸುವದಕ್ಕಾಗಿ ಇತರ ಸಹಾಯಗಳು ಹಾಗು ಸೇವಕರನ್ನು ಪವಿತ್ರಾತ್ಮನಿಂದ ಈಗ ಬಳಸಿಕೊಳ್ಳಲಾಗುತ್ತಿದೆ.

ಹೀಗೆ ಅಪೋಸ್ತಲರು ದೇವರ ಅಗಾಧವಾದ ಹಾಗು ಅದುವರೆಗೂ ಗುಪ್ತವಾಗಿದ್ದ ಸಂಗತಿಗಳ ವಿಷಯವಾಗಿ ದೇವರಿಂದ ಉಪದೇಶಿಸಲ್ಪಟ್ಟಿದ್ದರು. ಅದ್ಭುತವಾದ ರೀತಿಯಲ್ಲಿ ಅವರಿಗೆ ಪ್ರಕಟಿಸುವುದು ಎಲ್ಲಿ ಅವಶ್ಯವಿತ್ತೋ ಅಲ್ಲಿ ಆ ವಿಧಾನವನ್ನು ಬಳಸಲಾಗಿತ್ತು; ಅದರೆ ಸಹಜವಾದ ವಿಧಾನಗಳು ಸಾಕಾಗುತ್ತಿದ್ದಲ್ಲಿ ಸಹಜವಾದ ವಿಧಾನಗಳನ್ನು ಅನುಸರಿಸಲು ಅವರಿಗೆ ಅಜ್ಞಾಪನೆಯಾಗುತ್ತಿತ್ತು. ಈ ಸುವಾರ್ತಾಯುಗದ ಪರ್ಯಂತರ ಕರ್ತನು ತನ್ನ ಸಭೆಗೆ ಇತರ ಸೇವಕರ ಮೂಲಕ ವಾಗಿ ಉಣಬಡಿಸಲು ಯೋಜಿಸಿದ್ದಾಗ ಯಾವಾಗಲೂ ಅವರು ಸತ್ಯವನ್ನು ಸರಿಯಾದ ರೀತಿಯಲ್ಲಿ ಪ್ರಸ್ತುತಪಡಿಸಲು ಮಾರ್ಗ-ದರ್ಶನ ನೀಡುತ್ತಿದ್ದನು. ಈ ಹನ್ನೆರಡು ಅಪೋಸ್ತಲರ ಮೂಲಕ ವಾಗಿ ನೀಡಲಾದ ಅಥವಾ ಸವಿಸ್ತಾರವಾಗಿ ವಿವರಿಸಲ್ಪಟ್ಟ ದೈವವಾಕ್ಯವೇ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಲೋಕವನ್ನು ಸಹ ಮಾರ್ಗದರ್ಶನ ಮಾಡಿ ನಡೆಸಲು ಪಠ್ಯಪುಸ್ತಕವಾಗಿರುತ್ತದೆಂಬುದನ್ನು ನಾವು ನಿಜವಾಗಿಯೂ ನೆಚ್ಚಿಕೊಳ್ಳಬಹುದು.

## ತಪ್ಪುಮಾಡುವಂಥ ಅಪೋಸ್ತಲರ ಗುಣಗಳು

ತಪ್ಪುಮಾಡಲಾಗದ ಅಪೋಸ್ತಲರ ಗುಣವೆಂಬ ಆಲೋಚನೆಗೆ ವಿರುದ್ಧವಾಗಿರುವುದೆಂದು ಸಾಮಾನ್ಯವಾಗಿ ಪರಿಗಣಿಸಲಾಗಿರುವ ಹೊಸ ಒಡಂಬಡಿಕೆಯಲ್ಲಿನ ಐದು ಸನ್ನಿವೇಶಗಳನ್ನು ನಾವು ಈ ಕೆಳಗೆ ಪ್ರಸ್ತುತಪಡಿಸಿದ್ದೇವೆ. ಅವುಗಳನ್ನು ನಾವು ಪ್ರತ್ಯೇಕವಾಗಿ ಪರಿಶೀಲಿಸಲಿದ್ದು, ಅವು ಹೀಗಿವೆ:

(1) ನಮ್ಮ ಕರ್ತನನ್ನು ಶಿಲುಬೆಗೆ ಹಾಕುವ ಸಮಯದಲ್ಲಿ ಪೇತ್ರನು ಆತನನ್ನು ಅಲ್ಲಗಳೆದದ್ದು. ಇದು ಒಂದು ಗಂಭೀರವಾದ ತಪ್ಪೆಂಬುದನ್ನು ಇಲ್ಲಿ ವಿವಾದಿಸಿಲ್ಲ; ಮತ್ತು ಇದಕ್ಕಾಗಿ ಪೇತ್ರನು ಪ್ರಾಮಾಣಿಕವಾಗಿ ಪಶ್ಚಾತಾಪಪಟ್ಟಿದ್ದನು. ಆದರೆ ಇದು ನಡೆದದ್ದು ಆತನು ಪಂಚಾಶತ್ತಮ ದಿನದ ಆಶೀರ್ವಾದವನ್ನು ಹೊಂದುವ ಮುನ್ನ. ಇದಲ್ಲದೆ ಅಪೋಸ್ತಲರ ತಪ್ಪೇಮಾಡಲಾಗದ ಗುಣವು ಅವರು ಸಾರ್ವಜನಿಕವಾಗಿ ಮಾಡಿದ ಉಪದೇಶಗಳಿಗೆ ಮತ್ತು ಅದರ ವಿಷಯವಾದ ಅವರ ಬರವಣಿಗೆಗಳಿಗೆ ಅನ್ವಯಿಸುವುದೇ ಹೊರತು ಅವರ ಜೀವಿತದ ಕಾರ್ಯಗಳಿಗಲ್ಲವೆಂದು ಹೇಳಿಕೊಳ್ಳಲಾಗಿರುವುದು. ಅವರ ಜೀವಿತದಲ್ಲಿ ನಡೆದ ಕಾರ್ಯಗಳು (ಆದಾಮನು) ಬಿದ್ದುಹೋದುದರ ಫಲವಾಗಿ ವಿರೂಪಗೊಂಡ ಅವರ "ಮಣ್ಣಿನ ಘಟಗಳಲ್ಲಿನ" ದೋಷಗಳು ಬೀರಿದ ಪರಿಣಾಮಗಳಿಂದ ಕೂಡಿದ್ದಾಗಿತ್ತು. ಈ ದೋಷದ ಫಲವಾಗಿ ಆದಾಮನ ಸಂತತಿಯು ನರಳುತ್ತಿದ್ದು, ಕ್ರಿಸ್ತನ ನೀತಿಯ ಫಲದ ಮೂಲಕವಾಗಿ ಇವುಗಳನ್ನು ಕ್ಷಮಿಸಬಹುದಾಗಿರುವುದು. ಕರ್ತನ ಹಾಗೂ ಸಭೆಯ ಸೇವೆಗೋಸ್ಕರವಾಗಿರುವ ಅಪೋಸ್ತಲರ ಸೇವಾಸ್ಥಾನಗಳು ಅವರ ಶಾರೀರಿಕ ಬಲಹೀನತೆಗಳಿಂದ ಕೇವಲ ಹೊರತಾದ ಸಂಗತಿಯಾಗಿತ್ತು. ಈ ಸೇವಾಸ್ಥಾನದ ಹೊಣೆ ಬಂದದ್ದು ಪರಿಪೂರ್ಣ ಮನುಷ್ಯರ ಮೇಲಾಗಿರದೆ ಅಪೂರ್ಣವಾದ ಮನುಷ್ಯರ ಮೇಲಾಗಿತ್ತು. ಅದು ಅವರ ಆಲೋಚನೆಗಳು ಮತ್ತು ಕಾರ್ಯಗಳನ್ನು ಪರಿಪೂರ್ಣ ವಾದವುಗಳನ್ನಾಗಿ ಮಾಡಲಿಲ್ಲ. ಆದರೆ ಆ ಹನ್ನೆರಡು ಮಂದಿಯ ಉಪದೇಶಗಳು ಎಂದೂ ತಪ್ಪಾಗದಂತೆ ಅವರ ಆಲೋಚನೆ ಮತ್ತು ಕಾರ್ಯಗಳನ್ನು ಮಾರ್ಪಾಡು ಮಾಡಲಾಗಿತ್ತು. ಈ ವಿಧವಾದ ಎಂದೂ ತಪ್ಪೇ ಆಗದ ಅಂಶವನ್ನೇ ಈಗ ಪೋಪರ ವಿಷಯವಾಗಿಯೂ ಹೇಳಲಾಗಿರುವುದು. ಪೋಪರೊಬ್ಬರು ಎಕ್ಸ್-ಕೆಥಿಡ್ರಾ ಅಥವಾ ಅಧಿಕಾರಯುಕ್ತವಾಗಿ ನುಡಿಯುವಾಗ ಅವರು ನುಡಿದದ್ದು ದೇವರಿಂದ ಮಾರ್ಪಾಡಿಸಲ್ಪಟ್ಟು ಅವರು ತಪ್ಪು ಮಾಡಲು ಅವಕಾಶಕೊಡಲಾಗದು. ಇದು ಅವರು ತಮ್ಮನ್ನು ಅಪೋಸ್ತಲರೆಂದು ಕರೆದುಕೊಳ್ಳಲು ಅಂದರೆ ತಾವು ಅಪೋಸ್ತಲರ ಸೇವಾಸ್ಥಾನ ಮತ್ತು ಅಧಿಕಾರವನ್ನು ಹೊಂದಿರುವವರೆಂದು ಹೇಳಿಕೊಳ್ಳುವಂತೆ ಮಾಡಿರುವುದು. ಆದರೆ ಇವೆಲ್ಲವುಗಳನ್ನೂ ಅನೇಕ ಶಾಸ್ತ್ರವಚನಗಳಿಂದ ಅಲ್ಲಗಳೆಯಲಾಗಿರುವುದು; ಕೇವಲ ಹನ್ನೆರಡು ಮಂದಿಯನ್ನು ಮಾತ್ರ ಆದುಕೊಳ್ಳಲಾಗಿದ್ದು ಇವರ ಉತ್ತರಾಧಿಕಾರಿಗಳೆಂಬುದು ಇರಲಿಲ್ಲ; ಈ ಆಯ್ಕೆಯು ಒಂದೇ ಸಾರಿ ನಡೆದುದಾಗಿತ್ತು. (ಲೂಕ 6:13–16) ಅವರಲ್ಲಿ ಒಬ್ಬನು ವಿಫಲನಾದಾಗ ಮತ್ತೊಬ್ಬನು ಅವರ ಸೇವಾಸ್ಥಾನವನ್ನು ತೆಗೆದುಕೊಂಡಿದ್ದನು. (ಅ.ಕೃ. 1:26) ಹೀಗೆ ಅಲ್ಲಿ ಹನ್ನೆರಡು ಮಂದಿಯೇ ಇದ್ದರು; ಅಲ್ಲದೆ ಆ ಹನ್ನೆರಡು ಮಂದಿಯ ಉಪದೇಶಗಳೇ ಸಭೆಯ ನಂಬಿಕೆಗೆ ಅಸ್ತಿವಾರಗಳಾಗಿರುವುದೆಂದು ಅಥವಾ ಹೊಸ ಯೆರೂಸಲೇಮಿನ ಅಸ್ತಿವಾರಗಳಾಗಿ ಪರಿಗಣಿಸಲ್ಪಟ್ಟಿರುವುದೆಂದು ದೈವಪ್ರೇರಿತ ಗ್ರಂಥದ ಕಡೆಯ ಪುಟಗಳು ನಮಗೆ ತೋರಿಸಿಕೊಟ್ಟಿರುವುದು.

(2) ಪೇತ್ರನ "ಕಪಟಾಚರಣೆಯ" ಅಥವಾ ಅವನು ಒಂದು ಸಂದರ್ಭದಲ್ಲಿ ಯೆಹೂದ್ಯರೊಡನೆ ಹಾಗು ಅನ್ಯಜನರೊಡನೆ ನಡೆದುಕೊಳ್ಳುವಾಗ ಇಬ್ಬಗೆಯ ರೀತಿಯಲ್ಲಿ ವರ್ತಿಸಿದನೆಂಬ ಅಂಶವನ್ನು ಅಪೋಸ್ತಲರೂ "ಇತರರಂಥ ಸ್ವಭಾವವುಳ್ಳ ಮನುಷ್ಯರಾಗಿದ್ದರು" ಅವರು ತಮ್ಮ ನಡವಳಿಕೆಯಲ್ಲಿ ತಪ್ಪೇಮಾಡದ ಗುಣವುಳ್ಳವರಾಗಿರಲಿಲ್ಲ ಎಂಬುದಕ್ಕೆ ಸಾಕ್ಷ್ಯಾಧಾರವಾಗಿ ತೋರಿಸಿಕೊಡಲಾಗಿರುವುದು. ಮತ್ತೆ ನಾವು ಈ ಆಪಾದನೆಯನ್ನು ಒಪ್ಪಿಕೊಂಡಿದ್ದು ಅಪೋಸ್ತಲರೂ ಇದನ್ನು ಒಪ್ಪಿಕೊಂಡಿರುವುದನ್ನು ನಾವು ಕಂಡುಕೊಂಡಿದ್ದೇವೆ (ಅ.ಕೃ. 14:15); ಆದರೂ ನಾವು ಮತ್ತೆ ಹೇಳುವುದೇನೆಂದರೆ, ಮನುಷ್ಯ ಸ್ವಭಾವದ ಈ ಬಲಹೀನತೆಗಳು ಅಪೋಸ್ತಲರಾಗಿ ಅವರ ಕಾರ್ಯಗಳನ್ನು ಹಾಗೂ ಅವರಲ್ಲಿದ್ದ ಉಪಯುಕ್ತತೆಯನ್ನು ಎಂದೂ ಹಾಳುಗೆಡವಲು ಬಿಟ್ಟಿರಲಿಲ್ಲ; ಅವರು ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಮೂಲಕವಾಗಿ ಸುವಾರ್ತೆಯನ್ನು ಸಾರಿದವರೆಂಬಂತ್ತಿದ್ದರು (1 ಪೇತ್ರ 1:12; ಗಲಾತ್ಯ 1:11–12); ಅವರು ಮಾನುಷ ಜ್ಞಾನದಿಂದ ಅಲ್ಲದೆ ಮೇಲಿನಿಂದ ಬಂದ ಜ್ಞಾನದ ಮೂಲಕವಾಗಿ ಅದನ್ನು ಸಾರಿದ್ದರು. (1 ಕೊರಿಂಥ 2:5–16) ದೇವರು ಆ ಸಮಯದಲ್ಲೇ ಅಪೋಸ್ತಲನಾದ ಪೌಲನ ಮೂಲಕವಾಗಿ ಪೇತ್ರನು ಮಾಡಿದ ಆ ತಪ್ಪನ್ನು ತಿದ್ದುಪಡಿ ಮಾಡಿದ್ದನು. ಅವನು (ಪೌಲನು) ಕರುಣೆಯುಳ್ಳವನಾದರೂ "ಪೇತ್ರನು ದೋಷಿಯಾಗಿ ಕಂಡು ಬಂದದ್ದರಿಂದ ಅವನನ್ನು (ಪೇತ್ರನನ್ನು) ಸ್ಥಿರ ಮನಸ್ಸಿನಿಂದ ಮುಖಾಮುಖಿಯಾಗಿ ಎದುರಿಸಿದನು." (ಗಲಾತ್ಯ 2:11) ಅಲ್ಲದೆ ಕ್ರಿಸ್ತನಲ್ಲಿ ಯೆಹೂದ್ಯರೂ ಗ್ರೀಕರೂ ಸಮಾನರೆಂಬ ವಿಷಯದಲ್ಲಿ ಚಂಚಲತೆಯ ಯಾವ ಸೂಚನೆಯೂ ಕಾಣದೇ ಇರುವುದು ಮತ್ತು ಕರ್ತನನ್ನು ಅಂಗೀಕರಿಸುವಲ್ಲಿ ಯಾವ ಅಂಜಿಕೆಯೂ ಇಲ್ಲದಿರುವುದು ಪೇತ್ರನ ಎರಡು ಪತ್ರಿಕೆಗಳಲ್ಲಿಯೂ ಕಂಡುಬಂದಿರುವುದು ಬಹು ಗಮನಾರ್ಹ.

(3) ತನ್ನ ಎರಡನೆಯ ಬರುವಿಕೆಯ ಹಾಗು ದೇವರ ರಾಜ್ಯದ (ಸ್ಥಾಪನೆಯ) ಕಾಲಗಳ ವಿಷಯವಾಗಿ ಕರ್ತನು ಅಪೋಸ್ತಲರನ್ನು ಅನಿಶ್ಚಿತತೆಯಲ್ಲಿ ಇಟ್ಟು ಅದಕ್ಕಾಗಿ ಎಲ್ಲರೂ ಎಚ್ಚರವಾಗಿರುವಂತೆ ಅವರಿಗೆ ಸರಳ ರೀತಿಯಲ್ಲಿ ಹೇಳಿದ್ದನು. ನಿಗದಿತ ಕಾಲ ಬಂದಾಗ ಅವರು ಅವುಗಳನ್ನು ತಿಳಿಯುವಂತಾಗಿ, ಲೋಕದವರಲ್ಲಿ ಈಗ ಸಾಮಾನ್ಯವಾಗಿ ಕತ್ತಲೆಯಲ್ಲಿರುವಂತೆ, ಅವರನ್ನು ಈ ವಿಷಯದಲ್ಲಿ ಕತ್ತಲೆಯಲ್ಲಿರದಂತೆ ಮಾಡಲಾಗಿ–ರುವದು. ಎರಡನೆಯ ಬರುವಿಕೆಯು ಹಾಗೂ ಆ ರಾಜ್ಯವು ಮೊದಲನೇ ಅಥವಾ ಎರಡನೇ ಶತಮಾನದಲ್ಲಿ ನಿಜವಾಗಿಯೂ ನೆರವೇರುವುದೆಂದು ಅಪೋಸ್ತಲರು ನಿರೀಕ್ಷಿಸುತ್ತಿದ್ದುದ್ದನ್ನು ಸಹ ತೋರಿಸಲಾಗಿರುವುದು. ಆದರೂ ಈ ವಿಷಯದ ಬಗ್ಗೆ ಅವರಿಗಿದ್ದ ಅಜ್ಞಾನವು ಯಾವ ವಿಧದಲ್ಲಿಯೂ ಅವರ ಬರವಣಿಗೆಗಳನ್ನು ಹಾಳುಗೆಡವುವಂತೆ ಮಾಡಲಿಲ್ಲ. ಅವರು ದೈವ ಮಾರ್ಗ–ದರ್ಶನದಿಂದ ಅಂಥ ಯಾವ ಹೇಳಿಕೆಯನ್ನೂ ನೀಡದೆ, ಬದಲಾಗಿ ಅವರು ಹೀಗೆ ಸಾರಿ ಹೇಳಿದರು –"...ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವುದಿಲ್ಲ." – 2 ಥೆಸಲೋನಿಕ 2:3

(4) "ನೋಡಿರಿ, ಪೌಲನೆಂಬ ನಾನು ನಿಮಗೆ ಒಂದನ್ನು ಹೇಳುತ್ತೇನೆ––ನೀವು ಸುನ್ನತಿಮಾಡಿಸಿಕೊಂಡರೆ ಕ್ರಿಸ್ತನಿಂದ ನಿಮಗೆ ಏನೂ ಪ್ರಯೋಜನವಿಲ್ಲ" (ಗಲಾತ್ಯ 5:2) ಎಂದು ಬರೆದ ಪೌಲನು ತಿಮೋಥೆಯನಿಗೆ ಸುನ್ನತಿಯಾಗುವಂತೆ ಮಾಡಿದ್ದನು (ಅ.ಕೃ. 16:3). ಈ ಮೂಲಕವಾಗಿ ಆತನು ತನ್ನ ಸಾಕ್ಷಿಪ್ರಮಾಣಗಳಿಗೆ ವಿರುದ್ಧವಾಗಿ ನಡಕೊಂಡು ತಪ್ಪಾಗಿ ಉಪದೇಶಿಸಲಿಲ್ಲವೇ? ಎಂದು ನಮಗೆ ಕೇಳಲಾಗಿರುವುದು. ನಾವು ಉತ್ತರಿಸುವುದು, ಇಲ್ಲವೆಂದು: ತಿಮೋಥೆಯನು ಒಬ್ಬ ಯೆಹೂದ್ಯನಾಗಿದ್ದನು, ಕಾರಣ ಅವನ ತಾಯಿಯು ಒಬ್ಬ ಯೆಹೂದ್ಯಳು; (ಅ.ಕೃ. 16:1) ಹಾಗೂ ಸುನ್ನತಿಯೆಂಬುದು ಯೆಹೂದ್ಯರಿಗೆ ಜನಾಂಗೀಯವಾಗಿ ಬಂದ ಒಂದು ಸಂಪ್ರದಾಯವಾಗಿದ್ದು ಅದು ಮೋಶೆಯ ಧರ್ಮಶಾಸ್ತ್ರವು ಬರುವುದಕ್ಕೆ ಮೊದಲೇ ಪ್ರಾರಂಭವಾಗಿದ್ದು "ಆಜ್ಞಾರೂಪವಾಗಿದ್ದ ಪತ್ರವನ್ನು ಕೆಡಿಸಿ ಅದನ್ನು ಶಿಲುಬೆಗೆ ಜಡಿದು ಇಲ್ಲದಂತಾಗ ಮಾಡಿದ" ಕ್ರಿಸ್ತನ ನಂತರವೂ ಅದು ಮುಂದುವರೆಯಲ್ಪಟ್ಟಿತ್ತು. ಸುನ್ನತಿಯೆಂಬುದು ಇಸ್ರಾಯೇಲ್ಯರಿಗೆ ಸೀನಾಯಿ ಬೆಟ್ಟದಲ್ಲಿ ಧರ್ಮಶಾಸ್ತ್ರವನ್ನು ಕೊಡುವುದಕ್ಕೆ ನಾನೂರ ಮೂವತ್ತು ವರುಷಗಳಿಗೆ ಮೊದಲು ಅಬ್ರಹಾಮನಿಗೂ ಅವನ ಸಂತತಿಯವರಿಗೂ (ಸಂಸ್ಕಾರವಾಗಿ) ಕೊಡಲಾಗಿತ್ತು. ಪೇತ್ರನನ್ನು ಸುನ್ನತಿಯವರಿಗಾಗಿರುವ ಅಪೋಸ್ತಲನೆಂದೂ ಪೌಲನನ್ನು ಸುನ್ನತಿಯಿಲ್ಲದವರಿಗಾಗಿರುವ (ಅಂದರೆ, ಅನ್ಯಜನರಿಗಾಗಿರುವ) ಅಪೋಸ್ತಲನೆಂದೂ ಹೆಸರಿಸಲಾಗಿತ್ತು. – ಗಲಾತ್ಯ 2:7–8

ಗಲಾತ್ಯ 5:2ರಲ್ಲಿನ ಪೌಲನ ವಾದವು ಯೆಹೂದ್ಯರಿಗೆ ಸಂಬೋಧಿಸಿ ಹೇಳಿದುದಲ್ಲ. ಆತನು ಅನ್ಯಜನರನ್ನು ಸಂಬೋಧಿಸಿ ಹೇಳಿದ್ದಾಗಿತ್ತು. ಅವರು ಸುನ್ನತಿಯನ್ನು ಬಯಸಿದ ಇಲ್ಲವೇ ಅದರ ವಿಷಯವಾಗಿ ಅಲೋಚಿಸಿದುದರ ಕಾರಣ ಕೆಲವು ಸುಳ್ಳು ಬೋಧಕರುಗಳು ಅವರಿಗೆ ಕ್ರಿಸ್ತನೊಡನೆ ತಾವು ಧರ್ಮಶಾಸ್ತ್ರ–ವನ್ನೂ ಸಹ ಕೈಗೊಳ್ಳುವವರಾಗಬೇಕೆಂದು ಹೇಳಿ ಹೊಸ ಒಡಂಬಡಿಕೆಯನ್ನು ಹೀಗೆ ನಿರ್ಲಕ್ಷಿಸುವಂತೆ ಅವರನ್ನು ನಡೆಸುತ್ತಿದ್ದರು. ಗಲಾತ್ಯ 5:2ರಲ್ಲಿ ಪೌಲನು ಅವರಿಗೆ ಸುನ್ನತಿ–ಯಾಗುವುದು (ಅಂಥ ಯಾವ ಕಾರಣಗಳಿದ್ದರೂ) ಅದು ಹೊಸ ಒಡಂಬಡಿಕೆಯನ್ನು ನಿರಾಕರಿಸಿದಂತಾಗುವುದೆಂದೂ ಮತ್ತು ಆ ಮೂಲಕವಾಗಿ ಕ್ರಿಸ್ತನ ಕಾರ್ಯಗಳನ್ನು ಸಂಪೂರ್ಣವಾಗಿ ನಿರಾಕರಿಸಿದಂತಾಗುವುದೆಂದೂ ತೋರಿಸಿ ಕೊಟ್ಟಿರುವನು.

ತಮಗೆ ಜನಾಂಗೀಯವಾಗಿ ಬಂದ ಸುನ್ನತಿಯ ಸಂಪ್ರಾದಾಯವನ್ನು ಯೆಹೂದ್ಯರು ಮುಂದುವರೆಸುವುದಕ್ಕೆ ಪೌಲನಿಗೆ ಯಾವ ಅಕ್ಷೇಪಣೆಯೂ ಕಂಡುಬರಲಿಲ್ಲವೆಂಬುದು 1 ಕೊರಿಂಥ 7:18–19ರಲ್ಲಿರುವ ಆತನ ಮಾತಿನಿಂದ ಅಲ್ಲದೆ ತಿಮೋಥೆಯನ ವಿಷಯವಾಗಿ ಆತನು ನಡಕೊಂಡ ರೀತಿಯಿಂದ ಸ್ಪಷ್ಟವಾಗಿದೆ. ತಿಮೋಥೆಯನಿಗಾಗಲೀ ಅಥವಾ ಬೇರೆ ಯಾವ ಯೆಹೂದ್ಯನಿಗೇ ಆಗಲಿ ಸುನ್ನತಿಯಾಗುವುದು ಅವಶ್ಯವಿಲ್ಲವಾದರೂ ಅದು ಅಯುಕ್ತವೇನೂ ಆಗಿರಲಿಲ್ಲ. ಹಾಗೂ ಆತನು ಬಹುವಾಗಿ ಯೆಹೂದ್ಯರ ನಡುವೆ ಓಡಾಡುವವನಾದುದರಿಂದ ಇದು ಯೆಹೂದ್ಯರ ವಿಶ್ವಾಸವನ್ನು ಗಳಿಸುವಲ್ಲಿ ಅವನಿಗೆ ಲಾಭಕರವಾಗಿತ್ತು. ಆದರೆ ಕೆಲವರು ಈ ವಿಷಯವನ್ನು ಅಪಾರ್ಥ

ಮಾಡಿಕೊಂಡು ಪೂರ್ಣವಾಗಿ ಗ್ರೀಕನಾಗಿದ್ದ ತೀತನಿಗೆ ಸುನ್ನತಿಯಾಗಬೇಕೆಂದಾಗ ಪೌಲನು ದೃಢವಾಗಿ ವಿರೋಧಿಸಿ–ದುದನ್ನು ನಾವು ನೋಡುತ್ತೇವೆ. – ಗಲಾತ್ಯ 2:3

(5) ಅಪೋಸ್ತಲರ ಕೃತ್ಯ 21:20–26ರಲ್ಲಿ ಲಿಖಿತವಾಗಿರು–ವಂತೆ ಪೌಲನು ಅನುಸರಿಸಿದ ವಿಧಾನದ ವಿವರಣೆಯು ಸತ್ಯದ ವಿಷಯವಾದ ತನ್ನ ಬೋಧನೆಗಳಿಗೆ ವಿರೋಧವಾಗಿರುವುದೆಂದು ಪ್ರತಿಬಿಂಬಿಸಲಾಗಿದೆ. ಈ ಸಂದರ್ಭದಲ್ಲಿ ಪೌಲನು ಮಾಡಿದ ತಪ್ಪಿನ ಕಾರಣದಿಂದ ಆತನು ಅಷ್ಟು ಬಾಧೆಯನ್ನು ಅನುಭವಿಸಿ ಕಡೆಯಲ್ಲಿ ಆತನನ್ನು ರೋಮ್ ಪಟ್ಟಣಕ್ಕೆ ಕಳುಹಿಸು–ವಂತಾಯಿತೆಂದು ಹೇಳಲಾಗಿರುವುದು. ಆದರೆ ಇಂಥ ಒಂದು ಅಭಿಪ್ರಾಯವು ಶಾಸ್ತ್ರವಚನಗಳಲ್ಲಿ ಹೇಳಿರುವ ಸಂಗತಿಗಳನ್ನು ಆಧರಿಸಿರುವುದಿಲ್ಲ. ಪೌಲನು ತನ್ನ ಸೇವಾವಧಿ ಪರ್ಯಂತರ ತನ್ನ ಎಲ್ಲಾ ಅನುಭವಗಳಲ್ಲಿ ಇತರ ಅಪೋಸ್ತಲರ ಸಹಾನುಭೂತಿ ಹಾಗೂ ಒಪ್ಪಿಗೆಯನ್ನು ಇದಕ್ಕೂ ಮಿಗಿಲಾಗಿ ಕರ್ತನ ಅನುಗ್ರಹವನ್ನು ಸತತವಾಗಿ ಪಡೆದಿದ್ದನೆಂದು ದಾಖಲೆಗಳು ತೋರಿಸಿಕೊಟ್ಟಿರುತ್ತವೆ. ಆತನ ನಡೆಯು ಇತರ ಅಪೋಸ್ತಲರಿಂದ ಪ್ರೇರಿತವಾಗಿತ್ತು. ಬೇಡಿಗಳು ಸೆರೆವಾಸಗಳು ಕಾದುಕೊಂಡಿರು–ವುದೆಂದು ಆತನು ಯೆರೂಸಲೆಮಿಗೆ ಹೋಗುವುದಕ್ಕೆ ಮೊದಲೇ ಪ್ರವಾದನೆಯ ರೂಪವಾಗಿ ಆತನಿಗೆ ಸಾಕ್ಷ್ಯ ನುಡಿಯಲಾಗಿತ್ತು. (ಅ.ಕೃ. 21:10–14) ಮತ್ತು ಕರ್ತವ್ಯದ ವಿಷಯವಾದ ತನ್ನ ನಿಶ್ಚಿತಾಭಿಪ್ರಾಯಗಳಿಗೆ ವಿಧೇಯನಾಗಿ ಆತನು ಮುಂದಾಗಿ ತಿಳಿಸಿದ ವಿಪತ್ತುಗಳನ್ನು ಎದುರಿಸುವ ಧೈರ್ಯವುಳ್ಳವನಾದನು. ಆತನ ಸಂಕಷ್ಟಗಳ ನಡುವೆಯೇ "ಆ ದಿನ ರಾತ್ರಿ ಕರ್ತನು ಪೌಲನ ಬಳಿಯಲ್ಲಿ ನಿಂತುಕೊಂಡು – ಧೈರ್ಯದಿಂದಿರು; ನೀನು ಯೆರೂಸಲೇಮಿನಲ್ಲಿ ನನ್ನ ಸಂಗತಿಯನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿ ಹೇಳಬೇಕಾಗು–ವುದು ಅಂದನು." ಮತ್ತು ಅನಂತರದಲ್ಲಿ ಕರ್ತನು ಪುನಃ ಆತನಿಗೆ ಕೃಪಾನುಗ್ರಹವನ್ನು ತೋರಿಸಿದ್ದನ್ನು, ನಾವು ಇದನ್ನು ಓದುವಾಗ ನಾವು ಕಂಡುಕೊಳ್ಳುತ್ತೇವೆ "ನಾನು ಯಾರವ–ನಾಗಿದ್ದೇನೋ ಯಾರನ್ನು ಸೇವಿಸುತ್ತೇನೋ ಆ ದೇವರಿಂದ ಬಂದ ಒಬ್ಬ ದೂತನು ಕಳೆದ ರಾತ್ರಿಯಲ್ಲಿ ನನ್ನ ಹತ್ತಿರ ನಿಂತು–– ಪೌಲನೇ, ಭಯಪಡಬೇಡ, ನೀನು ಚಕ್ರವರ್ತಿಯ ಮುಂದೆ ನಿಲ್ಲಬೇಕು; ಇದಲ್ಲದೆ ನಿನ್ನ ಸಂಗಡ ಈ ಹಡಗಿನಲ್ಲಿ ಪ್ರಯಾಣ ಮಾಡುವವರೆಲ್ಲರ ಪ್ರಾಣ ದೇವರು ನಿನ್ನ ಮೇಲಣ ದಯೆಯಿಂದ ಉಳಿಸಿಕೊಟ್ಟಿದ್ದಾನೆಂದು ನನ್ನ ಸಂಗಡ ಹೇಳಿದನು." ನಾವು ಈ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪೌಲನ ಧೈರ್ಯ ಹಾಗೂ ಏಕರೀತಿಯ ಜೀವಿತದ ವಿಧಾನಗಳಿಗೆ ಹೊಂದಿಕೊಂಡ ಆತನ ಘನವಾದ ನಡೆಯ ರೀತಿನೀತಿಗಳನ್ನು ಅರ್ಥಮಾಡಿಕೊಳ್ಳಲು ಬಯಸುವಂತವರಾಗಬೇಕು. ದೇವರು ಆತನ ಯಾವ ಕಾರ್ಯ ಹಾಗೂ ಸಾಕ್ಷಿಗಳನ್ನು ಖಂಡಿಸುವುದಕ್ಕೆ ಬದಲಾಗಿ ಮಾನ್ಯಮಾಡಿರುವನೋ ಅಂತವುಗಳನ್ನು ಬಹು ಶ್ರೇಷ್ಠವಾದವು–ಗಳೆಂದು ಎಣಿಸುವವರಾಗಬೇಕು.

ಅಪೊಸ್ತಲರ ಕೃತ್ಯಗಳು 21:21–27ರಲ್ಲಿರುವ ಸಂಗತಿ–ಗಳನ್ನು ಪರಿಶೀಲಿಸುವಲ್ಲಿ, ಪೌಲನು (ವಚನ 21) ಯೆಹೂದ್ಯ ಮತಾವಲಂಬಿಗಳಿಗೆ ತಮ್ಮ ಮಕ್ಕಳಿಗೆ ಸುನ್ನತಿ ಮಾಡಿಸಬಾರ–ದೆಂದು ಉಪದೇಶಿರುವುದಾಗಲೀ ಇಲ್ಲವೇ ಮೋಶೆಯ ಧರ್ಮಶಾಸ್ತ್ರವನ್ನು ಅಲ್ಲಗಳೆದಿರುವುದಾಗಲೀ ನಮಗೆ ಕಂಡು ಬರುವುದಿಲ್ಲ. ವಾಸ್ತವವಾಗಿ ಆತನು ಮೋಶೆಯ ಧರ್ಮಶಾಸ್ತ್ರದಲ್ಲಿ ಅಡಕವಾಗಿರುವ ಛಾಯಾರೂಪದ ಸಂಗತಿಗಳ ಅತ್ಯುನ್ನತವಾದ ಹಾಗೂ ಭವ್ಯವಾದ ನಿಜರೂಪಗಳನ್ನು ತೋರಿಸಿಕೊಡುವುದರ ಮೂಲಕವಾಗಿ ಅದನ್ನು ಗೌರವಿಸುವವನಾಗಿದ್ದಾನೆ. ಆದುದರಿಂದ ಮೋಶೆಯನ್ನೂ ಆತನ ಧರ್ಮವಿಧಿಗಳನ್ನೂ ಅಲ್ಲಗಳೆಯುವು–ದನ್ನು ಬಿಟ್ಟು ಆತನು ಅವುಗಳನ್ನು ಗೌರವಿಸಿ ಹೇಳಿರುವುದು: ಹೀಗಿರಲಾಗಿ ಧರ್ಮಶಾಸ್ತ್ರವು ಪರಿಶುದ್ಧವೂ ನ್ಯಾಯವೂ ಹಿತವೂ ಆಗಿರುವಂಥದು ಸರಿ; ಆಜ್ಞೆಯ ಮೂಲಕ ಪಾಪದ ಹೇಯತನ ಮತ್ತು ಅದರ ತೀವ್ರತೆಯ ವಿಷಯವಾದ ಪರಿಜ್ಞಾನವು ಹೆಚ್ಚುತ್ತಾ ಬಂತು. ಆಜ್ಞೆಗಳು ಎಷ್ಟು ಪರಿಪೂರ್ಣವಾಗಿತ್ತೆಂದರೆ ಯಾವ ಅಪರಿಪೂರ್ಣನಾದ ಮನುಷ್ಯನೂ ಅವುಗಳನ್ನು ಪೂರ್ಣವಾಗಿ ಕೈಗೊಂಡು ನಡೆಯಲು ಸಾಧ್ಯವಿರಲಿಲ್ಲ; ಆದರೆ ಕ್ರಿಸ್ತನು ಅದನ್ನು ಕೈಗೊಂಡು ನಡೆದು ಅದರ ಪ್ರತಿಫಲವನ್ನು ಪಡೆದವನಾಗಿ ಈಗ ಒಂದು ಹೊಸದಾದ ಒಡಂಬಡಿಕೆಯ ಅನುಸಾರವಾಗಿ ನಿತ್ಯಜೀವ ಆಶೀರ್ವಾದಗಳನ್ನು ಅದನ್ನು ಕೈಗೊಳ್ಳಲು ಅಸಮರ್ಥರಾದವರಿಗೆ ನೀಡುತ್ತಿರುವನು. ಅವರು ನಂಬಿಕೆಯ ಮೂಲಕ ಆತನ ವಿಧೇಯತೆ ಮತ್ತು ಯಜ್ಞಾರ್ಪಣೆಗಳ ಫಲವನ್ನು ತಮ್ಮ ಅಪರಿಪೂರ್ಣತೆಗಳನ್ನು ಮುಚ್ಚಿಕೊಳ್ಳುವ ಸಲುವಾಗಿ ಅಂಗೀಕರಿಸಿಕೊಂಡಿರುವರು.

ಯೆಹೂದ್ಯರ ಧರ್ಮವಿಧಿಗಳಲ್ಲಿನ ಕೆಲವು ಆಚರಣೆಗಳಾ–ದಂಥ ಉಪವಾಸಗಳು ಅಮಾವಾಸ್ಯೆ ಮತ್ತು ಸಬ್ಬತ್ ದಿನಗಳು ಹಾಗು ಹಬ್ಬಗಳು ಸುವಾರ್ತಾಯುಗಕ್ಕೆ ಸಂಬಂಧಿಸಿದ ಆತ್ಮಿಕ ಸತ್ಯಾರ್ಥಗಳಿಗೆ ಛಾಯೆಗಳಾಗಿದ್ದವು. ಹೊಸ ಒಡಂಬಡಿಕೆಯ ವಿಷಯವಾದ ಸುವಾರ್ತೆಯು ಇವುಗಳನ್ನು ಸೇರಿಸಿಕೊಂಡಿರು–ವುದೂ ಇಲ್ಲ, ಇಲ್ಲವೇ ಇವುಗಳನ್ನು ನಿಷೇಧಿಸಿರುವುದೂ ಇಲ್ಲ. (ಕರ್ತನ ಭೋಜನ ಹಾಗೂ ಸ್ನಾನದೀಕ್ಷೆಯು ನಮಗೆ ಕೇವಲ ಸಾಂಕೇತಿಕ ವೈಶಿಷ್ಟ್ಯಗಳನ್ನೊಳಗೊಂಡ ಒಂದು ಆದೇಶವಾಗಿದ್ದು, ಅವು ಹೊಸದಾಗಿರುವವುಗಳು) – ಕೊಲೊಸ್ಸೆ 2:16–17; ಲೂಕ 22:19; ಮತ್ತಾಯ 28:19.

ಈಗ ನಾವು ಪರಿಶೀಲಿಸುತ್ತಿರುವ ಹಾಗೆ, ಪೌಲನು ಹಾಗೂ ಆ ನಾಲ್ಕು ಮಂದಿ ಯೆಹೂದ್ಯರು ಅನುಸರಿಸಿದುದು ಯೆಹೂದ್ಯರ ಸಾಂಕೇತಿಕವಾದ ಸಂಸ್ಕಾರಗಳಲ್ಲಿ ಒಂದಾಗಿದ್ದು ಅದನ್ನು "ಶುದ್ಧೀಕರಣ" ಎಂದು ಹೆಸರಿಸಲಾಗಿತ್ತು. ಯೆಹೂದ್ಯರಾಗಿ ಅವರು ಆಯ್ಕೆಮಾಡಿಕೊಂಡಲ್ಲಿ ತಮ್ಮನ್ನು ದೇವರಿಗೆ ಕ್ರಿಸ್ತನಲ್ಲಿ ಪ್ರತಿಷ್ಠಿಸಿಕೊಳ್ಳುವುದು ಮಾತ್ರವಲ್ಲದೆ ಈ ಶುದ್ಧೀಕರಣದ ಸಂಕೇತವನ್ನೂ ಸಹ ಆಚರಿಸುವ ಹಕ್ಕನ್ನು ಅವರು ಪಡೆದಿದ್ದರು. ಮತ್ತು ಇದನ್ನೇ ಅವರು ಮಾಡಿದ್ದು. ಪೌಲನೊಂದಿಗಿದ್ದ ಆ ಮನುಷ್ಯರು ಇದರ ಜೊತೆಗೆ ತಮ್ಮನ್ನು ದೇವರ ಹಾಗೂ ಮನುಷ್ಯರ ಮುಂದೆ ಕುಗ್ಗಿಸಿಕೊಳ್ಳಲು ತಮ್ಮ ತಲೆಗಳನ್ನು ಬೋಳಿಸಿಕೊಂಡಿದ್ದರು. ಈ ಸಾಂಕೇತಿಕವಾದ ಆಚರಣೆಗಳಿಗೆ ಖರ್ಚುಹಿಡಿಯುತ್ತಿದ್ದು, ದೇವಾಲಯದಲ್ಲಿ ಒಬ್ಬೊಬ್ಬರಿಗೆ

ಖರ್ಚನ್ನು ನಿಗದಿಮಾಡಿ ಆ ಖರ್ಚನ್ನು ಕಾಣಿಕೆಯ ಹಣದಿಂದ ಭರಿಸಲಾಗುತ್ತಿತ್ತೆಂದು ಭಾವಿಸಲಾಗಿರುವುದು.

ಯೆಹೂದ್ಯರು ಧರ್ಮಶಾಸ್ತ್ರವಿಧಿಗಳಿಂದ ಮುಕ್ತರಾಗಿರುವರೆಂದು ಪೌಲನು ಎಂದೂ ಉಪದೇಶಮಾಡಿರಲಿಲ್ಲ; ಬದಲಾಗಿ ಅವರು ಜೀವಿಸಿರುವವರೆಗೂ ಅವರಲ್ಲಿ ಪ್ರತಿಯೊಬ್ಬನ ಮೇಲೂ ಧರ್ಮಶಾಸ್ತ್ರ ವಿಧಿಗಳು ಅಧಿಕಾರ ನಡೆಸುತ್ತಿರುವುದಾಗಿ ಉಪದೇಶಿಸಿದ್ದನು. ಹೀಗಿದ್ದರೂ ಒಬ್ಬ ಯೆಹೂದ್ಯನು ಕ್ರಿಸ್ತನನ್ನು ಅಂಗೀಕರಿಸಿ "ಅತನೊಡನೆ ಸತ್ತ ಪಕ್ಷದಲ್ಲಿ" ಅಂಥವನ ಮೇಲೆ ಧರ್ಮಶಾಸ್ತ್ರ ವಿಧಿಗಳನ್ನೊಳಗೊಂಡ ಒಡಂಬಡಿಕೆಯು ಮುಕ್ತಾಯಗೊಂಡು ಅವನು ದೇವರ ಮೂಲಕವಾಗಿ ಕ್ರಿಸ್ತನಲ್ಲಿ ಸ್ವತಂತ್ರನಾಗಿರುವನೆಂಬುದನ್ನು ತೋರಿಸಿಕೊಟ್ಟಿದ್ದನು. (ರೊಮಾ. 7:1–4) ಆದರೆ ಅನ್ಯಜನರಾದ ಕ್ರೈಸ್ತಮತಾವಲಂಬಿಗಳು ಎಂದೂ ಯೆಹೂದ್ಯರ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಗೆ ಅಧೀನರಾಗಿರಲಿಲ್ಲವೆಂದೂ ಹಾಗು ಅವರು ಯೆಹೂದ್ಯರ ಧರ್ಮವಿಧಿಗಳನ್ನೂ ಆಚರಣೆಗಳನ್ನೂ ಅನುಸರಿಸಲು ಪ್ರಯತ್ನಿಸುವುದೇ ಆದಲ್ಲಿ ಅವರು ತಮ್ಮ ರಕ್ಷಣೆಗಾಗಿ ಕ್ರಿಸ್ತನ ಯಜ್ಞದ ಫಲವಾಗಿ ಲಭಿಸಿದ ಆಶೀರ್ವಾದಗಳ ಮೇಲೇ ಪೂರ್ಣವಾಗಿ ಆತುಕೊಳ್ಳದೆ ಆ ಸಂಕೇತಾಚರಣೆಗಳ ಮೇಲೆ ಭರವಸವಿಟ್ಟಿದ್ದಾರೆಂಬುದು ಅನ್ವಯವಾಗುತ್ತದೆಂಬುದನ್ನೂ ಅವನು ಉಪದೇಶಿಸಿದ್ದನು. ಅಪೋಸ್ತಲರ ಕೃತ್ಯಗಳು 21:25; 15:20,23–29 ನೋಡಿ.

ನಮ್ಮ ತೀರ್ಮಾನವೆಂದರೆ, ದೇವರು ತನ್ನ ಸತ್ಯಾರ್ಥಗಳ ವಿಷಯವಾಗಿ ಅಪೋಸ್ತಲರನ್ನು ಸಮರ್ಥರಾದ ಸೇವಕರನ್ನಾಗಿ ಮಾಡಿ ಅವರಿಂದ ಬರೆಯಲ್ಪಟ್ಟ ಸಂಗತಿಗಳ ವಿಷಯವಾಗಿ ಅವರನ್ನು ದೈವಿಕವಾದ ರೀತಿಯಲ್ಲಿ ನಡೆಸುವುದರ ಮೂಲಕ ಅವರುಗಳನ್ನು ಅತ್ಯಾಶ್ಚರ್ಯಕರವಾದ ರೀತಿಯಲ್ಲಿ ಬಳಸಿ–ಕೊಂಡಿರುವನು. ಹೀಗಾಗಿ ದೇವರ ಮನುಷ್ಯನಿಗೆ ಉಪಯುಕ್ತ–ವಾದುದೊಂದನ್ನೂ ಬಿಟ್ಟುಬಿಡಲಾಗಿಲ್ಲ ಮತ್ತು ತಾವು ಮೂಲವಾಗಿ ಹೇಳಿರುವ ಮಾತುಗಳಲ್ಲಿ ಅಪೋಸ್ತಲರು ತಾವೇ ಗ್ರಹಿಸಲಾರದ ರೀತಿಯ ಪರಿಪಾಲನೆ ಹಾಗೂ ಜ್ಞಾನವಿವೇಕಗಳು ತೋರ್ಪಟ್ಟಿರುವುದು. ಈ ದೃಡವಾದ ಅಸ್ತಿವಾರಗಳಿಗಾಗಿ ದೇವರಿಗೆ ಸ್ತೋತ್ರ.

"ಎಂಥಾ ಸ್ಥಿರವಾದ ಒಂದು ಅಸ್ತಿವಾರ, ಕರ್ತನ ಭಕ್ತರೇ,
ಹಾಕಲಾಗಿರುವುದು ನಿಮ್ಮ ನಂಬಿಕೆಗಾಗಿ
ಆತನ ಉತ್ಕೃಷ್ಟವಾದ ವಾಕ್ಯಗಳಲ್ಲಿ,
ಏನು ಹೆಚ್ಚಿಗೆ ಹೇಳಬೇಕು ನಿಮಗೆ
ಈಗ ಹೇಳಿರುವುದಕ್ಕಿಂತಲೂ?
ಯೇಸುವಿನ ಬಳಿಗೆ ಆಶ್ರಯಕ್ಕಾಗಿ ಓಡಿಬಂದ ನಿಮಗೆ."

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ. ಶ.31 | ಕಪೆರ್ನೌಮಿನ ಸಮೀಪ | ಪರ್ವತದ ಮೇಲೆ ಮಾಡಿದ ಪ್ರಸಂಗ | 5:1–7:29 | –– | 6:17–49 | –– |

# ಮತ್ತಾಯ 5:1–48

ಆತನು ಆ ಜನರ ಗುಂಪುಗಳನ್ನು ಕಂಡು ಬೆಟ್ಟವನ್ನೇರಿ ಕೂತುಕೊಂಡ ತರುವಾಯ ಆತನ ಶಿಷ್ಯರು ಆತನ ಬಳಿಗೆ ಬಂದರು. ಆತನು ಅವರಿಗೆ ಉಪದೇಶಮಾಡಿ ಹೇಳಿದ್ದೇನೆಂದರೆ– ಆತ್ಮದಲ್ಲಿ ಬಡವರಾಗಿರುವವರು ಧನ್ಯರು; ಪರಲೋಕರಾಜ್ಯವು ಅವರದು. ದುಃಖಪಡುವವರು ಧನ್ಯರು; ಅವರು ಸಮಾಧಾನ ಹೊಂದುವರು. ಶಾಂತರು ಧನ್ಯರು; ಅವರು ಭೂಮಿಗೆ ಬಾಧ್ಯರಾಗುವರು. ನೀತಿಗೆ ಹಸಿದು ಬಾಯಾರಿದವರು ಧನ್ಯರು; ಅವರಿಗೆ ತೃಪ್ತಿಯಾಗುವದು. ಕರುಣೆಯುಳ್ಳವರು ಧನ್ಯರು; ಅವರು ಕರುಣೆ ಹೊಂದುವರು. ನಿರ್ಮಲಚಿತ್ತರು ಧನ್ಯರು; ಅವರು ದೇವರನ್ನು ನೋಡುವರು. ಸಮಾಧಾನಪಡಿಸುವವರು ಧನ್ಯರು ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು. ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು ಧನ್ಯರು; ಪರಲೋಕರಾಜ್ಯವು ಅವರದು. ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸ ಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ. ನೀವು ಭೂಮಿಗೆ ಉಪ್ಪಾಗಿದ್ದೀರಿ. ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು? ಜನರು ಅದನ್ನು ಹೊರಗೆ ಹಾಕಿ ತುಳಿಯುವುದಕ್ಕೆ ಅದು ಯೋಗ್ಯವೇ ಹೊರತು ಮತ್ತಾವ ಕೆಲಸಕ್ಕೂ ಬಾರದು. ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು. ಮತ್ತು ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವುದಿಲ್ಲ; ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕುಕೊಡುವದು. ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು. ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವದಕ್ಕೆ ನಾನು

ಬಂದೆನೆಂದು ನೆನಸಬೇಡಿರಿ. ತೆಗೆದುಹಾಕುವದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ– ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದುಹೋಗಲಾರದು. ಆದದರಿಂದ ಈ ಸಣ್ಣಸಣ್ಣ ಆಜ್ಞೆಗಳಲ್ಲಿ ಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವುದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿ–ಕೊಳ್ಳುವನು; ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು. ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ. ನರಹತ್ಯ ಮಾಡಬಾರದು; ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೇನಂದರೆ–ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯವಿಚಾರಣೆಗೆ ಗುರಿಯಾಗುವನು; ತನ್ನ ಸಹೋದರರನನ್ನು ನೋಡಿ–ಛೀ ನೀಚಾ ಅನ್ನುವವನು ನ್ಯಾಯಸಭೆಯ ವಿಚಾರಣೆಗೆ ಒಳಗಾಗುವನು; ಮೂರ್ಖಾ ಅನ್ನುವವನು ಅಗ್ನಿನರಕಕ್ಕೆ ಗುರಿಯಾಗುವನು. ಆದಕಾರಣ ನೀನು ನಿನ್ನ ಕಾಣಿಕೆಯನ್ನು ಯಜ್ಞವೇದಿಯ ಹತ್ತಿರಕ್ಕೆ ತಂದಾಗ ನಿನ್ನ ಸಹೋದರನ ಮನಸ್ಸಿನಲ್ಲಿ ನಿನ್ನ ಮೇಲೆ ಏನೋ ವಿರೋಧವದೆ ಎಂಬದು ನಿನ್ನ ನೆನಪಿಗೆ ಬಂದರೆ, ನಿನ್ನ ಕಾಣಿಕೆಯನ್ನು ಆ ಯಜ್ಞವೇದಿಯ ಮುಂದೆಯೇ ಬಿಟ್ಟುಹೋಗಿ ಮೊದಲು ನಿನ್ನ ಸಹೋದರನ ಸಂಗಡ ಒಂದಾಗು; ಆ ಮೇಲೆ ಬಂದು ನಿನ್ನ ಕಾಣಿಕೆಯನ್ನು ಕೊಡು. ನಿನ್ನ ವಾದಿಯ ಸಂಗಡ ಇನ್ನೂ ದಾರಿಯಲ್ಲಿರುವಾಗಲೇ ಅವನ ಕೂಡ ಬೇಗ ಸಮಾಧಾನ ಮಾಡಿಕೋ; ಇಲ್ಲದಿದ್ದರೆ ಆ ವಾದಿಯು ನಿನ್ನನ್ನು ನ್ಯಾಯಾಧಿಪತಿಗೆ ಒಪ್ಪಿಸಾನು; ನ್ಯಾಯಾಧಿಪತಿಯು ನಿನ್ನನ್ನು ಓಲೇಕಾರನ ಕೈಗೆ ಒಪ್ಪಿಸಿಕೊಟ್ಟಾನು; ಆಗ ನೀನು ಸೆರೆಯಲ್ಲಿ ಬಿದ್ದೀಯೆ. ನೀನು ಒಂದು ಕಾಸನ್ನಾದರೂ ನಿಲ್ಲಸಿಕೊಳ್ಳದೆ ಎಲ್ಲಾ ಸಲ್ಲಿಸುವ ತನಕ ಅಲ್ಲಿಂದ ಬರುವದೇ ಇಲ್ಲ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ. ವ್ಯಭಿಚಾರ ಮಾಡಬಾರದೆಂದು ಹೇಳಿಯದೆ ಎಂಬದಾಗಿ ನೀವು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೇನೆಂದರೆ––ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ನಿನ್ನ ಬಲಗಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಿತ್ತು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವುದು ನಿನಗೆ ಹಿತವಲ್ಲವೇ. ನಿನ್ನ ಬಲಗೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವುದಾದರೆ ಅದನ್ನು ಕಡಿದು ಬಿಸಾಟುಬಿಡು; ನಿನ್ನ ದೇಹವೆಲ್ಲಾ ನರಕದಲ್ಲಿ ಬೀಳುವುದಕ್ಕಿಂತ ಅವಯವಗಳಲ್ಲಿ ಒಂದು ಹೋಗುವದು ನಿನಗೆ ಹಿತವಲ್ಲವೇ. ಇದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟುಬಿಡುವವನು ಆಕೆಗೆ ತ್ಯಾಗಪತ್ರವನ್ನು ಕೊಡತಕ್ಕದ್ದೆಂದು ಹೇಳಿದೆಯಷ್ಟೆ. ಆದರೆ ನಾನು ನಿಮಗೆ ಹೇಳುವುದೇನೆಂದರೆ––ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟಬಿಡುವವನು ಅವಳು ವ್ಯಭಿಚಾರ ಮಾಡುವುದಕ್ಕೆ ಕಾರಣನಾಗುತ್ತಾನೆ ಮತ್ತು ಗಂಡಬಿಟ್ಟವಳನ್ನು ಮದುವೆಮಾಡಿಕೊಳ್ಳುವವನು ವ್ಯಭಿಚಾರ ಮಾಡಿದವನಾಗಿದ್ದಾನೆ. ಮತ್ತು––ನೀನು ಸುಳ್ಳಾಣೆಯಿಡಬಾರದು; ನೀನು ಇಟ್ಟುಕೊಂಡ ಆಣೆಗಳನ್ನು ಕರ್ತನಿಗೆ ಸಲ್ಲಿಸಬೇಕೆಂದು ಹಿರಿಯರಿಗೆ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೆಂದರೆ– ಆಣೆಯನ್ನೇ ಇಡಬೇಡ. ಆಕಾಶದ ಮೇಲೆ ಆಣೆ ಇಡಬೇಡ; ಅದು ದೇವರ ಸಿಂಹಾಸನವು. ಭೂಮಿಯ ಮೇಲೆ ಆಣೆ ಇಡಬೇಡ; ಅದು ಆತನ ಪಾದಪೀಠವು. ಯೆರೂಸಲೇಮಿನ ಮೇಲೆ ಆಣೆ ಇಡಬೇಡ; ಅದು ಆ ದೊಡ್ಡ ಅರಸನ ಪಟ್ಟಣವಾಗಿದೆ. ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ; ನೀನು ಒಂದು ಕೂದಲನ್ನಾದರೂ ಬೆಳ್ಳಗೆ ಅಥವಾ ಕರ್ರಗೆ ಮಾಡಲಾರಿ. ಆದರೆ ನಿಮ್ಮ ಮಾತು ಹೌದಾದರೆ ಹೌದು, ಅಲ್ಲವಾದರೆ ಅಲ್ಲ, ಎಂದಿರಲಿ; ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು. ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು ಅಂತ ಹೇಳಿಯದೆ ಎಂದು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೇನಂದರೆ–ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆಯನ್ನೂ ಒಡ್ಡು. ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನೂ ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು. ಒಬ್ಬನು–ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು. ನಿನ್ನನ್ನು ಬೇಡುವವನಿಗೆ ಕೊಡು; ನಿನ್ನಲ್ಲಿ ಕಡಾ ಈಸಿಕೊಳ್ಳಬೇಕೆಂದು ಬಂದವನಿಗೆ ಮುಖತಿರುವಿಕೊಳ್ಳಬೇಡ. ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಹೇಳಿಯದೆ ಎಂಬದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವುದೇನಂದರೆ––ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಪಡಿಸವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ. ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ. ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆ ಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು? ಅನ್ಯಜನಗಳು ಸಹ ಹಾಗೆ ಮಾಡುವದಿಲ್ಲವೇ. ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ.

## ಮತ್ತಾಯ 6:1–34

ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತರ ನಿಮಗೆ

ಫಲದೊರೆಯದು. ಆದದರಿಂದ ನೀನು ಧರ್ಮಕೊಡುವಾಗ ನಿನ್ನ ಮುಂದೆ ಕೊಂಬೂದಿಸಬೇಡ; ಜನರಿಂದ ಹೊಗಳಿಸಿಕೊಳ್ಳ ಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿ–ಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೀನಾದರೆ ಧರ್ಮಕೊಡುವಾಗ ನೀನು ಧರ್ಮಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಮಾಡಿದ್ದು ಎಡಗೈಗೂ ತಿಳಿಯದಿರಲಿ. ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. ಮತ್ತು ನೀವು ಪ್ರಾರ್ಥನೆಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದಿ ಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು; ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. ಆದರೆ ಪ್ರಾರ್ಥನೆಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮ ಸುಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ. ಆದದರಿಂದ ನೀವು ಅವರ ಹಾಗೆ ಆಗಬೇಡಿರಿ. ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯ ವೆಂಬದು ಆತನಿಗೆ ತಿಳಿದದೆ. ಆದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು – ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. ನೀವು ಜನರ ತಪ್ಪುಗಳನ್ನು ಕ್ಷಮಿಸಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ನಿಮ್ಮ ತಪ್ಪುಗಳನ್ನೂ ಕ್ಷಮಿಸುವನು. ಆದರೆ ನೀವು ಜನರ ತಪ್ಪುಗಳನ್ನು ಕ್ಷಮಿಸದೆ–ಹೋದರೆ ನಿಮ್ಮ ತಂದೆ ಸಹ ನಿಮ್ಮ ತಪ್ಪುಗಳನ್ನು ಕ್ಷಮಿಸುವದಿಲ್ಲ. ಇದಲ್ಲದೆ ನೀವು ಉಪವಾಸಮಾಡುವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನರಿಗೆ ತೋರುವದಕ್ಕಾಗಿ ತಮ್ಮ ಮುಖವನ್ನು ವಿಕಾರಮಾಡಿಕೊಳ್ಳುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಉಪವಾಸಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ. ಹೀಗೆ ಮಾಡಿದರೆ ನೀನು ಉಪವಾಸಿ–ಯೆಂದು ಜನರಿಗೆ ಕಾಣದೆ ಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ ಉಪವಾಸಿಯೆಂದು ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. ಭೂಲೋಕದಲ್ಲಿ ಗಂಟುಮಾಡಿ ಇಟ್ಟುಕೊಳ್ಳಬೇಡಿರಿ; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬು ಹತ್ತಿ ಕೆಟ್ಟುಹೋಗುವದು; ಇಲ್ಲಿ ಕಳ್ಳರು ಕನ್ನಾಕೊರೆದು ಕದಿಯುವರು. ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟು–ಹೋಗುವುದಿಲ್ಲ, ಅಲ್ಲಿ ಕಳ್ಳರು ಕನ್ನಾಕೊರೆಯುವದೂ ಇಲ್ಲ, ಕದಿಯುವುದೂ ಇಲ್ಲ. ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ ಇರುವುದಷ್ಟೇ. ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟ್ಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವುದು. ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ ನಿನ್ನ ದೇಹವೆಲ್ಲಾ ಕತ್ತಲಾಗಿರುವದು. ಹಾಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟನ್ನಬೇಕು! ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೇ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ. ಈ ಕಾರಣದಿಂದ––ನಮ್ಮ ಪ್ರಾಣಾಧಾರಣೆಗೆ ಏನು ಊಟಮಾಡಬೇಕು, ಏನು ಕುಡಿಯಬೇಕು, ನಮ್ಮ ದೇಹರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆಮಾಡಬೇಡಿರಿ ಎಂಬದಾಗಿ ನಿಮಗೆ ಹೇಳುತ್ತೇನೆ. ಊಟಕ್ಕಿಂತ ಪ್ರಾಣವು ಉಡುಪಿಗಿಂತ ದೇಹವು ಮೇಲಾದದ್ದಲ್ಲವೇ. ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ; ಅವು ಬಿತ್ತುವುದಿಲ್ಲ, ಕೊಯ್ಯುವುದಿಲ್ಲ, ಕಣಜಗಳಲ್ಲಿ ತುಂಬಿಟ್ಟುಕೊಳ್ಳುವುದಿಲ್ಲ; ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆಯು ಅವುಗಳನ್ನು ಸಾಕಿ ಸಲಹುತ್ತಾನೆ; ಅವುಗಳಿಗಿಂತ ನೀವು ಹೆಚ್ಚಿನವರಲ್ಲವೋ? ಚಿಂತೆ ಮಾಡಿ ಮಾಡಿ ಒಂದು ಮೊಳ ಉದ್ದ ಬೆಳೆಯುವುದು ನಿಮ್ಮಲ್ಲಿ ಯಾರಿಂದಾದೀತು? ಇದಲ್ಲದೆ ನೀವು ಉಡುಪಿನ ವಿಷಯದಲ್ಲಿ ಚಿಂತೆಮಾಡುವದೇಕೆ? ಅಡವಿಯ ಹೂವುಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿಯಿರಿ; ಅವು ದುಡಿಯುವುದಿಲ್ಲ, ನೂಲುವುದಿಲ್ಲ; ಆದಾಗ್ಯೂ ಈ ಹೂವುಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಅರಸನಾದ ಸೊಲೊಮೋನನಿಗೆ ಸಹ ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ. ಎಲೈ ಅಲ್ಪ ವಿಶ್ವಾಸಿಗಳೇ, ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿತೊಡಿಸುವನಲ್ಲವೇ. ಹೀಗಿರುವುದರಿಂದ–ಏನು ಊಟ ಮಾಡಬೇಕು, ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು ಎಂದು ಚಿಂತೆಮಾಡಬೇಡಿರಿ. ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕಪಡುತ್ತಾರೆ. ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕದಲ್ಲಿರುವ ನಿಮ್ಮ ತಂದೆಗೆ ತಿಳಿದದೆಯಷ್ಟೆ. ಹೀಗಿರುವು ದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿ ಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು. ಆದದರಿಂದ ನಾಳಿನ ವಿಷಯವಾಗಿ ಚಿಂತೆಮಾಡಬೇಡಿರಿ. ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವುದು. ಆ ಹೊತ್ತಿನ ಕಾಟ ಅ ಹೊತ್ತಿಗೆ ಸಾಕು.

## ಮತ್ತಾಯ 7:1–29

ತೀರ್ಪುಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವುದಿಲ್ಲ. ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು; ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು. ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವುದೇಕೆ? ನೀನು ನಿನ್ನ ಸಹೋದರನಿಗೆ––ನಿನ್ನ ಕಣ್ಣಿನೊಳಗಿಂದ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವುದು ಹೇಗೆ? ನಿನ್ನ ಕಣ್ಣಿನಲ್ಲಿ ತೊಲೆಯದೆಯಲ್ಲಾ. ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದುಹಾಕಿಕೋ; ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವುದಕ್ಕೆ ಚೆನ್ನಾಗಿ ಕಾಣಿಸುವುದು. ದೇವರ ವಸ್ತುಗಳನ್ನು ನಾಯಿಗಳಿಗೆ ಹಾಕಬೇಡಿರಿ; ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ. ಚೆಲ್ಲಿದರೆ ತಮ್ಮ ಕಾಲಿನಿಂದ ಅವುಗಳನ್ನು ತುಳಿದು ಹಿಂದಿರುಗಿ ಬಂದು ನಿಮ್ಮನ್ನು ಸೀಳಿಬಿಟ್ಟಾವು. ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವುದು; ತಟ್ಟಿರಿ, ನಿಮಗೆ ತೆರೆಯುವದು; ಯಾಕೆಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವುದು, ತಟ್ಟುವವನಿಗೆ ತೆರೆಯುವದು. ನಿಮ್ಮಲ್ಲಿ ಯಾವನಾದರೂ ರೊಟ್ಟಿ ಕೇಳುವ ಮಗನಿಗೆ ಕಲ್ಲನ್ನು ಕೊಡುವನೇ? ಮೀನು ಕೇಳಿದರೆ ಹಾವನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೆಯ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಒಳ್ಳೆಯ ವರಗಳನ್ನು ಕೊಡುವನಲ್ಲವೇ. ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ. ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ. ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪ ಜನ. ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ. ಅವರು ಕುರೀವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೋಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳೇ. ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ. ಮುಳ್ಳುಗಿಡಗಳಲ್ಲಿ ದ್ರಾಕ್ಷೇಹಣ್ಣುಗಳನ್ನೂ ಮದ್ದುಗುಣಿಕೇಗಿಡಗಳಲ್ಲಿ ಅಂಜೂರಗಳನ್ನೂ ಕೊಯ್ಯುವುದುಂಟೇ? ಹಾಗೆಯೇ ಒಳ್ಳೇ ಮರಗಳೆಲ್ಲಾ ಒಳ್ಳೆ ಫಲಗಳನ್ನು ಕೊಡುವದು. ಹುಳುಕು ಮರವು ಕೆಟ್ಟ ಫಲವನ್ನು ಕೊಡುವುದು. ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು; ಹುಳುಕು ಮರವು ಒಳ್ಳೇ ಫಲವನ್ನು ಕೊಡಲಾರದು. ಒಳ್ಳೇ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ. ಹೀಗಿರಲಾಗಿ ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ. ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರು ಪರಲೋಕ ರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ; ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕರಾಜ್ಯಕ್ಕೆ ಸೇರುವನು. ಸ್ವಾಮಿ, ಸ್ವಾಮಿ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನನಗೆ ಹೇಳುವರು. ಆಗ ನಾನು ಅವರಿಗೆ––ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿಹೋಗಿರಿ ಎಂದು ಎಲ್ಲರ ಮುಂದೆ ಹೇಳಿಬಿಡುವೆನು. ಆದದರಿಂದ, ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು. ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಬಡಿಯಿತು. ಆದಾಗ್ಯೂ ಅದರ ಅಸ್ತಿವಾರವು ಬಂಡೆಯ ಮೇಲಿದ್ದದರಿಂದ ಅದು ಬೀಳಲಿಲ್ಲ. ಆದರೆ ಈ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನು ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಹೀನ ಮನುಷ್ಯನನ್ನು ಹೋಲುವನು. ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಹೊಡೆಯಿತು. ಆಗ ಅದು ಧಡಮ್ಮನೆ ಕಡುಕೊಂಡುಬಿತ್ತು. ಯೇಸು ಈ ಮಾತುಗಳನ್ನು ಹೇಳಿ ಮುಗಿಸಿದ ಮೇಲೆ ಆ ಜನರ ಗುಂಪುಗಳು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟವು. ಯಾಕೆಂದರೆ ಆತನು ಅವರ ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶ ಮಾಡುತ್ತಿದ್ದನು.

## ಲೂಕ 6:17–49

ಆ ಮೇಲೆ ಆತನು ಅವರ ಸಂಗಡ ಬೆಟ್ಟದಿಂದ ಇಳಿದು ಸಮಭೂಮಿಯಲ್ಲಿ ನಿಂತನು. ಆತನ ಶಿಷ್ಯರ ದೊಡ್ಡ ಗುಂಪು ಮತ್ತು ಎಲ್ಲಾ ಯೂದಾಯದಿಂದಲೂ ಯೆರೂಸಲೇಮಿನಿಂದಲೂ ತೂರ್ ಸೀದೋನ್ ಪಟ್ಟಣಗಳಿರುವ ಸಮುದ್ರತೀರದಿಂದಲೂ ಬಂದಿದ್ದ ಜನರ ಮಹಾಸಮೂಹವು ಆತನ ಸಂಗಡ ಇದ್ದವು. ಆ ಜನರು ಆತನ ಉಪದೇಶವನ್ನು ಕೇಳುವುದಕ್ಕೂ ತಮ್ಮ ರೋಗಗಳನ್ನು ವಾಸಿಮಾಡಿಸಿಕೊಳ್ಳುವುದಕ್ಕೂ ಬಂದಿದ್ದರು. ಅವರಲ್ಲಿ ದೆವ್ವಗಳ ಕಾಟವಿದ್ದವರು ಸ್ವಸ್ಥವಾದರು. ಮತ್ತು ಆತನಿಂದ ಶಕ್ತಿ ಹೊರಟು ಎಲ್ಲರನ್ನು ವಾಸಿಮಾಡುತ್ತಿದ್ದದರಿಂದ ಆ ಗುಂಪಿನ ಜನರೆಲ್ಲಾ ಆತನನ್ನು ಮುಟ್ಟುವದಕ್ಕೆ ಪ್ರಯತ್ನಮಾಡಿದರು. ತರುವಾಯ ಆತನು ತನ್ನ ಶಿಷ್ಯರ ಕಡೆಗೆ ಕಣ್ಣೆತ್ತಿನೋಡಿ ಹೇಳಿದ್ದೇನೆಂದರೆ––ಬಡವರಾದ ನೀವು ಧನ್ಯರು; ದೇವರ ರಾಜ್ಯವು ನಿಮ್ಮದೇ. ಈಗ ಹಸಿದಿರುವವರಾದ ನೀವು ಧನ್ಯರು; ನಿಮಗೆ ತೃಪ್ತಿಯಾಗುವದು. ಈಗ ಅಳುವವರಾದ ನೀವು ಧನ್ಯರು; ನೀವು ನಗುವಿರಿ. ಮನುಷ್ಯಕುಮಾರನ ನಿಮಿತ್ತವಾಗಿ ಜನರು ನಿಮ್ಮನ್ನು ಹಗೆಮಾಡಿ ನಿಮಗೆ ಬಹಿಷ್ಕಾರಹಾಕಿ ನಿಂದಿಸಿ ನಿಮ್ಮ ಹೆಸರನ್ನು ಕೆಟ್ಟದ್ದೆಂದು ತೆಗೆದುಹಾಕಿದರೆ ನೀವು ಧನ್ಯರು. ಆ ದಿನದಲ್ಲಿ ಸಂತೋಷಪಡಿರಿ, ಕುಣಿದಾಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು ಎಂದು ತಿಳುಕೊಳ್ಳಿರಿ. ಈ ಜನರ ಪಿತೃಗಳು ಪ್ರವಾದಿಗಳಿಗೂ ಹಾಗೆಯೇ ಮಾಡಿದರು. ಆದರೆ ಐಶ್ವರ್ಯವಂತರೇ, ನಿಮ್ಮ ಗತಿಯನ್ನು ಏನು ಹೇಳಲಿ! ನಿಮ್ಮ ಸುಖ ನಿಮಗೆ ಬಂದದೆ. ಈಗ ಹೊಟ್ಟೆತುಂಬಿದವರೇ, ನಿಮ್ಮ ಗತಿಯನ್ನು ಏನು ಹೇಳಲಿ! ನೀವು ಹಸಿಯುವಿರಿ. ಈಗ ನಗುವವರೇ, ನಿಮ್ಮ

ಗತಿಯನ್ನು ಏನು ಹೇಳಲಿ! ನೀವು ದುಃಖ ಪಟ್ಟು ಅಳುವಿರಿ. ಜನರೆಲ್ಲಾ ನಿಮ್ಮನ್ನು ಹೊಗಳಿದರೆ ನಿಮ್ಮ ಗತಿಯನ್ನು ಏನು ಹೇಳಲಿ! ಅವರ ಪಿತೃಗಳು ಸುಳ್ಳುಪ್ರವಾದಿಗಳನ್ನು ಹಾಗೆಯೇ ಹೊಗಳಿದರು. ಕೇಳುವವರಾದ ನಿಮಗೆ ನಾನು ಹೇಳುವುದೇನಂದರೆ––ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಗೆಮಾಡುವವರಿಗೆ ಉಪಕಾರ ಮಾಡಿರಿ; ನಿಮ್ಮನ್ನು ಶಪಿಸುವ ವರಿಗೆ ಆಶೀರ್ವಾದ ಮಾಡಿರಿ; ನಿಮ್ಮನ್ನು ಬಯ್ಯುವವರಿಗೊಸ್ಕರ ದೇವರನ್ನು ಪ್ರಾರ್ಥಿಸಿರಿ. ನಿನ್ನನ್ನು ಕೆನ್ನೆಯ ಮೇಲೆ ಬಡಿದವನಿಗೆ ಮತ್ತೊಂದು ಕೆನ್ನೆಯನ್ನೂ ತಿರುಗಿಸು; ನಿನ್ನ ಮೇಲಂಗಿಯನ್ನು ಕಸುಕೊಳ್ಳುವವನಿಗೆ ಒಳಂಗಿಯನ್ನೂ ತಡೆಯಬೇಡ. ನಿನ್ನನ್ನು ಬೇಡುವವರಿಗೆಲ್ಲರಿಗೆ ಕೊಡು; ನಿನ್ನ ಸೊತ್ತು ಕಸುಕೊಳ್ಳುವವನನ್ನು ಹಿಂದಕ್ಕೆ ಕೊಡೆಂದು ಕೇಳಬೇಡ. ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ, ಅಂಥದನ್ನೇ ನೀವು ಅವರಿಗೆ ಮಾಡಿರಿ. ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ನಿಮಗೆ ಏನು ಹೊಗಳಿಕೆ ಬಂದಿತು? ಪಾಪಿಷ್ಠರು ಸಹ ತಮಗೆ ಪ್ರೀತಿ ತೋರಿಸುವವರನ್ನು ಪ್ರೀತಿಸುತ್ತಾರಲ್ಲಾ. ನಿಮಗೆ ಮೇಲನ್ನು ಮಾಡುವವರಿಗೇ ನೀವು ಮೇಲನ್ನು ಮಾಡಿದರೆ ನಿಮಗೆ ಏನು ಹೊಗಳಿಕೆ ಬಂದೀತು? ಪಾಪಿಷ್ಠರು ಸಹ ಹಾಗೆ ಮಾಡುತ್ತಾರಲ್ಲಾ. ಅವರು ನಮಗೂ ಸಾಲಕೊಟ್ಟಾರೆಂದು ನೀವು ಯಾರಿಗಾದರೂ ಸಾಲಕೊಟ್ಟರೆ, ನಿಮಗೆ ಏನು ಹೋಗಳಿಕೆ ಬಂದೀತು? ಪಾಪಿಷ್ಠರು ಸಹ ತಾವು ಕೊಟ್ಟಷ್ಟು ತಮಗೆ ತಿರಿಗಿ ಸಿಕ್ಕೀತೆಂದು ಪಾಪಿಷ್ಠರಿಗೆ ಸಾಲ ಕೊಡುತ್ತಾರಲ್ಲಾ. ನೀವಾದರೋ ನಿಮ್ಮ ವೈರಿಗಳನ್ನು ಪ್ರೀತಿಸಿ ಅವರಿಗೆ ಉಪಕಾರಮಾಡಿರಿ. ಧೈರ್ಯವನ್ನು ಬಿಡದೆ ಸಾಲ ಕೊಡಿರಿ; ಹೀಗೆ ಮಾಡಿದರೆ, ನಿಮಗೆ ಬಹಳ ಫಲ ಸಿಕ್ಕುವುದು, ಮತ್ತು ನೀವು ಪರಾತ್ಪರನ ಮಕ್ಕಳಾಗುವಿರಿ. ಆತನಂತೂ ಉಪಕಾರನೆನಸದವರಿಗೂ ಕೆಟ್ಟವರಿಗೂ ಉಪಕಾರಿಯಾಗಿದ್ದಾನೆ. ನಿಮ್ಮ ತಂದೆ ಕರುಣ ವುಳ್ಳವನಾಗಿರುವ ಪ್ರಕಾರವೇ ನೀವೂ ಕರುಣವುಳ್ಳವರಾಗಿರಿ. ಇದಲ್ಲದೆ ತೀರ್ಪುಮಾಡಬೇಡಿರಿ, ಆಗ ನಿಮಗೂ ತೀರ್ಪಾಗು ವದಿಲ್ಲ; ಅಪರಾಧಿಯೆಂದು ನಿರ್ಣಯಿಸಬೇಡಿರಿ, ಆಗ ನಿಮ್ಮನ್ನೂ ಅಪರಾಧಿಗಳೆಂದು ನಿರ್ಣಯಿಸುವುದಿಲ್ಲ; ಬಿಡಿಸಿರಿ, ಆಗ ನಿಮ್ಮನ್ನೂ ಬಿಡಿಸುವರು; ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆಹಾಕುವರು. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು. ಇದಲ್ಲದೆ ಆತನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನಂದರೆ– ಕುರುಡನು ಕುರುಡನಿಗೆ ದಾರೀ ತೋರಿಸುವದಕ್ಕಾದೀತೇ? ಅವರಿಬ್ಬರೂ ಕುಣಿಯಲ್ಲಿ ಬೀಳುವರಲ್ಲವೇ. ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ; ಆದರೆ ತೀರಾ ಕಲಿತವನಾದ ಪ್ರತಿಯೊಬ್ಬನು ತನ್ನ ಗುರುವಿನಂತಾಗಿರುವನು. ಇದಲ್ಲದೆ ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವದೇಕೆ? ಇಲ್ಲವೆ ನಿನ್ನ ಕಣ್ಣಿನಲ್ಲಿರುವ ತೊಲೆಯನ್ನೇ ನೀನು ನೋಡದೆ ನಿನ್ನ ಸಹೋದರನಿಗೆ–ಅಣ್ಣಾ, ನಿನ್ನ ಕಣ್ಣಿನೊಳಗಿನ ರವೆಯನ್ನು ತೆಗೆಯುತ್ತೇನೆ ಬಾ ಎಂದು ಹೇಳುವುದಕ್ಕೆ ಹೇಗಾದೀತು? ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆಯನ್ನು ತೆಗೆದುಹಾಕಿಕೋ, ಆ ಮೇಲೆ ನಿನ್ನ ಸಹೋದರನ ಕಣ್ಣಿನೊಳಗಿನ ರವೆಯನ್ನು ತೆಗೆಯುವದಕ್ಕೆ ಚೆನ್ನಾಗಿ ಕಾಣಿಸುವದು. ಒಳ್ಳೆಯ ಮರವು ಹುಳುಕು ಫಲವನ್ನು ಕೊಡುವುದಿಲ್ಲ; ಹಾಗೆಯೇ ಹುಳುಕು ಮರವು ಒಳ್ಳೆಯ ಫಲವನ್ನು ಕೊಡುವುದಿಲ್ಲ. ಪ್ರತಿಯೊಂದು ಮರದ ಗುಣವು ಅದರ ಫಲದಿಂದಲೇ ಗೊತ್ತಾಗುವದು. ಮುಳ್ಳುಗಿಡಗಳಲ್ಲಿ ಅಂಜೂರದ ಹಣ್ಣುಗಳನ್ನು ಕೀಳುವುದಿಲ್ಲ; ಗಜ್ಜುಗದ ಮೆಳೆಯಲ್ಲಿ ದ್ರಾಕ್ಷೇಹಣ್ಣುಗಳನ್ನು ಕೊಯ್ಯುವದಿಲ್ಲ. ಒಳ್ಳೆಯವನು ತನ್ನ ಹೃದಯವೆಂಬ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯದನ್ನು ತರುತ್ತಾನೆ; ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟದ್ದನ್ನು ತರುತ್ತಾನೆ; ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು. ಇದಲ್ಲದೆ ನೀವು ನನ್ನನ್ನು ಸ್ವಾಮಿ ಸ್ವಾಮಿ ಅಂತ ಕರೆದು ನಾನು ಹೇಳುವದನ್ನು ನಡಿಸದೆ ಇರುವದೇಕೆ? ನನ್ನ ಬಳಿಗೆ ಬಂದು ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡಯುವವನು ಯಾರಿಗೆ ಸಮಾನನೆಂಬದನ್ನು ನಿಮಗೆ ತೋರಿಸುತ್ತೇನೆ. ಅವನು ಆಳವಾಗಿ ಅಗೆದು ಬಂಡೆಯ ಮೇಲೆ ಅಸ್ತಿವಾರವನ್ನು ಹಾಕಿ ಮನೇ ಕಟ್ಟಿದವನಿಗೆ ಸಮಾನನು; ಹೊಳೆಬಂದು ಪ್ರವಾಹವು ಆ ಮನೆಗೆ ಬಡಿದಾಗ್ಯೂ ಅದು ಚೆನ್ನಾಗಿ ಕಟ್ಟಿದ್ದರಿಂದ ಆ ಪ್ರವಾಹವು ಅದನ್ನು ಅಲ್ಲಾಡಿಸಲಾರದೆ ಹೋಯಿತು. ಆದರೆ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದಿರುವವನು ಅಸ್ತಿವಾರವಿಲ್ಲದೆ ನೆಲದ ಮೇಲೆ ಮನೇ ಕಟ್ಟಿದವನಿಗೆ ಸಮಾನನು. ಪ್ರವಾಹವು ಅದಕ್ಕೆ ಬಡಿಯಿತು; ಬಡಿದ ಕೂಡಲೆ ಅದು ಕುಸಿದುಬಿದ್ದು ಪೂರಾ ಹಾಳಾಯಿತು.

# "ಪರಿಪೂರ್ಣನಾದ ಆ ಮನುಷ್ಯನನ್ನು ಗುರುತಿಸಿ! ಇಗೋ ಆ ನೀತಿವಂತನು!"

**ರೀಪ್ರಿಂಟ್ಸ್ ಪುಟ 2585**

## ಮತ್ತಾಯ 4:25–5:12

**"ನಿರ್ಮಲಚಿತ್ತರು ಧನ್ಯರು; ಅವರು ದೇವರನ್ನು ನೋಡುವರು."**

ಅತಿ ಆಶೀರ್ವಾದಕರ ಸ್ಥಿತಿಯನ್ನು ದೇವರು ದಯಪಾಲಿಸ ಬೇಕಾದರೆ ನಾವು ಎಂಥ ಗುಣಲಕ್ಷಣಗಳನ್ನು ಗಳಿಸಿಕೊಳ್ಳುವುದು ಅವಶ್ಯ. ಆ ರಾಜ್ಯಕ್ಕೆ ನಾವು ಬಾಧ್ಯರಾಗಿ ನೀತಿಯಿಂದ ತುಂಬಲ್ಪಟ್ಟು ದೇವರ ಕನಿಕರ ಹಾಗು ನಿತ್ಯವಾದ ಆದರಣೆಯನ್ನು ಪಡೆದು ದೇವರ ಮಕ್ಕಳೆಂದು ಕರೆಸಿಕೊಂಡವರಾಗಿ ಆತನ ಮುಖವನ್ನು ನೋಡುವುದಕ್ಕೆ ಅಪ್ಪಣೆಹೊಂದಿ ಪರಲೋಕದಲ್ಲಿ ಮಹಾ ಪ್ರತಿಫಲವನ್ನು ಹೊಂದಬೇಕಾದರೆ ನಾವು ಎಂಥವರಾಗಿರಬೇಕು? ಯಾವ ಪ್ರಶ್ನೆಗಳು ಯಾವ ವಿಷಯಗಳು ಯಾವ ಸತ್ಯವೇದದ ಪಾಠಗಳು ಇದಕ್ಕಿಂತಲೂ ನಮಗೆ ಹೆಚ್ಚು ಆಸಕ್ತಿಯನ್ನು ಉಂಟುಮಾಡಲು ಇಲ್ಲವೇ ಬಹು ಪ್ರಯೋಜನಕಾರಿ ಅಧ್ಯಯನವಾಗಲು ಸಾಧ್ಯ. ಆ ಶ್ರೇಷ್ಠ ಬೋಧಕನು ಈ ವಾಕ್ಯಭಾಗವನ್ನು ಒಂದು ವಿಷಯವನ್ನಾಗಿಮಾಡಿ ತನ್ನ

ಮೊದಲನೇ ಬರುವಿಕೆಯ ಸಮಯದಲ್ಲಿ ತನ್ನ ಪ್ರಾಮುಖ್ಯವಾದ ಉಪದೇಶಗಳಲ್ಲಿ ಒಂದನ್ನಾಗಿ ಮಾಡಿ ಅದರಲ್ಲಿ ತನ್ನ ವಾದಸರಣಿಯ ಮುಖ್ಯಾಂಶಗಳು ಬರೆಯಲ್ಪಟ್ಟು ಈ ಸುವಾರ್ತಾ ಯುಗದ ಪರ್ಯಂತರ ತನ್ನ ನಿಜವಾದ ಹಿಂಬಾಲಕರಿಗೆ ಅವುಗಳು ಬುದ್ಧಿಮಾತುಗಳಾಗಿರುವಂತೆ ಮಾಡಿದನು.

ಆತನ ಹಿಂಬಾಲಕರಾಗಿ ನಾವು ಅನುಸರಿಸಬೇಕಾಗಿರುವ ನಮ್ಮ ಕರ್ತನ ಗುಣಗಳು ಒಂದು ವಿಷಯವಾದರೆ; ಆ ಗುಣಗಳನ್ನು ಅಥವಾ ಮನೋಭಾವವನ್ನು ಪಡೆಯುವುದು ಎಂಬುದರ ಅರ್ಥವೆಂದರೆ ದೇವರು ದಯಪಾಲಿಸಲಿರುವ ಆಶೀರ್ವಾದಗಳೆಲ್ಲವನ್ನು ಗಳಿಸಿಕೊಳ್ಳುವುದು; ಹೀಗಿದ್ದರೂ ನಮ್ಮ ಮನಸ್ಸುಗಳಿಗೆ ಈ ಸಂಗತಿಗಳನ್ನು ಬಹು ಭಿನ್ನವಾದ ರೀತಿಯಲ್ಲಿ ಪ್ರಸ್ತುತಪಡಿಸಲು, ಒಬ್ಬ ಛಾಯಾಚಿತ್ರಗಾರನು ಒಂದು ವಸ್ತುವಿನ ಮುಂದಣ  ನೋಟ ಬಲಪಾರ್ಶ್ವದ ನೋಟ ಎಡಪಾರ್ಶ್ವದ ನೋಟ ಹಿಂದಣ ನೋಟ ಹಾಗು ಮೂಲೆಯ ನೋಟಗಳನ್ನು ಸೆರೆಹಿಡಿದು ಅದರ ರಚನೆಯ ಎಲ್ಲಾ ಅಂಶಗಳು ಸ್ಪಷ್ಟವಾಗಿ ಕಾಣುವಂತೆ ಮಾಡುವ ಹಾಗೆ ನಮ್ಮ ಕರ್ತನು ಈ ಒಂದು ಗುಣವನ್ನು ಅಥವಾ ಮನೋಭಾವವನ್ನು ಬೇರೆ ಬೇರೆ ವಿಭಾಗಳನ್ನಾಗಿ ಮಾಡಿ ಅವುಗಳ ಒಂದೊಂದು ಅಂಶಗಳೂ ಪ್ರತ್ಯೇಕವಾಗಿ ತೋರಿಬರುವಂತೆ ಮಾಡಿರುವನು.

## ಮೊದಲನೆಯದಾಗಿ ಅಗತ್ಯವಾದುದು

ನಾವು ವಿವೇಚನಾಪೂರ್ಣರಾಗಿ ಭಾವಿಸುವಂತೆ, ನಮ್ಮ ಕರ್ತನು ಪ್ರಸ್ತುತಪಡಿಸುವ ಮೊದಲ ಗುಣ–ಚಿತ್ರಣವು ಕನಿಷ್ಠವೆಂದರೆ ಕೆಲವು ವಿಧದಲ್ಲಿಯಾದರೂ ಅತಿ ಮುಖ್ಯವಾದುದಾಗಿತ್ತು: ಅದು ಯಾವುದೆಂದರೆ, ದೀನಭಾವ. "ದೀನಮನಸುಳ್ಳವರು (ಆತ್ಮದಲ್ಲಿ ಬಡವರು) ಧನ್ಯರು; ಪರಲೋಕರಾಜ್ಯವು ಅವರದು." ದೀನಭಾವ ಒಂದೇ ಅಗತ್ಯವಿರುವ ಗುಣವೆಂದೂ, ಅದುದರಿಂದ ಯಾರಾರು ದೀನಬಾವವುಳ್ಳವರೋ ಅವರು ಆ ರಾಜ್ಯವನ್ನು ಪಡೆಯುವರೆಂದು ಇದು ಸೂಚಿಸುವುದೆಂದು ನಾವು ತಿಳಿದುಕೊಳ್ಳುವುದಿಲ್ಲ; ಆದರೆ ವಾಸ್ತವವಾಗಿ ಹೇಳುವುದಾದರೆ ಆ ರಾಜ್ಯವನ್ನು ಪಡೆಯಲು ಮುಖ್ಯವಾಗಿರುವ ಮೊದಲ ಪೂರ್ವಭಾವಿ ಷರತ್ತೆಂದರೆ, ಅದು ದೀನಭಾವ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ದೀನತೆಯುಳ್ಳ ಜನರೆಲ್ಲರೂ ಆ ರಾಜ್ಯವನ್ನು ಪಡೆಯಲಾಗುವುದಿಲ್ಲವಾದರೂ ದೀನತೆಯಿಲ್ಲದ ಜನರು ಆ ರಾಜ್ಯವನ್ನು ಪಡೆಯಲಾರರು. ಪರಲೋಕರಾಜ್ಯವು ಅವರದು ಎಂಬುದರ ಅರ್ಥವು ಈ ವರ್ಗದ ಜನರಿಗೇ ಆ ಸ್ಥಾನ ಮಾನ ಹಾಗೂ ಆಶೀರ್ವಾದಗಳನ್ನು ಪಡೆಯಲು ಇರುವ ಷರತ್ತುಗಳನ್ನು ಅಂಗೀಕರಿಸಲು ಸಾಧ್ಯವೆಂಬುದು. ಹೆಮ್ಮೆ ಅಹಂಕಾರ ಸ್ವಪ್ರತಿಷ್ಠೆ ಮುಂತಾದ ಭಿನ್ನವಾದ ಮನೋಭಾವದವರೆಲ್ಲರೂ, ಅವರುಗಳಲ್ಲಿ ಈ ಪ್ರತಿಕೂಲವಾದ ಮನೋಸ್ಥಿತಿಗಳು ಅವರ ಗುಣಗಳ ಮೂಲಾಸ್ತಿವಾರಗಳಂತಿರುವವರೆಗೂ, ಆ ರಾಜ್ಯ ಪಡೆಯುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿರುವುದು.

ಓಹ್! ಕರ್ತನ ಜನರು ಈ ವಿಷಯವನ್ನು ಸ್ಪಷ್ಟವಾದ ಹಾಗೂ ಭಿನ್ನವಾದ ರೀತಿಯಲ್ಲಿ ನೋಡಿದವರಾಗಿ "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ ದೀನರಿಗಾದರೋ ತನ್ನ ಕೃಪೆಯನ್ನು ಅನುಗ್ರಹಿಸುವನು" ಎಂಬುದು ತಮಗೆ ಪ್ರತ್ಯೇಕವಾಗಿ ಹೇಳಿರುವುದೆಂಬುದನ್ನು ತಕ್ಷಣವೇ ಗ್ರಹಿಸಿಕೊಂಡಲ್ಲಿ ಎಷ್ಟೋ ಒಳ್ಳೆಯದು! ಈ ಅಂಶವು ದೇವ ಕುಮಾರನ ಸಾರೂಪ್ಯಕ್ಕೆ ತಮ್ಮನ್ನು ಸರಿಹೊಂದಿಸಿಕೊಳ್ಳಲು ಯತ್ನಿಸುತ್ತಿರುವ ಕರ್ತನವರಲ್ಲಿ ಅಲ್ಪರಾದ ಪ್ರತಿಯೊಬ್ಬನನ್ನೂ ಎಷ್ಟೋ ಎಚ್ಚರವಾಗಿರುವಂತೆ ಮಾಡುವುದು. ಅವರು ಈ ದೀನಭಾವವನ್ನು ತಮ್ಮ ಹೃದಯಗಳಲ್ಲಿ ಅಭಿವೃದ್ಧಿಪಡಿಸಿಕೊಂಡು ಕಾಪಾಡಿಕೊಳ್ಳಲು ಎಷ್ಟು ಆಸಕ್ತರಾಗಿ ಜಾಗ್ರತೆಯುಳ್ಳವರಾಗಿರುವಂತೆ ಅದು ಮಾಡುವುದಲ್ಲದೆ ಅವರ ಅನುದಿನದ ಜೀವಿತದಲ್ಲಿ  ಇದು ಎಷ್ಟೋ ಹೆಚ್ಚುಹೆಚ್ಚಾಗಿ ಇತರರಿಗೆ ಕಾಣಬರುವಂತಾಗುವದು, ಹಾಗೂ ಅದು ವಿಶೇಷವಾಗಿ "ಸಹೋದರರಲ್ಲಿ" ಎಷ್ಟೋ ಆಶೀರ್ವಾದಕರವಾದ ಮತ್ತು ಎಷ್ಟೋ ಒಳ್ಳೆಯ ಪ್ರಭಾವವನ್ನು ಉಂಟುಮಾಡುವುದಾಗಿ ಪರಿಣಮಿಸುವುದು.

ಬೇರಿನಿಂದ ಹೊರಟ ಹಲವು ಕೊಂಬೆಗಳುಳ್ಳ ಮರದಂತೆ ಈ ಮೊದಲನೇ ಮುಖ್ಯವಾದ ಗುಣ ಅಥವಾ ಲಕ್ಷಣದಿಂದ ಆತ್ಮನ ಅನೇಕ ಕೃಪಾಭೂಷಿತಗುಣಗಳು ಬೆಳೆಯುವುದು, ಇದನ್ನು ಕರ್ತನು ಭಾಗ್ಯಕರವಾದುದೆಂದು ಅಂದರೆ ದೇವರಿಂದ ಮಾನ್ಯವಾದುದೆಂದು ಸಾರಿ ಹೇಳಿದ್ದಾನೆ. ನಮ್ಮ ಕರ್ತನ ಈ ವಿಧವಾದ ಉಪದೇಶವು ಮನುಷ್ಯರ ಎಲ್ಲಾ ಉಪದೇಶಗಳಿಗಿಂತಲೂ ಎಷ್ಟೋ ಭಿನ್ನವಾದುದು! ಇದಕ್ಕೆ ಬದಲಾಗಿ ಪ್ರಾಪಂಚಿಕವಾದ ಜ್ಞಾನವು ಹೇಳುವುದು: ನಿನ್ನ ತಲೆಯನ್ನು ಮೇಲೆತ್ತಿಕೊಂಡಿರು, ಇತರರು ನಿನ್ನ ವಿಷಯವಾಗಿ ಒಳ್ಳೆಯದನ್ನು ಯೋಚಿಸಬೇಕಾದರೆ, ನಿನ್ನ ಬಗ್ಗೆ ನೀನು ಚೆನ್ನಾಗಿ ಯೋಚಿಸು; ಕುಗ್ಗಿದ ಮನೋಭಾವಕ್ಕೆ ಬದಲಾಗಿ ಉತ್ಸಾಹವುಳ್ಳವನಾಗಿರು, ದೈನ್ಯವಾದ ನಡತೆಗೆ ಬದಲಾಗಿ ಸ್ವಲ್ಪ ಅಹಂಭಾವವುಳ್ಳವನಾಗಿರು, ಅದು ಹಲವು ವಿಧದಲ್ಲಿ ಹೆಚ್ಚು ಪ್ರಭಾವವುಳ್ಳದ್ದಾಗಿರುವುದು. ಯಾಕೆಂದರೆ ನೀನು ನಿನ್ನ ವಿಷಯವಾಗಿ ಉನ್ನತವಾಗಿ ಯೋಚಿಸುವುದಕ್ಕಿಂತಲೂ ಹೆಚ್ಚು ಉನ್ನತವಾಗಿ ಬೇರೆ ಯಾರೂ ಯೋಚಿಸುವುದಿಲ್ಲ. ನೀನು ಬಯಸುವುದಕ್ಕಿಂತಲೂ ಹೆಚ್ಚಿನ ಪ್ರಸಂಶೆಯನ್ನು ಇತರರು ನೀಡುವುದಿಲ್ಲ; ಆದುದರಿಂದ  ನಿನ್ನ ಬಗ್ಗೆ ನೀನು ಉನ್ನತವಾಗಿ ಯೋಚಿಸು, ಅಧಿಕವಾದುದನ್ನು ಕೇಳಿಕೋ ಗರ್ವದೃಷ್ಟಿಯುಳ್ಳವನಾಗಿಯೂ ಸ್ವಪ್ರತಿಷ್ಠೆಯ ನೋಟವುಳ್ಳವನಾಗಿಯೂ ಇದ್ದು ತಲೆಯನ್ನು ಎತ್ತಿದವನಾಗಿರು.

ಈಗಿನ ಕಾಲದಲ್ಲಿನ ಪ್ರಾಪಂಚಿಕ ಸಂಗತಿಗಳ ಸಫಲತೆಯ ಬಗ್ಗೆ ಹೇಳಬೇಕಾದರೆ, ಪ್ರಾಪಂಚಿಕವಾದ ಜ್ಞಾನದಲ್ಲಿ ಪ್ರಾಪಂಚಿಕವಾದ ಆಲೋಚನೆಗಳಿರುವುದೆಂಬುದರಲ್ಲಿ ಸಂಶಯವಿಲ್ಲ; ಪಾಪಂಚಿಕವಾದ ಸಲಹೆಗಳಲ್ಲಿ ಕೆಲವು ಸತ್ಯಾಂಶಗಳಿರುವುದೆಂಬುದರಲ್ಲಿಯೂ ಸಂಶಯವಿಲ್ಲ. ಆದರೆ ಇತರ ಸಂಗತಿಗಳಲ್ಲಿ ಇದ್ದಂತೆಯೇ ಇಲ್ಲಿಯೂ ಭೂಮಿಗಿಂತಲೂ ಆಕಾಶವು ಉನ್ನತವಾಗಿರುವಂತೆ ತನ್ನ ಮಾರ್ಗವು ಮನುಷ್ಯರ ಮಾರ್ಗಗಳಿಗಿಂತ ಉನ್ನತವಾದುದೆಂದು ಕರ್ತನು ನಮಗೆ ತೋರಿಸಿದ್ದಾನೆ. ತನ್ನನ್ನು

ತಗ್ಗಿಸಿಕೊಳ್ಳುವವನು ಸೂಕ್ತ ಕಾಲದಲ್ಲಿ ಹೆಚ್ಚಿಸಲ್ಪಡುವನೆಂದೂ ತನ್ನನ್ನು ಹೆಚ್ಚಿಸಿಕೊಳ್ಳುವವನು ಸೂಕ್ತ ಕಾಲದಲ್ಲಿ ತಗ್ಗಿಸಲ್ಪಡುವನೆಂಬುದನ್ನು ದೃಢವಾಗಿ ಹೇಳಿದ್ದಾನೆ. (ಮತ್ತಾಯ 23:12) ಒಬ್ಬ ದೀನನೂ ವಿಧೇಯನೂ ಆಗಿದ್ದವನು ಈಗ ದೇವರ ಬಲಭಾಗಕ್ಕೆ ಏರಿಸಲ್ಪಡುವನೆಂಬುದಕ್ಕೆ ನಮ್ಮ ಪ್ರಿಯ ವಿಮೋಚಕನು ನಿದರ್ಶನವಾಗಿರುವನೆಂಬದು ಶಾಸ್ತ್ರವಚನದಲ್ಲಿ ತೋರಿಸಲಾಗಿರುವುದು. ಮತ್ತು ಆ ಮಹಾ ವಿರೋಧಿಯಾದ ಸೈತಾನನು ಇದಕ್ಕೆ ವಿರುದ್ಧವಾದ ದಾರಿಯಲ್ಲಿ ನಡೆದು ತನ್ನನ್ನು ಹೆಚ್ಚಿಸಿಕೊಳ್ಳಲು ಬಯಸಿದವನಾಗಿ ಈಗ ಕೆಳಕ್ಕೆ ದೊಬ್ಬಲ್ಪಟ್ಟವನಾಗಿದ್ದು ಅಂತ್ಯದಲ್ಲಿ ನಾಶಮಾಡಲ್ಪಡುವನೆಂಬುದಕ್ಕೆ ಸಹ ನಮ್ಮ ಗಮನವನ್ನು ಸೆಳೆಯಲಾಗಿರುವದು. – ಫಿಲಿಪ್ಪಿ 2:9; ಇಬ್ರಿಯ 2:14

ಆತ್ಮದಲ್ಲಿ ಬಡವರಾಗಿರುವುದರ ಮತ್ತು ಜೇಬಿನಲ್ಲಿರುವ (ಹಣದ) ವಿಷಯದಲ್ಲಿ ಅಥವಾ ಬುದ್ಧಿಚಾತುರ್ಯ ಸಂಬಂಧವಾದ ವರಗಳ ಹಾಗೂ ಸಾಧನೆಗಳ ಸಂಬಂಧದಲ್ಲಿ ಬಡವರಾಗಿರುವುದರ ನಡುವಿನ ಸೂಕ್ಷ್ಮವಾದ ಒಂದು ವ್ಯತ್ಯಾಸವನ್ನು ಗಮನಿಸಲೇಬೇಕು. ಪ್ರಾಪಂಚಿಕವಾದ ಸಂಗತಿಗಳಲ್ಲಿ ಬಡವರಾಗಿದ್ದರೂ ಮನೋಭಾವದಲ್ಲಿ ಹೆಮ್ಮೆಯುಳ್ಳವರನ್ನು ನಾವೆಲ್ಲರೂ ನೋಡಿರುತ್ತೇವೆ. ಗಮನಿಸಬೇಕಾದ ವಿಷಯವೆಂದರೆ, ನಮ್ಮಲ್ಲಿರುವ ಹಣಕಾಸಿನ ಹಾಗೂ ಬೌದ್ಧಿಕ ವರಗಳು ಮತ್ತು ಸ್ಥಿತಿಗಳು ಏನೇ ಇದ್ದರೂ ದೇವರ ದೃಷ್ಟಿಯಲ್ಲಿ ಅಂಗೀಕಾರವಾಗುವ ಸಂಗತಿಯೆಂದರೆ ಅದು ದೀನತೆಯ ಮನೋಭಾವ. ಇಂಥ ಮನೋಸ್ಥಿತಿಯು ಮೇಲಿನಿಂದ ಬರುವ ಜ್ಞಾನವನ್ನು ಪಡೆಯಲಿರುವವರಿಗೆ ಅವಶ್ಯಕವಾದುದು. ಅವರು ತಮ್ಮಲ್ಲಿರುವ ನ್ಯೂನ್ಯತೆಗಳ ಹಾಗೂ ಜ್ಞಾನದ ಕೊರತೆಗಳ ವಿಷಯವಾಗಿ ದೀನವಾದ ಗ್ರಹಿಕೆಯುಳ್ಳವರಾಗಿರಬೇಕು ಇಲ್ಲವಾದಲ್ಲಿ ಈಗಿನ ಕಾಲದಲ್ಲಿ ದೇವರು ದಯಪಾಲಿಸುವ ಜ್ಞಾನವನ್ನು ಉಚಿತವಾಗಿಯೂ ಮನಃಪೂರ್ವಕವಾಗಿಯೂ ಹೊಂದಲು ಸಾಧ್ಯವಾಗುವುದಿಲ್ಲ. ಕೇವಲ ಇವರೇ ಅದನ್ನು ಸ್ವೀಕರಿಸುವ ಮನೋಭಾವವುಳ್ಳವರಾಗಿರುವರು. ಈ ದೀನಮನಸ್ಸೇ ಸ್ವಸ್ಥಚಿತ್ತಕ್ಕೆ ಅವಶ್ಯವಾದ ಮೂಲಾಧಾರವೆಂಬುದು ಸಹ ಕಾಣಬರುತ್ತದೆ. ಏಕೆಂದರೆ ಮೊದಲು ತಾನು ದೀನ ಮನೋಭಾವವನ್ನು ಪಡೆಯದ ಹೊರತು ಯಾರು ನ್ಯಾಯ ವಿವೇಚನೆ ನಿಷ್ಪಕ್ಷಪಾತಗಳಿಂದ ಕೂಡಿದವನಾಗಿ ಯೋಚಿಸಲು ಸೂಕ್ತವಾದ ಮನೋಸ್ಥಿತಿಯಲ್ಲಿರುವನು? ಹೀಗಿರುವುದರಿಂದ ಕ್ರಿಸ್ತನ ಮನಸ್ಸು ಅಥವಾ ಮನೋಭಾವಕ್ಕೆ ದೀನತೆಯು ಪ್ರಾಥಮಿಕವಾದ ಅಂಶವೆಂಬುದನ್ನು ನಾವು ಒಪ್ಪಿಕೊಳ್ಳಬೇಕು.

## ಸಾಂತ್ವನವು ಸಹಾನುಭೂತಿಯ ಪ್ರತಿಫಲ

ನಮ್ಮ ಕರ್ತನು ತಿಳಿಸಿರುವ ಎರಡನೆಯ ಧನ್ಯತೆ ಅಥವಾ ಆಶೀರ್ವಾದಕರ ಸ್ಥಿತಿಯು ಮೊದಲನೆಯದರ ಸನಿಹದಲ್ಲಿ ಸಂಬಂಧಿಸಿದುದಾಗಿ ನಿಲ್ಲುವುದು. "ದುಃಖಪಡುವವರು ಧನ್ಯರು." ದುಃಖಿಸುವುದು ಸ್ವತಃ ಒಂದು ದೈವಾನುಗ್ರಹವಲ್ಲ; ಆದರೆ ಅದು ಕರ್ತನ ದೃಷ್ಟಿಯಲ್ಲಿ ಅಂಗೀಕಾರವಾಗುವ ಒಂದು ಮನೋಭಾವದ ಸಂಕೇತವಾಗಿದೆ. ಇಲ್ಲವೇ ಸಾಂತ್ವನ ಸಂತೋಷಗಳಿಲ್ಲದ ದುಃಖಿಸುವ ಮನೋಭಾವವು ಕ್ರಿಸ್ತೀಯ ಮನೋಭಾವವಾಗಿರುವುದೆಂದು ನಾವು ಯೋಚಿಸಬೇಕಾದುದಿಲ್ಲ. ಪರಲೋಕದಲ್ಲಿರುವ ನಮ್ಮ ತಂದೆ ಹಾಗೂ ಪರಿಶುದ್ಧ ದೇವದೂತರು ಸತತವಾಗಿ ದುಃಖಿಸುವವರೆಂದು ನಾವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ; ದುಃಖಿಸುವಿಕೆಯು ಸ್ವತಃ ತನ್ನಲ್ಲಿಯೇ ಯಾವುದಾದರೂ ಗುಣಮಹತ್ವವನ್ನು ಹೊಂದಿದ್ದಲ್ಲಿ ಅವರು ಖಂಡಿತವಾಗಿ ದುಃಖಿಸುವವರಾಗಿರುತ್ತಿದ್ದರು. ವಾಸ್ತವದಲ್ಲಿ ಇದರ ಅಭಿಪ್ರಾಯವೆಂದರೆ, ಈಗ ದುಃಖಿಸುವ ನೀವು ಧನ್ಯರು. ಅವರಿಗೆ ಈಗಿನ ಪ್ರಾಪಂಚಿಕ ಸ್ಥಿತಿಗಳು ಪೂರ್ಣವಾಗಿ ತೃಪ್ತಿಕರವಾಗಿ ಹಾಗೂ ಆನಂದಕರವಾಗಿರುವುದಿಲ್ಲ. ಒಟ್ಟು ಮಾನವ ಕುಲದಲ್ಲಿ ಸಾಗುತ್ತಿರುವ ಪಾಪ ಅಸ್ವಸ್ಥತೆ ನೋವು ಬಾಧೆಗಳೆಂಬ ಕಷ್ಟಪರಿಶೋಧನೆಗಳನ್ನು ಅವರು ಕಾಣದಂತೆ ಇರುವವರಲ್ಲ. ಈಗಿನ ಕಾಲದ ಪರಿಸ್ಥಿತಿಯಲ್ಲಿ ಕನಿಕರಸಹಾನುಭೂತಿಯುಳ್ಳ ಹೃದಯವನ್ನು ಪಡೆದಿರುವವರು ಧನ್ಯರು; ಅವರಿಗೆ ಇಲ್ಲಿನ ಸಂಗತಿಗಳು ತೃಪ್ತಿಕರವಾಗಿರುವುದಿಲ್ಲ; ಏಕೆಂದರೆ ದೇವರು ಏರ್ಪಡಿಸಿರುವ ಉತ್ತಮ ಕಾಲಗಳು ಬರುತ್ತಿರುವುದು; ಅಲ್ಲಿ ಉತ್ತಮವಾದ ವ್ಯವಸ್ಥೆಯ ಕ್ರಮಗಳು ಸ್ಥಾಪಿತವಾಗುವುದು. ಹಾಗೂ ಪ್ರಸ್ತುತ ಪರಿಸ್ಥಿತಿಗಳ ಬಗ್ಗೆ ಅವರಿಗಿರುವ ಅತೃಪ್ತಿಯು ಅವರನ್ನು ದೇವರ ಯೋಜನೆಯು ಸಿದ್ಧಪಡಿಸುತ್ತಿರುವ ಆ ಉತ್ತಮ ಸಂಗತಿಗಳ ಬಗ್ಗೆ ನಿಕಟವಾದ ಸಹಾನುಭೂತಿಯುಳ್ಳವರಾಗಿ ಅವುಗಳೊಂದಿಗೆ ಜೊತೆಗೂಡಲು ಅಧಿಕವಾಗಿ ಸಾಗುವಂತೆ ಮಾಡುತ್ತಿರುವುದು. ದೇವರ ರಾಜ್ಯವು ಬಂದು ಆತನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರುವಾಗ ದುಃಖ ವ್ಯಾಕುಲ ಕಣ್ಣೀರುಗಳಿಗೆ ಕಾರಣವಾದವುಗಳು ತೆಗೆದುಹಾಕಲ್ಪಡುವವು. ಅದು ಈ ವರ್ಗದವರು ಸಂತೈಸಲ್ಪಟ್ಟು ತೃಪ್ತರಾಗುವ ಕಾಲವಾಗಿರುವುದು.

ವಾಸ್ತವದಲ್ಲಿ, ಈಗಿನ ಕಾಲದಲ್ಲಿಯೂ ದೇವರ ವಾಕ್ಯಗಳಲ್ಲಿನ ಉತ್ಕೃಷ್ಟವಾದ ಹಾಗೂ ಅಮೂಲ್ಯವಾದ ವಾಗ್ದಾನಗಳ ಮೇಲಿನ ನಂಬಿಕೆಯ ಮೂಲಕ ಕರ್ತನ ಜನರಿಗೆ ಒಂದು ಒಳ್ಳೆಯ ಪ್ರಮಾಣದಲ್ಲಿ ಆದರಣೆಯು ದೊರಕಿರುವದು. ಈಗಿನ ಕಾಲದಲ್ಲಿ ನಡೆಯುತ್ತಿರುವ ತಪ್ಪುಗಳು ಅಕ್ರಮ ಅನ್ಯಾಯಗಳು ಹಾಗು ಪಡುತ್ತಿರುವ ಬಾಧೆಸಂಕಟಗಳನ್ನು ಗ್ರಹಿಸಶಕ್ತರಾಗಿರುವರೆಂಬ ಅಂಶವೇ ಈ ವರ್ಗದವರಲ್ಲಿ ದೇವರ ವಾಗ್ದಾನಗಳಿಗೆ ಆಕರ್ಷಿತರಾಗುವ ಹೃದಯಸ್ಥಿತಿಯನ್ನು ಉಂಟು ಮಾಡಿರುವದು. ಆದರೆ ನರಳುತ್ತಿರುವ ಸೃಷ್ಟಿಜೀವಿಗಳ ಬಗ್ಗೆ ಸಹಾನುಭೂತಿಯಿಲ್ಲದ ಹೃದಯವಿರುವ ಇತರರಿಗೆ ಸುವಾರ್ತೆಯ ಮೂಲಕವಾಗಿ ನಮ್ಮ ಮುಂದೆ ಇಟ್ಟಿರುವ ನಿರೀಕ್ಷೆಯ ವಿಷಯದಲ್ಲಿ ಅಷ್ಟು ಗಾಢವಾಗಿ ಮನವರಿಕೆಮಾಡಿಕೊಳ್ಳುವ ಸಾಮರ್ಥ್ಯ–ವಿರುವುದಿಲ್ಲ. ಆದಕಾರಣ ಕರ್ತನ ವಾಕ್ಯಗಳ ಬಳಿಗೆ ಸೆಳೆಯಲ್ಪಡುವಂಥವರು ಹೃದಯಗಳಿಗೆ ಸಮಾಧಾನವನ್ನು ನುಡಿಯುವ ಈ ವಾಕ್ಯಗಳ ಮೂಲಕ ಸಾಂತ್ವನವನ್ನು ಪಡೆದು ಆಂತರ್ಯದಲ್ಲಿ ಆನಂದವುಳ್ಳವರಾಗಿರುವ ಸಾಮರ್ಥ್ಯ ಪಡೆದಿರುವುದು ಸಹಜ ನಿಯಮ. ಅಲ್ಪ ಸಹಾನುಭೂತಿ–ಯುಳ್ಳವರಿಗೆ ಈಗಿನ ಸ್ಥಿತಿಯಲ್ಲಿ ಇದನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗದು. ಸಹಾನುಭೂತಿಯುಳ್ಳವರು ಧನ್ಯರು!

ಈ ಕೃಪಾಭೂಷಿತಗುಣಗಳಲ್ಲಿ ಮೊದಲನೆಯದಾದ ದೀನ ಮನಸ್ಸನ್ನು ನಮ್ಮಲ್ಲಿ ಬೆಳೆಸಿಕೊಂಡು ಮತ್ತು ಇದನ್ನು ಹೆಚ್ಚು ಹೆಚ್ಚಾಗಿ ಅಭ್ಯಾಸಿಸುವುದರ ಮೂಲಕ ಅವಶ್ಯಕವಾದ ಮೊದಲ ಗುಣವನ್ನು ವೃದ್ಧಿಪಡಿಸಿಕೊಳ್ಳುವ ಹಾಗೆಯೇ ನಾವು ಎರಡನೆಯ ಕೃಪಾಭೂಷಿತಗುಣವಾಗಿರುವ ಸಹಾನುಭೂತಿ/ಅನುಕಂಪವುಳ್ಳ ಮನೋಭಾವವನ್ನು ಸಹ ಬೆಳೆಸಿಕೊಳ್ಳಬಹುದು. ಇದನ್ನು ಮಾಡಲು ನಾವು ಇತರರ ವಿಷಯವಾಗಿ ಅಂದರೆ ಇತರರಲ್ಲಿರುವ ಆಸಕ್ತಿ–ಅವಶ್ಯಕತೆಗಳು ಅವರ ಪರಿಶೋಧನೆಗಳು ಅವರಿಗಿರುವ ಸಂಕಷ್ಟಗಳು ಇವುಗಳ ಬಗ್ಗೆ ಪದೇ ಪದೇ ಯೋಚಿಸುವವ–ರಾಗಿರಬೇಕು. ಇವೆಲ್ಲವುಗಳು ನಮ್ಮಲ್ಲಿಯೂ ಇರುವುದೆಂಬಂತೆ ಮನಸ್ಸಿಗೆ ತಂದುಕೊಂಡವರಾಗಿ ಇವುಗಳ ವಿಷಯದಲ್ಲಿ ಇತರರಿಗೆ ನಮ್ಮ ಸಹಾಯ ಹಸ್ತವನ್ನು ನೀಡಲು ಯತ್ನಿಸುವವರಾಗಬೇಕು. ಮತ್ತು "...ಸಮಯವಿರಲಾಗಿ ಎಲ್ಲರಿಗೆ ಒಳ್ಳೆಯದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ." – ಗಲಾತ್ಯ 6:10

## ಅನ್ಯಜನಗಳು ಬಾಧ್ಯರಾಗುವದು ಹೇಗೆ?

ನಮ್ಮ ಕರ್ತನು ಧನ್ಯರೆಂದು ಪ್ರಕಟಿಸಿರುವ ಮೂರನೇ ಕೃಪಾಭೂಷಿತಗುಣವು ಶಾಂತತೆ, (ಸಾತ್ವಿಕತ್ವ) ಅಥವಾ ನಾವು ಅದನ್ನು ಹೇಳಬೇಕಾದರೆ, ನಯವಿನಯ. ವೆಬ್‌ಸ್ಟರ್ ನಿಘಂಟಿನಲ್ಲಿ ಶಾಂತತೆಯನ್ನು "ದೇವರ ಚಿತ್ತಕ್ಕೆ ಅಧೀನವಾಗುವುದು; ನೈತಿಕ ಹಾಗು ಧಾರ್ಮಿಕ ಉದ್ದೇಶವುಳ್ಳ ತಾಳ್ಮೆ ಮತ್ತು ನಯವಿನಯ" ಎಂದು ಅರ್ಥೈಸಲಾಗಿದೆ. ನಯವಿನಯವುಳ್ಳ ಈ ತಾಳ್ಮೆಯಿಂದ ದೇವರ ಚಿತ್ತಕ್ಕೆ ಅಧೀನವಾಗುವಿಕೆಗೆ ಹಾಗೂ ಕೇವಲ ಸ್ವಾರ್ಥಪ್ರೇರಿವಾದ ಬಯಕೆಗಳ ಈಡೇರಿಕೆಗಾಗಿ ಪದೇ ಪದೇ ತೋರಿಸಲಾಗುವ ಸಾಧಾರಣವಾಗಿರುವ ನಯವಿನಯ ಮತ್ತು ತಾಳ್ಮೆಗಳಿಗೆ ಬಹು ವ್ಯತ್ಯಾಸವಿರುವುದು ಕಾಣಬರುತ್ತದೆ. ದೇವರ ಚಿತ್ತಕ್ಕೆ ತಾಳ್ಮೆಯಿಂದ ಅಧೀನವಾಗುವುದು ಆ ಪಟ್ಟಿಯಲ್ಲಿರುವ ಮೊದಲನೇ ಕೃಪಾಭೂಷಣಗುಣವಾದ ದೀನಮನಸ್ಸನ್ನು ಹೊಂದದೇ ಇರುವವರಿಗೆ ಅಸಾಧ್ಯ: ಹೆಮ್ಮೆ ಮತ್ತು ಸ್ವಾರ್ಥಚಿತ್ತರಿಗೆ ತಮ್ಮನ್ನು ದೈವಿಕ ಸನ್ನಿವೇಶಗಳಿಗೆ ಒಳಪಡಿಸಿಕೊಳ್ಳುವುದು ಕಷ್ಟಕರವಾಗಿ ಕಂಡುಬರುತ್ತದೆ. ಸ್ವಾರ್ಥವು ಮೇಲೆದ್ದು ಅವರ ನಿರ್ಣಯ/ಅಭಿಪ್ರಾಯಗಳನ್ನು ತಿರುಚಿಹಾಕಿ ಅವರ ಮನಃಸಾಕ್ಷಿಯನ್ನು ತಪ್ಪುದಾರಿಗೆ ಎಳೆದು ಅವರು ದೈವಿಕ ಏರ್ಪಾಟುಗಳಲ್ಲಿ ಪೂರ್ಣವಾದ ಭರವಸೆಯನ್ನಿಡುವುದು ಅಸಾಧ್ಯವಾಗುವಂತೆ ಮಾಡುವುದು. ಆದರೂ ಅವರು ತಮ್ಮ ಕೈಗಳನ್ನು ಚಾಚಿ ದೇವಮಂಜೂಷವನ್ನು ಅಲುಗಾಡದಂತೆ ಹಿಡಿದುನಿಲ್ಲಿಸಲು ಯೋಚಿಸಬಯಸುವರು.

ಇದಲ್ಲದೆ ಕೇವಲ ವಿಶಾಲವಾದ ಸಹಾನುಭೂತಿಯುಳ್ಳವರೆಂಬ ಅಭಿಪ್ರಾಯದಲ್ಲಿ ದುಃಖಪಡುವವರೂ ಹಾಗೂ ಭಾಗ್ಯಕರವಾದ ದೇವರ ವಾಗ್ದಾನಗಳ ಮೂಲಕವಾಗಿ ಸಂತೈಸಿಕೊಂಡವರಿಗೇ ತಾಳ್ಮೆಯಿಂದ (ದೇವರ ಚಿತ್ತಕ್ಕೆ) ಅಧೀನರಾಗುವುದನ್ನು ತಮ್ಮಲ್ಲಿ ಬೆಳೆಸಿಕೊಳ್ಳಲು ಸಾಧ್ಯ. ಇವುಗಳ ಮೂಲಕವಾಗಿಯೇ ಪವಿತ್ರಾತ್ಮನು ತನ್ನ ಜನರನ್ನು ಸಂತೈಸುವನು. ನಮ್ಮ ಕಾಲದಲ್ಲಿನ ಕೆಟ್ಟತನಗಳ ವಿಷಯವಾಗಿಯೂ ಹಾಗು ಪ್ರಸ್ತುತದಲ್ಲಿ ದೇವರು ಇವುಗಳನ್ನು ಒಂದು ವಿವೇಕವುಳ್ಳ ಉದ್ದೇಶಕ್ಕಾಗಿಯೇ ಬಿಟ್ಟಿರುವನೆಂದು ಅರಿತುಕೊಂಡಿರುವವರು ನರಳುತ್ತಿರುವ ಈ ಜಗತ್ತಿನ ವಿಷಯವಾಗಿ ಸಹಾನುಭೂತಿ–ಯುಳ್ಳವರಾಗಿರುವುದು ಮಾತ್ರವಲ್ಲದೆ ಈ ಸಹಾನುಭೂತಿ ಹಾಗು ಸಂತೈಸುವಿಕೆಯ ಪ್ರತಿಫಲವಾಗಿ ಅವರನ್ನು ತಾಳ್ಮೆಯುಳ್ಳವರಾಗಿ ದೇವರ ಚಿತ್ತಕ್ಕೆ ಅಧೀನರಾಗುವ ಪ್ರವೃತ್ತಿಯುಳ್ಳವರಾಗುವಂತೆ ಮಾಡುವುದು. ದೇವರನ್ನು ಪ್ರೀತಿಸುವವರ ಹಿತಕ್ಕಾಗಿ ಅವರಿಗೆ ಸಂಭವಿಸುವುದೆಲ್ಲವೂ ಅನುಕೂಲಕರವಾಗುವುದೆಂಬುದನ್ನು ನೆನಸಿಕೊಳ್ಳುವವರಾಗಿ ತಮಗೆ ಎಂಥಾ ಸಂಗತಿಗಳು ಸಂಭವಿಸಿದರೂ ಅದನ್ನು ದೇವರ ಚಿತ್ತವೆಂದು ತಿಳಿದುಕೊಳ್ಳಲು ಅವರು ಸಿದ್ಧರಿದ್ದು ಮುಂದಾಗಿ ಮಾಡಿರುವ (ದೇವರ) ಆ ಏರ್ಪಾಟುಗಳ ಮೂಲಕವಾಗಿ ತಮಗೆ ದೊರೆಯುವ ಪಾಠವನ್ನು ಕಲಿತುಕೊಳ್ಳಲು ಸಹ ಸಿದ್ಧರಿರುವರು. ಈ ಆಶೀರ್ವಾದಕರವಾದ ಸಂಗತಿಗಳು ಅವರಿಗೂ ಮತ್ತು ಇತರರಿಗೂ ಮುಂದಿನಕಾಲದ ನಿತ್ಯವಾದ ಆನಂದಗಳನ್ನು ಅನುಭವಿಸಲು ಸಿದ್ಧರಾಗುವುದಕ್ಕೆ ಅನುಕೂಲಿಸುವುದು.

ನಮ್ಮ ಸಂಪರ್ಕಕ್ಕೆ ಬರುವ ಇತರರಿಂದ ಗಮನಿಸಲ್ಪಡುವ ದೇವರ ಚಿತ್ತಕ್ಕೆ ತಾಳ್ಮೆಯಿಂದ ಅಧೀನವಾಗುವ ಈ ಮೂರನೆಯ ಕೃಪಾಭೂಷಿತಗುಣವನ್ನು ಹೃದಯದ ಆಂತರ್ಯದಲ್ಲಿರುವ ಎರಡನೆಯ ಕೃಪಾಭೂಷಿತಗುಣದ ಬಹಿರಂಗವಾದ ತೋರ್ಪಡುವಿಕೆಯೆಂದು ಹೇಳಬಹುದು. ನಮ್ಮ ಸಹಜೀವಿಗಳಿಂದ ಇದು ಬಹಿರಂಗವಾಗಿ ಗ್ರಹಿಸಲಾಗದಿರಬಹುದು. ಕ್ರಿಸ್ತನಲ್ಲಿರುವವರ ಜೀವಿತದಲ್ಲಿ ನಡೆಯುವ ಸಂಗತಿಗಳೆಲ್ಲವೂ ದೇವರ ಮೇಲ್ವಿಚಾರಣೆಯಲ್ಲಿ ಸಂಭವಿಸುವುದೆಂಬುದನ್ನು ಗ್ರಹಿಸಿದವರಾದ ನಮ್ಮಲ್ಲಿ ಸಹಾನುಭೂತಿಯೆಂಬ ಕೃಪಾಭೂಷಿತಗುಣವು ಸ್ವತಃ ನಮ್ಮ ಜೀವಿತದ ಎಲ್ಲಾ ಹಾಗುಹೋಗುಗಳಲ್ಲಿ ನಾವು ತಾಳ್ಮೆಯಿಂದ (ದೇವರ ಚಿತ್ತಕ್ಕೆ) ಅಧೀನವಾಗುವದರ ಮೂಲಕವಾಗಿ ವ್ಯಕ್ತವಾಗುವುದು. ಮತ್ತು ದೇವರ ಏರ್ಪಾಡಿನ ಮೂಲಕವಾಗಿ ಒದಗುವ ನಮ್ಮ ಜೀವಿತದ ಸನ್ನಿವೇಶ ಹಾಗು ಸಂಗತಿಗಳಲ್ಲಿ ನಾವು ತೋರಿಸುವ ತಾಳ್ಮೆಯು ಸಹಜವಾಗಿ ಮತ್ತು ಸೂಕ್ತವಾಗಿ ನಾವು ಸಹ ಇತರರ ಬಗ್ಗೆ ಅಂದರೆ ಅವರ ಬಲಹೀನತೆ ವೈಫಲ್ಯ ಹಾಗು ಅಜ್ಞಾನದ ವಿಷಯದಲ್ಲಿ ತಾಳ್ಮೆಯುಳ್ಳವರಾಗುವಂತೆ ನಮ್ಮನ್ನು ನಡೆಸುವದು ಮತ್ತು ನಮಗೆ ಅವಕಾಶವಿದ್ದಲ್ಲಿ ನಾವು ಅವರಿಗೆ ಸಹಾಯಕರಾಗುವಂತೆ ನಮ್ಮನ್ನು ಸೂಕ್ತ ರೀತಿಯಲ್ಲಿ ನಡೆಸುವುದು.

ದೇವರ ಚಿತ್ತಕ್ಕೆ ತಾಳ್ಮೆಯಿಂದ ಅಧೀನರಾಗುವ ಈ ಶಾಂತರು (ಸಾತ್ವಿಕರು) ಭೂಮಿಗೆ ಬಾಧ್ಯರಾಗುವರು. ದೇವರ ಚಿತ್ತಕ್ಕೆ ತಾಳ್ಮೆಯಿಂದ ಅಧೀನರಾಗುವರು ಈಗಿನ ಕಾಲದಲ್ಲಿ ಭೂಮಿಗೆ ಬಾಧ್ಯರಾಗುವರೆಂದು ಕರ್ತನು ಹೇಳಿದುದರ ಅರ್ಥವಲ್ಲ, ಇಲ್ಲವೆ ಇದು ನಿಜವೂ ಅಲ್ಲ. ಇದಕ್ಕೆ ಪ್ರತಿಯಾಗಿ, ಅಹಂಕಾರಿಗಳು ತಾಳ್ಮೆಯಿಲ್ಲದವರು ದುರಾಕ್ರಮಿಗಳು ಸ್ವಾರ್ಥಚಿತ್ತರು ಅಧಿಕಾರ ಪ್ರಭಾವ ಮತ್ತು ಧನದ ವಿಷಯದಲ್ಲಿ ಈಗ ಉತ್ತಮವಾದುವನ್ನು ದೋಚಿಕೊಳ್ಳುವುದರಲ್ಲಿ ಸಫಲರಾಗುವರು, ಅಲ್ಲದೆ ದೇವರ ಚಿತ್ತಕ್ಕೆ ತಾಳ್ಮೆಯಿಂದ

ಆಧೀನರಾಗುವವರಿಗೆ ಇದಕ್ಕೆ ಅಲ್ಪವಾದ ಅವಕಾಶವಿರುವದು. ಆದುದರಿಂದ ಇತರ ಗುಣಗಳಿಗಿರುವಂತೆ ಈ ಕೃಪಾಭೂಷಿತ–ಗುಣಕ್ಕೆ ಪ್ರತಿಫಲ ದೊರೆಯುವುದು ಮುಂದಿನ ಕಾಲದಲ್ಲಿಯೇ. ದೇವರ ನಡೆಸುವಿಕೆಯನ್ನು ಅನುಸರಿಸುವವರಾದ ಇವರು ದೇವರಿಗೆ ಬಾಧ್ಯರೂ ಕ್ರಿಸ್ತನೊಂದಿಗೆ ಸಹ ಬಾಧ್ಯರೂ ಆಗುವರು; ಮತ್ತು ಭೂಮಿಯು ಅವರ ಶ್ರೇಷ್ಠವಾದ ಬಾಧ್ಯತೆಯ ಒಂದು ಭಾಗವಾಗಿರುವುದು. ಮತ್ತು ದೈವಿಕ ಏರ್ಪಾಟಿನ ಮೇರೆಗೆ ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಅಂತ್ಯದಲ್ಲಿ ಉಳಿಯುವ ಮಾನವ ಕುಲದವರಿಗೆ ಅಂದರೆ ಆ ಸಾವಿರ ವರುಷದಲ್ಲಿ ನಡೆಯುವ ಪರೀಕ್ಷಾಕಾಲದಲ್ಲಿ ನಿತ್ಯ ಜೀವಕ್ಕೆ ಯೋಗ್ಯರೆಂದು ಪ್ರಮಾಣಿಸಿ ತೋರಿಸಿದವರಿಗೆ ಅವರು (ಈ ಶಾಂತರು) ಭೂಲೋಕದ ಈ ಬಾಧ್ಯತೆಯನ್ನು ದಯಪಾಲಿಸುವರು.

ಆದರೂ ಒಂದು ಅರ್ಥದಲ್ಲಿ ಕರ್ತನ ಜನರು ಈಗ ಸಂತೈಸಲ್ಪಡುತ್ತಿರುವರು; ಹಾಗೆಯೇ ಸಹ ಒಂದು ಅರ್ಥದಲ್ಲಿ ಅಂದರೆ ಸಾಂಕೇತಿಕವಾದ ಅರ್ಥದಲ್ಲಿ ನಂಬಿಕೆಯ ಮೂಲಕ ಅವರು ಈಗ ಭೂಮಿಗೆ ಬಾಧ್ಯರಾಗಿರುವರು. ಅಪೋಸ್ತಲನು ಈ ಮಾತನ್ನು ಹೇಳುವಾಗ ಇದನ್ನು ನುಡಿದಿರುವನು, "...ಈಗಿನ ಸಂಗತಿಗಳಾಗಲಿ ಮುಂದಿನ ಸಂಗತಿಗಳಾಗಲಿ ಸಮಸ್ತವೂ ನಿಮ್ಮದೇ;" (1 ಕೊರಿಂಥ 3:21–23) ಯಾರು ಸರಿಯಾಗಿ ತಗ್ಗಿದ ಮನೋಭಾವವನ್ನು ಹೊಂದಿವರಾಗಿದ್ದು ತಾಳ್ಮೆಯಿಂದ ದೇವರ ಚಿತ್ತಕ್ಕೆ ಅಧೀನರಾಗಿರುವರೋ ಅವರು ಈಗಿನ ಕಾಲದಲ್ಲಿನ (ಪ್ರಾಪಂಚಿಕ) ಸಂಗತಿಗಳಿಂದ ಅವುಗಳ ನಿಜವಾದ ಮಾಲಿಕರುಗಳಿಗಿಂತಲೂ ಹೆಚ್ಚಿನ ಆಶೀರ್ವಾದವನ್ನು ತಮಗೆ ಲಾಭಕರವಾಗಿ ಪಡೆಯುತ್ತಿರುವರು, ಯಾಕೆಂದರೆ ಅವರ ಹೃದಯಗಳಲ್ಲಿನ ಮನೋಭಾವಗಳು ಅವರು ಆಶೀರ್ವಾದವನ್ನು ಪಡೆಯಲು ಸಾಧ್ಯವಾಗುವಂತೆ ಮಾಡಿರುವುದು. ಲೋಕವು ಸ್ವಹಿತಕ್ಕಾಗಿ ಪೂರ್ಣ ಹಾತೊರೆಯುತ್ತಿರಲಾಗಿ ಅದಕ್ಕೆ ಎಂದೂ ತೃಪ್ತಿಯಾಗದು, ಅದು ಎಂದೂ ಸಂತುಷ್ಟವಾಗಿರದು; ದೇವರ ಮಗುವಾದರೋ ತಾಳ್ಮೆಯಿಂದ ದೇವರ ಚಿತ್ತಕ್ಕೆ ಅಧೀನವಾಗಿ ಯಾವಾಗಲೂ ಸಂತೃಪ್ತವಾಗಿರುವದು –

"ದೇವರ ಹಸ್ತವು ನನ್ನನ್ನು ನಡೆಸುತ್ತಾದ್ದರಿಂದ ಎಂಥಾ ಸಂಗತಿ ನನ್ನ ಮುಂದಿದ್ದರೂ ನಾ ಸಂತೃಪ್ತನೇ,"

## ನೀತಿಭರಿತರಾಗುವುದು

ನಾಲ್ಕನೆಯ ಧನ್ಯತೆಯು ನೀತಿಗೆ ಹಸಿದು ಬಾಯಾರುವಿಕೆಗೆ ಸಂಬಂಧಿಸಿರುವುದು. ಮೊದಲು ತನ್ನಲ್ಲಿ ಗಣನೀಯವಾದ ರೀತಿಯಲ್ಲಿ ಹಿಂದೆ ಹೇಳಿದ ಗುಣಾತಿಶಯಗಳನ್ನು ಹೊಂದಿಲ್ಲದಿದ್ದಲ್ಲಿ ಈ ಹಸಿವು ಬಾಯಾರಿಕೆಗಳನ್ನು ಹೊಂದಲು ಯಾವನಿಗೂ ಸಾಧ್ಯವಾಗದು. ತನಗೆ ದೀನ ಮನಸ್ಸು ಇಲ್ಲದಿದ್ದಲ್ಲಿ ತನ್ನ ಹೀನ ಸ್ಥಿತಿಯ ಆಚೆ ಇರುವುದನ್ನು ಕಾಣಲು ಅಂದರೆ ದೇವರ ಪರಿಪೂರ್ಣತೆಯ ಉನ್ನತ ವೈಭವಗಳನ್ನು ಕಾಣಲು ಅಸಮರ್ಥನಾಗಿದ್ದು ನೀತಿಯ ವಿಷಯವಾದ ತನ್ನ ಸಾಧನೆ–ಯಲ್ಲಿಯೇ ಸಂತೃಪ್ತನಾಗಿರುವನು. ಕೆಲವು ಮಟ್ಟಿಗೆಯಾದರೂ ಗ್ರಹಿಸಲಾಗದ ವಿಷಯಗಳಿಗೆ ಅವನಿಗೆ ಹಸಿದು ಬಾಯಾರಲಾಗದು. ಈಗಿನ ಕಾಲದಲ್ಲಿರುವ ತಪ್ಪುದೋಷ ಅನ್ಯಾಯ ಅಕ್ರಮಗಳನ್ನು ಗ್ರಹಿಸುವಂಥ ಸಹಾನುಭೂತಿಯ ಮನೋಭಾವವನ್ನು ಹೊಂದಿಲ್ಲದಿದ್ದಲ್ಲಿ ಆತನು ಮೆಸ್ಸೀಯನ ಸಾವಿರ ವರುಷದ (ಆಳ್ವಿಕೆಯ) ರಾಜ್ಯ ಸ್ಥಾಪನೆಯಾಗುವುದರ ಮೂಲಕ ಮಾತ್ರ ಪರಿಚಯಿಸಲಾಗುವುದೆಂದು ಸತ್ಯವೇದವು ಸಾರುವ ಉತ್ತಮ ಸ್ಥಿತಿಯಲ್ಲಿರುವ ಸಂಗತಿಗಳಿಗಾಗಿ ಹಾತೊರೆಯಲು ಆತನಿಗೆ ಸಾಧ್ಯವಾಗದು. (ಈಗಿನ ಕಾಲದ ತಪ್ಪುದೋಷ ಅನ್ಯಾಯ ಅಕ್ರಮಗಳ ವಿಷಯವಾಗಿ ದೊಡ್ಡ ಪ್ರಮಾಣದಲ್ಲಿ ಪ್ರತಿರೋಧಿಸಿ ಅವುಗಳನ್ನು ಜಯಿಸಲು ಮಾನವಕುಲವು ಅಸಮರ್ಥವಾಗಿರುವುದು; ಮನುಕುಲದ ಕೆಲವರಿಗೆ ಸದ್ಗುಣಗಳು ಬಹು ಅಲ್ಪ ಪ್ರಮಾಣದಲ್ಲಿರುವುದಾದರೂ ಧನಸಂಪತ್ತು ಪ್ರಭಾವ ಅಧಿಕಾರ ಇವುಗಳನ್ನು ಯಥೇಚ್ಛವಾಗಿ ಹೊಂದಿಕೊಳ್ಳಲಾಗಿರುವುದು, ಅದೇ ಸಮಯದಲ್ಲಿ ಕೆಲವರು ಉತ್ಕೃಷ್ಟವಾದ ಸದ್ಗುಣಗಳನ್ನು ಹೊಂದಿರುವರಾದರೂ ಜೀವನದ ಅಗತ್ಯತೆಗಳ ವಿಷಯದಲ್ಲಿ ಕೊರತೆಯುಳ್ಳವರಾಗಿರುವರು) ನಮ್ಮ ಹೃದಯಗಳಲ್ಲಿ ನ್ಯಾಯ ನೀತಿ ಸತ್ಯತೆಗಳ ವಿಷಯವಾಗಿ ಹಸಿವು ಬಾಯಾರಿಕೆಗಳು ಹೊಂದಿದ್ದು ಎಲ್ಲಾ ಬಗೆಯ ಮಿಥ್ಯೆಗಳಿಗೆ ಅನ್ಯಾಯ ಅಸಮಾನತೆಗಳ ವಿಷಯವಾಗಿ ಜಿಗುಪ್ಸೆಯುಳ್ಳವರಾಗಿ–ರುವುದು ಕಂಡುಬಂದಲ್ಲಿ ಅದು ನಮಗೆ ಒಂದು ಶುಭಸೂಚಕವಾಗಿರುವುದು. ಹೀಗಿರುವಲ್ಲಿ ಮೂರನೆಯ ಕೃಪಾಭೂಷಿತಗುಣವಾಗಿರುವ ತಾಳ್ಮೆಯಿಂದ ದೇವರ ಚಿತ್ತಕ್ಕೆ ಅಧೀನವಾಗಿರುವುದರ ಮೂಲಕ ಈ ಜಿಗುಪ್ಸೆಯು ಮಾರ್ಪಾಟು ಹೊಂದಿ ಆ ಮೂಲಕ ಪ್ರಭಾವಿತವಾಗಿ ನಿಯಂತ್ರಿಸಲ್ಪಡುವುದು. ಅಪೋಸ್ತಲನು ಈ ಕಡೇ ಗುಣದ ನಿಯಂತ್ರಣದ ಬಗ್ಗೆ ಉಲ್ಲೇಖಿಸಿ ಹೇಳಿದ್ದಾನೆ: "ನಿಮ್ಮ ಸೈರಣೆಯು ಎಲ್ಲಾ ಮನುಷ್ಯರಿಗೂ ಗೊತ್ತಾಗಲಿ." ಈ ಗುಣವು ನಮ್ಮೊಳಗೆ ಬಂದಲ್ಲಿ ನಾವು ನಮ್ಮ (ಸ್ವ)ನೀತಿಗಾಗಿ ಹಸಿದು ಬಾಯಾರುವುದಕ್ಕೆ ಮತ್ತು (ಸತ್ಯದ ಮತ್ತು ಅದನ್ನು ಅಭ್ಯಾಸಿಸುವುದರ ಬಗ್ಗೆ) ಸ್ವಪ್ರೇರಿತವಾದ ನಮ್ಮ ಆಸಕ್ತಿಗಳಿಗೆ ಅದು ಅಡ್ಡಿಯನ್ನುಂಟುಮಾಡುತ್ತದೆ. ನಾವು ಯಾವ ವಿಧದಲ್ಲೂ ಅರಾಜಕತೆವುಳ್ಳವರೂ ತೀವ್ರವಾದಿಗಳೂ ಆಗದಂತೆ ಮಾಡುತ್ತವೆ. ನೀತಿಗಾಗಿ ಹಸಿದು ಬಾಯಾರುವ ಈ ಗುಣಲಕ್ಷಣವು ಪವಿತ್ರಾತ್ಮನ ಇತರ ವರಗಳ ಮೂಲಕ ನಿಯಂತ್ರಿಸಲ್ಪಡದೆ ಅನೇಕ ಲೌಕೀಕ ಜನರನ್ನು ಸುಧಾರಕರೆಂಬಂತೆ ನಡೆಸಿ ಅವರನ್ನು ಉಗ್ರ ಅತಿರೇಕಿಗಳಾಗುವಂತೆ ಮಾಡಿರುವುದು. ದೇವರ ಮಗುವಾದರೋ ಇತರರಿಗಿಂತಲೂ ಇದೇ ಹಸಿವು ಬಾಯಾರಿಕೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದ್ದರೂ ದೇವರ ವಾಕ್ಯದಿಂದ ಉಪದೇಶ ಹೊಂದಿದವನಾಗಿ ಸ್ವಸ್ಥಚಿತ್ತತೆಯಿಂದ ನಿಯಂತ್ರಿಸಲ್ಪಟ್ಟವನಾಗಿ ಆತನ (ದೇವರ) ವಾಗ್ದಾನಗಳಲ್ಲಿ ವಿಶ್ರಮಿಸಿಕೊಂಡು ಆ ವಾಗ್ದಾನಗಳ ನೆರವೇರಿಕೆಗಾಗಿ ಕಾಯುತ್ತಾ ತಾಳ್ಮೆಯಿಂದ ವಿಧೇಯನಾಗಿದ್ದು ದೇವರ ನಿಗದಿತ ಕಾಲದಲ್ಲಿ ನೀತಿಯು ಜಯಹೊಂದುವುದೆಂಬುದನ್ನು ದೃಢಪಡಿಸಿಕೊಂಡಿ–ರುವನು. ಅವನು ಇದನ್ನು ತನಗಿರುವ ಸಮಯಾವಕಾಶವನ್ನಾಗಿ ಸಹ ಅಳವಡಿಸಿಕೊಳ್ಳುವನು.

ಭಾಗ್ಯಕರವಾದ ಈ ಹಸಿವುಬಾಯಾರಿಕೆಗಳನ್ನು ಹೊಂದಿ ಅವುಗಳನ್ನು ಅಭಿವೃದ್ಧಿಪಡಿಸಿಕೊಂಡವನು ತೃಪ್ತಿಹೊಂದುವನು. ದೇವರ ರಾಜ್ಯವು ಕ್ರಮೇಣ ಸ್ಥಾಪಿತವಾಗಿ, ಅದರ ಆಳ್ವಿಕೆಯ

ಪರಿಣಾಮವಾಗಿ ಎಲ್ಲಾ ಬಗೆಯ ಕೆಟ್ಟತನ ಮತ್ತು ಪಾಪ, ಎಲ್ಲಾ ಬಗೆಯ ಅಧರ್ಮವು ದಮನಗೊಂಡು ದೇವರ ಪರಿಶುದ್ಧವಾದ ಚಿತ್ತವು "ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲ್ಪಟ್ಟಾಗ" ಅವನು ಹೇರಳವಾಗಿ ತೃಪ್ತನಾಗಿರುವನು. ನೀತಿಯು ನಿಮಿತ್ತವಾದ ನಮ್ಮ ಹಸಿವುಬಾಯಾರಿಕೆಗಳನ್ನು ನಾಶಗೊಳಿಸಬಾರದು, ಆದರೆ ನಮ್ಮ ಕರ್ತನು ವಾಗ್ದಾನಮಾಡಿದಂತೆ ಅವುಗಳು ತೃಪ್ತವಾಗುವವು. ನೀತಿಸತ್ಯತೆಗಳ ವಿಷಯದಲ್ಲಿನ ಹಸಿವು ಇನ್ನೂ ಇರುವುದು; ಆದರೆ ನೀತಿಸತ್ಯತೆಗಳಿಗೆ ಜಯವಾಗುವುದೆಂಬುದರಲ್ಲಿಯೇ ತೃಪ್ತಿಯೂ ಇರುವುದು.

ಇತರ ಕೃಪಾಭೂಷಿತಗುಣಗಳಲ್ಲಿ ಇರುವಂತೆಯೇ ಇದರಲ್ಲಿಯೂ ಒಂದು ಅರ್ಥದಲ್ಲಿ ನಂಬಿಕೆಯ ಮೂಲಕ ನಾವು ಮುಂದೆ ಲಭಿಸಲಿರುವ ಕೆಲವು ಮಟ್ಟಿನ ತೃಪ್ತಿಯನ್ನು ಈಗಾಗಲೇ ಪಡೆದಿರುತ್ತೇವೆ. ಆದರೂ ಇದು ಒಂದು ಪೂರ್ವಾನುಭವ. ಯಾರು ನೀತಿಗಾಗಿ ಹಸಿದು ಬಾಯಾರಿರುತ್ತಾರೋ ಅವರು ಪವಿತ್ರಾತ್ಮನ ಇತರ ಕೃಪಾವರಗಳ ವಿಷಯದಲ್ಲಿದ್ದಂತೆಯೇ ಕರ್ತನ ಕೃಪಾಪೂರ್ಣ ವಾಗ್ದಾನಗಳ ಮೂಲಕವಾಗಿ ಆದರಣೆ ಸಾಂತ್ವನಗಳನ್ನು ಕಂಡುಕೊಳ್ಳುವರು. ಇದನ್ನು ಈಗಿನ ಕಾಲದ ಜೀವಿತದಲ್ಲಿಯೇ ನಂಬಿಕೆಯ ಮೂಲಕ ತನ್ನದಾಗಿಸಿಕೊಳ್ಳಲು ಸಾಧ್ಯವಿರುವುದು. ಇದು "ನಂಬಿಗಸ್ತರ ಮನೆತನದವರಿಗೆ ಹೊತ್ತುಹೊತ್ತಿಗೆ ಬೇಕಾದ ಆಹಾರವಾಗಿ" ಪರಿಣಮಿಸುವುದು. ನಿರಂತರವಾದ ನೀತಿಯ ವಿಷಯವಾಗಿರುವ ದೈವಿಕವಾದ ವಿಧಿನಿಬಂದನೆಗಳು ತಾವು ನೆನಸುವುದಕ್ಕಿಂತಲೂ ಇಲ್ಲವೇ ಬೇಡಿಕೊಳ್ಳುವುದಕ್ಕಿಂತಲೂ ಉತ್ಕೃಷ್ಟವಾದವುಗಳೂ ಹೇರಳವಾದವುಗಳೂ ಆಗಿರುವವೆಂಬುದನ್ನು ಗ್ರಹಿಸಿಕೊಂಡವರಾಗಿ ಆ ಮೂಲಕವಾಗಿ ಅವರು ಸಂರಕ್ಷಣೆ ಹೊಂದಿ ಬಲಗೊಂಡು ಅದರಲ್ಲಿ ವಿಶ್ರಮಿಸಿಕೊಂಡವರಾಗಿ, ಕನಿಷ್ಠವೆಂದರೆ ಸ್ವಲ್ಪ ಮಟ್ಟಿನಲ್ಲಾದರೂ ತಮ್ಮ ಹಸಿವು ಬಾಯಾರಿಕೆಗಳನ್ನು ಇವುಗಳ ಮೂಲಕವಾಗಿ ನೀಗಿಸಿಕೊಳ್ಳುವರು.

## ಕರುಣೆ ಹೊಂದುವುದು ಹೇಗೆ

ಐದನೆಯ ಧನ್ಯತೆಯ ಸ್ಥಿತಿಯೆಂದರೆ ಕರುಣೆಯುಳ್ಳವ – ರಾಗಿರುವುದು. ಕರುಣೆಯು ನೀತಿಯ ವಿಷಯವಾಗಿ ಮನಗಂಡು ಅದಕ್ಕಾಗಿ ತಮ್ಮ ಹೃದಯಗಳಲ್ಲಿ ಹಸಿದು ಬಾಯಾರಿದುದರ ಫಲವಾಗಿ ಮನುಷ್ಯರು ಗ್ರಹಿಸಬಹುದಾದಂತೆ ಬಹಿರಂಗವಾಗಿ ವ್ಯಕ್ತವಾಗುವ ಗುಣ. ಈ ಹಿಂದೆ ಹೇಳಿದ ವಿಷಯಗಳಲ್ಲಿ ನಾವು ಕ್ರಮವನ್ನು ತೆಗೆದುಕೊಂಡ ನಂತರ ಈಗಿನ ಕಾಲದಲ್ಲಿರುವ ಅಕ್ರಮಗಳ ಬಗ್ಗೆ ಮನವರಿಕೆಮಾಡಿಕೊಳ್ಳುವುದನ್ನು ಹಾಗೂ ಸ್ವತಃ ನಮ್ಮಲ್ಲಿರುವ ಹಾಗೂ ಇತರರಲ್ಲಿಯೂ ಇರುವ ಅಪೂರ್ಣತೆಗಳನ್ನು (ಅನೀತಿಯನ್ನು) ಅರಿತುಕೊಳ್ಳುವುದನ್ನು ಕಲಿತವರಾಗಿ, ದೇವರೊಬ್ಬನೇ ಈ ಸಂಗತಿಗಳನ್ನು ಪೂರ್ಣವಾದ ರೀತಿಯಲ್ಲಿ ಸರಿಪಡಿಸಲು ಸಮರ್ಥನೆಂಬುದನ್ನು ಹಾಗೂ ಎಲ್ಲಾ ದೋಷಗಳನ್ನು ಸರಿಪಡಿಸಲು ಆತನು ಏರ್ಪಾಡು ಮಾಡಿರುವನೆಂಬುದನ್ನು ಹಾಗೂ ಕ್ರಿಸ್ತನಲ್ಲಿರುವ ತನ್ನ ಕೃಪೆಯನ್ನು ಅಂಗೀಕರಿಸುವವರಿಗೆ ತನ್ನ ಅನುಗ್ರಹವನ್ನು ಪುನಃಕಲ್ಪಿಸುವ– ನೆಂಬುದನ್ನು ಕಲಿತ ನಂತರವೇ ನಾವು ಕರುಣೆಯುಳ್ಳವರೂ ಉಪಕಾರಿಗಳೂ ಕನಿರವುಳ್ಳವರೂ ಆಗಿ ಇತರರನ್ನು ಭಾವಿಸಲು ಆರಂಭಿಸುತ್ತೇವೆ. ಈ ಬಗೆಯ ಹಾಗೂ ಈ ಹಂತದಲ್ಲಿನ ಭಾವನೆ– ಗಳನ್ನು ಉಳ್ಳವರಾಗಿರಲು ಈ ಹಿಂದೆ ನಮಗೆ ಸಾಧ್ಯವಾಗಿರ– ಲಾರದು. ಭಾಗ್ಯಕರವಾದ ಈ ಗುಣಗಳ ಹಾಗು ಕೃಪೆಯಲ್ಲಿ ವೃದ್ಧಿಯಾಗುವ ಮಾರ್ಗದಲ್ಲಿ ನಡೆಯದ ಲೌಕಿಕ ಜನರಿಗೆ ಇದೇ ಮಟ್ಟದಲ್ಲಿ ಸಹಾನುಭೂತಿಯುಳ್ಳವರಾಗಿಲು ಇಲ್ಲವೇ ಇತರರ ಬಗ್ಗೆ ಕರುಣೆಯುಳ್ಳವರಾಗಿರಲು ಸಾಧ್ಯವಾಗದು.

ಕರುಣೆಯ ಈ ಲಕ್ಷಣದ ಬಗ್ಗೆ ಕರ್ತನು ವಿಶೇಷವಾದ ಪ್ರಾಧಾನ್ಯತೆ ನೀಡಿರುವನು; ಜ್ಞಾನದಲ್ಲಿಯಾಗಲೀ ಅಥವಾ ಕೃಪೆಯ ವಿಷಯದಲ್ಲಿಯಾಗಲೀ ನಾವು ಎಷ್ಟೇ ಸಾಧನೆ ಮಾಡಿದ್ದಾಗ್ಯೂ ನಮ್ಮಲ್ಲಿ ಈ ಒಂದು ಗುಣವು ಇಲ್ಲದಿದ್ದಲ್ಲಿ ನಾವು ಎಂದಿಗೂ ಆತನಿಂದ ಅಂಗೀಕೃತವಾಗಲಾರೆವು. ಇತರರ ಬಗ್ಗೆ ನಮಗೆ ಕರುಣೆಯಿಲ್ಲದಿದ್ದಲ್ಲಿ ಪರಲೋಕದ ನಮ್ಮ ತಂದೆಯೂ ನಮ್ಮ ಮೇಲೆ ಕರುಣೆ ತೋರಲಾರನು. ಈ ಕರುಣೆಯು ಕೇವಲ ಬಾಹ್ಯರೂಪದಲ್ಲಿ ನಮ್ಮಲ್ಲಿ ಇರುವುದಿಲ್ಲವೆಂಬುದನ್ನು ಖಚಿತಪಡಿಸಲು ಕ್ಷಮಾಗುಣ ಹಾಗೂ ದಯೆಉಪಕಾರ ಸ್ವಭಾವವು ನಮ್ಮಲ್ಲಿ ವ್ಯಕ್ತವಾಗಬೇಕೆಂಬುದನ್ನು ನಮ್ಮ ಕರ್ತನು ಪ್ರತಿಪಾದಿಸಿ ಹೇಳಿರುವುದು, "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನನ್ನ ತಂದೆಯು ನಿಮಗೆ ಹಾಗೆಯೇ ಮಾಡುವನು ಅಂದನು" ಕರುಣೆಯು ಪ್ರಾಮಾಣಿಕವಾಗಿರಬೇಕು ಮತ್ತು ಅದು ನಟನೆಯಾಗಿರಬಾರದು; ಇತರರ ವೈಪಲ್ಯತೆ ಮತ್ತು ಬಲಹೀನತೆಗಳನ್ನು ನಮ್ಮ ದೃಷ್ಟಿಯಿಂದ ತೆಗೆದುಹಾಕಲ್ಪಟ್ಟು ಸಾಧ್ಯವಾದಷ್ಟೂ ನಮ್ಮ ನೆನಪಿನಿಂದ ಅದು ಅಳಿಸಲ್ಪಡಬೇಕು. ಇಲ್ಲವಾದಲ್ಲಿ ನೀತಿಯ ವಿಷಯವಾಗಿರುವ ನಮ್ಮ ಹಸಿವು ಬಾಯಾರಿಕೆಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿರುವ ನಮ್ಮ ನ್ಯೂನತೆಗಳು ಕ್ಷಮಿಸಲ್ಪಟ್ಟು ಅವುಗಳು ಅಳಿಸಲ್ಪಡುದನ್ನು ನಿರೀಕ್ಷಿಸಲಾಗದು. ಕೇವಲ ಕರುಣೆಯುಳ್ಳವರು ಮಾತ್ರ ಕರುಣೆಯನ್ನು ಹೊಂದುವರು; ಕರ್ತನ ಕೈಯಿಂದ ಕರುಣೆಹೊಂದದಿದ್ದರೆ ನಾವು ಎಲ್ಲವನ್ನೂ ಕಳಕೊಂಡಂತೆಯೆ; ಇತರರಂತೆ ನಾವು ಸ್ವಭಾವ ಸಿದ್ಧವಾಗಿ ದೇವರ ಕೋಪಕ್ಕೆ ಗುರಿಯಾಗಿ ನ್ಯಾಯವಾದ ದಂಡನೆಗೊಳಗಾಗಿದ್ದೆವು.

ಕರುಣೆ ದಯೆಉಪಕಾರ ಕ್ಷಮಾಗುಣವನ್ನು ಅಭ್ಯಾಸಿಸುವುದು ನಾವು ಕ್ಷಮೆಯನ್ನು ಹೊಂದಿ ಆ ಮೂಲಕ ರಕ್ಷಣೆಹೊಂದುವುದಕ್ಕೆ ಅವಶ್ಯಕವಾಗಿದ್ದು ಅದು ಆಶೀರ್ವಾದಕರವಾಗಿರುವುದೆಂಬ ಕಾರಣಕ್ಕೆ ಮಾತ್ರವಲ್ಲದೆ ಇತರರ ಬಗ್ಗೆ ಅವರ ವೈಪಲ್ಯ ಅಪರಿಪೂರ್ಣತೆಗಳ ವಿಷಯವಾಗಿ ಸಹಾನುಭೂತಿಯುಳ್ಳ ಹೃದಯದ ಸ್ಥಿತಿಯು ನಮ್ಮ ಹೃದಯಗಳಿಂದ ಕೆಲವು ಶರೀರಭಾವದ ಹಾಗೂ ಸೈತಾನನ ಕೃತ್ಯಗಳನ್ನು ತೊಡೆದುಹಾಕಲು ಸಹ ಸಹಾಯಕಾರಿಯಾಗಿರುವುದು. ತಾವು ನಂಬಿಕೆಯ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟು ಕರ್ತನಿಗೆ ತಮ್ಮನ್ನು ಪೂರ್ಣವಾಗಿ

ಪ್ರತಿಷ್ಠೆಮಾಡಿಕೊಂಡವರಾಗಿ "ನೋಡುವವರಾಗಿ ನಡೆಯದೆ ನಂಬುವವರಾಗಿ ನಡೆಯಲು" ಯತ್ನಿಸುತ್ತಿರುವ ದೇವಜನರನ್ನು ಈ ಶರೀರಭಾವದ ಕೃತ್ಯಗಳು ಆನಂತರವೂ ಸಹ ಅವರನ್ನು ಗಟ್ಟಿಯಾಗಿ ಹಿಡಿದುಕೊಳ್ಳುವ ಪ್ರವೃತ್ತಿಹೊಂದಿರುವುದು.

ನಾವು ಪೂರ್ಣವಾಗಿ ಕರ್ತನವರಾಗಿ ನಮ್ಮಿಂದ ತೊಡೆದು ಹಾಕಲಿರುವ ಶರೀರಭಾವದ ಕರ್ಮಗಳಲ್ಲಿ ಅಪೋಸ್ತಲನು ಈ ಮುಂದಿನ ಗುಣಗಳನ್ನೂ ಸೇರಿಸಿದ್ದಾನೆ; ಅವುಗಳು ಯಾವುವೆಂದರೆ ಕೋಪ ಮತ್ಸರ ಕ್ರೋದ ಅಸೂಯೆ ಹಗೆತನಗಳು. ಸ್ವಾರ್ಥಭಾವದ ಈ ಎಲ್ಲಾ ಗುಣಲಕ್ಷಣಗಳು ಕರುಣೆಯನ್ನು ವಿರೋಧಿಸುವಂಥವುಗಳು. ಹೃದಯದ ಆಳದಲ್ಲಿ ಗುಪ್ತವಾಗಿ ಅಡಗಿಕೊಂಡು ಬೇರೂರಿ ಬೀಡುಬಿಟ್ಟಿರುವ ಸ್ಥಳಗಳಿಂದ ಕರುಣೆಯು ಬಹುಮಟ್ಟಿಗೆ ಇವುಗಳನ್ನು ಹೊರಹಾಕುವುದು. ಭಾಗ್ಯಕರವಾದ ಕರುಣಾಗುಣವು ಪ್ರೀತಿಗೆ ಬಹಳ ನಿಕಟವಾದ ಸಂಬಂಧ ಹೊಂದಿರುವುದು. ಏಕೆಂದರೆ ದೇವರ ಪ್ರೀತಿಮಯ ವಾದ ಆತ್ಮವನ್ನು ಹೊಂದಿರುವಷ್ಟರ ಮಟ್ಟಿಗೆ ನಾವೂ ಇತರರಿಗೆ ಕರುಣೆಯನ್ನು ತೋರಿಸುವೆವು; ಆತನೂ ಸಹ ಕ್ರಿಸ್ತನಲ್ಲಿ ನಮಗೆ ಕರುಣೆಯನ್ನು ಅನುಗ್ರಹಿಸುವುದರ ಮೂಲಕ ನಮ್ಮ ಕಡೆಗೆ ಇರುವ ತನ್ನ ಪ್ರೀತಿಯನ್ನು ತೋರ್ಪಡಿಸಿದ್ದಾನೆ. ಇತರರನ್ನು ಭಾವಿಸಸಲುವಾಗಿರುವ ಪ್ರೀತಿ ಕರುಣೆಗಳು ಅಸೂಯೆಯನ್ನು ಹೊರಹಾಕುವುದರಲ್ಲಿ ಹೆಚ್ಚು ಫಲಕಾರಿಯಾಗಿರುವುದು. ನಾವು ಯಥಾರ್ಥವಾಗಿ ಪ್ರೀತಿಸುವವರ ವಿಷಯವಾಗಿ ಅಸೂಯೆಪಡು ವುದು ಹೇಗೆ ಸಾಧ್ಯ? ನಮ್ಮ ವೈರಿಗಳನ್ನು ಪ್ರೀತಿಸಿ ಅವರಿಗೆ ಕರುಣೆ ಕನಿಕರಗಳನ್ನು ತೋರಿ ಹೃದಯಪೂರ್ವಕವಾಗಿ ಅವರನ್ನು ಕ್ಷಮಿಸುವವರಾದರೆ ಅವರ ಬಗ್ಗೆ ದ್ವೇಷವುಳ್ಳವರಾಗಿರುವುದು ಹೇಗೆ? ಅವರ ಮೇಲೆ ನಮಗೆ ಕರುಣೆಯಿದ್ದು ಅವರ ವಿಷಯವಾಗಿ ಕೇವಲ ಕ್ಷಮಾಭಾವವುಳ್ಳವರಾಗಿದ್ದಲ್ಲಿ ಅವರನ್ನು ಹಗೆಮಾಡಲು ಹೇಗೆ ಸಾಧ್ಯ? ನಾವು ದೇವರ ಆಜ್ಞೆಗಳಿಗೆ ವಿರೋಧವಾಗಿ ಮಾಡಿದ ತಪ್ಪುಗಳಿಗೆ ಕ್ಷಮೆಯನ್ನು ನಿರೀಕ್ಷಿಸುವ–ವರಾಗಿ ಕರುಣೆ ಮತ್ತು ಕ್ಷಮಾಭಾವದಿಂದ ಕೂಡಿದವರಾಗಿ ನಮಗೆ ವಿರೋಧವಾಗಿ ಮಾಡಿದ ತಪ್ಪುಗಳನ್ನು ಕ್ಷಮಿಸಲು ಸಿದ್ಧರಿದ್ದಲ್ಲಿ ನಾವು ಜಗಳಗಂಟಿಗರಾಗಿರುವುದು ಹೇಗೆ ಸಾಧ್ಯ?

"ಕರುಣೆಯು ನ್ಯಾಯತೀರ್ಮಾನವನ್ನು ಗೆದ್ದು ಹಿಗ್ಗುತ್ತದೆ," ಎಂದು ಅಪೋಸ್ತಲನು ವಿವರಿಸಿ ಹೇಳಿರುವನು. (ಯಾಕೋಬ 2:13) ದೇವರ ಕರುಣೆಯು ದೇವರ ನ್ಯಾಯವಿಧಿಯ ಬೇಡಿಕೆಯನ್ನು ಸಂತೃಪ್ತಿಗೊಳಿಸಿದ್ದು ನಮ್ಮ ಮಾನವಕುಲವನ್ನು ನ್ಯಾಯದಂಡನೆಯಿಂದ ರಕ್ಷಿಸಲು ಹೀಗೆ ಮಾರ್ಗವನ್ನು ಸಿದ್ಧಪಡಿಸಿರುವುದು; ಹೀಗಿರುವಲ್ಲಿ ಯಾರು ದೇವರ ಆತ್ಮದಲ್ಲಿ ಪಾಲನ್ನು ಹೊಂದಿರುವರೋ ಮತ್ತು ಯಾರಲ್ಲಿ ಅದು ಸೂಕ್ತವಾದ ಅಭಿವೃದ್ಧಿಯ ಹಂತಕ್ಕೆ ತಲುಪಿರುವುದೋ ಅವರು ತಮ್ಮಲಿರುವ ಕರುಣೆಯು ನ್ಯಾಯದ ವಿಷಯವಾದ ತಮ್ಮ ಪರಿಕಲ್ಪನೆಗಳನ್ನು ಗೆಲ್ಲುವಂತೆ ಮಾಡಿರುತ್ತಾರೆ (ಯಾಕೆಂದರೆ ಅವರಲ್ಲಿ ತಮ್ಮ ಜೊತೆಯವರಿಂದ ತಮ್ಮ ವಿಷಯವಾಗಿ ನ್ಯಾಯವಿಧಿಗಳು ಬಯಸುವ ಯಾವ ಬೇಡಿಕೆಗಳನ್ನೂ ಈಡೇರಿಸುವ ಅಗತ್ಯವಿರುವುದಿಲ್ಲ.)

ಕರ್ತನ ಜನರಲ್ಲಿ ನ್ಯಾಯವಿವೇಚನೆಯ ಅಂಶವು ಕುರುಡಾ ಗಿರುವಂತೆ ಇರದಿದ್ದರೂ, ಅವರು ಇತರರಲ್ಲಿನ ತಪ್ಪು–ದೋಷಗಳನ್ನು ಸ್ಪಷ್ಟವಾಗಿ ಗ್ರಹಿಸುವವರಾಗುವಂತಿದ್ದರೂ, ಹಾಗು ಅವರು ತಮ್ಮ ನಡೆನುಡಿ ಕ್ರಿಯೆಗಳ ವಿಷಯದಲ್ಲಿ ನ್ಯಾಯವಂತರಾಗಿ ನಡಕೊಳ್ಳಬಯಸುವವರಾಗಿದ್ದರೂ, ತಮಗೆ ವಿರುದ್ಧವಾಗಿ ತಪ್ಪುಮಾಡಿದವರ ವಿಷಯವಾಗಿ ನ್ಯಾಯವಿಧಿಯ ಬೇಡಿಕೆಗಳ ಮೇಲೆ ತಮ್ಮ ಹೃದಯಗಳಲ್ಲಿ ಕರುಣೆಯು ಗೆಲ್ಲುವಂತೆ ಮಾಡುವವರಾಗಬೇಕು. ಅವರು ತಮಗೆ ಹಾನಿಮಾಡಿದವರ ವಿಷಯದಲ್ಲಿ ಕೋಪವುಳ್ಳವರಾಗಿರಬಾರದು, ಇಲ್ಲವೇ ತಮ್ಮ ವಿರೋಧಿಗಳ ವಿಷಯದಲ್ಲಿ ನ್ಯಾಯವನ್ನು ಬಯಸುವವರಾಗಿ ತಾವೇ ಅವರಿಗೆ ಮುಯ್ಯಿ ತೀರಿಸುವವರಾಗಬಾರದು. ವಾಸ್ತವದಲ್ಲಿ ಅವರಿಗೆ ದೇವರೇ ನ್ಯಾಯವಿಚಾರಿಸುವನೆಂದೂ; ನಾನು ಸಹ ನನ್ನಲ್ಲಿ ಪಾರಂಪರ್ಯವಾಗಿ ಬಂದಿರುವ ಬಲಹೀನತೆಗಳ ದೆಸೆಯಿಂದ ಪರಿಪೂರ್ಣವಾದ ನ್ಯಾಯವಿಧಿಗಳಿಗೆ ವಿರೋಧವಾಗಿ ತಪ್ಪುಮಾಡುವವನಾಗಿದ್ದು ನನ್ನಂತೆ ಆದರೂ ಬೇರೆ ವಿಧವಾದ ಬಲಹೀತೆಗಳನ್ನು ಪಾರಂಪರ್ಯವಾಗಿ ಹೊಂದಿರುವ ಸಹಜೀವಿಗಳ ವಿಷಯವಾಗಿ ಕರುಣೆ ಹೊಂದಿದವನಾಗಿ ರಬೇಕೆಂದು ಹೇಳುವವರಾಗಬೇಕಿರುವುದು; ದೈವವಿಧಿಗನುಸಾರ ವಾಗಿ ಭಾಗ್ಯಕರವಾದ ಗುಣಗಳಾದ ಕರುಣೆ ಕನಿಕರ ಕ್ಷಮಿಸುವಿಕೆಗಳನ್ನು ಅಭ್ಯಾಸಿಸುವುದು ನನ್ನದಾಗಿರಬೇಕು. ಹೀಗೆ ಮಾಡುವವರು ಈ ಪ್ರಪಂಚದ ತಮ್ಮ ಶರೀರದ ಹಾಗು ಸೈತಾನನ ಕೆಟ್ಟಕಾರ್ಯಗಳನ್ನು ಹಾಗೂ ಮನೋಭಾವಗಳನ್ನು ತಮ್ಮಿಂದ ತೊಡೆದು ಹಾಕುವುದಲ್ಲದೆ ಅವರು ಹೆಚ್ಚುಹೆಚ್ಚಾಗಿ ಪ್ರೀತಿ ನಯವಿನಯ ಹಾಗೂ ದೇವರ ಚಿತ್ತಕ್ಕೆ ತಮ್ಮನ್ನು ತಾಳ್ಮೆಯಿಂದ ಅಧೀನ ಮಾಡಿಕೊಳ್ಳುವ ಸ್ವಭಾವಗಳಿಂದ ಅಧಿಕವಾಗಿ ತುಂಬಿದವರಾಗುತ್ತಾ ಬರುವರು. ಹೀಗೆ ಈಗಿನ ಕಾಲದಲ್ಲಿಯೂ ಕರುಣೆಯುಳ್ಳವರೂ ಧನ್ಯರಾಗಿರುವರು.

## "ಪರಿಶುದ್ಧತೆಯಿಲ್ಲದೆ ಯಾವನೂ ಕರ್ತನನ್ನು ಕಾಣುವುದಿಲ್ಲ"

ಧನ್ಯತೆಯ ವಿಷಯವಾದ ಆರನೇ ಹಂತವು ಹೃದಯದ ಶುದ್ಧತೆ, ಅಂದರೆ ಪ್ರೇರಣೆಗಳ ವಿಷಯದಲ್ಲಿ ಶುದ್ಧತೆ, ಉದ್ದೇಶಗಳಲ್ಲಿ ಶುದ್ಧತೆ, ಪ್ರಯತ್ನಗಳಲ್ಲಿ ಶುದ್ಧತೆ, ಚಿತ್ತ ಶುದ್ಧತೆ: ಪ್ರಾಮಾಣಿಕತೆ, ಪಾರದರ್ಶಕತೆ, ಯಥಾರ್ಥತೆ ಎಂಬ ಅರ್ಥದಲ್ಲಿ ಶುದ್ಧತೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ, ಪೂರ್ಣವಾಗಿ ಸದುದ್ದೇಶಗಳಿಂದ ಕೂಡಿದ ಪ್ರಾಮಾಣಿಕವಾದ ಹೃದಯವುಳ್ಳವರು ಧನ್ಯರು. ನಿಜ, ಕೆಲವು ಮಟ್ಟಿಗೆ ತಮ್ಮಲ್ಲಿ ಪ್ರಾಮಾಣಿಕವಾದ ಹೃದಯ, ಸಂಕಲ್ಪ, ಉದ್ದೇಶಗಳು ಇರುವುದಾಗಿ ಹೇಳಿಕೊಳ್ಳುವ ಲೌಕಿಕ ಜನರು ಇರುವರು. ಆದರೆ ಅವರು ಕ್ರಿಸ್ತನಲ್ಲಿ ದೇವನೇಮಿತವಾದ ಮಾರ್ಗಕ್ಕೆ ಹೊಂದಿಕೊಂಡು ಬರುವವರೆಗೂ, ನಂಬಿಕೆಯ ಹಾಗೂ ಆತನಿಗೆ (ಕ್ರಿಸ್ತನಿಗೆ) ತಮ್ಮನ್ನು ಪ್ರತಿಷ್ಠಿಸಿಕೊಳ್ಳುವುದರ ಮೂಲಕವಾಗಿ ಆತನ (ಕ್ರಿಸ್ತನ) ಹಿಂಬಾಲಕರಾಗುವವರೆಗೂ, ಮತ್ತು ಈ ಹಿಂದೆ ಹೇಳಿದ ಧನ್ಯತೆಗಳ ಹಂತಗಳನ್ನು ಏರಿದವರಾಗುವವರೆಗೂ ನಾವು

ಅವರನ್ನು ಇಲ್ಲಿ ಪ್ರತ್ಯೇಕವಾಗಿ ಹೇಳಿರುವ ವರ್ಗಕ್ಕೆ ಸೇರಿದವರೆಂದು ಅಂಗೀಕರಿಸಲು ಸಾಧ್ಯವಿಲ್ಲ.

ಹಲವರು "ಹೃದಯದ ಶುದ್ಧತೆ" ಎಂಬ ಹೇಳಿಕೆಯನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದು ಅದು ಬಾಹ್ಯವಾಗಿ ಮಾತ್ರವಲ್ಲದೆ ಆಂತರ್ಯದಲ್ಲಿಯೂ, ಕೇವಲ ನಡೆನುಡಿಯಲ್ಲಿ ಮಾತ್ರವಲ್ಲದೆ ಆಲೋಚನೆಯಲ್ಲಿಯೂ ಸಂಪೂರ್ಣವಾಗಿ ಪರಿಪೂರ್ಣ ರಾಗಿರುವುದನ್ನು ಸೂಚಿಸುವುದೆಂಬ ಅಭಿಪ್ರಾಯ–ವುಳ್ಳವರಾಗಿರುವರು. ಈ ಬಗೆಯ ಅಭಿಪ್ರಾಯವು – ನಾನು ನಡೆಯಲ್ಲಿಯೂ ನುಡಿಯಲ್ಲಿಯೂ ಪರಿಪೂರ್ಣನಲ್ಲ–ನಾಗಿರುವಲ್ಲಿ ಹೇಗೆ ನಾನು, ಈ ಹೇಳಿಕೆಯ ಪ್ರಕಾರ, ಹೃದಯದಲ್ಲಿ ಶುದ್ಧರಾಗಿರುವವರಲ್ಲಿ ಒಬ್ಬನೆಂದು ಹೇಳಿಕೊಳ್ಳಲು ಸಾಧ್ಯವೆಂದು ಪ್ರಾಮಾಣಿಕವಾಗಿ ತಮ್ಮ ಬಗ್ಗೆ ಹೇಳಿಕೊಳ್ಳುವವರನ್ನು ಅಧೈರ್ಯಗೊಳಿಸುವಂಥದ್ದಾಗಿರುವುದು. ನಾವು ಉತ್ತರಿಸುವುದು: ಇದು ಒಂದು ತಪ್ಪಾದ ಗ್ರಹಿಕೆ. ನಮ್ಮ ಶರೀರದಲ್ಲಿ ಪರಿಪೂರ್ಣತೆಯೆಂಬುದು ನೆಲೆಯಾಗಿಲ್ಲವೆಂಬುದನ್ನೂ, ಪರಿಪೂರ್ಣತೆಯಿಂದ ಬಿದ್ದುಹೋಗಿರುವ ಕಾರಣದಿಂದ ಆದಾಮನ ಸಂತತಿಯೆಲ್ಲವೂ ತಮ್ಮ ತಂದೆಗಳು ಹುಳಿದ್ರಾಕ್ಷೆಯನ್ನು ತಿಂದದ್ದರಿಂದ ತಮ್ಮ ಹಲ್ಲುಗಳು ಜಳಿತುಹೋಗಿರುವುದಾಗಿರಲು, ನಾವು ಕೆಲವು ಸಮಯ ಮಾಡಬೇಕೆಂದಿದ್ದುದನ್ನು ಸರಿಯಾಗಿ ಮಾಡಲು ಸಾಧ್ಯವಿಲ್ಲವಾಗಿರುವುದೆಂಬುದನ್ನೂ, ನಮ್ಮಲ್ಲಿರುವ ಅಜ್ಞಾನದ ಮೂಲಕವಾಗಿ ನಾವು ಮಾಡಬೇಕಿದ್ದವುಗಳನ್ನು ಮಾಡಬೇಕಾದ ರೀತಿಯಲ್ಲಿ ಮಾಡದೆ ಅವುಗಳನ್ನು ಹಾಗೆಯೇ ಬಿಟ್ಟಿರುವೆವೆಂಬುದನ್ನೂ ನಿಸ್ಸಂಶಯವಾಗಿ ಕರ್ತನು ನಮಗಿಂತಲೂ ಚೆನ್ನಾಗಿ ತಿಳಿದಿರುವನು. – ಯೆರೆಮೀಯ 31:29–30; ರೋಮಾ 7:16–18

ದೇವರು ಯೆಹೂದ್ಯರ ಯುಗದಲ್ಲಿ (ಇಸ್ರಾಯೇಲ್) ಜನರಿಗೆ ಜೀವ ವಾಗ್ದಾನವನ್ನೊಳಗೊಂಡ ಧರ್ಮಶಾಸ್ತ್ರದ ಆಜ್ಞಾ ವಿಧಿಗಳನ್ನು ಕೊಡುವುದರ ಮೂಲಕ ಒಂದು ದೊಡ್ಡ ಪಾಠವನ್ನು ಕಲಿಸಿಕೊಟ್ಟಿದ್ದನು. ಆದರೆ ಅಪೋಸ್ತಲನು ನಮಗೆ ಭರವಸೆಯಾಗಿ ಹೇಳಿರುವುದೇನೆಂದರೆ, ದೇವರು ಇಸ್ರಾಯೇಲ್ಯರಿಗೆ ಆಜ್ಞಾವಿಧಿಗಳನ್ನು ಕೊಡುವಾಗ "ಯಾವನಾದರೂ ನೇಮನಿಷ್ಠೆ ಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವುದಿಲ್ಲ" ಎಂಬುದು ದೇವರಿಗೆ ಮುಂದಾಗಿ ತಿಳಿದಿತ್ತು. ಪ್ರತಿಯಾಗಿ ಆಜ್ಞಾವಿಧಿಗಳನ್ನು ಸ್ಪಷ್ಟವಾಗಿ ಗ್ರಹಿಸಿದಷ್ಟೂ ಪಾಪದ ಅಂದರೆ ಅಪರಿಪೂರ್ಣತೆಯ ಪರಿಜ್ಞಾನವು ಹೆಚ್ಚು ಸ್ಪಷ್ಟವಾಗುವುದು. ಕ್ರಿಸ್ತನಲ್ಲಿ ದೇವರು ಏರ್ಪಡಿಸಿರುವುದೇನೆಂದರೆ, ಉದ್ದೇಶಪೂರ್ವಕವಾಗಿರದ ಆದರೆ (ಆದಾಮನ) ಮೂಲ ಪಾಪದ ಫಲವಾಗಿ ಬಂದ ದೋಷ ಬಲಹೀನತೆಗಳನ್ನು ತಾನು ಕ್ಷಮಿಸುವವನಾಗಿದ್ದು, ನಾವು ದಾರಿತಪ್ಪಿ ಉದ್ದೇಶಪೂರ್ವಕವಲ್ಲದೆ ಮಾಡಿದ ತಪ್ಪುದೋಷಗಳ ವಿಷಯವಾಗಿ ತನ್ನ ಕರುಣೆಯನ್ನು ನಮ್ಮ ಕಡೆಗೆ ತೋರುವವನಾಗಿರುವನು. ಕರುಣೆಯುಳ್ಳವರು "ಕರುಣೆಯನ್ನು ಹೊಂದುವರು" ಎಂಬ ಧನ್ಯತೆಗಳಲ್ಲಿ ಐದನೆಯದರ ಗುಣಲಕ್ಷಣಗಳ ವಿಷಯವಾಗಿ ಹೇಳುವಾಗ ನಮ್ಮ ಕರ್ತನು ಮಾನುಷ ದೋಷಬಲಹೀನತೆಗಳನ್ನು ನಿರ್ಲಕ್ಷಿಸಿ–ರುವುದಿಲ್ಲವೆಂಬುದು ಸ್ಪಷ್ಟ. ಇಲ್ಲಿ ನಮಗೆ ಕರುಣೆಯ ಅಗತ್ಯ–ವಿರುವುದು ಅಡಕವಾಗಿರುವುದು. ನಾವು ಕರುಣೆಯನ್ನು ಹೊಂದಬಹುದೆಂಬ ಭರವಸೆಯನ್ನು ಪಡೆದವರಾಗಿರುವಲ್ಲಿ ಈ ಆರನೆಯ ಧನ್ಯತೆಯಲ್ಲಿ ಆತನು ನಾವು ನಡೆ ನುಡಿ ಆಲೋಚನೆಗಳಲ್ಲಿ ಸಂಪೂರ್ಣವಾಗಿ ಪರಿಪೂರ್ಣತೆಯುಳ್ಳವ ರಾಗಿರಬೇಕೆಂಬುದನ್ನು ಪ್ರಕಟಿಸಿರುವುದಿಲ್ಲ. ನಾವು ಹಾಗಿದ್ದಲ್ಲಿ ಇಲ್ಲವೆ ಇಂಥ ಒಂದು ಸ್ಥಿತಿಯನ್ನು ತಲುಪುವುದು ನಮಗೆ ಸಾಧ್ಯವಾಗಿದ್ದಲ್ಲಿ, ಕ್ರಿಸ್ತನ ಯಜ್ಞದ ಮೂಲಕವಾಗಿ ನಮಗೆ ಕರುಣೆ ಮತ್ತು ಪಾಪಕ್ಷಮೆಯನ್ನು ಒದಗಿಸುವುದು ದೇವರಿಗೆ ಪೂರ್ಣವಾಗಿ ಅವಶ್ಯವಾಗುತ್ತಿರಲಿಲ್ಲ.

"ಹೃದಯದಲ್ಲಿನ ಶುದ್ಧತೆ" ಎಂಬ ಅಂಶವು ನಡೆ ನುಡಿ ಆಲೋಚನೆಗಳಲ್ಲಿ ಪರಿಪೂರ್ಣತೆಯುಳ್ಳವರಾಗಿರಬೇಕೆಂಬುದಲ್ಲ. ಆದರೆ ಈ ಎಲ್ಲಾ ಸಂಗತಿಗಳ ಬಗ್ಗೆ ಪರಿಪೂರ್ಣವಾದ ಉದ್ದೇಶವುಳ್ಳವರಾಗಿರಬೇಕು ಎನ್ನುವುದೇ. ನಾವು ಪ್ರಯತ್ನಿಸ ಬಯಸುವುದು ನಡೆ ನುಡಿ ಆಲೋಚನೆಗಳಲ್ಲಿನ ಪರಿಪೂರ್ಣತೆಯನ್ನು. ನಮ್ಮ ಮನಸ್ಸು ಇಚ್ಛೆಗಳು ಒಪ್ಪುವುದಕ್ಕಾಗಿ ದೇವರು ನೇಮಿಸಿ ನಮ್ಮ ಎದುರಿನಲ್ಲಿಟ್ಟಿರುವ ಮಾನದಂಡವು ಯಾವುದೆಂದರೆ "ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿ (ಪರಿಪೂರ್ಣನಾಗಿ) ಇರುವಂತೆ ನೀವೂ ದೋಷವಿಲ್ಲದವರಾಗಿ (ಪರಿಪೂರ್ಣರಾಗಿ) ಇರ್ರಿ." (ಮತ್ತಾಯ 5:48) ಸಂಪೂರ್ಣ ಪರಿಪೂರ್ಣತೆಯೆಂಬ ಈ ಮಾನದಂಡಕ್ಕಿಂತಲೂ ಕಡಿಮೆ ಗುಣಮಟ್ಟವನ್ನು ದೇವರು ನಿಗದಿಪಡಿಸಿಲ್ಲ. ಆದರೆ ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಾವು ನಡೆಯುವುದಾದರೆ ದೇವರು ಆತನ (ಕ್ರಿಸ್ತನ) ಮೂಲಕವಾಗಿ ನಮಗೆ ಕೃಪೆ ಕರುಣೆ ಮತ್ತು ಸಮಾಧಾನವನ್ನು ಒದಗಿಸಿಕೊಟ್ಟಿದ್ದಾನೆ. ಹೃದಯದ ಈ ಶುದ್ಧತೆಯು ಇಕ್ಕಟ್ಟಾದ ಮಾರ್ಗದಲ್ಲಿ ನಡೆಯುವವರು ತಲುಪಬೇಕಾದ ಪ್ರಾಮುಖ್ಯವಾದ ಹಂತಗಳಲ್ಲಿ ಒಂದು.

ಕೇವಲ "ಹೃದಯದಲ್ಲಿನ ಶುದ್ಧತೆಯುಳ್ಳವರು" ಮಾತ್ರ ದೇವರನ್ನು ನೋಡುವ ವಾಗ್ದಾನವನ್ನು ಪಡೆದಿರುವರು. ಲೋಕಯಾತ್ರೆಯ ಅಂತ್ಯದವರೆಗೂ ಅವರು ನಂಬಿಗಸ್ತರಾಗಿ ಮುಂದುವರೆಯುವರು. ಈಗಿನ ಜೀವಿತಕಾಲದಲ್ಲಿ ಅವರು ತಮ್ಮ ಹೃದಯದಲ್ಲಿ ಶುದ್ಧರಾಗಿರುವುದರಲ್ಲಿಯೂ ತಮ್ಮ ಉದ್ದೇಶಗಳಲ್ಲಿ ಶುದ್ಧತೆಯುಳ್ಳವರಾಗಿರುವುದರಲ್ಲಿಯೂ, (ರೋಮಾ 8:29) ದೇವರ ವಿಷಯದಲ್ಲಿಯೂ ಮತ್ತು ಮನುಷ್ಯರ ವಿಷಯದಲ್ಲಿಯೂ ಮಾಡುವ ತಮ್ಮ ಪ್ರಯತ್ನಗಳಲ್ಲಿ ಪ್ರಾಮಾಣಿಕರಾಗಿರುವು ದರಲ್ಲಿಯೂ, ಕರ್ತನಾದ ಯೇಸು ಕ್ರಿಸ್ತನ ಹೋಲಿಕೆಯನ್ನು ಪಡೆಯುವುದು ಮಾತ್ರವಲ್ಲದೆ ಕಡೆಯಲ್ಲಿ ಕರ್ತನ ವಾಗ್ದಾನಾನು ಸಾರವಾಗಿ ಅವರು ಮೊದಲನೇ ಪುನರುತ್ಥಾನದಲ್ಲಿ ಪಡೆದ ಶಕ್ತಿಯ ಮೂಲಕವಾಗಿ ಭೂಲೋಕ ಭಾವದಿಂದ ಆತ್ಮಿಕವಾಗಿ ಪರಲೋಕ ಭಾವದವರಾಗಿ ಮಾರ್ಪಡುವರು. ಆನಂತರ ಅಪೋಸ್ತಲನು ಸಾರಿ ಹೇಳಿರುವಂತೆ, "ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆ ವೆಂಬುದನ್ನು ಬಲ್ಲೆವು; ಯಾಕೆಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು." ಮತ್ತು ನಾವು ಹೀಗೆ "ತಂದೆಯ ತತ್ವದ

ಮೂರ್ತಿಯಾಗಿರುವ ದೇವರ ಮಹಿಮೆಯುಳ್ಳ ಮಗನ ಹೋಲಿಕೆಗೆ ಮಾರ್ಪಟ್ಟ ನಂತರ ನಿಸ್ಸಂಶಯವಾಗಿ ನಾವೂ ಸಹ ಪರಲೋಕದಲ್ಲಿರುವ ತಂದೆಯನ್ನೇ ನೋಡುವ ಸಾಮರ್ಥ್ಯವುಳ್ಳವರಾಗಿರುವೆವು ಮತ್ತು ನಮ್ಮ ಪ್ರಿಯ ವಿಮೋಚಕನಲ್ಲಿ "ಸುಕ್ಕು ಕಳಂಕ ಮುಂತಾದದ್ದೊಂದೂ ಇಲ್ಲದೆ ಪರಿಪೂರ್ಣತೆಯುಳ್ಳವರಾಗಿದ್ದು" ಆತನಿಂದ ತಂದೆಗೆ ಪರಿಚಯ ಮಾಡಿಕೊಡಲ್ಪಡುವೆವು. – 1 ಯೋಹಾನ 3:2; ಇಬ್ರಿಯ 1:3; ಎಫೆಸ 5:27; ಕೊಲೊಸ್ಸೆ 2:10.

ಇತರ ಭಾಗ್ಯಕರವಾದ ಸಂಗತಿಗಳಲ್ಲಿರುವಂತೆಯೇ ಇಲ್ಲಿಯೂ, ಇದರ ಒಂದು ಪಾಲಿನ ಪೂರ್ವಾನುಭವವು ಈಗಿನ ಜೀವಿತದಲ್ಲಿ ಸಿಗುವುದು. "ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣ ಶಕ್ತರಾಗುವ" ಹಾಗೆ ನಮ್ಮ ಮನೋನೇತ್ರಗಳನ್ನು ತೆರೆಯಲ್ಪಡು–ವದು ಎಂಬ ಒಂದು ಸಂಗತಿಯುಂಟು. (ಎಫೆಸ 3:18) ಆದರೆ ಎಲ್ಲರಲ್ಲಿಯೂ ಈ ಮನೋನೇತ್ರಗಳು ತೆರೆಯಲ್ಪಟ್ಟಿರುವುದಿಲ್ಲ; ಯೆಹೋವನ ಗುಣಾತಿಶಯಗಳಾದ ನ್ಯಾಯನೀತಿ ಜ್ಞಾನವಿವೇಕ ಪ್ರೀತಿ ಮತ್ತು ಬಲಾಧಿಕಾರಗಳು ಸರಿಯಾದ ಪ್ರಮಾಣದಲ್ಲಿ ಹೊಂದಾಣಿಕೆಯಾಗಿದ್ದು ಆತನು ಜಗತ್ತು ಉಂಟಾಗುವುದಕ್ಕೆ ಮೊದಲೇ ತನ್ನಲ್ಲಿ ಉದ್ದೇಶಿಸಿದಂತೆ ಪ್ರತಿಯೊಂದು ಜೀವಿಯನ್ನೂ ಆಶೀರ್ವದಿಸುವುದಕ್ಕಾಗಿ ಅವು ಏಕರೀತಿಯಾಗಿ ಪರಸ್ಪರ ಸಹಕರಿಸುತ್ತಿರುವುದನ್ನು ಕಾಣುವ ಸೌಭಾಗ್ಯವನ್ನು ಎಲ್ಲರೂ ಪಡೆದಿರುವುದಿಲ್ಲ;

ಆದರೆ ಸ್ಪಷ್ಟವಾದ ಮನೋದೃಷ್ಟಿಯನ್ನು ಹೊಂದುವ ಈ ಆಶೀರ್ವಾದವನ್ನು ಯಾರು ಪಡೆಯಬಹುದು? ಮತ್ತು ಯಾರು ಇವುಗಳನ್ನು ಸ್ಪಷ್ಟವಾಗಿ ಕಾಣುವಂತಾಗಿ ಆ ಭವ್ಯವಾದ ಪರಿಪೂರ್ಣತೆಯ ಹೋಲಿಕೆಯಲ್ಲಿ ಹೆಚ್ಚುಹೆಚ್ಚಾಗಿ ಬೆಳೆಯಲು ಸಮರ್ಥರಾಗಬಹುದು? ಕೇವಲ ಪ್ರಾಮಾಣಿಕರಾಗಿ ಶ್ರದ್ಧಾ ಹೃದಯಿಗಳಾಗಿ "ಹೃದಯದಲ್ಲಿ ಶುದ್ಧತೆಯುಳ್ಳವರು" ಮಾತ್ರವೇ! ದ್ವಂದ್ವ ಮನಸ್ಸುಳ್ಳವರನ್ನೂ ಎರಡು ಬಗೆಯ ಇಚ್ಛೆಯುಳ್ಳವರನ್ನೂ ದೇವವಾಕ್ಯದ ಪ್ರಕಾರ ದ್ವಂದ್ವ ದೃಷ್ಟಿಯುಳ್ಳವರೆಂದೂ ಎರಡು ಕಣ್ಣುಳ್ಳವರೆಂದೂ ಹೇಳಲಾಗಿರುವುದು. ಅವರು ಆತ್ಮಿಕ ಸಂಗತಿಗಳನ್ನು ಮಾಲುಗಣ್ಣಿನಿಂದ ನೋಡುವರು, ಸಂಗತಿಗಳನ್ನು ದ್ವಂದ್ವ ದೃಷ್ಟಿಯಿಂದ ನೋಡುವರು ಮತ್ತು ಆ ಪ್ರಮಾಣದಲ್ಲಿ ಅವುಗಳನ್ನು ಮಸುಕುಮಸುಕಾಗಿ ಅಸ್ಪಷ್ಟತೆಯಿಂದ ಕಾಣುವರು. ಹೀಗಾಗಿ ದೇವಜನರಲ್ಲಿ ಹಲವರು ಎಲ್ಲಾ ವಿಷಯಗಳಲ್ಲಿ ಕ್ರಿಸ್ತನಲ್ಲಿ ಅಭಿವೃದ್ಧಿ ಹೊಂದಲು ವಿಫಲರಾಗಿರುವರು. ಅವರು ಹೀಗೆ ಸಂಗತಿಗಳನ್ನು ಎರಡು ಮನಸ್ಸಿನಿಂದ ಗೊಂದಲಮಯವಾಗಿ ನೋಡುವರು. ಅವರು ಪರಲೋಕದ ವಿಷಯವಾಗಿ ಕೆಲವು ಸಂಗತಿಗಳಲ್ಲಿ ಭೂಲೋಕದ ವಿಷಯವಾಗಿರುವ ಕೆಲವು ಸಂಗತಿಗಳನ್ನು ನೋಡುವರು; ಅವರು ದೇವರ ಗುಣಲಕ್ಷಣಗಳನ್ನು ಮಸುಕಾಗಿ ಅಸ್ಫುಟವಾಗಿ ಕಂಡು ಅವುಗಳನ್ನು ಅನುಸರಣೆ ಮಾಡುವ ಸಾಮರ್ಥ್ಯವಿಲ್ಲದವರಾಗುವರು. ಕ್ರಿಸ್ತನ ನಾಮಧೇಯವನ್ನು ಪಡೆದಿರುವವರೆಲ್ಲರೂ ಆ ಒಬ್ಬನೇ ಒಡೆಯನನ್ನು ಹೊಂದಿರುವದಕ್ಕೆ ಅಧಿಕಾಧಿಕವಾಗಿ ಬಯಸುವವ–ರಾಗೋಣ ಮತ್ತು ಆತನನ್ನು ಸೇವಿಸಿ ಮಹಿಮೆಪಡಿಸುವ ಒಂದೇ ದೃಷ್ಟಿಯುಳ್ಳವರಾಗಿದ್ದು ಶುದ್ಧವಾಗಿರುವ ಪ್ರಾಮಾಣಿಕ ಹಾಗೂ ನಂಬಿಗಸ್ತಿಕೆಯ ಹೃದಯವುಳ್ಳವರಾಗಿರೋಣ.

## ದೇವರ ಮಕ್ಕಳು ಎಲ್ಲರೂ ಸಮಾಧಾನ ಪಡಿಸುವವರು

ಏಳನೆಯ ಧನ್ಯತೆಯು ಆರನೆಯದನ್ನು ಬಹಿರಂಗವಾಗಿ ತೋರ್ಪಡಿಸುವ ಒಂದು ಗುಣವಾಗಿರುವುದು. ಇತರರು ಕಾಣಲು ಸಾಧ್ಯವಾಗದಂತ ದೇವರ ಕಡೆಗಿನ ಹೃದಯದ ಶುದ್ಧತೆಯು ಈ ಏಳನೇ ಧನ್ಯತೆಯ ಗುಣಲಕ್ಷಣದಲ್ಲಿಯೂ ಮತ್ತು ಇದರ ಬೆಳವಣಿಗೆಯಲ್ಲಿಯೂ ಕಾಣಬರುತ್ತದೆ. ಅದು ಯಾವುದೆಂದರೆ ಸಮಾಧಾನವನ್ನು ಬಯಸುವವರಾಗಿದ್ದು ಇತರರಲ್ಲಿ ಸಮಾಧಾನವನ್ನು ಪ್ರಚುರಪಡಿಸಲು ಪ್ರಯತ್ನಿಸುವುದು. ಯಾಕೆಂದರೆ ಯಾವಾತನು ಮೊದಲು ಪ್ರಾಮಾಣಿಕನಾಗಿ ದೇವರ ವಿಷಯದಲ್ಲಿ ಹೃದಯದ ಶುದ್ಧತೆಯುಳ್ಳವನಾಗಿರುವುದಿಲ್ಲವೋ ಮತ್ತು ಈ ಹಿಂದೆ ವಿವರಿಸಿರುವ ಕೃಪಾಗುಣಗಳಾದ (1) ದೀನತೆ (2) ಅನುಕಂಪ (3) ತಾಳ್ಮೆಯಿಂದ ಅಧೀನಪಡಿಸಿಕೊಳ್ಳುವಿಕೆ (4) ನೀತಿಗಾಗಿ ಹಸಿದು ಬಾಯಾರುವುದು [ಭರವಸೆಯುಳ್ಳವ–ನಾಗಿರುವುದು ಇದರಲ್ಲಿ ಸೇರಿರುವುದು] (5) ಇತರರ ಬಗ್ಗೆ ಪ್ರೀತಿ ಕರುಣೆಯುಳ್ಳವನಾಗಿರುವುದು (6) ಹೃದಯದ ಪ್ರಾಮಾಣಿಕತೆ ಇವುಗಳನ್ನು ಸಹ ತನ್ನ ಹೃದಯದಲ್ಲಿ ಅಭಿವೃದ್ಧಿಪಡಿಕೊಂಡಿ – ರುವುದಿಲ್ಲವೋ ಅವನು ದೇವರ ದೃಷ್ಟಿಯಲ್ಲಿ ಸಮಾಧಾನ ಪಡಿಸುವವನಾಗಿರಲಾರನೆಂಬುದು ಪ್ರಶ್ನಾತೀತವಾದುದು. ಹಾಗು ಯಾವಾತನು ಈ ಗುಣಲಕ್ಷಣಗಳನ್ನು ಯಾವುದೇ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಅಭಿವೃದ್ಧಿಪಡಿಸಿಕೊಂಡಿರುವನೋ ಅವನು ನಿಶ್ಚಯವಾಗಿ ತನ್ನಲ್ಲಿ ಸಮಾಧಾನದ ಪ್ರವೃತ್ತಿಯುಳ್ಳ ವನಾಗಿದ್ದು ಇತರರನ್ನು ಸಮಾಧಾನಪಡಿಸುವವನಾಗಿರದೆ ಬೇರೇನೂ ಆಗಿರಲಾರನು.

ದೇವಜನರಲ್ಲಿ ಸ್ವಲ್ಪ ಮಂದಿ ಮಾತ್ರವೇ ಈ ವರೆಗೆ ಈ ಕೃಪಾಗುಣವನ್ನು ಗಣನೀಯವಾಗಿ ತಮ್ಮಲ್ಲಿ ಅಭಿವೃದ್ಧಿ ಪಡಿಸಿಕೊಂಡು ತಮ್ಮ ಜೀವಿತಗಳಲ್ಲಿ ಇದನ್ನು ದೃಷ್ಟಾಂತ ಪಡಿಸಿರುವರೆಂಬುದು ಬಹು ಸ್ಪಷ್ಟ. ಕ್ರಿಸ್ತನ ನಾಮಧೇಯವನ್ನು ಹೊಂದಿರುವವರಲ್ಲಿಯೂ ಬಹು ದೊಡ್ಡ ಪಾಲು ಜನರು ಇದಕ್ಕೆ ವಿರುದ್ಧವಾದ ವಿಧಾನವನ್ನು ಅನುಸರಿಸಿರುವುದಾಗಿ ಕಂಡು ಬಂದಿರುವುದು. ಅವರು ಹೃದಯದ ಶುದ್ಧತೆಯುಳ್ಳವರಾದರೂ ವಿಶಾಲವಾದ ಅನುಕಂಪವುಳ್ಳವರಾದರೂ ಕ್ರಿಸ್ತೀಯ ಅನುಭವ ಶಾಲೆಯಲ್ಲಿ ಅವರಿಗೆ ಕಲಿಯುವುದು ಇನ್ನೂ ಬಹಳವಾಗಿ ಇರುವುದೆಂಬುದನ್ನು ಇದು ಸೂಚಿಸುವುದು. ಯಾಕೆಂದರೆ ಸಮಾಧಾನವನ್ನು ಪ್ರಚುರಗೊಳಿಸುವುದಕ್ಕೆ ಬದಲಾಗಿ ಅವರು ಕಲಹವನ್ನು ಬಿತ್ತುವವರರಾಗಿರುವರು. ಇದು ಕೆಟ್ಟ ಉದ್ದೇಶಕ್ಕಾಗಿಲ್ಲವಾದರೂ ವಾಸ್ತವವಾಗಿ ಅಭ್ಯಾಸಬಲದಿಂದ ಇದು

ಬಂದದ್ದಾಗಿರುವುದು. ಮತ್ತು ಅಜ್ಞಾನ ಹಾಗು ದೈವ ವಿಧಾನವಾದ ಪ್ರೀತಿಯ ಅಲ್ಲದೆ ಇದಕ್ಕೆ ವಿರುದ್ಧವಾಗಿ ಲೋಕದಲ್ಲಿ ಪ್ರಭಲವಾಗಿರುವ ಸ್ವಾರ್ಥಭಾವದ ನಡುವೆ ಇರುವ ದೊಡ್ಡ ವ್ಯತ್ಯಾಸವನ್ನು ಗ್ರಹಿಸಲು ವಿಫಲರಾಗಿರುವುದರಿಂದ ಉಂಟಾಗಿರುವುದು. ಕಲಹವನ್ನೆಬ್ಬಿಸುವುದು ನಡವಳಿಕೆಯ ಮೂಲಕ ಅಥವಾ ನೋಟದಿಂದಾದರೂ ಉಂಟಾಗಬಹುದಾದರೂ ಮುಖ್ಯವಾಗಿ ಇದು ನಾಲಿಗೆಯ ಮೂಲಕವಾಗಿ ಪ್ರಚೋದಿತವಾಗುವುದು. ಇದರಂತೆಯೇ ಸಮಾಧಾನ ಪಡಿಸುವುದು ಕಣ್ಣಿನ ಮೂಲಕವಾಗಿ ಉಂಟಾಗುವುದಾದರೂ ಮುಖ್ಯವಾಗಿ ನಾಲಿಗೆಯ ಮೂಲಕವಾಗಿ ನಡೆಯುವುದು. ನಾವೆಲ್ಲರೂ ತಿಳಿದಿರುವ ಹಾಗೆ ಎಷ್ಟು ಮಂದಿ ಕ್ರೈಸ್ತರು ಸತತವಾಗಿ ಕಲಹವನ್ನೆಬ್ಬಿಸುವ ನಾಲಿಗೆಗಳನ್ನು ಹೊಂದಿದವರಾಗಿರುವರು! ವಿರೋಧಿಯಾದ ಸೈತಾನನು ಬೇರೆ ಹಲವು ವಿಷಯಗಳಲ್ಲಿ ತನ್ನ ಹಿಡಿತದಿಂದ ತಪ್ಪಿಸಿಕೊಂಡ ಅನೇಕರನ್ನು ಬಹು ಕಾಲದ ನಂತರವೂ ಈ ವಿಧವಾಗಿ ತನ್ನ ಹತೋಟಿಯಲ್ಲಿಟ್ಟುಕೊಂಡಿರುವನು; ಮತ್ತು ಇದು ಬಹುವಾಗಿ ತಾವು ಸೈತಾನನ ಸೇವೆಮಾಡುತ್ತಿರುವುದನ್ನು ಅವರು ಕಂಡುಹಿಡಿಯಲಾಗದ ಕಾರಣದಿಂದಾಗಿರುವುದು. ಕೇವಲ ತಾವು ಕಲಹ ಹಗೆತನ ಅಸೂಯೆ ಮತ್ಸರ ಮತ್ತು ವಿಷಬೇರುಗಳನ್ನು ಬಿತ್ತುವವರಾಗಿ ಹಲವರನ್ನು ಪ್ರಚೋದಿಸಿ ಮಲಿನಗೊಳಿಸುತ್ತಿರುವುದನ್ನು ಸಹ ಅವರು ಪತ್ತೆಹಚ್ಚಲಾರರು.

"ಯಾರನ್ನೂ ದೂಷಿಸದೆ" ಮತ್ತು "ನಿಮ್ಮ ಬಾಯಿಂದ ಯಾವ ಕೆಟ್ಟ ಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿಮಾಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳುವವರ ಹಿತಕ್ಕಾಗಿ ಅದನ್ನು ಆಡಿರಿ." ಎಂಬ ಆದೇಶದ ಉದ್ದ ಅಗಲ ಮತ್ತು ಅದರ ಆಳವನ್ನು ಕ್ರೈಸ್ತರು ಎಂದು ಕಲಿತುಕೊಳ್ಳಲಿರುವರು? (ತೀತ 3:2; ಎಫೆಸ್ಸ 4:29) ನಿಜವಾಗಿಯೂ ದೇವರ ಮಕ್ಕಳಾಗಿರುವವರಲ್ಲಿ ಕೆಲವರು ಒಂದು ಕೆಟ್ಟ ಮಾತನ್ನು ಹೇಳುವಲ್ಲಿ (ಅದರಲ್ಲಿರುವ ಸತ್ಯಾಂಶದ ಬಗ್ಗೆ ತಾವು ಖಚಿತಮಾಡಿಕೊಂಡಿದ್ದರೂ) ಅವರು ಒಂದು ಕೆಟ್ಟತನದ ಲೋಕವನ್ನೇ ಸೃಷ್ಟಿಸುತ್ತಿರಬಹುದೆಂಬುದನ್ನು ಕಲಿತುಕೊಳ್ಳಲು ಅವರಿಗೆ ಎಷ್ಟು ಸಮಯ ಹಿಡಿಯುವುದು? ಸತ್ಯವನ್ನು ನುಡಿಯುವುದು ಯಾವಾಗಲೂ ಅವಶ್ಯವಿಲ್ಲವೆಂಬುದನ್ನೂ ಇಲ್ಲವೇ ಇತರರಿಗೆ ಭಕ್ತಿವೃದ್ಧಿಯನ್ನು ಉಂಟುಮಾಡುದನ್ನು ಬಿಟ್ಟು ಹೀಗೆ ಮಾಡುವುದು ಎಂದೂ ಸೂಕ್ತವಲ್ಲವೆಂಬುದನ್ನು ಕಲಿತುಕೊಳ್ಳಲು ಅವರಿಗೆ ಎಷ್ಟು ಸಮಯ ಬೇಕಾಗುವುದು? ಇತರರ ನಡವಳಿಕೆಯ ಬಗ್ಗೆ ಹರಟುವುದು ಮತ್ತು ಇತರರಲ್ಲಿ ದೋಷವೆಣಿಸುವುದು ಹಾಗೂ ಎಲ್ಲಾದರಲ್ಲಿಯೂ ತಪ್ಪನ್ನು ಕಂಡುಹಿಡಿಯುವುದು ಇವುಗಳು ತಮ್ಮಲ್ಲಿರುವ ಪ್ರೀತಿಯ ಕೊರತೆಗೆ ಸಾಕ್ಷಿಗಳೆಂಬುದನ್ನೂ, ಇವು ಕ್ರಿಸ್ತನ ಹೋಲಿಕೆಗೆ ಬರುವುದರಲ್ಲಿ ತಮಗಿರುವ ಕೊರತೆಯೆಂಬುದನ್ನೂ, ಮತ್ತು ಇವು ಸಮಾಧಾನ ಪಡಿಸುವವರಾಗಲು ತಮಗಿರುವ ಗುಣದ ಕೊರತೆಗಳೆಂಬುದನ್ನೂ, ಅಲ್ಲದೆ ತಾವು ಕರೆಯಲ್ಪಟ್ಟದನ್ನೂ ಆಯಲ್ಪಟ್ಟದ್ದನ್ನೂ ದೃಢಪಡಿಸಿಕೊಂಡು ಪರಲೋಕ ರಾಜ್ಯದಲ್ಲಿ ಒಂದು ಸ್ಥಾನವನ್ನು ಪಡೆಯಬೇಕಿದ್ದಲ್ಲಿ ಅವರು ಶ್ರದ್ಧಾಪೂರ್ವಕವಾಗಿ ಹೋರಾಡಿ ಈ ಕೊರತೆಗಳನ್ನು ನೀಗಿಸಿಕೊಳ್ಳುವ ಅಗತ್ಯವಿರುವುದೆಂಬುದನ್ನೂ ಮನದಟ್ಟುಮಾಡಿಕೊಳ್ಳಲು ಅವರಿಗೆ ಸರಣಿ ಸರಣಿಯಾಗಿ ಎಷ್ಟು ವಿಧವಾದ ಪಾಠಗಳು ಬೇಕಾಗಿರುವುದು?

ಓಹ್! ಅಪೋಸ್ತಲನ ಈ ಮಾತುಗಳನ್ನು ಎಲ್ಲರೂ ಕಂಠಪಾಠಮಾಡಿ ಅವುಗಳನ್ನು ತಮ್ಮ ಜೀವಿತದ ಆದರ್ಶವನ್ನಾಗಿ ಮಾಡಿಕೊಂಡಲ್ಲಿ ಎಷ್ಟೋ ಹಿತವಾಗಿರುವುದು! "ಯಾವುದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೋ, ಯಾವುದು ಕೀರ್ತಿಗೆ ಯೋಗ್ಯವೋ, ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ". ಯಾರು ಸತ್ಯವಾದ ಮನೋಹರವಾದ ಹಿತವಾದ ಮತ್ತು ಸೊಗಸಾದ ಸಂಗತಿಗಳನ್ನು ಆಲೋಚಿಸುತ್ತಿರು–ವರೋ ಅವರು ಅವುಗಳನ್ನು ತಮ್ಮ ತಮ್ಮೊಳಗೆ ಮಾತಾಡಿ–ಕೊಳ್ಳುವರು. ಆದುದರಿಂದ ನಮ್ಮ ಹೃದಯದಲ್ಲಿ ತುಂಬಿರುವುದೇ ಬಾಯಿಂದ ಸತತವಾಗಿ ಹೊರಡುವುದೆಂಬ ಕಾರಣದಿಂದಲೂ ಹಾಗು ಇದನ್ನು ಕರ್ತನು ಮೆಚ್ಚುವನೆಂಬುದಕ್ಕಾಗಿಯೂ ಅಲ್ಲದೆ ಇದು ಕೇಳುವವರಿಗೆ ಆಶೀರ್ವಾದವನ್ನು ಉಂಟುಮಾಡುವುದು ಎಂಬ ಕಾರಣಕ್ಕಾಗಿಯೂ ನಮ್ಮ ಹೃದಯದಲ್ಲಿ ಒಳ್ಳೆಯ ಸಂಗತಿಗಳನ್ನು ತುಂಬಿಸಿಕೊಳ್ಳುವ ಅಗತ್ಯವಿರುವುದು. – ಫಿಲಿಪ್ಪ 4:8; ಲೂಕ 6:45.

ಇಂಥವರು ತಮ್ಮ ಯತ್ನಗಳಿಗೆ ಯೋಗ್ಯವಾದ ಒಂದು ಬಹು ಅಮೂಲ್ಯವಾಗಿರುವ ವಾಗ್ದಾನವನ್ನು ಪಡೆದಿರುವರು; ಅದೇನೆಂದರೆ "ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು." ಅವರು ದೇವರ ಆತ್ಮವನ್ನು ಹೊಂದಿದವರಾಗಿದ್ದು ಆತನ ಪ್ರಿಯ ಕುಮಾರನ ಹೋಲಿಕೆಯನ್ನು ತಮ್ಮ ಹೃದಯಗಳಲ್ಲಿ ಚಿತ್ರಿಸಿಕೊಂಡಿರುವರು; ಅವರು ಸತ್ಯವಾಕ್ಯದ ಮೂಲಕವಾಗಿ ಪ್ರತಿಷ್ಠಿತರಾಗಿರುವರು; ಅವರು ಕಡೆಯಲ್ಲಿ "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯುಲ್ಲಿ ಪಾಲನ್ನು ಹೊಂದಲು ಯೋಗ್ಯರಾಗಿರುವರು." ಕೇವಲ ಇಂಥ ಹೃದಯವುಳ್ಳವರನ್ನೇ ದೇವರು ಯಾವಾಗಲೂ ತನ್ನ ಮಕ್ಕಳೆಂದು ಹಾಗೂ ಶ್ರೇಷ್ಠನಾದ ತನ್ನ ಕುಮಾರನೂ ನಮ್ಮ ಕರ್ತನೂ ಆದವನೊಡನೆ ಆ ರಾಜ್ಯದಲ್ಲಿ ಸಹಬಾಧ್ಯರೆಂದು ಮಾನ್ಯಮಾಡುವನು. ಇದು ಮಾತ್ರವಲ್ಲದೆ, ಇದು ನಮಗೋಸ್ಕರವಾದ ಹಾಗೂ, ಕೆಲವು ಮಟ್ಟಿಗೆ ಬೇರೆ ಪ್ರತಿಯೊಬ್ಬರಿಗೂ, ದೇವರ ಮಕ್ಕಳಾಗಿ ನಮ್ಮಲ್ಲಿರುವ ಸಮಾಧಾನದ ಪ್ರವೃತ್ತಿ ಮತ್ತು ನಮ್ಮ ಜೀವಿತದಲ್ಲಿ ಸಮಾಧಾನದೆಡೆಗೆ ನಡೆಸುವಂಥ ವಿಧಾನವನ್ನು ಅನುಸರಿಸುವಾಗ ನಾವು ತೆಗೆದುಕೊಳ್ಳುವ ಜಾಗರೂಕತೆ ಇವುಗಳಿಗೆ ಸಾಕ್ಷಿಪ್ರಮಾಣವಾಗಿದ್ದು, ಇದರಲ್ಲಿ ನಮ್ಮ ಬೆಳವಣಿಗೆಯ ಮಟ್ಟವನ್ನು ಚೆನ್ನಾಗಿ ತೋರಿಸಿಕೊಡುವ ಒಂದು ವಿಶೇಷ ಪರೀಕ್ಷೆಯೂ ಇರುವುದು.

ದೇವಜನರಲ್ಲಿ ಕೆಲವರು ಸಮಾಧಾನಕ್ಕೆ ಅನುಕೂಲ–ವಾಗದಂತ ಹೋರಾಟ ಮನೋಭಾವವು ತಮ್ಮಲ್ಲಿ ಸಹಜ–ವಾಗಿಯೇ ಇರುವುದನ್ನು ಕಂಡುಕೊಂಡಿರುವರು. "ನಂಬಿಕೆಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಶ್ರದ್ಧಾಪೂರ್ವಕವಾಗಿ ಹೋರಾಡಲು"

ಹಾಗೂ ಲೋಕ ಶರೀರ ಹಾಗು ವಿರೋಧಿಯಾದ ಸೈತಾನನಿಗೆ ವಿರುದ್ಧವಾಗಿ ಒಂದು ಒಳ್ಳೆಯ ಹೋರಾಟವನ್ನು ಮಾಡಲು ಕೆಲ ಮಟ್ಟಿನ ಹೋರಾಟ ಮನೋಭಾವವು ಅಗತ್ಯವೆಂಬುದು ನಿಜವೇ. ಹೀಗಾಗಿ ತಮ್ಮಲ್ಲಿ ಹೋರಾಟ ಮನೊಭಾವವು ಸಹಜವಾಗಿಯೇ ಇರುವಂಥವರು ಇತರರೊಂದಿಗೆ ಕೆಲವು ವಿಷಯಗಳಲ್ಲಿ ಸತತ ವಿರೋಧಗಳಿರುವುದನ್ನು ಕಂಡುಕೊಳ್ಳುವರು. ಅವರು ಇದರಿಂದ ಹೇಗೂ ಧೈರ್ಯಗೆಡಬಾರದು. ಆದರೆ ಸರಿಯಾದ ರೀತಿಯಲ್ಲಿ ಇದನ್ನು ಬಳಸಿಕೊಂಡು ಅಭ್ಯಾಸಿಸುವಲ್ಲಿ, ಹೋರಾಟ ಮನೋಭಾವವು ಒಂದು ಅಮೂಲ್ಯವಾದ ಸೇವಕನಂತೆಯೂ ಸೈನಿಕನಂತೆಯೂ ಇರುವುದೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ನಮ್ಮ ಸಹ ಜೀವಿಗಳ ಬಗ್ಗೆ ಇದನ್ನು ಪ್ರಯೋಗಿಸುವಾಗ ಕರುಣೆಯಿಂದಲೂ ನಮ್ಮ ಸ್ವಂತ (ದೋಷ ಬಲಹೀನತೆಗಳೆಂಬ) ಅಪೂರ್ಣತೆಗಳನ್ನು ಹಾಗೂ ಎಲ್ಲರಲ್ಲಿರುವ ಅಪೂರ್ಣತೆಗಳನ್ನು ಅರಿತವರಾಗಿ ಸೌಮ್ಯ ಭಾವದಿಂದ ಕೂಡಿದವರಾಗಿ ಇದನ್ನು ಮಾಡಬೇಕು. ಹೋರಾಟ ಮನೋಭಾವವನ್ನು ಪ್ರೀತಿಕರುಣೆಯ ದಾರಿಯಲ್ಲಿ ತರಬೇತು–ಗೊಳಿಸಿ ಅದನ್ನು ಸತ್ಯದ ಪರವಾಗಿ ಹಾಗೂ ಸತ್ಯದ ಸೇವಕರ ಪರವಾಗಿ ಮತ್ತು ಸಂಸ್ಥೆಗಳ ಪರವಾಗಿಯೂ ಮತ್ತು ತಪ್ಪಾದವುಗಳ ವಿರೋಧವಾಗಿಯೂ ಹೋರಾಡಲು ಬಿಡಬೇಕು. ಆದರೆ ಅದು ತಪ್ಪಾದವುಗಳಿಂದ ಕುರುಡರಾಗಿ ಮಾಡಲ್ಪಟ್ಟವರ ಮತ್ತು ಅಜ್ಞಾನದಿಂದ ತಪ್ಪಾದವುಗಳಿಗೆ ಸೇವಕರಾದವರ ವಿರೋಧ –ವಾಗಿಯಲ್ಲ. ಹೋರಾಟ ಮನೋಭಾವವನ್ನು ಸ್ವತಃ ನಮ್ಮಲ್ಲಿನ ಗುಣಸ್ವಭಾವಗಳ ಅಪರಿಪೂರ್ಣತೆ ಹಾಗೂ ಬಲಹೀನತೆಗಳ ವಿರೋಧವಾಗಿ ಹೋರಾಡಲು ಅಧಿಕವಾಗಿ ಬಿಡಬೇಕು. ಹೀಗೆ ಈ ಒಳ್ಳೆಯ ಕಾರ್ಯದಲ್ಲಿ ಚಟುವಟಿಕೆಯಿಂದ ತೊಡಗಿಸಿಕೊಂಡಾಗ ಇದಕ್ಕೆ ಇತರರ ಮೇಲೆ ಆಕ್ರಮಣ ಮಾಡಲು ಸಮಯ ದೊರೆಯಲಾರದು. ಸ್ವಾರ್ಥವನ್ನು ಜಯಿಸುವಾಗ ಬರುವ ಕಷ್ಟಗಳ ವಿಷಯವಾಗಿ ಅರಿವು ಮೂಡಿದಾಗ ಇತರರ ಬಲಹೀನತೆಗಳ ಬಗ್ಗೆ ಇದು ವಿಶೇಷವಾದ ಅನುಕಂಪವನ್ನು ಉಂಟು ಮಾಡುತ್ತದೆ.

## ಪರಲೋಕದಲ್ಲಿ ಶ್ರೇಷ್ಠವಾದ ಪ್ರತಿಫಲವನ್ನು ಗಳಿಸುವುದು

ಹಿಂಸೆಯನ್ನು ತಾಳಿಕೊಳ್ಳುವುದರ ಮೂಲಕ ಲಭಿಸುವ ಆಶೀರ್ವಾದವು ಎಂಟನೆಯ ಧನ್ಯತೆ. ದೇವಜನರಿಗೆ ಹಿಂದೆ ಹೇಳಿದ ಕರ್ತನ ಕೆಲವು ಕೃಪಾಗುಣಗಳಿಂದ ದೊರೆಯುವ ಧನ್ಯತೆಯ ಅನುಭವವನ್ನು ಗಳಿಸುವವರೆಗೂ ಅಪೊಸ್ತಲನಾದ ಪೌಲನಿಗಾದಂತೆ "ಉಪದ್ರವಗಳಲ್ಲಿಯೂ (ವಿಜೃಂಭಿಸಿ) ಉಲ್ಲಾಸವಾಗಿದ್ದೇವೆ." ಎಂದು ಹೇಳುವ ಮಟ್ಟಕ್ಕೆ ತಲುಪಲು ಆಗುವುದಿಲ್ಲ. ಆದರೆ ನಮ್ಮ ಕರ್ತನು ವಿಧವಿಧವಾದ ಹಿಂಸೆಗಳಲ್ಲಿನ ವ್ಯತ್ಯಾಸಗಳನ್ನು ತೋರಿಸಿ, ಇತರ ಎಲ್ಲಾ ಬಗೆಗಳಿಂದ ಆಶೀರ್ವಾದಕರವಾದುದನ್ನು ಪ್ರತ್ಯೇಕಿಸಿ ಅದರಲ್ಲಿರುವ ವಿಶೇಷತೆಯನ್ನು ಜಾಗರೂಕತೆಯಿಂದ ಗುರುತು ಮಾಡಿ ತೋರಿಸಿರುವನು. ಇತರರಲ್ಲಿ ದೋಷವೆಣಿಸುವುದು ಹಾಗೂ ಸಾಮಾನ್ಯವಾಗಿ ಜಗಳಗಂಟಿಗರಾಗಿರುವುದು ಅಲ್ಲದೆ ಎಲ್ಲರೊಡನೆ ಎಲ್ಲಾ ವಿಷಯಗಳಲ್ಲಿಯೂ ವಿರೋಧಮಾಡಿ ಕಲಹವೆಬ್ಬಿಸುವುದು ಇವುಗಳ ಮೂಲಕವಾಗಿ ನಾವು ಹಿಂಸೆಯನ್ನು ಬರಮಾಡಿಕೊಳ್ಳಲಾಗದು; ಇಲ್ಲವೇ ಮತಾಂಧತೆಯ ಮೂಲಕವಾಗಿ ನಾವು ಹಿಂಸೆಯನ್ನು ಬರಮಾಡಿಕೊಳ್ಳಲಾಗದು. ಬದಲಾಗಿ ನಾವು "ಸ್ವಸ್ಥಚಿತ್ತ ಮನೋಭಾವವನ್ನು" ಬೆಳೆಸಿಕೊಂಡವರಾಗಿ ಸತ್ಯವೇದದಲ್ಲಿ ಪ್ರಕಟವಾಗಿರುವಂತೆ ಕರ್ತನಲ್ಲಿರುವ ಸ್ವಸ್ಥಚಿತ್ತತೆಯು ಏನೆಂಬುದನ್ನು ಹಂತಹಂತವಾಗಿ ಕಲಿಯುತ್ತಾ ಹೋಗೋಣ. ಹೀಗಿದ್ದರೂ ನಾವು ಮತಾಂಧರೆಂದು ಲೋಕವು ನಮ್ಮ ಮೇಲೆ ತಪ್ಪಾಗಿ ಆರೋಪಿಸುವುದರಲ್ಲಿ ಸಂಶಯವಿಲ್ಲ; ಏಕೆಂದರೆ ಅನೇಕ ಸಾರಿ ಮಾನುಷಜ್ಞಾನವು ದೇವರ ದೃಷ್ಟಿಯಲ್ಲಿ ಹುಚ್ಚುತನವಾಗಿ ತೋರುವಂತೆಯೇ ದೇವಜ್ಞಾನವೂ ಮನುಷ್ಯರ ದೃಷ್ಟಿಯಲ್ಲಿ ಹಲವು ವೇಳೆ ಹುಚ್ಚುತನವೆಂದು ಎಣಿಸಲ್ಪಟ್ಟಿರುವುದು.

ಎಂದಾದರೂ ನಾವು ಅನುಸರಿಸುವ ಕ್ರಿಯಾ ವಿಧಾನವು ಮತಾಂಧತೆಯುಳ್ಳದ್ದೂ ಸೂಕ್ತವಲ್ಲದ್ದೂ ಆಗಿ ಕಂಡುಬಂದಲ್ಲಿ ಆಗ ಇದೇ ವಿಧವಾದ ಮನೋಭಾವ ಉಪದೇಶ ಹಾಗು ನಿದರ್ಶನಗಳು ನಮ್ಮ ಕರ್ತನಲ್ಲಿ ಮತ್ತು ಅಪೋಸ್ತಲರಲ್ಲಿ ಕಂಡುಬಂದಿರುವುದೋ ಏನೋ ಎಂಬುದನ್ನು ನಾವು ಖಚಿತಮಾಡಿಕೊಳ್ಳುವವರೆಗೂ ಅದನ್ನು ಮಾಡಲು ನಾವು ಹಿಂಜರಿಯಬೇಕು. ಆನಂತರ ಲೋಕವು ಈ ವಿಧಾನದ ಬಗ್ಗೆ ಏನು ಹೇಳುವುದೋ ಹೇಗೆ ಆಲೋಚಿಸುವುದೋ ಎಂಬುದನ್ನು ನಾವು ಅಲಕ್ಷಿಸಿ ನಾವು ಅದನ್ನು ಸುರಕ್ಷಿತವಾಗಿ ಅನುಸರಿಸುವವರಾಗಬಹುದು. ಉದಾಹರಣೆಯಾಗಿ ಹೇಳುವುದಾದರೆ, ಒಬ್ಬನು ಹಗಲು ರಾತ್ರಿ ದುಡಿದು ಲಕ್ಷಾಂತರ ಹಣವನ್ನು ಕೂಡಿಸಿಟ್ಟುಕೊಂಡು ತಾನು ಸತ್ತ ನಂತರ ತನ್ನ ಮಕ್ಕಳು ಅದಕ್ಕಾಗಿ ಹೊಡೆದಾಡುವಂತೆ ಬಿಡುವುದು ದೇವರ ದೃಷ್ಟಿಯಲ್ಲಿ ಹುಚ್ಚುತನವಾಗಿದೆ; ಆದರೆ ಮನುಷ್ಯರ ದೃಷ್ಟಿಯಲ್ಲಿ ಇದು ಸೂಕ್ತವಾದ ವಿಧಾನ. ಅಂತ್ಯದಲ್ಲಿ ಒಂದು ಉತ್ತಮ ಪುನರುತ್ಥಾನ ಮತ್ತು ನಿರಂತರವಾದ ಪ್ರಭಾವ ಮಾನ ನಿರ್ಲಯತ್ವಗಳನ್ನು ಪಡೆಯಲು ಅಪೋಸ್ತಲರು ತಮ್ಮ ಲೌಕಿಕ ಅಭಿಲಾಶೆ ಉನ್ನತಿ ಹೆಸರು ಕೀರ್ತಿಗಳನ್ನು ತ್ಯಾಗಮಾಡಿ ತಮ್ಮ ಜೀವಿತವನ್ನು ಸತ್ಯದ ನಿಮಿತ್ತವಾದ ಸೇವೆಯಲ್ಲಿ ಕಳೆಯುವುದು ದೇವರ ದೃಷ್ಟಿಯಲ್ಲಿ ವಿವೇಕವುಳ್ಳದ್ದಾಗಿತ್ತು; ಆದರೆ ಲೌಕಿಕ ದೃಷ್ಟಿಯಲ್ಲಿ ಇವು ಅವಿವೇಕವೂ ಮತಾಂಧತೆಯೂ ಆಗಿದ್ದವು.

ನಾವು ಕರ್ತನನ್ನೂ ಮತ್ತು ಅಪೋಸ್ತಲರನ್ನೂ ಅವರ ಉಪದೇಶಗಳನ್ನೂ ಅವರ ನಿದರ್ಶನಗಳನ್ನು ಅನುಸರಿಸುವುದರ ಫಲವಾಗಿ ನಮಗೆ ಹಿಂಸೆಯು ಬಂದಲ್ಲಿ ಮತ್ತು ಅದು ಆತನ ಸೇವೆಗೆ ನಾವು ಮಾಡಿದ ಪ್ರತಿಷ್ಠೆಯ ಪ್ರತಿಜ್ಞೆಗೆ ನಂಬಿಗಸ್ತರಾಗಿರುವ ಕಾರಣಕ್ಕಾಗಿ ಎಲ್ಲಾ ರೀತಿಯ ಕೆಟ್ಟದ್ದನ್ನು ನಮ್ಮ ಮೇಲೆ ಸುಳ್ಳಾಗಿ ಹೇಳಿದ್ದಲ್ಲಿ ಆಗ ನಾವು ನಿಜವಾಗಿಯೂ ಸಂತೋಷಪಡಬೇಕು; ಏಕೆಂದರೆ ಪ್ರವಾದಿಗಳು ಹೀಗೆಯೇ ಹಿಂಸೆಪಟ್ಟರು, ನಮ್ಮ ಕರ್ತನೂ ಹೀಗೆಯೇ ಹಿಂಸೆಪಟ್ಟನು, ಅಪೋಸ್ತಲರೂ ಹಾಗು ಅಲ್ಲಿಂದೀಚೆಗೆ ಎಲ್ಲಾ ನಂಬಿಗಸ್ತರೂ ಹಿಂಸೆಗೊಳಗಾದರು. ಹೀಗೆ ನಮ್ಮ ಜೀವಿತದ ಎಲ್ಲಾ ಅನುಭವಗಳಲ್ಲಿಯೂ ನಾವು ಒಳ್ಳೆಯವರ ಸಹವಾಸದಲ್ಲಿ ಇರುವವರಾದಲ್ಲಿ ಅದು ನಾವು ಕರ್ತನು ತನ್ನ

ಸ್ವಕೀಯ ಜನರನ್ನು (ಆಭರಣಗಳನ್ನಾಗಿ) ಕೂಡಿಸಿಕೊಳ್ಳುವ ದಿನದಲ್ಲಿ ನಾವು ಆ ಒಳ್ಳೆಯವರಂತೆಯೇ ಅವರ ಸಹವಾಸದಲ್ಲಿ ಇರುವುವೆಂಬುದಕ್ಕೆ ಇದು ಒಂದು ಸಾಕ್ಷಿ ಅಥವಾ ಪ್ರಮಾಣವಾಗಿರುವದು.

ಇಂಥ ಅನುಭವಗಳನ್ನು ಹೊಂದಿರುವವರೆಲ್ಲರೂ ಬಹು ಸಂತೋಷಪಡಬಹುದು ಮತ್ತು ಕರ್ತನ ವಾಕ್ಯಗಳಲ್ಲಿ ತಿಳಿಸಿರುವಂತೆ ಇಂಥ ಅನುಭವಗಳನ್ನು ಅಧಿಕವಾಗಿ ಹೊಂದಿ–ದಷ್ಟೂ ಪರಲೋಕದಲ್ಲಿ ನಮಗೆ ಅಧಿಕವಾದ ಪ್ರತಿಫಲ ದೊರೆಯುವವು; ಹೀಗಾಗಿ ಇಂಥಾ ಅನುಭವಗಳಲ್ಲಿಯೂ ನಾವು ಅಧಿಕವಾಗಿ ಸಂತೋಷಿಸಬಹುದು. ಮತ್ತು ನಮ್ಮಲ್ಲಿ ಇಂಥ ಅನುಭವಗಳು ಇಲ್ಲದಿದ್ದಲ್ಲಿ ನಮ್ಮನ್ನು ನಾವು ಚೆನ್ನಾಗಿ ವಿಚಾರಿಸಿ–ಕೊಳ್ಳತಕ್ಕದ್ದು; ಒಂದು ವೇಳೆ ಇದರ ಅರ್ಥವು ಸ್ವಾರ್ಥ ತ್ಯಾಗದಿಂದ ಕೂಡಿದ "ಇಕ್ಕಟ್ಟಾದ ಮಾರ್ಗದಲ್ಲಿ" ನಂಬಿಗಸ್ತರಾಗಿ ನಾವು ನಡೆಯುತ್ತಿರದೆ ಇರಬಹುದು. ಇದಲ್ಲದೇ ನಮ್ಮ ಕೈಗೆ ಸಿಕ್ಕಿದ ಕೆಲಸವನ್ನು ನಮ್ಮ ಪೂರ್ಣ ಶಕ್ತಿಯಿಂದ ಮಾಡದೇ ನಮ್ಮ ಯಜ್ಞಾರ್ಪಣೆಯನ್ನು ಹಿಂದೆಗೆದುಕೊಳ್ಳುವವರಾಗಬಾರದು. ಯಾವನಿಗಾದರೂ ಇಂಥಾ ಆಲೋಚನೆಗಳು ಬಂದದ್ದೇಯಾದಲ್ಲಿ ಅವನು ಎದೆಗುಂದದಿರಲಿ, ಆದರೆ ಪ್ರವಾದಿಯ ನುಡಿಯಂತೆ "ಯಜ್ಞಪಶುವಿಗೆ ಹಗ್ಗವನ್ನು ಹಾಕಿ ಯಜ್ಞವೇದಿಯ ಸಮೀಪಕ್ಕೆ ತಂದು ಅದರ ಕೊಂಬಿಗೆ ಕಟ್ಟಲಿ", ಇದನ್ನು ಪ್ರೀತಿ ಉತ್ಸಾಹವೆಂಬ ಹೊಸ ಹಗ್ಗದಿಂದ ಕಟ್ಟಿ ಯಜ್ಞವನ್ನು ಅಂಗೀಕರಿಸಲು ಮತ್ತು ಆತನ ಕಾರ್ಯಭಾರದಲ್ಲಿ ಭಾಗಿಯಾಗಿ ಅದನ್ನು ನೆರವೇರಿಸು–ವಂತವನಾಗಿ ಮತ್ತು ಇದರ ನಿಮಿತ್ತದಿಂದಾದ ಹಾಗೂ ಕರ್ತನ ಮತ್ತು ಸತ್ಯದ ನಿಮಿತ್ತವಾಗಿ ಬರುವ ಹಿಂಸೆಯನ್ನು ತಾಳಿಕೊಳ್ಳಲು ಅವಕಾಶಗಳನ್ನು ಒದಗಿಸಿಕೊಡಲೆಂದು ಕರ್ತನನ್ನು ಪ್ರಾರ್ಥಿಸಲಿ. ಕೀರ್ತನೆ 118:27

ಈ ಎಲ್ಲಾ ಕೃಪಾಗುಣಗಳ ಒಟ್ಟು ಮೊತ್ತ ಪ್ರೀತಿ; ಇವುಗಳನ್ನು ಹೊಂದಿರುವವರು ಪ್ರೀತಿಪಾತ್ರರಾಗಿರುವರು ಮತ್ತು ಕಾಲಕ್ರಮೇಣ "ಸರ್ವಾಂಗದಲ್ಲಿಯೂ ಮನೋಹರನು" ಅಗಿರುವವನೊಂದಿಗೆ ಸೇರಿ ಅತನಿರುವ ಹಾಗೆ ಮನೋಹರ ವಾಗಿ ವಿಜೃಂಭಿಸುವಂತೆ ಮಾಡಲ್ಪಡುವರು. ನಮ್ಮ ಕರೆಯು ಈ ಆಶೀರ್ವಾದಕರವಾದ ಸ್ಥಿತಿಯನ್ನು ತಲುಪುವ ಸಲುವಾಗಿರುವುದು.

*****

# ಭೂಮಿಗೆ ಉಪ್ಪೂ ಮತ್ತು ಲೊಕಕ್ಕೆ ಬೆಳಕೂ

**ರೀಪ್ರಿಂಟ್ಸ್ ಪುಟ 2099**

**"ನೀವು ಭೂಮಿಗೆ ಉಪ್ಪಾಗಿದ್ದೀರಿ ... ನೀವು ಲೋಕಕ್ಕೆ ಬೆಳಕಾಗಿದ್ದೀರಿ" ಮತ್ತಾಯ 5:13–14**

ಉಪ್ಪು ಮತ್ತು ಬೆಳಕು ಮಾನವರಿಗೆ ಬೇಕಿರುವ ಎರಡು ಅತ್ಯವಶ್ಯಕಗಳಾಗಿದ್ದು, ಪ್ರಕೃತಿಯಲ್ಲಿ ಇವೆರಡನ್ನೂ ಹೇರಳವಾಗಿ ಒದಗಿಸಲಾಗಿರುವುದು. ಉಪ್ಪು ಬಹುಮಟ್ಟಿಗೆ ಕಾಯಿಪಲ್ಯ ಮತ್ತು ಪ್ರಾಣಿ ಇವೆರಡರ ರಚನೆಯಲ್ಲಿಯೇ ಸೇರಿಕೊಂಡಿದ್ದು ಸಾಂಬಾರ ಪದಾರ್ಥವಾಗಿ ಇದರ ಉಪಯೋಗವು ಬಹುವಾಗಿ ಶ್ಲಾಘನೆಗೊಳಗಾಗಿರುವುದು. ಮತ್ತು ಇದು ಹೆಚ್ಚಿನ ಅಥವಾ ಕಡಿಮೆ ಪ್ರಮಾಣದಲ್ಲಿ ಮನುಷ್ಯ ಮೃಗ ಇಬ್ಬರಿಗೂ ಅವಶ್ಯಕವಾಗಿರುವುದು. ಮಾನವಕುಲದ ಬೆಳವಣಿಗೆಯ ಅತಿ ಪ್ರಾರಂಭದ ಹಂತದಲ್ಲೇ ಉಪ್ಪು ಒಂದು ಮುಖ್ಯವಾದ ವಾಣಿಜ್ಯ ಸರಕಾಗತೊಡಗಿತು ಮತ್ತು ಈ ಅಮೂಲ್ಯವೂ ಅಗತ್ಯವೂ ಆದ ವ್ಯಾಪಾರ ವಸ್ತುವಿನ ಸಾಗಣಿಕೆಗಾಗಿಯೇ ಪುರಾತನ ವಾಣಿಜ್ಯ ಮಾರ್ಗಗಳು ನಿರ್ಮಾಣವಾಗಿದ್ದವೆಂದು ನಂಬಲಾಗಿದೆ. ಒಳನಾಡಿನಲ್ಲಿ ವಾಸಿಸುವ ಜನರಿಗೆ ಉಪ್ಪಿನ ಬುಗ್ಗೆಯು ದೇವರ ಒಂದು ವಿಶೇಷವಾದ ವರವೆಂದು ಪರಿಗಣಿಸಲಾಗಿತ್ತು. ಮತ್ತು ಹೀಗೆ ಕಾಲ ಕ್ರಮೇಣ ಇದಕ್ಕೆ ಒಂದು ಧಾರ್ಮಿಕ ಮಹತ್ವವು ಸೇರಲಾಗಿ ಇದರಿಂದ ತಮ್ಮ ದೇವರಿಗೆ ಮಾಡುವ ಅರ್ಪಣೆಗಳಲ್ಲಿ ಇದನ್ನು ಒಂದು ಅಮೂಲ್ಯ ವಸ್ತುವಾಗಿ ಬೆರೆಸಲಾಗುತ್ತಿತ್ತು. ಉಪ್ಪು ದೇವಾಂಶವೆಂದು ಹೇಳಿ ಹೋಮರ್ ಎಂಬುವರು ಇದಕ್ಕೆ ಧ್ವನಿಗೂಡಿಸಿದ್ದಾರೆ; ಪ್ಲೇಟೋ ಎಂಬುವರು ಇದನ್ನು "ದೇವರುಗಳಿಗೆ ಪ್ರಿಯವಾದ ವಸ್ತು" ಎಂದು ಉಲ್ಲೇಖಿಸಿದ್ದಾರೆ.

ಇದರ ಉಪಯೋಗ ಹಾಗು ಇದಕ್ಕೆ ಸಾಮಾನ್ಯವಾಗಿ ದೊರಕಿರುವ ಪ್ರಸಂಶೆಗಳ ಅನುಸಾರವಾಗಿ ಉಪ್ಪು ಎಂಬ ಪದಕ್ಕೆ ಆಜ್ಞಾವಿಧಿಗಳ ಸಂಬಂಧದ ಧರ್ಮಶಾಸ್ತ್ರದ ಹಳೆಯ ವ್ಯವಸ್ಥೆಯಲ್ಲಿಯೂ ಮತ್ತು ಕೃಪೆಯ ಸಂಬಂಧದ ಹೊಸ ವ್ಯವಸ್ಥೆಯಲ್ಲಿಯೂ ಒಂದು ಮುಖ್ಯವಾದ ಪಾಠವನ್ನು ಬೋಧಿಸಲು ಸಾಂಕೇತಿಕವಾದ ಮಹತ್ವವಿರುವುದು ಬಹು ಮೊದಲೇ ಎಲ್ಲೆಡೆಯೂ ಗುರುತಿಸಲಾಗಿರುವುದು (ನಮ್ಮ ಕರ್ತನೂ ಇದನ್ನು ಬಳಸಿಕೊಂಡು ಇದು ಚಿರಸ್ಮರಣೀಯ–ವಾಗುವಂತೆ ಮಾಡಿರುವನು). ಆಹಾರ ಪದ್ದತಿಯಲ್ಲಿ ರುಚಿ ನೀಡಲು ಬೆರೆಸಲಾಗುವ ಒಂದು ರುಚಿಕರ ಪದಾರ್ಥವಾಗಿ ಉಪ್ಪು ಅತಿಥಿ ಸತ್ಕಾರಕ್ಕೆ ಸಂಕೇತವಾಗಿರುವುದು; ನಂಜು ನಿರೋಧಕವಾಗಿ ಇದು ದೀರ್ಘಕಾಲ ಬಾಳಿಕೆ, ನಿಷ್ಠೆಪ್ರಾಮಾಣಿಕತೆ ಶುದ್ಧತೆಗಳಿಗೆ ಸಂಕೇತವಾಗಿರುವುದು. ಸಾಧಾರಣವಾಗಿ ಉಪ್ಪು ಒಂದು ಮುಖ್ಯವಾದ ಅಂಶವಾಗಿ ಸೇರಿಸಲಾದ ಯಜ್ಞಾರ್ಪಣೆಯ ವಸ್ತುವಿನಿಂದ ಮಾಡಿದ ಆಹಾರ ಸೇವನೆಯ ಮೂಲಕವಾಗಿ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಿದ್ದರಿಂದ ಸತ್ಯವೇದದಲ್ಲಿ "ಉಪ್ಪಿನ ಒಡಂಬಡಿಕೆ" ಎಂಬುದು ವ್ಯಕ್ತವಾಗಿರುವುದು. (ಅರಣ್ಯ 18:19) – "ಎಲ್ಲಾ ನೈವೇದ್ಯ ಪದಾರ್ಥಗಳಿಗೂ ಉಪ್ಪುಹಾಕಿ ಸಮರ್ಪಿಸಬೇಕು." (ಯಾಜಕಕಾಂಡ 2:13) ಹೀಗೆ ಉಪಯೋಗಿಸಿದಾಗ, ಉಪ್ಪಿನ ಸಂರಕ್ಷಕ ಗುಣವು, ಅದನ್ನು ಒಂದು

ದೀರ್ಘಕಾಲದ ಒಪ್ಪಂದಕ್ಕೆ ಸೂಕ್ತ ಸಂಕೇತವನ್ನಾಗಿ ಮಾಡಿರುವುದು. ನೀರಿನ ಕಹಿರುಚಿಯನ್ನು ನಿವಾರಿಸಲು ಎಲೀಷನು ಮಾಡಿದ ಅದ್ಭುತದಲ್ಲಿ ಉಪ್ಪಿನ ಶುದ್ಧೀಕರಣ ಗುಣವನ್ನು ಸಾಂಕೇತಿಕವಾಗಿ ಉಲ್ಲೇಖಿಸಲಾಗಿದೆ. – 2 ಅರಸು 2:20–22

ಆದುದರಿಂದ ನಮ್ಮ ಕರ್ತನ ಮಾತಿನಲ್ಲಿನ ಉಪ್ಪಿನ ಸಾಂಕೇತಿಕ ಅರ್ಥವನ್ನು ಹೀಗೆ ಸ್ಪಷ್ಟೀಕರಿಸಲಾಗಿರುವುದು:– ಲೋಕದಲ್ಲಿ ನಿಜವಾದ ಕ್ರೈಸ್ತರ ಪ್ರಭಾವವು ಸ್ವಸ್ಥಪಡಿಸುವಿಕೆಯ ಶುದ್ಧೀಕರಿಸುವಿಕೆಯ ಪ್ರಭಾವವಾಗಿದ್ದು ಕೊಳೆಯುವಿಕೆ ನಶಿಸುವಿಕೆಯೆಂಬ ಪ್ರತಿಕೂಲ ವಸ್ತುಗಳಿಂದ ಒಳ್ಳೆಯವುಗಳನ್ನು ಯಾವಾಗಲೂ ಸಂರಕ್ಷಿಸುವ ಪ್ರವೃತ್ತಿಯುಳ್ಳದ್ದಾಗಿರುವುದು. "ನೀವು ಭೂಮಿಗೆ ಉಪ್ಪಾಗಿದ್ದೀರಿ." ಇದು ಎಂಥಾ ಮಹತ್ವದ ಹೋಲಿಕೆ!

ಈ ವಚನಗಳು ಕ್ರೈಸ್ತರಿಗೆ ಲೋಕದ ಕಡೆಗೆ ಇರುವ ಸಾಮಾನ್ಯವಾದ ಒಂದು ಜವಾಬ್ದಾರಿಯನ್ನು ಸಹ ತೋರಿಸಿಕೊಡುವುದು. ಕ್ರಿಸ್ತನು ಲೋಕದವನಾಗಿರದೆ ಇರುವ ಪ್ರಕಾರ ಇವರೂ ಲೋಕದವರಾಗಿರದೆ (ಯೋಹಾನ 17:16) ಲೋಕದಿಂದ ಬೇರ್ಪಡಿಸಲ್ಪಟ್ಟವರಾಗಿ (ದೇವರ) ಸ್ವಕೀಯ ಜನರೂ ದೇವರಿಂದ ಆಯಲ್ಪಟ್ಟವರೂ ಆಗಿರುವರು. ಆದಾಗ್ಯೂ ದೇವರೊಂದಿಗೆ ಅನ್ಯೋನ್ಯರಾಗಿ ಆತನಿಗೆ ಸಹಕಾರಿಗಳಾಗುವುದಕ್ಕೆ ಮಾಡಲಾದ ಈ ಬೇರ್ಪಡಿಸುವಿಕೆ, (ದೇವರ) ಅನ್ಯೋನ್ಯತೆಗೆ ಏರಿಸಲ್ಪಟ್ಟಿರುವುದು ತಮ್ಮ ಸಿರಿವಂತಿಕೆಯ ವಿಷಯವಾಗಿ ಹೆಮ್ಮೆಪಡುವುದನ್ನು ಬೆಳಸಿಕೊಳ್ಳುವುದಕ್ಕಾಗಿರದೆ ಲೋಕವನ್ನು ಆಶೀರ್ವದಿಸುವ ಸಲುವಾಗಿರುವುದೆಂಬುದನ್ನು ಇವರು ಮರೆಯಬಾರದು. ಏಕೆಂದರೆ ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ಅದನ್ನು ಈಡುಕೊಟ್ಟು ಬಿಡಿಸಲು ತನ್ನ ಒಬ್ಬನೇ ಮಗನನ್ನು ಕೊಟ್ಟನು. (ಯೋಹಾನ 3:16) ಮತ್ತು ಕ್ರಿಸ್ತನು ಇದರಂತೆಯೇ ಲೋಕವನ್ನು ಎಷ್ಟೋ ಪ್ರೀತಿಸಿ ಅದನ್ನು ಉಚಿತವಾಗಿ ರಕ್ಷಿಸ ಸಲುವಾಗಿರುವ ಯೆಹೋವನ ಸಾಧನವಾಗಿರುವನು. – ಯೋಹಾನ 6:51; 10:18; ಇಬ್ರಿಯ 2:9; ರೋಮಾ. 5:18–19

ನಾವು ಮುಂದುವರಿದು ಗಮನಿಸಿರುವುದೇನೆಂದರೆ, ಈ ಹೇಳಿಕೆಯು ವರ್ತಮಾನ ಕಾಲದಲ್ಲಿ ವ್ಯಕ್ತವಾಗಿರುವುದು. – "ನೀವು ಉಪ್ಪೂ ಮತ್ತು ಬೆಳಕೂ <u>ಆಗಿದ್ದೀರಿ</u>." ಅದೂ ಈಗಾಗಲೇ ಅಂದರೆ ಪ್ರಭಾವಕ್ಕೆ ಸೇರಿದ ಸಭೆಯಾಗಿ ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸುವ ಮೊದಲೇ. ಅಪೋಸ್ತಲನಾದ ಪೌಲನ ಈ ಬುದ್ಧಿಮಾತನ್ನು ನಾವು ನೆನಪಿಗೆ ತಂದುಕೊಳ್ಳುವವ–ರಾಗಿದ್ದೇವೆ – "ಕಾಲವನ್ನು ಸುಮ್ಮನೆ ಕಳಕೊಳ್ಳದೆ ಅದನ್ನು ಬೆಲೆಯುಳ್ಳದ್ದೆಂದು ಉಪಯೋಗಿಸಿ ಹೊರಗಿನವರ ಮುಂದೆ ಜ್ಞಾನವುಳ್ಳವರಾಗಿ ನಡೆದುಕೊಳ್ಳಿರಿ. ನಿಮ್ಮ ಸಂಭಾಷಣೆ ಯಾವಾಗಲೂ ಇಂಪಾಗಿಯೂ ರಸವತ್ತಾಗಿರಯೂ (ಉಪ್ಪಿನಿಂದ ಕೂಡಿದ್ದಾಗಿಯೂ) ಇರಲಿ. ಅಂದರೆ ಶುದ್ಧತೆ ನೀತಿ ಸತ್ಯ ಇವುಗಳ ವಿಷಯವಾಗಿ ಹಸಿವನ್ನು ಉಂಟು ಮಾಡುವ ಉಪ್ಪಾಗಿರಲಿ. – ಕೊಲೊಸ್ಸೆ 4:5–6

ಹೀಗೆ ಲೋಕದ ಪರವಾಗಿರುವ ಸರಿಯಾದ ಕ್ರಿಸ್ತೀಯ ಮನೋಭಾವವು ಹೆಮ್ಮೆಯುಳ್ಳದ್ದೂ (ಕಷ್ಟನಷ್ಟಗಳಿಗೆ) ಉದಾಸೀನವಾಗಿ ಸಂಯಮದಿಂದಿರುವುದೂ ಆಗಿರದೆ ಅದು ಉದಾತ್ತ ಉದಾರ ಪರಹಿತಾಸಕ್ತಿ ಮನೋಭಾವವುಳ್ಳದ್ದೂ ಅಗಿರಬೇಕು. ಹೀಗೆ ಲೌಕೀಕಭಾವದವುಗಳಾದ ಮಲಿನವಾದ ಉದ್ದೇಶ ಗುರಿ ಆಕಾಂಕ್ಷೆ ಮತ್ತು ನಡಾವಳಿಗಳಿಂದ ಇವು ಪೂರ್ಣವಾಗಿ ಪ್ರತ್ಯೇಕವಾಗಿದ್ದರೂ ಅದು ನೀತಿಯ ಮಾರ್ಗದರ್ಶನದ ಹಾಗೂ ಅದರ ನಿದರ್ಶನಗಳ ಮೂಲಕ ಪವಿತ್ರತೆಯನ್ನೂ ಜೀವ ಮಾರ್ಗವನ್ನೂ ತೋರಿಸಿಕೊಟ್ಟು ಆಶೀರ್ವಾದ ಉಂಟು ಮಾಡಲು ಸದಾ ಸಿದ್ಧವಿರುವುದು. "ನಿನಗಿಂತಲೂ ನಾನು ಪವಿತ್ರನು" ಎಂದು ಅದು ಹೆಮ್ಮೆಯಿಂದ ಹೇಳಿಕೊಳ್ಳುವ ಮನೋಭಾವವಲ್ಲ. ಬದಲಾಗಿ ಅದು "ಅಂಗೀಕರಿಸ ಬಯಸುವವರಿಗೆ ಉಚಿತವಾಗಿ ದೊರಕುವ ದೇವಕೃಪೆಯ ಪ್ರಭಾವ ಹೊಂದಿರುವುದನ್ನು ಬಿಟ್ಟರೆ ನಾನು ನಿನಗಿಂತ ಉತ್ತಮನೇನೂ ಅಲ್ಲ. ಕೃಪೆಯಿಂದಲೇ ನಾನು ಎಂಥವನಾಗಬೇಕೋ ಅಂಥವನಾಗಿದ್ದೇನೆ; ಆದರೂ ನನ್ನಲ್ಲಿರುವ ನ್ಯೂನ್ಯತೆಗಳ ವಿಷಯದಲ್ಲಿ ನನಗೆ ಸರ್ವ ಸಂಪೂರ್ಣನಾದ ಸಹಾಯಕನ (ಕ್ರಿಸ್ತನ) ಕೃಪೆಯ ಅಗತ್ಯವಿದೆ" ಎಂದು ಹೇಳುವಂತಾಗಬೇಕು. ಈ ಮನೋಭಾವಗಳು ಮಾತುಗಳ ಮೂಲಕ ವ್ಯಕ್ತವಾಗಬೇಕೆಂದಲ್ಲ; ಏಕೆಂದರೆ ಮಾತುಗಳಿಗಿಂತಲೂ ಕ್ರಿಯೆಗಳು ದೊಡ್ಡದಾಗಿ ನುಡಿಯುತ್ತವೆ. ಮತ್ತು ಈ ಮೂಲಕವಾದ ಅವರ ಸಾಕ್ಷಿಯು ಅಧಿಕ ಪ್ರಭಾವವುಳ್ಳದ್ದಾಗಿರುತ್ತದೆ. ಜೀವಿತದಲ್ಲಿನ ಪವಿತ್ರವಾದ ನಡವಳಿಕೆಗಳು ದೇವರಿಗೆ ಮಹಿಮೆಯನ್ನು ಉಂಟುಮಾಡಿ, ನೀತಿಮಾರ್ಗದಲ್ಲಿನ ವಿವೇಕ ಶ್ರೇಷ್ಠತೆಗಳನ್ನು ತೋರಿಸಿ, ಅನೀತಿಯನ್ನು ಖಂಡನೆಮಾಡಿ ಮುಂದೆ ಬರಲಿರುವ ನ್ಯಾಯತೀರ್ವಿಕೆಯಲ್ಲಿ ನೀತಿಗೆ ಲಭಿಸಲಿರುವ ಯಶಸ್ಸಿನ ಬಗ್ಗೆ ಹೇಳುವಲ್ಲಿ ವಿಫಲವಾಗದು. – ಯೋಹಾನ 16:8; ಅ.ಕೃ. 24:25

ಉಪ್ಪಿನ ಸಂಕೇತಗಳಾಗಿರುವ ಶುದ್ಧತೆ ನೀತಿ ಮತ್ತು ಅದರಲ್ಲಿನ ಶುದ್ಧಿಕರಿಸುವ ಗುಣಪಡಿಸುವ ಹಾಗೂ ಸಂರಕ್ಷಿಸುವ ಪ್ರಭಾವಶಾಲೀ ಗುಣಗಳನ್ನು ಉಲ್ಲೇಖಿಸಿ ಯೇಸುವು "ಉಪ್ಪು ಒಳ್ಳೆಯದೇ" ಎಂದು ಹೇಳಿರುವನು; "ನಿಮ್ಮೊಳಗೆ ಉಪ್ಪು (ಶುದ್ಧತೆ ನೀತಿಗಳು) ಇರಲಿ." (ಮಾರ್ಕ 9:50) ನಮ್ಮಲ್ಲಿ ಉಪ್ಪು ಇಲ್ಲದಿದ್ದಲ್ಲಿ ನಾವು ಹೇಗೆ ಭೂಮಿಗೆ ಉಪ್ಪಾಗಬಹುದು? ನಾವು ನಿಜವಾಗಿಯೂ ಪ್ರಾಮಾಣಿಕವಾಗಿಯೂ ನೀತಿವಂತರಲ್ಲದ್ದಿದ್ದಲ್ಲಿ ನಾವು ಹೇಗೆ ಇತರ ಮೇಲೆ ಶುದ್ಧೀಕರಣದ ಸ್ವಸ್ಥತೆಯ ಪ್ರಭಾವಗಳನ್ನು ಬೀರಬಹುದು? ಕೇವಲ ಬಾಹ್ಯವಾಗಿ ತೋರ್ಪಡಿಸುವ ನೀತಿಯನ್ನು ನಿಜವಾದ ಹಾಗೂ ಪ್ರಾಮಾಣಿಕವಾದ ಪವಿತ್ರತೆಯೆಂಬ ಉಪ್ಪಿನ ಬದಲಿವಸ್ತುವಾಗಿ ಬಳಸಲಾಗದು. ಕೇವಲ ತೋರಿಕೆಯು ಸ್ವಸ್ಥತೆಯನ್ನುಂಟುಮಾಡುವ ಗುಣಲಕ್ಷಣವನ್ನು ಹೊಂದಿರಲಾರದು ಮತ್ತು ಇದರಿಂದ ಲೋಕದ ಕಡೆಗಿರುವ ನಮ್ಮ ಹೊಣೆಗಾರಿಕೆಯನ್ನು ನೆರವೇರಿಸಲಾರದು. ಆದಕಾರಣ ನಾವು ನಿಜವಾದ ಪವಿತ್ರತೆಯೆಂಬ ಉಪ್ಪನ್ನು ನಮ್ಮಲ್ಲಿ ಇರಿಸಿ–ಕೊಂಡಿರುವವರಾಗೋಣ. ಹೀಗಾಗಿ ಜನರು ನಮ್ಮನ್ನು ಗಮನಿಸಿಸುವವರಾಗಿ ನಮ್ಮ ವಿಷಯವಾಗಿ ತಿಳಿದುಕೊಂಡು ದೇವರನ್ನು ಕೊಂಡಾಡುವಂಥಾಗುವದು.

ಪ್ರಚಲಿತವಾದ ಇದೇ ಸಂಕೇತದ ಅಡಿಯಲ್ಲಿ ನಮ್ಮ ಕರ್ತನು ಒಂದು ಎಚ್ಚರಿಕೆಯನ್ನೂ ಸೇರಿಸಿ ಹೀಗೆ ನುಡಿದಿರುವನು: "ಉಪ್ಪು ಸಪ್ಪಗಾದರೆ ಅದಕ್ಕೆ ಇನ್ನಾತರಿಂದ ಉಪ್ಪಿನ ರುಚಿ ಬಂದೀತು? ಜನರು ಅದನ್ನು ಹೊರಗೆ ಹಾಕಿ ತುಳಿಯುವುದಕ್ಕೆ ಅದು ಯೋಗ್ಯವೇ ಹೊರತು ಮತ್ತಾವ ಕೆಲಸಕ್ಕೂ ಬಾರದು." ಹೀಗಾಗಿ ತೊಳೆದ ಹಂದಿ ಮತ್ತೆ ಕೆಸರಿಗೆ ಹಿಂದಿರುಗಿತು ಎನ್ನುವಂತೆ ಒಮ್ಮೆ ನೀತಿಯೆಂಬ ಉಪ್ಪನ್ನು ತನ್ನಲ್ಲಿ ಹೊಂದಿರುವ ಕ್ರೈಸ್ತನು ಮತ್ತೆ ತಿರುಗಿಕೊಂಡಲ್ಲಿ; ಅವನು ಇಚ್ಛಾಪೂರ್ವಕವಾಗಿ ಹಾಗೂ ಸತತವಾಗಿ ನೀತಿಯಿಂದ ಬಿದ್ದು ಹೋಗುತ್ತಿರುವುದೇ ಆದಲ್ಲಿ ಅವನು "ಯಾವ ಪ್ರಯೋಜನಕ್ಕೂ ಬಾರನು" (ಇಬ್ರಿಯ 6:4–8; 10:26–31, 38–39) ಹೀಗಿರಲು ನಾವು ಕೇವಲ ಉಪ್ಪನ್ನು ಹೊಂದಿರುವುದು ಮಾತ್ರವಲ್ಲದೆ ಅದರ ಸ್ವಸ್ಥವಾದ ಗುಣಲಕ್ಷಣಗಳನ್ನು ಉಳಿಸಿಕೊಂಡಿರುವುದೂ ಎಷ್ಟೋ ಮುಖ್ಯವಲ್ಲವೇ.

ಇದೇ ವರ್ಗವನ್ನು "ಲೋಕಕ್ಕೆ ಬೆಳಕು" ಎಂದೂ ಸಹ ತಿಳಿಯಪಡಿಸಲಾಗಿದೆ. ಅವರು ಈಗಾಗಲೇ ದೇವರ ರಾಜ್ಯದಲ್ಲಿ ಜ್ಞಾನೋದಯವನ್ನು ಉಂಟುಮಾಡಲು ಸೂರ್ಯನಂತೆ ಪ್ರಕಾಶಿಸದಿದ್ದರೂ ಈಗಲೂ ಸಹ ಅವರು ಹೊಳೆಯುವವ – ರಾಗಿರುವರು ಮತ್ತು ಅವರು ನೀಡುವ ಬೆಳಕನ್ನು ಪಡೆಯಲಿಚ್ಛಿಸುವವರೆಲ್ಲರೂ ಅದನ್ನು ಸ್ವೀಕರಿಸಲಾಗುವಂತೆ ಅದು ಒಂದು ಸಣ್ಣದಾದ ಆವರಣದಲ್ಲಿ ಹೊಳೆಯುವುದು. ನಮ್ಮ ಕರ್ತನು ತನ್ನ ಭಕ್ತರ ಸಹಿತವಾಗಿ ರಾತ್ರಿಯಾವರಿಸಿರುವ ಲೋಕದ ಮುಂದೆ ತಮ್ಮ ಬೆಳಕು ಪ್ರಕಾಶಿಸುವಂತಾಗಲು ಮಾಡಿರುವ ಮನವಿಯನ್ನು ಆತನ ಈ ಒಂದು ಬುದ್ಧಿಮಾತಿನಲ್ಲಿ ತೋರಿಸಿಕೊಡಲಾಗಿರುವುದು. – "... ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೆಯ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡು – ವರು." ಈ ಲೋಕದಲ್ಲಿರುವ ಕತ್ತಲನ್ನು ಎಷ್ಟು ಸಾಧ್ಯವೋ ಅಷ್ಟನ್ನು ಹೋಗಲಾಡಿಸುವಂಥಾ ಒಂದು ಒಳ್ಳೆಯ ಸ್ಥಾನದಿಂದ ನಾವು ಬೆಳಕನ್ನು ನೀಡುವವರಾಗಬೇಕೆಂದು ಸಹ ನಮ್ಮ ಕರ್ತನು ಸಲಹೆಮಾಡಿರುವನು. ಆದುದರಿಂದ ನಾವು ಅದನ್ನು ಕೊಳಗದೊಳಗೆ ಇಡದೆ ದೀಪಸ್ತಂಭದ ಮೇಲೆ ಇಡಬೇಕಿರುವುದು. ಕರ್ತನ ವಿಷಯದಲ್ಲಿ ಹೊಂದಿರುವ ಉತ್ಸಾಹಕ್ಕೆ ಈ ಸೌಭಾಗ್ಯ – ಪೂರ್ಣವಾದ ಕರ್ತವ್ಯವನ್ನು ನೆರವೇರಿಸಲು ಹೆಚ್ಚು ಬುದ್ಧಿಮಾತಿನ ಅಗತ್ಯವಿರುವುದಿಲ್ಲ. ಏಕೆಂದರೆ ಆತನಂತೆಯೇ ಈ ವಿಷಯದಲ್ಲಿ ಆತನ ಮನೋಭಾವ ಅಥವಾ ಪ್ರವೃತ್ತಿಯನ್ನು ಹೊಂದಿರುವ– ವರೆಲ್ಲರೂ ಈ ಸೌಭಾಗ್ಯವುಳ್ಳ ಕರ್ತವ್ಯವನ್ನು ನೆರವೇರಿಸುವಾಗ ತಮ್ಮ (ಆತ್ಮೀಕ) ಪೋಷಣೆಯನ್ನು ಕಂಡುಕೊಳ್ಳುವರು. ತಮ್ಮಲ್ಲಿರುವ ಕತ್ತಲ ಮೇಲೆ ಹೊಳೆದ ದೇವರ ವಿಷಯವಾದ ಸತ್ಯವನ್ನು ಹಾಗೂ ಆತನ ಪವಿತ್ರಾತ್ಮವೆಂಬ ಬೆಳಕನ್ನು ತಮ್ಮ ಮೂಲಕವಾಗಿ ಇತರರಲ್ಲಿರುವ ಕತ್ತಲ ಮೇಲೆ ಸಹ ಹೊಳೆಯು– ವಂತೆ ಮಾಡುವುದು ಅವರಿಗೆ ಉಲ್ಲಾಸಕರವಾಗಿರುವುದು.

ಹೀಗೆ ದೇವಜನರಲ್ಲಿರುವ ಉಪ್ಪು ಹಾಗೂ ಅವರು ನೀಡುವ ಬೆಳಕಿನ ಮೂಲಕವಾಗಿ ಆ ಆಶೀರ್ವಾದದಾಯಕವಾದ ದಿನಗಳು ಬರುವ ಮೊದಲೇ ಒಂದು ಪ್ರಮಾಣದಲ್ಲಿನ ಆಶೀರ್ವಾದವು ಲೋಕಕ್ಕೆ ಬಂದಿರುವುದು. ಮತ್ತು ಈ (ಸುವಾರ್ತಾ) ಯುಗದ ಅಂತ್ಯದಲ್ಲಿ ನಾವು ಅವುಗಳ ಪರಿಣಾಮ ವನ್ನು ಕೆಲವು ಮಟ್ಟಿಗೆ ನಿರ್ದಿಷ್ಟವಾಗಿ ಸಂಗ್ರಹಿಸಿ ಹೇಳಬಹುದು. ಲೌಕೀಕ ಸಮೃದ್ಧಿಯ ಮೂಲಕವಾದ ಆಶೀರ್ವಾದವು "ನಾಗರೀಕತೆ" ಎಂಬ ವಿಷಯದ ಅಡಿಯಲ್ಲಿ ಸೇರಿಬಂದಿರು– ವುದು. ಈ ಸುವಾರ್ತಾಯುಗದಲ್ಲಿ ಹೋಲಿಸಿ ನೋಡಿದಾಗ ಭೂಮಿಗೆ ಉಪ್ಪೂ ಲೋಕಕ್ಕೆ ಬೆಳಕೂ ಆಗಿರುವ ಕೇವಲ ಸ್ವಲ್ಪ ಮಂದಿ ಜನರು ಈವರೆಗೂ ಪ್ರತ್ಯಕ್ಷವಾಗಿ ಇಲ್ಲವೇ ಪರೋಕ್ಷವಾಗಿ ಬೀರಿರುವ ಸರಳ ರೀತಿಯ ಪ್ರಭಾವದ ಮೂಲಕವಾಗಿರುವು– ದೆಂದು ಒಂದು ಸಣ್ಣ ಪ್ರಮಾಣದಲ್ಲಿ ಮಾಡಿದ ಅವಲೋಕನವು ತೋರಿಸಿಕೊಡುವುದು. ನಂಬಿಗಸ್ತರಾದ ದೇವಜನರು ದೈವಿಕ ಸತ್ಯವೆಂಬ ಬೆಳಕನ್ನು ಸಾಧ್ಯವಾದಷ್ಟೂ ಪ್ರಮುಖವಾಗಿ ಎತ್ತಿಹಿಡಿದಿರುವರು; ಮತ್ತು ಆ ಮೂಲಕವಾಗಿ ಅವರು ನೀತಿಯ ಹಾಗೂ ಮುಂದೆ ಬರುವ ನ್ಯಾಯವಿಚಾರಣೆ ವಿಷಯವಾಗಿ ಪ್ರತಿಪಾದಿಸಿ ಹೇಳಿರುವರು; ತಮ್ಮಲ್ಲಿರುವ ಗುಣಗಳ ಮೂಲಕವಾಗಿ ನೀತಿಯ ಪರಿಜ್ಞಾನ ಮತ್ತು ಅದರ ತತ್ವಗಳಿಗೆ ಮಾದರಿಯಾಗಿ ಜನರ ಮನಸ್ಸುಗಳನ್ನು ಸಾಧ್ಯವಿದ್ದಷ್ಟೂ ಉಪ್ಪಾಗಿಸುವ ಪ್ರಯತ್ನಮಾಡಿ ಜನರು ಪುತ್ರಭಾವವನ್ನು ಅಂಗೀಕರಿಸುವಂತೆ ಒತ್ತಾಯಿಸಿರುವರು; ಹಾಗೂ ಇವರುಗಳು ಕಾರ್ಯ ಪ್ರವೃತ್ತವಾಗಿರುವಷ್ಟರ ಮಟ್ಟಿಗೆ ಲೋಕಕ್ಕೂ ಪ್ರಯೋಜನವಾಗಿರುವುದು.

ಆದಿಯಲ್ಲೇ ಅಂತ್ಯವನ್ನು ಮುಂದಾಗಿ ಕಂಡಿರುವ ಕರ್ತನು ತನ್ನ ಜನರು ತನ್ನೊಂದಿಗೆ ಬಲ ಮತ್ತು ಮಹಾ ಪ್ರಭಾವದ ಸ್ಥಾನಕ್ಕೆ ಏರಿಸಲ್ಪಡಲು ನಿಗದಿತವಾದ ಕಾಲವು ಬರುವವರೆಗೂ ತಮ್ಮಲ್ಲಿರುವ ಉಪ್ಪು ಮತ್ತು ಬೆಳಕುಗಳೆಲ್ಲವುಗಳ ಮೂಲಕವಾಗಿ ಸಾಮಾನ್ಯವಾಗಿ ಲೋಕದಲ್ಲಿ ಇದಕ್ಕಿಂತಲೂ ಹೆಚ್ಚಿನದನ್ನು ಸಾಧಿಸಲು ಸಮರ್ಥರಾಗಿರುವುದಿಲ್ಲವೆಂಬುದನ್ನು ತಿಳಿದಿರುವನು. ಆದರೂ ನಾಗರೀಕತೆಯ ಸಂಬಂಧದ ಈ ಕಾರ್ಯವೂ ಸಹ ಮುಂದಿನ ಮಹತ್ತರ ಕಾರ್ಯವಾದ ಸಮಸ್ತವನ್ನು ಸರಿಪಡಿಸುವಿಕೆಯ ಕಾರ್ಯಕ್ಕೆ ಸಿದ್ಧಪಡಿಸಲು ಬಹು ಉಪಯುಕ್ತವಾಗಿಯೂ ಮತ್ತು ದೇವರಿಗೆ ರಾಜವಂಶದ ಯಾಜಕರೂ ಹಾಗೂ ಯೇಸು ಕ್ರಿಸ್ತನೊಡನೆ ಸಹಬಾಧ್ಯರೂ ಆಗುವುದಕ್ಕಾಗಿ ಈ ಸುವಾರ್ತಾ ಯುಗದಲ್ಲಿ ಒಂದು ಸಿದ್ಧವಾದ ಜನವನ್ನು ಕರ್ತನಿಗಾಗಿ ಆರಿಸಿ ತೆಗೆದುಕೊಳ್ಳಲು ನಡೆಯುತ್ತಿರುವ ವಿಶೇಷ ಕಾರ್ಯಕ್ಕೆ ಅನುಕೂಲಕರವಾಗಿಯೂ ಇರುವುದು.

ಹೀಗಿರಲು ದೇವರ ವಾಗ್ದಾನಗಳಿಗೆ ಬಾಧ್ಯರಾದ ಪ್ರಿಯರೇ, ಆ ರಾಜ್ಯವನ್ನು ನಿಮಗೆ ಅನುಗ್ರಹಿಸಲು ತಂದೆಯು ಬಹು ಸಂತೋಷವಾಗಿರುವಲ್ಲಿ "ನಿಮ್ಮೊಳಗೆ ಉಪ್ಪು ಇರಲಿ" ಮತ್ತು ಹೀಗೆ ಉಪ್ಪನ್ನು ಹೊಂದಿದವರಾದ ನೀವು ಭೂಮಿಗೆ ಉಪ್ಪಾಗಿದ್ದೀರೆಂಬುದನ್ನು ಮರೆಯದಿರಿ. ಹೀಗಾಗಿ ನಿಮ್ಮ ಇರುವಿಕೆಯೇ ಅಧರ್ಮದ ಖಂಡನೆಗಾಗಿಯೂ ಮತ್ತು ಈ ರೀತಿಯಾಗಿ ನೀವು ಮುಂದುವರಿಯುವದು ಪವಿತ್ರತೆಗೆ ಭೂಷಣವಾಗಿಯೂ ಮತ್ತು ದೈವಕೃಪಾಬಲಕ್ಕೆ ಒಂದು ಸಜೀವ

ಪ್ರಮಾಣವಾಗಿಯೂ ಇರುವುದು. ನಾವು ದೈವೀಕ ಸತ್ಯ ಮತ್ತು ಅದರ ಪವಿತ್ರಾತ್ಮವೆಂಬ ಬೆಳಕನ್ನು ಹೊಳೆಯುವಂತೆ ಮಾಡಲು ಸಹ ಪ್ರಯತ್ನಿಸೋಣ; ಅದನ್ನು ಶಿಕ್ಷಿತವೂ ಶುದ್ಧೀಕರಿತವೂ ಆದ ಗುಣಗಳೆಂಬ ಮುಖ್ಯವಾದ ಹೊಳೆಯುವ ಸ್ಥಾನದ ಮೂಲಕವಾಗಿ ಮತ್ತೆ ಪ್ರಕಾಶಿಸುವಂತೆ ಮಾಡಿ ಅದಕ್ಕೆ ಲಕ್ಷ್ಯಕೊಡುವವರಿಗೆ ಆಶೀರ್ವಾದ ಉಂಟಾಗುವಂತೆಯೂ ಹಾಗೆ ಮಾಡದಿರುವವರಿಗೆ ಎಚ್ಚರಿಕೆಯಾಗಿಯೂ ಮತ್ತು ಸಕಲ ವಿಧವಾದ ಬೆಳಕಿಗೂ ತಾನೇ ವಿಶೇಷವಾದ ಕೇಂದ್ರಸ್ಥಾನವೂ ಅದರ ಮೂಲವೂ ಆದ ದೇವರಿಗೆ ಸ್ತುತಿ ಉಂಟಾಗುವ ಹಾಗೆಯೂ ಸಹ ಪ್ರಯತ್ನಿಸೋಣ. – (ಶ್ರೀಮತಿ ಎಮ್. ಎಫ್ ರಸ್ಸೆಲ್)

*****

# ನಿಮ್ಮ ನೀತಿಯು

## ರೀಪ್ರಿಂಟ್ಸ್ ಪುಟ 3243

ನೀವು ಲೋಕಕ್ಕೆ ಬೆಳಕಾಗಿದ್ದೀರಿ. ಗುಡ್ಡದ ಮೇಲೆ ಕಟ್ಟಿರುವ ಊರು ಮರೆಯಾಗಿರಲಾರದು. ಮತ್ತು ದೀಪವನ್ನು ಹತ್ತಿಸಿ ಕೊಳಗದೊಳಗೆ ಇಡುವುದಿಲ್ಲ; ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಆಗ ಅದು ಮನೆಯಲ್ಲಿರುವವರೆಲ್ಲರಿಗೆ ಬೆಳಕು ಕೊಡುವದು. ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು. ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದುಹಾಕುವುದಕ್ಕೆ ನಾನು ಬಂದೆನೆಂದು ನೆನಸಬೇಡಿರಿ. ತೆಗೆದುಹಾಕುವುದಕ್ಕೆ ಬಂದಿಲ್ಲ; ನೆರವೇರಿಸುವುದಕ್ಕೆ ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ– ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದು ಹೋಗಲಾರದು. ಆದದರಿಂದ ಈ ಸಣ್ಣಸಣ್ಣ ಆಜ್ಞೆಗಳಲ್ಲಿ ಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವುದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿ ಕೊಳ್ಳುವನು; ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕರಾಜ್ಯದಲ್ಲಿ ದೊಡ್ಡವನೆನಿಸಿ ಕೊಳ್ಳುವನು. ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ. – ಮತ್ತಾಯ 5:14–20

***

ನಮ್ಮ ಕರ್ತನ ಪರ್ವತ ಪ್ರಸಂಗದ ಯಾವಭಾಗದಿಂದ ಈ ನಮ್ಮ ಇಂದಿನ ವಿಷಯವನ್ನು ಪರಿಗಣನೆಗೆ ಆದುಕೊಂಡಿ–ರುವೆವೋ ಅದು ಸರಳತೆಗೆ ಹಾಗೂ ಅದರಲ್ಲಿನ ಮಹತ್ವವುಳ್ಳ ಅರ್ಥಗಳಿಗೆ ಒಂದು ಗಮನಾರ್ಹವಾದ ಉಪದೇಶವಾಗಿತ್ತು. ಮೊದಲಿನಿಂದ ಕಡೇವರೆಗೂ ಅದರೊಳಗೆ ಸಾಹಿತ್ಯದ ಶೃಂಗಾರಗಳು ಇಲ್ಲವೇ ವಾಕ್ಚಾತುರ್ಯ ಅಥವಾ ಮನರಂಜಿಸಿ ಮೆಚ್ಚಿಸುವ ಊಹಾಕಲ್ಪನೆಗಳ ಹಾರಾಟ ಇವುಗಳ ಪ್ರಯತ್ನಗಳಿ–ರುವುದಿಲ್ಲ. ಆತನ ಉದ್ದೇಶವು ತಿಳುವಳಿಕೆ ನೀಡುವುದಕ್ಕಾಗಿದ್ದು ಅದನ್ನು ಆತನು ಅತಿ ಸರಳವಾದ ಹಾಗೂ ಪರಿಣಾಮಕಾರಿ–ಯಾದ ಭಾಷೆಯಲ್ಲಿ ಮಾಡಿದ್ದನು. ಈ ಸಂದರ್ಭದಲ್ಲಿ ಆತನು ಕೇಳುವವರು ಬಹುವಾಗಿ ಕೂಡಿಬರುವಂಥ ಒಂದು ಸಾರ್ವಜನಿಕ ಸ್ಥಳಗಳನ್ನು ಬಯಸಲಿಲ್ಲವೆಂಬುದೂ ಆದರೆ, ಅದಕ್ಕೆ ಬದಲಾಗಿ ತನ್ನ ಶಿಷ್ಯರೊಡನೆ ಏಕಾಂತವಾಗಿರಲು ಒಂದು ವಿಶ್ರಾಂತವಾದ ಸ್ಥಳವನ್ನು ಆದುಕೊಂಡನೆಂಬುದನ್ನು ಸಹ ಗಮನಿಸಲಾಗುವುದು. ಆತನ ಅದ್ಭುತಕಾರ್ಯಗಳನ್ನು ವೀಕ್ಷಿಸಲು ಮತ್ತು ಆತನ ಮಾತುಗಳನ್ನು ಕೇಳಲು ಜನರ ಗುಂಪು ಆತನ ಸುತ್ತಲೂ ಒತ್ತಾಗಿ ಕೂಡಿಬರುತ್ತಿದ್ದರು. ಅಲ್ಲದೆ ಆತನು ಅವರ ವ್ಯಾಧಿಗಳನ್ನು ಗುಣಪಡಿಸಿ ಅವರಿಗೆ ಅನೇಕ ಸಂಗತಿಗಳನ್ನು ಉಪದೇಶಿಸುತ್ತಿ –ದ್ದನು. ಆದರೆ ಈ ಪ್ರಸಂಗವು ವಿಶೇಷವಾಗಿ ನಂಬಿದವರ ಮನೆತನವಾದ ಆತನ ಶಿಷ್ಯರಿಗಾಗಿ ರಚಿತವಾಗಿತ್ತು. ಮತ್ತು ಇಲ್ಲಿ ಪ್ರಾವಾಣಿಕವಾಗಿ ಲಿಖಿತವಾಗಿರುವುದೆಂದರೆ, ಇದರ ಉಪದೇಶಗಳನ್ನು (ಸುವಾರ್ತಾ) ಯುಗದ ಅಂತ್ಯದವರೆಗೂ ಇರುವ ಸಂಪೂರ್ಣವಾದ (ಕ್ರಿಸ್ತನ) ಮನೆತನದವರಿಗೆ ವಿಸ್ತರಿಸಿ ಅನ್ವಯಿಸಬಹುದೆಂಬುದು. ಹೀಗಾಗಿ ನಮ್ಮ ಕರ್ತನ ಈ ಮಾತುಗಳನ್ನು ಪರಿಗಣನೆ ಮಾಡುವಾಗ ಅಲ್ಲಿ ಕೂಡಿದ್ದ ಪೇತ್ರ ಯಾಕೋಬ ಯೋಹಾನ ಮತ್ತು ಆದಿ ಸಭೆಯ ಅನೇಕ ಸಹೋದರ ಸಹೋದರಿಯರೊಂದಿಗೆ ನಾವೂ ಸಹ ಬೆಟ್ಟದ ಇಳಿಜಾರಿನಲ್ಲಿನ ಹುಲ್ಲಿನ ಮೇಲೆ ಕುಳಿತುಕೊಂಡು ಲೋಕವು ಎಂದೂ ಅರಿಯದಂಥ ಉತ್ಕೃಷ್ಟ ಬೋಧಕನ ಬಾಯಿಂದ ಹೊರಡುವ ಮಾತುಗಳನ್ನು ಕೇಳುತ್ತಿದ್ದೇವೆಂಬುದನ್ನು ಬಹುತೇಕ ನಾವು ಅರ್ಥಮಾಡಿಕೊಳ್ಳಬಹುದು. ಮತ್ತು ನಾವು ಈ ಪವಿತ್ರವಾದ ಸ್ಥಳದಿಂದ ತಿರುಗಿಕೊಂಡಾಗ ಕೇಳಿ ಮರೆತು–ಹೋಗದೇ ಇರೋಣ; ಆದರೆ ಆ ಸಜೀವ ವಾಕ್ಯಗಳನ್ನು ನಿಧಿಯಾಗಿ ಕೂಡಿಸಿಟ್ಟುಕೊಳ್ಳೋಣ; ಅವುಗಳನ್ನು ನಮ್ಮ ಹೃದಯದ ಅಂತರಾಳಕ್ಕೆ ಇಳಿಯುವಮಾಡಿ ಅದರಿಂದ ನಿತ್ಯಜೀವಕ್ಕಾಗಿ ಹೇರಳವಾದ ಫಲಗಳನ್ನು ಕೊಡುವಂತಾಗ ಮಾಡೋಣ.

ಹೊಂದಿರುವ ಸತ್ಯದ ಕಡೆಗೆ ಒಂದು ಜವಾಬ್ದಾರಿಯೂ ಇರುವುದನ್ನು ನಮ್ಮ ಕರ್ತನ ಪ್ರಸಂಗದ ಈ ತುಣುಕು ಸೂಚಿಸುತ್ತದೆ. ಇದನ್ನು ಅನೇಕ ಕ್ರೈಸ್ತರು ಎಚ್ಚರಿಕೆಯಿಂದ ಗಮನಿಸಿ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲವೆಂಬುದಕ್ಕೆ ಆತಂಕವಾಗುತ್ತದೆ; "ನೀವು ಲೋಕಕ್ಕೆ ಬೆಳಕಾಗಿದ್ದೀರಿ.....ನಿಮ್ಮ ಬೆಳಕು ಪ್ರಕಾಶಿಸಲಿ." ಮತ್ತು ಆತನು ಪುನಃ ಹೇಳಿರುವುದು: "ನಾನು ಲೋಕದಲ್ಲಿರುವಾಗ

ಲೋಕಕ್ಕೆ ಬೆಳಕಾಗಿದ್ದೇನೆ.... ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು." (ಯೋಹಾನ 9:5; 8:5) ಈಗ ಆತನ ಪ್ರತಿನಿಧಿಗಳಾಗಿ ಆತನ ವಾಕ್ಯದಿಂದ ಆದೇಶಿಸಲ್ಪಟ್ಟು ತಿಳುವಳಿಕೆ ಹೊಂದಿರುವ ನಮ್ಮಿಂದ ಆತನು ಅಪೇಕ್ಷಿಸುವುದೆಂದರೆ, ಆತನ ಪ್ರತಿನಿಧಿಗಳಾಗಿ ನಾವು ಲೋಕಕ್ಕೆ ಬೆಳಕಾಗಿದ್ದು ಈ ಬೆಳಕು ಕೊಡುವ ದೀಪವನ್ನು ಸತತವಾಗಿ ಕುಡಿಕತ್ತರಿಸಿ ಅದನ್ನು ಉರಿಯುವಂತೆ ಮಾಡಬೇಕೆಂಬುದನ್ನು ನೆನಪಿನಲ್ಲಿಟ್ಟಿರಬೇಕೆಂಬುದು. ಹೀಗಾಗಿ ನಮ್ಮನ್ನು ಅನುಸರಿಸುವವರು ಕತ್ತಲೆಯಲ್ಲಿ ನಡೆಯದಂತೆ ನಮ್ಮ ಬೆಳಕು ಪ್ರಕಾಶಿಸ ಮಾಡಬೇಕು.

ಸತ್ಯವೇದಲ್ಲಿ ಹಾಗೂ ರೂಢಿ ಮಾತಿನಲ್ಲಿಯೂ ಬೆಳಕು ಸತ್ಯಕ್ಕೆ ಸಂಕೇತವಾಗಿದೆ. ಹೀಗೆ "ನೀವು ಲೋಕಕ್ಕೆ ಬೆಳಕಾಗಿದ್ದೀರಿ..... ನಿಮ್ಮ ಬೆಳಕು ಪ್ರಕಾಶಿಸಲಿ" ಎಂಬುದು ಈ ಮುಂದಿನ ಹೇಳಿಕೆಗೆ ಸಮನಾಗಿರುವುದು: "ನೀವು ಈಗ ಸತ್ಯದಿಂದ ಬೆಳಗಿಸಲ್ಪಟ್ಟವರಾಗಿರಲಾಗಿ ನೀವೇ ಸತ್ಯಕ್ಕೆ ಜೀವಂತ ನಿದರ್ಶನವಾಗಿದ್ದೀರಿ. ಆದುದರಿಂದ ಅದನ್ನು ಯಾವ ರೀತಿಯಿಂದಲೂ ಮಸುಕಾಗುವಂತೆ ಮಾಡಬೇಡಿರಿ. ಆದರೆ ಅದು ಅಧಿಕ ಅಧಿಕವಾಗಿ ಪ್ರಕಾಶಿಸುವಂತೆ ಮಾಡಿ ಇತರರೂ ಹೀಗೆಯೇ ಅದರಿಂದ ಆಶೀರ್ವಾದ ಹೊಂದುವಂತಾಗಲಿ." ಈ ಸತ್ಯವು "ಜೀವ ಕೊಡುವ ಬೆಳಕು;" ಇದೇ ಲೋಕಕ್ಕೆ ಅಗತ್ಯವಿರುವುದು; ಇದನ್ನೇ ಎಲ್ಲರೂ ನಿತ್ಯಜೀವ ಪಡೆಯುವ ಮುನ್ನ ಹೊಂದಬೇಕಿರುವುದು. ಸತ್ಯವು ಜನರನ್ನು ಪಾಪ ಮರಣಗಳೆಂಬ ದಾಸತ್ವದೊಳಗಿಂದ ಬಿಡುಗಡೆ ಮಾಡುವ ಮೊದಲು ಅವರು ಸತ್ಯವನ್ನು ತಿಳಿದವರಾಗಿರಬೇಕು; ಸತ್ಯವು ಅವರನ್ನು ಶುದ್ಧೀಕರಿಸಿ ಪ್ರತಿಷ್ಠೆಪಡಿಸುವ ಮೊದಲು ಅವರು ಸತ್ಯವನ್ನು ತಿಳಿದವರಾಗಿರಬೇಕು. ಯಾಕೆಂದರೆ ಎಲ್ಲಾ ಮನುಷ್ಯರು ಸರಿಯಾದ ಸತ್ಯದ ಪರಿಜ್ಞಾನವನ್ನು ಹೊಂದಬೇಕೆಂಬುದು ದೇವರ ಚಿತ್ತವಾಗಿದೆ. (1 ತಿಮೋಥೆ 2:4) ಆದುದರಿಂದ ಸತ್ಯವನ್ನು ಪ್ರಚಾರ ಮಾಡುವುದರಲ್ಲಿ ದೇವರ ಮಗುವು ಬಹು ಕ್ರಿಯಾಶೀಲನಾಗಬೇಕು. ಅವನು ತನ್ನ ದೀಪವನ್ನು ಬೆಳಗುವಂತೆ ಮಾಡಿ ಅದರ ಕುಡಿಕತ್ತರಿಸಿ ಉರಿಯುತ್ತಿರುವಂತೆ ಇಟ್ಟುಕೊಂಡಿರಲಿ.

"ಕುಡಿಕತ್ತರಿಸಿ (ದೀಪ) ಉರಿಯುವಂತೆ ಮಾಡುವುದು!" "ಕುಡಿಕತ್ತರಿಸಿ (ದೀಪ) ಉರಿಯುವಂತೆ ಮಾಡುವುದು!" ಕೆಲವು ಆಲೋಚನಾಪರನಾದ ಜೀವಿಯು ಹೇಳುವುದು "ನಾವು ಪದೆಪದೆ ಈ ನುಡಿಗಳನ್ನು ಹುಮ್ಮಸ್ಸಿನಿಂದ ಹಾಡಿದ್ದೇವೆ", 'ಕೆಳಗಿನ ದೀಪಗಳು ಉರಿಯುತ್ತಿರಲಿ' 'ನಿಮ್ಮ ದೀಪಗಳ ಕುಡಿತ್ತರಿಸಿ' ಇತ್ಯಾದಿ ಆದರೆ ಇದರ ಅರ್ಥವೇನು? ಇದರ ಅರ್ಥವೇನೆಂದರೆ, ನಾವು ಸಜೀವ ವಾಕ್ಯಗಳಿಗೆ ಬಹು ತೀವ್ರವಾಗಿ ಲಕ್ಷ್ಯಕೊಟ್ಟು ನಿಖರವಾದ ಸತ್ಯದ ಪರಿಜ್ಞಾನವನ್ನು ಹೊಂದಿ ನಾವು ಎಚ್ಚರಿಕೆಯಿಂದಲೂ ಪ್ರಾಮಾಣಿಕತೆಯಿಂದಲೂ ಪ್ರತಿಯೊಂದು ತಪ್ಪನ್ನು, ಅದು ಬೋಧನೆಗಳ ವಿಷಯವಾಗಿರಲಿ ಇಲ್ಲವೇ ನಮ್ಮ ಅನುದಿನದ ನಡೆನುಡಿಗಳಲ್ಲಿಯಾಗಲಿ, ಎಷ್ಟು ಬೇಗ ಅದು ಕಾಣಬರುತ್ತದೋ ಅಷ್ಟು ಬೇಗ ಅದನ್ನು ಕುಡಿಸಹಿತ ಕಿತ್ತುಹಾಕಿ ದೈವೀಕ ಸತ್ಯವೆಂಬ ಶುದ್ಧ ಬೆಳಕು ಸ್ಪಷ್ಟ ಹಾಗೂ ಪಾರದರ್ಶಕವಾದ ಗುಣಗಳೆಂಬ ಮಾಧ್ಯಮಗಳ ಮೂಲಕ ಯಾವ ಅಡೆತಡೆಯೂ ಇಲ್ಲದೆ ಪ್ರಕಾಶಿಸುವಂತೆ ಮಾಡಬೇಕು.

ದೇವರ ಮಕ್ಕಳಲ್ಲಿ ಅನೇಕರು ತಮ್ಮ ದೀಪಗಳ ಕುಡಿತ್ತರಿಸುವ ವಿಷಯದ ಬಗ್ಗೆ ಉದಾಸೀನರಾದಂತೆ ಕಾಣುವುದು ಒಂದು ಶೋಚನೀಯವಾದ ವಿಷಯ. ಅವರು ಸತ್ಯದ ಕೆಲವು ಅಂಶಗಳನ್ನು ಪಡೆದು ಅದರ ಜೊತೆಗೆ ಅತಿ ಹೆಚ್ಚಿನ ತಪ್ಪಿನ ಅಂಶಗಳನ್ನೂ ಪಡೆದಿರುವರು. ಅವರು ತಪ್ಪನ್ನು ತೆಗೆದುಹಾಕಲು ಪ್ರಯತ್ನಿಸುವ ಬದಲು ಈ ಎರಡನ್ನೂ ಹಿಡಿದುಕೊಂಡು ಅವೆರಡನ್ನೂ ಒಟ್ಟಾಗಿ ಬೋಧಿಸುವರು; ಹೀಗಾಗಿ ಅವರು ಕೊಡುವ ಬೆಳಕು ಶುದ್ಧ ಬೆಳಕಾಗಿರದೆ ಅದು ತನ್ನಲ್ಲಿ ಮಿಶ್ರವಾದ ವರ್ಣಬಿಂಬಗಳ ದೆಸೆಯಿಂದ ಮಾರ್ಪಡಿಸಿದ್ದಾಗಿಯೂ ವಿರೂಪಗೊಳಿಸಿದ್ದಾಗಿಯೂ ಇರುವುದು. ಅಲ್ಲದೆ ಮತ್ತೆ ಶುದ್ಧವಾದ ಸತ್ಯವನ್ನು ಅಧಿಕವಾಗಿ ಹೊಂದಿದಾಗ್ಯೂ ಕೆಲವರು ಅವುಗಳನ್ನು ತಮ್ಮ ಗುಣಶುದ್ಧಿಮಾಡಲು ಪರಿಣಾಮ ಕಾರಿಯಾಗುವಂತೆ ಬಿಡುವಲ್ಲಿ ವಿಫಲರಾಗಿರುವರು; ಹೀಗಾಗಿ ತಾನು ಹೊಂದಿರುವ ಮಲಿನವಾದ ಮಾಧ್ಯಮದ ಮೂಲಕವಾಗಿ ಆ ಬೆಳಕು ಮಸುಕುಮಾಡಲ್ಪಟ್ಟು ತಪ್ಪಾಗಿ ನಿರೂಪಿತವಾಗುವುದು. ಯಾರು ತಮ್ಮ ವಶಕ್ಕೆ ಒಪ್ಪಿಸಿದ ಸತ್ಯದ ಪವಿತ್ರವಾದ ಹೊಣೆಗಾರಿಕೆಯನ್ನು ಈ ರೀತಿಯಲ್ಲಿ ಹೊಂದಿರುವರೋ ಅವರು ನಿಜವಾಗಿಯೂ ಅದಕ್ಕೆ ಯೋಗ್ಯರಲ್ಲದವರಾಗುವರು ಅಲ್ಲದೆ ಅವರು ಕಡೆಯಲ್ಲಿ ಅದನ್ನು ಕಳೆದುಕೊಳ್ಳಬೇಕು; ಏಕೆಂದರೆ "ನೀತಿವಂತರಿಗೋಸ್ಕರ ಪ್ರಕಾಶವೂ..... ಬಿತ್ತಲ್ಪಟ್ಟಿದೆ." ಎಂದು ಬರೆಯಲ್ಪಟ್ಟಿರುವುದು; ಮತ್ತು ಸತ್ಯವು ನಿರೀಕ್ಷಿಸುವಂಥವುಗಳ ವಿಷಯಗಳಲ್ಲಿ ತೋರುವ ಉದಾಸೀನತೆಯು ಅನೀತಿಯಾಗಿರುವುದು.

ನಮ್ಮ ಕರ್ತನ ದಿನದಲ್ಲಿ ದೈವಿಕ ಸತ್ಯದ ಬೋಧಕರುಗಳು ಹಾಗೂ ಅದರ ಪ್ರತಿನಿಧಿಗಳೆಂದು ಬಹಿರಂಗವಾಗಿ ನಟನೆ ಮಾಡುವವರಿದ್ದರು. ಶಾಸ್ತ್ರಿಗಳು ಮತ್ತು ಫರಿಸಾಯರು ಸತ್ಯದಲ್ಲಿ ಬಹು ಆಸಕ್ತಿಯುಳ್ಳವರೆಂದು ತೋರ್ಪಡಿಸಿಕೊಂಡು ಅದರಲ್ಲಿನ ಶುದ್ಧೀಕಾರಕ ಶಕ್ತಿಗೆ ತಾವೇ ಬಹು ಪ್ರಸಂಶನೀಯ ವ್ಯಕ್ತಿನಿದರ್ಶನಗಳೆಂದು ಭಾವಿಸಿಕೊಂಡಿದ್ದರು. ತಾವು ಬೆಳಕನ್ನು ಹೊಂದಿರುವುದಾಗಿಯೂ ಅದು ಪ್ರಕಾಶಿಸುವಂತೆ ಮಾಡಿರುವುದಾಗಿಯೂ ಹೇಳಿಕೊಳ್ಳುತ್ತಿದ್ದರು. ಫರಿಸಾಯನು ಹೇಳಿದ್ದು: "ದೇವರೇ, ನಾನು ಇತರರಂತೆ ಅಲ್ಲವೆಂಬುದಕ್ಕಾಗಿ ಸ್ತೋತ್ರ ಮಾಡುತ್ತೇನೆ... ನಾನು ವಾರಕ್ಕೆರಡಾವರ್ತಿ ಉಪವಾಸ ಮಾಡುತ್ತೇನೆ... ನಾನು ಸಂಪಾದಿಸುವ ಎಲ್ಲಾದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ." ಆದರೆ ಕರ್ತನು ಹೇಳಿದ್ದು, "ಅಯ್ಯೋ, ನೀವು ಹೊರಗೆ ಜನರಿಗೆ ಸತ್ಪುರುಷರಂತೆ ಕಾಣಿಸಿಕೊಳ್ಳುತ್ತೀರಿ ಸರಿ, ಆದರೆ ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವರಾಗಿದ್ದೀರಿ." ಕರ್ತನ ದೃಷ್ಟಿಯಲ್ಲಿ ಹೀಗೆ ಅವರು ಕಂಡುಬಂದಿದ್ದರು; ಆದರೆ ಅವರು ಜನರ ಭಯಭಕ್ತಿಗೆ ಪಾತ್ರರಾಗಿ ಗೌವಿಸಲ್ಪಟ್ಟು ಅವರಿಂದ ಪರಿಶುದ್ಧರೆಂದು ಪರಿಗಣಿಸಲ್ಪಟ್ಟು ಸತ್ಯ ಹಾಗೂ ಪರಿಶುದ್ಧ ಮಾರ್ಗದ ಮಾರ್ಗದರ್ಶಕರೆಂದು ಮಾನ್ಯತೆ ಪಡೆದಿದ್ದರು. ದೇವರ ಆಜ್ಞೆಗಳಿಗೆ ನಿಷ್ಫಲವೂ ವಿವೇಕವಿಲ್ಲದ್ದೂ ಆದ ತಮ್ಮ ಸಂಪ್ರದಾಯಗಳನ್ನು

ಕೂಡಿಸಲು ಅರ್ಹರೆಂದು ತಮ್ಮನ್ನು ಭಾವಿಸಿಕೊಂಡಿದ್ದರು. ಇವು ದೇವರ ಆಜ್ಞೆಗಳನ್ನು ನಿರರ್ಥಕಗೊಳಿಸಿದ್ದವು. ಮತ್ತು ಅವರು ಜನರಿಗೆ ಈ ಸಂಪ್ರದಾಯಗಳನ್ನು ಬೋಧಿಸಲು ಬಹು ಆಸಕ್ತಿತೋರಿದ್ದರು.

ಹೀಗೆ ಮಾಡುವಲ್ಲಿ ಈ ಬೋಧಕರುಗಳು ಕ್ಷಮಾರ್ಹ–ರಾಗಿರಲಿಲ್ಲ. ದೇವರ ಧರ್ಮಶಾಸ್ತ್ರವು ಅವರ ಮುಂದೆ ತೆರೆದದ್ದಾಗಿತ್ತು ಮತ್ತು ಅದರ ವಿಷಯವಾಗಿ ಸೂಕ್ತವಾದ ತಿಳುವಳಿಕೆ ಹೊಂದುವುದು ಅವರ ಸೌಭಾಗ್ಯವೂ ಕರ್ತವ್ಯವೂ ಆಗಿತ್ತು. ಹಾಗೂ ಕ್ರಿಸ್ತನು ಬಂದ ನಂತರ ಆತನ ಉಪದೇಶಗಳು ಸತ್ಯವನ್ನು ಸುಸ್ಪಷ್ಟವಾಗಿ ವ್ಯಕ್ತಗೊಳಿಸಿ ಅವರ ಪೊಳ್ಳು ಸಂಪ್ರದಾಯಗಳ ನಿರರ್ಥಕತೆಯನ್ನು ಪೂರ್ಣವಾಗಿ ಕಾಣುವಂತೆ ಮಾಡಿರುವಲ್ಲಿ ಅವರು ಇದಕ್ಕೆ ಕ್ಷಮೆಯಿಲ್ಲದವರಾಗಿದ್ದರು. ಮತ್ತು ಅವರು ತಮ್ಮ ಹಿರಿಯರಿಂದ ಬಂದ ಸಂಪ್ರದಾಯಗಳನ್ನು ಹಿಡಿದುಕೊಂಡು ಅದನ್ನು ಬೋಧಿಸಲು ಮತ್ತು ತಮ್ಮ ನಿರರ್ಥಕತೆಯನ್ನು ಹೊರಗೆಡವಿ ಅಧಿಕವಾಗುತ್ತಾ ಬರುತ್ತಿದ್ದ ಸತ್ಯದ ಬೆಳಕನ್ನು ವಿರೋಧಿಸಲು ದೃಢವಾಗಿ ನಿರ್ಧರಿಸಿರಲು, ಅವರ ಕಪಟದ ಬಗ್ಗೆ ನಮ್ಮ ಕರ್ತನು ಮಾಡಿದ ಆರೋಪಗಳು ಅವರ ವಿಷಯವಾಗಿ ಬಹು ಸೂಕ್ತವಾಗಿದ್ದವು.

ಶಾಸ್ತ್ರಿಗಳೂ ಮತ್ತು ಫರಿಸಾಯರು ಅಧಿಕವಾದ ಸತ್ಯವನ್ನು ಹೊಂದಿದ್ದರು; ಅವರು ದೇವರ ಧರ್ಮಶಾಸ್ತ್ರವನ್ನು ಪೂರ್ಣವಾಗಿ ಹೊಂದಿದವರಾಗಿದ್ದು ಅದನ್ನು ನಂಬುವುದಾಗಿಯೂ ಮತ್ತು ಬೋಧಿಸುವದಾಗಿಯೂ ಇರುವೆವೆಂದು ಹೇಳಿಕೊಂಡಿದ್ದರು; ಆದರೆ ಅವರು ತಮ್ಮ ಸಂಪ್ರದಾಯದ ಮತ್ತು ವಾಸ್ತವದಲ್ಲಿ ಅಗೌರವವುಳ್ಳದ್ದಾದರೂ ಸುಣ್ಣಲೇಪಿಸಿದಂಥ ತಮ್ಮ ಗುಣಗಳ ಮೂಲಕ ಧರ್ಮವಿಧಿಯನ್ನು ಶೋಚನೀಯವಾಗಿ ಮಾರ್ಪಡಿಸಿ ವಿರೂಪಗೊಳಿಸಿರುವರು. ಇದರ ಫಲವಾಗಿ ತೋರಿಕೆಗಾಗಿ ಜನರನ್ನು ದೇವರ ಕಡೆಗೆ ತಿರುಗಿಸುವ ಅವರ ಪ್ರಯತ್ನಗಳು ಜನರನ್ನು ಅವರಂತೆಯೇ ಅಧಿಕ ಕಪಟಿಗಳನ್ನಾಗಿ ಮಾಡುವು ದರಲ್ಲಿ ಪರಿಣಮಿಸಿತ್ತು.

ಕರ್ತನು ತನ್ನ ಶಿಷ್ಯರಿಗೆ ಹೇಳಿದ್ದು "ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ."

ಜನರಿಗೆ ನಿಜವಾಗಿಯೂ ಉತ್ತಮವೂ ಪ್ರಸಂಶಾರ್ಹವೂ ಆಗಿ ಕಾಣುವದಾದರೂ ದೇವರ ಎಣಿಕೆಯಲ್ಲಿ ಕೇವಲ ಬೂಟಾಟಿಕೆಯೂ ಕಪಟವೂ ಆಗಿರುವ ನೀತಿಯ ಬಗ್ಗೆ ಎಚ್ಚರ ವಾಗಿರೋಣ. ಹೃದಯಗಳನ್ನು ನೋಡುವವನಾದ ದೇವರು ನಾವು ಯಾವ ಉದ್ದೇಶದಿಂದ ಸತ್ಯವನ್ನು ಪಡೆದವ–ರಾಗಿದ್ದೇವೆ ಇಲ್ಲವೇ ಅದನ್ನು ಪ್ರಚುರಗೊಳಿಸುತ್ತೇವೆಂಬುದನ್ನು ಕೂಡಲೇ ಗ್ರಹಿಸುವನು; ಮತ್ತು ದೈವಿಕ ಸಂಪತ್ತನ್ನು ಕ್ಷಣಿಕವಾದ ಜೀವಿತದ ಅಲ್ಪಗಳಿಕೆಗೆ ಮಾರಾಟ ಮಾಡಲು ಯತ್ನಿಸುವುದು ತಪ್ಪಾದವು ಗಳನ್ನು ಹಿಡಿದುಕೊಂಡು ಅದನ್ನು ಬೋಧಿಸಿ ದೇವರ ಸತ್ಯವನ್ನು ಮಂಕುಮಾಡುವುದೂ ಇಲ್ಲವೇ ಅದನ್ನು ವಿರೋಧಿಸುವುದೂ ಇಲ್ಲವೇ ಒಂದು ಸಾರಿ ಅಂಗೀಕರಿಸಿದ ನಂತರ ಅದನ್ನು ಸಮಾಧಿಯ ಹಾದಿಯಲ್ಲಿರುವ ಮೃತಪ್ರಾಯ ರಾದ ತನ್ನ ಸಹ ಪ್ರಯಾಣಿಕರಿಗೆ ಹಣಕ್ಕಾಗಲೀ ಅಥವಾ ಪ್ರಭಾವ ಬೆಳೆಸಲಾಗಲೀ ಅಥವಾ ಜನಪ್ರಿಯತೆಗಾಗಲೀ ಇಲ್ಲವೇ ಇತರೆ ಯಾವ ಪ್ರತಿಫಲಗಳಿಗಾಗಿ ಬಿಕರಿಮಾಡುವುದು ಮೂರ್ಖತನವೇ ಸರಿ.

ಹೀಗಿದ್ದರೂ ಸತ್ಯವನ್ನು ಹೀಗೆ ಕಪಟಿಗಳಾಗಿ ಮಾರಾಟ ಮಾಡದವರಾದರೂ ಒಂದು ಪ್ರಮಾಣದಲ್ಲಿ ಅದನ್ನು ಬೆಲೆಹೀನವಾಗ ಮಾಡುವ ಕೆಲವರೂ ಇರುವರು; ಇದರ ಫಲವಾಗಿ ಅವರು ಈಗಿನ ಕಾಲದಲ್ಲಿಯೂ ಮತ್ತು ಮುಂದಿನ ಕಾಲದಲ್ಲಿಯೂ ಅದನ್ನು ಕಳಕೊಂಡವರಾಗುವರು. ನಾವು ಪಕ್ಷಪಾತ, ಕೆಲವು ಪ್ರಮಾಣದಲ್ಲಿ ತಮ್ಮ ಮಾದರಿಯ ಅನುಸರಣೆ, ಅಥವಾ ಹೆಮ್ಮೆ, ಇಲ್ಲವೇ ಹೋರಾಟಭಾವ ಅಥವಾ ಸತ್ಯವನ್ನು ಪರಿಶೋಧನೆ ಮಾಡುವವರನ್ನು ಯೋಗ್ಯರನ್ನಾಗಿಸುವ ನಿರ್ವಂಚನೆ ನಿಷ್ಪಕ್ಷಪಾತಭಾವ ಸರಳತೆ ಹಾಗೂ ಸಾತ್ವಿಕ ಮನೋಭಾವಗಳಿಗೆ ಅಡ್ಡಿಮಾಡುವ ಯಾವುದೇ ಇತರ ಸಂಗತಿಯನ್ನು ಬೆಳೆಯಲು ಬಿಟ್ಟಲ್ಲಿ ಅದರಿಂದ ನಮ್ಮಲ್ಲಿ ಫರಿಸಾಯರ ಮನೋಭಾವ ಪ್ರವೇಶವಾಗಮಾಡಿಕೊಂಡವರಾಗಿ ಕಂಡುಬರುತ್ತದೆ. ಇದು ಪೂರ್ಣ ಪಕ್ವಗೊಂಡಾಗ ಕಪಟವು ಪ್ರಜ್ವಲವಾಗ ಮಾಡುತ್ತದೆ. ಯಾರು ಇಂಥಾ ಪ್ರವೃತ್ತಿಗಳನ್ನು ತಮ್ಮಿಂದ ತೊಲಗಿಸಿಕೊಳ್ಳುವರೋ ಮತ್ತು ಯಾರು ಇದರಿಂದಾಗಿ ಸಾತ್ವಿಕತೆಯಿಂದಲೂ ಮತ್ತು ಪ್ರಾಮಾಣಿಕವಾಗಿಯೂ ಸತ್ಯವನ್ನು ಅಂಗೀಕರಿಸಿಕೊಂಡು ಎಷ್ಟೇ ನಷ್ಟವಾದರೂ ಅಥವಾ ಯಾವುದೇ ತ್ಯಾಗವಿದ್ದರೂ ಅದನ್ನು ಆಸಕ್ತಿಯಿಂದ ಬೋಧಿಸುವರೋ ಅವರು ಪರಲೋಕರಾಜ್ಯದಲ್ಲಿ ದೊಡ್ಡವರಾಗಿರುವರೆಂದು ಕರ್ತನು ನುಡಿದಿರುವನು; ಹೀಗಿರುವಲ್ಲಿ ಯಾರಿಗೆ ಸ್ಪಷ್ಟವಾದ ಸತ್ಯವನ್ನು ಪಡೆದುಕೊಳ್ಳುವ ಸೌಭಾಗ್ಯವಿದ್ದು ಅದನ್ನು ಅಂಗೀಕರಿಸಲು ಸರಿಯಾದ ಹೃದಯ ಮನೋಭಾವವಿರುವುದೋ ಅಂಥವರು ತಪ್ಪಾದವುಗಳನ್ನು ಕೆಲವು ಪ್ರಮಾಣದಲ್ಲಿ ಹಿಡಿದುಕೊಂಡು ಅದನ್ನು ಬೋಧಿಸುವವರಾದರೆ ಅವರು ಪರಲೋಕದಲ್ಲಿ ಚಿಕ್ಕವರೆನಿಸಿ–ಕೊಳ್ಳುವರು. – ಮತ್ತಾಯ 5:19

ಪಕ್ಷಪಾತ ಹಾಗೂ ಮನೋಪ್ರವೃತ್ತಿಯಲ್ಲಿರುವ ಹಳೆಯ ದಾದ ಹಲವಾರು ಮನೋವಿಕಾರಗಳು ಅನೇಕ ಸಾರಿ ದೇವರಿಗೆ ಪ್ರಾಮಾಣಿಕವಾಗಿ ಪ್ರತಿಷ್ಠಿತರಾದವರ ಅಭಿವೃದ್ಧಿಯನ್ನು ಬಹುವಾಗಿ ಕುಂಠಿತಗೊಳಿಸುತ್ತದೆ; ಮತ್ತು ಇದರ ಪರಿಣಾಮವಾಗಿ ದೇವರ ಸೇವಾರ್ಥಕ್ಕಾಗಿಯೇ ಆದ ಅವರ ಪ್ರಯತ್ನಗಳು ದಿಕ್ಕುತಪ್ಪಿದವು ಗಳಾಗಿ ಅವರು ದೇವರ ವಾಕ್ಯದಲ್ಲಿ ಬಹು ಸ್ಪಷ್ಟವಾಗಿ ವಿವರಿಸಿರುವ ಸತ್ಯಾಂಶಗಳಿಗೆ ವಿರುದ್ಧವಾದವುಗಳನ್ನು ನಂಬಿ ಅವುಗಳನ್ನು ಬೋಧಿಸುವವರಾಗಿ ಕಂಡುಬರುವರು. ನಾವು ಈ ವಿಷಯಗಳಲ್ಲಿ ಎಚ್ಚರಿಕೆಯಾಗಿರೋಣ ಮತ್ತು ಸತ್ಯದ ಮಾರ್ಗದಲ್ಲಿ ನಾವು ಅಭಿವೃದ್ಧಿಹೊಂದುವುದಕ್ಕೆ ಹಾಗು ನಮ್ಮ ಒಡೆಯನ ಸೇವೆಯಲ್ಲಿ ಉಪಯುಕ್ತವಾಗಲು ಇರುವ ಎಲ್ಲಾ ಅಡೆತಡೆಗಳನ್ನು ಶ್ರದ್ಧೆಯಿಂದ ಹಿಮ್ಮೆಟ್ಟಿಸಿದವರಾಗಿ ನಮ್ಮ ಮುಂದಿರುವ ಓಟವನ್ನು ಯೇಸುವಿನ ಮೇಲೆ ದೃಷ್ಟಿಯಿಟ್ಟು ತಾಳ್ಮೆಯಿಂದಲೂ ಸಾತ್ವಿಕಭಾವದಿಂದಲೂ ಮತ್ತು ಶ್ರದ್ಧಾಪೂರ್ವಕರಾಗಿಯೂ ಓಡೋಣ. "ನನ್ನ ಕೃಪೆಯೇ ನಿನಗೆ ಸಾಕು. ಬಲಹೀನತೆಯಲ್ಲಿಯೇ ನನ್ನ ಬಲವು ಸಾಧಕವಾಗುವುದು" ಎಂದು ಆತನು ನುಡಿದಿರುವನು.

# ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ (ಪರಿಪೂರ್ಣನಾಗಿರುವಂತೆ) ದೋಷವಿಲ್ಲದವರಾಗಿರುವುದು (ಪರಿಪೂರ್ಣರಾಗಿರುವುದು)

**ರೀಪ್ರಿಂಟ್ಸ್ ಪುಟ 4558**

**ಮತ್ತಾಯ 5:19-36, 38-48**

## ಮತ್ತಾಯ 5:48

**"ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ (ಪರಿಪೂರ್ಣನಾಗಿರುವಂತೆ) ನೀವೂ ದೋಷವಿಲ್ಲದವರಾಗಿರ್ರಿ (ಪರಿಪೂರ್ಣರಾಗಿರ್ರಿ)"**

ಕರ್ತನ ಹಿಂಬಾಲಕರು (ಪರಿಪೂರ್ಣತೆಯಿಂದ) ಬಿದ್ದು ಹೋದ ದೇಹವನ್ನು ಹೊಂದಿದವರಾದ್ದರಿಂದ ಹೃದಯದಲ್ಲಿ ಉದ್ದೇಶಗಳಲ್ಲಿ ಪರಿಪೂರ್ಣತೆಯುಳ್ಳವರಾಗಿರುವದನ್ನು ಬಿಟ್ಟರೆ ದೇವರು ಪರಿಪೂರ್ಣನಾಗಿರುವಂತೆ ಅವರು ಪರಿಪೂರ್ಣರಾಗಿರುವುದು ಅವರಿಗೆ ಸಾಧ್ಯವಾಗದು. ಆದರೆ ನಾವು ಕ್ರಿಸ್ತನಿಂದ "ಆಯಲ್ಪಟ್ಟವರಾಗಿ" ಆತನ ರಾಜ್ಯದ ಮಹಿಮೆಯಲ್ಲಿ ಆತನೊಡನೆ ಪಾಲು ಹೊಂದ ಯೋಗ್ಯರಾಗಲು ಹೃದಯದಲ್ಲಿನ ಈ ಒಳ್ಳೆಯ ಉದ್ದೇಶಗಳು ಸಾಕಾಗಲಾರವು. ನಮ್ಮ ಹೃದಯ ಶುದ್ಧತೆಯ ಹಾಗೂ ದೇವರ ಹೋಲಿಕೆಯ ಪ್ರವೃತ್ತಿಯು ಪರೀಕ್ಷಿಸಲ್ಪಡಬೇಕು. ಅದು ಗುಣಗಳನ್ನು ಸ್ಥಿರವಾಗಿಸುವ ಮಟ್ಟಿಗೆ ಪ್ರದರ್ಶಿತಗೊಂಡು ಅಭಿವೃದ್ಧಿಯಾಗಬೇಕು. ಅದು ಪರಿಶೋಧನೆಯೆಂಬ ಪರೀಕ್ಷೆಯನ್ನು ತಾಳಿಕೊಂಡು ನಿಲ್ಲುವಂತಾಗಬೇಕು. ಅದು ಒತ್ತಡವನ್ನು ಸಹಿಸಿಕೊಂಡು ನಂಬಿಗಸ್ತಿಕೆಯನ್ನು ಕಾಪಾಡಿಕೊಂಡಿರಬೇಕು. ಆದುದರಿಂದ ಕ್ರಿಸ್ತನ ಶಿಷ್ಯರಾಗಿ ಅಂಗಿಕರಿಸಲ್ಪಟ್ಟವರು ಬಹು ಕಠಿಣ ಪರಿಸ್ಥಿತಿಗಳಲ್ಲಿಯೂ ನಂಬಿಗಸ್ತರಾಗಿರಬೇಕಾದ ಅಗತ್ಯವಿರುತ್ತದೆ.

ಯೆಹೂದ್ಯರು ಕ್ರಮೇಣ ದೇವಾಜ್ಞೆಗಳ ಮೇಲಿನ ತಮ್ಮ ದೃಷ್ಟಿಯನ್ನು ಕಳಕೊಂಡವರಾಗಿ ಹೆಚ್ಚು ಕಡಿಮೆ ಆಜ್ಞೆಗಳಿಗೆ ವಿರುದ್ಧವಾಗಿರುವ ಸಂಪ್ರದಾಯಗಳನ್ನು ತಮ್ಮ ಮನಸ್ಸುಗಳಲ್ಲಿ ತುಂಬಿಕೊಂಡವರಾಗಿದ್ದರು. ಈ ಶ್ರೇಷ್ಠ ಬೋಧಕನು, ಧರ್ಮಶಾಸ್ತ್ರದ ಬೋಧಕರನ್ನು ನಿರ್ಲಕ್ಷಿಸಿ, ಕೆಲವು ಸಂಪ್ರದಾಯಗಳು ಧರ್ಮಶಾಸ್ತ್ರವನ್ನು ನಿಷ್ಕ್ರೀಯವಾಗುವಂತೆ ಮಾಡುವುದೆಂಬುದನ್ನು ಬೋಧಿಸಬಹುದಾಗಿತ್ತು; ಆದರೆ ಬದಲಾಗಿ ಅವರಿಗೆ ತಾನು ಮಾನವ ಸಂಪ್ರದಾಯಗಳನ್ನು ಮಾತ್ರ ತೆಗೆದು ಹಾಕಿ ಧರ್ಮಶಾಸ್ತ್ರವನ್ನು ಸ್ಥಿರಪಡಿಸಿ ಅದು ಅಧಿಕ ಸ್ಪಷ್ಟವಾಗುವಂತೆ ಯತ್ನಿಸುತ್ತಿರುವುದಾಗಿ ಅವರಿಗೆ ಆಶ್ವಾಸನೆ ನೀಡಿ ಹೇಳಿದ್ದನು. ಶಾಸ್ತ್ರಿಗಳು ಮತ್ತು ಫರಿಸಾಯರನ್ನು ಜನರು ಬಹು ಧರ್ಮಶ್ರದ್ಧೆಯುಳ್ಳವರೂ ಪರಿಶುದ್ಧರಾದವರೂ ಎಂದು ಮನ್ನಣೆ ನೀಡಿದ್ದರು. ಆದರೆ ಯೇಸು ಜನರಿಗೆ (ಇವರಿಗಿಂತಲೂ) ಹೆಚ್ಚಿನ ಪರಿಶುದ್ಧತೆಯಿರಬೇಕೆಂದೂ ಇಲ್ಲವಾದಲ್ಲಿ ಅವರು ಪರಲೋಕ ರಾಜ್ಯದಲ್ಲಿ ಎಂದೂ ಸೇರಲಾರರೆಂದು ಖಚಿತವಾಗಿ ಹೇಳಿದ್ದನು.

"ನರಹತ್ಯೆ ಮಾಡಬಾರದು" ಎಂದು ಸಂಪ್ರದಾಯವು ಧರ್ಮಶಾಸ್ತ್ರವನ್ನು ಉಲ್ಲೇಖಿಸಿ "ನರಹತ್ಯೆ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನು" ಅಂದರೆ ನೇಮಿತವಾದ ನ್ಯಾಯಾಧಿಪತಿಗಳಿಂದ ನ್ಯಾಯವಿಚಾರಣೆ ಹಾಗು ದಂಡನೆಗೊಳಗಾಗುವ ಅಪಾಯವಿದೆಯೆಂದು ಅದಕ್ಕೆ ಸೇರಿಸಿ ಹೇಳಿರುವುದು. ಆದರೆ ಯೇಸುವು ಇದು ಇನ್ನೂ ಅಧಿಕ ಕಠಿಣವಾದ ರೀತಿಯಲ್ಲಿ ಅನ್ವಯವಾಗುವುದೆಂದು ಉಪದೇಶಿಸಿದ್ದನು, ಹೇಗೆಂದರೆ ಸಹೋದರನ ಮೇಲೆ (ಹೃದಯದಲ್ಲಿ, ಹೊರಗೆ ವ್ಯಕ್ತವಾಗದೇ) ಸಿಟ್ಟುಗೊಳ್ಳುವುದು ಕೊಲೆಗಡುಕ ಮನೋಭಾವವಾಗಿ ಅರ್ಥೈಸುತ್ತದೆಂದೂ, ನರಹತ್ಯೆ ನಿಜವಾಗಿ ಎಂದೂ ನಡೆಯದಿದ್ದರೂ ಅದು ದೇವರ ದೃಷ್ಟಿಯಲ್ಲಿ ಖಂಡನಾರ್ಹವೆಂದೂ ಹೇಳಿದ್ದನು. ಇದಕ್ಕಿಂತಲೂ ಹೆಚ್ಚಾಗಿ, ಕಠಿಣವಾದ ಟೀಕೆಯ ಮಾತಾದ ರಾಖಾ ಎಂಬುದು "ನೀಚತನವನ್ನು" ಸೂಚಿಸುವದಾಗಿಯೂ "ನೀನು ಮೂರ್ಖಾ" ಎನ್ನುವುದು ಇದಕ್ಕಿಂತಲೂ ಹೀನವಾದ ನೀತಿ ಭ್ರಷ್ಟತೆಯನ್ನು ಸೂಚಿಸುವುದಾಗಿ ಆಕ್ಷೇಪಿಸಿ ಹೇಳಿದ್ದನು. ಹೀಗೆ ವ್ಯಕ್ತವಾಗುವ ಮಾತುಗಳು ಹೃದಯದಲ್ಲಿನ ಕೆಟ್ಟ ಪರಿಸ್ಥಿತಿಯನ್ನು ತೋರಿಸುವುದೆಂದೂ ಅಂತ್ಯದಲ್ಲಿ ಇದು ವ್ಯಕ್ತಿಯನ್ನು ಸನ್ಹೆದ್ರೀನ್ ಸಭೆಯ ಮುಂದೆ ಕೊಂಡೊಯ್ಯುವುದೆಂದೂ ಅಥವಾ ಸಾಧ್ಯವಾದಲ್ಲಿ "ಗೆಹೆನ್ನಾ" ಎಂದು ಸಾಂಕೇತಿಕವಾಗಿ ಕರೆಯಲಾಗುವ ಎರಡನೇ ಮರಣಕ್ಕೆ ನಡೆಸುವುದೆಂದು ನಮ್ಮ ಕರ್ತನು ಸಾರಿ ಹೇಳಿದ್ದನು.

ನರಕದ ಅಗ್ನಿಯೆಂದು ಈ ಅಧ್ಯಯನದಲ್ಲಿ ಹೇಳುವುದು ಅಕ್ಷರಶಃ ಗೆಹೆನ್ನಾದ ಅಗ್ನಿಯಾಗಿರುವುದು. ಅದು ಹಿನ್ನೋಮ್ (ಗೆಹೆನ್ನಾ) ತಗ್ಗಿನಲ್ಲಿ ಹೊಲಸುನಾರುಗಳನ್ನು ನಾಶಗೊಳಿಸಿ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಉರಿಸಲಾಗುತ್ತಿದ್ದ ಬೆಂಕಿಗೆ ಸೂಚನೆಯಾಗಿರುವುದು. ಈ ಬೆಂಕಿಗೆ ಕಾನೂನು ಬಾಹಿರ ಕೃತ್ಯವೆಸಗುವ ದುಷ್ಟರ ಶವಗಳನ್ನು ಎಸೆದು ನಾಶಗೊಳಿಸು ತ್ತಿದ್ದರ ಬಹುದು. ಹೀಗೆ ಇದು ಎರಡನೇ ಮರಣಕ್ಕೆ ಸಂಕೇತವಾಗಿತ್ತು. – ಪ್ರಕಟನೆ 20:14

ಗಲಿಲಾಯದ ಪ್ರವಾದಿಯ ಪ್ರಕಾರ ಮನಸ್ಸಿನಲ್ಲಿ ಮತ್ತೊಬ್ಬನ ಮೇಲೆ ದ್ವೇಷವಿಟ್ಟುಕೊಂಡು ದೇವರ ಯಜ್ಞವೇದಿಯ ಬಳಿಗೆ ಕಾಣಿಕೆ ಯಜ್ಞದೊಡನೆ ಬರುವುದರಲ್ಲಿ ಪ್ರಯೋಜನವಾಗಲಾರದು. ಆದ್ದರಿಂದ ಕ್ರಿಸ್ತನ ಶಿಷ್ಯರಲ್ಲಿ ಯಾರಿಗೇ ಆಗಲಿ ದೇವರಿಗೆ ಕಾಣಿಕೆಯನ್ನು ಅರ್ಪಿಸುವ ಮೊದಲು ತಮ್ಮ ಹೃದಯಗಳನ್ನು ಶೋಧಿಸಿಕೊಂಡು ಅದರೊಳಗಿಂದ ಹಗೆತನವನ್ನು ಕಿತ್ತೊಗೆಯಬೇಕು. ಇಲ್ಲವಾದಲ್ಲಿ ಅವರ ಸ್ತುತಿಯಜ್ಞಗಳು ನಿರರ್ಥಕವಾಗುವವು.

25 ಮತ್ತು 26ನೇ ವಚನಗಳಲ್ಲಿರುವ ಬುದ್ಧಿಮಾತು ಸ್ವಸ್ಥತೆಯುಳ್ಳವುಗಳು. ನಮ್ಮ ಮೇಲೆ ಒಂದು ಹೊಣೆಗಾರಿಕೆ–ಯಿದ್ದಲ್ಲಿ ನಾವು ಅದನ್ನು ಸಾಧ್ಯವಾದಷ್ಟು ಶೀಘ್ರವಾಗಿ ಬಗೆಹರಿಸಿ ತೀರಿಸಿಕೊಳ್ಳಬೇಕು. ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯು ತಮಗೆ ಮಿತ್ರನಂತೆಯೂ ಸಹಾಯಕನಂತೆಯೂ ಇರುವುದಾಗಿ ಭಾವಿಸಿಕೊಂಡಿದ್ದ ಯೆಹೂದ್ಯರಿಗೆ ಅದು ನಿಜವಾಗಿಯೂ ಅವರ ವಿರೋಧಿಯಾಗಿ ಅವರೆಲ್ಲರನ್ನು ಖಂಡಿಸಿರುವುದೆಂಬುದನ್ನು ತಿಳಿದುಕೊಳ್ಳುವುದು ಅವರಿಗೆ ಒಂದು ಮುಖ್ಯವಾದ ಪಾಠವಾಗಿತ್ತು. ಶಾರೀರಿಕವಾದ ಅಪರಿಪೂರ್ಣತೆಯ ಕಾರಣದಿಂದಾಗಿ ಅವರಿಗೆ ಆಜ್ಞೆಗಳನ್ನು ಕೈಗೊಂಡು ನಡೆಯಲು ಅಸಮರ್ಥರಾಗಿ ಅದರಿಂದ ಮನ್ನಣೆಯನ್ನು ಪಡೆಯಲು ಅವರಿಗೆ ಸಾಧ್ಯವಾಗದ ಕಾರಣ ಅದರಿಂದ ಖಂಡನೆಗೊಳಗಾದರು. ಇದನ್ನು ಗ್ರಹಿಸಿಕೊಂಡವರೆಲ್ಲರಿಗೆ ಇರುವ ಸೂಕ್ತವಾದ ಮಾರ್ಗವೆಂದರೆ ಅವರು ಧರ್ಮಶಾಸ್ತ್ರವಿಧಿಗಳು ಅಪೇಕ್ಷಿಸುವುದರ ವಿಷಯದಲ್ಲಿ ತಮ್ಮಲ್ಲಿರುವ ಅಸಮರ್ಥತೆಗಳನ್ನು (ಅಂದರೆ, ದೋಷ ನ್ಯೂನ್ಯತೆಗಳನ್ನು) ಅರಿಕೆಮಾಡಿಕೊಂಡು ಸಾಧ್ಯವಾದಷ್ಟು ಒಂದು ಒಳ್ಳೆಯ ರೀತಿಯಲ್ಲಿ ಆ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಯತ್ನಿಸುವುದು.

ನಮ್ಮ ಕರ್ತನ ಪ್ರಬೋಧನೆಗೆ ಕಿವಿಗೊಟ್ಟವರು ತಮ್ಮ ಅಪೂರ್ಣ ಸ್ಥಿತಿಯನ್ನು ಮನಗಂಡು ಸಹಾಯಕ್ಕಾಗಿ ಬೇಡಿಕೊಂಡು ಕ್ರಿಸ್ತನಲ್ಲಿ ಆತನ ಯಜ್ಞದ ಮೂಲಕ ಕ್ಷಮೆಯನ್ನು ಕಂಡುಕೊಂಡರು. ಹೀಗೆ ಇವರು ಪಂಚಾಶತ್ತಮ ದಿನದಂದು ನಂಬಿಕೆಯ ಮೂಲಕವಾಗಿ ದೇವರ ಅನುಗ್ರಹ ಆಶೀರ್ವಾದಗಳಿಗೆ ಸೇರುವಂತೆ ಮಾಡಲಾಯಿತು. ಆದರೆ ಫರಿಸಾಯರು ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ಕೈಗೊಂಡು ನಡೆಯುವವ –ರೆಂದು ಕಪಟವಾಗಿ ಹೇಳಿಕೊಳ್ಳುವವರಾಗಿ ತಮ್ಮ ಪಾಪಗಳನ್ನು ಪಶ್ಚಾತಾಪದಿಂದ ಅರಿಕೆಮಾಡಿ ಅದರೊಡನೆ ಸಹಮತಕ್ಕೆ ಬರದವರಾಗಿದ್ದರು ಮತ್ತು ಕ್ರಿಸ್ತನನ್ನು ಅಂಗೀಕರಿಸದೆ ಪಂಚಾಶತ್ತಮ ದಿನದ ಆಶೀರ್ವಾದವನ್ನು ಪಡೆಯಲಾಗದೇ ಇದ್ದರು. ಬದಲಾಗಿ ಯೇಸುವನ್ನು ತಿರಸ್ಕರಿಸಿದ ಯೆಹೂದ್ಯರೆಲ್ಲರು ಮುಗ್ಗರಿಸುವವರಾಗಿ ಜನಾಂಗವಾಗಿ ಸೆರೆಗೆ ಒಯ್ಯಲ್ಪಟ್ಟರು ಮತ್ತು ದೇವಕೋಪವು ಆ ಜನರ ಮೇಲೆ ಅತಿ ತೀವ್ರವಾಗಿ ಬಂದಿತು. ಅವರ ವಿಷಯವಾಗಿ ಧರ್ಮಶಾಸ್ತ್ರದಲ್ಲಿ ಹಾಗೂ ಪ್ರವಾದಿಗಳ ಗ್ರಂಥಗಳಲ್ಲಿ ಬರೆದಿರುವುದೆಲ್ಲವೂ ನೆರವೇರುವವರೆಗೆ ಅವರು ಆ ಸೆರೆಮನೆಯಿಂದ ಹೊರಬರಲಾರರು. ಅವರು ಹೇಳಿದ್ದು, “ಆತನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ” ಮತ್ತು ಅವರು ತಮ್ಮ ಧರ್ಮಶಾಸ್ತ್ರದ ಮೂಲಕ ಅಪರಾಧಿಗಳೆಂದು ಪರಿಗಣಿಸಲ್ಪಟ್ಟರು. ಅವರು ಪಾಪ ಮರಣದ ಸ್ಥಿತಿಯಿಂದ ಎಬ್ಬಿಸಲ್ಪಟ್ಟು (ಕ್ರಿಸ್ತನ) ಸಾವಿರ ವರುಷದ (ಆಳ್ವಿಕೆಯ) ಸದಾವಕಾಶಗಳ ಮೂಲಕವಾಗಿ ಪ್ರಯೋಜನ ಪಡೆಯಲು ಆ ಸಾವಿರ ವರುಷವೆಲ್ಲಾ ಬೇಕಾಗುವುದು. ಆ ಸಾವಿರ ವರುಷದ ಅಂತ್ಯದಲ್ಲಿ ಕರ್ತನ ಕೃಪೆಯಿಂದ ಅವರು “ಅತಿ ತೀಕ್ಷಣವಾದ ಬೆಲೆ ತೆತ್ತಂತಾಗುತ್ತದೆ” ಮತ್ತು ಆಗ ಯಾರು ಮನಃಪೂರ್ವಕವಾಗಿ ವಿಧೇಯರಾಗುವರೋ ಅವರು ಬಿಡುಗಡೆ ಹೊಂದುವರು. ಧರ್ಮಶಾಸ್ತ್ರವಿಧಿಗಳಿಂದ ಬಿಡುಗಡೆ ಬಯಸುವ ಪ್ರತಿಯೊಬ್ಬ ಯೆಹೂದ್ಯನು ತನ್ನ ನ್ಯೂನ್ಯತೆ ಅಶಕ್ತತೆಗಳನ್ನು ಅರಿಕೆಮಾಡಿ ಕ್ರಿಸ್ತನ ಯಜ್ಞದಲ್ಲಿ ಒಂದು ಪಾಲನ್ನು ಅಂಗೀಕರಿಸುವುದರ ಮೂಲಕ ಹೀಗೆ ಮಾಡಬಹುದು. ಕೇವಲ ಕೆಲವೇ ಮಂದಿ ಧರ್ಮಶಾಸ್ತ್ರವು (ಕೃಪೆಗೆ) ವಿರೋಧವಾಗಿರುವುದೆಂದು ಒಪ್ಪಿಕೊಳ್ಳುವರು. – ಯೋಹಾನ 1:12

## “ಕಣ್ಣಿಗೆ ಪ್ರತಿಯಾಗಿ ಕಣ್ಣು – ಹಲ್ಲಿಗೆ ಪ್ರತಿಯಾಗಿ ಹಲ್ಲು”

ಇಸ್ರಾಯೇಲ್ಯರ ನ್ಯಾಯಾಧಿಪತಿಗಳು ಅನುಸರಿಸಬೇಕಾದ, "ಕಣ್ಣಿಗೆ ಪ್ರತಿಯಾಗಿ ಕಣ್ಣು" ಎಂಬ ನಿಷ್ಕೃಷ್ಟ ನ್ಯಾಯಪಾಲನಾ ದೈವನೀತಿಯನ್ನು ಮೋಶೆಯ ಧರ್ಮಶಾಸ್ತ್ರವು ವಿಧಿಸಿದೆ. ಜನರು ಇದನ್ನು ತಮ್ಮ ವ್ಯಕ್ತಿಗತ ಸಂಬಂಧಗಳ ವಿಷಯದಲ್ಲಿ ಅನವಶ್ಯಕವಾಗಿ ಅನ್ವಯ ಮಾಡಿಕೊಂಡಿದ್ದರು; ಇದರ ಫಲವಾಗಿ ಅದು ಹೃದಯದ ಕಠಿಣತೆಯನ್ನು ಅಂದರೆ ಅನುಕಂಪ ಕನಿಕರಗಳಿಲ್ಲದ ನಿರ್ದಾಕ್ಷಣ್ಯ ಪ್ರವೃತ್ತಿಯನ್ನು ಬೆಳೆಯ ಮಾಡಿತ್ತು. ನಮ್ಮ ಕರ್ತನ ಉಪದೇಶಗಳು ಇದರಲ್ಲಿನ ಲೋಪವನ್ನು ಕಾಣಮಾಡಿ ಪ್ರೀತಿಯೆಂಬ ಇನ್ನೂ ಅಧಿಕ ಉತ್ಕೃಷ್ಟವಾದ ಮಾರ್ಗದ ಕಡೆ ಗಮನ ಸೆಳೆದಿದ್ದವು. ಪರಲೋಕದ ತಂದೆಯು ಧರ್ಮಶಾಸ್ತ್ರದ ಆಜ್ಞಾವಿಧಿಗಳನ್ನು ನೇಮಿಸಿದ್ದರೂ ಆತನು ಕರುಣೆಯನ್ನು ಸಹ ತೋರಿಸಲು ಅಣಿಮಾಡಿಕೊಂಡಿದ್ದನು ಮತ್ತು ತನ್ನ ಮಗನನ್ನು ಪಾಪಿಗಳ ವಿಮೋಚಕನನ್ನಾಗಿ ಲೋಕಕ್ಕೆ ಕಳುಹಿಸುವುದರ ಮೂಲಕ ಅದನ್ನು ತೋರಿಸಿದ್ದನು. ಅವರು ನಾಶವಾಗದೆ ಆ ರಕ್ಷಕನಿಗೆ ವಿಧೇಯರಾಗುವುದರ ಮೂಲಕ ನಿತ್ಯಜೀವ ಹೊಂದುವಂತೆ ಆತನನ್ನು ಕಳುಹಿಸಿದ್ದನು. ಬಾಧೆಯನ್ನು ಅನುಭವಿಸುವುದರಲ್ಲಿ ಜೊತೆಗಾರರಾದ ಈ ಇಬ್ಬರೂ ಅಪರಿಪೂರ್ಣರಾಗಿರಲು ಅವರು ಪರಸ್ಪರ ಉದಾರ ಮನೋಭಾವದವರೂ ಮೃದುವಾದ ಹೃದಯವುಳ್ಳವರೂ ಆಗಿರುವುದು ಎಷ್ಟು ಸೂಕ್ತವಲ್ಲವೆ? ನಾನು ನಿಮಗೆ ಹೇಳುವುದೇನೆಂದರೆ ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ಬಯಸುವುದರ ಮೂಲಕ ನಿಮ್ಮ ಅಪರಿಪೂರ್ಣರಾದ ನಿಮ್ಮ ಜೊತೆಗಾರರಿಂದ ನಿರ್ದಾಕ್ಷಣ್ಯವಾಗಿ ನ್ಯಾಯವನ್ನು ಅಪೇಕ್ಷಸುವವರಾಗಿ ನಿಮ್ಮ ಹೃದಯಗಳಲ್ಲಿ ಒಂದು ಅನುಚಿತವಾದ ಮನೋಭಾವವನ್ನು ಪ್ರೋತ್ಸಾಹಿಸುತ್ತಿರುವಿರಿ ಎಂಬ ಕರ್ತನ ಮಾತನ್ನು ಗಮನಿಸಿ.

(1) ನಿನ್ನ ವೈರಿ ಒಂದು ಕೆನ್ನೆಗೆ ಹೊಡೆದರೆ ಇನ್ನೊಂದು ಕೆನ್ನೆಯನ್ನೂ ತೋರಿಸು. ಇದು ಅಕ್ಷರಶಃವಾಗಿಯಲ್ಲ. ಆದರೆ ಇದು ನಿನ್ನ ಹೃದಯದಲ್ಲಿ, ಮನಸ್ಸಿನಲ್ಲಿರಬೇಕು. ಅದೇ ರೀತಿಯ ಪ್ರತೀಕಾರ ಮಾಡಬೇಡ. ನಮ್ಮ ಕರ್ತನು ಇದನ್ನು ಅಕ್ಷರಶಃವಾಗಿ ಹೇಳಲಿಲ್ಲವೆಂಬುದು ನ್ಯಾಯವಿಚಾರಣೆಯ ಸಮಯದಲ್ಲಿ ತನ್ನ ಕೆನ್ನೆಗೆ ಹೊಡೆದಾಗ ಮತ್ತೊಂದು ಸಾರಿ ಹೊಡೆಯಬೇಡವೆಂದು ಕೇಳದಿರುವುದರಲ್ಲಿ ತೋರಿಬಂದಿದೆ. ಸಾಂಕೇತಿಕವಾಗಿ ಆತನು ಮತ್ತೊಂದು ಕೆನ್ನೆಯನ್ನು ಒಡ್ಡಿದ್ದನು; ಆದರೆ ಇದು ಅಕ್ಷರಶಃವಲ್ಲ.

(2) ಯಾವನಾದರು ನ್ಯಾಯಾಲಯದಲ್ಲಿ ನಮ್ಮ ಮೇಲೆ ಮೊಕದ್ದಮೆ ಹಾಕಿ ಕಾನೂನು ರೀತಿಯಲ್ಲಿ ನಮ್ಮ ಸ್ವತ್ತನ್ನು

ತೆಗೆದುಕೊಂಡದ್ದೇಯಾದಲ್ಲಿ ನಾವು ಅದಕ್ಕೆ ಅವನ ಮೇಲೆ ಜಿದ್ದನ್ನು ಇಟ್ಟುಕೊಳ್ಳುವರಾಗಬಾರದು. ಆದರೆ ನ್ಯಾಯಾಲಯವು ವಿಧಿಸಿದ್ದನ್ನೆಲ್ಲವನ್ನೂ ಮನಃಪೂರ್ವಕವಾಗಿ, ಅದಕ್ಕೆ ಕಡಿಮೆ–ಯಿಲ್ಲದೆ ಹೆಚ್ಚಾಗಿಯಾದರೂ, ಕೊಡುವವರಾಗಬೇಕು. ನಾವು ಕಾನೂನು ಪಾಲನೆಯನ್ನು ತೀವ್ರವಾಗಿ ಮಾಡುವವರಾಗಬೇಕು.

(3) ಸರ್ಕಾರೀ ಸೇವೆಯಲ್ಲಿ ಪುರಾತನ ಕಾಲದಲ್ಲಿದ್ದಂತೆ ಕಡ್ಡಾಯವಾಗಿ ಸೈನಿಕ ಶಿಕ್ಷಣಕ್ಕೆ ಕರೆಯಲ್ಪಟ್ಟು ಹೊರೆಯನ್ನು ಒಂದು ಮೈಲು ಹೊತ್ತುಕೊಂಡು ಹೋಗಲು ಒತ್ತಾಯಪಡಿಸಿದ್ದಲ್ಲಿ ಕರ್ತನ ಹಿಂಬಾಲಕರು ಅದನ್ನು ಅತಿ ಆಸಕ್ತರಾಗಿಯಾಗಲೀ ಇಲ್ಲವೇ ಬಲವಂತದಿಂದಾಗಲೀ ಮಾಡದೆ ಅದನ್ನು ಸ್ವಲ್ಪ ಹೆಚ್ಚಾಗಿ ಮಾಡುವುದರ ಮೂಲಕ ತಮ್ಮ ಒಳ್ಳೇತನವನ್ನು ತೋರಿಸಬೇಕು. ಅಗತ್ಯವಾದಲ್ಲಿ ಅಥವಾ ಸಮಯೋಚಿತವಾಗಿದ್ದಲ್ಲಿ ಅವರು ಗುಣಗುಟ್ಟುವುದನ್ನಾಗಲೀ ಕಾನೂನು ನಿಗದಿಪಡಿಸಿದ್ದನ್ನು ಮಾತ್ರ ಮಾಡುವುದನ್ನು ಬಿಟ್ಟು ಇನ್ನೊಂದು ಮೈಲು ದೂರದವರೆಗೆ ಸಹಾಯ ಮಾಡುವವರಾಗಬೇಕು.

(4) ಕರ್ತನ ಹಿಂಬಾಲಕರು ಉದಾರಭಾವವನ್ನು ಬೆಳೆಸಿ–ಕೊಳ್ಳಬೇಕು. ಪರಲೋಕದಲ್ಲಿರುವ ತಂದೆಯು ಯಾವಾಗಲೂ ಕೊಡುವವನಾಗಿದ್ದು ಎಂದೂ ಕೇಳಿಕೊಳ್ಳುವವನಲ್ಲದೆ ಇರುವಂತೆ ಆತನ ಮಕ್ಕಳೂ ಸಹ ಅದರಂತೆಯೇ ಈ ಗುಣವುಳ್ಳವರಾಗಿ ಅಗತ್ಯವಿದ್ದವರಿಗೆ ಕೊಡಲು ಯಾವಾಗಲೂ ಸಿದ್ಧರಿರಬೇಕು. ಇದು ದುಬಾರೀ ಉಡುಗೊರೆಯಾಗಿರಬೇಕೆನ್ನುವುದಾಗಲಿ ಇಲ್ಲವೇ ಕೇಳಿಕೊಂಡದ್ದನ್ನೆಲ್ಲಾ ಕೊಡಲೇಬೇಕೆಂಬ ಅರ್ಥವಲ್ಲ; ನ್ಯಾಯ–ವಾಗಿಯೂ ವಿವೇಚನೆಯಿಂದಲೂ ಇದನ್ನು ಮಾಡಬೇಕು. ಆದರೂ ಪ್ರತಿಯೊಬ್ಬ ಕರ್ತನ ಹಿಂಬಾಲಕನೂ ತನ್ನ ಹೃದಯ–ಗಳಲ್ಲಿ ಎಲ್ಲಾ ವಿಧದಲ್ಲಿಯೂ ಕೊಟ್ಟು ಸಹಾಯ ಮಾಡುವ ಬಯಕೆಯನ್ನು ಬೆಳೆಸಿಕೊಳ್ಳುವವರಾಗಿರಬೇಕು. ಮತ್ತು ತಮ್ಮಲ್ಲಿ ಸಾಲ ಬೇಡುವವರಿಗೆ ಮುಖವನ್ನು ತಿರುಗಿಸಿಕೊಳ್ಳಬಾರದು. ಬದಲಾಗಿ ಅವರು ಒಳ್ಳೇದನ್ನು ಮಾಡುವವರಾಗಿ ಇದೇ ರೀತಿಯ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದವರಾಗಿರಬೇಕು. ಕರ್ತನ ಜನರು ಹೀಗೆ ಇತರರಂತೆ ಹಣವನ್ನು ಕೂಡಿಟ್ಟುಕೊಳ್ಳುವವರಾಗ ರಬಾರದು. ಆದರೆ ಪರಲೋಕದಲ್ಲಿರುವ ತಮ್ಮ ತಂದೆಯನ್ನು ಮೆಚ್ಚಿಸುವವರೂ ಘನಪಡಿಸುವವರೂ ಆಗಿದ್ದು ಪರಲೋಕದಲ್ಲಿ ಸಂಪತ್ತನ್ನು ಕೂಡಿಡುವವರಾಗಿ ದೇವರು ಆ ರಾಜ್ಯದಲ್ಲಿ ಮಾನ್ಯ ಮಾಡಿ ಆಶೀರ್ವದಿಸುವಂಥಾ ಮನೋಸ್ಥಿತಿಯನ್ನು ತಮ್ಮ ಹೃದಯಗಳಲ್ಲಿ ಪಡೆದುಕೊಂಡಿರುವವರಾಗಿರಬೇಕು.

## "ನಿಮ್ಮನ್ನು ಶಪಿಸುವವರಿಗೆ ಆಶೀರ್ವಾದ ಮಾಡಿರಿ"

ನೆರೆಯವರು ಪ್ರೀತಿಸಲ್ಪಟ್ಟು ವೈರಿಗಳು ಹಗೆಮಾಡಲ್ಪಡಬೇಕೆಂದು ಸಂಪ್ರದಾಯವು ಬೋಧಿಸಿತ್ತು; ಆದರೆ ವೈರಿಗಳು ಹಿಂಸಿಸಿ ಹಾನಿಯುಂಟು ಮಾಡಿದರೂ ಸಹ ಅವರು ಪ್ರೀತಿಸಲ್ಪಟ್ಟು ಆಶೀರ್ವಧಿಸಲ್ಪಡಬೇಕೆಂದು ಈ ಶ್ರೇಷ್ಠ ಬೋಧಕನು ಹೇಳಿದನು. ಈ ಹೊಸ ಹಾಗೂ ಉನ್ನತ ಮಟ್ಟದ ಬೋಧನೆಯೇ ನಮ್ಮ ವಿಮೋಚಕನ ನುಡಿಗಳು ಇತರ ಎಲ್ಲರವುಗಳಿಗಿಂತಲೂ ಭಿನ್ನವಾದುದೆಂದು ಗುರುತಿಸಲಾಗಿತ್ತು.

ಸ್ನೇಹಿತರ ಸಹಿತವಾಗಿ ವೈರಿಗಳನ್ನೂ ಪ್ರೀತಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದು ಯೇಸುವಿನ ಹಿಂಬಾಲಕರನ್ನು ದೇವರ ಮಕ್ಕಳೆಂದೂ ಪರಲೋಕದಲ್ಲಿರುವ ತಂದೆಯ ಆತ್ಮವನ್ನು ಅಂದರೆ ಮನೋಭಾವನ್ನು ಹೊಂದಿದ–ವರೆಂದು ಗುರುತಿಸುತ್ತದೆ. ಆತನು ಪಾಪಿಗಳ ಮೇಲೆಯೂ ಭಕ್ತರ ಮೇಲೆಯೂ ಸೂರ್ಯನು ಮೂಡುವಂತೆ ಮಾಡುತ್ತಾನೆ. ಮತ್ತು ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಯು ಸುರಿಸಲ್ಪಡುವುದು. ಆಯಲ್ಪಟ್ಟವರನ್ನು ಉಳಿದು ತನ್ನ ವಿರೋಧಿಗಳನ್ನು ಅಂದರೆ ಎಲ್ಲರನ್ನೂ ನಿತ್ಯಯಾತನೆಗೆ ಗುರಿಮಾಡುವ ವಿಷಯವಾದ "ಅಂಧಕಾರ ಯುಗದ" (ಡಾರ್ಕ್ ಏಜಸ್) ಸಂಪ್ರದಾಯಗಳು ನಮ್ಮ ಮನಸ್ಸುಗಳನ್ನು ಹಾನಿ ಮಾಡಿರುವುದರ ಪರಿಮಾಣವನ್ನು ಅಂದಾಜು ಮಾಡುವುದು ಕಷ್ಟಕರವಾದುದು. ಈ ವಿಧವಾದ ಬೋಧನೆಗಳು ಈ ಗ್ರಂಥದಿಂದ (ಸತ್ಯವೇದದಿಂದ) ಬಂದದ್ದಲ್ಲವೆಂಬುದನ್ನು ನಾವು ಕಂಡು–ಕೊಂಡಿರುವುದಕ್ಕಾಗಿ ದೇವರಿಗೆ ಸ್ತೋತ್ರವಾಗಲಿ. ಇವುಗಳು ನಮ್ಮ ಪೂರ್ವಜರುಗಳನ್ನು ಪಾಶಾಂಡಿಗಳನ್ನು ಸುಟ್ಟು ಹಾಕುವವರನ್ನಾಗಿ ಮಾಡಿತು.

ಎಲ್ಲರಿಂದಲೂ ಅಂಗೀಕೃತವಾಗಿರುವಂತೆ ಪ್ರೀತಿಯು ಒಂದು ಭವ್ಯವಾದ ಗುಣ ಮತ್ತು ದೇವರ ಹೋಲಿಕೆಯಲ್ಲಿರುವ ಗುಣ. ಆದರೆ ಪ್ರೀತಿಯನ್ನು ಪ್ರತಿಯಾಗಿ ತೋರಿಸುವವರಿಗೆ ಮಾತ್ರ ಅದನ್ನು ಅನ್ವಯಮಾಡುವುದಾದರೆ ಅದು ಯಾವುದೇ ವಿಶೇಷ ಪುರಸ್ಕಾರಕ್ಕೆ ಹೇಗೆ ಪಾತ್ರವಾದೀತು? ಲೋಕದವರು, ಹೌದು ಎಲ್ಲರೂ ಈ ವಿಧವಾಗಿ ಪ್ರೀತಿ ತೋರಿಸುವವರಲ್ಲವೇ? ನಮಗೆ ದಯೆ ತೋರಿಸುವವರಿಗೆ ಮಾತ್ರ ನಾವು ದಯೆ ತೋರಿಸಿದರೆ ನಾವು ಅನ್ಯಜನರೂ ಪಾಪಿಗಳು ಇವರಿಗಿಂತ ಎಲ್ಲಿ ಶ್ರೇಷ್ಠರಾಗಿರುವೆವು?

ಯೇಸುವಿನ ಹಿಂಬಾಲಕರಾಗಿ ಆತನ ಅನುಭವ ಶಾಲೆಯಲ್ಲಿ ಕಲಿಯುತ್ತಿರುವವರು ಪ್ರೀತಿಸ್ವರೂಪನಾದ ತಮ್ಮ ಸೃಷ್ಟಿಕರ್ತನ ಉತ್ಕೃಷ್ಟ ಮಟ್ಟದ ಗುಣದ ಹಿರಿಮೆಯನ್ನು ತಮ್ಮ ಮಾದರಿಯನ್ನಾಗಿ ಮಾಡಿಕೊಳ್ಳಬೇಕು. ಆತನಲ್ಲಿರುವಂಥ ಪರಿಪೂರ್ಣತೆಯನ್ನು ಹೊಂದಲು ಅವರು ಪ್ರಯಾಸಪಡಬೇಕು. ಮತ್ತು ಅವರು ತಮಗೆ ಸಾಧ್ಯವಾಗುವಷ್ಟು ಮಟ್ಟಿಗೆ ತಮ್ಮ (ಪರಿಪೂರ್ಣತೆಯಿಂದ) ಬಿದ್ದುಹೋದ ದೇಹದ ಪ್ರತಿಯೊಂದು ನಡೆ ನುಡಿ ಆಲೋಚನೆಗಳಲ್ಲಿ ಅದನ್ನು ಕಾರ್ಯರೂಪಕ್ಕೆ ತರುವವರಾಬೇಕು.

*****

# ಪ್ರಾರ್ಥನೆ ಒಂದು ವಿಶೇಷ ಸೌಭಾಗ್ಯ

**ರೀಪ್ರಿಂಟ್ಸ್ ಪುಟ 5021**

## ಮತ್ತಾಯ 6:1–18

**ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ; ಹಾಗೆ ಮಾಡಿದರೆ ಪರಲೋಕದಲ್ಲಿರುವ ನಿಮ್ಮ ತಂದೆಯ ಹತ್ತರ ನಿಮಗೆ ಫಲದೊರೆಯದು – ಮತ್ತಾಯ 6:1**

ಇಂದಿನ ಪಾಠದಲ್ಲಿ ಒಡೆಯನು ಧರ್ಮ ಕೊಡುವುದರ ಸೂಕ್ತವಾದ ಮತ್ತು ಸೂಕ್ತವಲ್ಲದ ವಿಧಾನಗಳ ವಿಷಯವಾಗಿ ಹೇಳಿರುವನು. ಆತನು ವಿಷಯವನ್ನು ಮುಂದುವರೆಸಿ ಸೂಕ್ತವಾದ ಮತ್ತು ಸೂಕ್ತವಲ್ಲದ ಪ್ರಾರ್ಥನೆಗಳ ವಿಷಯವಾಗಿ ವಿವರಿಸಿ ಹೇಳಿ, ಕಡೆಯಲ್ಲಿ ಸೂಕ್ತವಾದ ಮತ್ತು ಸೂಕ್ತವಲ್ಲದ ಉಪವಾಸಗಳ ಬಗ್ಗೆಯೂ ಹೇಳಿರುವನು. ಇವೆಲ್ಲವುಗಳಲ್ಲಿ ಆತನು ಕಪಟ, ನಾಟಕೀಯತೆಗಳನ್ನು ಬಹಿರಂಗವಾಗಿ ಖಂಡಿಸಿದ್ದಾನೆ. ಆತನ ಹಿಂಬಾಲಕರು ಪರಲೋಕದಲ್ಲಿರುವ ತಂದೆಯನ್ನು ಮೆಚ್ಚಿಸುವ ಹಾಗು ಆತನ ಮನ್ನಣೆಯನ್ನು ಪಡೆಯುವುದರಲ್ಲಿ ಏಕಮಾತ್ರ ಕಾರ್ಯಪ್ರವೃತ್ತರಾಗಿರಬೇಕು. ಕೆಲವು ಸಮಯಗಳು ಮತ್ತು ಸ್ಥಳಗಳು ಇರಬಹುದು ಅದರಲ್ಲಿ ಇತರರ ಮುಂದೆ ಧರ್ಮ ಕೊಡುವುದು ಪೂರ್ಣವಾಗಿ ಸಮಂಜಸವಾಗಿರುವುದು. ಇಲ್ಲವೇ ಇತರರ ಎದುರಿನಲ್ಲಿ ಪ್ರಾರ್ಥಿಸುವುದು ಸಂಪೂರ್ಣವಾಗಿ ಸರಿಯಾದುದಾಗಿರುವುದು. ಮತ್ತು ಇತರರ ಗಮನಕ್ಕೆ ಬಂದು ನಿಂದೆಗೊಳಗಾಗದಂತೆ ಉಪವಾಸ ಮಾಡುವುದು ಯುಕ್ತವಾಗಿರುವುದು.

ಶ್ರೇಷ್ಠ ಬೋಧಕನು ನಿರೂಪಿಸಿ ಹೇಳಿರುವ ಸಂಗತಿಯೆಂದರೆ ನಾವು ಕಾರ್ಯಪ್ರವೃತ್ತರಾಗಲು ಹಿಂದಿರುವ ಉದ್ದೇಶಗಳು. ನಾವೇನಾದರೂ ಸ್ವಾರ್ಥದ ಉದ್ದೇಶದಿಂದ ಕಾರ್ಯಪ್ರವೃತ್ತ ರಾಗಿದ್ದಲ್ಲಿ, ನಾವೇನಾದರೂ ತೋರಿಕೆ ಮತ್ತು ಹೊಗಳಿಕೆಗಳು ಇಲ್ಲವೇ ಲೌಕೀಕ ಗಳಿಕೆಗಗಳನ್ನು ಬಯಸುತ್ತಿರುವಲ್ಲಿ ಈ ಕಾರ್ಯ ವಿಧಾನವು ದೇವರಿಂದ ಮನ್ನಣೆಯನ್ನಾಗಲೀ ಅಥವಾ ಆಶೀರ್ವಾದವನ್ನಾಗಲಿ ತರಲು ಸಾಧ್ಯವಾಗದು – "ನಿರ್ಮಲಚಿತ್ತರು (ಹೃದಯವುಳ್ಳವರು) ಧನ್ಯರು." ನಾವು ಮಾಡುವ ಸತ್ಕಾರ್ಯ ಇಲ್ಲವೇ ಪ್ರಾರ್ಥನೆ ಅಥವಾ ಉಪವಾಸವು ಜನರಿಂದ ಕಾಣುವಂತಾಗಬಹುದು ಆದರೆ ನಾವು ಮಾಡುವ ಧರ್ಮಕಾರ್ಯಗಳು ನಮ್ಮ ಪ್ರಾರ್ಥನೆಗಳು ಮತ್ತು ಉಪವಾಸ–ಗಳು ಜನರು ನೋಡುವುದಕ್ಕಾಗಿರಬಾರದು. ಇಂಥವರ ವಿಷಯವಾಗಿ ಕರ್ತನು ಹೇಳಿರುವುದು, "ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಹೇಳುತ್ತೇನೆ." ಇದಕ್ಕಿಂತಲೂ ಹೆಚ್ಚಿನದು ಅವರಿಗೆ ದೊರೆಯಲಾರದು; ತಾವು ಬಯಸಿದ್ದ ಪ್ರಚಾರವನ್ನು ಅವರು ಹೊಂದಿರುವರು.

## ಪ್ರಾರ್ಥನೆಯ ಸೌಭಾಗ್ಯ

ಪ್ರಾರ್ಥನೆಯು ಒಂದು ಸೌಭಾಗ್ಯ. ಯೇಸುವು ತನ್ನ ಶಿಷ್ಯರಿಗೆ ಪ್ರಾರ್ಥನೆ ಮಾಡಲು ಅಪ್ಪಣೆಮಾಡಲಿಲ್ಲ ಇಲ್ಲವೇ ಅವರು ಕೇಳಿಕೊಳ್ಳುವವರೆಗೂ ಅವರಿಗೆ ಒಂದು ಪ್ರಾರ್ಥಿಸುವ ವಿಧಾನ–ವನ್ನೂ ಸಹ ನೀಡಿರಲಿಲ್ಲ. "ಪ್ರಾರ್ಥನೆಯು ಉಚ್ಚರಿಸಿದ ಇಲ್ಲವೆ ಉಚ್ಚಾರ ಮಾಡದ ಹೃದಯದ ಪ್ರಾಮಾಣಿಕವಾದ ಬಯಕೆ –ಯಾಗಿರುವುದು." ಕರ್ತನ ಜನರು ಪರಲೋಕದ ಕೃಪಾಸನದ ಬಳಿಗೆ ಬರುವ ಸೌಭಾಗ್ಯವನ್ನು ಮನವರಿಕೆ ಮಾಡಿಕೊಳ್ಳುವ ಮೊದಲು ತಮಗೆ ದೇವರ ಕೃಪಾಸಹಾಯವು ಅವಶ್ಯವಿರು–ವುದೆಂದು ಅವರಿಗೆ ಅನ್ನಿಸಬೇಕು. ಜೀವನದಲ್ಲಿ ಬರುವ ಕಷ್ಟ ಪರಿಶೋಧನೆಗಳು, ದುಃಖ ಶೋಧನೆಗಳು ದೇವರ ಮಕ್ಕಳನ್ನು ಪ್ರಾರ್ಥನೆ ಮಾಡಲು ಒತ್ತಾಯಿಸುತ್ತವೆ. ಅವರು ದೇವರ ಕೃಪಾಸನದ ಬಳಿಗೆ ತಮ್ಮ ದುಃಖದ ಸಮಯದಲ್ಲಿ ಬರುವುದು ಮಾತ್ರವಲ್ಲದೆ ತಮ್ಮ ಸಂತೋಷದ ಸಮಯದಲ್ಲೂ ಕೃತಜ್ಞತೆಯನ್ನರ್ಪಿಸಿ ಕೊಂಡಾಡಿ ಆರಾಧಿಸಿ ಗೌರವಿಸಲು ಆಶಿಸುವುದು ಅವರಲ್ಲಿರುವ ಉತ್ತಮವಾದ, ಉನ್ನತವಾದ ಒಂದು ಕ್ರಿಸ್ತೀಯ ಬೆಳವಣಿಗೆಗೆ ಗುರುತಾಗಿರುವುದು.

ಲೋಕವು ಹೇಗೆ ಪ್ರಾರ್ಥಿಸಬೇಕೆಂದು ನಮ್ಮ ಕರ್ತನು ಹೇಳಿರಲಿಲ್ಲ ಆದರೆ ಕೇವಲ ತನ್ನ ಶಿಷ್ಯರಿಗೆ "ನೀವು ಪ್ರಾರ್ಥನೆ ಮಾಡುವಾಗ (ಹೀಗೆ ಮಾಡತಕ್ಕದ್ದು)" ಎಂದು ಉಪದೇಶಿಸಿದ್ದನು. ವಾಸ್ತವದಲ್ಲಿ ಅನ್ಯಜನಗಳು, ಅಂದರೆ ಸಾಧಾರಣವಾಗಿ ಲೋಕದಲ್ಲಿರುವ ಮಾನವರೆಲ್ಲರೂ, ಕೃಪಾಸನದ ಬಳಿಗೆ ಪ್ರವೇಶಿಸುವ ಅಧಿಕಾರ ಹೊಂದಿರುವುದಿಲ್ಲ. ಕೇವಲ ದೇವರೊಡನೆ ಒಡಂಬಡಿಕೆಯ ಸಂಬಂಧದಲ್ಲಿ ಬಂದವರು (ಯೆಹೂದ್ಯರು ಹಾಗೂ ಕ್ರೈಸ್ತರು) ತಮ್ಮ ವಿಜ್ಞಾಪನೆಗಳು ಆತನಿಂದ ಅಂಗೀಕಾರವಾಗುವುದೆಂದು ದೇವರಿಂದ ಭರವಸವನ್ನು ಯಾವಾಗಲೂ ಹೊಂದಿರುವರು. ಇದು ಕೆಲವರಿಗೆ ಆಶ್ಚರ್ಯವನ್ನುಂಟು ಮಾಡಬಹುದು, ಅದೇನೆಂದರೆ ಪ್ರತಿಯೊಬ್ಬನನ್ನೂ ಪ್ರಾರ್ಥಿಸುವುದಕ್ಕೆ ಪ್ರೋತ್ಸಾಹಿಸುವ ಮತ್ತು ಬುದ್ಧಿಹೇಳಿ ಒತ್ತಾಯಿಸುವ ಪದ್ಧತಿಯು ಸರ್ವೇಸಾಮಾನ್ಯ. ಹೀಗಿರಲಾಗಿ ಈ ಪರಿಸ್ಥಿತಿಯ ಕಡೆಗೆ ಶೀಘ್ರವಾಗಿ ದೃಷ್ಟಿಹಾಯಿಸಿದಾಗ ಈ ಸಂಗತಿಯ ಹಿಂದೆ ಇರುವ ಒಂದು ನಿಗದಿತವಾದ ತತ್ವವು ಕಾಣಬರುತ್ತದೆ. ಅದನ್ನು ಗಮನಿಸೋಣ. ಆದಾಮನ ಸಂತತಿ–ಯಾದ ಲೋಕದ ಜನರು ಸಾಧಾರಣವಾಗಿ ದುಷ್ಟಕಾರ್ಯಗಳ ಮೂಲಕವಾಗಿ ದೇವರಿಂದ ದೂರ ಮಾಡಲ್ಪಟ್ಟವರಾಗಿದ್ದಾರೆ. ಆದಾಮನು ದೇವರೊಡನೆ ಮಾಡಿಕೊಂಡ ಒಂದು ಒಡಂಬಡಿಕೆಯಲ್ಲಿದ್ದನು; ಅದರ ಅನುಸಾರ ಅವನು ದೇವರ ಮಗನಾಗಿರುವ ಸವಲತ್ತುಗಳನ್ನು ಅನುಭವಿಸುವಂತಾಗಿತ್ತು. ಇದರಲ್ಲಿ ಅನ್ಯೋನ್ಯತೆ ಪಾಲುಗಾರಿಕೆ ಪ್ರಾರ್ಥನೆ ನಿತ್ಯಜೀವ ಹೊಂದುವವಷ್ಟರ ಮಟ್ಟಿನ ದೈವಿಕ ಮೇಲ್ವಿಚಾರಣೆ ಮತ್ತು

ಪರಿಪಾಲನೆಗಳು ಒಳಗೊಂಡಿದ್ದವು. ಆದರೆ ಆದಾಮನ ಅವಿಧೇಯತೆಯು ಆ ಒಡಂಬಡಿಕೆಯನ್ನು ಭಂಗಪಡಿಸಿ ಅದರಲ್ಲಿನ ಸಂಬಂಧ ಸವಲತ್ತುಗಳನ್ನು ರದ್ದುಗೊಳಿಸಿತ್ತು. (ಹೋಶೇಯ 6:7 ರಿವೈಸ್ಡ್ ವರ್ಶನ್) ಪ್ರಾರ್ಥನೆಯ ಸೌಭಾಗ್ಯವನ್ನು ಈಗ ಪಡೆದಿರುವವರು ಯಾರೆಂದರೆ ಅವರು ಕೇವಲ ದೇವರೊಡನೆ ಒಡಂಬಡಿಕೆಯ ಸಂಬಂಧಕ್ಕೆ ಮತ್ತೆ ಅಂಗೀಕರಿಸಲ್ಪಟ್ಟವರು ಮಾತ್ರ. ಶಾರೀರಿಕ ಸಂಬಂಧದಲ್ಲಿ ಬಂದ ಇಸ್ರಾಯೇಲ್ಯರು ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯ ಮೂಲಕ ಹೀಗೆಯೇ ಅಂಗೀಕರಿಸಲ್ಪಟ್ಟಿದ್ದರು; ಹೀಗಾಗಿ ಯೆರೂಸಲೇಮಿನಲ್ಲಿರುವ ದೇವಾಲಯವು ಪ್ರಾರ್ಥನಾಲಯ–ವೆಂದು ಕರೆಯಲಾಗಿತ್ತು. ಅದು ವಿಶೇಷವಾಗಿ ಯೆಹೂದ್ಯ ಜನಾಂಗದವರಿಗೋಸ್ಕರವಾಗಿತ್ತು. ಆದರೆ ಎಲ್ಲಾ ಜನಾಂಗದವರೂ ಯೆಹೂದ್ಯ ಮತಾವಲಂಬಿಗಳಾಗುವ ಸೌಭಾಗ್ಯವನ್ನು ಪಡೆದವರಾಗಿದ್ದರು ಮತ್ತು ಹೀಗೆ ಅವರು ಯೆಹೂದ್ಯರಿಗಿರುವ ಎಲ್ಲಾ ಸವಲತ್ತುಗಳನ್ನು ಹೊಂದಿದ್ದರು ಹಾಗೂ ಅದರಲ್ಲಿ ಪ್ರಾರ್ಥಿಸುವ ಸೌಭಾಗ್ಯವೂ ಸೇರಿತ್ತು.

ಪಾಪಗಳ ನಿವಾರಣೆಗೋಸ್ಕರವಾಗಿರುವ ತನ್ನ ಉತ್ತಮವಾದ ಯಜ್ಞದ ಆಧಾರದ ಮೇಲೆ ನಮ್ಮ ಕರ್ತನು ತನ್ನ ಶಿಷ್ಯರಾಗುವವರನ್ನು ಅಂದರೆ ತನ್ನ ಹೆಜ್ಜೆಯ ಜಾಡನ್ನು ಅನುಸರಿಸುವವರನ್ನು ಇನ್ನೂ ಉನ್ನತವಾದ ಸೌಭಾಗ್ಯಗಳಿಗೆ ಮೀಸಲಾಗಿ ಅಂಗಿಕಾರವಾಗುವ ಹಾಗೆ ಮಾಡಿದನು. ಪಂಚಾಶತ್ತಮ ದಿನದ ತರುವಾಯ ಇವರು ದೇವರ ಮಕ್ಕಳು ಎಂದು ಕರೆಯಲ್ಪಟ್ಟು ಪವಿತ್ರಾತ್ಮನಿಂದ ಹುಟ್ಟುವ ಅನುಭವವನ್ನು ಪಡೆದರು. ಮೊದಲನೆಯದಾಗಿ ನಂಬಿದವರಾದ ಯೆಹೂದ್ಯರಿದ್ದರು ಆದರೆ ನಿಗದಿತ ಕಾಲದಲ್ಲಿ ಯೆಹೂದ್ಯರು ಮತ್ತು ಅನ್ಯಜನರ ನಡುವೆ ಇದ್ದ ಅಡ್ಡಗೋಡೆಯು ಕೆಡವಲ್ಪಟ್ಟಿತು, ಮತ್ತು ಕೊರ್ನೇಲ್ಯನ ಕಾಲದ ನಂತರ ನಂಬಿದವರಾದ ಅನ್ಯಜನರೆಲ್ಲರೂ ಪವಿತ್ರಾತ್ಮನಿಂದ ಹುಟ್ಟಿದ (ಅಂಕುರಿಸಲ್ಪಟ್ಟ) ಮಕ್ಕಳಾಗಿ ಅಂಗಿಕರಿಸಲ್ಪಟ್ಟು ಅವರಿಗೆ ಪ್ರಾರ್ಥನೆಯ ಸೌಭಾಗ್ಯವು ಅನುಗ್ರಹಿಸೋಣವಾಯಿತು. – ಅ. ಕೃ. 10

ಈ ಅನ್ಯಜನರು ಮೋಶೆಯ ಧರ್ಮಶಾಸ್ತ್ರದ ಒಡಂಬಡಿಕೆಯ ಮೂಲಕ ದೇವರೊಡನೆ ಸಂಬಂಧಕ್ಕೆ ಬಂದವರಲ್ಲ, ಅದರೆ ಯಜ್ಞದೊಡನೆ ಮಾಡಿಕೊಂಡ ಒಡಂಬಡಿಕೆಯ ಮೂಲಕವಾಗಿ ಬಂದವರು. ಈ ಮೂಲಕವಾಗಿ ಅವರು ಕರೆಯಲ್ಪಟ್ಟು ಕ್ರಿಸ್ತನೊಡನೆ ಯಜ್ಞಮಾಡಿಕೊಳ್ಳುವವರಾಗಿ ಅಂಗೀಕಾರವಾದರು: "ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸುತ್ತಾನೆ." (ಕೀರ್ತನೆ 50:5) ಕ್ರಿಸ್ತನನ್ನು ಅಂಗೀಕರಿಸಿದ ಇಂಥಾ ಅನ್ಯಜನರೇ ಈ ಕಾಲದಲ್ಲಿ ಆತನೊಡನೆ (ದೇವರೊಡನೆ) ಯಜ್ಞದ ಮೂಲಕವಾದ ಒಡಂಬಡಿಕೆಯಲ್ಲಿ ಸೇರಿ ದೇವರ ಮಕ್ಕಳಾಗಿ, ಮಕ್ಕಳಿಗಿರುವ ಸೌಭಾಗ್ಯಗಳನ್ನು ಪಡೆಯುವವರು; ಅವುಗಳಲ್ಲಿ ಪ್ರಾರ್ಥಿಸುವುದೂ ಒಂದು. ದೇವರೊಡನೆ ಒಡಂಬಡಿಕೆಯ ಸಂಬಂಧವಿಲ್ಲದ ಜನರನ್ನು ಪ್ರಾರ್ಥಿಸುವುದಕ್ಕೆ ಕರೆಯುವುದು ಸತ್ಯವೇದ ಬಾಹಿರವಾದದ್ದು ಹಾಗು ಅನುಚಿತವಾದದ್ದು. ದೇವರು ಪಾಪಿಗಳ ಪ್ರಾರ್ಥನೆಯನ್ನು ಕೇಳುವುದಿಲ್ಲ (ಯೋಹಾನ 9:31) ಕ್ರಿಸ್ತನ ಮೂಲಕ ಆತನ ಬಳಿಗೆ ಬರುವವರು ಅಂಗೀಕರಿಸಲ್ಪಡುವುದು ಕೇವಲ ಯೇಸುವು ಅವರಿಗೆ (ತಂದೆಯ ಬಳಿಯಲ್ಲಿ) ಸಹಾಯಕನಾಗಿರುವ ದೆಸೆಯಿಂದ. ಹೀಗಿರುವಲ್ಲಿ ದೇವರ ಸಮೀಪಕ್ಕೆ ಬಂದು ಆ ಸಹಾಯಕನನ್ನು ಮತ್ತು ಆತನ ಶಿಷ್ಯರಾಗಲು ಬೇಕಿರುವ ಷರತ್ತುಗಳನ್ನು ಅಂಗೀಕರಿಸದೆ ತಮ್ಮ ಹೆಸರಿನಲ್ಲಿ ಬರುವವರಿಗೆ ತಂದೆಯ ಬಳಿಯಲ್ಲಿ ಅವರಿಗೆ ಯಾವ ಸ್ಥಾನವೂ ಸಾಧ್ಯವಿರದು ಮತ್ತು ಅವರ ಪ್ರಾರ್ಥನೆಯೂ ಅಂಗೀಕೃತವಾಗಲಾರದು.

ನಮ್ಮ ಮಿತ್ರರು ಹಾಗು ನೆರೆಯವರನ್ನು ದೇವರಿಗೆ ಪ್ರಾರ್ಥನೆ ಮಾಡುವುದಕ್ಕೆ ಪ್ರೋತ್ಸಾಹಿಸುವ ಬದಲು ನಾವು ಸತ್ಯವೇದದ ಉಪದೇಶಗಳನ್ನು ಅವರಿಗೆ ನೀಡಿ ಅವರು ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ನಂಬಿಕೆಯ ಮೂಲಕ ದೇವರ ವಾಕ್ಯದಲ್ಲಿರುವ ಕಟ್ಟಳೆಪ್ರಮಾಣಗಳ ಅನುಸಾರವಾಗಿ ತಮ್ಮ ಪಾಪಗಳಿಗಿರುವ ಕ್ಷಮೆಯನ್ನು ಅಂಗೀಕರಿಸಿ ಯೇಸುವಿನ ಹೆಜ್ಜೆಜಾಡನ್ನು ಹಿಂಬಾಲಿಸುವ ಶಿಷ್ಯರಾಗಲು ತಮ್ಮನ್ನು ಪೂರ್ಣವಾಗಿ ಪ್ರತಿಷ್ಠೆಮಾಡಿಕೊಳ್ಳುವಂತೆ ಮಾಡಬೇಕು. ಆಗ ಅವರು ಈ ಕಾಲದಲ್ಲಿ ಮಕ್ಕಳು ಪಡೆಯುವ ಸೌಭಾಗ್ಯಗಳನ್ನು ಪಡೆದು ಈ ಕಾಲದ ನಂತರದಲ್ಲಿನ ಪ್ರಭಾವಮಹಿಮೆ ಪಡೆಯುವ ನಿರೀಕ್ಷೆಯನ್ನು ಹೊಂದುವರು.

## ಅನ್ಯಜಾತಿಯವರು ಮಾಡುವ ವ್ಯರ್ಥವಾದ ಪುನರಾವರ್ತನಾ ವಿಜ್ಞಾಪನೆಗಳು

ಅನ್ಯಜಾತಿಯವರೆಲ್ಲರೂ ಅಥವಾ ಅನ್ಯಜನರೆಲ್ಲರೂ ಅಂದರೆ ಲೋಕದಲ್ಲಿರುವವರೆಲ್ಲರೂ ಪ್ರಪಂಚವನ್ನು ತೊರೆದು ಕ್ರಿಸ್ತನ ಮೂಲಕ ದೇವರೊಡನೆ ಒಡಂಬಡಿಕೆಯ ಸಂಬಂಧಕ್ಕೆ ಬಂದಿರುವುದಿಲ್ಲ. ಇಂಥಾ ಹೊರಗಿನವರು ತಮಗೆ ಇರುವ ಒಂದೇ ಮಾರ್ಗವನ್ನು ಅಂದರೆ ದೇವಾನುಗ್ರಹಕ್ಕೆ ಸೇರಲು ಇರುವ ಒಂದೇ ಬಾಗಿಲಿನ ವಿಷಯವಾಗಿ ಅರ್ಥಮಾಡಿಕೊಳ್ಳದೆ ತಾವು ಅಧಿಕವಾಗಿ ಹೇಳುವದರಿಂದ ಕೇಳಲ್ಪಡುವೆವೆಂದೂ, ಅದುದರಿಂದ ಪ್ರಾರ್ಥನೆ ಯಲ್ಲಿ ಪದೇಪದೇ ಹೇಳುವುದಾಗಿ ವ್ಯರ್ಥ ಕಲ್ಪನೆಮಾಡಿ– ಕೊಳ್ಳುತ್ತಾರೆ. ಕೆಲವರು ಪ್ರಾರ್ಥನಾ ಚಕ್ರಗಳನ್ನು ಬಳಸುವರು; ಇತರರು ಮಣಿಗಳನ್ನು ಬಳಸುವರು ಮತ್ತು ಇನ್ನೂ ಇತರರು ಕೆಲವು ಉದ್ಗಾರಗಳನ್ನು ನೂರಾರು ಬಾರಿ ಪುನರಾವರ್ತನೆ ಮಾಡುವರು.

ಯೇಸುವಿನ ಹಿಂಬಾಲಕರ ಹೊರತಾಗಿ ಯಾರ ಪ್ರಾರ್ಥನೆಯೂ ಕೇಳಲ್ಪಡುವುದಿಲ್ಲ; ಮತ್ತು ಯೇಸು ಇವರಿಗೆ ದೀರ್ಘವಾದ ಪ್ರಾರ್ಥನೆಯು ತಂದೆಯಿಂದ ಅಂಗೀಕಾರ ವಾಗಬಲ್ಲದೆಂದು ನೆನಸಬೇಡಿರೆಂದು ಪ್ರಬೋಧಿಸಿ ಹೇಳಿರುವನು. ಸುದೀರ್ಘವಾದ ಪ್ರಾರ್ಥನೆಯನ್ನು ಮಾಡುವ ಅಗತ್ಯವಿಲ್ಲ;

ಏಕೆಂದರೆ ಯೇಸುವು ಹೇಳಿರುವಂತೆ, "ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವುದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬದು ಆತನಿಗೆ ತಿಳಿದದೆ." ಹೀಗಿದ್ದರೆ ನಾವು ಏಕೆತಾನೆ ಕೇಳಿಕೊಳ್ಳಬೇಕು? ಏಕೆಂದರೆ ಇದು ದೈವಿಕ ಏರ್ಪಾಡು ಮತ್ತು ಇದು ಸ್ಪಷ್ಟವಾಗಿ ನಮ್ಮ ನಂಬಿಕೆಯನ್ನು ಉತ್ತೇಜಿಸಬೇಕೆಂಬ ಉದ್ದೇಶಕ್ಕಾಗಿ. ಮತ್ತು ಇದು ನಮಗೆ ಉತ್ತಮವಾದ ಹಾಗು ಪದೇ ಪದೇ ಹೆಚ್ಚಿನ ಆಶೀರ್ವಾದವನ್ನು ನೀಡುವ ಸಲುವಾಗಿರುವುದು. ದೇವರು ಹೀಗೆ ತಾನು ಪ್ರೀತಿಸುವ ಮತ್ತು ಅಧಿಕವಾಗಿ ಪ್ರಯೋಜನವಾಗುವ ಅಭ್ಯಾಸಗಳ ವಿಷಯವಾಗಿ ತಿಳುವಳಿಕೆ ಹೇಳುವ ತನ್ನ ಪ್ರಿಯರಾದ ಮಕ್ಕಳೊಡನೆ ನಡಕೊಳ್ಳುವಂತೆ ನಮ್ಮೊಡನೆ ನಡಕೊಳ್ಳುವನು. ಯೇಸುವು ಸುಧೀರ್ಘವಾದ ಪ್ರಾರ್ಥನೆಗಳನ್ನು ಅರ್ಪಿಸಬೇಕೆಂದಿದ್ದಾಗ ಅವುಗಳನ್ನು ಎಲ್ಲರೂ ನೋಡುವಂತೆ ಮಾಡುತ್ತಿರಲಿಲ್ಲ; ಅವನು ಏಕಾಂತವಾಗಿ ಬೆಟ್ಟವನ್ನೇರಿ ಹೋಗುತ್ತಿದ್ದನು. ಆತನ ಹಿಂಬಾಲಕರ ವಿಷಯ ವಾಗಿಯೂ ಹೀಗೆಯೇ; ಅವರು ಬೇರೆ ಹೋಗಿ ತಂದೆಯ ಅನ್ಯೋನ್ಯತೆಗೆ ಮುಖ್ಯವಾಗಿ ಏಕಾಂತದಲ್ಲಿ ಸೇರಬೇಕು. ಹೀಗಿದ್ದರೂ ಕರ್ತನ ಜನರು ಕೂಡಿಬಂದಿರುವಾಗ ಪ್ರಾರ್ಥನೆ ಯಲ್ಲಿ ಬಹಿರಂಗವಾಗಿ ಪಾಲುಗೊಳ್ಳುವುದು ವಿಶೇಷವಾಗಿ ಮಾನ್ಯಮಾಡಲಾಗಿದೆ.

## ಸ್ವಸ್ಥವಾಕ್ಯಗಳ ಒಂದು ಸ್ವರೂಪ

ತನ್ನ ಶಿಷ್ಯರ ಕೋರಿಕೆಗೆ ಸ್ಪಂದಿಸುವವನಾಗಿ ಯೇಸುವು ಸೂಕ್ತವಾದ ಪ್ರಾರ್ಥನೆಗೆ ಒಂದು ಮಾದರಿಯನ್ನು ನೀಡಿದನು. ನಾವು ಅದರ ಸಂಕ್ಷಿಪ್ತತೆ ಸರಳತೆ ವಿಷಯಸ್ಪಷ್ಟತೆ ಮತ್ತು ಕ್ರಮಬದ್ಧತೆಗಳನ್ನು ಗಮನಿಸುವವರಾಗಿದ್ದೇವೆ.

(1) ಅದು ಒಂದು ಸ್ತುತಿಗೆ ಸಂಬಂಧಿಸಿದಾಗಿಯೂ ಮತ್ತು ನಾವು ಒಬ್ಬ ತಂದೆಯ ಬಳಿಗೆ ಬರುವ ಮಕ್ಕಳಂತ್ತಿದ್ದೇವೆಂಬ ಕೋರಿಕೆಯಿಂದ ಆರಂಭಗೊಳ್ಳುತ್ತದೆ: "ಪರಲೋಕದಲ್ಲಿರುವ ನಮ್ಮ ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ (ಪರಿಶುದ್ಧತೆಯಿಂದ ಭೂಷಿತವಾಗಿ ಗೌರವಿಸಲ್ಪಡಲಿ). ದೇವರ ಹೆಸರೆಂಬುದು ಆತನ ಗುಣಲಕ್ಷಣ, ಆತನ ರಾಜ್ಯ, ಆತನ ವ್ಯಕ್ತಿತ್ವಗಳನ್ನು ಪ್ರತಿನಿಧಿಸುವುದು. ಹೀಗಿರಲು ಮೊಟ್ಟಮೊದಲನೆ ಯದಾಗಿ ನಮ್ಮ ದಿವ್ಯ ಸೃಷ್ಟಿಕರ್ತನಿಗೆ ಘನತೆಗೌರವ ಭಯಭಕ್ತಿ ಪ್ರಭುತ್ವ ಪ್ರಭಾವಮಹಿಮೆಗಳನ್ನು ಕೂಡಿಸಿ ಹೇಳುವವರಾಗಿದ್ದೇವೆ. ನಮ್ಮ ನಿರ್ಮಾಣಿಕನನ್ನು ಆತನು ನೇಮಿಸಿದ ಒಂದು ರೀತಿಯಲ್ಲಿ ಪರಲೋಕದಲ್ಲಿರುವ ನಮ್ಮ ತಂದೆಯೆಂದು ಕರೆಯಲು ಉಲ್ಲಾಸಿಸುವವರಾಗಿದ್ದೆವೆ.

(2) ಅನಂತರ ಈ ಕ್ರಮದಲ್ಲಿ, ಆತನ ದೈವೀಕ ವಾದ ಆಳ್ವಿಕೆ ಮತ್ತು ಅಧಿಕಾರಗಳನ್ನು ಅಂಗಿಕರಿಸುವವರಾಗಿದ್ದೇವೆ. ಇದರ ಅರ್ಥವೆಂದರೆ ನಮ್ಮ ಹೃದಯಗಳನ್ನು ದೇವರ ಚಿತ್ತಕ್ಕೆ ಅಧೀನ ಮಾಡಿ ದುಃಖಸಂತೋಷಗಳಲ್ಲಿಯೂ ನೋವುನಲಿವು ಗಳಲ್ಲಿಯೂ ಜೀವ ಮರಣಗಳಲ್ಲಿಯೂ ನಾವು ದೈವಾಧಿಕಾರ ಮತ್ತು ವಾಗ್ದಾನಗಳಲ್ಲಿ ಭರವಸೆಯನ್ನು ವ್ಯಕ್ತಪಡಿಸಿ ಅಂತ್ಯದಲ್ಲಿ ದೇವರ ಚಿತ್ತವು ಈಗ ಪರಲೋಕದಲ್ಲಿ ನೆರವೇರುತ್ತಿರುವಂತೆ ಭೂಲೋಕದಲ್ಲಿಯೂ ಅಂತ್ಯದವರೆಗೂ ಸಂಪೂರ್ಣವಾಗಿಯೂ ನೆರವೇರಲೆಂದು ಅರಿಕೆಮಾಡುವವರಾಗಿದ್ದೇವೆ: "ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." ಇದರಲ್ಲಿ ನಾವು ಮೆಸ್ಸೀಯನ ರಾಜ್ಯ ಬರುವುದನ್ನು ಅಂಗೀಕರಿಸಿ ಮತ್ತು, ನಾವು ನಂಬಿಗಸ್ತರಾಗಿ –ದ್ದಲ್ಲಿ, ಕರ್ತನ ಮಹಿಮಾಸನದಲ್ಲಿ ಆತನೊಡನೆ ಕುಳಿತು ಮಾನವರಲ್ಲಿ ಇಚ್ಛಾಪೂರ್ವಕವಾಗಿ ವಿಧೇಯರಾಗುವವರಲ್ಲಿ ನೂತನ ಸ್ವಭಾವವನ್ನು ಉಂಟುಮಾಡಲು ದೈವೀಕ ಶಕ್ತಿ ಮತ್ತು ಕರುಣೆಯ ಮೂಲಕವಾದ ಆಶೀರ್ವಾದವನ್ನು ದಯಪಾಲಿಸು ವುದರಲ್ಲಿ ಆತನೊಡನೆ ಸಹಕಾರಿಗಳಾಗುವ ನಿರೀಕ್ಷೆಯನ್ನು ಪರೋಕ್ಷವಾಗಿ ವ್ಯಕ್ತಪಡಿಸುವವರಾಗಿದ್ದೇವೆ.

(3) ಅನುದಿನದ ಆಹಾರ ಅಗತ್ಯತೆಗಳು ನಮ್ಮ ಬೇಡಿಕೆಯ ಮುಂದಿನ ವಿಷಯಗಳು: "ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು." ಅದೆಷ್ಟು ಸರಳವಿದು! ನಮ್ಮನ್ನು ಮತ್ತು ನಮ್ಮ ಅಗತ್ಯತೆಗಳನ್ನು ತಾನು ಮರೆಯುವುದಿಲ್ಲವೆಂಬ ಅರ್ಥದಲ್ಲಿ ನಮ್ಮ ಅನುದಿನದ ಆಹಾರ ಮತ್ತು ನೀರು ಖಂಡಿತವಾಗಿರು– ವುದೆಂಬ ವಾಗ್ದಾನವನ್ನು ದೇವರು ನೀಡಿರುವನು. ನಮ್ಮ ಕೋರಿಕೆಯಲ್ಲಿ ಕೇವಲ ಕರ್ತನಲ್ಲಿ ಭರವಸೆಯಿಂದ ಕಾಯುತ್ತಾ ಆತನು ತನ್ನ ವಾಗ್ದಾನವನ್ನು ನೆರವೇರಿಸಲು ಮನಸುಳ್ಳವನಾಗಿದ್ದು ಅದಕ್ಕೆ ಸಮರ್ಥನಾಗಿರುವನೆಂಬುದರಲ್ಲಿ ಸಂಶಯವಿಲ್ಲವೆಂಬು– ದನ್ನು ವ್ಯಕ್ತಪಡಿಸುವವರಾಗಿದ್ದೇವೆ. ಸಮೃದ್ಧಿ ಸಂಪತ್ತು ಐಶ್ವರ್ಯ ಇವುಗಳನ್ನು ಆತನು ವಾಗ್ದಾನ ಮಾಡಿರುವುದಿಲ್ಲ ಇಲ್ಲವೇ ನಾವು ಇವುಗಳಿಗಾಗಿ ಕೇಳಿಕೊಳ್ಳವಂತೆಯೂ ಇಲ್ಲ ಅಥವಾ ನಾವು ಉತ್ತಮವಾದ ಆಹಾರ ಅಥವಾ ಭೋಗಗಳನ್ನು ಸೂಚಿಸಿ ವಿಜ್ಞಾಪಿ ಸುವಂತಿಲ್ಲ. ಇದರ ಅಭಿಪ್ರಾಯವೆಂದರೆ: ತಂದೆಯೇ, ನಮಗೆ ಉತ್ತಮವೆಂದು ನಿನಗೆ ತೋರುವ ಅನುದಿನದ ಜೀವನದ ಅಗತ್ಯತೆ ಗಳನ್ನು ನಮಗೆ ಅನುಗ್ರಹಿಸು. ಮತ್ತು ದೇವರ ಏರ್ಪಾಡಿನಲ್ಲಿ ಎಂದಾದರೂ ಇವುಗಳನ್ನು ಒದಗಿಸದೆ ಇದ್ದಲ್ಲಿ ಅದು ನಿರ್ಲಕ್ಷದಿಂದಾಗಲೀ ಅಥವಾ ಇದಕ್ಕೆ ಸಾಮರ್ಥ್ಯವಿಲ್ಲದ್ದರಿಂದಾ ಗಲೀ ಆಗಿರದೆ, ನಮ್ಮೊಂದಿಗೆ ಹೀಗೆ ನಡಕೊಳ್ಳುವುದು ದೇವರ ಜ್ಞಾನವಿವೇಕಗಳಿಗೆ ಉತ್ತಮವೆಂದು ತೋರಿದ ಕಾರಣದಿಂದ ಎಂಬುದನ್ನು ನಂಬಿಕೆಯಳ್ಳವರು ಗ್ರಹಿಸಿಕೊಳ್ಳುವರು.

(4) "ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು." ಕೇವಲ ಕರುಣೆಯುಳ್ಳವರು ಮಾತ್ರ ಕರುಣೆಯನ್ನು ಹೊಂದುವರೆಂದೂ, ಕೇವಲ ಕ್ಷಮಿಸುವವರು ಮಾತ್ರ ಕ್ಷಮಿಸಲ್ಪಡುವರೆಂಬುಕ್ಕೆ ಒಡೆಯನ ಬೋಧನೆಯಲ್ಲಿ ಮಹತ್ವ ನೀಡಲಾಗಿದೆ. ಅವರ ಮೂಲ ಪಾಪಗಳು (ಅಂದರೆ, ಆದಾಮನ ಅವಿಧೇಯತೆಯ ಫಲವಾಗಿ ಬಂದ ನ್ಯೂನ್ಯತೆಗಳ ದೆಸೆಯಿಂದಾದ ಪಾಪಗಳು) ಕ್ಷಮಿಸಲ್ಪಡುವ– ವೆಂಬುದಕ್ಕೆ ಯಾವ ಉಲ್ಲೇಖವು ಇಲ್ಲಿರುವುದಿಲ್ಲ. ಕ್ರಿಸ್ತನ ರಕ್ತದ ಆಶ್ರಯದಲ್ಲಿರುವವರಿಗೆ ಅವುಗಳು ಕಳೆದುಹೋದಂಥವು ಗಳಾಗಿದ್ದು ಇನ್ನೆಂದಿಗೂ ಅವು ಇಲ್ಲದಂತಾಗಿರುವವು; ನಾವು ಕ್ರಿಸ್ತನನ್ನು ಅಂಗೀಕಾರ ಮಾಡಿ ಆತನೊಡನೆ ಒಡಂಬಡಿಕೆಯ

ಸಂಬಂಧದಲ್ಲಿ ಸೇರಿದಾಗ ಅವುಗಳು ಮುಚ್ಚಲ್ಪಟ್ಟವುಗಳಾಗಿರುವವು. ಆದರೆ ದೇವ ನಿಯಮ ಗಳಿಗೆ ವಿರೋಧವಾದ ಕುಂದುಕೊರತೆಗಳು ಬಲಹೀನತೆಗಳು ದೋಷ ಅಪೂರ್ಣತೆಗಳು ದೌರ್ಬಲ್ಯಗಳು ಅತಿಕ್ರಮಗಳು ನಮ್ಮಲ್ಲಿ ಅನುದಿನವೂ ಕಂಡು ಬರುವವು. ಇವುಗಳನ್ನು ಒಪ್ಪಿಕೊಳ್ಳಬೇಕಿರುವುದು; ಮತ್ತು ನಮ್ಮ ಪ್ರಾರ್ಥನಾನುಸಾರ ಇವುಗಳನ್ನು ಕ್ಷಮಿಸುವ ದೈವಿಕ ಏರ್ಪಾಡನ್ನು ಮಾಡಲಾಗಿರುವುದು. ಆದರೆ ಇದು ಒಂದು ಷರತ್ತನ್ನು ಒಳಗೊಂಡಿವುದು, ಅದೇನಂದರೆ ನಾವು ಈ ಅಂಶವನ್ನು ಘಾಢವಾಗಿ ಮನವರಿಕೆ ಮಾಡಿಕೊಂಡು ನಾವು ಇತರರೊಂದಿಗೆ ನಡಕೊಳ್ಳುವಾಗ ಈ ತತ್ವವನ್ನೇ ಅನುಸರಿಸುವವರಾಗಬೇಕೆಂಬುದೇ.

(5) "ನಮ್ಮನ್ನು ಶೋಧನೆಯೊಳಗೆ ಸೇರಿಸಬೇಡ (ಅಲ್ಲಿಯೇ ನಮ್ಮನ್ನು ಬಿಟ್ಟುಬಿಡಬೇಡ)." ನಮ್ಮಲ್ಲಿಯೇ ಬಲಹೀನತೆ ದೋಷಗಳು ಇರುವುದು ಅನುಭವಕ್ಕೆ ಬರುತ್ತದೆ. ಆದುದರಿಂದ ನಾವುಗಳು ದೇವರ ಏರ್ಪಾಡಿನ ಮೂಲಕವಾಗಿ ಪರೀಕ್ಷೆ ಪರಿಶೋಧನೆಗಳಿಗೆ ಒಳಗಾಗಬೇಕೆಂಬುದನ್ನು ತಿಳಿದವ – ರಾಗಿರಲಾಗಿ ನಾವು ಶೋಧನೆಯಲ್ಲಿ ನಮ್ಮ ಸಾಮರ್ಥ್ಯವನ್ನೇ ಆತುಕೊಳ್ಳುವದಕ್ಕೆ ಕೈಬಿಡಲ್ಪಡದಂತೆಯೂ ಕರ್ತನ ಒಡಂಬಡಿಕೆಯಾನುಸಾರ ಆತನ ಕೃಪೆಯೇ ನಮಗೆ ಸಾಕೆಂದು ಸಮಯೋಚಿತವಾಗಿ ವಿಜ್ಞಾಪಿಸಿಕೊಳ್ಳಬಹುದು.

(6) ಇಲ್ಲಿ (ಸೈತಾನನೆಂಬ) ಒಬ್ಬ ಕೆಡುಕನಿದ್ದಾನೆಂದೂ ಆತನಿಗೆ ಜನರ ಮೇಲೆ ವಿಶೇಷವಾದ ಅಧಿಕಾರ ಪ್ರಭಾವಗಳಿದ್ದು ಅವನು "ಅಂಧಕಾರದಲ್ಲಿ ಅಧಿಕಾರ ನಡೆಸುವ ಅಧಿಪತಿ" ಮತ್ತು "ಈ ಲೋಕಾಧಿಪತಿ" ಆಗಿರುವನೆಂದು ಸತ್ಯವೇದವು ಖಚಿತವಾಗಿ ಹೇಳುವುದು. ನಾವು ಈ ವಿರೋಧಿಯ ಕುಯುಕ್ತಿಯೊಳಗೆ ಬಿಟ್ಟುಬಿಡಲ್ಪಬಾರದೆಂದು ಕರ್ತನಿಗೆ ವಿನಂತಿಸಿಕೊಳ್ಳುವುದು ಎಷ್ಟು ಸಮಂಜಸವಲ್ಲವೇ!

"ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲವೂ ನಿನ್ನವೇ" ಎಂಬ ಮಾತುಗಳು ಪುರಾತನ ಗ್ರೀಕ್ ಪ್ರತಿಗಳಲ್ಲಿ ದೊರೆಯುವುದಿಲ್ಲವಾದ್ದರಿಂದ ಅದು ಸತ್ಯವೇದದ ಒಂದು ಭಾಗವಲ್ಲವೆಂದು ಅದನ್ನು 'ರಿವೈಸ್ಡ್ ವರ್ಷನ್' ಎಂಬ ಸತ್ಯವೇದದ ಪರಿಷ್ಕರಿತ ಭಾಷಾಂತರದಲ್ಲಿ ಸೂಕ್ತವಾಗಿ ಕೈಬಿಡಲಾಗಿರುವುದು. ಈಗಿನ ಕಾಲದ ರಾಜ್ಯವಾಗಲೀ ಇಲ್ಲವೇ ಆಳ್ವಿಕೆಯಾಗಲಿ ಅದು ದೇವರದಲ್ಲ. ಆತನ ರಾಜ್ಯ ಬಲ ಅಧಿಕಾರಗಳ ಸೂಚನೆಗಳು ಇನ್ನೂ ಸ್ಪಷ್ಟವಾಗಿ ಕಂಡುಬಂದಿರುವುದಿಲ್ಲ. ಮೆಸ್ಸೀಯನ ರಾಜ್ಯವು ಸ್ಥಾಪನೆಯಾಗಿ ಸೈತಾನನ ಸಾಮ್ರಾಜ್ಯವನ್ನು ಕೊನೆಗಾಣಿಸಿ ಆ ವಿರೋಧಿಯನ್ನು ಕಟ್ಟಿ ಸಾವಿರ ವರುಷಗಳು ಬಂಧನದಲ್ಲಿರಿಸಿ ಅನಂತರ ದೇವರ ರಾಜ್ಯವು ಉದಯಿಸಿ ಮತ್ತು ಅದರ ಬಲ ಪ್ರಭಾವಗಳು ನಿರಂತರವಾಗಿರುವುದಕ್ಕಾಗಿ ಕಾಯುವಂಥವ– ರಾಗಿದ್ದೇವೆ.

*****

# ಉಚಿತ ಹಾಗು ಅನುಚಿತ ಮಹತ್ವಾಕಾಂಕ್ಷೆಗಳು

**ರೀಪ್ರಿಂಟ್ಸ್ ಪುಟ 4566**

## ಮತ್ತಾಯ 6:19–34

**"ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು"**

ದಿವ್ಯ ಬೋಧಕನು ದುಂದುಗಾರಿಕೆಯ ವಿಷಯವಾಗಿ ಉಪದೇಶಿಸಿರುವುದಿಲ್ಲ. ಆತನು ತಂದೆಯ ಕಾರ್ಯದಲ್ಲಿ ಚೈತನ್ಯಬಲದಿಂದ ಕೂಡಿದವನಾಗಿ ತನ್ನ ಹಿಂಬಾಲಕರಿಗೆ "ಜಾಗ್ರತೆ ಬೇಕಾದಲ್ಲಿ ಆಲಸ್ಯಗಾರರಾಗಿರದೆ ಆಸಕ್ತಚಿತ್ತರಾಗಿದ್ದು ಕರ್ತನ ಸೇವೆ ಮಾಡುವವರಾಗಿರ್ರಿ." ಎಂದು ಪ್ರಬೋಧಿಸಿದನು. ಹೀಗಿದ್ದರೂ ಈ ಪಾಠದ ವಿಷಯವಾಗಿ ಆತನ ಉಪದೇಶವು ನಮ್ಮ ಬಲಚೈತನ್ಯಗಳು ಸ್ವಾರ್ಥಕ್ಕಾಗಿ ಭೂಲೋಕದ ಸಂಪತ್ತನ್ನು ಕೂಡಿಸಿಡುವ ರೂಪಕ್ಕೆ ತಿರುಗಬಾರದು ಎನ್ನುವದಾಗಿತ್ತು. ಬದಲಾಗಿ ನಾವು ಪರಲೋಕದಲ್ಲಿ ಗಂಟುಮಾಡಿಟ್ಟುಕೊಳ್ಳಬೇಕಿರುವುದು. ಹೀಗಿರಲು ನುಸಿಹಿಡಿಯುವುದರ ಕಿಲುಬುಹತ್ತುವುದರ ಮತ್ತು ಕಳ್ಳರು ಕನ್ನಾಹಾಕುವುದರ ಬಗ್ಗೆ ಉಲ್ಲೇಖವಿದ್ದಾಗ್ಯೂ ವಾಸ್ತವದಲ್ಲಿ ಆತನ ಉಪದೇಶಗಳು ಉನ್ನತ ಮಟ್ಟದವುಗಳಾಗಿದ್ದು ಒಂದು ವಿಶಾಲವಾದ ಮೂಲ ತತ್ವಗಳನ್ನು ಹೊಂದಿದ್ದವು. ಕೆಲವು ವಿಶಿಷ್ಟವಾದ ಸಂದರ್ಭಗಳನ್ನು ಹೊರತುಪಡಿಸಿ ಅಗತ್ಯಬೀಳುವದಕ್ಕೆ ಮೊದಲೇ ಅನ್ನವಸ್ತ್ರಗಳನ್ನು ಕೂಡಿಟ್ಟುಕೊಳ್ಳುವುದು ಅವಿವೇಕತನ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳುವರು. ಆದರೂ ಚಿನ್ನವನ್ನು ಕೂಡಿಸಿಡುವುದು ಇಲ್ಲವೇ ಹಣವನ್ನು ಬ್ಯಾಂಕಿನಲ್ಲಿ ಇಡುವುದು ಅಥವಾ ಬಂಡವಾಳಪತ್ರ ಅಥವಾ ನಿಧಿಪತ್ರ ಇಲ್ಲವೇ ತೋಟಕ್ಕೆ ತೋಟ ಮತ್ತು ಮನೆಗೆ ಮನೆ ಸೇರಿಸಿಕೊಳ್ಳುವುದು ಇವುಗಳಿಗೂ ಇದೇ ತತ್ವವೇ ಅನ್ವಯವಾಗುತ್ತದೆ.

ಬ್ಯಾಂಕಿನಲ್ಲಿರುವ ಖಾತೆಗೆ ನುಸಿ ಹಿಡಿಯಲು ಸಾದ್ಯವಿಲ್ಲ– ದಿದ್ದರೂ, ಚಿನ್ನಕ್ಕೆ ಕಿಲುಬು ಹತ್ತದಿದ್ದರೂ, ಸ್ಥಿರಾಸ್ತಿಗಳ ಹಕ್ಕುಗಳನ್ನು ಕಳ್ಳರು ಕದಿಯುವುದಕ್ಕಾಗದಿದ್ದರೂ ಇವುಗಳಿಗೂ ಅದೇ ತತ್ವವು ಅನ್ವಯವಾಗುವುದು. ಎಲ್ಲಾ ಬಗೆಯ ಸಂಪತ್ತುಗಳೂ ಬೆಲೆಯನ್ನು ಕಳೆದುಕೊಳ್ಳುತ್ತವೆ – ಮೊದಲು ಇಲ್ಲದಿದ್ದರೂ ನಾವು ಸತ್ತಾಗ ನಮಗೆ ಅವುಗಳ ಬೆಲೆ ಇಲ್ಲವಾಗುತ್ತದೆ. ಎಷ್ಟೇ ಜಾಗರೂಕತೆ ತೆಗೆದುಕೊಂಡರೂ, ಮಾಡುವ ಏರ್ಪಾಡುಗಳು ಎಷ್ಟೇ ಸಮಯೋಚಿತವಾಗಿದ್ದರೂ, ಮರಣ ನಶಿಸುವಿಕೆಗಳು ಈಗಿನ ಪ್ರತಿಯೊಂದು ಭೂಸಂಬಂಧವಾದ ವಸ್ತುಗಳನ್ನು ಹಿಡಿದಿರುತ್ತವೆ. "ಏನೂ ಇಲ್ಲದವನಾಗಿ ತಾಯಿಯ ಗರ್ಭದಿಂದ ಬಂದೆನು; ಏನೂ ಇಲ್ಲದವನಾಗಿಯೇ ಗತಿಸಿಹೋಗುವೆನು." (ಯೋಬ 1:21)

ಸಮಾಧಿಗೆ ಸೇರಿದ ನಂತರ ಪುನರುತ್ಥಾನದ ಉದಯಕಾಲದಲ್ಲಿ ಪಡೆಯಬಹುದಾದ ಮುಂದಿನ ಜೀವಿತವನ್ನು ದೇವರು ಏರ್ಪಡಿಸಿರುವನೆಂದು ಬುದ್ಧಿವಂತ ಜನರು ಸಾಧಾರಣ ವಾಗಿ ಒಪ್ಪುವರು. ಇದೇ ಅಂಶವನ್ನು ಆ ದಿವ್ಯ ಬೋಧಕನು ಇಂದಿನ ಪಾಠದಲ್ಲಿ ಒತ್ತಿಹೇಳಿದ್ದಾನೆ. ಬುದ್ಧಿವಿವೇಕವುಳ್ಳ ಮನಸ್ಸುಗಳು ಇದರಲ್ಲಿರುವ ವಿವೇಚನೆಯನ್ನು ಅನುಮೋದಿಸುವವು.

ಕೆಲವರು ವಿಪರೀತವಾದ ಅಭಿಪ್ರಾಯವನ್ನು ಬೆಳೆಸಿ ಕೊಂಡಿರುವಂತೆ ನಾವು ಮಾಡದಿರೋಣ; ಜನರು ತಮ್ಮ ಸೌಖ್ಯಕ್ಕಾಗಿ ಸೂಕ್ತವಾದ ಏರ್ಪಾಟುಗಳನ್ನು ಮಾಡಿಕೊಳ್ಳಬಾರ ದೆಂದೂ ಹಾಗೂ ಮುಪ್ಪಿನ ವಯಸ್ಸಿನಲ್ಲಿ ಧನಸಹಾಯವನ್ನು ಅವಲಂಭಿಸಬಾರದೆಂದು ಒಡೆಯನು ಉಪದೇಶಿಸಿರುವನೆಂದು ಕಲ್ಪಿಸಿಕೊಳ್ಳದೆಯೇ ಇರೋಣ. ತಂದೆತಾಯಿಗಳು ತಮ್ಮನ್ನು ಅವಲಂಬಿಸಿರುವ ತಮ್ಮ ಕುಟುಂಬದವರ ಕಡೆಗಿನ ತಮ್ಮ ಕರ್ತವ್ಯವನ್ನು ಅಲಕ್ಷಿಸುವವರಾಗಬೇಕೆಂಬುದು ಆತನು ಹೇಳಿರು–ವುದರ ಅರ್ಥವೆಂದು ಭಾವಿಸದಿರೋಣ. “ಯಾವನಾದರೂ ಸ್ವಂತಜನರನ್ನು, ವಿಶೇಷವಾಗಿ ತನ್ನ ಮನೆಯುವರನ್ನು ಸಂರಕ್ಷಿಸದೆಹೋದರೆ ಅವನು ಕ್ರಿಸ್ತನಂಬಿಕೆಯನ್ನು ತಿರಸ್ಕರಿಸಿ–ದವನೂ ನಂಬದವರಿಗಿಂತಲೂ ಕಡೆಯಾದವನೂ ಆಗಿದ್ದಾನೆ.” ಎಂದು ಸತ್ಯವೇದವು ನಿರ್ದಿಷ್ಟವಾಗಿ ಬೋಧಿಸುತ್ತದೆ. ಹಾಗಿದ್ದಲ್ಲಿ ಇದರ ಸರಿಯಾದ ಅಭಿಪ್ರಾಯವೆಂದರೆ, ಮಿತವ್ಯಯ ಮಾಡುವುದು ಹಾಗೂ ಪೌಲನು ವ್ಯಕ್ತಪಡಿಸಿರುವಂತೆ ಮುಂದಿನ ಕಾಲದ ನಮ್ಮ ಅಗತ್ಯತೆಗಳಿಗಾಗಿ ನಾವು “ಕೂಡಿಸಿಡುವುದು” ಅಥವಾ ನಾವು ಇತರರ ಅಗತ್ಯದಲ್ಲಿ ಅವರಿಗೆ ಸಾಲಾಕೊಡುವುದು ಸೂಕ್ತವಾಗಿರುವುದೆಂಬುದು. ದೇವ ಜನರು ಮಿತವ್ಯಯಿ–ಗಳಾಗಬೇಕು, ಸಾಲದಿಂದ ದೂರವಿರಬೇಕು, “ಮುಂಜಾಗ್ರತೆ–ಯುಳ್ಳವರು” ಆಗಿದ್ದು ಕೆಲವು ಮಟ್ಟಿಗೆ ಹಣವನ್ನು (ಭವಿಷ್ಯದ ಅವಶ್ಯಕತೆಗಳಿಗಾಗಿ) ಉಳಿಸಿಕೊಂಡಿರುವವರಾಗಬೇಕು.

ಆದರೆ ಭೂಲೋಕ ಸಂಬಂಧವಾದ ವಸ್ತುಗಳು ಅವರ ಪ್ರಾಣಾಧಾರಣೆಗೆ ಅಮೂಲ್ಯವಾದ ವಸ್ತುಗಳಾಗಿರಬಾರದು, ಆದರೆ ಅದು ಅವರ ಸೇವಕರಂತ್ತಿದ್ದು ಪ್ರತಿಯೊಂದು ಆಪತ್ಕಾಲದಲ್ಲಿ ಅವುಗಳನ್ನು ಉಚಿತವಾಗಿ ಮನಃಪೂರ್ವಕವಾಗಿ ಬಳಸಲು ಯಾವಾಗಲೂ ಸಿದ್ಧವಿರಬೇಕು. ಈ ವಿಧಾನವನ್ನು ಅನುಸರಿಸು–ವವರು ಹೇರಳವಾದ ಭೂಲೋಕ ಸಂಪತ್ತುಗಳನ್ನು ಹೊಂದಿರುವುದು ಅಪರೂಪ. ಭೂಸಂಪತ್ತನ್ನು ನಿಧಿಯನ್ನಾಗಿ ಮಾಡಿಕೊಂಡು ಅದನ್ನು ತನ್ನ ಅನುಚಿತವಾದ ಬಯಕೆಗಳನ್ನು ತೀರಿಸಿಕೊಳ್ಳುವುದಕ್ಕಾಗಿ ಇಟ್ಟುಕೊಂಡಲ್ಲಿ ಒಬ್ಬನು ದರಿದ್ರನಾಗ–ಬಹುದು ಇಲ್ಲವೇ ಬಹು ಐಶ್ವರ್ಯವಂತನಾಗಬಹುದು. ಮೇಲಿರುವಂಥ ಸಂಗತಿಗಳ ಮೇಲೆ ಮನಸ್ಸಿಡುವುದು ಭೂಲೋಕ ಸಂಬಂಧವಾದ ಸಂಪತ್ತನ್ನು ಅಧಿಕವಾಗಿ ಕೂಡಿಸಿಕೊಳ್ಳವುದಕ್ಕೆ ಇಲ್ಲವೇ ಅವುಗಳನ್ನು ಸಂರಕ್ಷಿಡುವದಕ್ಕೆ ಅಡ್ಡಿಮಾಡುವುದರಿಂದ ಅವುಗಳು ಕಳಕೊಳ್ಳುವುದನ್ನು ಸೂಚಿಸುವುದು.

ಒಡೆಯನ ಮಾತುಗಳೇನಂದರೆ, ಯಾವನು ಭೂಲೋಕ ಸಂಪತ್ತುಗಳ ಮೇಲೆ ಮನಸ್ಸಿಡುವನೋ ಅವನು ನೀಚನೂ ಸ್ವಾರ್ಥಿಯೂ ಲೌಕೀಕನೂ ಆಗುವನು; ಹೀಗಿರುವಲ್ಲಿ ಯಾವನು ಮೇಲಿರುವಂಥವುಗಳ ಮೇಲೆ ಮನಸ್ಸಿಡುವವನೋ ಅವನು ಅದಕ್ಕೆ ಅನುಗುಣವಾಗಿ ಪರಲೋಕಭಾವದವನೂ ಆತ್ಮಿಕನೂ ಆಶೀರ್ವಾದಕರನೂ ಉದಾರಿಯೂ ಆಗುವನೆಂಬುದು. ನಾವು ಎರಡು ಕಣ್ಣುಗಳನ್ನು ಹೊಂದಿದ್ದೇವೆ ಮತ್ತು ಅವುಗಳು ಪರಸ್ಪರ ಸಂಬಂಧದಲ್ಲಿ ಸೂಕ್ತವಾಗಿ ಹೊಂದಿಕೊಳ್ಳುವಂತೆ ಮಾಡದಿದ್ದರೆ ನಮ್ಮ ದೃಷ್ಟಿಯು ವಿರೂಪಗೊಳ್ಳುತ್ತದೆ. ಹೀಗಿರುವಲ್ಲಿ ನಾವು ವಸ್ತುಗಳನ್ನು ಸರಿಯಾಗಿ ದೃಷ್ಟಿಸುವವರಾಗಲು ಇಂಥ ತೊಡಕನ್ನು ಸರಿಪಡಿಸಿಕೊಳ್ಳಲು ಬಯಸುತ್ತೇವೆ. ನಮ್ಮ ಮನೋನೇತ್ರಗಳ ವಿಷಯದಲ್ಲಿಯೂ ಹೀಗೆಯೇ ಇರುವುದು. ಅದು ಈಗಿನ ಕಾಲದ ಹಾಗು ಮುಂದಿನ ಕಾಲದ ಎರಡೂ ದೃಷ್ಟಿಕೋನಗಳನ್ನು ಹೊಂದಿರುವುದು ಅಂದರೆ ಭೂಲೋಕದ ಹಾಗೂ ಪರಲೋಕದ ವಿಷಯಗಳ ಮೇಲಿನ ದೃಷ್ಟಿಗಳು. ಹೀಗಿರುವಲ್ಲಿ ವಸ್ತುಗಳನ್ನು ಅವುಗಳ ನಿಜರೂಪದಲ್ಲಿ ನೋಡುವಂತಾಗಲು ಅಂದರೆ ಈಗಿನ ಜೀವಿತದ ಸಂಗತಿಗಳನ್ನು ಹೋಲಿಸಿ ನೋಡಿ ಮುಂದಿನ ಜೀವಿತದ ಮತ್ತು ಅವುಗಳ ಶ್ರೇಷ್ಠತೆಯನ್ನು ಕಾಣುವಂತೆ ನಡೆಸಲ್ಪಡಲು ಇವುಗಳು ಸರಿಯಾಗಿ ಹೊಂದಿಕೊಂಡಿರುವಂತೆ ಇಟ್ಟುಕೊಳ್ಳುವುದು ಮುಖ್ಯವಾದುದು. ಈ ಮೂಲಕವಾಗಿ ನಾವು ಮೇಲಿರುವಂಥವುಗಳ ಮೇಲೆ ನಮ್ಮ ಮನಸ್ಸುಗಳನ್ನು ಇರಿಸಿಕೊಂಡವರಾಗಲು ಮತ್ತು ಜೀವಿತದ ಸಾಧಾರಣವಾದ ಹಿತಾಸಕ್ತಿಗಳೆಲ್ಲವನ್ನು ವಿವೇಕದಿಂದ ಸರಿದೂಗಿಸಿಕೊಳ್ಳು–ವಂತಾಗುವದು.

ನಮ್ಮ ದೇಹದ ಸಹಜವಾದ ಕಣ್ಣುಗಳು ಮೊಬ್ಬಾಗಲು ಇಲ್ಲವೇ ಕುರುಡಾಗಲು ಸಾಧ್ಯವಿರುವ ಹಾಗೆಯೇ ನಮ್ಮ ಮನೋನೇತ್ರಗಳ ವಿಷಯವಾಗಿಯೂ ಇರುವುದು. ನಾವು ಒಂದು ಸಾರಿ ದೇವರ ವಾಗ್ದಾನಗಳ ವಿಷಯವಾಗಿ ಗ್ರಹಿಕೆಹೊಂದಿದ ವರಾಗಿ ಅವುಗಳನ್ನು ಅನುಭವಿಸಿದವರಾದ ಮೇಲೆ ನಾವು ಕುರುಡಾದಲ್ಲಿ ನಮ್ಮ ಸಂಗತಿಯು ಎಲ್ಲಾ ವಿಧದಲ್ಲಿಯೂ ಬಹು ಅಧಿಕವಾಗಿ ಚಿಂತಾಜನಕವಾಗಿರುವುದು. ಆಗ ಎಷ್ಟು ದೊಡ್ಡದಾಗಿರುವುದು ಈ ಅಂಧಕಾರ.

ಇದೇ ವಿಧವಾಗಿ ಇನ್ನೊಂದು ಪಾಠವೂ ನಮಗಿರು–ವುದು. ಈ ಲೋಕದ ಸಂಪತ್ತನ್ನು ಸೇವಿಸುವದು ಈ ಕಾಲದಲ್ಲಿ ಆಶೀರ್ವಾದಕರವಾಗಿರುವುದಾದರೂ ಅದು ನಮ್ಮ ಮುಂದಿನ ಜೀವಿತದ ಹಿತಾಸಕ್ತಿಗಳಿಗೆ ಹಾನಿಯನ್ನುಂಟುಮಾಡುವದು. ಆದರೆ ದೇವರನ್ನು ಸೇವಿಸುವುದು ನಮ್ಮನ್ನು ಮುಂದಿನ ಕಾಲದಲ್ಲಿ ಪ್ರಭಾವಶಾಲಿಗಳಾಗುವದಕ್ಕೆ ಸಿದ್ಧಪಡಿಸುವುದು. ಈಗಿನ ಕಾಲದಲ್ಲಿ ದೇವರಿಗೆ ವಿಧೇಯರಾಗಿರುವುದು ಪಾಪಭೋಗಗಳನ್ನು ಕಳಕೊಳ್ಳುವಂತೆ ಮಾಡುವುದಾದರೂ ಮತ್ತು ಕೆಲವು ನ್ಯಾಯ ಸಮ್ಮತವಾದ ಪ್ರಾಪಂಚಿಕವಾದ ಆಶೀರ್ವಾದಗಳನ್ನು ಕಳಕೊಳ್ಳು–ವಂತೆ ಮಾಡುವುದಾದರೂ ದೇವರನ್ನೂ ಮತ್ತು ನೀತಿಯನ್ನೂ ನಂಬಿಗಸ್ತರಾಗಿ ಸೇವಿಸುವವರಿಗೆ ಒಂದು ಆಶೀರ್ವಾದವು ಈಗಲೂ ಇರುವುದು. ಮತ್ತು ಇದಕ್ಕೂ ಮಿಗಿಲಾಗಿ ಮುಂದೆ ಉಜ್ವಲವಾದ ಭವಿಷ್ಯವಿರುವುದು. ಹೀಗಿರಲಾಗಿ ಈ ಇಬ್ಬರು ಒಡೆಯರಲ್ಲಿ ಒಬ್ಬರನ್ನು ಆರಿಸಿಕೊಳ್ಳುವುದು ನಮಗೆ ಅವಶ್ಯ.

ಇಬ್ಬರನ್ನೂ ಸೇವಿಸುವದು ಅಸಾಧ್ಯ. ಈ ಎರಡರ ಪ್ರತಿಫಲಗಳನ್ನೂ ಪಡೆಯಲು ನಮಗೆ ಸಾಧ್ಯವಾಗದು. ಯೆಹೋಶುವನು ಮಾಡಿದಂತೆಯೇ ನಾವೂ ಹೀಗೆ ನಿರ್ಧರಿಸೋಣ: "ನಾನೂ ಮತ್ತು ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು."

ನಮ್ಮ ಹಿತಾಸಕ್ತಿಗಳೆಲ್ಲವನ್ನೂ ದೇವರಿಗೆ ಒಪ್ಪಿಸಿಕೊಡಲು ಹಾಗೂ ನಮ್ಮ ಸಾಮರ್ಥ್ಯಾನುಸಾರವಾಗಿ ಆತನಿಗೆ ಪೂರ್ಣವಾಗಿ ವಿಧೇಯರಾಗಲು ತೀರ್ಮಾನಿಸಲು ಒಡೆಯನು ನಮ್ಮನ್ನು ಪ್ರೇರೇಪಿಸಿರುವನು. ಮತ್ತು ಆನಂತರದಲ್ಲಿ ದೇವರೊಡನೆ ನಮಗಿರುವ ವಿಶೇಷ ಸಂಬಂಧದ ಕಾರಣದ ಆತನ ವಾಗ್ದಾನದ ಅನುಸಾರ ಎಲ್ಲಾ ಸೃಷ್ಟಿಗಳ ಮೇಲಿನ ದೇವರ ಪರಿಪಾಲನೆಯು ವಿಶೇಷವಾಗಿ ನಮ್ಮ ಪರವಾಗಿರುವುದನ್ನು ಗ್ರಹಿಸುವವರಾಗುತ್ತೇವೆ. ಇಂಥವರಿಗೆ ತಮ್ಮ ಲೌಕೀಕ ಸಂಗತಿಗಳ ಬಗ್ಗೆ ಆತಂಕವುಳ್ಳವ–ರಾಗುವ ಅಗತ್ಯವಿರುವುದಿಲ್ಲ, ಅದರೆ ಅವರು ತಮ್ಮ ಹಿತಾಸಕ್ತಿಗಳೆಲ್ಲವುಗಳ ವಿಷಯದಲ್ಲಿ ಪರಲೋಕದಲ್ಲಿರುವ ತಮ್ಮ ತಂದೆಯಲ್ಲಿ ಭರವಸವುಳ್ಳವರಾಗಿರಬಹುದು. ಈಗಿನ ಕಾಲದಲ್ಲಿ ದೊರೆಯುವ ಅನ್ನವಸ್ತ್ರಗಳಿಗಿಂತಲೂ ನಮಗೆ ದೊರೆಯುವ ನಿತ್ಯಜೀವವು ಹೆಚ್ಚು ಬೆಲೆಯುಳ್ಳದ್ದು. ಈಗಿನ ಕಾಲದಲ್ಲಿ ಏನೇ ನಷ್ಟವಾದರೂ ಯಾವುದೇ ತ್ಯಾಗವಿದ್ದರೂ ಮುಂದಿನ ಕಾಲದ ಜೀವಿತವನ್ನು ಪಡೆಯಲು ಹವಣಿಸುವುದು ನಮಗೆ ವಿವೇಕವುಳ್ಳದ್ದು.

ನಮ್ಮ ಹಿತಾಸಕ್ತಿಗಳನ್ನು ಕಾಪಾಡಲು ಪರಲೋಕದಲ್ಲಿರುವ ನಮ್ಮ ತಂದೆಗೆ ಇರುವ ಸಾಮರ್ಥ್ಯದ ಬಗ್ಗೆ ಹೇಳುವುದಾದರೆ, ನಾವು ಸೃಷ್ಟಿಯಲ್ಲಿ ಆತನ ಶಕ್ತಿ ಜ್ಞಾನ ಕೃಪೆಗಳು ಪ್ರದರ್ಶಿತವಾಗಿ–ರುವುದನ್ನೂ, ಆಕಾಶದ ಪಕ್ಷಿಗಳಿಗೆ ಹಾಗು ನೆಲದಲ್ಲಿ ಬೆಳೆಯುವ ಹೂವುಗಳಿಗೆ ಆತನು ಮಾಡಿರುವ ಏರ್ಪಾಡುಗಳನ್ನು ಪರಿಗಣ–ನೆಗೆ ತೆಗೆದುಕೊಳ್ಳಬೇಕು. ನಮ್ಮ ಶ್ರೇಷ್ಠವಾದ ಹಿತಾಸಕ್ತಿಗಳನ್ನು ನೋಡಿಕೊಳ್ಳಲೂ ಆತನಿಗೆ ಇದೇ ಶಕ್ತಿಯಿರುವುದೆಂಬುದನ್ನು ಗ್ರಹಿಸುವವರಾಗಬೇಕು; ಹೀಗೆ ಏನು ಸಂಭವಿಸಿದರೂ ಭರವಸದಿಂದ ಆತನನ್ನು ನಂಬುವವರಾಗಬೇಕು. ನಾವು ಆಕಾರದಲ್ಲಿ ಕುಳ್ಳರಾಗಿದ್ದೆವೆಂದು ನಮ್ಮ ಎತ್ತರವನ್ನು ಹೆಚ್ಚಿಸಿ ಕೊಳ್ಳಲು ಚಿಂತಿಸುವ ಪ್ರವೃತ್ತಿಯುಳ್ಳರಾಗಿರುವಂತೆ ಭಾವಿಸಿಕೊಳ್ಳಲು ಸಾಧ್ಯವೇ? ಹೀಗಿರಲಾಗಿ ನಾವು ನಮ್ಮ ಅಲ್ಪತನವನ್ನು ಗ್ರಹಿಸಿಕೊಂಡವರಾಗಿ ಈಗಿನ ಸಂಗತಿಗಳ ವಿಷಯವಾಗಿಯೂ ಅಲ್ಲದೆ ಮುಂದಿನ ಜೀವಿತದ ವಿಷಯವಾಗಿ ಕರ್ತನನ್ನು ನಿಜವಾಗಿಯೂ ಎದುರು ನೋಡುವುವರಾಗೋಣ. ನಮ್ಮ ಈಗಿನ ಜೀವಿತಾನುಭವಗಳ ವಿಷಯವಾಗಿಯೂ ಹಾಗೂ ಮುಂದೆ ದೊರೆಯಲಿರುವ ಪ್ರತಿಫಲಗಳ ವಿಷಯವಾಗಿಯೂ ಆತನ ಜ್ಞಾನ ಪ್ರೀತಿ ಬಲಾಧಿಕಾರಗಳ ವಶಕ್ಕೆ ಬಿಟ್ಟುಕೊಟ್ಟವರಾಗಿ ಆತನ ಸೇವೆಯಲ್ಲಿ ನಾವು ಶ್ರದ್ಧೆಯುಳ್ಳವರಾಗಿರೋಣ.

ಹೂವು ಪಕ್ಷಿಗಳ ಬಗ್ಗೆ ಲಕ್ಷ್ಯಕೊಡುವ ದೇವರು ಕ್ರಿಸ್ತನಲ್ಲಿನ ನಂಬಿಕೆಯಿಂದ ಹಾಗು ತಮ್ಮ ಜೀವಿತಗಳನ್ನು ಪ್ರತಿಷ್ಠೆ ಮಾಡಿ ಕೊಳ್ಳುವುದರ ಮೂಲಕ ತನ್ನ ಮಕ್ಕಳಾಗಿರುವವರ ಬಗ್ಗೆ ಇನ್ನೂ ಹೆಚ್ಚಿನ ಲಕ್ಷ್ಯಕೊಡುವನೆಂದು ಭಾವಿಸಬೇಕಿರುವುದೇ? ಹೀಗಿದ್ದಲ್ಲಿ ಪ್ರಪಂಚದವರು ಸಾಮಾನ್ಯವಾಗಿ ಚಿಂತಿಸುವ ವಿಷಯಗಳಾದ ಅನ್ನವಸ್ತ್ರಗಳ ಮತ್ತು ಇವುಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗ್ಗೆ ನಮಗಿರುವ ಚಿಂತೆಗಳೆಲ್ಲವನ್ನೂ ತೆಗೆದು ಹಾಕೋಣ. ಚಿಂತೆಯಿಲ್ಲದೆ ಇರುವುದೆಂದರೆ ಸರಿಯಾದ ಕಾಳಜಿಯಿಲ್ಲದೆ ಕೆಲಸವನ್ನು ಹುಡುಕಲು ಮತ್ತು ಅದನ್ನು ಮಾಡಲು ಬೇಕಾದ ಶ್ರದ್ಧೆಯಿಲ್ಲದವರಾಗಿ ರಬೇಕೆಂಬ ಅರ್ಥವಲ್ಲ. ಆದರೆ ನಮಗೆ ನಿಜವಾಗಿಯೂ ಅಗತ್ಯವಿರುವ ವಿಷಯಗಳ ಬಗ್ಗೆ ನಮಗಿಂತಲೂ ಆತನಿಗೆ ಚೆನ್ನಾಗಿ ತಿಳಿದಿರುವುದು. ಹಾಗು ನಂಬಿಕೆ ಎಂಬುದು ಕೇವಲ ಆತನಲ್ಲಿ ಭರವಸವಿಡಬೇಕೆಂಬುದಲ್ಲ; ಆದರೆ ಆತನು ಏನನ್ನು ದಯಪಾಲಿಸುವನೋ ಅದನ್ನು ನಮ್ಮ ಪರಮ ಹಿತಕ್ಕೆ ಅನುಕೂಲಕರವಾಗಿ ಇರುವುದೆಂದು ಒಪ್ಪಿಕೊಳ್ಳುವುದಾಗಿ ರುವುದು.

ಕ್ರಿಸ್ತನ ಅನುಯಾಯಿಗಳಾಗಿ ನಾವು ಮುಖ್ಯವಾಗಿ ಲಕ್ಷಿಸ–ಬೇಕಾದುದು ದೇವರ ರಾಜ್ಯದಲ್ಲಿ ನಮ್ಮ ವಿಮೋಚಕನೊಂದಿಗೆ ಪಾಲನ್ನು ಹೊಂದಲು ಪರಿಶ್ರಮಿಸುವ ವಿಷಯದ ಬಗ್ಗೆ ಅಂದರೆ ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯಲ್ಲಿ ಆತನ ಮದಲಗಿತ್ತಿಯಾಗಿ ಆತನ ಮಹಿಮಾಸದಲ್ಲಿ ಕುಳಿತು ಮಾನವ ಕುಲದವರೆಲ್ಲರನ್ನೂ ಆಶೀರ್ವದಿಸಿ ಅವರನ್ನು ದುರವಸ್ಥೆಯಿಂದ ಉನ್ನತಸ್ಥಿಗೆ ತರುವ ಕಾರ್ಯದಲ್ಲಿ ಆತನೊಡನೆ ಒಂದು ಪಾಲನ್ನು ಪಡೆಯಲು ಪರಿಶ್ರಮಿಸುವುದು. ಯಾರು ಈ ವಿಧಾನವನ್ನು ಅನುಸರಿಸತೊಡಗುವರೋ ಅವರು ಜ್ಞಾನವುಳ್ಳವರಾಗಿ ನಡೆದುಕೊಳ್ಳುವರು ಮತ್ತು ದೇವರು ಅವರ ಲೌಕೀಕಹಿತಾಸಕ್ತಿಗಳನ್ನು ಅವರ ಪರಮಹಿತಕ್ಕಾಗಿ ಅನುಕೂಲಿಸುವ ಹಾಗೆ ನೋಡಿಕೊಳ್ಳುವನು. ಹೀಗೆ ಮಾಡುವು – ದರಿಂದ ಕರ್ತನು ತನ್ನ ವಾಕ್ಯದ ಮೂಲಕವಾಗಿ ತನ್ನಲ್ಲಿ ಭರವಸವಿಟ್ಟಿರುವವರಿಗೆ ವಾಗ್ದಾನ ಮಾಡಿದ ತನ್ನ ಸಂತೋಷ ಸಮಾಧಾನ ಮತ್ತು ವಿಶ್ರಾಂತಿ ಇವುಗಳು ನಮ್ಮ ಜೀವನದಲ್ಲಿ ಕಿರೀಟದಂತ್ತಿದ್ದು ನಮ್ಮಲ್ಲಿ ಶೋಭೆಯನ್ನುಂಟು ಮಾಡುವವು.

# ರಾಜಾಜ್ಞೆಯೂ ಸುವರ್ಣ ಸೂತ್ರವೂ

**ರೀಪ್ರಿಂಟ್ಸ್ ಪುಟ 2589**

## ಮತ್ತಾಯ 7:1–14

**"ಅಂತು ಜನರು ನಿಮಗೆ ಏನೇನು ಮಾಡಬೇಕೆಂದಿರುತ್ತಾರೋ ಅದನ್ನೇ ನೀವು ಅವರಿಗೆ ಮಾಡಿರಿ"**

ಈ ಪಾಠವು ನಮ್ಮ ಕರ್ತನ ಪರ್ವತದ ಶ್ರೇಷ್ಠ ಪ್ರಸಂಗದ ಮತ್ತೊಂದು ಪುಟದಲ್ಲಿನ ವಿಷಯವಾಗಿರುತ್ತದೆ. ಇದು ಪಾಪಿಗಳಿಗಾಗಿ ಇರುವ ಪ್ರಸಂಗವಲ್ಲ, ಆದರೆ ಕರ್ತನ ಪ್ರತಿಷ್ಠಿತ ಜನರಿಗೋಸ್ಕರವಾಗಿರುತ್ತದೆ; ಮತ್ತು ಕರ್ತನ ಸ್ವರವನ್ನು ಆಲಿಸುತ್ತಿದ್ದವರಲ್ಲಿ ಛಾಯಾರೂಪವಾಗಿ ಪ್ರತಿಷ್ಠಿತ ಜನಾಂಗದವರ ದೊಡ್ಡ ಗುಂಪು ಅಲ್ಲಿದ್ದರೂ ನಮ್ಮ ಕರ್ತನು ತಾನು ಆದುಕೊಂಡ

ಹನ್ನೆರಡು ಶಿಷ್ಯರಿಗೆ ವಿಶೇಷವಾಗಿ ಸಂಬೋಧಿಸಿದ್ದನು. ಅವರು ಕೆಲವೇ ಕಾಲಗಳಲ್ಲಿ ಸ್ಥಾಪಿತವಾಗಲಿದ್ದ ಆತ್ಮಿಕ ವ್ಯವಸ್ಥೆಯಲ್ಲಿ ಅಂದರೆ ಪರಲೋಕರಾಜ್ಯದಲ್ಲಿ ಹನ್ನೆರಡು ಅಸ್ತಿವಾರಗಳಂತಾ–ಗಲು ಅವರು ವಿಶೇಷವಾಗಿಯೂ ಅಲ್ಲದೆ ಪೂರ್ಣವಾದ ರೀತಿಯಲ್ಲಿಯೂ ಶಿಕ್ಷಿತರಾಗುತ್ತಿದ್ದರು. ಇದು ಸಾಂಕೇತಿಕವಾಗಿ ಪ್ರಕಟನಾ ಗ್ರಂಥದಲ್ಲಿನ ನೂತನ ಯೆರೂಸಲೇಮ್ ಎಂಬುದರಲ್ಲಿ ಸೂಚಿತವಾಗಿದೆ. – ಪ್ರಕಟನೆ 21:14

ಈ ರಾಜಾಜ್ಞೆಯ ಅನೇಕ ವಿಧಿರೂಪಗಳು ಆಗಲೂ ಮತ್ತು ಈಗಲೂ ಅದನ್ನು ಸ್ವೀಕರಿಸುವವರಿಗೆ ಸ್ಪಷ್ಟ ಬೋಧನೆಯಾಗಿರುವುದೆಂಬುದು ನಿಜ. ಆದರೂ ವಾಸ್ತವದಲ್ಲಾದುದೇನಂದರೆ ಹೋಲಿಸಿ ನೋಡಿದಲ್ಲಿ ಸತ್ಯವೆಂಬ ಪರಿಶುದ್ಧವಾದ ಮುತ್ತುಗಳ ವಿಷಯವಾಗಿ ಗ್ರಹಿಕೆಹೊಂದಲು ಕೆಲವೇ ಮಂದಿಗೆ ಮಾತ್ರ ತಮ್ಮ ಕಣ್ಣುಗಳು ತೆರೆಯಲ್ಪಟ್ಟದ್ದಾಗಿಯೂ ಕಿವಿಗಳು ತೆರೆಯಲ್ಪಟ್ಟದ್ದವಾ–ಗಿಯೂ ಇದ್ದವು ಹಾಗು ಯಾರು ಅವುಗಳನ್ನು ಅಂಗೀಕರಿಸಲು ಸಾಧ್ಯವೋ ಕೇವಲ ಅವರಿಗೇ ನಿಶ್ಚಯವಾಗಿ ಅವುಗಳು ಸಂಬೋಧಿಸಲ್ಪಟ್ಟಿದ್ದು ಮತ್ತು ಅವು ಈ ಉದ್ದೇಶಕ್ಕಾಗಿಯೇ ಇದ್ದವು. ದೇವರ ರಾಜ್ಯವು ಅತಿ ಸನಿಹದಲ್ಲಿಯೇ ಸ್ಥಾಪಿತವಾಗುತ್ತಿದ್ದು ಅಲ್ಲಿ ಕುರುಡರೆಲ್ಲರ ಕಣ್ಣುಗಳು ತೆರೆಯಲ್ಪಟ್ಟು ಹಾಗು ಕಿವುಡರೆಲ್ಲರ ಕಿವಿಗಳು ತೆರೆಯಲ್ಪಟ್ಟು ಹಾಗೂ ದೇವರ ಒಂದು "ನಿಗದಿತ ಕಾಲದಲ್ಲಿ" ಪ್ರೀತಿ ಸಂಬಂಧವಾದ ಸುವರ್ಣ–ಮಯವಾದ ಆಳ್ವಿಕೆಯ ಕಟ್ಟಳೆ ವಿಧಿಗಳನ್ನು ಎಲ್ಲರೂ ಗ್ರಹಿಸುವಂತಾಗಿ ಮತ್ತು, ಅವುಗಳು ಸ್ಪಂದಿಸಲ್ಪಟ್ಟಾಗ್ಯೂ ಅಥವಾ ತಿರಸ್ಕರಿಸಲ್ಪಟ್ಟಾಗ್ಯೂ, ಅವುಗಳು ಎಲ್ಲರಿಗೂ ಅನ್ವಯಿಸ–ಲಾಗುವುದೆಂಬ ಒಳ್ಳೆಯ ನಿರೀಕ್ಷೆಗಾಗಿ ದೇವರಿಗೆ ಸ್ತೋತ್ರ.

ನಮ್ಮ ಕರ್ತನ ನಿದರ್ಶನ ಹಾಗೂ ಅಪ್ಪಣೆಯನ್ನು ಅನುಸರಿಸುವವರಾಗಿ ನಾವು ಈ ಸಮಯಕ್ಕೆ ಸೂಕ್ತವಾದ (ಆತ್ಮೀಕ) ಆಹಾರವನ್ನು ಅಂದರೆ ಆ ರಾಜ್ಯಕ್ಕೆ ಮಕ್ಕಳು ಎನ್ನಿಸಿಕೊಂಡ ನಂಬಿದವರಾದ ಮನೆತನದ ಮುಂದೆ "ಹೊಸ (ಆಹಾರ) ಪದಾರ್ಥಗಳನ್ನು ಹಳೆ (ಆಹಾರ) ಪದಾರ್ಥಗಳನ್ನು" ಸಿದ್ಧಪಡಿಸಿ ಇಡಲು ಯತ್ನಿಸುವವರಾಗಿದ್ದೇವೆ, ಅಲ್ಲದೆ ದೇವರ ಕೃಪೆಯನ್ನು ಅಂಗೀಕರಿಸಿ ಆತನ ಮನೆತನದಲ್ಲಿ ಪುತ್ರರ ಪದವಿಯನ್ನು ಹೊಂದದೆ ಇನ್ನೂ ದೇವಾನುಗ್ರಹಕ್ಕೆ ಹೊರಗಾಗಿರುವ "ನಾಯಿಗಳಂತಿರುವವರ" ಮುಂದೆ ಇವುಗಳನ್ನಿಡಲು ಪ್ರಯತ್ನಿಸುವವರಾಗಿಲ್ಲ. ಕೇಳುವ ಕಿವಿಗಳನ್ನು ಹೊಂದಿ ಗ್ರಹಿಸಿಕೊಂಡು ಮನನ ಮಾಡಿಕೊಳ್ಳುವ ಹೃದಯವುಳ್ಳವರಿಗೆ ಅಂದರೆ ಆತ್ಮನಿಂದ ಹುಟ್ಟಿದವರಾಗಿ (ಅಂಕುರಿಸಲ್ಪಟ್ಟವರಾಗಿ) "ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿ" ನೂತನ ಜೀವನವನ್ನು ನಡೆಸಲು ಯತ್ನಿಸುವವರಿಗೆ ಈ ಅಮೂಲ್ಯವಾದ ಸತ್ಯಾರ್ಥಗಳು ಬಹು ಬೆಲೆಯುಳ್ಳ ಅಂದರೆ ಅಮೂಲ್ಯವಾದ ಮುತ್ತುಗಳಂತಿರುವವು. ಹಂದಿಗಳ ಸ್ವಭಾವದವರಾಗಿ ಮೃಗಗಳಂತಿರುವವರು ಇವುಗಳನ್ನು ಪ್ರಸಂಶಿಸಲಾರದೆ ಇದರಿಂದ ಅವರು ಕೇವಲ ನಿರಾಶಾಭಾವದವರಾಗಿ ನಮ್ಮ ಒಳ್ಳೆಯ ಉದ್ದೇಶಗಳಿಗೆ ಸಿಟ್ಟಾಗಿ ನಮಗೆ ಹಾನಿಯುಂಟು ಮಾಡುವರೆಂಬುದನ್ನು ಅರಿತವರಾಗಿರಲಾಗಿ ಈ ಸಂಗತಿಗಳನ್ನು ಅವರ ಮುಂದೆ ಪ್ರಸ್ತುತಪಡಿಸಲು ಯತ್ನಿಸುವುದಿಲ್ಲ. ನಮ್ಮ ಕರ್ತನು ಇದನ್ನು ನಂತರ ತನ್ನ ಪ್ರಸಂಗದಲ್ಲಿ ತೋರಿಸಿ ಕೊಟ್ಟಿರುವನು ಮತ್ತು ಆತನ ನುಡಿಗಳು ಸೊಲೋಮೋನನ ಈ ಮಾತುಗಳಿಗೆ ಪೂರ್ಣವಾಗಿ ಹೊಂದಿಕೆಯಾಗುವುದು: "ಧರ್ಮನಿಂದಕನನ್ನು ಶಿಕ್ಷಿಸುವವನು ತನ್ನನ್ನು ಅವಮಾನಕ್ಕೆ ಗುರಿಮಾಡಿಕೊಳ್ಳುವನು, ಕೆಟ್ಟವನನ್ನು ಗದರಿಸುವವನಿಗೇ ಕಳಂಕವಾಗುವದು." – ಜ್ಞಾನೋಕ್ತಿ 9:7–8.

ಹೀಗಿರುವಲ್ಲಿ ನಂಬಿದವರ ಮನೆತನದವರಿಗೇ ಕರ್ತನು ಹೀಗೆ ಹೇಳಿರುವುದು: "ತೀರ್ಪುಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವುದಿಲ್ಲ." ಕ್ರಿಸ್ತನ ಅನುಭವಶಾಲೆಯಲ್ಲಿ ಕಲಿಯುತ್ತಿರು –ವವರಾಗಿ ಈ ದಿವ್ಯ ಬೋಧಕನ ಉಪದೇಶಗಳಿಗೆ ತಮ್ಮನ್ನು ಒಳಪಡಿಸಿಕೊಳ್ಳದೇ ಇರುವವರು ಆತನ ಉಪದೇಶಗಳು ತಮಗೆ ಮನವರಿಕೆಯಾಗಿಲ್ಲವೆಂಬುದನ್ನು ಸ್ಪಷ್ಟಪಡಿಸುವರಾದ್ದರಿಂದ ಹೊರಗಿನವರಿಗೆ ಈ ಉಪದೇಶವನ್ನು ನೀಡುವುದು ಪ್ರಯೋಜನಕಾರಿಯಲ್ಲ. ಆದರೆ ಎಲ್ಲಾ ನಿಜವಾದ ಶಿಷ್ಯರು (ಕಲಿಯುವವರು, ವಿದ್ಯಾರ್ಥಿಗಳು) ಈ ಆದೇಶಗಳಿಗೆ ಶ್ರದ್ಧಾಪೂರ್ವಕವಾದ ಗಮನವನ್ನು ಕೊಡುವವರಾಗಿ ಇವುಗಳು ಒಂದು ಬಹು ಮುಖ್ಯವಾದ ಪಾಠವನ್ನು ಒಳಗೊಂಡಿರುವುದೆಂಬುದನ್ನು ಗ್ರಹಿಸಿಕೊಳ್ಳಬೇಕು. ಇವುಗಳು ತಿಳುವಳಿಕೆ ಹೊಂದದವನನ್ನು ಈ ಮಹತ್ವದ ಪರೀಕ್ಷೆಗೆ ತನ್ನನ್ನು ಸಿದ್ಧಪಡಿಸಿಕೊಂಡು ಪ್ರೌಢಿಮೆಗೆ ಬರಲು ತಯಾರಾಗಿ ಆ ರಾಜ್ಯಕ್ಕೆ ಸೇರಲು ಸಿದ್ಧತೆಯನ್ನು ಹೊಂದಲಾಗದಂತೆ ಮಾಡುವವು; ಯಾಕೆಂದರೆ ಅವರಿಗೆ ಪರೀಕ್ಷಾರ್ಥವಾಗಿ ಬರುವ ಸಂಗತಿಗಳಲ್ಲಿ ಇದೂ ಒಂದು ಅಂಶ –ವಾಗಿರುವುದು. ಅವರು ತಪ್ಪುಗಳನ್ನು ಕಂಡುಹಿಡಿಯುವವರು ಯಾವುದರಲ್ಲಿಯೂ ಒಳ್ಳೆಯದನ್ನು ಕಾಣದೆ ತೀವ್ರವಾಗಿ ಖಂಡಿಸುವವರು, ಇತ್ಯಾದಿಗಳು ಆಗಿದ್ದು ಇತರರ ಬಗ್ಗೆ ಕಠಿಣ–ವಾಗಿಯೂ ನಿರ್ದಯವಾಗಿಯೂ ತೀರ್ಪುಮಾಡುವವರಾಗುವರು. ಅವರು ಕರುಣಾಭಾವ ಹಾಗು ಇತರರನ್ನು ಪರಿಗಣಿಸುವ ಗುಣಗಳಿಂದ ಕೂಡಿದ ಕ್ರಿಸ್ತನ ಆತ್ಮವನ್ನು ಅಂದರೆ ಪ್ರೀತಿಯ ಆತ್ಮವನ್ನು ಬೆಳೆಸಿಕೊಂಡಿಲ್ಲವೆಂಬುದಕ್ಕೆ ಇದು ಒಂದು ಸ್ಪಷ್ಟವಾದ ಗುರುತು; ಆದುದರಿಂದ ಅಂಥವರು ಆ ರಾಜ್ಯಕ್ಕೆ ಅನರ್ಹರೆಂದು ತೀರ್ಪು ಅಥವಾ ಖಂಡನೆಯನ್ನು ಹೊಂದುವರು, ಏಕೆಂದರೆ ನಾವು ತೀರ್ಪುಮಾಡುವ ರೀತಿಯಲ್ಲೇ ನಮಗೂ ತೀರ್ಪಾಗುವದು. ಕಾರಣ ಪ್ರೀತಿಯ ಇರುವಿಕೆ ಅಥವಾ ಇಲ್ಲದಿರುವಿಕೆಯು ನಮ್ಮ ನಿಜವಾದ ಆತ್ಮಿಕ ಸ್ಥಿತಿಯನ್ನು ಯಾವುದೇ ಇತರ ಸಂಗತಿಗಳು ತೋರಿಸಲಾರದ ರೀತಿಯಲ್ಲಿ ತೋರಿಸಿಕೊಡುವವು.

ಯಾವ ಪ್ರಮಾಣದಲ್ಲಿ ಕರುಣೆ ಉದಾರಭಾವಗಳನ್ನು ಇತರರಿಗೆ ತೋರಿಸುವೆವೋ ಆ ಪ್ರಮಾಣದಲ್ಲಿಯೇ ದೇವರ ಕರುಣೆಯೂ ನಮಗೆ ತೋರಿಸಲ್ಪಡುವುದು. ಆ ಮಹಾ ಬೋಧಕನ ಬಾಯಿಂದ ಬಂದ ಈ ಪಾಠಗಳು ದೇವಜನರೆಲ್ಲರ ಹೃದಯಗಳಲ್ಲಿ ಒಳ್ಳೆಯ ಪ್ರಭಾವವನ್ನು ಬೀರುವಂತಾಗಲು ಸಾಧ್ಯವಾಗಿದ್ದಲ್ಲಿ ಅದು ಇತರ ಪರವಾಗಿರುವ ಅವರ ಆಲೋಚನೆ ನಡತೆಗಳಲ್ಲಿನ ಮನೋಭಾವಗಳ ಮೇಲೆ ಅದು ಎಷ್ಟು ಅದ್ಭುತವಾದ ಪರಿಣಾಮ ಬೀರುತ್ತಿತ್ತು; ಇತರರಲ್ಲಿನ

ಬಲಹೀನತೆಗಳ ವಿಷಯವಾಗಿ ಅವರು ಎಷ್ಟು ಉದಾರಿಗಳೂ, ಎಷ್ಟು ಕ್ಷಮಾಭಾವದವರೂ ಎಷ್ಟು ಸಹಾನು ಭೂತಿಯುಳ್ಳವರೂ ಆಗುತ್ತಿದ್ದರು; ಅವರ ಹೃದಯಗಳಲ್ಲಿ ಪ್ರೀತಿಯ ಆತ್ಮವು ಹೇಗೆ ಬೆಳೆಯುವಂತಾಗಿ ಅವರ ನಡೆನುಡಿಗಳಲ್ಲಿ ಅವು ತೋರ್ಪಡಲಾಗುತ್ತಿದ್ದವು.

## ಅವರ ಕಣ್ಣಿನಲ್ಲಿರುವ ತೊಲೆಗಳು

ಈ ಪಾಠವನ್ನು ಒತ್ತಿಹೇಳುತ್ತಾ ನಮ್ಮ ಕರ್ತನು ಸಲಹೆ ನೀಡಿರುವುದೆಂದರೆ, ಯಾರು ತಮ್ಮಂತೆ ಇಕ್ಕಟ್ಟಾದ ಮಾರ್ಗದಲ್ಲಿ ನಡೆಯಲು ಯತ್ನಿಸುತ್ತಿರುವ "ಸಹೋದರರಲ್ಲಿ" ದೋಷವನ್ನು ನಿರಂತರವೂ ಕಂಡುಹಿಡಿಯುತ್ತಿರುವರೋ ಅವರು ಆ "ಸಹೋದರರು" ಮಾಡುತ್ತಿರುವ ಉತ್ತಮವಾದ ಪರಿಶ್ರಮಗಳನ್ನು ಕಾಣಲು ಎಂದೂ ಸಾಧ್ಯವಾಗದೆ ಯಾವಾಗಲೂ ಅವರಲ್ಲಿ ದೋಷಗಳನ್ನು ಕಂಡುಹಿಡಿಯುತ್ತಲೇ ಇರುವರು. ಇವರು ತಮ್ಮಲ್ಲೇ ದೊಡ್ಡ ದೋಷಗಳನ್ನು ಇಟ್ಟುಕೊಂಡಿರುವರು ಅದು ಯಾವದೆಂದರೆ ಪ್ರೀತಿಯಿಲ್ಲದಿರುವಿಕೆ. ನಮ್ಮ ಕರ್ತನು ಈ ವರ್ಗದವರಿಗೆ ಬುದ್ಧಿಪಾಠವಾಗಿ ಹೇಳಿದ ಉತ್ಪ್ರೇಕ್ಷೆಯ ಮಾತಿನಲ್ಲಿ ಚುಚ್ಚುಮಾತಿನ ಧಾಟಿಯಿರುವಂತೆ ಕಾಣಬರುತ್ತದೆ, ಏಕೆಂದರೆ ಆತನು ಅಕ್ಷರಶಃ ನುಡಿಯುವುದು: ನಿಮ್ಮ ಕಣ್ಣಿನಲ್ಲೇ ಪೂರ್ಣವಾದ ಒಂದು ತೊಲೆಯನ್ನು ಇಟ್ಟುಕೊಂಡಿರುವ ನೀವು ಯಾಕೆ ತನ್ನ ಕಣ್ಣಿನಲ್ಲಿನ ರವೆಯ ದೆಸೆಯಿಂದ ತೊಂದರೆಗೀಡಾದ ನಿಮ್ಮ ಜೊತೆಯವನನ್ನು ದುರುಗುಟ್ಟಿ ನೋಡುವುದು? ಸಹೋದರರೆಲ್ಲರೂ ಹೆಚ್ಚು ಕಡಿಮೆ ಒಂದಲ್ಲಾ ಇನ್ನೊಂದು ರೀತಿಯ ಕಷ್ಟಗಳಿಂದ ಅಂದರೆ ಶಾರೀರಿಕ ಬಲಹೀನತೆಗಳಿಂದ ಬಾಧಿತರಾಗಿರುವರು. ಏಕೆಂದರೆ ಎಲ್ಲರೂ ನೂತನ ಸ್ವಭಾವೆಂಬ ನಿಧಿಯನ್ನು (ಆದಾಮನ) ಮೂಲ ಪಾಪದ ದೆಸೆಯಿಂದ ವಿರೂಪಗೊಂಡ ಅಪೂರ್ಣವಾದ (ದೋಷಪೂರಿತವಾದ) ಮಣ್ಣಿನ ಘಟಗಳಲ್ಲಿ ಹೊಂದಿರುವುರು. "ನೀತಿವಂತನು (ಅಂದರೆ ಸಂಪೂರ್ಣವಾಗಿ ಪರಿಪೂರ್ಣತೆಯುಳ್ಳವನು) ಯಾರೂ ಇಲ್ಲ, ಒಬ್ಬನಾದರೂ ಇಲ್ಲ." ಆದರೂ ಯಾವ ಸಹೋದರರ ಹೃದಯದಲ್ಲಿ ಪೂರ್ಣವಾದ ಪ್ರೀತಿಯಿರುವುದೋ, ಅವರು ಬುದ್ಧಿಪೂರ್ವಕವಾಗಿ ಗ್ರಹಿಸುವುದರಲ್ಲಿ, ಆತ್ಮಿಕವಾಗಿ ತಿಳಿದು ಕೊಳ್ಳುವಲ್ಲಿ ಅಂದರೆ ನಂಬಿಕೆಯೆಂಬ ಕಣ್ಣುಗಳಲ್ಲಿ ಮರದ ಸಿಬಿರಿನಂತ ಅಡ್ಡಿಗಳು ಇದ್ದಾಗ್ಯೂ ಹಾಗು ತಮ್ಮ ಜೀವನದ ನಡವಳಿಕೆಯೆಲ್ಲವುಗಳನ್ನು ಹಾನಿಗೊಳಿಸುವ ಸಿಬಿರುಗಳು ಅವರ ಹಸ್ತದಲ್ಲಿ ಚುಚ್ಚಿಕೊಂಡಿದ್ದು ಅವರ ಕಾರ್ಯಗಳನ್ನು ಅಪರಿಪೂರ್ಣವನ್ನಾಗಿ ಮಾಡಿದರೂ ಮತ್ತು ಅವರ ಕಾಲಿನಲ್ಲಿ ಸಹ ಸಿಬಿರು ಚುಚ್ಚಿಕೊಂಡು ಅವರ ನಡಿಗೆಯನ್ನು ಯಾವ ವಿಧದಲ್ಲೂ ಪರಿಪೂರ್ಣವಲ್ಲದಂತೆ ಮಾಡಿ ತಾವು ಬಯಸಿದ ರೀತಿಯಲ್ಲಿ ಇರದಂತಾದರೂ ಅವರಲ್ಲಿ ನಂಬಿಕೆ ಪ್ರೀತಿ ಹಾಗು ಕನಿಕರಗಳಿಂದ ಕೂಡಿದ ಕ್ರಿಸ್ತನ ಆತ್ಮವು ಇರುವುದೇ ಆದಲ್ಲಿ ಅವರು ಆತನವರಾಗುವರು ಮತ್ತು ಪ್ರೀತಿ ಕನಿಕರದ ಭಾವವಿಲ್ಲದ ಇತರ ಎಲ್ಲರಿಗಿಂತಲೂ ಹೆಚ್ಚಾಗಿ ಅಂಗೀಕೃತರಾಗುವರು. ಹೀಗಾಗಿ ಅವರು ಈ ಸಾಮ್ಯದಲ್ಲಿ ಸೂಚಿಸಿರುವಂತೆ ಇತರರ ವಿಷಯವಾಗಿ ತೀರ್ಪುಮಾಡುವಾಗ ಪೂರ್ಣ ವಿಕೃತವಾದ ತೀರ್ಪು ಮಾಡುವರು ಕಾರಣ ಅವರು ಕರ್ತನ ಆತ್ಮವನ್ನು ಬಹು ಅಲ್ಪ ಪ್ರಮಾಣದಲ್ಲಿ ಹೊಂದಿದ್ದು "ಸಹೋದರರ ಮೇಲೆ ದೊಡ್ಡದಾಗಿ ಆಪಾದನೆ ಹೊರಿಸುವ" ವಿರೋಧಿಯ (ಸೈತಾನನ) ಆತ್ಮವನ್ನು ಅಧಿಕವಾಗಿ ಹೊಂದಿರುವವರಾಗಿರುವರು.

ಪ್ರೀತಿಯಿಲ್ಲದೆ ತಪ್ಪುಹುಡುಕುವವರಾಗಿ ಸಹೋದರರನ್ನು ಆಪಾದಿಸುವ ಈ ವರ್ಗವನ್ನೇ ಕರ್ತನು ಕಪಟಿಗಳು ಎಂದು ಹೆಸರಿಸಿರುವುದು. ಏಕೆ? ಕಾರಣ ಇತರರಲ್ಲಿ ತಪ್ಪನ್ನು ಕಂಡುಹಿಡಿಯುವುದರಲ್ಲಿ ಅವರು ಸ್ಪಷ್ಟವಾಗಿ ತಾವು ಪಾಪದ ಸಂಬಂಧವಾದ ಇಂಥ ಸಂಕಷ್ಟದಿಂದ ಬಾಧಿತರಾಗಿಲ್ಲವೆಂಬ ತೀರ್ಮಾನವನ್ನು ಮಾಡಿಕೊಳ್ಳಲು ಬಯಸುವರು; ಅವರು ಸ್ಪಷ್ಟವಾಗಿ ತಾವು ಪರಿಶುದ್ಧರೆಂಬುದನ್ನು ಮನದಟ್ಟು - ಮಾಡಿಕೊಡಲು ಬಯಸುವರು; ಮತ್ತು ಅವರು ತಮ್ಮ ಹೃದಯದಲ್ಲಿ ಇದು ನಿಜವಲ್ಲವೆಂಬುದನ್ನು ತಿಳಿದಿದ್ದರೂ ಮತ್ತು ಅವರಲ್ಲೇ ಹಲವು ವೈಫಲ್ಯಗಳು, ಹಲವು ಲೋಪದೋಷಗಳು ಇರುವುದರಿಂದಲೂ ಅವರ ವರ್ತನೆಯು ಕಪಟಾಚಾರವೂ ಸುಳ್ಳಾದುದೂ ಮೋಸಕರವೂ ದೇವರಿಗೆ ಮೆಚ್ಚಿಕೆಯಲ್ಲದ್ದೂ ಆಗಿರುವುದು. ನಮ್ಮ ಕರ್ತನ ವಾಕ್ಯವು ಸ್ಪಷ್ಟವಾಗಿ ತೋರಿಸಿ-ಕೊಟ್ಟಿರುವಂತೆ ಅವರು ಮಾಡುವ ತಪ್ಪು ಕಂಡುಹಿಡಿಯುವಿಕೆಯು ತಪ್ಪುಮಾಡುವವರ ಮೇಲಿನ ಪ್ರೀತಿಯ ಮತ್ತು ಪಾಪದ ಮೇಲಿನ ದ್ವೇಷದ ಪ್ರೇರಣೆಯ ಫಲವಾದುದೆಂದು ಅವರು ಹೇಳಿ-ಕೊಳ್ಳುವುದು ಮೋಸಕರವೂ ಕಪಟಾಚಾರವೂ ಆಗಿರುವುದು. ಇಲ್ಲವಾದಲ್ಲಿ ಅವರಿಗೆ ತಮ್ಮಲ್ಲಿರುವ ಪಾಪ ಬಲಹೀನತೆಗಳನ್ನು ಹಗೆಮಾಡಿ ಖಂಡಿಸಿ ಅವುಗಳ ವಿರೋಧವಾಗಿ ಹೋರಾಡಲು ಬಹಳಷ್ಟು ಮಾಡಬೇಕಿರುವುದೆಂಬುದನ್ನು ಕಂಡುಕೊಳ್ಳುವರು. ಅಂದರೆ ಇದು ಸ್ವಪ್ರತಿಷ್ಠೆ ಮತ್ತು ಕಪಟಾಚಾರವೆಂಬ ತಮ್ಮ ಕಣ್ಣಿನಲ್ಲಿರುವ ತೊಲೆಯನ್ನು ತೆಗೆದುಹಾಕುವಿಕೆ. ಹೀಗೆ ಮಾಡುವುದರಲ್ಲಿ ಪಡೆದ ಅನುಭವವು ಅವರನ್ನು ಇತರರಿಗೆ ಸಹಾಯಮಾಡುವುದರಲ್ಲಿ ಬಹು ಮೃದು ಸ್ವಭಾವದವ-ರನ್ನಾಗಿಯೂ ಕರುಣೆಯುಳ್ಳವರನ್ನಾಗಿಯೂ ಪ್ರೀತಿಯುಳ್ಳವ - ರನ್ನಾಗಿಯೂ ಮಾಡುವದು.

"ಸಹೋದರರು" ಎಂದು ಕರೆಯಲ್ಪಡುವವರೆಲ್ಲರೂ ನಮ್ಮ ಕರ್ತನು ವರ್ಣನೆಮಾಡಿರುವ ಈ ಭಾವಚಿತ್ರವನ್ನು ಜಾಗರೂಕತೆ ಯಿಂದ ವೀಕ್ಷಿಸಿ ಅವರು ತಮ್ಮ ಹೃದಯದಲ್ಲಿ ಇದೇ ರೀತಿಯ ಯಾವುದಾದರೂ ಕೆಟ್ಟ ಪ್ರವೃತ್ತಿಗಳು ಅಂದರೆ ತಪ್ಪುಹುಡುಕುವುದು ದೂರುವುದು ತೀಕ್ಷ್ಣವಾಗಿ ನಿಂದಿಸುವುದು ಮತ್ತು ಅವಹೇಳನ ಮಾಡುವುದು ಇವುಗಳು ಬೇರೆ ಬೇರೆ ಮಟ್ಟದಲ್ಲಿ ಇರುವುದೋ ಇಲ್ಲವೋ ಎಂಬುದನ್ನು ಚೆನ್ನಾಗಿ ಗಮನಿಸಬೇಕು. ಪ್ರೀತಿಯಿಲ್ಲ - ದಿರುವಿಕೆ ಸ್ವಪ್ರತಿಷ್ಠೆಯೆಂಬ ತೊಲೆಗಳು ತಮ್ಮ ಮನೋನೇತ್ರಗಳಲ್ಲಿ (ಆತ್ಮಿಕ ಕಣ್ಣುಗಳಲ್ಲಿ) ಇರುವ ಕುರುಹುಗಳೇನಾದರೂ ಕಂಡುಬಂದಲ್ಲಿ ಅವರು ಕೂಡಲೇ ಆ ದಿವ್ಯ ವೈದ್ಯನ ಬಳಿಗೆ ಹೋಗಿ, ತಾವು ತ್ವರಿತವಾಗಿ ತಮ್ಮ "ಸಹೋದರರಿಗೆ" ನಯವಿನಯ ಕನಿಕರಗಳುಳ್ಳ ಸಹಾಯಕರುಗಳು ಆಗುವಂತಾ-ಗಲು, ಇಂಥವುಗಳನ್ನು ಪೂರ್ಣವಾಗಿ ತೊಡೆದು ಹಾಕಿಸಿಕೊಂಡ ವರಾಗಬೇಕು. ಮತ್ತು ಸಾವಿರ ವರುಷದ (ಆಳ್ವಿಕೆಯ) ಕಾಲದ ಆ

ಮಹಾ ಕಾರ್ಯದಲ್ಲಿ ಅಂದರೆ ಕರುಣೆಯುಳ್ಳವರೂ ಕನಿಕರವುಳ್ಳ–ವರೂ ಆಗಿ ಕುರುಡಾದ ಕಣ್ಣುಗಳನ್ನು ತೆರೆಯಲು ಮತ್ತು ಪಾಪದಿಂದ ಉಂಟಾದ ಗಾಯಗಳನ್ನು ವಾಸಿಮಾಡಲು ಸಫಲರಾದ ಶಸ್ತ್ರಚಿಕಿತ್ಸಕರೂ ವೈದ್ಯರೂ ಆಗುವುದಕ್ಕಾಗಿ ಅವರು ಸಿದ್ಧವಾಗಬೇಕು.

## ಮುಳ್ಳಿನ ಗಿಡಗಳಿಗೆ ದ್ರಾಕ್ಷೇಗೊಂಚಲನ್ನು ಕಟ್ಟುವುದು.

ಯಾರು ನಮ್ಮ ಒಡೆಯನ ಹೆಜ್ಜೆಯ ಜಾಡಿನಲ್ಲಿ ನಮ್ಮೊಡನೆ ನಡೆಯಲು ಪರಿಶ್ರಮಿಸುವುದನ್ನು ತೋರ್ಪಡಿಸಿ ಆ ವಿಷಯದಲ್ಲಿ ಪ್ರಾಮಾಣಿಕವಾಗಿರುವುದರ ಸಾಕ್ಷಾಧಾರಗಳನ್ನು ನೀಡುತ್ತಾರೋ ಆ "ಸಹೋದರರ" ಬಗ್ಗೆ ನಾವು ತೀರ್ಪುಮಾಡಬಾರದಾದರೂ ನಾವು ಮನುಕುಲದ ವಿಷಯದಲ್ಲಿ ಸಾಮಾನ್ಯವಾಗಿರುವ ಕೆಲವು ಸಂಗತಿಗಳ ವಿಷಯವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳ–ಬೇಕಿರುವುದು. "ಅವರ ಫಲಗಳಿಂದ" ನಾವು ಮುಳ್ಳುಗಿಡಗಳಿಂದ ದ್ರಾಕ್ಷೇಹಣ್ಣುಗಳನ್ನು ಮತ್ತು ಮುದ್ದುಕುಣಿಕೆಗಿಡಗಳಿಂದ ಅಂಜೂರಗಳನ್ನೂ ಬೇರ್ಪಡಿಸುವುದನ್ನು ತಿಳಿದುಕೊಳ್ಳಬೇಕು" ಎಂದು ಕರ್ತನು ತಿಳಿಸಿದ್ದಾನೆ. ಸ್ವಾರ್ಥಪರರೂ ಶರೀರಭಾವ–ದವರೂ ಆಗಿದ್ದು ಎಂದೂ ದೇವರಾತ್ಮನಿಂದ ಹುಟ್ಟದೆ ಭೂಲೋಕದ ಕಾರ್ಯಗಳಲ್ಲಿ ಮನಸ್ಸಿಡುವ "ನಾಯಿಗಳು" ಮತ್ತು "ಹಂದಿಗಳು" ಇವರಿಗೆ ಹಾಗೂ ಸಹೋದರರಿಗೆ ಇರುವ ವ್ಯತ್ಯಾಸಗಳನ್ನು ನಾವು ಅರಿತುಕೊಳ್ಳಬೇಕೆಂಬುದನ್ನು ಅಥವಾ ಇವರ ವಿಷಯದಲ್ಲಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಿರುವು–ದೆಂಬುದನ್ನು ಆತನು ಈ ಪ್ರಸಂಗದಲ್ಲಿ ತಿಳಿಸಿರುವನು. ನಾವು ಇವುಗಳನ್ನು ಬಾಹ್ಯ ಸಾಕ್ಷ್ಯಾಧಾರಗಳಿಂದ ತಿಳಿದುಕೊಳ್ಳಬಹುದು, ಏಕೆಂದರೆ "ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ:" ಮತ್ತು ಅವನು ಆತನವನಾಗದೆ ಆ ದ್ರಾಕ್ಷೇಬಳ್ಳಿಯ ಕೊಂಬೆಯಲ್ಲದಿದ್ದಲ್ಲಿ ಅವನಿಗೆ ದಾಕ್ಷೇಹಣ್ಣುಗಳ ಗೊಂಚಲನ್ನು ಕಟ್ಟುವದರಲ್ಲಿ ನಮ್ಮ ಸಮಯವನ್ನು ವ್ಯರ್ಥಮಾಡಬಾರದು. ನಾವು ಸ್ವಾರ್ಥತೆಯಿಂದ ಕೂಡಿದ ಪರಿವರ್ತನೆಯಾಗದ ಲೋಕದಲ್ಲಿ ನಿಜವಾದ ಪವಿತ್ರಾತ್ಮವು ಅಣುಕಿಸಲ್ಪಡುವುದಕ್ಕೆ ಸಹಾಯ ಮಾಡುವುದರ ಮೂಲಕ ಇತರರನ್ನಾಗಲೀ ಅಥವಾ ನಮ್ಮನ್ನಾಗಲೀ ಮೋಸಗೊಳಿಸುವ ಪ್ರಯತ್ನವನ್ನು ಮಾಡಬಾರದು. ನಾಯಿಗಳು ಕಟುಕನ ಅಂಗಡಿಯಲ್ಲಿ ದೊರೆಯುವ ಮಾಂಸಗಳಿಗೂ ಕೇವಲ ಯಾಜಕರು ಮಾತ್ರ ತಿನ್ನಲಾಗುವ ಯಜ್ಞಾರ್ಪಿತವಾಗಿ ಪರಿಶುದ್ಧವಾದಂಥ ಮಾಂಸಭಾಗಗಳಿಗೂ ಇರುವ ವ್ಯತ್ಯಾಸಗಳನ್ನು ಗ್ರಹಿಸುವವೆಂಬು–ದನ್ನು ನಿರೀಕ್ಷಿಸುವುದಕ್ಕಿಂತಲೂ ಹೆಚ್ಚಾಗಿ ಕೇವಲ ಪ್ರಾಪಂಚಿಕ ವಿಷಯಗಳನ್ನೇ ಮಾತ್ರ ಗಣನೆಗೆತೆಗೆದುಕೊಳ್ಳುವ ಈ ವರ್ಗದ ಜನರು ಪರಿಶುದ್ಧವಾಗಿರುವ ಪರಲೋಕದ ಸಂಗತಿಗಳನ್ನು ಪರಿಗಣನೆ ಮಾಡುವರೆಂಬುದನ್ನು ನಿರೀಕ್ಷಿಸುವಂತಿಲ್ಲ. ಕೇವಲ ಹಣದ ಹಾಗೂ ಈ ಜೀವಿತದಲ್ಲಿನ ಲೌಕಿಕ ಸಂಗತಿಗಳನ್ನೇ ಪರಿಗಣನೆಮಾಡುವ ಹಂದಿಗಳಂಥ ಹಾಗು (ಲೌಕೀಕವಾದವು –ಗಳಿಗೆ) ಹಾತೊರೆಯುವಂಥ ಸ್ವಭಾವವುಳ್ಳವರು ಪವಿತ್ರಾತ್ಮನಿಂದ ಹುಟ್ಟಿದವರಾದ ಸಹೋದರರ ದೃಷ್ಟಿಯಲ್ಲಿ ಅಮೂಲ್ಯವಾದ ಮುತ್ತುಗಳಂತಿರುವ (ಸುವಾರ್ತಾ) ಸತ್ಯಾರ್ಥಗಳನ್ನು ಗ್ರಹಿಸು–ವರೆಂಬುದನ್ನು ನಿರೀಕ್ಷಿಸುವಂತಿಲ್ಲ.

ನಾವು ಪರಿಶುದ್ಧವಾದ ಸಂಗತಿಗಳನ್ನು ಕರ್ತನಿಗೆ ಪ್ರತಿಷ್ಠಿತ ರಲ್ಲದ ಜನರ ಗಮನಕ್ಕೆ ತರಲೇಬಾರದೆಂಬದು ಇದರ ಅರ್ಥವಲ್ಲ; ಆದರೆ ಇದರ ಅರ್ಥವೇನೆಂದರೆ ಕೇವಲ ನೀತಿಸತ್ಯಗಳ ವಿಷಯವಾದ ಮೂಲತತ್ವಗಳ ಪ್ರಸ್ತುತಪಡಿಸುವಿಕೆಯೇ ಅವರು ಸತ್ಯವನ್ನು ಆಲಿಸುವ ಕಿವಿಯುಳ್ಳವರೋ ಅಥವಾ ಇಲ್ಲದವರೋ ಎಂಬುದನ್ನು ಶೀಘ್ರವಾಗಿ ತೋರ್ಪಡಿಸುವುದೆಂಬುದು. ಕೇಳುವ ಕಿವಿಯಿರುವುದು ಕಂಡುಬಂದಾಗ ನಾವು ಅದಕ್ಕೆ ಸೇವೆಮಾಡಲು ಶ್ರದ್ಧೆಯನ್ನು ತೋರಿಸಬೇಕು ಮತ್ತು ಕಿವಿಗಳು ಮುಚ್ಚಲ್ಪಟ್ಟಿರು ವುದನ್ನು ಕಂಡುಬಂದಾಗ ದೇವಜನರಾಗಿ ದೈವಿಕ ಸ್ವಭಾವವನ್ನು ಹೊಂದಿ ಆ ರಾಜ್ಯದಲ್ಲಿ ಸಹಬಾಧ್ಯರಾಗಲು ನೀಡಲಾದ ಸುವಾರ್ತಾ ಯುಗದ ಈ ಕರೆಯ ಸಂಬಂಧದಲ್ಲಿ ನಡೆಸುವ ನಮ್ಮ ಪರಿಶ್ರಮಗಳು ಫಲವನ್ನು ನೀಡಲಾರದೆಂಬುದನ್ನು ತಿಳಿದು ನಮ್ಮ ಸಮಯವನ್ನು ಇದಕ್ಕಾಗಿ ವ್ಯರ್ಥಮಾಡುವುದನ್ನು ನಿಲ್ಲಿಸಬೇಕು. ಸಾವಿರ ವರುಷದ (ಆಳ್ವಿಕೆಯ) ಕಾಲವು ಶೀಘ್ರದಲ್ಲಿ ಉದಯ ವಾಗುವುದು ಮತ್ತು ಅದು ಕಠಿಣ ಹೃದಯಗಳನ್ನು ಒಡೆದು ಹಾಕಲು ಕುರುಡರ ಕಣ್ಣುಗಳನ್ನು ತೆರೆಯಲು ಮತ್ತು ಕಿವುಡರ ಕಿವಿಗಳನ್ನು ತೆರೆಯಲು ದೇವರು ನೇಮಿಸಿದ ಕಾಲವಾಗಿರುವುದು.

"ನಾಯಿಗಳಿಗೆ" ಮತ್ತು "ಹಂದಿಗಳಿಗೆ" ಕೆಲವು ವಿಷಯವಾಗಿ ಮಾಡಿದ ಪರಿಶ್ರಮಗಳು ಅಂದರೆ ಮುಳ್ಳಿನ ಗಿಡಗಳು ಹಾಗೂ ದತ್ತೂರಿ ಗಿಡಗಳಿಗೆ ಕ್ರಿಸ್ತನ ಆತ್ಮದಿಂದಾದ ಫಲಗಳ ಅನೇಕ ವಿಧವಾದ ಅನುಕರಣೆಗಳನ್ನು ಕಟ್ಟುವುದು ಮತ್ತು ಕ್ರಿಸ್ತನ ಮನೆತನದವರಿಗೆ ನೇಮಕವಾಗಿರುವ ಆಹಾರವನ್ನು ಅವರ ನಾಲಿಗೆಗಳಿಗೆ ರುಚಿಸುವಂತೆ ಮಾಡುವುದು ನಿಜವಾಗಿಯೂ ಕರ್ತನ ಧ್ಯೇಯೋದ್ದೇಶಗಳಿಗೆ ಖಚಿತವಾದ ಹಾನಿಯುಂಟು ಮಾಡುವವುಗಳಾಗಿವೆ. "ನಾಯಿಗಳ" ವರ್ಗಕ್ಕೆ ಸೇರಿದವರಿಗೆ ಆತ್ಮಿಕ ಆಹಾರವನ್ನು ನೀಡುವ ಪ್ರಯತ್ನದಲ್ಲಿ "ಸಹೋದರರು" ಅಲಕ್ಷ್ಯವಾಡಲ್ಪಟ್ಟಿರುವರು; "ಹಂದಿಗಳಿಗೆ" ಮುತ್ತುಗಳ ವಿಷಯದಲ್ಲಿ ಆಸಕ್ತಿಯನ್ನು ಉಂಟುಮಾಡುವ ಪ್ರಯತ್ನದಲ್ಲಿ ಮದಲಗಿತ್ತಿಯು ಮದಲಿಂಗನಿಗಾಗಿ ತನ್ನನ್ನು ಸಿದ್ಧಪಡಿಸಿಕೊಳ್ಳುವಂತೆ ಮಾಡುವುದನ್ನೂ, ಆಕೆಯನ್ನು ಸತ್ಯವೆಂಬ ಮುತ್ತುಗಳಿಂದ ಭೂಷಿತಳಾಗುವಂತೆ ಮಾಡುವುದನ್ನೂ ಅಲಕ್ಷಿಸಲಾಗಿರುವುದು. ದ್ರಾಕ್ಷೆಯ ಸಹಜವಾದ ಫಲಗಳನ್ನು ಮುಳ್ಳಿನ ಗಿಡಗಳಿಗೆ ಕಟ್ಟುವ ಕಾರ್ಯದಿಂದ ನಿಜವಾದ ದ್ರಾಕ್ಷೇಗಿಡವು ಒಳ್ಳೇ ಫಲಗಳನ್ನು ನೀಡುವುದರ ಬೆಲೆ ಮತ್ತು ಇದಕ್ಕೂ ಮುಳ್ಳುಗಿಡಗಳಿಗೂ ಇರುವ ದೊಡ್ಡ ವ್ಯತ್ಯಾಸವು ಬಹಳವಾಗಿ ಮೊಬ್ಬಾಗುವಂತಾಗಿವೆ. ನಾವು (ಸತ್ಯವೇದದಲ್ಲಿ) ಬರೆಯಲ್ಪಟ್ಟಿರುವ ವಿಷಯಗಳಿಗಿಂತಲೂ ಹೆಚ್ಚಾದ ಜ್ಞಾನವನ್ನು ತೋರ್ಪಡಿಸದೇ ಇರುವವರಾಗೋಣ. ಈಗಿನ ಕಾಲಕ್ಕೆ ದೇವರು ನೇಮಕಮಾಡಿದ ಕೆಲಸಗಳನ್ನು ಈ ಕಾಲದಲ್ಲಿ ನಡೆಸುವವರಾಗಿ ಮತ್ತು ಎಲ್ಲಾ ಮಾನವರಿಗೆ ಸಾಮಾನ್ಯವಾಗಿರುವ ಕಾರ್ಯಗಳನ್ನು ಆತನು ನೇಮಕಮಾಡಿದ (ಮುಂದಿನ) ಕಾಲಕ್ಕೆ ಬಿಟ್ಟುಬಿಡೋಣ.

## ಪ್ರೀತಿರಹಿತವಾದ ಸ್ವಪ್ರತಿಷ್ಠೆಯನ್ನು ಜಯಿಸುವುದು ಹೇಗೆ?

"ಸಹೋದರರು" ಕಲಿಯಬೇಕಿರುವ ಪಾಠಗಳ ವಿಷಯಕ್ಕೆ ಹಿಂದಿರುಗಿದವನಾಗಿ ಹಾಗೂ ಒಬ್ಬರನ್ನೊಬ್ಬರು ತೀರ್ಪು ಮಾಡಿಕೊಳ್ಳುವ ಪ್ರವೃತ್ತಿಯಲ್ಲಿ ಮಾಡಿಕೊಳ್ಳಬೇಕಾದ ತಿದ್ದುಪಾಟನ್ನು ಬಹುಶಃ ನಮ್ಮ ಕರ್ತನು ವಿಶೇಷವಾಗಿ ತನ್ನ ಮನಸ್ಸಿನಲ್ಲಿಟ್ಟುಕೊಂಡು ಈ ತಪ್ಪಾದ ಗುಣಲಕ್ಷಣಗಳನ್ನು ಹೇಗೆ ವಿಸರ್ಜಿಸಬೇಕೆನ್ನುವ ಬಗ್ಗೆ ಬೋಧನೆ ಮಾಡಿದ್ದಾನೆ. ನಾವು ಇತರರ ವಿಷಯವಾಗಿ ತೀರ್ಪುಮಾಡುವುದನ್ನು ತಡೆಯುವ ಮಟ್ಟಕ್ಕೆ ಅಗತ್ಯವಿರುವ ಪ್ರೀತಿ ಮತ್ತು ಕನಿಕರಗಳನ್ನು ಹೊಂದುವಂತಾಗಲು ಮತ್ತು ನಮ್ಮಲ್ಲಿರುವ ನ್ಯೂನ್ಯತೆಗಳನ್ನು ತಿದ್ದಿಕೊಳ್ಳಲು ಸಹಾಯಕವಾಗುವಂಥವುಗಳನ್ನು ಕರ್ತನಿಂದ ಕೇಳಿಕೊಳ್ಳಬೇಕಿರುವುದು. ನಾವು ಪ್ರಮಾಣಿಕವಾಗಿಯೂ ನಿಜವಾಗಿಯೂ ಕೇಳಿಕೊಳ್ಳುವುದಾದರೆ ಈ ನಿಟ್ಟಿನಲ್ಲಿ ಆತನ ಕೃಪಾಸಹಾಯವನ್ನು ಪಡೆದುಕೊಳ್ಳುವೆವು. ಇದನ್ನು ಕೇಳಿಕೊಳ್ಳುವಾಗ ನಮಲ್ಲಿ ಕೊರತೆಯಾಗಿರುವ ಸಂಗತಿಗಳನ್ನು ಅಂದರೆ ಪರಿಶುದ್ಧಾತ್ಮನ ಪ್ರೀತಿಯು ನಮ್ಮ ಹೃದಯಗಳಲ್ಲಿ ತುಂಬಲ್ಪಡಲು ಕೇಳಿಕೊಳ್ಳುವುದು ನಮ್ಮ ಕರ್ತವ್ಯ ಮತ್ತು ನಾವು ಇದನ್ನು ಹುಡುಕುವವರಾದರೆ ಇವುಗಳನ್ನು ನಾವು ಕಂಡುಕೊಳ್ಳುವೆವು. ನಾವು ಸತತವಾಗಿ ಪ್ರಯತ್ನಿಸುವುದರ ಮೂಲಕವಾಗಿಯೂ ಮತ್ತು ಎಡೆಬಿಡದೆ ಪ್ರಾರ್ಥಿಸುವುದರ ಮೂಲಕವಾಗಿಯೂ ಕರ್ತನ ಕೃಪಾಶೀರ್ವಾದವೆಂಬ ಭಂಡಾರದ ಬಾಗಿಲನ್ನು ತಟ್ಟುವವರಾಗಬೇಕು. ಮತ್ತು ಇದರ ಫಲವಾಗಿ ಅದು ಖಂಡಿತವಾಗಿ ತೆರೆಯಲ್ಪಡುವುದು. ಕೇಳಿಕೊಳ್ಳುವದು ಹುಡುಕುವದು ತಟ್ಟುವದು ಇವುಗಳಲ್ಲಿ ಕರ್ತನ ಮೇಲಿನ ನಂಬಿಕೆಯೂ ಅಡಕವಾಗಿರುವುದು. ಇದು ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿದ್ದು ಇದರಲ್ಲಿ ಕರ್ತನ ಚಿತ್ತಕ್ಕೆ ನಮ್ಮನ್ನು ಪೂರ್ಣವಾಗಿ ಹೊಂದಿಸಿಕೊಳ್ಳಲು ಬಯಸುವುದರಲ್ಲಿ ನಾವು ನಂಬಿಗಸ್ತರಾಗಿರುವುದೂ ಸಹ ಅಡಕವಾಗಿದೆ. ಮತ್ತು ಹೃದಯದ ಈ ಒಳ್ಳೆಯ ಬಯಕೆಗಳು ಆಗ ಈಡೇರುವವು. ಯಾಕೆಂದರೆ ಭೂಲೋಕ ಸಂಬಂಧದ ತಂದೆಯು ಭೂಲೋಕ ಸಂಬಂಧವಾದ ಆಹಾರಕ್ಕಾಗಿ ತನ್ನ ಮಕ್ಕಳು ಮಾಡುವ ಬೇಡಿಕೆಗಳಿಗೆ ಸ್ಪಂದಿಸುವ ಪ್ರಕಾರ ಕರ್ತನು ಸಹ ತನ್ನ ಮಕ್ಕಳ ಕೃಪಾಸಹಾಯದ ಪ್ರತಿಯೊಂದು ಅಗತ್ಯತೆಗಳಿಗೆ ಸ್ಪಂದಿಸಿ ಸಹಾಯ ಮಾಡುವನು. ನಾವು ಒಳ್ಳೆಯ ಸಂಗತಿಗಳ ವಿಷಯವಾಗಿ ಕೇಳಿಕೊಂಡಾಗ ಆತನು ನಮಗೆ ಮೋಸ ಮಾಡುವುದಿಲ್ಲ, ಇಲ್ಲವೇ ಕೆಟ್ಟದ್ದನ್ನು ದಯಪಾಲಿಸುವುದಿಲ್ಲ. ಆದರೆ ನಾವು ಬೇಡುವುದಕ್ಕಿಂತಲೂ ಆಲೋಚಿಸುವುದಕ್ಕಿಂತಲೂ ಉತ್ಕೃಷ್ಟವಾದುದನ್ನು ಹೇರಳವಾಗಿ ಅನುಗ್ರಹಿಸುವನು ಯಾಕೆಂದರೆ ಅಪರಿಪೂರ್ಣವಾದ ಮನುಷ್ಯ ತಂದೆಗಳಿಗಿಂತಲೂ ಪರಲೋಕದಲ್ಲಿರುವ ನಮ್ಮ ತಂದೆಯು ಉತ್ತಮನಾದವನು.

ಲೂಕನು ಈ ಪ್ರಸಂಗದ ವಿಷಯವಾಗಿ ಮಾಡಿರುವ ಉಲ್ಲೇಖನಗಳು (11:13) ತಿಳಿಸುವಂತೆ ಬೇಡಿಕೊಳ್ಳುವವರು ಹುಡುಕುವವರು ತಟ್ಟುವವರು ಇವರಿಗೆ ದೇವರು ಸಂತೋಷವಾಗಿ ಕೊಡುವ ಒಳ್ಳೆಯ ಸಂಗತಿಯೆಂದರೆ ಅದು ತನ್ನ ಪವಿತ್ರಾತ್ಮ. ಅಲ್ಲದೆ ಅಶುದ್ಧತೆ ಪ್ರೀತಿಯಿಲ್ಲದಿರುವಿಕೆ ಸ್ವಾರ್ಥಚಿಂತನೆ ತೀರ್ಪುಮಾಡುವಿಕೆ ಮತ್ತು ದೋಷ ಹುಡುಕುವಿಕೆ ಮುಂತಾದ ತೊಡೆದು ಹಾಕಬೇಕಿರುವ ಶರೀರಭಾವದ ಈ ಸಂಗತಿಗಳಿಗೆ ಪ್ರತಿಯಾಗಿ ಸರಿದೂಗಿಸಲು ಇದೇ ಸಂಪೂರ್ಣವಾಗಿ ಅವಶ್ಯವಿರುವುದು. ಇಂಥಾ ವಿಷವನ್ನು ಪರಿಹರಿಸುವ ಮದ್ದು ಎಂದರೆ ನಾವು ಪ್ರೀತಿಮಯ ಆತ್ಮವಾದ ಪವಿತ್ರಾತ್ಮದಿಂದ ತುಂಬಿದವರಾಗಿರುವುದು. ಏಕೆಂದರೆ "ಪ್ರೀತಿಯು ತನ್ನ ನೆರೆಯವನಿಗೆ ಯಾವ ಕೇಡೂ ಮಾಡುವುದಿಲ್ಲ;" ಪ್ರೀತಿಯು ತಾಳ್ಮೆಯುಳ್ಳದ್ದು, ಪ್ರೀತಿ ದಯೆತೋರಿಸುವುದು; ಇತರರಲ್ಲಿ ದೋಷ ಹುಡುಕಲು ಹಾಗೂ ತನ್ನ ದೋಷಗಳ ವಿಷಯದಲ್ಲಿ ಕುರುಡಾಗುವಂತಾಗಲು ಪ್ರೀತಿಯು "ಉಬ್ಬಿಕೊಳ್ಳುವುದಿಲ್ಲ;" ಅದು ಸ್ವಪ್ರಯೋಜನ ಚಿಂತಿಸುವಂತಾಗಿ ಇತರರನ್ನು ಸಾಮಾನ್ಯವಾಗಿ ಟೀಕಿಸುವುದು ದೋಷ ಹುಡುಕುವುದು "ಸಹೋದರರನ್ನು ಆಪಾದಿಸುವುದು" ಇವುಗಳನ್ನು ಮಾಡುವುದಿಲ್ಲ. ಪ್ರೀತಿಯು ಅನುಕಂಪವುಳ್ಳದ್ದಾಗಿಯೂ, ಸಹಾಯಕಾರಿಯೂ ಇರುವ ದೇವರ ಆತ್ಮವಾಗಿರುವುದು. – 1 ಕೊರಿಂಥ 13:4; ರೋಮಾ 13:10

## "ಆತನು ಯೇಸು ಕ್ರಿಸ್ತನ ಮೂಲಕ ತನಗೆ ಸಮರ್ಪಕವಾದದ್ದನ್ನು ನಮ್ಮಲ್ಲಿ ನಡಿಸಲಿ"

**– ಇಬ್ರಿಯ 13:21**

"ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ." "ಅಂತು" ಎನ್ನುವ ಶಬ್ಧವು ಇದಕ್ಕೂ ಮತ್ತು ಪಾಠದಲ್ಲಿ ಮೊದಲು ಹೇಳಿರುವ ಗುಣಲಕ್ಷಣಗಳಿಗೂ ಇರುವ ಸಂಬಂಧವನ್ನು ತೋರಿಸುತ್ತದೆ: ಇದು ಒಂದು ಪರೀಕ್ಷೆಯ ನಿಯಮದಂತ್ತಿದ್ದು ಈ ಮೂಲಕವಾಗಿ ನಾವು ಇತರರಲ್ಲಿರುವ ಉದ್ದೇಶ ಪ್ರೇರಣೆಗಳ ವಿಷಯದಲ್ಲಿ ಯಾವಾಗ ಮತ್ತು ಎಷ್ಟರ ಮಟ್ಟಿಗೆ ತಪ್ಪಾದ ತೀರ್ಮಾನಗಳನ್ನು ತೆಗೆದುಕೊಂಡಿರುವೆವೆಂಬುದನ್ನು ಮತ್ತು ಅಧಿಕಪ್ರಸಂಗತನದಿಂದ ಅವರ ಕಣ್ಣಿನಲ್ಲಿರುವ ರವೆಯನ್ನು ತೆಗೆಯುವ ಬಹು ಸೂಕ್ಷ್ಮವಾದ ಕಾರ್ಯವನ್ನು ಮಾಡಲು ಯತ್ನಿಸಿರುವುದನ್ನು ಗ್ರಹಿಸಿಕೊಳ್ಳಬಹುದು. ಆದುದರಿಂದ ಈ ವಚನವನ್ನು "ಸುವರ್ಣ ನಿಯಮ" ಎಂದು ತಿಳಿಯಲಾಗಿರುವುದು. ಈ ನಿಯಮವನ್ನು ತನ್ನ ಜನರು ತಮ್ಮ ಜೀವನದ ಎಲ್ಲಾ ನಡವಳಿಕೆಗಳಲ್ಲಿ ವಿಶೇಷವಾಗಿ "ಸಹೋದರರ" ಸಂಬಂಧದಲ್ಲಿ ಅವರೊಡನೆ ವರ್ತಿಸುವಾಗ ಬಳಸಿಕೊಳ್ಳಬೇಕೆಂದು ದೇವರು ಬಯಸುವನು. ನಾವು ಇತರರಲ್ಲಿ ದೋಷವನ್ನು ಹುಡುಕುವ ಅಥವಾ ಕಳಂಕವಿರುವುದನ್ನು ಎತ್ತಿಹಿಡಿಯುವ ಪ್ರವೃತ್ತಿಯುಳ್ಳವರಾದಲ್ಲಿ, ಇತರರನ್ನು ಖಂಡಿಸುವ ಅಥವಾ ಇತರರ ದೋಷಗಳ ಬಗ್ಗೆ ಟೀಕೆ ಮಾಡುವ, ಅಥವಾ ಅವರನ್ನು ನಿಷ್ಠುರವಾಗಿ ಕಾಣುವ ಪ್ರವೃತ್ತಿಯುಳ್ಳವರಾದಲ್ಲಿ ನಾವು ಹೀಗೆ ಮಾಡುವುದರ ಇಲ್ಲವೇ ಯೋಚಿಸುವುದರ ಔಚಿತ್ಯ ಅಥವಾ ಅನೌಚಿತ್ಯದ ವಿಷಯವಾಗಿ ನಾವು ಈ ಪ್ರಶ್ನೆಯನ್ನು ನಮ್ಮಲ್ಲಿ ಹಾಕಿಕೊಳ್ಳುವುದರ ಮೂಲಕ ಸಾಮಾನ್ಯವಾಗಿ ಇದನ್ನು ಅರಿತುಕೊಳ್ಳಬಹುದು: ನಾನು ಅವನೇ ಆದಲ್ಲಿ ಅಥವಾ ಅವನು

ನಾನೇ ಆದಲ್ಲಿ, ನಾನು ಆ ಸಹೋದರನು ನನ್ನ ವಿಷಯವಾಗಿ ಹೀಗೆ ಮಾಡುವುದಾಗಲಿ, ಹೇಳುವುದಾಗಲಿ, ಇಲ್ಲವೇ ಆಲೋಚಿಸುವುದಾಗಲಿ ಇಚ್ಛಿಸುವೇನೋ?

ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸಿದಾಗ ಸಾಧಾರಣವಾಗಿ ಇದು ಒಂದು ಮಾರ್ಗದರ್ಶಿಯಾಗುತ್ತದೆ. ಆದರೂ ಕರ್ತನ ಜನರು ನಿಂದನೆ ಮಾಡಲು, ಕೆಟ್ಟದ್ದಾಗಿ ಮಾತನಾಡಲು, ಹರಟೆ ಮಾಡಲು ಒಂದು ನೆಪವನ್ನು ಹುಡುಕುವುದರಲ್ಲಿ ಉತ್ಸುಕರಾದಂತೆ ಕಂಡುಬಂದಿರುವ ನಿದರ್ಶನಗಳನ್ನೂ ನಾವು ತಿಳಿದಿದ್ದೇವೆ. ಅವರು ಸುವರ್ಣ ನಿಯಮವನ್ನು ನೆನೆಯುವರಾದರೂ ಮತ್ತು ಅದಕ್ಕೆ ವಿಧೇಯರಾಗಲು ಆಂತರ್ಯದಲ್ಲಿ ಇಚ್ಛಿಸಿದರೂ ಈ ನಿಯಮವನ್ನು ಉಲ್ಲಂಘನೆ ಮಾಡಲು ತಮ್ಮ ವಿಷಯದಲ್ಲಿ ಕೆಲವು ವಿಧವಾದ ನೆಪಗಳನ್ನು ಕಂಡುಕೊಂಡಿರುವರು. ಪ್ರಿಯ ಸಹೋದರರೇ, ನಾವು ದೇವರ ವಾಕ್ಯವನ್ನು ಮೋಸಕರವಾಗಿ ಬಳಸದಂತೆಯೂ, ಅದರ ನಿಜವಾದ ಪ್ರಾಮುಖ್ಯತೆಯ ವಿಷಯದಲ್ಲಿ ನಾವು ಕುರುಡಾಗಿ ನಮ್ಮನ್ನು ನಾವೇ ಮೋಸಗೊಳಿಸಿಕೊಳ್ಳದಂತೆಯೂ, ನಾವು ನಮ್ಮ ಮನಸಾಕ್ಷಿಯನ್ನು ದುರ್ಬಲಗೊಳಿಸಿ ಅದನ್ನು ಹಾಳುಮಾಡಿ ಕೊಳ್ಳದಂತೆಯೂ, ಕರ್ತನ ನಿಯಮವನ್ನು ಹೇಗೆ ನಿಭಾಯಿಸಬೇಕೆಂಬ ವಿಷಯದಲ್ಲಿ ಬಹು ಜಾಗರೂಕರಾಗಿರೋಣ; ಹೀಗೆ ನಾವು ಪವಿತ್ರಾತ್ಮದಾನಕ್ಕಾಗಿ ಮಾಡುವ ನಮ್ಮ ಪ್ರಾರ್ಥನೆಗೆ ಅಡ್ಡಿಯನ್ನು ತಂದುಕೊಳ್ಳದಿರೋಣ. ಏಕೆಂದರೆ ಪವಿತ್ರಾತ್ಮವು ನಮ್ಮ ಹೃದಯಕ್ಕೆ ಹರಿದುಬರುವುದು ಆ ಮಾರ್ಗವು ತೆರೆಯಲ್ಪಟ್ಟಾಗ ಮಾತ್ರ; ಮತ್ತು ಈ ಸುವರ್ಣ ನಿಯಮವನ್ನು ಸತತವಾಗಿ ಪೂರ್ಣರೀತಿಯಲ್ಲಿ ಕೈಗೊಂಡು ನಡೆದಾಗ ಮಾತ್ರ ಆ ಮಾರ್ಗವು ತೆರೆಯಲಡುವುದು. ಈ ಸುವರ್ಣ ನಿಯಮವು ಮತ್ತು ಈ ಎಲ್ಲಾ ಪಾಠಗಳು ಬಹು ಹೊಸದಾಗಿ ಕಾಣುವದಕ್ಕೆ ಕಾರಣ ಈ ದಿವ್ಯ ಬೋಧಕನು ಇದನ್ನು ಹಿಂದೆಂದೂ ಇಲ್ಲದಂಥಾ ಸ್ಪಷ್ಟವಾದ ರೀತಿಯಲ್ಲಿ ಹಾಗು ಸೂಕ್ಷ್ಮವಾದ ಬೆಳಕಿನಲ್ಲಿ ವಿವರಣೆಮಾಡಿರುವುದು. ಹೀಗಿದ್ದರೂ ಇವುಗಳು ಮೋಶೆಯ ಧರ್ಮಶಾಸ್ತ್ರದ ಹಾಗು ಪ್ರವಾದಿಗಳ ಮೂಲಕ ದೇವರು ಮಾಡಿರುವ ಉಪದೇಶಗಳ ತಾತ್ಪರ್ಯ ಅಥವಾ ಸಾರಾಂಶವಾಗಿದ್ದವು.

## ದಾರಿಯ ಬಿಕ್ಕಟ್ಟು.

ನಮ್ಮ ನಡೆ ಮಾತ್ರವಲ್ಲದೆ ನಮ್ಮ ನುಡಿ ಮತ್ತು (ನಮ್ಮ ನಡೆನುಡಿಗಳು ಚಿಮ್ಮುವ ಬುಗ್ಗೆಯಾಗಿರುವ) ಆಲೋಚನೆಗಳ ವಿಷಯವಾಗಿಯೂ ಸಹ ಎಚ್ಚರವಹಿಸಿದ ಇಂಥ ಒಂದು ಜೀವಿತವು ಒಂದು ಅತಿ "ಇಕ್ಕಟ್ಟಾದ ಮಾರ್ಗ" ಅಂದರೆ ಒಂದು ಕಷ್ಟಕರವಾದ ಮಾರ್ಗವಾಗುದೆಂದು ನಮ್ಮ ಕರ್ತನು ತಿಳಿಸಿರುವನು. ಆದರೂ ಈಗ ಸುವಾರ್ತೆಯಲ್ಲಿ ನೀಡಲಾದ ಕರೆಯ ಮೂಲಕವಾಗಿ ನಮ್ಮೆದುರಿನಲ್ಲಿ ಇಡಲಾದ ಆ ಜೀವಕ್ಕೆ ಸೇರಿ ಆ ರಾಜ್ಯದ ಸಂತೋಷಗಳಲ್ಲಿ ಭಾಗಿಗಳಾಗುವುದನ್ನು ನಿರೀಕ್ಷಿಸಲು ಇರುವುದು ಇದೊಂದೇ ಮಾರ್ಗ. ವಿಶಾಲ ಮಾರ್ಗವು ಅಂದರೆ ಸರಳವಾದ ಸ್ವಾರ್ಥವುಳ್ಳ ಪ್ರಾಪಂಚಿಕವಾದ ಮಾರ್ಗವು ಆ ರಾಜ್ಯಕ್ಕೆ ನಡೆಸುವುದಿಲ್ಲ; ಬದಲಾಗಿ ಅದು ಮರಣಕ್ಕೆ ಅಂದರೆ ಎರಡನೆಯ ಮರಣಕ್ಕೆ, ಪೂರ್ಣವಾದ ನಾಶನಕ್ಕೆ ನಡೆಸುವುದು. ಬಹು ಮಂದಿ ಈ ಮಾರ್ಗದಲ್ಲಿ ಈಗ ಸಾಗುತ್ತಿರುವರು, ಮತ್ತು ಆ ರಾಜ್ಯಕ್ಕೆ ಸೇರಿ ಅದರ ಪ್ರಭಾವ ಮಾನ ನಿರ್ಲಯತ್ವಗಳನ್ನು ಪಡೆಯಲು ನೇಮಕವಾಗಿರುವ ಆ ಇಕ್ಕಟ್ಟಾದ ಬಾಗಿಲನ್ನು ಮತ್ತು ಬಿಕ್ಕಟ್ಟಾದ ದಾರಿಯನ್ನು ಕಂಡುಕೊಂಡು ಅದರೊಳಗೆ ಹೋಗುವವರು ಕೆಲವೇ ಕೆಲವರು ಮಾತ್ರ.

ಹೀಗಿರಲು ವಿಶಾಲ ಮಾರ್ಗದಿಂದ ಮತ್ತು ಲೋಕವು ಸಾಗುತ್ತಿರುವ ನಾಶನದಿಂದ ತಪ್ಪಿಸಿಕೊಳ್ಳಲು ಈಗಿನ ಒಂದು ಕಾಲದಲ್ಲಿ ಮಾತ್ರ ಯಾವುದೇ ಅವಕಾಶವನ್ನು ನೀಡಲಾಗಿರುವು–ದೆಂಬುದನ್ನು ಹೇಳುವುದಾಗಲಿ ಅಥವಾ ಅನ್ವಯಿಸುವುದಾಗಲಿ ಇರುವುದಿಲ್ಲ. ಆದಾಗ್ಯೂ ಕೇವಲ ಒಂದೇ ಮಾರ್ಗವು ಈಗ ತೆರೆಯಲಾಗಿರುವುದು. ಕರ್ತನ ವಾಕ್ಯವು ಬೇರೆಡೆಯಲ್ಲಿ ನಮಗೆ ತೋರಿಸಿಕೊಟ್ಟಿರುವುದೆಂದರೆ, ಇಕ್ಕಟ್ಟಾದ ಮಾರ್ಗವನ್ನು ಕಂಡುಕೊಂಡು ಅದರಲ್ಲಿ ನಡೆಯವವರನ್ನು ಒಳಗೊಂಡಿರುವ, ಕ್ರಿಸ್ತನ ದೇಹವೂ ಮದಲಗಿತ್ತಿಯೂ ಆದುಕೊಂಡ ಸಭೆಯೂ ಆಗಿರುವ ಆಯಲ್ಪಟ್ಟ ಚಿಕ್ಕ ಹಿಂಡನ್ನು ಮಾನವರೊಳಗಿಂದ ಆದುಕೊಂಡು ವಿಮೋಚಕನೊಂದಿಗೆ ಪ್ರಭಾವಸ್ಥಾನಕ್ಕೆ ಸೇರಿಸಲ್ಪಟ್ಟ ನಂತರ ಕರ್ತನ ಏರ್ಪಾಡಿನಲ್ಲಿ ಒಂದು ಕಾಲವು ಬರುವದು ಅಲ್ಲಿ ಒಂದು ಭವ್ಯವಾಗಿರುವ ಪರಿಶುದ್ಧವಾದ ರಾಜಮಾರ್ಗವು ಮಾನವರೆಲ್ಲರಿಗೆ ತೆರೆಯಲ್ಪಡುವುದು; ಅದು ಸಾವಿರ ವರುಷದ (ಆಳ್ವಿಕೆಯ) ಕಾಲವಾಗಿರುವುದು. ಅದು ಮೇಲೇರುವ ಒಂದು ಮಾರ್ಗವಾಗಿರುವುದು, ಇಳಿಮುಖದ ಮಾರ್ಗವಲ್ಲ. ಆದುದರಿಂದ ಅದರಲ್ಲಿ ನಡೆದು ಮೇಲೇರಿ ಮತ್ತು ಸಂಪೂರ್ಣವಾಗಿ ಪೂರ್ವದ ಸ್ಥಿತಿಗೆ ಬರುವಂತಾಗಲು ಪರಿಶ್ರಮ ವಹಿಸಬೇಕಾದ ಅಗತ್ಯವಿರುವದು. ಅಂತ್ಯದಲ್ಲಿ ಇದಕ್ಕೆ ಇಡಲಾದ ಬಹುಮಾನವು ಈಗ ದೇವರ ಸ್ವಕೀಯ ಜನರಾದ ಆಯಲ್ಪಟ್ಟ ಸಭೆಯ ಮುಂದೆ ತೆರೆಯಲಾಗಿರುವ ಇಕ್ಕಟ್ಟಾದ ಮಾರ್ಗದ, ಕಷ್ಟಕರ ಮಾರ್ಗಕ್ಕಿರುವ ಬಹುಮಾನಕ್ಕಿಂತಲೂ ಭಿನ್ನವಾಗಿರುವುದು. ಅದು ಒಂದು ನೀತಿಮಾರ್ಗವಾಗಿರುವದು; ಆದರೆ ಅದು ಈಗಿನ ಇಕ್ಕಟ್ಟಾದ ಮಾರ್ಗವಾಗಿರುವ ಯಜ್ಞಾರ್ಪಣೆಯ ಮಾರ್ಗವಲ್ಲ. ಹೀಗೆ ಈ ಯಜ್ಞಾರ್ಪಣೆಯ ಮಾರ್ಗವು "ರಾಜವಂಶದ ಯಾಜಕರನ್ನು" ಆಯ್ಕೆ ಮಾಡುತ್ತಿರುವುದು. ಅವರಲ್ಲಿ ಪ್ರತಿಯೊಬ್ಬನೂ ತಾನು ಕರೆಯಲ್ಪಟ್ಟದ್ದನ್ನೂ ಆಯಲ್ಪಟ್ಟದನ್ನೂ ದೃಢಪಡಿಸಿಕೊಳ್ಳಲು ತನ್ನ ದೇಹವನ್ನು ಒಂದು ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳಬೇಕು.

ಆ ಭವ್ಯವಾದ ಸಾವಿರ ವರುಷದ (ಆಳ್ವಿಕೆಯ) ಕಾಲದ ರಾಜಮಾರ್ಗದಲ್ಲಿ ಯಾವ ಸಿಂಹವೂ ಇರದು; ಒಳ್ಳೆಯದು ಮಾಡುವದನ್ನು ಹಾನಿಮಾಡಲು ಅಥವಾ ನಾಶಗೊಳಿಸಲು ಇಲ್ಲವೇ ಅದನ್ನು ಬೆದರಿಸುವಂತದ್ದು ಯಾವುದೂ ಇರದು; ನೀತಿವಂತರಾಗಿ ನಡೆದು ಕರ್ತನೊಂದಿಗೆ ಸಾಮರಸ್ಯಕ್ಕೆ ಹಿಂದಿರುಗುವವರನ್ನು ದುರ್ಮಾರ್ಗಕ್ಕೆ ಎಳೆಯುವಂಥದ್ದು ಅಥವಾ ಬೇಟೆಯ ಪ್ರಾಣಿಯಂತೆ ಅವರನ್ನು ನುಂಗಿ ಹಾಕುವಂಥದ್ದು ಯಾವುದೂ ಇರದು; ಈ ಆಕ್ರಮಣಕಾರಕಗಳು

ಈಗ ನಮ್ಮ ಸುತ್ತಲೂ ಇರುವುದದಷ್ಟೆ, ಏಕೆಂದರೆ ಇಹಲೋಕಾಧಿಪತಿಯಾದ ಸೈತಾನು ಇನ್ನೂ ಕಟ್ಟಿಹಾಕಲ್ಪಡದೆ ಇರುವನು. (ಯೆಶಾಯ 35:8–9; ಪ್ರಕಟನೆ 20:2) "ಇಕ್ಕಟ್ಟಾದ ಮಾರ್ಗವನ್ನು" ಈಗ ಸೇರುವವರೆಲ್ಲರೂ ತಮ್ಮ ನಂಬಿಕೆಯನ್ನು ಕಾಪಾಡಿಕೊಂಡು, ವಿರೋಧಿಯಾದ ಸೈತಾನನನ್ನು ಎದುರಿಸಿ ತಮಗಾದ ಉನ್ನತಸ್ಥಾನದ ಕರೆಯ ವಿಶೇಷ "ಬಹುಮಾನವನ್ನು" ಪಡೆಯಲು ಒಂದು ಒಳ್ಳೆಯ ಹೋರಾಟವನ್ನು ಮಾಡುವ ಅಂದರೆ ಶ್ರದ್ಧಾಪೂರ್ವಕವಾಗಿ ಹೋರಾಡುವ ಒತ್ತಾಯಕ್ಕೊಳ – ಗಾಗಿರುವರು. ನಾವು ಕೇವಲ ಪಾರಂಪರ್ಯವಾಗಿ ಹೊಂದಿರುವ ನಮ್ಮ ಶಾರೀರಿಕ ಬಲಹೀನತೆಗಳ ವಿರುದ್ಧವಾಗಿ ಹೋರಾಡುವುದು ಮಾತ್ರವಲ್ಲದೆ ಆಕಾಶಮಂಡಲದಲ್ಲಿರುವ ದುರಾತ್ಮಸೇನೆಗಳ ಮೇಲೂ ಹೋರಾಡಬೇಕಿರುವುದು. (ಎಫೆಸ್ಸ 6:12) ಆದರೆ ನಮ್ಮನ್ನು ಪ್ರೀತಿಸಿ ನಮ್ಮನ್ನು ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡಾತನ ಮೂಲಕವಾಗಿ ಜಯಶಾಲಿಯಾಗಿ ಹೊರಬರುವಂತಾಗಲು ಕರ್ತನು ನಮಗೆ ಅಧಿಕವಾದ ಕೃಪೆಯನ್ನು ಅನುಗ್ರಹಿಸುವನು. – 1 ತಿಮೋಥೆ 6:12; ಯೂದ 3; ಯಾಕೋಬ 4:7; ರೋಮಾ 8:37.

*****

# ನೀವು ಹೇಗೆ ಕಿವಿಗೊಡಬೇಕೆಂಬುದನ್ನು ಗಮನಿಸಿ

**ರೀಪ್ರಿಂಟ್ಸ್ ಪುಟ 3746**

## ಮತ್ತಾಯ 7:15–29

**"ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ."**
**– ಯಾಕೋಬ 1:22**

ನಮ್ಮ ಪಾಠವು ಪರ್ವತ ಪ್ರಸಂಗವನ್ನು ಹಿಂಬಾಲಿಸಿ ಹೋಗುವುದು ಮತ್ತು ಒಂದು ಸಾಮ್ಯದಂತೆ ಇದಕ್ಕೆ ಸ್ಪಷ್ಟವಾದ ಉದ್ದೇಶವಿದ್ದು ಕರ್ತನ ಜನರ ಮನಸ್ಸಿನ ಮೇಲೆ ತಾವು ಏನನ್ನು ಕೇಳಿರುವರೋ ಅವುಗಳ ಪ್ರಾಮುಖ್ಯತೆಯ ಬಗ್ಗೆ ಅಂದರೆ ಶುಭವಾರ್ತೆಯನ್ನು ಕೇಳುವುದು ಸಹಿತವಾಗಿ ಅದಕ್ಕೆ ವಿಧೇಯರಾಗುವುದರ ಪ್ರಾಮುಖ್ಯತೆಯ ಬಗ್ಗೆ ಪರಿಣಾಮ ಬೀರುವಂತದ್ದಾಗಿರುವುದು. ವಿಧೇಯರಾಗಲು ವಿಫಲ– ರಾದವರಲ್ಲಿ ಉಂಟುಮಾಡುವ ಅತೃಪ್ತಿಕರ ಪ್ರತಿಫಲಗಳಿಗೆ ಬದಲಾಗಿ ಇದು ಜಾಗರೂಕತೆಯಿಂದ ವಿಧೇಯರಾಗುವವರಿಗೆ ಲಭಿಸುವ ಒಳ್ಳೆಯ ಪ್ರತಿಫಲಗಳ ಬಗ್ಗೆ ಪ್ರತಿಪಾದಿಸುವುದು. ನಾವು ಸುಳ್ಳು ಬೋಧಕರ ವಿಷಯವಾಗಿ ಎಚ್ಚರಿಕೆಯಿಂದ ಇರುವುದಾದರೆ ಅದು ಸ್ಪಷ್ಟವಾಗಿ ತಪ್ಪು ಶಂಕೆಯಾಗಿರುವುದಿಲ್ಲ. ಸುಳ್ಳು ಬೋಧಕರು ತನ್ನ ಕುರಿಗಳ ಮಧ್ಯದಲ್ಲಿ ಬಂದು ಅವುಗಳನ್ನು ತಪ್ಪುದಾರಿಗೆ ಎಳೆಯುವರೆಂದು ನಮ್ಮ ಕರ್ತನು ಪ್ರಕಟಿಸಿ ಹೇಳಿರುವನು. ಇಲ್ಲವೇ ಇಂಥಾ ಸುಳ್ಳು ಬೋಧಕರ ಬಗ್ಗೆ ಕುರಿಗಳ ಗಮನವನ್ನು ಸೆಳೆಯುವುದು ಕೆಟ್ಟದ್ದನ್ನು ನುಡಿದಂತಾಗುವುದಿಲ್ಲ. ಈ ಒಡೆಯನು ಮತ್ತು ಅಪೋಸ್ತಲರು ಅವರ ವಿಷಯವಾಗಿ ಮುಂತಿಳಿಸಿ ಎಚ್ಚರಿಕೆ ನೀಡಿರುವರು ಅಲ್ಲದೆ ಒಡೆಯನ ನಿದರ್ಶನವನ್ನು ನಂಬಿಗಸ್ತರಾಗಿ ಅನುಸರಿಸುವವರೂ ಸಹ ಹೀಗೆ ಇದನ್ನೇ ಅನುಸರಿಸಬೇಕು.

ಆದರೆ ನಾವು ನಮ್ಮ ಕರ್ತನು ಮತ್ತು ಅಪೋಸ್ತಲರು ಸ್ಪಷ್ಟವಾಗಿ ತಿಳಿಸಿರುವ ವಿಧಾನದಲ್ಲೇ ಇವರಿಗಿರುವ ವ್ಯತ್ಯಾಸಗಳನ್ನು ತೋರಿಸಿಕೊಡಬೇಕು. ಅವರು ಹೊರಗೆ ತೋರಿಕೆಯಲ್ಲಿ ಎಂಥಾ ಸೌಮ್ಯಭಾವದವರು ಸುಸಂಸ್ಕೃತರು ವಿದ್ಯಾವಂತರು ನಯ– ವಿನಯವುಳ್ಳವರು ಆದಾಗ್ಯೂ, ಅವರನ್ನು ಮಂದೆಯ ನಾಯಕರೆಂದು ಅವರಲ್ಲಿ ಧೈರ್ಯವಾಗಿ ಭರವಸವಿಟ್ಟು ಅವರ ಉದ್ದೇಶಗಳು ಆಕಾಂಕ್ಷೆಗಳು ವೈಯುಕ್ತಿಕ ಜೀವನದ ವಿಷಯಗಳಲ್ಲಿ ಅವರೊಡನೆ ನಿಕಟವಾಗಿ ಬಳಕೆಯಾಗುವುದಕ್ಕೆ ಮೊದಲು ನಾವು ಅವರ ಬಾಹ್ಯವಿಚಾರಕ್ಕಿಂತಲೂ ಚೆನ್ನಾಗಿ ಅವರನ್ನು ಅರಿತು ಕೊಳ್ಳಲು ಯತ್ನಿಸಬೇಕು. ಅವರು ಹೊಟ್ಟೆಬಾಕರು ಹಣದಾಸೆ– ಯವರೂ ಸ್ವಾರ್ಥಸ್ವಭಾವದವರೂ ಆಗಿದ್ದಲ್ಲಿ ಅವರು ಬಾಹ್ಯವಾಗಿ ಭಕ್ತಿಯವೇಷವುಳ್ಳವರಾಗಿ ವರ್ತಿಸಿದರೂ ಅವರ ವಿಷಯವಾಗಿ ಎಚ್ಚರದಿಂದಿರಬೇಕೆಂದು ಕರ್ತನು ಈ ವಿಷಯವಾಗಿ ನಮಗೆ ತಿಳಿಸಿರುವನು. ಅಪೋಸ್ತಲನು ಇದರ ವಿಷಯವಾಗಿ ಹೀಗೆ ಹೇಳಿರುವನು: "...ಕ್ರೂರವಾದ ತೋಳಗಳು ನಿಮ್ಮೊಳಗೆ ಬರುವವೆಂದು ಬಲ್ಲೆನು ಅವು ಹಿಂಡನ್ನು ಕನಿಕರಿಸುವುದಿಲ್ಲ." "ಅವರು ದ್ರವ್ಯಾಶೆಯುಳ್ಳವರಾಗಿ ಕಲ್ಪನೆಯ ಮಾತುಗಳನ್ನು ಹೇಳುತ್ತಾ ನಿಮ್ಮಿಂದ ಲಾಭವನ್ನು ಸಂಪಾದಿಸಬೇಕೆಂದಿರುವರು." "ತಮ್ಮನ್ನು ಕೊಂಡುಕೊಂಡ ಒಡೆಯನನ್ನೂ ಕೂಡ ತಾವು ಅರಿಯೆವು ಎಂದು ಹೇಳುವವರೂ..." –ಅ. ಕೃ. 20:29; 2 ಪೇತ್ರ 2:1,3.

ಹೇಗೂ ನಾವು ಈ ವಿಷಯದಲ್ಲಿ ಸಮತೋಲನವನ್ನು ಕಾಪಾಡಬೇಕಿರುವುದು; ಹಿಂಡಿನ ಹೊರಗಣವು ಸಹಿತವಾಗಿ ಕುರಿವೇಷದ ತೋಳಗಳನ್ನು ಪತ್ತೇಹಚ್ಚಿ ಅವುಗಳನ್ನು ಪ್ರತಿರೋಧಿಸಲು ನಾವು ಜಾಗರೂಕರಾಗಿರುವಲ್ಲಿ, ಈ ಸಮಸ್ಯೆಯ ಇನ್ನೊಂದು ಮುಖದ ಬಗ್ಗೆ ನಮ್ಮ ಕರ್ತನು ಮಾಡಿದ ಉಪದೇಶ ವನ್ನು ನೆನಪು ಮಾಡಿಕೊಳ್ಳಬೇಕು. ಅದೇನೆಂದರೆ ನಮ್ಮನ್ನು ವಿರೋಧಿಸದವನು ನಮ್ಮ ಪಕ್ಷದವನೇ ಎಂಬುದು ಮತ್ತು ಯಾರ ಗುಣನಡತೆಗಳು ಅವರು ಕರ್ತನಿಗೆ ಸೇರಿದವರೆಂದು ಪ್ರಮಾಣೀಕರಿಸುವುದೋ ಅವರು ಕರ್ತನ ಸಂದೇಶವನ್ನು ಪ್ರಚಾರಮಾಡುವ ಮುಂತಾದ ಆತನ ಸೇವೆಯಲ್ಲಿ ನಮ್ಮನ್ನು ಅನುಸರಿಸುವವರಲ್ಲದಿದ್ದರೂ ನಾವು ಅವರನ್ನು ತೋಳಗಳೆಂದು ಖಂಡಿಸಲೂಬಾರದು ಇಲ್ಲವೇ ಅವರೊಡನೆಯ ಸಹೋದರ ಸಂಬಂಧವನ್ನು ಕಡಿದುಕೊಳ್ಳಲೂಬಾರದು. ಇನ್ನೊಂದು

ಮಾತಿನಲ್ಲಿ ಹೇಳುವುದಾದರೆ ಯಾರು ಕರ್ತನನ್ನು ಪ್ರೀತಿಸಿ ಆತನ ಮನೋಭಾವವನ್ನು ತೋರ್ಪಡಿಸುವರೋ ಅವರು ನಮ್ಮೊಂದಿಗೆ ಇದ್ದರೂ ಸರಿಯೇ ಅಥವಾ ಇಲ್ಲದಿದ್ದರೂ ಸರಿಯೇ, ಅವರೆಲ್ಲರನ್ನು ನಾವು ಪ್ರೀತಿಸಿ ಅವರಿಗೆ ದೇವರು ಕಾಪಾಡಲೆಂದು ಹರಸಬೇಕು. ಒಂದೇ ಮಾತಿನಲ್ಲಿ ಹೇಳುವುದಾದರೆ, ದೇವರ ನಿಯಮಗಳು ಬಹು ವಿಶಾಲವಾದವುಗಳೂ ಅದೇ ಸಮಯದಲ್ಲಿ ಬಹು ಸಂಕುಚಿತವೂ ಆಗಿರುವವು. ವಿಮೋಚನಾ ರಕ್ತದ ಮೇಲಿನ ನಂಬಿಕೆ, ಒಡೆಯನಿಗಾಗಿ ಮಾಡಿಕೊಳ್ಳುವ ಪ್ರತಿಷ್ಠೆ, ಆತನ ಮನೋಭಾವಗಳನ್ನು ತೋರ್ಪಡಿಸುವುದು ಇವುಗಳು ಶಿಷ್ಯತನದ ರೂಪರೇಖೆಗಳು; ಇವುಗಳು ತನ್ನಲ್ಲೇ ವಿಶಾಲವಾದವುಗಳು ಆದರೂ ಪ್ರಪಂಚದ ವಿಷಯವಾಗಿ ಹೋಲಿಸಿ ನೋಡುವುದಾದರೆ ಇವು ಸಂಕುಚಿತವಾದವುಗಳೂ ಆಗಿರುವವು.

## "ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವುದು."

ನಿಜವಾದವರಿಂದ ಸುಳ್ಳಾದವರನ್ನು ತಿಳಿದುಕೊಳ್ಳುವ ಬಗೆ ಹೇಗೆ ಎನ್ನುವುದನ್ನು ನಾವು ಕೇಳುವೆವೆಂದು ನಿರೀಕ್ಷಿಸಿ ನಮ್ಮ ಕರ್ತನು ಹೇಳಿರುವುದು: "ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ." ಇದಕ್ಕೆ ದೃಷ್ಟಾಂತವಾಗಿ ಮುಳ್ಳಿನ ಪೊದೆಗಳಲ್ಲಿ ದ್ರಾಕ್ಷೆಯನ್ನು ಇಲ್ಲವೇ ಮುಳ್ಳು ಗಿಡಗಳಲ್ಲಿ ಅಂಜೂರವನ್ನು ನಿರೀಕ್ಷಿಸಲು ಸಾಧ್ಯವಿಲ್ಲವೆಂಬ ಸಲಹೆಯನ್ನು ನೀಡುವುದರ ಮೂಲಕವಾಗಿ ಹೇಳಿರುವನು. ಪಾಲೆಸ್ತೀನಾ ದೇಶದಲ್ಲಿ ಪೊದೆಯಂತಿರುವ ಒಂದು ಗಿಡವಿರುವುದು ಅದರಲ್ಲಿ ಹೆಚ್ಚು ಕಡಿಮೆ ದ್ರಾಕ್ಷೆಯನ್ನು ಹೋಲುವ ಹಣ್ಣಿನ ಫಲವು ಬೆಳೆಯುವದು ಮತ್ತು ಅಂಜೂರದಂತೆ ಹೋಲುವ ಹಣ್ಣಿನ ಫಲದ ಒಂದು ಜಾತಿಯ ಮುಳ್ಳಿನ ಗಿಡವಿರುವುದು. ಹೀಗಿದ್ದರೂ ಇದರಿಂದ ಯಾರೂ ಮೋಸಹೋಗುವ ಅಪಾಯ ಇರಲಿಲ್ಲ, ಇಲ್ಲವೇ ಯಾರೂ ಕರ್ತನ ಹಿಂಬಾಲಕರ ಜೀವಿತದಲ್ಲಿ ತೊರುವ ಗುಣಲಕ್ಷಣಗಳ ಹಾಗೂ ನೀಡುವ ಫಲಗಳ ಬಗ್ಗೆ ಕರ್ತನ ಜನರು ಸಂದೇಹಪಡಬೇಕಾದುದ್ದಿಲ್ಲ.

ಇದರ ಅಭಿಪ್ರಾಯ: ಕರ್ತನ ನಿಜವಾದ ಜನರು ಯಾವ ರೀತಿಯಲ್ಲಿರಬೇಕೆಂದರೆ, ಅವರ ಜೀವಿತಗಳಲ್ಲಿ ಉಂಟಾಗುವ ಫಲಗಳು ಅವರ ಅನ್ಯೋನ್ಯತೆಗೆ ಬರುವವರನ್ನು ಪೋಷಿಸಿ ಪುನಶ್ಚೇತನಗೊಳಿಸುವಂತಾಗಬೇಕು. ಇದರ ಬದಲಿಗೆ ಕೆಲವು ವ್ಯಕ್ತಿಗಳು ಮುಳ್ಳುಗಿಡಗಳಂತಿದ್ದು ಯಾವಾಗಲೂ ಸಮಸ್ಯೆಯನ್ನು ಉಂಟು ಮಾಡುವ ಸುಳ್ಳಾದ ಬೋಧನೆಗಳು, ಕೆಟ್ಟ ಅಪವಾದಗಳು ಮತ್ತು ತಪ್ಪುಗಳೆಂಬ ವಿಷಬೀಜಗಳನ್ನು ಬಿತ್ತುತ್ತಿರುವರು; ಮತ್ತು ಕೆಲವರಿರುವರು ಅವರು ಮುಳ್ಳಿನ ಪೊದೆಗಳಂತಿದ್ದು ಪುನಶ್ಚೇತನಗೊಳಿಸುವ ಫಲಗಳನ್ನು ಕೊಡುವದಕ್ಕೆ ಬದಲು ತಮ್ಮ ಸಂಪರ್ಕಕ್ಕೆ ಬರುವವರಿಗೆ ಸತತವಾಗಿ ಅಡ್ಡಿಮಾಡುವುದು ಕಿರಿಕಿರಿ ಉಂಟುಮಾಡುವುದು ರೇಗಿಸುವುದು ಬೇಸರಪಡಿಸುವುದು ಮನಸ್ಸನ್ನು ಕೆಡಿಸುವುದು ಹಾನಿಮಾಡುವುದು ಇವುಗಳನ್ನು ಮಾಡುತ್ತಿರುವರು. ಇಲ್ಲಿ ಸ್ಪಷ್ಟವಾಗಿ ತಿಳಿದು ಬರುವ ವಿಷಯವೆಂದರೆ, ತಪ್ಪುದಾರಿಗೆಳೆಯುವ ಸುಳ್ಳು ಬೋಧಕರಿಗೂ ಮತ್ತು ತಮ್ಮ ಹಿಂಡಿನ ಪಾಲನೆಯಲ್ಲಿ ಪ್ರಾಣವನ್ನೇ ಅರ್ಪಿಸಲಿರುವ ಕುರುಬನ ಆಳುಗಳಿಗೂ ಇರುವ ವ್ಯತ್ಯಾಸವನ್ನು ಕಂಡುಹಿಡಿಯುವುದರಲ್ಲಿ ಕರ್ತನ ಜನರಿಗೆ ಯಾವ ಕಷ್ಟವೂ ಇರಬಾರದೆಂಬದು. ಒಂದು ವರ್ಗದವರು ಸದಾ ತಂಟೆಮಾಡುವವರು ಅಡ್ಡಗಾಲು ಹಾಕುವವರು ನಾಶನವನ್ನುಂಟು ಮಾಡುವವರು ಆಗಿರುವರು. ಇನ್ನೊಂದು ವರ್ಗವು ಸಹಕಾರಿಗಳು ಕಟ್ಟಿಬೆಳೆಸುವವರೂ ಬಲಪಡಿಸುವವರು ಸಮಾಧಾನ ಪಡಿಸುವವರೂ ಆಗಿರುವರು.

ತೋಳಗಳಿಗೂ ಮತ್ತು ಕುರಿಗಳಿಗೂ, ಹಾನಿಕರ ಗಿಡಗಳಿಗೂ ಹಾಗೂ ಫಲದಾಯಕವಾದ ಗಿಡಗಳಿಗೂ ಇರುವ ವ್ಯತ್ಯಾಸವನ್ನು ತೋರಿಸುವ ಒಂದು ನುಡಿಚಿತ್ರವನ್ನು ನೀಡುವುದರಲ್ಲಿ ತೃಪ್ತನಾಗದೆ ನಮ್ಮ ಕರ್ತನು ಮುಂದೆಸಾಗಿ ಇನ್ನೂ ಅಧಿಕವಾಗಿ ಮನಃಶೋಧಿಸುವ ಮತ್ತೊಂದು ದೃಷ್ಟಾಂತವನ್ನು ನೀಡಿರುವನು. ಅದೇನೆಂದರೆ ರೋಗಗ್ರಸ್ತವಾದ ಅಥವಾ ಹುಳುಕು ಫಲಗಳನ್ನು ನೀಡುವ ಒಂದು ಹಣ್ಣಿನ ಮರಕ್ಕೆ ಒಳ್ಳೆಯ ಫಲವನ್ನು ನೀಡುವ ಒಂದು ಹಣ್ಣಿನ ಮರವನ್ನು ಹೋಲಿಸಿ ಅದರ ವೈವಿಧ್ಯತೆಯನ್ನು, ಅಡ್ಡದಾರಿ ಹಿಡಿದು ದಾರಿತಪ್ಪಿದ ಒಬ್ಬ ಕ್ರೈಸ್ತನಿಗೆ ಸ್ವಸ್ಥಚಿತ್ತನಾದ ಒಬ್ಬ ಕ್ರೈಸ್ತನನ್ನು ಹೋಲಿಸಿ, ಅವನ ವೈವಿಧ್ಯತೆಯನ್ನು ತೋರಿಸುವ ಒಂದು ದೃಷ್ಟಾಂತ. ಆರೋಗ್ಯಕರವಾದ ಒಂದು ಮರವು ಒಳ್ಳೆಯ ಫಲವನ್ನು ಕೊಡುವುದೆಂದೂ ಮತ್ತು ಒಂದು ಕೆಟ್ಟ ಅಥವಾ ರೋಗಗ್ರಸ್ತ ಮರವು ಅನಪೇಕ್ಷಿತವಾದ ಕೆಟ್ಟ ಫಲವನ್ನು ಕೊಡುವುದೆಂದು ತಿಳಿಯಪಡಿಸಿರುವನು. ಇದು ಪ್ರಕೃತಿಯಲ್ಲಿ ಪ್ರಮಾಣಮಾಡಲ್ಪಟ್ಟಿರುವುದನ್ನು ನಾವು ಹೀಗೆ ಕಂಡಿರುವೆವು: ಆರೋಗ್ಯಕರ ಪರಿಸರದಲ್ಲಿ ಬೆಳೆದ ಒಳ್ಳೆಯ ಹಣ್ಣಿನ ಮರದಿಂದ ಒಳ್ಳೆಯ ಹಣ್ಣು ದೊರೆಯುತ್ತದೆ. ರೋಗಗ್ರಸ್ತವಾದ ಬೆಳವಣಿಗೆಯಿಲ್ಲದ ಗಮನಕೊಡದ ರೆಂಬೆಕತ್ತರಿಸದ ಹುಳುಬಿದ್ದ ಮರದಿಂದ ಗಂಟುಗಂಟಾಗಿ ಹುಳುಕಾದ ಅತೃಪ್ತಿಕರ ಹಣ್ಣುಗಳು ದೊರೆಯುತ್ತವೆ.

ಆರಂಭದಲ್ಲಿ ಸ್ವಸ್ಥಚಿತ್ತರಾಗಿದ್ದು ಯೋಗ್ಯರಾದ ತನ್ನ ಶಿಷ್ಯರು ಅಜಾಗರೂಕತೆಯಿಂದ ಕೆಟ್ಟುಹೋಗಿ ತಮ್ಮ ಆತ್ಮಿಕ ಬಲವನ್ನು ಮತ್ತು ಫಲಕಾರಿಗಳಾಗಿರುವುದನ್ನು ಕಳಕೊಳ್ಳಬಹುದೆಂದು ನಮ್ಮ ಕರ್ತನು ಈ ದೃಷ್ಟಾಂತಲ್ಲಿ ಉಲ್ಲೇಖಿಸಿರುವಂತೆ ತೋರುತ್ತದೆ. ಮಣ್ಣಿನಲ್ಲಿರುವ ಪೋಷಕಾಂಶ ಕಳೆದುಹೋದರೆ ಮರಗಳು ಹುಳುಕಾಗಿ ಬೆಳೆಗೆ ರೋಗಹತ್ತುವುದು. ಹೀಗೆಯೇ ಜ್ಞಾನ ಸಂಪನ್ನನಾದ ಒಬ್ಬ ಕ್ರೈಸ್ತನು ಸರಿಯಾದ ರೀತಿಯಲ್ಲಿ ಆತ್ಮಿಕ ಪೋಷಣೆಯನ್ನು ಹೊಂದದಿದ್ದಲ್ಲಿ ಅವನು ಆತ್ಮಿಕವಾಗಿ ಕ್ಷೀಣಿಸುವ ಅಪಾಯಕ್ಕೆ ಒಳಗಾಗಿರುವನು. ಕತ್ತರಿಸಿ ಶುದ್ಧಿಮಾಡದೆ ಬಿಟ್ಟ ಮರವು ಕೀಟಹುಳುಗಳಿಂದ ತುಂಬಿ ಹುಳುಕು ಮರವಾಗಿ ಕಡೆಯಲ್ಲಿ ಫಲಹೀನವಾಗುವದು. ಕ್ರೈಸ್ತನು ಹೀಗಾಗದೆ ಗುಣದಲ್ಲಿ ಮತ್ತು ಪವಿತ್ರಾತ್ಮವರಗಳಲ್ಲಿ ಅಭಿವೃದ್ಧಿಯಾಗಲು ಆತನಿಗೆ ಶಿಕ್ಷಾನುಭವ–ಶುದ್ಧೀಕರಣಗಳ ಅಗತ್ಯವಿರುವುದು. ಪರಲೋಕದಲ್ಲಿರುವ ನಮ್ಮ ತಂದೆಯು ದಿವ್ಯ ತೋಟಗಾರನಾಗಿ ಸೂಕ್ತ ಪರಿಪಾಲನೆ ಮಾಡುವ ವಾಗ್ದಾನವನ್ನು ನಮಗೆ ನೀಡಿರುವನು. ಆದರೆ ಇದು ಗಿಡಗಳ ವಿಷಯದಂತೆ ಸಂಪೂರ್ಣವಾಗಿ ನಮ್ಮ ವಿಷಯದಲ್ಲಿರುವುದಿಲ್ಲ; ಏಕೆಂದರೆ ನಮ್ಮಲ್ಲಿನ ಉತ್ಕೃಷ್ಟವಾದ

ಪ್ರತಿಭೆಸಾಮರ್ಥ್ಯಗಳು, ನಮ್ಮ ದೇವರ ಹೋಲಿಕೆಯ ವ್ಯಕ್ತಿತ್ವದ ಲಕ್ಷಣ, ಸಂಕಲ್ಪಶಕ್ತಿಯು ದೇವರು ನಮ್ಮೊಂದಿಗೆ ಭಿನ್ನವಾಗಿ ನಡಕೊಳ್ಳುವಂತೆ ಮಾಡಿದೆ.

ಯಾವ ವಿಧವಾದ ಪೌಷ್ಟಿಕಾಂಶವು ನಮಗೆ ಬೇಕಿರುವುದೆಂಬುದನ್ನು ನಿರ್ಧರಿಸಲು ಬಹು ಮಟ್ಟಿಗೆ ನಮಗೇ ಬಿಟ್ಟಿರುವುದು. ದೇವರು ಸತ್ಯವೆಂಬ ಒಳ್ಳೆಯ ನೆಲವನ್ನು, ಪುನಶ್ಚೇತನಗೊಳಿಸುವ ಕೃಪಾವರ್ಷಧಾರೆಯನ್ನು, ಅಮೂಲ್ಯ–ವಾದ ವಾಗ್ದಾನಗಳೆಂಬ ಪೌಷ್ಠಿಕಾಂಶವನ್ನು ಒದಗಿಸಿರುವನು; ಆದರೆ ಇವುಗಳನ್ನು ಬಳಸಿಕೊಂಡು ಕೃಪೆಯಲ್ಲಿಯೂ ಜ್ಞಾನದಲ್ಲಿಯೂ ಪ್ರೀತಿಯಲ್ಲಿಯೂ ಬೆಳೆಯುವುದು ದೇವಜನರಲ್ಲಿ ಪ್ರತಿಯೊಬ್ಬನಿಗೂ ಬಿಟ್ಟಿರುವ ವಿಷಯ. ಹೀಗಿದ್ದಾಗ್ಯೂ ನಮ್ಮಲ್ಲಿ ಕುಂದುಕೊರತೆಗಳು ಉಂಟಾಗಿ ಪೌಷ್ಠಿಕಾಂಶದ ಕೊರತೆಯಿಂದ ನಾವು ಫಲಹೀನರಾದಲ್ಲಿ ಆಗ ಆ ತೋಟಗಾರನನ್ನು ಆರೋಪಿಸುವಂತಿಲ್ಲ. ಆತನ ಯಾವ ಒಳ್ಳೆಯ ವಾಗ್ದಾನಗಳೂ ವಿಫಲವಾಗುವುದಿಲ್ಲ. ಯಾವುದಾದರೂ ವೈಫಲ್ಯತೆಗಳು ಉಂಟಾದಲ್ಲಿ ಅದು ನಮ್ಮಿಂದಲೇ ಆದುದಾಗಿರುವದು. ಇದರಂತೆಯೇ ಕುಡಿಕತ್ತರಿಸಿ ಶುದ್ಧಿಮಾಡಲು ಕರ್ತನು ಶಿಕ್ಷಾನುಭವ ಪರಿಶೋಧನೆ ಕಷ್ಟಸಂಕಟಗಳನ್ನು ಬರಮಾಡುವನು; ಆದರೆ ನಾವು ನಮ್ಮ ಸ್ವಇಚ್ಛೆಯಿಂದ ಇವುಗಳನ್ನು ತಪ್ಪಿಸಿಕೊಳ್ಳಲು ಅಂದರೆ ಇವುಗಳನ್ನು ಬಳಸಿಕೊಳ್ಳಲು ವಿಫಲರಾಗಿ ನಮ್ಮ ಬಲಹೀನತೆ ನ್ಯೂನ್ಯತೆಗಳನ್ನು ಮತ್ತು ನಮ್ಮ ಸ್ವಭಾವಗಳಲ್ಲಿನ ಅನುಚಿತವಾದ ಬೆಳವಣಿಗೆಳನ್ನು ಸರಿಪಡಿಸಿಕೊಳ್ಳದೆ ಇರಲು ಸಾಧ್ಯ. ನಾವು ಈ ಎಲ್ಲಾ ಬಗೆಯ ಉನ್ನತಿ ಅಥವಾ ಕುಡಿಕತ್ತರಿಸು–ವಿಕೆಗಳನ್ನು ಹೊಂದಿದಾಗ್ಯೂ ಸಹ ನಮ್ಮ ಆಸಕ್ತಿಗಳನ್ನು ಮನೆ–ಜಮೀನುಗಳ ಮೇಲೆ ಇಲ್ಲವೇ ಪ್ರಾಪಂಚಿಕವಾದ ಗುರಿಗಳ, ವಸ್ತುಗಳ ಅಥವಾ ವ್ಯಕ್ತಿಗಳ ಮೇಲೆ ನಾವು ತಿರುಗಿಸಿಕೊಂಡವ–ರಾಗಲು ಸಾಧ್ಯ. ಆ ದೃಷ್ಟಾಂತದಲ್ಲಿನ ಮರಕ್ಕೆ ಹತ್ತುವ ಕೀಟಗಳಂತೆ ಇವು ನಮ್ಮ ಸತ್ವಗಳನ್ನು ಹೀರಿಕೊಂಡು ನಾವು ಯೋಗ್ಯ ಫಲಗಳನ್ನು ನೀಡುವಂತಾಗಲು ಅಡ್ಡಿಯುಂಟುಮಾಡುವವು.

ಒಳ್ಳೆಯ ಮರವು ಕಳಪೆ ಹಣ್ಣನ್ನು ಕೊಡಲು ಸಾಧ್ಯವಿಲ್ಲ; ಇಲ್ಲವೇ ಹುಳುಕು ಅಥವಾ ಕ್ಷೀಣವಾದ ಮರವು ಒಳ್ಳೆಯ ಹಣ್ಣನ್ನು ಕೊಡದು. ಕರ್ತನ ಜನರಲ್ಲಿ ಪ್ರತಿಯೊಬ್ಬನೂ ದೇವರ ವಾಕ್ಯವೆಂಬ ಕನ್ನಡಿಯ ಮುಂದೆ ನಿಂತು ತನ್ನನ್ನು ತಾನು ಪರೀಕ್ಷಿಕೊಂಡು ತನ್ನ ಗುಣನಡತೆ ಮನೋಪ್ರವೃತ್ತಿಗಳು ದೇವರು ಬಯಸುವ ಮಟ್ಟಕ್ಕೆ ಹೋಲಿಕೆಯಿರುವುದೋ ಇಲ್ಲವೋ ಎಂಬುದನ್ನು ಕಂಡುಕೊಳ್ಳಬೇಕಿದ್ದರೂ, ಫಲಗಳ ವಿಷಯವಾಗಿ ಅದು ಒಳೆಯದೇ ಅಥವಾ ಕೆಟ್ಟದ್ದೇ ಎಂಬುದರ ಬಗ್ಗೆ ನಿರ್ಧರಿಸಲು ಕರ್ತನ ಜನರಲ್ಲಿ ಪ್ರತಿಯೊಬ್ಬನೂ ತನ್ನ ವಿಷಯವಾಗಿಯೂ ಹಾಗೂ ಇತರರ ವಿಷಯವಾಗಿಯೂ ನ್ಯಾಯವಾಗಿ ವಿಚಾರಣೆ ಮಾಡಿ ತೀರ್ಮಾನ ತೆಗೆದುಕೊಳ್ಳಲು ಕರೆ ನೀಡಲಾಗಿರುವುದು. ಅಂದರೆ ನನ್ನ ಸ್ವಂತ ಜೀವಿತದ ಬಗೆಗೆ ಗುರುತುಗಳಾಗಿ ನಮ್ಮಲ್ಲಿ ಉಂಟುಮಾಡುವ ಪರಿಣಾಮಗಳು ಮತ್ತು ಫಲಿತಾಂಶಗಳು ಯಾವ ರೀತಿಯವುಗಳೆಂಬುದನ್ನೂ ಮತ್ತು ನನ್ನ ನೆರೆಯವನಾದ ನನ್ನ ಸಹೋದರನ ಜೀವಿತಗಳ ಬಗೆಗೆ ಗುರುತುಗಳಾಗಿ ಅವನಲ್ಲಿ ಉಂಟಾಗುವ ಪರಿಣಾಮಗಳು ಮತ್ತು ಫಲಿತಾಂಶಗಳು ಯಾವ ರೀತಿಯವುಗಳೆಂಬುದನ್ನು ವಿಚಾರಿಸಿ ತಿಳಿದುಕೊಳ್ಳಲು ಕರೆ ನೀಡಲಾಗಿರುವುದು. ಇದು ತನ್ನ ಮಂದೆಯ ನಾಯಕರಿಗೆ ವಿಶೇಷವಾಗಿ ಅನ್ವಯವಾಗುವ ಗುಣಪರೀಕ್ಷೆಯೆಂದು ನಮ್ಮ ಕರ್ತನು ತಿಳಿಸಿರುವನು. ಅವರು ಒಳ್ಳೆಯ ಮಾದರಿಗಳಾಗಿ ಒಳ್ಳೆಯ ಫಲಗಳಿಂದ ತುಂಬಿದವರಾಗಿರಬೇಕು. ಈ ಒಳ್ಳೆಯ ಫಲಗಳನ್ನೇ ಅವರ ಒಳ್ಳೆಯ ಸ್ವಸ್ಥವಾದ ಗುಣನಡತೆಗಳಿಗೆ ಒಂದು ಪರೀಕ್ಷಾರ್ಥವಾಗಿ ಹುಡುಕಲ್ಪಡಬೇಕು. ಅದು ಕರ್ತನಿಗೆ ಪೂರ್ಣವಾಗಿ ಹೊಂದಿಕೊಂಡಿರಬೇಕು. ಎಲ್ಲರೂ ಅಪರಿಪೂರ್ಣ–ವಾದವರು ಮತ್ತು ಅತ್ಯುತ್ತಮವಾದ ಉದ್ದೇಶಗಳಿಂದ ಕೂಡಿದಾಗ್ಯೂ ನಾವು ಮಾಡಬೇಕೆಂದಿದ್ದವುಗಳನ್ನು ಮಾಡಲು ಸಾಧ್ಯವಾಗದೆಂಬುದು ನಿಜವಷ್ಟೆ. ಆದರೂ ಕರ್ತನ ಜನರಲ್ಲಿ ಅತಿ ಬಲಹೀನರಾದವರೂ ಇತರ ಸಹೋದರರು ಗ್ರಹಿಸಲಾಗುವಂಥ ಕೆಲವು ಫಲಗಳನ್ನು ಹೊಂದಿರಬೇಕು ಮತ್ತು ಈ ಫಲಗಳನ್ನು ಸಹೋದರರು ದೇವ ನೇಮಿತ ಗುಣಮಟ್ಟದ ಅನುಸಾರ ಅಂದರೆ ಶರೀರಭಾವಕ್ಕೆ ಅನುಸಾರವಾಗಿರದೆ ಆತ್ಮಿಕಭಾವಾನುಸಾರವಾಗಿ ಅವರ ಮನೋಸಂಕಲ್ಪ ಉದ್ದೇಶಗಳನ್ನು ಅಂಗೀಕರಿಸಬೇಕು. ಹೀಗಿರಲು ಪ್ರತಿಯೊಬ್ಬ ದೇವರ ಮಗನೂ ತನ್ನ ಸಹೋದರರ ಮುಂದೆ ಹಾಗೂ ಲೋಕದ ಎದುರಿನಲ್ಲಿ ಎಲ್ಲಾ ವಿಷಯ–ಗಳಲ್ಲಿಯೂ ಪರಲೋಕದಲ್ಲಿರುವ ತಂದೆಯ ಚಿತ್ತವನ್ನು ಕೈಗೊಂಡು ನಡೆಯುವುದರಲ್ಲಿ ತಮ್ಮ ಪ್ರಾಮಾಣಿಕತೆ ನಂಬಿಗಸ್ತವಾದ ಉದ್ದೇಶಗಳು ಪ್ರತಿಷ್ಠಿತವಾದ ಹೃದಯ ಮನಸ್ಸು ಸಂಕಲ್ಪ ಇವುಗಳನ್ನು ತೋರ್ಪಡಿಸಬೇಕು.

ಪಾಲೆಸ್ತೀನಾ ದೇಶದಲ್ಲಿ ಈ ದಿನದವರೆಗೂ ಹಣ್ಣಿನ ಮರಗಳಿಗೆ ತೆರಿಗೆಯನ್ನು ವಿಧಿಸಲಾಗುವದು. ಆದುದರಿಂದ ಯಾವ ಮರಗಳಲ್ಲಿ ಫಲವಿರುವುದಿಲ್ಲವೋ, ಯಾವ ಮರವು ಈಚು ಫಲಗಳನ್ನು ನೀಡುವುದೋ ಆ ಮರಗಳನ್ನು ಸಹಿಸಲಾಗು–ವುದಿಲ್ಲ; ಏಕೆಂದರೆ ಅದು ಆದಾಯ ತರುವ ಬದಲು ನಷ್ಟವನ್ನು ಉಂಟುಮಾಡಿರುತ್ತದೆ. ಹೀಗೆಯೇ ನೀಡಲಾಗಿರುವ ಆಶ್ವಾಸನೆ; ಅದೇನೆಂದರೆ ಕರ್ತನು ಅಂತ್ಯದಲ್ಲಿ ಫಲಕೊಡದಿರುವ ಪ್ರತಿಯೊಬ್ಬನನ್ನು ತೆಗೆದುಹಾಕುವನು – “ನನ್ನಲ್ಲಿದ್ದು ಫಲ ಕೊಡದಿರುವ ಪ್ರತಿಯೊಂದು ಕೊಂಬೆಯನ್ನು ಆತನು ತೆಗೆದು ಹಾಕುತ್ತಾನೆ.” –ಆದರೆ ಫಲಕೊಡುವ ಪ್ರತಿಯೊಂದು ಕೊಂಬೆಯು ಹೆಚ್ಚು ಫಲಕೊಡುವ ಹಾಗೆ ಅದನ್ನು ಶುದ್ಧಿಮಾಡುತ್ತಾನೆ.

ನಮ್ಮ ಕರ್ತನು ಯೆಹೂದ ಜನಾಂಗವನ್ನು ಸೂಚಿಸಲು ಮತ್ತು ಅದು ಅಪೇಕ್ಷಿತ ಫಲಗಳನ್ನು ಕೊಡಲಿಲ್ಲವೆಂಬುದನ್ನು ತೋರಿಸಿಕೊಡಲು, ಈ ಕಾರಣದಿಂದ ಅದು ಕಡಿದು ಹಾಕಲ್ಪಟ್ಟು ನಾಶವಾಯಿತೆಂಬುದನ್ನು ಹೇಳಲು ಅಂಜೂರ ಮರದ ದೃಷ್ಟಾಂತವನ್ನು ಬಳಸಿಕೊಂಡಿದ್ದನು. ಯೆಹೂದ ಜನಾಂಗವನ್ನು ಸಂಪೂರ್ಣವಾಗಿ ನಾಶಮಾಡಿದ ಸಾಂಕೇತಿಕವಾದ “ಅಗ್ನಿಯು” ಅವರ (ಅಂಜೂರ) ಮರವನ್ನು ನಾಶಗೊಳಿಸಿತು. ಕರ್ತನಿಂದ ಯೆಹೂದ್ಯರು ನಿಜವಾಗಿಯೂ ಒಂದು ಹೆಚ್ಚಿನ ಆಶೀರ್ವಾದವನ್ನು ಪಡೆಯಲಿರುವರು; ಆದರೆ ಆತನು ಪ್ರವಾದಿಗಳ ಮೂಲಕವಾಗಿ ತಿಳಿಸಿರುವಂತೆ ಅದು “ಅವರ ಒಡಂಬಡಿಕೆಯ ಅನುಸಾರವಲ್ಲ.”

ಇಸ್ರಾಯೇಲ್ಯರಿಗೂ ಮತ್ತು ಎಲ್ಲಾ ಜನಾಂಗಗಳಿಗೂ ಮುಂದೆ ಉಂಟಾಗುವ ಆಶೀರ್ವಾದವು ಹೊಸ ಒಡಂಬಡಿಕೆಯ ಅನುಸಾರ ವಾಗಿರುವದು. ಇದೇ ರೀತಿಯಲ್ಲಿ ಸುವಾರ್ತಾ ಯುಗದ ಅಂತ್ಯದಲ್ಲಿ ಕರ್ತನ ಜನರಿಗೆ ಅವರ ಒಳ್ಳೆಯ ಅಥವಾ ಕೆಟ್ಟ ಫಲಗಳ ವಿಷಯವಾಗಿ ಅರಿಯಲು ಒಂದು ವೈಯುಕ್ತಿಕವಾದ ಪರೀಕ್ಷೆಯಿರುವದು ಮಾತ್ರವಲ್ಲದೆ ಒಂದು ವ್ಯವಸ್ಥೆಯಾಗಿ ಕ್ರೈಸ್ತ ಸಮುದಾಯವು ಪೂರ್ಣವಾಗಿ ಫಲವಿಲ್ಲದ್ದಾಗಿಯೂ ಅತೃಪ್ತಿಕರ–ವಾಗಿಯೂ ಕಂಡುಬರುವುದು; ಮತ್ತು ಕರ್ತನ ನಿಜವಾದ ಭಕ್ತರು ಆಯಲ್ಪಟ್ಟು ಮಹಿಮಾಪದವಿಗೆ ಸೇರಿದ ನಂತರ ಈ ಮರವು ಒಂದು ವ್ಯವಸ್ಥೆಯಾಗಿ ಮಹಾ ಸಂಕಟದ ಕಾಲದಲ್ಲಿ ನಾಶವಾಗಿ ಹೋಗುವುದು ಮತ್ತು ಇದರ ಜೊತೆಯಲ್ಲಿಯೇ ಈ (ಸುವಾರ್ತಾ) ಯುಗವು ಪೂರ್ಣಗೊಂಡು ನೂತನ ವ್ಯವಸ್ಥೆಯು ಉದಯಿಸುವುದು. ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿನ ಹೊಸ ಒಂಡಂಬಡಿಕೆಯ ಮೂಲಕವಾಗಿ ಕ್ರೈಸ್ತ ಸಮೂಹವು ನಿಜವಾಗಿಯೂ ಆಶೀರ್ವಾದ ಅನುಗ್ರಹಗಳನ್ನು ಹೊಂದುವರಾ–ದರೂ ಈಗಿನ ಕಾಲದಲ್ಲಿ ದೊರೆಯುವ ಅಬ್ರಹಾಮನ ಒಡಂಬಡಿಕೆಯ ಅನುಸಾರವಾದ ವಿಶೇಷ ಸೌಭಾಗ್ಯಸವಲತ್ತು ಮತ್ತು ಸದವಕಾಶಗಳು ಅವರಿಗೆ ಇನ್ನೆಂದಿಗೂ ಲಭಿಸದೆ ಹೋಗುವುದು.

## “ನಾನೆಂದೂ ನಿಮ್ಮನ್ನು ಅರಿಯೆನು”

ತನ್ನ ಪ್ರಸಂಗವನ್ನು ಮುಂದುವರೆಸುವವನಾಗಿ ನಮ್ಮ ಕರ್ತನು ಇದನ್ನು ಅಡಕಮಾಡಿ ಹೇಳಿರುವದೆಂದರೆ, ಕಡೆಯಲ್ಲಿ ಹೆಸರಿಗೆ ಹಿಂಬಾಲಕರಾಗಿರುವ ಒಂದು ದೊಡ್ಡ ಗುಂಪು ತನ್ನ ಮನೋಭಾವನ್ನು ಹೊಂದಲಾರದೆ ತಾನು ಅಪೇಕ್ಷಿಸುವ ಫಲಗಳನ್ನು ಕೊಡಲಾಗದೆ ತನ್ನಿಂದ ಕರೆಯಲ್ಪಟ್ಟು ಮತ್ತು ಆಯಲ್ಪಟ್ಟು ನಂಬಿಗಸ್ತರಾದ ವರ್ಗದ ಅಂಗಗಳಾಗದೆ ಇರುವರು. ಆದರೂ ಬಾಹ್ಯರೀತಿಯಲ್ಲಿ ತೋರಿಕೆಗೆ ಇವೆಲ್ಲವನ್ನೂ ಹೊಂದಿದವರಂತಿರುವರು. ಈ ವರ್ಗಕ್ಕೆ ಸೇರಿದವರು ಬಹು ಮಂದಿ ಇರುವರೆಂದು ಆತನು ಹೇಳಿರುವನು. ಆತನು ನಮ್ಮ ದಿನಗಳವರೆಗೂ ಸೂಚಿಸಿ ಹೇಳುತ್ತಾ ಅದನ್ನು “ಆ ದಿನದಲ್ಲಿ” ಅಂದರೆ ಈ (ಸುವಾರ್ತಾ) ಯುಗದ ಮುಕ್ತಾಯದ ಆ ಪರೀಕ್ಷಾ ಕಾಲದಲ್ಲಿ, ಆತನು ಬಂದು ತನ್ನ ಮದಲಗಿತ್ತಿಯೂ ತನ್ನ (ದೇಹದ) ಅಂಗಗಳೂ ಆ ರಾಜ್ಯದಲ್ಲಿ ತನಗೆ ಸಹಕಾರಿಗಳೂ ಅಗುವವರನ್ನು ತನ್ನ ಸ್ವಕೀಯ ಜನವಾಗಿ (ತನ್ನ ಆಭರಣಗಳ–ನ್ನಾಗಿ) ಮಾಡಿಕೊಂಡು ಅವರನ್ನು ಮಹಿಮೆಪಡಿಸುವನು. ಆ ಕಾಲದಲ್ಲಿ ಅಂದರೆ ನಮ್ಮ ದಿನದಲ್ಲಿ ಹಲವರು ತಾವು ಕರ್ತನನ್ನು ತಿಳಿದವರೂ ಪ್ರವಾದಿಸುವವರೂ ಅಥವಾ ಬೋಧಕರೂ, ತಾವು ದೆವ್ವಗಳನ್ನು ಬಿಡಿಸುವವರೂ, ಪಾಪವನ್ನೂ ಅದರ ಹಲವಾರು ಬಗೆಯ ಕೆಟ್ಟತನವನ್ನು ವಿರೋಧಿಸುವವರೂ ಮಹತ್ಕಾರ್ಯ–ಗಳನ್ನು ನಡೆಸುವವರೂ ಆಗಿದ್ದು, ಆತನ ಹೆಸರಿನಲ್ಲಿ ಸಾಮಾಜಿಕಸೇವಾ ಸಂಸ್ಥೆಗಳು ವಿದ್ಯಾಶಾಲೆಗಳು ಕ್ರೈಸ್ತಧರ್ಮ ಬೋಧನಾ ಶಾಲೆಗಳು ಮುಂತಾದವುಗಳನ್ನು ನಡೆಸುತ್ತಿರುವುದಾಗಿ ಹೇಳುವರು. ರಿವೈಸ್ಡ್ ವರ್ಷನ್ ಎಂಬ ಪುನರಾವರ್ತಿತ ಭಾಷಾಂತರವು ಇದನ್ನು “ನಿನ್ನ ಹೆಸರಿನ ಮೂಲಕವಾಗಿ” ಎಂದು ಸೂಚಿಸಿ ಕ್ರಿಸ್ತನ ಹೆಸರನ್ನು ನಿಜವಾಗಿಯೂ ಆಕರ್ಷಣೆ ಮೋಡಿ ಮಾಡಲು ಉಪಯೋಗಿಸುವರೆಂದು ತಿಳಿಸಿರುವುದು.

ನಮ್ಮ ದಿನದ ಪರಿಸ್ಥಿತಿಯನ್ನು ಎಷ್ಟು ನಿಜವಾಗಿ ಚಿತ್ರಿಸಿರುವುದು ಇದು! ಎಷ್ಟು ಮಂದಿ ಒಡೆಯನ ವಾಕ್ಯಕ್ಕೂ ಅದರ ಭಾವಾರ್ಥಗಳಿಗೂ ಸ್ಪಷ್ಟವಾಗಿ ವಿರೋಧವಾಗಿರುವ ತಮ್ಮ ಉದ್ಯಮ ಸಂಸ್ಥೆಗಳಿಗೆ ಕರ್ತನ ಹೆಸರನ್ನು ಅನೇಕ ವೇಳೆ ವ್ಯರ್ಥವಾಗಿ ತೆಗೆದುಕೊಂಡಿರುವರು. ಅವರು ಆತನ ಹೆಸರನ್ನು ಬಳಸುವದು ಏಕೆ? ಕೇವಲ ಒಂದು ತಾಯಿತದಂತೆ ಮೋಡಿ ಮಾಡಿ ತಮ್ಮ ಪ್ರಭಾವವನ್ನು ಹೆಚ್ಚಿಸಿಕೊಂಡು ತಮ್ಮ ಸ್ವಂತ ಮನಸ್ಸುಗಳನ್ನು ತೃಪ್ತಿಪಡಿಸಿಕೊಳ್ಳಲು, ತಮ್ಮ ಚಿತ್ತವನ್ನು ನೆರವೇರಿಸಿಕೊಂಡು ತಾವು ದೇವರ ಚಿತ್ತವನ್ನು ನೆರವೇರಿಸುವ–ವರಾಗಿದ್ದೇವೆಂದು ತಮ್ಮನ್ನು ತಾವೇ ನಂಬಿಸಿಕೊಳ್ಳಲು. ನಮ್ಮ ಕಾಲದ ಧಾರ್ಮಿಕ ಸಂಸ್ಥೆಗಳ ವಿಷಯವಾಗಿ ಇದು ಎಷ್ಟು ಸತ್ಯ! ದೃಷ್ಟಾಂತವಾಗಿ ಕ್ರೈಸ್ತಸಭೆಗಳನ್ನು ತೆಗೆದುಕೊಳ್ಳಿ; ಅವರು ತಮ್ಮ ಪಂಗಡದ ಮನೋಭಾವಗಳು ಸಿದ್ದಾಂತಗಳು ವಿಧಾನಗಳು ಸಂಸ್ಥೆಗಳು ಹೆಚ್ಚುಕಡಿಮೆ ದೇವರಿಗೆ ವಿರೋಧವಾಗಿರು–ವುದೆಂಬುದನ್ನು ಅರಿತಿದ್ದಾಗ್ಯೂ ತಮ್ಮ ಸಂಸ್ಥೆಗಳಿಗೆ ಕ್ರಿಸ್ತನ ಹೆಸರನ್ನು ಕೂಡಿಸದಿದ್ದಲ್ಲಿ ಅವರಿಗೆ ತೃಪ್ತಿಯಾಗದು.

ಆದರೆ ಪರೀಕ್ಷೆಯ ಕಾಲ ಹತ್ತಿರವಾಗಿದೆ. ಕರ್ತನು ಈ ವ್ಯವಸ್ಥೆಗಳ ಫಲಗಳ ವಿಷಯವಾಗಿ ವಿಚಾರಣೆ ಮಾಡುವನು; ಆತನು ಮೋಸಹೋಗಲಾರನು; ಹೌದು, ಆತನು ತನ್ನ ನಿರ್ಣಯಗಳು ನ್ಯಾಯವಾದವುಗಳೆಂದು ಎಲ್ಲರೂ ಕಾಣುವಂತೆ ಕೆಟ್ಟ ಹಣ್ಣುಗಳನ್ನು ಹೊರಗೆಡಹುವನು. ತನ್ನ ಮಾತುಗಳನ್ನು ನಿರ್ಲಕ್ಷಿಸುವುದು ಭ್ರಷ್ಟತೆಯುಂಟಾಗಿ ನಶಿಸುವಂತಾಗಲು ನಡೆಸುವದೆಂದು ತೋರ್ಪಡಿಸಲಾಗುವುದು; ಪರೀಕ್ಷಾರ್ಥವಾಗಿ ಬರಮಾಡಲಾದ ಎಲ್ಲಾ ವಿಧವಾದ ಅನುಭವಗಳನ್ನು ಇವುಗಳಿಗೆ ಶುದ್ಧಿಮಾಡ ಸಲುವಾಗಿ ಬಳಸಲ್ಪಟ್ಟಾಗ್ಯೂ ಪ್ರಾಪಂಚಿಕ ಆಕಾಂಕ್ಷೆ ಹೆಮ್ಮೆ ಐಶ್ವರ್ಯ ಆಡಂಬರ ಮುಂತಾದ ಹೀರುವ ಕೀಟಗಳು ಬೆಳೆಯುವಂತೆ ಮಾಡಲಾಗಿರುವುದು. ಬಾಬೇಲಿನ ಪ್ರವಾದಿಗಳಲ್ಲಿ ಹಲವರು ಸುಳ್ಳು ಪ್ರವಾದಿಗಳೆಂಬುದನ್ನು ತೋರಿಸಿಕೊಡಲಾಗುವದು. ಇವರ ಬೋಧನೆಗಳು ಜನರನ್ನು ತಪ್ಪುದಾರಿಗೆಳೆದಿರುವುದು ಮತ್ತು ಇದು ಆಶೀರ್ವಾದವನ್ನು ತರುವುದಕ್ಕೆ ಬದಲಾಗಿ ಹಾನಿಯನ್ನು ಉಂಟುಮಾಡಿರುವುದು, ಅವರಲ್ಲಿ ಜ್ಞಾನ ಪ್ರಕಾಶವನ್ನು ಉಂಟುಮಾಡುವುದರ ಬದಲಾಗಿ ಅವರನ್ನು ಕುರುಡರನ್ನಾಗಿ ಮಾಡಿರುವುದು. ಹಲವರು ಕುರೀವೇಷದ ಹೊಟ್ಟೆಬಾಕ ತೋಳಗಳಾಗಿ ಪ್ರಖ್ಯಾತಿ ಪ್ರಾಮುಖ್ಯತೆ ಹಾಗೂ ಜನರಿಂದ ಗೌರವ ಪಡೆಯಲು ಹಸಿದು ಹಾತುರಪಡುವವರಾಗಿ ಹಿಂಡಿನ ಹಿತಾಸಕ್ತಿಗಳನ್ನು ತಮ್ಮ ವೈಯುಕ್ತಿಕ ವೈಭವೀಕರಣಗಳಿಗಾಗಿ ವಿನಿಮಯ ಮಾಡಿಕೊಳ್ಳುವರೆಂಬುದನ್ನು ತೋರ್ಪಡಿಸಲಾಗುವುದು. ಯೇಸುವಿನ ಹೆಸರಿನಲ್ಲಿ ಯಕ್ಷಣಿಮಾಡುವುದು ಕೇವಲ ಒಂದು ಹೊರಗಿನ ನಿಲುವಂಗಿಯಂತಿದ್ದು ಅದರ ಅಡಿಯಲ್ಲಿ ಕ್ರೈಸ್ತ ಪಂಗಡಗಳು ನೀಡುವ ಫಲಗಳು ಮೋಸಗೊಳಿಸುವುದು ಮತ್ತು ಮೋಸ ಹೋಗುವಂಥದೂ

ಆಗಿದ್ದು ಅದು ಪ್ರೀತಿಸಂತೋಷ ಸಮಾಧಾನ ಮತ್ತು ಪವಿತ್ರಾತ್ಮವನ್ನು ಅಭಿವೃದ್ಧಿಗೊಳಿಸುವಂಥ ದಲ್ಲವೆಂಬುದನ್ನು ತೋರ್ಪಡಿಸಿಕೊಡುವುದು. ಆ ದಿನವು ಇವುಗಳನ್ನು ಪ್ರಕಟಮಾಡಿ ತೋರಿಸಿ ಸ್ಪಷ್ಟಪಡಿಸುವುದು. ದೇವರ ನಾಮವು ಅಪಕೀರ್ತಿಗೊಳಗಾಗಿರುವುದು ಮತ್ತು ಆತನ ವಾಕ್ಯ ವನ್ನು ತಪ್ಪಾಗಿ ನಿರೂಪಿಸಿರುವುದು ಇವುಗಳ ಕಾರಣ ಸುಳ್ಳು ಬೋಧಕರಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ಸ್ವಂತ ಹೊಟ್ಟೆಗಳನ್ನು ಹೊರೆದುಕೊಳ್ಳುತ್ತಿರುವ ಸಲುವಾಗಿ ಅಂದರೆ ತಮ್ಮ ಸ್ವಂತ ಪಂಗಡಗಳ ಲಾಭಗಳಿಕೆಯನ್ನು ನೋಡಿಕೊಳ್ಳುತ್ತಿರುವ ಸಲುವಾಗಿ ಎಂಬು ದಕ್ಕೆ ಕಡೆಯಲ್ಲಿ ಇಡೀ ಲೋಕವೇ ಸಾಕ್ಷಿಯಾಗುವುದು. ಯೆಶಾ. 56:11.

ಕರ್ತನು ಈ ಪಂಗಡಗಳನ್ನು ಎಂದೂ ತಿಳಿದಿಲ್ಲ, ಅವುಗಳನ್ನು ಎಂದೂ ಮಾನ್ಯಮಾಡಿಲ್ಲ, ಅವುಗಳಿಗೆ ಎಂದೂ ಅಧಿಕಾರ ನೀಡಿಲ್ಲ; ಅವುಗಳು ಮಾನವ ನಿರ್ಮಿತವಾಗಿದ್ದು ಮಾನವರ ಸಲುವಾಗಿ ಇರುವಂಥದ್ದು ಮತ್ತು ಅವು ಕರ್ತನಿಗಾಗಿ ಇಲ್ಲವೇ ಆತನ ಮಹಿಮೆಗಾಗಿ ಇರುವಂಥದಲ್ಲ. ಕ್ರೈಸ್ತತ್ವದಲ್ಲಿ ಇರುವುದೆಲ್ಲವೂ ತಮ್ಮಿಂದಲೇ ಆದವೆಂದು ಹೇಳಿಕೊಂಡು ಅವರು ಹೆಮ್ಮೆಯಿಂದ ಕೊಚ್ಚಿಕೊಳ್ಳುವವರಾಗಿದ್ದು, ತಾವುಗಳು ಇಲ್ಲದೆಯೇ (ಕ್ರಿಸ್ತನ) ಅಮೂಲ್ಯ ರಕ್ತದಿಂದ ವಿಮೋಚಿಸಲ್ಪಟ್ಟು ಆ ವಿಮೋಚಕನಿಗೆ ಪ್ರತಿಷ್ಠಿತವಾದ ಆದಿ ಸಭೆಯಲ್ಲಿ ಇದ್ದಂಥ ಸರಳ ರೀತಿಯಲ್ಲಿ ದೇವರ ನಿಜವಾದ ಧ್ಯೇಯೋದ್ದೇಶಗಳು ನೆರವೇರಿ ಏಳಿಗೆಯಾಗುತ್ತಿತ್ತೆಂಬುದನ್ನು ಗ್ರಹಿಸದೇ ಇರುವರು. ಮದಲಗಿತ್ತಿ ಎಂಬ ವರ್ಗವನ್ನು ಆದುಕೊಂಡು ಉಳಿದದ್ದೆಲ್ಲವನ್ನು ಬಿಟ್ಟುಬಿಡುವುದನ್ನು ತಾತ್ಪರ್ಯವಾಗಿ ಹೀಗೆ ಹೇಳಲಾಗಿರುವುದು: "ನಾನು ನಿಮ್ಮನ್ನು ಎಂದೂ ತಿಳಿದಿಲ್ಲ, ನಿಮ್ಮನ್ನು ಎಂದೂ ಮಾನ್ಯಮಾಡಿಲ್ಲ, ನಿಮಗೆ ಎಂದೂ ಅಧಿಕಾರ ನೀಡಿಲ್ಲ;" ಹಾಗೂ ಈ ಅನಧಿಕೃತ ಕ್ರೈಸ್ತಪಂಗಡಗಳು ಮಹಾ ಸಂಕಟದ ಕಾಲದಲ್ಲಿ ಇಲ್ಲದಂತಾಗುವವು. ಹೀಗಿದ್ದರೂ ಈ ಸುಳ್ಳಾದ ಪಂಗಡ ವ್ಯವಸ್ಥೆಗಳಿಂದ ಮೋಸಹೋಗಿರುವ ಲಕ್ಷಾಂತರ ಜನರು (ಕ್ರಿಸ್ತನ) ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಸತ್ಯದ ವಿಷಯವಾದ ಪರಿಜ್ಞಾನವನ್ನು ಹೊಂದಿ ದೇವರ ವೈಭವಯುತವಾದ ಯೋಜನೆಯ ನೆರವೇರಿಕೆಯಲ್ಲಿ ಪ್ರಕಟವಾಗುವಂಥ ಆತನ ಗುಣಾತಿಶಯಗಳ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಪಡೆಯುವ ದಿವ್ಯಾವಕಾಶವನ್ನು ಪಡೆಯುವರು ಎಂಬುದಕ್ಕೆ ಸಂತೋಷಿಸುವವರಾಗಿದ್ದೇವೆ. ಹೀಗೆ ಈ ವಿಶೇಷ ಬಹುಮಾನ–ವನ್ನು (ಬಿರುದನ್ನು) ಕಳಕೊಂಡವರಿಗೂ ಸಹ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ಅಲ್ಪವಾದ ಬಹುಮಾನವನ್ನು ಇಲ್ಲವೇ ದೇವಾನುಗ್ರಹವನ್ನು ಪಡೆಯಬಹುದಾದ ದಿವ್ಯಾವಕಾಶವನ್ನು ನೀಡಲಾಗಿರುವುದು.

## "ಧರ್ಮವನ್ನು ಮೀರಿ ನಡಯುವವರೇ, ನನ್ನಿಂದ ತೊಲಗಿ ಹೋಗಿರಿ"

"ಬಾಬೇಲು" ಎಂದು ಕರೆಯಲ್ಪಡುವ ಪಂಗಡದ ವ್ಯವಸ್ಥೆ–ಗಳಲ್ಲಿ ಸತ್ಯದ ಪರಿಜ್ಞಾನಕ್ಕೆ ಸೇರಿ ಬಿಡುಗಡೆ ಹೊಂದಬೇಕಾದ ಸಕ್ರಿಯ ಕೆಲಸಗಾರರು ಇನ್ನೂ ಇರುವರೆನ್ನುವುದು ನಮ್ಮ ನಂಬಿಕೆ. ನಮ್ಮ ಕರ್ತನು ಇದನ್ನು ತಿಳಿಸುತ್ತಾ ಹೀಗೆ ಹೇಳಿರುವನು: "ನನ್ನ ಪ್ರಜೆಗಳೇ, ಅವಳನ್ನು ಬಿಟ್ಟುಬನ್ನಿರಿ." ಆತನ ಜನರಲ್ಲಿ ಕೆಲವರು ಬಾಬೇಲಿನೊಳಗೆ ಇರುವರು ಮತ್ತು ಕರ್ತನ ಹೆಸರಿನಲ್ಲಿ ಈಗಿನ ಕಾಲದಲ್ಲಿ ಪ್ರಕಟವಾಗಿರುವ ಸತ್ಯಾರ್ಥಗಳನ್ನು ತಿಳಿಸಿ ಅವರನ್ನು ಹೊರಗೆ ಕರೆತರುವುದು ನಮ್ಮ ಈಗಿನ ಕಾರ್ಯಭಾರವಾಗಿ–ರುವುದು. ನಿಜವಾಗಿಯೂ ಇದು ಕರ್ತನವರು ಯಾರೆಂಬುದನ್ನು ಮತ್ತು ಅವರು ಎಲ್ಲಿ ಹೇಗೆ ನಿಂತಿರುವರೆಂಬುದನ್ನೂ ಹಾಗೂ ಅವರ ಕರ್ತವ್ಯವೇನೆಂಬುದನ್ನು ತೋರಿಸಿ ಕೊಡುವುದು. ಅನೀತಿಯಿಂದ ಕೂಡಿದ ಈ ವ್ಯವಸ್ಥೆಯಲ್ಲಿ ಇರುವ ಇತರ ಸಕ್ರಿಯ ಕೆಲಸಗಾರರು ನಕಲೀ ಸತ್ಯವಂತರಾಗಿದ್ದು ದೇವರ ಸಂದೇಶವನ್ನು ತಪ್ಪಾಗಿ ನಿರೂಪಿಸುವವರಾಗಿ ಕರ್ತನ ಜನರನ್ನು ಕಟ್ಟಿಹಾಕಿ ಅವರನ್ನು ದಾಸತ್ವಕ್ಕೆ ತಿರುಗಿಸುವವರಾಗಿರುವರು; ಏಕೆಂದರೆ ಅವರು ಹೃದಯದಲ್ಲಿ ಆತನಿಗೆ ನಿಷ್ಠೆಯುಳ್ಳವರಾಗದೆ ಇದ್ದು ಬಾಬೇಲಿನಿಂದ ಹೊರಗೆ ಬರಲಾರರು. ಹೀಗಾಗಿ ಅವರು ಅದಕ್ಕೆ ಬರಲಿರುವ ದಂಡನೆಯಲ್ಲಿ ಪಾಲುಗಾರರಾಗುವರು. ಅವರು ಮಹಾ ಸಂಕಟದ ಕಾಲದಲ್ಲಿ ಸೇರುವರು ಮತ್ತು ಕನಿಷ್ಠಪಕ್ಷವೆಂದರೆ ಕೆಲವು ಸಮಯಗಳಾದರೂ ಕರ್ತನ ಅನ್ಯೋನ್ಯತೆಯಿಂದ ಬೇರ್ಪಟ್ಟವರಾಗುವರು. ಈ ಅನೀತಿ ಕಾರ್ಯಮಾಡುವವರು ತಮಗೆ ಸಾಕಷ್ಟು ಸಂಕಷ್ಟಗಳನ್ನು ತಂದುಕೊಳ್ಳುವರು. ಅವರು ದೇವರ ಗುಣಾತಿಶಯಗಳು ಹಾಗೂ ಯೋಜನೆಗಳನ್ನು ತಪ್ಪಾಗಿ ನಿರೂಪಿಸುವುದರ ಮೂಲಕ ಮಾನವರ ಮೇಲೆ ಈ ಸಂಕಷ್ಟಗಳು ಬರುವಂತಾಗಲು ಸಹಾಯ ಮಾಡಿದವರಾಗುವರು. ಅದು ಒಂದು ಕಠಿಣವಾದ ಶಿಕ್ಷೆ ಮತ್ತು ಅವರ ವಿಷಯವಾಗಿ ನಮಗಿರುವ ನಿರೀಕ್ಷೆಯೆಂದರೆ: "ನೀನು ಲೋಕದಲ್ಲಿ ನ್ಯಾಯಕಾರ್ಯವನ್ನು ನಡೆಸುವಾಗ ಭೂನಿವಾಸಿಗಳು ಧರ್ಮಜ್ಞಾನವನ್ನು ಪಡೆದು –ಕೊಳ್ಳುವರು." – ಯೆಶಾಯ 26:9

## ಬಂಡೆಯ ಮೇಲೆ ಇಲ್ಲವೇ ಮರಳಿನ ಮೇಲೆ ಮನೆ ಕಟ್ಟುವುದು

ಬಂಡೆಯ ಮೇಲೆ ಕಟ್ಟಿದ ಮನೆ ಅಥವಾ ಮರಳಿನ ಮೇಲೆ ಕಟ್ಟಿದ ಮನೆಯ ವಿಷಯವಾದ ಶಬ್ಧಚಿತ್ರ ಅಥವಾ ಸಾಮ್ಯವು ಕ್ರೈಸ್ತಸಭೆ ಮತ್ತು ಲೋಕವನ್ನು ಸೂಚಿಸುವುದಿಲ್ಲ; ಆದರೆ ಸಭೆಯಲ್ಲಿನ ಎರಡು ಗುಂಪುಗಳನ್ನು ಸೂಚಿಸುವುದು. "ಈ ನನ್ನ ಮಾತುಗಳನ್ನು ಕೇಳಿದವರು" ಇವರನ್ನುಳಿದು ಯಾರೂ ಈ ಸಾಮ್ಯದಲ್ಲಿ ಇರುವುದಿಲ್ಲ. ಲೋಕವು ನಮ್ಮ ಕರ್ತನ ಸಂದೇಶವನ್ನು ಕೇಳುವುದೇ ಇಲ್ಲ. ಅಪೋಸ್ತಲನು ಸಾರಿ ಹೇಳಿರುವಂತೆ ಲೋಕವು ಆತ್ಮಿಕ ವಿಷಯಗಳಲ್ಲಿ ಕಿವುಡಾಗಿಯೂ ಕುರುಡಾಗಿಯೂ ಇರುವುದು. ಕರ್ತನ ಮಾತುಗಳನ್ನು ಕೇಳಿ ಅವುಗಳನ್ನು ತಿಳಿದುಕೊಳ್ಳುವವರು ಕಡೆಯ ಪಕ್ಷದಲ್ಲಿ ಹೆಸರಿನ ಸಭೆಯನ್ನು ಸೂಚಿಸುವುದು ಮತ್ತು ಈ ಹೆಸರಿನ ಸಭೆಯಲ್ಲಿ ಇರುವವರಲ್ಲಿ ಕೆಲವರು ಕರ್ತನ ಮಾತಿಗೆ ವಿಧೆಯರಾಗಿದ್ದು ಇತರರು ಅವಿಧೇಯರಾಗಿರುವರು. ವಿಧೇಯರು ಬಂಡೆಯ ಮೇಲೆ (ಮನೆ) ಕಟ್ಟಿದವರು, ಅವಿಧೇಯರು ಮರಳಿನ ಮೇಲೆ.

ಕರ್ತನು ವಿವರಿಸಿ ಹೇಳಿರುವುದೆಂದರೆ, ಬಂಡೆಯ ಮೇಲೆ ಕಟ್ಟುವವರು ಕೇವಲ ತನ್ನ ಸಂದೇಶವನ್ನು ಕೇಳುವವರು

ಮಾತ್ರವಾಗಿರದೆ ತಮ್ಮ ಸಾಮರ್ಥ್ಯಾನುಸಾರ ಅದಕ್ಕೆ ವಿಧೇಯರೂ ಆಗಿರುವರು. ಆತನು ಉಲ್ಲೇಖಿಸಿರುವ ಮಾತುಗಳು ಅಥವಾ ಸಂದೇಶಗಳನ್ನು ನೆನಪಿಗೆ ತಂದುಕೊಳ್ಳೋಣ; ಅವುಗಳು ಪರ್ವತ ಪ್ರಸಂಗದಲ್ಲಿ ನುಡಿರುವ ಮಾತುಗಳು ಇಲ್ಲವೇ ಸಂದೇಶಗಳು. ಅವು ದೇವರಿಂದ ಆಶೀರ್ವದಿಸಲ್ಪಟ್ಟ ಸಂಗತಿಗಳನ್ನೂ ಇವುಗಳಿಗೆ ಪ್ರತಿಯಾಗಿ ಆತನಿಂದ ಮನ್ನಣೆ ಪಡೆಯದ ಸಂಗತಿಗಳನ್ನೂ ತೋರಿಸುವುದು. ಯಾರು ಈ ದೇವ ಸಂದೇಶಗಳನ್ನು ಅಂದರೆ ಪರಲೋಕದಿಂದ ಬಂದ ಸಂದೇಶಗಳನ್ನು ಅನುಸರಿಸಿ ಪರಿಶ್ರಮವಹಿಸಿ ತಮ್ಮ ಸಾಮರ್ಥ್ಯಾನುಸಾರವಾಗಿ ಇವುಗಳಿಗೆ ವಿಧೇಯರಾಗುವರೋ ಅವರು ಶಾಶ್ವತವಾದ ಅಸ್ತಿವಾರಗಳನ್ನು ಹಾಕುವವರಾಗಿದ್ದು ಅವುಗಳು ಈಗಿನ ಜೀವಿತದಲ್ಲಿ ಉಂಟಾಗುವ ಬಿರುಗಾಳಿ ಕಷ್ಟ ಪರಿಶೋಧನೆ ಇವೆಲ್ಲವುಗಳನ್ನು ಎದುರಿಸಿ ನಿಲ್ಲುವುದನ್ನು ಖಚಿತಪಡಿಸುವವು.

ಒಡೆಯನ ಮಾತುಗಳನ್ನು ಕೇಳಿ "ಹೌದು, ಕರ್ತನೇ" ಎಂದು ಹೇಳುವವರು ಯಾರೆಂದರೆ ಒಡೆಯನ ಬೋಧನೆಗಳನ್ನು ಅನುಷ್ಠಾನಕ್ಕೆ ತರದವರು ಅಂದರೆ ಸತ್ಯವೆಂಬ ಬಂಡೆಯಾದ ಕ್ರಿಸ್ತನ ಮೇಲೆ ಸರಿಯಾಗಿ ಕಟ್ಟಲಾರದವರು. ಅವರು ತಮ್ಮ ನಿರೀಕ್ಷೆ ನಂಬಿಕೆ ಭರವಸಗಳನ್ನು ಸ್ಥಿರವಲ್ಲದ ಅಸ್ತಿವಾರದ ಮೇಲೆ ಕಟ್ಟುತ್ತಿರುವವರು. ಜೀವಿತದಲ್ಲಿ ವಿಪತ್ತುಗಳು ಸಂಭವಿಸಿದಾಗ ಅವರ ನಿರೀಕ್ಷೆಗಳು ಶಿಥಿಲಗೊಂಡು ಅವರ ನಂಬಿಕೆಯು ಕುಸಿದು ಬೀಳುವುದು. ಹೀಗೆ ಕರ್ತನು ಬೋಧಿಸಿರುವುದೆಂದರೆ ಕೇವಲ ತನ್ನ ಚಿತ್ತವನ್ನು ಅಂದರೆ ಧಾರ್ಮಿಕ ಬೋಧನೆಯ ವಿಷಯವಾಗಿ ತಿಳುವಳಿಕೆಯನ್ನು ಪಡೆದಿರುವುದೇ ಮಾತ್ರವಲ್ಲ; ಆದರೆ ಆತನು ನಮಲ್ಲಿ ಎದುರು ನೋಡುತ್ತಿರುವದು – ತನ್ನ ಬೋಧನೆಗೆ ಸಂಪೂರ್ಣವಾಗಿ ಹೊಂದಿಸಿಕೊಂಡು ಹೃದಯದ ಸಾಮರಸ್ಯಕ್ಕೆ ಬಂದವರಾಗಿ ಜೀವನದ ಎಲ್ಲಾ ನಡಾವಳಿಯಲ್ಲಿ ತಮ್ಮ ಸಾಮರ್ಥ್ಯಾಸಾರ ವಿಧೇಯರಾಗುವ ಗುಣನಡತೆಗಳನ್ನು ಬೆಳಸಿಕೊಳ್ಳುವುದನ್ನು. ಜ್ಞಾನದ ಮೇಲೆ ತಮ್ಮ ನಂಬಿಕೆಯನ್ನು ಕಟ್ಟಿಕೊಂಡವರಾಗಿ ಅದಕ್ಕೆ ವಿಧೇಯರಾಗದೆ ಅಂದರೆ ಕೃಪೆಯಲ್ಲಿ ಅಭಿವೃದ್ದಿಯಾಗದೆ ಇರುವ ಇತರರು ಆ ರಾಜ್ಯದಲ್ಲಿ ಅಂಗೀಕೃತ ರಾಗದೆ ಮದಲಗಿತ್ತಿಯ ವರ್ಗದಲ್ಲಿ ಭಾಗಿಗಳಾಗದೆ ದೇವರ ಪ್ರಿಯ ಕುಮಾರನೊಡನೆ ಸಹಬಾಧ್ಯರಾಗದೆ ಹೋಗುವರು.

## "ಆ ದಿನದ ಬೆಂಕಿ"

ಈ ಪಾಠದಲ್ಲಿ ನಮ್ಮ ಕರ್ತನು ಸುವಾರ್ತಾ ಯುಗದ ಪರ್ಯಂತರ ಕ್ರೈಸ್ತರೆಲ್ಲರ ಮೇಲೆ ಬರುವ ಪರಿಶೋಧನೆ ಪರೀಕ್ಷೆಗಳು ಮಾತ್ರವಲ್ಲದೆ ವಿಶೇಷವಾಗಿ ಈ ಯುಗದ ಸಮಾಪ್ತಿಯಲ್ಲಿ ಅಂದರೆ "ಸುಗ್ಗಿಯ" (ಅಂದರೆ ಬೆಳೆಯನ್ನು ಕೊಯ್ಯುವ) ಕಾಲದಲ್ಲಿ ಬರುವ ದೊಡ್ಡ ಪರಿಶೋಧನೆಯ ವಿಷಯವಾಗಿಯೂ ವರ್ಣನೆ ಮಾಡಿರುವನು. ಇಲ್ಲಿ ಆತನು ನೀಡಿರುವ ಸಂಕೇತಗಳೆಂದರೆ ಮಳೆ ಪ್ರವಾಹ ಮತ್ತು ತನ್ನ ತೋರಿಕೆಯ ಹಿಂಬಾಲಕರ ನಂಬಿಕೆಯೆಂಬ ಕಟ್ಟಡದ ಮೇಲೆ ಬೀಸುವ ಬಿರುಗಾಳಿಗಳು. ಅವು ತನ್ನ ಬೋಧನೆಗಳ ಅನುಸಾರ ಸರಿಯಾಗಿ ಕಟ್ಟಲ್ಪಡದ ನಂಬಿಕೆಯನ್ನು ಉರುಳಿಸಿಬಿಡುವುದು ಆದರೆ ಅವುಗಳಿಗೆ ಸತ್ಯವೆಂಬ ಬಂಡೆಯ ಮೇಲೆ ಕಟ್ಟಿರುವುದಕ್ಕೆ ಹಾನಿಮಾಡುವ ಸಾಮರ್ಥ್ಯವಿರುವುದಿಲ್ಲ. ಕ್ರೈಸ್ತ ಸಮುದಾಯದ ಮೇಲೆ ಸತ್ಯವೆಂಬ ಪ್ರಬಲವಾದ ಮಳೆಯ ಬೀಳುವಿಕೆಯು ಮುಂದುವರೆಯುತ್ತಲಿರುವುದು. ಮಹಾ ಬಿರುಗಾಳಿಯು ಈಗಾಗಲೇ ಉಗ್ರವಾಗಿ ಬೀಸುತ್ತಿರುವುದು. ಎಲ್ಲಾ ಬಗೆಯ ಕ್ರೈಸ್ತಪಂಗಡಗಳು ಈ ಕಂಪನದಿಂದ ನಡುಗುತ್ತಿರುವವು. ಮಾನವ ಸಂಪ್ರದಾಯಗಳು ನಂಬಿಕೆಗಳು ಸಿದ್ದಾಂತಗಳು ಅಜ್ಞಾನ "ಕತ್ತಲ ಕಾಲದಲ್ಲಿ" (ಡಾರ್ಕ್ ಏಜಸ್) ಜನಿಸಿದ ಮೂಡನಂಬಿಕೆ ಇವುಗಳ ಮೇಲೆ ಹಾಕಲಾದ ತಮ್ಮ ಅಸ್ತಿವಾರಗಳು ತೃಪ್ತಿಕರವಾದವು–ಗಳಲ್ಲವೆಂಬುದು ಅವರಿಗೆ ಗ್ರಹಿಕೆಯಾಗುತ್ತಿರುವದು. ಇನ್ನು ಕೆಲವು ಸಮಯದಲ್ಲೇ ನಾಮಾಂಕಿತ ಕ್ರೈಸ್ತರು ಮರಳಿನ ಮೇಲೆ ಕಟ್ಟಿರುವ ಅಸ್ತಿವಾರವನ್ನು ಸತ್ಯವು ಅಲುಗಾಡಿಸುವುದು ಮತ್ತು ಪತನವು ಅದನ್ನು ಹಿಂಬಾಲಿಸುವುದು. ಈಗಾಗಲೇ ಪ್ರಾರಂಭವಾಗಿರುವ "ಆ ದಿನದ" ಮಹಾ ಬಿರುಗಾಳಿಯನ್ನು ಎದುರಿಸಿ ನಿಲ್ಲಲು ಕೇವಲ ದೇವರ ನಿಜವಾದ ಜನರು ಮಾತ್ರ ಸಮರ್ಥರಾಗಿರುವರು.

ಈ ಬಿರುಗಾಳಿ ಮತ್ತು ಪ್ರವಾಹಗಳು ಕರ್ತನು ಪ್ರವಾದಿ–ಯಾದ ಯೆಶಾಯನ ಮೂಲಕ ತಿಳಿಸಿರುವಂಥದ್ದೇ – "ನಾನು ನ್ಯಾಯವನ್ನು ನೂಲನ್ನಾಗಿಯೂ ಧರ್ಮವನ್ನು ಮಟ್ಟಗೋಲನ್ನಾ–ಗಿಯೂ ಮಾಡುವೆನು. ಕಲ್ಮಳೆಯು ಅಸತ್ಯದ ಆಶ್ರಯವನ್ನು ಬಡಿದುಕೊಂಡು ಹೋಗುವದು, ಜಲಪ್ರವಾಹವು (ಮೋಸದ) ಮರೆಯನ್ನು ಮುಣುಗಿಸುವುದು. ಮೃತ್ಯುವಿನಿಂದ ನೀವು ಪಡೆದುಕೊಂಡ ಒಡಂಬಡಿಕೆಯು ಸಾಗದು, ಪಾತಾಳದೊಡನೆ ನೀವು ಮಾಡಿಕೊಂಡ ಒಪ್ಪಂದವು ನಿಲ್ಲದು; ವಿಪರೀತ ಬಾಧೆಯು ದೇಶದೊಳಗೆ ಹಾದುಹೋಗುವಾಗ ನಿಮ್ಮನ್ನು ತುಳಿದುಬಿಡುವದು. ಅದು ಹಾದು ಹೋಗುವಾಗೆಲ್ಲಾ ನಿಮ್ಮನ್ನು ಹಿಡಿಯುವದು; ಬೆಳಬೆಳಗೂ ಹಗಲುರಾತ್ರಿಯೂ ಅದು ಹಾದುಹೋಗುವದು; ಆಗ ಯೆಹೋವನ ಮಾತನ್ನು (ಸಂದೇಶವನ್ನು, ಸತ್ಯವನ್ನು) ಗ್ರಹಿಸಿಕೊಳ್ಳುವುದು ಬರೀ ಭಯವೇ. – ಯೆಶಾಯ 28:17–19

ಇದೇ ಪರಿಶೋಧನೆಯ ದಿನವನ್ನು ಅಪೋಸ್ತಲನಾದ ಪೌಲನು ಇನ್ನೊಂದು ಸಂಕೇತದ ಮೂಲಕವಾಗಿ ಚಿತ್ರಿಸಿರುವನು, ಆತನು ಹೇಳುವುದು: "ಅವನವನ ಕೆಲಸವೆಂಥದೋ ಆ (ದಿನದ) ಬೆಂಕಿ ಶೋಧಿಸುವದು." ನಿಜವಾದ ನಂಬಿಕೆಯುಳ್ಳವರನ್ನು ಬಂಡೆಯ ಮೇಲೆ ನಿಜವಾದ ಅಸ್ತಿವಾರದ ಮೇಲೆ ಕಟ್ಟಿರುವವನಾಗಿ ಅವನು ಚಿತ್ರಿಸಿರುವನಾದರೂ ಸೂಕ್ತವಾದ ಅಸ್ತಿವಾರ ಸಹಿತವಾದ ಸರಿಯಾದ ಮನೆಯು ಅಥವಾ ನಂಬಿಕೆಯು ಅಗತ್ಯ ವೆಂಬುದನ್ನೂ ನಮಗೆ ತೋರಿಸಿಕೊಟ್ಟಿರುವನು. ಮರ ಒಣಹುಲ್ಲು ಒಣಪೈರು ದಹನವಸ್ತುಗಳಿಂದ ಕಟ್ಟಿದಂಥ ಒಂದು ನಂಬಿಕೆಯ ಕಟ್ಟಡವನ್ನು ಚಿತ್ರಿಸಿ, ಅದು ಈ ದಿನದಲ್ಲಿ ದೇವರ ನ್ಯಾಯವಿಚಾರಣೆ ಎಂಬ ಅಗ್ನಿಯು ಪ್ರತಿಯೊಂದು ಮತಬೋಧನೆಗಳನ್ನು ಪರಿಶೋಧಿಸಿ ತಪ್ಪಾದವುಗಳೆಲ್ಲವನ್ನು ನಾಶ ಮಾಡುವಾಗ ಶೀಘ್ರದಲ್ಲೇ ಇದೂ ನಾಶಮಾಡಲ್ಪಡುವುದೆಂದು ತೋರಿಸಿರುವನು. ಆತನು ಚಿನ್ನ ಬೆಳ್ಳಿ ಮತ್ತು ಅಮೂಲ್ಯ ರತ್ನಗಳಿಂದ ಅಂದರೆ ದೇವರ ವಾಗ್ದಾನಗಳ ಮೇಲೆ ನಿರ್ಮಾಣ ಮಾಡಿರುವ ಕಟ್ಟಡ ವನ್ನೂ ಸಹ ಚಿತ್ರಿಸಿ ಅವು ಪ್ರತಿಯೊಂದು ಪರಿಶೋಧನೆಯನ್ನೂ ಹೇಗೆ ಜಯಿಸಿ ನಿಲ್ಲುವವೆಂಬುದನ್ನು ತೋರಿಸಿಕೊಟ್ಟಿರುವನು.

ಈ ಪಾಠವು ಒಟ್ಟಾರೆ ಹೇಳುವುದೇನೆಂದರೆ, ಯಾವುದೇ ಪರಿಶೋಧನೆಯನ್ನು ಎದುರಿಸಿ ನಿಲ್ಲಲು ಮೊದಲನೆಯದಾಗಿ ನಾವು ಈ ವಿಷಯದಲ್ಲಿ ಭಾಗಿಗಳಾಗಲು ಇಲ್ಲವೇ ಪಾಲನ್ನು ಹೊಂದಲು ಬಂಡೆಯ ಮೇಲೆ ಅಸ್ತಿವಾರವನ್ನು ಹೊಂದಿರಬೇಕು; ಎರಡನೆಯದಾಗಿ, ಕ್ರಿಸ್ತನಲ್ಲಿ ಭರವಸವಿಟ್ಟು ಬಂಡೆಯ ಮೇಲಿರು–ವವರು ಆತನಿಗೂ ಮತ್ತು ಆತನು ಮಾಡಿದ ಸಂಧಾನಕಾರ್ಯಗಳಿಗೂ ನಿಷ್ಠೆಯಿಂದಿರಬೇಕು. ಇಲ್ಲಿ ವಾಕ್ಯಕ್ಕೆ ನಂಬಿಗಸ್ತರಾಗಿ ಅದನ್ನು ಎತ್ತಿಹಿಡಿದು ಕಾಪಾಡಿಕೊಳ್ಳುವವರಾದ "ಚಿಕ್ಕ ಹಿಂಡು" ಮತ್ತು ದೇವರ ವಾಗ್ದಾನಗಳ ವಿಷಯದಲ್ಲಿ ಸಾಕಷ್ಟು ಶ್ರದ್ಧೆ ಜಾಗರೂಕತೆ ಇಲ್ಲದವರಾಗಿ ಹಾಗೂ ಬಹುತೇಕ ತಪ್ಪುಗಳಿಂದ ಕೂಡಿದ ನಂಬಿಕೆಯೆಂಬ ನಶಿಸಿಹೋಗಲಿರುವ ಕಟ್ಟಡವನ್ನು ಹೊಂದಿರುವ "ಮಹಾಸಮೂಹ" ಎಂಬ ಎರಡು ಗುಂಪುಗಳಿರುವುದು. ಈ ಎರಡನೆಯ ಗುಂಪಿನ ಬಗ್ಗೆ ಅಪೋಸ್ತಲನು ಪ್ರಕಟಿಸಿರುವುದು, "ತಾನಾದರೋ ರಕ್ಷಣೆ ಹೊಂದುವನು, ಆದರೆ ಬೆಂಕಿ–ಯೊಳಗಿಂದ ತಪ್ಪಿಸಿಕೊಂಡವನ ಹಾಗಿರುವನು." ಇದು ಮಹಾ ಸಮೂಹವು ಬಿಡುಗಡೆಯಾಗುವುದನ್ನು ಸೂಕ್ತವಾಗಿ ವರ್ಣಿಸುವುದು; ಇವರು "...ಆ ಮಹಾ ಹಿಂಸೆಯನ್ನು ಅನುಭವಿಸಿ ಬಂದ–ವರು; ಯಜ್ಞದ ಕುರಿಯಾದಾತನ ರಕ್ತದಲ್ಲಿ ತಮ್ಮ ನಿಲುವಂಗಿಯನ್ನು ತೊಳೆದು ಶುಭ್ರ ಮಾಡಿದ್ದಾರೆ." – 1 ಕೊರಿಂಥ 3:12,15; ಪ್ರಕಟನೆ 7:14

## "ವಾಕ್ಯದ ಪ್ರಕಾರ ನಡೆಯುವವರಾಗಿರಿ"

ನಮ್ಮ ಸುವರ್ಣ ಪಥ್ಯಭಾಗವನ್ನು ಸೂಕ್ತವಾಗಿ ಆಯ್ಕೆ ಮಾಡಲಾಗಿದೆ – "ವಾಕ್ಯದ ಪ್ರಕಾರ ನಡೆಯುವವರಾಗಿರಿ; ಅದನ್ನು ಕೇಳುವವರು ಮಾತ್ರವೇ ಆಗಿದ್ದು ನಿಮ್ಮನ್ನು ನೀವೇ ಮೋಸಗೊಳಿಸಬೇಡಿರಿ." ದೇವರ ಚಿತ್ತದ ವಿಷಯವಾದ ಪರಿಜ್ಞಾನವನ್ನು ಪಡೆಯುವ ಗೌರವದಲ್ಲಿ ಸೇರುವುದು ಒಂದು ಮಹಾ ಸೌಭಾಗ್ಯವೂ, ಒಂದು ಮಹಾ ಆಶೀರ್ವಾದವೂ ಅಗಿರುವುದು. ಆದರೆ ಅದು ಒಂದು ದೊಡ್ಡ ಜವಾಬ್ದಾರಿಯನ್ನೂ ಹೊತ್ತು ತಂದಿರುವುದು: "ಯಾವನಿಗೆ ಬಹಳವಾಗಿ ಕೊಟ್ಟಿದೆಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವುದು." ಪರಲೋಕದಿಂದ ನುಡಿದಾತನ ಶಬ್ಧವನ್ನು ಅಂದರೆ ಕ್ರಿಸ್ತನ ಮೂಲಕವಾಗಿ ಸಮಾಧಾನದ ವಾಕ್ಯವನ್ನು ಕೇಳಿರುವೆವು. ಪಾಪ ಪರಿಹಾರ ವಿಷಯದಲ್ಲಿನ ಸಂದೇಶಾಧಿಕಾರ ದೆಸೆಯಿಂದಾಗಿ ಪ್ರತಿಷ್ಠೆ ಮಾಡಿಕೊಳ್ಳುವ ಮೂಲಕವಾಗಿ ಕ್ರಿಸ್ತನ ದೇಹದ ಅಂಗಗಳಾಗಿ ಅಂಗೀಕರಿಸಲ್ಪಟ್ಟ ನಾವು ಇತರರಿಗಿಂತಲೂ ಹೆಚ್ಚಾದ ಜವಾಬ್ದಾರಿಯನ್ನು ಹೊಂದಿದ್ದೇವೆ. ಪ್ರಭಾವಯುಕ್ತವಾದ ಸಂಗತಿಗಳನ್ನು ಪಡೆದುಕೊಳ್ಳಲು ಆಹ್ವಾನಿಸಲ್ಪಟ್ಟವರಾದ ನಾವು ಈ ಗೌರವವನ್ನು ಪಡೆಯುವುದು ಮಾತ್ರವಲ್ಲದೆ ಒಡಂಬಡಿಕೆಯಲ್ಲಿ ವಿಧಿಸಲಾದವುಗಳಿಗೆ ವಿಧೇಯರಾಗುವುದರ ಮೂಲಕವಾಗಿ ನಮಗೆ ದೊರೆತಿರುವ ಸವಲತ್ತುಗಳನ್ನು ಬಳಸಿಕೊಳ್ಳುವವರಾಗಿ ನಮ್ಮ ಮೆಚ್ಚುಗೆಯನ್ನು ಸೂಚಿಸಿ ತೋರ್ಪಡಿಸಬೇಕು. ಹೇಗೆಂದರೆ ದೇವರ ಸೇವೆ ಮಾಡುವಲ್ಲಿ, ನಂಬಿಗಸ್ತಿಕೆಯಿಂದ ನೀತಿಗೆ ವಿಧೇಯರಾಗುವಲ್ಲಿ ಹಾಗೂ ಇದೇ ಮಾರ್ಗವನ್ನು ಅನುಸರಿಸುತ್ತಿರುವ ಇತರರಿಗೆ ಸಹಾಯಮಾಡುವಲ್ಲಿ ನಮ್ಮ ದೇಹಗಳನ್ನು ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳುವವರಾಗಬೇಕು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ 30 | ಕಪೆರ್ನೌಮ್ | ಸೈನ್ಯಾಧಿಕಾರಿಯ ಸೇವಕನನ್ನು ಗುಣಪಡಿಸಿದ್ದು | 8:5–13 | –– | 7:1–10 | –– |
| | ನಾಯಿನ್ | ವಿಧವೆಯ ಮಗನನ್ನು ಎಬ್ಬಿಸಿದುದು | –– | –– | 7:11–17 | –– |

## ಮತ್ತಾಯ 8:5–13

ಆತನು ಕಪೆರ್ನೌಮಿಗೆ ಬಂದಾಗ ದಂಡಿನ ಶತಾಧಿಪತಿಯು ಆತನ ಬಳಿಗೆ ಬಂದು––ಪ್ರಭುವೇ, ನನ್ನ ಆಳು ಪಾರ್ಶ್ವವಾಯುವಿನಿಂದ ಬಹಳ ಕಷ್ಟಪಡುತ್ತಾ ಮನೆಯಲ್ಲಿ ಬಿದ್ದಿದ್ದಾನೆ ಎಂದು ಹೇಳಿಕೊಂಡನು. ಆತನು ಅವನಿಗೆ––ನಾನು ಬಂದು ಅವನನ್ನು ವಾಸಿಮಾಡುತ್ತೇನೆ ಎಂದು ಹೇಳಿದ್ದಕ್ಕೆ ಆ ಶತಾಧಿಪತಿಯು––ಪ್ರಭುವೇ, ನೀನು ನನ್ನ ಮನೆಗೆ ಬರತಕ್ಕಷ್ಟು ಯೋಗ್ಯತೆ ನನ್ನಲ್ಲಿಲ್ಲ; ನೀನು ಒಂದು ಮಾತು ಹೇಳಿದರೆ ಸಾಕು, ನನ್ನ ಆಳಿಗೆ ಗುಣವಾಗುವದು. ನಾನು ಸಹ ಮತ್ತೊಬ್ಬರ ಕೈಕೆಳಗಿರುವವನು; ನನ್ನ ಕೈಕಳಗೆ ಸಿಪಾಯಿಗಳಿದ್ದಾರೆ; ನಾನು ಅವರಲ್ಲಿ ಒಬ್ಬನಿಗೆ ಹೋಗು ಎಂದು ಹೇಳಿದರೆ ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಎಂದು ಹೇಳಿದರೆ ಬರುತ್ತಾನೆ; ನನ್ನ ಆಳಿಗೆ ಇಂಥಿಂಥದನ್ನು ಮಾಡು ಎಂದು ಹೇಳಿದರೆ ಮಾಡುತ್ತಾನೆ ಅಂದನು. ಯೇಸು ಇದನ್ನು ಕೇಳಿ ಆಶ್ಚರ್ಯಪಟ್ಟು, ತನ್ನ ಹಿಂದೆ ಬರುತ್ತಿದ್ದವರಿಗೆ––ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಇದಲ್ಲದೆ ನಿಮಗೆ ಹೇಳುವುದೇನೆಂದರೆ ಮೂಡಣ ಪಡವಣ ದಿಕ್ಕುಗಳಿಂದ ಬಹಳ ಜನ ಬಂದು ಪರಲೋಕ–ರಾಜ್ಯದಲ್ಲಿ ಅಬ್ರಹಾಮ್ ಇಸಾಕ್ ಯಾಕೋಬ್ ಎಂಬವರ ಸಂಗಡ ಊಟಕ್ಕೆ ಕೂಡ್ರುವರು; ಆದರೆ ಆ ರಾಜ್ಯದ ಬಾಧ್ಯಸ್ಥರು ಹೊರಗೆ ಕತ್ತಲೆಗೆ ಹಾಕಲ್ಪಡುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು ಎಂದು ಹೇಳಿದನು. ಬಳಿಕ ಯೇಸು ಆ ಶತಾಧಿಪತಿಗೆ––ನೀನು ನಂಬಿದಂತೆ ನಿನಗಾಗಲಿ, ಹೋಗು ಎಂದು ಹೇಳಿದನು. ಅದೇ ಗಳಿಗೆಯಲ್ಲಿ ಅವನ ಆಳಿಗೆ ಗುಣವಾಯಿತು.

## ಲೂಕ 7:1-17

ಆತನು ತನ್ನ ಮಾತುಗಳನ್ನೆಲ್ಲಾ ಜನರು ಕೇಳುವಂತೆ ಹೇಳಿ ಮುಗಿಸಿದ ಮೇಲೆ ಕಪೆರ್ನೌಮಿಗೆ ಬಂದನು. ಅಲ್ಲಿ ದಂಡಿನ ಶತಾಧಿಪತಿಗೆ ಇಷ್ಟನಾದ ಒಬ್ಬ ಆಳು ಕ್ಷೇಮವಿಲ್ಲದೆ ಸಾಯುವ ಹಾಗಿದ್ದನು. ಅವನು ಯೇಸುವಿನ ಸುದ್ದಿಯನ್ನು ಕೇಳಿ ಆತನ ಬಳಿಗೆ--ನೀನು ಬಂದು ನನ್ನ ಆಳನ್ನು ಸ್ವಸ್ಥಮಾಡಬೇಕೆಂದು ಆತನನ್ನು ಬೇಡಿಕೊಳ್ಳುವ ಹಾಗೆ ಯೆಹೂದ್ಯರ ಹಿರಿಯರನ್ನು ಕಳುಹಿಸಿದನು. ಅವರು ಯೇಸುವಿನ ಬಳಿಗೆ ಬಂದು--ನಿನ್ನಿಂದ ಇಂಥ ಉಪಕಾರ ಹೊಂದುವದಕ್ಕೆ ಅವನು ಯೋಗ್ಯನು; ಅವನು ನಮ್ಮ ಜನರನ್ನು ಪ್ರೀತಿಸುವವನು, ತಾನೇ ನಮ್ಮ ಸಭಾಮಂದಿರವನ್ನು ನಮಗಾಗಿ ಕಟ್ಟಿಸಿದನು ಎಂದು ಆತನನ್ನು ಬಹಳವಾಗಿ ಬೇಡಿಕೊಳ್ಳಲು ಯೇಸು ಅವರ ಸಂಗಡ ಹೋದನು. ಆತನು ಇನ್ನೂ ಮನೆಗೆ ಮುಟ್ಟುವುದಕ್ಕೆ ಸ್ವಲ್ಪ ದೂರವಿರುವಾಗಲೇ ಶತಾಧಿಪತಿಯು ಸ್ನೇಹಿತರನ್ನು ಆತನ ಬಳಿಗೆ ಕಳುಹಿಸಿ--ಪ್ರಭುವೇ, ತೊಂದರೆ ತೆಗೆದುಕೊಳ್ಳಬೇಡ; ನೀನು ನನ್ನ ಮನೆಗೆ ಬರತಕ್ಕಷ್ಟು ಯೋಗ್ಯತೆ ನನ್ನಲ್ಲಿಲ್ಲ. ಈ ಕಾರಣದಿಂದ ನಾನು ನನ್ನನ್ನು ನಿನ್ನ ಬಳಿಗೆ ಬರುವದಕ್ಕೆ ತಕ್ಕವನೆಂದು ಎಣಿಸಿಕೊಳ್ಳಲಿಲ್ಲ. ಆದರೆ ನೀನು ಒಂದು ಮಾತು ಹೇಳು, ನನ್ನ ಆಳಿಗೆ ಗುಣವಾಗುವದು. ನಾನು ಸಹ ಮತ್ತೊಬ್ಬರ ಕೈಕೆಳಗಿರುವವನು; ನನ್ನ ಕೈಕೆಳಗೆ ಸಿಪಾಯಿಗಳಿದ್ದಾರೆ; ನಾನು ಅವರಲ್ಲಿ ಒಬ್ಬನಿಗೆ ಹೋಗು ಎಂದು ಹೇಳಿದರೆ ಹೋಗುತ್ತಾನೆ; ಮತ್ತೊಬ್ಬನಿಗೆ ಬಾ ಎಂದು ಹೇಳಿದರೆ ಬರುತ್ತಾನೆ; ನನ್ನ ಆಳಿಗೆ ಇಂಥಿಂಥದನ್ನು ಮಾಡು ಎಂದು ಹೇಳಿದರೆ ಮಾಡುತ್ತಾನೆ ಎಂಬದಾಗಿ ಹೇಳಿಸಿದನು. ಯೇಸು ಈ ಮಾತನ್ನು ಕೇಳಿ ಅವನ ವಿಷಯದಲ್ಲಿ ಆಶ್ಚರ್ಯಪಟ್ಟು ತನ್ನ ಹಿಂದೆ ಬರುತ್ತಿರುವ ಗುಂಪನ್ನು ಹಿಂತಿರುಗಿ ನೋಡಿ--ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು. ತರುವಾಯ ಆ ಶತಾಧಿಪತಿಯ ಕಡೆಯಿಂದ ಬಂದವರು ತಿರಿಗಿ ಮನೆಗೆ ಹೋಗಿ ಆಳು ಆರೋಗ್ಯವಾಗಿರುವುದನ್ನು ಕಂಡರು. ಸ್ವಲ್ಪ ಕಾಲದ ಮೇಲೆ ಆತನು ನಾಯಿನೆಂಬ ಊರಿಗೆ ಹೋದನು. ಆತನ ಜೊತೆಯಲ್ಲಿ ಆತನ ಶಿಷ್ಯರೂ ಇನ್ನೂ ಅನೇಕ ಜನರೂ ಹೋಗುತ್ತಿದ್ದರು. ಆತನು ಊರಬಾಗಲಿನ ಹತ್ತಿರಕ್ಕೆ ಬಂದಾಗ ಸತ್ತುಹೋಗಿದ್ದ ಒಬ್ಬನನ್ನು ಹೊರಗೆ ತರುತ್ತಿದ್ದರು. ಇವನು ತನ್ನ ತಾಯಿಗೆ ಒಬ್ಬನೇ ಮಗನು; ಆಕೆಯು ಗಂಡಸತ್ತವಳಾಗಿದ್ದಳು. ಆಕೆಯ ಸಂಗಡ ಗ್ರಾಮಸ್ಥರು ಅನೇಕರಿದ್ದರು. ಸ್ವಾಮಿಯು ಆಕೆಯನ್ನು ಕಂಡು ಕನಿಕರಿಸಿ--ಅಳಬೇಡ ಎಂದು ಆಕೆಗೆ ಹೇಳಿ ಚಟ್ಟದ ಹತ್ತಿರಕ್ಕೆ ಹೋಗಿ ಅದನ್ನು ಮುಟ್ಟಲು ಹೊತ್ತುಕೊಂಡವರು ನಿಂತರು. ಆಗ ಆತನು – ಯೌವನಸ್ಥನೇ, ಏಳು ಎಂದು ನಿನಗೆ ಹೇಳುತ್ತೇನೆ ಅಂದನು. ಅನ್ನುತ್ತಲೇ ಸತ್ತಿದ್ದವನು ಎದ್ದು ಕೂತುಕೊಂಡು ಮಾತಾಡುವದಕ್ಕೆ ತೊಡಗಿದನು. ಯೇಸು ಅವನನ್ನು ಅವನ ತಾಯಿಗೆ ಕೊಟ್ಟನು. ಎಲ್ಲರೂ ಭಯಹಿಡಿದವರಾಗಿ – ಮಹಾ ಪ್ರವಾದಿಯು ನಮ್ಮಲ್ಲಿ ಎದ್ದಿದ್ದಾನೆ, ದೇವರು ತನ್ನ ಜನರಿಗೆ ದರ್ಶನವನ್ನು ಅನುಗ್ರಹಿಸಿದ್ದಾನೆ ಎಂದು ದೇವರನ್ನು ಕೊಂಡಾಡುವವರಾದರು. ಈ ವಾರ್ತೆಯು ಯೂದಾಯದಲ್ಲಿಯೂ ಸುತ್ತಲಿರುವ ಎಲ್ಲಾ ಪ್ರಾಂತ್ಯದಲ್ಲಿಯೂ ಹಬ್ಬಿತು.

# ಯೇಸುವಿನಲ್ಲಿರುವ ಪುನರುತ್ಥಾನ ಶಕ್ತಿ

**ರೀಪ್ರಿಂಟ್ಸ್ ಪುಟ 3754**

## ಲೂಕ 7:1-17

**"ಯೇಸು ಆಕೆಗೆ--ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ." – ಯೋಹಾನ 11:25**

ಪುನರುತ್ಥಾನಗೊಳಿಸುವ ಶಕ್ತಿಯು ಯೇಸುವಿನಲ್ಲಿದ್ದುದ್ದಕ್ಕೆ ಕಾರಣ ದೇವರ ಯೋಜನೆಯಲ್ಲಿ ತನ್ನನ್ನು ತಾನೇ ಯಜ್ಞಾರ್ಪಣೆ ಮಾಡಿಕೊಂಡು ಅದರ ಪರಿಣಾಮವಾಗಿ ಪುನರುದ್ಧಾರಗೊಳಿಸುವ ಮೂಲಕ ಲೋಕವನ್ನು ವಿಮೋಚಿಸಬೇಕೆಂಬುದಿತ್ತು. ಇದು ಕೇವಲ ಮರಣದಿಂದ ಎಬ್ಬಿಸುವುದನ್ನು ಒಳಗೊಂಡಿರುವುದು ಮಾತ್ರವಲ್ಲದೆ ಮರಣವನ್ನುಂಟುಮಾಡುವ ರೋಗವನ್ನು ನಿರೋಧಿಸುವ ಶಕ್ತಿಯನ್ನು ಅನುಗ್ರಹಿಸಿ ಕಡೆಯಲ್ಲಿ ಪುನಶ್ಚೇತನ –ಗೊಂಡವರನ್ನು ನಮ್ಮ ಆದಿ ತಂದೆತಾಯಿಗಳು ಮೂಲದಲ್ಲಿ ಏದೇನಿನಲ್ಲಿ ಹೊಂದಿದ್ದ ಸಂಪೂರ್ಣವಾದ ಪರಿಪೂರ್ಣತೆಗೆ ಎತ್ತುತ್ತಾ, ಎತ್ತುತ್ತಾ ಬರುವುದಾಗಿರುವುದು. ಈ ಪರಿಪೂರ್ಣತೆ–ಯನ್ನು ನಮ್ಮ ಆದಿ ತಂದೆತಾಯಿಗಳು ತಮ್ಮ ಅವಿಧೇಯತೆಯ ಕಾರಣದಿಂದ, **"ಪಾಪ ಮಾಡುವ ಪ್ರಾಣಿಯೇ ಸಾಯುವನು"** (ಯೆಹೆಜ್ಕೇಲ 18:4) ಎಂಬ ದಂಡನೆಯ ತೀರ್ಪಿನ ಮೂಲಕ ಕಳಕೊಂಡಿದ್ದರು. ಇದು ನಮಗೆ ಪ್ರಕಟವಾಗಿರುವ ದೇವರ ಯೋಜನೆಯ ಅತಿ ಮುಖ್ಯವಾದ ಲಕ್ಷಣವಾಗಿದ್ದು ಇದನ್ನು ನಾವು ಸ್ಪಷ್ಟವಾಗಿ ಗ್ರಹಿಸಿದವರಾದಾಗ ಇದು ದೇವರ ಯೋಜನೆಯ ಇತರ ಎಲ್ಲಾ ಲಕ್ಷಣಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುತ್ತದೆ. ಮರಣವು ಜೀವವಿಲ್ಲದಿರುವುದು ಅಂದರೆ ಜೀವವನ್ನು ಕಳಕೊಳ್ಳುವುದೆಂಬುದನ್ನು ಕಾಣುವವರಾಗಬೇಕು. ಅದು ನಮ್ಮ ಸಂತತಿಯ ಮೇಲಿರುವ ದಂಡನೆಯಾಗಿರುವುದು; ಕಾರಣ ನಾವು ಜೀವದಿಂದಿರಲು ಅನರ್ಹರೆಂದು ನಿರ್ಣಯಿಸಲ್ಪಟ್ಟಿದ್ದೇವೆ.

ಮುಂದಿನ ಜೀವಿತದ ಉಲ್ಲೇಖನಗಳಲ್ಲಿ ನಮ್ಮ ಮೇಲಿರುವ (ಆದಿ ತಂದೆತಾಯಿಗಳ) ಮೂಲ ಪಾಪದ ದೆಸೆಯಿಂದ ಬಂದ ಶಾಪ ಅಥವಾ ದಂಡನೆಯ ತೀರ್ಪಿನಿಂದ ವಿಮೋಚಿಸುವುದು ಅಡಕವಾಗಿರುವುದು. ಈ ಋಣವನ್ನು ಅಥವಾ ತೀರ್ಪನ್ನು ರದ್ದುಪಡಿಸುವುದರಿಂದ ಮಾನವಕುಲವು ಪುನಶ್ಚೇತನ ಅಥವಾ

ಪುನರುದ್ಧಾರವಾಗುವುದಿಲ್ಲವಾದರೂ ಮನುಷ್ಯನು ಕಳಕೊಂಡ–ದ್ದನ್ನು ಪುನರ್ವಶಪಡಿಸಲು ಇದ್ದ ನ್ಯಾಯವಿಧಿಯು ಅಡ್ಡಗೋಡೆಯನ್ನು ತೆರವುಮಾಡುವುದು. ಆದುದರಿಂದ ನಮ್ಮ ರಕ್ಷಕನ ಕಾರ್ಯವು ಮುಂದುವರಿಯಬೇಕಿರುವುದು. ಮೊದಲನೇ–ಯದಾಗಿ, ಅದು ಒಂದು ವಿಮೋಚನಾ ಕಾರ್ಯವಾಗಿರುವುದು: ಆತನ ಮೊದಲನೇಯ ಬರುವಿಕೆಯಲ್ಲಿ ಆ ವಿಮೋಚನೆಯು ನೆರವೇರಲ್ಪಟ್ಟಿರುವುದಾದರೂ ಆತನು ಈ ಸುವಾರ್ತಾ ಯುಗವನ್ನು ವಿಮೋಚಿಸಲ್ಪಟ್ಟ ಕೆಲವರನ್ನು ಸಹ ತನ್ನ (ದೇಹದ) ಅಂಗಗಳಾಗಿ ಅಂದರೆ ತನ್ನ ಮದಲಗಿತ್ತಿಯಾಗಿ, ತನ್ನ ಸಭೆಯನ್ನಾಗಿ ಅಂಗೀಕರಿಸುವದಕ್ಕೆ ಉಪಯೋಗಿಸಿಕೊಂಡಿ–ರುವನು. ಇವರು ಆತನನ್ನು ತಮ್ಮ ಶಿರಸ್ಸನ್ನಾಗಿ ಮಾಡಿಕೊಂಡು ಮುಂದಿನ ಕಾಲದಲ್ಲಿ ಆರಂಭವಾಗುವ ಸಮಸ್ತವನ್ನು ಸರಿಮಾಡುವ ಆ ಮಹಾ ಕಾರ್ಯದಲ್ಲಿ ಆತನಿಗೆ ಸಹಾಯಕರಾಗುವರು.

ಎರಡನೆಯದಾಗಿ, (ಕಳೆದುಹೋದ) ಸಮಸ್ತವನ್ನು ಸರಿಪಡಿಸುವುದು ತನ್ನ ಎರಡನೆಯ ಬರುವಿಕೆಯಲ್ಲಿ ನಮ್ಮ ಕರ್ತನು ಮಾಡಲಿರುವ ಕಾರ್ಯ. ಆಗ ತನ್ನ ಸಭೆಯು ಅಂದರೆ ತನ್ನ (ದೇಹದ) ಅಂಗಗಳು ಆಯಲ್ಪಟ್ಟು ನಯಮಾಡಲ್ಪಟ್ಟವರಾಗಿ ಸಿದ್ಧತೆ ಹೊಂದಿ ಪ್ರಭಾವ ಪಡೆದು ಆತನೊಡನೆ ಮಾನ ಮಹಿಮೆ ನಿರ್ಲಯತ್ವಗಳಲ್ಲಿ ಸೇರಿದವರಾಗುವರು. ಆನಂತರ ಮಾನವ ಕುಲದವರೆಲ್ಲರಿಗೆ ವಿಮೋಚನೆಯನ್ನು ಪೂರ್ಣವಾಗಿ ಅನುಗ್ರಹಿಸೋಣವಾಗುವುದು. ಅವರನ್ನು ಮರಣದಿಂದ ಪೂರ್ಣ ಪರಿಪೂರ್ಣತೆಗೆ ತಕ್ಷಣ ತರಲಾಗುವುದಿಲ್ಲ; ಆದರೆ ಮೊದಲು ಅವರನ್ನು ಮರಣ ನಿದ್ರೆಯಿಂದ ಎಬ್ಬಿಸಿ ಆನಂತರದಲ್ಲಿ ಆ ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಅದರ ಶಿಸ್ತುನಿಮಯಗಳ ಪ್ರಕಾರ ಕ್ರಮೇಣ ಅವರ ಸ್ವಇಚ್ಛೆ ಹಾಗು ಸಹಕಾರಗಳ ಅನುಸಾರವಾಗಿ ಹಂತ ಹಂತವಾಗಿ, ಅವರು ಆ ಕರುಣೆ ಮತ್ತು ಸದಾವಕಾಶಗಳಿಗೆ ಸ್ಪಂದಿಸುವಷ್ಟರ ಪ್ರಕಾರ ಅವರನ್ನು ಪಾಪ ಮರಣದ ಸ್ಥಿತಿಯಿಂದ ನಿತ್ಯಜೀವಕ್ಕೆ ತರುವದಾಗಿರುವುದು. ಅವಿಧೇಯರಾದವರು ನಿತ್ಯಜೀವಕ್ಕೆ ಅನರ್ಹರೆಂದು ಎಣಿಸಲ್ಪಟ್ಟು ಎರಡನೆಯ ಮರಣದಲ್ಲಿ ನಾಶಮಾಡಲ್ಪಡುವರು.

## ಯೇಸುವು, ಜೀವದಾಯಕನು

ನಮ್ಮ ಸುವರ್ಣ ಪಠ್ಯಭಾಗದ ವಾಕ್ಯವು ವಿಶೇಷವಾಗಿ ನಮ್ಮ ಕರ್ತನಿಗೆ ಮುಂದೆ ತನ್ನ ಸಾವಿರ ವರುಷದ ಆಳ್ವಿಕೆಯ ಆರಂಭದ ಕಾಲಕ್ಕೆ ಅಂದರೆ ಆತನು ಮರಣವನ್ನು ನಿವೃತ್ತಿಮಾಡಿ ಮಾನವರನ್ನು ಅದರ ಅಧಿಕಾರದಿಂದ ಬಿಡಿಸಿ ಮೇಲೆತ್ತುವಾಗ, ಅಂದರೆ ಆ ಮಹಾ ಸೆರೆಮನೆಯಿಂದ ಬಿಡಿಸುವಾಗ, ಮತ್ತು (ಪರಿಪೂರ್ಣತೆಯಿಂದ) ಬಿದ್ದುಹೋದ ಸ್ಥಿತಿಯ ದೆಸೆಯಿಂದ ಬಂದ ಬಲಹೀನತೆಯಿಂದ ಮೇಲೆತ್ತುವ ಸಮಯಕ್ಕೆ ಅನ್ವಯವಾಗುವುದಾದರೂ, ಕೆಲವು ಪ್ರಮಾಣದಲ್ಲಿ ಮೊದಲನೆಯ ಬರುವಿಕೆಯ ಕಾಲಕ್ಕೂ ಅನ್ವಯವಾಗುತ್ತದೆ. ನಮ್ಮ ಕರ್ತನ ಯಜ್ಞಾರ್ಪಣೆಯು ಆತನು ಕಲ್ವಾರಿಯಲ್ಲಿ ಸಾಯುವವರೆಗೂ ಪೂರ್ಣಗೊಳ್ಳಲಿಲ್ಲವೆಂಬುದು ಮತ್ತು ಆತನ ದೇಹದ ಅಂಗಗಳಾದವರ ಯಜ್ಞಾರ್ಪಣೆಯು ಶತಮಾನಗಳವರೆಗೂ ಪೂರ್ಣಗೊಳ್ಳುವುದಿಲ್ಲವೆಂಬುದು, ನಿಜವೇ. ಆದರೆ ನಮ್ಮ ಕರ್ತನು ತನ್ನ ಮೂವತ್ತನೇ ವಯಸ್ಸಿನಲ್ಲಿ ತನ್ನ ಪ್ರಾಣವನ್ನು ಅರ್ಪಿಸುವುದು ಮುಂತಾದ ತನ್ನ ತಂದೆಯ ಚಿತ್ತವನ್ನು ನೆರವೇರಿಸಲು ತನ್ನನ್ನು ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡಾಗ ತಾನು ನೆರವೇರಿಸಲಿರುವ ದೇವರ ಆ ಯೋಜನೆಯಲ್ಲಿ ಮುಂದಿನ ಈ ಎಲ್ಲಾ ಲಕ್ಷಣಗಳೂ ಅಂದರೆ ತನ್ನ ಯಜ್ಞಾರ್ಪಣೆಯನ್ನೂ ಮತ್ತು ತನ್ನ ದೇಹವಾದ ಸಭೆಯನ್ನೂ ಪೂರ್ಣಗೊಳಿಸುವುದು ಒಳಗೊಂಡಿತ್ತು.

ನಮ್ಮ ಪರಲೋಕದ ತಂದೆಯು ಆತನ (ಕ್ರಿಸ್ತನ) ಯಜ್ಞಾರ್ಪಣೆಯನ್ನು ಎಷ್ಟು ಮಾನ್ಯಮಾಡಿದ್ದನೆಂಬುದು ಪವಿತ್ರಾತ್ಮದಲ್ಲಿ ಪಾಲನ್ನು ಅನುಗ್ರಹಿಸಿದುದರಲ್ಲಿ ಪ್ರಮಾಣಗೊಂಡಿರುವುದು. ಆತನ ಈ ಮೇಲಾದ ಅಭಿಷೇಕವು ಆತನನ್ನು ಮೆಸ್ಸೀಯನನ್ನಾಗಿ ಅಂದರೆ ಕ್ರಿಸ್ತನನ್ನಾಗಿ ನೇಮಿಸಿ ಆತನ ದೇಹವಾಗಿರುವ ಸಭೆಯ ನಿರೀಕ್ಷೆಗೆ ಆಧಾರನಾಗಿಯೂ ಮಾತ್ರವಲ್ಲದೆ ಕಡೆಯಲ್ಲಿ ಎಲ್ಲಾ ಸಂಗತಿಗ–ಳಿಗೂ ನಿರೀಕ್ಷೆಯ ಅಧಾರನನ್ನಾಗಿಯೂ ಮಾಡಿರುವುದು. ಹೀಗಾಗಿ ನಮ್ಮ ಕರ್ತನು ಈ ಒಡಂಬಡಿಕೆಯ ಅನುಸಾರವಾಗಿಯೇ ನಡೆದುಕೊಳ್ಳುತ್ತಿದ್ದರಿಂದಲೂ, ಮತ್ತು ತಂದೆಯೂ ಆತನನ್ನು ಹೀಗೆಯೇ ಗುರುತಿಸಿದ್ದರಿಂದಲೂ, ಮತ್ತು ನಮ್ಮ ಕರ್ತನು ಪ್ರತಿಷ್ಠೆಯ ಮೂಲಕವಾದ ಈ ಒಡಂಬಡಿಕೆಯನ್ನು ಅಂದರೆ ಯಜ್ಞಾರ್ಪಣೆಯನ್ನು ಎಂದೂ ರದ್ದುಪಡಿಸಿರಲಿಲ್ಲವಾದ್ದರಿಂದಲೂ, ನಮ್ಮ ಕರ್ತನಿಗೆ ಈ ದೃಷ್ಟಿಯಿಂದ ಆಲೋಚಿಸುವುದೂ, ನಡೆದುಕೊಳ್ಳುವುದು ಮತ್ತು ನುಡಿಯುವುದು ಸಮಂಜಸವಾಗಿತ್ತು. ಇದು ಹೀಗೆ ಕೇವಲ ನಂಬಿಕೆಯ ಮೂಲಕ ಆತನ ಜೀವಿತದ ಕಡೆಯವರೆಗೂ ನಡೆದಿತ್ತಲ್ಲದೆ ಈ ಸುವಾರ್ತಾ ಯುಗದ ಕಡೆಯವರೆಗೂ ಹೀಗೆಯೇ ಭರವಸೆಯಿಂದಲೇ ನಡೆಯುವುದು ಮತ್ತು ಸಾವಿರ ವರುಷದ ಆಳ್ವಿಕೆಯ ಕಾಲದ ಕಡೇವರೆಗೂ ದೇವರ ಸದುದ್ದೇಶಗಳೆಲ್ಲವೂ ಅಂತಿಮವಾಗಿ ಆತನಲ್ಲಿಯೂ ಮತ್ತು ಆತನ ಮೂಲಕವಾಗಿಯೂ ಇದು ನೆರವೇರುವುದೆಂಬ ಆಶ್ವಾಸನೆಯೂ ಇರುವುದು. ಹೀಗಿರಲು ಈ ದೃಷ್ಟಿಯಿಂದಲೇ ಆತನು ಹೇಳಿದ್ದು, "ನಾನು ಪುನರುತ್ಥಾನವು ಜೀವವೂ ಆಗಿದ್ದೇನೆ." ತಾನು ನಿರ್ವಹಿಸುತ್ತಿರುವ ಈ ಯಜ್ಞಾರ್ಪಣೆಯ ಕಾರ್ಯವು ಲೋಕಕ್ಕೆ ಜೀವದಾಯಕನನ್ನಾಗಿ ಮಾಡುವ ಭಾಗ್ಯವನ್ನು ತನಗೆ ತಂದುಕೊಡುವುದೆಂದು ಆತನಿಗೆ ತಿಳಿದಿತ್ತು. ಹಾಗು ಈ ಅಧಿಕಾರವನ್ನು ಪ್ರಯೋಗ ಮಾಡಿಯೇ ಆತನು ತನ್ನ ಮೂಲಕ ತಂದೆಯ ಬಳಿಗೆ ಬರುವವರನ್ನು ಅಂದರೆ ಯಾರಿಗೆ ಪ್ರೀತಿಯಿಂದ ಸೃಷ್ಟಿಕರ್ತನಿಗೆ ವಿಧೇಯರಾಗಲು ಸೂಕ್ತವಾದ ಹೃದಯದ ಬಯಕೆಗಳಿರುವುದೋ ಅವರನ್ನು ಸಮಾಧಿಯಿಂದ ಎಬ್ಬಿಸುವುದು ಮಾತ್ರವಲ್ಲದೆ ಈ ಮರಣಕರ ಸ್ಥಿತಿಯಿಂದ ಅವರನ್ನು ಸಂಪೂರ್ಣವಾಗಿ ಪರಿಪೂರ್ಣತೆಗೆ ತರುವನು.

## ನಮ್ಮ ಕರ್ತನ ಅದ್ಭುತ ಕಾರ್ಯಗಳ ನಿದರ್ಶನ

ತಾನು ಜೀವದಾಯಕನೆಂದು ಅಂದರೆ ತನಗೆ ಜೀವವನ್ನು ನೀಡುವ ಅಧಿಕಾರ ಸವಲತ್ತುಗಳು ಇರುವುದೆಂಬುದನ್ನು ಕೇವಲ ಸಾಬೀತುಪಡಿಸುವ ಸಲುವಾಗಿ ನಮ್ಮ ಕರ್ತನು ಅದ್ಭುತಗಳನ್ನು ಮಾಡಿದುದು ಮಾತ್ರವಲ್ಲದೆ ಹೀಗೆ ಮಾಡುವುದರಲ್ಲಿ ತನಗೆ ಸಂತೋಷವಿರುವುದೆಂಬುದನ್ನು ಸೂಚಿಸಲೂ ಸಹ ಇದನ್ನು ಮಾಡಿದ್ದನು. ಈ ದೃಷ್ಟಿಯಿಂದ ನಮ್ಮ ಕರ್ತನ ಅದ್ಭುತಗಳು ಒಂದು ಸೀಮಿತ ಪ್ರಮಾಣದಲ್ಲಿನ ಸಣ್ಣ ನಿದರ್ಶನಗಳಾಗಿದ್ದು ಅವು ಆತನು ತನ್ನ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಪ್ರಭಾವ ಹೊಂದಿದ ತನ್ನ ಸಭೆಯೊಡನೆ ಕೂಡಿ ಮಾನವರೆಲ್ಲರಿಗಾಗಿ ನಿರ್ವಹಿಸುವ ಭವ್ಯವಾದ ಕಾರ್ಯಕ್ಕೆ ಸೂಚನೆಯಾಗಿದ್ದವು. ಆಗ ಕುರುಡರೆಲ್ಲರ ಕಣ್ಣುಗಳು ಕಾಣತೊಡಗುವವು ಮತ್ತು ಕಿವುಡರ ಕಿವಿಗಳು ತೆರೆಯಲಾಗುವುದು ಹಾಗೂ ಮಾನಸಿಕವಾಗಿ ನೈತಿಕವಾಗಿ ಮತ್ತು ಶಾರೀರಿಕವಾಗಿ ಊನವಾದವರು ಸ್ವಸ್ಥವಾಗುವರು ಅಲ್ಲದೆ ಪಾಪ ಅಪರಾಧಗಳ ನಿಮಿತ್ತ ಸತ್ತವರೆಲ್ಲರಿಗೂ ಪುನಶ್ಚೇತನವಾಗುವುದು ಮತ್ತು ಜಗದುತ್ಪತ್ತಿ ಮೊದಲುಗೊಂಡು ಪರಿಶುದ್ಧ ಪ್ರವಾದಿಗಳ ಮೂಲಕ ವಾಗ್ದಾನವಾಡಿದಂತೆ ವಿಧೇಯುತೆಯ ಮೂಲಕವಾಗಿ ಹಂತಹಂತವಾಗಿ ಕಳೆದುಕೊಂಡದ್ದೆಲ್ಲವೂ ಪೂರ್ಣವಾಗಿ ಪುನರ್ವಶವಾಗುವದು. – ಅಪೋಸ್ತಲರ ಕೃತ್ಯಗಳು 3:19–20

ನಮ್ಮ ಇಂದಿನ ಪಾಠವು ಪರ್ವತ ಪ್ರಸಂಗವನ್ನು ಅನುಸರಿಸಿ ಹೋಗುವುದು. ಈ ವಿಷಯವನ್ನು ಹೀಗೆ ಸಿದ್ಧಪಡಿಸುವಾಗ ಮತ್ತಾಯ ಮತ್ತು ಲೂಕರ ಮನಸ್ಸುಗಳಲ್ಲಿದ್ದ ಸ್ಪಷ್ಟವಾದ ಆಲೋಚನೆಯೆಂದರೆ ಪರ್ವತದ ಮೇಲೆ ಈ ಅದ್ಭುತವಾದ ಪ್ರಸಂಗವನ್ನು ಮಾಡಿದಾತನಿಗೆ ಅದ್ಭುತಗಳನ್ನು ಮಾಡುವ ಶಕ್ತಿಯೂ ಇರುವುದೆಂಬುದನ್ನು ಪ್ರಮಾಣೀಕರಿಸಿ ತೋರಿಸುವುದಾಗಿತ್ತು. ಆತನು ಗಲಿಲಾಯ ಸಮುದ್ರದ ತೀರದಲ್ಲಿರುವ ಪೇತ್ರ ಮತ್ತು ಇತರರು ವಾಸವಾಗಿದ್ದ ಮತ್ತು ಈಗ ತಾನು ವಾಸಿಸುತ್ತಿದ್ದ ಪಟ್ಟಣವಾದ ಕಪೆರ್ನೌಮಿಗೆ ಹಿಂದಿರುಗಿದನು. ನಜರೇತಿನಲ್ಲಿ ತಾನು ಧಿಕ್ಕರಿಸಲ್ಪಟ್ಟು ತಿರಸ್ಕಾರ ಹೊಂದಿದ್ದರಿಂದ ಆತನು ಆಗ ಕಪೆರ್ನೌಮ್ ಪಟ್ಟಣವನ್ನು ತನ್ನ ವಾಸಸ್ಥಾನವನ್ನಾಗಿ ಮಾಡಿಕೊಂಡಿದ್ದನು. ಕಪೆರ್ನೌಮಿನಲ್ಲಿ ಹಿಂದಿನ ಒಂದು ಸಂದರ್ಭದಲ್ಲಿ ಹಲವರನ್ನು ಗುಣಪಡಿಸಿದ್ದುದನ್ನು ನಾವು ಸ್ಮರಿಸುವವರಾಗಿರುವೆವು. ಆತನ ಕೀರ್ತಿಯು ಎಲ್ಲಾ ವರ್ಗದ ಜನರಿಗೆ ಹರಡಿತ್ತೆಂಬುದಕ್ಕೆ ಸಂಶಯಪಡಲು ಸಾಧ್ಯವಿಲ್ಲ. ರೋಮಾಯರ ಸಿಪಾಯಿಗಳ ಮುಖ್ಯಸ್ಥನಾದ ಒಬ್ಬ ಶತಾಧಿಪತಿಯು ತನ್ನ ಸೈನಿಕರ ಗುಂಪಿನ ಸಮೇತವಾಗಿ ಅಲ್ಲಿ ವಾಸವಾಗಿದ್ದನು. ತನಗೆ ಅತಿ ಮುಖ್ಯವಾಗಿದ್ದ ಒಬ್ಬ ಸೇವಕನು ಅಸ್ವಸ್ಥನಾಗಿ ಬಿದ್ದುಕೊಂಡಿರಲು ಆತನನ್ನು ಯೇಸುವಿನಿಂದ ಗುಣಪಡಿಸಿಕೊಳ್ಳಲು ಆ ಶತಾಧಿಪತಿಯು ಉತ್ಸುಕನಾಗಿದ್ದನು. ಆತನು ಒಬ್ಬ ದೀನ ಮನಸ್ಸಿನವನೆಂಬುದನ್ನು ಮತ್ತು ಪೂರ್ಣವಾಗಿ ನಂಬಿಕೆಯುಳ್ಳವನೂ ದಯೆಯುಳ್ಳವನೂ ಆಗಿದ್ದನೆಂಬ ವಿವರಣೆಯು ಸ್ಪಷ್ಟವಾಗಿ ತೋರಿಸಿರುವುದು. ನಿಜವಾಗಿಯೂ ನಮಗೆ ನೆನಪಿರುವಂತೆ ಹೊಸ ಒಡಂಬಡಿಕೆಯ ಗ್ರಂಥದಲ್ಲಿ ತಿಳಿಸಿರುವ ಎಲ್ಲಾ ಮೂರು ಶತಾಧಿಪತಿಗಳೂ ಭಯಭಕ್ತಿಯುಳ್ಳವರೆಂಬುದು ವ್ಯಕ್ತವಾಗಿತ್ತು. ಅವರುಗಳು ಯಾರೆಂದರೆ ಈ ಶತಾಧಿಪತಿ, ಯೇಸುವಿಗೆ ಮರಣವನ್ನು ವಿಧಿಸಿ ಆನಂತರದಲ್ಲಿ "ನಿಜವಾಗಿಯೂ ಈ ಮನುಷ್ಯನು ದೇವರ ಮಗನಾಗಿದ್ದನು" ಎಂದು ಪ್ರಕಟಿಸ ದವನು ಮತ್ತು ಅನ್ಯಜನರೊಳಗಿಂದ ಮೊದಲು ಮತಾಂತರಗೊಂಡ ಕೊರ್ನೇಲ್ಯನು. – ಮತ್ತಾ. 27:54; ಅಪೋ. ಕೃತ್ಯ. 10:1

## ಘನವಂತನಾದ ಶತಾಧಿಪತಿ

ನಮ್ಮ ಪಾಠದಲ್ಲಿನ ಶತಾಧಿಪತಿಯು ವಿವೇಕಿಯೂ ಮತ್ತು ದೀನನೂ ಎರಡೂ ಆಗಿದ್ದನು. ಒಬ್ಬ ಅನ್ಯಜಾತಿಯವನಾಗಿ ತನಗೆ ಈ ಯೆಹೂದ್ಯ ಪ್ರವಾದಿಯ ಮೇಲೆ ಯಾವ ವಿಶೇಷವಾದ ಹಕ್ಕು ಇರುವುದಿಲ್ಲವೆಂದೂ ಮತ್ತು ಈತನು ಮಾಡುತ್ತಿರುವ ಕಾರ್ಯಗಳು ಇಸ್ರಾಯೇಲ್ಯರಿಗಾಗಿ ಎಂಬುದನ್ನು ಆತನು ಗ್ರಹಿಸಿಕೊಂಡಿದ್ದನು. ಆದುದರಿಂದ ಅವನು ತನ್ನ ಆಳಿಗೆ ಗುಣಪಡಿಸಲು ತನ್ನ ಪರವಾಗಿ ಯೇಸುವನ್ನು ವಿನಂತಿಸಲು ಆ ಊರಿನ ಕೆಲವು ಹಿರಿಯರ ಸಹಕಾರವನ್ನು ಪಡಕೊಂಡನು. ಇವರು ಸಭಾಮಂದಿರದ ಹಿರಿಯರಾಗಿರಲಿಲ್ಲ ಆದರೆ ಆ ಪಟ್ಟಣದ ಮುಖ್ಯಸ್ಥರುಗಳಾಗಿದ್ದರು. ಇದಕ್ಕಿಂತಲೂ ಕಡಿಮೆ ದೀನತೆಯುಳ್ಳ ಮನುಷ್ಯನು ನಿಸ್ಸಂದೇಹವಾಗಿ ತನ್ನ ಸ್ಥಾನದ ಸ್ವಂತ ಘನತೆಯ ಬಗ್ಗೆ ಚಿಂತಿಸುವವನಾಗಿ ಯೆಹೂದ್ಯರೂ ಮತ್ತು ಸತ್ಯವೇದವು ನಿಗದಿಮಾಡಿರುವ ಯೆಹೂದ್ಯರಿಗೂ ಮತ್ತು ಅನ್ಯಜನರಿಗೂ ನಡುವೆ ಇರುವ "ಅಡ್ಡಗೋಡೆಯನ್ನು" ಅಂದರೆ ವ್ಯತ್ಯಾಸವನ್ನು ಅಲಕ್ಷ್ಯ ಮಾಡಿರುತ್ತಿದ್ದನು. ಯೆಹೂದ್ಯರು ಹೊಂದಿರುವ ದೇವ ಕರುಣೆಯಿಂದ ಅನ್ಯಜನರನ್ನು ಹೊರತುಪಡಿಸಲಾಗಿರುವುದು. ಮಕ್ಕಳಲ್ಲಿ ಒಬ್ಬಳಂತೆ ಅಧಿಕಾರದಿಂದ ಕೇಳಿಕೊಳ್ಳದೆ ಮೇಜಿನಿಂದ ಬೀಳುವ ಮಕ್ಕಳು ತಿನ್ನುವ ರೊಟ್ಟಿಯ ತುಂಡನ್ನು ಬಯಸಿದ ಆ ಫೊಯಿನಿಕೆ ದೇಶದ ಸ್ತ್ರೀಯಂತೆ ಈತನಿದ್ದನು.

ಹಿರಿಯರು ಆತನ ಪ್ರತಿನಿಧಿಗಳಾಗಿ ಬಂದು ಯೇಸುವನ್ನು ಆತನ ಪರವಾಗಿ ಬೇಡಿಕೊಂಡು, ಆತನು ಒಬ್ಬ ಯೆಹೂದ್ಯನಲ್ಲದಿದ್ದರೂ ಒಂದು ಘನವಾದ ಗುಣವುಳ್ಳವನು, ಇಸ್ರಾಯೇಲ್ಯರನ್ನು ಪ್ರೀತಿಸುವವನು; ತಾನು ಅದರಲ್ಲಿ ಭಾಗಿಯಾಗಲು ಸಾಧ್ಯವಿಲ್ಲದಿದ್ದರೂ ಅವರಿಗಾಗಿ ಆರಾಧನೆ ಮಾಡಲು ಒಂದು ಸಭಾಮಂದಿರವನ್ನು ಕಟ್ಟಿಸಿರುವನೆಂದು ಅರಿಕೆಮಾಡಿದರು. ಆತನು ಬೇರೆ ಯಾವ ನಿಲುವನ್ನು ತೆಗೆದುಕೊಂಡಿದ್ದರೂ ಆತನು "ಮಕ್ಕಳಲ್ಲಿ" ಒಬ್ಬನಲ್ಲವೆಂಬ ಅಂಶವನ್ನು ನಿರ್ಲಕ್ಷಿಸಿದ್ದರೂ ತಾನು ಅವರ ಬೇಡಿಕೆಯನ್ನು ಪ್ರಾಮಾಣಿಕವಾಗಿ ಈಡೇರಿಸುವ ಮೊದಲು ಈ ಅಂಶವನ್ನು ಅವರಿಗೆ ಮನವರಿಕೆಮಾಡಿಕೊಡುವುದು ಅಗತ್ಯವಾಗಿರುತ್ತಿತ್ತು. ಈ ಸಂಬಂಧದಲ್ಲಿ ನಮ್ಮೆಲ್ಲರಿಗೂ ಇರುವ ಒಂದು ಪಾಠವೆಂದರೆ ಯಾವ ವಿಷಯದಲ್ಲಿಯಾದರೂ ಕರ್ತನನ್ನು ಬೇಡಿಕೊಳ್ಳಲು ಆತನನ್ನು ಸಮೀಪಿಸಲು ನಮಗೆ ಬೇಕಿರುವುದು ದೀನಮನಸ್ಸು; ಇದು ಆತನ ಅನುಗ್ರಹ ಆಶೀರ್ವಾದವನ್ನು ಪಡೆಯಲು ನಮ್ಮನ್ನು ಸಿದ್ಧಮಾಡುವದು. ಕರ್ತನಲ್ಲಿ ಆಗ್ರಹಪೂರ್ವಕವಾಗಿ ಬೇಡಿಕೊಳ್ಳಲು ಯಾವ ಹಕ್ಕೂ

ಅಥವಾ ಅರ್ಹತೆಗಳು ಇಲ್ಲವೆಂದೂ, ನಾವು ಅಯೋಗ್ಯರು, ವಿನಂತಿಸಿಕೊಳ್ಳುವವರು, ಆತನಿಂದ ಕರುಣೆಕೃಪೆಯನ್ನು ಬಯಸುವವರು, ನ್ಯಾಯವನ್ನಲ್ಲವೆಂಬುದನ್ನು ನಾವು ಸಹ ಒಪ್ಪಿಕೊಳ್ಳಬೇಕು.

ನಂತರದಲ್ಲಿ ಆ ಶತಾಧಿಪತಿಯು ತಾನು ಒಬ್ಬ ಅನ್ಯಜನದವನಾಗಿದ್ದು ಯೆಹೂದ್ಯರ ಪದ್ಧತಿಯ ಪ್ರಕಾರ ಒಬ್ಬ ಯೆಹೂದ್ಯನಿಗೆ ತನ್ನ ಮನೆಯಲ್ಲಿ ಪ್ರವೇಶಿಸುವುದು ಕೆಲವು ಮಟ್ಟಿನ ಮಲಿನತೆ ಉಂಟಾಗುವುದನ್ನು ಸೂಚಿಸುವುದರಿಂದ ಅದು ಸೂಕ್ತವಲ್ಲವೆಂಬ ಅಂಶವನ್ನು ವಿಷದಪಡಿಸಿ ಬೇಡಿಕೊಂಡಿದ್ದನು. ನಿಸ್ಸಂದೇಹವಾಗಿಯೂ ತಾನೂ ಸಹ ಒಬ್ಬ ಪಾಪಿಯೆಂದೂ ಮತ್ತು ಸರ್ವಶಕ್ತನ ಒಬ್ಬ ಪ್ರತಿನಿಧಿ ಇಲ್ಲಿದ್ದಾನೆಂದೂ ಆತನ ಅಧಿಕಾರವನ್ನು ತಾನು ಒಪ್ಪಿಕೊಳ್ಳಬಹುದೆಂದೂ ಯೋಚಿಸಿದ್ದನು. "ಸ್ವಾಮೀ, ನಾನು ಪಾಪಾತ್ಮನು; ನನ್ನನ್ನು ಬಿಟ್ಟುಹೋಗಬೇಕು" (ಲೂಕ 5:8) ಎಂದು ಹೇಳಿದಾಗ ಪೇತ್ರನಿಗಿದ್ದ ಮನೋಭಾವದಂತೆಯೇ ಈತನ ಮನೋಭಾವವೂ ಆಗಿತ್ತು.

ಕರ್ತನು ಪ್ರತ್ಯಕ್ಷನಿರುವಾಗ ಗುಣಪಡಿಸುವ ತನ್ನ ಶಕ್ತಿಯನ್ನು ಪ್ರಯೋಗಿಸಿದಂತೆಯೇ ತಾನು ಪ್ರತ್ಯಕ್ಷನಿಲ್ಲದಿರುವಾಗಲೂ ಆ ಶಕ್ತಿಯನ್ನು ಪ್ರಯೋಗಿಸಬಹುದೆಂಬುದು ಆ ಶತಾಧಿಪತಿಯ ವಾದವಾಗಿತ್ತು. ಯೇಸುವು ಕಾನಾ ಊರಿನಲ್ಲಿದ್ದುಕೊಂಡು ಕೇವಲ ಮಾತನ್ನು ಹೇಳುವುದರ ಮೂಲಕ ತನ್ನ ಊರಾದ ಕಪೆರ್ನೌಮಿನ ಘನವಂತನ ಮಗನನ್ನು ಗುಣಪಡಿಸಿದುದನ್ನು ಆತನು ಕೇಳಿದ್ದಿರುವ ಸಂಭವವಿತ್ತು. ಈ ಕಾರಣದಿಂದ ಆ ಶತಾಧಿಪತಿಯು ಒಮ್ಮೆಲೇ ಯೇಸುವಿನ ಬಳಿಗೆ ಒಬ್ಬ ದೂತನನ್ನು ಕಳುಹಿಸಿ ಆ ಒಡೆಯನನ್ನು ತನ್ನ ಮನೆಗೆ ಕರೆಸಿಕೊಳ್ಳಲು ತನಗೆ ಯೋಗ್ಯತೆ ಇಲ್ಲವೆಂಬುದನ್ನೂ, ಒಂದು ಮಾತು ಹೇಳುವುದು ಸಾಕಾಗುವುದೆಂಬುದನ್ನು ನಂಬಿರುವುದರಿಂದ ತಾನು ಖುದ್ದಾಗಿ ಬಂದು ವಿನಂತಿಸಲು ತನಗೆ ಒಲವಿಲ್ಲವೆಂಬುದನ್ನು ಆತನ ಮೂಲಕವಾಗಿ ವಿವರಿಸಿ ಹೇಳಿಸಿದನು. ತನಗೂ ಕೆಲವು ಪ್ರಮಾಣದ ಅಧಿಕಾರಗಳು ಕೊಡಲ್ಪಟ್ಟಿರುವುದಾಗಿಯೂ ಆ ಪ್ರಕಾರ ತಾನು ತನ್ನ ಒಬ್ಬ ಸೇವಕನಿಗೆ ಹೋಗಲು ಮತ್ತು ಬರಲು ಹೇಳಬಹುದೆಂಬ ನಿದರ್ಶನವನ್ನು ನೀಡಿ ಆತನಲ್ಲಿ ತನಗೆ ನಂಬಿಕೆಯಿರುವುದೆಂಬುದನ್ನೂ ಸೂಚಿಸಿ, ಯೇಸುವು ದೇವರಿಂದ ಅಭಿಷೇಕ ಹೊಂದಿರುವುದನ್ನು ಗುರುತಿಸಿಕೊಂಡವನಾಗಿ ಪ್ರಕೃತಿಯ ಶಕ್ತಿಪ್ರಭಾವಗಳ ಮೇಲೆ ಅತನಿಗೆ ನಿಯಂತ್ರಣವಿರುವುದು ತನಗೆ ಖಚಿತವಾಗಿರುವುದೆಂದೂ ಈ ವಿಷಯವಾಗಿ ವಿವರಿಸಿ ಹೇಳಿ ತನ್ನ ಸೇವಕನಿಗೆ ರೋಗವು ಬಿಟ್ಟುಹೋಗುವಂತೆ ಆಜ್ಞಾಪಿಸಿದಲ್ಲಿ ಆತನ ಸೇವಕನು ಗುಣವಾಗುವನೆಂಬುದನ್ನು ತಿಳಿಸಿದ್ದನು.

## ಒಬ್ಬ ಅನ್ಯದೇಶಸ್ತನ ಆಸಾಧಾರಣವಾದ ನಂಬಿಕೆ

ಯೇಸುವು ಆತನ ಮಾತನ್ನು ಒಪ್ಪಿಕೊಂಡವನಾಗಿ ಈ ವಿಷಯವನ್ನು ಮುಂದುವರಿಸದೆ ಈತನಲ್ಲಿದ್ದ ನಂಬಿಕೆಯ ಪ್ರಮಾಣದ ಬಗ್ಗೆ ಅಚ್ಚರಿಯನ್ನು ವ್ಯಕ್ತಪಡಿಸುತ್ತಾ ತನ್ನೊಡನೆ ಇದ್ದ ಗುಂಪಿಗೆ ಹೇಳಿದ್ದು, "ನಾನು ಇಂಥ ದೊಡ್ಡ ನಂಬಿಕೆಯನ್ನು ಇಸ್ರಾಯೇಲ್ ಜನರಲ್ಲಿಯೂ ಕಾಣಲಿಲ್ಲವೆಂದು ನಿಮಗೆ ಹೇಳುತ್ತೇನೆ..." ಕೇವಲ ಇನ್ನೊಂದು ಸ್ಥಳದಲ್ಲಿ ಯೇಸುವು "ಆಶ್ಚರ್ಯಪಟ್ಟುದ್ದನ್ನು" ನಾವು ಓದುವೆವು ಹಾಗು ಅದು ನಜರೇತಿನ ಜನರ ಅಪನಂಬಿಕೆಯ ವಿಷಯವಾಗಿತ್ತು. (ಮಾರ್ಕ 6:6) ಆ ಜನರಿಗೆ ಅಷ್ಟು ದೀರ್ಘಕಾಲ ಕೃಪಾನುಗ್ರಹ ತೋರಿಸಲ್ಪಟ್ಟರೂ ಅಷ್ಟು ವಿಶೇಷವಾಗಿ ಆಶೀರ್ವದಿಸಲ್ಪಟ್ಟಿದ್ದರೂ ದೇವವಾಗ್ದಾನಗಳ ಮೂಲಕವಾಗಿ ಅಷ್ಟು ಹೇರಳವಾಗಿ ಪೋಷಿಸಲ್ಪಟ್ಟಿದ್ದರೂ ದೇವರ ಏರ್ಪಾಡುಗಳ ವಿಷಯದಲ್ಲಿ ಉಪದೇಶಿಸಲ್ಪಟ್ಟಿದ್ದರೂ ಅವರಿಂದ ನಿರೀಕ್ಷಿಸಿದ ಮಟ್ಟದಲ್ಲಿ ನಂಬಿಕೆಯು ಇರಲಿಲ್ಲ; ಆದರೆ (ದೇವರ) ಕೃಪಾನುಗ್ರಹ ಹೊಂದಿರದ ಅನ್ಯಜನರು ಹಲವು ವಿಷಯಗಳಲ್ಲಿ ಗಮನಾರ್ಹವಾದ ನಂಬಿಕೆಯನ್ನು ಹೊಂದಿದ್ದರು. ನಮ್ಮ ಕರ್ತನು ಕಪೆರ್ನೌಮಿನ ಜನರಿಗೂ ಹಾಗೂ ಸೊದೋಮ್ ಗೊಮೋರದ ಅನ್ಯಜಾತಿಯ ಜನರಿಗೂ ಇದ್ದ ವ್ಯತ್ಯಾಸವನ್ನು ತೋರಿಸಿ ಹೇಳಿದ್ದರಲ್ಲಿ ಆಶ್ಚರ್ಯವೇನಿಲ್ಲ. ಒಂದು ವೇಳೆ ಕಪೆರ್ನೌಮಿನಲ್ಲಿ ನಡೆದ ಮಹತ್ಕಾರ್ಯಗಳು ಸೊದೋಮ್ ಗೊಮೋರದಲ್ಲಿ ನಡೆದಿದ್ದೇಯಾಗಿದ್ದಲ್ಲಿ ಅವರು ಗೋಣಿತಟ್ಟನ್ನು ಹೊದ್ದುಕೊಂಡು ಬೂದಿಯಲ್ಲಿ ಕುಳಿತುಕೊಂಡು ಪಶ್ಚಾತಾಪಪಟ್ಟು ಉಳಿದುಕೊಳ್ಳುತ್ತಿದ್ದರು, ನಾಶವಾಗುತ್ತಿರಲಿಲ್ಲವೆಂದು ಆತನು ಪ್ರಕಟಮಾಡಿದ್ದರಲ್ಲಿ ಆಶ್ಚರ್ಯವಿಲ್ಲ.

ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಕೃಪಾದಯಾಪೂರ್ಣವಾದ ಅವಕಾಶಗಳನ್ನು ದೇವರ ಯೋಜನೆಯಲ್ಲಿ ಅನ್ಯಜನರೆಲ್ಲರಿಗೂ ಹೌದು, ಯೆಹೂದ್ಯರೆಲ್ಲರಿಗೂ ನೀಡುವುದು ದೇವರ ಯೋಜನೆಯೆಂಬುದನ್ನು ಸತ್ಯವೇದವು ನಮಗೆ ಆಶ್ವಾಸನೆ ನೀಡಿರುವುದು ನಮಗೆ ಎಷ್ಟೋ ಸಂತೋಷ. ಅಲ್ಲಿ ಅವರನ್ನು ಪಾಪ ಮರಣಗಳಿಂದ ಮೇಲೆತ್ತಿ (ಆದಾಮನ) ಪಾಪದ ದೆಸೆಯಿಂದ ಕಳೆದುಕೊಂಡದ್ದನ್ನು ವಿಧೇಯರಾಗುವುದರ ಮೂಲಕ (ಕ್ರಿಸ್ತನ) ಅಮೂಲ್ಯ ರಕ್ತದಿಂದ ವಿಮೋಚಿಸಲಾದ ಜೀವವನ್ನು ಅವರಿಗೆ ಪುನಃರ್ವಶಮಾಡಲಾಗುವುದು. ಇದೇ ರೀತಿಯಲ್ಲಿ, ಕೆಲವು ವೇಳೆ ಈಗಿನ ಕಾಲದ ಧಾರ್ಮಿಕ ವಿಷಯಗಳಲ್ಲಿ ಪ್ರಮುಖರಾದವರು ಕರ್ತನ ಮೇಲೆ ಮತ್ತು ಆತನ ಪರೋಪಕಾರಗುಣ ಆತನ ಶಕ್ತಿ ಅತನ ಜ್ಞಾನ ಮತ್ತು ಆತನಲ್ಲಿದ್ದ ಪ್ರೀತಿ ಇವುಗಳ ಮೇಲೆ ಲೋಕದಲ್ಲಿರುವ ಕೆಲವರಿಗಿಂತಲೂ ಕಡಿಮೆ ನಂಬಿಕೆಯುಳ್ಳವರಾಗಿರುವುದು ಕಂಡುಬಂದಾಗ ನಾವು ಆಶ್ಚರ್ಯಪಡಬೇಕಿಲ್ಲ. ಆಗ ಅಲ್ಲಿ ಕರ್ತನ ವಿಷಯವಾದ ಪರಿಜ್ಞಾನವು ಕ್ರಮೇಣ ಲೋಕವನ್ನೆಲ್ಲಾ ತುಂಬಿಕೊಂಡು ದೇವರ ಮಹಿಮೆಯ ವಿಷಯವಾದ ಪರಿಜ್ಞಾನವನ್ನು ಅರಿತುಕೊಳ್ಳಲು ಮಾನವರೆಲ್ಲರ ಮನೋನೇತ್ರಗಳು ತೆರೆಯಲ್ಪಟ್ಟಾಗ ಅದಕ್ಕೆ ಆಶ್ಚರ್ಯವೇನಿರುವುದು? ಈಗ ದೇವಜನರಲ್ಲದಿದ್ದವರಲ್ಲಿ ಎಷ್ಟು ಮಂದಿ ಆಗ ದೇವಜನರಾಗುವರು; ಹಾಗೂ ಈಗ ಎಲ್ಲಾ ವಿಧದಲ್ಲಿಯೂ ಅಧಿಕವಾದ ಅನುಕೂಲಗಳನ್ನು ಪಡೆದಿರುವವರಲ್ಲಿ ಮತ್ತು ಈಗ ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವವರಲ್ಲಿ ಎಷ್ಟು ಮಂದಿ ಈಗ ತಮಗೆ ಕನಿಷ್ಠವಾಗಿ ತೋರಿದವರಿಗಿಂತಲೂ ಅವರು ಆಗ ಕನಿಷ್ಠವಾಗಿ ಕಂಡುಬರುವರು.

ಇದಾದ ಕೆಲವು ಸಮಯದ ನಂತರ (ರಿವೈಸ್ಡ್ ವರ್ಶನ್ ಎಂಬ ಪರಿಷ್ಕೃತ ಭಾಷಾಂತರದ ಪ್ರಕಾರ) ನಮ್ಮ ಕರ್ತನೂ ಆತನ ಶಿಷ್ಯರೂ ಮತ್ತು ಆತನನ್ನು ಹಿಂಬಾಲಿಸುತ್ತಿದ್ದ ಒಂದು ಗುಂಪೂ ನಾಯಿನೆಂಬ ಒಂದು ಸಣ್ಣ ಊರಿಗೆ ಸಮೀಪಿಸುತ್ತಿದ್ದರು. ಆಗ ಊರಬಾಗಿಲಿನಿಂದ ಅಂತಿಮ ಯಾತ್ರೆಯ ಮೆರವಣಿಗೆಯಾಗಿ ವಿಧವೆಯಾದ ತಾಯಿ ದುಃಖತಪ್ತರಾದ ಮಿತ್ರರು ಚಟ್ಟವನ್ನು ಹೊತ್ತವರು ಹಾಗು ಸತ್ತ ಯೌವನಸ್ಥನನ್ನು ಹೊತ್ತ ಚಟ್ಟ ಇಲ್ಲವೆ ಒಣಹುಲ್ಲಿನ ಹಾಸಿಗೆ ಇವುಗಳು ಹೊರಗೆ ಬರುತ್ತಿದ್ದವು. ಆ ವಿಧವೆಯ ಕಣ್ಣೀರನ್ನು ನೋಡಿ ಕರ್ತನು ಮನಮರುಗಿದವನಾಗಿ ಅಕೆಗೆ "ಅಳಬೇಡ" ಎಂದು ಹೇಳಿ ಹೊರಟು ಚಟ್ಟದ ಹತ್ತಿರ ಬಂದಾಗ ಅದನ್ನು ಹೊರುವವರು ನಿಂತರು. ಆತನು ಚಟ್ಟವನ್ನು ಮುಟ್ಟಿ "ಯೌವನಸ್ಥನೇ, ಏಳು ಎಂದು ನಿನಗೆ ಹೇಳುತ್ತೇನೆ..." ಅಂದನು. ಆ ಸತ್ತವನು ಮೇಲೆದ್ದು ಮಾತಾಡುವುದಕ್ಕೆ ತೊಡಗಿದನು. ಇದು ಕಟ್ಟುಕತೆಯಾಗಿದ್ದಲ್ಲಿ, ಆ ವಿಧವೆಯು ಕರ್ತನ ಪಾದಗಳಿಗೆ ಬಿದ್ದು ಆತನನ್ನು ದೊಡ್ಡ ಶಬ್ಧದಿಂದ ಕೊಂಡಾಡಿ ಮತ್ತು ಆ ಗುಂಪಿನವರೆಲ್ಲರೂ ಆತನನ್ನು ಹೊಗಳುವುದರಲ್ಲಿ ಆಕೆಯೊಡನೆ ಕೂಡಿಕೊಳ್ಳುತ್ತಿದ್ದುದಾಗಿ ಕಲ್ಪಿಸಿಕೊಳ್ಳುವುದು ಸಮಂಜಸವೆಂದು ಎಣಿಸಲ್ಪಡುತ್ತಿತ್ತು; ಆದರೆ ಈ ಪಾಠದಲ್ಲಿ ಸರಳವಾಗಿ ವಿವರಿಸಿ ಹೇಳಿರುವುದು: "ಎಲ್ಲರಿಗೂ ಭಯಹಿಡಿಯಿತು" ಅಂದರೆ ಯೇಸುವಿನ ಶಕ್ತಿಯಲ್ಲಿ ಸೂಚಿತವಾದಂತೆ ದೇವರು ಬಹಳ ಹತ್ತಿರದಲ್ಲಿದ್ದುದರ ಗ್ರಹಿಕೆಯು ಅವರಿಗೆ ಉಂಟಾಗಿತ್ತು.

ದೇವರ ಪವಿತ್ರತೆಯನ್ನೂ ಸರ್ವಶಕ್ತನ ಅಪರಿಮಿತವಾದ ಪರಿಪೂರ್ಣತೆಯನ್ನು ಹಾಗೂ ಇದಕ್ಕೆ ಪ್ರತಿಯಾಗಿ ತಮ್ಮ ದೋಷ ಅಪರಿಪೂರ್ಣತೆಗಳ ವಿಷಯವಾಗಿ ಗ್ರಹಿಸಿದವರಾದ ಮಾನವರಿಗೆ ದೇವರು ಹತ್ತಿರದಲ್ಲಿದ್ದಾನೆ ಎಂಬ ಅಂಶವೇ ಖಂಡಿತವಾಗಿ ಅವರಲ್ಲಿ ಭಯವನ್ನು ಉಂಟುಮಾಡುವುದು. ಆ ಗುಂಪು ದೇವರನ್ನು ಕೊಂಡಾಡಿದುದು ದೊಡ್ಡ ಶಬ್ದದಿಂದ "ಹೋಸನ್ನಾ" ಎಂದು ಹೇಳುವದರ ಮೂಲಕವಾಗಿದ್ದುದಲ್ಲ; ಆದರೆ ಒಬ್ಬ ಮಹಾ ಪ್ರವಾದಿಯು, ಆ ಘನ ವೈದ್ಯನು ತಮ್ಮ ಮದ್ಯದಲ್ಲಿ ಇದ್ದಾನೆಂಬ ಅಂಶವನ್ನೂ ಮತ್ತು ದೇವರು ಹೀಗೆ ಆತನೊಡನೆ ಇರುವನೆಂಬುದನ್ನು–"ದೇವರು ತನ್ನ ಜನರಿಗೆ ದರ್ಶನವನ್ನು ಅನುಗ್ರಹಿಸಿದ್ದಾನೆ" ಎಂದು ಹೇಳಿ ಭಯಭಕ್ತಿಯಿಂದ ಇದನ್ನು ಅವರು ಮನಗೊಂಡಿದ್ದ ಕಾರಣದಿಂದಾಗಿತ್ತು. ಆ ಸಮಯದಲ್ಲಿ ಯೆಹೂದ್ಯರು ಹಿಂದಿರುಗಿ ನೋಡಿ ದೇವರು ತಮ್ಮ ಪಿತೃಗಳೊಂದಿಗೆ ವಿಶೇಷವಾಗಿ ನಡಕೊಂಡಿದ್ದನ್ನೂ ಅವರಲ್ಲಿ ದೇವಾನುಗ್ರಹವು ಅದ್ಭುತಗಳ ಮೂಲಕವಾಗಿ ಸಾಕ್ಷಿಗೊಂಡಿದ್ದನ್ನು ಸ್ಮರಿಸುವವರಾಗಿದ್ದರು. ಮೋಶೆಯಂಥ ಒಬ್ಬ ಪ್ರವಾದಿಯನ್ನು ತಮ್ಮಲ್ಲಿ ಎಬ್ಬಿಸಲ್ಪಡುವನೆಂಬ ವಾಗ್ದಾನವನ್ನು ಸಹ ಅವರು ನೆನಪು ಮಾಡಿಕೊಂಡಿದ್ದರು. ಅವರು ಕೆಲವು ಮಟ್ಟಿಗೆ ಪೇತ್ರನು ಅಪೋಸ್ತಲರ ಕೃತ್ಯ 3:19–20 ರಲ್ಲಿ ತೊರಿಸಿಕೊಟ್ಟಂತೆ "ದೇವರ ಸನ್ನಿದಾನದಿಂದ ಅವರಿಗೆ ವಿಶ್ರಾಂತಿಕಾಲಗಳು ಒದಗಿ (ಬರುವವು)..." ಎಂಬುದನ್ನು ಅಂದರೆ ದೇವರಾದ ಯೆಹೋವನು ತನ್ನ ಜನರಿಗೆ ಪುನರುಜ್ಜೀವನವನ್ನು ದಯಪಾಲಿಸಿ ಅವರನ್ನು ಆಶೀರ್ವದಿಸಿ ಅವರಿಗೆ ಪರಿಶುದ್ಧ ಪ್ರವಾದಿಗಳೆಲ್ಲರ ಬಾಯಿಂದ ಹೇಳಿಸಿದ ಸಮಸ್ತವನ್ನು ಸರಿಪಡಿಸುವ ಕಾಲಗಳನ್ನು ಅನುಗ್ರಹಿಸುವುದರ ಮೂಲಕ ತನ್ನ ಕೃಪೆಯನ್ನು ತೋರ್ಪಡಿಸು–ವನೆಂಬುದನ್ನು ನಿರೀಕ್ಷಿಸುತ್ತಿದ್ದರು.

## ಪ್ರವಾದಿಯೂ, ಯಾಜಕನೂ ಹಾಗೂ ಅರಸನನೂ

ಅವರು ಎದುರುನೋಡುವವರಾಗಿದ್ದುದು ಬಹು ಸಮಂಜಸವಾಗಿತ್ತು; ಯೇಸುವು ಒಬ್ಬ ಮಹಾ ಪ್ರವಾದಿಯಾಗಿ ದೇವರ ಹಾಗು ಆತನ ಅನುಗ್ರಹಗಳನ್ನು ಪ್ರತಿನಿಧಿಸುವವ ನಾಗಿದ್ದನು. ಮತ್ತು ಹೀಗಿದ್ದರೂ ನಂಬಿಕೆಯ ವಿಷಯವಾದ ಪರೀಕ್ಷೆಯು ನಡೆಯುವುದು ಎಷ್ಟು ಕಾಲದವರೆಗೆ? ಕ್ರಿಸ್ತನ ದೇಹದ ಅಂಗಗಳಾದವರು ಎಬ್ಬಿಸಲ್ಪಟ್ಟು ಪರಲೋಕದ ತಂದೆಯ ಯೋಜನೆಯು ಹೀಗೆ ಪೂರ್ಣವಾಗಿ ಫಲಿಸಿ ನೆರವೇರಲ್ಪಟ್ಟದ್ದಾಗಿ ಕರ್ತನ ಎರಡನೆಯ ಬರುವಿಕೆಯಲ್ಲಿ ಸಮಸ್ತವನ್ನು ಸರಿಪಡಿಸುವ ಕಾಲವು ಪೂರ್ಣವಾಗಿ ಉದಯವಾಗಲು ಎಷ್ಟು ದೀರ್ಘಕಾಲವು ಅಗತ್ಯ? ನಮ್ಮ ಕರ್ತನ ರೋಗಗುಣಪಡಿಸುವಿಕೆ ಹಾಗು ಮರಣ ನಿದ್ರೆಯಿಂದ ಎಬ್ಬಿಸುವ ಕಾರ್ಯಗಳು ಕೇವಲ ಮುನ್ಸೂಚನೆಯಾಗಿಯೂ ಮುನ್ನೆರಳಿನಂತೆಯೂ ಅಥವಾ ಕ್ರಿಸ್ತನು ಮರಣ ಪರ್ಯಂತರವಾಗಿ ವಿಧೇಯನಾಗಿ ನಮ್ಮ ಪಾಪ ನಿವಾರಣಾ ಯಜ್ಞವಾಗಿ ತನ್ನನ್ನು ಅರ್ಪಿಸಿಕೊಂಡುದರ ಫಲವಾಗಿ ಮಾನವರೆಲ್ಲರಿಗೆ ಮುಂದೆ ಲೋಕವ್ಯಾಪಿಯಾಗಿ ಬರುವ ಮಹಾ ಆಶೀರ್ವಾದಗಳಿಗೆ ಇವು ನಿದರ್ಶನವಾಗಿದ್ದವು. ಯೇಸುವಿನ ಮತ್ತು ಆತನ ಕಾರ್ಯಗಳ ವಿಷಯವಾದ ಸಂದೇಶವು ದೇಶದ ಎಲ್ಲಾ ಭಾಗಗಳಿಗೂ ಹರಡಿದ್ದಕ್ಕೆ ಆಚ್ಚರಿಪಡಬೇಕಾದುದೇನೂ ಇಲ್ಲ.

ನಮ್ಮ ಕರ್ತನ ಅದ್ಭುತಗಳು ಆ ಸಮಯಲ್ಲಿ ತೋರಿದುದಕ್ಕಿಂತಲೂ ಹೆಚ್ಚಿನ ಕಾರ್ಯಗಳನ್ನು ನೆರವೇರಿಸುತ್ತಿತ್ತು. ಕರ್ತನ ಸೇವಾವಧಿಯಲ್ಲಿ ಕೇವಲ ಐದು ನೂರು ಮಂದಿ ಮಾತ್ರ ಕೂಡಿಸಲ್ಪಟ್ಟದಕ್ಕೆ ಅಂದರೆ ಇಷ್ಟು ಮಂದಿ ಮಾತ್ರ ಸಹೋದರರೆಂಬ ಹೆಸರಿಗೆ ಅರ್ಹರಾಗಿ ನಮ್ಮ ಕರ್ತನನ್ನು ಆತನ ಪುನರುತ್ಥಾನದ ನಂತರ ನಾಲ್ವತ್ತು ದಿನಗಳಲ್ಲಿ ಸಂಧಿಸುವ ಸೌಭಾಗ್ಯವನ್ನು ಪಡೆದಿದ್ದರೆಂಬುದಕ್ಕೆ ನಾವು ವಿಸ್ಮಯಪಡುವವರಾಗಿದ್ದೇವೆ. ಹೀಗಿದ್ದರೂ ಪಂಚಾಶತ್ತಮ ದಿನದ ನಂತರ (ದೇವರ) ಹೊಸ ವ್ಯವಸ್ಥೆಯಲ್ಲಿ ಅಪೋಸಲ್ತರ ಸೇವಾಕಾರ್ಯಗಳ ಮೂಲಕ ನಮ್ಮ ಕರ್ತನ ಸೇವಾಕಾರ್ಯಕ್ಕೆ ದೊಡ್ಡ ಫಲ ಕಂಡು ಬಂದಿತ್ತೆಂಬುದನ್ನು ನಾವು ಸೂಕ್ತವಾಗಿ ಕಲ್ಪಿಸಿಕೊಳ್ಳಬಹುದು. ದೃಷ್ಟಾಂತವಾಗಿ ಹೇಳುವುದಾದರೆ, ನಾಯಿನ್ ಊರಿನ ಈ ವಿಧವೆ ಮತ್ತು ಆತನ ಮಗನು ಕಡೆಯಲ್ಲಿ ಯೇಸುವಿನ ಹಿಂಬಾಲಕರಾಗಿರಲು ಮತ್ತು ಈ ಅದ್ಭುತವನ್ನು ಸಾಕ್ಷಿಯಾಗಿ ನೋಡಿದ ಆ ಗುಂಪಿನಲ್ಲಿ ಸೂಕ್ತ ಮನೋಭಾವದಲ್ಲಿದ್ದ ಇತರರೂ ಸಹ ಈ ಮೂಲಕವಾಗಿ ಮೆಸ್ಸೀಯನ ಮೇಲೆ ತಮ್ಮ ನಂಬಿಕೆಯನ್ನಿಡಲು ಸಾಕಷ್ಟು ಆಧಾರವನ್ನು ಕಂಡುಕೊಂಡಿದ್ದಕ್ಕೆ ಬಹಳವಾದ ಸಾಧ್ಯತೆಯಿತ್ತೆಂದು

ನಾವು ನೆನಸುತ್ತೇವೆ. ಯೆಹೂದ್ಯರಿಗೂ ಅನ್ಯಜನರಿಗೂ "ಮಧ್ಯೆ ಇದ್ದ ಅಡ್ಡಗೋಡೆಯು" ತೆಗೆದುಹಾಕಲ್ಪಟ್ಟ ನಂತರ ಇಲ್ಲವೇ ಅನ್ಯಜನರೊಳಗಿಂದ ಮೊದಲ ಕ್ರೈಸ್ತಮತಾವಲಂಬಿಯಾದ ಕೊರ್ನೇಲ್ಯನು ನಂಬಿಕೆಯ ಮೂಲಕವಾದ ಅನ್ಯೋನ್ಯತೆಗೆ ಬಂದ ನಂತರ, ಗುಣನಡತೆಯಲ್ಲಿ ಎಲ್ಲಾ ವಿಧದಲ್ಲಿಯೂ ಬಹು ಘನವಂತನಾಗಿದ್ದು ತನ್ನ ಆಳನ್ನು ಸ್ವಸ್ಥಪಡಿಸಿಕೊಂಡಿದ್ದ ಈ ಶತಾಧಿಪತಿಯು ಕೃಪೆ ಮತ್ತು ಸತ್ಯ ಸಂಬಂಧವಾದ ಸಂದೇಶದಿಂದ ವಿಶೇಷವಾಗಿ ಪ್ರಭಾವಿತನಾದನೆಂಬುದರಲ್ಲಿ ನಮಗೆ ಸಂದೇಹಪಡುವದಕ್ಕಾಗದು. ನಾವು ಕಲಿಯಬೇಕಾದ ಒಂದು ಪಾಠವೆಂದರೆ ಕರ್ತನ ಸೇವೆಯಲ್ಲಿ ನಮ್ಮ ಪರಿಶ್ರಮಗಳಿಗೆ ತಕ್ಷಣ ಪೂರ್ಣ ಫಲವನ್ನು ನಾವು ನಿರೀಕ್ಷಿಸಬಾರದೆಂಬುದು. ನಾವು ಪರಿಶ್ರಮಪಡುವುದರಲ್ಲಿ ತೃಪ್ತರಾಗಿ ಅದರ ಫಲಕ್ಕಾಗಿ ಕಾಯಬೇಕು; ಹಾಗೂ ಕರ್ತನು ತಾನೇ ತನ್ನ ವಾಕ್ಯದ, ತನ್ನ ಸಂದೇಶ ಸಾರುವಿಕೆಯ ಹಿಂದಿದ್ದು ತನ್ನ ರಾಜ್ಯದಲ್ಲಿ ಸಹಬಾಧ್ಯತೆ ಹೊಂದಲು ಯೋಗ್ಯರೆಂದು ತಾನು ಎಣಿಸುವವರನ್ನು ಆಯ್ಕೆಮಾಡಿಕೊಳ್ಳುತ್ತಿರುವನೆಂಬುದನ್ನು ನಾವು ಗ್ರಹಿಸಿಕೊಳ್ಳ-ಬೇಕು. ಇನ್ನೊಂದು ಅಂಶವೆಂದರೆ, ಈಗ ಸತ್ಯದ ವಿಷಯವಾದ ಕೆಲವು ಮಟ್ಟಿನ ಜ್ಞಾನವನ್ನು ಪಡೆದವರಲ್ಲಿ ಕೆಲವು ಪ್ರಾಪಂಚಿಕ-ರಿದ್ದು ಅವರು ಇದರಿಂದ ಪೂರ್ಣವಾಗಿ ಆಶೀರ್ವಾದ ಹೊಂದಲು ಆಗದಿರಬಹುದು; ಅವರು ಕ್ರಮೇಣ ಮಹಾ ಸಂಕಟದ ಕಾಲದಲ್ಲಿನ ಕಷ್ಟಪರಿಶೋಧನೆಗಳ ಮೂಲಕವಾಗಿಯೋ ಇಲ್ಲವೇ ಮುಂದೆ ಸಾವಿರ ವರುಷದ (ಆಳ್ವಿಕೆಯ) ಕಾಲದಲ್ಲಿ ಸತ್ಯದ ವಿಷಯದಲ್ಲಿ ನಮ್ಮ ಸೇವೆಯ ಫಲವಾಗಿಯೋ ಇಲ್ಲವೇ ಕರ್ತನದೇ ಆದ ನಮ್ಮ ದೇಹಾತ್ಮಗಳಲ್ಲಿ ಆತನನ್ನು ಮಹಿಮೆ ಪಡಿಸಲು ಮಾಡಲಾದ ನಮ್ಮ ಈಗಿನ ಕಾಲದ ಪರಿಶ್ರಮಗಳ ಮೂಲಕವಾಗಿಯೋ ಪ್ರಯೋಜನ ಹೊಂದಬಹುದು.

ಹೀಗಿರುವಾಗ ನಮಗೆ ಅವಕಾಶ ದೊರೆತಂತೆಲ್ಲಾ ನಾವು ಎಲ್ಲಾ ಕಡೆಯಲ್ಲಿಯೂ (ಸುವಾರ್ತಾ) ಬೀಜವನ್ನು ಎರಚುವವರಾಗೋಣ, ಏಕೆಂದರೆ ಯಾವುದು ಫಲಿಸುವುದು, ಇದೋ ಅಥವಾ ಅದೋ ನಮಗೆ ತಿಳಿಯದು. ಕೆಲವು ವೇಳೆ ನಾವು ನೀಡಿದ ಅತ್ಯುತ್ತಮ ಆಸಕ್ತಿ ಪರಿಶ್ರಮಗಳು ನಿಷ್ಫಲವಾಗಿ ಹೋಗಬಹುದು ಮತ್ತು ನಾವು ಕೆಲವು ವೇಳೆ ಯಾವುದರಿಂದ ಅಲ್ಪ ಫಲವನ್ನು ನಿರೀಕ್ಷಿಸಿದ್ದೆವೋ ಅವು ಬಹು ಫಲಕಾರಿಯಾಗ-ಬಹುದು. ಕರ್ತನು ಆಶೀರ್ವದಿಸುವುದು ನಮ್ಮ ಆಸಕ್ತಿ ಪರಿಶ್ರಮಗಳ ಅನುಸಾರವಾಗಿ, ಆದರೆ ಬರುವ ಪ್ರತಿಫಲಗಳ ಅನುಸಾರವಲ್ಲವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು; ನಿಜವಾಗಿಯೂ ಆತನು ಬಯಸುವ ಮುಖ್ಯವಾದ ಫಲಗಳು ನಮ್ಮಲ್ಲಿಯೇ ಇರುವಂಥವುಗಳು ಅಂದರೆ ಆತನ ಆತ್ಮಿಕ ವರಗಳನ್ನು ನಮ್ಮಲ್ಲಿ ವೃದ್ಧಿಪಡಿಸಿಕೊಳ್ಳುವುದು. ಇದು ಹಲವು ವಿಧದಲ್ಲಿ ಅಂದರೆ ಆತನ ಮೇಲಿನ, ಆತನ ಸಂದೇಶದ ಮೇಲಿನ, ಆತನ ಸಹೋದರರ ಮೇಲಿನ, ಹೌದು ಲೋಕದ ಮೇಲೆಯೂ ಇದಕ್ಕೆ ಸರಿಸಮವಾಗಿ ನಮ್ಮ ವೈರಿಗಳ ಮೇಲೆಯೂ ನಮಗೆ ಇರುವ ಪ್ರೀತಿಯ ಮೂಲಕವಾಗಿ ವ್ಯಕ್ತವಾಗುವುದು.

## "ನಮ್ಮ ಮರ್ತ್ಯಶರೀರಗಳನ್ನು ಉಜ್ಜೀವಿಸಮಾಡುವುದು"

ನಮ್ಮ ಕರ್ತನ ಸ್ವಸ್ಥಪಡಿಸುವಿಕೆಯ ಸೇವಾಕಾರ್ಯವು ಕೆಲವು ವರುಷಗಳವರೆಗೆ ನಡೆಸಲ್ಪಟ್ಟಿದ್ದು ಅದನ್ನು ಹೋಲಿಸಿದ್ದಲ್ಲಿ ಯೆಹೂದ್ಯರಲ್ಲಿ ಕೆಲವು ಜನರಿಗೆ ಮಾತ್ರ ತಲುಪಿದ್ದಾಗಿತ್ತು. ಆದರೆ ಆತನು ಪರಲೋಕಕ್ಕೇರಿದ ತರುವಾಯ "ತನ್ನ ದೇಹದ ಅಂಗಗಳೆಂದು" (1 ಕೊರಿಂಥ 12:27) ಅಂಗೀಕರಿಸಿರುವ ತನ್ನ ಶಿಷ್ಯರ ಮೂಲಕವಾಗಿ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸ್ವಸ್ಥಪಡಿಸು-ವಿಕೆಯ ಕಾರ್ಯವನ್ನು ಆತನು  ನಿರ್ವಹಿಸುತ್ತಿರುವನು. ಇವರ ಮೂಲಕವಾಗಿ ಆತನ ಕಾರ್ಯ ನಿರ್ವಹಣೆಯಾಗಿ ಅನೇಕರ ಮನೋನೇತ್ರಗಳು ತೆರೆಯಲ್ಪಟ್ಟಿರುವುದು, ಕಿವುಡಾದ ಅನೇಕರ ಕಿವಿಗಳು ತೆರೆಯಲಾಗಿರುವುದು, ನೈತಿಕವಾಗಿ ಊನವಾದ ಅನೇಕರು ಗುಣಹೊಂದಿರುವರು, ಅಪೋಸ್ತಲನು ಉಲ್ಲೇಖಿಸಿ ಹೇಳಿದಂತೆ "ಆತನು ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ ಸತ್ತವರಾಗಿದ್ದ ನಿಮ್ಮನ್ನು ಸಹ ಬದುಕಿಸಿದನು." ಮತ್ತು "ಆದಕಾಣ ನೀವು ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟಿರುವದರಿಂದ ಮೇಲಿರುವವು-ಗಳನ್ನೇ ಹುಡುಕಿರಿ;" ಹಾಗೂ ಮತ್ತೆ "ಯೇಸುವನ್ನು ಸತ್ತವ-ರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸ-ವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯದೇಹಗಳನ್ನು ಸಹ ಬದುಕಿಸುವನು." ಎಂಬ ಈ ಅರ್ಥದಲ್ಲಿ ಸತ್ತವರಾಗಿದ್ದ ಅನೇಕರು ಎಬ್ಬಿಸಲ್ಪಟ್ಟಿರುವರು. – ಎಫೆಸ್ಸ 2:1; ಕೊಲೆಸ್ಸೆ 3:1; ರೋಮಾ 8:11.

ಯೇಸುವಿನ ಮಹತ್ಕಾರ್ಯಗಳನ್ನು ನೋಡಿಯೂ ಆತನನ್ನು ತಿರಸ್ಕರಿಸಿದ ಯೆಹೂದ್ಯರ ಬಗ್ಗೆ ನಾವು ವಿಸ್ಮಯ-ಪಡುವವರಾದರೆ, ಯಾವ ಕಾರಣದಿಂದಾದರೂ ನಾವು ಪರಲೋಕದಿಂದ ಬಹು ಸ್ಪಷ್ಟವಾಗಿ ನುಡಿದಿರುವಾತನ ವಿಷಯವಾಗಿ ಹಾಗೂ ಯಾವಾತನ ಬಾಸುಂಡೆಗಳಿಂದ ನಾವು ಗುಣಹೊಂದಿದ ವರಾಗಿದ್ದು ಆತನು ನಿಜವಾಗಿಯೂ ಪುನರುತ್ಥಾನವೂ ಜೀವವೂ ಆಗಿರುವನೆಂಬುದನ್ನು ಗ್ರಹಿಸಿದ್ದೇವೋ ಆತನ ಬಗ್ಗೆ ನಾವು ಸಂದೇಹವುಳ್ಳವರೂ ಅಥವಾ ಅಪನಂಬಿಗಸ್ತರೂ ಆದಲ್ಲಿ ನಮ್ಮ ಗತಿ ಏನಾಗಬಹುದು? ಆದುದರಿಂದ ಯಾರು ಪವಿತ್ರಾತ್ಮನ ಮೂಲಕವಾಗಿ ಹುಟ್ಟುವುದರ ಮೂಲಕ ನೂತನ ಜೀವ ಪಡೆದ ಅನುಭವವನ್ನು ಹೊಂದಿದವರಾಗಿ, ದೇವರ ಶಕ್ತಿ ಉಪಕಾರ ಜ್ಞಾನ ಮತ್ತು ಪ್ರೀತಿಯು ಯೇಸುವಿನ ಮೂಲಕವಾಗಿ ಕಾರ್ಯ ನಿರ್ವಹಿಸುತ್ತಿರು ವುದು ಬಹು ಸ್ಪಷ್ಟವಾಗಿ ಪ್ರದರ್ಶಿತವಾಗಿರುವುದನ್ನು ಅರಿತಿರುವರೋ "ಅವರು ಭ್ರಷ್ಟರಾದರೆ" ಅವರಿಗೆ ಇನ್ನು ಯಾವ ಕ್ಷಮೆಯೂ ಇರುವುದಿಲ್ಲ. ಆದುದರಿಂದ ಅಪೋಸ್ತಲನು ನಮಗೆ ಹೇಳುವುದು "ಅವರಲ್ಲಿ ತಿರಿಗಿ ಮಾನಸಾಂತರ ಹುಟ್ಟಿಸುವುದು ಅಸಾಧ್ಯ." (ಇಬ್ರಿಯ 6:6) ಅವರ ವಿಷಯದಲ್ಲಿ ಆತನು ಮತ್ತೂ ಹೇಳಿರುವುದೇನೆಂದರೆ, ಈ ರೀತಿಯಾಗಿ ಬಿದ್ದುಹೋಗುವುದು ಒಂದು ಉದ್ದೇಶಪೂರ್ವಕ ವಾದ ಕ್ರಿಯೆ ಆಗಿರುವುದು; ಅದು ಅಜ್ಞಾನದಿಂದಾಗಲೀ ಅಥವಾ ಬಲಹೀನತೆಯಿಂದಾಗಲೀ ಆಗಿರದೆ, ಅಂದು ಯೆಹೂದ್ಯರು ನಮ್ಮ ಕರ್ತನು ತಮ್ಮೊಡನೆ ಇರುವಾಗ ಆತನ ವಿಷಯವಾಗಿ ಅವರು ತೋರಿದಂಥ ಅದೇ

ಹೃದಯಭಾವದವರಾಗಿ ಇವರು ಬಿದ್ದುಹೋಗಿರುವರು. ಇದು ಆತನ್ನು ಪುನಃ ಶಿಲುಬೆಗೆ ಹಾಕುವದೂ ಅತನನ್ನು ಎಲ್ಲರ ಮುಂದೆ ಅವಮಾನಪಡಿಸುವದೂ ಆಗಿರುವದು. – ಇಬ್ರಿಯ 6:6.

ಆದರೆ ಅತಿ ಪ್ರಿಯರೇ, ಅಪೊಸ್ತಲನ ಆಲೋಚನೆಯನ್ನು ಬಳಸಿಕೊಂಡು ಹೇಳುವುದಾದರೆ: ನಮ್ಮನ್ನು ಪ್ರೀತಿಸಿ ನಮ್ಮನ್ನು ತನ್ನ ಅಮೂಲ್ಯ ರಕ್ತದಿಂದ ಕೊಂಡುಕೊಂಡಾತನಿಂದ ಹೊಂದಿರುವ ಇಂಥಾ ಕರುಣೆ ಮತ್ತು ಅನುಗ್ರಹಗಳಿಗೆ ಅಯೋಗ್ಯವಾದ ರೀತಿಯಲ್ಲಿ ನಾವು ಸ್ಪಂದಿಸಿದವರಾಗಿ ನಮ್ಮ ಕರೆಯ ವಿಷಯದಲ್ಲಿ ಅಯೋಗ್ಯವಾದ ರೀತಿಯಲ್ಲಿ ಹೀಗೆ ಕೊನೆಗೊಳ್ಳುವುದನ್ನು ಊಹಿಸಿಕೊಳ್ಳುವುದಕ್ಕಿಂತಲೂ ನಾವು ಪರಸ್ಪರವಾಗಿ ಒಬ್ಬರು ಮತ್ತೊಬ್ಬರ ವಿಷಯದಲ್ಲಿ ಹೆಚ್ಚು ಭರವಸೆಯುಳ್ಳವರಾಗಿರುವೆವು; ನಾವು ನಂಬಿಗಸ್ತರಾಗಿರೋಣ; ನೂತನ ಸೃಷ್ಟಿಗಳಾಗಿ ನಮ್ಮಲ್ಲಿ ಪ್ರಾರಂಭವಾಗಿರುವ ಪುನರುತ್ಥಾನದ ಕ್ರಿಯೆಯು ದೇವರ ಕೃಪೆಯ ಮೂಲಕವಾಗಿ ಮೊದಲನೆ ಪುನರುತ್ಥಾನದಲ್ಲಿ ಪೂರ್ಣಗೊಳ್ಳಬೇಕಿರುವುದೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ; ಆಗ ನಾವು ಒಂದು ಕ್ಷಣದಲ್ಲಿ ಮಾರ್ಪಟ್ಟು ಕರ್ತನ ಸಾರೂಪ್ಯವನ್ನು ಪಡೆದವರಾಗಿ ಆತನಿರುವ ಪ್ರಕಾರವೇ ಆತನನ್ನು ನೋಡುವೆವು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ ಶ 30 | ಗಲಿಲಾಯ | ಯೋಹಾನು ಸೆರೆಮನೆಯಲ್ಲಿದ್ದುಕೊಂಡು ಶಿಷ್ಯರನ್ನು ಯೇಸುವಿನ ಬಳಿಗೆ ಕಳುಹಿಸಿದುದು | 11:2–19 | –– | 7:18–35 | –– |

# ಮತ್ತಾಯ 11:2–19

ಯೋಹಾನನು ಕ್ರಿಸ್ತನ ಕಾರ್ಯಗಳ ಸುದ್ದಿಯನ್ನು ಸೆರೆಮನೆಯಲ್ಲಿ ಕೇಳಿ ಆತನ ಬಳಿಗೆ ಶಿಷ್ಯರನ್ನು ಕಳುಹಿಸಿ – ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ ಎಂದು ಕೇಳಿಸಿದನು. ಆತನು ಅವರಿಗೆ ಪ್ರತ್ಯುತ್ತರವಾಗಿ ಕುರುಡರಿಗೆ ಕಣ್ಣು ಬರುತ್ತವೆ; ಕುಂಟರಿಗೆ ಕಾಲು ಬರುತ್ತವೆ; ಕುಷ್ಠರೋಗಿಗಳು ಶುದ್ಧರಾಗುತ್ತಾರೆ; ಕಿವುಡರಿಗೆ ಕಿವಿ ಬರುತ್ತವೆ; ಸತ್ತವರು ಜೀವವನ್ನು ಹೊಂದುತ್ತಾರೆ; ಬಡವರಿಗೆ ಸುವಾರ್ತೆಯು ಸಾರಲ್ಪಡುತ್ತದೆ; ನೀವು ಹೋಗಿ ಕಂಡುಕೇಳುವವುಗಳನ್ನು ಯೋಹಾನನಿಗೆ ತಿಳಿಸಿರಿ. ನನ್ನ ವಿಷಯದಲ್ಲಿ ಸಂಶಯ–ಪಡದವನೇ ಧನ್ಯನು ಎಂದು ಹೇಳಿದನು. ಅವರು ಹೊರಟು ಹೋಗುತ್ತಿರಲು ಯೇಸು ಯೋಹಾನನ ವಿಷಯವಾಗಿ ಆ ಜನರ ಗುಂಪುಗಳಿಗೆ ಹೇಳತೊಡಗಿದ್ದೇನಂದರೆ–ಏನು ನೋಡಬೇಕೆಂದು ಅಡವಿಗೆ ಹೋಗಿದ್ದಿರಿ? ಗಾಳಿಯಿಂದ ಅಲ್ಲಾಡುವ ದಂಟನ್ನೋ? ಅಲ್ಲವಾದರೆ ಏನು ನೋಡಬೇಕೆಂದು ಹೋಗಿದ್ದಿರಿ? ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನೋ? ನಯವಾದ ಉಡುಪನ್ನು ಉಟ್ಟುಕೊಂಡವರು ಅರಮನೆಗಳಲ್ಲಿ ಇರುತ್ತಾರಷ್ಟೆ. ಹಾಗಾದರೆ ಯಾತಕ್ಕೆ ಹೋಗಿದ್ದಿರಿ? ಪ್ರವಾದಿಯನ್ನು ನೋಡುವು–ದಕ್ಕೋ? ಹೌದು, ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿ ಎಂದು ನಿಮಗೆ ಹೇಳುತ್ತೇನೆ. ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ; ನೀನು ಹೋಗುವ ದಾರಿಯನ್ನು ಅವನು ನಿನ್ನ ಮುಂದೆ ಸರಿಮಾಡುವನು ಎಂದು ಯಾರ ವಿಷಯದಲ್ಲಿ ಬರೆದದೆಯೋ ಆ ಪುರುಷನು ಇವನೇ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕರಾಜ್ಯದಲ್ಲಿರುವ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಇದಲ್ಲದೆ ಸ್ನಾನಿಕನಾದ ಯೋಹಾನನ ಕಾಲದಿಂದ ಈವರೆಗೆ ಪರಲೋಕ–ರಾಜ್ಯವು ಬಲಾತ್ಕಾರಕ್ಕೆ ಗುರಿಯಾಗಿರುತ್ತದೆ; ಬಲಾತ್ಕಾರಿಗಳು ನುಗ್ಗಿ ಅದನ್ನು ಸ್ವಾಧೀನಮಾಡಿಕೊಳ್ಳುತ್ತಾರೆ. ಪ್ರವಾದಿಗಳೆಲ್ಲರೂ ಧರ್ಮಶಾಸ್ತ್ರವೂ ಪ್ರವಾದಿಸುವದೂ ಯೋಹಾನನ ತನಕ ಇತ್ತು. ನಿಮಗೆ ಗ್ರಹಿಸುವುದಕ್ಕೆ ಮನಸ್ಸಿದ್ದರೆ ಬರತಕ್ಕ ಎಲೀಯನು ಇವನೇ ಎಂದು ತಿಳುಕೊಳ್ಳಿರಿ. ಕಿವಿಯುಳ್ಳವನು ಕೇಳಲಿ. ಆದರೆ ಈ ಸಂತತಿಯನ್ನು ಯಾರಿಗೆ ಹೋಲಿಸಲಿ? ಪೇಟೆಗಳಲ್ಲಿ ಕೂತು–ಕೊಂಡು ತಮ್ಮ ಗೆಳೆಯರಿಗೆ–ನಿಮಗೋಸ್ಕರ ಕೊಳಲೂದಿದೆವು, ನೀವು ಕುಣಿಯಲಿಲ್ಲ. ಗೋಳಾಡಿದೆವು, ನೀವು ಎದೆಬಡಕೊಳ್ಳಲಿಲ್ಲ ಎಂದು ಕೂಗಿಹೇಳುವಂಥ ಹುಡುಗರನ್ನು ಹೋಲುತ್ತದೆ. ಹೇಗೆಂದರೆ ಯೋಹಾನನು ಬಂದನು, ಅವನು ಅನ್ನಪಾನಗಳನ್ನು ತೆಗೆದುಕೊಳ್ಳದವನಾಗಿದ್ದನು; ಅವರು ಅವನಿಗೆ–ದೆವ್ವಹಿಡಿದದೆ ಅನ್ನುತ್ತಾರೆ. ಮನುಷ್ಯಕುಮಾರನು ಬಂದನು, ಅವನು ಅನ್ನಪಾನಗಳನ್ನು ತೆಗೆದುಕೊಳ್ಳುವವನಾಗಿದ್ದಾನೆ; ಅವರು–ಇಗೋ, ಇವನು ಹೊಟ್ಟೆಬಾಕನು, ಕುಡುಕನು, ಭ್ರಷ್ಟರ ಮತ್ತು ಪಾಪಿಷ್ಠರ ಗೆಳೆಯನು ಅನ್ನುತ್ತಾರೆ. ಆದರೆ ಜ್ಞಾನವು ತನ್ನ ಕೆಲಸಗಳಿಂದ ಜ್ಞಾನವೇ ಎಂದು ಗೊತ್ತಾಗುವದು ಅಂದನು.

## ಲೂಕ 7:18–35

ಯೋಹಾನನ ಶಿಷ್ಯರು ನಡೆದ ಸಂಗತಿಗಳನ್ನೆಲ್ಲಾ ಅವನಿಗೆ ತಿಳಿಸಲು ಅವನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕರೆದು–ಬರಬೇಕಾದವನು ನೀನೋ, ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ ಎಂದು ಸ್ವಾಮಿಗೆ ಹೇಳಿಕಳುಹಿಸಿದನು. ಅವರು ಆತನ ಬಳಿಗೆ ಬಂದು–ಬರಬೇಕಾದವನು ನೀನೋ, ನಾವು ಮತ್ತೊಬ್ಬನ ದಾರಿಯನ್ನು ನೋಡಬೇಕೋ ಎಂದು ಕೇಳುವುದಕ್ಕಾಗಿ ಸ್ನಾನಿಕನಾದ ಯೋಹಾನನು ನಮ್ಮನ್ನು ನಿನ್ನ ಬಳಿಗೆ ಕಳುಹಿಸಿದ್ದಾನೆ ಅಂದರು. ಅದೇ ಗಳಿಗೆಯಲ್ಲಿ ಅತನು ಅನೇಕರನ್ನು ರೋಗ ಉಪದ್ರವ ದೆವ್ವ ಇಂಥವುಗಳಿಂದ ಬಿಡಿಸಿ

ವಾಸಿಮಾಡಿದನು; ಮತ್ತು ಅನೇಕ ಮಂದಿ ಕುರುಡರಿಗೆ ಕಣ್ಣನ್ನು ದಯಪಾಲಿಸಿದನು. ಹೀಗಿರಲು ಆತನು ಅವರಿಗೆ ಪ್ರತ್ಯುತ್ತರವಾಗಿ– ನೀವು ಹೋಗಿ ಕಂಡು ಕೇಳಿದವುಗಳನ್ನು ಯೋಹಾನನಿಗೆ ತಿಳಿಸಿರಿ; ಕುರುಡರಿಗೆ ಕಣ್ಣು ಬರುತ್ತವೆ, ಕುಂಟರಿಗೆ ಕಾಲು ಬರುತ್ತವೆ, ಕುಷ್ಠರೋಗಿಗಳು ಶುದ್ಧರಾಗುತ್ತಾರೆ, ಕಿವುಡರಿಗೆ ಕಿವಿಬರುತ್ತವೆ, ಸತ್ತವರು ಜೀವವನ್ನು ಹೊಂದುತ್ತಾರೆ, ಬಡವರಿಗೆ ಸುವಾರ್ತೆ ಸಾರಲ್ಪಡುತ್ತದೆ. ನನ್ನ ವಿಷಯದಲ್ಲಿ ಸಂಶಯಪಡದವನೇ ಧನ್ಯನು ಎಂದು ಹೇಳಿದನು. ಯೋಹಾನನ ದೂತರು ಹಿಂತಿರುಗಿ ಹೋಗಲು ಆತನು ಯೋಹಾನನ ವಿಷಯವಾಗಿ ಆ ಜನರ ಗುಂಪುಗಳಿಗೆ ಹೇಳತೊಡಗಿದ್ದೇನೆಂದರೆ ಏನು ನೋಡಬೇಕೆಂದು ಅಡವಿಗೆ ಹೋಗಿದ್ದಿರಿ? ಗಾಳಿಯಿಂದ ಅಲ್ಲಾಡುವ ದಂಟನ್ನೋ? ಅಲ್ಲವಾದರೆ ಏನು ನೋಡಬೇಕೆಂದು ಹೋಗಿದ್ದಿರಿ? ನಯವಾದ ಉಡುಪನ್ನು ಹಾಕಿಕೊಂಡ ಮನುಷ್ಯನನ್ನೋ? ಶೋಭಾಯ ಮಾನವಾದ ಉಡುಪನ್ನು ಧರಿಸಿ ಭೋಗದಲ್ಲಿ ಬಾಳುವವರು ಅರಮನೆಗಳಲ್ಲಿ ಇರುತ್ತಾರಷ್ಟೆ. ಹಾಗಾದರೆ ಏನು ನೋಡಬೇಕೆಂದು ಹೋಗಿದ್ದಿರಿ? ಪ್ರವಾದಿಯನ್ನೋ? ಹೌದು, ಪ್ರವಾದಿಗಿಂತಲೂ ಹೆಚ್ಚಿನವನನ್ನು ನೋಡಿದಿರಿ ಎಂದು ನಿಮಗೆ ಹೇಳುತ್ತೇನೆ. ಇಗೋ, ನನ್ನ ದೂತನನ್ನು ನಿನ್ನ ಮುಂದೆ ಕಳುಹಿಸುತ್ತೇನೆ. ನೀನು ಹೋಗುವ ದಾರಿಯನ್ನು ಅವನು ನಿನ್ನ ಮುಂದೆ ಸರಿಮಾಡುವನು ಎಂದು ಯಾರ ವಿಷಯವಾಗಿ ಬರೆದದೆಯೋ ಆ ಪುರುಷನು ಇವನೇ. ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಯೋಹಾನನಿಗಿಂತ ದೊಡ್ಡವನು ಒಬ್ಬನೂ ಇಲ್ಲ; ಅದರೂ ದೇವರ ರಾಜ್ಯದಲ್ಲಿ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಹೇಳುತ್ತೇನೆ. ಇದಲ್ಲದೆ ಜನರೆಲ್ಲರೂ ಸುಂಕದವರೂ ಯೋಹಾನನ ಉಪದೇಶವನ್ನು ಕೇಳಿದಾಗ ಅವನಿಂದ ದೀಕ್ಷಾಸ್ನಾನ ಮಾಡಿಸಿ ಕೊಂಡದ್ದರಲ್ಲಿ ದೇವರು ನೀತಿವಂತನೆಂದು ಒಪ್ಪಿಕೊಂಡರು. ಆದರೆ ಫರಿಸಾಯರೂ ಧರ್ಮೋಪದೇಶಕರೂ ಅವನಿಂದ ಸ್ನಾನ ಮಾಡಿಸಿಕೊಳ್ಳದೆ ಹೋದದ್ದರಲ್ಲಿ ತಮ್ಮ ವಿಷಯವಾಗಿ ದೇವರ ಸಂಕಲ್ಪವನ್ನು ನಿರಾಕರಿಸಿದರು. ಹೀಗಿರುವಲ್ಲಿ ಈ ಕಾಲದ ಜನರನ್ನು ಯಾರಿಗೆ ಹೋಲಿಸಲಿ? ಅವರು ಯಾರನ್ನು ಹೋಲುತ್ತಾರೆ? ಪೇಟೆಯಲ್ಲಿ ಕೂತುಕೊಂಡು–ನಿಮಗೋಸ್ಕರ ಕೊಳಲೂದಿದೆವು, ನೀವು ಕುಣಿಯಲಿಲ್ಲ; ಗೋಳಾಡಿದೆವು, ನೀವು ಅಳಲಿಲ್ಲ ಎಂದು ಒಬ್ಬರಿಗೊಬ್ಬರು ಕೂಗಿ ಹೇಳುವಂಥ ಹುಡುಗರನ್ನು ಹೋಲುತ್ತಾರೆ. ಹೇಗೆಂದರೆ ಸ್ನಾನಿಕನಾದ ಯೋಹಾನನು ಬಂದಿದ್ದಾನೆ; ಅವನು ರೊಟ್ಟಿ ತಿನ್ನದವನು, ದ್ರಾಕ್ಷಾರಸ ಕುಡಿಯದವನು; ನೀವು–ಅವನಿಗೆ ದೆವ್ವ ಹಿಡಿದದೆ ಅನ್ನುತ್ತೀರಿ. ಮನುಷ್ಯಕುಮಾರನು ಬಂದಿದ್ದಾನೆ, ಅವನು ಅನ್ನಪಾನಗಳನ್ನು ತೆಗೆದುಕೊಳ್ಳುವವನಾಗಿದ್ದಾನೆ; ನೀವು–ಇಗೋ, ಇವನು ಹೊಟ್ಟೆಬಾಕನು, ಕುಡುಕನು, ಭ್ರಷ್ಟರ ಮತ್ತು ಪಾಪಿಷ್ಠರ ಗೆಳೆಯನು ಅನ್ನುತ್ತೀರಿ. ಆದರೆ ಜ್ಞಾನವು ಸಕಲ ಜ್ಞಾನಾವಲಂಬಿಗಳ ಮೂಲಕ ಜ್ಞಾನವೇ ಎಂದು ಗೊತ್ತಾಗುವದು ಅಂದನು.

# ನಿರಾಶನಾದ ಪ್ರವಾದಿಯ ಬುದ್ಧಿವಂತಿಕೆಯ ವಿಧಾನ

**ರೀಪ್ರಿಂಟ್ಸ್ ಪುಟ 2620**

## ಲೂಕ 7:18–28

**"ಎಲ್ಲಾ ಚೆನ್ನಾಗಿ ಮಾಡಿದ್ದಾನೆ" – ಮಾರ್ಕ 7:37**

ಯೇಸು ಅನೇಕ ಅದ್ಭುತಗಳನ್ನು ಮಾಡುತ್ತಾ ಅಸಂಖ್ಯಾತ ಶಿಷ್ಯರನ್ನು ಮಾಡಿಕೊಳ್ಳುತ್ತಾ ಮತ್ತು ಬಹು ಅಲ್ಪವಾದ ವಿರೋಧವನ್ನು ಎದುರಿಸುತ್ತಾ ಇದ್ದಾಗ ಆತನ ದಾಯಾದಿಯಾದ ಸ್ನಾನಿಕನಾದ ಯೋಹಾನನ ವಿಷಯವು ಬಹು ಭಿನ್ನವಾದ ರೀತಿಯಲ್ಲಿ ಸಾಗುತ್ತಿತ್ತು. ಆದರೂ ಇದು ಯೋಹಾನನು ತನ್ನ ವಿಷಯವಾಗಿ ಪ್ರವಾದಿಸಿದ ಅನುಸಾರವಾಗಿಯೇ ಇತ್ತು. ಅವನು ಹೇಳಿದ್ದು: "ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು..." ಯೇಸು ಬಹು ಸಫಲನಾಗಿ ಪರಿಶ್ರಮಿಸುತ್ತಿದ್ದ ಸ್ಥಳದಿಂದ ಸುಮಾರು 120 ಮೈಲಿ ದೂರದಲ್ಲಿ ಅವನು ಸೆರೆಮನೆಯಲ್ಲಿದ್ದನು. ನೆಲಮಾಳಿಗೆಯ ಕತ್ತಲಿನ ಒಂದು ಕೋಣೆಯಲ್ಲಿ ಬಂಧಿಸಿಡುವುದು ಆ ಕಾಲದಲ್ಲಿ ಸಾಮಾನ್ಯವಾಗಿತ್ತು. ಮತ್ತು ನಮ್ಮ ಕರ್ತನು ಈತನ ಪರವಾಗಿ ಪ್ರತಿಭಟನಾ ಧ್ವನಿಯೆತ್ತದೆ ಮತ್ತು ಈತನ ಬಿಡುಗಡೆಗಾಗಿ ಯಾವ ಅದ್ಭುತ ಶಕ್ತಿಯನ್ನೂ ಪ್ರಯೋಗಿಸದೆ ತನ್ನ ಕಾರ್ಯದಲ್ಲಿ ಮುಂದುವರೆಯುತ್ತಿದ್ದುದು ವಿಶೇಷವಾಗಿ ಮೆಸ್ಸೀಯನು ನೆರವೇರಿಸಲಿರುವ ಕಾರ್ಯಗಳನ್ನು ಎದುರುನೋಡುತ್ತಿದ್ದ ಯೋಹಾನನಿಗೆ ಇದು ಬಹು ವಿಚಿತ್ರವಾಗಿ ಕಂಡಿರುವ ಸಂಭವವಿತ್ತು. ಮೆಸ್ಸೀಯನನ್ನು ಭೂಲೋಕದ ಒಬ್ಬ ಮಹಾ ಸೇನಾನಾಯಕನಾದ ಅರಸನನ್ನಾಗಿ ಎದುರು ನೋಡುವುದು ಯೆಹೂದ್ಯರಲ್ಲಿದ್ದ ನಿರೀಕ್ಷೆಯಾನುಸಾರ ಸಾಮಾನ್ಯವಾಗಿತ್ತು.

ಯೋಹಾನನು ತನ್ನ ಮನಸ್ಸಿನಲ್ಲಿ ಎಷ್ಟು ಸುಲಭವಾಗಿ ಭಯ ಸಂದೇಹಗಳನ್ನು ಉಂಟಾಗಮಾಡಿಕೊಂಡನೆಂಬುದನ್ನು ನಾವು ನೋಡುತ್ತೇವೆ. ಈ ಸಂಗತಿಯು ಪೂರ್ಣವಾಗಿ ಒಂದು ವಂಚನೆಯಾಗಿದ್ದು ಯೇಸು ಮತ್ತು ನಾನು ನಮ್ಮನ್ನು ಮೋಸಪಡಿ ಸಿಕೊಂಡಿರುವೆಂದು ಆತನು ಹೇಳಿದ್ದಿರಬಹುದು. ದೇವರ ಏರ್ಪಾಡಿನ ಪ್ರಕಾರ ಆತನ ಹಿಂದಿನ ನಡವಳಿಕೆಗಳ ಬಗ್ಗೆ ತನ್ನ ಎಲ್ಲಾ ನಂಬಿಕೆಯನ್ನು ಅಲ್ಲದೆ ಈಗಿನ ಹಾಗು ಮುಂದಿನ ಕಾಲದ ವಿಷಯದಲ್ಲಿ ತನ್ನಲ್ಲಿದ್ದ ನಿರೀಕ್ಷೆಯನ್ನೆಲ್ಲಾ ಕಳಕೊಂಡವನಾಗಿದ್ದಿರ ಬಹುದು. ಇಂಥ ದೊಡ್ಡ ನಿರಾಶೆಯ ಅನುಭವವಾದಾಗ್ಯೂ ಆತನ ನಂಬಿಕೆಯು ಕರ್ತನ ಮೇಲೆ ಸ್ಥಿರವಾಗಿ ನೆಲೆಗೊಂಡಿತ್ತು. ತನ್ನ ಶಿಷ್ಯರನ್ನು ಯೇಸುವಿನ ಬಳಿಗೆ ವಿಚಾರಿಸಲು ಕಳುಹಿಸಿದ್ದು ದರಲ್ಲಿ ಮತ್ತು ಆ ವಿಚಾರಣೆಯ ರೀತಿಯಲ್ಲಿ ಇದು ತಿಳಿದು ಬಂದಿರು ವುದು. ಇದು ಒಂದು ತಮಾಷೆಯ ವಿಷಯವೋ ಅಥವಾ ನಾವು

ಭ್ರಮೆಯುಳ್ಳವರಾಗಿರುವೆವೋ ಎಂದು ಆತನು ಹೇಳಲಿಲ್ಲ; ಆದರೆ ಇದಕ್ಕೆ ಬದಲಾಗಿ ಆತನ ಪ್ರಶ್ನೆಯು ಸ್ವಸ್ಥಬುದ್ಧಿಯಿಂದ ಕೂಡಿದ್ದು ಅದರಲ್ಲಿ ವ್ಯಕ್ತವಾಗಿದ್ದುದೆಂದರೆ ಈವರೆಗೂ ಕರ್ತನು ನಡೆಸುತ್ತಾ ಬಂದಿರುವುದು ನಿಶ್ಚಿತವಾಗಿದ್ದು ಪ್ರವಾದಿಯ ಮನಸ್ಸಿನಲ್ಲಿದ್ದ ಒಂದೇ ಸಂದೇಹವು ತಾನು ಯೇಸುವಿನ ಮುಂದೂತನಾಗಿದ್ದು ಯೇಸುವೂ ಪ್ರತಿಯಾಗಿ ತನಗಿಂತಲೂ ಹೆಚ್ಚಿನವನಾಗಿದ್ದು ತಾನೂ ಮುಂದೆ ಬರಲಿರುವ ಇನ್ನೂ ಹೆಚ್ಚಿನವನ ಮುಂದೂತನಾಗಿ ರುವನೋ ಏನೋ ಎನ್ನುವುದು. ನಿಖರವಾಗಿ ಹೇಳುವುದಾದರೆ, ಇದೇ ಸರಿಯಾದ ಸಂಗತಿಯಾಗಿತ್ತು; ಏಕೆಂದರೆ ಶರೀರ ಸಂಬಂಧದಲ್ಲಿ ಬಂದ ಯೇಸುವು ನಿಜವಾಗಿಯೂ ಎರಡನೇ ಬರೋಣದಲ್ಲಿ ಲೋಕ ಉಂಟಾದಂದಿನಿಂದಲೂ ಪರಿಶುದ್ಧ ಪ್ರವಾದಿಗಳ ಮೂಲಕವಾಗಿ ಮುಂತಿಳಿಸಿದ ವಿಶೇಷವಾದ ಅದ್ಭುತ ಕಾರ್ಯಗಳನ್ನು ಮಾಡಲಿರುವ ಇನ್ನೂ ಅಧಿಕವಾದ ಪ್ರಭಾವವುಳ್ಳವನಾದ ಕ್ರಿಸ್ತನಿಗೆ ಒಬ್ಬ ಮುಂದೂತನಾಗಿಯೂ ಆತನ ಮುಂದೆ ದಾರಿಯನ್ನು ಸಿದ್ಧಮಾಡುವವನಾಗಿಯೂ ಇದ್ದನು. – ಅಪೋ. ಕೃತ್ಯ. 3:21–23

ನಮ್ಮ ಕರ್ತನು ಯೋಹಾನನ ಪ್ರಶ್ನೆಗೆ ನೇರವಾಗಿ ಉತ್ತರಿಸಲಿಲ್ಲವೆಂಬುದು ಇಲ್ಲಿ ಗಮನಕ್ಕೆ ಬರುವುದು. ಮತ್ತೊಂದು ಬರೋಣವು ಇರುವುದೆಂದೂ ಆಗ ತಾನು ನಿರ್ವಹಿಸುತ್ತಿದ್ದು–ದಕ್ಕಿಂತಲೂ ಇನ್ನೂ ಅಧಿಕವಾದ ಕಾರ್ಯಗಳು ನಡೆಸಲ್ಪಡುವ –ವೆಂದು ಆತನು ಹೇಳಲಿಲ್ಲ; ಆದರೆ ತಾನು ಆಗ ನಿರ್ವಹಿಸುತ್ತಿದ್ದ ಕಾರ್ಯವು ಪ್ರವಾದಿಗಳ ಗ್ರಂಥದಲ್ಲಿ ಬರೆದಿರುವ ಕಾರ್ಯಗಳೇ ಎಂಬುದನ್ನು ಯೋಹಾನನು ವಿಶೇಷವಾಗಿ ಅರ್ಥಮಾಡಿ–ಕೊಳ್ಳುವಂತೆ ಮಾಡಿದ್ದನು. ಯೋಹಾನನ ದೂತರು ಇನ್ನೂ ಯೇಸುವಿನ ಬಳಿಯಲ್ಲಿರುವಾಗ ಅವರ ಕಣ್ಣುಮುಂದೆ ಅನೇಕ ಅದ್ಭುತಗಳು ಮಾಡಲ್ಪಟ್ಟವು ಮತ್ತು ಯೇಸುವು ಅವರನ್ನು ಯೋಹಾನನ ಬಳಿಗೆ ತಿರಿಗಿ ಕಳುಹಿಸುತ್ತಾ ಅವರಿಗೆ – ದೇವರು ತನ್ನ ಕೈಯಿಂದ ಮಾಡಿಸುತ್ತಾ ಬಂದಿರುವ ಕಾರ್ಯಗಳನ್ನು ತಾವು ನೋಡಿದ್ದಕ್ಕೆ ಯೋಹಾನನಿಗೆ ಸಾಕ್ಷಿಹೇಳಬೇಕೆಂದು ಅವರಿಗೆ ಆಜ್ಞಾಪಿಸಿದನು. ಮತ್ತು ಅವರು ಯೋಹಾನನಿಗೆ ಹೀಗೆ ಹೇಳಲೂ ಆಜ್ಞಾಪಿಸಿದನು. ಅದೇನಂದರೆ, ಪ್ರವಾದಿಯು ಸಾರಿ ಹೇಳಿರುವಂತೆ (ಯೆಶಾಯ 8:14) ಯೇಸುವಿನ ಹಾಗು ಆತನ ಕಾರ್ಯಗಳ ಮತ್ತು ನುಡಿಗಳ ಬಗ್ಗೆ ಎಡವಿಬೀಳುವ ಅವಕಾಶಗಳು ಹಲವಾರು ಇರುವುದಾಗಿಯೂ ಮತ್ತು ಹೀಗೆ ಎಡವಿಬೀಳದೆ ಆತನ ಕಾರ್ಯಗಳ ಮತ್ತು ಅವುಗಳ ನೆರವೇರುವಿಕೆಗಳ ವಿಷಯದಲ್ಲಿ ಅನೇಕ ವಿಧವಾದ ನಿರಾಶೆಗಳು ಉಂಟಾದಾಗ್ಯೂ ಕರ್ತನ ಮೇಲೆ ತಮ್ಮ ನಂಬಿಕೆಯನ್ನು ಕಾಪಾಡಿಕೊಂಡು ಮುಂದುವರೆಯು ವವರಿಗೆ ಒಂದು ವಿಶೇಷವಾದ ಆಶೀರ್ವಾದವು ಅವರಲ್ಲಿ ನೆಲೆಸುವುದು. ಈ ವಿಧವಾದ ನಿರಾಶೆಯು ಭೂಮಿಯ ಮೇಲಿರುವ ಆಕಾಶವು ಉನ್ನತವಾಗಿರುವಂತೆ ಹಾಗೂ ಯಾವ ಮಾನುಷಕಲ್ಪನೆಯೂ ಊಹಿಸಲಾಗದಷ್ಟು ಉನ್ನತವಾಗಿರುವ ದೇವರ ಯೋಜನೆಯ ಉದ್ದ ಅಗಲ ಆಳ ಮತ್ತು ಎತ್ತರದ ವಿಷಯವಾಗಿ ತಪ್ಪಾಗಿ ನಿರೂಪಿಸುವುದರ ಕಾರಣದಿಂದ ಉಂಟಾಗಿರುವುದು. ದೃಷ್ಟಾಂತವಾಗಿ ಹೇಳುವುದಾದರೆ, ಯೆಹೂದ್ಯರು ಎದುರು ನೋಡುವಂಥ ದೇವರ ರಾಜ್ಯಕ್ಕಿಂತಲೂ ಉನ್ನತವಾದುದನ್ನು ಅಂದರೆ ಭೂಲೋಕದಲ್ಲಿ ರಾಜ್ಯವು ಸ್ಥಾಪಿತವಾಗುವುದಕ್ಕೆ ಮೊದಲು ಆ ರಾಜ್ಯಕ್ಕೆ ಸೇರುವ ಆತ್ಮಿಕವರ್ಗವನ್ನು ಆಯ್ಕೆಮಾಡಿ ಅವರು ಮೆಸ್ಸೀಯನೊಡನೆ ಆತನ ಪ್ರಭಾವ ಮಾನ ನಿರ್ಣಯತ್ವಗಳಲ್ಲಿ ಪಾಲುಪಡೆಯು ವಂಥದನ್ನು ಒಂದು ಕ್ಷಣ ಆಲೋಚಿಸುವುದು ಯಾವ ಯೆಹೂದ್ಯನಿಗೆ ಸಾದ್ಯ?

ಯೋಹಾನನಿಗೆ ಬಲವಾಗಿ ಮನದಟ್ಟು ಮಾಡಿಕೊಡಲಾದ ಪಾಠಗಳನ್ನು ನಂಬಿಗಸ್ತರಾದ ಕರ್ತನ ಸೇವಕರೆಲ್ಲರೂ ನೆನಪಿನಲ್ಲಿ ಡುವುದು ಅಗತ್ಯ. ಕೆಲವು ಸಾರಿ ಅವರ ಸಂಗತಿಗಳು ತಾವು ನಿರೀಕ್ಷಿಸಿದುದಕ್ಕಿಂತಲೂ ಬಹು ಭಿನ್ನವಾದ ರೂಪಕ್ಕೆ ತಿರುಗಿ ಕೊಂಡು ತಮ್ಮ ಕರ್ತವ್ಯಗಳ ವಿಷಯದಲ್ಲಿ ಹಾಗು ಸತ್ಯದ ವಿಷಯದಲ್ಲಿ ನಂಬಿಗಸ್ತರಾಗಿದ್ದುದಕ್ಕೆ ಪ್ರತಿಫಲವಾಗಿ ಪೆಟ್ಟುಗಳು ನಿಂದನೆಗಳು ಮತ್ತು ಶೋಷಣೆಗಳು ಬಂದಾಗ್ಯೂ ದೇವರು ಅವರನ್ನು ಮರೆತಿರುವನೆಂಬದಾಗಿ ಇಲ್ಲವೇ ಅವರು ಹಿಂದೆ ಕರ್ತನ ಸೇವೆಮಾಡುವುದರಲ್ಲಿ ತಪ್ಪಾಗಿ ನಡೆಸಲ್ಪಟ್ಟಿರುವರೆಂಬ ದಾಗಿ ಅರ್ಥವಾಗುವದಿಲ್ಲ; ಅಥವಾ ದೇವರು ತನ್ನ ಯೋಜನೆ ಯನ್ನು ಬದಲಿಸಿದ್ದಾನೆಂಬ ಅರ್ಥವೂ ಸಹ ಬರುವುದಿಲ್ಲ; ಇಲ್ಲವೇ ಅವರ ಸ್ಥಿತಿಗತಿಗಳ ಬಗ್ಗೆ ದೇವರು ಗಮನ ಹರಿಸಿಲ್ಲವೆಂಬು ದಾಗಿಯಾಗಲೀ, ಉದಾಸೀನನಾಗಿದ್ದಾನೆ ಎಂದಾಗಲೀ ಅರ್ಥ ಬರುವುದಿಲ್ಲ. ನಿಜ, ಅವರ ಮೊದಲ ಆಲೋಚನೆಯು, ಈ ಪ್ರತಿಕೂಲ ಪರಿಸ್ಥಿತಿಗಳು ಅವರಿಗೆ ಶಿಕ್ಷೆಯ ರೂಪದಲ್ಲಿಯೋ ಅಥವಾ ತಮ್ಮ ಕಾರ್ಯಗಳನ್ನು ತಪ್ಪಾದ ರೀತಿಯಲ್ಲಿ ಮಾಡಿದುದರ ಫಲವಾಗಿಯೋ ಅಥವಾ ಕರ್ತನ ಸೇವೆಯನ್ನು ಆತನು ತಿಳಿಸಿದ ರೀತಿಯಲ್ಲಿ ಮಾಡಲು ವಿಫಲರಾದುದರ ಫಲವಾಗಿ ಬಂದದ್ದಾಗಿರುವುದೋ ಇಲ್ಲವೋ ಎಂಬುದನ್ನು ಪರಿಶೀಲಿಸುವಂಥದ್ದಾಗಿರಬೇಕು. ಆದರೆ ಅವರು ಅನುಸರಿಸಿದ ವಿಧಾನವು ದೇವರ ಚಿತ್ತದ ಮತ್ತು ವಾಕ್ಯದ ಅನುಸಾರ ವಾಗಿತ್ತೆಂಬುದು ಕಂಡುಬಂದಲ್ಲಿ ಅವರು ಕೂಡಲೇ ತಮ್ಮ ವಿಶ್ವಾಸವನ್ನು ಕರ್ತನ ಮೇಲೆ ನೆಲೆಗೊಳಿಸಿದವರಾಗಿ ದೇವರು ತನ್ನ ಕಾರ್ಯಗಳನ್ನು ಹೇಗೆ ನಿರ್ವಹಿಸಬೇಕೆಂದು ತಮಗಿಂತಲೂ ಚೆನ್ನಾಗಿ ಆತನಿಗೇ ತಿಳಿದಿರುವುದೆಂದು ತೀರ್ಮಾನಿ ಸಿಕೊಳ್ಳಬೇಕು. ಆನಂತರ ಆ ಕೆಲಸದಲ್ಲಿ ಸ್ವಲ್ಪ ಕಾಲ ತಮ್ಮನ್ನು ಬಳಸಿಕೊಂಡುದು ದಕ್ಕಾಗಿ ಕೃತಜ್ಞತೆಯುಳ್ಳವರಾಗಿದ್ದು ಈ ಕಾರ್ಯವು ಸ್ವಲ್ಪ ಸಮಯ ನಿಲ್ಲಿಸಲಾದುದು ಕರ್ತನ ಚಿತ್ತವಾ ಗಿದ್ದಲ್ಲಿ ಬಹುಶಃ ಅದು ಇತರರ ಒಳಿತಿಗಾಗಿಯೋ ಅಥವಾ (ಕ್ರಿಸ್ತನ) ಅನುಭವಶಾಲೆಯಲ್ಲಿ ತಮ್ಮ ತರಬೇತಿಗಾಗಿಯೋ ಇಲ್ಲವೇ ನಾವು ತಾಳ್ಮೆಯ ಮತ್ತು ನಂಬಿಕೆಯ ವಿಷಯವಾಗಿ ಪಾಠಗಳನ್ನು ಕಲಿಯುವ ಸಲುವಾಗಿಯೋ ಎಂದು ನೆನೆದು ಸಂತೋಷಿಸುವವರಾಗಬೇಕು.

ಆದರೆ ಕೇವಲ ಯಾರು (ಆತ್ಮಿಕವಾಗಿ) ಗಣನೀಯ ಪ್ರಗತಿಹೊಂದಿರುವರೋ, ಯಾರು ಕರ್ತನ ಮಾರ್ಗದಲ್ಲಿ ಗಣನೀಯ ಪ್ರಮಾಣದ ದೂರವನ್ನು ಓಡಿದವರಾಗಿ ಕರ್ತನು ಮುಂದಾಗಿ ಮಾಡಿರುವ ಏರ್ಪಾಡುಗಳ ವಿಷಯವಾಗಿ ಈಗಾಗಲೇ ಅನುಭವವನ್ನು ಹೊಂದಿದವರಾಗಿದ್ದು ಆತನ ಅನುಭವಶಾಲೆಯಲ್ಲಿ ಅನೇಕ ಪಾಠಗಳನ್ನು ಕಲಿತಿರುವರೋ

ಅವರಿಗೆ ಮಾತ್ರ ಕರ್ತನಲ್ಲಿ ಹೀಗೆ ವಿಶ್ರಮಿಸುವುದಾಗಲೀ, ಹೀಗೆ ಜೀವಿತವನ್ನು ಆತನಲ್ಲಿ ಕೇಂದ್ರೀಕರಿಸಿಕೊಳ್ಳುವುದಾಗಲೀ ಮಾಡುವುದು ಸಾದ್ಯ. ಹೀಗಿರಲು ಇದು ಕರ್ತನ ನಿಜವಾದ ಹಿಂಬಾಲಕರೆಲ್ಲರೂ ಪರಿಶ್ರಮಿಸಿ ತಲುಪಬೇಕಾದ ಸ್ಥಿತಿಯಾಗಿರು–ವುದು. ಮತ್ತು ಕೇವಲ ಇದೇ ಕರ್ತನಿಗೆ ಪೂರ್ಣವಾಗಿ ಸಂತೋಷವನ್ನುಂಟುಮಾಡುವ ಒಂದು ವಿಧಾನ. ದೇವರ ಸೇವಕರೆಲ್ಲರಿಗೆ ತಾವು ಗೊಂದಲಕ್ಕೊಳಗಾದಾಗ ಅನುಸರಿಸ ಬೇಕಾದ ಸೂಕ್ತ ವಿಧಾನವೆಂದರೆ ಅದು ಯೋಹಾನನು ಅನುಸರಿಸಿದ ವಿಧಾನ; ಅದೇನೆಂದರೆ ಆ ಗೊಂದಲದೊಂದಿಗೆ ಕರ್ತನ ಬಳಿಗೆ ಹೋಗಿ ಸಂದೇಹ ಪಡದೆ ಆತನನ್ನು ವಿಚಾರಿಸಿ ದವರಾಗಿ ಆತನ ವಾಕ್ಯದಲ್ಲಿ ಭರವಸೆಯಿಟ್ಟು ವಿಶ್ರಮಿಸಿ ಕೊಂಡವ ರಾಗುವುದು. ನಮ್ಮ ಸ್ವಂತ ಕಿವಿಗಳಿಂದ ಕರ್ತನ ಮಾತುಗಳನ್ನು ಕೇಳುವುದು ನಮಗೆ ಸಾಧ್ಯವಾಗದಿರಬಹುದು; ಆದರೆ ಯೋಹಾನನು ಮಾಡಿದಂತೆ ಬೇರೆಯವರ ಮೂಲಕವಾಗಿ ಅದನ್ನು ಕೇಳಿ ಪಡಕೊಳ್ಳಬಹುದು. ಇಂಥ ಎಲ್ಲಾ ಸೂಕ್ತವಾದ ವಿಚಾರಣೆಗಳಿಗೆ ಉತ್ತರವನ್ನು ಅಪೋಸ್ತಲರ ಮತ್ತು ಪ್ರವಾದಿಗಳ ಸಾಕ್ಷಿಪ್ರಮಾಣಗಳ ಮೂಲಕವಾಗಿ ದೇವರು ಮುಂದಾಗಿಯೇ ಒದಗಿಸಿಕೊಟ್ಟಿರುವನು.

ಇಲ್ಲಿ ಏಳುವ ಪ್ರಶ್ನೆಯೆಂದರೆ, ಯೋಹಾನನು ಸೆರೆಗೆ ಹೋದುದು ಆತನು ಹೆರೋದನ ಜೀವಿತದ ಆಗುಹೋಗುಗಳಲ್ಲಿ ಮನಸ್ಸು ಕೊಟ್ಟುದ್ದರಿಂದಲೋ ಅಥವಾ ತನ್ನ ಕರ್ತವ್ಯವನ್ನು ನಿರ್ವಹಿಸುವುದರಲ್ಲಿ ಆತನು ನಂಬಿಗಸ್ತನಾಗಿದ್ದ ಕಾರಣ–ದಿಂದಲೋ? ತನ್ನ ತಮ್ಮನಾದ ಫಿಲಿಪ್ಪನ ಹೆಂಡತಿಯನ್ನು ತನ್ನ ಹೆಂಡತಿಯನ್ನಾಗಿ ತೆಗೆದುಕೊಂಡಿರುವುದು ನಿಯಮದ ಪ್ರಕಾರ ಸರಿಯಲ್ಲವೆಂದು ರಾಜನನ್ನು ಖಂಡಿಸುವುದು ಅವನಿಗೆ ಸರಿಯೋ ಅಥವಾ ಸರಿಯಲ್ಲವೋ? ಹೆರೋದನು ತಪ್ಪುಮಾಡಿರುವುದರಲ್ಲಿ ಸಂದೇಹವೇನೂ ಇರಲಿಲ್ಲ ಮತ್ತು ಈ ವಿಷಯವಾಗಿ ಯೋಹಾನನು ವ್ಯಕ್ತಪಡಿಸಿದುದು ಸರಿಯಾಗಿಯೇ ಇತ್ತು, ಹೆರೋದನು ಜಾರತ್ವದಲ್ಲಿದ್ದನು; ಆದರೆ ಪ್ರಶ್ನೆ ಏಳುವುದು: ಇದು ಯೋಹಾನನ ಕೆಲಸವಾಗಿತ್ತೇ? ಮತ್ತು ಯೋಹಾನನು ರಾಜನ ವಿಷಯದಲ್ಲಿ ತಲೆಹಾಕಿ ತಾನು ತೊಂದರೆಯನ್ನು ತಂದು ಕೊಂಡದ್ದು ಸೂಕ್ತವೇ? ಎಂಬುದು. ಹೆರೋದನನ್ನು ಈ ವಿಷಯದಲ್ಲಿ ಗದರಿಸುವುದು ಯೋಹಾನನ ಕರ್ತವ್ಯವಾಗಿದ್ದಲ್ಲಿ ಇದರಂತೆ ಮಾಡುವುದು ನಮ್ಮ ಕರ್ತನಾದ ಯೇಸುವಿನ ಕರ್ತವ್ಯವೂ ಸಹ ಆಗಿರುತ್ತಿತ್ತಲ್ಲವೇ? ಮತ್ತು ಇನ್ನೂ ಹೆಚ್ಚಾಗಿ, ಯೋಹಾನನ್ನು ಸೆರೆಗೆ ಹಾಕಿದ್ದಕ್ಕೆ ಪ್ರತಿಭಟನೆಯಾಗಿ ಧ್ವನಿಯನ್ನು ಎತ್ತಿದವನಾಗಿ ಈ ಅನ್ಯಾಯವನ್ನು ಮಾಡಿದ ದುಷ್ಟ ರಾಜನ ವಿರೋಧವಾಗಿ ಸಾಮಾನ್ಯವಾದ ದೊಡ್ಡ ಕೋಲಾಹಲವನ್ನು ಎಬ್ಬಿಸಬಹುದಿತ್ತಲ್ಲವೇ? ಮತ್ತು ಯೋಹಾನನು ಈ ವಿಷಯದಲ್ಲಿ ಸರಿಯಾಗಿದ್ದುದಾದರೆ ಇದೇ ವಿಧಾನವನ್ನು ಅನುಸರಿಸದ ಯೇಸುವಿಗೆ ಇದು ತಪ್ಪಾಗಿರುತ್ತಿತ್ತಲ್ಲವೇ? ಇಲ್ಲವೇ ಯೋಹಾನನ ವಿಧಾನವನ್ನು ಅನುಸರಿಸದೇ ಹೆರೋದನನ್ನು ಗದರಿಸದೇ ಇದ್ದುದು ಯೇಸುವಿಗೆ ಸೂಕ್ತವಾಗಿದ್ದಲ್ಲಿ ಹೀಗೆ ಗದರಿಸಿದ್ದರಲ್ಲಿ ಯೋಹಾನನು ತಪ್ಪುಮಾಡಿರುವನೆಂಬುದಕ್ಕೆ ಇದು ಪ್ರಮಾಣವಾಗಿತ್ತಲ್ಲವೇ?

ನಮ್ಮ ಉತ್ತರವೇನೆಂದರೆ, ನಮ್ಮ ಕರ್ತನ ನಡವಳಿಕೆಯು ಖಂಡಿತವಾಗಿಯೂ ದೋಷಾತೀತವೆಂದು ಪರಿಗಣಿಸಲ್ಪಡಬೇಕು. ಯಾಕೆಂದರೆ "ಆತನು ಯಾವ ಪಾಪವನ್ನೂ ಮಾಡಲಿಲ್ಲ; ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ." ಆದರೆ ಯೋಹಾನನು ಈ ಬೇರೆ ವಿಧಾನವನ್ನು ಅನುಸರಿಸಿದ್ದರಲ್ಲಿ ಆತನಲ್ಲಿ ಪಾಪವಿತ್ತೆಂಬುದಕ್ಕಾಗಲಿ ವಂಚನೆಯಿತ್ತೆಂಬುದಕ್ಕಾಗಲಿ ಇದು ಪ್ರಮಾಣವಾಗಿರಲಿಲ್ಲ. ನಾವು ನೆನಪಿಡಬೇಕಾದುದೆಂದರೆ, ಯೋಹಾನನೂ ಆತನ ಸೇವೆಯೂ ಮತ್ತು ನಮ್ಮ ಕರ್ತನೂ ಆತನ ಸೇವೆಯೂ ಅನೇಕ ವಿಧದಲ್ಲಿ ಭಿನ್ನವಾಗಿದ್ದವು. ಉದಾಹರಣೆಯಾಗಿ ಹೇಳುವುದಾದರೆ, ಯೋಹಾನನು ಧರಿಸಿದ್ದ ಒರಟಾದ ಚರ್ಮದ ನಡುಕಟ್ಟು ಮತ್ತು ನಮ್ಮ ಕರ್ತನು ಧರಿಸಿದ್ದ ಅಖಂಡವಾಗಿ ಹೆಣೆದದ್ದಾದ ಒಳ ನಿಲುವಂಗಿಯೂ ಬಹು ಭಿನ್ನವಾಗಿದ್ದವು. ಮತ್ತು ಯೋಹಾನನು ಸಾಧಾರಣವಾದ "ಅನ್ನಪಾನಗಳನ್ನು ತೆಗೆದುಕೊಳ್ಳದೆ" ಒಂದು ಮಿತಹಾರಿಯಾಗಿ ಸತತ ಉಪವಾಸ ಮಾಡುವ ಇಲ್ಲವೇ ಈ ಸುಖಸಾಧನಗಳ ವರ್ಜನೆಯ ಜೀವನವನ್ನು ನಡೆಸುತ್ತಿದ್ದ ಅಂಶದ ಕಡೆಗೆ ಶಾಸ್ತ್ರವಚನವು ಗಮನಸೆಳೆಯುತ್ತದೆ. ಆದರೆ ನಮ್ಮ ಕರ್ತನಾದ ಯೇಸುವು "ಅನ್ನಪಾನಗಳನ್ನು" ತೆಗೆದುಕೊಳ್ಳುವವನಾಗಿ ಬಂದು ಮದುವೆಯ ಔತಣಗಳಿಗೆ, ತನ್ನ ಗೌರವವಾಗಿ ಏರ್ಪಡಿಸಲಾದ ಔತಣ ಕೂಟಗಳಲ್ಲಿ ಭಾಗಿಯಾಗುತ್ತಿದ್ದನು. ಇಲ್ಲಿರುವ ಪಾಠವೆಂದರೆ, ಈ ಮಹಾ ಗುಣಶ್ರೇಷ್ಠರಲ್ಲಿ ಪ್ರತಿಯೊಬ್ಬನೂ ದೇವರ ಏರ್ಪಾಟಿನ ಅನುಸಾರವಾಗಿ ತನ್ನ ತನ್ನ ಕಾರ್ಯ ಭಾರವನ್ನು ನೇರವೇರಿಸಿದ್ದರು, ಅದರೆ ಅವರಿಬ್ಬರ ಕಾರ್ಯ ಭಾರವು ಬೇರೆಯಾಗಿತ್ತು. ಯೋಹಾನನ ಕಾರ್ಯಭಾರವು ಪ್ರಾಮುಖ್ಯವಾಗಿ ತಿದ್ದುಪಾಟು ಹಾಗೂ ಸುಧಾರಣೆ ಮಾಡುವದಾಗಿತ್ತು; ಮತ್ತು ಈತನು ಒಬ್ಬ ಪ್ರವಾದಿಯಾಗಿ ತಾನು ಅನುಸರಿಸುವ ವಿಧಾನದ ಅನೇಕ ಲಕ್ಷಣಗಳ ಬಗ್ಗೆ ದೈವಿಕ ರೀತಿಯಲ್ಲಿ ವಿಶೇಷವಾದ ಮಾರ್ಗದರ್ಶನ ಪಡೆದವನಾಗಿದ್ದನು. ಇದಕ್ಕೆ ಬದಲಾಗಿ ನಮ್ಮ ಕರ್ತನ ಕಾರ್ಯಭಾರವು ಒಂದು ಭಿನ್ನವಾದ ರೀತಿಯುಲ್ಲಿತ್ತು; ಯೋಹಾನನ ಸೇವೆಯು ಮೂಲಕವಾಗಿ ನೀತಿಯ ವಿಷಯದಲ್ಲಿ ಎಚ್ಚೆತ್ತುಕೊಂಡು ಕರ್ತನ ಚಿತ್ತವನ್ನು ತಿಳುಕೊಳ್ಳಲು ಮತ್ತು ಅದನ್ನು ನೆರವೇರಿಸಲು ಆಸಕ್ತರಾದವರನ್ನು ಆತನು ಕೂಡಿಸಿಕೊಳ್ಳುತ್ತಿದ್ದನು.

ಕ್ರಿಸ್ತನ "ದೇಹವಾಗಿ" ಆತನನ್ನು ಹಿಂಬಾಲಿಸುವುದಕ್ಕೆ ಕರೆಯಲ್ಪಟ್ಟವರಾದ ನಮಗೆ ಅನುಸರಿಸಬೇಕಾದ ಸೂಕ್ತ ವಿಧಾನದ ಬಗ್ಗೆ ಇಲ್ಲಿ ನಾವು ಒಂದು ಪಾಠವನ್ನು ಕಲಿಯಬಹುದು; ಯೋಹಾನನಂತೆ ಅರಣ್ಯವಾಸಿಗಳಾಗಿ ಒರಟಾದ ಉಡುಪು ತೊಟ್ಟ ಜೀವನವನ್ನು ನಡೆಸುತ್ತಾ ಎಲ್ಲರನ್ನೂ ಎಲ್ಲಾ ವಿಷಯಗಳಲ್ಲೂ ಖಂಡಿಸುವದಕ್ಕಾಗಿ ನಾವು ಕಳುಹಿಸಲ್ಪಟ್ಟಿಲ್ಲ. ಕರ್ತನಿಗೆ ಪ್ರಿಯರಾದ ಕೆಲವು ಜನರು ಈ ಕಾರ್ಯಭಾರವು ವಿಶೇಷವೂ ಬಹು ವಿರಳವಾದುದೂ ಆಗಿರುವುದೆಂಬುದನ್ನು ಗಮನಿಸುವಲ್ಲಿ ವಿಫಲರಾಗಿ ಕೆಲವು ಸಾರಿ ಈ ಅಸಂಗತವಾದ ಮಾದರಿಯನ್ನು ಅನುಸರಿಸಿ ಕರ್ತನ ಕಾರ್ಯಗಳಿಗೆ ಅನುದ್ದೇಶಿತವಾಗಿ ದೂಷಣೆಯನ್ನು ತಂದುಕೊಟ್ಟಿರುವರು. ನಾವು ದೇವರ ಪ್ರಿಯ ಕುಮಾರನಾದ ನಮ್ಮ ಕರ್ತನ ಪ್ರತಿರೂಪಿಗಳಾಗಬೇಕು;

ಸ್ನಾನಿಕನಾದ ಯೋಹಾನನ ಪ್ರತಿರೂಪಿಗಳಾಗುವುದಲ್ಲ. ನಾವು ಬೇರೆಯವರ ವಿಷಯಗಳಲ್ಲಿ ತಲೆಹಾಕಿ ಕಲಹವನ್ನು ಎಬ್ಬಿಸುವವರಾಗಬಾರದು, ಇಲ್ಲವೇ ಚಕ್ರವರ್ತಿಗಳು ರಾಜರುಗಳು ದೇಶಾಧಿಪತಿಗಳು ಮುಂತಾದವರನ್ನು ಗದರಿಸಿ ಈ ಪ್ರಪಂಚದ ಸಂಗತಿಗಳನ್ನು ಕ್ರಮಪಡಿಸಲು ಯತ್ನಿಸುವವರಾಗಬಾರದು. ಆದರೆ ಇದಕ್ಕೆ ಪ್ರತಿಯಾಗಿ ಅಪೋಸ್ತಲನು ಪ್ರಬೋಧಿಸಿರುವಂತೆ, ದೇವರು ಯಾವದು ನಮಗೆ ಸಂಭವಿಸುವುದು ಯುಕ್ತವೆಂದು ಕಾಣುವನೋ ನಾವು ಅವುಗಳನ್ನು ತಾಳಿಕೊಳ್ಳುವುದು ಸೂಕ್ತವೆಂದು ಕಂಡುಕೊಳ್ಳಬೇಕೆಂಬುದನ್ನು ನೆನಪಿನಲ್ಲಿಡೋಣ.

ನಮಗೆ ಪ್ರಶಂಸೆ ಮಾಡಲಾಗದ ಇಲ್ಲವೆ ಸಮರ್ಥಿಸಿಕೊಳ್ಳಲಾಗದ ಅನೇಕ ಸಂಗತಿಗಳಿರುವುದು ಕಂಡುಬಂದರೂ, ವಿಶೇಷವಾಗಿ ದೇವರ ವಾಕ್ಯದ ಪ್ರಕಾರ ಸೂಕ್ತವಾಗಿ ಗ್ರಹಿಸಿಕೊಳ್ಳಲು ಮತ್ತು ಅವು ನೆರವೇರುವಂತಾಗಲು ಸಂಬಂಧಿಸದ ಯಾವ ಸಂಗತಿಗಳ ವಿಷಯವಾಗಿಯೂ ಉಗ್ರವಾಗಿ ಖಂಡನೆ ಮಾಡುವುದನ್ನು ತಪ್ಪಿಸಲು ಅದೇ ರೀತಿಯಲ್ಲಿ ಸಮರ್ಥರೆಂಬುದನ್ನೂ ಕಂಡುಕೊಳ್ಳ ಬಹುದು. ಈ ವಿಷಯದಲ್ಲಿ ನಮ್ಮ ನಿಲುವು ಏನೆಂಬುದನ್ನು ತೋರಿಸುವವನಾಗಿ ಅಪೋಸ್ತಲನು ಹೇಳಿರುವುದು: "ಸಾಧ್ಯವಾದರೆ ನಿಮ್ಮಿಂದಾಗುವ ಮಟ್ಟಿಗೆ ಎಲ್ಲರ ಸಂಗಡ ಸಮಾಧಾನದಿಂದಿರಿ." ಮತ್ತು ನಮ್ಮ ಕರ್ತನೂ ಇದೇ ಅಂಶಕ್ಕೆ ಒತ್ತುಕೊಟ್ಟು ಹೇಳಿರುವುದು, "ಸಮಾಧಾನ ಪಡಿಸುವ–ವರು ಧನ್ಯರು; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು."

ಕರ್ತನ ಅತಿಪರಿಶುದ್ಧ ಜನರಲ್ಲಿ ಕೆಲವರು ಈ ವಿಷಯದಲ್ಲಿ ತಪ್ಪು ಮಾಡಿದವರಾಗಿ ತಮ್ಮ ಕುಟುಂಬಗಳಲ್ಲಿ ಅನಗತ್ಯವಾಗಿ ಪ್ರತಿಕೂಲವಾದ ಭಾವನೆಗಳು ಹಾಗು ವಿರೋಧಗಳು ಏಳುವಂತೆ ಮಾಡಿಕೊಂಡಿದ್ದಾರೆ. ಕೆಲವು ಸಂಗತಿಗಳು ಭಕ್ತಿಯ ಹಾಗೂ ಶಿಲುಬೆಹೊರುವ ಮಟ್ಟದಲ್ಲಿ ಇಲ್ಲದಿದ್ದರೂ ಮತ್ತು ಅವು ಅನೀತಿಯಲ್ಲದ ಇಲ್ಲವೇ ದುಷ್ಟ ಪ್ರವೃತ್ತಿಯಿಲ್ಲದ ವಿಷಯಗಳಾಗಿದ್ದರೂ ಇಂಥಾ ವಿಷಯಗಳಲ್ಲಿಯೂ ಸಹ ಅವರು ಸತತವಾಗಿ ತಪ್ಪುಗಳನ್ನು ಕಂಡುಹಿಡಿಯುವುದರ ಮೂಲಕವಾಗಿ ತಮ್ಮ ಮನೆಯಲ್ಲಿ ಅಸಂತೋಷವನ್ನುಂಟು ಮಾಡಿಕೊಂಡಿ–ರುತ್ತಾರೆ. ತಂದೆತಾಯಿಗಳು ಮತ್ತು ಪೋಷಕರು ಅನೀತಿಯುಳ್ಳ ಪ್ರವರ್ತನೆಗಳ ಕಡೆಗಿರುವ ವಿಷಯಗಳೆಲ್ಲವುಗಳಿಂದ (ತಮ್ಮ ಮನೆಯವರನ್ನು) ಸಂರಕ್ಷಣೆ ಮಾಡಲು ಖಂಡಿತವಾಗಿಯೂ ಜಾಗರೂಕರಾಗಿರಬೇಕಾದರೂ ತಾವು ಪ್ರೀತಿಸುವವರು ಕೇವಲ ಹೆಸರಿನ ಕ್ರೈಸ್ತರಾಗಿದ್ದು ಲೌಕೀಕ ಮನೋಭಾವಗಳನ್ನು ಹೊಂದಿರುವ ಕಾರಣದಿಂದ ಅವರಲ್ಲಿ ತಪ್ಪನ್ನು ಎಣಿಸುವುದು ನಿಜವಾಗಿಯೂ ಅವಿವೇಕವುಳ್ಳದ್ದಾಗಿರುವುದು. ತಮ್ಮ ಸಾಮಾನ್ಯ ಜೀವಿತದ ನಡಾವಳಿಗಳಲ್ಲಿ ಕಾಣುವ ತಮ್ಮಲ್ಲಿರುವ ಸಮಾಧಾನ ಹಾಗೂ ಪವಿತ್ರಾತ್ಮನಿಂದಾದ ಆನಂದಗಳೇ ಲೌಕೀಕ ಸಂಗತಿಗಳನ್ನು ಖಂಡಿಸುವಂಥವುಗಳಾಗಿದ್ದು ತಾವು ಪ್ರತಿಪಾದಿಸುವ ಮಹಿಮೆಯುಳ್ಳ ಸುವಾರ್ತೆಯನ್ನು ಇತರರು ಅಂಗೀಕರಿಸುವಂತೆ ಶಿಫಾರಸ್ಸು ಮಾಡಲು ಅವುಗಳಿಗೆ ಸಾಧ್ಯ. ಇದೇ ಇತರರು ಓದಬಹುದಾದಂಥ ನಮ್ಮ ಜೀವಿತದ ಸುವಾರ್ತಾ ಪತ್ರಿಕೆಗಳು ಹಾಗು ಇವೇ (ಲೌಕೀಕತನವೆಂಬ) ಕತ್ತಲೆಯನ್ನು ಖಂಡಿಸುವ ಬೆಳಕಾಗಿರುವುದು. ಇನ್ನೊಂದು ವಿಧದಲ್ಲಿ ಹೇಳುವುದಾದರೆ, ನಾವು ಅನುಸರಿಸುತ್ತಿರುವ ಸ್ವಾರ್ಥತ್ಯಾಗದ ವಿಷಯಗಳನ್ನು ಪ್ರತಿಷ್ಠಿತರಲ್ಲದವರು ಅನುಸರಿಸುವುದನ್ನು ನಿರೀಕ್ಷಿಸುವುದಾಗಲಿ ಇಲ್ಲವೇ ಅವುಗಳನ್ನು ಅವರ ಮೇಲೆ ಹೇರಲು ಪ್ರಯತ್ನಿಸುವುದಾಗಲೀ ಮಾಡಬಾರದು. ಸಂಪೂರ್ಣವಾಗಿ ಪ್ರತಿಷ್ಠೆ ಮಾಡಿಕೊಳ್ಳುವುದು ತಮ್ಮ "ವಿವೇಕಪೂರ್ವಕವಾದ ಆರಾಧನೆ" ಎಂಬುದನ್ನು ಕಂಡುಕೊಂಡು ತಮ್ಮ ದೇಹಗಳನ್ನು ದೇವರಿಗೆ ಸಜೀವ ಯಜ್ಞವಾಗಿ ಅರ್ಪಿಸಿಕೊಳ್ಳುವವರೆಗೂ ನಾವು ಕಾದುಕೊಂಡಿರಬೇಕು. ಪರಿಶುದ್ಧತೆ ಮತ್ತು ಭಕ್ತಿಯ ಗುಣಮಟ್ಟವನ್ನು ಇಳಿಸಲು ಹಲವು ಶಕ್ತಿಪ್ರಭಾವಗಳು ಕೆಲಸ ನಡೆಸುತ್ತಿರುವವೆಂಬುದನ್ನು ಮನಗೊಂಡವರಾಗಿ ಸಭಾಪಾಲಕರುಗಳು ಮತ್ತು ಬೋಧಕರುಗಳು ಕರ್ತನ ಪ್ರತಿಷ್ಠಿತ ಮಂದೆಯ ಎದುರಿನಲ್ಲಿ ಉನ್ನತ ಮಟ್ಟದ ಪ್ರತಿಷ್ಠೆಯ ಮಾದರಿಯನ್ನು ಸತತವಾಗಿ ಇರಿಸುವುದಕ್ಕೆ ಪರಿಶ್ರಮಿಸಬೇಕು.

## ಯೋಹಾನನು ಪ್ರವಾದಿಗಿಂತಲೂ ಹೆಚ್ಚಿನವನು

ಸುತ್ತಲೂ ನಿಂತಿದ್ದ ಗುಂಪು ಯೋಹಾನನ ಶಿಷ್ಯರು ಯೇಸುವಿಗೆ ತಂದ ಸಂದೇಶವನ್ನು ಕೇಳಿದ್ದಿರಬೇಕು ಮತ್ತು ಯೋಹಾನನು ಯೇಸುವು ಮೆಸ್ಸೀಯನೆಂಬುವುದರ ಬಗ್ಗೆ ನಂಬಿಕೆಯನ್ನು ಕಳೆದುಕೊಳ್ಳುತ್ತಿರುವನೋ? ಎಂದು ಇತರರಿಗೆ ಕೇಳಿಸುವಂತಿಲ್ಲದಿದ್ದರೂ ತಮ್ಮೊಳಗೆಯಾದರೂ ನಿಸ್ಸಂದೇಹವಾಗಿ ಪ್ರಶ್ನಿಸಿಕೊಂಡಿರಬೇಕು. ಯೋಹಾನನು ತಾನೇ ಪ್ರವಾದಿಯಾಗಿ–ದ್ದಲ್ಲಿ ಈ ವಿಷಯವನ್ನು ಯೇಸುವನ್ನು ವಿಚಾರಿಸುವುದಕ್ಕೆ ಕಳುಹಿಸದೆಯೇ ದೇವರಿಂದ ಅವನು ತಿಳಿಸಲ್ಪಡದೇ ಇರುವನೋ? ಯೋಹಾನನು ಅದ್ಭುತಗಳನ್ನು ನಡಿಸದೆ ಇರುವ ಸಂಬಂಧದವಾಗಿ ಇದು ಆತನು ಪ್ರವಾದಿಯಲ್ಲ ಆದರೆ ಕೇವಲ ಒಂದು ವಿಧದ ಸ್ವಯಂ ನೇಮಿತ ಮತಸುಧಾರಕನೆಂಬುದಕ್ಕೆ ಪ್ರಮಾಣವಾಗಿರುವ ಸಂಭವವಿದೆಯಲ್ಲವೇ? ಈ ಬಗೆಯ ಪ್ರಶ್ನೆಗಳು ಉದ್ಭವಿಸುವವೆಂಬುದನ್ನು ನಮ್ಮ ಕರ್ತನು ಪತ್ತೆಹಚ್ಚಿದ್ದ–ನೆಂದು ತೋರುತ್ತದೆ. ಆದುದರಿಂದ ತನ್ನ ಮಾತುಗಳನ್ನು ಹೊಗಳಿಕೆಯೆಂದು ಅರ್ಥೈಸಿಕೊಂಡು ಯೋಹಾನನು ಉಬ್ಬಿದ–ವನಾಗಿ ಆತ್ಮವಿಶ್ವಾಸವನ್ನು ಹೊಂದಿದವನಾಗಬಾರದೆಂದು ಆತನ ಶಿಷ್ಯರು ಹೊರಟುಹೋದ ನಂತರ ಯೇಸುವು ತನ್ನ ಮುಂದೂತನ ವಿಷಯವಾಗಿ ಒಂದು ಗುಣಗಾನವನ್ನು ಮಾಡಿ ಹೇಳಿದ್ದನು. ಅದರ ಸಾರಾಂಶವು ಹೀಗಿರುತ್ತದೆ: ಯೋಹಾನನಿಂದ ಏನನ್ನು ನಿರೀಕ್ಷಿಸುತ್ತಿದ್ದಿರಿ? ಗಾಳಿಯಿಂದ ಸುಲಭವಾಗಿ ಅತ್ತಿತ್ತ ಓಲಾಡುವ ದಂಟಿನಂತಿರುವ ಒಬ್ಬ ಬಲಹೀನನಾಗಿ ಅಲುಗಾ–ಡುವ ಸ್ವಭಾವದವನಾಗಿದ್ದು ನಾನಾ ಉಪದೇಶ ಮತ್ತು ಕಲ್ಪನೆಗಳಿಂದ ಕಂಗೆಟ್ಟು ಗಾಳಿಯಿಂದ ಅತ್ತಿತ್ತ ನೂಕಿಸಿ–ಕೊಳ್ಳುವವನನ್ನೋ? ಈತನ ಗುಣಸ್ವಭಾವಗಳ ವಿಷಯವಾಗಿ ಇಂಥ ಅನಿಸಿಕೆಯುಳ್ಳವರು ತಮ್ಮನ್ನು ಮೋಸಗೊಳಿಸಿ–ಕೊಂಡಿರುವರು. ಇದಕ್ಕೆ ಬದಲಾಗಿ ಹೇಳುವುದಾದರೆ, ಈತನು ಒಬ್ಬ ಪ್ರವಾದಿಯಾಗಿರುವನು, ಹೌದು, ಪ್ರವಾದಿಗಿಂತಲೂ

ಹೆಚ್ಚಿನವನು. ಈ ಕಾಲದಲ್ಲಿ ಈತನು ದೇವರ ವಿಶೇಷ ರಾಯಭಾರಿಯಾಗಿಯೂ ದೂತನಾಗಿಯೂ ಇದ್ದು, ಈಗ ನಾನು ಪ್ರಚಾರಮಾಡುತ್ತಿರುವ ದೇವರ ರಾಜ್ಯವನ್ನು ಪರಿಚಯಿಸುವ ಕಾರ್ಯವನ್ನು ನಿರ್ವಹಿಸುತ್ತಿರುವನು. ಈತನು ಪ್ರವಾದಿಯಾದ ಮಲಾಕಿಯಿಂದ ಸೂಚಿತನಾಗಿದ್ದಾನೆ. (3:1) ನಿಜವಾಗಿಯೂ ನಾನು ಪ್ರಕಟಿಸುವುದೆಂದರೆ ಯೋಹಾನನಿಗಿಂತಲೂ ದೊಡ್ಡ ಪ್ರವಾದಿಯು ಇದುವರೆಗೂ ಎದ್ದಿಲ್ಲ ಆದರೂ ಪರಲೋಕರಾಜ್ಯ ದಲ್ಲಿರುವ ಚಿಕ್ಕವನು ಇವನಿಗಿಂತಲೂ ದೊಡ್ಡವನೆಂದು ನಿಮಗೆ ಹೇಳುತ್ತೇನೆ; ಯಾಕೆಂದರೆ ಇವನು ಪರಲೋಕ ರಾಜ್ಯದ ವರ್ಗಕ್ಕೆ ಎಂದೂ ಸೇರಿದವನಲ್ಲ ಆದರೆ ಹಿಂದಿನ ವ್ಯವಸ್ಥೆಗೆ ಅಂದರೆ "ಸೇವಕರ ಮನೆತನ" ಎಂಬ ವರ್ಗದವನು. "ಧರ್ಮಶಾಸ್ತ್ರವೂ ಪ್ರವಾದಿಗಳೂ ಯೋಹಾನನ ತನಕವೇ" (ಇವನು ಪ್ರವಾದಿಗಳಲ್ಲಿ ಕೊನೆಯವನು) ಅಲ್ಲಿಂದೀಚೆಗೆ ಪರಲೋಕರಾಜ್ಯವು ಸಾರಲ್ಪಡುತ್ತಾ ಇದೆ. ಈಗ ಯಾರ್ಯಾರಿಗೆ ಈ ದೈವಾನುಗ್ರಹಿತವಾದ ಜನಾಂಗವಾಗುವುದಕ್ಕೆ ಇಚ್ಛೆಯುಂಟೋ ಅವರು ತಮ್ಮ ದಾರಿಯನ್ನು ಹಿಡಿದು ಇದಕ್ಕೆ ಪ್ರವೇಶವನ್ನು ಪಡೆದು ದೇವರ ಮಕ್ಕಳಾಗಬಹುದು. – ಯೋಹಾನ 1:12

ಈ ಪತ್ಯಭಾಗದಲ್ಲಿ ನಮ್ಮ ಕರ್ತನು ಸ್ಥಾಪನೆ ಮಾಡುತ್ತಿರುವ ಹೊಸ ಆಚಾರಕ್ರಮಗಳಿಗೂ ಮತ್ತು ಮೋಶೆಯ ಮೂಲಕ ಸ್ಥಾಪನೆಯಾಗಿ ಈಗ ಅಂತ್ಯವಾಗುತ್ತಿರುವ ಹಳೆಯ ಆಚಾರ ಕ್ರಮಗಳಿಗೂ ಇರುವ ವ್ಯತ್ಯಾಸದ ವಿಷಯವಾಗಿ ಆತನು ನುಡಿದ ಮಾತಿನಲ್ಲಿರುವ ಸ್ಪಷ್ಟತೆಯನ್ನು ಗಮನಿಸಿ. ಈ ಸುವಾರ್ತಾ ಯುಗದಲ್ಲಿ ಅನ್ಯಜನರಾದ ನಮಗೆ ನೀಡಲಾದ ಕರೆಯುವಿಕೆಯು ಪರಲೋಕರಾಜ್ಯದ ವರ್ಗದ ಸದಸ್ಯರಾಗಿ ಆ ರಾಜ್ಯಕ್ಕೆ ಸಹಬಾಧ್ಯರಾಗ ಸಲುವಾಗಿರುವುದು. ಏಕೆಂದರೆ ಯೆಹೂದ್ಯರಲ್ಲಿ ಕರ್ತನು ವಿಧಿಸಿದ ಶರತ್ತುಗಳ ಅನುಸಾರ ಆ ರಾಜ್ಯದಲ್ಲಿ ಕೃಪಾನುಗ್ರಹಿತವಾದವುಗಳನ್ನು ಸ್ವೀಕರಿಸಲು ಸಿದ್ಧರಿದ್ದವರು ಮೊದಲೇ ನಿಶ್ಚಿತವಾದ ಸಂಖ್ಯೆಗಿಂತ ಕಡಿಮೆಯಿದ್ದರೆಂದು ಅಪೋಸ್ತಲನು ತೋರಿಸಿ ಹೇಳಿದ್ದಾನೆ. ನಮಗೆ ನೀಡಲಾದ ಕರೆಯು ಅಬ್ರಹಾಮನಿಗಾದ ವಾಗ್ದಾನವೆಂಬ ಬೇರಿನ ಬುಡದಿಂದ ಹೊರಟ ಎಣ್ಣೆಮರವೆಂಬ ಆತನ ವಂಶದ (ಮುರಿದು ಹಾಕಲ್ಪಟ್ಟ) "ಸಹಜವಾದ ರೆಂಬೆಗಳ" ಸ್ಥಾನಗಳನ್ನು ತುಂಬಿದವರಾಗಿ ದೇವಾನುಗ್ರಹವೆಂಬ ಆ ಬೇರಿನ ಸತ್ವಗಳಲ್ಲಿ ಪಾಲುಹೊಂದುವ ಸಲುವಾಗಿರುವುದು. ಆಂದರೆ ಪರಲೋಕ ರಾಜ್ಯದ ವರ್ಗಕ್ಕೆ ಸೇರಿ ಅಬ್ರಹಾಮನ ಸಂತತಿಯೆಂಬ ಮರಕ್ಕೆ ಕಸಿಮಾಡಲ್ಪಟ್ಟ ಕೊಂಬೆಗಳಾಗಿ ದೇವ ಜ್ಞಾನಾವಕಾಶಗಳೆಂಬ ಕೃಪಾನುಗ್ರಹಗಳನ್ನು ಭೂಲೋಕದ ಎಲ್ಲಾ ಕುಲಗಳಿಗೆ ನೀಡುವುದರ ಮೂಲಕವಾಗಿ ಆಶೀರ್ವದಿಸುವ ಸಲುವಾಗಿರುವುದು. ರೋಮಾ 11:1–33; ಗಲಾತ್ಯ 3:16,29

(ಸುವಾರ್ತಾಯುಗದ) ಹೊಸ ವ್ಯವಸ್ಥೆಗೆ ಸೇರಿದವರಾದ ನಾವು ಅದರ ಸೌಭಾಗ್ಯ ಸದಾವಕಾಶಗಳನ್ನು ಎಷ್ಟೋ ಹೆಚ್ಚಾದ ಬೆಲೆಯುಳ್ಳದ್ದೆಂದು ಎಣಿಸಿ "ದೇವರು ನಮ್ಮನ್ನು ಕರೆದದ್ದನ್ನು ಮತ್ತು ಆದುಕೊಂಡದ್ದನ್ನು ದೃಡಪಡಿಸಿಕೊಳ್ಳಲು ಮತ್ತಷ್ಟು ಪ್ರಯಾಸಪಡೋಣ". (2 ಪೇತ್ರ 1:4–11) "ಸೇವಕರ ಮನೆತನವಾಗಲು" ಭೂಲೋಕ ಸಂಬಂಧವಾದ ಕರೆಗೆ ಕರೆಯಲ್ಪಟ್ಟವರು ಸ್ನಾನಿಕನಾದ ಯೋಹಾನು ಮಾಡಿದಂತೆ ಕರ್ತನ ಸೇವೆಯಲ್ಲಿ ಆಸಕ್ತಿಯಿಂದ ನಿರತರಾಗಿದ್ದು ವಿವೇಕ ಪೂರ್ವಕವಾಗಿ ನಂಬಿಗಸ್ತರಾಗಿರಲು, ಇನ್ನೂ ಬಹು ಅಧಿಕವಾದ ಸೌಭಾಗ್ಯ ಹೊಂದಿದವರಾದ ನಾವು ಇನ್ನೂ ಎಷ್ಟು ಹೆಚ್ಚಿನ ಆಸಕ್ತಿಯಿಂದ ನಮ್ಮ ಶಕ್ತಿಸಾಮರ್ಥ್ಯಗಳನ್ನು ಬಳಸುವವರಾಗ ಬೇಕು! "ನೀವು ....ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಬೇಕಲ್ಲಾ;" ಈ "ಉನ್ನತ (ಸ್ಥಾನದ) ಕರೆಯು" ಅಂದರೆ ಈ "ಪರಲೋಕ ಸಂಬಂಧವಾದ ಕರೆಯು" ಬಹು ವಿಶೇಷವಾಗಿಯೂ ಮತ್ತು ಅತಿ ಸೀಮಿತವಾಗಿಯೂ ಇರುವ ಕರೆಯುವಿಕೆಯಾಗಿದ್ದು ಶೀಘ್ರದಲ್ಲಿ ಕೊನೆಗೊಳ್ಳುವುದು ಮತ್ತು ದೈವ ಪ್ರಕಟನೆಗಳು ಸೂಚಿಸಿರುವಂತೆ ಇದನ್ನು ಮತ್ತೊಮ್ಮೆ ನೀಡಲಾಗುವುದಿಲ್ಲವೆಂಬುದನ್ನು ನಾವು ನೆನಪಿನಲ್ಲಿಡೋಣ. ವಿಷಯವು ಹೀಗಿರುವುವಲ್ಲಿ, ನಮಗೆ ಅಭ್ಯಂತರ ಮಾಡುವ ಎಲ್ಲಾ ಭಾರವನ್ನೂ ಹತ್ತಿಕೊಳ್ಳುವ ಪಾಪವನ್ನು ನಾವು ಸಹ ತೆಗೆದಿಟ್ಟು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆದ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಇಬ್ರೀಯ 12:1

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | ಊರುಗಳು ಗದರಿಸಲ್ಪಟ್ಟದ್ದು; ಬಾಲಕರಿಗೆ ಪ್ರಕಟಮಾಡಿರುವುದು; ಹೌರವಾದ ನೊಗ | 11:20–30 | -- | -- | -- |

## ಮತ್ತಾಯ 11:20–30

ಆಗ ಆತನು ತನ್ನ ಮಹತ್ಕಾರ್ಯಗಳು ಬಹಳವಾಗಿ ನಡೆದ ಊರುಗಳು ದೇವರ ಕಡೆಗೆ ತಿರುಗಲಿಲ್ಲವೆಂದು ಅವುಗಳನ್ನು ಗದರಿಸತೊಡಗಿದನು. ಹೇಗೆಂದರೆ–ಅಯ್ಯೋ ಖೊರಾಜಿನೇ, ಅಯ್ಯೋ ಬೇತ್ಸಾಯಿದವೇ, ನಿಮ್ಮಲ್ಲಿ ನಡೆದ ಮಹತ್ಕಾರ್ಯಗಳು ತೂರ್ ಮತ್ತು ಸೀದೋನ್ ಪಟ್ಟಣಗಳಲ್ಲಿ ನಡೆದಿದ್ದರೆ ಅಲ್ಲಿಯವರು ಆಗಲೇ ಗೋಣೀತಟ್ಟು ಹೊದ್ದುಕೊಂಡು ಬೂದಿಯಲ್ಲಿ (ಕೂತುಕೊಂಡು) ದೇವರ ಕಡೆಗೆ ತಿರುಗಿಕೊಳ್ಳುತ್ತಿದ್ದರು. ಆದರೆ ನ್ಯಾಯವಿಚಾರಣೆಯ ದಿನದಲ್ಲಿ ನಿಮ್ಮ ಗತಿಗಿಂತಲೂ ತೂರ್ ಸೀದೋನ್ ಪಟ್ಟಣಗಳ ಗತಿಯು ಮೇಲಾಗಿರುವುದು ಎಂದು ನಿಮಗೆ ಹೇಳುತ್ತೇನೆ. ಎಲಾ

ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವಿಯಾ? ಪಾತಾಳಕ್ಕೆ ಇಳಿಯುವಿ. ನಿನ್ನಲ್ಲಿ ನಡೆದ ಮಹತ್ಕಾರ್ಯಗಳು ಸೊದೋಮಿನಲ್ಲಿ ನಡೆದಿದ್ದರೆ ಅದು ಇಂದಿನವರೆಗೂ ಉಳಿಯುತ್ತಿತ್ತು. ಆದರೆ ನ್ಯಾಯವಿಚಾರಣೆಯ ದಿನದಲ್ಲಿ ನಿನ್ನ ಗತಿಗಿಂತಲೂ ಸೊದೋಮ್ ಸೀಮೆಯ ಗತಿಯು ಮೇಲಾಗಿರುವದು ಎಂದು ನಿಮಗೆ ಹೇಳುತ್ತೇನೆ ಅಂದನು. ಆ ಸಮಯದಲ್ಲಿ ಯೇಸು ಹೇಳಿದ್ದೇನಂದರೆ – ತಂದೆಯೇ, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೇದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನನ್ನ ತಂದೆಯು ಎಲ್ಲವನ್ನೂ ನನಗೆ ಒಪ್ಪಿಸಿದ್ದಾನೆ. ತಂದೆಯೇ ಹೊರತು ಇನ್ನಾವನೂ ಮಗನನ್ನು ತಿಳಿದವನಲ್ಲ; ಮಗನೇ ಹೊರತು ಇನ್ನಾವನೂ ತಂದೆಯನ್ನು ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿದ್ದಾನೆ. ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. ನಾನು ಸಾತ್ವಿಕನೂ ದೀನ ಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿಸಿಕ್ಕುವುದು. ಯಾಕೆಂದರೆ ನನ್ನ ನೊಗವು ಮೃದುವಾದದ್ದು; ನನ್ನ ಹೊರೆಯು ಹೌರವಾದದ್ದು ಅಂದನು.

# ತಿಳುವಳಿಕೆಯು ಜವಾಬ್ದಾರಿಯನ್ನು ಹೆಚ್ಚಿಸುತ್ತದೆ

**ರೀಪ್ರಿಂಟ್ಸ್ ಪುಟ 2623**

## ಮತ್ತಾಯ 11:20–30

**"ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು."**

ತಾನು ಬಹುಕಾಲ ವಿಶೇಷವಾಗಿ ವಾಸವಾಗಿದ್ದ ಕಪೆರ್ನೌಮಿನಲ್ಲಿ ತನ್ನ ಸೇವೆಗೆ ದೊರೆತ ಫಲದ ಬಗ್ಗೆ ಕರ್ತನು ಕೆಲಮಟ್ಟಿಗೆ ನಿರಾಶನಾದಂತೆ ತೋರುತ್ತದೆ. ಕಪೆರ್ನೌಮ್, ಖೊರಾಜಿನ್, ಬೇತ್ಸಾಯಿದ ಈ ಪಟ್ಟಣಗಳ ಜನರಿಗೆ ಯೇಸುವು ಮೆಸ್ಸೀಯನೆಂಬುದಕ್ಕೆ ಮತ್ತು ದೇವರ ಆ ರಾಜ್ಯವನ್ನು ಅವರಿಗೆ ಕೊಡೋಣವಾಗಿರುವುದು ಮುಂತಾದವುಗಳನ್ನು ಹಲವು ಮಹತ್ಕಾರ್ಯಗಳ ಅಲ್ಲದೆ ಹಲವು ಪ್ರಮಾಣಗಳಿಂದ ತೋರ್ಪಡಿಸಲಾಗಿದ್ದಲ್ಲಿ ಅದರಂತೆಯೇ ಅವರು ಇವುಗಳ ವಿಷಯದಲ್ಲಿ ಹೊಣೆಗಾರಿಕೆ ಹೊಂದಿದ್ದರೆಂಬ ಎಚ್ಚರಿಕೆಯ ಮಾತಿನಿಂದ ನಮ್ಮ ಪಾಠವು ಪ್ರಾರಂಭವಾಗುತ್ತದೆ. ಕಪೆರ್ನೌಮು ತನಗೆ ದೊರೆತ ಸೌಭಾಗ್ಯಗಳು ಮತ್ತು ಸದವಕಾಶಗಳ ಮೂಲಕವಾಗಿ ವಿಶೇಷವಾಗಿ ಆಶೀರ್ವದಿಸಲ್ಪಟ್ಟು ಉನ್ನತಕ್ಕೆ ಏರಿಸಲ್ಪಟ್ಟಿತ್ತು ಅಥವಾ ಸಾಂಕೇತಿಕವಾಗಿ "ಪರಲೋಕಕ್ಕೆ ಏರಿಸಲ್ಪಟ್ಟಿತ್ತು" ಇದರ ಪರಿಣಾಮವಾಗಿ ಅದು ಅಧಿಕವಾಗಿ ಕೆಳಮಟ್ಟಕ್ಕೆ ಇಳಿಯಲ್ಪಟ್ಟು ಅಂತ್ಯದಲ್ಲಿ ಅದು ಧೂಳಿನ ಮಟ್ಟಕ್ಕೆ ಬಂದು ನಾಶವಾಯಿತು. ಈ ಪಠ್ಯಭಾಗದಲ್ಲಿ "ನರಕಕ್ಕೆ (ಪಾತಾಳಕ್ಕೆ) ಇಳಿಸಲ್ಪಡುವಿ" ಎಂಬುದು ಗ್ರೀಕ್ ಭಾಷೆಯಲ್ಲಿನ 'ಹೇಡ್ಸ್' ಅಂದರೆ ಮರಣದ ಸ್ಥಿತಿಗೆ ಬಂದಿತೆಂಬುದನ್ನು ಸೂಚಿಸುತ್ತದೆ. ಇದು ಯೆಹೂದ್ಯರು ಮೆಸ್ಸೀಯನನ್ನೂ ಮತ್ತು ಆತನು ಸ್ಥಾಪಿಸುವುದಾಗಿದ್ದ ರಾಜ್ಯವನ್ನು ಅಂಗೀಕರಿಸುವಲ್ಲಿ ವಿಫಲರಾದುದರ ಫಲವಾಗಿ ಅವರ ಮೇಲೆ ಬಂದಿದ್ದಾಗಿದ್ದು ಯೆಹೂದ್ಯರ ಮೇಲೆ ಬಂದ ಸಂಕಟಕಾಲದಲ್ಲಿ ಇದು ಖಂಡಿತಾಗಿಯೂ ನೆರವೇರಲ್ಪಟ್ಟು ಅವರ ರಾಷ್ಟ್ರೀಯತೆಯನ್ನು ನಾಶಮಾಡಿತ್ತು.

ತಾನು ಈ ಪ್ರಕಾರ ಒಟ್ಟಾರೆ ತಿರಸ್ಕರಿಸಲ್ಪಟ್ಟದ್ದಕ್ಕೆ ನಮ್ಮ ಕರ್ತನು ನಿರಾಶನಾದರೂ ತನ್ನನ್ನು ಸಂಪೂರ್ಣವಾಗಿ ಬರಮಾಡಿಕೊಳ್ಳಲಾಗುವದೆಂಬುದನ್ನು ನಿರೀಕ್ಷಿಸಲು ತನಗೆ ಸಾಧ್ಯವಿರಲಿಲ್ಲ. ಆತನು ಬೇರೊಂದು ಸ್ಥಳದಲ್ಲಿ ತನ್ನ ಶಿಷ್ಯರಿಗೆ ಪ್ರವಾದನಾವಾಕ್ಯಗಳನ್ನು ಉಲ್ಲೇಖಿಸಿ ವಿವರವಾಗಿ ಹೇಳಿರುವಂತೆ ತಾನು ಇಸ್ರಾಯೇಲ್ಯರಿಂದ ತಿರಸ್ಕರಿಸಲ್ಪಡುವೆನೆಂದೂ ಮತ್ತು ಆ ರಾಜ್ಯದ ಪ್ರಸ್ತಾವನೆಯು ಅವರಿಂದ ದಾಟಿಹೋಗುವುದೆಂದು ಆತನಿಗೆ ತಿಳಿದಿರಬೇಕು. ನಿಜವಾದ ಸಂಗತಿಯೆಂದರೆ, ತಾನು ಅವರಿಂದ ನಿರಾಕರಿಸಲ್ಪಟ್ಟಿದ್ದು ದೇವರ ರಾಜ್ಯದ ಮಹಿಮಾ ಗೌರವಗಳನ್ನು ಪಡೆಯುವಿಕೆಯ ಸಂಬಂಧದ ಕೃಪಾಪೂರ್ಣವಾದ ಕರೆಯುವಿಕೆಯನ್ನು ಅನ್ಯಜನರಲ್ಲಿ ನಂಬಿದವರಿಗೆ ನೀಡುವಂತೆ ಮಾಡಿತು ಮತ್ತು ಈ ರೀತಿಯಲ್ಲಿ ನಾವು ಈ ಸೌಭಾಗ್ಯವನ್ನು ಈಗಿನ ಕಾಲದಲ್ಲಿ ಹೊಂದುವಂತಾಯಿತು.

ಒಡೆಯನು ತೋರಿಸಿಕೊಟ್ಟಂತೆ ಬೇತ್ಸಾಯಿದ ಖೊರಾಜಿನ್ ಹಾಗೂ ತೂರ್ ಸಿದೋನ್ ಪಟ್ಟಣಗಳ ನಡುವಿನ ವ್ಯತ್ಯಾಸಗಳು ಅತಿ ಪ್ರಭಲವಾದವುಗಳು. ಎರಡನೆಯ ಗುಂಪಿನವುಗಳು ಅಭಿವೃದ್ಧಿಯಾಗುತ್ತಿದ್ದ ಅನ್ಯಜನರ ಪಟ್ಟಣಗಳಾದಾಗ್ಯೂ ಇವುಗಳಲ್ಲಿ ಸಾಮಾನ್ಯವಾಗಿದ್ದ ಸಂಗತಿಗಳೆಂದರೆ ಇವುಗಳು ಅತಿ ದುಷ್ಟತನದಿಂದಲೂ ಅನೈತಿಕ ವಿಷಯಗಳಿಂದಲೂ ತುಂಬಿದವುಗಳಾಗಿದ್ದು ಅಪವಿತ್ರತೆ ಸ್ವೇಚ್ಛಾಚಾರ ಅಶುದ್ಧತ್ವಗಳಿಗೆ ಹೆಸರಾದವುಗಳಾಗಿದ್ದವು. ಈ ಕಾರಣದಿಂದ ತಾನು ಮಾಡಿದ ಮಹತ್ಕಾರ್ಯಗಳು ಆ ಅಪವಿತ್ರ ಪಟ್ಟಣದಲ್ಲಿ ನಡೆಸಲ್ಪಟ್ಟಿದ್ದಲ್ಲಿ ಆ ಪಟ್ಟಣದವರು ಬೂದಿಯಲ್ಲಿ ಕಳಿತುಕೊಂಡು ಗೋಣೀತಟ್ಟನ್ನು

ಹೊಂದಿಕೊಂಡವರಾಗಿ ಮಾನಸಾಂತರ ಪಡುತ್ತಿದ್ದರೆಂದು ಅಂದರೆ ಅತೀ ಪರಿತಪಿಸುತಿದ್ದರೆಂದು ನಮ್ಮ ಕರ್ತನಿಗೆ ಹೇಳುವಂತಾ–ಯಿತು. ಅಲ್ಲದೆ ಇದು ಬೇತ್ಸಾಯಿದ ಮತ್ತು ಖೊರಾಜಿನ್ ಪಟ್ಟಣಗಳ ಜನರು ಈ ಅನ್ಯಜನರಿಗಿಂತಲೂ ಅತಿ ಕೀಳಾದ ಪರಿಸ್ಥಿತಿಯಲ್ಲಿದ್ದು ದೇವರಿಂದ ಆಶೀರ್ವದಿಸಲ್ಪಡುವಂಥ ಸ್ಥಿತಿಗೆ ದೂರವಾಗಿದ್ದರೆಂದೂ ಹೇಳುವಂತಾಗಿತ್ತು.

ದೇವರು ಈ ಸಂಗತಿಗಳನ್ನು ದೃಷ್ಟಿಸುವ ರೀತಿಯು ಬಹು ಪಾಲು ಜನರು ದೃಷ್ಟಿಸುವುದಕ್ಕಿಂತಲೂ ಭಿನ್ನವಾಗಿರುವುದೆಂಬು ದನ್ನು ಇದರಿಂದ ನಾವು ಕಲೆಹಾಕಬಹುದು. ಇದು ನೀತಿ ಅಥವಾ ಅನೀತಿ ತುಂಬಿದ ಒಂದು ಪಟ್ಟಣವೇ ಇಲ್ಲವೇ ಈ ಜನರು ಕೇವಲ ಸಭ್ಯರೇ ಅಥವಾ ಅಸಭ್ಯರೇ ಎಂದು ನಮ್ಮ ಕರ್ತನು ಹೇಳಲಿಲ್ಲ. ಕರ್ತನು ನಿಜವಾಗಿಯೂ ಪರಿಶೀಲಿಸುತ್ತಿದ್ದ ಅಂಶವೆಂದರೆ, ಈ ಜನರ ಅಥವಾ ಆ ಜನರ ಇಲ್ಲವೇ ಈ ವ್ಯಕ್ತಿಯ ಅಥವಾ ಆ ವ್ಯಕ್ತಿಯ ಹೃದಯದ ಮನೋಭಾವ ಏನೆಂಬುದಾಗಿಯೋ? ಅವನು ಯಾವದರ ಮೇಲೆ ಗುರಿಯಿಟ್ಟು ಪರಿಶ್ರಮಿಸುತ್ತಿರುವ ನೆಂಬುದೋ? ಅಂದರೆ ದೇವರ ಚಿತ್ತದ ವಿಷಯವಾಗಿ ಇನ್ನೂ ಅಧಿಕವಾದ ಬೆಳಕನ್ನು ಅನುಗ್ರಹಿಸಿದರೆ ಈತನಲ್ಲಿ ಇದರಿಂದ ಯಾವ ಪರಿಣಾಮ ಉಂಟಾಗಬಹುದೆಂಬುದೋ? ಎನ್ನುವುದು. ಹೀಗಾಗಿ ನಾವು ನಮ್ಮ ಬಗ್ಗೆ ನೋಡಿಕೊಂಡಲ್ಲಿ ನಾವು ಅನೀತಿವಂತರೂ ನಯವಿನಯವಿಲ್ಲದವರೂ ಭೋಗಾಸಕ್ತರೂ ಕ್ರೂರಿಗಳೂ ಆಗಿಲ್ಲದೆ ಇತರರಿಗಿಂತಲೂ ಹೆಚ್ಚು ನಯನಾಜೂಕು ಉಳ್ಳವರೆಂದು ಕಂಡುಬಂದರೆ ಅದು ಚೆನ್ನಾಗಿರುವುದು. ನಮಗೆ ದೊರೆತಿರುವ ಅನುಗ್ರಹ ಸವಲತ್ತುಗಳು ಮತ್ತು ಕರುಣೆಯ ವಿಷಯದಲ್ಲಿ ನಾವು ಇಂತಿರಬೇಕು; ಆದರೂ ನಾವು ದೇವರಿಗೆ ಮೆಚ್ಚಿಕೆಯಾದ ಸಂಗತಿಗಳಲ್ಲಿ ಬಹು ಕಡಿಮೆಯಾಗಿ ಕಂಡು ಬರಬಹುದೆಂಬುದನ್ನೂ ಮತ್ತು ದೇವರು ನಮಗೆ ಕೆಲವು ಸೌಭಾಗ್ಯ ಆಶೀರ್ವಾದ ಅವಕಾಶಗಳನ್ನು ನೀಡುವಲ್ಲಿ ನಾವು ಅವುಗಳನ್ನು ತಿರಸ್ಕರಿಸಿದ್ದೇಯಾದರೆ ನಾವು ಆತನ ದೃಷ್ಟಿಯಲ್ಲಿ ಅನೀತಿವಂತರಿ–ಗಿಂತಲೂ ಹೀನ ಸ್ಥಿತಿಯಲ್ಲಿರುವಂಥಾಗುವೆವು ಎಂಬುದನ್ನು ನಾವು ನೆನಪಿನಲ್ಲಿಡಬೇಕು.

ಎಲ್ಲವುಗಳಿಗಿಂತ ಬಹು ಹೆಚ್ಚು ಅನುಗ್ರಹ ಪಡೆದ ಪಟ್ಟಣ ವಾದ ಕಪೆರ್ನೌಮಿನ ಕಡೆಗೆ ತಿರುಗಿನೋಡುವುದಾದರೆ, ನಮ್ಮ ಕರ್ತನು ಇದಕ್ಕೂ ಮತ್ತು ಅತಿ ದುಷ್ಟತನದ ಕಾರಣದಿಂದ ತನ್ನ ಮೇಲೆ ಕರ್ತನಿಂದ ಘೋರ ವಿನಾಶವನ್ನು ತಂದುಕೊಂಡ ಸೊದೋಮ್ ಪಟ್ಟಣಕ್ಕಿರುವ ವ್ಯತ್ಯಾಸವನ್ನು ತೋರಿಸಿದ್ದನು. ಕಪೇರ್ನೌಮಿನ ವಿಷಯವಾಗಿ ಸ್ಪಷ್ಟವಾಗಿ ಹೇಳಲ್ಪಟ್ಟದ್ದೇನೆಂದರೆ, ಕರ್ತನ ದೃಷ್ಟಿಯಲ್ಲಿ ಅದರ ಜನರು ಹೆಚ್ಚು ದುಷ್ಟರಾಗಿದ್ದು ದೇವಾನುಗ್ರಹವನ್ನು ಪಡೆಯಲು ಅಲ್ಪವಾದ ಅರ್ಹತೆಯುಳ್ಳವ ರಾಗಿದ್ದು ಸೊದೋಮಿನ ಜನರಿಗಿಂತಲೂ ಶಿಕ್ಷೆಹೊಂದಲು ಹೆಚ್ಚು ಅರ್ಹರಾಗಿದ್ದರು. ಇದು ಒಂದು ತೀಕ್ಷ್ಣವಾದ ಆಪಾದನೆ–ಯಾದರೂ ಬಡ ಸೊದೋಮಿನವರ ವಿಷಯದಲ್ಲಿ ನ್ಯಾಯ–ವಾಗಿತ್ತೆಂಬುದನ್ನು ನಾವು ಕಾಣಬಹುದು. ಇವರು ಪಾಪದ ಮಾರ್ಗದಲ್ಲಿ ನಡೆಯುತ್ತಾ ದೇವರ ವಿಷಯದಲ್ಲಿ ಅಜ್ಞಾನ ಮುಂತಾದವುಗಳಿಂದ (ಪರಿಪೂರ್ಣತೆಯಿಂದ) ಬಿದ್ದುಹೋದ ಸ್ವಭಾವಾನುಸಾರವಾಗಿ ಕ್ರಮೇಣ ಹೀನಸ್ಥಿತಿಯಿಂದ ಹೀನಸ್ಥಿತಿಗೆ ಬಂದಿದ್ದರು; ಆದರೆ ಕಪೇರ್ನೌಮಿನ ಜನರು ಯೆಹೂದ್ಯರಾಗಿ ದೇವರ ವಿಷಯವಾದ ಪರಿಜ್ಞಾನದಿಂದ ಆಶೀರ್ವದಿಸಲ್ಪಟ್ಟವ–ರಾಗಿದ್ದು ಕಡೆಯಲ್ಲಿ ಮೆಸ್ಸೀಯನು ಕಳುಹಿಸಲ್ಪಟ್ಟವನಾಗಿ ಆತನು ಮಾಡುತ್ತಿದ್ದ ಅದ್ಭುತಗಳನ್ನು ಪದೇಪದೇ ನೋಡುವವರಾಗಿದ್ದು, ಆತನು ತಮ್ಮ ಮಧ್ಯದಲ್ಲಿ ಬಹುತೇಕ ವಾಸಿಸುವನಾಗಿದ್ದರಿಂದ ಆತನ ಸುಮಧುರವಾದ ಗುಣದ ಮತ್ತು ಉಪದೇಶಗಳ ಸಂಪರ್ಕಕ್ಕೆ ಬಂದವರಾಗಿ ಎಲ್ಲಾ ವಿಧದಲ್ಲಿಯೂ ಹೆಚ್ಚು ಅನುಕೂಲಗಳನ್ನು ಪಡೆದವರಾಗಿದ್ದರು.

ಈ ಕರುಣೆ ಸೌಭಾಗ್ಯಗಳನ್ನು ಹೊಂದಿದ್ದ ಕಾರಣದಿಂದ ಅವರು ಮೆಸ್ಸೀಯನನ್ನು ನಿರಾಕರಿಸಿದ್ದು ಹಾಗೂ ತಮಗೆ ದೊರೆತ ಅವಕಾಶವನ್ನು ಕೂಡಲೇ ಭದ್ರವಾಗಿ ಹಿಡಿದುಕೊಳ್ಳುವಲ್ಲಿ ವಿಫಲರಾದುದು, ಹೇಳಬೇಕಾದಲ್ಲಿ, ಅವರಿಗೆ ನೀತಿ ಮತ್ತು ಸತ್ಯವನ್ನು ಗ್ರಹಿಸಿಕೊಳ್ಳುವಲ್ಲಿ ಸೊದೋಮಿನವರಿಗಿಂತಲೂ ಕನಿಷ್ಠರೆಂಬ ಹೆಸರು ಬರುವಂತೆ ಮಾಡಿತ್ತು; ಏಕೆಂದರೆ ಸೊದೋಮಿನವರಿಗೆ ಈ ಬಗೆಯ ಕರುಣೆ ಸೌಭಾಗ್ಯಗಳು ಅನುಗ್ರಹಿಸಲ್ಪಟ್ಟಿದ್ದೇ ಆಗಿದ್ದಲ್ಲಿ ಅವರಿಗೆ ಅಂತ್ಯದಲ್ಲಿ ಇಂಥಾ ಗತಿಯು ಬರುತ್ತಿರಲಿಲ್ಲವೆಂದು ನಮ್ಮ ಕರ್ತನು ತಿಳಿಸಿರುವನು.

ಇಲ್ಲಿ ಸಹಜವಾಗಿ ಏಳುವ ಪ್ರಶ್ನೆಯೆಂದರೆ, ನಮ್ಮ ಕರ್ತನು ಕಪೇರ್ನೌಮಿನ ಜನರಿಗೆ ನೀಡಿದ ಹಾಗೆ ಸದವಕಾಶಗಳನ್ನು ಸೊದೋಮಿನವರಿಗೆ ಏಕೆ ನೀಡಲಿಲ್ಲ? ಮತ್ತು ಆತನು ಬೇತ್ಸಾಯಿದ ಮತ್ತು ಖೊರಾಜಿನ್ ಜನರಿಗೆ ನೀಡಿದ ಸದವಕಾಶಗಳನ್ನು ಆಗ ಇನ್ನೂ ಜೀವಿಸುತ್ತಿದ್ದ ತೂರ್ ಮತ್ತು ಸಿದೋನ್ ಜನರಿಗೆ ಏಕೆ ನೀಡಲಿಲ್ಲವೆಂಬುದು. ನಮ್ಮ ಉತ್ತರವೆಂದರೆ, ಈ ಯಾವ ಜನರಿಗೂ ನಿತ್ಯಜೀವಕ್ಕಾಗಿ ಪರೀಕ್ಷೆಯನ್ನು ಅನುಗ್ರಹಿಸಲಾಗಿರಲಿಲ್ಲ. ಅವರಿಗೆ ಕೊಡಲಾಗಿದ್ದ ಪರೀಕ್ಷೆಯು ಕರ್ತನ ಮತ್ತು ನೀತಿಯ ವಿಷಯವಾಗಿರುವ ತಮ್ಮ ಪ್ರೀತಿ ಆತನ ಜನರಾಗಿ ಆತನ ರಾಜ್ಯವನ್ನು ಬೆಂಬಲಿಸಲು ಅವರಲ್ಲಿದ್ದ ಸಿದ್ಧತೆಯ ವಿಷಯವಾಗಿದ್ದವು. ದೇವರ ರಾಜ್ಯದ ವಿಷಯವಾಗಿ ಗ್ರಹಿಸಿಕೊಳ್ಳುವಷ್ಟರ ಪ್ರಮಾಣದ ನೀತಿಯ ಮೇಲಿನ ಪ್ರೀತಿಯು ಅವರಲ್ಲಿ ಇರಲಿಲ್ಲವೆಂಬುದು ಪರೀಕ್ಷೆಯ ಫಲಿತಾಂಶವು ತೋರಿಸಿಕೊಟ್ಟಿತ್ತು. ಇದರ ಪರಿಣಾಮವಾಗಿ ಅವರ ಪಟ್ಟಣ ಅವರ ದೇಶ ಮತ್ತು ಒಂದು ಜನಾಂಗವಾಗಿ ಅವರು ಕರ್ತನಿಗೆ ತನ್ನ ರಾಜ್ಯವನ್ನು ಸ್ಥಾಪಿಸುವುದರಲ್ಲಿ ತನಗೆ ಸಾಧನಗಳಾಗಲು ಆತನಿಂದ ನಿರಾಕರಿಸಲ್ಪಟ್ಟರು.

ಈ ಯಾವ ಜನರಿಗೂ ನಿತ್ಯಜೀವಕ್ಕಾಗಿ ವೈಯುಕ್ತಿಕವಾದ ಪರೀಕ್ಷೆಯು ಉಂಟಾಗಿರಲಿಲ್ಲವೆಂಬುದು ಹಲವಾರು ಅಂಶ ಗಳಿಂದ ವ್ಯಕ್ತವಾಗುತ್ತದೆ: (1) ಲೋಕವೆಲ್ಲವೂ ಆದಾಮನ ಅಪರಾಧದಿಂದ ಬಂದ ದಂಡನೆಯಲ್ಲಿತ್ತು; (2) ಜೀವಕ್ಕಾಗಿ ಮತ್ತೊಂದು ಹೊಸ ವೈಯುಕ್ತಿಕ ಪರೀಕ್ಷೆಯನ್ನು ಹೊಂದ ಸಲುವಾಗಿ ಈ ದಂಡನೆಯಿಂದ ಯಾರೂ ಬಿಡುಗಡೆ ಹೊಂದಲು ಈಡು ಬಲಿಯು ಅರ್ಪಿತವಾಗುವವರೆಗೆ ಸಾಧ್ಯವಿರಲಿಲ್ಲ. ಅಲ್ಲದೆ ಆ ಈಡುಬಲಿಯು ಆಗ ಇನ್ನೂ ಪೂರ್ಣಗೊಂಡಿರಲಿಲ್ಲ; (3)

ಇದು ನಮ್ಮ ಕರ್ತನ ಹೇಳಿಕೆಯಲ್ಲಿ (ವಚನ 24) ಹೆಚ್ಚಾಗಿ ಅಡಕವಾಗಿರುವುದು; ಹೇಗೆಂದರೆ ಮುಂದಿನ ಕಾಲದಲ್ಲಿ ಒಂದು ನ್ಯಾಯವಿಚಾರಣೆಯ ದಿನವಿರುವುದು, ಅದು ಪರೀಕ್ಷೆಯ ದಿನ, ವಿಚಾರಣೆ ನಡೆಸಲ್ಪಡುವ ದಿನ, ಯಾರು ನಿತ್ಯಜೀವಕ್ಕೆ ಯೋಗ್ಯರು ಮತ್ತು ಯಾರು ಅಯೋಗ್ಯರೆಂಬುದನ್ನು ನೋಡುವ ದಿನ (ಅಪೋ. ಕೃತ್ಯ. 17:31). ಸಾವಿರ ವರುಷದ (ಆಳ್ವಿಕೆಯ) ಕಾಲದ ಆ ನ್ಯಾಯವಿಚಾರಣೆಯ ದಿನದಲ್ಲಿ ನಿತ್ಯಜೀವವನ್ನು ಹೊಂದುವ ಅವಕಾಶವನ್ನು ಎಲ್ಲರೂ ಪಡೆಯುವರು, ಯಾಕೆಂದರೆ ಆದಾಮನ ಸಂತತಿಯವರೆಲ್ಲರೂ ಈ ಅವಕಾಶವನ್ನು ಪಡೆಯುವುದೇ ನಮ್ಮ ವಿಮೋಚಕನ ಮರಣದ ಉದ್ದೇಶವಾಗಿತ್ತು. ಈ ಮಧ್ಯೆ ಬೇತ್ಸಾಯಿದ ಖೊರಾಜಿನ್ ಮತ್ತು ಕಪೇರ್ನೌಮಿನ ಜನರು ಕರ್ತನನ್ನು ನಿರಾಕರಿಸಿದ್ದರಿಂದ ಕರ್ತನು ಅವರನ್ನೂ ನಿರಾಕರಿಸಿ–ದ್ದನು. ಹೀಗಿದ್ದರೂ ಆತನು ತನ್ನೊಡನೆ ಆ ರಾಜ್ಯದಲ್ಲಿ ಸಹಬಾಧ್ಯರಾಗಲು ಒಂದು ವಿಶೇಷ ವರ್ಗವನ್ನು ಕರೆಯುತ್ತಿದ್ದು ಇವರಲ್ಲಿ ಕೆಲವರನ್ನು ಅಲ್ಲಿ ಕಂಡುಕೊಂಡಿದ್ದನು ಮತ್ತು ಆನಂತರದಲ್ಲಿ ಆತನು ಇತರರಿಂದಲೂ ಆಯ್ಕೆಮಾಡಿ ಕೊಳ್ಳುತ್ತಿರುವನು. ಸಾವಿರ ವರುಷದ ಈ ದಯಾಪೂರ್ವಕವಾದ ನೀತಿಯ ಆಳ್ವಿಕೆಯಲ್ಲಿ ಪಕ್ಷಪಾತವಿಲ್ಲದ ಒಂದು ಪೂರ್ಣವಾದ ನ್ಯಾಯವಿಚಾರಣೆಯು ಅಥವಾ ಜೀವಕ್ಕಾಗಿರುವ ಪರೀಕ್ಷೆಯನ್ನು ಎಲ್ಲರಿಗೂ ಅನುಗ್ರಹಿಸೋಣವಾಗುವದು. ಮುಂದಿನ ನ್ಯಾಯ–ವಿಚಾರಣೆಯ ಕಾಲದಲ್ಲಿ ತೂರ್ ಸಿದೋನ್ ಮತ್ತು ಸೊದೋಮಿನ ಜನರಿಗೆ ಈಗ ಹಲವು ಹೆಚ್ಚಾದ ಸೌಲಭ್ಯಗಳನ್ನು ಪಡೆದರೂ ತಾವು ನೋಡಿದ್ದ ಹಾಗು ತಿಳಿದಿದ್ದ ಸಂಗತಿಗಳಿಗೆ ವಿರೋಧವಾಗಿ ತಮ್ಮ ಹೃದಯಗಳನ್ನು ಕಠಿನಮಾಡಿಕೊಂಡಿದ್ದ (ಇಸ್ರಾಯೇಲ್) ಜನರಿಗಿಂತಲೂ ಅಧಿಕವಾದ ಗಮನ ಮತ್ತು ರಿಯಾಯಿತಿಗಳನ್ನು ಹೊಂದುವಂತೆ ನೋಡಿಕೊಳ್ಳಲಾಗುವುದು. "ನ್ಯಾಯವಿಚಾರಣೆಯ ದಿನದಲ್ಲಿ ನಿನ್ನ (ಕಪೇರ್ನೌಮಿನ) ಗತಿಗಿಂತಲೂ ಸೊದೋಮ್ ಸೀಮೆಯ ಗತಿಯು ಮೇಲಾಗಿರುವುದು...."

ದೇವರಿಂದ ಅನುಗ್ರಹ ಹೊಂದಿದ ಜನರಾದಾಗ್ಯೂ ಆತನಿಂದ ಅನುಗ್ರಹವಾದವುಗಳನ್ನು ತಿಳಿದುಕೊಳ್ಳದೆ ಆತನ ಒಳ್ಳೇತನಗಳಿಗೆ ವಿರೋಧವಾಗಿ ನಡಕೊಂಡ ತಮಗಿಂತಲೂ, ತಮ್ಮ ದುಷ್ಟತನ ಸ್ವೇಚ್ಛಾಚಾರ ಮುಂತಾದವುಗಳಿಗೆ ಕುಖ್ಯಾತರಾಗಿದ್ದ ಸೊದೋಮಿನ ಜನರು ಅಧಿಕವಾದ ಅನುಗ್ರಹ ಸಹನೆಯನ್ನು ಮಾನವರ ನ್ಯಾಯವಿಚಾರಣೆಯ ಕಾಲ ಪ್ರಾರಂಭವಾಗುವಾಗ ಹೊಂದುವರೆಂಬ ಈ ಗದರಿಕೆಯ ಮಾತುಗಳು ಎಷ್ಟೋ ತೀಕ್ಷಣವಾಗಿದ್ದವು. ಆದರೆ ಇದರಿಂದ ಕಪೇರ್ನೌಮಿನ ಜನರು ಸಾವಿರ ವರುಷದ (ಆಳ್ವಿಕೆಯ) ನ್ಯಾಯವಿಚಾರಣೆಯಲ್ಲಿ ಕರುಣೆಯಿಲ್ಲದೆ ನಡೆಸಲ್ಪಡುವರೆಂದು ಅಭಿಪ್ರಾಯಪಟ್ಟರೆ ಅದು ಒಂದು ದೊಡ್ಡ ತಪ್ಪಾಗುವದು; ಕರ್ತನ ಮಾತುಗಳು ಪ್ರಕಟಮಾಡಿರುವಂತೆ ಅದು "ನೀತಿಯಿಂದ ನಡೆಸಲ್ಪಡುವ ನ್ಯಾಯವಿಚಾರಣೆ" ಅಂದರೆ ಕೋಪ ಮತ್ಸರದಿಂದ ಅಥವಾ ಅವರಿಗೆ ಹಾನಿಯುಂಟುಮಾಡುವ ಬಯಕೆಯಿಂದ ಕೂಡಿರುವುದಿಲ್ಲ; ಆದರೆ ಅವರಿಗೆ ಸಾಧ್ಯವಿದ್ದಷ್ಟೂ ಒಳ್ಳೆಯದೆಲ್ಲವನ್ನೂ ಮಾಡುವ ಅಪೇಕ್ಷೆಯುಳ್ಳದ್ದಾಗಿರುವುದು. ಆದುದರಿಂದ ಆ ದಿನದಲ್ಲಿ ಕಪೇರ್ನೌಮಿನ ಜನರ ಗತಿಯೂ ಮೇಲಾಗಿರುವುದು. ಅದು ಅವರಿಗೆ ದೇವರ ವಿಷಯವಾದ ಪೂರ್ಣವಾದ ಮತ್ತು ಸ್ಪಷ್ಟವಾದ ಜ್ಞಾನವನ್ನು ಹೊಂದುವ ಒಂದು ಭವ್ಯವಾಗಿಯೂ ಭಾಗ್ಯಕರವಾಗಿಯೂ ಇರುವ ಅವಕಾಶ–ವಾಗಿರುವುದು; ಆದರೆ ಸೊದೋಮ್ ಗೊಮೋರದ ಜನರ ಗತಿಯು ಇದಕ್ಕಿಂತಲೂ ಇನ್ನೂ ಮೇಲಾಗಿರುವುದು, ಏಕೆಂದರೆ ಅವರ ಪಾಪಗಳು ಕೆಲವು ವಿಷಯಗಳಲ್ಲಿ ದೊಡ್ಡದ್ದಾಗಿದ್ದರೂ ಅದು ಗುಣಸ್ವಭಾವಗಳಿಗೆ ವಿರೋಧವಾಗಿ ಅಲ್ಪದ್ದಾಗಿಯೂ ಹೆಚ್ಚು ಅಜ್ಞಾನದಿಂದ ಕೂಡಿದ ಪಾಪಗಳಾಗಿದ್ದು ದೇವರ ದೃಷ್ಟಿಯಲ್ಲಿ ಅವು ಅಲ್ಪ ಹೇಯವಾಗಿದ್ದವು.

ಆದುದರಿಂದ ನಾವು ಊಹಿಸಬಹುದಾದುದೆಂದರೆ, ಸಾವಿರ ವರುಷದ (ಆಳ್ವಿಕೆಯ) ಶಿಸ್ತುಕ್ರಮಗಳಿರುವ ಸಮಯದಲ್ಲಿ ಯಾವಮಟ್ಟಿಗೂ ದೇವರನ್ನು ತಿಳಿಯದ ಅತನ ನಿಯಮಗಳನ್ನು ಎಂದೂ ಅರಿಯದ ತೂರ್ ಸಿದೋನ್ ಮತ್ತು ಸೊದೋಮಿನಂಥ ಜನಗಳು ಇತರರೆಲ್ಲರಿಗಿಂತಲೂ ಬಹು ಸುಲಭವಾಗಿ ಆ ಕಾಲದ ಅಗತ್ಯತೆ ಮತ್ತು ಪ್ರಭಾವಗಳಿಗೆ ಒಳಗಾಗುವ ಉತ್ತಮವಾದ ಹೃದಯ ಸ್ಥಿತಿಯಲ್ಲಿರುವರು. ದೇವರ ವಿಷಯವಾಗಿ ಅಧಿಕವಾದ ತಿಳುವಳಿಕೆ ಹೊಂದಿದ್ದು ಈಗಿನ ಜೀವಿತಕಾಲದಲ್ಲಿ ದೊರೆತ ಅವಕಾಶಗಳನ್ನು ದುರುಪಯೋಗ ಮಾಡಿಕೊಂಡು ತಮ್ಮ ಗುಣ ಸ್ವಭಾವಗಳನ್ನು ವೃದ್ಧಿಪಡಿಸಿಕೊಳ್ಳುವ ಬದಲು ಅದನ್ನು ಕಳಕೊಂಡವರಾದ ಖೊರಾಜಿನ್ ಬೇತ್ಸಾಯಿದ ಮತ್ತು ಕಪೇರ್ನೌಮಿನ ಜನರು ಅವರಿಗಿಂತಲೂ ಹೀನ–ಸ್ಥಿತಿಯಲ್ಲಿರುವರು.

ಅಲ್ಲದೆ ಇವುಗಳು ಕೇವಲ ಉದಾಹರಣೆಯಾಗಿವೆಯಷ್ಟೆ, ಏಕೆಂದರೆ ಸಮಾಧಿಗಳಲ್ಲಿರುವವರೆಲ್ಲರೂ ಮನುಷ್ಯಕುಮಾರನ ಧ್ವನಿಯನ್ನು ಕೇಳಿ ಎದ್ದು ಹೊರಬರುವರು –"ಒಳ್ಳೆಯದನ್ನು ಮಾಡಿದವರಿಗೆ (ಅಂದರೆ ಜಯಶಾಲಿಗಳಾದ ದೇವಜನರಿಗೆ) ಜೀವಕ್ಕಾಗಿ ಪುನರುತ್ಥಾನವಾಗುವದು ಮತ್ತು ಕೆಟ್ಟದ್ದನ್ನು ಮಾಡಿದವರಿಗೆ (ಅಂದರೆ ಭಕ್ತರಿಂದ ಹೊರತಾದ ಮನುಷ್ಯರೆಲ್ಲರಿಗೆ) ತೀರ್ಪಿಗಾಗಿ ಪುನರುತ್ಥಾನವಾಗುವದು." – ಯೋಹಾನ 5:28–29

ನಮಗೆ ಸುಲಭವಾಗಿ ಕಂಡುಬರುವುದೆಂದರೆ, ಈ ಪಾಠದಲ್ಲಿ ನಮ್ಮ ಕರ್ತನ ಹೇಳಿಕೆಯಾನುಸಾರ, ಈಗಿನ ಜೀವಿತ ಕಾಲದಲ್ಲಿ ಯಾವ ವಿಧವಾದ (ದೇವ)ಜ್ಞಾನವನ್ನೂ ಅವಕಾಶ–ವನ್ನೂ ಪಡೆಯದಿದ್ದ ಅನೇಕರಿಗೆ ಆ ನ್ಯಾಯವಿಚಾರಣೆಯ ದಿನವು ಯಾವ ವಿಧದಲ್ಲೂ ಅನಾನುಕೂಲಕರವಾಗಿರುವುದಿಲ್ಲ. ಆದರೆ ಇದಕ್ಕೆ ಬದಲಾಗಿ ಅವರು ಆ ರಾಜ್ಯದ (ನೈತಿಕವಾದ) ಒಳ್ಳೆಯ ಪ್ರಭಾವ ನಿಯಮಗಳಿಗೆ ಸುಲಭವಾಗಿ ಒಳಗಾಗುವರು; ಈಗಿನ ಜೀವಿತ ಕಾಲದಲ್ಲಿ ಕೆಲವು ಮಟ್ಟಿಗೆ ಜ್ಞಾನಪ್ರಕಾಶದ ಸಂಪರ್ಕಕ್ಕೆ ಬಂದಾಗ್ಯೂ ಅದನ್ನು ನಿರಾಕರಿಸಿರುವ ಇತರ ಕೆಲವರಿಗಿಂತಲೂ ಇವರು ಅತಿ ಸುಲಭವಾಗಿ ಇವುಗಳಿಗೆ ಒಳಗಾಗುವರು. ಮುಂದಿನ

ಕಾಲದ ನ್ಯಾಯವಿಚಾರಣೆ ಅಥವಾ ಪರೀಕ್ಷಾ ಕಾಲಗಳು ಎಂಥಾ ಆಶೀರ್ವಾದಕರವಾದವುಗಳು! ಆದಾಮನು (ಅವಿಧೇಯನಾಗಿ) ಬಿದ್ದುಹೊದುದರ ಫಲವಾಗಿ ಬಂದ ಅಪರಾಧನಿರ್ಣಯವನ್ನು ಯಾವ ವೈಯುಕ್ತಿಕವಾದ ಪರೀಕ್ಷೆಯನ್ನೂ ನೀಡದೆ ತಮ್ಮ ಮೇಲೆಯೂ ಬರಮಾಡಿದ ದೇವರು ಅವರೆಲ್ಲರಿಗೆ ಈ ಅಪರಾಧ ನಿರ್ಣಯದಿಂದ ಒಂದು ವಿಮೋಚನೆಯನ್ನು ಏರ್ಪಾಡು ಮಾಡಿರುವುದು ಮತ್ತು ಮಾನವ ಕುಲದ ಪ್ರತಿಯೊಬ್ಬನಿಗೂ ನೇಮಿತ ಕಾಲದಲ್ಲಿ ಒಂದು ವೈಯುಕ್ತಿಕವಾದ ಪರೀಕ್ಷೆಯನ್ನು ಅಂದರೆ ನ್ಯಾಯವಿಚಾರಣೆಯನ್ನು ಎಲ್ಲರಿಗಾಗಿ ಮರಣ ಹೊಂದಿದವನ ಮೂಲಕವಾಗಿ ಏರ್ಪಡಿಸಿರುವುದು ನರಳುತ್ತಿರುವ ಜಗತ್ತಿಗೆ ಇದು ಎಷ್ಟೋ ಮಹತ್ವವುಳ್ಳವುಗಳು! ಮತ್ತು ಆಗ ಅಲ್ಲಿ ದಯಪಾಲಿಸಿರುವ ಪರೀಕ್ಷಾರ್ಥವಾದ ಆ ಕಾಲಗಳು ಎಷ್ಟೋ ಅನುಕೂಲಕರವಾದ ಸ್ಥಿತಿಯಲ್ಲಿರಬೇಕು! ಸೈತಾನನು ಕಟ್ಟಿ-ಹಾಕಲ್ಪಟ್ಟಿರುವನು ಮತ್ತು ದೇವರ ವಿಷಯವಾದ ಜ್ಞಾನವು ಮತ್ತು (ಪರಿಪೂರ್ಣತೆಯಿಂದ) ಬಿದ್ದುಹೋಗಿರುವ ತನ್ನ ಸೃಷ್ಟಿಯ ಪರವಾದ ಆತನ ಒಳ್ಳೇತನವು ಮತ್ತು ಆತನ ಕೃಪಾಪೂರ್ಣವಾದ ಏರ್ಪಾಡುಗಳು ಭೂಮಿಯಲ್ಲಿ ತುಂಬಿಕೊಂಡಿರುವದು. ಇವರೆಲ್ಲರು ನಾಶವಾಗದೆ, ತಾವು ಇಚ್ಚಿಸಿದಲ್ಲಿ, ಕ್ರಿಸ್ತನ ಮೂಲಕ ನಿತ್ಯಜೀವವನ್ನು ಹೊಂದಬೇಕೆಂಬುದು ದೇವರ ಅಪೇಕ್ಷೆ.

ಹೀಗಿದ್ದರೂ ನಮ್ಮ ಕರ್ತನು ನಿರ್ದಿಷ್ಟರೀತಿಯಲ್ಲಿ ತಿಳಿಸಿರುವಂತೆ, ಬರಲಿರುವ ನ್ಯಾಯವಿಚಾರಣೆಯಲ್ಲಿನ ಸಂಗತಿಗಳು ಮತ್ತು ಭಾಗ್ಯಕರವಾದ ಅವಕಾಶಗಳು ಆದಾಮನ ಸಂತತಿಯ ಪ್ರತಿಯೊಬ್ಬನಿಗೂ ನೀಡಲಾಗುವುದನ್ನು ಬಹುಪಾಲು ಜನರಿಂದ ವಿಶೇಷವಾಗಿ ಲೌಕೀಕಜ್ಞಾನಿಗಳು ಮತ್ತು ವಿವೇಕಿಗಳಿಂದ ಮುಚ್ಚಿಡಲಾಗಿರುವಂತೆ ತೋರುವುದು. ಈ ಕೃಪಾಪೂರ್ಣವಾದ ಯೋಜನೆಗಳನ್ನು ಅಂಗೀಕರಿಸಿಕೊಳ್ಳುವ ಬದಲು ದೌರ್ಭಾಗಿಗಳಾದ ಸೊದೋಮಿನ ಜನರು ಎಂದೂ ಒಂದು ಅವಕಾಶವನ್ನೂ ಪಡೆಯದೆ ಮತ್ತು ಮುಂದೆ ಎಂದೂ ಒಂದು ಸದಾವಕಾಶದ ಭರವಸೆಯೂ ಇಲ್ಲದೆ ನಿತ್ಯಯಾತನೆಗೆ ಹೋಗುವರೆಂದು ಇವರು ಉಪದೇಶಿಸುವ ಪ್ರವೃತ್ತಿಯುಳ್ಳವರಾಗುವರು. ಆದರೂ ಕಪೆರ್ನೌಮಿನವರಂಥ ಒಂದು ಒಳ್ಳೆಯ ಅವಕಾಶವು ಸೊದೋಮಿನವರಿಗೂ ದೊರೆತಿದ್ದೇಯಾದಲ್ಲಿ ಅವರೂ ತಗ್ಗಿದ ಮನಸ್ಸುಳ್ಳವರಾಗಿ ಪಶ್ಚಾತಾಪಪಡುತ್ತಿದ್ದರೆಂದು ನಮ್ಮ ಕರ್ತನು ತಿಳಿಸಿರುವನು. ತೂರ್ ಮತ್ತು ಸಿದೋನಿನ ಜನರು ಕರ್ತನಿಂದ ಆಶೀರ್ವಾದಾನುಗ್ರಹಗಳನ್ನು ಪಡೆಯದಿದ್ದರೂ ಅಲ್ಲದೆ ಪಾಲೆಸ್ತೀನಾದ ಜನರಂತೆ ಇವರೂ ಒಂದು ವೇಳೆ ಒಳ್ಳೆಯ ಅವಕಾಶವನ್ನು ಪಡೆದು ಮಾನಸಾಂತರ ಹೊಂದುವವರಾದಾಗ್ಯೂ ಸಹ ನಿತ್ಯಯಾತನೆಯೆಂಬ ದುರ್ವಿಧಿಗೆ ಗುರಿಯಾದವರೆಂದು ಎಣಿಸಲ್ಪಡುವರು ಎಂದು ಜ್ಞಾನಿಗಳೂ ವಿವೇಕಿಗಳೂ ನಮಗೆ ಹೇಳುವ ಒಲವುಳ್ಳವರಾಗಿರುವರು. ಹಾಗು ಕಡೆಯದಾಗಿ, ಈ ಪಾಲೆಸ್ತೀನಾದ ಜನರು ನಮ್ಮ ಕರ್ತನನ್ನು ನಿರಾಕರಿಸಿದವರಾಗಿದ್ದು ಆ ರಾಜ್ಯವನ್ನು ಕಳೆದುಕೊಳ್ಳುವುದು ಮಾತ್ರವಲ್ಲದೆ ನಿತ್ಯಯಾತನೆಯನ್ನೂ ಅವಶ್ಯವಾಗಿ ಅನುಭವಿಸಬೇಕೆಂದು ಅವರು ನಮಗೆ ಹೇಳುವರು. ಅವರು ಯೆಹೂದ್ಯರಂತೆ ತಮ್ಮ ಧಾರ್ಮಿಕ ಬೋಧಕರ ಸಂಪ್ರಾದಾಯಗಳಿಂದ ಕುರುಡಾಗಿದ್ದು ಸತ್ಯದ ವಿಷಯದಲ್ಲಿ ಕಣ್ಣುಕಾಣದವರಾಗಿ ಈ ಸಂಗತಿಗಳನ್ನು ಗ್ರಹಿಸಲು ವಿಫಲರಾಗಿರುವರು.

ನಂತರದಲ್ಲಿ ತಮ್ಮ ಗೊಂದಲವನ್ನು ಅಧಿಕಗೊಳಿಸಿ ಕೊಂಡವರಾಗಿ, ನ್ಯಾಯವಿಚಾರಣೆಯ ದಿನದ ವಿಷಯವಾದ ನಮ್ಮ ಕರ್ತನ ಮಾತುಗಳನ್ನು ನ್ಯಾಯವಿಚಾರಣಾ ಕಾಲವೆಂದು ಹೇಳುವುದಕ್ಕೆ ಬದಲು ಅದು ಒಂದು ದಂಡನೆಯ ದಿನವೆಂದು ಅರ್ಥಬರುವಂತೆ ಅನ್ವಯಮಾಡಿ ವ್ಯಾಖ್ಯಾನಿಸಿ ಹೇಳಲು ಪ್ರಯತ್ನಿಸುವರು. ನಮ್ಮ ಕರ್ತನು ಈ ಮಾತುಗಳನ್ನು ಹೇಳುವಾಗ ಸೊದೋಮಿನ ಜನರು ನರಕದಲ್ಲಿದ್ದು ತೀವ್ರವಾದ ಯಾತನೆಯನ್ನು ಅನುಭವಿಸುತ್ತಾ ಆಗಲೇ ಸುಮಾರು ಎರಡು ಸಾವಿರ ವರುಷ ಕಳೆದಿರುವುದೆಂದು ಅವರು ಹೇಳುವುದರ ಅರ್ಥವೆಂಬುದನ್ನು ಗಮನಿಸುವಲ್ಲಿ ಅವರು ವಿಫಲರಾಗಿರುವರು. ಸೊದೋಮಿನ ಜನರು ಈಗ ಅನುಭವುಸುತ್ತಿರುವರೆಂದು ವರ್ಣಿಸುವ ಯಾತನೆಯನ್ನು ನ್ಯಾಯವಿಚಾರಣೆಯ ದಿನದ ನಂತರವೂ ಏನಾದರೂ ಅನುಭವಿಸಲು ಸಾಧ್ಯವೆಂದು ಅವರು ಯೋಚಿಸಿರುವರೇ? ಹೀಗೂ ನ್ಯಾಯವಿಚಾರಣೆಯ ದಿನವೆಂಬ ಮಾತಿನ ಅರ್ಥವನ್ನಾದರೂ ಅವರು ಗ್ರಹಿಸಿರುವುದು ಏನೆಂದು? ಅವರು ಈ ಮಾತಿನ ಸರಿಯಾದ ಅರ್ಥವನ್ನು ಪರಿಗ್ರಹಿಸಿಲ್ಲ-ವೆಂಬುದು ಸ್ಪಷ್ಟವಾಗಿರುವುದು. ನಮ್ಮ ಕರ್ತನು ಇದನ್ನು ಮುಂದಿನ ಕಾಲದ ಸಂಗತಿಯಾಗಿ ಸೂಚಿಸಿರುವನೆಂದು ಅವರು ಕಾಣುವರು ಮತ್ತು ಅವರು ಹತಾಶರಾಗಿ ಗೊಂದಲಮಾಡಿ-ಕೊಂಡು ದೇವರ ಗುಣಾತಿಶಯಗಳ ಅನುಸಾರವಾದ ಅಥವಾ ದೇವರಿಗೆ ಅಗೌರವ ತರುವಂಥ ತಮ್ಮದೇ ಆದ ನಿರುಪಯುಕ್ತ-ವಾದ ತತ್ವಗಳ ಅನುಸಾರವಾಗಿಯಾದರೂ ಈ ವಿಷಯಕ್ಕೆ ಸೂಕ್ತವಾದ ಯಾವ ಒಂದು ವಿವರಣೆಯನ್ನು ಕೊಡಲು ಅಸಮರ್ಥರಾಗಿರುವರು. ಸತ್ಯವೇದ ಪಾಠಮಾಲೆಯ 1ನೇ ಗ್ರಂಥದ (ಸ್ಟಡೀಸ್ ಇನ್ ದ ಸ್ಕ್ರಿಪ್ಚರ್ಸ್, ವಾಲ್ಯುಮ್ 1) ಪುಟ 137 ನೋಡಿ.

ಹೀಗಿದ್ದರೂ ಈ ಸಂಗತಿಗಳು ಕೆಲವರಿಗೆ ಅಂದರೆ ಲೋಕಾನುಸಾರವಾಗಿ ಘನವಂತರೂ ಜ್ಞಾನಿಗಳೂ ಆಗಿರದ ಶಿಶುಗಳಂಥವರಿಗೆ ಪ್ರಕಟವಾಗಿ ಇರುವುದೆಂಬ ನಮ್ಮ ಕರ್ತನ ಮಾತುಗಳು ಎಷ್ಟು ಆದರಣೆ ನೀಡುವಂಥವುಗಳು; ಕರ್ತನಿಗೇ ಉಪದೇಶಿಸುವದಕ್ಕೆ ಬದಲಾಗಿ ಆತನಿಂದ ಕಲಿತುಕೊಳ್ಳುವ ದೀನ ಮನಸ್ಸುಳ್ಳವರಿಗೆ ಈ ಸಂಗತಿಗಳು ಪ್ರಕಟವಾಗಿರುವವು. ಈ ದಿವ್ಯಾಶೀರ್ವಾದಗಳು ನಮ್ಮದಾಗಿರುವವು, ಅತಿ ಪ್ರೀಯರೆ; ಹಾಗು ನಾವು ದೇವರಿಂದ ಕೇಳಿ ಕಲಿತವರಾಗಿರಲು ಮತ್ತು "ದೇವರು ನಮಗೆ ಉಚಿತವಾಗಿ ಅನುಗ್ರಹಿಸಿರುವ ಸಂಗತಿಗಳನ್ನು ತಿಳಿದುಕೊಳ್ಳಲು" ಈ ಶಿಶುಭಾವವನ್ನು ಮತ್ತು ಸರಳತೆಯನ್ನು ಕಾಪಾಡಿಕೊಳ್ಳುವಲ್ಲಿ ನಾವು ಜಾಗರೂಕ ರಾಗಿರೋಣ. ನಾವು ಈ ಸಂಗತಿಗಳಲ್ಲಿ ಆನಂದಿಸೋಣ ಮತ್ತು ಈ ಬೆಳಕು ಇತರರಿಗೂ ಹೊಳೆಯುವಂತಾಗಲು ಈ ವಿಷಯಗಳನ್ನು ಬಳಸುವರಾಗೋಣ. ದೇವರ ಯೋಜನೆಗಳು ವಿದ್ಯಾವಂತರಾದ ಬಹುಪಾಲಿನ ಜನರು

ದೇವಜ್ಞಾನ ಪಂಡಿತರು ಮುಂತಾದವರಿಗೆ ಮರೆಮಾಡಲ್ಪಟ್ಟಿರುವುದೆಂಬ ಅಂಶದ ವಿವರಣೆಯೆಂದರೆ, "ಜ್ಞಾನಿಗಳನ್ನು ಅವರ ತಂತ್ರದಲ್ಲೇ ಹಿಡುಕೊಡಲು" ಮತ್ತು ತನ್ನ ಉದ್ದೇಶಗಳನ್ನು ದೀನ ಮನಸ್ಸುಳ್ಳವರಿಗೆ ಪ್ರಕಟಮಾಡಲು ತಂದೆಯು ಸಂತೋಷಿಸುವ–ನೆಂಬುದು. "ಹೌದು, ತಂದೆಯೇ, ಹೀಗೆ ಮಾಡುವುದೇ ಒಳ್ಳೆಯದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ." (ಮತ್ತಾಯ 11:26) ತನ್ನ ಕುಮಾರನ ಮೊದಲನೇ ಬರುವಿಕೆಯಲ್ಲಿ ತಂದೆಯು ಧರ್ಮೋಪದೇಶಕರನ್ನು ಶಾಸ್ತ್ರಿಗಳನ್ನು ಮತ್ತು ಘನವಂತರನ್ನು ಆತನ ಬಳಿಗೆ ಎಳೆಯಲಿಲ್ಲ ಆದರೆ ಎಳೆದದ್ದು ಯಾವ ಕಪಟವೂ ಇಲ್ಲದ "ನಿಜವಾದ ಇಸ್ರಾಯೇಲನನ್ನು"; ಹೀಗಿದ್ದರೂ ಅವರು ದೀನರಾದ ಕೆಲವೇ ಮಂದಿಯಾಗಿದ್ದರು. ಮತ್ತು ಇದೇ ವರ್ಗವು ಈ ಕಾಲದ ಪರ್ಯಂತರ ಆಶೀರ್ವಾದವನ್ನು ಹೊಂದುತ್ತಿರುವುದು.

ತನ್ನ ವಿಶೇಷವಾದ ಉಪದೇಶಗಳು ಕೇವಲ ತಂದೆಯು ಯಾರನ್ನು ತನಗೆ ಕೊಟ್ಟಿರುವನೋ ಅವರಿಗೆ ಮಾತ್ರವೆಂದೂ ಆತನ ಪ್ರಮಾಣ ಸಾಕ್ಷಿಗಳನ್ನು ಅಂಗೀಕರಿಸಿಕೊಳ್ಳಲು ಸೂಕ್ತವಾದ ಹೃದಯದ ಸ್ಥಿತಿಯೂ ಸಿದ್ಧಮನಸ್ಸೂ ಇಲ್ಲದವರಿಗೆ ಇದು ನಿಜವಾಗಿಯೂ ಇರುವುದಿಲ್ಲವೆಂಬುದನ್ನು ನಮ್ಮ ಒಡೆಯನು ಅರಿತಿದ್ದನು. ಆದುದರಿಂದ ನಂಬಿಗಸ್ತರಾದ ತನ್ನ ಶಿಷ್ಯರಿಗೆ ಮತ್ತು ಈ ಗುಂಪಿಗೆ ಸೇರಿದವರಿಗೆ ತಾನು ತಂದೆಯಿಂದ ಹೊಂದಿರುವುದಾಗಿ ಹೇಳಿಕೊಂಡಿದ್ದ ಸಂಗತಿಗಳನ್ನೆಲ್ಲಾ ಪ್ರಕಟ ಮಾಡಿದ್ದನು. ಆತನು ಯಾವುದೂ ತನ್ನದೆಂದು ಹೇಳಿಕೊಂಡಿರಲಿಲ್ಲ; ಅಲ್ಲದೆ ಇನ್ನೂ ಮುಂದುವರಿದು ತನ್ನನ್ನು ಯಾರೂ ನಿಜವಾದ ರೀತಿಯಲ್ಲಿ ಸಂಪೂರ್ಣವಾಗಿ ನಿಕಟವಾಗಿ ತಿಳಿದುಕೊಂಡಿಲ್ಲವೆಂದೂ, ಆದರೆ ತಂದೆಯು ಮಾತ್ರವೆಂದೂ ಮತ್ತು ತನ್ನ ಹೊರತು ಯಾರೂ ತಂದೆಯನ್ನು ತಿಳಿದಿಲ್ಲವೆಂದೂ ಹಾಗು ಕುಮಾರನು ಯಾರಿಗೆ ಪ್ರಕಟಿಸುವನೋ ಅವನೂ (ತಂದೆಯನ್ನು) ತಿಳಿದಿರುವನೆಂದು ಪ್ರತಿಪಾದಿಸಿ ಹೇಳಿದ್ದನು. ಸಾಮಾನ್ಯ ಓದುಗಾರನು ಈ ವಾಕ್ಯಭಾಗದ ಅರ್ಥವನ್ನು ಮೊದಲಿಗೆ ಬಹು ಅಲ್ಪವಾಗಿ ತಿಳಿದುಕೊಳ್ಳುವನು. ಕರ್ತನ ವಿಷಯವಾದ ಕೃಪೆಯಲ್ಲಿಯೂ ಮತ್ತು ಜ್ಞಾನದಲ್ಲೂ ಅಭಿವೃದ್ಧಿಯಾಗುತ್ತಾ ವರುಷಗಳಷ್ಟು ಮುಂದುವರಿದ ಕ್ರೈಸ್ತನು ಇದನ್ನು ಉತ್ತಮವಾಗಿ ಗ್ರಹಿಸಿಕೊಳ್ಳುವನು. ಆತನಿಗೆ ಅರಿವಾಗುವುದೆಂದರೆ, ಮೊದಲಿಗೆ ಕ್ರೈಸ್ತಜೀವಿತದ ಅನುಭವಗಳನ್ನು ಪಡೆಯಲು ಆರಂಭಿಸಿದಂದಿನಿಂದಲೂ ಯೇಸುವಿನ ವಿಷಯವಾಗಿಯೂ ಹಾಗು ತಂದೆಯ ವಿಷಯವಾಗಿಯೂ ಕೆಲವು ಮಟ್ಟಿನ ಜ್ಞಾನ ಹೊಂದಿದಾಗ್ಯೂ ತಂದೆಯನ್ನು ಮತ್ತು ಮಗನನ್ನು ನಿಕಟವಾಗಿ ತಿಳಿಯುವುದು ಅಂದರೆ ಒಬ್ಬ ನಿಕಟವಾದ ಸ್ನೇಹಿತನ ಮನಸ್ಸನ್ನು ಹೃದಯವನ್ನು ತಿಳುಕೊಂಡಂತೆ ಅವರೊಡನೆ ಒಡನಾಟಕ್ಕೆ ಬರುವುದು ಒಂದು ಭಿನ್ನವಾದ ವಿಷಯವೆಂಬುದು ಆತನ ಗ್ರಹಿಕೆಗೆ ಬರುವುದು. ಇಂಥಾ ಒಡನಾಟಕ್ಕೆ ಬರುವುದು ಒಂದು ಸೌಭಾಗ್ಯವಾಗಿರುವುದು. ಇದು ಎಲ್ಲರೂ ಪಡೆಯುವಂಥದಲ್ಲ, ಇದಕ್ಕೆ ಹುಡುಕುವಿಕೆ ಮತ್ತು ತಟ್ಟುವಿಕೆಗಳ ಅವಶ್ಯಕತೆಯಿವುದು ಮತ್ತು ಈ ಬಗೆಯ ಹುಡುಕುವಿಕೆ ಮತ್ತು ತಟ್ಟುವಿಕೆಗಳನ್ನು ಮಾಡಲು ಕರ್ತನ ನಿಕಟವಾದ ಅನ್ಯೋನ್ಯತೆಯನ್ನು ಪಡೆದು ಆತನ ಜೊತೆಗಾರರಾಗುವ ಒಂದು ಶ್ರದ್ಧಾಪೂರ್ವಕವಾದ ಬಯಕೆಯನ್ನು ಹೊಂದಿರುವುದು ಇಲ್ಲಿ ಅನ್ವಯವಾಗುತ್ತದೆ. ಕರ್ತನೊಡನೆ ಆತನ ರಾಜ್ಯದಲ್ಲಿ ಸಹಬಾಧ್ಯರಾಗಲು ಬಯಸುವ ಆತನ ನಿಜವಾದ ಹಿಂಬಾಲಕರೆಲ್ಲರೂ ಇಂಥ ಒಂದು ಕೃಪೆಯಲ್ಲಿನ ಮತ್ತು ಜ್ಞಾನದಲ್ಲಿನ ಅಭಿವೃದ್ಧಿಯನ್ನು ಶ್ರದ್ಧೆಯಿಂದ ಯತ್ನಿಸಬೇಕು; ಯಾಕೆಂದರೆ ಇದು ಇಲ್ಲದೆ ಅವರಿಗೆ ಅಭಿವೃದ್ಧಿಯಾಗಲು ಸಾಧ್ಯವಾಗದು. ನಾವು ತಂದೆಯನ್ನು ಮತ್ತು ಮಗನನ್ನು ತಿಳಿದುಕೊಳ್ಳುವಷ್ಟರ ಪ್ರಮಾಣದಲ್ಲಿ ನಾವು ಅವರನ್ನು ಪ್ರೀತಿಸಿ ಅವರ ದೃಷ್ಟಿಯಲ್ಲಿ ಮೆಚ್ಚಿಕೆಯಾದವುಗಳನ್ನು ಮಾಡಲು ಯತ್ನಿಸುವೆವು.

## ಕಷ್ಟಪಡುವವರೇ ಹೊರೆಹೊತ್ತವರೇ, ನನ್ನ ಬಳಿಗೆ ಬನ್ನಿರಿ!

ತನ್ನ ಶಿಷ್ಯರಾಗುವದಕ್ಕೆ ತಕ್ಕ ಮನೋಭಾವವುಳ್ಳ ಕೆಲವರು ಅಲ್ಲಿದ್ದರೆಂಬುದನ್ನು ಕರ್ತನು ಅನ್ವಯಿಸಿಕೊಂಡವನಾಗಿ, ಇನ್ನೂ ಈ ವರ್ಗದ ಜನರಿಗೆ ಸಂಬೋಧಿಸುವವನಾಗಿ, ತನ್ನನ್ನು ಆಲಿಸುತ್ತಿದ್ದವರಿಗೆ ಹೀಗೆ ವೈಯುಕ್ತಿಕವಾಗಿ ಮನವಿಮಾಡಿಕೊಂಡನು: "ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು." ಆ ಜನರಲ್ಲಿ ಹಲವರಿಗೆ ಇದ್ದ ತೊಂದರೆಯೆಂದರೆ ಅವರು ಕಷ್ಟಪಡುವವರಾಗಿರಲಿಲ್ಲ ಇಲ್ಲವೇ ಹೊರೆಹೊತ್ತವ–ರಾಗಿರಲಿಲ್ಲ, ಆದರೆ ಬದಲಾಗಿ ಅವರು ಬಹುಮಟ್ಟಿಗೆ ಸ್ವತಃ ಸಂತುಷ್ಟರಾಗಿದ್ದರು. ನಮ್ಮ ಕರ್ತನ ಮನಸ್ಸಿನಲ್ಲಿ ಇದ್ದುದು ಶಾರೀರಿಕವಾದ ಕಷ್ಟಗಳು ಮತ್ತು ಶಾರೀರಿಕ ಹೊರೆಗಳು ಆಗಿದ್ದವೆಂದು ನಾವು ಕಲ್ಪಿಸಿಕೊಳ್ಳಲಾಗದು. ಆದರೆ ಇದು ಖಂಡಿತವಾಗಿಯೂ ನಿಜವಾದ ಇಸ್ರಾಯೇಲನಿಗೆ ಅವರು ಸತ್ಯವಾಗಿಯೂ ತಮ್ಮ ವಿಷಯದಲ್ಲಿ ಶ್ರದ್ಧೆಯುಳ್ಳವರಾದ್ದಲ್ಲಿ, ಇದು ಅವರ ಅನುಭವಕ್ಕೆ ಬರಬೇಕಿದ್ದ ಹೃದಯದಲ್ಲಿನ ಕಷ್ಟಗಳು ಹಾಗು ಪಾಪವೆಂಬ ಹೊರೆಯ ವಿಷಯವಾಗಿತ್ತು.

ನಾವು ನೆನಪಿನಲ್ಲಿಡಬೇಕಿರುವುದೆಂದರೆ, ಅವರು ಧರ್ಮಶಾಸ್ತ್ರ ಸಂಬಂಧದ ಒಡಂಬಡಿಕೆಗೆ ಅಧೀನರಾಗಿರಲು ಅದರ ಬೇಡಿಕೆಗಳು ಬಹು ನಿರ್ದಾಕ್ಷಣ್ಯವಾಗಿದ್ದು ಅದರಲ್ಲಿ ಬಲಹೀನತೆಗಳಿಗಾಗಲಿ ದೋಷಗಳಿಗಾಗಲಿ ತಪ್ಪುಗಳಿಗಾಗಲಿ ಯಾವ ರಿಯಾಯಿತಿಗಳೂ ಇರಲಿಲ್ಲ; ಪರಿಣಾಮವಾಗಿ ಯೆಹೂದ್ಯರೆಲ್ಲರಿಗೂ ಸೀನಾಯಿ ನ್ಯಾಯವಿಧಿಗಳ ಭಾರವನ್ನು ಹೊರಲು ಯತ್ನಿಸುವಾಗ ಅವರಿಗೆ ಸತತವಾಗಿ ಖಂಡನೆಗೆ ಗುರಿಯಾಗಿರುವ ಅನುಭವವಾಗಿರಬೇಕು. ಆಜ್ಞಾವಿಧಿಗಳು ನ್ಯಾಯ ಸಮ್ಮತವಾದವುಗಳಲ್ಲವೆಂದೂ ಅಥವಾ ಒಬ್ಬ ಪರಿಪೂರ್ಣನಾದ ಮನುಷ್ಯನಿಗೆ ಇವುಗಳನ್ನು ಅನುಸರಿಸಲು ಅಸಾಧ್ಯವಾಗಿರುವುದು ಎಂಬುವದಾಗಿರಲಿಲ್ಲ; ಆದರೆ ಎಲ್ಲರೂ ದೋಷವುಳ್ಳವರಾಗಿಯೂ ಮತ್ತು (ಪರಿಪೂರ್ಣತೆಯಿಂದ) ಬಿದ್ದುಹೋದವರಾಗಿಯೂ ಇರುವುದರಿಂದ ಆಜ್ಞಾಸಂಬಂದವಾದ ಒಡಂಬಡಿಕೆಯನ್ನು

ಕಾಪಾಡಿಕೊಳ್ಳಲು ಅಸಮರ್ಥರಾಗಿದ್ದರು. ಆ ಕಾಲದಲ್ಲಿನ ಯೆಹೂದ್ಯರಲ್ಲಿ ಬಹುಪಾಲು ಜನರು ತಾವು ಪರಿಶುದ್ಧರೆಂದೂ ಆಜ್ಞಾಪಾಲಕರೆಂದೂ ಪಾಪಮಾಡಿಲ್ಲವೆಂಬಂತೆ ತೋರ್ಪಡಿಸಿ-ಕೊಳ್ಳುವವರಾಗಿದ್ದರೂ, ಅವರಲ್ಲಿ ಕೆಲವರು ಪ್ರಾಮಾಣಿಕರಾಗಿದ್ದು ತಾವು ಸಂಪೂರ್ಣವಾಗಿ ಆಜ್ಞಾವಿಧಿಗಳನ್ನು ಪಾಲಿಸಲಿಲ್ಲವೆಂದೂ, ಅವುಗಳನ್ನು ಅನುಸರಿಸಲು ಸಾಧ್ಯವಾಗಲಿಲ್ಲವೆಂದೂ ಇತರರ ಮುಂದೆ ತಮ್ಮ ವಿಷಯವಾಗಿಯೂ ತೋರ್ಪಡಿಸಿಕೊಂಡು ತಾವು ಇವುಗಳ ವಿಷಯದಲ್ಲಿ ಕಷ್ಟಪಡುವವರೂ ಹೊರೆಹೊತ್ತವರೂ ಆಗಿದ್ದು ತಮ್ಮ ಪ್ರಯತ್ನಗಳಲ್ಲಿ ವಿಫಲರಾಗಿರುವೆವೆಂಬ ಅನ್ನಿಸಿಕೆ-ಯಲ್ಲಿದ್ದರೆಂಬುದನ್ನು ನಾವು ಕಲ್ಪಿಸಿಕೊಳ್ಳಬಹುದು. ಇಂಥವರು ತಮಗಾಗಿ ಒಬ್ಬ ಭಾರಹೊರುವವನ ಅಗತ್ಯವಿದೆಯೆಂದು ಭಾವಿಸಿದ್ದು, ತಮ್ಮ ಆತ್ಮವು ವ್ಯಾಧಿಪೀಡಿತವಾಗಿದ್ದು ಒಬ್ಬ ಒಳ್ಳೆಯ ವೈದ್ಯನ ಅಗತ್ಯವಿರುವುದೆಂದು ಎಣಿಸಿಕೊಂಡಿದ್ದರು; ಅಲ್ಲದೆ ಇಂಥವರನ್ನೇ ಯೇಸುವು ಸಂಬೋಧಿಸಿ ಅವರು ತನ್ನ ಬಳಿಗೆ ಬಂದು ವಿಶ್ರಾಂತಿ ಉಪಶಮನಗಳನ್ನು ಪಡಕೊಳ್ಳಬೇಕೆಂದು ಆಹ್ವಾನಿಸಿದ್ದನು.

ಕ್ರಿಸ್ತನ ಬಳಿಗೆ ವಿಶ್ರಮಿಸಲು ಬರುವುದೇ ಕ್ರೈಸ್ತಜೀವಿತದ ಮೊದಲನೆ ಹೆಜ್ಜೆ; ಇದು ಆತನು ನಮ್ಮ ಪಾಪಗಳ ವಿಷಯದಲ್ಲಿ ದೇವನ್ಯಾಯವಿಧಿಗಳನ್ನು ಈಡೆರಿಸಿ ಸಂತೃಪ್ತಿಗೊಳಿಸಿರುವ-ನೆಂಬುದನ್ನು ಅಂಗೀಕರಿಸಿ ನೀತವಂತರೆಂಬ ನಿರ್ಣಯ ಹೊಂದುವದಾಗಿರುವದು. ಮತ್ತು ನಾವು ಅತನನ್ನು ಹೀಗೆ ಅಂಗೀಕರಿಸಿದ ನಂತರದ ಸಮಯದಿಂದ, ಅಪೋಸ್ತಲನು ಪ್ರಕಟಿಸಿರುವಂತೆ, ನಾವು ನಂಬುವುದರ ಮೂಲಕವಾಗಿ ಸಂತೋಷ ಸಮಾಧಾನಗಳನ್ನು ಹೊಂದಿರುವೆವು. (ರೋಮಾ 5:1; 15:13) ಆದರೆ ನಾವು ಇವುಗಳನ್ನು ಹೀಗೆ ಪಡೆದುಕೊಂಡು ಆಶೀರ್ವದಿಸಲ್ಪಟ್ಟ ನಂತರ ನಮಗೆ ಕೆಲವು ಹೆಚ್ಚಿನದನ್ನು ಮಾಡಬೇಕಿರುವುದು ಅಂದರೆ ನಮಗೆ ಬೇರೊಂದು ಹೊರೆ ಮತ್ತು ಇನ್ನೊಂದು ನೊಗವಿರುವುದೆಂಬುದನ್ನು ಕಲಿಯಬೇಕಿದ್ದು ಅವುಗಳನ್ನು ನಾವೇ ಸ್ವತಃ ನಮ್ಮ ಮೇಲೆ ತೆಗೆದು-ಕೊಳ್ಳುವವರಾಗಬೇಕು.

ನೊಗವು ಸೇವಾದಾಸತ್ವದ ಸಂಕೇತವಾಗಿರುವುದು ಮತ್ತು ನಮ್ಮ ಕರ್ತನು ಹೀಗೆ ಸೂಚ್ಯವಾಗಿ ಹೇಳಿರುವುದೆಂದರೆ, ಯಾರು ಬಿಡುಗಡೆ ಹೊಂದಿರುವರೋ (ಯೆಹೂದ್ಯರು ಹೊತ್ತಿದ್ದ ಆಜ್ಞಾಸಂಬಂಧವಾದ ಒಡಂಬಡಿಕೆಯ ನೊಗದಿಂದಾಗಲೀ ಅಥವಾ ನಂಬಿದವರಾದ ಅನ್ಯಜನರು ಹೊತ್ತಿದ್ದ ಸೈತಾನನು ಹೇರಿರುವ ನೊಗದಿಂದ ಬಿಡುಗಡೆ ಹೊಂದಿರುವವರು) ಅವರು ಆತನ (ಕರ್ತನ) ಸೇವಕರಾಗಿ ಆತನ ನೊಗವನ್ನು ತೆಗೆದುಕೊಂಡು ಆತನ ಚಿತ್ತವನ್ನು ನೆರವೇರಿಸುವುದನ್ನು ಕಲಿಯಬೇಕು. ನೊಗವನ್ನು ಸಾಧಾರಣವಾಗಿ ಇಬ್ಬರು ಹೊರುವದಕ್ಕಾಗಿ ಸಿದ್ಧಗೊಳಿಸಲಾಗಿರುತ್ತದೆ ಮತ್ತು ನಮ್ಮ ಕರ್ತನು ಇದನ್ನು ತನ್ನ ನೊಗವೆಂದು ನುಡಿದಿರುವನು; ಇದರಿಂದ ನಾವು ಅರ್ಥಮಾಡಿ ಕೊಳ್ಳತಕ್ಕದೆಂದರೆ ಆತನೂ ಒಬ್ಬ ಸೇವಕನಾಗಿರುವನೆಂಬುದು; ಆತನು ತಂದೆಯ ಚಿತ್ತವನ್ನು ನೆರವೇರಿಸಲು ಬಂದವನಾಗಿದ್ದು ಸೇವಾದಾಸತ್ವವೆಂಬ ನೊಗವನ್ನು ಹೊತ್ತವನಾಗಿ ನಾವು ನೊಗಹೊರುವದರಲ್ಲಿ ತನಗೆ ನಿಜವಾದ ಜೊತೆಗಾರ-ರಾಗುವುದಕ್ಕೆ ನಮ್ಮನ್ನು ಆಹ್ವಾನಿಸುತ್ತಿರುವನು. ಹೀಗೆ ಲೋಕವನ್ನು ಪಾಪ ಮರಣಗಳಿಂದ ಬಿಡುಗಡೆ ಮಾಡುವ ಆ ಮಹಾ ಕಾರ್ಯದಲ್ಲಿ ಕ್ರಿಸ್ತನಿಗೆ ನಾವು ಜೊತೆ ಕೆಲಸದವರಾಗುವೆವು.

ಈ ನೊಗವನ್ನು ಹೊರುವ ಸಾಮರ್ಥ್ಯ ಮತ್ತು ಈ ಸೇವೆಯಲ್ಲಿ ಕ್ರಿಸ್ತನ ಅನ್ಯೋನ್ಯತೆಗೆ ಬರುವುದರ ಪರಿಣಾಮವಾಗಿ ನಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಹೃದಯದ ಒಂದು ದಿವ್ಯ ಆಶೀರ್ವಾದವಾಗಿ ಪಡೆಯುವದರ ಗುಟ್ಟು, ಆತನು (ಕ್ರಿಸ್ತನು) ವಿವರಿಸಿ ಹೇಳಿರುವಂತೆ, ತಾನು ಮಾಡಿದಂತೆ ನಾವೂ ಸಾತ್ವಿಕರಾಗಿ ದೀನ ಮನಸ್ಸನ್ನು ಹೊಂದಲು ಕಲಿಯುವುದರಲ್ಲಿರುವುದು. ಯೇಸುವಿನೊಂದಿಗೆ ಅದೇ ನೊಗವನ್ನು ಹೊತ್ತು ಆತನೊಡನೆ ಪರಿಶ್ರಮಿಸಲು ಇಲ್ಲವೇ ನಾವು ಸೂಕ್ತವಾದ ರೀತಿಯಲ್ಲಿ ಬಯಸುತ್ತಿರುವ ಆತ್ಮಗಳ ನಿಜವಾದ ವಿಶ್ರಾಂತಿಯನ್ನು ಹೊಂದಲು ಅಹಂಕಾರಿಗಳು ಹೆಮ್ಮೆಯುಳ್ಳವರು ಸ್ವಯಿಚ್ಛಾವಂತರು ಮಹತ್ವಾಕಾಂಕ್ಷಾಭರಿತರು ಹಾಗೂ ಲೌಕಿಕ ಜ್ಞಾನಿಗಳು ಇವರಿಗೆ ಅಸಾಧ್ಯ. ಆದರೆ ನಾವು ಸಾತ್ವಿಕರಾಗಿ ಕಲಿಯುವ ಆಸಕ್ತಿ ಹೊಂದಿದ್ದು ದೀನಮನಸ್ಸುಳ್ಳವರೂ ಕರ್ತನ ಚಿತ್ತವನ್ನು ತಿಳಿದು ಅದನ್ನು ನೆರವೇರಿಸಲು ಸಿದ್ಧವಾದವರೂ ಆಗಿದ್ದಲ್ಲಿ ನಿಜವಾಗಿಯೂ ನಾವು ನಮ್ಮ ಆತ್ಮಗಳಲ್ಲಿ ಸಂತೃಪ್ತಿಯನ್ನು ಕಂಡುಕೊಳ್ಳುವೆವು. ಆಗ ಎಲ್ಲಾ ಗ್ರಹಿಕೆಯನ್ನು ಮೀರುವ ದೇವ ಶಾಂತಿಯು ನಮ್ಮ ಹೃದಯಗಳಲ್ಲಿ ಆಳ್ವಿಕೆಮಾಡುವುದು.

ವಚನ 28 ಮತ್ತು 29: ಇವುಗಳಲ್ಲಿರುವ ಎರಡು ಬಗೆಯ ವಿಶ್ರಾಂತಿಗಳಿಗೆ ಒಂದು ವ್ಯತ್ಯಾಸವಿರುವುದನ್ನು ನಾವು ಗಮನಿಸಿದ್ದೇವೆ. ನಂಬಿಕೆಯಿಂದ ತನ್ನ ಬಳಿಗೆ ಬರುವವನಿಗೆ ಕರ್ತನು ಮೊದಲನೆ ಬಗೆಯ ವಿಶ್ರಾಂತಿಯನ್ನು ಕೊಡುವನೆಂದು ಹೇಳಲಾಗಿರುವುದು; ಯೇಸುವಿನೊಂದಿಗೆ ನೊಗಹೊರುವ ಜೊತೆಗಾರನಾಗುವದಕ್ಕೆ ಬರುವವನು ಎರಡನೆ ಬಗೆಯ ಆತ್ಮದ ವಿಶ್ರಾಂತಿಯನ್ನು ಕಂಡುಕೊಳ್ಳುವನೆಂದು ಹೇಳಲಾಗಿರುವುದು. ಮತ್ತು ಇದೂ ಹೀಗೆಯೇ ಇರುವುದು: ಇಲ್ಲಿ ಎರಡು ಬಗೆಯ ಆಶೀರ್ವಾದಗಳಿದ್ದು, ನೀತಿವಂತರೆಂಬ ನಿರ್ಣಯವನ್ನು ಹೊಂದಿ ನಮ್ಮ ಪಾಪಗಳು ಕ್ಷಮಿಸಲ್ಪಟ್ಟಿರುವದರಲ್ಲಿ ಸಂತೋಷವುಳ್ಳವರಾಗಿ ನಾವು ನಮ್ಮ ಪರಲೋಕದ ತಂದೆಗೆ ಇನ್ನು ಅನ್ಯರೂ ಪರದೇಶೀಗಳೂ ಆಗಿರದೆ ಕ್ರಿಸ್ತನ ರಕ್ತದ ಮೂಲಕವಾಗಿ ಸಮೀಪಸ್ತರಾಗಿರುವುದು ಇವುಗಳಲ್ಲಿ ಮೊದಲನೆಯದಾಗಿರುವುದು; ಎರಡನೆಯದು ಯಾವುದೆಂದರೆ, ಬಹು ನಿಧಾನವಾಗಿ ಪವಿತ್ರಾತ್ಮನ ಒಂದು ವರವಾಗಿಯೂ ಫಲವಾಗಿಯೂ ಇರುವ ಆನಂದ ಮತ್ತು ಸಮಾದಾನಗಳು ಹೃದಯದಲ್ಲಿ ನಿರಂತರವಾಗಿ ವೃದ್ಧಿಯಾಗುತ್ತಾ ಬರುವಂಥದ್ದು. ಹೀಗಾಗಿ ಈ ಎರಡನೆಯ ಆಶೀರ್ವಾದವನ್ನು ಬಹು ಕಡಿಮೆ ಜನರು ಪಡೆದುಕೊಳ್ಳುವರು ಮತ್ತು ಹೆಸರಿನ ಕ್ರೈಸ್ತರಲ್ಲಿ ಬಹು ಪಾಲು ಜನರಿಗೆ ಈ ವಿಷಯವಾಗಿ ಏನೂ ತಿಳಿದಿರುವುದಿಲ್ಲ. ಆದರೂ ಇದು ಈ ಸುವಾರ್ತಾ ಯುಗದಲ್ಲಿ ನೀಡಲಾಗುತ್ತಿರುವ (ಸಭೆಯ) ಕರೆಯುವಿಕೆಯ

ಮೂಲ ಉದ್ದೇಶವಾಗಿರುವುದು. ಯಾರು ಕರ್ತನ ಬಳಿಗೆ ಬಂದು ಆತನ ನೊಗವನ್ನು ಹೊತ್ತುಕೊಂಡು ಆತನಿಂದ ಕಲಿತು ಕೊಂಡವರಾಗಿ "ದೇವ ಕುಮಾರನ ಪ್ರತಿರೂಪಿಗಳು" ಆಗುವುದರಲ್ಲಿ ವಿಫಲರಾಗುವರೋ, ಅವರು ಈ ಸುವಾರ್ತಾ ಯುಗದಲ್ಲಿ ವಿಶೇಷವಾಗಿ ನೀಡಲಾದ ಕರೆಯುವಿಕೆ ಮತ್ತು ಅದರ ಉದ್ದೇಶದ ಇವುಗಳ ವಿಷಯದಲ್ಲಿ ಪೂರ್ಣವಾಗಿ ಸೋತುಹೋದ ವರಾಗಿ ಅವರಿಗೆ ಆ ರಾಜ್ಯದಲ್ಲಿ ಯಾವ ವಿಧವಾದ ಭಾಗವಹಿಸು ವಿಕೆಯೂ ಪಾಲುಗಾರಿಕೆಯೂ ಇಲ್ಲದೆ ಹೋಗುವದು. ನಂಬಿಕೆಯ ಮೂಲಕವಾಗಿ ನೀತಿವಂತರೆಂಬ ನಿರ್ಣಯ ಹೊಂದುವ ಆಶೀರ್ವಾದವೆಂಬುದು ಕೇವಲ ಕರ್ತನೊಂದಿಗೆ ನೊಗ ಹೊರುವವರಾಗಿ ತಂದೆಯ ಸೇವೆಯ ವಿಷಯದಲ್ಲಿ ಆತನಿಗೆ ಜೊತೆಗಾರರಾಗಲು ಯೋಗ್ಯ ರನ್ನಾಗಿ ಮಾಡಿ ಆ ಸೇವೆಗೆ ಅವರನ್ನು ಸಿದ್ದಗೊಳಿಸುವುದಕ್ಕಾಗಿರುವುದು.

ನೊಗದಡಿಗೆ ತನ್ನೊಡನೆ ಬಂದು ಸೇರಲು ಯೇಸುವು ನಮ್ಮನ್ನು ಆಹ್ವಾನಿಸಿದ ಈ ನೊಗವು ಪ್ರಪಂಚದ ದೃಷ್ಟಿಯಲ್ಲಿ ಒಂದು ದುಸಾಧ್ಯವಾದ ಸಂಗತಿಯಾಗಿರುವುದು; ಅವರಿಗೆ ಇದು ಬಹು ಅಯಕ್ತವಾದ ಒಂದು ನೊಗವೆಂದು ತೋರುತ್ತದೆ; ದೇವರ ಸೇವೆಗೆ ತಮ್ಮ ಜೀವಿತ ಸಮಯ ಸಂಪನ್ಮೂಲ ಎಲ್ಲವನ್ನು ಪ್ರತಿಷ್ಠಿಸಿಕೊಳ್ಳುವುದು ಒಂದು ಅತಿ ಘೋರವಾದ ಹೊರೆ; ಆದರೆ ತನ್ನ ಬಳಿಗೆ ಬಂದವವರಾದ ಯಾರಿಗೆ ಯೇಸುವು ನೀತಿವಂತ ರೆಂದು ನಿರ್ಣಯಿಸುವುದರ ಮೂಲಕ ಸಮಾಧಾನ ವಿಶ್ರಾಂತಿ ಯನ್ನು ನುಡಿದಿರುವನೋ ಅವರ ದೃಷ್ಟಿಯಲ್ಲಿ ಈ ವಿಷಯವು ಬಹು ಭಿನ್ನವಾಗಿರುವುದು. ಅಂಥವರಿಗೆ ಇದು ಒಂದು "ಸೂಕ್ತವಾದ ಸೇವೆಯಾಗಿ" ಕಂಡುಬರಬೇಕು. ಏಕೆಂದರೆ ಕರ್ತನು ಕೃಪಾಪೂರ್ಣನಾಗಿ ನಮ್ಮ ಜೀವವನ್ನು ಮತ್ತು ನಮ್ಮದೆಲ್ಲವನ್ನೂ ವಿಮೋಚಿಸಿರಲಾಗಿ ನಮ್ಮ ಉಳಿದ ಜೀವನವನ್ನು ಆತನನ್ನು ಸ್ತುತಿಸಿ ಘನಪಡಿಸುವುದಕ್ಕೆ ಬಳಸುವವರಾಗಬೇಕು. ಮತ್ತು ನಾವು ನಮ್ಮ ಮೇಲೆ ಆ ನೊಗವನ್ನು ತೆಗೆದುಕೊಂಡ ನಂತರ ಅದು ಒಂದು ಸುಲಭವಾದುದಾಗಿ ನಮಗೆ ಕಂಡುಬರುತ್ತದೆ. ಹಾಗು ಅದರೊಂದಿಗೆ ಬರುವ ಯಾವ ಹೊರೆ ಕರ್ತವ್ಯ ಪರಿಶೊಧನೆ ಸಂಕಷ್ಟ ಮನಃಕ್ಲೇಷಗಳೂ, ನಮ್ಮ ಮೇಲೆ ಬರುವ ಇತರ ಯಾವ ವಿಧವಾದ ಹೊರೆಯೂ ಈ ನೊಗದ ಕಾರಣದಿಂದಾಗಿ ಅವುಗಳು ನಿಜವಾಗಿಯೂ ಲಘುವಾಗಿರುವವು.

ಏಕೆ? ಕಾರಣ ಯಾರು ಈ ನೊಗವನ್ನು ಹೊತ್ತು-ಕೊಳ್ಳುವರೋ ಅವರಿಗೆ ಎಲ್ಲಾ ವಿಷಯಗಳೂ ಅವರ ಒಳಿತಿಗಾಗಿ ಸಂಭವುಸುವದೆಂಬ ದೇವರ ವಾಕ್ಯದಲ್ಲಿ ನೀಡಲಾದ ಭರವಸೆಯನ್ನು ಅವರು ಪಡೆದಿರುವರು; ಅಲ್ಲದೆ ಹೊರೆಯು ಅಧಿಕವಾದಷ್ಟೂ ಅದಕ್ಕೆ ಕೂಡಿ ಬರುವ ಆಶೀರ್ವಾದ ಮತ್ತು ಪ್ರತಿಫಲಗಳೂ ಮುಂದೆ ಅಧಿಕವಾಗಿರುವುದು; ಈಗಿನ ಕಾಲದಲ್ಲಿ ಉಂಟಾಗುವ ಅನುಭವಗಳು ತೀವ್ರವಾದಷ್ಟೂ ಮುಂದೆ ದೊರೆಯುವ ಪ್ರಭಾವವು ಉಜ್ವಲವಾಗಿರುವುದು; ಅವರ ಗುಣಗಳೂ ಶೋಭಿಸಿದಷ್ಟೂ ಅವರು ಪರಲೋಕ ರಾಜ್ಯಕ್ಕೆ ಅರ್ಹರಾಗಿ ಸುಸಂಸ್ಕೃತಿ ಹೊಂದುವುದು ಬಹು ಖಚಿತವಾಗುವುದು. ಈ ದೃಷ್ಟಿಯಿಂದ ಪ್ರತಿಯೊಂದು ಹೊರೆಯೂ ಹಗುರವಾಗುವುದು. ಏಕೆಂದರೆ ನಮ್ಮ ನೊಗದ ವಿಷಯದಲ್ಲಿ ಮನವರಿಕೆಯಾಗಿ ಅದು ಅತಿ ಸುಲಭವೂ ಬಹು ಉಚಿತವೂ ಆಗಿರುವುದು ಮತ್ತು ಇನ್ನೂ ಅಧಿಕವಾಗಿ ನಮ್ಮ ಕರ್ತನು ಈ ನೊಗದಲ್ಲಿ ನಮ್ಮೊಂದಿಗೆ ಇರುವುದರಿಂದ ಅದು ಬಹು ಹಗುರವಾಗುವದು. ಆತನು ದೊಡ್ಡ ಹೊರೆ ಹೊರುವವನಾಗಿದ್ದು ನಮಗೆ ಹೊರೆಯನ್ನು ಹೊರುವುದಕ್ಕೆ ಇರುವ ಶಕ್ತಿಗಿಂತಲೂ ಹೆಚ್ಚು ಭಾರವಾದ ಜೀವನದ ಹೊರೆಯಿಂದ ಪರಿಶೋಧಿತರಾಗು ವದಕ್ಕಾಗಲಿ ಇಲ್ಲವೇ ಹೊತ್ತು ಸಾಗುವುದಕ್ಕಾಗಲಿ ನಮ್ಮನು ಬಿಡುವುದಿಲ್ಲ. ಆತನ ನೊಗವನ್ನು ತಮ್ಮ ಮೇಲೆ ತೆಗೆದುಕೊಂಡವವರೆಲ್ಲರ ಹಿತಾಸಕ್ತಿಗಳನ್ನು ಎಚ್ಚರಿಕೆಯಿಂದ ಆತನು ಗಮನಿಸುತ್ತಿರುತ್ತಾನೆ. ಅವರ ಹೊರೆಯು ಆತನ ಹೊರೆಯೇ ಮತ್ತು ಅವರ ಹಿತಾಸಕ್ತಿಗಳು ಆತನ ಹಿತಾಸಕ್ತಿಗಳೇ ಆಗಿರುವುದು. ಹೌದು, ಆತನನ್ನು ಪ್ರೀತಿಸುವವರಾದ ಕಾರಣ ಅವರಿಗೆ ಸಂಭವಿಸುವ ಸಂಗತಿಗಳೆಲ್ಲಾ ಅವರಿಗೆ ಒಳ್ಳೆಯದನ್ನು ಉಂಟುಮಾಡುವದಕ್ಕಾಗಿಯೇ ಸಂಭವಿಸುವುದು.

ಕರ್ತನು ಹೇಗೂ ಹೊರೆಹೊರುವ ದಾಸರನ್ನು ತೆಗೆದುಕೊಳ್ಳುತ್ತಿಲ್ಲವೆಂಬುದನ್ನು ನೆನಪಿನಲ್ಲಿಡೋಣ; ಆತನು ಯಾರ ಮೇಲೂ ನೊಗವನ್ನು ಹೇರುವುದಿಲ್ಲ; ಆತನು ನಮ್ಮನ್ನು ಕೇವಲ ತನಗಾಗಿ ಮತ್ತು ತನ್ನ ಸೇವೆಗೆ ಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವದಕ್ಕಾಗಿ ಆಹ್ವಾನಿಸಿ ನಂತರದಲ್ಲಿ ತನ್ನ ನೊಗವನ್ನು ನಮ್ಮ ಮೇಲೆ ಕಟ್ಟಿಡುವನು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | ದುರಾಚಾರಿಯಾದ ಹೆಂಗಸು ಪಾದಗಳಿಗೆ ಎಣ್ಣೆ ಹಚ್ಚಿದುದು; ಸಾಲಗಾರರ ದೃಷ್ಟಾಂತ | -- | -- | 7:36-50 | -- |

## ಲೂಕ 7:36-50

ಫರಿಸಾಯರಲ್ಲಿ ಒಬ್ಬನು ಆತನನ್ನು ತನ್ನ ಜೊತೆಯಲ್ಲಿ ಊಟಮಾಡಬೇಕೆಂದು ಬೇಡಿಕೊಂಡಾಗ ಆತನು ಆ ಫರಿಸಾಯನ ಮನೆಗೆ ಹೋಗಿ ಊಟಕ್ಕೆ ಒರಗಿಕೊಂಡನು. ಆಗ ಆ ಊರಲ್ಲಿದ್ದ ದುರಾಚಾರಿಯಾದ ಒಬ್ಬ ಹೆಂಗಸು ಫರಿಸಾಯನ ಮನೆಯಲ್ಲಿ ಆತನು ಊಟಕ್ಕೆ ಒರಗಿದ್ದಾನೆಂದು ಗೊತ್ತು ಹಿಡುಕೊಂಡು ಸುಗಂಧತೈಲದ ಭರಣಿಯನ್ನು ತೆಗೆದುಕೊಂಡು ಬಂದು ಹಿಂದೆ ಆತನ ಪಾದಗಳ ಬಳಿಯಲ್ಲಿ ನಿಂತುಕೊಂಡು ಅಳುತ್ತಾ ತನ್ನ ಕಣ್ಣೀರಿನಿಂದ ಆತನ ಪಾದಗಳನ್ನು ತ್ಯಾವಮಾಡಿ

ತನ್ನ ಕೂದಲಿನಿಂದ ಒರಸಿ ಅವುಗಳಿಗೆ ಮುದ್ದಿಟ್ಟು ಆ ತೈಲವನ್ನು ಹಚ್ಚಿದಳು. ಆದರೆ ಆತನನ್ನು ಊಟಕ್ಕೆ ಕರೆದ ಫರಿಸಾಯನು ಇದನ್ನು ಕಂಡು––ಇವಳು ದುರಾಚಾರಿ; ಇವನು ಪ್ರವಾದಿ ಯಾಗಿದ್ದರೆ ತನ್ನನ್ನು ಮುಟ್ಟಿದ ಈ ಹೆಂಗಸು ಇಂಥವಳೆಂದು ತಿಳುಕೊಳ್ಳುತ್ತಿದ್ದನು ಅಂದುಕೊಂಡನು. ಅದಕ್ಕೆ ಯೇಸು–– ಸೀಮೋನನೇ, ನಾನು ನಿನಗೆ ಹೇಳಬೇಕಾದ ಒಂದು ಮಾತದೆ ಅಂದಾಗ ಅವನು––ಬೋಧಕನೇ, ಹೇಳು ಅಂದನು. ಆಗ ಯೇಸು––ಒಬ್ಬ ಸಾಹುಕಾರನಿಗೆ ಇಬ್ಬರು ಸಾಲಗಾರರಿದ್ದರು; ಒಬ್ಬನು ಐನೂರು ಹಣ ಕೊಡಬೇಕಾಗಿತ್ತು. ಮತ್ತೊಬ್ಬನು ಐವತ್ತು ಹಣ ಕೊಡಬೇಕಾಗಿತ್ತು. ತೀರಿಸುವುದಕ್ಕೆ ಅವರಿಗೆ ಗತಿಯಿಲ್ಲದ್ದರಿಂದ ಆ ಇಬ್ಬರಿಗೂ ಸಾಲವನ್ನು ಬಿಟ್ಟುಬಿಟ್ಟನು. ಹಾಗಾದರೆ ಅವರಲ್ಲಿ ಯಾವನು ಆ ಸಾಹುಕಾರನನ್ನು ಹೆಚ್ಚಾಗಿ ಪ್ರೀತಿಸಾನು ಎಂದು ಕೇಳಿದ್ದಕ್ಕೆ ಸೀಮೋನನು––ಯಾವನಿಗೆ ಹೆಚ್ಚಾಗಿ ಬಿಟ್ಟನೋ ಅವನೇ ಎಂದು ಭಾವಿಸುತ್ತೇನೆ ಅಂದನು. ಯೇಸು ಅವನಿಗೆ––ನೀನು ಸರಿಯಾಗಿ ತೀರ್ಪುಮಾಡಿದಿ ಎಂದು ಹೇಳಿ ಆ ಹೆಂಗಸಿನ ಕಡೆಗೆ ತಿರುಗಿಕೊಂಡು ಸೀಮೋನನಿಗೆ ಹೇಳಿದ್ದೇನಂದರೆ––ಈ ಹೆಂಗಸನ್ನು ನೋಡಿದಿಯಾ? ನಾನು ನಿನ್ನ ಮನೆಗೆ ಬಂದಾಗ ನೀನು ನನ್ನ ಕಾಲಿಗೆ ನೀರು ಕೊಡಲಿಲ್ಲ; ಇವಳಾದರೋ ನನ್ನ ಕಾಲುಗಳನ್ನು ಕಣ್ಣೀರಿನಿಂದ ತ್ಯಾವಮಾಡಿ ತನ್ನ ತಲೆಯಕೂದಲಿನಿಂದ ಒರಸಿದಳು. ನೀನು ನನಗೆ ಮುದ್ದಿಡಲಿಲ್ಲ; ಇವಳಾದರೋ ನಾನು ಒಳಗೆ ಬಂದಾಗಿನಿಂದ ನನ್ನ ಕಾಲಿಗೆ ಮುದ್ದಿಡುವುದನ್ನು ಬಿಟ್ಟಿಲ್ಲ. ನೀನು ನನ್ನ ತಲೆಗೆ ಎಣ್ಣೆ ಹಚ್ಚಲಿಲ್ಲ; ಇವಳಾದರೋ ಸುಗಂಧ ತೈಲವನ್ನು ಕಾಲಿಗೆ ಹಚ್ಚಿದಳು. ಹೀಗಿರಲು ನಾನು ಹೇಳುವ ಮಾತೇನಂದರೆ––ಇವಳ ಪಾಪಗಳು ಬಹಳವಾಗಿದ್ದರೂ ಅವು ಕ್ಷಮಿಸಲ್ಪಟ್ಟಿವೆ. ಇದಕ್ಕೆ ಪ್ರಮಾಣ–ವೇನೆಂದರೆ ಇವಳು ತೋರಿಸಿದ ಪ್ರೀತಿ ಬಹಳ. ಆದರೆ ಯಾವನಿಗೆ ಸ್ವಲ್ಪಮಾತ್ರ ಕ್ಷಮಿಸಲ್ಪಟ್ಟಿದೆಯೋ ಅವನು ತೋರಿಸುವ ಪ್ರೀತಿಯು ಸ್ವಲ್ಪವೇ ಅಂದನು. ಆ ಮೇಲೆ ಆತನು ಅವಳಿಗೆ––ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಎಂದು ಹೇಳಿದನು. ಆತನ ಸಂಗಡ ಊಟಕ್ಕೆ ಒರಗಿಕೊಂಡವರು–ಪಾಪಗಳನ್ನು ಸಹ ಕ್ಷಮಿಸಿ–ಬಿಡುವವನು ಇವನಾರು ಎಂದು ತಮ್ಮ ತಮ್ಮೊಳಗೆ ಅಂದುಕೊಂಡರು. ಆದರೆ ಆತನು ಆ ಹೆಂಗಸಿಗೆ––ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿ ಅದೆ; ಸಮಾಧಾನದಿಂದ ಹೋಗು ಎಂದು ಹೇಳಿದನು.

# ಎರಡು ವಿಧವಾದ ಪಾಪಿಗಳು

**ರೀಪ್ರಿಂಟ್ಸ್ ಪುಟ 2625**

## ಲೂಕ 7:36–50

**"ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿ ಅದೆ;"**

ಸೀಮೋನ ಎಂಬುದು ಯೆಹೂದ್ಯರಲ್ಲಿ ಒಂದು ಸಾಮಾನ್ಯವಾದ ಹೆಸರು; ಆದುದರಿಂದ ಅಲ್ಲಿ ಇಬ್ಬರು ಸೀಮೋನರು ಇದ್ದರೆಂಬುದೂ ಅವರ ಮನೆಯಲ್ಲಿ ಯೇಸುವು ಸತ್ಕರಿಸಲ್ಪಟ್ಟಿದ್ದನೆಂಬುದೂ ಬಹು ಗಮನಾರ್ಹವೇನಲ್ಲ. ಹೀಗಿದ್ದರೂ ಈ ಎರಡು ಸತ್ಕಾರಗಳಲ್ಲಿ ಅನೇಕ ಸಮಾನವಾದ ಹೋಲಿಕೆಗಳು ಇದ್ದವೆಂಬುದು ಒಂದು ಸ್ವಲ್ಪ ವಿಚಿತ್ರವಾದ ಸಂಗತಿ; ಅದೇನೆಂದರೆ ಈ ಇಬ್ಬರ ಮನೆಯಲ್ಲಿಯೂ ನಮ್ಮ ಕರ್ತನ ಪಾದಗಳಿಗೆ ಎಣ್ಣೆ ಹಚ್ಚಲ್ಪಟ್ಟಿದ್ದವು, ಮುಂತಾದವುಗಳು. (ಮತ್ತಾಯ 26:6–13 ಹೋಲಿಸಿ ನೋಡಿ) ಈ ಎರಡು ಘಟನೆಗಳ ಮಧ್ಯೆ ಸುಮಾರು ಒಂದೂವರೆ ವರುಷಗಳು ಕಳೆದಿದ್ದು ಮತ್ತಾಯನು ಬರೆದಿರುವುದು ನಮ್ಮ ಕರ್ತನ ಮರಣಕ್ಕೆ ಸ್ವಲ್ಪ ಸಮಯದ ಹಿಂದೆ "ನನ್ನನ್ನು ಹೂಣಿಡುವುದಕ್ಕಾಗಿ ಅಭಿಷೇಕವಾಗಿರುವುದು" ಎಂದು ಭಾವಿಸಲಾಗಿರುವುದು.

ಈ ಪಾಠದಲ್ಲಿ ನಾವು ನೋಡುವುದು ಫರಿಸಾಯನಾದ ಸೀಮೋನನು ನಮ್ಮ ಕರ್ತನ ಗುಣಗಳ ಮತ್ತು ಉಪದೇಶಗಳ ವಿಷಯದಲ್ಲಿ ಬಹು ಪಾಲು ಜನರಿಗಿಂತಲೂ ಹೆಚ್ಚು ಗಣನೀಯವಾದ ರೀತಿಯಲ್ಲಿ ಪ್ರಭಾವಿತನಾಗಿದ್ದು ಹಾಗು ಅವನು ಬಹು ಔದಾರ್ಯದಿಂದ ಆತನ ಕಡೆಗೆ ಒಲವು ತೋರಿಸಿದ್ದನು. ಯೇಸುವನ್ನು ಆಹ್ವಾನಿಸಿ ಹೀಗೆ ಆತನನ್ನು ಗೌರವಿಸುವುದು ಸಂತೋಷಕರವಾದುದೆಂದು ನೆನಸಿದ್ದನು ಹಾಗು ಈ ನಜರೇತಿನವನ ಸಂಬಂಧದಲ್ಲಿ ತಾನು ಸ್ವಲ್ಪ ಅಪಕೀರ್ತಿಗೆ ಒಳಗಾಗಿದ್ದ ಸಾಧ್ಯತೆಯಿತ್ತು.

ನಮ್ಮ ಕರ್ತನು ಅವನ ಆಹ್ವಾನವನ್ನು ಅಂಗೀಕರಿಸಿ ಭೋಜನಕ್ಕೆ ಹಾಜರಾಗಿದ್ದಾಗ ಸೀಮೋನನು ಆತನನ್ನು ಆದರ–ದಿಂದಲೂ ವಿನಯದಿಂದಲೂ ಸತ್ಕರಿಸಿದ್ದನು; ಆದರೂ ಆತನ ವಿಷಯದಲ್ಲಿ ಬಹುಶಃ ಇವನು ಮೀನುಗಾರರ ಮತ್ತು ಸಾಧಾರಣ ಜನರ ಜೊತೆಯಲ್ಲಿದ್ದು ವಿಶೇಷ ಉಪಚಾರಕ್ಕೆ ಹೊಂದಿಕೊಂಡಿಲ್ಲವೆಂದು ನೆನಸಿ ತನ್ನ ಸತ್ಕಾರದಲ್ಲಿ ಆತನಿಗೆ ಅತಿ ವಿಶೇಷವಾದ ವಿನಯವನ್ನು ತೋರಲು ಹೋಗಿರಲಿಲ್ಲ. ಆದುದರಿಂದ ಸೀಮೋನನು ಆತನಿಗೆ ವಿಶೇಷ ಅತಿಥಿಗಳಂತೆ ಮುದ್ದಿನಿಂದ ವಂದಿಸಿ ಬರಮಾಡಿಕೊಂಡಿರಲಿಲ್ಲ; ಏಕೆಂದರೆ ತಾನು ಒಬ್ಬ ಫರಿಸಾಯನಾಗಿ ಸಾಧಾರಣನಾದ ಒಬ್ಬ ವ್ಯಕ್ತಿಗೆ ಅತಿಯಾದ ಗೌರವ ತೋರಿಸುವುದನ್ನು ಪೂರ್ಣವಾಗಿ ಸಹಮತಿಸಲು ಸಿದ್ಧನಿರಲಿಲ್ಲ. ಇಲ್ಲವೇ ಆ ಕಾಲದ ಅತ್ಯುತ್ತಮ ಸತ್ಕಾರಿಗಳ ಪದ್ಧತಿಯಂತೆ ಅವನು ಆತನ ಕಾಲುಗಳನ್ನು ತೊಳೆಯಲು ಸೇವಕರನ್ನು ಕಳುಹಿಸಿ ಆತನ ಪಾದರಕ್ಷೆಗಳನ್ನು ತೆಗೆಸಿರಲಿಲ್ಲ. ಈ

ಮನುಷ್ಯನು ಮತ್ತು ಆತನ ಶಿಷ್ಯರು ಈ ವಿಶೇಷ ಸತ್ಕಾರದ ಶೈಲಿಗೆ ಬಳಕೆಯಾಗಿಲ್ಲವೆಂದೂ ಮತ್ತು ತನ್ನ ಸೇವಕರು ಈ ಬೋಧಕನನ್ನು ಹೊರತುಪಡಿಸಿದರೆ ಈ ಜನರು ತಮ್ಮ ಯಜಮಾನನಿಗೆ ಸಮವಾಗಿರುವುದಿಲ್ಲವೆಂದು ಗ್ರಹಿಸಿಕೊಂಡಿರ ಹುದೆಂದು ತನ್ನೊಳಗೆ ಅಂದುಕೊಂಡಿದ್ದಿರಬಹುದು. ಆದುದರಿಂದ ಉಪಚರಿಸುವುದರಲ್ಲಿ ಅತಿಯಾದ ವಿನಯ ತೋರಿಸಲು ಹೋಗದಿದ್ದರೂ ಈ ಫರಿಸಾಯನು ಕರ್ತನನ್ನು ತನ್ನ ಮೇಜಿಗೆ ಆದರದಿಂದ ಬರಮಾಡಿಕೊಂಡು ನಿಸ್ಸಂಶಯವಾಗಿ ತಾನು ಕರ್ತನನ್ನು ಗೌರವಿಸುತ್ತಿದ್ದೇನೆಂದು ಅಂದುಕೊಂಡಿದ್ದನು; ಆದರೂ ಬಹು ಘನವಂತನಾದ ಅತಿಥಿಯನ್ನು ಸತ್ಕರಿಸುವ ಭಾಗ್ಯಹೊಂದಸಲುವಾಗಿ ತಾನು ಗೌರವಿಸುತ್ತಿದ್ದ ವ್ಯಕ್ತಿಯು ಯಾರೆಂಬುದನ್ನು ಸಾಕಷ್ಟು ಮನಗೊಂಡಿರಲಿಲ್ಲ. (ಸಾವಿರ ವರುಷದ ಆಳ್ವಿಕೆಯ ಕಾಲದ) ಪುನರುತ್ಥಾನದ ಸಮಯದಲ್ಲಿ ತನ್ನ ಅತಿಥಿಯು "ಕೃಪೆ ಮತ್ತು ಸತ್ಯಗಳಿಂದ ಕೂಡಿದವನಾದ ತಂದೆಯ ಒಬ್ಬನೇ ಕುಮಾರನು" ಎಂಬುದನ್ನು ತಾನು ಅರಿತುಕೊಂಡಾಗ ಸೀಮೋನನು ಈ ವಿಷಯವನ್ನು ಹೇಗೆ ಪರಿಗಣಿಸುವನು?

"ಅತಿಥಿ ಸತ್ಕಾರ ಮಾಡುವುದನ್ನು ಮರೆಯಬೇಡಿರಿ; ಅದನ್ನು ಮಾಡುವುದರಲ್ಲಿ ಕೆಲವರು ತಿಳಿಯದೆ ದೇವದೂತರನ್ನೂ ಸತ್ಕರಿಸಿದ್ದಾರೆ." ಎಂದು ಅಪೋಸ್ತಲನು ನಮಗೆ ಒತ್ತಾಯ ಮಾಡಿದ್ದಾನೆ. ತನ್ನ ಜನರು ತಾವು ಹೊಂದಿರುವವುಗಳ ವಿಷಯದಲ್ಲಿ ಉದಾರಿಗಳಾಗಿರಬೇಕೆಂದು ಕರ್ತನು ಆಶಿಸುತ್ತಾನೆ (ಆದರೆ ಒಣಹೆಮ್ಮೆಯಿಂದ ದುಂದುಗಾರರಾಗಬಾರದು) ಹೀಗೆ ಮತ್ತೂ ಬರೆದಿರುವುದೆಂದರೆ: "ಒಬ್ಬನು ತನ್ನ ಧನವನ್ನು ಚೆಲ್ಲಿದರೂ ಅವನಿಗೆ ವೃದ್ಧಿ; ಮತ್ತೊಬ್ಬನು ನ್ಯಾಯವಾದದ್ದನ್ನು ಬಿಗಿಹಿಡಿದರೂ ಅವನಿಗೆ ಬಡತನ." (ಜ್ಞಾನೋಕ್ತಿ 11:24) ಎಲ್ಲರೂ (ಪರಿಪೂರ್ಣತೆಯಿಂದ) ಬಿದ್ದುಹೋಗಿರುವ ಕಾರಣದಿಂದ ಪಡೆದಿರುವ ಕೆಟ್ಟದಾದ ನಮ್ಮ ಸ್ವಾರ್ಥಭಾವದ ವಿಷಯವಾಗಿ ಅರಿತುಕೊಂಡವರಾಗಿ ಮತ್ತು, ಕರ್ತನ ಮಾತಿನ ಅನುಸಾರ, ಹಂತ ಹಂತವಾಗಿ ಇವುಗಳನ್ನು ಜಯಿಸುವಂಥವರಾಗಿ ಪರಲೋಕದಲ್ಲಿರುವ ನಮ್ಮ ತಂದೆಯಂತೆ ಬಹು ಉದಾರಿ–ಗಳಾಗುವುದನ್ನು ಕಲಿತುಕೊಳ್ಳುವುದು ನಮ್ಮ ಇಂದಿನ ಈ ಪಾಠದ ಒಂದು ಅಂಶವಾಗಿದೆ.

ಕೇವಲ "ದೇವರ ರಾಯಭಾರಿಗಳೂ" ಮಾತ್ರವಾಗಿರದೆ "ಕ್ರಿಸ್ತನ ದೇಹದ ಅಂಗಗಳೂ" ಆಗಿದ್ದು ನಮ್ಮ ಕರ್ತನನ್ನು ನಿಜವಾಗಿಯೂ ಪ್ರತಿನಿಧಿಸುವ ನಮ್ಮ ಸಹೋದರರ ವಿಷಯದಲ್ಲಿ ನಾವು ವಿಶೇಷವಾಗಿ ಉದಾರಿಗಳೂ ಸತ್ಕರಿಸುವವರೂ ಆಗಿರೋಣ.

ಇಲ್ಲಿ ತಿಳಿಸಲಾಗಿರುವ "ಆ ಊರಿನಲ್ಲಿದ್ದ ...ಹೆಂಗಸು" ಒಬ್ಬ ಸಾಧಾರಣ ಗುಣದವಳಾಗಿದ್ದಳೆಂಬುದು ಸ್ಪಷ್ಟವಾಗಿದ್ದು ಎಲ್ಲಾ ಜನರಿಗೂ ತಿಳಿದವಳಾಗಿದ್ದರೂ ನಮ್ಮ ಕರ್ತನಿಗೂ ಮತ್ತು ಅತನ ಶಿಷ್ಯರಿಗೂ, ಅವರು ಅಲ್ಲಿ ವಾಸಿಸದ ಕಾರಣ, ಅವಳನ್ನು ತಿಳಿಯದಿರಬಹುದಾಗಿತ್ತು. ಆ ಹೆಂಗಸಿನ ಹಿಂದಿನ ಜೀವಿತವು ಏನೇ ಆಗಿರಬಹುದಾಗಿದ್ದರೂ ಆಕೆಯು ತನ್ನ ಹೃದಯದಲ್ಲಿ ಕುಂದಿಹೋದವಳಾಗಿದ್ದು ಒಂದು ಉತ್ತಮವಾದ ಜೀವಿತವನ್ನು ನಡೆಸುವ ಬಯಕೆಯುಳ್ಳವಲಾಗಿದ್ದಳು. ಆಕೆಯು ದಿವ್ಯ ಬೋಧಕನಾದ ಯೇಸುವಿನ ವಿಷಯವಾಗಿ ಕೇಳಿದವಳಾಗಿದ್ದಳು. ಯೇಸುವು ಫರಿಸಾಯರಂತಾಗಿರದೆ (ಪರಿಪೂರ್ಣತೆಯಿಂದ) ಬಿದ್ದುಹೋದವರೊಡನೆ ಮಾತನಾಡಿ ಅವರನ್ನು ಉತ್ತೇಜನ–ಪಡಿಸಿ ಸಹಾಯ ಮಾಡಲು ಅಸಡ್ಡೆಮಾಡುತ್ತಿರಲಿಲ್ಲ. ಆಕೆಯು ಕರ್ತನ ಬಳಿಗೆ ಪ್ರಾರ್ಥನಾಪೂರ್ವಕವಾಗಿ ಹೋಗಿ ಕ್ಷಮೆಯನ್ನು ಬೇಡಿ ತನ್ನ ಜೀವಿತವನ್ನು ಮರು ಆರಂಭಮಾಡಿಕೊಂಡು ಮುಂದೆ ಬಹು ನಿಷ್ಠೆಯುಳ್ಳ ಸ್ಥಿರವಾದ ಜೀವಿತವನ್ನು ನಡೆಸುವ ಬಯಕೆಯುಳ್ಳವಳಾಗಿದ್ದಳು. ಈ ವಿಷಯದಲ್ಲಿ ಹೇಗೆ ಮುಂದುವರಿಯಬೇಕೆಂಬುದು ಆಕೆಗೆ ತಿಳಿದಿರಲಿಲ್ಲ; ತನ್ನ ವಿಷಯವಾಗಿ ಏನು ಹೇಳಿಕೊಳ್ಳಬೇಕೆಂಬುದೂ ಆಕೆಗೆ ತಿಳಿದಿರಲಿಲ್ಲ; ತಾನು ಕೇವಲ ಒಂದು ಕಿರು ಕಾಣಿಕೆಯನ್ನು ತೆಗೆದುಕೊಂಡು ಆತನು ಆ ಕಾಲದ ಪದ್ಧತಿಯಂತೆ ಊಟಕ್ಕೆ ಒರಗಿಕೊಂಡಿರಲು ಆತನ ಕಾಲುಗಳು ತನಗೆ ಸುಲಭವಾಗಿ ಎಟುಕುವಂತಿದ್ದು ತಾನು ತಂದಿದ್ದ ಶ್ರೇಷ್ಠವಾದ ಎಣ್ಣೆಯನ್ನು ಆತನ ಕಾಲುಗಳಿಗೆ ಹಚ್ಚುವ ಸಾಹಸಮಾಡಲು ಮುಂದಾಗಿದ್ದಳು. ಒಂದು ಮಾತನ್ನೂ ಹೇಳದೆ ತಾನು ನುಡಿಯಬೇಕೆಂದಿದ್ದುದನ್ನು ಪೂರ್ಣವಾಗಿ ತನ್ನ ಹೃದಯದಲ್ಲಿ ತುಂಬಿಕೊಂಡು ಆಕೆಯು ಕರ್ತನ ಪಾದಗಳನ್ನು ಸಮೀಪಿಸಿದಾಗ ಆಕೆಯ ಕಣ್ಣೀರು ಆತನ ಪಾದದ ಮೇಲೆ ತೊಟ್ಟಿಕ್ಕಿದ್ದವು. ತಾನು ಕ್ಷಮೆ ಹೊಂದಿ ಮರುಹೊಂದಾಣಿಕೆಗೆ ಬರುವ ವಿಷಯವಾಗಿ ತನ್ನ ಹೃದಯದಲ್ಲಿನ ನಿಜವಾದ ಹಂಬಲಿಕೆಯನ್ನು ತನ್ನ ನುಡಿಯು ಅರುಹುವುದಕ್ಕಿಂತಲೂ ಹೆಚ್ಚಾಗಿ ಆಕೆಯ ಮನೋಭಾವವನ್ನು ಈ ಕಣ್ಣೀರು ವಿಶದಪಡಿಸುತ್ತಿದ್ದುದನ್ನು ಆತನು ತಿಳಿದು ಕೊಂಡಿದ್ದಿರಬೇಕು.

ನಮ್ಮ ಅಗತ್ಯತೆಗಳ ಪೂರೈಕೆಯ ವಿಷಯವಾಗಿ ಮಾಡಿರುವ ನಮ್ಮ ಕರ್ತನ ಏರ್ಪಾಡುಗಳು ಎಷ್ಟು ಕರುಣೆಯುಳ್ಳವುಗಳು ಮತ್ತು ಗಮನ ನೀಡಿರುವಂಥವುಗಳೆಂದರೆ ನಾವು ಆತನ ಪಾದಗಳ ಬಳಿಗೆ ಬಂದು ಪ್ರಾಯಶ್ಚಿತ್ತವಾಗಿ ಕ್ಷಮೆಯಾಚಿಸಲು ನಾವು ಬೇರೊಬ್ಬರ ಮೂಲಕವಾಗಿಯೋ ಅಥವಾ ನಮ್ಮ ವಿಜ್ಞಾಪನೆಯನ್ನು ವಿಧಿವತ್ತಾದ ಭಾಷಾವಿಧಾನದಲ್ಲಿ ರೂಪಿಸಿಕೊಂಡು ಬರಬೇಕಾಗಿಯೋ ಇರುವುದಿಲ್ಲ; ಆತನು ನಮ್ಮ ಹೃದಯಗಳಲ್ಲಿರುವುನ್ನು ಗ್ರಹಿಸಿಕೊಂಡುಕೊಂಡು ನಮ್ಮ ಕಣ್ಣೀರುಗಳನ್ನು ಮತ್ತು ನಾವು ನಮ್ಮನ್ನು ತಿದ್ದಿಕೊಂಡು "ತನ್ನ ದೇಹದ ಅಂಗಗಳಾದವರ" ಸೇವೆಯಲ್ಲಿ ಪ್ರಾಯಶ್ಚಿತ್ತವಾಗಿ ಮಾಡುವ ಅತ್ಯಲ್ಪವಾದ ಪರಿಶ್ರಮಗಳನ್ನೂ ಅಂಗೀಕರಿಸಿಕೊಳ್ಳುವನು. ಮತ್ತು ಆತನು ಕ್ಷಮಾಪಣೆಯ ಸಂದೇಶವನ್ನು ಕಳುಹಿಸುವುದರಲ್ಲಿ ವಿಳಂಬ–ಮಾಡಿದರೂ ಅದು ನಮ್ಮ ಹೃದಯಗಳಲ್ಲಿ ಪ್ರಾಯಶ್ಚಿತ್ತಭಾವ ಮತ್ತು ನಂಬಿಕೆಯು ಆಳವಾಗಿ ಬೇರೂರಮಾಡ ಸಲುವಾಗಿರುವದು.

ಆ ಸಮಯಕ್ಕೆ ಯೇಸುವು ಆಕೆಗೆ ಗಮನಕೊಡದಂತೆ ಕಾಣುತ್ತದೆ ಮತ್ತು ಪ್ರಾರ್ಥನಾಪೂರ್ವಕವಾದ ತನ್ನ ಉದ್ದೇಶವನ್ನು ಆತನು ಅಪಾರ್ಥ ಮಾಡಿಕೊಂಡಿರಬಹುದೋ ಅಥವಾ ಇಲ್ಲವೋ ಎಂದು ಆಕೆಯು ತನ್ನಲ್ಲಿ ಪ್ರಶ್ನಿಸಿಕೊಂಡಿರಲೂಬಹುದು. ಆದರೆ

ತನ್ನ ಹೃದಯದಲ್ಲಿ ತುಂಬಿರುವದು ಆಕೆಯ ಇನ್ನೂ ಹೆಚ್ಚಿನ ಕಣ್ಣೀರಿನ ಮೂಲಕವಾಗಿ ಹೊರಬಂದಿತ್ತು ಮತ್ತು ಆಕೆಯು ಮೃದುವಾಗಿ ಆತನ ಪಾದಗಳನ್ನು (ಕಣ್ಣೀರಿನಿಂದ) ಒರೆಸಿ ಅವುಗಳಿಗೆ ಲೇಪನದ್ರವ್ಯವನ್ನು ಹಚ್ಚಿ ಸವರಿದ್ದಳು. ಈ ಮಧ್ಯೆ ಆ ಫರಿಸಾಯನು––ಇಂದು ನಾನು ಯೇಸುವನ್ನು ಆಮಂತ್ರಿಸಿದ್ದು ಬಹು ಅದೃಷ್ಟಕರವಾಗಿರುವುದು ಮತ್ತು ಈ ಹೆಂಗಸು ಬಂದದ್ದೂ ಅದೃಷ್ಟಕರವಾಗಿರುವುದು ತನ್ನ ಬಳಿಯಲ್ಲಿರುವವರ ಹೃದಯ–ವನ್ನು ತಿಳಿದುಕೊಳ್ಳಲು ಯೇಸುವಿಗಿರುವ ಸಾಮರ್ಥ್ಯವನ್ನು ಪರೀಕ್ಷಿಸಿ ಪ್ರಮಾಣೀಕರಿಸಲು ಇಲ್ಲಿ ಒಂದು ಅವಕಾಶ ಒದಗಿಬಂದಿರುವುದೆಂದು ತನ್ನೊಳಗೆ ಅಂದುಕೊಳ್ಳುತ್ತಿದ್ದನು. ಈತನು ಒಬ್ಬ ಪ್ರವಾದಿಯಾಗಿದ್ದರೆ, ದೇವರಿಂದ ವಿಶೇಷವಾದ ಶಕ್ತಿಯನ್ನು ಮತ್ತು ಗ್ರಹಿಸಿಕೊಳ್ಳುವಿಕೆಯ ವರವನ್ನು ಪಡೆದವನಾಗಿದ್ದರೆ ಈ ಹೆಂಗಸಿನ ನಡತೆಯ ವಿಷಯವಾಗಿ ಈತನಿಗೆ ಗೊತ್ತಾಗಿರುತ್ತಿತ್ತು ಆದರೆ ಈತನಿಗೆ ಆಕೆಯ ನಡತೆಯ ವಿಷಯವಾಗಿ ತಿಳಿಯದಿರುವುದು ಸ್ಪಷ್ಟ. ಅದುದರಿಂದ ತನ್ನ ಪಾದಗಳಿಗೆ ಹಚ್ಚಲು ಬಿಟ್ಟಿರುತ್ತಾನೆ ಮತ್ತು ಇದು ಈತನು ಒಬ್ಬ ಪ್ರವಾದಿಯಲ್ಲವೆಂಬುದಕ್ಕೆ ಒಂದು ಸಾಕ್ಷಿಯಾದಂತೆ ತೋರುತ್ತದೆ.

ಆದರೆ ಯೇಸುವು ಅಲ್ಲಿ ನಡೆಯತ್ತಿರುವುದೆಲ್ಲವುಗಳನ್ನು ಪೂರ್ಣವಾಗಿ ಅರಿತವನಾಗಿ ಮತ್ತು ತನ್ನ ಪಾದಗಳ ಬಳಿಯಲ್ಲಿದ್ದ ಆ ಬಡ ಹೆಂಗಸಿನ ಹೃದಯದ ವಿಷಯವಾಗಿಯೂ ತನ್ನನ್ನು ಸತ್ಕರಿಸುತ್ತಿದ್ದ ಆತ್ಮತೃಪ್ತನಾದ ಆ ಫರಿಸಾಯನ ವಿಷಯ–ವಾಗಿಯೂ ಸ್ಪಷ್ಟವಾದ ತಿಳಿವಳಿಕೆಯಿಂದ ಕೂಡಿದವನಾಗಿ ತಾನು ಅಲ್ಲಿದ್ದವರೆಲ್ಲರ ಮುಂದೆ ಒಂದು ವಿಶೇಷವಾದ ಸತ್ಯವನ್ನು ಪ್ರಕಟಮಾಡಿ ಹೇಗೆ ಇವರಿಬ್ಬರಿಗೂ ಒಳ್ಳೆಯದನ್ನು ಮಾಡಬಹುದೆಂಬ ಒಂದು ವಿಧಾನದ ಬಗ್ಗೆ ಯೋಜನೆಯನ್ನು ಹಾಕುತ್ತಿದ್ದನು. ಆದುದರಿಂದ ಆತನು ಸೀಮೋನನಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನೆಂದರೆ ಒಬ್ಬಾನೊಬ್ಬ ಸಾಹುಕಾರನಿಗೆ ಇಬ್ಬರು ಸಾಲಗಾರರಿದ್ದರು, ಒಬ್ಬನದು ದೊಡ್ಡ ಮೊತ್ತದ ಸಾಲ ಮತ್ತೊಬ್ಬನದು ಒಂದು ಸಣ್ಣ ಮೊತ್ತದ ಸಾಲ. ಮತ್ತು ಅವರು ಸಾಲವನ್ನು ಪೂರ್ಣವಾಗಿ ತೀರಿಸಲು ಅಸಮರ್ಥರಾಗಿದ್ದ ಕಾರಣ ಆತನು ಕೂಡಲೇ ಸಂತೋಷದಿಂದ ಅವರಿಬ್ಬರನ್ನು ಕ್ಷಮಿಸಿಬಿಟ್ಟನು. ಆನಂತರ ನಮ್ಮ ಕರ್ತನು ಈ ಸಣ್ಣ ಸಾಮ್ಯದ ಮೂಲಕವಾಗಿ ತನ್ನ ಪಾಠವನ್ನು ಸೂಚಿಸಿ ಹೇಳಿದ್ದನು. ಹೇಗೆಂದರೆ ಕ್ಷಮಿಸಲ್ಪಟ್ಟ ಈ ಇಬ್ಬರಲ್ಲಿ ಯಾರು ಸಾಹುಕಾರನ ಔದಾರ್ಯವನ್ನು ಅತಿಯಾಗಿ ಪ್ರಸಂಶಿಸುವನೆಂದು ಕೇಳಲು. ಸೀಮೋನನು ಈ ಸಾಮ್ಯದ ಒಳಾರ್ಥವನ್ನು ಪೂರ್ಣವಾಗಿ ಗ್ರಹಿಸಿದವನಾಗಿ ಯಾವನಿಗೆ ಹೆಚ್ಚಾದ ಸಾಲವು ಕ್ಷಮಿಸಲ್ಪಟ್ಟಿರುವುದೋ ನಿಸ್ಸಂದೇಹವಾಗಿ ಅವನೇ ಬಹು ಅಧಿಕವಾಗಿ ಪ್ರಸಂಶಿಸುವನೆಂದು ಹೇಳಲು ನಮ್ಮ ಕರ್ತನು ಈ ಉತ್ತರವನ್ನು ಒಪ್ಪಿಕೊಂಡನು. ಆನಂತರ ಆ ಹೆಂಗಸಿನ ಕಡೆಗೆ ಗಮನವನ್ನು ಸೆಳೆದು ಸೀಮೋನನಿಗೆ ಆತನು ತನ್ನನ್ನು ಊಟಕ್ಕೆ ಆಮಂತ್ರಿಸುವಷ್ಟು ಕರುಣೆಯುಳ್ಳವನಾಗಿ ತನ್ನ ಕಡೆಗೆ ಗಮನನೀಡಿದ್ದನ್ನು ಪ್ರಸಂಶಿಸಿದ್ದಾಗ್ಯೂ ಆ ಹೆಂಗಸು ಇನ್ನೂ ಹೆಚ್ಚಿನ ಗಮನನೀಡಿದವಳಾಗಿ ಇನ್ನೂ ಅಧಿಕವಾದ ಗೌರವವನ್ನು ಗುರುತಾಗಿ ತೋರಿಸಿದ್ದು, ಇವುಗಳು ಇವರಿಬ್ಬರಲ್ಲಿದ್ದ ಪ್ರೀತಿಗೆ ಪ್ರಮಾಣವಾಗಿದ್ದಾಗ್ಯೂ ಆ ಹೆಂಗಸು ಹೆಚ್ಚಾಗಿ ಪ್ರೀತಿಸಿದ್ದಳು ಎಂಬುದನ್ನು ನೆನಪುಮಾಡಿಕೊಟ್ಟಿದ್ದನು. ಇದರಿಂದ ಸ್ಪಷ್ಟವಾಗಿ ತಿಳಿಯುವುದೆಂದರೆ ಪಾಪದ ವಿಷಯವಾಗಿ ಹೆಚ್ಚಾಗಿ ಮನಗೊಂಡು ಅದನ್ನು ನಿವಾರಣೆಮಾಡಿಕೊಳ್ಳುವ ಬಯಕೆಯು ಹೆಚ್ಚಿದಷ್ಟೂ ಪ್ರೀತಿಯೂ ಅಲ್ಲಿ ಹೆಚ್ಚಾಗಿ ವೃದ್ಧಿಯಾಗಿತ್ತೆಂಬುದು.

ಆದಾಗ್ಯೂ ಈ ಮಾತಿನ ಒಂದು ಅರ್ಥದಲ್ಲಿ ಎಲ್ಲರೂ ಪಾಪಿಗಳಾಗಿದ್ದು ದೇವರ ಮಹಿಮೆಯನ್ನು ಹೊಂದದೆ ಹೋಗಿರುವರು. ಮತ್ತು ಪಾಪ ನಿವಾರಣೆಯಾಗದಿದ್ದಲ್ಲಿ ಅವರಿಗೆ ಯಾವ ನಿರೀಕ್ಷೆಯೂ ಇರುವುದಿಲ್ಲ. ಹೀಗಿದ್ದರೂ ಈ ಫರಿಸಾಯನು ಆ ಹೆಂಗಸಿಗಿಂತಲೂ ಒಂದು ಭಿನ್ನವಾದ ಸ್ಥಿತಿಯಲ್ಲಿದ್ದನು; ಏಕೆಂದರೆ ಧರ್ಮಶಾಸ್ತ್ರಸಂಬಂಧವಾದ ಯೆಹೂದ್ಯರ ಒಡಂಬಡಿಕೆಯಾನುಸಾರ ಆತನು ಆಗಲೇ ಒಂದು ಸಾಂಕೇತಿಕರೂಪದಲ್ಲಿ ನೀತಿವಂತನೆಂಬ ನಿರ್ಣಯ ಹೊಂದಿರುವ ಸ್ಥಿತಿಯಲ್ಲಿದ್ದು ದೈವವಿಧಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವ ಜೀವಿತದ ಮೂಲಕವಾಗಿ ಆ ಸ್ಥಿತಿಯನ್ನು ಕಾಪಾಡಿಕೊಂಡು ಬಂದಿದ್ದನು. ಇದಕ್ಕೆ ಬದಲಾಗಿ ಆ ಹೆಂಗಸು ಅದೇ ಒಡಂಬಡಿಕೆಯಲ್ಲಿದ್ದರೂ ಬಹಿಷ್ಕೃತ ಜೀವಿತವನ್ನು ನಡೆಸುವುದರ ಮೂಲಕ ಅದರ ನಿಯಮವಿಧಿಗಳನ್ನು ಬಹಿರಂಗವಾಗಿ ಉಲ್ಲಂಘನೆ ಮಾಡಿದವಳಾಗಿ ಜನಾಂಗವಾಗಿ ಆಕೆಗೆ ದೊರೆತ ಸಾಂಕೇತಿಕರೂಪದಲ್ಲಿನ ನೀತಿನಿರ್ಣಯದ ವಿಷಯವಾಗಿ ಆಸಕ್ತಿಯನ್ನು ಕಳಕೊಂಡಿದ್ದಳು; ಮತ್ತು ಈ ಮೂಲಕವಾಗಿ ಇದರ ಒಂದು ವಿಶಾಲ ಅರ್ಥದಲ್ಲಿ ಆಕೆ ಪಾಪಿಯಾಗಿದ್ದಳು. ಸೀಮೋನನಿಗೆ ತಾನು ಆಜ್ಞಾವಿಧಿಗಳನ್ನು ಕೈಗೊಳ್ಳಲು ಯತ್ನಿಸಿದ್ದರೂ ಅದನ್ನು ಪರಿಪೂರ್ಣವಾಗಿ ಕೈಗೊಳ್ಳುತ್ತಿಲ್ಲವೆಂದೂ ಆತನು ಕಾಲಕಾಲಕ್ಕೂ ಅನೇಕ ವಿಧದಲ್ಲಿ ಅವುಗಳನ್ನು ಉಲ್ಲಂಘಿಸುತ್ತಿರುವುದಾದರೂ ಆ ಹೆಂಗಸಿನಂತೆ ತಾನು ಮನಃಪೂರ್ವಕವಾಗಿ ಆಜ್ಞಾವಿಧಿಗಳನ್ನು ಉಲ್ಲಂಘನೆ ಮಾಡುತ್ತಿಲ್ಲವೆಂಬುದನ್ನು ಬಹು ಚೆನ್ನಾಗಿ ತಿಳಿದಿದ್ದನು. ಹೀಗಿರಲು ಈ ಮಾತಿನ ಅರ್ಥದಲ್ಲಿ ದೊಡ್ಡ ಪಾಪ ಮತ್ತು ಸಣ್ಣ ಪಾಪಗಳ ನಡುವೆ ಅಗಾಧವಾದ ವ್ಯತ್ಯಾಸವಿತ್ತು. ಹೀಗಾಗಿಯೂ ಇವರಿಬ್ಬರಿಗೂ ರಕ್ಷಕನ ಅಗತ್ಯವಿದ್ದಿತು ಮತ್ತು ಆ ಫರಿಸಾಯನು ಇದರ ಸತ್ಯಾರ್ಥವನ್ನು ಅರಿತಿದ್ದಲ್ಲಿ ಆ ಹೆಂಗಸಿನಂತೆಯೇ ತನಗೂ ರಕ್ಷಕನ ಅಗತ್ಯವಿರುತ್ತಿತ್ತು. ಏಕೆಂದರೆ ಆಜ್ಞಾಸಂಬಂಧವಾದ ಒಡಂಬಡಿಕೆಗೆ ಆತನಿಗೆ ನಿತ್ಯಜೀವವನ್ನು ನೀಡಲು ಸಾಧ್ಯವಿರುತ್ತಿರಲ್ಲಿಲ್ಲ. ಇದನ್ನು ಪಡಕೊಳ್ಳಲು ಆತನು ತನ್ನ ಪಾಪವನ್ನು ಒಪ್ಪಿಕೊಂಡು ಪಾಪ ಕ್ಷಮೆಯನ್ನು ಮತ್ತು ಪಾಪದ ಮತ್ತು ಅದರ ದಂಡನೆಯಾದ ಮರಣದಿಂದ ರಕ್ಷಣೆಯನ್ನು ತನ್ನ ಅತಿಥಿಯಾಗಿ ಒಪ್ಪಿಕೊಂಡು ಗೌರವಿಸುತ್ತಿದ್ದ ಈ ರಕ್ಷಕನಿಂದ ಒಂದು ಬಳುವಳಿಯಾಗಿ ಅಂಗೀಕರಿಸಬೇಕು.

ಆನಂತರ ಯೇಸುವು ಆ ಹೆಂಗಸಿನ ಕಡೆಗೆ ತಿರಿಗಿಕೊಂಡು "ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ" ಎಂದು ಹೇಳಿದನು. ಆಕೆಗೆ ಇದು ಎಂಥಾ ಮಾತುಗಳಾಗಿರಬಹುದು! ಆಕೆಯ ಪ್ರಾರ್ಥನೆಯು ಉತ್ತರಿಸಲ್ಪಟ್ಟಿತ್ತು. ಆ ಪ್ರಾರ್ಥನೆಯು ಆಕೆಯ ಹೃದಯದಿಂದ ಹುಟ್ಟಿ ಕಣ್ಣೀರು ಮತ್ತು ಸುಗಂಧಲೇಪನದ್ರವ್ಯಗಳ ಮೂಲಕ

ವ್ಯಕ್ತವಾಗಿ ಅದು ಕೇಳಲ್ಪಟ್ಟು ಆಕೆಯು ಕ್ಷಮಿಸಲ್ಪಟ್ಟವಳಾಗಿ ಆಕೆಯ ಹಿಂದಿನ ಪಾಪಗಳೆಲ್ಲವೂ ಎಂದೆಂದಿಗೂ ಅಳಿಸಲ್ಪಟ್ಟಿರುವುದಾಗಿ ಎಣಿಸಲ್ಪಟ್ಟಿತ್ತು. ಎಷ್ಟು ಕೃತಜ್ಞಳೆಂದು ಆಕೆಯು ತನ್ನನ್ನು ಭಾವಿಸಿಕೊಂಡಿರಬೇಕು! ಹೀಗಿರುವಲ್ಲಿ ನಾವು ಈ ವರೆಗೂ ತಿಳುಕೊಂಡಂತೆ, ಬಡ ಸೀಮೋನನು–ಕರ್ತನೇ ನಾನೂ ಸಹ ಪಾಪಿಯೇ ಮತ್ತು ನಾನು ಈ ಹೆಂಗಸಿಗಿಂತ ಕಡಿಮೆ ಪ್ರೀತಿಸಿದ್ದರೂ ನನಗೂ ಕ್ಷಮಾಪಣೆ ಹೊಂದುವ ಅಗತ್ಯವಿರುವುದು ಮತ್ತು ನನ್ನ ಪಾಪಗಳ ಕ್ಷಮಾಪಣೆಯಾಗಿ ನಾನೂ ನಿನ್ನ ಹಿಂಬಾಲಕರಲ್ಲಿ ಒಬ್ಬನಾಗಿ ಎಣಿಸಲ್ಪಡುವವನಾಗುವಂತೆ ಪ್ರಾರ್ಥಿಸುತ್ತೇನೆಂದು ಹೇಳುವ ಹಂತಕ್ಕೆ ತಲುಪಿರಲಿಲ್ಲ. ಆತನಿಗೆ ಹೆಸರಿಗಾಗಿರುವ ಸಭೆಯಲ್ಲಿ ಒಂದು ಧಾರ್ಮಿಕ ಸ್ಥಾನಮಾನಗಳಿದ್ದುದು ಮತ್ತು ಪರಿಶುದ್ಧತೆಯುಳ್ಳವನೆಂದು ತೋರ್ಪಡಿಸಿ ಕೊಳ್ಳುತ್ತಿದ್ದುದು ಆತನ ದಾರಿಗೆ ಅಡ್ಡ ಬಂದು ಆತನು ದೇವರ ಕೃಪೆಯನ್ನು ಅಂಗೀಕರಿಸಿಕೊಂಡು ಪಾಪಗಳ ಕ್ಷಮೆಯನ್ನು ಹೊಂದಲು ತಡೆಯುಂಟುಮಾಡಿತ್ತೆಂದು ತೋರುತ್ತದೆ. ಮತ್ತು ಅಲ್ಲಿಂದೀಚೆಗೆ ಹೀಗೆಯೇ ಇರುವುದು. ನೈತಿಕ ಜೀವನ ನಡೆಸುತ್ತಿರುವವರು ಸ್ಪಷ್ಟವಾಗಿ ನೀತಿಮಾರ್ಗದಲ್ಲಿ ನಡೆಯಲು ಯತ್ನಿಸುತ್ತಿದ್ದವರಾಗಿ ಕರ್ತನಾದ ಯೇಸು ಕ್ರಿಸ್ತನಲ್ಲಿರುವ ಪಾಪಕ್ಷಮೆಯನ್ನು ಅಂಗೀಕರಿಸಲು, ಬಹು ಅಜಾಗರೂಕತೆಯಿಂದ ಜೀವನ ನಡೆಸುತ್ತಿರುವವಗಿಂತಲೂ, ಬಹು ಅಲ್ಪವಾಗಿ ಸಿದ್ಧರಿರುವುದನ್ನು ಆಗಾಗ್ಗೆ ಎಷ್ಟುಸಾರಿ ನೋಡುತ್ತಿರುವೆವು. ಈ ಬಹು ಅಜಾಗರೂಕತೆಯಿಂದ ಜೀವನ ನಡೆಸುತ್ತಿರುವವರಾದ ಇವರಲ್ಲಿ ತಮ್ಮ ತಪ್ಪಿನ ಸ್ಥಿತಿಯ ಅರಿವುಂಟಾದವರು ಎಚ್ಚೆತ್ತವರಾಗಿ ಕರ್ತನ ಬಳಿಗೆ ಬಂದು ಅಧಿಕವಾಗಿ ಕುಗ್ಗಿದವರಾಗಿಯೂ ಶ್ರದ್ಧೆಯುಳ್ಳವ ರಾಗಿಯೂ ಹೆಚ್ಚಾದ ನಂಬಿಕೆಯನ್ನು ತೋರ್ಪಡಿಸಿಕೊಂಡವರಾಗಿ ಆತನನ್ನು ಬಯಸುವ ಪರಿಣಾಮವಾಗಿ ಅವರಿಗಿರುವುದು ಆತನ ಬಗ್ಗೆ ಹೆಚ್ಚಾದ ಪ್ರೀತಿ!

ಹೀಗಿದ್ದರೂ ಕ್ಷಮೆಯನ್ನು ಕೇಳಿಕೊಂಡು ಯೇಸುವಿನ ಹಿಂಬಾಲಕನಾಗಲು ಸೀಮೋನನು ವಿಫಲನಾದ ಕಾರಣ "ನರಕದ" ದಂಡನೆ ಮುಂತಾದುದನ್ನು ಹೊಂದಿದನೆಂದು ತಿಳಿಸಲಾಗಿಲ್ಲ; ಬದಲಾಗಿ ಆತನು ಕೇವಲ ತನ್ನ ಜನಾಂಗದವರ (ಪೂರ್ವ ಕಲ್ಪಿತಾಭಿಪ್ರಾಯಗಳಿಂದಲೂ ಮತ್ತು ತಪ್ಪಾದ ಮನುಷ್ಯ ಸಂಪ್ರದಾಯಗಳ ಮೂಲಕವಾಗಿ ಕುರುಡಾಗಿದ್ದ) ಮಾರ್ಗವನ್ನು ಅನುಸರಿಸಿದ್ದನು. ಯೇಸುವನ್ನು ತಿರಸ್ಕರಿಸಿದ್ದು ಅವರು ಕ್ರಿಸ್ತನ ರಾಜ್ಯದಲ್ಲಿ ಸಹ–ಬಾಧ್ಯರಾಗುವ ಭಾಗ್ಯವನ್ನು ಕಳಕೊಂಡವರಾಗಿ ಮತ್ತು ಜನಾಂಗವಾಗಿ ತಿರಸ್ಕೃತರಾಗಿ ಸಾವಿರ ವರುಷದ (ಆಳ್ವಿಕೆಯ) ಕಾಲವು ಆರಂಭವಾಗುವವರೆಗೂ ಅವರು ದೇವಾನುಗ್ರಹವನ್ನು ಕಳಕೊಳ್ಳುವಂತಾಗಿತ್ತು. ಆನಂತರ, ಅಪೋಸ್ತಲನು ಸ್ಪಷ್ಟವಾಗಿ ತೋರಿಸಿಕೊಟ್ಟಿರುವಂತೆ, ಅವರ ಕುರುಡುತನವು ತೆಗೆದುಹಾಕಲ್ಪಟ್ಟು ಸತ್ಯದ ಜ್ಞಾನವನ್ನು ಬಹು ಸ್ಪಷ್ಟವಾಗಿ ತಿಳಿದುಕೊಳ್ಳುವಂತೆ ಆಶೀರ್ವದಿಸಲ್ಪಡುವರು. ಆಗ ಕರ್ತನು (ಹೇಳಿರುವಂತೆ) ಅವರಿಗೆ "ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವನ್ನು ಸುರಿಸುವೆನು. ತಾವು ಇರಿದವನನ್ನು ದಿಟ್ಟಿಸಿ ನೋಡುವರು; ಇದ್ದೊಬ್ಬ ಮಗನನ್ನು ಕಳೆದುಕೊಂಡಂತೆ ಅವನಿಗಾಗಿ ಗೋಳಾಡುವರು." ಅಲ್ಲಿ ಲೇಪನದ್ರವ್ಯವನ್ನು ತಂದಿದ್ದ ಆ ಹೆಂಗಸಿನಂತೆ ಅವರು ಕಣ್ಣೀರಿಡುವರು; ದೇವರು ಪ್ರಭಾವ ಹೊಂದಿದ ಕ್ರಿಸ್ತನ ಮೂಲಕವಾಗಿ ಅವರನ್ನು ಕರುಣಿಸಿ ಅವರ ಪಾಪಗಳನ್ನು ಕ್ಷಮಿಸಿಬಿಡುವನು. ಆನಂತರ ನಿತ್ಯಜೀವಕ್ಕಾಗಿ ಅವರ ಪರೀಕ್ಷೆಯು ಆರಂಭವಾಗುವದು. – ರೋಮಾ 11:25–32; ಜೆಕರ್ಯ 12:10 ನೋಡಿ.

ಆ ಹೆಂಗಸಿನ ಪಾಪಗಳು ಕ್ಷಮಿಸಲ್ಪಟ್ಟವೆಂಬ ನಮ್ಮ ಕರ್ತನ ಹೇಳಿಕೆಯಿಂದ ಆ ಮೇಜಿನ ಬಳಿಯಲ್ಲಿದ್ದ ಇತರ ಅತಿಥಿಗಳು ವಿಶೇಷವಾಗಿ ಆಘಾತಕ್ಕೊಳಗಾಗಿದ್ದರು. ನುಡಿಯುತ್ತಿದ್ದವನು ದೇವಕುಮಾರನಾದ ಮೆಸ್ಸೀಯನೆಂಬುದನ್ನು ಅವರು ಗ್ರಹಿಸದ ವರಾಗಿ ಈ ಮಾತುಗಳ ಔಚಿತ್ಯವನ್ನು ಪ್ರಶ್ನಿಸುವವರಾಗಿದ್ದರು, ಆದರೆ ನಮ್ಮ ಕರ್ತನು ಈ ಮಾತುಗಳನ್ನು ನುಡಿಯಲು ಇದೇ ಒಂದು ಕಾರಣವಾಗಿತ್ತು; ತಾನು ಮೆಸ್ಸೀಯನೆಂಬುವ ಅಂಶಕ್ಕೆ ಗಮನವನ್ನು ಸೆಳೆಯಲು ಇದು ನಮ್ಮ ಕರ್ತನು ಬಳಸುತ್ತಿದ್ದ ಡಂಬವಿಲ್ಲದ ನೇರವಾದ ಒಂದು ವಿಧಾನವಾಗಿತ್ತು. ಈ ಕಾರಣದಿಂದ ಮತ್ತು ತಾನು ಮುಂದೆ ನಿರ್ವಹಿಸಲಿರುವ ಕಾರ್ಯದ ದೆಸೆಯಿಂದ ಅಂದರೆ ಪಾಪಗಳನ್ನು ಕ್ಷಮಿಸಿಬಿಡುವ ಅಧಿಕಾರವೆಲ್ಲವೂ ತನ್ನ ಕೈಯಲ್ಲಿರುವುದೆಂಬುದನ್ನು ತೋರಿಸಿಕೊಡುವ ದೃಷ್ಟಿಯಿಂದ ಇದನ್ನು ಹೀಗೆ ಮಾಡಬೇಕಿತ್ತು.

ಆ ಮೇಲೆ ಆತನು ಆ ಹೆಂಗಸಿಗೆ ಹೇಳಿದ್ದು "ನಿನ್ನ ನಂಬಿಕೆಯೇ ನಿನ್ನನ್ನು ರಕ್ಷಿಸಿ ಅದೆ; ಸಮಾಧಾನದಿಂದ ಹೋಗು." ತನಗೆ ಕ್ಷಮೆ ತಂದುಕೊಟ್ಟದ್ದು ತನ್ನ ಕಣ್ಣೀರಲ್ಲ; ತನ್ನನ್ನು ಕ್ಷಮಿಸುವಂತೆ ಮಾಡಿದ್ದು ಆ ಲೇಪನದ್ರವ್ಯದ ಬೆಲೆಯಲ್ಲ; ಆದರೆ ಯಾವುದು ಆತನ ದೃಷ್ಟಿಯಲ್ಲಿ ಸಂತೋಷವನ್ನುಂಟುಮಾಡಿದ್ದು ಮತ್ತು ಯಾವ ಕಾರಣದಿಂದ ಆಕೆಯು ಪಾಪಗಳು ಕ್ಷಮಿಸಲ್ಪಟ್ಟಿದ್ದವೆಂದರೆ ಆಕೆಯ ನಂಬಿಕೆ ಎಂಬುದನ್ನು ಆಕೆಯು ತಿಳಿಯಬೇಕೆಂದು ಆತನು ಆಶಿಸಿದ್ದನು. ಆಕೆಯು ತನ್ನ ಪಾಪಮಯ ಸ್ಥಿತಿಯನ್ನು ಗ್ರಹಿಸಿಕೊಂಡಿದ್ದು ಮಾತ್ರವಲ್ಲದೆ ಈ ದಿವ್ಯ ಬೋಧಕನಿಗೆ ತನ್ನ ಪಾಪವನ್ನು ಕ್ಷಮಿಸಿ ತನ್ನನ್ನು ಪುನರುದ್ಧರಿಸುವುದಕ್ಕೆ ಅಧಿಕಾರವಿದ್ದುದನ್ನು ಗ್ರಹಿಸಿಕೊಂಡಿದ್ದಳು; ಮತ್ತು ಇದನ್ನು ನಂಬಿದವಳಾಗಿ ಈ ಪ್ರಕಾರವೇ ನಡೆದುಕೊಂಡಿದ್ದಳು ಮತ್ತು ತಾನು ಸ್ವೀಕರಿಸಿದ ಪ್ರತಿಫಲವು ಈ ನಂಬಿಕೆಯನ್ನು ಪ್ರಯೋಗಿಸಿದ ಕಾರಣದಿಂದ ಎಂಬುದನ್ನು ಆಕೆಯು ಅರಿತಿರಬೇಕೆಂದು ನಮ್ಮ ಕರ್ತನು ಆಶಿಸಿದ್ದನು. ಕರ್ತನ ಜನರ ಪರವಾಗಿರುವ ಆತನ ಅನುಗ್ರಹಗಳೆಲ್ಲವುಗಳ ಸಂಗತಿಯೂ ಹೀಗೆಯೇ ಎಂಬುದನ್ನು ನಾವು ಅರಿತುಕೊಳ್ಳಬಹುದು. ನಾವು ಕಣ್ಣೀರಿನ ಸಹಿತವಾಗಿ ಪಶ್ಚಾತಾಪದಿಂದ ಕರ್ತನ ಬಳಿಗೆ ಬಂದರೆ ಅವು ಫಲಪ್ರದವಾಗುವು ದಿಲ್ಲವೆಂಬುದನ್ನು ನಾವು ತಿಳಿಯಬೇಕು; ನಾವು ಕಾಣಿಕೆಗಳನ್ನು ನೀಡಿದ್ದಲ್ಲಿ ಅವು ಫಲಪ್ರದವಾಗಿವುದಿಲ್ಲ ವೆಂಬುದನ್ನು ನಾವು ತಿಳಿಯಬೇಕು. ಕರ್ತನಿಗೆ ನಮ್ಮ ನಂಬಿಕೆಯನ್ನು ಅರ್ಪಣೆಮಾಡಿ ಪಾಪಗಳನ್ನು ಕ್ಷಮಿಸುವ ಮತ್ತು ನಮ್ಮನ್ನು ಎಲ್ಲಾ ಅನೀತಿಯಿಂದ ಶುದ್ಧಿಮಾಡುವ ಅಧಿಕಾರವನ್ನು ಹೊಂದಿರುವವನು ಈತನೇ ಎಂಬುದನ್ನು ಅಂಗೀಕರಿಸದ ಹೊರತು ಕಣ್ಣೀರುಗಳಾಗಲಿ ಇಲ್ಲವೇ ಕಾಣಿಕೆಗಳಾಗಲಿ ಯಾವ

ಪ್ರಯೋಜನಕ್ಕೂ ಬಾರವು. ಕ್ರಿಸ್ತೀಯ ಮಾರ್ಗದ ಆರಂಭದಲ್ಲಿ ಇದು ಅವಶ್ಯವಾಗಿರುವುದು ಮಾತ್ರವಾಗಿರದೆ ಈ ಬಗೆಯ ನಂಬಿಕೆಯು ಆ ಪ್ರಯಾಣದ ಪರ್ಯಂತರವೂ ಅವಶ್ಯವಾಗಿರುವುದು. ನಾವು ನಂಬಿಕೆಯಲ್ಲಿ ಮುಂದುವರಿಯದಿದ್ದಲ್ಲಿ ಅಭಿವೃದ್ಧಿಯಾಗಲಾರೆವು. ನಮ್ಮ ಕ್ರಿಸ್ತೀಯ ನಡೆಯ ಮತ್ತು ಅನುಭವಗಳ ಆರಂಭದಿಂದ ಅಂತ್ಯದವರೆಗೂ "ನಿನ್ನ ನಂಬಿಕೆಯಂತೆಯೇ ನಿನಗಾಗಲಿ" ಎಂಬುದು ನಮ್ಮ ಕರ್ತನು ತನ್ನ ಶಿಷ್ಯರೆಲ್ಲರೊಡನೆ ನಡೆದುಕೊಳ್ಳುವ ವಿಧಾನವೆಂದು ಕಾಣುತ್ತದೆ.

ಹೀಗಿದ್ದಲ್ಲಿ ನಮ್ಮ ಕರ್ತನ ಮೇಲೆ ಇಡುವ ನಿರಂತರವಾದ ನಂಬಿಕೆಯು ಈ ಪಾಠದ ಕೇಂದ್ರವಾಗಿರುವ ಅಂಶ; ಅಂದರೆ ಆತನು ನಮ್ಮನ್ನು ಗಮನಿಸದಿರುವಾಗಲೂ ನಾವು ನಂಬಿಕೆಯುಳ್ಳವರಾಗಿರುವುದು; ನಮ್ಮ ಎಲ್ಲಾ ಆತ್ಮಿಕ ಮತ್ತು ಲೌಕಿಕ ವಿಷಯಗಳು ಅಭಿವೃದ್ಧಿಯಾಗುತ್ತಿರುವಾಗಲೂ ನಾವು ನಂಬಿಕೆಯುಳ್ಳವರಾಗಿರುವುದು; ಅಲ್ಲದೆ ಲೌಕಿಕ ಪ್ರಭಾವ ಶಕ್ತಿಗಳೆಲ್ಲವೂ ನಮಗೆ ವಿರೋಧವಾಗಿರುವಾಗಲೂ ನಂಬಿಕೆಯಲ್ಲಿ ಅದೇ ರೀತಿಯಲ್ಲಿ ಬಲವುಳ್ಳವರಾಗಿರುವುದು ಈ ಪಾಠದ ಕೇಂದ್ರಾಂಶ. ಲೋಕವನ್ನು ಜಯಿಸುವಂಥದ್ದು ಯಾವುದೆಂದರೆ: ಎಲ್ಲಾ ಸ್ಥಿತಿಗತಿಗಳಲ್ಲಿಯೂ ಕರ್ತನ ಒಳ್ಳೆಯತನ ಮತ್ತು ನಂಬಿಗಸ್ತಿಕೆಯ ಮೇಲೆ ಪೂರ್ಣ ಭರವಸದಿಂದ ಆತನನ್ನು ಎದುರು ನೋಡುವಂಥ ಹಾಗು ನಾವು ಆತನ ಜನರಾಗಿರುವ ಕಾರಣದಿಂದ ಆತನ ವಾಗ್ದಾನಾನುಸಾರ ಎಲ್ಲಾ ಕಾರ್ಯಗಳೂ ಅಂತ್ಯದಲ್ಲಿ ನಮ್ಮ ಹಿತಕ್ಕಾಗಿ ಅನುಕೂಲಿಸುವುದೆಂದು ನಂಬುವ ನಂಬಿಕೆಯೇ. – 1ನೇ ಯೋಹಾನ 5:5; ರೋಮಾ 8:29.

*****

| ದಿನಾ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | ಗಲಿಲಾಯದಲ್ಲಿ ಶಿಷ್ಯರೊಂದಿಗೆ ಮಾಡಿದ ಎರಡನೇ ಸುವಾರ್ತಾ ಪ್ರಚಾರ ಪ್ರಯಾಣ | -- | -- | 8:1–3 | -- |
| | ಗಲಿಲಾಯ | ದೆವ್ವ ಹಿಡಿದವನನ್ನು ಸ್ವಸ್ಥಮಾಡಿದ್ದು; ಬೆಲ್ಜೆಬೂಲನ ಸಹಕಾರ ಪಡೆಯುವ ಆಪಾದನೆ | 12:22–37 | 3:19–30 | -- | -- |
| | ಗಲಿಲಾಯ | ಪರಿಸಾಯರು ಶಾಸ್ತ್ರಿಗಳು ಒಂದು ಸೂಚನೆಯನ್ನು ಕೇಳಿಕೊಂಡದ್ದು | 12:38–45 | -- | -- | -- |

## ಲೂಕ 8:1–3

ತರುವಾಯ ಆತನು ದೇವರ ರಾಜ್ಯದ ಸುವಾರ್ತೆಯನ್ನು ಸಾರುತ್ತಾ ಊರುಗಳಲ್ಲಿಯೂ ಗ್ರಾಮಗಳಲ್ಲಿಯೂ ಸಂಚರಿಸಿದನು. ಆತನ ಸಂಗಡ ಹನ್ನೆರಡು ಮಂದಿ ಶಿಷ್ಯರೂ ಇದ್ದರು. ದೆವ್ವಗಳ ಕಾಟದಿಂದಲೂ ರೋಗಗಳಿಂದಲೂ ಗುಣಹೊಂದಿದ ಕೆಲವು ಹೆಂಗಸರು ಸಹ ಇದ್ದರು. ಈ ಹೆಂಗಸರು ಯಾರಾರಂದರೆ–ಏಳು ದೆವ್ವಗಳು ಬಿಟ್ಟುಹೋಗಿದ್ದ ಮಗ್ದಲದವಳೆಂಬ ಮರಿಯಳು. ಹೆರೋದನ ಮನೆವಾರ್ತೆಯವನಾದ ಕೂಜನ ಹೆಂಡತಿ ಯೋಹಾನಳು, ಸುಸನ್ನಳು. ಇನ್ನು ಬೇರೆ ಅನೇಕರು. ಇವರು ತಮ್ಮ ಆಸ್ತಿಯಿಂದ ಅವನಿಗೆ ಕೊಟ್ಟು ಉಪಚಾರಮಾಡುತ್ತಿದ್ದರು.

## ಮತ್ತಾಯ 12:22–45

ದೆವ್ವಹಿಡಿದು ಕುರುಡನೂ ಮೂಕನೂ ಆಗಿರುವ ಒಬ್ಬನನ್ನು ಆತನ ಬಳಿಕೆ ಕರತಂದರು; ಆತನು ಅವನನ್ನು ಸ್ವಸ್ಥಮಾಡಲು ಆ ಮೂಕನಿಗೆ ಬಾಯಿ ಕಣ್ಣು ಎರಡೂ ಬಂದವು. ಅದಕ್ಕೆ ಜನರೆಲ್ಲರೂ ಬೆರಗಾಗಿ–ಈತನು ದಾವೀದಕುಮಾರನೇನು ಎಂದು ಮಾತಾಡುತ್ತಿದ್ದನು. ಆದರೆ ಫರಿಸಾಯರು ಅದನ್ನು ಕೇಳಿ–ಇವನು ದೆವ್ವಗಳ ಒಡೆಯನಾದ ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೇ ಹೊರತು ಬೇರೆ ರೀತಿಯಿಂದ ಬಿಡಿಸುವುದಿಲ್ಲ ಅಂದರು. ಆತನು ಅವರ ಆಲೋಚನೆಗಳನ್ನು ತಿಳುಕೊಂಡು ಅವರಿಗೆ ಹೇಳಿದ್ದೇನೆಂದರೆ–ಯಾವ ರಾಜ್ಯವಾದರೂ ತನ್ನಲ್ಲಿ ಭೇದಹುಟ್ಟಿದರೆ ಹಾಳಾಗುವದು; ತನ್ನಲ್ಲಿ ಭೇದ ಹುಟ್ಟಿದ ಯಾವ ಪಟ್ಟಣವಾದರೂ ಮನೆಯಾದರೂ ನಿಲ್ಲದು. ಅದರಂತೆ ಸೈತಾನನು ಸೈತಾನನನ್ನು ಹೊರಡಿಸಿದರೆ ತನ್ನಲ್ಲಿ ಭೇದ ಹುಟ್ಟಿಸಿಕೊಂಡ ಹಾಗಾಯಿತು. ಹಾಗಾದರೆ ಅವನ ರಾಜ್ಯವು ಹೇಗೆ ಉಳಿದೀತು? ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ಆದದರಿಂದ ಅವರೇ ನಿಮಗೆ ನ್ಯಾಯತೀರಿಸು–ವವರಾಗುವರು. ನಾನು ದೇವರ ಆತ್ಮನ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ

ಬಂತಲ್ಲಾ. ಇದಲ್ಲದೆ ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವುದು ಹೇಗೆ? ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು. ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ. ಆದಕಾರಣ ನಿಮಗೆ ಹೇಳುತ್ತೇನೆ, ಮನುಷ್ಯರು ಮಾಡುವ ಪ್ರತಿಯೊಂದು ಪಾಪಕ್ಕೂ ದೂಷಣೆಗೂ ಕ್ಷಮಾಪಣೆ ಉಂಟಾಗುವದು; ಆದರೆ ಪವಿತ್ರಾತ್ಮದೂಷಣೆಗೆ ಕ್ಷಮಾಪಣೆಯಿಲ್ಲ. ಯಾವನಾದರೂ ಮನುಷ್ಯಕುಮಾರನಿಗೆ ವಿರೋಧವಾಗಿ ಮಾತಾಡಿದರೆ ಅದು ಅವನಿಗೆ ಕ್ಷಮಿಸಲ್ಪಡುವದು; ಪವಿತ್ರಾತ್ಮನಿಗೆ ವಿರೋಧವಾಗಿ ಮಾತಾಡಿದರೆ ಅವನಿಗೆ ಇಹದಲ್ಲಾಗಲಿ ಪರದಲ್ಲಾಗಲಿ ಕ್ಷಮಿಸಲ್ಪಡುವದಿಲ್ಲ. ಮರ ಒಳ್ಳೇದೆಂದರೆ ಅದರ ಫಲವೂ ಒಳ್ಳೇದನ್ನಿರಿ. ಮರ ಹುಳುಕು ಅಂದರೆ ಅದರ ಫಲವೂ ಹುಳುಕು ಅನ್ನಿರಿ. ಫಲದಿಂದಲೇ ಮರದ ಗುಣವು ಗೊತ್ತಾಗುವದು. ಸರ್ಪಜಾತಿಯವರೇ, ನೀವು ಕೆಟ್ಟವರಾಗಿರಲಾಗಿ ಒಳ್ಳೆಯ ಮಾತುಗಳನ್ನಾಡುವದಕ್ಕೆ ನಿಮ್ಮಿಂದ ಹೇಗಾದೀತು? ಹೃದಯದಲ್ಲಿ ತುಂಬಿರುವದೇ ಬಾಯಲ್ಲಿ ಹೊರಡುವದು. ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ. ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ. ಇದಲ್ಲದೆ ನಾನು ನಿಮಗೆ ಹೇಳುವುದೇನೆಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯ–ವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು. ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪುಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ ಅಂದನು. ಆಗ ಶಾಸ್ತ್ರಿಗಳಲ್ಲಿಯೂ ಫರಿಸಾಯರಲ್ಲಿಯೂ ಕೆಲವರು–ಬೋಧಕನೇ, ನಿನ್ನಿಂದಾಗುವ ಒಂದು ಸೂಚಕ ಕಾರ್ಯವನ್ನು ನೋಡಬೇಕೆಂದು ನಮಗೆ ಅಪೇಕ್ಷೆಯದೆ ಎಂದು ಆತನನ್ನು ಕೇಳಲಾಗಿ ಆತನು ಅವರಿಗೆ ಉತ್ತರ ಕೊಟ್ಟದ್ದೇನೆಂದರೆ – ವ್ಯಭಿಚಾರಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನೆಂಬ ಪ್ರವಾದಿಯಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವುದಿಲ್ಲ. ಅಂದರೆ ಯೋನನು ಹೇಗೆ ಮೂರು ದಿನ ರಾತ್ರಿಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯಕುಮಾರನು ಮೂರು ದಿನ ರಾತ್ರಿಹಗಲು ಭೂಗರ್ಭದೊಳಗೆ ಇರುವನು. ನ್ಯಾಯವಿಚಾರಣೆಯಲ್ಲಿ ನಿನವೆ ಪಟ್ಟಣದವರು ಈ ಸಂತತಿಯವರೊಂದಿಗೆ ನಿಂತು ಇವರನ್ನು ಅಪರಾಧಿಗಳೆಂದು ಹೇಳುವರು; ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರಕಡೆಗೆ ತಿರುಗಿಕೊಂಡರು; ಆದರೆ ಇಲ್ಲಿ ಯೋನನಿಗಿಂತಲೂ ಹೆಚ್ಚಿನವನಿದ್ದಾನೆ. ದಕ್ಷಿಣದೇಶದ ರಾಣಿಯು ನ್ಯಾಯ ವಿಚಾರಣೆಯಲ್ಲಿ ಈ ಸಂತತಿಯವರೊಂದಿಗೆ ಎದ್ದು ನಿಂತು ಇವರನ್ನು ಅಪರಾಧಿಗಳೆಂದು ಹೇಳುವಳು; ಆಕೆಯು ಸೊಲೊಮೋನನ ಜ್ಞಾನವನ್ನು ತಿಳುಕೊಳ್ಳುವುದಕ್ಕೆ ಭೂಮಿಯ ಕಟ್ಟಕಡೆಯಿಂದ ಬಂದಳು; ಆದರೆ ಇಲ್ಲಿ ಸೊಲೊಮೋನನಿ–ಗಿಂತಲೂ ಹೆಚ್ಚಿನವನಿದ್ದಾನೆ. ದೆವ್ವವು ಮನುಷ್ಯನನ್ನು ಬಿಟ್ಟುಹೋದ ಮೇಲೆ ವಿಶ್ರಾಂತಿಯನ್ನು ಹುಡುಕುತ್ತಾ ನೀರಿಲ್ಲದ ಸ್ಥಳಗಳಲ್ಲಿ ತಿರುಗಾಡುತ್ತದೆ. ವಿಶ್ರಾಂತಿ ಸಿಕ್ಕದ ಕಾರಣ ಅದು–ನಾನು ಬಿಟ್ಟು ಬಂದ ನನ್ನ ಮನೆಗೆ ತಿರಿಗಿ ಹೋಗುತ್ತೇನೆ ಅಂದುಕೊಂಡು ಬಂದು ಆ ಮನೆ ಒಕ್ಕಲಿಲ್ಲದ್ದೂ ಗುಡಿಸಿ ಅಲಂಕರಿಸಿದ್ದೂ ಆಗಿರುವುದನ್ನು ಕಂಡು ಹೊರಟುಹೋಗಿ ತನಗಿಂತ ಕೆಟ್ಟವುಗಳಾದ ಬೇರೆ ಏಳು ದೆವ್ವಗಳನ್ನು ತನ್ನೊಂದಿಗೆ ಕರಕೊಂಡು ಬರುವದು. ಅವು ಒಳಹೊಕ್ಕು ಅಲ್ಲಿ ವಾಸಮಾಡುವವು. ಆಗ ಆ ಮನುಷ್ಯನ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗುವದು. ಇದರಂತೆಯೇ ಈ ಕೆಟ್ಟ ಸಂತತಿಗೆ ಆಗುವದು ಅಂದನು.

## ಮಾರ್ಕ 3:19–30

ಯೇಸುವನ್ನು ಹಿಡುಕೊಟ್ಟ ಯೂದ, ಇವರೇ. ಆತನು ಮನೆಯೊಳಗೆ ಬಂದಾಗ ಜನರು ತಿರಿಗಿ ನೆರೆದದ್ದರಿಂದ ಊಟಕ್ಕೂ ಅವಕಾಶವಾಗಲಿಲ್ಲ. ಇದನ್ನು ಕೇಳಿ ಆತನ ಬಂಧುಗಳು ಅವನಿಗೆ ಹುಚ್ಚುಹಿಡಿದದೆ ಎಂದು ಹೇಳಿ ಆತನನ್ನು ಹಿಡಿಯುವುದಕ್ಕೆ ಹೊರಟರು. ಇದಲ್ಲದೆ ಯೆರೂಸಲೇಮಿನಿಂದ ಬಂದಿದ್ದ ಶಾಸ್ತ್ರಿಗಳು–ಇವನನ್ನು ಬೆಲ್ಜೆಬೂಲನು ಹಿಡಿದ್ದಾನೆಂತಲೂ ಇವನು ದೆವ್ವಗಳ ಒಡೆಯನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೆಂತಲೂ ಹೇಳುತ್ತಿದ್ದರು. ಆತನು ಅವರನ್ನು ಹತ್ತರಕ್ಕೆ ಕರೆದು ಅವರಿಗೆ ಸಾಮ್ಯರೂಪವಾಗಿ ಹೇಳಿದ್ದೇನೆಂದರೆ–ಸೈತಾನನು ಸೈತಾನನನ್ನು ಬಿಡಿಸುವದುಂಟೇ? ಒಂದು ರಾಜ್ಯದಲ್ಲಿ ಭೇದಹುಟ್ಟಿದರೆ ಆ ರಾಜ್ಯವು ಉಳಿಯಲಾರದು; ಒಂದು ಮನೆಯಲ್ಲಿ ಭೇದಹುಟ್ಟಿದರೆ ಆ ಮನೆಯು ನಿಲ್ಲಲಾರದು. ಅದರಂತೆ ಸೈತಾನನು ತನಗೆ ವಿರೋಧವಾಗಿ ಎದ್ದು ತನ್ನಲ್ಲಿ ಭೇದಹುಟ್ಟಿಸಿಕೊಂಡರೆ ಅವನು ನಿಲ್ಲಲಾರದೆ ನಾಶವಾಗಿ ಹೋಗುವನು. ಅದಲ್ಲದೆ ಒಬ್ಬನು ಮೊದಲು ಬಲಿಷ್ಠನನ್ನು ಕಟ್ಟಿಹಾಕದೆ ಆ ಬಲಿಷ್ಠನ ಮನೆಯನ್ನು ಹೊಕ್ಕು ಅವನ ಸೊತ್ತನ್ನು ಸುಲುಕೊಳ್ಳುವದಕ್ಕಾಗುವದಿಲ್ಲ; ಕಟ್ಟಿಹಾಕಿದ ಮೇಲೆ ಅವನ ಮನೆಯನ್ನು ಸುಲುಕೊಂಡಾನು. ಇದಲ್ಲದೆ ಅವರು–ಇವನಿಗೆ ದೆವ್ವ ಹಿಡಿದದೆ ಎಂದು ಹೇಳಿದ್ದರಿಂದ ಆತನು ಅವರಿಗೆ–ನಿಮಗೆ ಸತ್ಯವಾಗಿ ಹೇಳುತ್ತೇನೆ, ಮನುಷ್ಯರು ಎಷ್ಟು ದೂಷಿಸಿದಾಗ್ಯೂ ಅವರು ಮಾಡುವ ಎಲ್ಲಾ ಪಾಪಗಳಿಗೂ ದೂಷಣೆಗಳಿಗೂ ಕ್ಷಮಾಪಣೆ ಉಂಟಾಗುವದು, ಆದರೆ ಪವಿತ್ರಾತ್ಮನನ್ನು ದೂಷಿಸಿದವನು ಎಂದಿಗೂ ಕ್ಷಮಾಪಣೆ ಹೊಂದನು; ಅವನು ಶಾಶ್ವತ ಪಾಪದೊಳಗೆ ಸೇರಿದವನಾದನು ಎಂದು ಹೇಳಿದನು.

# “ಅವರು ನಿಷ್ಕಾರಣವಾಗಿ ನನ್ನನ್ನು ಹಗೆಮಾಡಿದರು”

**ರೀಪ್ರಿಂಟ್ಸ್ ಪುಟ 4608**

## ಮತ್ತಾಯ 12:22–32; 38–42

**ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ.” – ಮತ್ತಾಯ 12:30**

ಕೆಲವು ಸಾರಿ ರಣರಂಗದಲ್ಲಿ ಪ್ರತಿಯೊಬ್ಬನೂ ತನಗಾಗಿಯೇ ಯುದ್ಧಮಾಡುತ್ತಿರುವಂತೆ ಕಾಣುತ್ತದೆ. ಯೋಧರ ಪಂಕ್ತಿಯೆಲ್ಲವೂ ಗೊಂದಲದಲ್ಲಿ ಕಳೆದುಹೋದಂತೆ ತೋರುವುದು; ಅದರೂ ಕಡೆಯಲ್ಲಿ ಲಭಿಸಿದ ಜಯವು ಯುದ್ಧದ ಆರಂಭದಲ್ಲಿ ಜಾರಿಯಲ್ಲಿದ್ದ ಅದೇ ಪಂಕ್ತಿವೈಶಿಷ್ಟ್ಯಗಳನ್ನು ಸುಸ್ಪಷ್ಟವಾಗಿ ತೋರಿಸುವುದು. ಆ ದಿವ್ಯ ಬೋಧಕನ ಉಪದೇಶಾನುಸಾರ ಮಾನವ ಕುಲವೆಲ್ಲಾ ನ್ಯಾಯ ಇಲ್ಲವೇ ಅನ್ಯಾಯ, ಸತ್ಯ ಮತ್ತು ತಪ್ಪಿನ, ದೇವರು ಹಾಗೂ ಸೈತಾನನ ನಡುವಿನ ಯುದ್ಧದಲ್ಲಿನ ಯಾವುದಾದರೂ ಒಂದು ಪಕ್ಷದಲ್ಲಿರುವರು. ಯುದ್ಧವು ಹೇಗೆ ಅಂತ್ಯವಾಗುತ್ತದೆಂಬುದರಲ್ಲಿ ಯಾವ ಸಂದೇಹವೂ ಇಲ್ಲದಿದ್ದರೂ, ದೇವರು ಜಯ ಹೊಂದುವನು. ನಿಜವಾಗಿಯೂ ಸತ್ಯವೇದವು ಭರವಸೆ ನೀಡಿರುವುದೆಂದರೆ, ಆತನು ಯಾವ ಸಮಯದಲ್ಲೇ ಆಗಲಿ ಶೀಘ್ರವಾಗಿ ಯುದ್ಧವನ್ನು ಅಂತ್ಯಗೊಳಿಸಿ ಭಕ್ತರನ್ನು ಬಿಡುಗಡೆಮಾಡಿ ಸೈತಾನನನ್ನು ಮತ್ತು ಆತನ ಸಾಮ್ರಾಜ್ಯವನ್ನು ಉರುಳಿಸಬಹುದು. ದೈವ ವಾಗ್ದಾನವೇನೆಂದರೆ ಇದನ್ನು ದೇವರ “ಕ್ಲುಪ್ತಕಾಲದಲ್ಲಿ” ನೆರವೇರಿಸಲಾಗುವುದೆಂಬುದು. ಆಗ ಸಭೆಯು ಪೂರ್ಣಗೊಂಡು ಮೊದಲನೇ ಪುನರುತ್ಥಾನದ ಶಕ್ತಿಯ ಮೂಲಕವಾಗಿ ಮಾರ್ಪಾಡುಹೊಂದಿರುವುದು ಮತ್ತು ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲು ಮೆಸ್ಸೀಯನ ಸಾವಿರ ವರುಷದ (ಆಳ್ವಿಕೆಯ) ರಾಜ್ಯವು ಸ್ಥಾಪಿತವಾಗುವ ಕಾಲವು ಬರುವದು.

ಪಾಪವು ಗೆಲುವು ಸಾಧಿಸಿ ಈಗ ಆರು ಸಾವಿರ ವರುಷಗಳಾದರೂ ಮತ್ತು ಪಾಪಿಗಳನ್ನು ವಿಮೋಚಿಸಿ ಅವರನ್ನು ಮರಣ ದಂಡನೆಯಿಂದ ಬಿಡುಗಡೆಮಾಡಲು ಮೆಸ್ಸೀಯನು ಸತ್ತು ಎರಡು ಸಾವಿರ ವರುಷಗಳು ಕಳೆದರೂ ಏಕೆ ದೀರ್ಘವಾದ ವಿಳಂಬ? ಎಂದು ಕೇಳಲಾಗುವದು. ಇದಕ್ಕೆ ಉತ್ತರ: ಈ ಹತ್ತೊಂಬತ್ತು ಶತಮಾನಗಳ ಕಾಲದ ಅವಧಿಯಲ್ಲಿ ದೇವರು ತನ್ನ ಚಿತ್ತದ ವಿಷಯುವಾದ ಜ್ಞಾನವನ್ನು ಹೊಂದಲು ಅನುಗ್ರಹ ಮಾಡಿದವರನ್ನು ತನ್ನ ಬಗ್ಗೆ ತನ್ನ ಆಜ್ಞಾವಿಧಿಗಳ ಬಗ್ಗೆ ತನ್ನ ಪ್ರತಿನಿಧಿಗಳ ಬಗ್ಗೆ ಅವರಿಗಿರುವ ನಿಷ್ಠೆಯ ವಿಷಯಾಗಿ ಪರೀಕ್ಷಿಸುತ್ತಿರುವನು. ಆತನು ಹೀಗೆ ಪರೀಕ್ಷಿಸುತ್ತಿರುವದಕ್ಕೆ ಕಾರಣ ತನಗೆ ನಿಷ್ಠಾವಂತರಾಗಿ ತೋರ್ಪಡಿಸಿಕೊಳ್ಳುತ್ತಿರುವವರಿಂದ ತಮ್ಮ ಹೃದಯುಗಳಲ್ಲಿ ನೀತಿಯು ನಿಯುಮುಗಳನ್ನು ಹೊಂದಿರುವವರನ್ನು ಕಂಡುಕೊಳ್ಳಲು ಬಯಸುತ್ತಿರುವುದು. ಮೊದಲನೇ ಬರುವಿಕೆಯಲ್ಲಿ ಹೇಗೆ ಕೆಲವರು ಈ ರೀತಿಯಲ್ಲಿ ಪರೀಕ್ಷಿಸಲ್ಪಟ್ಟರೆಂಬುದನ್ನು ನಮ್ಮ ಇಂದಿನ ಅಧ್ಯಯನವು ತೋರಿಸಿಕೊಡುವುದು ಮತ್ತು ಈ ಹತ್ತೊಂಬತ್ತು ಶತಮಾನಗಳ ಪರ್ಯಂತರವೂ ಈ ನಜರಾಯನ ಹೆಜ್ಜೆಯ ಜಾಡನ್ನು ಅನುಸರಿಸುತ್ತಿರುವವರ ಅನುಭವವೂ ಈತನ ಬಗೆಯದೇ ಆಗಿರುವುದೆಂದು ನಮಗೆ ತಿಳಿದಿಬಂದಿರುವುದು. ಅವರು ಪದೇಪದೇ ನಿಷ್ಕಾರಣವಾಗಿ ದ್ವೇಷಿಸಲ್ಪಟ್ಟರು; ಕೆಲವು ವೇಳೆ ಅವರು ಧಾರ್ಮಿಕವಾಗಿ ಗೌರವ ಸ್ಥಾನದಲ್ಲಿರುವ ತಮ್ಮ ಮತಾಸಕ್ತರಿಂದ ಕೆಟ್ಟವರೆಂಬ ಆಪಾದನೆ ಹೊಂದಿ ಅಪಾರ್ಥಕ್ಕೊಳಗಾಗಿ ನಿಂದಿಸಲ್ಪಡುತ್ತಿರುವರು. ಇಂಥ ಪ್ರತಿಯೊಂದು ಹೋರಾಟದ ಸಂದರ್ಭದಲ್ಲೂ, ದೇವರ ಸತ್ಯದ ನೀತಿಯ ಪರವಾದ ಪಕ್ಷ ಮತ್ತೊಂದು ತಪ್ಪಿನ ಸುಳ್ಳಾದ ಸೈತಾನನ ಪರವಾದ ಪಕ್ಷ, ಎಂಬ ಎರಡು ಪಕ್ಷಗಳಿರುವುದೆಂಬುದನ್ನು ನಾವು ನೆನಪಿನಲ್ಲಿಡಬೇಕು.

## ಪ್ರತಿಯೊಂದು ಪರೀಕ್ಷೆಯೂ ಎರಡು ವಿಧದಲ್ಲಿರುವುದು

ಶಾಸ್ತ್ರಿಗಳು ಫರಿಸಾಯರು ಧರ್ಮಶಾಸ್ತ್ರ ಪಂಡಿತರುಗಳು ಹೇಗೆ ಕಣ್ಣಿಲ್ಲದವರಾಗಿ ಯೇಸುವನ್ನು ದ್ವೇಷಿಸಿ ಆತನ ಮೇಲೆ ಎಲ್ಲಾ ಕೆಟ್ಟ ಆಪಾದನೆಗಳನ್ನು ಮಾಡಿದರೆಂಬುದನ್ನು ನಾವು ನೋಡುವಾಗ ಅವರು ನಿಜವಾಗಿಯೂ ಸೈತಾನನ ಪಕ್ಷದವರಾಗಿದ್ದರೆಂಬುದನ್ನು ನಾವು ಗ್ರಹಿಸಿಕೊಳ್ಳುತ್ತೇವೆ. ತಾರ್ಸದ ಸೌಲನು ಸ್ತೆಫನನ್ನು ಕಲ್ಲೆಸೆದು ಕೊಲ್ಲುವಾಗ ಹಾಗು ಇತರರು ಯೇಸುವಿನ ಹಿಂಬಾಲಕರನ್ನು ಹಿಂಸಿಸುವಾಗ ಅವರು ಸೈತಾನನ ಸೇವೆಮಾಡುತ್ತಿದ್ದರೆಂದು ಸ್ಪಷ್ಟವಾಗಿ ಕಾಣುತ್ತೇವೆ; ಇವರು ಸೈತಾನನಿಂದ ಮರುಳುಗೊಂಡವರಾಗಿದ್ದು, ಕೆಲವು ಸಂದರ್ಭಗಳಲ್ಲಿ ಈ ಸೈತಾನನ ಮತ್ತು ಅನೀತಿಯ ಸೇವಕರು ತಾವು ನಿಜವಾಗಿಯೂ ದೇವರ ಸೇವೆಮಾಡುತ್ತಿದೇವೆಂದು ಭಾವಿಸಿಕೊಂಡಿದ್ದರೆಂಬದು ನಮಗೆ ಖಚಿತವಾಗಿರುವುದು. ಆದುದರಿಂದ ನಾವು ಈ ದಿವ್ಯ ಬೋಧಕನ ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಂಡವರಾಗಿ ಈ ವಿಷಯದಲ್ಲಿ ಎಚ್ಚರ ವಾಗಿರೋಣ: “ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ.” “ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ;” “ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವ–ನಾಗುತ್ತಾನೆ.” ಅಯ್ಯೋ, ಎಷ್ಟು ಮಂದಿ ಘನತೆಗೌರವವುಳ್ಳ ಜನರು ವಿರೋಧಿಯಾದ ಸೈತಾನನಿಂದ ಮರುಳಾಗಿ ಉದ್ದೇಶರಹಿತವಾಗಿ ಈ ಮಹಾ ಹೋರಾಟದಲ್ಲಿ ತಪ್ಪಾದ ಪಕ್ಷವನ್ನು ಹಿಡಿದು ದೇವರ ಮತ್ತು ಸತ್ಯದ ವಿರುದ್ಧವಾಗಿ ಹೋರಾಡುತ್ತಿರುವರು. ಈ ಹೋರಾಟಕ್ಕೆ ಮತ್ತು ಕೆಲಮಟ್ಟಿನ ಅಂಧಕಾರಕ್ಕೆ ಅನುಮತಿ ನೀಡಿದವನಾಗಿ ದೇವರು ಬಹು ಪರಿಣಾಮಕಾರಿಯಾಗಿ ತನ್ನ ಜನರಾಗುವುದಕ್ಕೆ ಕರೆಯಲ್ಪಟ್ಟವರನ್ನು ಪರಿಶೋಧನೆಗೆ ಒಳಪಡಿಸಿ ಪರೀಕ್ಷಿಸುತ್ತಿರುವನು. ಇಲ್ಲಿ ನಾವು ಯಾವ ಪಕ್ಷವನ್ನು ಹಿಡಿಯುತ್ತೇವೆಂಬುದನ್ನು ಪರೀಕ್ಷಿಸುವುದು ಮಾತ್ರವಲ್ಲದೆ ಎರಡನೆಯ ಅರ್ಥದಲ್ಲಿ ನಾವು ದೀನತೆಯ ವಿಷಯವಾಗಿಯೂ

ಪರೀಕ್ಷಿಸಲ್ಪಡುತ್ತಿರುವೆವು. ಯಾರು ಹೃದಯದಲ್ಲಿ ಪ್ರಾಮಾಣಿಕರಾಗಿದ್ದು ದೇವರಿಗೆ ವಿರುದ್ಧವಾಗಿ ಹೋರಾಡುವ ತಪ್ಪನ್ನು ಮಾಡುತ್ತಿರುವರೋ, ಅವರ ಕಣ್ಣುಗಳು ತೆರೆಯಲ್ಪಟ್ಟಾಗ ಅವರು ದೀನತೆಯಿಂದ ತಮ್ಮ ತಪ್ಪನ್ನು ಅರಿಕೆಮಾಡಿ ಸತ್ಯದ ವಿಷಯದಲ್ಲಿ ಆಸಕ್ತರಾಗುವ ಬಗ್ಗೆ ಒಂದು ಮಹಾ ಪರೀಕ್ಷೆಗೆ ಒಳಗಾಗುವರು. ಸರಿಯಾದ ಪಕ್ಷವನ್ನು ಹಿಡಿದಿರುವವರೂ ಸಹ ತಾವು ಪಡೆದ ಯಶಸ್ಸಿನ ದೆಸೆಯಿಂದ ಉಬ್ಬಿಹೋಗಬಾರದೆಂದೂ ಆದರೆ "ತಕ್ಕ ಸಮಯದಲ್ಲಿ ದೇವರಿಂದ ಮೇಲಕ್ಕೆತ್ತಲ್ಪಡುವದಕ್ಕಾಗಿ ಅವರು ದೇವರ ತ್ರಾಣವುಳ್ಳ ಹಸ್ತದ ಕೆಳಗೆ ತಮ್ಮನ್ನು ತಗ್ಗಿಸಿಕೊಳ್ಳುವ" ವಿಷಯವಾದ ದೀನತೆಯ ಬಗ್ಗೆಯೂ ಪರೀಕ್ಷೆಗೆ ಒಳಗಾಗುವರು.

ಸೈತಾನು ಒಂದು ಉನ್ನತ ಮಟ್ಟದಲ್ಲಿ ಸೃಷ್ಟಿಸಲ್ಪಟ್ಟಿರುವ ಕಾರಣದಿಂದ (ಅವಿಧೇಯರಾಗಿ) ಬಿದ್ದುಹೋಗಿರುವ ದೇವದೂತರ ಸಂಬಂಧದಲ್ಲಿ ದೆವ್ವಗಳ ಒಡೆಯನೆಂಬ ಶೈಲಿಯಲ್ಲಿ ಕರೆಯಲ್ಪಟ್ಟಿರುವನು. ತಮ್ಮ ಹೃದಯಗಳು ಮರುಳುಗೊಂಡ ಕಾರಣದಿಂದ ಫರಿಸಾಯರು ಈ ವಿಷಯದಲ್ಲಿ ಗುರುವು (ಯೇಸುವು) ಸೈತಾನನ ಜೊತೆಗೂಡಿ ಆತನ ಬಲದಿಂದ ದೆವ್ವ – ಗಳನ್ನು ಬಿಡಿಸುವನೆಂದು ಆಪಾದನೆಮಾಡಲು ಮುಂದಾಗಿದ್ದರು. ಗುರುವು ಅವರೊಡನೆ ಈ ವಿಷಯವನ್ನು ತಾತ್ವಿಕವಾಗಿ ತಿಳಿಸಲು ಆ ಸಮಯವನ್ನು ಬಳಸಿಕೊಂಡವನಾಗಿ, ಸೈತಾನನು ತನ್ನ ಸ್ವಂತ ಸಹಕಾರಿಗಳ ಮತ್ತು ಸೇವಕರ ವಿರೋಧವಾಗಿ ಕೆಲಸ ನಡೆಸುತ್ತಿರುವನೆಂದರೆ ಅದು ಆತನ ಸಾಮ್ರಾಜ್ಯವು ಶೀಘ್ರವಾಗಿ ಪತನವಾಗುವುದನ್ನು ಸೂಚಿಸುವುದೆಂದು ತೋರಿಸಿಕೊಟ್ಟನು. ತಾವು (ದೆವ್ವಬಿಡಿಸುವವರೆಂದು) ಅಂಗೀಕರಿಸಲ್ಪಟ್ಟು ಗೌರವ ಪಡೆದಿರುವ ಕೆಲವರಿಂದಲೂ ಸಹ ದೆವ್ವಗಳು ಬಿಡಿಸಲ್ಪಡುತ್ತಿದ್ದುದನ್ನು ಆತನು ತೋರಿಸಿಕೊಟ್ಟಿದ್ದನು. ತಾನು ಬೆಲ್ಜೆಬೂಲನಾಗಿ ದೆವ್ವಗಳನ್ನು ಬಿಡಿಸುವವನಾದರೆ ಕೆಲವು ಸಮಯಗಳಲ್ಲಿ ದೆವ್ವಗಳನ್ನು ಬಿಡಿಸುತ್ತಿರುವ ಅವರ ನೆರೆಯವರೂ ಮಿತ್ರರೂ ಆದವರು ಪಡೆದ ಅಧಿಕಾರದ ವಿಷಯವಾಗಿ ಏನೆನ್ನಬೇಕು! ಬದಲಾಗಿ ಆತನು ದೇವರ ಬಲದಿಂದ ದೆವ್ವಗಳನ್ನು ಬಿಡಿಸುತ್ತಿರುವುದಾದರೆ ಆತನು ಸಾರಿ ಹೇಳುತ್ತಿದ್ದಂತೆ ದೇವರ ರಾಜ್ಯವು ಹತ್ತಿರ ಬಂದಿತ್ತೆಂಬುದಕ್ಕೆ ಇದು ಒಂದು ಪ್ರಮಾಣವಾಗಿತ್ತು.

## ಮನಃಪೂರ್ವಕವಾಗಿ ಮಾಡಿದ ಪಾಪಗಳು ಅಕ್ಷಮ್ಯ

ಅವರ ಆಕ್ಷೇಪಣೆಗಳಿಗೆ ಹೀಗೆ ಉತ್ತರಿಸಿದವನಾಗಿ ಅವರು ತನಗೆ ವಿರೋಧವಾಗಿದ್ದು ತನ್ನ ಮಾತುಗಳನ್ನು ವಿರೋಧಿಸುತ್ತಿರುವರೆಂಬುದನ್ನೂ ಅಲ್ಲದೆ ತಾನು ದೇವರ ಪ್ರತಿನಿಧಿಯಾ – ಗಿರಲು ಅವರು ದೇವರನ್ನು ವಿರೋಧಿಸುತ್ತಿದ್ದರೆಂಬ ಅರ್ಥ ಬರುವುದೆಂಬುದನ್ನೂ ತೋರಿಸಿಕೊಟ್ಟನು. ಆನಂತರದಲ್ಲಿ, ಅವರು ತನ್ನಲ್ಲಿರುವ ದೇವರ ಆತ್ಮವನ್ನು, ಅಂದರೆ ದೇವರ ಬಲವನ್ನು ಸೈತಾನನ ಬಲವೆಂದು ಆರೋಪಿಸುವಲ್ಲಿ ಅವರ ಮಾತುಗಳು ದೇವದೂಷಣೆಯಾಗಿರುವುದೆಂಬ ಅಂಶವನ್ನು ಅವರ ಗಮನಕ್ಕೆ ತಂದಿದ್ದನು. ಅವರು ಯಾವ ನಿಜವಾದ ಪ್ರಚೋದನೆಯಿಲ್ಲದೆ ಮತ್ತು (ತಮ್ಮ ಮುಂದಿದ್ದ) ಪ್ರತಿಯೊಂದು ಪ್ರಮಾಣಗಳಿಗೂ ವಿರೋಧವಾಗಿ ಇದನ್ನು ಮಾಡಿದ್ದರಿಂದಲೂ ಅವರು ಹೃದಯದಲ್ಲಿ ಕೆಟ್ಟವರಾಗಿರುವರೆಂಬುದು ಅಲ್ಲಿ ಅಡಕವಾಗಿತ್ತು. (ಪರಿಪೂರ್ಣತೆಯಿಂದ) ಬಿದ್ದುಹೋದ, ಅಜ್ಞಾನ ಮೂಢನಂಬಿಕೆ ಮುಂತಾದವುಗಳ ಪರಿಣಾಮವಾಗಿ ಮಾಡಿದ ಸಾಧಾರಣವಾದ ಪಾಪಗಳು ದೇವರ ಏರ್ಪಾಡಿನ ಮೂಲಕವಾಗಿ ಕಡೆಯಲ್ಲಿ ಕ್ಷಮಾಪಣೆಹೊಂದತಕ್ಕವುಗಳು ಆದರೆ ಬೆಳಕಿಗೆ ವಿರೋಧವಾಗಿಯೂ ತಿಳುವಳಿಕೆಗೆ ವಿರೋಧವಾಗಿಯೂ ಮನಃಪೂರ್ವಕವಾಗಿ ಮಾಡಿದ ಪಾಪಗಳು ದೇವರ ಆತ್ಮನಿಗೆ ವಿರೋಧವಾಗಿ ಮಾಡಿದ ಪಾಪಗಳಾಗುವವು. ಮತ್ತು ಈ ಪಾಪಗಳಿಗೆ ಈಗಿನ ಕಾಲದಲ್ಲಿಯಾಗಲಿ ಇಲ್ಲವೇ ಮುಂದೆ ಬರುವ ಕಾಲದಲ್ಲಿಯಾಗಲೀ ಅಂದರೆ ಸುವಾರ್ತಾಯುಗದಲ್ಲಿಯಾಗಲಿ ಅಥವಾ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿಯಾಗಲಿ ಕ್ಷಮಾಪಣೆಯಿರುವುದಿಲ್ಲ. ಪೂರ್ಣವಾದ ಬೆಳಕಿಗೆ ವಿರೋಧವಾಗಿ ಪಾಪಮಾಡಿದ್ದಲ್ಲಿ ಅದರ ಫಲ ಅಥವಾ ಶಿಕ್ಷೆಯು ನಾಶನ ಅಂದರೆ ಎರಡನೆಯ ಮರಣವಾಗಿರುವುದು. ಆದರೆ ಇದು ಬಹು ಸ್ಪಷ್ಟವಾಗಿ ಕೇವಲ ಕೆಲವರು ಮಾಡುವ ಪಾಪಗಳಿಗೆ ಸೀಮಿತವಾಗಿರುತ್ತದೆ. ಬಹು ಪಾಲು ಜನರ ವಿಷಯದಲ್ಲಿ ಅದು ಮನಃಪೂರ್ವಕವಾಗಿಯೂ ಮತ್ತು ಅಜ್ಞಾನದಿಂದ ಮಿಶ್ರಿತವಾದದ್ದಾಗಿಯೂ ಇರುವುದು. ಹೀಗಿದ್ದಲ್ಲಿ ಅಜ್ಞಾನದ ಫಲವಾಗಿರುವುದನ್ನು ಸೂಚಿಸುವಷ್ಟರ ಮಟ್ಟಿಗೆ ಅದನ್ನು ಕ್ಷಮಿಸಲು ಸಾಧ್ಯ ಆದರೆ ಮನಃಪೂರ್ವವಾಗಿರುವುದನ್ನು ಸೂಚಿಸುವಷ್ಟರ ಮಟ್ಟಿನ ಪಾಪಗಳಿಗೆ ಶಿಕ್ಷೆಯ ಅಗತ್ಯವಿರುವುದು, ಕಾರಣ ಅವುಗಳು ಅಕ್ಷಮ್ಯವಾದವುಗಳು.

ಶಾಸ್ತ್ರಿಗಳು ಮತ್ತು ಫರಿಸಾಯರು ಆತನ ಜನಪ್ರಿಯತೆಗೆ ಅಸೂಯೆಪಟ್ಟವರಾಗಿ ತಾನು ಮೆಸ್ಸೀಯನೆಂಬುದರ ಪ್ರಮಾಣವಾಗಿ ಒಂದು ಸೂಚನೆಯನ್ನು ಕೇಳಿದ್ದರು; ಆತನ ಉಪದೇಶಗಳು ಹಾಗು ಅದ್ಭುತಗಳು ಸಾಕಷ್ಟು ಪ್ರಮಾಣಗಳಾಗಿರುವುದೆಂಬುದನ್ನು ಅವರು ಅರಿಯದಿದ್ದರು. ಆಗ ಆತನು ಅವರಿಗೆ ಒಂದು ಸೂಚನೆಯು ಬಹು ತಡವಾಗಿ ಬರುವುದೆಂದು ಹೇಳಿದನು; ಅದೇನೆಂದರೆ ಆತನು ಸಮಾಧಿಯಲ್ಲಿದ್ದುದು ಯೋನನು ದೊಡ್ಡ ಮೀನಿನ ಹೊಟ್ಟೆಯೊಳಗಿದ್ದುದಕ್ಕೆ ಹೋಲಿಕೆಯಾಗಿರುವುದೆಂಬುದು. ಅವರಿಗೆ ಖಚಿತವಾಗಿ ಹೇಳಿದ್ದೇನೆಂದರೆ, ಅನ್ಯಜನರಾಗಿದ್ದ ನಿನವೆಯವರು ನ್ಯಾಯವಿಚಾರಣೆಯ ಕಾಲದಲ್ಲಿ ಅಂದರೆ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ತಮಗಿಂತಲೂ ಉತ್ತಮ ಶ್ರೇಣಿಯಲ್ಲಿರುವರು; ಏಕೆಂದರೆ ಆ ನಿನವೆಯವರು ಯೋನನ ಉಪದೇಶವನ್ನು ಕೇಳಿ ಪಶ್ಚಾತಾಪಪಟ್ಟಿದ್ದರು, ಹೀಗಿದ್ದಾಗ್ಯೂ ಇವರು ಯೋನನಿಗಿಂತಲೂ ಹೆಚ್ಚಿನವನ ಉಪದೇಶವನ್ನು ಕೇಳಿ ಪಶ್ಚಾತಾಪಪಟ್ಟಿರಲಿಲ್ಲ. ಶೆಬದ ರಾಣಿಯು ಸೊಲೊಮೋನನ ಜ್ಞಾನವನ್ನು ಕೇಳಲು ಬಹು ದೂರ ಪ್ರಯಾಣ ಮಾಡಿ ಬಂದಿದ್ದಳು; ಆದರೂ ಇವರು ಸೊಲೊಮೋನನಿಗಿಂತಲೂ ಹೆಚ್ಚಿನವನ ಸಮ್ಮುಖದಲ್ಲಿರುವಾಗಲೂ ಆತನನ್ನು ಗ್ರಹಿಸಿರಲಿಲ್ಲ ಮತ್ತು ಆತನ ಸಂದೇಶಕ್ಕೆ ಕಿವಿಗೊಟ್ಟಿರಲಿಲ್ಲ. ನಾವು ಹೀಗೆಯೇ ಕುರುಡರಾಗದೇ ಇರೋಣ. ಆದರೆ ಸಂಪೂರ್ಣವಾದ ಹೃದಯದಿಂದ ಈ ನಜರೇತನನ್ನು ಅಂಗೀಕರಿಸಿಕೊಂಡು ಆತನನ್ನು ಹಿಂಬಾಲಿಸುವವರಾಗೋಣ.

# “ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪುಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪುಹೊಂದುವಿ”

**ರೀಪ್ರಿಂಟ್ಸ್ ಪುಟ 1937**

**ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವದು. ಒಳ್ಳೆಯವನು ತನ್ನ ಒಳ್ಳೆಯ ಬೊಕ್ಕಸದೊಳಗಿಂದ ಒಳ್ಳೆಯ ವಸ್ತುಗಳನ್ನು ತೆಗೆಯುತ್ತಾನೆ; ಕೆಟ್ಟವನು ಕೆಟ್ಟ ಬೊಕ್ಕಸದೊಳಗಿಂದ ಕೆಟ್ಟ ವಸ್ತುಗಳನ್ನು ತೆಗೆಯುತ್ತಾನೆ. ಇದಲ್ಲದೆ ನಾನು ನಿಮಗೆ ಹೇಳುವುದೇನಂದರೆ ಮನುಷ್ಯರು ಸುಮ್ಮನೆ ಆಡುವ ಪ್ರತಿಯೊಂದು ಮಾತಿನ ವಿಷಯವಾಗಿ ನ್ಯಾಯವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು. ನಿನ್ನ ಮಾತುಗಳಿಂದಲೇ ನೀತಿವಂತನೆಂದು ತೀರ್ಪುಹೊಂದುವಿ; ನಿನ್ನ ಮಾತುಗಳಿಂದಲೇ ಅಪರಾಧಿಯೆಂದು ತೀರ್ಪು ಹೊಂದುವಿ ಅಂದನು.” ಮತ್ತಾಯ 12:34–37**

ನಾವು ಈಗಿನ ಕಾಲದಲ್ಲಿ ಸಭೆಯಾಗಿ ರಾಜನಾದ ನಮ್ಮ ಮದಲಿಂಗನ ಪರಿಶೀಲನೆಗೆ ಒಳಗಾಗಿದ್ದೇವೆ. (ಮತ್ತಾಯ 22:11) ಆತನು ತನ್ನ (ತನ್ನ ಬ್ರೂಣಾವಸ್ಥೆಯಲ್ಲಿರುವ ಅಥವಾ ಆರಂಭದ ಸ್ಥಿತಿಯಲ್ಲಿರುವ) ರಾಜ್ಯದಿಂದ ಕಂಟಕರೆಲ್ಲರನ್ನು ಕೂಡಿಸಿ ಹೊರಹಾಕಲು (ಮತ್ತಾಯ 13:41) ಮತ್ತು ತನ್ನ ಸ್ವಕೀಯ ಜನವಾದ (ಆಭರಣವಾದ) ತನ್ನ ಮದಲಗಿತ್ತಿಯನ್ನು ತನಗಾಗಿ ಆರಿಸಿಕೊಳ್ಳ ಸಲುವಾಗಿ ಈಗ ಪ್ರತ್ಯಕ್ಷನಾಗಿರುವನು. ಈ ನ್ಯಾಯವಿಚಾರಣೆ ಮತ್ತು ಆಯಲ್ಪಡುವಿಕೆಗಳು ಯಾವ ತತ್ವದ ಆಧಾರದ ಮೇಲೆ ನಡೆಸಲಾಗುತ್ತಿರುವುದೆಂಬುದನ್ನು ನಾವು ಅತಿಯಾಗಿ ಲಕ್ಷ್ಯಕೊಟ್ಟು ಪರಿಗಣಿಸಲು ಸಾಧ್ಯವಾಗದು.

ನಮ್ಮ ಕರ್ತನ ಈ ಮೇಲಿನ ಮಾತುಗಳು ಹೃದಯ ಮತ್ತು ಬಾಯಿಯು ಅತಿಸೂಕ್ಷ್ಮ ಪರಿಶೀಲನೆಗೆ ಒಳಪಟ್ಟಿರುವುದೆಂಬುದನ್ನು ತಿಳಿಸುತ್ತವೆ; ಅಂದರೆ ಮೊದಲನೆಯದು ವ್ಯಕ್ತಿಯ ಗುಣನಡತೆಗಳನ್ನು ಮತ್ತು ಎರಡನೆಯದು ಈ ಗುಣನಡತೆಗಳ ಸೂಚಕವೆಂಬುದನ್ನು ಸೂಚಿಸುತ್ತದೆ. ಇದೇ ದೃಷ್ಟಿಯಿಂದಲೇ ಈ ವಿಷಯವನ್ನು ಜ್ಞಾನೋಕ್ತಿಯ ಈ ನುಡಿಗಳು ಬರೆಯಲ್ಪಟ್ಟಿರುವುದು–“ನಿನ್ನ ಹೃದಯವನ್ನು ಬಹು ಜಾಗರೂಕತೆಯಿಂದ ಕಾಪಾಡಿಕೋ; ಅದರೊಳಗಿಂದ ಜೀವಧಾರೆಗಳು ಹೊರಡುವವು. ಸೊಟ್ಟ ಮಾತುಗಳನ್ನು ನಿನ್ನಿಂದ ತೊಲಗಿಸಿಬಿಡು, ತುಟಿಗಳ ವಕ್ರತೆಯನ್ನು ದೂರಮಾಡು.” (ಜ್ಞಾನೋಕ್ತಿ 4:23–24) ಸೂಕ್ತವಾದ ಹೃದಯದ ಸ್ಥಿತಿಯು ಸೂಕ್ತವಾದ ಮಾತುಗಳಿಗೆ ಅವಶ್ಯವೆಂಬುದು ಸ್ಪಷ್ಟವಾಗಿ ಸೂಚಿತವಾಗಿರುವುದು; ಏಕೆಂದರೆ ಅನುಭವವು ಪ್ರತಿ ಮನುಷ್ಯನಿಗೂ ಪ್ರಮಾಣವಾಗಿ ತೋರಿಸಿರುವಂತೆ “ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಹೊರಡುವುದು.” ಆದುದರಿಂದ ಕೇವಲ ನಮ್ಮ ಮಾತುಗಳೇ ಕರ್ತನ ಎಣಿಕೆಯಲ್ಲಿ ನ್ಯಾಯತೀರ್ಪಿನ ಮಾನದಂಡವಾಗಿರ–ಬೇಕು; ಅತನು ಹೇಳಿರುವಂತೆ ಅವುಗಳು ಹೀಗೆಯೇ ಇರುವವು. ಸವಿನುಡಿಯು ಕೆಲವು ವೇಳೆ ಅತಿಯಾದ ಕಪಟದ ಮುಖವಾಡವಾಗಿರುವುದು ನಿಜವೇ; ಆದರೆ ಸ್ವಾರ್ಥಮಯ ಕಾರ್ಯನೀತಿಯು ತಂತ್ರಗಾರಿಕೆಯ ವಿಧಾನಲ್ಲಿ ಬದಲಾವಣೆ ತರುವುದು ಅಗತ್ಯವೆಂಬುದನ್ನು ನಿರೂಪಿಸಿ ಹೇಳಿದಾಗ ಕೆಲವು ಸಮಯಗಳಲ್ಲಿ ಆ ಮುಖವಾಡವು ಕಳಚಿಬೀಳುವುದು. ಆದುದರಿಂದ ಇಲ್ಲಿ ಉಳಿಯುವ ಅಂಶವೆಂದರೆ ನುಡಿಯುವ ಮಾತುಗಳು ಅಂದರೆ ಇಡೀ ಸಂಭಾಷಣೆಯ ಮತ್ತು ನಡವಳಿಕೆಯ ವಿಧಾನಗಳು ಹೃದಯದಲ್ಲಿ ತುಂಬಿರುವ ಸಂಗತಿಗಳಿಗೆ ಸೂಚಕವಾಗಿರುವುದು.

ಹೀಗಿರುವಲ್ಲಿ ನಮ್ಮ ಮೊದಲ ಕಾಳಜಿಯು ಹೃದಯದ ವಿಷಯವಾಗಿರಬೇಕು. ಅದರ ಆಸೆ ಅನಿಸಿಕೆಗಳು ಪ್ರವೃತ್ತಿಗಳು ಪೂರ್ಣವಾಗಿ ದೇವಕೃಪೆಯ ಅಧೀನದಲ್ಲಿರಬೇಕು; ಅಲ್ಲಿ ನೀತಿ ಸತ್ಯತೆಯ ಪ್ರತಿಯೊಂದು ಮೂಲತತ್ವಗಳು ಸ್ಥಿರವಾಗಿ ನೆಲೆಸಿರುವಂತಾಗಬೇಕು; ನ್ಯಾಯ ಕರುಣೆ ಉಪಕಾರ ಸಹೋದರ ಸ್ನೇಹ ಪ್ರೀತಿ ನಂಬಿಕೆ ಸಾತ್ವಿಕತ್ವ ದಮೆ, ದೇವರ ಮತ್ತು ಕ್ರಿಸ್ತನ ಬಗ್ಗೆ ಅತ್ಯುನ್ನತವಾದ ಭಯಭಕ್ತಿ ಹಾಗು ಪರಿಶುದ್ಧತೆಯ ಭೂಷಣಗಳೆಲ್ಲವುಗಳನ್ನು ಉತ್ಸಾಹದಿಂದ ಆಶಿಸುವದು – ಇವೆಲ್ಲವುಗಳು ಜೀವನದ ಶೈಲಿಯ ಮೂಲತತ್ವಗಳಾಗಿ ಸ್ಥಿರವಾಗಿ ನೆಲೆಯೂರಿರಬೇಕು. ಈ ಮೂಲತತ್ವಗಳು ಹೃದಯದಲ್ಲಿ ಸ್ಥಿರವಾಗಿ ಸ್ಥಾಪಿತವಾಗಿದ್ದಲ್ಲಿ ಹೃದಯವೆಂಬ ಒಳ್ಳೆಯ ಬೊಕ್ಕಸದೊಳಗಿಂದ ಬರುವ ಸತ್ಯ ಸ್ವಸ್ಥಚಿತ್ತ ಜ್ಞಾನ ಕೃಪೆಯ ವಿಷಯವಾದ ಮಾತುಗಳನ್ನು ಬಾಯಿಯು ಆಗ ನುಡಿಯುವುದು.

ನಮ್ಮ ಕರ್ತನ ವಿಷಯವಾಗಿ ಹೇಳುವುದಾದರೆ, ಆತನ ಹೃದಯವು ಪರಿಪೂರ್ಣತೆಯುಳ್ಳದ್ದಾಗಿದ್ದು ಆತನಲ್ಲಿ ಯಾವ ಅನ್ಯಾಯವೂ ಇರಲಿಲ್ಲ, ಆತನ ಬಾಯಲ್ಲಿ ಯಾವ ವಂಚನೆಯೂ ಸಿಕ್ಕಲಿಲ್ಲ, ಇನ್ನೂ ಹೇಳಿದ್ದಂತೆ “ದೈವಾನುಗ್ರಹವು ಯಾವಾಗಲೂ ನಿನ್ನ ಮೇಲಿದೆ ಎಂಬುದು ನಿನ್ನ ಬಾಯಮಾತುಗಳಿಂದ ಸ್ಪಷ್ಟವಾಗುತ್ತದೆ.” ಮತ್ತು ಪುನಃ ಹೇಳಿರುವಂತೆ “ಎಲ್ಲರೂ ಆತನನ್ನು ಹೊಗಳಿ ಆತನ ಬಾಯಿಂದ ಹೊರಡುವ ಇಂಪಾದ ಮಾತುಗಳಿಗೆ ಆಶ್ಚರ್ಯಪಟ್ಟು...’ (ಕೀರ್ತನೆ 45:2; ಲೂಕ 4:22) ಮೋಶೆಯು ಕ್ರಿಸ್ತನನ್ನು ವ್ಯಕ್ತೀಕರಿಸಿಕೊಂಡವನಾಗಿ ಕರ್ತನ ಬಾಯಮಾತುಗಳ ಭಾಗ್ಯಕರವಾದ ಪ್ರಭಾವನ್ನು ಮುಂತಿಳಿಸಿ ಹೀಗೆ ಹೇಳಿದ್ದಾನೆ. “ನನ್ನ ಉಪದೇಶವು ಹಸಿಹುಲ್ಲಿನ ಮೇಲೆ ಮೆಲ್ಲಗೆ ಸುರಿಯುವ ಮಳೆಯ ತುಂತುರುಗಳಂತೆ (ತಣ್ಣಗಿರುವುದು). (ಧರ್ಮೋ. 32:2) ಹಾಗು ಯೇಸುವೂ ಹೇಳಿದ್ದು “ನಾನು ನಿಮಗೆ ಹೇಳುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ.” (ಯೋಹಾನ 6:63) ಕರ್ತನ ಮಾತುಗಳು ಎಷ್ಟು ಜ್ಞಾನವೂ ನ್ಯಾಯವೂ ಮತ್ತು ಸತ್ಯವೂ ಆಗಿದ್ದವೆಂದರೆ ಆತನ ವೈರಿಗಳು ಸತತವಾಗಿ ಕೆಲವು ತಪ್ಪುಗಳನ್ನು ಹುಡುಕುತ್ತಿದ್ದರೂ ಸಹ, ಅಲ್ಲಿ ಹೇಳಲಾದ ಸಂಗತಿಯೆಂದರೆ “ಆತನ ಮಾತಿನಲ್ಲಿ ಅವರು ಜನರ

ಮುಂದೆ ಏನೂ ಹಿಡಿಯಲಾರದೆ ಆತನು ಕೊಟ್ಟ ಉತ್ತರಕ್ಕೆ ಆಶ್ಚರ್ಯಪಟ್ಟು ಸುಮ್ಮನಾದರು." (ಲೂಕ 20:26) ಅಲ್ಲದೆ ಇತರರು ಹೇಳಿದ್ದು "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿಲ್ಲ..." (ಯೋಹಾನ 7:46)

ಹೀಗೆ ನಮ್ಮ ಕರ್ತನು ತನ್ನ ಜನರ ಮುಂದೆ ಒಂದು ಯೋಗ್ಯವಾದ ಉದಾಹರಣೆಯನ್ನು ಬಿಟ್ಟುಹೋಗಿರುವನು. ಇದನ್ನು ಅನುಸರಿಸುವಂತೆ ಅಪೋಸ್ತಲನು ಒತ್ತಾಯಪಡಿಸಿ ಹೀಗೆ ಹೇಳಿರುವನು, "ನಿಮ್ಮ ಸಂಭಾಷಣೆಯು ಯಾವಾಗಲೂ ಇಂಪಾಗಿಯೂ (ಪ್ರೀತಿ ಕರುಣೆಗಳನ್ನು ತೋರ್ಪಡಿಸಲಿ) ರಸಭರಿತವಾಗಿಯೂ (ಉಪ್ಪಿನಂತೆ ಶುದ್ಧೀಕರಿಸುವ ಹಾಗೂ ಸಂರಕ್ಷಿಸುವ ಪ್ರಭಾವಗಳಿಂದ ಕೂಡಿರಲಿ) ಇರಲಿ;" (ಕೊಲೊಸ್ಸೆ 4:6) ಪೇತ್ರನು ಇದಕ್ಕೆ ಇನ್ನೂ ಸೇರಿಸಿ ಹೇಳಿರುವುದು: "ಒಬ್ಬನು ಬೋಧಿಸುವವನಾದರೆ ದೈವೋಕ್ತಿಗಳನ್ನು ನುಡಿಯುವವನಾಗಿ ಬೋಧಿಸಲಿ." ಮತ್ತೊಂದೆಡೆ ಬರೆಯಲಟ್ಟಿರುವುದು: "ಹಾಗಾದರೆ ಕೆಟ್ಟದಕ್ಕೆ ಹೋಗದಂತೆ ನಾಲಿಗೆಯನ್ನು ಕಾದುಕೋ; ವಂಚನೆಯ ಮಾತುಗಳಿಗೆ ಬಿಡದೆ ತುಟಿಗಳನ್ನು ಇಟ್ಟುಕೋ." "ಬಾಯನ್ನೂ ನಾಲಿಗೆಯನ್ನೂ ಕಾಯುವವನು ತೊಂದರೆಗಳಿಂದ ರಕ್ಷಿಸಿಕೊಳ್ಳುವನು." "ಜ್ಞಾನಿಯ ಮಾತು ಹಿತ (ಕೃಪಾಭರಿತ). ಅಜ್ಞಾನಿಯ (ಮೂರ್ಖನ, ಯೋಚಿಸದೆ ನುಡಿಯುವವನ) ಮಾತುಗಳ ಆರಂಭದಲ್ಲಿ ಬುದ್ಧಿಹೀನತೆ, ಅಂತ್ಯದಲ್ಲಿ ಅಪಾಯದ ಮರುಳುತನ (ಆತನನ್ನೇ ನುಂಗುವುದು)" "ಬಾಯಿದುಡುಕಬೇಡ, ದೇವರ ಮುಂದೆ ಮಾತಾಡಲು ನಿನ್ನ ಹೃದಯದಲ್ಲಿ ಆತುರಪಡದಿರು; ದೇವರು ಆಕಾಶದಲ್ಲಿದ್ದಾನಲ್ಲವೇ, ನೀನು ಭೂಮಿಯಲ್ಲಿದ್ದೀ; ಆದಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ." – ಕೀರ್ತನೆ 34:13; ಜ್ಞಾನೋಕ್ತಿ 21:23; ಪ್ರಸಂಗಿ 10:12–13; 5:2.

ಯೋಬನು ತನ್ನ ಬಾಧೆಗಳೆಲ್ಲವುಗಳ ನಡುವೆಯೂ ತುಟಿಗಳಿಂದ ಪಾಪಮಾಡದಂತೆ ಬಹು ಜಾಗರೂಕನಾಗಿದ್ದನು. (ಯೋಬ 2:10; 31:30; 1:21–22) ತನ್ನ ಮಾತುಗಳು ತನ್ನ ಹೃದಯದಲ್ಲಿ ತುಂಬಿರುವ ವಿಷಯಗಳಿಗೆ ಸೂಚಕವಾಗಿರು – ವುದೆಂದು ಕರ್ತನು ತೆಗೆದುಕೊಳ್ಳುತ್ತಾನೆಂದು ಆತನಿಗೆ ತಿಳಿದಿತ್ತು ಮತ್ತು ಆತನು ತನ್ನ ಹೃದಯವನ್ನು ಹಾಗು ಮಾತುಗಳನ್ನು ಕಾಪಾಡಿಕೊಳ್ಳುವುದರಲ್ಲಿ ಜಾಗರೂಕನಾಗಿದ್ದನು. ಆತನೇ ಹೇಳಿರುವುದು: "ದೇವರ ಹಸ್ತದಿಂದ ನಾವು ಒಳ್ಳೆಯದನ್ನು ಹೊಂದುತ್ತೇವಷ್ಟೆ ಕೆಟ್ಟದ್ದನ್ನು (ವಿಪತ್ತು ಕಷ್ಟಗಳು– ಶಿಕ್ಷಣಾರ್ಥ ವಾಗಿ ಅಥವಾ ಶುದ್ಧೀಕರಣಾರ್ಥವಾಗಿ) ಹೊಂದಬಾರದೋ? ...ಯೆಹೋವನೇ ಕೊಟ್ಟನು, ಯೆಹೋವನೇ ತೆಗೆದುಕೊಂಡನು; ಯೆಹೋವನ ನಾಮಕ್ಕೆ ಸ್ತೋತ್ರವಾಗಲಿ.", ಕಠಿಣವಾದ ಶೋಧನಾ ಸಮಯದಲ್ಲಿಯೂ, ಅದೂ ಅಲ್ಲದೆ ಇವೆಲ್ಲವುಗಳನ್ನು ದೈವ ಜ್ಞಾನವು ಬರಮಾಡಿರುವುದೆಂಬುದನ್ನು ಸ್ಪಷ್ಟವಾಗಿ ಅರಿಯದೇ ಇರುವಾಗಲೂ ಈ ಪ್ರೀತಿಪೂರ್ವಕವಾದ ಅಧೀನತೆಯನ್ನು ತಾಳ್ಮೆನಂಬಿಕೆಗಳನ್ನು ಸೂಚಿಸುವಂಥ ಮಾತುಗಳಿಂದ ಸಮೃದ್ಧವಾಗಿದ್ದ ಆತನ ಹೃದಯದಲ್ಲಿ ಯಾವ ದ್ರೋಹದ ಭಾವನೆಯೂ ಇರಲಿಲ್ಲ.

ಕೀರ್ತನಾಗಾರನು ದೇವರ ಪ್ರತಿಷ್ಠಿತ ಹಾಗೂ ಪರಿಶೋಧಿತ ಜನರ ಬಾಯಲ್ಲಿ ದೃಢ ಮನೋನಿರ್ಧಾರದ ಈ ಮಾತುಗಳನ್ನು ಇರಿಸಿದ್ದಾನೆ:–"ನನ್ನ ನಾಲಿಗೆ ಪಾಪಕ್ಕೆ ಹೋಗದಂತೆ ಜಾಗರೂಕನಾಗಿರುವೆನು; (ನೀತಿವಂತರಿಗೆ ದುಷ್ಪ್ರೇರಣೆಮಾಡುವ) ದುಷ್ಟರು ನನ್ನ ಮುಂದೆ ಇರುವಾಗ ಬಾಯಿಗೆ ಕುಕ್ಕೆಹಾಕಿಕೊಂಡಿರು ವೆನು ಅಂದುಕೊಂಡೆನು." ಕೀರ್ತನೆ 39:1

ಕ್ರಿಸ್ತೀಯ ಗುಣನಡತೆಗಳ ಸ್ಥಿರತೆಯ ವಿಷಯದಲ್ಲಿನ ಇಂಥ ಒಂದು ಮನೋನಿರ್ಧಾರ ಮತ್ತು ಇದನ್ನು ಸ್ಥಿರಚಿತ್ತದಿಂದ ಅನುಸರಿಸುವದರ ಮೂಲಕವಾಗಿ ಅಭಿವೃದ್ಧಿಯಾಗುವ ಮನಸ್ಸಿನ ಹತೋಟಿ ಗುಣಗಳು ಎಷ್ಟೋ ಅವಶ್ಯ! ನಾವು ಸ್ನೇಹಪರವಲ್ಲದ ಈ ಲೋಕದಲ್ಲಿ ನಮ್ಮ ಒಡೆಯನ ನಿಮಿತ್ತವಾದ ನಿಂದನೆಗಳನ್ನೇ ನಿರೀಕ್ಷಿಸಬಹುದು; ಏಕೆಂದರೆ ತನ್ನ ದಣಿಗಿಂತ ಆಳು ಹೆಚ್ಚಿನವನಲ್ಲ. ಲೋಕ ಶರೀರ ಹಾಗು ಆಪಾದಕನಾದ ಸೈತಾನ ಇವರುಗಳು ನಮ್ಮ ಮಾರ್ಗವನ್ನು ವಿರೋಧಿಸುವರು: ಒಳಗೆ ಹೋರಾಟ ಹೊರಗೆ ಭಯ ಮತ್ತು ನೀತಿವಂತನಿಗೆ ವಿರೋಧವಾಗಿ ಗುರಿಯಿಟ್ಟ ಬಾಣಗಳು ಅಗ್ನಿಬಾಣಗಳು ಹಲವಾರು. ಆದರೆ ಬಾಧೆಕಷ್ಟಗಳ ಹಾಗೂ ತೀಕ್ಷಣಕರ ಪರೀಕ್ಷಾ ಸಮಯಗಳಲ್ಲಿರುವಾಗ ಸುರಕ್ಷಿತ ವಾಗಿರುವ ಮನೋಭಾವವು ಯಾವುದು? ನಮ್ಮನ್ನು ಪದೇ ಪದೇ ಬಹುವಾಗಿ ಕಾಡುವ ಎಲ್ಲಾ ಸಂಗತಿಗಳ ವಿಷಯವಾಗಿ ಅವುಗಳನ್ನು ಬಗೆಹರಿಸಲು ಯತ್ನಿಸುವುದಕ್ಕೆ ಮೊದಲು ನಾವು ದೇವರ ಮುಂದೆ ಮೌನವಾಗಿ ಆತನ ನಡೆಸುವಿಕೆಗೆ ಮತ್ತು ಆತನ ಚಿತ್ತವನ್ನು ತಿಳಿದುಕೊಳ್ಳುವ ಬಗ್ಗೆ ಎಚ್ಚರದಿಂದ ಕಾದುಕೊಂಡಿ ರುವುದಲ್ಲವೇ? ಆದುದರಿಂದ ಕೀರ್ತನೆಗಾರನು ಹೀಗೆ ಸಲಹೆ ಮಾಡಿದ್ದಾನೆ: "ನಾನು ಮೌನವಾಗಿದ್ದೆನು; ಒಳ್ಳೆಯದನ್ನಾದರೂ (ನನ್ನ ಸ್ವಂತ ದೃಷ್ಟಿಯಲ್ಲಿ ಸಹ ಒಳ್ಳೆಯದೆಂದು ತೋರುವದನ್ನು ಮಾಡದೆ ಇಲ್ಲವೇ ಹೇಳದೆ) ಆಡದೆ ಸುಮ್ಮನಿದ್ದೆನು; ಆದರೆ ನನ್ನ ಸಂಕಟ ಹೆಚ್ಚಿತು. ನನ್ನ ಹೃದಯದಲ್ಲಿ ಸಂತಾಪ ಹೆಚ್ಚಿತು; ನಾನು ಯೋಚಿಸುತ್ತಿರುವಲ್ಲಿ ಬೆಂಕಿಯುರಿಯಿತು (ಇದು ತೀಕ್ಷಣವಾದ ಪರೀಕ್ಷೆಯ ವರ್ಣನೆ). ಆಗ ನಾನು ಬಾಯಿಬಿಟ್ಟು..." ಹೀಗೆ ನುಡಿಯುವುದು ದೂಷಕರಿಗಲ್ಲ ಇಲ್ಲವೇ ಇತರರಿಗಲ್ಲ ಆದರೆ ಅದು ಕರ್ತನಿಗೆ.

ಹೌದು, ನಮ್ಮ ಸಂಕಷ್ಟಗಳನ್ನು ಮತ್ತು ವ್ಯಥೆಗಳನ್ನು ಕರ್ತನ ಬಳಿಗೆ ಕೊಂಡೊಯ್ಯುವುದು ನಮಗಿರುವ ಆಶೀರ್ವಾದಕರವಾದ ಸೌಭಾಗ್ಯ: "ಏಕೆಂದರೆ ನಮ್ಮ ಜೀವಿತದಲ್ಲಿನ ವ್ಯಥೆಸಂಕಷ್ಟಗಳಿಂದ ಕಹಿಯನ್ನು ಕಸಿದುಕೊಳ್ಳಲು ಆತನಿಗೆ ಗೊತ್ತಿರುವುದು"

ಕೀರ್ತನಗಾರನು ಸೂಚಿಸಿರುವಂತೆ, (ವಚನ 4–6) ಭೂಲೋಕದ ಸಂಗತಿಗಳೆಲ್ಲವೂ ವ್ಯರ್ಥವೆಂದೂ ಹಾಗೂ ಅವುಗಳು ನಮ್ಮ ಆತ್ಮದ ಹಂಬಲಿಕೆಗಳನ್ನು ತಣಿಸಲು ಇಲ್ಲವೇ ನೊಂದ ಮನವನ್ನು ಸಂತೈಸಲು ತೀವ್ರ ಅಸಮರ್ಥವಾದವು ಗಳೆಂದು ಅನುಭವಗಳಿಂದ ತೋರಿಸಿಕೊಡುವುದರ ಮೂಲಕ ವಾಗಿ ಆತನು ಇದನ್ನು ಮಾಡುವನು. ಅನಂತರದಲ್ಲಿ ಬರುವ ಆಲೋಚನೆ ಯೆಂದರೆ, ಈಗಿನ ಕಾಲದ ಜೀವಿತವು ಮತ್ತು ಅದರ ಚಿಂತಾಭಾರಗಳು ಪೀಡನೆಗಳು ಮತ್ತು ವ್ಯಥೆಗಳು ಗತಿಸಿ

ಹೋಗುತ್ತಿರುವುದಾಗಿಯೂ, ನಮ್ಮ ದಿನಗಳು ಕೇವಲ ಅಂಗೈ ಅಗಲದಷ್ಟಿರುವುದು ಅಲ್ಲದೆ ಮತ್ತು ನಮಗಾಗುವ ಜೀವಿತಾನುಭವ ಗಳು ನಮ್ಮನ್ನು ಎಷ್ಟು ಬಾಧಿಸುತ್ತಿದ್ದರೂ ಅವೆಲ್ಲವುಗಳು ಶೀಘ್ರದಲ್ಲಿ ಮುಗಿದು ಹೋಗುವವು. ಅಲ್ಲದೆ ಅವುಗಳು ತಮ್ಮ ಕಾರ್ಯವೆಸಗಲು ಬಿಟ್ಟಲ್ಲಿ ಅವುಗಳು ನಮ್ಮಲ್ಲಿ ಕೇವಲ ಸಮಾಧಾ ಪ್ರದವಾದ ನೀತಿಫಲಗಳನ್ನು ಉಂಟುಮಾಡಿ, ನಮ್ಮನ್ನು ದಮೆಯ ಮೂಲಕ ಶಿಕ್ಷಿತರನ್ನಾಗಿ ಮಾಡಿ, ನಾವು ಆಲೋಚನಾ ಪೂರ್ವಕವಾಗಿ ಪರಿಗಣಿಸುವವರಾಗುವಂತೆ ಮಾಡಿ, ಬಾಧೆಗಳನ್ನು ತಾಳ್ಮೆಯಿಂದ ಸಹಿಸಿಕೊಳ್ಳುವಂತ ಹಾಗು ದೇವರ ಮೇಲಿನ ಪ್ರೀತಿಪೂರ್ವಕವಾಗಿರುವ ಶ್ರದ್ಧೆ ನಂಬಿಗಸ್ತಿಕೆ ಮತ್ತು ಭರವಸೆಗಳುಳ್ಳ ಘನವಂತಿಕೆಯ ಗುಣದ ದೃಢಸ್ವಭಾವಗಳು ನಮ್ಮಲ್ಲಿ ಬೆಳೆಯು ವಂತೆ ಮಾಡುವವು. ಆಗ ಮುಂಬರಲಿರುವ ಜೀವಿತದಲ್ಲಿ ಲಭಿಸುವ ಭಾಗ್ಯಕರವಾದ ನೀತಿಯ ಪ್ರತಿಫಲಗಳ ವಿಷಯವಾಗಿ ನೀಡಲಾಗಿರುವ ಆಶ್ವಾಸನೆಗಳಿಗೆ ಒಂದು ಹೊಸದಾದ ಮತ್ತು ಘಾಡವಾಗ ಮಹತ್ವಗಳು ನಮ್ಮಲ್ಲಿ ಉಂಟಾಗಲು ಆರಂಭ ವಾಗುವದು; ಇಲ್ಲಿ ನಮಗಿರುವುದು  ಶಾಶ್ವತವಾದ ಪಟ್ಟಣವಲ್ಲ ಆದರೆ ನಾವು ಮುಂದೆ ಬರುವುದನ್ನು ಹುಡುಕುವವರಾಗಿ ದ್ದೇವೆಂಬ ಗ್ರಹಿಕೆಯು ನಮ್ಮಲ್ಲಿ ಉಂಟಾಗು ವಂತೆ ಮಾಡುವುದು. ಹೀಗೆ ಹೃದಯವು ಲೌಕೀಕ ಸಂಗತಿಗಳಿಂದ ಬೇರ್ಪಟ್ಟು ಪರಲೋಕದ ಸಂಗತಿಗಳ ಶ್ರೇಷ್ಠತೆ ಗಳನ್ನು ಅರಿತು ಕೊಳ್ಳುವಂತೆ ಮಾಡಲಾಗುವದು. ಕರ್ತನು ತಾನೇ ಹೊರತು ಬೇರೆ ಯಾವುದೂ ನಮ್ಮ ಆತ್ಮದ ಹಂಬಲಿಕೆ ಗಳನ್ನು ಸಂತೃಪ್ತಿಪಡಿಸಲು ಸಾಧ್ಯವಿಲ್ಲ. ಅದು ಬಿರುಗಾಳಿಯಲ್ಲಿ ಅತ್ತಿತ್ತ ಒಯ್ಯಲ್ಪಟ್ಟು, ಪರಿಶೋಧಿತವಾಗಿ ಈ ಮುಂದಿನ ಅರಿವು ಉಂಟಾಗುವಂತೆ ಮಾಡುವುದು:–

"ಅದೆಷ್ಟು ವ್ಯರ್ಥ ಇರುವುದೆಲ್ಲವೂ ಬಾನಿನಡಿ,
ಅದೆಷ್ಟು ಕ್ಷಣಿಕ ಪ್ರತಿ ಲೌಕಿಕ ಸಂತೋಷ,
ಅದೆಷ್ಟು ಕೃಶ ಅತ್ಯಂತ ಪ್ರೀತಿಮಯ ಬಂಧ,
ಇಂಥಾ ಒಂದು ಲೋಕಕ್ಕೆ ಬಂಧಿಸಿವೆ ನನ್ನ!"

ಹೀಗೆ ಶಿಕ್ಷಿಸಲ್ಪಟ್ಟು ಸಂತೈಸಲ್ಪಟ್ಟವರಾಗಿ, ನಾವು ಈ ಪ್ರಸ್ತುತ ಕಾಲದ ನಂತರದಲ್ಲಿ, ನಂಬಿಗಸ್ತರಾಗಿ ಜಯಶಾಲಿಗಳಾಗುವವರಲ್ಲಿ ಅಂತಿಮವಾಗಿ ಪ್ರಕಟಗೊಳ್ಳುವ ಪ್ರಭಾವವನ್ನು ದೃಷ್ಟಿಸುವವರಾಗು ತ್ತೇವೆ. ಆಗ ನಾವು ವಕ್ರಬುದ್ಧಿಯುಳ್ಳ ಮೂರ್ಖ ಜಾತಿಯವರ ಮಧ್ಯದಲ್ಲಿ ಒಳ್ಳೆಯದನ್ನು ಬೇಸರಗೊಳ್ಳದೆ ಮಾಡುವವರಾಗಿ ಕೇವಲ ನಂಬಿಕೆಯ ಮೂಲಕ ದೊರಕುವ ಬಹುಮಾನವನ್ನು ಹೊಂದಲು ಯತ್ನಿಸುವವರಾಗುವೆವು. ಹೀಗೆ ಆದರಣೆ ಮತ್ತು ಸಹಾಯಗಳನ್ನು ಹೊಂದಲು ಕರ್ತನ ಬಳಿಗೆ ಹೋಗುವುದರ ಮೂಲಕವಾಗಿ  ದೇವರ ಮಗನು ಶಿಕ್ಷಿತನಾಗಿ, ತೀವ್ರವಾದ ಪರಿಶೋಧನೆಗಳನ್ನು ಸಹಿಸಿಕೊಳ್ಳುವುದರ ಮೂಲಕವಾಗಿ ಆಶೀರ್ವಾದ ಹೊಂದಿದವನಾಗಿ, ದೇವರ ಪ್ರೀತಿ ಉಪಕಾರ ಮತ್ತು ಕೃಪೆಯ ವಿಷಯವಾಗಿ ಆಸಕ್ತಿಯಿಂದ ಮನದಟ್ಟುಮಾಡಿ ಕೊಳ್ಳುತ್ತಾ, ತಾನು ಲೋಕದ ಪಾಲಿಗೆ ಸತ್ತವನಾಗಿ ದೇವರಿಗಾಗಿ ಜೀವಿಸುವುದೆಂಬುದರ ಅರ್ಥವನ್ನು ಗ್ರಹಿಸಿಕೊಳ್ಳಲು ಆರಂಬಿಸು ವನು; ಮತ್ತು ಹೀಗೆ ಲೋಕದಿಂದ ಪ್ರತ್ಯೇಕವಾಗಿ ಕ್ರಿಸ್ತನೊಂದಿಗೆ ಬಹು ದೃಢವಾದ ಐಕ್ಯತೆಯನ್ನು ಹೊಂದಿದವ ನಾದಲ್ಲಿ, ಕೀರ್ತನೆಗಾರನು ಮುಂದುವರಿದು ಸೂಚಿಸಿರುವಂತೆ ಆತನ ಹೃದಯದ ಭಾವವು ಹೀಗಿರುವುದು: "ಹೀಗಿರಲಾಗಿ ಕರ್ತನೇ, ಇನ್ನು ಯಾವದಕ್ಕೆ ಕಾದುಕೊಂಡಿರಲಿ? ನೀನೇ ನನ್ನ ನಿರೀಕ್ಷೆ." (ವಚನ 7)

"ಪರದಿಂದ ಸ್ಪರ್ಶವಾದಲ್ಲಿ ದುಃಖವೂ ಸಹ,
ಆನಂದ ಪರವಶತೆಗಿಂತಲೂ ಮಿಗಿಲಾಗಿ ಪ್ರಜ್ವಲಿಸುವದು,
ಅಂಧಕಾರವು ಜ್ಯೋತೀರ್ಮಂಡಲಗಳನ್ನು ನಮಗೆ ತೋರಿಸುವಂತೆ
ಹಗಲಿನಲ್ಲಿ ನಾವು ಇದನ್ನು ಎಂದೂ ಕಂಡಿರಲಾರೆವು."

ಇವು ಪರಿಶೋಧನೆ ಹಾಗೂ ಬೇಸರಿಕೆಯ ಸನ್ನಿವೇಶಗಳಲ್ಲಿ ನಾಲಿಗೆಗೆ ಕಡಿವಾಣ ಹಾಕಿದವರಾಗಿ ನಮ್ಮ ಚಿಂತೆಗಳೆಲ್ಲವುಗಳನ್ನು ನಮ್ರತೆಯಿಂದ ಕರ್ತನ ಬಳಿಗೆ ಕೊಂಡೊಯ್ಯುವುದರ ಮೂಲಕವಾಗಿ ದೊರೆಯುವಂಥ ಭಾಗ್ಯಕರವಾದ ಫಲಿತಾಂಶ ಗಳು. ಇದರ ಅಂತ್ಯದಲ್ಲಿ ನಮ್ಮ ಮಾತುಗಳು ಕೃಪಾಪೂರ್ಣ ವಾಗಿಯೂ ಮತ್ತು ರಸವತ್ತಾಗಿಯೂ ಇದ್ದು ಎಲ್ಲಾ ಸಂದರ್ಭ ಗಳಲ್ಲಿಯೂ ಅವು ದೈವೋಕ್ತಿಗಳನ್ನು ನುಡಿದಂತಿರುವುದು.

ಈಗಿನ ಕಾಲವು ನಮ್ಮ (ಅಂದರೆ ಸಭೆಯ) ನ್ಯಾಯ ವಿಚಾರಣೆಯ ದಿನವೆಂಬ ಅಂಶದ ದೃಷ್ಟಿಯಿಂದ ಮೇಲೆ ಉಲ್ಲೇಖಿಸಿರುವ ನಮ್ಮ ಕರ್ತನ ಮಾತುಗಳು ಅಂದರೆ "ಸುಮ್ಮನೆ ಆಡುವ ಪ್ರತಿಯೊಂದು (ನಿರರ್ಥಕವಾದ ಇಲ್ಲವೇ ಹಾನಿಕರವಾದ) ಮಾತಿಗೂ" ನಾವು ನ್ಯಾಯವಿಚಾರಣೆಯ ದಿನದಲ್ಲಿ ಉತ್ತರ ಕೊಡಬೇಕೆಂಬುದನ್ನು ನಾವು ಗಣನೆಗೆ ತೆಗೆದುಕೊಂಡಲ್ಲಿ, ನಮ್ಮ ಮಾತುಗಳಿಗೆ ಎಂಥಾ ವಿಶೇಷವಾದ ಪ್ರಾಮುಖ್ಯತೆ ಇರುವುದೆಂಬು ದನ್ನು ನಾವು ನೋಡುತ್ತೇವೆ. ನಮ್ಮ ಮಾತುಗಳೆಲ್ಲವೂ ನಮ್ಮ ಹೃದಯದಲ್ಲಿ ತುಂಬಿರುವ ವಿಷಯಗಳಿಗೆ ಸೂಚಕವಾಗಿರುವು ದೆಂದು ಕರ್ತನು ಪರಿಗಣಿಸುವನು. ನಮ್ಮ ಮಾತುಗಳು ಬಂಡಾಯವೆಬ್ಬಿಸುವ ಇಲ್ಲವೇ ಅನಿಷ್ಠಿಕೆಯುಳ್ಳ ಅಥವಾ ನಿರುಪಯುಕ್ತವಾದ ಅಥವಾ ಹುಡುಗಾಟಿಕೆಯ ಅಥವಾ ಕರುಣೆಯಿಲ್ಲದೆ ಕೃತಜ್ಞತಾಹೀನವಾಗಿ ಅಪರಿಶುದ್ಧವಾದವುಗಳು ಇಲ್ಲವೇ ಮಲಿನವಾದವುಗಳು ಆಗಿದ್ದಲ್ಲಿ ಇದಕ್ಕನುಸಾರವಾಗಿ "ಹೃದಯದಲ್ಲಿ ತುಂಬಿರುವುದೇ ಬಾಯಲ್ಲಿ ಬರುವುದು" ಎಂಬ ತತ್ವದ ಮೇಲೆ ನಮ್ಮ ಹೃದಯದ ವಿಷಯದಲ್ಲಿ ತೀರ್ಪು ಮಾಡಲಾಗುವದು. ಹೀಗೆ ನಮ್ಮ ಅನುದಿನದ ಜೀವಿತದಲ್ಲಿನ ಎಲ್ಲಾ ಸನ್ನಿವೇಶಗಳಲ್ಲಿ ನಮ್ಮ ಬಾಯಿಂದ ಬರುವ ಮಾತುಗಳು ನಮ್ಮ ಹೃದಯದ ಸ್ಥಿತಿಗೆ ದೇವರ ಮುಂದೆ ಒಂದು ಸತತವಾದ ಪ್ರಮಾಣವಾಗಿರುತ್ತದೆ. ನಮ್ಮ ಕರ್ತನ ನುಡಿಗಳಲ್ಲಿ ಹೀಗೆ ಇದು ಅಡಕವಾಗಿರುವದು: ಹಾಗು ಈ ಒಂದು ದೃಷ್ಟಿಯಿಂದ ಮುಂದಿನ ಪ್ರಬೋಧನೆಯು ಎಷ್ಟು ಸಮಯೋಚಿತವಾದುದಲ್ಲವೇ, – "ಬಾಯಿದುಡುಕಬೇಡ, ದೇವರ ಮುಂದೆ ಮಾತಾಡಲು ನಿನ್ನ ಹೃದಯದಲ್ಲಿ ಆತುರಪಡದಿರು (ಅಲ್ಲದೆ "ಆತನ ದೃಷ್ಟಿಗೆ ಸಮಸ್ತವೂ ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ" ಎಂಬುದನ್ನು ನೆನಪಿನಲ್ಲಿಡು – ಇಬ್ರಿಯ 4:13); ದೇವರು (ನಮ್ಮ ನ್ಯಾಯಾಧಿಪತಿಯಾಗಿ) ಆಕಾಶದಲ್ಲಿ (ಸಿಂಹಾಸನದ ಮೇಲೆ) ಇದ್ದಾನಲ್ಲವೆ, ನೀನು ಭೂಮಿಯಲ್ಲಿದ್ದೀ (ಆತನ ನ್ಯಾಯಾಸನದ ಮುಂದೆ ವಿಚಾರಣೆಗೆ ಒಳಗಾಗಿದ್ದೀ): ಅದಕಾರಣ ನಿನ್ನ ಮಾತುಗಳು ಕೊಂಚವಾಗಿರಲಿ." ಅವುಗಳು

ಉಚಿತಾಲೋಚನೆಯುಳ್ಳದ್ದಾಗಿಯೂ ವಿವೇಕವುಳ್ಳದ್ದಾಗಿಯೂ ಇದ್ದು ದೇವರ ಸಮ್ಮುಖದಲ್ಲಿ ನುಡಿದವುಗಳಂತಿರಲಿ; ಅವುಗಳು ದುಡುಕಿನದಾಗಲಿ ಆತುರವುಳ್ಳದ್ದಾಗಲಿ ಮತ್ತು ಕೆಡುಕಿನ ಉದ್ದೇಶವುಳ್ಳದ್ದಾಗಲಿ ಆಗದಿರಲಿ.

ಅಲ್ಲದೆ ನಮ್ಮ ಮಾತುಗಳಿಂದ ಉದ್ಭವಿಸುವ ಜವಾಬ್ದಾರಿಯ ವಿಷಯವಾಗಿ ನಮ್ಮ ಕರ್ತನ ಹೇಳಿಕೆಯ ಅನುಸಾರ ಮತ್ತೂ ಸಹ ಬರೆದಿರುವುದೆಂದರೆ: "ಬಾಯನ್ನು ಕಾಯುವವನು ಜೀವವನ್ನು ಕಾಯುತ್ತಾನೆ; ತುಟಿಗಳನ್ನು ತೆರೆದುಬಿಡುವವನು ನಾಶವಾಗುವನು." (ಜ್ಞಾನೋಕ್ತಿ 13:3) ಕೆಡುಕಿನ ವಿಷಯಕ್ಕಾಗಲೀ ಅಥವಾ ಹುಡುಗಾಟಿಕೆಯ ರೂಪದಲ್ಲಿ ಯಾಗಲೀ ಅಲುಗಾಡುವ ನಾಲಿಗೆಗೆ ಎಂಥಾ ಭಯಾನಕವಾದ ಹೊಣೆಗಾರಿಕೆಯನ್ನು ಸೇರಿಸಲಾಗಿರುವುದು; ಅದು ದೇವರಿಗೂ ಸಹ ಅಗೌರವ ತರುವಂಥದ್ದಾಗಿರುವುದು! ಮತ್ತು ಅಪೋಸ್ತಲ – ನಾದ ಪೇತ್ರನ ಈ ಆದೇಶವು ಎಷ್ಟು ಅವಶ್ಯ, "ಆದುದರಿಂದ ನೀವು ಜಿತೇಂದ್ರಿಯರಾಗಿಯೂ ಪ್ರಾರ್ಥನೆಗೆ ಸಿದ್ಧವಾಗಿರುವಂತೆ ಸ್ವಸ್ಥಚಿತ್ತರಾಗಿಯೂ ಇರ್ರಿ." – 1 ಪೇತ್ರ 4:7; 1:13; 5:8

ಕೀರ್ತನೆಗಾರನು ಈ ವಿಧವಾದ ಜವಾಬ್ದಾರಿಯನ್ನು ಹೊಂದಿರುವುದಾಗಿ ಯೋಚಿಸುವವರೆಲ್ಲರ ಬಾಯಲ್ಲಿ ಮುಂದಿನ ಪ್ರಾರ್ಥನೆಯನ್ನು ಇರಿಸಿರುವನು: "ಯೆಹೋವನೇ, ನನ್ನ ಬಾಯಿಗೆ ಕಾವಲಿರಿಸು; ನನ್ನ ತುಟಿಗಳೆಂಬ ಕದವನ್ನು ಕಾಯಿ. ನನ್ನ ಹೃದಯವು ದುರಾಚಾರವನ್ನು ಮೆಚ್ಚದಂತೆಯೂ ನಾನು ದುಷ್ಟರೊಡನೆ ಕೂಡಿ ಕೆಟ್ಟ ಕೆಲಸಗಳನ್ನು ನಡೆಸದಂತೆ ನನ್ನನ್ನು ಕಾಪಾಡು." "ಯೆಹೋವನೇ, ನನ್ನ ಶರಣನೇ, ನನ್ನ ವಿಮೋಚಕನೇ, ನನ್ನ ಮಾತುಗಳು ನನ್ನ ಹೃದಯದ ಧ್ಯಾನವೂ ನಿನಗೆ ಸಮರ್ಪಕವಾಗಿರಲಿ." "ನನ್ನ ತುಟಿಗಳಿಂದ ಸ್ತುತಿ ಹೊರಡಲಿ; ನಿನ್ನ ನಿಬಂಧನೆಗಳನ್ನು ನನಗೆ ಕಲಿಸಿದ್ದೀಯಲ್ಲಾ. ನನ್ನ ನಾಲಿಗೆಯು ನಿನ್ನ ನುಡಿಗಳನ್ನು ವರ್ಣಿಸಲಿ; ನಿನ್ನ ಆಜ್ಞೆಗಳೆಲ್ಲಾ ನೀತಿಯೇ. ನಿನ್ನ ನೇಮಗಳನ್ನು ಆರಿಸಿಕೊಂಡಿದ್ದೇನೆ; ನಿನ್ನ ಕೈ ನನಗೆ ನೆರವಾಗಲಿ. ಯೆಹೋವನೇ, (ಪಾಪಗಳೆಲ್ಲವುಗಳಿಂದ, ಮತ್ತು ಪರಿಪೂರ್ಣತೆ ಹೊಂದುವದಕ್ಕಾಗಿ, ಮತ್ತು ಪರಿಶುದ್ಧತ್ವ ವೆಂಬ ಭೂಷಣವನ್ನು ಧರಿಸುವ ಸಲುವಾಗಿ) ನಿನ್ನಿಂದುಂಟಾಗುವ ರಕ್ಷಣೆಯನ್ನು ಕೋರುತ್ತೇನೆ; ನಿನ್ನ ಧರ್ಮಶಾಸ್ತ್ರವೇ ನನ್ನ ಆನಂದವು." – ಕೀರ್ತನೆ 141:3–4; 19:14; 119:171–174.

ನಾವು ಅಪೂರ್ಣರಾಗಿಲಾಗಿ ನುಡಿಯಲ್ಲಿಯೂ ನಡೆಯಲ್ಲಿಯೂ ಪರಿಪೂರ್ಣರಾಗಿರುವುದು ಅಸಾಧ್ಯ. ನಮ್ಮ ಅತ್ಯುತ್ತಮವಾದ ಪ್ರಯತ್ನಗಳ ಮೂಲಕವಾಗಿಯೂ ಸಹ ಕೆಲವು ವೇಳೆ ನಾವು ನುಡಿಯಲ್ಲಿ ಹಾಗೂ ನಡೆಯಲ್ಲಿ ತಪ್ಪುವುದುಂಟು, ಆದರೂ ಜಾಗರೂಕರಾಗಿ ಮತ್ತು ನಂಬಿಗಸ್ತರಾಗಿ ಪ್ರಯತ್ನಿಸುವುದರ ಮೂಲಕ ನಮ್ಮ ಮಾತಿನಲ್ಲಿ ಹಾಗೂ ವರ್ತನೆಯಲ್ಲಿ ಸಂಪೂರ್ಣವಾದ ಪರಿಪಕ್ವತೆಯನ್ನು ಪಡೆಯಲು ಬಯಸುವವರಾಗಬೇಕು. ಹೀಗಿದ್ದಾಗ್ಯೂ ಸುಮ್ಮನೆ ಆಡಿದ ಪ್ರತಿಯೊಂದು ಮಾತಿನ ವಿಷಯವಾಗಿ ನಾವು ನ್ಯಾಯ– ವಿಚಾರಣೆಯ ದಿನದಲ್ಲಿ ಉತ್ತರಕೊಡಬೇಕು. ನಮ್ಮ ಅನುದಿನದ ನಡಾವಳಿಯನ್ನು ಪರಾಮರ್ಶಿಸುವುದು ಪ್ರತಿಯೊಬ್ಬ ಕ್ರೈಸ್ತನ ಕರ್ತವ್ಯವಾಗಿದ್ದು ಮತ್ತು ಹೀಗೆ ಪರಾಮರ್ಶಿಸುವಾಗ ಯಾವುದೇ ಒಂದು ವಿಧವಾಗಿ ನಮ್ಮ ಮಾತುಗಳಿಂದ ಕರ್ತನಿಗೆ ಅಗೌರವ ಉಂಟಾಗಿರುವುದು ಕಂಡುಬಂದದ್ದೇಯಾದಲ್ಲಿ ನಾವು ನೆನಪಿಡಬೇಕಾದುದೆಂದರೆ: "ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತಿವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ." (1 ಯೋಹಾನ 2:1) ಮತ್ತು ಈ ಸಹಾಯಕನ ಹೆಸರಿನಲ್ಲಿ ನಾವು ಕೃಪಾಸನದ ಬಳಿಗೆ ಹೋಗಿ ನಮ್ಮ ಪರಲೋಕದ ತಂದೆಗೆ ನಮ್ಮ ತಪ್ಪುಗಳು ನಮಗೆ ಗ್ರಹಿಕೆಯಾಗಿರು ವುದನ್ನು ವಿವರಿಸಿ ಆತನ ಹೆಸರನ್ನು ಮತ್ತು ಆತನ ಮಾರ್ಗವನ್ನು ಪರಿಶುದ್ಧವಾದ ನಡವಳಿಕೆ ಮತ್ತು ಸಂಭಾಷಣೆಗಳ ಮೂಲಕ ಮಹಿಮೆ ಪಡಿಸುವುದರಲ್ಲಿ ನಾವು ವಿಫಲರಾದುದಕ್ಕಾಗಿ ಘಾಡವಾದ ಸಂತಾಪವನ್ನು ಸೂಚಿಸುವವರಾಗಿ ಈ ಪಾಪವು ನಮ್ಮ ಲೆಕ್ಕಕ್ಕೆ ಸೇರಿಸಲ್ಪಡದಿರಲು ಮತ್ತು ಪಾಪವಿಶುದ್ಧಿಗಾಗಿ ಕ್ರಿಸ್ತನಲ್ಲಿ ಮಾಡಿರುವ ಕೃಪಾಪೂರ್ಣವಾದ ಏರ್ಪಾಟಿನ ಮೂಲಕವಾಗಿ ಅದನ್ನು ಅಳಿಸಿಹಾಕುವುದಕ್ಕಾಗಿ ದೀನತೆಯಿದಿಂದ ವಿಜ್ಞಾಪಿಸಿಕೊಳ್ಳಬೇಕು. ಇದನ್ನು ನಮ್ಮ ನಿರೀಕ್ಷೆ ಮತ್ತು ಭರವಸೆ ಗಳೆಲ್ಲವೂ ಆತನ ಅಮೂಲ್ಯವಾದ ರಕ್ತದ ಮೇಲಿರುವದೆಂಬುದಾಗಿ ಅರಿಕೆಮಾಡಿಕೊಳ್ಳುವುದರ ಮೂಲಕವಾಗಿ ಮಾಡಿಕೊಳ್ಳಬೇಕು.

ನಾವು ಸುಮ್ಮನೆ ಆಡಿದ ಪ್ರತಿಯೊಂದು ಮಾತಿನ ವಿಷಯವಾಗಿ ಹೀಗೆ ಲೆಕ್ಕವನ್ನು ಒಪ್ಪಿಸಲೇಬೇಕು; ಮತ್ತು ನಮ್ಮ ಪಶ್ಚಾತಾಪದ ಮಾತಿನ ಮೂಲಕವಾಗಿ ಹಾಗು ಕ್ರಿಸ್ತನ ಯಜ್ಞಫಲದ ಸಹಾಯವನ್ನು ನಂಬಿಕೆಯ ಮೂಲಕ ಅನ್ವಯಿಸಿಕೊಳ್ಳುವರಿಂದ ನಾವು ದೋಷಮುಕ್ತರಾಗುವೆವು. ಇಲ್ಲವಾದಲ್ಲಿ ಕರ್ತನಿಗೆ ಅಗೌರವ ಉಂಟುಮಾಡಿದ ನಿರರ್ಥಕವಾದ ಮಾತುಗಳು ನಮಗೆ ವಿರೋಧವಾಗಿ ನಿಂತು ನಮ್ಮನ್ನು ಖಂಡನೆಮಾಡುವುದು ಮತ್ತು ನಾವು ಅದರ ಪರಿಣಾಮಗಳನ್ನು ಅನುಭವಿಸುವಂಥ ಇಕಟ್ಟಿನಲ್ಲಿ ಬೀಳುತ್ತೇವೆ. ಅದರ ಮೊದಲ ಪರಿಣಾಮವು ನಮಗೇ ಉಂಟಾಗುವ ಹಾನಿ, ಕಾರಣ ಪ್ರತಿಯೊಂದು ಕೆಟ್ಟ ಆಲೋಚನೆ ಅಥವಾ ಮಾತುಗಳು ನಮ್ಮ ಗುಣನಡತೆಯನ್ನು ಕಠಿಣವಾಗುವಂತೆ ಮಾಡಿ ಅನೀತಿಯ ಕಡೆಗೆ ಒಲವುತೋರುವಂತೆ ಮಾಡುತ್ತವೆ. ಎರಡನೆಯ ಪರಿಣಾಮವು ಇತರರಿಗೆ ಇದು ಒಂದು ಕೆಟ್ಟ ಮಾದರಿಯಾಗಿ ಅವರಲ್ಲಿ ಕೆಟ್ಟ ಸಂಗತಿಗಳು ಕೆರಳುವಂತೆ ಮಾಡುವವು. "ಮೃದುವಾದ ಪ್ರತ್ಯುತ್ತರವು ಸಿಟ್ಟನ್ನಾರಿಸುವುದು; ಬಿರುನುಡಿಯು ಸಿಟ್ಟನ್ನೇರಿಸುವುದು." (ಜ್ಞಾನೋಕ್ತಿ 15:1) ಹೀಗೆ ಅವಿವೇಕದ ಮತ್ತು ನಿಷ್ಕರುಣೆಯ ಮಾತುಗಳಿಂದ ನಾವು ನಮ್ಮ ಸುತ್ತಮುತ್ತಲಲ್ಲಿ ತೊಂದರೆಯನ್ನು ಎಬ್ಬಿಸಿಕೊಳ್ಳಬಹುದು. ಆಗ ಅದು ನಮ್ಮ ತಪ್ಪಿಗೆ ಶಾಸ್ತಿಯ ಸಾಧನವಾಗಿ, ದಮೆಯ ವಿಷಯ ವಾಗಿ ಪಾಠ ನೀಡಿ, ಇತರರ ಅನಿಸಿಕೆ ಅಭಿಪ್ರಾಯಗಳನ್ನು ಪರಿಗಣನೆಗೆ ತೆಗೆದುಕೊಳ್ಳುವಂತೆ ನಮಗೆ ಕಲಿಸಿಕೊಡುತ್ತವೆ. ಕಷ್ಟಶೋಧನೆಗಳು ಬಂದಾಗ ಕರ್ತನನ್ನು (ಅಥವಾ ಸೈತಾನನನ್ನು) ದೂಷಿವುದು ಆಗಾಗ್ಗೆ ನಡೆಯುವ ಸಂಗತಿ, ಆದರೆ ಅವು ನಮ್ಮ ತಪ್ಪಿಗೆ ಸಹಜವಾಗಿ ಲಭಿಸುವ ಪ್ರತಿಫಲಗಳಾಗಿರುತ್ತವೆ. ಹಾಗು ಯಾರು (ತಮ್ಮಲ್ಲೇ ಇರುವ) ಆ ಸಂಕಷ್ಟದ ಮೂಲವನ್ನು ಗುರುತಿಸಲು ವಿಫಲರಾಗುವರೋ ಅವರು ತಾವೇ ದೇವರ

ವಾಕ್ಯಗಳಿಗೆ ವಿಧೇಯರಾಗಿ ತಮ್ಮನ್ನು ಶಿಸ್ತುಕ್ರಮಗಳಿಂದ ಶಿಕ್ಷಿಸಿಕೊಳ್ಳುವುದರ ಮೂಲಕ ಕ್ಷಮಾದಾನ ಹೊಂದಲು ಸಾಧ್ಯವಾದದ್ದನ್ನು ತಮ್ಮಿಂದ ಆಶ್ಚರ್ಯಕರವಾದ ರೀತಿಯಲ್ಲಿ ದೂರ ಮಾಡಿಕೊಳ್ಳಲು ಕರ್ತನಿಗೆ ವ್ಯರ್ಥವಾಗಿ ಪ್ರಾರ್ಥಿಸುವರು. "ನಮ್ಮನ್ನು ನಾವೇ ವಿಚಾರಿಸಿಕೊಂಡರೆ (ತಿದ್ದುಕೊಂಡರೆ) ನ್ಯಾಯವಿಚಾರಣೆಗೊಳಗಾಗುವದಿಲ್ಲ. ಆದರೆ ನಾವು ಕರ್ತನ ನ್ಯಾಯವಿಚಾರಣೆಗೆ ಒಳಗಾಗಿರಲಾಗಿ ಆತನು ಇವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರ ದೆಂದು ನಮ್ಮನ್ನು ಶಿಕ್ಷಿಸುತ್ತಾನೆ." (1 ಕೊರಿಂಥ 10:31, 32) ಆದರೆ ಕಷ್ಟತೊಂದರೆಗಳು ನೇರವಾಗಿ ದೇವರಿಂದ ಅಥವಾ ಸೈತಾನನಿಂದ ಉಂಟಾಗುವುದಿಲ್ಲವೆಂಬುದನ್ನು ಸಹ ಒಪ್ಪಿಕೊಳ್ಳಲೇಬೇಕು (ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶಗಳಿಂದ ಎಳೆಯಲ್ಪಟ್ಟು ಮರುಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ.); ನಮ್ಮಲ್ಲಿ ಸಹಜವಾಗಿರುವ ಪ್ರವೃತ್ತಿ ಯೆಂದರೆ ಈ ಸಂಗತಿಗಳಿಗೆ ಇತರರನ್ನು ದೂಷಿಸುವುದು ಹಾಗು ತಾವು ತಾಳ್ಮೆಗೆಟ್ಟು ಆತುರದಿಂದ ನುಡಿದದ್ದು ಮತ್ತು ನಡೆದುಕೊಂಡದ್ದು ಇತರರ ತಪ್ಪಿನಿಂದ ಉಂಟಾದುದೆಂದು ಅಂದುಕೊಳ್ಳುವುದು. ಎಷ್ಟು ಮಂದಿ ಹೀಗೆ ಮರುಳಾಗಿ ಈ ವಿಧವಾಗಿ ಅಲೋಚಿಸುವುದಕ್ಕೆ ಧೈರ್ಯತಂದುಕೊಂಡಿರುವರು: "ಬೇರೆ ಎಲ್ಲರೂ ನನ್ನಲ್ಲಿರುವಂಥ ವಿವೇಚನೆಯುಳ್ಳ ಹಾಗು ಉದಾರವಾದ ಗುಣಸ್ವಭಾವಗಳನ್ನು ಹೊಂದಿದ್ದೇ ಆದಲ್ಲಿ ನಮ್ಮ ಕುಟುಂಬ ಇಲ್ಲವೇ ಸಭೆಕೂಡುವಿಕೆಯು ಅಥವಾ ಸಮಾಜವು ಸಾಕ್ಷಾತ್ ಭೂಲೋಕದ ಮೇಲಿನ ಪರಲೋಕವಾಗುವುದು." ಪ್ರಿಯರೇ, ನಮ್ಮನ್ನು ನಾವು ಪರೀಕ್ಷಿಸಿಕೊಳ್ಳೋಣ, ನಾವು ಬಹು ದೀನತೆಯುಳ್ಳವರಾಗೋಣ, ಇಲ್ಲದಿದ್ದಲ್ಲಿ ನಮ್ಮ ಪ್ರತಿಯೊಂದು ಮಾತುಗಳಿಗೆ ನಮ್ಮನ್ನು ನಾವೇ ಅಭಿನಂದಿಸಿಕೊಂಡವರಾಗಿ ಆತ್ಮ ಸಂತೃಪ್ತಿ ಹೊಂದಿದವರೆಂದು (ನಾವು ಜೋರಾಗಿ ನುಡಿಯದಿದ್ದರೂ) ನಮ್ಮ ಹೃದಯದಲ್ಲಿ ಎಣಿಸಿಕೊಂಡು ನಮಗೆ ದಂಡನೆಯನ್ನು ತಂದುಕೊಳ್ಳುವೆವು. "ನಿಮಗೆ ಪ್ರೀತಿ ತೋರಿಸುವ ವರನ್ನೇ ನೀವು ಪ್ರೀತಿಸಿದರೆ ನಿಮಗೆ ಏನು ಹೊಗಳಿಕೆ ಬಂದೀತು? ಪಾಪಿಷ್ಠರು ಸಹ ಹಾಗೆ ಮಾಡುತ್ತಾರಲ್ಲಾ. ನಿಮಗೆ ಮೇಲನ್ನು ಮಾಡುವವರಿಗೇ ನೀವು ಮೇಲನ್ನು ಮಾಡಿದರೆ ಏನು ಹೊಗಳಿಕೆ ಬಂದೀತು? (ಅದರಿಂದ ಏನು ಫಲ ದೊರೆಯುವುದು?) ಪಾಪಿಷ್ಠರು ಸಹ ಹಾಗೆ ಮಾಡುತ್ತಾರಲ್ಲಾ. (ಲೂಕ 6:32–38) "ಒಬ್ಬನು ಅನ್ಯಾಯವಾಗಿ ಬಾಧೆಪಡುವವನಾದರೆ" ನಮ್ಮ ಬಾಧೆಗಳು ದೇವರಿಂದ ಸುಗಂಧವಾಸನೆಯ ಯಜ್ಞವಾಗಿ ಅಂಗೀಕಾರವಾಗುವುದು. "ತಪ್ಪುಮಾಡಿ ಗುದ್ದು ತಿನ್ನುವುದರಲ್ಲಿ ನೀವು ತಾಳ್ಮೆಯಿಂದಿದ್ದರೆ ಅದರಿಂದೇನು ಕೀರ್ತಿ? ಆದರೆ ಒಳ್ಳೆಯದನ್ನು ಮಾಡಿ ಬಾಧೆಪಡುವದರಲ್ಲಿ ನೀವು ತಾಳ್ಮೆಯಿಂದಿ ದ್ದರೆ ಅದು ದೇವರ ಮುಂದೆ ಶ್ಲಾಘ್ಯವಾಗಿದೆ. ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ." (1 ಪೇತ್ರ 2:19–21) ಪ್ರೀಯರೇ, ನಮ್ಮ ಬಾಧೆಗಳು ಕೇವಲ ನೀತಿಯ ನಿಮಿತ್ತವಾಗಿರು ವಂತೆ ನೋಡಿಕೊಳ್ಳೋಣ ಮತ್ತು ನಮಗೆ ವಂಶಪಾರಂಪರ್ಯವಾಗಿ ಅಥವಾ ಅಭ್ಯಾಸವಾಗಿ ಬಂದ ತಪ್ಪುದೋಷಗಳ ಫಲವಾಗಿ ರುವ ಶ್ರಮಸಂಕಟಗಳನ್ನು ದೇವರ ಮೇಲಾಗಲಿ ಅಥವಾ ನೆರಹೊರೆಯವರ ಮೇಲಾಗಲೀ ಆರೋಪಿಸದೇ ಇರುವ ಹಾಗೆ ನೋಡಿಕೊಳ್ಳೋಣ.

"ಅನೇಕ ವಿಷಯಗಳಲ್ಲಿ ನಾವು ತಪ್ಪುವುದುಂಟು. ಒಬ್ಬನು ಮಾತಿನಲ್ಲಿ ತಪ್ಪದಿದ್ದರೆ ಅವನು ಶಿಕ್ಷಿತನೂ ತನ್ನ ದೇಹವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಮರ್ಥನೂ ಆಗಿದ್ದಾನೆ." (ಯಾಕೋಬ 3:12) ಆದರೆ ಇಂತಹ ಮನುಷ್ಯನೇ ದೊರೆಯುವುದಿಲ್ಲ. ನಮ್ಮೆಲ್ಲರಿಗೂ ಸಹಾಯಕನಾಗಿರುವ ನಮ್ಮ ವಿಮೋಚಕನ ಯಜ್ಞಫಲದ ಅಗತ್ಯವಿದ್ದು ಅದಕ್ಕಾಗಿ ಸತತವಾಗಿ ಬೇಡಿಕೊಳ್ಳುತ್ತಿರಬೇಕು. ಅದೇ ಸಮಯದಲ್ಲಿ ನಮ್ಮ ಆಲೋಚನೆಗಳೆಲ್ಲವನ್ನೂ ಕ್ರಿಸ್ತನ ಚಿತ್ತಕ್ಕೆ ಅಧೀನಪಡಿಸಲು ಹಾಗೂ ಕರ್ತನ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರಲು ಅನುದಿನವೂ ಪ್ರಯಾಸಪಡಬೇಕು.

ಸಂಗತಿಯನ್ನು ಈ ದೃಷ್ಟಿಯಿಂದ ಗಮನಿಸಿದಾಗ, ಕರ್ತನ ಜನರೆಲ್ಲರೂ ಈ ಅಂಶವನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಹೆಚ್ಚು ಪೂರ್ಣವಾಗಿ ಪರಿಶ್ರಮಿಸುವವರೆಂದು ನಾವು ವಿಶ್ವಾಸಿಸುವೆವು: ಅದೇನೆಂದರೆ, ಈಗ ನಾವು ದೇವರ ನ್ಯಾಯಾಸನದ ಮುಂದೆ ನಿಂತಿರಲಾಗಿ ಪೇತ್ರನ ಮಾತಿನಂತೆ ನಾವು ವಿಚಾರಿಸಿಕೊಳ್ಳುವುದು, "ನೀವು ...ಎಷ್ಟೋ ಪರಿಶುದ್ಧವಾದ ನಡವಳಿಕೆಯೂ ಭಕ್ತಿಯೂ ಉಳ್ಳವರಾಗಿರಬೇಕಲ್ಲಾ?" ದೇವರ ಸಾರೂಪ್ಯವೆಂಬುದು ಖಂಡಿತವಾಗಿಯೂ ಹಾನಿಕರವಾದ ಯಾವ ಹರಟೆಮಾತು–ಗಳನ್ನಾಗಲಿ, ಮಲಿನವಾದ ಅಥವಾ ಅಪರಿಶುದ್ಧವಾದ ಯಾವ ಸಂಬಾಷಣೆಯನ್ನಾಗಲೀ, ನಿಷ್ಕಾಹೀನವಾದ ಅಥವಾ ಬಂಡಾಯದ ಯಾವ ಮಾತುಗಳನ್ನಾಗಲೀ ಒಳಗೊಂಡಿ–ರುವುದಿಲ್ಲ. ಕ್ರಿಸ್ತನ ಹೆಸರನ್ನು ಪ್ರಮಾಣಿಕತೆಯಿಂದಲೂ ಸತ್ಯತೆಯಿಂದಲೂ ಹೆಸರಿಸಿಕೊಂಡಿರುವ ಎಲ್ಲರೂ ಇಂಥಾ ವಿಷಯಗಳಿಂದ ದೂರವಿರಲಿ. ಅನುದಿನವೂ ನಮ್ಮ ಕರ್ತನಿಗೆ ಲೆಕ್ಕವನ್ನು ಒಪ್ಪಿಸುವವರಾಗಿ ನಿಷ್ಪ್ರಯೋಜನವಾದ ಯಾವ ಮಾತುಗಳೂ, ಪಶ್ಚಾತ್ತಾಪ ಪಡದ ಪರಿಣಾಮವಾಗಿ ಕ್ಷಮಿಸಲ್ಪಡದೆ ಅವು ನಮಗೆ ವಿರೋಧವಾದ ಸಾಕ್ಷಿಯಾಗಿ ನಿಲ್ಲದಂತೆ ನೋಡಿಕೊಳ್ಳೋಣ."ಹೇಗೂ ಕ್ರಿಸ್ತನ ಸುವಾರ್ತೆಗೆ ಯೋಗ್ಯವಾಗಿ ನಡೆದುಕೊಳ್ಳಿರಿ." "ಯಾವಾವುದು ಸತ್ಯವೂ ಮಾನ್ಯವೂ ನ್ಯಾಯವೂ ಶುದ್ಧವೂ ಪ್ರೀತಿಕರವೂ ಮನೋಹರವೂ ಆಗಿದೆಯೋ, ಯಾವದು ಸದ್ಗುಣವಾಗಿದೆಯೋ ಯಾವುದು ಕೀರ್ತಿಗೆ ಯೋಗ್ಯವೋ ಅವೆಲ್ಲವುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳಿರಿ." ಹೀಗೆ ಹೃದಯವೆಂಬ ಒಳ್ಳೆಯ ಬೊಕ್ಕಸದ ಮೂಲಕವಾಗಿ ಸತ್ಯ ಹಾಗು ಸ್ವಸ್ಥತೆಯ ಮಾತುಗಳನ್ನು ನುಡಿಯಲು, ಭಕ್ತಿಯುಳ್ಳ ನಡೆ ಮತ್ತು ನುಡಿಗಳಿಂದ ನಮ್ಮ ಕರ್ತನನ್ನು ಗೌರವಿಸಲು, (ಪರಿಪೂರ್ಣತೆಯಿಂದ) ಬಿದ್ದು ಹೋದ ಸ್ವಭಾವದ ನಿಮಿತ್ತವಾಗಿ ನಮ್ಮಲ್ಲಿರುವ ಕೆಟ್ಟ ಪ್ರವೃತ್ತಿಗಳನ್ನು ಸ್ವಾಧೀನಮಾಡಿಕೊಳ್ಳಲು ಮತ್ತು ಅನ್ಯಜನರ ಮುಂದೆ ಯೋಗ್ಯವಾಗಿ ನಡೆದುಕೊಳ್ಳಲು ನಾವು ಶಕ್ತರಾಗುವೆವು. ಮತ್ತು "ನಿಮ್ಮ ನಡವಳಿಕೆಯು ಅನ್ಯಜನರ ಮಧ್ಯದಲ್ಲಿ ಯೋಗ್ಯವಾಗಿರಲಿ; ಆಗ ಅವರು ಯಾವ ವಿಷಯದಲ್ಲಿ ನಿಮ್ಮನ್ನು ಅಕ್ರಮಗಾರರೆಂದು ನಿಂದಿಸುತ್ತಾರೋ ಆ ವಿಷಯದಲ್ಲಿಯೇ ನಿಮ್ಮ ಸತ್ಕ್ರಿಯೆಗಳನ್ನು ಕಣ್ಣಾರೆ ಕಂಡು ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು." – ಫಿಲಿಪ್ಪ 1:27; 4:8; 1 ಪೇತ್ರ 2:12

ನಾವು ಅನುದಿನವೂ ದೇವರಿಗೆ ನಮ್ಮ ಲೆಕ್ಕಗಳನ್ನು ಒಪ್ಪಿಸುವವರಾಗಿ, ಮುಂಬರುವ ಪ್ರತಿಯೊಂದು ದಿನದಲ್ಲೂ ಪೂರ್ಣ ಜಯಶಾಲಿಗಳಾಗಿ ಅಧಿಕ ಶಕ್ತರಾಗಲು ಆತನ ಕೃಪೆಯನ್ನು ಬೇಡಿದಲ್ಲಿ, ನಾವು ನ್ಯಾಯವಿಚಾರಣೆಯಲ್ಲಿ ನಿರ್ದೋಷಿಗಳೆಂದು ತೀರ್ಪುಹೊಂದಿ, ದೇವರಿಗೆ ಮೆಚ್ಚಿಗೆಯಾಗಿ ಅಂಗೀಕರಿಸಲ್ಪಟ್ಟವರೆಂದು ಪವಿತ್ರಾತ್ಮನ ಮೂಲಕವಾಗಿ ನಮ್ಮ ಆತ್ಮದಲ್ಲಿ ಸಾಕ್ಷಿಯನ್ನು ಹೊಂದಿ, ಕ್ರಿಸ್ತನ ಮುಖಾಂತರವಾಗಿ ದೇವರ ಸಮಕ್ಷಮದಲ್ಲಿ ಒಪ್ಪಲ್ಪಟ್ಟವರಾಗಿ ನಿಂತುಕೊಳ್ಳುವೆವು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | ಕ್ರಿಸ್ತನ ಶಿಷ್ಯರೇ ಆತನ ನಿಕಟ ಸಂಬಂಧಿಗಳು | 12:46–50 | 3:31–35 | 8:19–21 | –– |

## ಮತ್ತಾಯ 12:46–50

ಆತನು ಜನರ ಗುಂಪುಗಳ ಸಂಗಡ ಇನ್ನೂ ಮಾತಾಡುತ್ತಿರುವಾಗ ಆತನ ತಾಯಿಯೂ ತಮ್ಮಂದಿರೂ ಆತನನ್ನು ಮಾತಾಡಿಸಬೇಕೆಂದು ಹೊರಗೆ ನಿಂತಿದ್ದರು. ಆಗ ಒಬ್ಬನು–ಇಗೋ, ನಿನ್ನ ತಾಯಿಯೂ ನಿನ್ನ ತಮ್ಮಂದಿರೂ ನಿನ್ನನ್ನು ಮಾತಾಡಿಸಬೇಕೆಂದು ಹೊರಗೆ ನಿಂತಿರುತ್ತಾರೆ ಅಂದನು. ಅದಕ್ಕಾತನು ಆ ಮಾತು ಹೇಳಿದವನಿಗೆ–ನನಗೆ ತಾಯಿ ಯಾರು? ನನಗೆ ತಮ್ಮಂದಿರು ಯಾರು? ಎಂದು ಹೇಳಿ, ಶಿಷ್ಯರ ಕಡೆಗೆ ಕೈ ತೋರಿಸಿ–ಇಗೋ, ನನ್ನ ತಾಯಿ, ನನ್ನ ಅಣ್ಣತಮ್ಮಂದಿರು. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ನನಗೆ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು ಅಂದನು.

## ಮಾರ್ಕ 3:31–35

ಜನರು ಆತನ ಸುತ್ತಲು ಕೂತುಕೊಂಡಿದ್ದಾಗ ಆತನ ತಾಯಿಯೂ ತಮ್ಮಂದಿರೂ ಬಂದು ಹೊರಗೆ ನಿಂತುಕೊಂಡು ಆತನನ್ನು ಕರೇ ಕಳುಹಿಸಿದರು. ಆ ಜನರು ಆತನಿಗೆ–ನಿನ್ನ ತಾಯಿಯೂ ನಿನ್ನ ತಮ್ಮಂದಿರೂ ನಿನ್ನನ್ನು ಹುಡುಕಿಕೊಂಡು ಬಂದು ಹೊರಗೆ ನಿಂತಿರುತ್ತಾರೆ ನೋಡು ಎಂದು ಹೇಳಿದ್ದಕ್ಕೆ ಆತನು ಅವರಿಗೆ–ನನಗೆ ತಾಯಿಯೂ ತಮ್ಮಂದಿರೂ ಯಾರು? ಎಂದು ಹೇಳಿ ತನ್ನ ಸುತ್ತಲೂ ಕೂತಿದ್ದವರನ್ನು ನೋಡಿ–ಇಗೋ, ನನ್ನ ತಾಯಿ, ನನ್ನ ತಮ್ಮಂದಿರು. ದೇವರ ಚಿತ್ತದಂತೆ ನಡಯುವವನೇ ನನಗೆ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು ಅಂದನು.

## ಲೂಕ 8:19–21

ಆತನ ತಾಯಿಯೂ ತಮ್ಮಂದಿರೂ ಅತನಿದ್ದಲ್ಲಿಗೆ ಬಂದು ಜನರ ಗುಂಪಿನ ನಿಮಿತ್ತ ಆತನ ಬಳಿಗೆ ಸೇರಲಾರದೆ ಇದ್ದರು. ಜನರು ಆತನಿಗೆ–ನಿನ್ನ ತಾಯಿಯೂ ನಿನ್ನ ತಮ್ಮಂದಿರೂ ನಿನ್ನನ್ನು ಕಾಣಬೇಕೆಂದು ಹೊರಗೆ ನಿಂತಿರುತ್ತಾರೆ ಎಂದು ಹೇಳಿದಾಗ ಆತನು ಅವರಿಗೆ–ಯಾರು ದೇವರ ವಾಕ್ಯವನ್ನು ಕೇಳಿ ಅದರಂತೆ ನಡೆಯುತ್ತಾರೋ ಅವರೇ ನನಗೆ ತಾಯಿಯೂ ಅಣ್ಣತಮ್ಮಂದಿರೂ ಆಗಬೇಕು ಎಂದು ಉತ್ತರಕೊಟ್ಟನು.

# “ನನಗೆ ತಾಯಿಯೂ ತಮ್ಮಂದಿರೂ ಯಾರು?”

**ರೀಪ್ರಿಂಟ್ಸ್ ಪುಟ 943**

ದೇವರ ಆತ್ಮಿಕ ಮಕ್ಕಳಾಗಿ ಹೊಸ ಸಂಬಂಧಕ್ಕೆ ಸೇರಿದವರಾದ ನಾವು ಈ ಬದಲಾದ ಸಂಬಂಧದ ಬಗ್ಗೆ ನಾವು ಆಗಾಗ್ಗೆ ಜಾಗರೂಕರಾಗಿ ಪರಿಗಣಿಸುವುದು ಒಳ್ಳೆಯದು. ಅತಿ ನಿಕಟವಾದ ನಮ್ಮ ಸಂಬಂಧವು ಇನ್ನು ಭೂಸಂಬಂಧದ ಮೂಲವಾಗಿರುವುದಿಲ್ಲ. ನಮ್ಮ ಹಿತಾಸಕ್ತಿ ನಿರೀಕ್ಷೆ ಮತ್ತು ಗುರಿಉದ್ದೇಶಗಳು ಈಗ ಪರಲೋಕದ ಕುಟುಂಬಕ್ಕೆ ಸಂಬಂಧಿಸಿದುದಾಗಿರುವುದು; ಮತ್ತು ನಾವು ಇದನ್ನು ಹೆಚ್ಚು ಪೂರ್ಣವಾಗಿ ಅರಿತುಕೊಳ್ಳುತ್ತಾ ಹೋದಂತೆಲ್ಲಾ ನಮ್ಮ ಪ್ರೀತಿವಿಶ್ವಾಸಗಳು ದೇವರ ಕುಟುಂಬದತ್ತ ಸಾಗುತ್ತಾ ಬರುವುದು. ಮತ್ತು ಒಬ್ಬರ ಸಂಗಡ ಮತ್ತೊಬ್ಬರಿಗಿರುವ ಅನ್ಯೋನ್ಯತೆಯು ಹೇಗಿರಬೇಕೆಂದರೆ ಅದು ಒಬ್ಬರ ಸಂಗಡಲೊಬ್ಬರಿಗಿರುವ ಪರಸ್ಪರ ಪ್ರೀತಿಯನ್ನು ಗಾಢವಾಗಿಸಿ ವಿಶಾಲವಾಗಿಸುತ್ತಾ ಬರುವಂಥದ್ದಾಗಿರಬೇಕು.

ನಮ್ಮ ಕರ್ತನು ಮೇಲೆ ವ್ಯಕ್ತಪಡಿಸಿರುವ ವಿಷಯವು ಆತನು ಪರಲೋಕದ ಸಂಬಂಧವನ್ನು ಹೇಗೆ ಪರಿಗಣಿಸಿದ್ದನೆಂದು ತೋರಿಸುತ್ತದೆ. ಒಬ್ಬನು ಆತನಿಗೆ “ಇಗೋ, ನಿನ್ನ ತಾಯಿಯೂ ನಿನ್ನ ತಮ್ಮಂದಿರೂ ನಿನ್ನನ್ನು ಮಾತಾಡಿಸಬೇಕೆಂದು ಹೊರಗೆ ನಿಂತಿರುತ್ತಾರೆ....” ಎಂದು ಹೇಳಿದಾಗ, ಆತನು ಉತ್ತರಿಸಿದ್ದು – “ನನಗೆ ತಾಯಿ ಯಾರು? ನನಗೆ ತಮ್ಮಂದಿರು ಯಾರು? ಎಂದು

ಹೇಳಿ, ಶಿಷ್ಯರ ಕಡೆಗೆ ಕೈ ತೋರಿಸಿ–ಇಗೋ, ನನ್ನ ತಾಯಿ, ನನ್ನ ಅಣ್ಣತಮ್ಮಂದಿರು. ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ನನಗೆ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು ಅಂದನು." – ಮತ್ತಾಯ 12:47–50

ಹೊಸ ಸೃಷ್ಟಿಗಳಾದ ನಾವು ದೇವರ ಆತ್ಮಿಕ ಮಕ್ಕಳಾಗಿ ಶೀಘ್ರದಲ್ಲಿ ಆತನ ಪ್ರಿಯ ಕುಮಾರನ ಬಾಧ್ಯತೆಯಲ್ಲಿ ಸೇರುವೆವು. ನಿಶ್ಚಿತಾರ್ಥರಾದ ಕನ್ಯೆಯರಾಗಿ ಭೂಲೋಕ ಸಂಬಂಧಗಳನ್ನು ತೊರೆದು ನಮ್ಮ ಪರಲೋಕದ ಮದಲಿಂಗನ ಜೊತೆಗೆ ಮದುವೆಯ ಮುಖಾಂತರವಾಗಿ ಸೇರುವವರಾಗಿದ್ದೇವೆ. ಮತ್ತು ಈಗ ನಾವು ಸಂತೋಷದಿಂದ ಆ ಒಂದು ಮಹಾ ಸಮಾರಂಭಕ್ಕೆ ಸಾಧ್ಯವಾದ ಎಲ್ಲಾ ಬಗೆಯ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದೇವೆ. ಆ ಹೊಸ ವ್ಯವಸ್ಥೆಯು ಪೂರ್ಣವಾಗಿ ಪ್ರಾರಂಭವಾದಾಗ ನಾವು ಗಂಡ ಮತ್ತು ಹೆಂಡತಿ, ತಂದೆತಾಯಿ ಮತ್ತು ಮಕ್ಕಳು, ಸಹೋದರ ಮತ್ತು ಸಹೋದರಿಯರು, ಮುಂತಾದ, ಭೂಲೋಕ ಮಟ್ಟದಲ್ಲಿನ ಸಂಬಂಧದಲ್ಲಿರುವುದಿಲ್ಲ; ಏಕೆಂದರೆ ನಾವು ಆಗ "ದೇವರಿಗೆ ರಾಜವಂಶದ ಯಾಜಕರಾಗಿ" ಭೂಲೋಕದ ಎಲ್ಲಾ ಕುಲಗಳನ್ನು ಆಶೀರ್ವದಿಸಲು ಸಿದ್ಧರಾಗಿರುವೆವು. ಭೂಕುಲದ ಪ್ರತಿಯೊಬ್ಬ ಸದಸ್ಯನೂ ಆಗ ದೇವರಿಗೆ ಪ್ರಿಯನಾಗಿರುವಂತೆ ನಮಗೂ ಪ್ರಿಯನಾಗಿರುವನು. ಹಿಂದೆ ನಮಗೆ ಪ್ರಿಯರಾಗಿದ್ದವರ ಬಗ್ಗೆ ಇರುವ ನಮ್ಮ ಪ್ರೀತಿಯು ಈಗಿರುವುದಕ್ಕಿಂತಲೂ ಏನೂ ಕಡಿಮೆಯಿರುವುದಿಲ್ಲ. ಹಿಂದಿನ ಸಂಕುಚಿತ ಮಿತಿಯು ರಕ್ತಸಂಬಂಧದ ಬಂಧಕ್ಕೆ ಒಳಗಾಗದಿದ್ದರೂ, ನಮ್ಮ ಪ್ರೀತಿಯು ಆಗ ಅತ್ಯಂತ ಗಾಢವಾಗಿರುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 30 | ಗಲಿಲಾಯ | ಬಿತ್ತುವವನ ಕಳೆಗಳ ಮುಂತಾದ ದೃಷ್ಟಾಂತಗಳ ವಿವರಣೆಗಳು | 13:1–53 | 4:1–34 | 8:4–18 | –– |

## ಮತ್ತಾಯ 13:1–53

ಆ ದಿವಸದಲ್ಲಿ ಯೇಸು ಮನೆಯಿಂದ ಹೊರಟು ಸಮುದ್ರದ ದಡದಲ್ಲಿ ಕೂತುಕೊಂಡನು. ಬಹಳ ಜನರು ಆತನ ಬಳಿಗೆ ಕೂಡಿಬಂದದರಿಂದ ಆತನು ದೋಣಿ ಹತ್ತಿ ಕೂತುಕೊಂಡನು. ಆ ಜನರೆಲ್ಲರು ದಡದಲ್ಲಿ ನಿಂತಿದ್ದರು. ಆಗ ಆತನು ಅವರಿಗೆ ಸಾಮ್ಯ ರೂಪವಾಗಿ ಅನೇಕ ಸಂಗತಿಗಳನ್ನು ಹೇಳಿದನು. ಹೇಗಂದರೆ – ಕೇಳಿರಿ! ಬಿತ್ತುವವನು ಬಿತ್ತುವದಕ್ಕೆ ಹೊರಟನು. ಅವನು ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವುಗಳನ್ನು ತಿಂದು ಬಿಟ್ಟವು. ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದಲ್ಲಿ ಬಿದ್ದವು; ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ ಅವು ಬೇಗ ಮೊಳಿತವು; ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿಹೋದವು. ಮತ್ತೆ ಕೆಲವು ಬೀಜ ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು ಬೆಳೆದು ಅವುಗಳನ್ನು ಅಡಗಿಸಿಬಿಟ್ಟವು. ಇನ್ನು ಕೆಲವು ಒಳ್ಳೆಯ ನೆಲದಲ್ಲಿ ಬಿದ್ದು ಒಂದು ನೂರರಷ್ಟು, ಒಂದು ಅರವತ್ತರಷ್ಟು, ಒಂದು ಮೂವತ್ತರಷ್ಟು ಫಲವನ್ನು ಕೊಟ್ಟವು. ಕಿವಿಯುಳ್ಳವನು ಕೇಳಲಿ ಅಂದನು.

ತರುವಾಯ ಆತನ ಶಿಷ್ಯರು ಬಂದು–ಯಾಕೆ ಸಾಮ್ಯರೂಪವಾಗಿ ಅವರ ಸಂಗಡ ಮಾತಾಡುತ್ತೀ ಎಂದು ಕೇಳಿದರು. ಅದಕ್ಕಾತನು ಅವರಿಗೆ–ಪರಲೋಕರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟದೆ; ಅವರಿಗೆ ಕೊಟ್ಟಿಲ್ಲ. ಯಾಕಂದರೆ ಇದ್ದವನಿಗೆ ಕೊಡಲ್ಪಡುವದು, ಅವನಿಗೆ ಮತ್ತೂ ಹೆಚ್ಚಾಗುವದು; ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವುದು. ನಾನು ಅವರ ಸಂಗಡ ಸಾಮ್ಯರೂಪವಾಗಿ ಮಾತಾಡುವದಕ್ಕೆ ಕಾರಣವೇನಂದರೆ ಅವರಿಗೆ ಕಣ್ಣಿದ್ದರೂ ನೋಡುವದಿಲ್ಲ, ಕಿವಿಯಿದ್ದರೂ ಕೇಳುವುದಿಲ್ಲ ಮತ್ತು ತಿಳುಕೊಳ್ಳುವುದಿಲ್ಲ. ಯೆಶಾಯನು ಹೇಳಿದ ಪ್ರವಾದನೆಯು ಅವರಲ್ಲಿ ನೆರವೇರುತ್ತದೆ; ಅದೇನಂದರೆ–ನೀವು ಕಿವಿಯಿದ್ದು ಕೇಳಿದರೂ ತಿಳುಕೊಳ್ಳುವುದೇ ಇಲ್ಲ; ಕಣ್ಣಿದ್ದು ನೋಡಿದರೂ ಕಾಣವುದೇ ಇಲ್ಲ. ಈ ಜನರ ಹೃದಯವು ಕೊಬ್ಬಿತು; ಇವರ ಕಿವಿ ಮಂದವಾಯಿತು; ಇವರು ಕಣ್ಣು ಮುಚ್ಚಿಕೊಂಡಿದ್ದಾರೆ. ತಾವು ಕಣ್ಣಿನಿಂದ ಕಂಡು ಕಿವಿಯಿಂದ ಕೇಳಿ ಹೃದಯದಿಂದ ತಿಳಿದು ನನ್ನ ಕಡೆಗೆ ತಿರುಗಿಕೊಂಡು ನನ್ನಿಂದ ಸ್ವಸ್ಥತೆಯನ್ನು ಹೇಗೂ ಹೊಂದಬಾರದೆಂದು ಮಾಡಿಕೊಂಡಿದ್ದಾರೆ ಎಂಬದು. ಆದರೆ ನಿಮ್ಮ ಕಣ್ಣು ಕಾಣುತ್ತವೆ. ನಿಮ್ಮ ಕಿವಿ ಕೇಳುತ್ತವೆ; ಆದದರಿಂದ ನೀವು ಧನ್ಯರು. ನಿಮಗೆ ಸತ್ಯವಾಗಿ ಹೇಳುತ್ತೇನೆ, ನೀವು ನೋಡುತ್ತಿರುವ ಕಾರ್ಯಗಳನ್ನು ಬಹು ಮಂದಿ ಪ್ರವಾದಿಗಳೂ ಸತ್ಪುರುಷರೂ ನೋಡಬೇಕೆಂದು ಅಪೇಕ್ಷಿಸಿದರೂ ನೋಡಲಿಲ್ಲ; ನೀವು ಕೇಳುತ್ತಿರುವ ಸಂಗತಿಗಳನ್ನು ಅವರು ಕೇಳಬೇಕೆಂದು ಅಪೇಕ್ಷಿಸಿದರೂ ಕೇಳಲಿಲ್ಲ.

ಬಿತ್ತುವವನ ವಿಷಯವಾದ ಸಾಮ್ಯದ ಅರ್ಥವನ್ನು ಕೇಳಿರಿ–ಯಾವನಾದರೂ ಪರಲೋಕರಾಜ್ಯದ ವಾಕ್ಯವನ್ನು ಕೇಳಿ ತಿಳುಕೊಳ್ಳದೆ ಇರುವಲ್ಲಿ ಸೈತಾನನು ಬಂದು ಆ ಮನುಷ್ಯನ ಮನಸ್ಸಿನಲ್ಲಿ ಬಿತ್ತಿದ್ದನ್ನು ತೆಗೆದುಹಾಕುತ್ತಾನೆ; ಈ ಮನುಷ್ಯನೇ ಬೀಜ ಬಿದ್ದ ದಾರೀ ಮಗ್ಗುಲಾಗಿರುವನು. ಒಬ್ಬನು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾನೆ; ತನಗೆ ಬೇರಿಲ್ಲದ ಕಾರಣ ಇವನು ಸ್ವಲ್ಪ ಕಾಲ ಮಾತ್ರವೇ ಇದ್ದು ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿ ಬೀಳುತ್ತಾನೆ; ಇವನೇ ಬೀಜ ಬಿದ್ದ ಬಂಡೆಯ

ನೆಲವಾಗಿರುವನು. ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯ – ವನ್ನು ಅಡಗಿಸಿಬಿಡುವದರಿಂದ, ಫಲವನ್ನು ಕೊಡದೆ ಇರುತ್ತಾನೆ; ಇವನೇ ಮುಳ್ಳು ಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವನು. ಒಬ್ಬನು ವಾಕ್ಯವನ್ನು ಕೇಳಿ ತಿಳುಕೊಂಡು ಫಲವಂತನಾಗಿ ನೂರರಷ್ಟಾಗಲಿ ಅರವತ್ತರಷ್ಟಾಗಲಿ ಮೂವತ್ತರಷ್ಟಾಗಲಿ ಫಲವನ್ನು ಕೊಡುತ್ತಾನೆ; ಇವನೇ ಒಳ್ಳೆಯ ನೆಲವಾಗಿರುವನು ಎಂದು ಹೇಳಿದನು.

ಅವನು ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು; ಅದೇನಂದರೆ–ಪರಲೋಕರಾಜ್ಯವು ಒಳ್ಳೆಯ ಬೀಜವನ್ನು ತನ್ನ ಹೊಲದಲ್ಲಿ ಬಿತ್ತಿದ್ದ ಒಬ್ಬ ಮನುಷ್ಯನಿಗೆ ಹೋಲಿಕೆಯಾಗಿದೆ. ಅದರೆ ಜನರು ನಿದ್ರೆಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋದಿಯ ನಡುವೆ ಹಣಜಿ ಬಿತ್ತಿ ಹೋದನು. ಗೋದಿಯು ಬೆಳೆದು ಫಲಕ್ಕೆ ಬಂದಾಗ ಹಣಜಿ ಸಹ ಕಾಣಬಂತು. ಆಗ ಯಜಮಾನನ ಆಳುಗಳು ಅವನ ಬಳಿಗೆ ಬಂದು–ಅಯ್ಯಾ, ನೀನು ನಿನ್ನ ಹೊಲದಲ್ಲಿ ಒಳ್ಳೆಯ ಬೀಜ ಬಿತ್ತಿದಿಯಲ್ಲಾ; ಹಣಜಿ ಎಲ್ಲಿಂದ ಬಂತು ಎಂದು ಕೇಳಲು ಅವನು–ಇದು ಒಬ್ಬ ವೈರಿ ಮಾಡಿದ ಕೆಲಸ ಅನ್ನಲಾಗಿ ಆಳುಗಳು ಅವನನ್ನು–ಹಾಗಾದರೆ ನಾವು ಅದನ್ನು ಆರಿಸಿ ತೆಗೆಯೋಣೋ ಎಂದು ಕೇಳಲು ಅವನು–ಬೇಡ; ಹಣಜಿಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋದಿಯನ್ನೆಲ್ಲಾದರೂ ಕಿತ್ತೀರಿ. ಸುಗ್ಗಿಕಾಲದ ತನಕ ಎರಡೂ ಬೆಳೆಯಲಿ; ಸುಗ್ಗೀಕಾಲದಲ್ಲಿ ನಾನು ಕೊಯ್ಯುವವರಿಗೆ–ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡುವದಕ್ಕೆ ಹೊರೆಕಟ್ಟಿಹಾಕಿ, ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು.

ಆತನು ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು; ಅದೇನಂದರೆ–ಪರಲೋಕರಾಜ್ಯವು ಸಾಸಿವೆ ಕಾಳಿಗೆ ಹೋಲಿಕೆಯಾಗಿದೆ. ಒಬ್ಬ ಮನುಷ್ಯನು ಅದನ್ನು ತೆಗೆದುಕೊಂಡು ಹೋಗಿ ತನ್ನ ಹೊಲದಲ್ಲಿ ಬಿತ್ತಿದನು. ಅದು ಎಲ್ಲಾ ಬೀಜಗಳಿಗಿಂತಲೂ ಸಣ್ಣದಾಗಿದೆ, ಬೆಳೆದ ಮೇಲೆ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ಮರವಾಗುತ್ತದೆ; ಆಕಾಶದಲ್ಲಿ ಹಾರಾಡುವ ಪಕ್ಷಿಗಳು ಬಂದು ಅದರ ಕೊಂಬೆಗಳಲ್ಲಿ ವಾಸಮಾಡುತ್ತವೆ.

ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು; ಅದೇನಂದರೆ–ಪರಲೋಕ ರಾಜ್ಯವು ಹುಳಿಹಿಟ್ಟಿಗೆ ಹೋಲಿಕೆ–ಯಾಗಿದೆ. ಅದನ್ನು ಒಬ್ಬ ಹೆಂಗಸು ತಕ್ಕೊಂಡು ಮೂರು ಸೇರು ಹಿಟ್ಟಿನಲ್ಲಿ ಕಲಸಿಡಲು ಆ ಹಿಟ್ಟೆಲ್ಲಾ ಹುಳಿಯಾಯಿತು.

ಯೇಸು ಈ ಮಾತುಗಳನ್ನೆಲ್ಲಾ ಜನರ ಗುಂಪುಗಳಿಗೆ ಸಾಮ್ಯರೂಪವಾಗಿ ಹೇಳಿದನು; ಸಾಮ್ಯವಿಲ್ಲದೆ ಒಂದನ್ನೂ ಹೇಳಲಿಲ್ಲ. ಹೀಗೆ–ನಾನು ಬಾಯಿದೆರೆದು ಸಾಮ್ಯರೂಪವಾಗಿ ಉಪದೇಶಿಸುವೆನು; ಲೋಕಾದಿಯಿಂದ ಮರೆಯಾಗಿದ್ದವುಗಳನ್ನು ಹೊರಪಡಿಸುವೆನು ಎಂದು ಒಬ್ಬ ಪ್ರವಾದಿಯ ಮುಖಾಂತರ ನುಡಿದ ಮಾತು ನೆರವೇರಿತು.

ಆಗ ಯೇಸು ಜನರನ್ನು ಬಿಟ್ಟು ಮನೆಗೆ ಹೋದ ಮೇಲೆ ಆತನ ಶಿಷ್ಯರು ಬಂದು–ಹೊಲದಲ್ಲಿಯ ಹಣಜಿಯ ಸಾಮ್ಯದ ಅರ್ಥವನ್ನು ನಮಗೆ ಹೇಳು ಅಂದರು. ಅದಕ್ಕಾತನು–ಒಳ್ಳೆಯ ಬೀಜವನ್ನು ಬಿತ್ತುವವನೆಂದರೆ ಮನುಷ್ಯಕುಮಾರನು; ಹೊಲವೆಂದರೆ ಈ ಲೋಕ; ಒಳ್ಳೆಯ ಬೀಜವೆಂದರೆ ಪರಲೋಕ ರಾಜ್ಯದವರು; ಹಣಜಿ ಅಂದರೆ ಸೈತಾನನವರು; ಅದನ್ನು ಬಿತ್ತುವ ವೈರಿ ಅಂದರೆ ಸೈತಾನನು; ಸುಗ್ಗೀಕಾಲ ಅಂದರೆ ಯುಗದ ಸಮಾಪ್ತಿ; ಕೊಯ್ಯುವವರು ಅಂದರೆ ದೇವದೂತರು. ಹೀಗಿರಲಾಗಿ ಹೇಗೆ ಹಣಜಿಯನ್ನು ಆರಿಸಿತೆಗೆದು ಸುಟ್ಟುಬಿಡುತ್ತಾರೋ, ಹಾಗೆಯೇ ಯುಗದ ಸಮಾಪ್ತಿಯಲ್ಲಿ ನಡೆಯುವದು. ಮನುಷ್ಯಕುಮಾರನು ತನ್ನ ದೂತರನ್ನು ಕಳುಹಿಸುವನು; ಅವರು ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನೂ ಅಧರ್ಮಿಗಳನ್ನೂ ಕೂಡಿಸಿ ಬೆಂಕೀಕೊಂಡದಲ್ಲಿ ಹಾಕುವರು; ಅಲ್ಲಿ ಗೋಳಾಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು. ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು. ಕಿವಿಯುಳ್ಳವನು ಕೇಳಲಿ ಅಂದನು.

ಪರಲೋಕರಾಜ್ಯವು ಹೊಲದಲ್ಲಿ ಹೂಳಿಟ್ಟ ದ್ರವ್ಯಕ್ಕೆ ಹೋಲಿಕೆಯಾಗಿದೆ. ಒಬ್ಬನು ಅದನ್ನು ಕಂಡುಕೊಂಡು ಮುಚ್ಚಿಬಿಟ್ಟು ಅದರಿಂದಾದ ಸಂತೋಷದಿಂದ ತನ್ನ ಬದುಕನ್ನೆಲ್ಲಾ ಮಾರಿ ಆ ಹೊಲವನ್ನು ಕೊಂಡುಕೊಂಡನು.

ಮತ್ತು ಪರಲೋಕರಾಜ್ಯವು ಉತ್ತಮವಾದ ಮುತ್ತುಗಳನ್ನು ಹುಡುಕುವ ವ್ಯಾಪಾರಸ್ಥನಿಗೆ ಹೋಲಿಕೆಯಾಗಿದೆ. ಅವನು ಬಹು ಬೆಲೆಯುಳ್ಳ ಒಂದು ಮುತ್ತನ್ನು ಕಂಡು ತನ್ನ ಬದುಕನ್ನೆಲ್ಲಾ ಮಾರಿ ಬಂದು ಅದನ್ನು ಕೊಂಡುಕೊಂಡನು.

ಮತ್ತು ಪರಲೋಕರಾಜ್ಯವು ಒಂದು ಬಲೆಗೆ ಹೋಲಿಕೆಯಾಗಿದೆ. ಅದನ್ನು ಸಮುದ್ರದಲ್ಲಿ ಹಾಕಿ ಎಲ್ಲಾ ಜಾತಿಯ ಮೀನುಗಳನ್ನು ಹಿಡಿದರು. ಅದು ತುಂಬಿದ ಮೇಲೆ ಅದನ್ನು ದಡಕ್ಕೆ ಎಳೆದು ಕೂತುಕೊಂಡು ಒಳ್ಳೆಯ ಮೀನುಗಳನ್ನು ಪುಟ್ಟಿಯಲ್ಲಿ ತುಂಬಿಕೊಂಡು ಕೆಟ್ಟ ಮೀನುಗಳನ್ನು ಬಿಸಾಟುಬಿಟ್ಟರು. ಹಾಗೆಯೇ ಯುಗದ ಸಮಾಪ್ತಿಯಲ್ಲಿ ಆಗುವದು. ದೇವದೂತರು ಹೊರಟುಬಂದು ನೀತಿವಂತರೊಳಗಿಂದ ಕೆಟ್ಟವರನ್ನು ಬೇರೆಮಾಡಿ ಅವರನ್ನು ಬೆಂಕೀಕೊಂಡದಲ್ಲಿ ಹಾಕುವರು. ಅಲ್ಲಿ ಕಟಕಟನೆ ಹಲ್ಲುಕಡಿಯೋಣವೂ ಇರುವವು.

ಈ ಎಲ್ಲಾ ಮಾತುಗಳ ಅರ್ಥವು ನಿಮಗೆ ತಿಳಿಯಿತೋ ಎಂದು ಕೇಳಲು ಅವರು–ತಿಳಿಯಿತು ಅಂದರು. ಆಗ ಆತನು ಅವರಿಗೆ–ಹೀಗಿರಲಾಗಿ ಪರಲೋಕರಾಜ್ಯದ ವಿಷಯವಾಗಿ ಉಪದೇಶಹೊಂದಿ ಶಿಕ್ಷಿತನಾದ ಪ್ರತಿಯೊಬ್ಬ ಶಾಸ್ತ್ರೋಪದೇಶಕನು ಮನೇಯಜಮಾನನಿಗೆ ಹೋಲಿಕೆಯಾಗಿದ್ದಾನೆ. ಅವನು ತನ್ನ ಬೊಕ್ಕಸದೊಳಗಿಂದ ಹೊಸ ವಸ್ತುಗಳನ್ನೂ ಹಳೇ ವಸ್ತುಗಳನ್ನೂ ಹೊರಗೆ ತರುತ್ತಿರುವನು ಎಂದು ಹೇಳಿದನು.

ಯೇಸು ಈ ಸಾಮ್ಯಗಳನ್ನು ಮುಗಿಸಿದ ಮೇಲೆ ಅಲ್ಲಿಂದ ಹೊರಟುಹೋದನು.

## ಮಾರ್ಕ 4:1–34

ಆತನು ತಿರಿಗಿ ಸಮುದ್ರದ ದಡದಲ್ಲಿ ಉಪದೇಶ ಮಾಡುತ್ತಿದ್ದನು. ಬಹು ಜನರು ಆತನ ಬಳಿಗೆ ಕೂಡಿ ಬಂದದ್ದರಿಂದ ಆತನು ಸಮುದ್ರದಲ್ಲಿದ್ದ ದೋಣಿಹತ್ತಿ ಕೂತುಕೊಂಡನು; ಆ ಜನರೆಲ್ಲರು ಸಮುದ್ರದ ಹತ್ತರ ನೆಲದ ಮೇಲೆ ಇದ್ದರು. ಆಗ ಆತನು ಅವರಿಗೆ ಸಾಮ್ಯರೂಪವಾಗಿ ಅನೇಕ ಸಂಗತಿಗಳನ್ನು ಉಪದೇಶ ಮಾಡಿದನು. ಆ ಉಪದೇಶದಲ್ಲಿ ಅವರಿಗೆ ಹೇಳಿದ್ದೇನಂದರೆ–ಕೇಳಿರಿ! ಬಿತ್ತುವವನು ಬಿತ್ತುವದಕ್ಕೆ ಹೊರಟನು. ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದವು; ಹಕ್ಕಿಗಳು ಬಂದು ಅವುಗಳನ್ನು ತಿಂದು ಬಿಟ್ಟವು. ಬೇರೆ ಕೆಲವು ಬೀಜ ಬಹಳ ಮಣ್ಣಿಲ್ಲದ ಬಂಡೆಯ ನೆಲದಲ್ಲಿ ಬಿದ್ದವು; ಅಲ್ಲಿ ಮಣ್ಣು ತೆಳ್ಳಗಿದ್ದದರಿಂದ ಅವು ಬೇಗ ಮೊಳೆತವು; ಆದರೆ ಬಿಸಿಲೇರಿದಾಗ ಬಾಡಿ ಬೇರಿಲ್ಲದ ಕಾರಣ ಒಣಗಿಹೋದವು. ಮತ್ತೆ ಕೆಲವು ಬೀಜ ಮುಳ್ಳುಗಿಡಗಳಲ್ಲಿ ಬಿದ್ದವು; ಮುಳ್ಳುಗಿಡಗಳು ಬೆಳೆದು ಅವುಗಳನ್ನು ಅಡಗಿಸಿಬಿಟ್ಟದ್ದರಿಂದ ಅವು ಫಲಕೊಡಲಿಲ್ಲ. ಇನ್ನು ಕೆಲವು ಬೀಜ ಒಳ್ಳೆಯ ನೆಲದಲ್ಲಿ ಬಿದ್ದು ಹುಟ್ಟಿ ಬೆಳೆಯುತ್ತಾ ಬಂದು ಒಂದು ಮೂವತ್ತರಷ್ಟು, ಒಂದು ಅರುವತ್ತರಷ್ಟು, ಒಂದು ನೂರರಷ್ಟು ಫಲವನ್ನು ಕೊಟ್ಟವು ಎಂದು ಹೇಳಿ–ಕೇಳುವುದಕ್ಕೆ ಕಿವಿಯುಳ್ಳವನು ಕೇಳಲಿ ಅಂದನು.

ಆತನು ಒಬ್ಬನೇ ಇದ್ದಾಗ ಆತನ ಹತ್ತಿರ ಇದ್ದವರು ಹನ್ನೆಡರು ಮಂದಿ ಶಿಷ್ಯರ ಕೂಡ ಆ ಸಾಮ್ಯಗಳ ವಿಷಯದಲ್ಲಿ ಆತನನ್ನು ಕೇಳಿದರು. ಆತನು ಅವರಿಗೆ–ದೇವರ ರಾಜ್ಯದ ಗುಟ್ಟು ನಿಮಗೇ ಕೊಟ್ಟಿದೆ; ಹೊರಗಿನವರಿಗೆ ಎಲ್ಲವೂ ಸಾಮ್ಯದ ಮರೆಯಲ್ಲಿವೆ. ಅವರು ಕಣ್ಣಿದ್ದು ನೋಡಿದರೂ ಕಾಣಬಾರದು, ಕಿವಿಯಿದ್ದು ಕೇಳಿದರೂ ತಿಳುಕೊಳ್ಳಬಾರದು, ಹಾಗೆ ಕಂಡು ತಿಳುಕೊಂಡರೆ ಅವರು ದೇವರ ಕಡೆಗೆ ತಿರುಗಿಕೊಂಡು ಪಾಪಕ್ಷಮೆಯನ್ನು ಹೊಂದಾರು ಎಂದೇ ಮರೆಮಾಡಲಾಗಿದೆ. ಆಮೇಲೆ ಆತನು ಅವರಿಗೆ ಹೇಳಿದ್ದೇನಂದರೆ–ಈ ಸಾಮ್ಯದ ಅರ್ಥ ನಿಮಗೆ ಗೊತ್ತಾಗಲಿಲ್ಲವೋ? ಹಾಗಾದರೆ ನನ್ನ ಎಲ್ಲಾ ಸಾಮ್ಯಗಳನ್ನು ಹೇಗೆ ತಿಳುಕೊಂಡೀರಿ? ಆ ಬಿತ್ತುವವನು ವಾಕ್ಯವೆಂಬ ಬೀಜವನ್ನು ಬಿತ್ತುತ್ತಾನೆ. ಕೆಲವರು ವಾಕ್ಯವನ್ನು ಕೇಳಿದ ಕೂಡಲೇ ಸೈತಾನನು ಬಂದು ಅವರಲ್ಲಿ ಬಿತ್ತಿದ್ದ ವಾಕ್ಯವನ್ನು ತೆಗೆದುಬಿಡುತ್ತಾನೆ. ಇವರೇ ವಾಕ್ಯವು ಬಿತ್ತಲ್ಪಟ್ಟ ದಾರಿಯ ಮಗ್ಗುಲಾಗಿರುವವರು. ಅದೇ ಪ್ರಕಾರ ಬೇರೆ ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸಂತೋಷದಿಂದ ಅದನ್ನು ಸ್ವೀಕರಿಸುತ್ತಾರೆ; ತಮಗೆ ಬೇರಿಲ್ಲದ ಕಾರಣ ಇವರು ಸ್ವಲ್ಪ ಕಾಲ ಮಾತ್ರವೇ ಇದ್ದು ಬಳಿಕ ಆ ವಾಕ್ಯದ ನಿಮಿತ್ತವಾಗಿ ಸಂಕಟವಾಗಲಿ ಹಿಂಸೆಯಾಗಲಿ ಬಂದರೆ ಬೇಗ ಎಡವಿಬೀಳುತ್ತಾರೆ; ಇವರೇ ಬೀಜಬಿದ್ದ ಬಂಡೆಯ ನೆಲವಾಗಿರುವರು. ಇನ್ನು ಕೆಲವರು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಗಳೂ ಐಶ್ವರ್ಯದಿಂದುಂಟಾಗುವ ಮೋಸವೂ ಇತರ ವಿಷಯಗಳ ಮೇಲಣ ಆಶೆಗಳೂ ಒಳಗೆ ಸೇರಿ ಆ ವಾಕ್ಯವನ್ನು ಅಡಗಿಸಿಬಿಡುವದರಿಂದ ಫಲವನ್ನು ಕೊಡದೆ ಇರುತ್ತಾರೆ; ಇವರೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು. ಮತ್ತೆ ಕೆಲವರು ವಾಕ್ಯವನ್ನು ಕೇಳಿ ಕೈಕೊಂಡು ಮೂವತ್ತರಷ್ಟಾಗಲಿ ಅರುವತ್ತರಷ್ಟಾಗಲಿ ನೂರರಷ್ಟಾಗಲಿ ಫಲವನ್ನು ಕೊಡುತ್ತಾರೆ; ಇವರೇ ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರು ಅಂದನು.

ಇದಲ್ಲದೆ ಆತನು ಅವರಿಗೆ–ದೀಪವನ್ನು ತಂದು ಕೊಳಗದೊಳಗಾಗಲಿ ಮಂಚದ ಕೆಳಗಾಗಲಿ ಇಡುವದುಂಟೇ? ದೀಪಸ್ತಂಭದ ಮೇಲೆ ಇಡುತ್ತಾರಲ್ಲಾ? ಯಾವದಾಗಲಿ ಪ್ರಕಾಶಕ್ಕೆ ಬರಬೇಕೇ ಹೊರತು ರಹಸ್ಯವಾಗಿರುವದಿಲ್ಲ; ಯಾವದಾಗಲಿ ಬೈಲಿಗೆ ಬರಬೇಕೇ ಹೊರತು ಗುಟ್ಟಾಗಿರುವದಿಲ್ಲ. ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ ಎಂದು ಹೇಳಿದನು. ಮತ್ತು ಆತನು ಅವರಿಗೆ–ಕಿವಿಗೊಡುವ ವಿಷಯದಲ್ಲಿ ಎಚ್ಚರಿಕೆ. ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು; ಇನ್ನೂ ಕೂಡಿಸಿಕೊಡುವರು. ಇದ್ದವನಿಗೆ ಕೊಡಲ್ಪಡುವದು; ಇಲ್ಲದವನ ಕಡೆಯಿಂದ ಇದ್ದದ್ದೂ ತೆಗೆಯಲ್ಪಡುವದು ಎಂದು ಹೇಳಿದನು.

ಇನ್ನೂ ಆತನು ಅವರಿಗೆ ಹೇಳಿದ್ದು–ಒಬ್ಬನು ಭೂಮಿಯಲ್ಲಿ ಬೀಜವನ್ನು ಹಾಕಿ ರಾತ್ರಿ ಮಲಗುತ್ತಾ ಹಗಲು ಎದ್ದಿರುತ್ತಾ ಇರಲು ಅವನಿಗೆ ತಿಳಿಯದ ರೀತಿಯಲ್ಲಿ ಆ ಬೀಜವು ಹುಟ್ಟಿ ಬೆಳೆಯುವದು. ಇದರಂತೆ ದೇವರ ರಾಜ್ಯ. ಭೂಮಿಯು ಮೊದಲು ಗರಿಯನ್ನೂ ಆ ಮೇಲೆ ಹೊಡೆಯನ್ನೂ, ತರುವಾಯ ತೆನೆಯಲ್ಲಿ ತುಂಬಾ ಕಾಳನ್ನೂ ತನ್ನಷ್ಟಕ್ಕೆ ತಾನೇ ಹುಟ್ಟಿಸುತ್ತದೆ. ಆದರೆ ಫಲಮಾಗಿದ ಕೂಡಲೆ ಅವನು ಸುಗ್ಗಿಕಾಲ ಬಂತೆಂದು ಕೊಯಿಸುತ್ತಾನೆ ಅಂದನು.

ಇನ್ನೂ ಆತನು ಹೇಳಿದ್ದು–ದೇವರ ರಾಜ್ಯವನ್ನು ಯಾವದಕ್ಕೆ ಹೋಲಿಸೋಣ? ಯಾವ ಸಾಮ್ಯದಿಂದ ಅದನ್ನು ತೋರಿಸಿಕೊಡೋಣ? ಅದು ಸಾಸಿವೆಕಾಳಿನಂತಿರುತ್ತದೆ. ಭೂಮಿಯಲ್ಲಿ ಬಿತ್ತುವಾಗ ಅದು ಭೂಮಿಯಲ್ಲಿರುವ ಎಲ್ಲಾ ಬೀಜಗಳಿಗಿಂತಲೂ ಸಣ್ಣದಾಗಿದೆ. ಬಿತ್ತಿದ ಮೇಲೆ ಅದು ಬೆಳೆದು ಎಲ್ಲಾ ಕಾಯಿಪಲ್ಯದ ಗಿಡಗಳಿಗಿಂತ ದೊಡ್ಡದಾಗಿ ದೊಡ್ಡ ದೊಡ್ಡ ಕೊಂಬೆಗಳನ್ನು ಬಿಡುವದರಿಂದ ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಅದರ ನೆರಳಿನಲ್ಲಿ ವಾಸಮಾಡುವದಕ್ಕಾಗುತ್ತದೆ ಅಂದನು.

ಆತನು ಈ ತರದ ಅನೇಕ ಸಾಮ್ಯಗಳಿಂದ ಜನರ ಗ್ರಹಿಕೆಗೆ ತಕ್ಕ ಹಾಗೆ ದೇವರ ವಾಕ್ಯವನ್ನು ಹೇಳುತ್ತಿದ್ದನು. ಸಾಮ್ಯವಿಲ್ಲದೆ ಅವರಿಗೆ ಹೇಳಲಿಲ್ಲ. ಆದರೆ ಪ್ರತ್ಯೇಕವಾಗಿ ಆತನು ತನ್ನ ಆಪ್ತಶಿಷ್ಯರಿಗೆ ಎಲ್ಲವನ್ನು ಬಿಚ್ಚಿ ಹೇಳಿದನು.

## ಲೂಕ 8:4–18

ಬಹುಜನರು ಗುಂಪುಕೂಡಿರುವಾಗ ಪಟ್ಟಣಪಟ್ಟಣದಿಂದ ಜನರು ಆತನ ಬಳಿಗೆ ಬರುತ್ತಿರಲು ಆತನು ಸಾಮ್ಯರೂಪವಾಗಿ ಹೇಳಿದ್ದೇನಂದರೆ–ಬಿತ್ತುವವನು ಬೀಜವನ್ನು ಬಿತ್ತುವದಕ್ಕೆ ಹೊರಟನು. ಅವನು ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದು ತುಳಿಯಲ್ಪಟ್ಟವು; ಆಕಾಶದಲ್ಲಿ ಹಾರಾಡುವ

ಹಕ್ಕಿಗಳು ಅವುಗಳನ್ನು ತಿಂದುಬಿಟ್ಟವು. ಬೇರೆ ಕೆಲವು ಬೀಜ ಬಂಡೆಯ ಮೇಲೆ ಬಿದ್ದವು; ಅವು ಮೊಳೆತು ತ್ಯಾವವಿಲ್ಲದ ಕಾರಣ ಒಣಗಿಹೋದವು. ಮತ್ತೆ ಕೆಲವು ಬೀಜ ಮುಳ್ಳುಗಿಡಗಳ ನಡುವೆ ಬಿದ್ದವು; ಅವುಗಳ ಸಂಗಡ ಮುಳ್ಳುಗಿಡಗಳು ಬೆಳೆದು ಅವುಗಳನ್ನು ಅಡಗಿಸಿಬಿಟ್ಟವು. ಇನ್ನು ಕೆಲವು ಬೀಜ ಒಳ್ಳೆಯ ನೆಲದಲ್ಲಿ ಬಿದ್ದು ಮೊಳೆತು ನೂರರಷ್ಟು ಫಲವನ್ನು ಕೊಟ್ಟವು. ಈ ಮಾತುಗಳನ್ನು ಹೇಳಿ ಆತನು–ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ ಎಂದು ಕೂಗಿದನು.

ಆತನ ಶಿಷ್ಯರು–ಈ ಸಾಮ್ಯದ ಅರ್ಥವೇನೆಂದು ಆತನನ್ನು ಕೇಳಿದಾಗ ಆತನು–ದೇವರ ರಾಜ್ಯದ ಗುಟ್ಟುಗಳನ್ನು ತಿಳಿಯುವ ವರವು ನಿಮಗೇ ಕೊಟ್ಟದೆ, ಉಳಿದವರಿಗೆ ಕಣ್ಣಿದ್ದರೂ ನೋಡದಂತೆಯೂ, ಕಿವಿಯಿದ್ದರೂ ತಿಳುಕೊಳ್ಳದಂತೆಯೂ ಸಾಮ್ಯರೂಪವಾಗಿ ಹೇಳಲಾಗುತ್ತದೆ. ಈ ಸಾಮ್ಯದ ಅರ್ಥವೇನಂದರೆ–ಆ ಬೀಜವಂದರೆ ದೇವರ ವಾಕ್ಯ. ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸೈತಾನನು ಬಂದು ಅವರು ನಂಬಿ ರಕ್ಷಣೆ ಹೊಂದಬಾರದೆಂದು ವಾಕ್ಯವನ್ನು ಅವರ ಹೃದಯದಿಂದ ತೆಗೆದುಬಿಡುತ್ತಾನೆ; ಇವರೇ ದಾರಿಯ ಮಗ್ಗುಲಾಗಿರುವವರು. ಕೆಲವರು ವಾಕ್ಯವನ್ನು ಕೇಳಿದಾಗಲೇ ಅದನ್ನು ಸಂತೋಷದಿಂದ ಅಂಗೀಕರಿಸುತ್ತಾರೆ; ಇವರಿಗೆ ಬೇರಿಲ್ಲದ ಕಾರಣ ಸ್ವಲ್ಪಕಾಲ ಮಾತ್ರವೇ ನಂಬಿಕೊಂಡಿದ್ದು ಶೋಧನೆಯ ಕಾಲದಲ್ಲಿ ಬಿದ್ದುಹೋಗುತ್ತಾರೆ; ಇವರೇ ಬಂಡೆಯ ನೆಲವಾಗಿರುವರು. ಬೇರೆ ಕೆಲವರು ವಾಕ್ಯವನ್ನು ಕೇಳಿದ ಮೇಲೆ ಬರಬರುತ್ತಾ ಈ ಜೀವಮಾನದಲ್ಲಿ ಆಗುವ ಚಿಂತೆ ಐಶ್ವರ್ಯ ಭೋಗಗಳಿಂದ ಅಡಗಿಸಲ್ಪಟ್ಟು ಫಲವನ್ನು ಮಾಗಿಸುವದಿಲ್ಲ; ಇವರೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವವರು. ಮತ್ತೆ ಕೆಲವರು ವಾಕ್ಯವನ್ನು ಕೇಳಿ ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆಯಿಂದ ಫಲವನ್ನು ಕೊಡುತ್ತಾರೆ; ಇವರೇ ಬೀಜ ಬಿದ್ದ ಒಳ್ಳೆಯ ನೆಲವಾಗಿರುವವರು.

ಇದಲ್ಲದೆ ಯಾರೂ ದೀಪವನ್ನು ಹಚ್ಚಿ ಮಡಿಕೆಯಿಂದ ಮುಚ್ಚುವದಿಲ್ಲ, ಮಂಚದ ಕೆಳಗೂ ಇಡುವದಿಲ್ಲ; ಮನೆಯೊಳಕ್ಕೆ ಬರುವವರಿಗೆ ಬೆಳಕುಕಾಣಿಸುವಂತೆ ಅದನ್ನು ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ಪ್ರಕಾಶಕ್ಕೆ ಬಾರದ ಯಾವ ರಹಸ್ಯವೂ ಇಲ್ಲ; ಮತ್ತು ಗೊತ್ತಾಗದೆ ಬೈಲಿಗೆ ಬಾರದೆ ಇರುವಂಥ ಗುಟ್ಟು ಒಂದೂ ಇಲ್ಲ. ಆದದರಿಂದ ನೀವು ಹೇಗೆ ಕಿವಿಗೊಡಬೇಕೋ ನೋಡಿಕೊಳ್ಳಿರಿ; ಯಾಕಂದರೆ ಇದ್ದವನಿಗೆ ಕೊಡಲ್ಪಡುವದು; ಇಲ್ಲದವನ ಕಡೆಯಿಂದ ಅವನು ತನ್ನದೆಂದು ಎಣಿಸುವಂಥದೂ ತೆಗೆಯಲ್ಪಡುವದು ಅಂದನು.

# ಒಳ್ಳೆಯ ನೆಲದಲ್ಲಿನ ಒಳ್ಳೆಯ ಬೀಜ

### ರೀಪ್ರಿಂಟ್ಸ್ ಪುಟ 4634

### ಮತ್ತಾಯ 13:1–9; 18–23

**"ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದುಹಾಕಿ ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವುದಕ್ಕೆ ಸಾಮರ್ಥ್ಯವುಳ್ಳದ್ದಾಗಿದೆ." – ಯಾಕೋಬ 1:21**

ಸರ್ವಶಕ್ತನು "ಚಿಕ್ಕ ಹಿಂಡನ್ನು" ಆಯ್ಕೆಮಾಡಲು ಬಳಸುತ್ತಿರುವ ವಿಧಾನದ ವಿಷಯವಾಗಿ ನಮ್ಮ ಕರ್ತನು ದೋಣಿಯಿಂದ ಅತಿ ಅದ್ಭುತವಾದ ಒಂದು ಪಾಠವನ್ನು ಬೋಧಿಸಿದ್ದನು. ಈ ಚಿಕ್ಕ ಹಿಂಡನ್ನು ಆತನ ಸಾವಿರ ವರುಷದ (ಆಳ್ವಿಕೆಯ) ರಾಜ್ಯದಲ್ಲಿ ಕ್ರಿಸ್ತ ಯೇಸುವಿನೊಡನೆ ಆಳ್ವಿಕೆ ಮಾಡಲು ಆಹ್ವಾನಿಸಿರುವನು. ಆ ರಾಜ್ಯದ ವಿಷಯವಾದ ಸಂದೇಶ ಅಥವಾ ಆಹ್ವಾನವು ಮೇಲೆ ಹೇಳಿರುವ ಸಾಮ್ಯದಲ್ಲಿನ ಬೀಜವಾಗಿ ಪರಿಗಣನೆ ಮಾಡಲಾಗಿರುವುದು. ಅದು ಅನುಕೂಲಕರ ಸನ್ನಿವೇಶದಲ್ಲಿ ಮೊಳೆತು ಗುಣಾಭಿವೃದ್ಧಿಯೆಂಬ ಅವಶ್ಯ ಫಲವನ್ನು ಬೆಳೆಯಮಾಡುವುದು. ನಮ್ಮ ಕರ್ತನು ದೇವರರಾಜ್ಯದ ವಿಷಯದ ಸಂದೇಶವೆಂಬ ಈ ಒಳ್ಳೆಯ ಬೀಜವನ್ನು ಬಿತ್ತುವ ಆ ಶ್ರೇಷ್ಠ ಬಿತ್ತನೆಗಾರನು; ಆ ನಂತರ ಅಪೋಸ್ತಲರು ಬಿತ್ತನೆಗಾರರಾಗಿ ಬರುವರು. ಅಲ್ಲಿಂದೀಚೆಗೆ ಆತನು ನಂಬಿಗಸ್ತರಾದ ತನ್ನ ಜನರೆಲ್ಲರನ್ನು ಹೆಚ್ಚು ಕಡಿಮೆ ಈ ಬೀಜ ಬಿತ್ತನೆಗೆ ಉಪಯೋಗ ಮಾಡಿಕೊಂಡಿರುತ್ತಾನೆ.

ದೈವ ಸಂದೇಶವೆಂಬ ಬೀಜವು ಬಹುವಾಗಿ ನಷ್ಟವಾದಂತೆ ತೋರಿರುವುದೆಂಬ ಅಂಶವು ಆ ಸಂದೇಶವು ಒಳ್ಳೆಯ ಮತ್ತು ಬಯಸತಕ್ಕದ್ದಲ್ಲವೆಂಬುದಕ್ಕೆ ಪ್ರಮಾಣವೇನಲ್ಲ. ನಿಜವಾದ ದೋಷವಿರುವುದು ನೆಲದಲ್ಲಿ ಅಂದರೆ ಹೃದಯದಲ್ಲಿ ಎಂಬುದನ್ನು ಸಾಮ್ಯವು ತೋರಿಸಿಕೊಟ್ಟಿರುವುದು. ಎಲ್ಲಾ ಹೃದಯಗಳು ಸರಿಯಾಗಿದ್ದಲ್ಲಿ ಆ ಸಂದೇಶ ಅಥವಾ ಬೀಜವು ಎಲ್ಲಾ ಕಡೆಗಳಲ್ಲಿಯೂ ಅಧಿಕವಾದ ಫಲವನ್ನು ನೀಡುತ್ತಿತ್ತು.

## ದಾರಿ ಮಗ್ಗುಲಿನಂಥ ಕೇಳುಗರು

ನೆಲಗಳೆಲ್ಲವೂ ಒಳ್ಳೆಯದಾಗಿ ಅಥವಾ ಸೂಕ್ತವಾಗಿ ಇರುವುದಿಲ್ಲವೆಂದು ಸಾಮ್ಯವು ಹೇಳುತ್ತದೆ; ಹೀಗಿದ್ದರೂ ತಮ್ಮಲ್ಲಿ–ರುವ ಅನುಕೂಲಕರವಲ್ಲದ ಸ್ಥಿತಿಗಳನ್ನು ಸರಿಪಡಿಸಿಕೊಳ್ಳುವ ಅಥವಾ ಸರಿದೂಗಿಸಿಕೊಳ್ಳುವ ಶಕ್ತಿಯು ತಮ್ಮಲ್ಲಿಯೇ ಇರುವುದೆಂದು ಇಲ್ಲಿ ತಿಳಿಸಲಾಗಿರುವುದು. ನಾವು ಇದರ ವಿಷಯದಲ್ಲಿ ಊಹಿಸಿಕೊಳ್ಳುವ ಹಾಗೆ ಬಿಡಲಾಗಿಲ್ಲ; ಏಕೆಂದರೆ ನಮ್ಮ ಕರ್ತನು ತಾನೇ ಇದರ ಅರ್ಥವನ್ನು ವಿವರಿಸಿ ಹೇಳಿರುವನು; ಈ ಅಂಶವನ್ನು ಎಲ್ಲರೂ ಗಮನಿಸಿರುವು–ದಿಲ್ಲವೆಂದು ತೋರುವುದು.

"ಬೀಜವು" ದೇವರ ರಾಜ್ಯದ ಸಂದೇಶ. ಹಲವರು ಇದನ್ನು ಅರ್ಥಮಾಡಿಕೊಂಡಿಲ್ಲ. ಅಂಥವರ ಕಿವಿಗಳಲ್ಲಿ ಈ ಸಂದೇಶವು (ನಿಲ್ಲದೆ) ಕಳೆದುಹೋಗುವುದು; ಏಕೆಂದರೆ ವಿರೋಧಿಯಾದ ಸೈತಾನನು ಅದನ್ನು ತೆಗೆದುಹಾಕಲು ಎಚ್ಚರ ದಿಂದಿರುವನು. ಇದು ಹಕ್ಕಿಗಳು ಬಂದು ತಿಂದುಬಿಡುವ "ದಾರಿಮೊಗ್ಗಲಿನ ಬೀಜ" ಎಂದು ಸಾಂಕೇತಿಕವಾಗಿ ಸೂಚಿಸಲಾಗಿ ರುವುದು. ಇಂಥಾ "ದಾರಿ ಮೊಗ್ಗುಲಿನ" ಕೇಳುಗರು ಪ್ರತಿಯೊಂದು ಹೆಸರಿನ ಸಭೆಯಲ್ಲಿಯೂ ಬಹು ಸಂಖ್ಯೆಯಲ್ಲಿ ರುವರು. ಇವರು ಕೇವಲ ಔಪಚಾರಿಕ ರೀತಿಯಲ್ಲಿರುವವರು.

## ಗಟ್ಟಿನೆಲದಂಥ ಕೇಳುಗರು

"ಗಟ್ಟಿ ನೆಲವು" ಪರಲೋಕರಾಜ್ಯದ ಸಂದೇಶವನ್ನು ಕೇಳುವ ಇನ್ನೊಂದು ವರ್ಗದ ಜನರನ್ನು ಸೂಚಿಸುವದು. ಅವರಿಗೆ ಇದು ಒಳ್ಳೆಯದೆಂದು ಕಾಣುತ್ತದೆ; ಅದರಲ್ಲಿ ಆಸಕ್ತಿಯುಳ್ಳವರಾಗುವರು, ಆದರೆ ಅವರಿಗೆ ದೃಢವಾದ ಗುಣದ ಕೊರತೆಯಿರುವುದು. ಅವರು ತೋರಿಕೆಗಾಗಿ ಅನುಸರಿಸುತ್ತಾ ಸ್ವಲ್ಪ ಕಾಲ ಅತಿ ವಿಶೇಷವಾಗಿ ವೃದ್ಧಿಯಾಗುವರು, ಅದರೆ ಅವರಿಗೆ ಕರ್ತನಿಂದ ಆ ರಾಜ್ಯದ ಕೆಲಸಗಳಿಗೆ ಬಳಸಲ್ಪಡುವದಕ್ಕೆ ಸೂಕ್ತವಾದ ಗುಣಗಳ ಅಭಿವೃದ್ಧಿಗೆ ಅವಶ್ಯವಾದ ದೃಢತೆಯ ಕೊರತೆಯಿದ್ದು ಕಷ್ಟಪರಿಶೋಧನೆಗಳು ಬಂದಾಗ ಅವರು ಎಡವಿಬೀಳುವರು. ಇತರರು "ಬಿರುದನ್ನು ಪಡೆಯಲು ಹೋರಾಡುತ್ತಿರುವಲ್ಲಿ ಮತ್ತು ರೊಚ್ಚಿಗೆದ್ದ ಸಮುದ್ರದಲ್ಲಿ ಪ್ರಯಾಣಮಾಡುತ್ತಿರಲು" ತಾವು "ಹೂವಿನ ಹಾಸಿಗೆಯ" ಮೇಲೆ ಆ ರಾಜ್ಯಕ್ಕೆ ಕೊಂಡೊಯ್ಯಬಹುದೆಂದು ನೆನಸುವರು. ಆ ರಾಜ್ಯಕ್ಕೆ ಸುಲಭವಾದ ಮಾರ್ಗವಿರುವುದಿಲ್ಲ. ಆಯಲ್ಪಟ್ಟ "ಮದಲಗಿತ್ತಿ" ಆಗಲಿರುವವರೆಲ್ಲರಿಗೆ "ಅನೇಕ ಸಂಕಟಗಳನ್ನು ತಾಳಿ ಆ ರಾಜ್ಯಕ್ಕೆ ಸೇರಬೇಕು" ಎಂದು ಒಡೆಯನು ತಿಳಿಯಪಡಿಸಿರುವನು.

## ಒಳ್ಳೆಯ ಬೀಜ ಆದರೂ ಮುಳ್ಳುಗಿಡಗಳ ನೆಲ

ಮುಳ್ಳುಗಿಡಗಳನ್ನು ಬೆಳೆಸಿರುವ ನೆಲವು ಫಲವತ್ತಾಗಿದ್ದು ಸರಿಯಾದ ಕ್ರಿಸ್ತೀಯ ಗುಣಗಳನ್ನು ಬೆಳೆಯಮಾಡಲು ಬಹು ಸೂಕ್ತವಾಗಿರುವುದು ಆದರೆ ಅದು ಮುಳ್ಳಿನ ಬೀಜಗಳಿಂದ ತುಂಬಿಕೊಂಡಿದ್ದು ನೆಲವು ಗೋದಿ ಮತ್ತು ಮುಳ್ಳುಗಳೆರಡನ್ನೂ ಸಫಲವಾಗಿ ಉತ್ಪತ್ತಿಮಾಡಲು ಸಾದ್ಯವಾಗದು; ಆದುದರಿಂದ ಸಾಮ್ಯವು ತೋರಿಸಿರುವಂತೆ ಮುಳ್ಳುಗಿಡಗಳು ಗೋದಿಯನ್ನು ಅಡಗಿಸಿಬಿಡುವುದರಿಂದ ಸಾಕಷ್ಟು ಬೆಳೆಯು ಉತ್ಪನ್ನವಾಗದು. ಕೆಲವರು ಸಲಹೆ ಮಾಡಿರುವ ಹಾಗೆ ಈ ಮುಳ್ಳುಗಿಡಗಳು ಶಾರೀರಿಕ ಭೋಗಗಳು ಅಥವಾ ಅಕ್ರಮ ಬಯಕೆಗಳಾಗಿ–ರುವುದಿಲ್ಲ. ವಿಷಯಾಲಂಪಟತೆಗಳಿಂದ ತುಂಬಿರುವ ಹೃದಯವು ದೇವರ ರಾಜ್ಯದ ಯಾವ ಸಂದೇಶವನ್ನೂ ಕೇಳುವ ಕಿವಿಯನ್ನು ಹೊಂದಿರುವುದಿಲ್ಲ; ಅಲ್ಲದೆ ಇವುಗಳನ್ನು ಸಾಮ್ಯದಲ್ಲಿ ಹೆಸರಿಸಲಾಗಿಯೂ ಇಲ್ಲ. ಉದ್ದೇಶಪೂರ್ವಕವಾಗಿ ಪಾಪ ಮಾಡದವರಾದರೂ ನೀತಿಮಾರ್ಗದಲ್ಲಿ ನಡೆಯುತ್ತಿರುವರಂತೆ ತೋರಿಸಿಕೊಳ್ಳುವವರನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿರುವುದು.

ಒಡೆಯನು ನುಡಿದಿರುವುದೆಂದರೆ, "ಒಬ್ಬನು ವಾಕ್ಯವನ್ನು ಕೇಳಿದಾಗ್ಯೂ ಪ್ರಪಂಚದ ಚಿಂತೆಯೂ ಐಶ್ವರ್ಯದಿಂದುಂಟಾಗುವ ಮೋಸವೂ ಆ ವಾಕ್ಯವನ್ನು ಅಡಗಿಸಿಬಿಡುವುದರಿಂದ ಫಲವನ್ನು ಕೊಡದೆ ಇರುತ್ತಾನೆ. ಇವನೇ ಮುಳ್ಳುಗಿಡಗಳಲ್ಲಿ ಬೀಜಬಿದ್ದ ನೆಲವಾಗಿರುವನು." ಸಾಮ್ಯದ ಈ ಭಾಗದಲ್ಲಿ ಅನೇಕ ಧನವಂತರೂ ಸೂಚಿತವಾಗಿದ್ದಾರೆ. ಹೀಗೆ ಅನೇಕರಿದ್ದಾರೆ ಅವರು ಲೌಕೀಕಭಾವದ ಅಭಿಲಾಷೆಗಳು, ಐಶ್ವರ್ಯಗಳು ಮತ್ತು ಇವುಗಳ ಪ್ರಭಾವಗಳು, ಜೀವನದ ಒಳ್ಳೆಯ ಸಂಗತಿಗಳ ಬಗ್ಗೆ ಇರುವ ಪ್ರೀತಿ, ಇವುಗಳಿಂದ ಮುಕ್ತರಾದಲ್ಲಿ ನೀತಿಯ ವಿಷಯದಲ್ಲಿ ಇವರು ಬಹು ಫಲವಂತರಾಗುವರು. ಸುತ್ತಲಿರುವವರನ್ನು ನಾವು ನೋಡುವವರಾಗಿ ನಾಗರಿಕ ಜಗತ್ತಿನಲ್ಲಿರುವವರ ಮಿತವ್ಯಯ ಸ್ವಭಾವ ಮತ್ತು ಶಕ್ತಿಸಾಮರ್ಥ್ಯಗಳನ್ನು ಗಮನಿಸುವಾಗ ನಮ್ಮಲ್ಲಿ ನಾವು ಸೂಕ್ತವಾಗಿ ಹೇಳಿಕೊಳ್ಳುವುದೆಂದರೆ, ಇವರ ಜೀವಿತಗಳು ನಿಜವಾಗಿಯೂ ಕರ್ತನ ಮಾರ್ಗದ ಕಡೆ ತಿರುಗಿಕೊಂಡು ಪ್ರಾಪಂಚಿಕ ಹೊಣೆಗಾರಿಕೆಯಿಂದ ಮುಕ್ತವಾದಲ್ಲಿ ಎಂಥಾ ಭವ್ಯವಾದ ಗುಣಗಳನ್ನು ಅವರು ತೋರಿಸುವವರಾಗುವರೆಂಬದು. ಹೀಗಿರುವಲ್ಲಿ ಅವರ ಶಕ್ತಿಸಾಮರ್ಥ್ಯಗಳು ಪ್ರಾಪಂಚಿಕ ಸಂಗತಿಗಳು ಮತ್ತು ಚಿಂತೆಗಳಲ್ಲಿ ತಲ್ಲೀನವಾಗಿದ್ದು, ಕ್ರಿಸ್ತನೊಡನೆ ಆತನ ರಾಜ್ಯದಲ್ಲಿ ಒಂದು ಉನ್ನತ ಗೌರವದ ಸ್ಥಾನವನ್ನು ಪಡೆಯಲು ಅಗತ್ಯವಿರುವ ಯೋಗ್ಯ ಫಲಗಳನ್ನು ಅವರಿಗೆ ನೀಡಲಾಗದು. ಇಂಥವರಿಗೆ ಒಡೆಯನ ಸಂದೇಶವೇನಂದರೆ, ನಿಮ್ಮ ಸಮಯ ಶಕ್ತಿಸಾಮರ್ಥ್ಯ ಪ್ರಭಾವಗಳನ್ನು ಪ್ರಾಪಂಚಿಕ ಸಂಗತಿಗಳಿಗೆ ನೀವು ನೀಡಿ ಅದೇ ಸಮಯದಲ್ಲಿ ನನ್ನ ರಾಜ್ಯದಲ್ಲಿ ಒಂದು ಸ್ಥಾನವನ್ನು ಪಡೆಯಲು ಅಂದರೆ "ದೇವರು ನಿಮ್ಮನ್ನು ಕರೆದದ್ದನ್ನೂ ಆದುಕೊಂಡದ್ದನ್ನೂ ದೃಢಪಡಿಸಿಕೊಳ್ಳಲು" ಸಾಧ್ಯವಾಗುವುದಿಲ್ಲ. ಯಾವನು ನನ್ನ ಶಿಷ್ಯರಾಗಬೇಕೆಂದಿರುವನೋ ಅವನು ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ. ನಾನು ಎಲ್ಲಿರುತ್ತೇನೋ ಅಲ್ಲಿ ನನ್ನ ಶಿಷ್ಯನು ಸಹ ಇರುವನು.

## "ನೀವು ಬಹಳ ಫಲಕೊಡುವವರಾಗಬೇಕು"

"ನೀವು ಬಹಳ ಫಲಕೊಡುವುದರಿಂದಲೇ ನನ್ನ ತಂದೆಗೆ ಮಹಿಮೆಯುಂಟಾಗುವದು" ಎಂದು ನಮ್ಮ ಒಡೆಯನು ಹೇಳಿದ್ದನು. ಈ ಸಾಮ್ಯದಲ್ಲಿ ಒಳ್ಳೆಯ ನೆಲವು ನೀಡುವ ತನ್ನ ಹುಟ್ಟುವಳಿಯು ವಿಧವಿಧವಾಗಿರುವುದು ಅಂದರೆ ಮೂವತ್ತರಷ್ಟು ಅರವತ್ತರಷ್ಟು ಮತ್ತು ನೂರರಷ್ಟು. ಅಧಿಕವಾದ ಪ್ರತಿಫಲವು ತಂದೆಯ ಸಂತೋಷವನ್ನು ರಕ್ಷಕನ ಪ್ರಭಾವವನ್ನು ಹೆಚ್ಚಿಸುವುದು. ಕೆಲವರು ಭಾವಿಸಿರುವಂತೆ ಈ ಹೇಳಿಕೆಯು ವಿಪರೀತವಾ–ದುದೇನಲ್ಲ. ಹೊಸದಾದ "ಮಿರಾಕಲ್ ವೀಟ್" (ಅದ್ಭುತವಾದ ಗೋದಿ) ಎಂಬುದು ಕೆಲವು ವೇಳೆ ತನ್ನ ತೆನೆಯಲ್ಲಿ ಇನ್ನೂರು ಕಾಳುಗಳನ್ನು ಬಿಡುತ್ತದೆ. ಹೃದಯದಲ್ಲಿ ಮತ್ತು ಜೀವಿತದಲ್ಲಿ ಅಲ್ಲದೆ ಗುಣದಲ್ಲಿ ಫಲವಂತಿಕೆಯಾಗುವದರ ಹೊಣೆಯು ಬಹುವಾಗಿ ವ್ಯಕ್ತಿಯು ತಾನು ಹೇಗೆ ಆ ರಾಜ್ಯದ ಸಂದೇಶವನ್ನು ಅಂಗೀಕರಿಸುವನೆಂಬುದರ ಮೇಲೆ ಅವಲಂಭಿತವಾಗಿರುವು ದೆಂಬುದು ಈ ಸಾಮ್ಯದಲ್ಲಿ ಸೂಚಿತವಾಗಿರುವುದಾಗಿ ತೋರುತ್ತದೆ. ಯಾರಲ್ಲಿ ಫಲಗಳು ಬಹು ಹೇರಳವಾಗಿರುವವೋ ಅವರು ಈ

ಆಮಂತ್ರಣವನ್ನು ಬಹು ಬುದ್ಧಿವಂತಿಕೆಯಿಂದಲೂ ಮತ್ತು ಶ್ರದ್ಧೆಯಿಂದಲೂ ಗ್ರಹಿಸಿದಂಥವವರಾಗಿರುವರು. "ಆ ವಾಕ್ಯವನ್ನು ಕೇಳಿ ತಿಳುಕೊಂಡವರು", ಮತ್ತು ಯಾರ ಹೃದಯದ ಸ್ಥಿತಿಯು ದೇವರಿಗೆ ನಿಷ್ಠೆಯುಳ್ಳದ್ದಾಗಿರುವದೋ ಮತ್ತು ಯಾವನು ತನ್ನನ್ನು ಅಡೆತಡೆಗಳಿಂದಲೂ ಮತ್ತು ಪ್ರಾಪಂಚಿಕವಾದ ಅಕಾಂಕ್ಷೆ ಅಭಿಲಾಷೆಗಳಿಂದಲೂ ಮುಕ್ತನನ್ನಾಗಿ ಮಾಡಿಕೊಳ್ಳುವನೋ ಅವನು ಅಪೋಸ್ತಲನಂತೆ "ಆದರೆ ಒಂದು" (ಒಂದನ್ನು ಮಾಡುತ್ತೇನೆ, ಅದೇನಂದರೆ ಹಿಂದಿನ ಸಂಗತಿಗಳನ್ನು ಮರೆತು ಬಿಟ್ಟು ಮುಂದಿನವುಗಳನ್ನು ಹಿಡಿಯುವುದಕ್ಕೆ ಎದೆಬೊಗ್ಗಿದವನಾಗಿ ...ಓಡುತ್ತಾ ಇದ್ದೇನೆ.) ಎಂದು ತಾನೂ ಹೇಳಿಕೊಳ್ಳಬಹುದು ಮತ್ತು ಅವನು ಖಂಡಿತವಾಗಿ ಆ ರಾಜ್ಯವನ್ನು ಪಡಕೊಳ್ಳುವನು.

ನಾವು ದೇವರ ರಾಜ್ಯದ ಸಂದೇಶವನ್ನು ಕೇಳುವುದಷ್ಟೇ ಸಾಕಾಗದು; ಇದರ ವಿಷಯದಲ್ಲಿ ನಾವು ಒಳ್ಳೆಯ ಹೃದಯ ಅಥವಾ ಸದುದ್ದೇಶ ಹೊಂದುವುದಷ್ಟೇ ಸಾಕಾಗದು; ಒಡೆಯನು ಹೇಳಿರುವಂತೆ ನಾವು ಆ ರಾಜ್ಯದ ಸಂದೇಶವನ್ನು ಅರ್ಥಮಾಡಿಕೊಳ್ಳುವುದು ಇನ್ನೂ ಹೆಚ್ಚು ಅವಶ್ಯವಾಗಿರುವುದು; ಅದುದರಿಂದ ಸತ್ಯವೇದದ ಅಧ್ಯಯನವು ಅಗತ್ಯ. ಕೆಲವು ವರುಷಗಳ ಭೂಲೋಕದ ಜೀವಿತ ನಡೆಸಲು ಸಿದ್ಧತೆ ಮಾಡಿಕೊಳ್ಳಲು ಹಲವಾರು ವರುಷಗಳ ಅಧ್ಯಯನವನ್ನು ಮುಡುಪಾಗಿಡುವುದು ವಿವೇಕವೂ ಉಚಿತವೂ ಆಗಿರುವುದೆಂದು ಬುದ್ಧಿವಂತ ಜನರು ಭಾವಿಸುವರು. ನಿತ್ಯಜೀವ ಮತ್ತು ಆ ರಾಜ್ಯದ ಆಶೀರ್ವಾದ ಪಡೆಯುವುದಕ್ಕಾಗಿ ಎಷ್ಟು ಪ್ರಮಾಣದ ಅಧ್ಯಯನವು ಸೂಕ್ತವೆಂದು ನಾವು ಪರಿಗಣಿಸಬೇಕಿರುವುದು? ಆ ರಾಜ್ಯದಲ್ಲಿ ಸೇರುವುದಕ್ಕಾಗಿ ಗುಣಾಭಿವೃದ್ಧಿಪಡಿಸಿಕೊಳ್ಳಲು ವಿನಿಯೋಗಿಸಿದಂಥ ಸಮಯ ಮತ್ತು ಪರಿಶ್ರಮಗಳು ವಿವೇಕದಿಂದ ಉಪಯೋಗಿಸಲ್ಪಟ್ಟವುಗಳಾಗಿರುವುದು. ಅಲ್ಲದೆ ಮೂವತ್ತರಷ್ಟು ಅರುವತ್ತರಷ್ಟು ಹಾಗು ನೂರರಷ್ಟು ಪಡೆದ ಬೆಳೆಯು ನಾವು ತೋರಿದ ಶ್ರದ್ಧೆಯ ತೀವ್ರತೆ ಮತ್ತು ಪರಿಮಾಣಗಳನ್ನು ಉಲ್ಲೇಖಿಸುತ್ತದೆ. ಆ ರಾಜ್ಯದಲ್ಲಿ ದೊರೆಯುವ ಪ್ರತಿಫಲವೂ ಈ ಪರಿಮಾಣದ ಅನುಗುಣವಾಗಿಯೇ ಇರುತ್ತದೆ. "ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಹೆಚ್ಚು ಕಡಿಮೆಯುಂಟಷ್ಟೆ. ಸತ್ತವರಿಗಾಗುವ ಪುನರುತ್ಥಾನವೂ ಅದೇ ಪ್ರಕಾರವಾಗಿರುವುದು." ಆ ರಾಜ್ಯದಲ್ಲಿ ಮಹಿಮೆಯಲ್ಲಿನ ಪರಿಮಾಣವು ಬೇರೆಬೇರೆಯಾಗಿ ಇರುವುದಾಗಿ ತೋರಿಬರುವುದು, ಆದರೂ ಒಳ್ಳೆಯ ಪ್ರಮಾಣದಲ್ಲಿ ಫಲಗಳನ್ನು ನೀಡಲಾರದ ಯಾರೂ ತಂದೆಗೆ ಒಪ್ಪಿಗೆಯಾಗುವುದಿಲ್ಲ. ಅರ್ಹತೆಯಿಲ್ಲದಿದ್ದಲ್ಲಿ "ಭಲಾ, ಒಳ್ಳೆಯದನ್ನು ಮಾಡಿದಿ" ಎಂಬ ಪ್ರಸಂಶಾನುಡಿಯು ಎಂದೂ ಉಚ್ಚರಿಸಲ್ಪಡುವುದಿಲ್ಲ.

# ಗೋದಿ ಮತ್ತು ಹಣಜಿ

**ರೀಪ್ರಿಂಟ್ಸ್ ಪುಟ 4635**

## ಮತ್ತಾಯ 13:24–43

**"ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು" – ಮತ್ತಾಯ 13:43**

ಇಲ್ಲಿ "ಪರಲೋಕರಾಜ್ಯದ" ಮತ್ತೊಂದು ಸಾಮ್ಯದ ಮೂಲಕ ಒಂದು ದೊಡ್ಡ ಪ್ರವಾದನೆಯನ್ನು ಪರಿಚಯಿಸಲಾಗಿದೆ. ಹಿಂದಿನ ವಾರದ ಅಧ್ಯಯನವು ಸತ್ಯವನ್ನು ಕೇಳುವ ಹಲವು ವರ್ಗಗಳನ್ನು ತೋರಿಸಿಕೊಟ್ಟಿತ್ತು. ಈ ದಿನದ ಅಧ್ಯಯನವು "ಒಳ್ಳೆಯ ನೆಲದ" ಕೇಳುಗರನ್ನು ಬಿಟ್ಟು ಉಳಿದ ಎಲ್ಲರನ್ನೂ ನಿರ್ಲಕ್ಷಿಸಲಾಗಿದೆ. ಇದು ನಮ್ಮ ಕರ್ತನಿಗೆ ಸುವಾರ್ತಾ ಯುಗದ ಇತಿಹಾಸವು ಮುಂದಾಗಿ ತಿಳಿದಿತ್ತೆಂಬುದನ್ನು ತೋರಿಸುತ್ತದೆ. ಆತನು ಮತ್ತು ಆತನ ಶಿಷ್ಯರು ಕೇವಲ ಒಳ್ಳೆಯ ಬೀಜಗಳನ್ನೇ ಬಿತ್ತಿದ್ದರೆಂದು ನಮಗೆ ತಿಳಿಸಲಾಗಿದೆ; ಆನಂತರ ಅಪೋಸ್ತಲರು ಮರಣವೆಂಬ ನಿದ್ರೆಗೆ ಹೋದ ನಂತರ ಮಹಾ ವಿರೋಧಿಯಾದ ಸೈತಾನನು ಗೋದಿಯ ಹೊಲದ ತುಂಬಾ ಹಣಜಿ ಎಂಬ ಕಳೆಸಸ್ಯದ ಬೀಜವನ್ನು ಬಿತ್ತಿಹೋದನು. ಇಂಥಾ ದ್ವೇಷ ಕೃತ್ಯವು ಪೌರಾತ್ಯ ದೇಶದಲ್ಲಿ ಅಸಾಮಾನ್ಯವೇನಲ್ಲವೆಂದು ನಮಗೆ ಹೇಳಲಾಗಿದೆ. ಹಣಜಿಯ ಬೀಜವು ಗೋದಿಯ ಬೀಜಕ್ಕಿಂತಲೂ ಭಿನ್ನವಾಗಿರುತ್ತದೆ ಆದರೆ ಬೆಳೆಯುವಾಗ ಎರಡು ಗಿಡದ ಕಾಂಡವು ಬಹು ಸಮನಾಗಿರುತ್ತದೆ ಮತ್ತು ತೆನೆಗಳು ಬಲಿಯುವವರೆಗೂ ಹೋಲಿಕೆಯಲ್ಲಿಯೂ ಸಮನಾಗಿಯೇ ಇರುತ್ತದೆ; ತಜ್ಞರನ್ನು ಹೊರತು ಪಡಿಸಿದರೆ ಬೇರೆಯವರಿಗೆ ಇದರ ಬೇಧವನ್ನು ತಿಳಿಯಲು ಸಾಧ್ಯವಿರುವುದಿಲ್ಲ. ಆನಂತರ ಗೋದಿಯ ತೆನೆಯು ಭಾರವಾಗಿದ್ದು (ಬಾಗಿಕೊಂಡು) ಹಣಜಿಯ ತೆನೆಯು ಹಗುರವಾಗಿರಲಾಗಿ ನೆಟ್ಟಗೆ ನಿಂತಿರುತ್ತದೆ. ಇವುಗಳು ಬೆಳೆಯುವಾಗ ಹಣಜಿ ಮತ್ತು ಗೋದಿಯ ಭೇದವನ್ನು ಸೂಕ್ಷ್ಮವಾಗಿ ಅರಿಯಲು ಕೇವಲ ತಜ್ಞರಿಗೆ ಮಾತ್ರ ಸಾಧ್ಯ.

ತಪ್ಪಾದವುಗಳು ಸಭೆಯಲ್ಲಿ ಸೈತಾನನಿಂದ ಹೇಗೆ ತರಲಾಗುತ್ತದೆಂಬುದನ್ನೂ ಮತ್ತು ತಪ್ಪಾದವುಗಳಿಂದ ಜನಿಸಿದ ಮಕ್ಕಳು ಸತ್ಯದಿಂದ ಹುಟ್ಟಿದ ಮಕ್ಕಳನ್ನು ಹಲವು ವಿಧದಲ್ಲಿ ಹೋಲುವರೆಂಬುದಕ್ಕೆ ಅಥವಾ ನಕಲು ಮಾಡುವರೆಂಬುದಕ್ಕೆ ನಿದರ್ಶನವಾಗಿ ಒಡೆಯನು ಈ ಸಾಮ್ಯವನ್ನು ನೀಡಿದ್ದನು. ಯೇಸುವು ಮತ್ತು ಅಪೋಸ್ತಲರು ಬಿತ್ತಿದ ಸತ್ಯದ ಬೀಜವನ್ನು ಕೆಡಿಸಲು ವಿರೋಧಿಯಾದ ಸೈತಾನನಿಗೆ ಅಸಾಧ್ಯ. ಈ (ಸತ್ಯಬೀಜದ) ಬಿತ್ತುವಿಕೆಯಲ್ಲಿ ಮಧ್ಯಪ್ರವೇಶಿಸಲು ಆತನಿಗೆ ಬಿಡಲಾಗಿಲ್ಲ ಆದರೆ ಹೊಲದಲ್ಲಿ ಇದರ ಮಧ್ಯೆ (ಹಣಜಿ ಬೀಜ) ಬಿತ್ತಲು ಮತ್ತು ಸಾಧ್ಯವಿದ್ದಲ್ಲಿ ಗೋದಿಯನ್ನು ಅಡಗಿಸಲು ಅವನಿಗೆ ಬಿಡಲಾಗಿತ್ತು; ಮತ್ತು ಹೀಗೆ ಗೋದಿಯ ಅಂದರೆ ಆ ರಾಜ್ಯದ ಮಕ್ಕಳ ನಿಜವಾದ ಗುಣಲಕ್ಷಣದ ವಿಷಯದಲ್ಲಿ ಹೊರಗಿನ ಲೋಕದವರನ್ನು ಸಾಮಾನ್ಯವಾದ ರೀತಿಯಲ್ಲಿ ಮರುಳುಗೊಳಿಸಲು ಆತನಿಗೆ ಬಿಡಲಾಗಿತ್ತು.

ಸೈತಾನನನ್ನು ಮತ್ತು ಆತನ ಯೋಜನೆಗಳು ನೆರವೇರುವುದನ್ನು ಯಾವ ಸಮಯದಲ್ಲಿಯಾದರೂ ಅಥವಾ ಎಲ್ಲಾ ಸಮಯಗಳಲ್ಲಿಯಾದರೂ ತಡೆಯುವುದಕ್ಕೆ ಸರ್ವಶಕ್ತನಾದ ದೇವರಿಗೆ ಸಾಧ್ಯವೆಂಬುದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕು. ದೇವರು ಮನ್ನಣೆಮಾಡದ ಹಲವಾರು ಸಂಗತಿಗಳನ್ನು ಆತನ ಯುಗಾಂತರಗಳ ಯೋಜನೆಯಲ್ಲಿ ಬರಮಾಡಲಾಗಿರುವುದೆಂಬುದನ್ನು ನಾವು ನೆನಪಿನಲ್ಲಿಟ್ಟು ಕೊಳ್ಳಬೇಕು; ಆದರೆ ಆತನ ವಾಕ್ಯಗಳು ಅವುಗಳನ್ನು ಖಂಡಿಸುವವು. ದೇವರ ಯೋಜನೆಯು ಹಲವು ಕಾಲಗಳನ್ನು ವ್ಯಾಪಿಸಿಕೊಂಡಿರುವುದೆಂಬುದನ್ನೂ ಕೇವಲ ಅವು ಪೂರ್ಣ–ಗೊಂಡಾಗ ಮಾತ್ರ ದೇವರ ಜ್ಞಾನವಿವೇಕ ನೀತಿನ್ಯಾಯ ಪ್ರೀತಿ ಮತ್ತು ಬಲಗಳನ್ನು ಸಂಪೂರ್ಣವಾಗಿ ಪ್ರದರ್ಶಿಸುತ್ತವೆಂಬುದನ್ನು ನಾವು ನೆನಪಿನಲ್ಲಿಡಬೇಕು. ದೇವರು ಈಗಿನ ಕಾಲದಲ್ಲಿ ದುರಾತ್ಮಗಳ ಮತ್ತು ಮನುಷ್ಯರ ಕೋಪೋದ್ರೇಕಗಳು ತನ್ನ ಉದ್ದೇಶವನ್ನು ವಿರೋಧಿಸಲು ಬಿಟ್ಟಿರುತ್ತಾನಾದರೂ, ಕಡೆಯಲ್ಲಿ ಇವುಗಳಿಂದ ಕೇವಲ ತನಗೆ ಮಹಿಮೆಯುಂಟಾಗುವಂತೆ ಮತ್ತು ತನ್ನೊಡನೆ ಹೊಂದಾಣಿಕೆಯಾಗಿ ಇರುವವರಿಗೆ ಹಿತವಾಗುವಂತೆ ಅವುಗಳು ಮಾರ್ಪಡುವ ಹಾಗೆ ಮಾಡಿರುವನೆಂಬುದನ್ನೂ ನಾವು ನೆನಪಿನಲ್ಲಿಡಬೇಕು.

## “ಎರಡೂ ಕೂಡ ಬೆಳೆಯಲಿ”

“ಗೋದಿ”ಯಿಂದ “ಹಣಜಿಯನ್ನು” ಆರಿಸಿ ತೆಗೆದುಹಾಕಬಹುದೋ ಇಲ್ಲವೋ ಎಂಬುದನ್ನು ಮತ್ತು ಹೀಗೆ ಆ ವೈರಿಯ ಕೆಲಸವನ್ನು ನಾಶಮಾಡಲು ಸೇವಕರು ಕೇಳಿದ್ದನ್ನು ಈ ಸಾಮ್ಯವು ಸೂಚಿಸುತ್ತದೆ. ಉತ್ತರವು ಇಲ್ಲವೆಂಬದಾಗಿತ್ತು; ಏಕೆಂದರೆ ಹಾಗೆ ಮಾಡುವಾಗ ಗೋದಿಯ ಹೊಲದಲ್ಲಿ ಗದ್ದಲವಾಗಿ ಗೋದಿ ಗಿಡಗಳೆಲ್ಲವುಗಳಿಗೆ ತೊಂದರೆ ಉಂಟಾಗಬಹುದು. ಸಮಾಜ ಮನೆ ಮುಂತಾದವುಗಳಲ್ಲಿ ಸತ್ಯವಾದವುಗಳು ಮತ್ತು ಅಸತ್ಯವಾದವುಗಳು ಬಹು ನಿಕಟವಾದ ಸಹವಾಸದಲ್ಲಿದ್ದು ಅವುಗಳ ಬೇರುಗಳು ಒಂದರಲ್ಲೊಂದು ಬೆಸೆದುಹೋಗಿರುವುದು. ಬದಲಾಗಿ ಈ (ಸುವಾರ್ತಾ) ಯುಗದ ಪರ್ಯಂತರ ಸುಗ್ಗಿಯ ಕಾಲವು ಬರುವವರೆಗೂ ಅಂದರೆ ಅಂತ್ಯದವರೆಗೂ ಎರಡನ್ನೂ ಒಟ್ಟಾಗಿ ಬೆಳೆಯಲು ಬಿಡಬೇಕು ಎಂದು ಒಡೆಯನು ತಿಳಿಸಿದನು. ಆನಂತರ ಇವುಗಳನ್ನು ಆರಿಸಿ ತೆಗೆದು ಈ ಎರಡು ವರ್ಗಗಳನ್ನು ಬೇರೆ ಬೇರೆ ಮಾಡಬೇಕೆಂದು “ಕೊಯ್ಯುವವರಿಗೆ” ಸೂಚನೆ ನೀಡಬೇಕು. ಆಗ ಗೋದಿಯನ್ನು ಆರಿಸಿ ಕಣಜಕ್ಕೆ ತುಂಬಿ ಹಣಜಿಯನ್ನು ಸುಟ್ಟುಹಾಕಲು ಹೊರೆಕಟ್ಟಲಾಗುವುದು; ಅಂತ್ಯದಲ್ಲಿ ಯಾವ ಕೆಟ್ಟ ಬೀಜವೂ ಮುಂದಿನ ಬೆಳೆಯನ್ನು ಹಾನಿಗೊಳಿಸದಂತಾಗುವದು.

ಶಿಷ್ಯರ ವಿಶೇಷ ಕೋರಿಕೆಯ ಮೇರೆಗೆ ಒಡೆಯನು ಈ ಸಾಮ್ಯದ ಅರ್ಥವನ್ನು ಸಹ ಹೇಳಿದ್ದನು. ಯೇಸುವು ತಾನೇ ಪರಲೋಕರಾಜ್ಯದ ವಾರ್ತೆಯೆಂಬ ಒಳ್ಳೆಯ ಬೀಜಗಳನ್ನು ಬಿತ್ತುವವನಾಗಿದ್ದನು. ಸೈತಾನು ಸುಳ್ಳಾದ ಬೋಧನೆ ಹಾಗು ಮೋಸಗಳೆಂಬ (ಹಣಜಿಯ) ಬೆಳೆಯ ಬೀಜವನ್ನು ಬಿತ್ತುವವನಾಗಿದ್ದನು. “ಸುಗ್ಗಿಕಾಲವು” ಈ (ಸುವಾರ್ತಾ) ಯುಗದ ಸಮಾಪ್ತಿಯ ಸಮಯ ಅಂದರೆ ಕ್ರಿಸ್ತನ ಸಾವಿರ ವರುಷದ (ಆಳ್ವಿಕೆಯ) ಕಾಲವು ಆರಂಭವಾಗುವದಕ್ಕೆ ಕೇವಲ ಹಿಂದಿರುವ ಸಮಯ. ಗೋದಿಯು ಕ್ರಿಸ್ತನೊಂದಿಗೆ ಆತನ ಸಾವಿರ ವರುಷದ (ಆಳ್ವಿಕೆಯ) ಮಹಿಮೆಯಲ್ಲಿ ಸೇರಲು ಯೋಗ್ಯವಾದವರೆಂದು ಎಣಿಸಲ್ಪಡುವ ವರ್ಗದವರನ್ನು ಸೂಚಿಸುತ್ತದೆ ಮತ್ತು ಅದನ್ನು ಆರಿಸಿ “ಕಣಜದಲ್ಲಿ” ತುಂಬಿಸಿಕೊಳ್ಳುವುದು ಈ ಗೋದಿಯ ವರ್ಗಕ್ಕೆ ಸೇರಿದವರು ಪುನರುತ್ಥಾನದಲ್ಲಿ ಹೊಂದಲಿರುವ ಮಾರ್ಪಾಟಿಗೆ ಸೂಚನೆಯಾಗಿರುವುದು. ಇದನ್ನು ವಿವರಿಸುವವನಾಗಿ ಅಪೋಸ್ತಲನು ಹೀಗೆ ಹೇಳಿರುವನು: “ದೇಹವು ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ನಿರ್ಲಯಾ–ವಸ್ಥೆಯಲ್ಲಿ ಎದ್ದುಬರುವುದು; ಹೀನಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದುಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮಿಕ (ಪರಲೋಕದ) ದೇಹವಾಗಿ ಎದ್ದುಬರುವದು.” ಇದೇ ಸತ್ತವರಿಗಾಗುವ ಪುನರುತ್ಥಾನವು ಅಂದರೆ ಪ್ರಥಮ ಪುನರುತ್ಥಾನ. – 1 ಕೊರಿಂಥ 15:43–44; ಪ್ರಕಟನೆ 20:6

ಹಣಜಿಯ ವರ್ಗದವರನ್ನು ಆ ರಾಜ್ಯದೊಳಗಿಂದ (ವಚನ 41) ಆರಿಸಿ ತೆಗೆದುಹಾಕಲಾಗುತ್ತಿರುವುದಾಗಿ ಸೂಚಿತವಾಗಿರುವುದು. ಈಗಿನ ಕಾಲದಲ್ಲಿ ಒಂದು ಅರ್ಥದಲ್ಲಿ ಆ ರಾಜ್ಯವು ಭ್ರೂಣಾವಸ್ಥೆಯಲ್ಲಿರುವುದು ಅಂದರೆ ಬೆಳವಣಿಗೆಯ ಹಂತದಲ್ಲಿ ಅಥವಾ ಮುಂದಿನ ಕಾಲದಲ್ಲಿ ಪ್ರಭಾವ ಹೊಂದುವದಕ್ಕಾಗಿ ಮತ್ತು ಕಾರ್ಯನಿರ್ವಹಿಸುವುದಕ್ಕಾಗಿ ಸಿದ್ಧತೆಹೊಂದುತ್ತಿರುವ ಹಂತದಲ್ಲಿರುವುದು. ಆ ರಾಜ್ಯದಲ್ಲಿ ಸೇರಲಿರುವ ವರ್ಗದವರೆಲ್ಲರು ದೇವರಿಗೆ ಪೂರ್ಣ ಪ್ರತಿಷ್ಠಿತರಾಗಿ ತಾವು ಪುನರುತ್ಥಾನದಲ್ಲಿ ದೈವಿಕವಾಗಿ ಆತ್ಮಿಕ ಜೀವಿಗಳಾಗಲು ಪವಿತ್ರಾತ್ಮನಿಂದ (ಅಂಕುರಿಸಲ್ಪಟ್ಟವರಾಗಿ) ಹುಟ್ಟಿದವರಾಗಿರುವರು. ಹೀಗೆ ಪವಿತ್ರಾತ್ಮನಿಂದ ಹುಟ್ಟದೇ ಇರುವವರಿಗೆ ತಮ್ಮನ್ನು “ಗೋದಿಯ” ವರ್ಗಕ್ಕೆ ಸೇರಿದವರೆಂದು ಹೇಳುವ ಇಲ್ಲವೆ ತಾವು ಆ ರಾಜ್ಯಕ್ಕೆ ಬಾಧ್ಯರೆಂದು ಎಣಿಸಿಕೊಳ್ಳುವ ಹಕ್ಕು ಇರುವುದಿಲ್ಲ. ಕ್ರಿಸ್ತನ ಸಭೆಯಲ್ಲಿ ಅವರ ಉಪಸ್ಥಿತಿ ನಿಯಮಬಾಹಿರವಾಗಿರುವುದು. ಅವರು ಗೋದಿಯೊಂದಿಗೆ ಬೆರೆಯಲು ಶತಮಾನಗಳಿಂದಲೂ ಅನುಮತಿ ನೀಡಲಾಗಿರುವುದು; ಆದರೆ ಯುಗದ ಸಮಾಪ್ತಿಯಲ್ಲಿ ಅಂದರೆ ಸಾವಿರ ವರುಷದ (ಆಳ್ವಿಕೆಯ) ಸ್ಥಾಪನೆಯ ಸಮಯದಲ್ಲಿ ದೈವನೇಮದ ವ್ಯವಸ್ಥೆಯಲ್ಲಿ ಸಾಂದರ್ಭಿಕವಾಗಿ ಬದಲಾವಣೆಯಾಗುವುದು.

ಅಲ್ಲಿ ಕೀಳು ನೈತಿಕಮಟ್ಟದ ಕಳ್ಳರು ಕೊಲೆಗಾರರು ಈ ಕಂಟಕರ (ಹಣಜಿಯ) ಮಧ್ಯದಲ್ಲಿರುವರೆಂದು ಭಾವಿಸುವುದು ತಪ್ಪಾಗುತ್ತದೆ. ಆದರೆ ಇವರಲ್ಲಿ ಕೆಲವರು ಶರೀರಭಾವದ ಮತ್ತು ವಿರೋಧಿಯಾದ ಸೈತಾನನ ಕೃತ್ಯಗಳನ್ನು ಅನುಸರಿಸುವವರು ಅಂದರೆ ಕೋಪ ದ್ವೇಷ ಹಗೆತನ ಅಸೂಯೆ ಕಲಹ ಇವುಗಳನ್ನು ಮಾಡುವವರು ಒಳಗೊಂಡಿರುವವರೆಂದು ಅಪೋಸ್ತಲನು ವಿವರಿಸಿರುವನು. ಹೀಗಾಗಿ “ಹಣಜಿ” ಎಂಬ ವರ್ಗದಲ್ಲಿ

ಹಲವಾರು ಉದಾರ ಪ್ರವೃತ್ತಿಯುಳ್ಳ ಒಳ್ಳೆಯ ಜನರು ಇರುವರಾದರೂ ಅವರು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿರುವುದಿಲ್ಲ. ಅವರು ಪವಿತ್ರಾತ್ಮನಿಂದ ಹುಟ್ಟದಿದ್ದರೂ, ಹೆಸರಿನ ಕ್ರೈಸ್ತ ಸಭೆಯಲ್ಲಿರುವ ಮತ್ತು ಕ್ರೈಸ್ತರಂತೆ ತೋರ್ಪಡಿಸಿಕೊಳ್ಳುವ ಕಾರಣದಿಂದ ನಿಂದನಾರ್ಹರಾಗಿರುವರು. ಈ ಅರ್ಥದಲ್ಲಿ ಅವರು ಒಡೆಯನ ದೃಷ್ಟಿಯಲ್ಲಿ ತಪ್ಪಿತಸ್ಥರಾಗಿರುವರು. ಇಲ್ಲವೇ ತಾವು ತಮ್ಮನ್ನು ಕ್ರೈಸ್ತರೆಂದು ಭಾವಿಸಿಕೊಂಡಿರುವದಕ್ಕಾಗಿ ಅವರನ್ನು ಪೂರ್ಣವಾಗಿ ನಿಂದಿಸುವ ಹಾಗಿಲ್ಲ. ಹೀಗೆ ತಮ್ಮನ್ನು ಭಾವಿಸಿಕೊಂಡು ನಡೆದುಕೊಳ್ಳುವಂತೆ ಅವರು ಉಪದೇಶಿಗಳು ಮತ್ತು ಬೋಧಕರುಗಳಿಂದ ಪ್ರೋತ್ಸಾಹಿಸಲ್ಪಟ್ಟಿರುವರು. ಈ ಉಪದೇಶಿಗಳು ಮತ್ತು ಬೋಧಕರುಗಳಲ್ಲಿ ಹಲವರು ಹಣಜಿಯ ವರಂತೆಯೇ ಆ ರಾಜ್ಯದಲ್ಲಿ ಭಾಗಿಗಳಾಗಿ ಕಾರ್ಯಪ್ರವೃತ್ತರಾಗಲು ಆ ವಿಷಯದ ಪರಿಜ್ಞಾನವಾಗಲೀ ಇಲ್ಲವೇ ಆತ್ಮನಿಂದ ಹುಟ್ಟಿರುವ ಸಾಮರ್ಥ್ಯವನ್ನು ಪಡೆಯದೆ ಇರುವರು. ಇವರನ್ನು ಆರಿಸಿ ಹೊರೆಕಟ್ಟುವದನ್ನು ಅಂದರೆ ಅವರನ್ನು ವಸತಿಗೃಹಸಂಸ್ಥೆಗಳಾಗಿ ಸಮಾಜಗಳಾಗಿ ಸಭೆಗಳಾಗಿ ಪಂಥಗಳಾಗಿ ಪಕ್ಷಗಳನ್ನಾಗಿ ಮಾಡಿರುವುದು ವಿಶೇಷವಾಗಿ "ಸುಗ್ಗಿಯ" ಕಾರ್ಯವು ಮುಂದುವರಿಯುತ್ತಿರುವುದೆಂಬುದಕ್ಕೆ ಪ್ರಮಾಣವಾಗಿರುವುದು. ನಿಜವಾದವರಿಗೆ (ಗೋದೀ ವರ್ಗದವರು) ಕ್ರಿಸ್ತನು ಬಿಡುಗಡೆಮಾಡಿರುವದರಿಂದ ತಮಗೆ ದೊರೆತ ಸ್ವಾತಂತ್ರ್ಯದಲ್ಲಿ ದೃಢವಾಗಿ ನಿಲ್ಲುವಂತೆಯೂ ಮತ್ತು ಅವರು ಧಾರ್ಮಿಕಪಂಥಗಳು ಮತ್ತು ಪಕ್ಷಗಳ ಕಟ್ಟುಪಾಡಿಗೆ ಸಿಕ್ಕಿಬೀಳದೆಂತೆಯೂ ಪ್ರಬೋಧಿಸ ಲಾಗಿರುವುದು. ಇವರು ತಮ್ಮನ್ನು ಈ (ಹಣಜಿಯೆಂಬ) "ಕಟ್ಟಿನಲ್ಲಿ" ಸೇರಿ ಅದರ ಅಂಗಗಳಾಗುವುದರಿಂದ ದೂರವಿದ್ದು ನಿಜವಾದ "ಗೋದಿಯು" ವರ್ಗದವರೆಲ್ಲರ ಪೂರ್ಣ ಅನ್ಯೋನ್ಯತೆಯಲ್ಲಿ ಇರುವವರಾಗಿರಬೇಕು.

ಈ ಕಟ್ಟುಗಳನ್ನು ಬೆಂಕಿಕೊಂಡಕ್ಕೆ ಹಾಕುವುದು ಅವರು ನಾಶವಾಗಿಹೋಗುವುದರ ಅರ್ಥಕೊಡುತ್ತದೆ. ಆದರೆ ಬೆಂಕಿಕೊಂಡವೆಂಬುದು ಯಾವ ಅರ್ಥದಲ್ಲಿಯೂ ಅಕ್ಷರಶಃ ನಿಜವಾದುದೆಂದಾಗಲಿ ಇಲ್ಲವೇ ಹಣಜಿಯನ್ನು ಸುಡುವ ಬೆಂಕಿಯು ಅಕ್ಷರಶಃ ನಿಜವಾದ ಬೆಂಕಿಯೆಂದಾಗಲೀ ತಿಳಿಯ ಬಾರದು. ಈ (ಸುವಾರ್ತಾ) ಯುಗವನ್ನು ಅಂತ್ಯಗೊಳಿಸುವ ಬೆಂಕಿ ಎಂಬುದು ಸತ್ಯವೇದದಲ್ಲಿ ಮುಂತಿಳಿಸಿರುವ ಹಾಗೆ ಹಿಂದೆಂದೂ ಸಂಭವಿಸದಂಥ ಮಹಾ "ಸಂಕಟದ ಕಾಲ." ಇದು ಸಾವಿರ ವರುಷದ (ಆಳ್ವಿಕೆಯ) ಕಾಲವು ಪ್ರಾರಂಭವಾಗುವ ಮೊದಲು ಆ ಕಾಲವು ಪ್ರವೇಶವಾಗುವುದನ್ನು ಪರಿಚಯ ಮಾಡುವಂಥದು. –"ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವದು;" (ದಾನಿಯೇಲ 12:1) ಆ ಸಂಕಟದ ಸಮಯದಲ್ಲಿ ಹಣಜಿಯ ವರ್ಗದವರು ತಾವೇ ನಿಜವಾದ "ಸಭೆ" ಎಂದು ಹೇಳಿ ತಮ್ಮನ್ನು ಭಾವಿಸಿಕೊಂಡಿರುವ ಭ್ರಾಂತುಗಳೆಲ್ಲವೂ ಕಳಚಿಹೋಗುವದು. ಅವರೆಲ್ಲರೂ ತಮಗೆ ಸೂಕ್ತವಾದ ಸ್ಥಿತಿಗತಿಗೆ ಅಂದರೆ ಭೂಲೋಕದ ಸ್ಥಿತಿಗತಿಗೆ ಇಳಿಸಲ್ಪಡುವರು ಮತ್ತು ತಾವು ಕೇವಲ ಮಣ್ಣು, ಭೂಸಂಬಂಧದವರಾಗಿದ್ದು ಯಾವ ಅರ್ಥದಲ್ಲೂ ಹೊಸದಾಗಿ ಹುಟ್ಟದವರಾಗಿ ಕರೆಯಲ್ಪಟ್ಟವರ ವರ್ಗದ ಸದಸ್ಯರೆಂಬುದನ್ನು ಅಂದರೆ "ಜೀವಸ್ವರೂಪನಾದ ದೇವರ ಆಯಲ್ಪಟ್ಟ ಸಭೆ" ಅಲ್ಲವೆಂಬುದನ್ನು ಗ್ರಹಿಸಿಕೊಳ್ಳುವರು.

## ತಮ್ಮ ತಂದೆಯ ರಾಜ್ಯವು

ಈ (ಸುವಾರ್ತಾ) ಯುಗದ ಸಮಾಪ್ತಿಯಲ್ಲಿ ಸಭೆಯ ನಿರೀಕ್ಷೆಯು ಕೈಗೂಡುವುದರ ವಿಷಯವಾಗಿ ಒಡೆಯನು ನುಡಿದಿರುವುದನ್ನು ಈಗ ಕೇಳಿರಿ. ಆತನು ಹೇಳಿರುವುದು, "ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು." "ಕಿವಿಯುಳ್ಳವನು ಕೇಳಲಿ." ಪ್ರತಿಯೊಬ್ಬನಿಗೂ ಕೇಳುವ ಕಿವಿಯಿರುವುದಿಲ್ಲ, ಆದರೆ ಇದು ಸೂಕ್ತವಾದ ಹೃದಯದ ಮನೋಭಾವವುಳ್ಳವರಿಗೆ ಅಂದರೆ ಆತ್ಮಿಕ ಸಂಗತಿಗಳನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯವಿರುವ ಎಲ್ಲರಿಗೆ ಇರುವ ಕರ್ತನ ಸಂದೇಶ. ಈ (ಸುವಾರ್ತಾ) ಯುಗದ ಸಮಾಪ್ತಿಯೊಂದಿಗೆ ಕರ್ತನ ಭಕ್ತರು, ಅವರು ಭೂಸಂಬಂಧವಾದ ಯಾವ ಸಭೆಯಲ್ಲಿಯೇ ಇರಲಿ, ಅವರು ವಿಮೋಚಕನೊಂದಿಗೆ ಸಾವಿರ ವರುಷದ ಆಳ್ವಿಕೆಯಲ್ಲಿ ಆತನ ಜೊತೆಗಾರರಾಗಿ ಪ್ರಭಾವದಲ್ಲಿ ಸೇರಿ ಮಾನವ ಕುಲವನ್ನು ಆಶೀರ್ವದಿಸಿ ಅವರಿಗೆ ಜ್ಞಾನೋದಯವನ್ನುಂಟುಮಾಡಿ ಅವರನ್ನು ಮೇಲೆತ್ತುವ ಕಾರ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರೆಂಬುದನ್ನು ಇಂಥವರೆಲ್ಲರೂ ಅರ್ಥಮಾಡಿಕೊಳ್ಳಲಿ.

*****

# ಪರಲೋಕರಾಜ್ಯದ ಚಿತ್ರಣಗಳು

**ರೀಪ್ರಿಂಟ್ಸ್ ಪುಟ 4636**

## ಮತ್ತಾಯ 13:31–33; 44–52

**"ಯಾಕೆಂದರೆ ತಿನ್ನುವುದೂ ಕುಡಿಯುವುದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಅಗಿದೆ" – ರೋಮಾ 14:17**

ನಮ್ಮ ಕರ್ತನು ಹೇಳಿರುವ ಪರಲೋಕರಾಜ್ಯದ ವಿಷಯವಾದ ಸಾಮ್ಯಗಳು ತಾನು ಲೋಕದಲ್ಲಿನ ಮಾನವ ಕುಲದವರಿಂದ ಶೀಘ್ರದಲ್ಲಿ ಆರಂಭವಾಗಲಿರುವ ಸಾವಿರ ವರುಷದ ಆಳ್ವಿಕೆಯಲ್ಲಿ ಜೊತೆಗಾರರಾಗಲು ಕರೆಯಲ್ಪಡುತ್ತಿರು ವವರಿಗೆ ಸಂಬಂಧಿಸಿದುದೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳೋಣ. ಕಳೆದ ವಾರದ ನಮ್ಮ ಅಧ್ಯಯನದಲ್ಲಿ ತೋರಿಸಿಕೊಟ್ಟಿರುವಂತೆ, ಈ

ವರ್ಗದ ವಿಷಯವಾಗಿ ಮಾತನಾಡುವಾಗ ಕೆಲವು ವೇಳೆ ಕೇವಲ ಭಕ್ತರನ್ನು ಅಂದರೆ ಗೋದಿಯ ವರ್ಗದವರನ್ನು ಮಾತ್ರವಲ್ಲದೆ ಹೆಸರಿಗಾಗಿರುವವರನ್ನು ಅಂದರೆ ಹಣಜಿಯ ಗುಂಪನ್ನು ಸೇರಿಸಿರುತ್ತವೆಂಬುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳೋಣ. ನಾವು ಒಂದು ಕಟ್ಟಡದ ಛಾಯಾಚಿತ್ರವನ್ನು ಅದರ ಉತ್ತರಭಾಗ ದಕ್ಷಿಣಭಾಗ ಪೂರ್ವಭಾಗ ಮತ್ತು ಪಶ್ಚಿಮಭಾಗಗಳಿಂದ ಒಳಗೆ ಮತ್ತು ಹೊರಗಿನಿಂದ ತೆಗೆಯುವ ಹಾಗೆ ಈ ವಿವಿಧ ಸಾಮ್ಯ ಚಿತ್ರಣಗಳು ಒಂದೇ ವಿಷಯವನ್ನು ವಿವಿಧ ದೃಷ್ಟಿಯಿಂದ ನೋಡುವುದನ್ನು ಸೂಚಿಸುತ್ತದೆ.

## ಸಾಸಿವೆಕಾಳಿನ ಒಂದು ಹೋಲಿಕೆ

ಹೇಗೆ ಸಾಸಿವೆಯ ಒಂದು ಕಾಳು ಗಾತ್ರದಲ್ಲಿ ಬಹು ಸಣ್ಣದಿದ್ದರೂ ಒಂದು ದೊಡ್ಡ ಪೊದೆಯನ್ನು ಬೆಳೆಯಮಾಡಿ ಅಲ್ಲಿ ಆಕಾಶದ ಪಕ್ಷಿಗಳು ಗೂಡುಕಟ್ಟಿಕೊಳ್ಳುವ ಹಾಗೆ ಮಾಡುತ್ತದೆಯೋ ಹಾಗೆಯೇ ಪರಲೋಕರಾಜ್ಯದ ಸುವಾರ್ತೆಯು ಒಂದು ಸಣ್ಣ ಪ್ರಮಾಣದಲ್ಲಿ ಆರಂಭವಾಗಿ ಒಂದು ಗಣನೀಯವಾದ ಗಾತ್ರಕ್ಕೆ ತಲುಪುವುದೆಂಬುದನ್ನು ಇದು ನಿದರ್ಶಿಸುವುದು. ಅದರ ಗಾತ್ರವು ಮರಗಳಲ್ಲಿ ದೊಡ್ಡದಲ್ಲದ್ದಿದ್ದರೂ ಪೊದರು ಸಸ್ಯಗಳಲ್ಲಿ ದೊಡ್ಡದಾಗಿರುವುದು. ಹೀಗೆಯೇ ಕ್ರಿಸ್ತನ ವಿಷಯವಾದ ಸಂದೇಶವು ಮೊದಮೊದಲಿಗೆ ಕೇವಲ ಬಡವರು ಮತ್ತು ಇಸ್ರಾಯೇಲ್ಯರಲ್ಲಿ ಸ್ವಲ್ಪ ಜನರಿಂದ ಅಂಗೀಕರಿಸಲ್ಪಟ್ಟಿದ್ದರೂ ಕಡೆಯಲ್ಲಿ ಎಂಥಾ ಒಂದು ವಿಸ್ತಾರವಾದ ಪ್ರಮಾಣದಲ್ಲಿ ಬೆಳೆಯಿತೆಂದರೆ ಪಕ್ಷಿಗಳು ಅದರ ಕೊಂಬೆಗಳಲ್ಲಿ ಕೂಡಲು ಇಷ್ಟಪಟ್ಟವು. ಆದರೆ ನಮ್ಮ ಕರ್ತನು ನೀಡಿದ ಹಿಂದಿನ ಸಾಮ್ಯದ ಅರ್ಥವಿವರಣೆಯ ಅನುಸಾರ ಪಕ್ಷಿಗಳು ಸೈತಾನನ ಸೇವಕರನ್ನು ಸೂಚಿಸುತ್ತವೆಂಬುದನ್ನು ನೆನಪಿನಲ್ಲಿಡೋಣ. ಹೀಗಿರಲಾಗಿ, ಕ್ರಿಸ್ತನ ಸಭೆಯು ಒಂದು ಕಾಲದಲ್ಲಿ ಲೋಕದಲ್ಲಿ ಯಾವ ಮಹತ್ವವೂ ಇಲ್ಲದ್ದಾಗಿದ್ದು ಅದರಲ್ಲಿ ಸೇರುವುದು ಒಂದು ಅಪಮಾನವೂ ಅಗೌರವವೂ ಆದುದಾಗಿದ್ದರೂ ಕಡೆಯಲ್ಲಿ ಅದು ಎಂಥಾ ಒಂದು ಗೌರವವುಳ್ಳದ್ದೂ ಮಹತ್ವವುಳ್ಳದ್ದೂ ಆಗಿತ್ತೆಂದರೆ ಸೈತಾನನ ಸೇವಕರೂ ಸಹ ಅದರ ಆಶ್ರಯದಲ್ಲಿರಲು ಸಂತೋಷಿಸುವರೆಂಬ ತೀರ್ಮಾನಕ್ಕೆ ಬರಲು ಈ ಸಾಮ್ಯದ ಬೋಧನೆಯು ನಮ್ಮನ್ನು ನಡೆಸುವುದು. ಈ ಬೆಳವಣಿಗೆಯನ್ನು ಸತ್ಯವೇದವು ಬಾಬೇಲೆಂಬುದನ್ನು ಸೂಚಿಸಿ ಒಟ್ಟಾರೆ ಇದು ತನ್ನ ಹಲವು ವಿಧವಾದ ಶಾಖೆಗಳ ಮತ್ತು ಪಂಗಡಗಳ ಸಹಿತವಾಗಿರುವ ಹೆಸರಿನ ಕ್ರೈಸ್ತಸಭೆಯು ಬಾಬೇಲಿನ ಗುಣಸ್ವಭಾವವುಳ್ಳದೆಂದು ತಿಳಿಯಪಡಿಸುವುದು. ಕರ್ತನು ನುಡಿದಿರುವುದನ್ನು ಕೇಳಿರಿ: "ಅಪವಿತ್ರವಾಗಿಯೂ ಅಸಹ್ಯವಾಗಿಯೂ ಇರುವ ಸಕಲ ವಿಧವಾದ ಪಕ್ಷಿಗಳ ಆಶ್ರಯವೂ ಆದಳು." ಇಲ್ಲಿ ತಿಳಿಸಿರುವುದೆಂದರೆ, ಸಭೆಯು ಬಾಹ್ಯವಾಗಿ ಬಹು ವಿಸ್ತಾರವಾಗಿ ಬೆಳೆಯುವುದಾದರೂ ಅದು ಆಕೆಯ ಹಿತಕ್ಕಾಗಲೀ ಮಹಿಮೆಗಾಗಲಿ ಆಗಿರದೆ ಅದಕ್ಕೆ ವ್ಯತಿರಿಕ್ತವಾದ ರೀತಿಯಲ್ಲಿರುವುದು. ಹೀಗಾಗಿ ಇದು ಹೆಸರಿಗಾಗಿರುವ ಕ್ರಿಸ್ತನ ಸಭೆ. ಹೀಗೆ ಕರ್ತನ ಧ್ಯೇಯಮನೋಭಾವಗಳನ್ನು ಇದು ತಪ್ಪಾಗಿ ಪ್ರತಿಪಾದಿಸಿದ್ದರೂ ಮತ್ತು ಇದು ಒಂದು ಅನುಚಿತವಾದ ಬೆಳವಣಿಗೆಯಾಗಿದ್ದರೂ ಅಂತ್ಯದಲ್ಲಿ ಸಭೆಯ ಆ ಮಹಾಧಿಕಾರಿಯು ಈ ಗೊಂದಲ ಅಕ್ರಮಗಳನ್ನು ಒಂದು ಕ್ರಮಕ್ಕೆ ತಂದು ತನ್ನಿಂದ "ಆಯಲ್ಪಟ್ಟವರನ್ನು" ಮಹಿಮೆಪಡಿಸಿ ಅವರನ್ನು ಸದುಪಯೋಗ ಮಾಡಿಕೊಳ್ಳುವನು.

## "ಗೋದಿ ಹಿಟ್ಟಿನಲ್ಲಿ ಕಲಸಿಟ್ಟ ಹುಳಿ"

"ಹುಳಿಹಿಟ್ಟಿನ" ಸಾಮ್ಯವು (ವಚನ 33) ಕ್ರೈಸ್ತಸಭೆಯು ಮುಂತಿಳಿಸಿದ್ದಂತೆ ತಪ್ಪಾದ ದೋಷವುಳ್ಳ ಸ್ಥಿತಿಗೆ ತಲುಪಿದ ಬಗೆಯನ್ನು ನಿದರ್ಶಿಸುತ್ತದೆ. ಹೇಗೆ ಒಬ್ಬ ಸ್ತ್ರೀಯು ರೊಟ್ಟಿಯನ್ನು ಸುಡಲು ಕಣಕದಿಂದ ಹಿಟ್ಟನ್ನು ತೆಗೆದು ಅದಕ್ಕೆ ಹುಳಿಯನ್ನು (ಅಂದರೆ ಯೀಸ್ಟ್ ಎಂಬುದನ್ನು) ಕಲಸಿಡಲು ಅದರ ಪರಿಣಾಮವಾಗಿ ಆ ಹಿಟ್ಟೆಲ್ಲಾ ಹುಳಿಯಾಗುವದೋ ಹಾಗೆಯೇ ಕ್ರಿಸ್ತನ ಸಭೆಯು; ಇಡೀ ಕ್ರೈಸ್ತಮನೆತನದ ಸಲುವಾಗಿರುವ ಆಹಾರವೇ ಹುಳಿಯಂತೆ ಕಲುಷಿತವಾಗಿ ಕೆಟ್ಟುಹೋಗುವದು. ಹೆಚ್ಚು ಕಡಿಮೆ ಎಲ್ಲಾ ಭಾಗವೂ ತಪ್ಪಾದ ಬೋಧನೆಯೆಂಬ ಹುಳಿಯಿಂದ ಕಲುಷಿತಗೊಂಡು ಇಡೀ ಆಹಾರವನ್ನೆಲ್ಲಾ ಅದು ವ್ಯಾಪಿಸಿಕೊಳ್ಳುವುದು. ಹೀಗೆ ಈ ದಿನದಲ್ಲಿ ಯೇಸುವಿನ ಹಾಗೂ ಆತನ ಅಪೋಸ್ತಲರು ಮನಸ್ಸಿಗೆ ನಾಟುವಂತೆ ಒತ್ತಿ ಹೇಳಿದ ಬೋಧನೆಗಳು ಹೆಚ್ಚು ಕಡಿಮೆ ಡಾರ್ಕ್ ಏಜಸ್ ಎಂಬ ಜ್ಞಾನಾಂಧಕಾರ ಕಾಲದಲ್ಲಿನ ತಪ್ಪುಗಳಿಂದ ತಿರುಚಲ್ಪಟ್ಟು ಅಥವಾ ವಕ್ರವಾಗಿ ಮಾಡಲಾಗಿರುವುದು.

## "ಹೊಲದಲ್ಲಿ ಅಡಗಿಸಿಟ್ಟ ದ್ರವ್ಯ"

ಕ್ರಿಸ್ತನೊಂದಿಗೆ ಆತನ ಸಾವಿರ ವರುಷದ ಆಳ್ವಿಕೆಯ ರಾಜ್ಯದಲ್ಲಿ ಬಾಧ್ಯತೆಯನ್ನು ಪಡೆಯುವ ಬಯಕೆಯು "ಹೊಲದಲ್ಲಿ ಹೂಳಿಟ್ಟ ದ್ರವ್ಯದ" ಸಾಮ್ಯದಲ್ಲಿ ಚಿತ್ರಿತವಾಗಿದೆ. ಅದನ್ನು ಕಂಡುಕೊಂಡವನು ಅದರ ಬೆಲೆಯನ್ನು ಅರ್ಥಮಾಡಿಕೊಂಡು ತಾನೇ ಇಟ್ಟುಕೊಳ್ಳಲು ಬಯಸಿದವನಾಗಿ ಅದರ ಮೇಲೆ ಎಂಥಾ ವಿಶ್ವಾಸವಿಟ್ಟನೆಂದರೆ ಅಮೂಲ್ಯವಾದ ಸಂಪತ್ತನ್ನು ಒಳಗೊಂಡಿರುವುದಾಗಿ ನಂಬಿದ್ದ ಆ ಹೊಲವನ್ನು ಕೊಂಡುಕೊಳ್ಳಲು ತನ್ನ ಇಡೀ ಸೊತ್ತನ್ನೆಲ್ಲಾ ಮಾರಿಬಿಟ್ಟನು. ಸುವಾರ್ತಾ ಸಂದೇಶವನ್ನು ಯಾರು ಮೆಚ್ಚಿಕೊಳ್ಳುವರೋ ಅವರು ಮಾತ್ರ ಪ್ರಭಾವಭರಿತವಾದ ಅದರ ವಾಗ್ದಾನದ ಫಲಗಳನ್ನು ಪಡೆಯುವರು. ನಾವು ಈಗಿನ ಜೀವಿತ ಮತ್ತು ಅದರ ಆನಂದ ಉನ್ನತಿಗಳನ್ನು ನಿರೀಕ್ಷೆ ಆಕಾಂಕ್ಷೆಗಳನ್ನು ಆಶಿಸುವವರಾದರೆ ಅದಕ್ಕಾಗಿಯೇ ಪರಿಶ್ರಮಿಸುತ್ತೇವೆ, ಆದರೆ ನಾವು ಬುದ್ಧಿಪೂರ್ವಕವಾಗಿ (ಸುವಾರ್ತೆಯನ್ನು) ಕೇಳಿ ಮತ್ತು ಈ ಕಾಲದಲ್ಲಿ ಸುವಾರ್ತೆಯು ಕ್ರಿಸ್ತನೊಡನೆ ಆತನ ಸಾವಿರ ವರುಷದ ಆಳ್ವಿಕೆಯ ರಾಜ್ಯದಲ್ಲಿ ಪಾಲನ್ನು ಹೊಂದಲು ನೀಡಿರುವ ವಾಗ್ದಾನವನ್ನು ವಿಶ್ವಾಸಪೂರಿತರಾಗಿ ನಂಬಿದವರಾದಲ್ಲಿ ಆಗ ಬಿರುದನ್ನು ಪಡೆಯುವ ತ್ಯಾಗಮಯವಾದ ನಮ್ಮ ಉತ್ಸಾಹವು ಆ ವಿಶ್ವಾಸ ಮತ್ತು ಸಂಗತಿಗಳನ್ನು ಮನವರಿಕೆ ಮಾಡಿಕೊಂಡಿರುವದಕ್ಕೆ ಅನುಗುಣವಾಗಿ ಇರುವುದು. ಪರಲೋಕರಾಜ್ಯದ ಸುವಾರ್ತೆಯನ್ನು ಯಾರು ನಂಬುವರೋ ಅವರು ತಮ್ಮ ನಂಬಿಕೆಯನ್ನು ಒಂದು ಪ್ರೇರಣೆಯನ್ನಾಗಿ ಅಂದರೆ ಬಿರುದನ್ನು ಪಡೆಯಲು ನಿಜವಾಗಿಯೂ ಅಗತ್ಯವಾಗಿರುವ ಒಂದು ಪ್ರೇರಣೆಯನ್ನಾಗಿ

ಕಂಡುಕೊಳ್ಳುವರು; ಏಕೆಂದರೆ ಅದು ತಮ್ಮ ಲೌಕೀಕ ಆಶೀರ್ವಾದಗಳನ್ನೆಲ್ಲಾ ಕಳಕೊಳ್ಳುವಂತೆಮಾಡುವುದು. ಅಲ್ಲದೆ ಅತನಿಗೆ ತಾನು ಬಿರುದನ್ನು ಪಡಕೊಳ್ಳುವೆನೆಂಬ ನಂಬಿಕೆಯಿಲ್ಲ ದಿದ್ದಲ್ಲಿ ಆತನು ಖಂಡಿತವಾಗಿ ತನಗಿರುವುದೆಲ್ಲವನ್ನು ತ್ಯಜಿಸಲು ಮನಸ್ಸಿಲ್ಲದವನಾಗುವನು. ಆ ಹೊಲವು ದೇವರಿಗೆ ಸೇರಿರುವುದು. ಆತನೇ ಅದರಲ್ಲಿ ಆ ಸಂಪತ್ತನ್ನು ಅಡಗಿಸಿಟ್ಟಿರುವನು. ಯಾರು ಅದರ ಬೆಲೆಯನ್ನು ತೆರಲು ಇಚ್ಛಿಸುವರೋ ಅವರಿಗೆ ಅದನ್ನು ಮಾರುವುದಾಗಿ ಆತನು ಪ್ರಸ್ತಾಪಿಸಿರುವನು. ಕರ್ತನು ಮತ್ತು ತನ್ನೊಡನೆ ಪರಲೋಕದ ವೈಭವದಲ್ಲಿ ಪಾಲುಗಾರರಾಗಲು ಅಂದರೆ ಸಾವಿರ ವರುಷದ ಆಳ್ವಿಕೆಯ ಕಾರ್ಯದಲ್ಲಿ ಭಾಗಿಗಳಾಗ ಸಲುವಾಗಿ ತಮ್ಮ ಲೌಕಿಕ ಆಸಕ್ತಿಗಳನ್ನು ತ್ಯಜಿಸಿ ತನ್ನೊಡನೆ ಸೇರಲು ನೀಡಿರುವ ಪ್ರಸ್ತಾವನೆಯನ್ನು ಅಂಗೀಕರಿಸುವರು ಅದನ್ನು ಕೊಂಡು–ಕೊಳ್ಳುವವರು. ಅವರಿಗೆ ಮನುಕುಲವನ್ನು ಆಶೀರ್ವದಿಸುವ ವಿಷಯದಲ್ಲಿ ಅಡಗಿರುವ ಶ್ರೇಷ್ಠ ದ್ರವ್ಯಗಳನ್ನು ಹೊರತೆಗೆಯಲು ಅವಕಾಶ ನೀಡುವನು. ಶ್ರೇಷ್ಠ ದ್ರವ್ಯವನ್ನು ಮರೆಯಾಗಿಡುವುದು ಅವಶ್ಯವಾಗಿರುವುದು; ನಮ್ಮ ಕರ್ತನು ಹೇಳಿರುವಂತೆ "ನಿಮ್ಮ ಮುತ್ತುಗಳನ್ನು ಹಂದಿಗಳ ಮುಂದೆ ಚೆಲ್ಲಬೇಡಿರಿ;" ಅವರು ನಿಮ್ಮನ್ನು ಅರ್ಥಮಾಡಿಕೊಳ್ಳುವುದಿಲ್ಲ, ನೀವು ಬುದ್ಧಿಯಿಲ್ಲದ ವರೆಂದು ಅವರು ನೆನಸುವರು ಅಲ್ಲದೆ ಅವರು ತೋರುವ ನಿರಾಶಾಭಾವವು ನಿಮಗೆ ಹಾನಿಯುಂಟು ಮಾಡುವದು. "ನಿನಗಿರುವ ನಂಬಿಕೆಯು ದೇವರಿಗೆ ಮಾತ್ರ ಗೋಚರವಾಗಿ ನಿನ್ನ ಮಟ್ಟಿಗೇ ಇರಲಿ." ಲೌಕೀಕ ಸಂಗತಿಗಳನ್ನು ತ್ಯಾಗವಾಗಿ ಆತನಿಗೇ ಅರ್ಪಿಸು ಮತ್ತು ಅಂತರಂಗದಲ್ಲಿ ನಡೆಯುವುದನ್ನು ನೋಡುವ ಆತನು ನಿನಗೆ ಬಹಿರಂಗವಾಗಿ ಪ್ರತಿಫಲ ಕೊಡುವನು.

## "ಬಹು ಬೆಲೆಯುಳ್ಳ ಮುತ್ತು"

ಮುತ್ತುಗಳು ಈಗಿನ ಕಾಲಕ್ಕಿಂತಲೂ ಪ್ರಾಚೀನ ಕಾಲದಲ್ಲಿ ಅತಿ ಹೆಚ್ಚು ಜನಪ್ರಿಯವಾಗಿದ್ದವು. ಮುತ್ತುಗಳನ್ನು ಕೊಂಡವರು ಆ ಹರಳುಗಳನ್ನು ವ್ಯಾಪಾರ ಮಾಡಲು ಬಹು ಬೆಲೆ ಕಟ್ಟಲಾಗುವ ಮಾರುಕಟ್ಟೆಗೆ ಕೊಂಡೊಯ್ಯುತ್ತಿದ್ದರು. ಈ ಸಾಮ್ಯವು ತಾನು ನೋಡೇಯಿಲ್ಲದ ಬಹು ಅತ್ಯಮೂಲ್ಯವಾದ ಮುತ್ತನ್ನು ಕಂಡಿದ್ದ ಮುತ್ತಿನ ವ್ಯಾಪಾರಿಯನ್ನು ಪ್ರತಿನಿಧಿಸುವುದು. ಬೆಲೆಕಟ್ಟಲಾಗದ ಆ ಮುತ್ತು ಎಷ್ಟು ಅಮೂಲ್ಯವೆಂದು ಎಣಿಸಿದ್ದನೆಂದರೆ ಅವನು ಆ ಮುತ್ತಿನ ಒಡೆಯನಾಗುವದಕ್ಕಾಗಿ ತನ್ನಲ್ಲಿರುವ ಇತರ ಮುತ್ತುಗಳೆಲ್ಲವನ್ನೂ ಮತ್ತು ತನ್ನ ಆಸ್ತಿಯೆಲ್ಲವನ್ನೂ ಮಾರಿಬಿಡಲೂ ಹರ್ಷಗೊಂಡಿದ್ದನು.

ಕ್ರಿಸ್ತನೊಡನೆ ಆತನ ರಾಜ್ಯದಲ್ಲಿ ಪಾಲನ್ನು ಹೊಂದಲು ಸುವಾರ್ತೆಯ ಮೂಲಕ ನೀಡಲಾದ ಪ್ರಸ್ತಾವನೆಯು ಭೂಲೋಕ ಸಂಬಂಧವಾದ ಇತರ ಎಲ್ಲಾ ಪ್ರಸ್ತಾವನೆಗಳಿಗಿಂತಲೂ ಅತಿ ಉತ್ಕೃಷ್ಟವಾದುದೆಂದು ಈ ಸಾಮ್ಯವು ಪ್ರತಿಪಾದಿಸುವುದು. ಲೋಕವು ನೀಡುವ ಗೌರವ ಹೆಸರು ಕೀರ್ತಿ ಆಸ್ತಿ ಅಂತಸ್ತುಗಳು ನಿಜವಾಗಿಯೂ ಅಪೇಕ್ಷಿಸತಕ್ಕವುಗಳೇ; ಸತ್ಯವೇದವು ಹೇಳಿರುವಂತೆ; "ಬಹುಧನಕ್ಕಿಂತಲೂ ಒಳ್ಳೆಯ ಹೆಸರು ಉತ್ತಮ;" ಆದರೆ ನಮ್ಮ ಕಣ್ಣುಗಳು "ಬಹು ಅಮೂಲ್ಯವಾದ ಮುತ್ತನ್ನು" ಕಂಡಾಗ ಅಂದರೆ ನಮ್ಮ ಕರ್ತನೊಡನೆ ಆತನ ಪರಲೋಕದ ಪ್ರಭಾವವೈಭವಗಳಲ್ಲಿ ಸಹಬಾಧ್ಯರಾಗುವ ಹಾಗೂ ಆತನು ಭೂಲೋಕದ ಸಮಸ್ತ ಕುಲಗಳನ್ನು ಆಶೀರ್ವದಿಸುವ ಕಾರ್ಯದಲ್ಲಿ ಅತನೊಡನೆ ಜೊತೆಗೂಡುವ ಪ್ರಸ್ತಾವನೆಯನ್ನು ಅರಿತಾಗ ನಮಗೆ ಇದು ಒಂದು ಬೆಲೆಕಟ್ಟಲಾಗದಂತ ಮತ್ತು ಈ ಲೋಕದ ಘನತೆ ಗೌರವ ಮತ್ತು ಉಲ್ಲಾಸಗಳೆಲ್ಲವುಗಳಿಗಿಂತಲೂ ಇದು ಬಹು ಉತ್ಕೃಷ್ಟವಾದ ಸಂಗತಿಯೆಂಬುದು ಗ್ರಹಿಕೆಗೆ ಬರುವುವದು. ಈ ಮುತ್ತನ್ನು ಕೊಂಡುಕೊಳ್ಳಲು ಅರ್ಹರಾದವರು ತಮಗಿರುವ ಭೂಲೋಕದ ಸಂಗತಿಗಳೆಲ್ಲವನ್ನೂ ಮತ್ತು ತಮ್ಮ ಒಳ್ಳೆಯ ಹೆಸರನ್ನೂ ಇದಕ್ಕಾಗಿ ವಿನಿಮಯಮಾಡಿಕೊಳ್ಳಲು ಸಂತೋಷವುಳ್ಳವರಾಗಿರುವರು ಮತ್ತು ನಮ್ಮ ಕರ್ತನು ಮುನ್ನೆಚ್ಚರಿಕೆಯಾಗಿ ಹೇಳಿರುವಂತೆ "ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿ ಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ." (ಮತ್ತಾಯ 5:12–13) ಯಾವನು ಆ ರಾಜ್ಯವನ್ನು ಹೊಂದಲು ಇಂಥಾ ಬೆಲೆಯನ್ನು ತೆರಲಾರನೋ ಅವನು ಆ ರಾಜ್ಯಕ್ಕೆ ಯೋಗ್ಯನಲ್ಲ. ಅಪೋಲಸ್ತನು ಹೇಳಿರುವುದು: "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂಬದಾಗಿ..." (ಅ. ಕೃ. 14:22) ಕೇವಲ ಯಾರು ನೀತಿಯ ನಿಮಿತ್ತವಾದ ಇಂಥಾ ಬಾಧೆಕಷ್ಟಗಳನ್ನು ಅಂದರೆ ಪರಲೋಕ (ಬಾಧ್ಯತೆಯ) ಸಂಬಂಧವಾದ ಕರೆಗೆ ವಿಧೇಯರಾಗಿ ಸತ್ಯಕ್ಕೋಸ್ಕರವಾಗಿ ಬಾಧೆಕಷ್ಟಗಳನ್ನು ಮನಃಪೂರ್ವಕವಾಗಿ ಸಹಿಸಿಕೊಳ್ಳುವರೋ ಅವರೇ ಜಯಶಾಲಿ ಗಳು. ಮತ್ತು ಕೇವಲ "ಜಯಶಾಲಿಗಳಿಗೆ" ನಮ್ಮ ಕರ್ತನು "ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನ ಗಳನ್ನು ನೀಡಿರುವುದು. "....ಜಯಹೊಂದುವವನನ್ನು ನನ್ನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವಂತೆ ಮಾಡುವೆನು.' – ಪ್ರಕ. 3:21

## ಪ್ರತಿಯೊಂದು ಬಗೆಯನ್ನೂ ಕೂಡಿಸಿ ಕೊಂಡ ಬಲೆ

ಪರಲೋಕದ ವಿಷಯವಾದ ಇನ್ನೊಂದು ಸಾಮ್ಯವು ಸುವಾರ್ತೆಯ ಸಂದೇಶವನ್ನು ಒಂದು "ಬಲೆಯನ್ನಾಗಿ" ಪ್ರತಿನಿಧಿಸಿರುವುದು. ಕೇವಲ ಒಂದೇ ಒಂದು ಬಗೆಯ ಮೀನನ್ನು ಬಯಸಲಾಯಿತು. ಆದರೆ ಬಲೆಯು ಪ್ರತಿಯೊಂದು ಬಗೆಯನ್ನು ಕೂಡಿಸಿಕೊಂಡಿತ್ತು. ಎಲ್ಲಾ ಬಗೆಯವರು ಕ್ರಿಸ್ತನೊಂದಿಗೆ ಸಹಬಾಧ್ಯರಾಗಿ ಆ ರಾಜ್ಯದಲ್ಲಿ ಬಾಧ್ಯತೆ ಹೊಂದುವುದಿಲ್ಲ; ಆದುದರಿಂದ ಸಾಮ್ಯದಲ್ಲಿ ಪ್ರತಿಪಾದಿಸಲ್ಪಟ್ಟಂತೆ ಯುಗದ ಅಂತ್ಯವು ಒಂದು ಶೋಧಿಸಿ ಪರಿಶೀಲಿಸುವ ಅಂದರೆ ಬೇರ್ಪಡಿಸುವ ಕಾಲವಾಗಿರುವುದು. ಅಪೇಕ್ಷಿತ ಮೀನುಗಳನ್ನು ಪಾತ್ರೆಯಲ್ಲಿ ಕೂಡಿಸಿಕೊಳ್ಳಲಾಗುವದು ಮತ್ತು ಉಳಿದವುಗಳನ್ನು ಆ ರಾಜ್ಯಕ್ಕೆ ಯೋಗ್ಯಲ್ಲವೆಂದು ಮತ್ತೆ ಸಮುದ್ರಕ್ಕೆ

ಎಸೆಯಲಾಗುವದು; ಆದರೆ ಅವು ಯಾವುದೇ ಅನಿವಾರ್ಯ ಉದ್ದೇಶಗಳಿಗೆ ಯೋಗ್ಯವಲ್ಲವೆಂದಲ್ಲ. ಈಗ ಆ ರಾಜ್ಯಕ್ಕೆ ಅರ್ಹರಲ್ಲದವರಾಗಿ ಕಂಡುಬಂದವರ ಪರವಾಗಿ ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಕಾರ್ಯನಿರ್ವಹಿಸಲ್ಪಟ್ಟು ಅವರನ್ನು ಆಶೀರ್ವದಿಸಿ ಸಾಧ್ಯವಿದ್ದಲ್ಲಿ ಅವರನ್ನು ಪ್ರಯೋಜನ ಕಾರಿಗಳನ್ನಾಗಿ ಮಾಡಿ ನಿತ್ಯಜೀವಕ್ಕೆ ಯೋಗ್ಯರನ್ನಾಗಿ ಮಾಡಲಾಗುವದು.

ಇಲ್ಲಿ ಗೋದಿ ಮತ್ತು ಹಣಜಿಯ ಸಾಮ್ಯದಲ್ಲಿದ್ದಂತೆ ಬೆಂಕಿಕೊಂಡ ಮತ್ತು ಅಲ್ಲಿನ ಕಟಕಟನೆ ಹಲ್ಲು ಕಡಿಯೋಣ ವಾಗುವುದು ಮಹಾ ಸಂಕಟದ ಕಾಲವನ್ನು ಸೂಚಿಸುತ್ತದೆ. ಈ ಮಹಾ ಸಂಕಟಕಾಲದೊಂದಿಗೆ ಮುಕ್ತಾಯವಾಗುವ ಸುವಾರ್ತಾಯುಗವು ಸಾವಿರ ವರುಷದ ಆಳ್ವಿಕೆಯ ಕಾಲಕ್ಕೆ ಎಡೆಮಾಡಿಕೊಡುವುದು. ಈ ರಾಜ್ಯವು ಭೂಲೋಕದಲ್ಲಿ ಸ್ಥಾಪನೆಯಾಗುವುದಕ್ಕೆ ಸಭೆಯು ತೀರಾ ಎಡೆಬಿಡದೆ ಹತ್ತೊಂಬತ್ತು ಶತಮಾನಗಳ ಕಾಲ ಪ್ರಾರ್ಥನೆ ಮಾಡುತ್ತಿರುವುದು, "ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." ಎಂಥಾ ರಾಜ್ಯವಾಗಿರುವದು ಅದು! ಅದು "ಚಿಕ್ಕ ಹಿಂಡಿಗೆ" ವಹಿಸಲ್ಪಡುವ ರಾಜ್ಯ. "ಚಿಕ್ಕ ಹಿಂಡೇ, ಹೆದರಬೇಡ; ಅ ರಾಜ್ಯವನ್ನು ನಿಮಗೆ ದಯಪಾಲಿಸುವದಕ್ಕೆ ತಂದೆಯು ಸಂತೋಷವುಳ್ಳವನಾಗಿದ್ದಾನೆ." – ಅಲ್ಲದೆ ಪರಲೋಕ ರಾಜ್ಯದ ಆಡಳಿತವನ್ನು ಮಾನವರಲ್ಲಿ ಸ್ಥಾಪಿಸಲು ಪೂರ್ಣಾಧಿಕಾರ ನೀಡಲಾಗುವದು.

ಪರಲೋಕರಾಜ್ಯದ ವಿಷಯದಲ್ಲಿ ಶಿಕ್ಷಣ ಹೊಂದಿದವರು ತಮ್ಮ ಜೀವನದ ಸಂಗತಿಗಳನ್ನು ಕ್ರಮಪಡಿಸಿಕೊಳ್ಳಬೇಕೆಂಬ ನಮ್ಮ ಕರ್ತನ ಬುದ್ಧಿವಾದದ ಮೂಲಕವಾಗಿ ನಮ್ಮ ಈ ಅಧ್ಯಯನವು ಮುಕ್ತಾಯವಾಗುತ್ತದೆ.

ದೂರ ಸನಿಹದ ಜನಾಂಗಗಳೇ, ಹಾಕಿರಿ ನಿಮ್ಮ ರೈಲು ಹಳಿಗಳನು,
ಸಜ್ಜುಗೊಳಿಸಿ ನಿಮ್ಮ ಉಗಿಬಂಡಿಯು ಗಾಡಿಗಳನ್ನು
ಯಶಸ್ಸಿನಿಂದ ಎಳೆಯಲು,
ಒಂದಾಗಿಸಿ ಪಟ್ಟಣ ಪಟ್ಟಣಗಳನು ಕಬ್ಬಿಣದ ಹಳಿಗಳಿಂದ,
ಮೆಳ್ಳೆಗಣ್ಣಿನ ಸರಾಫರೇ, ಸಮಾಧಾನ; ತಿಳುವಳಿಕೆ, ದೈವಜ್ಯೋತಿ
ಕಳುಹಿಸುವದು ತಮ್ಮ ದೂತರನು ಎಲ್ಲಾ ಹಳಿಗಳಲಿ.
ಪ್ರೀತಿಭಾವಗಳಿಂದ ಜೊತೆಯಾದ ಮಾನವರು
ದೀರ್ಘಕಾಲ ಅಚ್ಚರಿಪಡುವರು
ಇತ್ತು ಹಗೆತನಕೆ ತಪ್ಪಿಗೆಳೆವ ಶಕ್ತಿ ತಮ್ಮ ತಂದೆಗಳನು.
ಇಲ್ಲವೇ ಹುಸಿ ವೈಭವಗಳು ತಮ್ಮ ಹೃದಯವ ನಡೆಸಿತು ದೂರ
ಮತ್ತು ಸದ್ಗುಣ ಆದರ್ಶಗಳನ್ನು ಮಾಡಿತು ಹತ.
ಹೇಗೆ ನಮ್ಮ ಇಂದಿನ ಭವ್ಯ ಅದ್ಭುತಗಳು
ಮಾಡುತಿವೆ ನಮ್ಮ ಕ್ರಿಸ್ತನ ರಾಜ ಮಾರ್ಗವ ಸಿದ್ಧ!
ಎಂಥಾ ಉಲ್ಲಾಸಕರ ನಿರೀಕ್ಷೆಯಲಿ ಆತ್ಮಗಳು ನಮ್ಮ,
ಗಮನಿಸುತ್ತವೆ ಉನ್ನತಿಯೆಂಬ ಚಕ್ರಗಳು ಉರುಳುವುದನು
ಆರಂಭವಾಗಿಲ್ಲ ಯಾವುದೂ ಈಗಲೇ, ಇಲ್ಲವೇ ಮುಗಿದಿಲ್ಲ
ಈಗ ಯಾವದು.
ಆದರಿಲ್ಲಿ ಉದಯಿಸುತ್ತಲಿರುವವು
ಸೂರ್ಯನ ಮುಂದೊರಡುವವುಗಳು

*****

# ಬಹುಮಾನವಾಗಿ ಲಭಿಸುವ ಆ ರಾಜ್ಯ

**ರೀಪ್ರಿಂಟ್ಸ್ ಪುಟ 5047**

## ಮತ್ತಾಯ 13:44–53

**"ಹೀಗಿರುವದರಿಂದ, ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು. – ಮತ್ತಾಯ 6:33**

ಈ ದಿನ ನಾವು ಆ ದಿವ್ಯ ಬೋಧಕನು ಹೇಳಿದ ಆ ರಾಜ್ಯದ ವಿಷಯವಾಗಿ ಅಮೂಲ್ಯವಾಗಿರುವ ಹೆಚ್ಚಿನ ಪಾಠಗಳನ್ನು ಹೊಂದುವೆವು. "ಹೊಲದಲ್ಲಿ ಹೂಳಿಟ್ಟ ದ್ರವ್ಯ" ಮತ್ತು "ಬಹು ಅಮೂಲ್ಯವಾದ ಮುತ್ತು" ಈ ಸಾಮ್ಯಗಳೆರಡೂ ಕಡೆಯದಾಗಿ ಮಾನವ ಲೋಕವನ್ನು ಆಶೀರ್ವದಿಸಲು ಮಾನವರ ಮಧ್ಯದಲ್ಲಿ ಸ್ಥಾಪನೆಯಾಗಲಿರುವ ಆ ಮಹಿಮೆಯುಳ್ಳ ರಾಜ್ಯದ ಅತಿ ಅಮೂಲ್ಯತೆಯ ವಿಷಯವಾದ ಚಿತ್ರಣವನ್ನು ನಮಗೆ ನೀಡುವಂಥವುಗಳಾಗಿವೆ. ಆ ರಾಜ್ಯದಲ್ಲಿ ಒಂದು ಪಾಲನ್ನು ಅಂದರೆ ಒಂದು ಸ್ಥಾನವನ್ನು ಪಡೆದುಕೊಳ್ಳಲು ಎಂಥಾ ಬೆಲೆ ತೆರಬೇಕೆಂಬುದರ (ಅಂದರೆ ಕಷ್ಟನಷ್ಟಗಳನ್ನು ಪಡಬೇಕೆಂಬುದರ) ವಿಷಯವಾಗಿಯೂ ಸಹ ನಮಗೆ ಪಾಠವನ್ನು ಒದಗಿಸುತ್ತದೆ. ಮೂರನೇ ಸಾಮ್ಯದಲ್ಲಿನ ಪಾಠವು ಭ್ರೂಣದ ಹಂತದಲ್ಲಿರುವ (ಅಂದರೆ ಆರಂಭದ ಹಂತದಲ್ಲಿರುವ) ರಾಜ್ಯದ ವಿಷಯವಾಗಿ ನಿರೂಪಣೆ ಮಾಡುತ್ತದೆ. ಹೇಗೆಂದರೆ, "ಸಮುದ್ರಕ್ಕೆ ಬಲೆ ಬೀಸುವ" ಸಾಮ್ಯವು ಈಗಿನ ಕಾಲದಲ್ಲಿನ (ಸುವಾರ್ತಾ ಯುಗದ) ಸ್ಥಿತಿಗತಿಗಳನ್ನು ಚಿತ್ರಿಸುತ್ತದೆ. ಅಂದರೆ ಈ ಕಾಲದಲ್ಲಿ ಆ ರಾಜ್ಯಕ್ಕೆ ಬಾಧ್ಯರಾಗುವ ವರ್ಗದವರೂ ಮದಲಗಿತ್ತಿಯೂ ಆಗಿರುವ ಆಯಲ್ಪಟ್ಟವರನ್ನು ಕಂಡುಕೊಂಡು ಅವರನ್ನು ಕರ್ತನ ಮುನ್ನೇರ್ಪಾಟಿನ ಪ್ರಕಾರ ಒಟ್ಟುಗೂಡಿಸುತ್ತಿರುವುದನ್ನು ವರ್ಣಿಸುತ್ತದೆ.

## “ಹೊಲದಲ್ಲಿ ಹೂಳಿಟ್ಟ ದ್ರವ್ಯ”

ಯೇಸುವು ಅರ್ಥವನ್ನು ವಿವರಿಸದೇ ಇರುವ ಸಾಮ್ಯಗಳಲ್ಲಿ ಇದು ಒಂದೇನಲ್ಲ. ಅದುದರಿಂದ ಸತ್ಯವೇದದ ವಿಷಯಗಳ ಮೇಲೆ ಈಗಿನ ಕಾಲದಲ್ಲಿ ಚೆಲ್ಲಲಾದ ಬೆಳಕಿನಡಿಯಲ್ಲಿ ಹಾಗೂ ಪವಿತ್ರಾತ್ಮನ ಮಾರ್ಗದರ್ಶನದ ಮೂಲಕ ಇದರ ಅರ್ಥವನ್ನು ಗ್ರಹಿಸಿಕೊಳ್ಳುವುದನ್ನು ಆತನ ಜನರ ವಿವೇಚನೆಗೆ ಬಿಟ್ಟಿರುವುದು. ಒಂದಕ್ಕಿಂತಲೂ ಹೆಚ್ಚು ಬಗೆಯ ಅರ್ಥ–ವಿವರಣೆಗಳು ಇದರಲ್ಲಿ ಒಳಗೊಂಡಿರಬಹುದೆಂಬುದು ನಿಜವೇ. ಉದಾರಣೆಯಾಗಿ ಹೇಳುವುದಾದರೆ, ಈ ಸಾಮ್ಯವನ್ನು ನಮ್ಮ ಕರ್ತನಿಗೆ ಅನ್ವಯಿಸಿ ಆತನು ತನ್ನದೆಲ್ಲವನ್ನೂ ಮಾರಿ ಅದರಿಂದ ಲೋಕವನ್ನು ಪೂರ್ಣವಾಗಿ ಕೊಂಡುಕೊಂಡನೆಂದು ಮತ್ತು ಆತನು ಲೋಕವನ್ನು ಹೀಗೆ ಕೊಂಡುಕೊಂಡುದರ ಕಾರಣ ಅದರಲ್ಲಿ ಅಡಗಿದ್ದ ಆ “ದ್ರವ್ಯ” ಎಂದೂ ಹೇಳಬಹುದು. ಮತ್ತು ಆ ದ್ರವ್ಯವು ಅನೇಕ ಬಗೆಬಗೆಯ ಬೆಲೆಯುಳ್ಳ ಇತರ ಅಮೂಲ್ಯ ವಸ್ತುಗಳನ್ನೂ ಒಳಗೊಂಡಿರಬಹುದು; ದೃಷ್ಟಾಂತವಾಗಿ ಹೇಳುವುದಾದರೆ, ಮದಲಗಿತ್ತಿಯ ವರ್ಗವಾದ ಸಭೆಯು ಒಂದು ವಿಶೇಷವಾದ “ದ್ರವ್ಯ” ಹಾಗೂ ಕ್ರಿಸ್ತನ ಸಾವಿರ ವರುಷದ ರಾಜ್ಯದಲ್ಲಿ ಕಡೆಯದಾಗಿ ಆಶೀರ್ವಾದ ಹೊಂದಲಿರುವಂಥ ಇತರರೂ ಇದರಲ್ಲಿ ಒಳಗೊಂಡಿರುವರು.

ಆದರೆ ನಾವು ಆದ್ಯತೆ ನೀಡುವ ಅಂಶ ಯಾವುದೆಂದರೆ, ಆ ದಿವ್ಯ ಬೋಧಕನು ತನ್ನ ವಿಷಯವಾಗಿ ಇದನ್ನು ತಾನು ಯಾರಿಗೆ ಉಪದೇಶ ಮಾಡಿರುವನೋ ಅವರನ್ನು ಇಲ್ಲಿ ಉಲ್ಲೇಖಿಸಿರು–ವನೆಂಬುದು. ತಾನು ಮಾಡಿಕೊಂಡ ಯಜ್ಞದ ಮೂಲಕವಾದ ಒಡಂಬಡಿಕೆಯ ಫಲವಾಗಿ ಆ ರಾಜ್ಯವು ಆತನಿಗೆ ಈಗಾಗಲೇ ವಾಗ್ದಾನ ಮಾಡಲ್ಪಟ್ಟಿರುವುದು ಮತ್ತು ಪ್ರತಿಯಾಗಿ ಆತನು ಕೇಳುವ ಕಿವಿ, ಮನನಮಾಡಿಕೊಳ್ಳುವ ಹೃದಯವುಳ್ಳವರನ್ನು ತನಗೆ ಮದಲಗಿತ್ತಿಯಾಗುವ ಗುಂಪಿಗೆ ಸೇರಲು ಅಂದರೆ ಆ ರಾಜ್ಯಕ್ಕೆ ಬಾಧ್ಯಸ್ಥರಾಗಲಿರುವವರ ವರ್ಗದವರಾಗಲು ತಂದೆಯ ಹೆಸರಿನಲ್ಲಿ ಆಮಂತ್ರಿಸುತ್ತಿದ್ದನು.

ಇವರು ಆ ರಾಜ್ಯವನ್ನು ಸಾಮ್ಯದ ಈ ದೃಷ್ಟಾಂತದ ಮೂಲಕ ದೃಷ್ಟಿಸಬೇಕೆಂದು ಅತನು ಶಿಫಾರಸ್ಸು ಮಾಡಿರುವನು. ಅವರು ತಾವು ಪ್ರಯಾಣಿಸುತ್ತಿರುವಾಗ ಬೆಲೆ ನಿಗಧಿಯಾದ ಒಂದು ಹೊಲವು ಮಾರಾಟಕ್ಕಿರುವುದನ್ನು ಕಂಡರೆಂದೂ ಹಾಗು ಆ ಹೊಲವನ್ನು ಪರೀಕ್ಷಿಸಿ ನೋಡಿದಾಗ ಅದಕ್ಕೆ ಬಹು ಬೆಲೆಯಿರುವುದನ್ನು ಕಂಡುಬಂದಿತೆಂದೂ ಭಾವಿಸೋಣ. ಆ ಶ್ರೇಷ್ಠ ನಿಧಿಯು ತಮ್ಮ ಉದ್ದೇಶಕ್ಕೆ ವಿಶೇಷವಾಗಿ ಹೊಂದುವ ಬಹು ಫಲವತ್ತಾದ ಮಣ್ಣಾಗಿರಬಹುದು, ಇಲ್ಲವೇ ಅದರಲ್ಲಿ ಬಹು ಅಮೂಲ್ಯವಾದ ಲೋಹದ ಪದರುಗಳು ಒಳಗೊಂಡಿರಬಹುದು ಅಥವಾ ಅದರಲ್ಲಿ ಬಹು ಶತಮಾನಗಳ ಹಿಂದೆ ಹಣವನ್ನು ಹೂಳಿಟ್ಟಿದ್ದು ಅದು ಮರೆತುಹೋದದ್ದಾಗಿರಬಹುದು. ಅಲ್ಲದೆ ಆ ಹಣವು ಹೊಲದ ಒಡೆಯನಿಗೆ ಸಂಬಂಧಿಸದೇ ಇದ್ದು ಮತ್ತು ಅದರ ಬೆಲೆಯು ಅದನ್ನು ಕಂಡುಕೊಂಡವನಿಗಲ್ಲದೆ ಮತ್ತಾರಿಗೂ ತಿಳಿಯದೇ ಇರಲೂಬಹುದು. ಇಂಥಾ ಒಂದು ಸಂದರ್ಭದಲ್ಲಿ ಸಾಧಾರಣವಾದ ಬುದ್ಧಿಶಕ್ತಿಯುಳ್ಳ ಯಾವನೇ ಆಗಲಿ ತನಗಿರುವ ಆಸ್ತಿಬಂಡವಾಳವನ್ನೆಲ್ಲಾ ತೊಡಗಿಸಿಕೊಂಡು ಅದರ ಒಡೆತನವನ್ನು ಪಡೆದುಕೊಳ್ಳಲು ಮನಸ್ಸು ಮಾಡುವನೆಂಬುದನ್ನು ಈ ಸಾಮ್ಯವು ಸೂಚಿಸುವುದು.

ಹೀಗೆ ಒಡೆಯನು ಆಗ ತನ್ನನ್ನು ಕೇಳಿದವರೆಲ್ಲರಿಗೂ ಮತ್ತು ಈಗ ತನ್ನ ವಾಕ್ಯವನ್ನು ಅಂಗೀಕರಿಸಿದವರೆಲ್ಲರಿಗೂ ತಾನು ತಿಳಿಸುವುದೇನೆಂದರೆ, ಈ ಬಹು ಅಮೂಲ್ಯವಾದ ನಿಧಿಯ ಅಂದರೆ ಬೆಲೆಕಟ್ಟಲಾಗದ ನಿಧಿಯ ಬಗ್ಗೆ ಪ್ರಕಟಿಸಬೇಕಾದ ಸಂಗತಿಗಳು ತನ್ನಲ್ಲಿರುವುದೆಂದೂ ಮತ್ತು ಅದನ್ನು ಪಡಕೊಳ್ಳಲು ಬಹು ಪ್ರಯಾಸಪಟ್ಟು ತನಗಿರುವ ಪ್ರತಿಯೊಂದು ಅಮೂಲ್ಯ ವಸ್ತುಗಳನ್ನು ಬಂಡವಾಳವಾಗಿ ವಿನಿಯೋಗಿಸಿದರೆ ಮಾತ್ರ ಸಾಧ್ಯವೆಂಬುದನ್ನು ತಿಳಿಸಿರುವನು. ಬಹು ಅಮೂಲ್ಯವಾದ ಆ ನಿಧಿಯು ಯಾವುದೆಂದರೆ ಕ್ರಿಸ್ತನ ರಾಜ್ಯದಲ್ಲಿ ಪಾಲು ಹೊಂದುವುದು ಅಂದರೆ ಆತನ ಶಿಷ್ಯರಾಗುವುದಕ್ಕೆ ಇರುವ ಷರತ್ತುಗಳನ್ನು ಅಂಗೀಕರಿಸಿಕೊಂಡು ನಾವು ದೇವರ ಮಕ್ಕಳಾಗುವುದು ಮಾತ್ರವಲ್ಲದೆ ಮಕ್ಕಳಾಗಿದ್ದಲ್ಲಿ ದೇವರಿಗೆ ಬಾಧ್ಯರೂ ನಮ್ಮ ಕರ್ತನಾಗಿರುವ ಯೇಸು ಕ್ರಿಸ್ತನೊಂದಿಗೆ ಆತನ ಪರಲೋಕದ ಬಾಧ್ಯತೆಗಳಿಗೆ ಪಾಲುಗಾರರೂ ಆಗಿರುವುದು. ಆತನಿಗಿರುವ ಬಾಧ್ಯತೆಗಳು ಅಬ್ರಹಾಮನ ಸಂತತಿಗೆ ವಾಗ್ದಾನ ಮಾಡಿರುವಂಥದ್ದೇ ಆಗಿರುವುದು. ಮತ್ತು ನಾವು ಇದರಲ್ಲಿ ಒಂದು ವಿಧಿವತ್ತಾದ ಪಾಲು ಅಥವಾ ಭಾಗವನ್ನು ಪಡೆಯುವುದು ಅಬ್ರಹಾಮನ ಸಂತತಿಯಾಗಿ ಆ ರಾಜ್ಯಕ್ಕೆ ನಿಜವಾಗಿ ಬಾಧ್ಯರಾಗುವುದರ ಮೂಲಕವಾಗಿರದೆ ಅದು ಮೆಸ್ಸೀಯನ ಮದಲಗಿತ್ತಿಯಾಗಿ ಆತನೊಡನೆ ಸಹ–ಬಾಧ್ಯರಾಗುವುದರ ಮೂಲಕವಾಗಿರುವುದು.

ಕೆಲವು ಸಣ್ಣ ಅಂದರೆ ಕ್ಷುಲ್ಲಕವಾದ ಭೂಸಂಬಂಧದ ಗೌರವಗಳನ್ನೂ ಲೌಕೀಕವಾದ ಕೀರ್ತಿ ಪ್ರಭಾವಗಳನ್ನೂ ಪಡೆಯಲು ಎಷ್ಟು ಸಮಯ ಮತ್ತು ಶಕ್ತಿಸಾಮರ್ಥ್ಯಗಳನ್ನು ಅಲ್ಲದೆ ಎಷ್ಟು ಹಣ ಮತ್ತು ಪ್ರಭಾವಗಳನ್ನು ವಿನಿಯೋಗಿಸಿರುವೆವೆಂಬುದನ್ನು ಆಲೋಚಿಸಿದಾಗ ಹಾಗು ಅವುಗಳು ಅತಿ ಹೆಚ್ಚೆಂದರೆ ಕೆಲವು ವರುಷಗಳು ಮಾತ್ರ ಉಳಿದುಕೊಳ್ಳುವಂಥವುಗಳು ಆಗಿರುವವು. ಅಲ್ಲದೆ ಅವುಗಳಲ್ಲಿ ಅತ್ಯುತ್ತಮವಾದವುಗಳೂ ಅಸಂತೃಪ್ತಿಕರವಾದವುಗಳೆಂಬುದನ್ನು ಗಣನೆಗೆ ತೆಗೆದುಕೊಂಡಾಗ ಮಾತ್ರ ದೇವರು “ಕರೆದವರೂ ಆದುಕೊಂಡವರೂ ನಂಬಿಗಸ್ತರೂ” ಆದವರಿಗೆ ಅಂದರೆ ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿಗಾಗಿ ಸಿದ್ಧಮಾಡಿರುವಂಥ ಆ ಉನ್ನತವಾದ ಪ್ರಭಾವ ಮಾನ ನಿರ್ಲಯತ್ವಗಳ ಉತ್ಕೃಷ್ಟತೆಯ ವಿಷಯವಾಗಿ ನಮಗೆ ಮನದಟ್ಟಾಗುತ್ತದೆ.

## “ಬಹು ಅಮೂಲ್ಯವಾದ ಒಂದು ಮುತ್ತು”

ನಮ್ಮ ರಕ್ಷಕನ ದಿನಗಳಲ್ಲಿ ಮುತ್ತುಗಳನ್ನು ಆಭರಣಗಳಲ್ಲಿ ಬಹು ಅಮೂಲ್ಯವಾದುದೆಂದೂ ಹಾಗೂ ಬಯಸತಕ್ಕದ್ದೂ ಆಗಿರುವುದೆಂದು ಪ್ರಸ್ತುತಪಡಿಸಲಾಗುತ್ತಿತ್ತು. ಆ ಮುತ್ತುಗಳು ದೊಡ್ಡದಾದಷ್ಟೂ ಹಾಗು ಅತಿ ಹೆಚ್ಚು ಪರಿಪೂರ್ಣತೆಯುಳ್ಳದ್ದಾಗಿದ್ದಷ್ಟೂ ಅದಕ್ಕೆ ಅಧಿಕ ಬೆಲೆಯಿರುತ್ತಿತ್ತು. ಆ ದಿವ್ಯ ಬೋಧಕನು ಪ್ರಚಲಿತವಾಗಿದ್ದ ಈ ಸಂಗತಿಯನ್ನು ಆಧಾರಮಾಡಿಕೊಂಡು

ಪರಲೋಕ ರಾಜ್ಯದ ಮೌಲ್ಯದ ವಿಷಯವಾಗಿ ಪಾಠವನ್ನು ಬೋಧಿಸಿದ್ದನು. ಆ ಮುತ್ತಿನ ವ್ಯಾಪಾರಿಯು ಎಲ್ಲಾ ವಿಧದಲ್ಲಿಯೂ ಬಹು ಉತ್ಕೃಷ್ಟವಾದ ಒಂದು ಮುತ್ತನ್ನು ಕಂಡುಕೊಂಡು ಆ ಮುತ್ತಿನ ಒಡೆಯನಾಗಲು ತಾನು ಪಡೆದಿರುವುದೆಲ್ಲವನ್ನೂ ಕೊಟ್ಟುಬಿಡುವುದು ಬಹು ಅಲ್ಪವೆಂದು ಎಣಿಸಿದ್ದನು.

ಇದು ಪರಲೋಕ ರಾಜ್ಯದ ಮತ್ತು ಅದರ ಪ್ರಭಾವ ಮಾನ ನಿರ್ಲಯತ್ವಗಳ ಮೌಲ್ಯದ ಬಗ್ಗೆ ವಿವರಣೆ ನೀಡುತ್ತದೆಂದು ಒಡೆಯನು ಹೇಳಿ ತನ್ನೊಡನೆ ಇದರಲ್ಲಿ ಪಾಲನ್ನು ಹೊಂದಲು ಆಯಲ್ಪಟ್ಟ ಭಕ್ತರಾದ ಚಿಕ್ಕ ಹಿಂಡಿಗೆ ಆಹ್ವಾನಿಸುತ್ತಿರುವುದಾಗಿ ನುಡಿದಿದ್ದನು. ಇದಕ್ಕೆ ಸೂಕ್ತವಾದ ಬೆಲೆಕಟ್ಟುವವರು ತಾವು ಇದರ ಬಗ್ಗೆ ಎಷ್ಟು ಮನಸ್ಸುಳ್ಳವರಾಗಿರುವೆವೆಂಬುದನ್ನು ಹಾಗು ಆ ಬೆಲೆಯನ್ನು ಕೊಡುವುಕ್ಕೆ ಹರ್ಷವುಳ್ಳವರಾಗಿರುವೆವೆಂಬುದನ್ನು ಹೇಳುವ ಮೂಲಕ ತಮ್ಮ ಪ್ರಸಂಶೆಯನ್ನು ತೋರಿಸುವವ ರಾಗಿದ್ದಾರೆ. ಒಬ್ಬನು ಐಶ್ವರ್ಯವಂತ ಇಲ್ಲವೆ ಬಡವನಾಗಿರ ಬಹುದು, ಕಲಿತವನು ಅಥವಾ ಕಲಿತವನಲ್ಲದವನಾಗಿರಬಹುದು, ಪ್ರಭಾವಿ ಅಥವಾ ಇಲ್ಲದಿರುವವನಾಗಿರಬಹುದು. ಹೀಗಿದ್ದರೂ ಈ ರಾಜ್ಯದ ವಿಷಯವಾಗಿರುವ ಬಹು ಅಮೂಲ್ಯ ಮುತ್ತಿನ ಬೆಲೆಯು ತನ್ನದೆಲ್ಲವನ್ನೂ ಅರ್ಪಿಸುವುದನ್ನು ಒಳಗೊಂಡಿರುವದು. ಅದು ಇದಕ್ಕಿಂತಲೂ ಕಡಿಮೆಯಾಗಿರಲು ಸಾಧ್ಯವಿರುವುದಿಲ್ಲ.

ಲೋಕದಲ್ಲಿರುವ ಅತಿ ಐಶ್ವರ್ಯವಂತನಾಗಲಿ ಅಥವಾ ಬಹು ಪ್ರತಿಭೆಯುಳ್ಳವನಾಗಲಿ ತನ್ನ ಸೊತ್ತಿನಲ್ಲಿ ಒಂದು ಅಣುವನ್ನಷ್ಟಾದರೂ ಹಿಡಿದಿಟ್ಟುಕೊಂಡಲ್ಲಿ ತನಗೆ ಆ ರಾಜ್ಯದಲ್ಲಿ ಸೇರಿ ಪಾಲು ಹೊಂದಲು ಸಾಧ್ಯವಾಗದು; ಆ ರಾಜ್ಯವನ್ನು ಪಡೆಯಲು ತೆರಬೇಕಾದ ಬೆಲೆಯು ಮರಣದ ಪರ್ಯಂತರವಾದ ಸ್ವಾರ್ಥತ್ಯಾಗ ಮತ್ತು ಇದಕ್ಕೆ ಕಡಿಮೆಯಾದುದರ ಮೂಲಕವಾಗಿ ಇದನ್ನು ಪಡೆಯಲು ಸಾಧ್ಯವಾಗದು. ಹಾಗು ನಮ್ಮ ತ್ಯಾಗವು ದೇವರ ದೃಷ್ಟಿಯಲ್ಲಿ ನಮ್ಮ ವಿಮೋಚಕನು ಕಲ್ವಾರಿಯಲ್ಲಿ ಪೂರ್ಣಗೊಳಿಸಿದ ತನ್ನ ಅಮೂಲ್ಯವಾದ ಯಜ್ಞಫಲದ ಮೂಲಕವಾಗಿ ಮೊದಲು ಅಂಗೀಕಾರವಾಗದ ಹೊರತು ಬೇರೆ ಯಾವ ವಿಧವಾದ ತ್ಯಾಗವೂ ನಮಗೆ ಈ ರಾಜ್ಯದಲ್ಲಿ ಒಂದು ಪಾಲನ್ನು ಒದಗಿಸಿಕೊಡಲು ಸಾಧ್ಯವಾಗದು.

## "ಮೀನಿನ ಬಲೆಯ ಸಾಮ್ಯ"

ಪರಲೋಕರಾಜ್ಯವು ಬಲೆಗೆ ಹೋಲಿಕೆಯಾಗಿರುವುದೆಂದು ನಾವು ನೆನಸುವುದಿಲ್ಲ; ಆದರೆ ಭ್ರೂಣಾವಸ್ಥೆಯಲ್ಲಿರುವ (ಆರಂಭದ ಹಂತದಲ್ಲಿರುವ) ಪರಲೋಕರಾಜ್ಯವು ಬಲೆಯ ಮೂಲಕ ಮೀನು ಹಿಡಿಯುವ ಅನುಭವಕ್ಕೆ ಹೋಲಿಕೆಯಾಗಿರು ವುದೆಂದು ಅರ್ಥಮಾಡಿಕೊಂಡಿರುವೆವು. ಇದರಲ್ಲಿ ಎಲ್ಲಾ ಬಗೆಯ ಮೀನುಗಳು ಸೇರಿದ್ದು ಅದನ್ನು ತೀರಕ್ಕೆ ಎಳೆದುಕೊಂಡು ಬಂದು ಅವುಗಳನ್ನು ವಿಂಗಡಿಸಲಾಗುವದು. ಇದು ಭ್ರೂಣಾ ವಸ್ಥೆಯಲ್ಲಿರುವ ಪರಲೋಕರಾಜ್ಯದ ವಿಷಯವಾದ ಒಂದು ಸಾಮ್ಯವಾಗಿರುವುದು. ಏಕೆಂದರೆ ಇದು ಈ ಕಾಲದಲ್ಲಿ (ಸುವಾರ್ತಾಯುಗದಲ್ಲಿ) ನಡೆಯುವ ಕಾರ್ಯಕ್ಕೆ ಸಂಬಂಧಿಸಿದು ದಾಗಿದ್ದು ಇದು ಪ್ರಭಾವವುಳ್ಳ ರಾಜ್ಯವಾಗಿ ರೂಪುಗೊಳ್ಳಲಿರುವ ಆ "ಚಿಕ್ಕ ಹಿಂಡನ್ನು" ಕಂಡುಕೊಳ್ಳುವ ಕಾರ್ಯವಾಗಿರುವುದು. ಕರ್ತನು ಈ (ಸುವಾರ್ತಾಯುಗದ) ಕಾಲದಲ್ಲಿ ಎಲ್ಲಾ ಬಗೆಯ ಮೀನುಗಳನ್ನು ಹಿಡಿಯುತ್ತಿರುವುದಿಲ್ಲ. ಆತನು ಎಲ್ಲಾ ಬಗೆಯ ಜನರನ್ನು ಕಂಡುಕೊಳ್ಳಲು ಬಯಸುತ್ತಿಲ್ಲ. ಆತನು ಕೇವಲ ಆಯಲ್ಪಡುವವರನ್ನು ಅಂದರೆ ಕೇವಲ ಭಕ್ತರನ್ನು ಮಾತ್ರ ಕರೆಯುತ್ತಿದ್ದು, ಅವರನ್ನು ತನ್ನ ಬಳಿಗೆ ವಿಶೇಷವಾಗಿ ಎಳೆದುಕೊಂಡು ಅವರೊಡನೆ ವ್ಯವಹರಿಸುತ್ತಿರುವನು.

ಆದರೆ ಇದರಲ್ಲಿನ ಸಂದರ್ಭಾನುಸಾರವಾಗಿ ಇತರ ಬಗೆಬಗೆಯ ಮೀನುಗಳು ಈ ಸುವಾರ್ತೆಯೆಂಬ ಬಲೆಯಲ್ಲಿ ಸಿಕ್ಕಿಬಿದ್ದವುಗಳಾಗಿದ್ದು ಅವುಗಳಲ್ಲಿ ಕೆಲವು ಲೌಕೀಕ ಆಕಾಂಕ್ಷೆ-ಯುಳ್ಳವುಗಳು - ಕೆಲವರು ಮದುವೆಯ ಸಂಬಂಧದಲ್ಲಿ ಈ ಧಾರ್ಮಿಕ ಸಂಸ್ಥೆಗಳಲ್ಲಿ ಒಳ್ಳೆಯ ಅವಕಾಶವಿರುವ ಕಾರಣಕ್ಕಾಗಿಯೂ, ಕೆಲವರು ಸಾಮಾಜಿಕವಾಗಿ ಸೌಕರ್ಯ ಸ್ಥಾನಮಾನಗಳು ಲಭಿಸುವ ಕಾರಣಕ್ಕಾಗಿಯೂ, ಕೆಲವರು ಒಂದು ಧಾರ್ಮಿಕ ಪರಿಸರದಲ್ಲಿ ಜೀವಿಸುವಸಲುವಾಗಿಯೂ, ಇತರರು ವ್ಯಾಪಾರ ವಹಿವಾಟಿನ ಕಾರಣಕ್ಕಾಗಿ ಧಾರ್ಮಿಕ ಸೋಗಿನ ವಸ್ತ್ರಗಳನ್ನು ಹೊದ್ದುಕೊಳ್ಳುವದಕ್ಕಾಗಿಯೂ, ಇತ್ಯಾದಿ ಕಾರಣಗಳಿಗಾಗಿಯೂ, ಇದರಲ್ಲಿ ಸೇರಿದವರಾಗಿರುವರು. ಆದರೆ ಕರ್ತನು ಕಂಡುಕೊಳ್ಳಬಯಸುತ್ತಿರುವ ಸೂಕ್ತವಾದ ಮೀನುಗಳು ಯಾವವೆಂದರೆ, ಅಲ್ಲದೆ ಕೇವಲ ಯಾರು ಆ ರಾಜ್ಯದಲ್ಲಿ ಸೇರುವ ಗುಂಪಿನಲ್ಲಿರುವವರಾಗಿ ರೂಪುಗೊಳ್ಳಲಿರುವರೆಂದರೆ, ಯಾರು ಆತನ ಸಂದೇಶವನ್ನು ಸಂತೋಷದಿಂದ ಕೇಳಿ ಆ ರಾಜ್ಯವನ್ನು ಪಡಕೊಳ್ಳಲು ಸಂಭವಿಸಲಿರುವ ಕಷ್ಟನಷ್ಟಗಳ ಲೆಕ್ಕಾಚಾರವನ್ನು ಹಾಕಿ ಮತ್ತು ಅವುಗಳ ಸನ್ನಿವೇಶಗಳ ಬಗ್ಗೆ ಮನವರಿಕೆ ಮಾಡಿಕೊಂಡವರಾಗಿ ತಮ್ಮನ್ನು "ಕರ್ತನಾದ ಯೇಸು ಕ್ರಿಸ್ತನ ದಾಸರನ್ನಾಗಿ" ಮಾಡಿಕೊಳ್ಳ ಬಯಸುವರೋ ಅಂಥವರೇ. ಅವರು ಮುಂದೆ ಆತನೊಡನೆ ಆ ರಾಜ್ಯ ಪ್ರಭಾವವನ್ನು ಪಡೆಯ ಸಲುವಾಗಿ ಈಗ ಆತನೊಡನೆ ಬಾಧೆಯನ್ನು ಅನುಭವಿಸಲು ಇಚ್ಛೆಯುಳ್ಳವರಾಗಿರುವರು.

ಬಲೆಯು ಪೂರ್ಣವಾಗಿ ತುಂಬಲ್ಪಟ್ಟಾಗ ಅದನ್ನು ದಡಕ್ಕೆ ಎಳೆದುಕೊಂಡು ಬಂದು ಮೀನುಗಳನ್ನು ಅಲ್ಲಿ ಬೇರ್ಪಡಿಸ-ಲಾಯಿತೆಂದು ಈ ಸಾಮ್ಯವು ನಮಗೆ ತಿಳಿಸುವದು. ಇದು ಸ್ಪಷ್ಟವಾಗಿ ಸೂಚಿಸುವುದೆಂದರೆ, ಈ ಸುವಾರ್ತಾ ಯುಗದ ಅಂತ್ಯದಲ್ಲಿ ಒಂದು ಕಾಲ ಬರುವುದು ಅಲ್ಲಿ ಕರ್ತನು ತನ್ನ ಉದ್ದೇಶವನ್ನು ನೆರವೇರಿಸ ಸಲುವಾಗಿ ಸಾಕಷ್ಟು ಸಂಖ್ಯೆಯ ಭಕ್ತರನ್ನು ಅಂದರೆ ತಂದೆಯು ಮೊದಲೇ ಗೊತ್ತುಮಾಡಿದವರ ಸಂಖ್ಯೆಯನ್ನು ಪೂರ್ಣಗೊಳಿಸಿ ಅವರು ಆಯಲ್ಪಟ್ಟ ಆ ಮಹಿಮೆಯುಳ್ಳ ಸಭೆಯ ಸದಸ್ಯರಾಗುವುದಕ್ಕೆ ತನಗಾಗಿ ಕೂಡಿಸಿ ಕೊಂಡವನಾಗಿರುವನು. ಆನಂತರ ಮೀನು ಹಿಡಿಯುವಿಕೆಯು ನಿಂತುಹೋಗುವದು. ಕರ್ತನು ಬಯಸುತ್ತಿರುವ ಒಂದು ನಿಜವಾದ "ಮೀನಾಗಿ" ಆ "ಬಲೆಯಲ್ಲಿ" ಸೇರಿಕೊಳ್ಳುವ ಅವಕಾಶವು ಹೆಚ್ಚು ಕಡಿಮೆ ಮುಕ್ತಾಯವಾಗುತ್ತಾ

ಬಂದಿರುವುದಿಲ್ಲವೆಂದು ಹೇಳಲು ಯಾರಿಗೆ ತಾನೆ ಸಾಧ್ಯ? ಬಗೆಬಗೆಯ ಶೈಲಿಯಲ್ಲಿರುವ ಕ್ರೈಸ್ತಸಭೆಯನ್ನು ಅನುಕರಣೆ ಮಾಡುವವರಿಂದ ತುಂಬಿರುವಂಥ ಸುವಾರ್ತಾ ಬಲೆಯೊಳಗಿಂದ ಸೂಕ್ತವಾಗಿರುವವರನ್ನು ಅಂದರೆ ಆಯಲ್ಪಟ್ಟವರನ್ನು ಆ ರಾಜ್ಯಕ್ಕೆ ಕೂಡಿಸಿಕೊಳ್ಳುವ ಸಲುವಾಗಿ ಆ ಬಲೆಯನ್ನು ಶೀಘ್ರದಲ್ಲಿ ದಡಕ್ಕೆ ಎಳೆದು ತರಲಾಗುವುದಿಲ್ಲವೆಂದು ಯಾರಿಗೆ ತಾನೇ ಹೇಳಲು ಸಾಧ್ಯ?

ಈ ಸಾಮ್ಯದಲ್ಲಿ ಹೇಳಿರುವ ಅನುಪಯುಕ್ತವಾದ ಕೆಟ್ಟ "ಮೀನುಗಳು" ಕಳೆದ ವಾರದಲ್ಲಿ ಪರಿಗಣಿಸಲಾದ ಸಾಮ್ಯದಲ್ಲಿ ಹೇಳಿರುವ "ಹಣಜಿಗಳಿಗೆ" ಹೋಲಿಕೆಯಾಗಿರುವುದು. ಆ "ಬೆಂಕೀಕೊಂಡವು" ಬಹು ಶೀಘ್ರವಾಗಿ ಭೂಲೋಕದ ಮಾನವರೆಲ್ಲರ ಮೇಲೆ ಬರಲಿರುವ ಅದೇ "ಮಹಾ ಸಂಕಟದ" ಕಾಲವಾಗಿರುವದು. ಬಲೆಯಲ್ಲಿ ಸೇರಿರುವ ಅನುಪಯುಕ್ತವಾದ "ಮೀನುಗಳು" ಕ್ರೈಸ್ತ ಸಭೆಗಳೆಲ್ಲವುಗಳ ಎಲ್ಲಾ ಸದಸ್ಯರುಗಳು. ಕ್ರೈಸ್ತರಂತೆ ತೋರಿಸಿಕೊಳ್ಳದ ಲೋಕದಲ್ಲಿರುವ ಇತರರು ಈ ಸಾಮ್ಯದಲ್ಲಿ ಸೂಚಿತವಾಗಿರುವುದಿಲ್ಲ.

ಈ ಸಾಮ್ಯವು ತಮಗೆ ಅರ್ಥವಾಗಿರುವುದೋ ಎಂದು ಯೇಸುವು ತನ್ನ ಶಿಷ್ಯರನ್ನು ಕೇಳಿದನು. ಅವರು ಹೌದೆಂದು ಉತ್ತರಿಸಿದರು. ಮತ್ತು ಒಬ್ಬ ಮನೆಯಜಮಾನನು ತನ್ನ ಬಳಿಯಲ್ಲಿ ಸಂಗ್ರಹವಾಗಿಟ್ಟು ಕೊಂಡಿರುವ ಆಹಾರ ಸಾಮಾಗ್ರಿಗಳಂತೆ ತನ್ನ ಸಾಮ್ಯವನ್ನು ಪರಿಗಣಿಸಬೇಕೆಂದು ಆತನು ಹೇಳಿದ್ದನು. ಅದರಿಂದ ಆ ಮನೆಯಜಮಾನು ಕಾಲಕಾಲಕ್ಕೆ "ಹೊಸ ಮತ್ತು ಹಳೆಯ, ಎರಡೂ ಬಗೆಯ" ಸತ್ಯಾರ್ಥಗಳನ್ನು ಹೊರತರುತ್ತಿರುವನು.

ನಮ್ಮ ಪಠ್ಯಭಾಗವು ಈ ಅಧ್ಯಯನಕ್ಕೆ ಒತ್ತುಕೊಡುತ್ತದೆ. ಆ ರಾಜ್ಯವು ಒಡೆಯನು ಸೂಚಿಸಿರುವಂತೆ ಆ ಮುತ್ತಾಗಿದ್ದಲ್ಲಿ ಮತ್ತು ಆ ದ್ರವ್ಯವಾಗಿದ್ದಲ್ಲಿ, ನಾವು ಆತನ ಸಾಕ್ಷಿಯನ್ನು ನಂಬಿದವ ರಾಗಿದ್ದಲ್ಲಿ ನಾವು ಎಲ್ಲಾ ವಿಧದಲ್ಲಿಯೂ ನಮ್ಮ ನಂಬಿಕೆಯನ್ನು ತೋರ್ಪಡಿಸೋಣ. ಅದನ್ನು ಕೇವಲ ಪ್ರತಿಪಾದಿಸುವುದು ಮಾತ್ರವಲ್ಲದೆ ಪ್ರತಿಯೊಂದು ಮಾತಿನಲ್ಲೂ ಪ್ರತಿಯೊಂದು ಕ್ರಿಯೆಯಲ್ಲೂ ಅದನ್ನು ತೋರ್ಪಡಿಸುವವರಾಗೋಣ. ಆ ರಾಜ್ಯವನ್ನು ನಮ್ಮ ಜೀವಿತದ ಪ್ರಾಮುಖ್ಯವಾದ ವಿಷಯವನ್ನಾಗಿ ಬಯಸುವವರಾಗೋಣ. ಇತರ ಸಂಗತಿಗಳನ್ನು ಇದಕ್ಕೆ ಹೋಲಿಸಿದಲ್ಲಿ ಅವು ಅಲ್ಪವಾಗಿ ತೋರುವವು ಮತ್ತು ಅಪೋಸ್ತಲನಾದ ಪೌಲನು ಸಾರಿ ಹೇಳಿರುವಂತೆ "ಅವು ಬಹು ಅಲ್ಪವಾದವುಗಳೇ ಸರಿ (ಹೋಲಿಸಲು ಯೋಗ್ಯವಲ್ಲ)" ಆ ರಾಜ್ಯವನ್ನು ಬಯಸುವ ವಿಷಯವು ನಮ್ಮ ಕೆಲವು ಲೌಕೀಕವಾದ ಸಂಗತಿಗಳ ಅಭಿವೃದ್ಧಿಗೆ ಅಡ್ಡಿಯನ್ನು ಉಂಟು ಮಾಡುವುದಾಗಿ ಕಂಡರೆ ಅದು ಅಷ್ಟರಮಟ್ಟಿಗೆ ಉತ್ತಮವೇ. ಒಡೆಯನು ಹೇಳಿರುವಂತೆ ಅದರ ದೆಸೆಯಿಂದ ನಮ್ಮದೆಲ್ಲವನ್ನೂ ಕಳಕೊಂಡಂಥವರಾಗಬೇಕು. ನಾವು "ದೇವರು ಕರೆದದ್ದನ್ನೂ ಆದುಕೊಂಡದ್ದನ್ನು" ದೃಢಪಡಿಸಿಕೊಳ್ಳಲು ನಮಗೆ ಅತಿ ಪ್ರಯೋಜನಕರವಾದುದೆಂದು ತೋರುವ ಲೌಕೀಕ ಆಶೀರ್ವಾದ ಗಳನ್ನು ಆತನು ತನ್ನ ಜ್ಞಾನಾನುಸಾರ ನಮಗೆ ಹಂಚಿಕೊಡಲಿ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31 | ಗಲಿಲಾಯ ಸಮುದ್ರ | ಕೆರೆ ದಾಟುವಾಗ ಬಿರುಗಾಳಿಯನ್ನು ನಿಲ್ಲಿಸಿದುದು | 8:18,23–27 | 4:35–41 | 8:22–25 | –– |
| | ಗೆರಸೇನರಸೀಮೆ, ಗಲಿಲಾಯ ಸಮುದ್ರದ ಆಗ್ನೇಯ ಭಾಗ | ದೆವ್ವ ಹಿಡಿದ ಇಬ್ಬರನ್ನು ಸ್ವಸ್ಥಪಡಿಸಿದ್ದು; ದೆವ್ವಗಳು ಹಂದಿಗಳಲ್ಲಿ ಹೊಕ್ಕಿದ್ದು | 8:28–34 | 5:1–20 | 8:26–39 | –– |

## ಮತ್ತಾಯ 8:18,23–27

ಯೇಸು ತನ್ನ ಸುತ್ತಲಿದ್ದ ಬಹು ಜನಗಳ ದೊಡ್ಡ ಗುಂಪು–ಗಳನ್ನು ಕಂಡು ಆಚೇದಡಕ್ಕೆ ಹೊರಟು ಹೋಗಬೇಕೆಂದು ಅಪ್ಪಣೆಕೊಟ್ಟನು. ಆತನು ದೋಣಿಯನ್ನು ಹತ್ತಿದಾಗ ಆತನ ಶಿಷ್ಯರು ಆತನ ಹಿಂದೆ ಹೋದರು. ಅವರು ಹೋಗುತ್ತಿರುವಾಗ ಸಮುದ್ರವು ಅಲ್ಲಕಲ್ಲೋಲವಾಗಿ ದೋಣಿಯು ತೆರೆಗಳಿಂದ ಮುಚ್ಚಿಹೋಯಿತು; ಆದರೆ ಆತನು ನಿದ್ದೆಹತ್ತಿ ಮಲಗಿದ್ದನು. ಅವರು ಹತ್ತರ ಬಂದು ಅತನನ್ನು ಎಬ್ಬಿಸಿ–ಸ್ವಾಮೀ, ಕಾಪಾಡು, ಸಾಯುತ್ತೇವೆ ಅನ್ನಲಾಗಿ ಆತನು ಅವರಿಗೆ–ಅಲ್ಪವಿಶ್ವಾಸಿಗಳೇ, ಯಾಕೆ ಧೈರ್ಯಗೆಡುತ್ತೀರಿ ಎಂದು ಹೇಳಿ, ಎದ್ದು ಗಾಳಿಯನ್ನೂ ಸಮುದ್ರವನ್ನೂ ಗದರಿಸಿದನು; ಆಗ ಎಲ್ಲಾ ಶಾಂತವಾಯಿತು. ಆ ಜನರು ಬೆರಗಾಗಿ–ಈತನು ಎಂಥವನಾಗಿರಬಹುದು! ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ ಅಂದರು.

## ಮಾರ್ಕ 4:35–5:20

ಆ ಹೊತ್ತು ಸಾಯಂಕಾಲವಾದಾಗ ಆತನು ಅವರಿಗೆ–ಆಚೇದಡಕ್ಕೆ ಹೋಗೋಣ ಎಂದು ಹೇಳಲು ಅವರು ಆ ಜನರ ಗುಂಪನ್ನು ಬಿಟ್ಟು ಆತನನ್ನು ಅದೇ ದೋಣಿಯಲ್ಲಿ ಹಾಗೆಯೇ ಕರಕೊಂಡುಹೋದರು. ಬೇರೆ ದೋಣಿಗಳೂ ಆತನ ಸಂಗಡ ಇದ್ದವು. ತರುವಾಯ ದೊಡ್ಡ ಬಿರುಗಾಳಿ ಎದ್ದು ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದರಿಂದ ಆ ದೋಣಿ ಆಗಲೇ ತುಂಬುವುದಕ್ಕೆ ಬಂದಿತ್ತು. ಆತನು ದೋಣಿಯ ಹಿಂಬಾಗದಲ್ಲಿ ತಲೆಗಿಂಬನ್ನು ಒರಗಿ ನಿದ್ದೆಮಾಡುತ್ತಿದ್ದನು. ಅವರು ಆತನನ್ನು ಎಬ್ಬಿಸಿ–ಗುರುವೇ, ನಾವು ಮುಳುಗಿಹೋಗುವುದರಲ್ಲಿ ನಿನಗೆ ಚಿಂತೆಯಿಲ್ಲವೇ ಎಂದು ಕೇಳಲು ಆತನು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ–ಸುಮ್ಮನಿರು ಮೊರೆಯಬೇಡ ಎಂದು ಅಪ್ಪಣೆಕೊಟ್ಟನು. ಕೂಡುತ್ತಲೆ ಗಾಳಿ ನಿಂತುಹೋಗಿ ಎಲ್ಲಾ

ಶಾಂತವಾಯಿತು. ತರುವಾಯ ಆತನು ಅವರನ್ನು–ಯಾಕೆ ಧೈರ್ಯಗೆಡುತ್ತೀರಿ? ಇನ್ನೂ ನಿಮಗೆ ನಂಬಿಕೆಯಿಲ್ಲವೇ ಎಂದು ಕೇಳಲು ಅವರು ಬಹು ಭಯಪಟ್ಟು–ಈತನು ಯಾರಿರಬಹುದು? ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತದಲ್ಲಾ ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು.

ಆ ಮೇಲೆ ಅವರು ಸಮುದ್ರದ ಆಚೇದಡಕ್ಕೆ ಗೆರಸೇನರ ಸೀಮೆಗೆ ಮುಟ್ಟಿದರು. ಆತನು ದೋಣಿಯಿಂದ ಇಳಿದುಬಂದ ಕೂಡಲೆ ದೆವ್ವಹಿಡಿದವನೊಬ್ಬನು ಸಮಾಧಿಯ ಗವಿಗಳೊಳಗಿಂದ ಆತನೆದುರಿಗೆ ಬಂದನು. ಅವನಿಗೆ ಸಮಾಧಿಯ ಗವಿಗಳೇ ವಾಸಸ್ಥಳವಾಗಿದ್ದವು. ಅವನನ್ನು ಅನೇಕಸಾರಿ ಬೇಡಿಗಳಿಂದಲೂ ಸರಪಣಿಗಳಿಂದಲೂ ಕಟ್ಟಿದ್ದರೂ ಅವನು ಸರಪಣಿಗಳನ್ನು ಕಿತ್ತು ಬೇಡಿಗಳನ್ನು ಮುರಿದು ಹಾಕಿದ್ದನು; ಅವನನ್ನು ಇನ್ನು ಯಾರೂ ಸರಪಣಿಯಿಂದಾದರೂ ಕಟ್ಟಲಾರದೆ ಹೋದರು; ಅವನನ್ನು ಹತೋಟಿಗೆ ತರುವದಕ್ಕೆ ಯಾರಿಂದಲೂ ಆಗಲಿಲ್ಲ. ಅವನು ನಿತ್ಯ ರಾತ್ರಿಹಗಲು ಸಮಾಧಿಯ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಆರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು ಕಡಿದುಕೊಳ್ಳುತ್ತಾ ಇದ್ದನು. ಅವನು ಯೇಸುವನ್ನು ದೂರದಿಂದ ಕಂಡು ಓಡಿಬಂದು ಆತನಿಗೆ ಅಡ್ಡಬಿದ್ದು ಮಹಾಶಬ್ದದಿಂದ ಆರ್ಭಟಿಸಿ–ಯೇಸುವೇ, ಪರಾತ್ಪರನಾದ ದೇವರ ಮಗನೇ, ನನ್ನ ಗೊಡವೆ ನಿನಗೇಕೆ? ದೇವರಾಣೆ, ನನ್ನನ್ನು ಕಾಡಬೇಡ ಎಂದು ಹೇಳಿದನು. ಯಾಕಂದರೆ–ಎಲಾ ದೆವ್ವಾ, ಇವನನ್ನು ಬಿಟ್ಟುಹೋಗು ಎಂದು ಯೇಸು ಹೇಳಿದ್ದನು. ಮತ್ತು–ನಿನ್ನ ಹೆಸರೇನೆಂದು ಅವನನ್ನು ಕೇಳಿದ್ದಕ್ಕೆ ಅವನು–ನನ್ನ ಹೆಸರು ದಂಡು; ಯಾಕಂದರೆ ನಾವು ಬಹು ಮಂದಿ ಇದ್ದೇವೆ ಎಂದು ಹೇಳಿ–ನಮ್ಮನ್ನು ಈ ಸೀಮೆಯಿಂದ ಹೊರಡಿಸಬೇಡವೆಂದು ಆತನನ್ನು ಬಹಳವಾಗಿ ಬೇಡಿಕೊಂಡನು. ಅಲ್ಲಿಯ ಗುಡ್ಡದಲ್ಲಿ ಹಂದಿಗಳ ದೊಡ್ಡ ಹಿಂಡು ಮೇಯುತ್ತಿತ್ತು. ಆ ದೆವ್ವಗಳು–ಆ ಹಂದಿಗಳೊಳಗೆ ಸೇರಿಕೊಳ್ಳುವದಕ್ಕೆ ನಮ್ಮನ್ನು ಕಳುಹಿಸಿಕೊಡು ಎಂದು ಬೇಡಿಕೊಂಡವು. ಆತನು–ಆಗಲಿ ಎಂದು ಅವುಗಳಿಗೆ ಅಪ್ಪಣೆಕೊಡಲು ಆ ದೆವ್ವಗಳು ಹೊರಗೆ ಬಂದು ಹಂದಿಗಳೊಳಗೆ ಹೊಕ್ಕವು; ಆ ಗುಂಪು ಓಡಿ ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದು ಅಲ್ಲಿ ಉಸಿರುಕಟ್ಟಿ ಸತ್ತಿತು. ಹೆಚ್ಚು ಕಡಿಮೆ ಎರಡು ಸಾವಿರ ಹಂದಿಗಳಿದ್ದವು. ಅವುಗಳನ್ನು ಮೇಯಿಸುವವರು ಓಡಿಹೋಗಿ ಆ ಊರಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಲು ಜನರು ನಡೆದ ಸಂಗತಿ ಏನೆಂದು ನೋಡುವುದಕ್ಕೆ ಹೊರಟು ಯೇಸುವಿದ್ದಲ್ಲಿಗೆ ಬಂದು ಆ ದೆವ್ವಹಿಡಿದಿದ್ದವನು, ಅಂದರೆ ದೆವ್ವಗಳ ದಂಡಿನಿಂದ ಹಿಡಿಯಲ್ಪಟ್ಟಿದ್ದವನು, ಬಟ್ಟೆಗಳನ್ನು ಹಾಕಿಕೊಂಡು ಸ್ವಸ್ಥಬುದ್ಧಿಯಿಂದ ಕೂತಿರುವುದನ್ನು ನೋಡಿ ಹೆದರಿದರು. ನಡೆದ ಸಂಗತಿಯನ್ನು ನೋಡಿದ್ದವರು ಆ ದೆವ್ವಹಿಡಿದಿದ್ದವನಿಗೆ ಹೀಗೆಹೀಗಾಯಿತೆಂಬುದನ್ನೂ ಹಂದಿಗಳ ವಿಷಯವನ್ನೂ ಅವರಿಗೆ ವಿವರಿಸಲು ಅವರು ತಮ್ಮ ಸೀಮೆಯನ್ನು ಬಿಟ್ಟುಹೋಗಬೇಕೆಂದು ಯೇಸುವನ್ನು ಬೇಡಿಕೊಂಡರು. ಆತನು ದೋಣಿಯನ್ನು ಹತ್ತುವಾಗ ಅ ದೆವ್ವಹಿಡಿದಿದ್ದವನು–ನಾನು ನಿನ್ನ ಬಳಿಯಲ್ಲಿಯೇ ಇರುತ್ತೇನೆಂದು ಆತನನ್ನು ಬೇಡತೊಡಗಿದನು. ಆದರೆ ಆತನು ಅವನನ್ನು ಇರಗೊಡದೆ ಅವನಿಗೆ–ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು ಅಂದನು. ಅವನು ಹೊರಟುಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೊಲಿ ಎಂಬ ಸೀಮೆಯಲ್ಲಿ ಸಾರುವದಕ್ಕೆ ಪ್ರಾರಂಭಿಸಿದನು; ಎಲ್ಲರೂ ಆಶ್ಚರ್ಯಪಟ್ಟರು.

## ಲೂಕ 8:22–39

ಒಂದಾನೊಂದು ದಿನದಲ್ಲಿ ಅತನು ತನ್ನ ಶಿಷ್ಯರ ಸಂಗಡ ಒಂದು ದೋಣಿಯನ್ನು ಹತ್ತಿ ಕೆರೆಯ ಆಚೇದಡಕ್ಕೆ ಹೋಗೋಣ ಎಂದು ಅವರಿಗೆ ಹೇಳಲು ಅವರು ದೋಣಿಯನ್ನು ನೀರಿನೊಳಗೆ ನೂಕಿ ಹೊರಟರು. ಅವರು ಹೋಗುತ್ತಿರುವಾಗ ಆತನಿಗೆ ನಿದ್ರೆಹತ್ತಿತ್ತು. ಅಷ್ಟರಲ್ಲಿ ಬಿರುಗಾಳಿ ಕೆರೆಯ ಮೇಲೆ ಬರಲು ದೋಣಿಯೊಳಗೆ ನೀರು ತುಂಬಿಕೊಂಡದರಿಂದ ಅವರು ಅಪಾಯಕ್ಕೆ ಗುರಿಯಾದರು. ಹೀಗಿರಲಾಗಿ ಅವರು ಆತನ ಹತ್ತರ ಬಂದು–ಗುರುವೇ, ಗುರುವೇ, ಸಾಯುತ್ತೇವೆ ಎಂದು ಹೇಳಿ ಆತನನ್ನು ಎಬ್ಬಿಸಿದರು. ಆಗ ಆತನು ಎದ್ದು ಗಾಳಿಯನ್ನೂ ಉಬ್ಬುವ ನೀರನ್ನೂ ಗದರಿಸಿದನು. ಗದರಿಸಲು ಅವು ನಿಂತವು, ಶಾಂತವಾಯಿತು. ತರುವಾಯ ಆತನು–ನಿಮ್ಮ ನಂಬಿಕೆ ಎಲ್ಲಿ? ಎಂದು ಅವರನ್ನು ಕೇಳಿದನು. ಅವರಾದರೋ ಭಯಪಟ್ಟು–ಈತನು ಯಾರಿರಬಹುದು? ಗಾಳಿಗೂ ನೀರಿಗೂ ಅಪ್ಪಣೆ ಕೊಡುತ್ತಾನೆ; ಅವು ಕೂಡ ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ಒಬ್ಬರಿಗೊಬ್ಬರು ಮಾತಾಡಿಕೊಂಡು ಅತ್ಯಾಶ್ಚರ್ಯಪಟ್ಟರು.

ಆ ಮೇಲೆ ಅವರು ಗಲಿಲಾಯಕ್ಕೆ ಎದುರಾಗಿರುವ ಗೆರಸೇನರ ಸೀಮೆಗೆ ಮುಟ್ಟಿದರು. ಆತನು ದಡಕ್ಕೆ ಇಳಿಯುತ್ತಲೇ ಆ ಊರಿನವನಾದ ಒಬ್ಬ ಮನುಷ್ಯನು ಆತನೆದುರಿಗೆ ಬಂದನು. ಅವನಿಗೆ ದೆವ್ವಗಳು ಹಿಡಿದಿದ್ದವು. ಬಹುಕಾಲದಿಂದ ಬಟ್ಟೆಯನ್ನೇ ಹಾಕಿಕೊಳ್ಳದೆ ಯಾವ ಮನೆಯಲ್ಲಿಯೂ ಇರದೆ ಸಮಾಧಿಯ ಗವಿಗಳಲ್ಲಿಯೇ ಇರುತ್ತಿದ್ದನು. ಇವನು ಯೇಸುವನ್ನು ಕಂಡು ಅರ್ಭಟಿಸಿ ಆತನ ಮುಂದೆ ಬಿದ್ದು ಮಹಾಶಬ್ದದಿಂದ–ಯೇಸುವೇ, ಪರಾತ್ಪರನಾದ ದೇವರ ಮಗನೇ, ನನ್ನ ಗೊಡವೆ ನಿನಗೇಕೆ? ನನ್ನನ್ನು ಕಾಡಬೇಡವೆಂತ ನಿನ್ನನ್ನು ಬೇಡಿಕೊಳ್ಳುತ್ತೇನೆ ಅಂದನು. ಯಾಕಂದರೆ–ಈ ಮನುಷ್ಯನನ್ನು ಬಿಟ್ಟಹೋಗಬೇಕೆಂದು ಆತನು ಆ ದೆವ್ವಕ್ಕೆ ಅಪ್ಪಣೆ ಕೊಟ್ಟಿದ್ದನು. ಅದು ಬಹು ಕಾಲದಿಂದ ಅವನನ್ನು ಹಿಡಿದಿತ್ತು; ಇದಲ್ಲದೆ ಅವನನ್ನು ಕಾವಲಲ್ಲಿಟ್ಟು ಸರಪಣಿಗಳಿಂದಲೂ ಬೇಡಿಗಳಿಂದಲೂ ಕಟ್ಟಿದ್ದರೂ ಅವನು ಆ ಬಂಧಗಳನ್ನು ಮುರಿದುಹಾಕುತ್ತಿದ್ದನು; ಮತ್ತು ಆ ದೆವ್ವ ಅವನನ್ನು ಅರಣ್ಯಪ್ರದೇಶಗಳಿಗೆ ಓಡಿಸುತ್ತಿತ್ತು. ಯೇಸು–ನಿನ್ನ ಹೆಸರೇನೆಂದು ಅವನನ್ನು ಕೇಳಿದ್ದಕ್ಕೆ ಅವನು–ನನ್ನ ಹೆಸರು ದಂಡು ಅಂದನು; ಯಾಕಂದರೆ ಬಹಳ ದೆವ್ವಗಳು ಅವನೊಳಗೆ ಹೊಕ್ಕಿದ್ದವು. ಪಾತಾಳಕ್ಕೆ ಹೋಗಿಬಿಡುವಂತೆ ನಮಗೆ ಆಜ್ಞೆಮಾಡಬೇಡವೆಂದು ಅವು ಆತನನ್ನು ಬೇಡಿಕೊಂಡವು. ಅಲ್ಲಿಯ ಗುಡ್ಡದಲ್ಲಿ ಬಹಳ ಹಂದಿಗಳ ಒಂದು ಹಿಂಡು ಮೇಯುತ್ತಿತ್ತು. ಆ ದೆವ್ವಗಳು–ಆ ಹಂದಿಗಳೊಳಗೆ ಸೇರಿಕೊಳ್ಳುವದಕ್ಕೆ ನಮಗೆ ಅಪ್ಪಣೆಯಾಗ ಬೇಕೆಂದು ಆತನನ್ನು ಬೇಡಿಕೊಂಡವು. ಆತನು ಆಗಲಿ ಎಂದು

ಅವುಗಳಿಗೆ ಅಪ್ಪಣೆಕೊಡಲು ದೆವ್ವಗಳು ಆ ಮನುಷ್ಯನೊಳಗಿಂದ ಹೊರಗೆ ಬಂದು ಹಂದಿಗಳೊಳಗೆ ಹೊಕ್ಕವು; ಆ ಗುಂಪು ಓಡಿ ಕಡಿದಾದ ಸ್ಥಳದಿಂದ ಕೆರೆಯೊಳಗೆ ಬಿದ್ದು ಉಸಿರುಕಟ್ಟಿ ಸತ್ತಿತು. ಮೇಯಿಸುವವರು ನಡೆದದ್ದನ್ನು ಕಂಡು ಓಡಿಹೋಗಿ ಆ ಊರಲ್ಲಿಯೂ ಹಳ್ಳಿಗಳಲ್ಲಿಯೂ ಅದನ್ನು ತಿಳಿಸಲು ಜನರು ನಡೆದ ಸಂಗತಿಯನ್ನು ನೋಡುವದಕ್ಕೆ ಹೊರಟು ಯೇಸುವಿದ್ದಲ್ಲಿಗೆ ಬಂದು ದೆವ್ವಗಳು ಬಿಟ್ಟುಹೋಗಿದ್ದ ಆ ಮನುಷ್ಯನು ಬಟ್ಟೆಗಳನ್ನು ಹಾಕಿಕೊಂಡು ಸ್ವಸ್ಥಬುದ್ಧಿಯಿಂದ ಯೇಸುವಿನ ಪಾದಗಳ ಬಳಿಯಲ್ಲಿ ಕೂತಿರುವುದನ್ನು ಕಂಡು ಹೆದರಿದರು. ನಡೆದ ಸಂಗತಿಯನ್ನು ನೋಡಿದ್ದವರು ಆ ದೆವ್ವಹಿಡಿದಿದ್ದವನಿಗೆ ಬಿಡುಗಡೆಯಾದ ರೀತಿಯನ್ನು ಅವರಿಗೆ ತಿಳಿಸಲು ಗೆರಸೇನರ ಸುತ್ತಲಿರುವ ಸೀಮೆಯವರಿಗೆಲ್ಲಾ ಮಹಾ ಭಯಹಿಡಿದಿದ್ದರಿಂದ ಅವರು ಯೇಸುವನ್ನು–ನೀನು ನಮ್ಮನ್ನು ಬಿಟ್ಟುಹೋಗಬೇಕೆಂದು ಬೇಡಿಕೊಂಡರು. ಆತನು ದೋಣಿಯನ್ನು ಹತ್ತಿ ಹಿಂದಿರುಗಿ ಹೋದನು. ಹೊರಡುವಾಗ ದೆವ್ವಗಳಿಂದ ಬಿಡುಗಡೆಯಾದ ಆ ಮನುಷ್ಯನು–ನಾನು ನಿನ್ನ ಬಳಿಯಲ್ಲಿಯೇ ಇರುತ್ತೇನೆ ಎಂದು ಆತನನ್ನು ಬೇಡಿಕೊಂಡಾಗ ಆತನು–ನೀನು ನಿನ್ನ ಮನೆಗೆ ಹಿಂತಿರುಗಿ ಹೋಗಿ ದೇವರು ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದನೋ ಅದನ್ನೆಲ್ಲಾ ವಿವರವಾಗಿ ಹೇಳು ಎಂದು ಅವನನ್ನು ಕಳುಹಿಸಿಬಿಟ್ಟನು. ಅವನು ಹೊರಟುಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ಆ ಊರಲ್ಲೆಲ್ಲಾ ಸಾರಿದನು.

# ವಿರೋಧಿಯಾದ ಸೈತಾನನ ಮೇಲಿನ ಅಧಿಕಾರ

**ರೀಪ್ರಿಂಟ್ಸ್ ಪುಟ 4577**

## ಮತ್ತಾಯ 8:28–34

**"ಈತನು ಎಂಥವನಾಗಿರಬಹುದು! ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ ಅಂದರು." ಮತ್ತಾಯ 8:27**

ಅಪೋಸ್ತಲರಲ್ಲಿ ಹಲವರು ಗಲಿಲಾಯ ಕೆರೆಯಲ್ಲಿನ ಮೀನುಗಾರರಾಗಿದ್ದರು. ತನ್ನ ವಿಶ್ರಾಂತಿ ಹಾಗು ಪ್ರಶಾಂತತೆಗಾಗಿ ಒಡೆಯನು ಅವರೊಡನೆ ದೋಣಿಯಲ್ಲಿ ಕೆರೆಯೊಳಗೆ ಹೋಗುತ್ತಿದ್ದುದು ಸ್ಪಷ್ಟವಾಗಿತ್ತು; ಯಾಕೆಂದರೆ ಆತನು ದಡದಲ್ಲಿರುವಾಗ ತನ್ನ ಕಾರ್ಯಭಾರದಲ್ಲಿ ಅಂದರೆ ಜನರಿಗೆ ಉಪದೇಶ ಮಾಡುವುದು ರೋಗಿಗಳಿಗೆ ಗುಣಪಡಿಸುವುದು, ಮುಂತಾದವುಗಳಲ್ಲಿ, ಸತತವಾಗಿ ನಿರತನಾಗಿರುತ್ತಿದ್ದನು. ಈ ದಿನದ ಪಾಠವು ತನ್ನ ಕ್ರಿಯಾ ಚಟುವಟಿಕೆಗಳಿಂದ ದೂರವಾಗಿ ತೆರಳುವಂಥಾ ಒಂದು ವಿವರವನ್ನು ಒಳಗೊಂಡಿರುವುದು. ಆತನು ಆಯಾಸಗೊಂಡವನಾಗಿ ಮೀನು ಹಿಡಿಯುವ ಸಣ್ಣ ಹಡಗಿನ ಹಿಂಬಾಗದಲ್ಲಿ ಒರಗಿಕೊಂಡು ನಿದ್ರಿಸುತ್ತಿದ್ದನು. ಆ ಕೆರೆಯಲ್ಲಿ ಆಗಾಗ್ಗೆ ಸಂಭವಿಸುವಂತೆ ಅಲ್ಲಿ ಇದ್ದಕ್ಕಿದ್ದಂತೆ ಒಂದು ದೊಡ್ಡ ಬಿರುಗಾಳಿಯು ಎದ್ದಿತು. ಬಲವಾದ ತೆರೆಗಳು ದೋಣಿಯನ್ನು ಮುಣುಗಿಸುವ ಹಾಗಿತ್ತು. ಆ ತೆರೆಗಳು ಎಷ್ಟು ಘೋರವಾಗಿದ್ದ ವೆಂದರೆ ಅನುಭವಿಗಳಾಗಿದ್ದ ಅಪೋಸ್ತಲರೂ ಭೀತಿಗೊಳಗಾಗಿದ್ದರು. ಆ ವಿವರವು ಸಂಕ್ಷೇಪವಾಗಿ ನಮಗೆ ಹೇಳುವು ದೆಂದರೆ, ಆ ಶಿಷ್ಯರು ಒಡೆಯನನ್ನು ಎಬ್ಬಿಸಿ: "ಸ್ವಾಮೀ, ಕಾಪಾಡು ಸಾಯುತ್ತೇವೆ" ಎಂದರು. ಆತನು ಎದ್ದು ಗಾಳಿಯನ್ನೂ ಸಮುದ್ರ ವನ್ನೂ ಗದರಿಸಿದನು; ಆಗ ಎಲ್ಲಾ ಶಾಂತವಾಯಿತು. ಮತ್ತು ಆತನು ಅಪೋಸ್ತಲರನ್ನು ಗದರಿಸಿ ಹೀಗಂದನು: "ಅಲ್ಪವಿಶ್ವಾಸಿಗಳೇ, ಯಾಕೆ ಧೈರ್ಯಗೆಡುತ್ತೀರಿ?" ಅಂದಿನಿಂದ ಈ ಮಾತುಗಳನ್ನು ಓದಿದ ಹಲವರು ಇದರಿಂದ ಬಹುವಾಗಿ ಸಂತೈಸಿ ಕೊಂಡವರಾಗಿ ಪ್ರಯೋಜನ ಹೊಂದಿರುವರು; ಅದು ಅವರು ಸಮುದ್ರದ ಅಪಾಯಗಳಲ್ಲಿ ಸಿಕ್ಕಿಕೊಂಡಿರುವುದರ ದೆಸೆಯಿಂದಲ್ಲ, ಆದರೆ ಎಲ್ಲರೂ ಜೀವನದ ಬಿರುಗಾಳಿಗಳಿಗೆ ತುತ್ತಾಗಿರುವುದರ ದೆಸೆಯಿಂದ; ಜೀವನದಲ್ಲಿ ಏಳುವ ಬಲವಾದ ಬಿರುಗಾಳಿತೆರೆಗಳು ನಮ್ಮನ್ನು ನಾಶಮಾಡುವ ಬೆದರಿಕೆಯನ್ನೊಡ್ಡುತ್ತಿರುವುದು. ಅಕ್ಷರಶಃ ನಿಜವಾದ ತೆರೆಗಳಿಂದ ಬಿಡಿಸಿದ್ದರಲ್ಲಿ ತೋರಿಬಂದ ಮಹಾ ಶಕ್ತಿಯು ನಮ್ಮಲ್ಲಿ ಉಂಟುಮಾಡುವ ಭರವಸವೇನಂದರೆ, ಈ ಮಹಾ ಶಕ್ತಿಯುಳ್ಳಾತನು ನಮ್ಮ ಪ್ರತಿಯೊಂದು ಕಷ್ಟಗಳಿಂದ ನಮ್ಮನ್ನೂ ಬಿಡಿಸುವನೆಂಬುದು. ಅಪೋಸ್ತಲರಲ್ಲಿದ್ದ ನಂಬಿಕೆಯ ಕೊರತೆಗಾಗಿ ಮಾಡಿದ ಗದರಿಸುವಿಕೆಯು ಕರ್ತನ ಜನರಲ್ಲಿ ಅನೇಕರ ಹೃದಯಗಳಿಗೆ ನಾಟಿದ್ದು, ಅದು ಅವರನ್ನು ಗದರಿಸಿ ಪ್ರೋತ್ಸಾಹ ನೀಡಿ ಅವರುಗಳು ನಮ್ಮ ಸರ್ವಶಕ್ತನಾದ ಮಿತ್ರನು ನಮ್ಮ ಪರಿಪಾಲನೆಗಾಗಿ ಮುಂದಾಗಿ ಮಾಡಿರುವ ಏರ್ಪಾಡು ಗಳಲ್ಲಿ ಹೆಚ್ಚು ನಂಬಿಗಸ್ತರಾಗಿರುವಂತೆ ಮಾಡಿ ನಾವು ಅಧಿಕವಾದ ಧೈರ್ಯವುಳ್ಳವರೂ ಅಧಿಕವಾದ ಭರವಸವುಳ್ಳವರೂ ಆಗಿರುವಂತೆ ಮಾಡಿರುವುದು.]

"ಈತನು ಎಂಥವನಾಗಿರಬಹುದು! ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ" ಎಂದು ಅಪೋಸ್ತಲರು ಬಹು ಆಶ್ಚರ್ಯಪಟ್ಟಿರಬಹುದು. ಅವರು ತಮ್ಮ ಎಲ್ಲಾ ಪರಿಶೋಧನೆಗಳ ಸಂಕಷ್ಟಗಳ ಮತ್ತು ಹಿತಾಸಕ್ತಿಗಳ ವಿಷಯದಲ್ಲಿ ಆತನ ಮೇಲೆ ಭರವಸವಿಡಲು ಸಿದ್ಧರಾಗುವ ಪಾಠವನ್ನು ಅಲ್ಲಿಯವರೆಗೂ ಕಲಿತಿರಲಿಲ್ಲ. ಇದರಂತೆಯೇ ನಾವೂ ಯೇಸುವಿನ ಮೆಸ್ಸೀಯ ಪದವಿಯ ಬಗ್ಗೆ ಮತ್ತು ಆತನ ಪುನರುತ್ಥಾನದಲ್ಲಿ ಆತನಿಗೆ "ಪರಲೋಕ ಮತ್ತು ಭೂಲೋಕಗಳಲ್ಲಿ ಎಲ್ಲಾ ಅಧಿಕಾರವು" ಕೊಡಲ್ಪಟ್ಟಿರುವ ವಿಷಯವಾಗಿ ಇದೇ ಪಾಠವನ್ನು ಕಲಿಯುವವರೆಗೂ ನಾವು ಆತನಲ್ಲಿ ಪೂರ್ಣವಾಗಿ ಭರವಸೆಯಿಟ್ಟು ನಂಬಿಕೆಯ ಮೂಲಕವಾಗಿ ಆತನ ಪ್ರೀತಿಪೂರ್ಣವಾದ ಪರಿಪಾಲನೆಯಲ್ಲಿ ವಿಶ್ರಮಿಸಲು ಸಾಧ್ಯವಾಗಲಾರದು.

ಒಬ್ಬ ಆತ್ಮಿಕ ಜೀವಿಯಾಗಿ ಸೈತಾನನು ಅದೃಶ್ಯನೂ ಬಲಶಾಲಿಯೂ ಆಗಿರುವನೆಂದೂ ಮತ್ತು ದೇವರ ಕೆಲವು ನಿರ್ಭಂಧಿತವಾದ ನಿಯಮಗಳ ಪರಿಮಿತಿಗಳೊಳಗೆ ಮಾನವ ಜೀವಿತಗಳ ಹಾಗುಹೋಗುಗಳಲ್ಲಿ ಕೆಲವು ಮಟ್ಟಿನ ಆಧಿಕಾರವನ್ನು ಹೊಂದಿರುವನೆಂಬುದನ್ನು ಅಪೋಸ್ತಲರು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದರು. "ವಾಯುಮಂಡಲದಲ್ಲಿ ಅಧಿಕಾರ ನಡಿಸುವ ಅಧಿಪತಿಗೆ, ಅಂದರೆ ನಂಬಲೊಲ್ಲದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ ಆತ್ಮನಿಗೆ.." ಎಂದು ಅಪೋಸ್ತಲನಾದ ಪೌಲನು ಹೀಗೆ ಅವನನ್ನು ಹೆಸರಿಸಿದ್ದಾನೆ. – ಎಫೆಸ್ಸ 2:2

ಪ್ರವಾದಿಯಾದ ಯೋಬನ ಸಂಗತಿಯನ್ನು ಮತ್ತು ದೇವರು ಆತನ ನಂಬಿಕೆಯ ವಿಷಯವಾಗಿ ಪರಿಶೋಧನೆಯನ್ನು ಬರಮಾಡಿ ಆತನ ಜೀವನದ ಸಂಗತಿಗಳಲ್ಲಿ ವಿರೋಧಿಯಾದ ಸೈತಾನನಿಗೆ ವಿಶೇಷ ಅಧಿಕಾರ ಉಳ್ಳವನಾಗಿರುವಂತೆ ಮಾಡಿದ್ದನೆಂಬುದನ್ನು ನಾವು ಸ್ಮರಿಸುವರಾಗಿದ್ದೇವೆ. ಬಲವಾದ ಸುಳಿಗಾಳಿ ಬರಮಾಡುವುದರ ಮೂಲಕವಾಗಿ ಆ ಅಧಿಕಾರವು ಪ್ರಯೋಗಿಸಲ್ಪಟ್ಟು ಅದು ಯೋಬನ ಮಕ್ಕಳು ಕೂಡಿದ್ದ ಮನೆಯನ್ನು ನಾಶಮಾಡಿತ್ತೆಂಬುದನ್ನು ನಾವು ನೆನಪಿಗೆ ತಂದುಕೊಳ್ಳುವವರಾಗಿದ್ದೇವೆ.

ಇದೇ ರೀತಿಯ ಪಾಠವನ್ನು ಅಪೋಲಸ್ತಲರಿಗೆ ನೀಡುವ ಉದ್ದೇಶದಿಂದಲೇ ವಿರೋಧಿಯಾದ ಸೈತಾನನಿಗೆ ಆ ಕೆರೆಯ ಮೇಲೆ ಬಿರುಗಾಳಿಯನ್ನು ಉಂಟುಮಾಡಲು ಅನುಮತಿಯಾಗಿದ್ದ ಸಾಧ್ಯತೆಯಿರುವುದು. "ವಾಯುಮಂಡಲದಲ್ಲಿ ಅಧಿಕಾರ ನಡೆಸುವ ಈ ಅಧಿಪತಿಯು" ರಕ್ಷಕನನ್ನು ಸಂಹರಿಸಲು ಈ ರೀತಿಯಲ್ಲಿ ಯೋಚಿಸಿರಲೂಬಹುದು; ಆನಂತರದಲ್ಲಿ ರಕ್ಷಕನನ್ನು ಇಬ್ಬರು ಕಳ್ಳರ ಮಧ್ಯೆ ಶಿಲುಬೆಗೆ ಹಾಕಿಸುವುದರಲ್ಲಿ ಈತನ ಕೈವಾಡ ವಿತ್ತೆಂಬುದು ಸ್ಪಷ್ಟವಾಗಿರುವುದು. ಈ ಒಂದು ಘಟನೆಯಲ್ಲಿ ಆತನ ಪ್ರಯತ್ನಕ್ಕೆ ಯೇಸುವಿನ ನುಡಿಯು ಅಡ್ಡಿಪಡಿಸಿತ್ತು. ಮತ್ತೊಂದು ಸಂಗತಿಯಲ್ಲಿ ಅದು ಯಶಸ್ವಿಯಾ ಗಲು ಬಿಡಲಾಯಿತು; ಕಾರಣ "ಆತನ ಸಮಯವು ಆಗ ಬಂದಿತ್ತು." ಘಟನೆಯ ಬಗ್ಗೆ ನೀಡಲಾದ ವಿವರಣೆ ಯಾನುಸಾರ ಯೇಸುವನ್ನು ಹಿಡಿದುಕೊಟ್ಟ ಆ ರಾತ್ರಿ ಯೂದನಲ್ಲಿ ಹಿಂದಿನಿಂದಲೂ ಕಾರ್ಯವೆಸಗುತ್ತಿದ್ದ ಸೈತಾನನು ಪೂರ್ಣವಾಗಿ ಆತನ ಒಳಹೊಕ್ಕಿದ್ದನೆಂದು ತಿಳಿಸಲಾಗಿರುವುದನ್ನು ಸಹ ನಾವು ಚೆನ್ನಾಗಿ ನೆನಪಿಸಿ ಕೊಳ್ಳಬಹುದು. – ಲೂಕ 22:3; ಯೋಹಾನ 13:27.

ನಮ್ಮ ಕರ್ತನು ಬಿದ್ದುಹೋದ ಕೆಲವು ಕೀಳುಮಟ್ಟದ ದೇವದೂತರನ್ನು ಎದುರಿಸಿದ್ದನೆಂದು ಈ ಆಧ್ಯಯನವು ನಮಗೆ ತಿಳಿಸುತ್ತದೆ; ಸೈತಾನನು ಆ "ದೆವ್ವಗಳ ಒಡೆಯನು" ಎಂಬುದನ್ನ ನಾವು ಓದುತ್ತೇವೆ. ಇವುಗಳು ಮಾನವ ದೇಹಗಳನ್ನು (ಸಾವಿನಲ್ಲಿ) ತ್ಯಜಿಸಿದ ಆತ್ಮಗಳೆಂದು ಸತ್ಯವೇದವು ನಿರಾಕರಿಸಿರುವುದನ್ನೂ ಮತ್ತು ಅವುಗಳು (ತಮ್ಮ ದೊರೆತನವನ್ನು ಕಾಪಾಡಿಕೊಳ್ಳದೆ) ಬಿದ್ದುಹೋದ ದೇವದೂತರೆಂದು ಅತಿ ವಿಶೇಷವಾಗಿ ಬೋಧಿಸುವುದೆಂಬುದನ್ನೂ ನಾವು ಮರೆಯಬಾರದು. 2 ಪೇತ್ರ 2:4; ಯೂದ 6.

ಈ ಬಿದ್ದುಹೋದ ದೇವದೂತರುಗಳು ಒಂದು ಕಾಲದಲ್ಲಿ ಪರಿಶುದ್ಧರಾಗಿದ್ದರೆಂದೂ ಆದರೆ ಜಲಪ್ರಳಯಕ್ಕೆ ಮೊದಲು ಅವರು ಮಾನವರೊಂದಿಗೆ (ಶಾರೀರಿಕವಾಗಿ) ಸಹವಾಸಕ್ಕೆ ಬಂದು ಪಾಪಮಾಡಿ ಮಲಿನರಾದರೆಂದು ಸತ್ಯವೇದವು ಹೇಳುತ್ತದೆ. ಜಲಪ್ರಳಯದ ಈಚೆಗೆ ಪರಿಶುದ್ಧ ದೇವದೂತರ ಸಹವಾಸದಿಂದ ಮತ್ತು ಮನುಷ್ಯರ ದೇಹಧರಿಸುವ ಸ್ವಾತಂತ್ರ್ಯದಿಂದ ಅವರನ್ನು ತಪ್ಪಿಸಿದಾಗ್ಯೂ ಅವರು ಈ ನಿರ್ಬಂಧವನ್ನು ಮುರಿದುಹಾಕಲು ಯುತ್ನಿಸುತ್ತಿರುವರು. ಮಾನವದೇಹ ಧರಿಸುವದಕ್ಕೆ ಬಿಡಲ್ಪಡದಿದ್ದರೂ ಅವುಗಳು ಮಾನವ ದೇಹಗಳನ್ನು ತಮ್ಮ ಸಾಧನಗಳಾಗಿ ಮಾಡಿಕೊಂಡು ಮನುಷ್ಯರ ಮನಸ್ಸುಗಳನ್ನು ನಿಯಂತ್ರಿಸಿಕೊಂಡು ಅವುಗಳನ್ನು ಆವರಿಸಿ ಅವರನ್ನು ವಶಪಡಿಸಿ ಕೊಂಡು ತಮ್ಮ ಸಾಮರ್ಥ್ಯಾನುಸಾರ ಮನುಷ್ಯರ ಇಚ್ಛಾಶಕ್ತಿಯಲ್ಲಿ –ರುವ ನಿರ್ಬಂಧನ್ನು ಭಗ್ನಗೊಳಿಸಲು ಪ್ರಯತ್ನಮಾಡುವದರ ಮೂಲಕ ತಮ್ಮ ಈ ಪ್ರತಿಬಂಧನೆಯನ್ನು ಮುರಿಯತ್ತಾ ಬಂದಿರುವರು. ಬೇತಾಳಿಕರು ಮಾಂತ್ರಿಕರು ಮಾಟಗಾರರು ಮಾಧ್ಯಮಿಗಳು ಅಥವಾ ಸತ್ತವರ್ನು ಪ್ರತಿನಿಧಿಸಿ ಅವರೊಡನೆ ಸಂಪರ್ಕಿಸಿ ಮಾತನಾಡುವೆವೆಂದು ಹೇಳಿಕೊಳ್ಳುವ ಯಾರೊಡ ನೆಯೂ ನಾವು ಯಾವ ವಿಧವಾಗಿಯೂ ಸಂಬಂಧವನ್ನು ಇಟ್ಟುಕೊಳ್ಳದಂತೆ ಸತ್ಯವೇದವು ನಮ್ಮನ್ನು ಸತತವಾಗಿ (ಎಚ್ಚರಿಸಿ) ಕಾಯುತ್ತಾಬಂದಿರುವುದು. "ಸತ್ತವರಿಗೆ ಯಾವ ತಿಳುವಳಿಕೆಯೂ ಇಲ್ಲ" ಎಂದೂ ಅಲ್ಲದೆ ಅವರಿಗಿರುವ ಒಂದೇ ಒಂದು ನಿರೀಕ್ಷೆಯೆಂದರೆ ಅದು ಪುನರುತ್ಥಾನವೆಂದೂ ಹಾಗೂ ಇವು (ದೆವ್ವಗಳು) ಸತ್ತುಹೋದ ಮನುಷ್ಯರ ಆತ್ಮವಲ್ಲವೆಂದೂ ಆದರೆ ಆ ಬಿದ್ದುಹೋದ ದೇವದೂತರು ನಮ್ಮನ್ನು ಮತ್ತು ನಮ್ಮ ಮೂಲಕವಾಗಿ ಇತರರನ್ನು ಸಂಪರ್ಕಿಸಲು ಪರಿಶ್ರಮಿಸುತ್ತಿ ರುವುದಾಗಿ ಸತ್ಯವೇದವು ನಮಗೆ ಖಚಿತ ಪಡಿಸಿರುವುದು. ನಾವು ತಿಳಿದೂ ಈ ನಿಂದನಾಸ್ಪದವಾದ ಆತ್ಮಗಳ ಮಾಧ್ಯಮಿಗಳಾಗಿ ಆ ಬಿದ್ದುಹೋದ ದೇವದೂತರೊಡನೆ ರಹಸ್ಯವಾದ ಒಪ್ಪಂದ ಮಾಡಿಕೊಂಡಿರುವವರಲ್ಲ. ಇತರರಂತೆ ಇವರೂ ಮೋಸ ಹೋಗಿರುವರೆಂಬುದು ನಮ್ಮ ನಂಬಿಕೆ. ನಾವು ಈ ಅನೇಕ ಮಾಧ್ಯಮಿಗಳಿಗೆ ತಿಳುವಳಿಕೆ ನೀಡಿ ಅವರ ಈ ಭ್ರಾಂತಿಯಿಂದ ಹೊರತರಲು ಶಕ್ತರಾಗುವಂತೆ ಸತ್ಯವೇದ ಒಂದೇ ನಿಜವಾಗಿಯೂ ಈ ವಿಷಯದ ಮೇಲೆ ಬೆಳಕು ಚೆಲ್ಲಿರುವುದು.

ವಚನ 28ರಲ್ಲಿನ ಈ ಇಬ್ಬರು ಬುದ್ಧಿಭ್ರಮಣರಾಗಿದ್ದ ಕಾರಣ ಅವರನ್ನು ಹಲವು ದೆವ್ವಗಳು ಹಿಡಿದುಕೊಂಡಿದ್ದು ವಿಧವಿಧವಾದ ರೀತಿಯುಲ್ಲಿ ಅವರನ್ನು ನಿಯಂತ್ರಿಸಲು ಪ್ರಯತ್ನಿಸುತ್ತಿದ್ದುದ್ದರಿಂದಾಗಿತ್ತು. ಬುದ್ಧಿಮಾಂಧ್ಯರ ಆಶ್ರಮದಲ್ಲಿ ರುವ ಅರ್ಧಕ್ಕಿಂತಲೂ ಹೆಚ್ಚು ಮಂದಿ ಈ ದೆವ್ವ ಪೀಡನೆಯೆಂಬ ಘೋರವಾದ ಕಷ್ಟದಿಂದ ನರಳುತ್ತಿರುವ ಸಂಭವವಿರುವುದೆಂದು ಬುದ್ಧಿವಂತರಾದ ವೈದ್ಯರುಗಳು ತಿಳಿದವರಾಗಿರುವರು.

ಪೀಡನೆಗೊಳಗಾದ ಅವರನ್ನು ನಮ್ಮ ಕರ್ತನು ಹೇಗೆ ಪ್ರಶ್ನಿಸಿದನೆಂದೂ ಹಾಗೂ ಆ ದುರಾತ್ಮಗಳು ಹೇಗೆ ಉತ್ತರಿಸಿ ನಾವು ಒಂದು ದಂಡು ಅಂದರೆ ದೆವ್ವಗಳ ಗುಂಪು ಎಂದು ಹೇಳಿದವೆಂದು ಇನ್ನೊಂದು ವಿವರಣೆಯು ಹೇಳುತ್ತದೆ. ಆ ಮನುಷ್ಯರಲ್ಲಿ

ಉಳಿದುಕೊಳ್ಳಬಾರದೆಂದಿದ್ದರೆ ತಾವು ಕನಿಷ್ಠ ಪಕ್ಷ ಅಲ್ಲಿ ಗುಂಪಿನಲ್ಲಿದ್ದ ಹಂದಿಗಳಲ್ಲಿ ಸೇರಿಕೊಳ್ಳುವಂತೆ ಅನುಮತಿಯಾಗ-ಬೇಕೆಂದು ಕರ್ತನನ್ನು ಬೇಡಿಕೊಂಡವು. ಅವುಗಳಿಗೆ ಅನುಮತಿ ನೀಡಲಾಯಿತು. ಪರಿಣಾಮವೇನಾಯಿತೆಂದರೆ ಆ ಹಂದಿಗಳ ಗುಂಪಿನಲ್ಲಿ ನೂಕುನುಗ್ಗಲು ಉಂಟಾಗಿ ಬೆಟ್ಟದ ಮೇಲಿನಿಂದ ರಭಸವಾಗಿ ಇಳಿದು ಬಂದು ಸಮುದ್ರದಲ್ಲಿ ಬಿದ್ದು ಮುಳುಗಿಹೋದವು. ಹಂದಿಗಳ ವರ್ತನೆಯನ್ನು ಗಮನಿಸಿದಾಗ ಅಲ್ಲಿ ಪ್ರತಿಯೊಂದು ಹಂದಿಯೊಳಗೂ ಸೇರಿಕೊಳ್ಳುವುದಕ್ಕೆ ಸಾಕಷ್ಟು ಸಂಖ್ಯೆಯ ದೆವ್ವಗಳು ಇದ್ದವೆಂದು ತೋರುತ್ತದೆ. ಯಾಕೆಂದರೆ ಕುರಿಗಳ ವಿಷಯದಲ್ಲಿರದಂತೆ, ತನ್ನ ಗುಂಪಿನಲ್ಲಿರುವ ಜೊತೆ ಹಂದಿಯು ಬಹು ವಿಶೇಷವಾಗಿ ಉದ್ರೇಕಗೊಂಡರೂ ಆ ಗುಂಪಿನ ಇನ್ನೊಂದು ಹಂದಿಯು ನಿಶ್ಯಬ್ಧವಾಗಿ ನಿಂತುಕೊಂಡಿರುವದು. ಪ್ರತಿಯೊಂದು ಹಂದಿಯೂ ಸ್ವತಂತ್ರವಾಗಿ ನಡೆದುಕೊಳ್ಳುವದು. ದೆವ್ವಗಳ ಸಂಖ್ಯೆಯು ನಿಜವಾಗಿಯೂ ಒಂದು ದಂಡಿನಷ್ಟಿತ್ತು. ಸಾಧಾರಣವಾಗಿರುವ ರೀತಿಯಲ್ಲಿ ಮಾನವರ ಇಚ್ಛಾಶಕ್ತಿಯಲ್ಲಿರುವ ನಿರ್ಬಂಧನ್ನು ತೆಗೆದುಹಾಕಲು ಅಸಮರ್ಥರಾದ ಕಾರಣ ಅವುಗಳು ತಮ್ಮ ಇಚ್ಛಾಶಕ್ತಿಯಲ್ಲಿರುವ ನಿರ್ಬಂಧಗಳನ್ನು ತಾವೇ ಒಡೆದುಹಾಕಿ ಕೊಂಡಿರುವ ನಿಸ್ಸಹಾಯಕರಾದ ಮನಷ್ಯರನ್ನು ಗುಂಪುಗುಂಪಾಗಿ ಬಂದು ಅವರನ್ನು ಹಿಡಿದು ಆವರಿಸಿಕೊಳ್ಳುವವು.

ಸತ್ಯವೇದದ ಅನುಸಾರವಾಗಿ, ಆತ್ಮಿಕವಾದ ಎಂಬುದು ಮತ್ತು ಎಲ್ಲಾ ಧಾರ್ಮಿಕ ಗುಪ್ತಾಚಾರವೆಂಬ ವಿಷಯಗಳಿಗೆ ಸಂಬಂಧಿಸಿದ ಸಂಗತಿಗಳೆಲ್ಲವೂ ವಿರೋಧಿಯಾದ ಸೈತಾನನವು ಗಳೆಂದು ನಾವು ಇವುಗಳ ವಿರುದ್ಧವಾಗಿ ಜನರಿಗೆ ಸತತವಾಗಿ ಎಚ್ಚರಿಕೆ ನೀಡುತ್ತಿರುವೆವು. ವಶೀಕರಣವಿದ್ಯೆಯೆಂಬದು ಮತ್ತು ಮಾನವರ ಇಚ್ಛಾಶಕ್ತಿಯನ್ನು ತೆಗೆದುಹಾಕುವಂಥ ಸಂಗತಿಗಳೆಲ್ಲವೂ ಹಾನಿಕರವಾದುದೆಂದೂ ಅಲ್ಲದೆ ಇವುಗಳ ಮೂಲಕವಾಗಿ ಈ ಬಿದ್ದುಹೋದ ದೇವದೂತರುಗಳು ವ್ಯಕ್ತಿಗಳ ಮನಸ್ಸಿನಲ್ಲಿ ಹಾಗು ಅವರ ಜೀವಿತದ ಸಂಗತಿಗಳಲ್ಲಿ ಆಕ್ರಮಣ ಮಾಡಲು ಅಧಿಕವಾದ ಅವಕಾಶ ಉಂಟಾಗಲು ಬಿಟ್ಟುಕೊಟ್ಟಂತಾ ಗುತ್ತದ್ದೆಂದೂ ಸಹ ನಾವು ಎಚ್ಚರಿಸುವವರಾಗಿದ್ದೇವೆ. ಇದಕ್ಕೆ ಒಳಗಾದಲ್ಲಿ ಅವು ಅವರ ಮನಸ್ಸನ್ನು ಆವರಿಸಿಕೊಂಡು ಮನಸ್ಸಿನ ಸ್ವಸ್ಥತೆಗೆ ಅಪಾಯ ಉಂಟು ಮಾಡುತ್ತವೆ.

ಈ ಅದ್ಭುತ ಕಾರ್ಯದಿಂದಾದ ಪರಿಣಾಮವು ಸ್ವಾರ್ಥಭಾವದ ಬಲವನ್ನು ತೋರಿಸಿಕೊಡುವದು. ಜನರು ಗುಂಪಾಗಿ ಈ ಅದ್ಭುತ ಕಾರ್ಯವನ್ನು ಅಂದರೆ ಹುಚ್ಚರಾಗಿದ್ದ ಆ ಇಬ್ಬರು ಪುರುಷರು ಸ್ವಸ್ಥ ಮನೋಸ್ಥಿಯಲ್ಲಿರುವುದನ್ನು ನೋಡಲು ಬಂದಿದ್ದರು. “ಆದರೆ” ಅವರು ಹೇಳಿದ್ದು “ಇಲ್ಲಿ ಎಂಥಾ ನಷ್ಟ ಉಂಟಾಗಿರುವುದು! ನೋಡಿ, ಹಂದಿಗಳು ಸತ್ತು ಸಮುದ್ರದಲ್ಲಿ ತೇಲುತ್ತಿರುವುದು!” ಆಗ ಅವರು ಕರ್ತನನ್ನು ತಮ್ಮ ಸೀಮೆಯನ್ನು ಬಿಟ್ಟುಹೋಗಲು ಬೇಡಿಕೊಂಡರು, ಆತನು ಪ್ರಾಮಾಣಿಕವಾಗಿ ಹಾಗೆಯೇ ಮಾಡಿದನು. ಸ್ವಾರ್ಥಭಾವದ ಇದೇ ನೀತಿಯನ್ನು ಎಲ್ಲಾ ಕಡೆಗಳಲ್ಲೂ ನಾವು ಈ ದಿನವೂ ಗಮನಿಸಬಹುದು. ಜನಸಮೂಹವು ವಿಶೇಷವಾಗಿ ತಮ್ಮ ಲೌಕೀಕಾಭಿಲಾಷೆಗಳಿಂದ ಪ್ರೇರೇಪಿಸಲ್ಪಡುತ್ತಿರುವರು. ಆದರೆ ಇಲ್ಲಿ ಹೋಲಿಸಿ ನೋಡಿದಾಗ ದೇವರಾಶೀರ್ವಾದಗಳು ತಮ್ಮಿಂದ ದಾಟಿಹೋಗುತ್ತಿರುವುದನ್ನು ಅವರು ಗಮನಿಸಲಾರರು. ಗಲಿಲಾಯದ ಈ ಪ್ರವಾದಿಯ ಶಿಷ್ಯರಾಗಿರುವ ನಾವು ಹಲವರು ಈ ಸಂಗತಿಗಳನ್ನು ಭಿನ್ನವಾದ ದೃಷ್ಠಿಯಿಂದ ನೋಡುವವರಾಗಿ, ಆತನು ಮಾನವರನ್ನು ವಿಮೋಚಿಸ ಸಲುವಾಗಿ ಮಾಡುವ ಭವ್ಯವಾದ ಕಾರ್ಯಗಳ ವಿಷಯಗಳಿಗೆ ನಮ್ಮ ಹೃದಯಗಳನ್ನು ಹೊಂದಿಸಿಕೊಂಡವರಾಗಿ ಮತ್ತು ಯೆಹೂದ್ಯರ ನಿಯಮಗಳು ಹಂದಿಗಳನ್ನು ನಿಷೇಧಿಸಿರು-ವಂತೆ ದೈವಚಿತ್ತಕ್ಕೆ ಹೇಸಿಗೆ ಉಂಟು ಮಾಡುವಂತದ್ದೆಲ್ಲವೂ ನಾಶವಾಗುವುದನ್ನು ಬಯಸುವವರಾಗೋಣ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31 | ಬಹುಶಃ ಕಪೆರ್ನೌಮ್ | ಯಾಯೀರನ ಮಗಳನ್ನು ಎಬ್ಬಿಸಿದುದು; ಹೆಂಗಸು ಗುಣವಾದುದು | 9:18–26 | 5:21–43 | 8:40–56 | –– |
| | ಕಪೆರ್ನೌಮ್(?) | ಇಬ್ಬರು ಕುರುಡರನ್ನು ಸ್ವಸ್ಥಪಡಿಸಿದುದು ಮತ್ತು ದೆವ್ವಹಿಡಿದು ಮೂಕನಾಗಿದ್ದವನನ್ನು ಸ್ವಸ್ಥಪಡಿಸಿದ್ದು | 9:27–34 | –– | –– | –– |

## ಮತ್ತಾಯ 9:18–34

ಹೀಗೆ ಆತನು ಅವರೊಂದಿಗೆ ಮಾತಾಡುತ್ತಿರುವಾಗ ಒಬ್ಬ ಅಧಿಕಾರಿ ಬಂದು ಆತನಿಗೆ ಅಡ್ಡಬಿದ್ದು–ನನ್ನ ಮಗಳು ಈಗಲೇ ತೀರಿಹೋದಳು; ಆದಾಗ್ಯೂ ನೀನು ಬಂದು ಆಕೆಯ ಮೇಲೆ ಕೈ ಇಟ್ಟರೆ ಬದುಕುವಳು ಎಂದು ಬೇಡಿಕೊಳ್ಳಲು ಯೇಸು ಎದ್ದು ತನ್ನ ಶಿಷ್ಯರನ್ನು ಕರಕೊಂಡು ಅವನ ಹಿಂದೆ ಹೋದನು.

ಅಷ್ಟರಲ್ಲಿ ಹನ್ನೆರಡು ವರುಷದಿಂದ ರಕ್ತಕುಸುಮ ರೋಗವಿದ್ದ ಒಬ್ಬ ಹೆಂಗಸು–ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು ಎಂದು ಮನಸ್ಸಿನಲ್ಲಿ ಅಂದುಕೊಂಡು ಹಿಂದಿನಿಂದ ಬಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು. ಆಗ ಯೇಸು ಹಿಂತಿರುಗಿ ಆಕೆಯನ್ನು ನೋಡಿ–ಮಗಳೇ, ಧೈರ್ಯವಾಗಿರು; ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು ಅಂದನು. ಆ ಕ್ಷಣವೇ ಆ ಹೆಂಗಸು ಸ್ವಸ್ಥವಾದಳು.

ಆ ಮೇಲೆ ಯೇಸು ಆ ಅಧಿಕಾರಿಯ ಮನೆಗೆ ಬಂದು ವಾದ್ಯಗಾರರನ್ನು ಗದ್ದಲಮಾಡುವ ಜನರ ಗುಂಪನ್ನೂ ಕಂಡು–

ಹೊರಗೆ ಹೋಗಿರಿ; ಹುಡುಗಿ ಸತ್ತಿಲ್ಲ, ನಿದ್ದೆಮಾಡುತ್ತಾಳೆ ಅನ್ನಲು ಅವರು ಆತನನ್ನು ಹಾಸ್ಯಮಾಡಿದರು. ಜನರನ್ನು ಹೊರಕ್ಕೆ ಕಳುಹಿಸಿದ ಮೇಲೆ ಆತನು ಒಳಕ್ಕೆ ಹೋಗಿ ಆಕೆಯ ಕೈ ಹಿಡಿಯಲು ಆಕೆ ಎದ್ದಳು. ಈ ಸುದ್ದಿ ಆ ದೇಶದೊಳಗೆಲ್ಲಾ ಹಬ್ಬಿತು.

ಯೇಸು ಅಲ್ಲಿಂದ ಹೋಗುವಾಗ ಇಬ್ಬರು ಕುರುಡರು–ದಾವೀದ ಕುಮಾರನೇ, ನಮ್ಮನ್ನು ಕರುಣಿಸು ಎಂದು ಕೂಗುತ್ತಾ ಆತನ ಹಿಂದೆ ಹೋದರು. ಆತನು ಮನೆಗೆ ಬಂದಾಗ ಆ ಕುರುಡರು ಆತನ ಬಳಿಗೆ ಬಂದರು. ಯೇಸು ಅವರನ್ನು–ನಾನು ಇದನ್ನು ಮಾಡಬಲ್ಲೆನೆಂಬುದನ್ನು ನಂಬುತ್ತೀರೋ ಎಂದು ಕೇಳಿದ್ದಕ್ಕೆ ಅವರು–ಹೌದು, ಸ್ವಾಮೀ, ನಂಬುತ್ತೇವೆ ಅಂದರು. ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ–ನೀವು ನಂಬಿದಂತೆ ನಿಮಗೆ ಆಗಲಿ ಅಂದನು. ಆಗ ಅವರಿಗೆ ಕಣ್ಣು ಬಂದವು. ಮತ್ತು ಯೇಸು ಅವರಿಗೆ–ಇದು ಯಾರಿಗೂ ತಿಳಿಯಬಾರದು ನೋಡಿರಿ ಎಂದು ಖಂಡಿತವಾಗಿ ಹೇಳಿದನು. ಆದರೆ ಅವರು ಹೊರಟುಹೋಗಿ ಆ ದೇಶದೊಳಗೆಲ್ಲಾ ಆತನ ಸುದ್ದಿಯನ್ನು ಹಬ್ಬಿಸಿದರು.

ಅವರು ಹೊರಟುಹೋಗುತ್ತಿರುವಾಗ ದೆವ್ವಹಿಡಿದ ಒಬ್ಬ ಮೂಕನನ್ನು ಆತನ ಬಳಿಗೆ ಕರತಂದರು. ಆತನು ದೆವ್ವಬಿಡಿಸಿದ ಮೇಲೆ ಆ ಮೂಕನು ಮಾತಾಡುವವನಾದನು. ಅದಕ್ಕೆ ಆ ಜನರು–ಇಸ್ರಾಯೇಲ್ ಜನರಲ್ಲಿ ಇಂಥಾ ಕಾರ್ಯವನ್ನು ಇದುವರೆಗೆ ಯಾರೂ ನೋಡಲಿಲ್ಲವೆಂದು ಬೆರಗಾದರು. ಆದರೆ ಫರಿಸಾಯರು–ಇವನು ದೆವ್ವಗಳ ಒಡೆಯನ ಸಹಾಯದಿಂದಲೇ ದೆವ್ವಗಳನ್ನು ಬಿಡಿಸುತ್ತಾನೆ ಅಂದರು.

## ಮಾರ್ಕ 5:21–43

ಯೇಸು ತಿರಿಗಿ ದೋಣಿಯಲ್ಲಿ ಈಚೇದಡಕ್ಕೆ ಬಂದಾಗ ಜನರು ಬಹು ದೊಡ್ಡ ಗುಂಪಾಗಿ ಆತನ ಬಳಿಗೆ ಬಂದರು; ಆತನು ಸಮುದ್ರದ ದಡದಲ್ಲಿದ್ದನು. ಆಗ ಸಭಾಮಂದಿರದ ಅಧಿಕಾರಿಗಳಲ್ಲಿ ಒಬ್ಬನಾದ ಯಾಯೀರನೆಂಬವನು ಬಂದು ಯೇಸುವನ್ನು ಕಂಡು ಆತನ ಪಾದಗಳಿಗೆ ಬಿದ್ದು–ನನ್ನ ಚಿಕ್ಕ ಮಗಳು ಈಗ ಸಾಯುತ್ತಾಳೆ; ಆಕೆಯು ವಾಸಿಯಾಗಿ ಬದುಕಿಕೊಳ್ಳುವಂತೆ ನೀನು ಆಕೆಯ ಮೇಲೆ ಕೈಯಿಡಬೇಕು ಎಂದು ಆತನನ್ನು ಬಹಳವಾಗಿ ಬೇಡಿಕೊಂಡನು. ಆತನು ಅವನ ಸಂಗಡ ಹೋದನು; ಮತ್ತು ಬಹು ಜನರು ಆತನನ್ನು ನೂಕಿಕೊಂಡು ಹಿಂದೆ ಹೋದರು.

ಆಗ ಹನ್ನೆರಡು ವರುಷದಿಂದ ರಕ್ತಕುಸುಮರೋಗವಿದ್ದ ಒಬ್ಬ ಹೆಂಗಸು ಬಂದಳು. ಆಕೆಯು ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ ಕೈಯಲ್ಲಿದ್ದದ್ದನ್ನೆಲ್ಲಾ ಕಳಕೊಂಡರೂ ರೋಗವು ಹೆಚ್ಚುತ್ತಾ ಬಂದದ್ದೇ ಹೊರತು ಮತ್ತೇನೂ ಪ್ರಯೋಜನವನ್ನೂ ಹೊಂದಿರಲಿಲ್ಲ. ಆ ಹೆಂಗಸು ಯೇಸುವಿನ ಸಮಾಚಾರವನ್ನ ಕೇಳಿ–ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು, ನೆಟ್ಟಗಾಗುವೆನು ಎಂದು ಆಲೋಚಿಸಿ ಗುಂಪಿನಲ್ಲಿ ಹಿಂದಿನಿಂದ ಬಂದು ಆತನ ಉಡುಪನ್ನು ಮುಟ್ಟಿದಳು. ಮುಟ್ಟಿದ ಕೂಡಲೇ ಆಕೆಗೆ ರಕ್ತಹರಿಯುವುದು ನಿಂತುಹೋದದರಿಂದ ಆಕೆಯು–ನನ್ನನ್ನು ಕಾಡಿದ ರೋಗವು ಹೋಗಿ ನನಗೆ ಗುಣವಾಯಿತು ಎಂದು ತನ್ನೊಳಗೆ ತಿಳುಕೊಂಡಳು. ಆ ಕ್ಷಣವೇ ಯೇಸು ತನ್ನಿಂದ ಶಕ್ತಿಯು ಹೊರಟಿತೆಂದು ತನ್ನಲ್ಲಿ ತಿಳುಕೊಂಡು ಗುಂಪಿನಲ್ಲಿ ಹಿಂತಿರುಗಿ–ನನ್ನ ಉಡುಪನ್ನು ಯಾರು ಮುಟ್ಟಿದರು? ಎಂದು ಕೇಳಲು ಆತನ ಶಿಷ್ಯರು ಆತನಿಗೆ–ಜನರು ನಿನ್ನನ್ನು ನೂಕುವದನ್ನು ಕಂಡೂ ಕಂಡು ನನ್ನನ್ನು ಯಾರು ಮುಟ್ಟಿದರೆಂದು ಕೇಳುತ್ತೀಯಲ್ಲಾ ಎಂದು ಹೇಳಿದರು; ಆದರೆ ಆತನು ಈ ಕೆಲಸ ಮಾಡಿದವಳನ್ನು ಕಾಣಬೇಕೆಂದು ಸುತ್ತಲು ನೋಡುತ್ತಾ ಇರಲಾಗಿ ಆ ಹೆಂಗಸು ತನಗಾದದ್ದನ್ನು ತಿಳುಕೊಂಡು ಅಂಜಿ ನಡಗುತ್ತಾ ಬಂದು ಆತನಿಗೆ ಅಡ್ಡಬಿದ್ದು ಇದ್ದ ಸಂಗತಿಯನ್ನೆಲ್ಲಾ ಹೇಳಿದಳು. ಆತನು ಆಕೆಗೆ–ಮಗಳೇ, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು; ನಿನ್ನನ್ನು ಕಾಡಿದ ರೋಗವು ಹೋಗಿ ನಿನಗೆ ಗುಣವಾಗಲಿ ಎಂದು ಹೇಳಿದಳು.

ಆತನು ಇನ್ನೂ ಮಾತಾಡುತ್ತಿರುವಲ್ಲಿ ಸಭಾಮಂದಿರದ ಅಧಿಕಾರಿಯ ಕಡೆಯವರು ಬಂದು–ನಿನ್ನ ಮಗಳು ತೀರಿಹೋದಳು; ಇನ್ನೇಕೆ ಗುರುವಿಗೆ ತೊಂದರೆ ಕೊಡುವದು? ಅಂದರು. ಅವರು ಆಡಿದ ಮಾತನ್ನು ಯೇಸು ಲಕ್ಷ್ಯಮಾಡದೆ ಸಭಾಮಂದಿರದ ಅಧಿಕಾರಿಗೆ–ಅಂಜಬೇಡ, ನಂಬಿಕೆ ಮಾತ್ರ ಇರಲಿ ಎಂದು ಹೇಳಿದನು. ಮತ್ತು ಆತನು ಪೇತ್ರ, ಯಾಕೋಬ, ಯಾಕೋಬನ ತಮ್ಮನಾದ ಯೋಹಾನ ಇವರನ್ನೇ ಹೊರತು ಬೇರೆ ಯಾರನ್ನೂ ತನ್ನೊಂದಿಗೆ ಬರಗೊಡಲಿಲ್ಲ. ಅವರು ಆ ಸಭಾಮಂದಿರದ ಅಧಿಕಾರಿಯ ಮನೆಗೆ ಬಂದಾಗ ಆತನು ಗದ್ದಲವನ್ನೂ ಕೆಲವರು ಬಹಳವಾಗಿ ಅಳುವದನ್ನೂ ಗೋಳಾಡುವದನ್ನೂ ಕಂಡನು. ಆತನು ಒಳಕ್ಕೆ ಹೋಗಿ–ನೀವು ಗದ್ದಲ ಮಾಡುವದೂ ಅಳುವದೂ ಯಾಕೆ? ಹುಡುಗಿ ಸತ್ತಿಲ್ಲ; ನಿದ್ದೆಮಾಡುತ್ತಾಳೆ ಅನ್ನಲು ಅವರು ಆತನನ್ನು ಹಾಸ್ಯಮಾಡಿದರು. ಆದರೆ ಆತನು ಎಲ್ಲರನ್ನು ಹೊರಕ್ಕೆ ಕಳುಹಿಸಿ ಆ ಹುಡುಗಿಯ ತಂದೆತಾಯಿಗಳನ್ನೂ ತನ್ನೊಂದಿಗಿದ್ದವರನ್ನೂ ಹುಡುಗಿಯಿದ್ದಲ್ಲಿಗೆ ಕರಕೊಂಡು ಹೋಗಿ ಅವಳ ಕೈಹಿಡಿದು–ತಲಿಥಾ ಕೂಮ್ ಅಂದನು. ಈ ಮಾತಿಗೆ–ಅಮ್ಮಣ್ಣೀ, ಏಳನ್ನುತ್ತೇನೆ ಎಂದರ್ಥ. ಕೂಡಲೆ ಆ ಹುಡುಗಿ ಎದ್ದು ನಡೆದಾಡಿದಳು; ಆಕೆಯು ಹನ್ನೆರಡು ವರುಷ ವಯಸ್ಸಿನವಳು. ಅವರು ಬಹಳ ಆಶ್ಚರ್ಯದಿಂದ ಬೆರಗಾದರು. ಆಮೇಲೆ ಆತನು ಅವರಿಗೆ–ಇದು ಯಾರಿಗೂ ತಿಳಿಯಬಾರದೆಂದು ಬಹು ಖಂಡಿತವಾಗಿ ಹೇಳಿ ಆ ಹುಡುಗಿಗೆ ಊಟಮಾಡಿಸಿರಿ ಅಂದನು.

## ಲೂಕ 8:40–56

ಯೇಸು ಹಿಂತಿರುಗಿ ಬಂದಾಗ ಜನರೆಲ್ಲರೂ ಆತನನ್ನು ಕಾದುಕೊಂಡಿದ್ದು ಸಂತೋಷದಿಂದ ಸ್ವೀಕರಿಸಿದರು. ಆಗ ಸಭಾಮಂದಿರದ ಅಧಿಕಾರಿಯಾದ ಯಾಯೀರನೆಂಬ ಒಬ್ಬ ಮನುಷ್ಯನು ಬಂದು ಯೇಸುವಿನ ಪಾದಗಳಿಗೆ ಬಿದ್ದನು. ಹೆಚ್ಚುಕಡಿಮೆ ಹನ್ನೆರಡು ವರುಷದವಳಾದ ಅವನ ಒಬ್ಬಳೇ ಮಗಳು ಸಾಯುವವಳಾಗಿದ್ದ ಕಾರಣ ಆತನನ್ನು ತನ್ನ ಮನೆಗೆ ಬರಬೇಕೆಂದು ಬೇಡಿಕೊಂಡನು. ಆತನು ಹೋಗುತ್ತಿರುವಲ್ಲಿ ಜನರು ಗುಂಪುಗುಂಪಾಗಿ ಆತನನ್ನು ಇರಿಕಿಸುತ್ತಿದ್ದರು.

ಆಗ ಹನ್ನೆರಡು ವರುಷದಿಂದ ರಕ್ತಕುಸುಮರೋಗವಿದ್ದ ಒಬ್ಬ ಹೆಂಗಸು ಬಂದಳು. ಆಕೆಯು ಒಬ್ಬರಿಂದಲೂ ಗುಣಹೊಂದಲಾರದೆ ಇದ್ದಳು. ಆಕೆಯು ಹಿಂದಿನಿಂದ ಬಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು; ಮುಟ್ಟುತ್ತಲೇ ಆಕೆಗೆ ರಕ್ತಹರಿಯುವುದು ನಿಂತಿತು. ಆಗ ಯೇಸು–ನನ್ನನ್ನು ಮುಟ್ಟಿದವರಾರು ಎಂದು ಕೇಳಿದನು. ಎಲ್ಲರು–ನಾನಲ್ಲ ನಾನಲ್ಲ ಅನ್ನಲು ಪೇತ್ರನು–ಗುರುವೇ ಎಷ್ಟೋ ಜನರು ನಿನ್ನನ್ನು ಒತ್ತೊತ್ತಿ ಮೈಮೇಲೆ ಬೀಳುತ್ತಿದ್ದಾರಲ್ಲಾ ಅಂದನು. ಆದರೆ ಯೇಸು–ಯಾರೋ ಒಬ್ಬರು ನನ್ನನ್ನು ಮುಟ್ಟಿದರು; ನನ್ನಿಂದ ಶಕ್ತಿಯು ಹೊರಟಿತ್ತೆಂಬದು ನನಗೆ ಗೊತ್ತಾಯಿತು ಅಂದಾಗ ಆ ಹೆಂಗಸು ತಾನು ಮರೆಯಾಗಿಲ್ಲವೆಂತ ತಿಳಿದು ನಡುಗುತ್ತಾ ಬಂದು ಆತನಿಗೆ ಅಡ್ಡಬಿದ್ದು ತಾನು ಇಂಥ ಕಾರಣದಿಂದ ಈತನನ್ನು ಮುಟ್ಟಿದನೆಂತಲೂ ಮುಟ್ಟಿದ ಕೂಡಲೆ ತನಗೆ ವಾಸಿಯಾಯಿ–ತೆಂತಲೂ ಎಲ್ಲಾ ಜನರ ಮುಂದೆ ತಿಳಿಸಿದಳು. ಆತನು ಆಕೆಗೆ–ಮಗಳೇ, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು ಎಂದು ಹೇಳಿದನು.

ಆತನು ಇನ್ನೂ ಮಾತಾಡುತ್ತಿರುವಲ್ಲಿ ಸಭಾಮಂದಿರದ ಅಧಿಕಾರಿಯ ಕಡೆಯವನೊಬ್ಬನು ಬಂದು–ನಿನ್ನ ಮಗಳು ಸತ್ತಳು; ಗುರುವಿಗೆ ತೊಂದರೆ ಕೊಡಬೇಡ ಅಂದನು. ಆದರೆ ಯೇಸು ಅದನ್ನು ಕೇಳಿ ಅವನಿಗೆ–ಅಂಜಬೇಡ, ನಂಬಿಕೆ ಮಾತ್ರ ಇರಲಿ, ಆಕೆ ಬದುಕುವಳು ಎಂದು ಉತ್ತರಕೊಟ್ಟನು. ತರುವಾಯ ಆತನು ಆ ಮನೆಗೆ ಹೋಗಿ ಪೇತ್ರನು ಯೋಹಾನನು ಯಾಕೋಬನು ಆ ಹುಡುಗಿಯ ತಂದೆತಾಯಿಗಳು ಇಷ್ಟು ಮಂದಿಯನ್ನೇ ಹೊರತು ಬೇರೆ ಯಾರನ್ನೂ ತನ್ನ ಸಂಗಡ ಒಳಕ್ಕೆ ಬರಗೊಡಲಿಲ್ಲ. ಎಲ್ಲರೂ ಅಳುತ್ತಾ ಆಕೆಗೋಸ್ಕರ ಎದೆಬಡುಕೊಳ್ಳುತ್ತಾ ಇದ್ದರು. ಯೇಸು–ಅಳಬೇಡಿರಿ, ಆಕೆ ಸತ್ತಿಲ್ಲ, ನಿದ್ದೆಮಾಡುತ್ತಾಳೇ ಅನ್ನಲಾಗಿ ಜನರು ಆಕೆ ಸತ್ತಳೆಂದು ತಿಳಿದುಕೊಂಡದರಿಂದ ಆತನನ್ನು ಹಾಸ್ಯ ಮಾಡಿದರು. ಆದರೆ ಆತನು ಆಕೆಯ ಕೈ ಹಿಡಿದು–ಅಮ್ಮಣ್ಣೀ, ಏಳು ಎಂದು ಕೂಗಿದನು. ಆಕೆಯ ಪ್ರಾಣ ತಿರಿಗಿಬಂದು ತಕ್ಷಣವೇ ಆಕೆ ಎದ್ದಳು. ತರುವಾಯ ಆತನು–ಈಕೆಗೆ ಊಟ ಮಾಡಿಸಿರಿ ಎಂದು ಅಪ್ಪಣೆಕೊಟ್ಟನು. ಆಕೆಯ ತಂದೆತಾಯಿಗಳು ಬೆರಗಾದರು. ಆತನು–ಈ ನಡೆದ ಸಂಗತಿಯನ್ನು ಯಾರಿಗೂ ತಿಳಿಸಬೇಡಿರೆಂದು ಖಂಡಿತವಾಗಿ ಹೇಳಿದನು.

# ನಂಬಿಕೆ: ಆಶೀರ್ವಾದದ ಸಾಧನ

**ರೀಪ್ರಿಂಟ್ಸ್ ಪುಟ 4588**

## ಮತ್ತಾಯ 9:18–34

**"ನಂಬುವವನಿಗೆ ಎಲ್ಲಾ ಆಗುವದು..." – ಮಾರ್ಕ 9:23**

ದೇವರಲ್ಲಿನ ನಂಬಿಕೆಯು ದೇವರ ಮಾತಿನ ಪ್ರಕಾರ ಆತನನ್ನು ಅಂಗೀಕರಿಸುವುದನ್ನು ಅಂದರೆ ತನ್ನ ಗುಣಗಳ ವಿಷಯವಾಗಿ ಆತನು ಮಾಡಿದ ಪ್ರಕಟನೆ ಹಾಗೂ ನಮ್ಮ ಮತ್ತು ಇತರರ ವಿಷಯವಾಗಿ ಆತನು ಮಾಡಿರುವ ಯೋಜನೆಯನ್ನು ಅಂಗೀಕರಿಸಿ ಅದನ್ನು ನಂಬುವುದನ್ನು ಒಳಗೊಂಡಿರುವುದು. ನಂಬಿಕೆ ಮತ್ತು ಅವೈಚಾರಿಕ ನಂಬಿಕೆ ಇವುಗಳ ನಡುವೆ ಇರುವ ವ್ಯತ್ಯಾಸವನ್ನು ನಾವು ಸ್ಪಷ್ಟವಾಗಿ ಮನಗಂಡವರಾಗಿರಬೇಕು. ಕೆಲವು ಅತಿ ಒಳ್ಳೆಯ ಜನರು ತಾವು ನಂಬುವ ಸಂಗತಿಗಳ ಅರ್ಥಗ್ರಹಣೆಯು ಹೆಚ್ಚು ಕಷ್ಟಕರವಾದಷ್ಟೂ ನಂಬಿಕೆಯು ಮಹತ್ವದ್ದಾಗಿರುವುದೆಂದು ಭಾವಿಸುವುದರ ಮೂಲಕ ತಪ್ಪನ್ನು ಮಾಡಿರುವರು. ತಾರ್ಕಿಕವಾಗಿ ಪ್ರತಿಪಾದಿಸುವುದನ್ನು ನಂಬಿಕೆಯು ಅಲ್ಲಗಳೆಯುವುದಿಲ್ಲ, ಆದರೆ ಇದು ತಾರ್ಕಿಕವಾಗಿರುವ ವಿಧಿವತ್ತಾದ ಕೆಲವು ವಿವೇಚನಾ ಮಾರ್ಗದಲ್ಲಿ ಅದನ್ನು ಬಳಸಲು ಆದೇಶಿಸುತ್ತದೆ. ದೇವರಲ್ಲಿ ನಂಬಿಕೆಯಿಡಲು ಮೊದಲು ನಾವು ನಮ್ಮ ಸಹಜವಾದ ವಿವೇಚನಾಶೀಲತೆಯನ್ನು ಮುಂದೆ ಹೇಳಿದ ರೀತಿಯಲ್ಲಿ ತೃಪ್ತಿಪಡಿಸಿಕೊಳ್ಳಬೇಕಾಗುತ್ತದೆ.

(ಅ) ಒಬ್ಬ ದೇವರು ಇದ್ದಾನೆಂಬುದು.

(ಆ) ಆತನು ನಂಬಲರ್ಹವಾದ ಗುಣಸ್ವಭಾವಗಳನ್ನು ಪಡೆದಿರುವನು; ಅಂದರೆ ಆತನು ನ್ಯಾಯವಂತನೂ, ಜ್ಞಾನವಿವೇಕವುಳ್ಳವನೂ, ಬಲಪರಾಕ್ರಮಿಯೂ, ಕೃಪಾಪೂರ್ಣನೂ ಅಗಿರುವನು.

(ಇ) ಆತನ ಸಂದೇಶವೆಂದು ನಾವು ಅಂಗೀಕರಿಸುವಂಥವುಗಳು ನಮ್ಮ ಅಂಗೀಕಾರಕ್ಕೆ ಯೋಗ್ಯವಾದವುಗಳೆಂದು ಅಂದರೆ ಸತ್ಯವಾದವುಗಳೆಂಬ ಗುರುತುವುಳ್ಳವುಗಳಾಗಿ ದೇವರ ಗುಣಸ್ವಭಾವಗಳಿಗೆ ಸರಿಹೊಂದುವಂಥವುಗಳೆಂಬುದನ್ನು ವಿಚಾರಪೂರ್ವಕವಾಗಿ ಪರಿಶೀಲಿಸಿ ನಮ್ಮಲ್ಲಿ ಖಚಿತಪಡಿಸಿಕೊಳ್ಳಬೇಕು. ಯಾವನೂ ಇಂಥ ಪ್ರಮಾಣಗಳನ್ನು ನಂಬಿಕೆಯ ಅಸ್ತಿವಾರವನ್ನಾಗಿಸಿಕೊಳ್ಳಲು ಬಯಸುವುದಿಲ್ಲವೋ ಅವನು ಕೇವಲ ವಿಚಾರಶೂನ್ಯನು, ನಂಬಿಕೆಯಲ್ಲಿ ಪೂರ್ಣನಲ್ಲ.

ಹಲವಾರು ಕ್ರೈಸ್ತರು ನಂಬಿಕೆಯ ಸಂಬಂಧವಾಗಿ ಸೂಕ್ತವಾಗಿರುವ ಅರ್ಥವಿವರಣೆಯನ್ನು ನಿರ್ಲಕ್ಷಿಸಿರುವ ಕಾರಣ ನಿಷ್ಪಕ್ಷಪಾತವಾದ ಯಥಾರ್ಥಮನಸ್ಸುಳವರು ಕ್ರೈಸ್ತತ್ವದಿಂದ ದೂರಸರಿದಿರುವರು. ಇಂಥಾ ಅರ್ಥಶೂನ್ಯವಾದವುಗಳನ್ನು ನಂಬಲು ನಿರಾಕರಿಸುವುದಾಗಿ ಅವರು ನಮಗೆ ಹೇಳುವರು. ದೇವರಲ್ಲಿನ ಮತ್ತು ಸತ್ಯವೇದದಲ್ಲಿನ ತಮ್ಮ ನಂಬಿಕೆಯನ್ನು ಬಹು ಕಟ್ಟುನಿಟ್ಟಾಗಿ ಪರಿಶೀಲಿಸಬೇಕೆಂದು ಕ್ರೈಸ್ತರನ್ನು ನಾವು ಒತ್ತಾಯಪಡಿಸುತ್ತೇವೆ. ಅಪೋಸ್ತಲನು ಹೇಳಿರುವ ಹಾಗೆ "ನಮ್ಮಲ್ಲಿರುವ ನಿರೀಕ್ಷೆಗೆ (ನಂಬಿಕೆಗೆ) ಆಧಾರವೇನೆಂದು ಕೇಳುವವರೆಲ್ಲರಿಗೆ ಉತ್ತರ ಹೇಳುವುದಕ್ಕೆ ಯಾವಾಗಲೂ ಸಿದ್ಧವಾಗಿರಿ." (1 ಪೇತ್ರ 3:15) ಇದರಲ್ಲಿ ನಾವು ನಮ್ಮ ವಿಷಯವಾಗಿಯೂ ಮತ್ತು ನಮಗೆ ದೇವರ ವಾಕ್ಯದಲ್ಲಿ

ಆಸಕ್ತಿಯನ್ನು ಉಂಟುಮಾಡಿದವರ ವಿಷಯವಾಗಿಯೂ ಋಣಿಗಳಾಗಿರುವೆವು. ಅಪೋಸ್ತಲರ ದಿನಗಳಲ್ಲಿದ್ದಂತೆ, ದೇವರ ವಾಕ್ಯಗಳ ಮೇಲೆ ಈಗ ಚೆಲ್ಲಿರುವ ಬೆಳಕಿನಡಿಯಲ್ಲಿ ದೇವರ ಮನುಷ್ಯನು ಪ್ರವೀಣನಾಗಿ "ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು" ಮತ್ತು "ಸತ್ಯವಾಕ್ಯವನ್ನು ಸರಿಯಾಗಿ (ವಿಂಗಡಿಸಿ) ಉಪದೇಶಿಸಲು" ಮತ್ತು ತನ್ನ ಮಿತ್ರರಿಗೂ ನೆರೆಹೊರೆಯವರಿಗೂ ತನ್ನ ನಂಬಿಕೆಯ ಪ್ರತಿಯೊಂದು ಅಂಶಗಳಿಗೂ ದೃಢವಾದ ಹಾಗೂ ವಿವೇಚನಾಪೂರ್ವಕವಾದ ಆಧಾರವನ್ನು ಒದಗಿಲು ಸಮರ್ಥನಾಗಿರುವನು. ಮೊದಲನೇ ಶತಮಾನ ಮತ್ತು ಈ ಕಾಲದ ನಡುವೆಯಿದ್ದ ಜ್ಞಾನಾಂಧಕಾರಯುಗದಲ್ಲಿ (ಡಾರ್ಕ್ ಏಜಸ್) ಇದು ಸಾಧ್ಯವಾಗುತ್ತಿರಲಿಲ್ಲವೆಂಬುದನ್ನು ನಾವು ಒಪ್ಪಿಕೊಳ್ಳುತ್ತೇವೆ. ದೇವರ ವಾಕ್ಯಗಳು ದೈವಪ್ರೇರಿತವಾದವುಗಳೆಂಬುದನ್ನೂ ಮತ್ತು ಅವು ನಂಬಲು ಅರ್ಹವಾದವುಗಳೆಂಬುದರ ವಿಷಯದಲ್ಲಿ ಗೊಂದಲವುಳ್ಳವರುಗಳ ಬಗ್ಗೆ ಹೇಗೆ ಅನುಕಂಪವುಳ್ಳವರಾಗಿರಬೇಕೆಂಬುದನ್ನು ತಿಳಿದವರಾದ ನಾವು ಅಂಥವರಿಗೆ ಸಹಾಯ ಮಾಡಲು ಖಂಡಿತವಾಗಿ ಬಯಸುವವರಾಗಿ ಅವರು ನಮ್ಮೊಡನೆ ಪತ್ರ ವ್ಯವಹರಿಸಬೇಕೆಂದು ಅವರನ್ನು ಆಮಂತ್ರಿಸುವವರಾಗಿದ್ದೇವೆ.

ನಮ್ಮ ಇಂದಿನ ಅಧ್ಯಯನವು ನಂಬಿಕೆಯನ್ನು ನಾಲ್ಕು ವಿಭಿನ್ನ ದೃಷ್ಟಿಯಿಂದ ನಿದರ್ಶಿಸುತ್ತದೆ –

(ಅ) ತಂದೆಯಾಗಿ ತನ್ನ ಮಗಳ ಪರವಾಗಿ ಯಾಯೀರನಲ್ಲಿದ್ದ ನಂಬಿಕೆ;

(ಆ) ಕರ್ತನ ಉಡುಪಿನ ಗೊಂಡೆಯನ್ನು ಮುಟ್ಟಿದ ಆ ಹೆಂಗಸು ತನ್ನ ವಿಷಯವಾಗಿ ಇಟ್ಟುಕೊಂಡಿದ್ದ ನಂಬಿಕೆ;

(ಇ) ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿಕೊಂಡ ಆ ಇಬ್ಬರು ಕುರುಡರಲ್ಲಿದ್ದ ನಂಬಿಕೆ;

(ಈ) ದೆವ್ವಹಿಡಿದು ಕಿವುಡಾದ ಮೂಕನನ್ನು ಕರ್ತನ ಬಳಿಗೆ ಕರಕೊಂಡು ಬಂದ ಜನರಲ್ಲಿದ್ದ ನಂಬಿಕೆ.

ನಮ್ಮ ಕರ್ತನ ವಾಸಸ್ಥಾನವಾಗಿದ್ದ ಕಪೆರ್ನೌಮಿನ ಅಧಿಕಾರಿಯಾದ ಯಾಯೀರನು ಯೇಸುವನ್ನು ಚೆನ್ನಾಗಿ ತಿಳಿದಿದ್ದನು. ಆತನನ್ನು (ನಮ್ಮ ಕರ್ತನನ್ನು) ಕೆಲವು ವೇಳೆ ಸಬ್ಬತ್ ದಿನದಲ್ಲಿ ಶಾಸ್ತ್ರವಚನ ಪಾಠಗಳನ್ನು ಓದಲು ಕರೆಯಲಾಗುತ್ತಿತ್ತು. (ಲೂಕ 4:16) ಹಿಂದಿನ ಒಂದು ಸಂದರ್ಭದಲ್ಲಿ ಈತನು (ಯಾಯೀರನು) ಶತಾಧಿಪತಿಯ ಆಳಿನ ಪರವಾಗಿ ಇತರರ ಸಂಗಡ ಕರ್ತನನ್ನು ಬೇಡಿಕೊಂಡಿದ್ದನು. (ಲೂಕ 7:4) ಈಗ ಸಂಕಷ್ಟವು ಯಾಯೀರನ ಮನೆಯನ್ನು ಆಕ್ರಮಿಸಿತ್ತು. ಆತನ ಹನ್ನೆರಡು ವರುಷದ ಮಗಳು ಸಾಯುತ್ತಿದ್ದಳು. ಒಡೆಯನು ಸಮುದ್ರ ದಡದ ಆಚೆಯಲ್ಲಿದ್ದು ಕಪೆರ್ನೌಮಿನಲ್ಲಿ ಗೈರುಹಾಜರಾಗಿದ್ದನು. ಕರ್ತನಿಗಾಗಿ ಕಾಯುತ್ತಿದ್ದ ಗುಂಪಿನಲ್ಲಿ ಯಾಯೀರನಿದ್ದನು ಮತ್ತು ಆತನು ಜನರ ಪ್ರಮುಖ ಪ್ರತಿನಿಧಿಯಾಗಿದ್ದ ಕಾರಣ, ತಾನು ಹೇಳಿಕೊಳ್ಳುವುದನ್ನು ಕೇಳಲು ಅವನಿಗೆ ಮೊದಲನೆದಾಗಿ ಬಿಡಲಾಯಿತು. ಕರ್ತನು ಮಗಳನ್ನು ಗುಣಪಡಿಸಲು ತನ್ನ ಮನೆಗೆ ಬರಬೇಕೆಂಬ ವಿಜ್ಞಾಪನೆಯಲ್ಲಿ ತನ್ನ ನಂಬಿಕೆಯನ್ನು ತೋರ್ಪಡಿಸಿರುವುದು ಮಾತ್ರವಲ್ಲದೆ ಆತನು ಕರ್ತನಿಗೆ ಅಡ್ಡಬಿದ್ದದ್ದರಲ್ಲಿ ತಾನು ವರ್ತನೆಯಲ್ಲಿ ಸಹ ಸಾಂಕೇತಿಕವಾಗಿ ತನ್ನ ಗೌರವ ವಿಧೇಯತೆ ಮತ್ತು ನಂಬಿಕೆಗಳನ್ನು ತೋರ್ಪಡಿಸಿದ್ದನು. ಆತನು ತನ್ನ ಮಗಳನ್ನು ಸಾಯುವ ಸ್ಥಿತಿಯಲ್ಲಿ ಬಿಟ್ಟುಬಂದಿದ್ದನು. ಆತನು ಯೇಸುವಿನ ಕೂಡ ಮಾತಾಡುತ್ತಿದ್ದ ಸಮಯದಲ್ಲಿ ಆತನ ಮಗಳು ಸತ್ತಿದ್ದಳು ಮತ್ತು ತಡಮಾಡದೆ ಬರಲು ಕರ್ತನನ್ನು ಒತ್ತಾಯಿಸುತ್ತಿದ್ದನು. ಆತನು ಮನೆ ಸೇರುವ ಮೊದಲೇ ಬಹು ತಡವಾಗಿತ್ತು ಮತ್ತು ಆಕೆಯು ಸತ್ತಳೆಂಬ ಸುದ್ದಿಯೂ ಬಂದಿತ್ತು. ಯೇಸುವು ಬಂದಾಗ ಯೆಹೂದ್ಯರ ಪದ್ಧತಿಯ ಪ್ರಕಾರ ನೆರೆಹೊರೆಯವರು ಕೂಡಿಬಂದಿದ್ದರು. ಕೆಲವರು ಕೊಳಲು ವಾದ್ಯದಿಂದ ಶೋಕ ಗೀತೆಯನ್ನು ನುಡಿಸುತ್ತಿದ್ದರು, ಇತರರು ದುಃಖಿಸುತ್ತಾ ಗೋಳಾಡುತ್ತಿದ್ದರು. ಕುಟುಂಬದಲ್ಲಿನ ಮತ್ತು ನೆರೆಹೊರೆಯ ಹೆಂಗಸರು ಮರಣವಾರ್ತೆಯನ್ನು ಕೇಳಿದ ಕೂಡಲೇ ಕೂಗಿಕೊಳ್ಳುವುದು ಮತ್ತು ಆ ನಂತರ ಸ್ವಲ್ಪ ಸಮಯದ ನಂತರ ತಗ್ಗುಧ್ವನಿಯಲ್ಲಿ ಶೋಕಿಸುತ್ತಾ ಮರಣದ ಮನೆಯನ್ನು ಪ್ರವೇಶಿಸುವುದು ವಾಡಿಕೆಯಾಗಿತ್ತು. "ಹುಡುಗಿಯು ಸತ್ತಿಲ್ಲ, ನಿದ್ದೆಮಾಡುತ್ತಿರುವಳು" ಎಂದು ಮೆಲುದನಿಯಲ್ಲಿ ಹೇಳುವುದರ ಮೂಲಕ ಒಡೆಯನು ಎಲ್ಲರನ್ನು ಹೊರಗೆಹೋಗಲು ಹೇಳಿದನು. ಈ ಮಾತಿನ ಭಾಷೆಯು ಲಾಜರನ (ಮರಣದ) ವಿಷಯದಲ್ಲಿ ಹೇಳಿದ ಮಾತನ್ನು ಹೋಲುತ್ತಿತ್ತು. ಮನುಷ್ಯರು ವ್ಯಕ್ತಪಡಿಸುವ ಬಾಷೆಯಾನುಸಾರ ಆಕೆಯು ಸತ್ತಿದ್ದಳು. ಆದರೆ ದೇವರ ದೃಷ್ಟಿಯಲ್ಲಿ ಆಕೆಯು ಸತ್ತಿರಲಿಲ್ಲ ಅಂದರೆ ಮೃಗಗಳಂತೆ ಜೀವ ಕಳೆದುಹೋಗಿರಲಿಲ್ಲ. ಮನುಷ್ಯರ ಮೇಲಿದ್ದ ಮರಣದಂಡನೆಯು ವಿಮೋಚಕನ ಯಜ್ಞಾರ್ಪಣೆಯ ಮೂಲಕ ರದ್ದಾಗಿ ಅದರ ಪರಿಣಾಮವಾಗಿ ನೀತಿವಂತರಿಗೂ ಅನೀತಿವಂತರಿಗೂ ಉಂಟಾಗುವ ಪುನರುತ್ಥಾನವು ದೇವರು ಮೊದಲೇ ಮಾಡಿದ ಏರ್ಪಾಡಾಗಿತ್ತು. ಈ ಒಂದು ದೃಷ್ಟಿಯಿಂದ ಮರಣವನ್ನು ನಿದ್ರೆಯೆಂದು ಕರೆಯಲಾಗಿದ್ದು ಅದರಿಂದ ಪುನರುತ್ಥಾನವಾಗುವ ಉದಯಕಾಲದಲ್ಲಿ ಅಂದರೆ ಸಾವಿರ ವರುಷದ ಆಳ್ವಿಕೆಯ ಮುಂಜಾನೆಯಲ್ಲಿ ಭವ್ಯವಾದ ರೀತಿಯಲ್ಲಿ ಎಲ್ಲರೂ ಎಬ್ಬಿಸಲ್ಪಡುವರು. ಹೀಗೆ ಅಬ್ರಹಾಮನು ಮತ್ತು ಹಿಂದಿದ್ದ ಒಳ್ಳೆಯವರೂ ಕೆಟ್ಟವರೂ ಆದ ಇತರರು ನಿದ್ರಿಸುತ್ತಿರುವರೆಂದು ಅಂದರೆ ತಮ್ಮ ಪಿತೃಗಳೊಂದಿಗೆ ನಿದ್ರಿಸುತ್ತಿರುವರೆಂದು ಉಲ್ಲೇಖಿಸಲಾಗಿರುವುದು. ಹೀಗೆ ಮೊದಲ ರಕ್ತಸಾಕ್ಷಿಯಾದ ಸ್ತೆಫನನು ನಿದ್ರೆ ಹೋದನು. (ಅ. ಕೃ. 7:60) ಇದು ಸ್ಪಷ್ಟವಾಗಿ ಸತ್ತವರು ಪರಲೋಕದಲ್ಲಿಯಾಗಲಿ, ಇವೆರಡರ ಮಧ್ಯದಲ್ಲಿ ಅಥವಾ ನರಕದಲ್ಲಿಯಾಗಲಿ ನಿದ್ರಿಸುತ್ತಿರುವರೆಂಬ ಅರ್ಥಕೊಡುವದಿಲ್ಲ. ಧೂಳಿನಲ್ಲಿ ನಿದ್ರಿಸುತ್ತಿರುವ ಅನೇಕರು ಎಚ್ಚೆತ್ತುಕೊಳ್ಳುವರೆಂದು ಸತ್ಯವೇದವು ಈ ವಿಷಯವಾಗಿ ವಿವರಿಸಿ ಹೇಳುತ್ತದೆ. (ದಾನಿಯೇಲ 12:2) "ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. (1 ಕೊರಿಂಥ 15:22) ಯಾವುದು ಮರಣವೆನಿಸಿಕೊಂಡು ನಿರಂತರವಾಗಿ ಇಲ್ಲದೇಹೋಗುವುದೆಂದು ಪರಿಗಣಿಸಲ್ಪಟ್ಟಿತ್ತೊ ಅದು ವಿಮೋಚಕನ ಯಜ್ಞಾರ್ಪಣೆಯ ಫಲವಾಗಿ ನಿದ್ರೆಯಾಗಿ ಮಾರ್ಪಟ್ಟು ಆ ದಿವ್ಯ ವಿಮೋಚಕನು ಉದಯಕಾಲದಲ್ಲಿ

ಲಾಜರನಿಗೆ "ಹೊರಗೆ ಬಾ" ಎಂದು ಹೇಳಿದಂತೆ ಮತ್ತು ಯಾಯೀರನ ಮಗಳ ವಿಷಯದಲ್ಲಿ "ತಲಿಥಾ ಕೂಮ್" ಅಂದರೆ ಅಮ್ಮಣ್ಣೀ ಏಳು ಎಂದು ಎಲ್ಲರಿಗೂ ಹೇಳುವವರೆಗೆ ಮರಣವು ಪ್ರಜ್ಞಾಹೀನಸ್ಥಿತಿಯ ನಿದ್ರೆಯಾಗಿರುವದು. ಹೀಗೆ ಕಡೆಯಲ್ಲಿ ಸಮಾಧಿಗಳಲ್ಲಿರುವವರೆಲ್ಲರೂ ಮನುಷ್ಯಕುಮಾರನ ಧ್ವನಿಯನ್ನು ಕೇಳಿ ಎದ್ದು ಹೊರಬರುವ ಕಾಲ ಬರುವದು;" ಎಂಬ ಭರವಸೆಯನ್ನು ನಾವು ಪಡೆದುಕೊಂಡಿರುವೆವು. (ಯೋಹಾನ 5:28) ಯಾಯೀರನ ಮನೆಗೆ ಹೋಗುವ ಮಾರ್ಗದಲ್ಲಿ ಕರ್ತನ ಸುತ್ತಲಿದ್ದ ಗುಂಪಿನಲ್ಲಿನ ಒಬ್ಬ ಹೆಂಗಸು ತಾನು ಆತನ ಉತ್ಕೃಷ್ಟತೆ ಹಾಗೂ ಆತನಲ್ಲಿದ್ದ ಶಕ್ತಿಯನ್ನು ನಂಬಿದವಳಾಗಿ ತನಗೆ ಒಂದು ಆಶೀರ್ವಾದವಾಗುವುದೆಂದು ಆತನ ಉಡುಪಿನ ಗೊಂಡೆಯನ್ನು ಮುಟ್ಟಿದಳು. ವಿದ್ಯುತ್ಶಕ್ತಿಯನ್ನು ತಂತಿಯ ಮೂಲಕ ರವಾನಿಸುವ ವಿದ್ಯುತ್ ಬ್ಯಾಟರಿಯನ್ನು ಮುಟ್ಟುವ ಪ್ರಕಾರ ಆಕೆಯ ದೇಹಕ್ಕೆ ಕೂಡಲೇ ಶಕ್ತಿಯು ಹರಿದುಬಂದು ಆಕೆಯ ಜೀವವು ಪುಳಕಿತವಾಯಿತು. ನಮ್ಮ ಕರ್ತನು ಜೀವಾಧಾರಕವಾದ ಶಕ್ತಿಯಿಂದ ತುಂಬಿದವನಾಗಿದ್ದನು. ಆತನು ಪರಿಪೂರ್ಣನಾಗಿ ಪಾಪದಿಂದ ಮುಕ್ತನಾಗಿರುವುದು ಮಾತ್ರವಲ್ಲದೆ ರೋಗಮರಣದ ಸ್ಥಿತಿಯಿಂದಲೂ ಮುಕ್ತನಾಗಿದ್ದನು. ತನ್ನಿಂದ ಜೀವಾಧಾರಕ ಶಕ್ತಿಯು ಹೊರಟಿದ್ದ ಅನುಭವಾಗಿ ಹಿಂದೆ ತಿರುಗಿ "ನನ್ನನ್ನು ಮುಟ್ಟಿದವರು ಯಾರು?" ಎಂದು ವಿಚಾರಿಸಿದನು. ತಾನು ಅಯೋಗ್ಯಳೆಂದು ಭಾವಿಸಿಕೊಂಡಾಗ್ಯೂ ಆ ಒಂದು ಆಶೀರ್ವಾದವನ್ನು ಕದ್ದುಕೊಂಡವಳಾಗಿ ಆ ಬಡ ಹೆಂಗಸು ಭಯಹಿಡಿದವಳಾದಳು. ಆದರೆ ಶೀಘ್ರವಾಗಿ ಒಡೆಯನ ಕರುಣೆಯುಳ್ಳ ಮಾತಿನ ಮತ್ತು ನೋಟದ ಮೂಲಕವಾಗಿ ಆಕೆ ಭರವಸೆ ಹೊಂದಿದವಳಾದಳು. ಈ ಸಂಗತಿಯು ನಮ್ಮ ಕರ್ತನು ಮಾಡಿದ ಅದ್ಭುತಗಳಲ್ಲಿ ಆತನ ಜೀವಾಧಾರಕ ಶಕ್ತಿಯು ಆತನಿಂದ ಹೊರಹೋಗುತ್ತಿತ್ತೆಂಬುದನ್ನು ನಮಗೆ ಬೋಧಿಸುವುದು. ಹೀಗೆ ಯೊರ್ದಾನಿನಿಂದ ಕಲ್ವಾರಿಯ ವರೆಗೂ ಆತನು ಮನಃಪೂರ್ವಕವಾಗಿ ಸಂತೋಷದಿಂದ ತನ್ನ ಜೀವಶಕ್ತಿಯನ್ನು ವ್ಯಯಮಾಡುವುದರ ಮೂಲಕ ತನ್ನ ಸುತ್ತಲಿರುವವರ ಅಗತ್ಯತೆಗಳನ್ನು ಪೂರೈಸುತ್ತಿದ್ದನು.

ಯೇಸುವನ್ನು ಸಂಧಿಸಿದ ಆ ಇಬ್ಬರು ಕುರುಡರು ಆತನನ್ನು ದಾವೀದನ ಮನೆತನದ ವಾಗ್ದತ್ತನಾದ ಮೆಸ್ಸೀಯನೆಂದು ಅಭಿನಂದಿಸಿ ಒಬ್ಬರನ್ನೊಬ್ಬರು ಪ್ರೋತ್ಸಾಹಿಸಿಕೊಂಡು ತಮ್ಮ ನಂಬಿಕೆಯಾನುಸಾರ ತಾವು ಬಯಸಿದ ಆಶೀರ್ವಾದವನ್ನು ಪಡೆದುಕೊಂಡರು. ಇಲ್ಲಿ ನಾವು ಸಭೆಯ ಅನ್ಯೋನ್ಯತೆಯಲ್ಲಿರುವುದರ ಪ್ರಯೋಜನದ ಬಗ್ಗೆ ನಿದರ್ಶನ ಹೊಂದಿರುವೆವು. ಅತಿ ಪರಿಶುದ್ಧವಾದ ನಂಬಿಕೆಯನ್ನು ಉತ್ತೇಜಿಸುವುದರಲ್ಲಿ ನಾವು ಒಬ್ಬರನ್ನೊಬ್ಬರು ಸಹಕರಿಸುವರಾಗೋಣ. ನಮ್ಮ ಜೊತೇ ಯಾತ್ರಿಕರಿಗೆ ನಾವು ಅಡ್ಡಿಮಾಡುವವರಾಗಿರದೆ ಅವರಿಗೆ ಸಹಾಯಕರಾಗಿರೋಣ. ಒಡೆಯನು ಎಲ್ಲಾ ಜನರನ್ನು ಸ್ವಸ್ಥಪಡಿಸಲು ಯತ್ನಿಸಲಿಲ್ಲ. ದೃಷ್ಟಾಂತವಾಗಿ ಹೇಳುವುದಾದರೆ, ಶಿಲೋವಾ ಕೊಳದ ಬಳಿಯಲ್ಲಿ ಬಹು ಮಂದಿ ಅಸ್ವಸ್ಥರಿದ್ದರೂ ಆತನು ಒಬ್ಬನನ್ನೇ ಗುಣಪಡಿಸಿದ್ದನು. ಆದುದರಿಂದ ಯೇಸುವು ಇಲ್ಲಿ ತಮ್ಮ ಕಣ್ಣುಗಳು ತೆರೆಯಲ್ಪಟ್ಟವರಿಗೆ ಈ ವಿಷಯವನ್ನು ಯಾರಿಗೂ ಹೇಳಬಾರದೆಂದು ಆದೇಶಿಸಿದ್ದನು. ಆದರೆ ಅದರಂತೆ ಮಾಡಲು ಅವರಿಗೆ ಸಾಧ್ಯವಾಗಿರಲಿಲ್ಲ. ಅವರ ಸಂತೋಷವು ಎಷ್ಟು ದೊಡ್ಡದಾಗಿತ್ತೆಂದರೆ ಈ ವಿಷಯವಾಗಿ ಕರ್ತನಲ್ಲಿದ್ದ ನಮ್ರತೆಯು ಅವರನ್ನು ಇನ್ನೂ ದೊಡ್ಡ ಶಬ್ಧದಿಂದ ಆತನನ್ನು ಸ್ತುತಿಸುವಂತೆ ಮಾಡಿತು. ನಮ್ಮ ವಿಷಯದಲ್ಲಿಯೂ ಹೀಗೆಯೇ: ಮರಣಾವಸ್ಥೆಯಿಂದ ಪುನಶ್ಚೇತನ ಹೊಂದುವ ಮೂಲಕ ಆತ್ಮಿಕವಾಗಿ ಗುಣ ಹೊಂದಿದವರಾಗಿ ನಮ್ಮ ಮನೋನೇತ್ರಗಳು ತೆರೆಯಲ್ಪಟ್ಟಿರಲು ನಾವು ಈ ಶುಭವಾರ್ತೆಯನ್ನು ಇತರರಿಗೆ ಹೇಳಿ ಕರ್ತನನ್ನು ಕೊಂಡಾಡದಿರಲು ಸಾಧ್ಯವಾಗುವುದಿಲ್ಲ. – ರೋಮಾ 1:12; ಅ.ಕೃ. 4:20

ದೆವ್ವಹಿಡಿಯಲ್ಪಟ್ಟು ಕುರುಡನೂ ಮೂಕನೂ ಆಗಿದ್ದ ಆ ಮನುಷ್ಯನು ಎಂಥಾ ಶೋಚನೀಯ ಸ್ಥಿತಿಯಲ್ಲಿದ್ದನೆಂದರೆ ತನ್ನ ವಿಷಯದಲ್ಲಿ ತಾನು ಸಹಾಯಮಾಡಿಕೊಳ್ಳಲು ಆತನಿಗೆ ಸಾಧ್ಯವಿರಲಿಲ್ಲ; ಇಲ್ಲವೇ ತನಗೆ ಸಹಾಯಮಾಡಲು ಒಡೆಯನಿಗೆ ಕೇಳಿಕೊಳ್ಳುವಂತೆಯೂ ಇರಲಿಲ್ಲ, ತನ್ನಲ್ಲಿರುವ ದೆವ್ವವನ್ನು ಹೋಗಲಾಡಿಸಿಕೊಳ್ಳಲು ಯಾರಾದರೂ ಹೇಳಿದರೆ ಅದನ್ನು ತಾನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿಯೂ ಇರಲಿಲ್ಲ, ಹೇಗೂ ಆತನ ಪರವಾಗಿ ಆತನ ಸ್ನೇಹಿತರು ತಮ್ಮ ನಂಬಿಕೆಯನ್ನು ಪ್ರಯೋಗಿಸಿದರು. ಯೇಸುವು ಇದಕ್ಕೆ ಪ್ರತಿಸ್ಪಂದಿಸಿ ಅವನಲ್ಲಿದ್ದ ದೆವ್ವವನ್ನು ಬಿಡಿಸಿದ್ದನು. ಜನರ ಗುಂಪಿನವರು ಬೆರಗಾಗಿದ್ದರು. ಆದರೆ ಫರಿಸಾಯರು ಅಸೂಯೆಪಟ್ಟಿದ್ದರು. ಅವರು ತಮ್ಮನ್ನು ಧಾರ್ಮಿಕ ಮುಖಂಡರಂತೆ ತೋರಿಸಿಕೊಳ್ಳ ಬಯಸಿ ತಮಗಿದ್ದ ಜನಪ್ರಿಯತೆ ಗೌರವಗಳನ್ನು ಉಳಿಸಿಕೊಳ್ಳಬೇಕೆಂದು ಬಯಸಿ–ದ್ದರು; ಆ ಜನಪ್ರಿಯತೆ ಗೌರವಗಳು ಅವರಿಂದ ಯೇಸುವಿಗೆ ತ್ವರಿತವಾಗಿ ದಾಟಿಹೋಗುತ್ತಿತ್ತು. ತಮ್ಮ ಮನಸ್ಸುಗಳಲ್ಲಿದ್ದ ಅಸೂಯೆಯು ಅವರನ್ನು ಎಷ್ಟು ವಿಕೃತರನ್ನಾಗಿ ಮಾಡಿತ್ತೆಂದರೆ ಅವರು ಯೇಸುವನ್ನು ಸೈತಾನನೆಂತಲೂ, ದೆವ್ವಗಳ ಒಡೆಯನಾದ ಬೆಲ್ಜೆಬೂಲನೆಂತಲೂ ಹೇಳಿದ್ದರು. ಇದರಿಂದ ಪಾಠಕಲಿತವರಾಗಿ ನಾವು ಅಸೂಯೆ ಮತ್ಸರ ಹಗೆತನಗಳನ್ನು ಹೋಗಲಾಡಿಸಿ ಕೊಂಡವರಾಗಿ ಅದಕ್ಕೆ ಬದಲಾಗಿ ಸಾತ್ವಿಕತ್ವ ನಯವಿನಯ ತಾಳ್ಮೆ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ತುಂಬಿಕೊಂಡವರಾಗಿ ನಂಬಿಕೆಯಲ್ಲಿ ವೃದ್ಧಿಯಾಗುತ್ತಾ ಹೀಗೆ ನಮ್ಮ ಕರ್ತನ ಪ್ರತಿರೂಪಕ್ಕೆ ಅಧಿಕಾಧಿಕವಾಗಿ ಸಾಗುತ್ತಾ ಬರೋಣ.

ಓಹ್, ಕುಂದದ ನಂಬಿಕೆ ಇದ್ದಲ್ಲಿ
ಪ್ರತಿಯೊಬ್ಬ ಶತ್ರುವಿನಿಂದ ಇರಿಕಿಸಲ್ಪಟ್ಟರೂ
ಯಾವ ಪ್ರಾಪಂಚಿಕ ವ್ಯಥೆಗಳ ಅಂಚಿನಲ್ಲಿಯೂ
ಅದು ಅಲುಗಾಡದು
ಅದು ಗುಣಗುಟ್ಟಲಾರದು ಇಲ್ಲವೇ ದೂರು ಹೇಳದ
ಶಿಕ್ಷಣಾದಂಡದ ಅಡಿಯಲ್ಲಿನ ಯಾವ ಸಂಗತಿಗಾದರೂ
ಗುಣಗುಟ್ಟದು ಇಲ್ಲವೇ ದೂರದು
ಆದರೆ ನೋವು ಸಂಕಟಗಳ ಕಾಲದಲ್ಲಿ
ತನ್ನ ದೇವರನ್ನು ಆತುಕೊಳ್ಳುವದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31 | ನಜರೇತ್ | ಬೆಳೆದ ಊರಿಗೆ ಮತ್ತೆ ಭೇಟಿ ಹಾಗೂ ಮತ್ತೆ ತಿರಸ್ಕರಿಸಲಾದದ್ದು | 13:54–58 | 6:1–6 | –– | –– |
| | ಗಲಿಲಾಯ | ಗಲಿಲಾಯದಲ್ಲಿ ಮೂರನೇ ಪ್ರವಾಸ, ಅಪೋಸ್ತಲರು ಕಳುಹಿಸಲ್ಪಟ್ಟು ಸೇವಾಕಾರ್ಯ ವಿಸ್ತರಿಸಲ್ಪಟ್ಟದ್ದು | 9:35–11:1 | 6:6–13 | 9:1–6 | –– |

## ಮತ್ತಾಯ 13:54–58

ತರುವಾಯ ಆತನು ತನ್ನ ಊರಿಗೆ ಬಂದು ಅಲ್ಲಿರುವ ಸಭಾಮಂದಿರದಲ್ಲಿ ಜನರಿಗೆ ಉಪದೇಶಮಾಡುತ್ತಿದ್ದನು. ಅವರು ಕೇಳಿ ಅತ್ಯಾಶ್ಚರ್ಯಪಟ್ಟು–ಇವನಿಗೆ ಈ ಜ್ಞಾನವೂ ಈ ಮಹತ್ಕಾರ್ಯಗಳೂ ಎಲ್ಲಿಂದ ಬಂದಿದ್ದಾವು? ಇವನು ಆ ಬಡಗಿಯ ಮಗನಲ್ಲವೇ. ಇವನ ತಾಯಿ ಮರಿಯಳಲ್ಲವೇ. ಯಾಕೋಬ ಯೋಸೇಫ ಸೀಮೋನ ಯೂದ ಇವರು ಇವನ ತಮ್ಮಂದಿರಲ್ಲವೇ. ಇವನ ತಂಗಿಯರೆಲ್ಲರೂ ನಮ್ಮಲ್ಲಿ ಇದ್ದಾರಲ್ಲವೇ. ಹಾಗಾದರೆ ಇವೆಲ್ಲಾ ಇವನಿಗೆ ಎಲ್ಲಿಂದ ಬಂದಿದ್ದಾವು? ಎಂದು ಮಾತಾಡಿಕೊಂಡು ಆತನ ವಿಷಯವಾಗಿ ಬೇಸರಗೊಂಡರು. ಆದರೆ ಯೇಸು ಅವರಿಗೆ–ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶ ದಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಅಂದನು. ಅವರು ಆತನನ್ನು ನಂಬದೆಹೋದದರಿಂದ ಆತನು ಅಲ್ಲಿ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲ.

## ಮತ್ತಾಯ 9:35–38

ಯೇಸು ಎಲ್ಲಾ ಊರುಗಳನ್ನೂ ಹಳ್ಳಿಪಳ್ಳಿಗಳನ್ನೂ ಸುತ್ತಿಕೊಂಡು ಅವರ ಸಭಾಮಂದಿರಗಳಲ್ಲಿ ಉಪದೇಶಮಾಡುತ್ತಾ ಪರಲೋಕರಾಜ್ಯದ ಸುವಾರ್ತೆಯನ್ನು ಸಾರಿ ಹೇಳುತ್ತಾ ಎಲ್ಲಾತರದ ರೋಗಗಳನ್ನೂ ಎಲ್ಲಾತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು. ಅದರೆ ಗುಂಪುಗಳನ್ನು ನೋಡಿ ಅವರು ಕುರುಬನಿಲ್ಲದ ಕುರಿಗಳ ಹಾಗೆ ತೊಳಲಿ ಬಳಲಿ ಹೋಗಿದ್ದಾರಲ್ಲ ಎಂದು ಅವರ ಮೇಲೆ ಕನಿಕರಪಟ್ಟನು. ಆಗ ತನ್ನ ಶಿಷ್ಯರಿಗೆ–ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದದರಿಂದ ಬೆಳೆಯ ಯಜಮಾನನನ್ನು–ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ ಎಂದು ಹೇಳಿದನು.

## ಮತ್ತಾಯ 10:1–42 ಮತ್ತು 11:1

ಮತ್ತು ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತರಕ್ಕೆ ಕರೆದು ದೆವ್ವಗಳನ್ನು ಬಿಡಿಸುವದಕ್ಕೂ ಎಲ್ಲಾತರದ ರೋಗಗಳನ್ನೂ ಎಲ್ಲಾತರದ ಬೇನೆಗಳನ್ನೂ ವಾಸಿಮಾಡುವುದಕ್ಕೂ ಅವರಿಗೆ ಅಧಿಕಾರ ಕೊಟ್ಟನು. ಆತನು ಕಳುಹಿಸಿಕೊಟ್ಟ ಅಪೋಸ್ತಲರೆಂಬ ಹನ್ನೆರಡು ಮಂದಿಯ ಹೆಸರುಗಳು ಯಾವವೆಂದರೆ–ಮೊದಲನೆಯವನು ಪೇತ್ರನೆನಿಸಿಕೊಳ್ಳುವ ಸೀಮೋನ, ಅವನ ತಮ್ಮನಾದ ಅಂದ್ರೆಯ, ಜೆಬೆದಾಯನ ಮಗನಾದ ಯಾಕೋಬ, ಅವನ ತಮ್ಮನಾದ ಯೋಹಾನ, ಫಿಲಿಪ್ಪ, ಬಾರ್ತೊಲೊಮಾಯ, ತೋಮ, ಸುಂಕದ ಮತ್ತಾಯ, ಅಲ್ಫಾಯನ ಮಗನಾದ ಯಾಕೋಬ, ತದ್ದಾಯ, ಮತಾಭಿಮಾನಿ ಎಂದು ಹೆಸರುಗೊಂಡ ಸೀಮೋನ, ಯೇಸುವನ್ನು ಹಿಡಿದುಕೊಟ್ಟ ಇಸ್ಕರಿಯೋತ ಯೂದ, ಇವುಗಳೇ. ಈ ಹನ್ನೆಡರು ಮಂದಿಯನ್ನು ಯೇಸು ಕಳುಹಿಸಿದನು. ಕಳುಹಿಸುವಾಗ ಅವರಿಗೆ ಅಪ್ಪಣೆ ಕೊಟ್ಟದ್ದೇನಂದರೆ–ಅನ್ಯಜನಗಳ ಕಡೆಗೆ ಹೋಗಬೇಡಿರಿ; ಸಮಾರ್ಯದ ಊರೊಳಗೆ ಕಾಲಿಡ ಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೆ ಹೋಗಿರಿ. ಪರಲೋಕ ರಾಜ್ಯವು ಸಮೀಪವಾಯಿತೆಂದು ಸಾರಿಹೇಳುತ್ತಾ ಹೋಗಿರಿ. ರೋಗಿಗಳನ್ನು ಸ್ವಸ್ಥಮಾಡಿರಿ; ಸತ್ತವರನ್ನು ಬದುಕಿಸಿರಿ, ಕುಷ್ಠಹತ್ತಿದವರನ್ನು ಶುದ್ಧಮಾಡಿರಿ, ದೆವ್ವಗಳನ್ನು ಬಿಡಿಸಿರಿ; ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ. ನಿಮ್ಮ ಹಮ್ಮಣಿಗಳಲ್ಲಿ ಹೊನ್ನು ಹಣ ದುಡ್ಡುಗಳನ್ನೂ ದಾರಿಗೆ ಹಸಿಬೆಯನ್ನೂ ಎರಡು ಅಂಗಿ ಕೆರ ಕೋಲು ಮೊದಲಾದವು ಗಳನ್ನೂ ಸೌರಿಸಿಕೊಳ್ಳಬೇಡಿರಿ. ಆಳು ಅಂಬಲಿಗೆ ಯೋಗ್ಯನಷ್ಟೆ. ನೀವು ಯಾವದೊಂದು ಊರಿಗೆ ಅಥವಾ ಹಳ್ಳಿಗೆ ಸೇರಿದಾಗ ಅಲ್ಲಿ ಯೋಗ್ಯರು ಯಾರೆಂದು ವಿಚಾರಣೆ ಮಾಡಿ ಮುಂದಕ್ಕೆ ಹೊರಡುವ ತನಕ ಅವರಲ್ಲೇ ಇರ್ರಿ. ಆ ಮನೆಯೊಳಕ್ಕೆ ಹೋಗುವಾಗ ಶುಭವಾಗಲಿ ಅನ್ನಿರಿ. ಆ ಮನೆಯವರು ಯೋಗ್ಯ –ರಾಗಿದ್ದರೆ ನಿಮ್ಮ ಆಶೀರ್ವಾದವು ಅವರಿಗೆ ಆಗಲಿ; ಅಯೋಗ್ಯರಾಗಿದ್ದರೆ ನಿಮ್ಮ ಆಶೀರ್ವಾದವು ನಿಮಗೆ ಹಿಂದಕ್ಕೆ ಬರಲಿ. ಯಾರಾದೂ ನಿಮ್ಮನ್ನು ಸೇರಿಸಿಕೊಳ್ಳದೆಯೂ ನಿಮ್ಮ ವಾಕ್ಯಗಳನ್ನು ಕೇಳದೆಯೂ ಹೋದರೆ ನೀವು ಆ ಮನೆಯನ್ನಾಗಲಿ ಆ ಊರನ್ನಾಗಲಿ ಬಿಟ್ಟು ಹೊರಡುವಾಗ ನಿಮ್ಮ ಕಾಲಿಗೆ ಹತ್ತಿದ ಧೂಳನ್ನು ಝಾಡಿಸಿಬಿಡಿರಿ. ನ್ಯಾಯವಿಚಾರಣೆಯ ದಿವಸದಲ್ಲಿ ಅಂಥ ಊರಿನ ಗತಿಯು ಸೊದೋಮ್ ಗೊಮೋರಗಳ ಸೀಮೆಯ ಗತಿಗಿಂತಲೂ ಕಠಿಣವಾಗಿರುವದು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೋಡಿರಿ, ತೋಳಗಳ ನಡುವೆ ಕುರಿಗಳನ್ನು ಹೋಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿ ಕೊಡುತ್ತೇನೆ. ಆದದರಿಂದ ಸರ್ಪಗಳಂತೆ ಜಾಣರೂ ಪಾರಿವಾಳ ಗಳಂತೆ ನಿಷ್ಕಪಟಿಗಳೂ ಆಗಿರ್ರಿ. ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ; ಅವರು ನಿಮ್ಮನ್ನು ನ್ಯಾಯವಿಚಾರಣೆಯ ಸಭೆ ಗಳಿಗೆ ಎಳಕೊಂಡು ಹೋಗುವರು; ತಮ್ಮ ಸಭಾಮಂದಿರಗಳಲ್ಲಿ ನಿಮ್ಮನ್ನು ಕೊರಡೆಗಳಿಂದ ಹೊಡೆಯುವರು. ನನ್ನ ನಿಮಿತ್ತವಾಗಿ ನಿಮ್ಮನ್ನು ಅಧಿಪತಿಗಳ ಮುಂದಕ್ಕೂ ಅರಸುಗಳ ಮುಂದಕ್ಕೂ

ತೆಗೆದುಕೊಂಡು ಹೋಗುವರು. ಹೀಗೆ ಅವರಿಗೂ ಅನ್ಯಜನಗಳಿಗೂ ಸಾಕ್ಷಿಯಾಗುವದು. ಆದರೆ ಅವರು ನಿಮ್ಮನ್ನು ಒಪ್ಪಿಸಿಕೊಡುವಾಗ ಹೇಗೆ ಮಾತಾಡಬೇಕು ಏನು ಹೇಳಬೇಕು ಎಂದು ಚಿಂತೆಮಾಡಬೇಡಿರಿ; ಆಡತಕ್ಕ ಮಾತು ಆ ಗಳಿಗೆಯಲ್ಲಿ ನಿಮಗೆ ಸೂಚನೆಯಾಗುವದು. ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು. ಇದಲ್ಲದೆ ಅಣ್ಣನು ತಮ್ಮನನ್ನು, ತಂದೆಯು ಮಗನನ್ನು, ಮರಣಕ್ಕೆ ಒಪ್ಪಿಸುವರು; ಮಕ್ಕಳು ಹೆತ್ತವರ ಮೇಲೆ ತಿರುಗಿಬಿದ್ದು ಅವರನ್ನು ಕೊಲ್ಲಿಸುವರು. ಮತ್ತು ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆಮಾಡುವರು. ಆದರೆ ಕಡೇ ವರೆಗೂ ತಾಳುವವನು ರಕ್ಷಣೆಹೊಂದುವನು. ಒಂದು ಊರಲ್ಲಿ ನಿಮ್ಮನ್ನು ಹಿಂಸೆಪಡಿಸಿದರೆ ಮತ್ತೊಂದು ಊರಿಗೆ ಓಡಿಹೋಗಿರಿ; ಮನುಷ್ಯಕುಮಾರನು ಬರುವಷ್ಟರಲ್ಲಿ ನೀವು ಇಸ್ರಾಯೇಲ್ ಜನರ ಊರುಗಳ ಸಂಚಾರವನ್ನು ತೀರಿಸಿರುವುದಿಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಗುರುವಿಗಿಂತ ಶಿಷ್ಯನು ದೊಡ್ಡವನಲ್ಲ, ದಣಿಗಿಂತ ಆಳು ದೊಡ್ಡವನಲ್ಲ, ಗುರುವಿನಂತೆ ಆಗುವದು ಶಿಷ್ಯನಿಗೆ ಸಾಕು, ದಣಿಯಂತೆ ಆಗುವದು ಆಳಿಗೆ ಸಾಕು. ಅವರು ಮನೆಯ ಯಜಮಾನನಿಗೆ ಬೆಲ್ಜೆಬೂಲನೆಂದು ಹೆಸರಿಟ್ಟ ಮೇಲೆ ಆತನ ಮನೆಯವರನ್ನು ಏನೆಂದಾರು? ಆದರೂ ಅವರಿಗೆ ಹೆದರಬೇಡಿರಿ. ಮರೆಯಾಗಿರುವ ಯಾವುದೂ ವ್ಯಕ್ತವಾಗದೆ ಇರುವದಿಲ್ಲ; ಹೊರಪಡದ ರಹಸ್ಯವೂ ಇಲ್ಲ. ನಾನು ಕತ್ತಲಲ್ಲಿ ನಿಮಗೆ ಹೇಳುವುದನ್ನು ನೀವು ಬೆಳಕಿನಲ್ಲಿ ಹೇಳಿರಿ, ಮತ್ತು ಕಿವಿಯಲ್ಲಿ ಕೇಳಿದ್ದನ್ನು ಮಾಳಿಗೆಗಳ ಮೇಲೆ ನಿಂತು ಸಾರಿರಿ. ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ, ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೇ ಹೆದರಿರಿ. ದುಡ್ಡಿಗೆ ಎರಡು ಗುಬ್ಬಿಗಳನ್ನು ಮಾರುವದುಂಟಲ್ಲಾ; ಆದರೂ ನಿಮ್ಮ ತಂದೆಯ ಚಿತ್ತವಿಲ್ಲದೆ ಒಂದಾದರೂ ನೆಲಕ್ಕೆ ಬೀಳದು. ನಿಮ್ಮ ತಲೇಕೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ. ಆದದರಿಂದ ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು.

ಹಾಗಾದರೆ ಯಾವನು ಮನಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ, ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ತನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನಲ್ಲವೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು. ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವುದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಬೇಧಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು. ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ. ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ. ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು. ನಿಮ್ಮನ್ನು ಸೇರಿಸಿಕೊಳ್ಳುವವನು ನನ್ನನ್ನು ಸೇರಿಸಿಕೊಳ್ಳುವವನಾಗಿದ್ದಾನೆ; ನನ್ನನ್ನು ಸೇರಿಸಿಕೊಳ್ಳುವವನು ನನ್ನನ್ನು ಕಳುಹಿಸಿ ಕೊಟ್ಟಾತನನ್ನೇ ಸೇರಿಸಿಕೊಳ್ಳುವವನಾಗಿದ್ದಾನೆ. ಪ್ರವಾದಿಯನ್ನು ಪ್ರವಾದಿಯೆಂದು ಸೇರಿಸಿಕೊಳ್ಳುವವನು ಪ್ರವಾದಿಗೆ ಬರತಕ್ಕ ಪ್ರತಿಫಲವನ್ನು ಹೊಂದುವನು; ನೀತಿವಂತನನ್ನು ನೀತಿವಂತನೆಂದು ಸೇರಿಸಿಕೊಳ್ಳುವವನು ನೀತಿವಂತನಿಗೆ ಬರತಕ್ಕ ಪ್ರತಿಫಲವನ್ನು ಹೊಂದುವನು. ಮತ್ತು ಈ ಚಿಕ್ಕವರಲ್ಲಿ ಒಬ್ಬನಿಗೆ ಯೇಸುವಿನ ಶಿಷ್ಯನೆಂದು ಯಾವನಾದರೂ ಒಂದು ತಂಬಿಗೆ ತಣ್ಣೀರನ್ನಾದರೂ ಕುಡಿಯುವುದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅಂದನು. ಯೇಸು ತನ್ನ ಹನ್ನೆರಡು ಮಂದಿ ಶಿಷ್ಯರಿಗೆ ಹೇಳಬೇಕಾದದ್ದನ್ನು ಹೇಳಿ ಮುಗಿಸಿದ ಬಳಿಕ ಅಲ್ಲಿಯವರ ಊರುಗಳಲ್ಲಿ ಉಪದೇಶಮಾಡುವದಕ್ಕೂ ಸುವಾರ್ತೆಯನ್ನು ಸಾರುವದಕ್ಕೂ ಅಲ್ಲಿಂದ ಹೊರಟನು.

## ಮಾರ್ಕ 6:1–13

ಆತನು ಅಲ್ಲಿಂದ ಹೊರಟು ತನ್ನ ಊರಿಗೆ ಬಂದನು; ಶಿಷ್ಯರು ಆತನ ಹಿಂದೆಯೇ ಬಂದರು. ಸಬ್ಬತ್ ದಿನ ಬಂದಾಗ ಆತನು ಸಭಾಮಂದಿರಕ್ಕೆ ಹೋಗಿ ಉಪದೇಶಮಾಡುವದಕ್ಕೆ ಪ್ರಾರಂಭಿಸಿದನು. ಎಲ್ಲರು ಕೇಳಿ ಅತ್ಯಾಶ್ಚರ್ಯಪಟ್ಟು–ಇವನಿಗೆ ಈ ಮಾತುಗಳು ಎಲ್ಲಿಂದ ಬಂದಿದ್ದಾವು? ಇವನು ಪಡೆದಿರುವ ಈ ಜ್ಞಾನವೇನು? ಇವನ ಕೈಯಿಂದ ಇಂಥ ಮಹತ್ಕಾರ್ಯಗಳಾಗುವದೇನು? ಇವನು ಆ ಬಡಗಿಯಲ್ಲವೇ. ಇವನು ಮರಿಯಳ ಮಗನಲ್ಲವೇ. ಯಾಕೋಬ ಯೋಸೆ ಯೂದ ಸೀಮೋನ ಇವರ ಅಣ್ಣನಲ್ಲವೇ. ಇವನ ತಂಗಿಯರು ಇಲ್ಲಿ ನಮ್ಮಲ್ಲಿ ಇದ್ದಾರಲ್ಲವೇ ಎಂದು ಮಾತಾಡಿಕೊಂಡು ಆತನ ವಿಷಯವಾಗಿ ಬೇಸರಗೊಂಡರು. ಯೇಸು ಅವರಿಗೆ–ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಜನರಲ್ಲಿಯೂ ಸ್ವಂತ ಮನೆಯಲ್ಲಿಯೂ ಮಾತ್ರ ಮರ್ಯಾದೆಯಿಲ್ಲ ಎಂದು ಹೇಳಿದನು. ಆತನು ಅಲ್ಲಿ ಕೆಲವು ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥಮಾಡಿದ್ದೇ ಹೊರತು ಬೇರೆ ಯಾವ ಮಹತ್ಕಾರ್ಯವನ್ನೂ ಮಾಡುವದಕ್ಕಾಗಲಿಲ್ಲ. ಅವರು ತನ್ನನ್ನು ನಂಬದೆಹೋದದಕ್ಕೆ ಆತನು ಆಶ್ಚರ್ಯಪಟ್ಟನು. ಆತನು ಹಳ್ಳಿಪಳ್ಳಿಗಳನ್ನು ಸುತ್ತಿಕೊಂಡು ಉಪದೇಶಮಾಡುತ್ತಾ ಬಂದನು. ಮತ್ತು ಹನ್ನೆರಡು ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ಅವರನ್ನು ಇಬ್ಬರಿಬ್ಬರಾಗಿ ಕಳುಹಿಸಲಾರಂಭಿಸಿದನು. ಕಳುಹಿಸುವಾಗ ಅವರಿಗೆ ದೆವ್ವಗಳ ಮೇಲೆ ಅಧಿಕಾರಕೊಟ್ಟು–ಕೋಲು ಹೊರತು ದಾರಿಗೆ ಏನೂ ತಕ್ಕೊಂಡು ಹೋಗಬೇಡಿರಿ; ಬುತ್ತಿ, ಹಸಿಬೆ, ಹಮ್ಮೀಣಿಯಲ್ಲಿ ದುಡ್ಡು ಬೇಡ. ಕೆರಗಳನ್ನು ಮೆಟ್ಟಿಕೊಳ್ಳಬಹುದು. ಎರಡು ಅಂಗಿಗಳನ್ನು ತೊಟ್ಟುಕೊಳ್ಳಬೇಡಿರಿ ಎಂದು ಅಪ್ಪಣೆಕೊಟ್ಟನು.

ಇದಲ್ಲದೆ ಆತನು ಅವರಿಗೆ–ನೀವು ಎಲ್ಲಿಯಾದರೂ ಒಂದು ಮನೆಯಲ್ಲಿ ಇಳುಕೊಂಡಾಗ ಆ ಸ್ಥಳದಿಂದ ಹೊರಡುವ ತನಕ ಅಲ್ಲೇ ಇರಿ. ಮತ್ತು ಯಾವ ಸ್ಥಳದವರಾದರೂ ನಿಮ್ಮನ್ನು ಸೇರಿಸಿ ಕೊಳ್ಳದೆಯೂ ನೀವು ಹೇಳುವುದನ್ನು ಕೇಳದೆಯೂ ಹೋದರೆ ಆ ಸ್ಥಳದಿಂದ ಹೊರಟುಹೋಗುವಾಗ ನಿಮ್ಮ ಕಾಲಿಗೆ ಹತ್ತಿದ ಧೂಳನ್ನು ಝಾಡಿಸಿಬಿಡಿರಿ; ಇದು ಅವರಿಗೆ ಸಾಕ್ಷಿಯಾಗಿ ರಲಿ ಎಂದು ಹೇಳಿದನು. ಅವರು ಹೊರಟು ಹೋಗಿ ಜನರಿಗೆ–ದೇವರ ಕಡೆಗೆ ತಿರುಗಿಕೊಳ್ಳಬೇಕೆಂದು ಸಾರಿ ಅನೇಕ ದೆವ್ವಗಳನ್ನು ಬಿಡಿಸಿ ಅನೇಕ ರೋಗಿಗಳಿಗೆ ಎಣ್ಣೆಹಚ್ಚಿ ವಾಸಿಮಾಡಿದರು.

## ಲೂಕ 9:1–6

ಆತನು ಹನ್ನೆರಡು ಮಂದಿ ಶಿಷ್ಯರನ್ನು ಒಟ್ಟಿಗೆ ಕರೆದು ಅವರಿಗೆ ಎಲ್ಲಾ ದೆವ್ವಗಳನ್ನು ಬಿಡಿಸುವ ಮತ್ತು ರೋಗಗಳನ್ನು ವಾಸಿಮಾಡುವ ಶಕ್ತಿ ಅಧಿಕಾರಗಳನ್ನು ಕೊಟ್ಟು ದೇವರ ರಾಜ್ಯದ ವಿಷಯವನ್ನು ಸಾರುವದಕ್ಕೂ ಅಸ್ವಸ್ಥರಾದವರನ್ನು ಸ್ವಸ್ಥ ಮಾಡುವದಕ್ಕೂ ಅವರನ್ನು ಕಳುಹಿಸಿದನು. ಕಳುಹಿಸುವಾಗ ಅವರಿಗೆ ಹೇಳಿದ್ದೇನಂದರೆ–ದಾರಿಗೆ ಏನೂ ತಕ್ಕೊಂಡು ಹೋಗಬೇಡಿರಿ, ಕೋಲು ಹಸಿಬೆ ಬುತ್ತಿ ಹಣ ಬೇಡ; ಎರಡಂಗಿಗಳಿರಬಾರದು. ಇದಲ್ಲದೆ ನೀವು ಯಾವ ಮನೆಯಲ್ಲಿ ಇಳುಕೊಂಡರೂ ಅಲ್ಲೇ ಇರ್ರಿ, ಅಲ್ಲಿಂದಲೇ ಹೊರಡಿರಿ. ಮತ್ತು ಯಾವ ಊರಿನವರಾದರೂ ನಿಮ್ಮನ್ನು ಸೇರಿಸಿಕೊಳ್ಳದೆ ಹೋದರೆ ಆ ಊರನ್ನು ನೀವು ಬಿಟ್ಟು ಹೊರಡುವಾಗ ನಿಮ್ಮ ಕಾಲಿಗೆ ಹತ್ತಿದ ಧೂಳನ್ನು ಝಾಡಿಸಿಬಿಡಿರಿ; ಅದು ಅವರಿಗೆ ವಿರೋಧವಾಗಿ ಸಾಕ್ಷಿಯಾಗಿರಲಿ ಅಂದನು. ಆಗ ಅವರು ಹೊರಟುಹೋಗಿ ಎಲ್ಲೆಲ್ಲಿಯೂ ಸುವಾರ್ತೆಯನ್ನು ಸಾರುತ್ತಾ ರೋಗಿಗಳಿಗೆ ವಾಸಿಮಾಡುತ್ತಾ ಗ್ರಾಮಗಳಲ್ಲೆಲ್ಲಾ ಸಂಚರಿಸಿದರು.

*****

# ಬೆಳೆಯು ಬಹಳ – ಕೆಲಸದವರು ಸ್ವಲ್ಪ

**ರೀಪ್ರಿಂಟ್ಸ್ ಪುಟ 2635**

## ಮತ್ತಾಯ 9:35–10:8

**“ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು.” – ಮತ್ತಾಯ 10:20**

ಯೆಹೂದ್ಯರಲ್ಲಿ ಪ್ರಚಲಿತವಾಗಿದ್ದ ಸ್ವತಂತ್ರಭಾವವು ಒಂದು ಮಹಾ ವರದಾನ. ಹೇಗೆಂದರೆ ಇದರಿಂದ ನಮ್ಮ ಕರ್ತನಿಗೆ ದೇವರ ರಾಜ್ಯದ ಸುವಾರ್ತೆಯನ್ನು ಊರಿಂದೂರಿಗೆ ಸಂಚರಿಸಿ ಅವರ ಸಭಾಮಂದಿರಗಳಲ್ಲಿ ಯಾವ ಉಪಟಳವೂ ಇಲ್ಲದೆ ಉಪದೇಶಿಸಲು ಸಾಧ್ಯವಾಗಿತ್ತು ಮತ್ತು ಆತನು ಹಾಗೆಯೇ ಅದನ್ನು ಮಾಡಿದ್ದನು. ಇದಕ್ಕೆ ಬದಲಾಗಿ ಆತನು ಈ ದಿನಗಳಲ್ಲಿ ಯಾವುದೇ ಒಂದು ಕ್ರೈಸ್ತಪಂಗಡಗಳ ದೇವಾಲಯದಲ್ಲಿ ಉಪದೇಶಿಸಲು ಪ್ರಯತ್ನಿಸಿದ್ದೇಯಾದರೆ ಆತನಿಗೆ ಈ ಸೌಲಭ್ಯವು ನಿರಾಕರಿಸಲಾಗುತ್ತಿತ್ತೆಂದು ನಮಗೆ ಖಂಡಿತವಾಗಿ ಅನ್ನಿಸುವುದು. ಆತನು ಎಷ್ಟೇ ನಂಬಿಗಸ್ತನಾಗಿ ಸತ್ಯವೇದವು ಹೇಳಿರುವುದಕ್ಕೆ ಹೊಂದಿಕೊಂಡು ಅಧಿಕವಾದ ಸ್ಪಷ್ಟತೆಯಿಂದ ಬೋಧಿಸಿದ್ದರೂ, ದೇವರ ರಾಜ್ಯದ ವಿಷಯವಾಗಿ ತಮ್ಮದೇ ಆದ ಸಿದ್ಧಾಂತಗಳನ್ನು ಹೊಂದಿದವರಾದ ಅಲ್ಲಿನ ಅಧಿಕಾರಸ್ಥರಿಗೆ ಅದು ಅಷ್ಟೇ ಅತೃಪ್ತಿಕರವಾಗಿರುತ್ತಿತ್ತು. ಅವರ ಸಿದ್ಧಾಂತಗಳು ಪರಿಶೀಲನೆಗೆ ನಿಲುಕದವುಗಳಾಗಿದ್ದು ಇದರ ವಿಷಯದಲ್ಲಿನ ತಮ್ಮ ಬಲಹೀನತೆಗಳು ಹೀಗೆ ಬಹಿರಂಗವಾಗುವುದನ್ನು ಅವರು ಆಶಿಸುತ್ತಿರಲಿಲ್ಲ. ಧಾರ್ಮಿಕ ವಿಷಯಗಳಲ್ಲಿ ಯೆಹೂದ್ಯರಲ್ಲಿದ್ದಂತೆ ಕ್ರೈಸ್ತರಲ್ಲಿಯೂ ಈ ಸ್ವಾತಂತ್ರ್ಯವು ಇಲ್ಲದೆಹೋಗಿರುವುದು ಅವರ ಹಾನಿಗಾಗಿಯೇ. ಇದು ಈಗಿನ ಸುವಾರ್ತಾಸುಗ್ಗಿಯ ಸಂದೇಶಗಳ ಹರ್ಷಧ್ವನಿಯನ್ನು ಕೇಳಲು ಅವರಿಗೆ ಹೆಚ್ಚು ಕಷ್ಟಕರವನ್ನಾಗಿ ಮಾಡಿರುವುದು.

ನಮ್ಮ ಕರ್ತನು ರೋಗಿಗಳೆಲ್ಲರನ್ನು ಗುಣಪಡಿಸಿ ದ್ದರೂ ಸಹ ಇನ್ನೂ ಅಲ್ಲಿ ಬೇರೆ ಬೇರೆ ದಿಕ್ಕುಗಳಿಂದ ಬಂದು ಗುಣಹೊಂದುವ ನಿರೀಕ್ಷೆಯಿಂದಿದ್ದ ರೋಗಿಗಳ ಗುಂಪಿತ್ತು. ಆತನು ಸಂಕಷ್ಟಕ್ಕೊಳಗಾದ ಇಸ್ರಾಯೇಲಿನ ಕುರಿಗಳ ವಿಷಯವಾಗಿ ಬಹು ಅನುಕಂಪವುಳ್ಳವನಾಗಿದ್ದನೆಂಬುದನ್ನು ಓದುವಾಗ ನಮಗೆ ಇದು ಆತನಲ್ಲಿದ್ದ ಕರುಣೆ ಪ್ರೀತಿ ದಯೆ ಇವುಗಳ ವಿಷಯವಾಗಿ ನಮಗೆ ಗಾಢವಾದ ಅರಿವುಂಟಾಗುತ್ತದೆ. ಹಾಗೂ ತನ್ನ ತಂದೆಯ ಮತ್ತು ಪರಿಶುದ್ಧ ದೂತರ ಮಹಿಮೆಯನ್ನು ತ್ಯಜಿಸಿ ಮಾನವರ ಸ್ಥಿತಿಗೆ ತನ್ನನ್ನು ತಗ್ಗಿಸಿಕೊಂಡಾತನು ಬಲಹೀನರು ಪಾಪಿಗಳು ಕೀಳುಮಟ್ಟದಲ್ಲಿರುವವರು ನೀತಿಗೆಟ್ಟವರು ಬಾಧಿತರು ಇವರ ವಿಷಯದಲ್ಲಿ ಅನುಕಂಪವುಳ್ಳವನಾಗಿರುವದಕ್ಕೆ ನಮಗೆ ವಿಚಿತ್ರ ವೆಂದೆನಿಸುವುದಿಲ್ಲ. ವಾಸ್ತವದಲ್ಲಿ ಇದು ಆತನಿದ್ದಂತೆಯೇ ಇರುವುದೆಂದು ನಾವು ಹೇಳುವುದು. ಇಂಥಾ ಅನುಕಂಪದ ಭಾವವಿಲ್ಲದೆ ಆತನು ನಮ್ಮ ಪರವಾಗಿ ಪರಲೋಕದ ಮಹಿಮೆಯನ್ನು ಬಿಟ್ಟು ನಮಗೆ ವಿಮೋಚಕನಾಗಿರಲು ಆತನಿಗೆ ಹೇಗೆ ತಾನೇ ಸಾಧ್ಯ! ಆತನು ಈಗಲೂ ಹೀಗೆಯೇ ಇರುವನೆಂದು ನಾವು ಯೋಚಿಸುವಾಗ ನಮ್ಮ ಬಲಹೀನತೆ ದೋಷಗಳ ನಡುವೆಯೂ ಮತ್ತು “ನರಳುತ್ತಿರುವ” ಲೋಕದ ಬಲಹೀನತೆ ದೋಷಗಳ ನಡುವೆಯೂ ಸಹ ಆತನಲ್ಲಿ ನಮಗೆ ಹೊಸ ಭರವಸಮೂಡುವದು. ಹಾಗೂ ಅದೇ ಯೇಸುವು ತನ್ನ ಜನರ ವಿಷಯವಾಗಿ ಮಾತ್ರವಲ್ಲದೆ ಒಂದು ವಿಶಾಲಾರ್ಥದಲ್ಲಿ ತಾನು

ಭೂಲೋಕದ ಎಲ್ಲಾ ಕುಲಗಳ ವಿಷಯವಾಗಿಯೂ ಅನುಕಂಪವುಗಳವನಾಗಿದ್ದು ಒಂದು ನಿಗಧಿತ ಕಾಲದಲ್ಲಿ ಅವರೆಲ್ಲರಿಗೆ ಮಾನಸಿಕ ನೈತಿಕ ಶಾರೀರಿಕ ಸಂಬಂಧವಾದ ಹಾನಿಕರ ಪಾಪದಿಂದ ಪೂರ್ಣವಾಗಿ ಮರಳಿ ಹಿಂಬರುವಂಥ ಒಂದು ಅವಕಾಶವನ್ನು ನೀಡುವನು. ಖಂಡಿತವಾಗಿಯೂ ಆತನು ತನ್ನ ತಂದೆಯು ನಿಗಧಿಮಾಡಿದ ಸಮಯದವರೆಗೂ ಕಾದಿರುವನು; ಆನಂತರ ಆತನು ನಿಜವಾಗಿಯೂ ಸಮಸ್ತವನ್ನು ಸರಿಮಾಡುವ ಕಾಲದಲ್ಲಿ ತನಗೆ ನಂಬಿಗಸ್ತರಾದವರೊಡನೆ ಅಂದರೆ ಆ ರಾಜ್ಯಕ್ಕೆ ಸೇರುವ ವರ್ಗದವರೊಡನೆ ಅಬ್ರಾಹಾಮನ ಸಂತತಿಯಾಗಿ ಭೂಲೋಕದ ಎಲ್ಲಾ ಕುಲಗಳಿಗೆ ದೇವರೊಂದಿಗೆ ಸಂಧಾನವಾಗಿ ನಿತ್ಯಜೀವವನ್ನು ಪಡೆಯುವ ಆಶೀರ್ವಾದವನ್ನು ನೀಡುವನು.

ನಮ್ಮ ಪಾಠದ ವಿಷಯದ ಸಮಯದಲ್ಲಿ ಆತನ ಕಾರ್ಯವು ಇಂಥಾ ವಿಶಾಲವಾದ ತಿರುವನ್ನು ತೆಗೆದು ಕೊಂಡಿರಲಿಲ್ಲ; ಈಗ ಆತನು ಆ ಸಮಯ ಪರಿಮಿತಿಯನ್ನು ದಾಟಿ ಮುಂದುವರಿದು ಬಂದಿದ್ದರೂ ಈಗಲೂ ಆ ಕಾಲವು ಇನ್ನೂ ಪ್ರಾಪ್ತವಾಗಿರುವುದಿಲ್ಲ. ಆಗ ದೇವರೊಂದಿಗೆ ಸಂಧಾನವಾಗಲು ಮಾಡುವ ಆತನ ಸಹಾಯದ ವಿಷಯವಾದ ಆತನ ಸಂದೇಶವು ಕೇವಲ ತಪ್ಪಿಸಿಕೊಂಡ ಕುರಿಯಂತಿರುವ ಇಸ್ರಾಯೇಲ್ ಮನೆತನದವರಿಗೆ ಮಾತ್ರ ಸೀಮಿತವಾಗಿದ್ದು, ಅದು ಸಮಾರ್ಯದವರಿಗಾಗಲೀ ಅನ್ಯಜನರಿಗಾಗಲೀ ವಿಸ್ತರಿಸಲ್ಪಟ್ಟಿರಲಿಲ್ಲ. ಅಲ್ಲಿಂದೀಚೆಗೆ ಸಂಧಾನವಾಗುವ ಆಶೀರ್ವಾದವು ಈ ಸುವಾರ್ತಾಯುಗದಲ್ಲಿ ಸಮಾರ್ಯರು ಮತ್ತು ಅನ್ಯಜನರಲ್ಲಿ ಯಾರ್ಯಾರು ಕೇಳುವ ಕಿವಿಯುಳ್ಳವರಾಗಿರುವರೋ ಅವರೆಲ್ಲರಿಗೆ ವಿಸ್ತರಿಸಲಾಗುತ್ತಿ – ರುವುದು. ಹೀಗಾಗಿ ಈ ಸುವಾರ್ತಾಯುಗದಲ್ಲಿ ಅವರು ದೇವರೊಂದಿಗೆ ಸಂಧಾನವಾಗುವ ಭಾಗ್ಯವನ್ನು ಪಡೆದಿರುವರು, ಆದರೆ ಕಿವುಡರೆಲ್ಲರ ಕಿವಿಗಳು ತೆರೆಯಲ್ಪಟ್ಟು ಅವರೆಲ್ಲರೂ ಅಂದರೆ ಚಿಕ್ಕವರಿಂದ ದೊಡ್ಡವರ ವರೆಗೂ ದೇವರನ್ನು ತಿಳಿದುಕೊಳ್ಳುವದು ಈ ಕಾಲವನ್ನು (ಸುವಾರ್ತಾಯುಗವನ್ನು) ಅನುಸರಿಸಿ ಬರುವ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ನಡೆಯಲ್ಪಡುವುದು.

ಹೀಗಾಗಿ ಎಲ್ಲಿಯವರೆಗೂ ಕರ್ತನಿಂದ ಸಹಾಯದ ಅಗತ್ಯವಿರುವವರು ಇರುವರೋ ಹಾಗೂ ಅದನ್ನು ಬಯಸುವರೋ ಅಲ್ಲಿಯವರೆಗೂ ಕನಿಕರವೆಂಬುದು ನಮ್ಮ ಕರ್ತನ ಗುಣದಲ್ಲಿನ ಒಂದು ಅಂಶವಾಗಿ ವ್ಯಕ್ತವಾಗುತ್ತಿರುವುದು; ಮತ್ತು ಇದು ಆತನಿಂದ ಸಹಾಯವನ್ನು ಬಯಸುವವರೆಲ್ಲರೂ ಅದನ್ನು ಪಡೆದುಕೊಳ್ಳುವವರೆಗೂ ಅಂದರೆ ಸಾವಿರ ವರುಷದ ಆಳ್ವಿಕೆಯ ಕಾಲದ ಅಂತ್ಯದ ವರೆಗೂ ವ್ಯಕ್ತಗೊಳ್ಳುತ್ತಿರುವದು. ಅಲ್ಲದೆ ಇದರಿಂದ ಆಶೀರ್ವಾದ ಪಡೆಯಲಾರದ ಕೆಲವೇ ಕೆಲವರು ಯಾರೆಂದರೆ ಆತನ ಸಹಾಯವನ್ನು ಮನಃಪೂರ್ವಕವಾಗಿ ನಿರಾಕರಿಸುವಂಥವರು. ಆಗ ಅಲ್ಲಿಯವರೆಗೂ ಅಂದರೆ ಇದು ನೆರವೇರುವವರೆಗೂ ಆತನಿಗೆ ಕನಿಕರ ಬಳಸುವದನ್ನು ನಿಲ್ಲಿಸಲಾಗದು; ಕಾರಣ ಆನಂತರದಲ್ಲಿ ಕನಿಕರದ ಅವಶ್ಯಕತೆ ಇರುವುದಿಲ್ಲ; ಆಗ ಕ್ರಿಸ್ತನಲ್ಲಿರುವ ದೇವರ ಕೃಪೆಯ ಮೂಲಕವಾಗಿ ಪರಿಪೂರ್ಣತೆ ಹೊಂದುವ ಅವಕಾಶವು ಅಲ್ಲಿ ಎಲ್ಲೆಡೆ ಲಭ್ಯವಾಗಿರುವುದು.

ಜನರ ಗುಂಪಿನ ಬಗ್ಗೆ ನಮ್ಮ ಕರ್ತನಿಗಿದ್ದ ಕನಿಕರವು ಅಸ್ವಸ್ಥರನ್ನು ಸ್ವಸ್ಥಪಡಿಸುವ, ಮುಂತಾದ, ಶಕ್ತಿ ಪಡೆದ ಪ್ರತಿನಿಧಿಗಳನ್ನು ಈ ಕಾರ್ಯಕ್ಕಾಗಿ ಕಳುಹಿಸಿಕೊಡುವ ಸಲಹೆ ಮಾಡಿತ್ತು. ಹಾಗೂ ಬೆಳೆಯು ಬಹಳ ಆದರೆ ಕೆಲಸದವರು ಸ್ವಲ್ಪ ಎಂಬ ತನ್ನ ಆಲೋಚನೆಯ ಅನುಸಾರ ತಮ್ಮ ಆಲೋಚನೆಗಳನ್ನೂ ಹೊಂದಿಸಿಕೊಂಡಿರಬೇಕೆಂದು ಆತನು ತನ್ನ ಶಿಷ್ಯರಿಗೆ ತಿಳಿಸಿ ಈ ವಿಷಯವಾಗಿಯೂ ಪ್ರಾರ್ಥಿಸಬೇಕೆಂದು ಹೇಳಿದ್ದನು. ಅವರ ಪ್ರಾರ್ಥನೆಯು ತಿರುಳು ಅಗತ್ಯವಾಗಿ ಬೆಳೆಯ ಯಜಮಾನನಿಗೆ ಸುಗ್ಗಿಯ ಬೆಳೆಯನ್ನು ಕೊಯ್ಯುವವನಾಗಿ ತನ್ನನ್ನು ಕಳುಹಿಸಿಕೊಡು ಎಂದಾಗಿತ್ತು. ಯೇಸುವು ತಾನೇ ಆ ಬೆಳೆಯ ಯಜಮಾನನು. ಆ ಸಂಗತಿಯೆಲ್ಲವೂ ಆತನ ಕೈಯಲ್ಲಿತ್ತು ಮತ್ತು ಕರ್ತನ ಹನ್ನೆರಡು ಮಂದಿ ಶಿಷ್ಯರು ಶೀಘ್ರವಾಗಿ ಆತನು ಸುಗ್ಗಿಯ ಕಾರ್ಯವನ್ನು ಹೆಚ್ಚಿಸುವ ಆಲೋಚನೆಯಲ್ಲಿರುವುದನ್ನು ಮತ್ತು ಆತನಿಗಿದ್ದ ಉತ್ಸಾಹವನ್ನೂ ಸ್ಪಷ್ಟವಾಗಿ ಗ್ರಹಿಸಿಕೊಂಡಿದ್ದರು. ಅದರ ಪರಿಣಾಮವಾಗಿ ಅವರನ್ನು ಇಬ್ಬಿಬ್ಬರನ್ನಾಗಿ ಕಳುಹಿಸಿಕೊಟ್ಟನು; ಆದರೂ, ತನ್ನ ಸೇವೆಯನ್ನು ಶಾರೀರಿಕ ಸಂಬಂಧವಾದ ಇಸ್ರಾಯೇಲ್ಯರಿಗೆ ಸೀಮಿತಪಡಿಸಿಕೊಂಡಂತೆಯೇ, ಅವರು ಹೋಗುವುದನ್ನೂ ನಿರ್ಬಂಧಿಸಿದ್ದನು, ಏಕೆಂದರೆ ದೇವರ ಒಡಂಬಡಿಕೆ ವಾಗ್ದಾನಗಳೆಲ್ಲವೂ ಆ ಜನಾಂಗಕ್ಕೆ ಇನ್ನೂ ಸೀಮಿತವಾಗಿದ್ದವು ಮತ್ತು ತಂದೆ ನಿಗಧಿಮಾಡಿರುವ ಸಮಯವು ಬರುವವರೆಗೂ ಅವುಗಳು ಇತರರಿಗೆ ತೆರೆಯಲ್ಪಡಲಾಗದು. ಏನಂದರೆ ಅದು ಪ್ರವಾದಿಯಾದ ದಾನಿಯೇಲನ ಮೂಲಕ ತಿಳಿಸಲಾಗಿದ್ದು ಮತ್ತು ನಮ್ಮ ಕರ್ತನು ಶಿಲುಬೆಗೆ ಹಾಕಲ್ಪಟ್ಟ ನಂತರದ ಮೂರುವರೆ ವರುಷಗಳ ಅಂತ್ಯದಲ್ಲಿ ಮುಕ್ತಾಯವಾಗುವ ಎಪ್ಪತ್ತು ವಾರಗಳ ಕೃಪಾನುಗ್ರಹದ ಕಾಲ.

"ಮತ್ತು ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಹತ್ತರಕ್ಕೆ ಕರೆದು ದೆವ್ವಗಳನ್ನು ಬಿಡಿಸುವದಕ್ಕೂ ಎಲ್ಲಾತರದ ರೋಗಗಳನ್ನೂ ಎಲ್ಲಾತರದ ಬೇನೆಗಳನ್ನು ವಾಸಿಮಾಡುವುದಕ್ಕೂ ಅವರಿಗೆ ಅಧಿಕಾರ ಕೊಟ್ಟನು." ಈ ಅಧಿಕಾರದಲ್ಲಿ ಸೂಚಿತವಾದ ಶಕ್ತಿಯು ಪವಿತ್ರಾತ್ಮವಾಗಿತ್ತು. ಇದು ಮುಂದೆ ಅವರು ಪಂಚಾಶತ್ತಮ ದಿನದಲ್ಲಿ ತಂದೆಯಿಂದ ಪಡೆದಂಥದ್ದೇ ಆದರೂ ಭಿನ್ನತೆಯುಳ್ಳದ್ದಾಗಿತ್ತು. ಅದು ಇಲ್ಲಿಯೂ ಇದೇ ರೀತಿಯದ್ದಾಗಿತ್ತು ಅಂದರೆ ಅದರಲ್ಲಿ ಪವಿತ್ರಾತ್ಮವು ಅಥವಾ ದೇವರ ಶಕ್ತಿಯು ಯಾವಾಗಲೂ ಒಂದೇ ಆಗಿರುತ್ತಿತ್ತಾದರೂ ಅದು ಬೇರೆ ಬೇರೆ ವಿಧದಲ್ಲಿ ತೋರ್ಪಡಿಸಿಕೊಳ್ಳುತ್ತಿತ್ತು. ಅದು ಪವಿತ್ರವಾಗಿದ್ದು ಅಂದರೆ ನಮ್ಮ ಕರ್ತನಾದ ಯೇಸುವಿನ ಆತ್ಮವಾಗಿದ್ದು ಆತನಿಗೆ ಈ ಪವಿತ್ರಾತ್ಮವು ಅಥವಾ ಶಕ್ತಿಯನ್ನು ಅಳತೆಯಿಲ್ಲದೆ (ಹೇರಳವಾಗಿ) ಅನುಗ್ರಹಿಸಲಾಗಿತ್ತು. ಆತನು ಆ ಸಮಯದಲ್ಲಿ ಅದನ್ನು ಈ ಅಪೋಸ್ತಲರಿಗೆ ನೀಡಿ ಆ ಮೂಲಕವಾಗಿ ಅವರು ತನ್ನ ಪ್ರತಿನಿಧಿಗಳಾಗಿ ತನ್ನ ಹೆಸರಿನಲ್ಲಿ ಕಾರ್ಯ ನಿರ್ವಹಿಸುವವರಾಗುವಂತೆ ಮಾಡಿದ್ದನು.

ರೋಗಗಳನ್ನು ಗುಣಪಡಿಸುವ ಮೂಲಕವಾಗಿ ನಮ್ಮ ಕರ್ತನಾದ ಯೇಸುವಿನಿಂದ ಶಕ್ತಿಯು ನಿಜವಾಗಿಯೂ ಹೊರಟು ಬರುತ್ತಿದ್ದುದರ ಪರಿಣಾಮವಾಗಿ ಪ್ರತಿಯೊಂದು

ಗುಣಪಡಿಸುವಿಕೆಯೂ ಹೀಗೆ ಆತನ ಜೀವಸತ್ವವಾದ ತನ್ನ ಸ್ವಂತ ಶಕ್ತಿಯುನ್ನು ತನ್ನಿಂದ ತಾನೇ ಕಳೆದುಕೊಳ್ಳುವುದೆಂಬ ಅರ್ಥಬರುತ್ತಿತ್ತೆಂದು ನಾವು ಊಹಿಸಿಕೊಳ್ಳಬಹುದು. ಹೀಗೆ ನಾವು ಈ ಸಂದರ್ಭದಲ್ಲಿ ನಾವು ಅರ್ಥಮಾಡಿಕೊಳ್ಳಬೇಕಿರುವುದೆಂದರೆ ರೋಗಗಳನ್ನು ಗುಣಪಡಿಸುವ ಶಕ್ತಿಯು ಯೇಸುವಿನ ಶಕ್ತಿಯಾಗಿದ್ದು ಮತ್ತು ಇಲ್ಲಿ ತನ್ನ ಶಿಷ್ಯರು ಉಪಯೋಗಿಸುತ್ತಿದ್ದುದು ಅವರ ಸ್ವಂತ ಶಕ್ತಿಯಾಗಿರದೆ ಅದು ಕೇವಲ ಆತನದೇ ಆಗಿದ್ದು ಅತನಿಂದ ಅವರಿಗೆ ಕೊಡಲ್ಪಟ್ಟದ್ದಾಗಿತ್ತು. ಆತನು ಈ ಶಕ್ತಿಯನ್ನು ಅವರಿಗೆ ನೀಡುವಾಗ ಹೇಳಿದ್ದೇನೆಂದರೆ: “ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ.” ಅವರು ತಾವು ಕಳಕೊಳ್ಳು ವಂಥದನ್ನು ನೀಡುತ್ತಿರಲಿಲ್ಲ, ಆದರೆ ಅದು ಯೇಸುವಿನಿಂದ ಪ್ರತಿ ದಿನದಲ್ಲಿಯೂ ಪ್ರತಿಗಳಿಗೆಯಲ್ಲಿಯೂ ಕಳೆದುಹೋಗುತ್ತಿದ್ದು ದಾಗಿತ್ತು. ನಮ್ಮ ಕರ್ತನು ಅನುದಿನವೂ ಇತರರಿಗೆ ಒಳ್ಳೆಯದನ್ನು ಮಾಡುವುದರಲ್ಲಿ ತನ್ನ ಜೀವವನ್ನು ಅರ್ಪಿಸುತ್ತಿದ್ದನೆಂಬ ಅಂಶವನ್ನು ನಾವು ಗ್ರಹಿಸಿದಲ್ಲಿ ಆತನ ಪರಿಪೂರ್ಣವಾದ ಜೀವವು ಮೂರುವರೆ ವರುಷದ ಸಣ್ಣ ಅವಧಿಯಲ್ಲಿ ಹೇಗೆ ಪೂರ್ಣವಾಗಿ ಬಳಸಲ್ಪಟ್ಟಿತ್ತೆಂಬುದನ್ನು ನಾವು ಮನವರಿಕೆಮಾಡಿಕೊಳ್ಳಬಹುದು.

ರೋಗಿಗಳನ್ನು ಗುಣಪಡಿಸುವುದು ಮತ್ತು ದೆವ್ವಗಳನ್ನು ಬಿಡಿಸುವುದು ಕೇವಲ ತಮ್ಮ ಸೇವೆಯ ಕಾರ್ಯಭಾರದ ಒಂದು ಭಾಗವಾಗಿತ್ತು. ಅದರ ಜೊತೆಯಲ್ಲಿ ಅವರು ದೇವರ ರಾಜ್ಯದ ಸುವಾರ್ತೆಯನ್ನು ಅಂದರೆ ದೇವರ ರಾಜ್ಯವು ಸಮೀಪಿಸಿತೆಂಬ ಶುಭವರ್ತಮಾನವನ್ನು ಸಾರಿ ಹೇಳಬೇಕಿತ್ತು. ಅಲ್ಲದೆ ಅದ್ಬುತಗಳ ಪ್ರಭಾವವು ಆ ಸಂದೇಶಕ್ಕೆ ಅವರ ಗಮನವನ್ನು ಸೂಕ್ತವಾಗಿ ಸೆಳೆದು ಜನರನ್ನು ಆ ರಾಜ್ಯಕ್ಕೆ ಸಿದ್ಧರನ್ನಾಗಿ ಮಾಡಿ, ಹೌದು ಅವರನ್ನು ಕಾತುರಪಡುವವರನ್ನಾಗಿ ಮಾಡಬೇಕಿತ್ತು. ಆದರೆ ದಾಖಲೆಗಳು ತೋರಿಸಿರುವ ಹಾಗೆ ಜನರು ಅದ್ಬುತಗಳು ಹಾಗು ರೋಗಗುಣಪಡಿಸುವಿಕೆಗಳ ಬಗ್ಗೆ ಕಾತುರಪಡುವವರಾಗಿದ್ದು ದೇವರ ರಾಜ್ಯದ ಬಗ್ಗೆ ನಿರ್ಲಕ್ಷ್ಯತೋರಿದ್ದರು. ಅವರು ಯೇಸುವಿನಿಂದ ಮತ್ತು ಆತನ ಶಿಷ್ಯರಿಂದ ಸ್ವಸ್ಥತೆಯನ್ನು ಪಡೆಯುತ್ತಿದ್ದರಾದರೂ ದೇವರ ರಾಜ್ಯದ ವಿಷಯವಾಗಿ ತಿಳುವಳಿಕೆಯನ್ನು ಹೊಂದಬೇಕಾಗಿ ಬಂದಾಗ ಎಂದಿನಂತೆ ಅವರು ತಮ್ಮ ಕುರುಡರಾದ ಮಾರ್ಗದರ್ಶಕರನ್ನು ಹಿಂಬಾಲಿಸಿ ಹೋಗುತ್ತಿದ್ದರು.

ಹೀಗಿದ್ದರೂ ಈ ಸೇವಾಕಾರ್ಯದ ಪ್ರಭಾವವು ಇಸ್ರಾಯೇಲಿನ ಪರ್ಯಂತರ ಸಂಪೂರ್ಣವಾಗಿ ಕಳೆದು ಹೋಗಿರ ಲಿಲ್ಲವೆಂದು ನಾವು ಭಾವಿಸಬಹುದು ಮತ್ತು ನಮ್ಮ ಕರ್ತನ ಶಿಲುಬೆಯ ಮರಣದ ನಂತರ ಅಲ್ಲದೆ ಪಂಚಾಶತ್ತಮ ದಿನದಂದು ಶಿಷ್ಯರ ಮೇಲೆ ಪವಿತ್ರಾತ್ಮವು ಬಂದ ನಂತರ ಅವರು ದೇವರ ರಾಜ್ಯದ ಸುವಾರ್ತೆಯನ್ನು ಬೇರೊಂದು ದೃಷ್ಟಿಯಿಂದ ಅಂದರೆ ನಿಜವಾದ ಇಸ್ರಾಯೇಲ್ಯರನ್ನು ಕ್ರಿಸ್ತನೊಂದಿಗೆ ಜೊತೆಗೂಡಿ ಆತನೊಡನೆ ದೇವರ ರಾಜ್ಯದಲ್ಲಿ ಸಹಬಾಧ್ಯರರಾಗಲು ಆಹ್ವಾನ ನೀಡುವ ದೃಷ್ಟಿಯಿಂದ ಸಾರುತ್ತಿದ್ದರು. ನಿಸ್ಸಂಶಯವಾಗಿ ಆಗ ಹಿಂದೆ ಅದ್ಬುತಗಳ ಬಗ್ಗೆ ಕೇಳಿ ಅದನ್ನು ನೋಡಿ ಸಾಕ್ಷಿಗಳಾಗಿದ್ದವರು ಅಷ್ಟರ ಮಟ್ಟಿಗೆ ಭ್ರೂಣಾವಸ್ಥೆಯಲ್ಲಿದ್ದ ರಾಜ್ಯಕ್ಕೆ ಅಂದರೆ ಕರ್ತನಿಗೆ ತಮ್ಮನ್ನು ಪ್ರತಿಷ್ಠಿಸಿಕೊಳ್ಳುವುದರ ಮೂಲಕ ಸಭೆಯಾಗಿ ಸೇರಲು ಸಿದ್ಧರಾಗಿರುತ್ತಿದ್ದರು. ಪಂಚಾಶತ್ತಮ ದಿನದ ನಂತರ ಕೆಲವು ದಿನಗಳಲ್ಲೇ ಸಾವಿರಾರು ಜನರು ಮತಾಂತರ ಹೊಂದಿದುದು ಇದನ್ನು ಪುಷ್ಟೀಕರಿಸುತ್ತದೆ.

ಯೆಹೂದ್ಯರ ಕಾಲದ ಅಂತ್ಯದಲ್ಲಿ ನಡೆದ (ಫಲವನ್ನು ಕೂಡಿಸುವ) ಸುಗ್ಗಿಕಾರ್ಯವು ಈ ಸುವಾರ್ತಾಯುಗದ ಸುಗ್ಗಿಕಾರ್ಯಕ್ಕೆ ಛಾಯೆಯಾಗಿಯೂ, ಮಾದರಿಯಾಗಿಯೂ ಇರುವುದು. ಮತ್ತು ಆಗ ಇದ್ದಂತೆ ಈಗಲೂ ಯೇಸುವು ಸುಗ್ಗಿ ಬೆಳೆಯ ಯಜಮಾನನಾಗಿದ್ದು ಶಿಷ್ಯರು ಆತನ ದೂತರಾಗಿ ಫಲವನ್ನು ಕೂಡಿಸಿಡುವ ಕಾರ್ಯದಲ್ಲಿ ಸಾಧನಗಳಾಗಿರುವರು. ಆಗಿದ್ದಂತೆಯೇ ಈಗಲೂ ಆತನು ಅವರಿಗೆ ಮಾತನಾಡಿ ಅವರಿಗೆ ಬೆಳೆಯು ಬಹಳ ಆದರೆ ಕೆಲಸದವರು ಸ್ವಲ್ಪವೆಂದು ಹೇಳುತ್ತಿರುವುದಾಗಿ ತೋರುವದು. ಈ ವಿಷಯದಲ್ಲಿ ನಮಗೆ ಅತನಿಗಿದ್ದ ಭಾವವೇ ಇದ್ದಲ್ಲಿ ಆತನ ಸೇವೆಗೆ ಕೆಲಸದವರನ್ನು ಕಳುಹಿಸಿಕೊಡಲು ಬೇಡುವವರಾಗಿರುವೆವು ಅಲ್ಲದೆ ಹಾಗೆಯೇ ಕಳುಹಿಸಿಕೊಡುವದಕ್ಕೆ ಆತನು ಸಂತೋಷವುಳ್ಳವನಾಗಿರುವನು. ಹಾಗೂ ಹಲವರು ಅನುದಿನವೂ ಹೀಗೆ ಪ್ರಾರ್ಥಿಸುತ್ತಿದ್ದು ಇನ್ನೂ ಹೆಚ್ಚಾದ ಸುಗ್ಗೀ ಕಾರ್ಯವು ತಮ್ಮ ಕೈಗೆ ದೊರೆಯಲು ಸಾಧ್ಯವೆಂಬುದನ್ನು ನೋಡ ಬಯಸುತ್ತಿರುವರು. ಅಲ್ಲದೆ ನಮ್ಮ ಕರ್ತನು ಕೃಪಾಪೂರ್ಣನಾಗಿ ಅವರೊಂದಿಗಿದ್ದು ಅವರ ಸೇವೆಯಲ್ಲಿ ಮಾರ್ಗದರ್ಶನ ಮಾಡಿ ಅದರ ಫಲವನ್ನು ಅವರ ಒಳಿತಿಗೂ ಮತ್ತು ಇತರರ ಒಳತಿಗಾಗಿ ಆಶೀರ್ವದಿಸುತ್ತಿರುವನು. ಅಂದು ಆತನ ಶಿಷ್ಯರಲ್ಲಿ ಎಲ್ಲರೂ ಈ ವಿಧವಾಗಿ ಪ್ರಾರ್ಥಿಸಿ ಸುವಾರ್ತೆ ಸುಗ್ಗಿ ಕಾರ್ಯ ಅಲ್ಲಿ ಒಂದು ಪಾಲನ್ನು ಪಡೆಯುವ ಅವಕಾಶವನ್ನು ಪಡೆದ ಹಾಗೆ ಈಗಲೂ ನಿಜವಾದ ಶಿಷ್ಯರು ಈ ಪ್ರಾರ್ಥನೆಯನ್ನು ಮಾಡುತ್ತಿರಬೇಕು ಈ ಸೇವೆಯನ್ನು ಉಪಯೋಗಿಸಿಕೊಳ್ಳುವ ಅವಕಾಶಕ್ಕಾಗಿ ನಿರೀಕ್ಷಿಸುತ್ತಿರಬೇಕು.

ಸುಗ್ಗಿಯ ಕಾರ್ಯದ ವಿಧಾನದಲ್ಲಿ ಆಗ ಇದ್ದದಕ್ಕೂ ಮತ್ತು ಈಗ ಇರುವುದಕ್ಕೂ ಸ್ವಲ್ಪ ವ್ಯತ್ಯಾಸಗಳಿರಬಹುದಾದರೂ ಅವು ಗಣನೀಯವಾಗಿ ಒಂದೇ ರೀತಿಯಾಗಿರುವದು. ಇದು ಶಾರೀರಿಕ ಇಸ್ರಾಯೇಲ್ಯರಿಗೆ ಸಂಬಂಧಿಸಿದ ಸಂಗತಿಯಾಗಿರುವುದಿಲ್ಲ ಅಲ್ಲದೆ ಸುಗ್ಗೀ ಕೊಯ್ಯುವವರ ಮೂಲಕವಾಗಿ ಕಳುಹಿಸಲಾದ ಆಶೀರ್ವಾದಗಳು ಶಾರೀರಿಕ ಸಂಬಂಧವಾದವುಗಳೂ ಅಲ್ಲ ಅಂದರೆ ಶಾರೀರಿಕವಾದ ರೋಗಗಳನ್ನು ಗುಣಪಡಿಸುವ ಸಂಬಂಧವಾಗಿರುವುದಿಲ್ಲ. ಆದರೆ ಅವು ಇವುಗಳಿಗಿಂತಲೂ ಉತ್ತಮವಾದವುಗಳು. ಅಂದರೆ ಅವು ಮನೋನೇತ್ರಗಳನ್ನು ತೆರೆಯುವಂಥದಾಗಿದ್ದು ಶಾರೀರಿಕವಾದ ನೇತ್ರಗಳನ್ನು ತೆರೆಯಮಾಡುವದಕ್ಕಿಂತಲೂ ಉತ್ಕೃಷ್ಟವಾಗಿರುವುದು; ಕರ್ತನ ಯೋಜನೆಯನ್ನು ಆಲಿಸುವ ವಿಷಯವಾಗಿರುವ ಕಿವುಡು ತನವನ್ನು ನಿವಾರಿಸುವುದು ಸಹಜವಾದ ಕಿವುಡುತನವನ್ನು ಹೋಗಲಾಡಿಸುವದಿಕ್ಕಿಂತಲೂ ಇವು ಬಹು ಅಮೂಲ್ಯವಾಗಿರು ವುದು, ಈ ಮುಂತಾದವುಗಳನ್ನು ಒಳಗೊಂಡಿರುವದು. ಇದರಂತೆಯೇ ಆ ರಾಜ್ಯವನ್ನು ಸೇರಲು ಅಹ್ವಾನ ನೀಡುತ್ತಿರುವುದು ಈಗ ಮತ್ತಷ್ಟೂ ವಿಶದವಾಗಿದ್ದು ಅದನ್ನು ಹಿಂದೆ

ಸಾಧ್ಯವಿದ್ದುದಕ್ಕಿಂತಲೂ ಬಹು ಸ್ಪಷ್ಟವಾಗಿ ರುಜುವಾತುಪಡಿಸಬಹುದು. ಏಕೆಂದರೆ ಅದು ನೆರವೇರುವುದು ಹತ್ತಿರವಾಗಿದ್ದು, ಹೊಸ್ತಲಿನಲ್ಲೇ ಇರುವಂಥದ್ದಾಗಿ ಆ ಮೂಲಕ ಈಗಿನ ಕಾಲದಲ್ಲಿರುವ ವ್ಯವಸ್ಥೆಗಳು ಕಂಪಿಸುತ್ತಿರುವುದನ್ನು ಲೋಕವೂ ಸಹ ನೋಡಲು ಸಾಧ್ಯವಾಗಿರುವದು. ಇವುಗಳು ಈ ವ್ಯವಸ್ಥೆಗಳನ್ನು ತೆಗೆದುಹಾಕಲು ನಡೆಸಲಾಗುತ್ತಿರುವ ಸಿದ್ಧತಾಕಾರ್ಯಗಳಾಗಿದ್ದು, ಕಡೆಯಲ್ಲಿ ನಿಶ್ಚಲವಾದಂಥ ಸತ್ಯ ಮತ್ತು ಕೃಪೆಗೆ ಸಂಬಂಧಿಸಿದವುಗಳು ಮಾತ್ರ ಕರ್ತನ ನೀತಿಯುಳ್ಳ ಆಳ್ವಿಕೆಯಲ್ಲಿ ಉಳಿದುಕೊಂಡು ಸ್ಥಿರಗೊಳ್ಳುವಂತೆ ಮಾಡಲಾಗುವದು.

ಕೊಯ್ಲಿಗೆ ಬಂದ ಈ ಸುವಾರ್ತಾಯುಗದ ಗೋದಿಯನ್ನು ಹುಡುಕುತ್ತಾ ಮುಂದೆ ಸಾಗುತ್ತಿರುವ ಸುಗ್ಗಿಯ ಕೆಲಸಗಾರರಲ್ಲಿ ಪ್ರತಿಯೊಬ್ಬನೂ ಯೆಹೂದ್ಯರ ಸುಗ್ಗಿಯ ಕಾಲದಲ್ಲಿನ ಕೆಲಸಗಾರರಿಗೆ ಹೇಳಲಾದ ಈ ಮಾತುಗಳನ್ನು ನೆನಪಿನಲ್ಲಿಟ್ಟುಕೊಳ್ಳುವವನಾಗಬೇಕು: "ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮೂಲಕ ಮಾತಾಡುವನು." ನಾವು ಅದ್ಭುತವಾಗಿ ಮಾತನಾಡುವ ಶಕ್ತಿ ಅನುಗ್ರಹಿಸೋಣವಾಗುವುದನ್ನು ನಿರೀಕ್ಷಿಸು ವಂತಿಲ್ಲ; ಆದರೆ ನಾವು ಸತ್ಯದ ಮತ್ತು ಅದರ ಆತ್ಮದಿಂದ ತುಂಬಿದವರಾಗಬೇಕು; ಆಗ ನಾವು ಮಾತನಾಡುವುದು ನಮ್ಮ ಜ್ಞಾನದ ಮೂಲಕವಾಗಿ ಅಲ್ಲ ಇಲ್ಲವೇ ನಮ್ಮ ಸ್ವಂತ ಯೋಜನೆಗಳನ್ನು ನಾವು ಸಾರಿ ಹೇಳುವವರಲ್ಲ ಆದರೆ ಮೇಲಣಿಂದ ಬರುವ ನಮ್ಮ ಕರ್ತನಾದ ದೇವರ ಯೋಜನೆಯ ವಿಷಯವಾದ ಜ್ಞಾನವನ್ನೇ ಎಂಬುದು ನಿಜವಾಗಿಯೂ ಸತ್ಯವಾಗಿರುವುದು.

# ಪರಲೋಕರಾಜ್ಯವು ಸಮೀಪಿಸಿತು

**ರೀಪ್ರಿಂಟ್ಸ್ ಪುಟ 4593**

## ಮತ್ತಾಯ 10:1–15

**"ಉಚಿತವಾಗಿ ಹೊಂದಿದ್ದೀರಿ, ಉಚಿತವಾಗಿ ಕೊಡಿರಿ" – ಮತ್ತಾಯ 10:8**

ಯೇಸುವು ತನ್ನ ಶಿಷ್ಯರಲ್ಲಿ ಹನ್ನೆರಡು ಮಂದಿಯನ್ನು ತನ್ನ ವಿಶೇಷ ಪ್ರತಿನಿಧಿಗಳನ್ನಾಗಿ ನೇಮಿಸಿ ಅವರನ್ನು ಅಪೋಸ್ತಲರನ್ನಾಗಿ ಕಳುಹಿಸುವ ಸಮಯದಲ್ಲಿ ತಾನು ಉಪದೇಶ ಮಾಡುತ್ತಾ ಬಂದು ಒಂದು ವರುಷಕ್ಕೂ ಹೆಚ್ಚು ಕಾಲ ಕಳೆದಿತ್ತು. ಆತನು ಈ ಹನ್ನೆರಡು ಮಂದಿಯನ್ನು ಇಬ್ಬಿಬ್ಬರನ್ನಾಗಿ ಯೆಹೂದದಲ್ಲೆಲ್ಲಾ ಸಂಚರಿಸಲು ಕಳುಹಿಸಿದ್ದನು. ಅವರು ತಂದೆಯಿಂದ ನೇಮಕವಾಗಿರಲಿಲ್ಲ. ಆಗ ಅವರು ಮೇಲಿನಿಂದ ಬಂದ ಪವಿತ್ರಾತ್ಮವನ್ನು ಇನ್ನೂ ಸ್ವೀಕರಿಸಿರಲಿಲ್ಲ; ಅವರು ಸುಮಾರು ಎರಡು ವರುಷಗಳ ನಂತರದ ಪಂಚಾಶತ್ತಮ ದಿನದವರೆಗೂ ಅದನ್ನು ಸ್ವೀಕರಿಸಿದ್ದಿಲ್ಲ. ಪವಿತ್ರಾತ್ಮವು ಇನ್ನೂ ಕೊಡೋಣ ವಾಗಿರಲ್ಲಿಲ್ಲ, ಕಾರಣ ಯೇಸುವು ಇನ್ನೂ ಮಹಿಮೆಯನ್ನು ಹೊಂದಿರಲಿಲ್ಲ (ಯೋಹಾನ 7:39). ಆದರೆ ತನಗೆ ಸ್ನಾನದೀಕ್ಷೆಯ ಸಮಯದಲ್ಲಿ ಪವಿತ್ರಾತ್ಮವು ಅಳತೆ ಮಾಡದೆ (ಯಥೇಚ್ಛವಾಗಿ) ಕೊಡಲ್ಪಟ್ಟದ್ದರ ಫಲವಾಗಿ ಯೇಸುವು ಈ ಅಪೋಸ್ತಲರಿಗೆ ರೋಗಿಗಳನ್ನು ಗುಣಪಡಿಸುವುದು, ದೆವ್ವಗಳನ್ನು ಬಿಡಿಸುವುದು, ಮುಂತಾದವುಗಳನ್ನು ಮಾಡಸಲುವಾಗಿ ತನಗಿದ್ದ ವಿಶೇಷ ಶಕ್ತಿಯನ್ನು ದಯಪಾಲಿಸಿದ್ದನು. ಆದರೆ ಅವರ ವಿಶೇಷ ಸೇವಾಕಾರ್ಯಭಾರವು ತನಗಿದ್ದಂತೆಯೇ ಕೇವಲ ಇಲ್ಲವೇ ಪ್ರಮುಖವಾಗಿ ಶಾರೀರಿಕವಾದ ರೋಗಗಳನ್ನು ಗುಣಪಡಿಸು ವದಾಗಿರಲಿಲ್ಲ. ಅವರು ಕರ್ತನಾದ ಯೇಸುವು ರಾಜನಾಗಿದ್ದು ಬಹು ದಿನಗಳಿಂದಲೂ ನಿರೀಕ್ಷಿತನಾಗಿದ್ದ ಮೆಸ್ಸೀಯನೆಂಬುದನ್ನು ಘೋಷಿಸಿ ಜನರಿಗೆ ಅವರ ಜನಾಂಗದ ಸಂಬಂಧವಾಗಿ ಆತನ ಮಧ್ಯಸ್ತಿಕೆಯ (ಆಡಳಿತವಿರುವ) ರಾಜ್ಯವು ಸಮೀಪಿಸಿತೆಂದು ಹೇಳಬೇಕಿತ್ತು. ಆ ಸಂದೇಶವು ಯೆಹೂದ್ಯರೆಲ್ಲರಲ್ಲಿದ್ದ ಸಾಮಾನ್ಯವಾದ ನಿರೀಕ್ಷೆಗೆ ಅನುಗುಣವಾಗಿತ್ತು. ಏಕೆಂದರೆ ಅವರು ಶತಮಾನಗಳಿಂದಲೂ ಅಬ್ರಹಾಮನಿಗೆ ಉಂಟಾದ ದೇವರ ವಾಗ್ದಾನವು ನೆರವೇರುವುದನ್ನು ಅಂದರೆ ಅವರ ಮೂಲಕವಾಗಿ ಲೋಕದ ಎಲ್ಲಾ ಕುಲಗಳವರು ಆಶೀರ್ವದಿಸಲ್ಪಡಲು ಕಾದುಕೊಂಡಿದ್ದರು. ಯೇಸು ಮತ್ತು ಆತನ ಶಿಷ್ಯರು ಮಾಡಿದ ಅದ್ಭುತಗಳು "ಪರಲೋಕರಾಜ್ಯವು ಸಮೀಪವಾಯಿತು" (ಮತ್ತಾಯ 3:2) ಎಂಬ ಘೋಷಣೆಯ ಪರವಾಗಿ ಅವರ ಗಮನವನ್ನು ಸೆಳೆಯುವಸಲುವಾಗಿದ್ದವು. ಈ ಸಂದೇಶವು, ಸ್ನಾನಿಕನಾದ ಯೋಹಾನನು ಮಾಡಿದ್ದ ಉಪದೇಶಕ್ಕನುಸಾರವಾಗಿ, ನಿಜವಾದ ಇಸ್ರಾಯೇಲ್ಯರನ್ನು ಏಳುವಂತೆ ಮಾಡಿ ಅವರ ಗಮನವನ್ನು ಯೇಸುವು ಅರಸನಾಗಿರುವನೆಂಬ ವಿಷಯದ ಕಡೆಗೆ ಸೆಳೆಯುವುದನ್ನು ನಿರೀಕ್ಷಿಸಲಾಗಿತ್ತು. ಈ ಸಂದೇಶವು ಅನ್ಯಜನರಿ–ಗೋಸ್ಕರವಾಗಿಲ್ಲವೆಂದು ತಮ್ಮ ನೆರೆಯವರಾದ ಮಿಶ್ರಜಾತಿಯ ಸಮಾರ್ಯದವರಿಗೋಸ್ಕರವಾಗಿಯೂ ಇರುವುದಿಲ್ಲವೆಂಬ ವಿಶೇಷವಾದ ಎಚ್ಚರಿಕೆಯನ್ನು ಅವರಿಗೆ ನೀಡಲಾಗಿತ್ತು. ನಿಜವಾದ ಯೆಹೂದ್ಯರಾದ, ಇವರನ್ನು ಮಾತ್ರ ಆ ರಾಜ್ಯ ಪ್ರಭಾವಗಳಲ್ಲಿ ಭಾಗವಹಿಸ ಸಲುವಾಗಿ ತಮ್ಮ ಹೃದಯಗಳನ್ನು ಸಿದ್ಧಮಾಡಿಕೊಳ್ಳಲು ಕರೆನೀಡಲಾಗಿತ್ತು. ಅವರ ಸಂದೇಶವು ಕೇವಲ "ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರಿಗೆ" ಮಾತ್ರವಾಗಿತ್ತು. – ವಚನ 6

ಅವರು ತಮ್ಮ ಪ್ರಯಾಣಕ್ಕೆ ಯಾವ ಮುನ್ನೇರ್ಪಾಟನ್ನೂ ಮಾಡಿಕೊಳ್ಳಬಾರದಾಗಿತ್ತು ಅಂದರೆ ಹಣ ಇಲ್ಲವೇ ಬಟ್ಟೆಗಳನ್ನು ಕೂಡಿಟ್ಟುಕೊಳ್ಳಬಾರದಿತ್ತು. ಅವರು ತಮ್ಮನ್ನು ಕಳುಹಿಸಿಕೊಟ್ಟಿರುವ ಒಡೆಯನ ಮೇಲೆ ಸಂಪೂರ್ಣವಾಗಿ ಆತುಕೊಳ್ಳುವ ಪಾಠವನ್ನು ಕಲಿತುಕೊಳ್ಳಬೇಕಿತ್ತು. ಅವರು ಮನೆಮನೆಯನ್ನು ಹುಡುಕಿಕೊಂಡು

ಹೋಗುವ ಬಿಕ್ಷುಕರಾಗಿರಬಾರದಿತ್ತು. ಬದಲಾಗಿ ತಮ್ಮ ಕಾರ್ಯಭಾರದ ಮತ್ತು ದೇವರ ಸೇವೆಯ ಹಾಗು ಕ್ರಿಸ್ತನ ರಾಯಭಾರಿಗಳಾಗುವುದರ ಘನತೆಯನ್ನು ಅರಿತುಕೊಂಡವರಾಗಿ ಅವರು ಪ್ರತಿಯೊಂದು ಹಳ್ಳಿಯಲ್ಲಿಯೂ ಅತಿ ಯೋಗ್ಯರೂ, ಅತಿ ಭಕ್ತರೂ, ಅತಿ ಪರಿಶುದ್ಧ ಜನರೂ ಯಾರೆಂಬುದನ್ನು ವಿಚಾರಿಸ ಬೇಕಿತ್ತು. ಕಾರಣ ಇಂಥವರೇ–ಅವರು ಐಶ್ವರ್ಯವಂತರೇ ಆಗಿರಲಿ ಇಲ್ಲವೇ ಬಡವರೇ ಆಗಿರಲಿ–ಮುಂದೆ ಅವರ ಸಂದೇಶದಲ್ಲಿ ವಿಶೇಷವಾದ ಆಸಕ್ತಿತಳೆಯುವವರಾಗಿದ್ದರು. ಅವರ ಸಂದೇಶವನ್ನು ಸ್ವೀಕರಿಸಿದ ಇಂಥವರೇ ಅವರು ಸಾರುತ್ತಿರುವ ರಾಜ್ಯದ ಆ ಅರಸನ ಪ್ರತಿನಿಧಿಗಳೆಂದು ಅವರನ್ನು ನಿಜವಾಗಿಯೂ ಉಲ್ಲಾಸದಿಂದ ಸತ್ಕರಿಸುವವರಾಗಿದ್ದರು. ಪ್ರತಿಯೊಂದು ಸ್ಥಳದಲ್ಲಿಯೂ ಅವರು ಆ ಸ್ಥಳವನ್ನು ಬಿಡುವವರೆಗೂ ಅವರ ಇಳಿದುಕೊಳ್ಳುವಿಕೆಯು ಅತಿಥಿಗಳಂತಿರುತ್ತಿತ್ತು. ಒಂದು ಮನೆಯನ್ನು ಅವರು ಪ್ರವೇಶಿಸಿದಾಗ ಅವರು ಆ ಮನೆಯ ಯಜಮಾನನನ್ನು ಗೌರವದಿಂದ ವಂದಿಸಿ ತಾವು ಕರೆಯಲ್ಪಟ್ಟಿರುವುದರ ಉದ್ದೇಶವನ್ನು ಅವರಿಗೆ ಪ್ರಬೋಧಿಸಿ ಹೇಳಬೇಕಿತ್ತು. ಅವರು ಸಮಾಧಾನದಿಂದ ಆತ್ಮೀಯವಾಗಿ ಅಂಗೀಕರಿಸಲ್ಪಟ್ಟಲ್ಲಿ ಅವರು ನುಡಿದ ಆಶೀರ್ವಾದವು ಆ ಮನೆಯಲ್ಲಿರುತ್ತಿತ್ತು. ಇಲ್ಲವಾದಲ್ಲಿ ಅವರು ತಮ್ಮ ವಿಶ್ವಾಸವನ್ನು ಮತ್ತು ಸ್ವಸ್ಥಚಿತ್ತತೆಯನ್ನು ಕಳೆದುಕೊಳ್ಳದೆ ಮುಂದೆ ದಾಟಿಹೋಗಿ ತಮ್ಮ ಸಂದೇಶವನ್ನು ಮತ್ತು ಅದರ ಪ್ರತಿನಿಧಿಗಳೆಂದು ತಮ್ಮನ್ನು ಅಂಗೀಕರಿಸಲು ಇವರಿಗಿಂತಲೂ ಹೆಚ್ಚು ಯೋಗ್ಯರಾದವರಿಗಾಗಿ ಎದುರು ನೋಡುವವರಾಗಬೇಕಿತ್ತು. ಅವರನ್ನು ಅಂಗೀಕರಿ ಸುವವರು ಆಶೀರ್ವಾದವನ್ನು ಪಡೆಯುವರು. ಅವರನ್ನೂ ಅವರ ಸಂದೇಶವನ್ನು ತಿರಸ್ಕರಿಸುವವರು ಆ ಮಹಾ ಭಾಗ್ಯವನ್ನು ಕಳೆದುಕೊಳ್ಳುತ್ತಿದ್ದರು.

## ಆ ರಾಜ್ಯದ ವಿಷಯವಾದ ಸುವಾರ್ತೆ

ವಾಸ್ತವದಲ್ಲಿ ಪರಲೋಕರಾಜ್ಯವು ಇನ್ನೂ ಬಾರದಿರುವಲ್ಲಿ, ಅಲ್ಲದೆ ನಮ್ಮ ಕರ್ತನ ಆದೇಶದ ಪ್ರಕಾರ ಆತನ ಹಿಂಬಾಲಕರು, "ನಿನ್ನ ರಾಜ್ಯವು ಬರಲಿ; ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ." ಎಂದು ಇನ್ನೂ ಪ್ರಾರ್ಥಿಸುತ್ತಿರುವಲ್ಲಿ, ನಮ್ಮ ಕರ್ತನಿಗೆ ಮತ್ತು ಆತನ ಶಿಷ್ಯರಿಗೆ ಪರಲೋಕರಾಜ್ಯವು ಸಮೀಪವಾಯಿತು ಎಂದು ಹೀಗೆ ಪ್ರಕಟಿಸುತ್ತಿರುವುದು ಹೇಗೆ ಸೂಕ್ತವಾಗಿದ್ದೀತು? ಎಂದು ಹಲವರು ಆಶ್ಚರ್ಯಪಡುವರು. ಇದನ್ನು ಅರ್ಥಮಾಡಿಕೊಂಡಲ್ಲಿ ಈಗ ಅಪಾರ್ಥಮಾಡಿಕೊಂಡಿರುವ ಸತ್ಯವೇದದ ಹಲವಾರು ವಿಷಯಗಳನ್ನು ಮನವರಿಕೆಮಾಡಿಕೊಳ್ಳುವುದಕ್ಕೆ ಇದು ಕೀಲಿಯನ್ನು ಒದಗಿಸುವುದು. ಆದುದರಿಂದ ಈ ಸಂಗತಿಯ ರೂಪರೇಖೆಗಳನ್ನು ವಿವರವಾಗಿ ನಾವು ಹೇಳಬೇಕಾಗಿರುವುದು.

ಇಸ್ರಾಯೇಲ್ಯರು ಹದಿನಾರು ಶತಮಾನಗಳಿಗೂ ಹೆಚ್ಚು ಕಾಲ ದೇವರ ವಾಗ್ದಾನವು ನೆರವೇರುವುದನ್ನು ಅಂದರೆ ಅವರು ಬಹು ಮಹತ್ವದ ಸ್ಥಿತಿಗೆ ಬಂದು ಅವರ ಮೂಲಕವಾಗಿ ದೇವಾಶೀರ್ವಾದವು ಭೂಲೋಕದ ಎಲ್ಲಾ ಜನಾಂಗಗಳಿಗೆ ವ್ಯಾಪಿಸಲ್ಪಡುವುದಕ್ಕಾಗಿ ಕಾದುಕೊಂಡಿರುವರು. ಯೆಹೂದ್ಯರು ಸಿದ್ಧವಾಗಿದ್ದಲ್ಲಿ ದೇವರು ಆ ಜನಾಂಗಕ್ಕೆ ಮಾಡಿರುವ ವಾಗ್ದಾನಗಳೆಲ್ಲವು ನೆರವೇರುವದಕ್ಕೆ ಆತನು ನಿಗದಿತ ಸಮಯವು ಬಂದಿರುತ್ತಿತ್ತೆಂದು ನಮ್ಮ ಕರ್ತನು ತನ್ನ ಶಿಷ್ಯರ ಮೂಲಕವಾಗಿ ಸೂಚಿಸಿದ್ದನು. ಅದಕ್ಕೆ ಸಿದ್ಧವಾಗಬೇಕೆಂದಿದ್ದರೆ ಅವರು ಪರಿಶುದ್ಧ ಜನಾಂಗವಾಗಬೇಕು. ಅವರಿಗೆ ಉಪದೇಶಿಸಿ ಅವರನ್ನು ಸಿದ್ಧಪಡಿಸುವುದಕ್ಕಾಗಿ ಮೋಶೆಯ ಮೂಲಕವಾಗಿ ಆಜ್ಞಾವಿಧಿಗಳ ಸಂಬಂಧವಾದ ಒಡಂಬಡಿಕೆಯನ್ನು ಶತಮಾನಗಳಿಗೆ ಮೊದಲೇ ಅವರಿಗೆ ಪರಿಚಯಿಸಲಾಯಿತು. ಅಲ್ಲದೆ ಆಗ ಯೇಸುವಿಗೆ ಮುಂದಾಗಿ ಸ್ನಾನಿಕನಾದ ಯೋಹಾನನು ಅವರು ಸುಧಾರಿತರಾಗಿ ದೇವರ ಕಡೆಗೆ ತಿರುಗಿಕೊಂಡು ಆಜ್ಞಾವಿಧಿಗಳನ್ನು ಅನುಸರಿಸು ವವರಾಗಿ ಮೆಸ್ಸೀಯನ್ನು ಅಂಗೀಕರಿಸಲು ಸಿದ್ಧರಾಗುವುದಕ್ಕೆ ಉಪದೇಶ ಮಾಡಿದ್ದನು. ಅವರು ಒಂದು ಜನರಾಗಿ ಪ್ರಪಂಚದಲ್ಲಿ ಅತಿ ಧಾರ್ಮಿಕವಾದ ಜನಾಂಗವಾಗಿದ್ದರು. ಹೀಗಿದ್ದಾಗ್ಯೂ ಅವರಲ್ಲಿ ಕೆಲವರು ಮಾತ್ರ "ನಿಜವಾದ ಇಸ್ರಾಯೇಲ್ಯರಾಗಿ" ತಮ್ಮ ಹೃದಯಗಳನ್ನು ಪರಿಶುದ್ಧ ನೀತಿತತ್ವಗಳಿಗೆ ಅನುಸಾರವಾಗಿ ದೇವರಿಗೆ ಪೂರ್ಣವಾಗಿ ಪ್ರತಿಷ್ಠಿಸಿಕೊಂಡಿದ್ದರು. ಇದರ ಪರಿಣಾಮವಾಗಿ ಇಡೀ ಜನಾಂಗವೇ ದೇವರ ಕಾರ್ಯಕ್ಕೆ ಸಿದ್ಧವಾಗುವದಕ್ಕೆ ಬದಲಾಗಿ ಅವರಲ್ಲಿ ಭಕ್ತರಾಗಿದ್ದ ಕೇವಲ ಉಳಿದ ಅಲ್ಪ ಮಂದಿ ಆ ಸಂದೇಶವನ್ನು ಅಂಗೀಕಾರಮಾಡಿದ್ದರು. ಯೇಸುವಿನ ಸೇವಾಕಾರ್ಯದ ಮುಕ್ತಾಯದಲ್ಲಿ ಕೇವಲ ಸುಮಾರು ಐದು ನೂರು ಮಂದಿ ಯೋಗ್ಯರು ಕಂಡುಬಂದ್ದಿದ್ದರು ಮತ್ತು ದೇವರನ್ನರಿಯದಂಥ ಪಿಲಾತನು "ಯಾಕೆ ಈತನು ಅಂಥ ಕೆಟ್ಟದ್ದೇನು ಮಾಡಿದನು?" ಎಂದು ವಿಚಾರಿಸಿದಾಗ ಆ ದೊಡ್ಡ ಗುಂಪು "ಅವನನ್ನು ಶಿಲುಬೆಗೆ ಹಾಕಿಸು" ಎಂದು ಕೂಗಿಕೊಂಡರು. ಆದುದರಿಂದ ಇಸ್ರಾಯೇಲ್ಯರು ಇತರ ಜನಾಂಗದವರನ್ನು ಆಶೀರ್ವದಿಸಲು ದೇವರಿಂದ ಉಪಯೋಗಿಸ್ಪಡುವದಕ್ಕೆ ಸಿದ್ಧವಾಗಿರಲ್ಲವೆಂಬುದು ಬಹು ಸ್ಪಷ್ಟವಾಗಿತ್ತು.

ಹೇಗೂ ದೇವರು ಇದನ್ನು ಮುಂದಾಗಿಯೇ ತಿಳಿದವನಾ ಗಿದ್ದು ಕೇವಲ ಉಳಿದ ಸ್ವಲ್ಪ ಜನರು ಮಾತ್ರ ಯೋಗ್ಯರಾಗಿ ಕಂಡು ಬರುವರೆಂದು ಪ್ರವಾದಿಗಳ ಮೂಲಕ ಪ್ರಕಟಿಸಿದ್ದನು. ಜನಾಂಗದ ವರೆಲ್ಲರ ವಿಷಯವಾಗಿ ಕರ್ತನು–"ಆದುದರಿಂದ ದೇವರ ರಾಜ್ಯವು ನಿಮ್ಮಿಂದ ತೆಗೆಯಲ್ಪಟ್ಟು ಅದರ ಫಲಗಳನ್ನು ಕೊಡುವ ಜನಕ್ಕೆ ಕೊಡಲಾಗುವದು." ಎಂದು ತಿಳಿಸಿದ್ದನು (ಮತ್ತಾ. 21:43). ಇದರ ಅನುಸಾರವಾಗಿ ತಾನು ಶಿಲುಬೆಯ ಮರಣ ಹೊಂದು ವದಕ್ಕೆ ಐದು ದಿನಗಳ ಮುನ್ನ ನಮ್ಮ ಕರ್ತನು ಅವರಿಗೆ ಹೀಗೆ ಹೇಳಿದ್ದನು: "ನೋಡಿರಿ, ನಿಮ್ಮ ಆಲಯವು ನಿಮಗೆ ಬರಿದಾಗಿ ಬಿಟ್ಟಿದೆ. ಈಗಿನಿಂದ–ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ..." – ಮತ್ತಾಯ 23:38–39

ಶಾರೀರಿಕ ಇಸ್ರಾಯೇಲ್ಯರಿಗೆ ಮೊದಲು ನೀಡಲಾಗಿದ್ದ ಆ ರಾಜ್ಯದ ವಿಶೇಷ ಸೌಲಭ್ಯಗಳು ಅಥವಾ ಅವಕಾಶಗಳು ಪಂಚಾಶತ್ತಮ ದಿನದಿಂದ ಆರಂಭವಾದ ಆತ್ಮಿಕ ಇಸ್ರಾಯೇಲ್ಯರಿಗೆ ವರ್ಗಾಯಿಸಲಾಯಿತು. ಶಾರೀರಿಕ ಸಂಬಂಧವಾದ

ಇಸ್ರಾಯೇಲನ ಮನೆತನದರಲ್ಲಿನ "ನಿಜವಾದ ಇಸ್ರಾಯೇಲ್ಯರು" ಆತ್ಮಿಕ ಇಸ್ರಾಯೇಲ್ ಮನೆತನದವರಾಗಿ, ಪವಿತ್ರಾತ್ಮನಿಂದ ಹುಟ್ಟಿ ಸಭೆಯೆಂಬ ಕ್ರಿಸ್ತನ ದೇಹದ ಅಂಗಗಳಾಗುವದಕ್ಕೆ ಅಂಗೀಕರಿ–ಸಲ್ಪಡುವ ಸೌಭಾಗ್ಯವನ್ನು ಪಡೆದರು. ಈ ಸಭೆಯ ಬಗ್ಗೆ ಭಕ್ತನಾದ ಪೇತ್ರನು, "ರಾಜವಂಶಸ್ಥರಾದ ಯಾಜಕರೂ ಮೀಸಲಾದ ಜನವೂ ದೇವರ ಸ್ವಕೀಯ ಪ್ರಜೆಯೂ ಆಗಿದ್ದೀರಿ." ಎಂದು ಹೇಳಿರುವನು. – 1 ಪೇತ್ರ 2:9

ಯೆಹೂದ್ಯರಲ್ಲಿ ಆತ್ಮಿಕ ಇಸ್ರಾಯೇಲ್ಯರಾಗಲು ಎಷ್ಟು ಮಂದಿ ಯೋಗ್ಯರಿದ್ದರೋ ಅವರನ್ನು ಆದುಕೊಂಡ ನಂತರ ಆತ್ಮಿಕ ಇಸ್ರಾಯೇಲ್ಯರ ಸಂಖ್ಯೆ ಪೂರ್ಣವಾಗುವವರೆಗೂ ಹೆಸರಿಗೆ ಮಾತ್ರ ಇಸ್ರಾಯೇಲ್ಯರಾಗಿದ್ದವರನ್ನು ದೇವಾನುಗ್ರಹದಿಂದ ಹೊರಹಾಕಲಾಯಿತು. ಆನಂತರದಲ್ಲಿ ದೇವಾನುಗ್ರಹವು ಅವರಿಗೆ ಮರಳಿ ಬರುವುದೆಂದು ದೇವರು ವಾಗ್ದಾನ ಮಾಡಿರುವನು. (ರೋಮಾ 11:25–26) ಈ ಮಧ್ಯೆ ನಂಬಿಗಸ್ತರಾದ ಕರ್ತನ ಜನರ ಮೂಲಕವಾಗಿ ಪ್ರತಿಯೊಂದು ಜನಾಂಗಗಳಿಗೂ ಅವರಲ್ಲಿ ದೇವರಿಗೆ ನಿಷ್ಠೆಯುಳ್ಳ ಮನೋಭಾವ ಹೊಂದಿದವರನ್ನು ಅಂದರೆ "ನಿಜವಾದ ಇಸ್ರಾಯೇಲ್ಯರ" ಮನೋಭಾವವುಳ್ಳವರನ್ನು ಆದುಕೊಳ್ಳಲು ಈ ಆಹ್ವಾನವು ನೀಡಲಾಗಿರುವದು. ಅಂಥವರೆಲ್ಲರೂ ಯೆಹೂದ್ಯರೊಡನೆ ಆ ರಾಜ್ಯದ ಸದಸ್ಯರಾಗಿ ಅಂಗೀಕರಿಸಲ್ಪಡುವರು. ಈ ಆತ್ಮಿಕ ಇಸ್ರಾಯೇಲ್ಯರ ಜೊತೆಯಲ್ಲಿ ಎಲ್ಲಾ ಬಗೆಯವರೂ ಕೂಡಿ ಬಂದಿರುವರು; ಮತ್ತು ಹೀಗಾಗಿ ಬಾಹ್ಯವಾದ ಅಥವಾ ಹೆಸರಿನ ಸಭಾ ಮಂಡಲಿ ಅಥವಾ ಲಕ್ಷಾಂತರ ಸಂಖ್ಯೆಯಲ್ಲಿರುವ ಕ್ರೈಸ್ತಸಭೆ ಇವರ ಮಧ್ಯದಲ್ಲಿ ನಿಜವಾದ ಸಭಾ ಮಂಡಲಿಯು ಅಲ್ಲಲ್ಲಿ ಚದರಿದ್ದಾಗಿ ಇರುವದು.

ಯೆಹೂದ್ಯರ ಕಾಲದ ಅಂತ್ಯದಲ್ಲಿ ಯೇಸುವು ಅವರನ್ನು ಪರೀಕ್ಷಿಸುವವನಾಗಿ ಅವರಲ್ಲಿ ಸಾಕಷ್ಟು ಮಂದಿ ಯೋಗ್ಯರು ಸಿಕ್ಕಿದ್ದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸಲು ಬಂದಿದ್ದನು. ಹಾಗೆಯೇ ಆತನು ಈ ಸುವಾರ್ತಾಯುಗದ ಅಂತ್ಯದಲ್ಲಿಯೂ ಆತ್ಮಿಕ ಇಸ್ರಾಯೇಲ್ಯರಲ್ಲಿ ಭಕ್ತರಾದವರನ್ನು ಕಂಡುಕೊಳ್ಳಲು ಅವರ ಬಳಿಗೆ ಬರುವನು. ಮೊದಲಿನಿಂದ ಕಡೆಯವರೆಗೂ ಅಂದರೆ ಪಂಚಾಶತ್ತಮ ದಿನದಿಂದ ಈ ಸುವಾರ್ತಾಯುಗದ ಅಂತ್ಯದ ವರೆಗೂ ಆಯಲ್ಪಟ್ಟ ಕ್ರಿಸ್ತನ ಸಭೆಯಾಗಿ ಅಂದರೆ ಆತನಿಗೆ ರಾಣಿಯಾಗಿ ಆತನೊಡನೆ ಆ ಸಾವಿರ ವರುಷದ ಆಳ್ವಿಕೆಯ ರಾಜ್ಯದಲ್ಲಿ ಸಹಬಾಧ್ಯರೆಂದು ದೇವರಿಂದ ಹೆಸರು ಪಡೆಯುವ ವರು ಸಾಕಷ್ಟು ಮಂದಿ ದೊರೆಯುವವರೆಂದು ಸತ್ಯವೇದವು ಖಚಿತಪಡಿಸಿರುವುದು. ಆ ರಾಜ್ಯವು ಆಗ ಸ್ಥಾಪಿತಗೊಂಡು ಲೋಕವನ್ನು ಆಶೀರ್ವದಿಸುವ ಕಾರ್ಯವನ್ನು ಆರಂಭಿಸುವದು. ದೇವರ ಆತ್ಮಿಕ ರಾಜ್ಯವು ಉನ್ನತಸ್ಥಾನಕ್ಕೆ ಏರಿಸಲ್ಪಟ್ಟ ನಂತರ ರೋಮಾ 11:25–32ರಲ್ಲಿ ಹೇಳಿರುವಂತೆ ದೇವರ ಕೃಪಾನುಗ್ರಹವು ಶಾರೀರಿಕ ಇಸ್ರಾಯೇಲ್ಯರಿಗೆ ಮರಳಿ ಬರುವುದೆಂದು ಸತ್ಯವೇದವು ನಮಗೆ ಭರವಸೆ ನೀಡಿರುವದು. ಆಗ ಅಲ್ಲಿ ಪ್ರಚಲಿತವಾಗಿರುವ ಹೊಸದಾದ ಆ ಏರ್ಪಾಡಿನ ಪ್ರಕಾರ ಆಶೀರ್ವಾದವನ್ನು ಹೊಂದುವದರಲ್ಲಿ ಅವರು (ಇಸ್ರಾಯೇಲ್ ಜನಾಂಗವು) ಮೊದಲಿಗರಾಗುವರು. ಹಾಗೂ ಅವರ ಮೂಲಕವಾಗಿ ದೇವಾಶೀರ್ವಾದವು ಪ್ರತಿಯೊಂದು ಜನಾಂಗಕ್ಕೂ ವ್ಯಾಪನ ಗೊಳ್ಳುವುದು.

## "ಸೊದೋಮಿನವರ ಗತಿಯು ಮೇಲಾಗಿರುವುದು"

ಸೊದೋಮಿನವರು ನೈತಿಕವಾಗಿ ಕೆಟ್ಟುಹೋಗಿದ್ದರು; ಆದರೂ ಒಡೆಯನ ಎಣಿಕೆಯಲ್ಲಿ ಸುವಾರ್ತೆಯನ್ನು ಕೇಳಿ ಅದನ್ನು ನಿರಾಕರಿಸುವವರಿಗಿಂತಲೂ ಅವರ ಕೆಟ್ಟತನವು ಅಲ್ಪವಾಗಿತ್ತು. ಈ ತತ್ವವು ಕಪೆರ್ನೌಮ್ ಪಟ್ಟಣ ಸಹಿತವಾಗಿ ನಮ್ಮ ದಿನಗಳ ಹಲವು ಜನರಿಗೂ ಮತ್ತು ಹಲವು ಪಟ್ಟಣಗಳಿಗೂ ಅನ್ವಯವಾಗುವದು. ಒಡೆಯನು ಭರವಸೆಯಾಗಿ ಹೇಳಿರುವುದೇನೆಂದರೆ, ಆ ಸಾವಿರ ವರುಷದ ಮಹಾ ಆಳ್ವಿಕೆಯ ಕಾಲದಲ್ಲಿ ಅಥವಾ ಇನ್ನೊಂದು ರೀತಿಯಲ್ಲಿ ಕರೆಯ್ಪಡುವ ನ್ಯಾಯವಿಚಾರಣೆಯ ದಿನದಲ್ಲಿ ಇಡೀ ಲೋಕಕ್ಕೆ ನಿತ್ಯಜೀವ ಪಡೆಯುವ ಇಲ್ಲವೇ ನಿತ್ಯವಾದ ಮರಣಕ್ಕೆ ಹೋಗುವದಕ್ಕಾಗಿ ಒಂದು ನ್ಯಾಯತೀರ್ಪಿನ ಅವಕಾಶವನ್ನು ನೀಡುವಾಗ ಸೊದೋಮಿನವರ ಸ್ಥಿತಿಯು ಬೇರೆಯವರಿಗಿಂತಲೂ ಮೇಲಾಗಿರುವುದು. ಕ್ರಿಸ್ತನ ವಿಷಯವಾದ ಜ್ಞಾನವನ್ನು ಒಬ್ಬನು ಎಷ್ಟರ ಮಟ್ಟಿಗೆ ಹೊಂದುವನೋ ಅಷ್ಟರ ಮಟ್ಟಿನ ಜವಾಬ್ದಾರಿಯನ್ನೂ ಹೊಂದಿದವನಾಗಿರುವನು. ಕ್ರಿಸ್ತನ ಮರಣವು ಆದಾಮನು ಮತ್ತು ಅವನ ಸಂತತಿಗೆ ರಕ್ಷಣೆಯ ಒಂದು ಪೂರ್ಣಾವಕಾಶವನ್ನು ಸಂಪಾದನೆಮಾಡಿಕೊಟ್ಟಿರುವುದು, ಮತ್ತು ಇದಕ್ಕಿಂತಲೂ ಹೆಚ್ಚೇನೂ ಇರದು. ಬಹು ಪಾಲಿನ ಜನರು ಅನ್ಯಜಾತಿಯ ಅಜ್ಞಾನಾಂಧಕಾರದಲ್ಲಿ ಸೇರಿ ಮರಣ ಹೊಂದಿದವರಾಗಿದ್ದು (ಮರಣದಿಂದ ಹಿಂದಿರುಗಿ ಜೀವ ಪಡೆಯುವ) ಯಾವುದೇ ಅವಕಾಶವನ್ನು ಅಲಕ್ಷ್ಯ ಮಾಡಿರುವರು; ಕ್ರೈಸ್ತರಿರುವ ನಾಡಿನಲ್ಲಿ ಅನೇಕರು ಕಪೆರ್ನೌಮಿನ ಜನರು ಮಾಡಿದಂತೆ ತಮಗೆ ಲಭಿಸಿರುವ ಅವಕಾಶವನ್ನು ಅಲಕ್ಷ್ಯ ಮಾಡಿರುವರು. ಕ್ರಿಸ್ತನಲ್ಲಿ ತಮಗೆ ದೊರೆಯುವ ಭಾಗ್ಯದ ವಿಷಯವಾದ ಜ್ಞಾನವನ್ನು ಎಲ್ಲರೂ ಪಡೆಯಬೇಕಾಗಿರುವದು ಆನಂತರ ಅದನ್ನು ತಿರಸ್ಕರಿಸಿದವರು ನಾಶವಾಗುವರು. – ಅ.ಕೃ. 3:23; 1 ತಿಮೋಥೆ 2:4; ಮತ್ತಾಯ 20:28

ಯೇಸುವು ಮತ್ತು ಅಪೊಸ್ತಲರು ನಡೆದ ಭಕ್ತಿಮಾರ್ಗದ ಹೆಜ್ಜೆಗಳನ್ನು ಅನುಸರಿಸಿ ಮೆಸ್ಸೀಯನೊಡನೆ ಆತನ ರಾಜ್ಯದಲ್ಲಿ ಪಾಲುಗಾರರಾಗುವ ಸಲುವಾಗಿ ನಾವು ಕರೆಯಲ್ಪಟ್ಟದ್ದನ್ನು ಮತ್ತು ಆಯಲ್ಪಟ್ಟದ್ದನ್ನು ದೃಢಪಡಿಸಿಕೊಳ್ಳುವದು ನಮಗೆ ಬಿಟ್ಟದ್ದು. ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ನ್ಯಾಯವಿಚಾರಣೆ ಎಂದು ಕರೆಯಲ್ಪಡುವ ಆ ವ್ಯವಸ್ಥೆಯಲ್ಲಿ ಬಹುಮಾನ ಮತ್ತು ಶಿಕ್ಷೆಗಳನ್ನು ನೀಡುವ ಮೂಲಕವಾಗಿ ಇಸ್ರಾಯೇಲ್ ಹಾಗೂ ಭೂಲೋಕದ ಎಲ್ಲಾ ಕುಲಗಳು ಆಶೀರ್ವದಿಸಲ್ಪಡುವವು. ಇಸ್ರಾಯೇಲ್ಯರು ಮತ್ತು ಸೊದೋಮಿನವರು ಅಲ್ಲಿನ ಜೀರ್ಣೋದ್ಧಾರ ಕಾರ್ಯವೆಂದು ಕರೆಯಲ್ಪಡುವ ಸಮಸ್ತವನ್ನು ಸರಿಪಡಿಸುವ ಕಾರ್ಯದಲ್ಲಿ ಪಾಲನ್ನು ಹೊಂದುವರೆಂದು ಸತ್ಯವೇದವು ನಿರ್ದಿಷ್ಟವಾಗಿ ಹೇಳುತ್ತದೆ. – ಯೆಹೆಜ್ಕೇಲ 16:50–55; ಅ.ಕೃ. 3:19–21

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 31 | ತಿಬೇರಿಯ | ಸ್ನಾನಿಕನಾದ ಯೋಹಾನನ ತಲೆ ಹೊಯ್ಯಲ್ಪಟ್ಟದ್ದು; ಹೆರೋದನ ಪಾಪಪ್ರಜ್ಞೆ ಭಯ | 14:1–12 | 6:14–29 | 9:7–9 | –– |

## ಮತ್ತಾಯ 14:1–12

ಆ ಕಾಲದಲ್ಲಿ ಉಪರಾಜನಾದ ಹೆರೋದನು ಯೇಸುವಿನ ಸುದ್ಧಿಯನ್ನು ಕೇಳಿ ತನ್ನ ಪರಿವಾರದವರಿಗೆ–ಇವನು ಸ್ನಾನಿಕನಾದ ಯೋಹಾನನು; ತಿರುಗಿ ಬದುಕಿ ಬಂದಿದ್ದಾನೆ; ಆದಕಾರಣ ಮಹತ್ಕಾರ್ಯಗಳನ್ನು ನಡಿಸುವ ಶಕ್ತಿಗಳು ಅವನಲ್ಲಿ ಅವೆ ಎಂದು ಹೇಳಿದನು. ಹೆರೋದನು ಹೆರೋದ್ಯಳ ನಿಮಿತ್ತ ಯೋಹಾನನನ್ನು ಹಿಡಿದು ಕಟ್ಟಿಸಿ ಸೆರೆಯಲ್ಲಿ ಹಾಕಿಸಿದ್ದನು. ಆ ಹೆರೋದ್ಯಳು ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ. ಯೋಹಾನನು ಹೆರೋದನಿಗೆ–ನೀನು ಇವಳನ್ನು ಇಟ್ಟುಕೊಂಡಿರುವದು ಧರ್ಮವಲ್ಲವೆಂದು ಹೇಳುತ್ತಿದ್ದನು. ಹೆರೋದನು ಅವನನ್ನು ಕೊಲ್ಲಿಸಬೇಕೆಂದಿದ್ದರೂ ಜನರು ಅವನನ್ನು ಪ್ರವಾದಿಯೆಂದು ಎಣಿಸಿದ್ದರಿಂದ ಅವರಿಗೆ ಭಯಪಟ್ಟು [ಕೊಲ್ಲಿಸಲಿಲ್ಲ]. ಆದರೆ ಹೆರೋದನ ಹುಟ್ಟಿದ ದಿನದ ಹಬ್ಬವು ನಡೆಯುವಾಗ ಹೆರೋದ್ಯಳ ಮಗಳು ಬಂದವರ ಮುಂದೆ ನಾಟ್ಯವಾಡಿ ಹೆರೋದನನ್ನು ಮೆಚ್ಚಿಸಿದ್ದರಿಂದ ಅವನು ಅವಳಿಗೆ–ನೀನು ಏನು ಕೇಳಿಕೊಂಡರೂ ಕೊಡುತ್ತೇನೆಂದು ಆಣೆಮಾಡಿ ಮಾತುಕೊಟ್ಟನು. ಆಗ ಅವಳು ತನ್ನ ತಾಯಿಯ ಬೋಧನೆಯನ್ನು ಕೇಳಿ–ಇಲ್ಲಿಯೇ ಸ್ನಾನಿಕನಾದ ಯೋಹಾನನ ತಲೆಯನ್ನು ಪರಾತಿನಲ್ಲಿ ನನಗೆ ತರಿಸಿಕೊಡು ಅಂದಳು. ಆ ಮಾತಿಗೆ ಅರಸನು ದುಃಖಪಟ್ಟರೂ ತಾನು ಇಟ್ಟುಕೊಂಡ ಆಣೆಗಳ ನಿಮಿತ್ತವಾಗಿಯೂ ತನ್ನ ಸಂಗಡ ಪಂಕ್ತಿಯಲ್ಲಿ ಕೂತಿದ್ದವರ ನಿಮಿತ್ತವಾಗಿಯೂ ಅದನ್ನು ತಂದುಕೊಡುವದಕ್ಕೆ ಅಪ್ಪಣೆಕೊಟ್ಟನು. ಮತ್ತು ಆಳುಗಳನ್ನು ಕಳುಹಿಸಿ ಸೆರೆಮನೆಯಲ್ಲಿ ಯೋಹಾನನ ತಲೆಯನ್ನು ಹೊಯಿಸಿದನು. ಅವರು ಅವನ ತಲೆಯನ್ನು ಪರಾತಿನಲ್ಲಿ ತಂದು ಆ ಹುಡುಗಿಗೆ ಕೊಟ್ಟರು. ಅವಳು ಅದನ್ನು ತನ್ನ ತಾಯಿಯ ಬಳಿಗೆ ತಕ್ಕೊಂಡುಹೋದಳು. ಯೋಹಾನನ ಶಿಷ್ಯರು ಬಂದು ಅವನ ಶವವನ್ನು ಹೊತ್ತುಕೊಂಡು ಹೋಗಿ ಹೂಣಿಟ್ಟು ಯೇಸುವಿನ ಬಳಿಗೆ ಬಂದು ತಿಳಿಸಿದರು.

## ಮಾರ್ಕ 6:14–29

ಮತ್ತು ಅರಸನಾದ ಹೆರೋದನು [ಯೇಸುವಿನ] ಸುದ್ದಿಯನ್ನು ಕೇಳಿದನು. ಯಾಕೆಂದರೆ ಆತನ ಹೆಸರು ಪ್ರಸಿದ್ಧವಾಯಿತು, ಮತ್ತು ಜನರು ಆತನ ವಿಷಯದಲ್ಲಿ–ಸ್ನಾನಿಕನಾದ ಯೋಹಾನನೇ ತಿರಿಗಿ ಬದುಕಿ ಬಂದಿದ್ದಾನೆ; ಆದದರಿಂದ ಮಹತ್ಕಾರ್ಯಗಳನ್ನು ನಡಿಸುವ ಶಕ್ತಿಗಳು ಅವನಲ್ಲಿ ಅವೆ ಎಂದು ಹೇಳುತ್ತಿದ್ದರು. ಕೆಲವರು–ಇವನು ಎಲೀಯನೆಂತಲೂ ಕೆಲವರು–ಇವನು ಹಿಂದಿನ ಪ್ರವಾದಿಗಳಂತಿರುವ ಒಬ್ಬ ಪ್ರವಾದಿಯೆಂತಲೂ ಹೇಳಿದರು. ಆದರೆ ಹೆರೋದನು ಆತನ ಸುದ್ದಿಯನ್ನು ಕೇಳಿ–ನಾನು ತಲೆಹೊಯಿಸಿದ ಯೋಹಾನನೇ ತಿರಿಗಿ ಬದುಕಿ ಬಂದಿದ್ದಾನೆ ಅಂದನು. ಹೆರೋದನು ತಾನು ಇಟ್ಟುಕೊಂಡಿದ್ದ ಹೆರೋದ್ಯಳ ನಿಮಿತ್ತ ಯೋಹಾನನನ್ನು ಹಿಡಿತರಿಸಿ ಸೆರೆಯಲ್ಲಿ ಕಟ್ಟಿಹಾಕಿಸಿದ್ದನು. ಆ ಹೆರೋದ್ಯಳು ಹೆರೋದನ ಅಣ್ಣನಾದ ಫಿಲಿಪ್ಪನ ಹೆಂಡತಿ. ಯೋಹಾನನು ಹೆರೋದನಿಗೆ–ನಿನ್ನ ಅಣ್ಣನ ಹೆಂಡತಿಯನ್ನು ಇಟ್ಟುಕೊಂಡಿರುವದು ಧರ್ಮವಲ್ಲವೆಂದು ಹೇಳುತ್ತಿದ್ದನು. ಇದಕ್ಕೆ ಹೆರೋದ್ಯಳು ಅವನ ಮೇಲೆ ದ್ವೇಷವಿಟ್ಟುಕೊಂಡು ಅವನನ್ನು ಕೊಲ್ಲಿಸಬೇಕೆಂದಿದ್ದರೂ ಆಗದೆಹೋಯಿತು. ಹೆರೋದನು ಯೋಹಾನನನ್ನು ನೀತಿವಂತನೆಂದೂ ದೇವಭಕ್ತನೆಂದೂ ತಿಳಿದು ಅಂಜಿಕೊಂಡು ಅವನಿಗೆ ಯಾವ ಅಪಾಯವೂ ಬಾರದಂತೆ ಇಟ್ಟಿದ್ದನು. ಇದಲ್ಲದೆ ಯೋಹಾನನು ಹೇಳಿದ್ದನ್ನು ಅವನು ಕೇಳಿದ್ದಾಗ ಮನಸ್ಸಿನಲ್ಲಿ ಬಹು ಗಲಿಬಿಲಿ ಹುಟ್ಟಿದರೂ ಅವನ ಮಾತನ್ನು ಸಂತೋಷದಿಂದ ಕೇಳುತ್ತಿದ್ದನು. ಹೀಗಿರಲಾಗಿ ಅವಳಿಗೆ ಅನುಕೂಲವಾದ ದಿವಸ ಬಂತು; ಹೇಗೆಂದರೆ ಹೆರೋದನು ತಾನು ಹುಟ್ಟಿದ ದಿವಸದಲ್ಲಿ ಪ್ರಭುಗಳಿಗೂ ಸಹಸ್ರಾಧಿಪತಿಗಳಿಗೂ ಗಲಿಲಾಯ ಸೀಮೆಯ ಮುಖ್ಯಸ್ಥರಿಗೂ ಔತಣವನ್ನು ಮಾಡಿಸಿದಾಗ ಹೆರೋದ್ಯಳ ಮಗಳು ಒಳಕ್ಕೆ ಬಂದು ನಾಟ್ಯವಾಡಿ ಹೆರೋದನನ್ನೂ ಅವನ ಸಂಗಡ ಪಂಕ್ತಿಯಲ್ಲಿ ಊಟಕ್ಕೆ ಕೂತಿದ್ದವರನ್ನೂ ಮೆಚ್ಚಿಸಿದಳು. ಅರಸನು ಆ ಹುಡುಗಿಗೆ–ಬೇಕಾದದ್ದನ್ನು ಕೇಳಿಕೋ, ಕೊಡುತ್ತೇನೆ. ನೀನು ನನ್ನನ್ನು ಏನು ಕೇಳಿಕೊಂಡರೂ ಸರಿ, ನನ್ನ ರಾಜ್ಯದಲ್ಲಿ ಅರ್ಧ ರಾಜ್ಯವನ್ನು ಕೇಳಿದರೂ, ನಿನಗೆ ಕೊಡುತ್ತೇನೆ ಎಂದು ಆಣೆಯಿಟ್ಟುಕೊಂಡು ಹೇಳಿದನು. ಆಗ ಅವಳು ಹೊರಕ್ಕೆ ಹೋಗಿ–ನಾನು ಏನು ಕೇಳಿಕೊಳ್ಳಲಿ? ಎಂದು ತನ್ನ ತಾಯಿಯನ್ನು ಕೇಳಲಾಗಿ ಅವಳು–ಸ್ನಾನಿಕನಾದ ಯೋಹಾನನ ತಲೆಯನ್ನು ಕೇಳಿಕೋ ಅಂದಳು. ಕೂಡಲೆ ಅವಳು ಅರಸನ ಬಳಿಗೆ ಅವಸರದಿಂದ ಬಂದು–ಈ ಕ್ಷಣದಲ್ಲೇ ಸ್ನಾನಿಕನಾದ ಯೋಹಾನನ ತಲೆಯನ್ನು ಪರಾತಿನಲ್ಲಿ ನನಗೆ ತರಿಸಿಕೊಡಬೇಕೆಂದೇ ನನ್ನ ಕೋರಿಕೆ ಎಂದು ಅರಿಕೆಮಾಡಿಕೊಂಡಳು. ಅದಕ್ಕೆ ಅರಸನು ಬಹು ದುಃಖಪಟ್ಟರೂ ತಾನು ಇಟ್ಟುಕೊಂಡ ಆಣೆಗಳ ನಿಮಿತ್ತವಾಗಿಯೂ ಅವಳನ್ನು ಅಸಡ್ಡೆಮಾಡುವದಕ್ಕೆ ಮನಸ್ಸಿಲ್ಲದೆ ಕೂಡಲೆ ತನ್ನ ಮೈಗಾವಲಿನ ಸಿಪಾಯಿಗಳಲ್ಲಿ ಒಬ್ಬನಿಗೆ–ನೀನು ಹೋಗಿ ಯೋಹಾನನ ತಲೆಯನ್ನು ತಂದುಕೊಡು ಎಂದು ಅಪ್ಪಣೆಕೊಟ್ಟು ಕಳುಹಿಸಿದನು; ಅವನು ಹೋಗಿ ಸೆರೆಮನೆಯಲ್ಲಿ ಅವನ ತಲೆಯನ್ನು ಹೊಯಿದು ಪರಾತಿನಲ್ಲಿ ತಂದು ಆ ಹುಡುಗಿಗೆ ಕೊಟ್ಟನು. ಆ ಹುಡುಗಿ ಅದನ್ನು ತನ್ನ ತಾಯಿಗೆ ಕೊಟ್ಟಳು. ಯೋಹಾನನ ಶಿಷ್ಯರು ಈ ಸಂಗತಿಯನ್ನು ಕೇಳಿದಾಗ ಅವರು ಬಂದು ಅವನ ಶವವನ್ನು ಹೊತ್ತುಕೊಂಡು ಹೋಗಿ ಸಮಾಧಿಯಲ್ಲಿ ಇಟ್ಟರು.

## ಲೂಕ 9:7–9

ಹೀಗಿರಲಾಗಿ ಉಪರಾಜನಾದ ಹೆರೋದನು ನಡೆದ ಸಂಗತಿಗಳನ್ನೆಲ್ಲಾ ಕೇಳಿ ಬಹಳವಾಗಿ ಕಳವಳಪಡುವವನಾದನು. ಯಾಕಂದರೆ ಸತ್ತಿದ್ದ ಯೋಹಾನನು ತಿರಿಗಿ ಬದುಕಿ ಬಂದಿದ್ದಾನೆಂದು ಕೆಲವರೂ, ಎಲೀಯನು ಕಾಣಿಸಿಕೊಂಡನೆಂದು ಕೆಲವರೂ, ಪೂರ್ವದ ಪ್ರವಾದಿಗಳಲ್ಲಿ ಯಾವನೋ ಒಬ್ಬನು ಎದ್ದಿದ್ದಾನೆಂದು ಕೆಲವರೂ ಹೇಳಿಕೊಳ್ಳುತ್ತಿದ್ದರು. ಆದರೆ ಹೆರೋದನು–ಯೋಹಾನನನ್ನು ನಾನೇ ತಲೆಹೊಯ್ಸಿದೆನಷ್ಟೆ. ಇವನಾರು? ಇವನ ವಿಷಯದಲ್ಲಿ ಆಶ್ಚರ್ಯಕರವಾದ ಸಂಗತಿಗಳನ್ನು ಕೇಳುತ್ತೇನಲ್ಲಾ ಎಂದು ಹೇಳಿ ಅವನನ್ನು ನೋಡಬೇಕೆಂದು ಪ್ರಯತ್ನಿಸಿದನು.

# ಬಹು ದುಬಾರಿಯಾಗಿದ್ದ ವ್ಯವಹಾರಗಳು

**ರೀಪ್ರಿಂಟ್ಸ್ ಪುಟ 3325**

## ಮತ್ತಾಯ 14:1–12

**"ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" – ಪ್ರಕಟನೆ 2:10**

ಈ ಪಾಠದಲ್ಲಿ ನಿರೂಪಿಸಿರುವಂತೆ ಸ್ನಾನಿಕನಾದ ಯೋಹಾನನ ತಲೆ ಹೊಯ್ಯಲ್ಪಟ್ಟಾಗ ಆತನು ಸೆರೆಯಲ್ಲಿದ್ದು ಸುಮಾರು ಒಂದು ವರುಷ ಕಳೆದಿತ್ತು. ಆತನು ಕೇವಲ ಸುಮಾರು ಒಂದು ವರುಷದ ವರೆಗೆ ಉಪದೇಶಮಾಡಿದ್ದನಾದರೂ ಅಷ್ಟು ಸಮಯದಲ್ಲಿಯೇ ಪಾಲೆಸ್ತೀನಾ ದೇಶದಲ್ಲೆಲ್ಲಾ ಬಹು ಸ್ಪಷ್ಟವಾಗಿ ಗಹನವಾದ ಪರಿಣಾಮ ಬೀರಿದ್ದನು. ಹೀಗಾಗಿಯೂ ತಾನು ಬಯಸಿದ್ದ ಉದ್ದೇಶವನ್ನು ನೆರವೇರಿಸುವುದರಲ್ಲಿ ಗಮನಾರ್ಹವಾಗಿ ಸೋತಿದ್ದನು. ಅಂದರೆ ಜನರು ಪಾಪಗಳಿಗೆ ಪಶ್ಚಾತ್ತಾಪಪಟ್ಟು ಕುಗ್ಗಿಸಿಕೊಳ್ಳುವುದರ ಮೂಲಕವಾಗಿ ಮೆಸ್ಸೀಯನನ್ನು ಸ್ವೀಕರಿಸಿಕೊಳ್ಳಲು ಅವರ ಹೃದಯಗಳನ್ನು ಸಿದ್ದಪಡಿಸುವುದರಲ್ಲಿ ವಿಫಲನಾಗಿದ್ದನು. ಆತನು ಮಾಕೆರಾ ಕೋಟೆಯ ಒಂದು ನೆಲಮಾಳಿಗೆಯ ಸೆರೆಮನೆಯಲ್ಲಿ ಬಂಧಿತನಾಗಿದ್ದನೆಂದು ಜೋಸೆಫಸ್ಸನು ಅಭಿಪ್ರಾಯ ಪಟ್ಟಿರುವನು. ಗೀಕೆ ಎಂಬಾತನು ಆ ನೆಲಮಾಳಿಗೆ ಸೆರೆಮನೆಯ ವಿಷಯವಾಗಿ ತನ್ನ ಅಭಿಪ್ರಾಯವನ್ನು ಈ ಮಾತಿನಲ್ಲಿ ಹೇಳಿರುವನು: "ಬಹುಶಃ ಅದು ನಾನು ಗಾಜ಼ಾದಲ್ಲಿ ನೋಡಿದ್ದ ಕಬ್ಬಿಣದ ಸರಳುಗಳಿಂದ ಮಾಡಿದ ಪಂಜರದಂತಿದ್ದು ಅದಕ್ಕೆ ಬಂಧಿತನ ಮಿತ್ರರು ಆಹಾರದೊಂದಿಗೆ ಅಥವಾ ಮಾತನಾಡಲು ಬರಬಹುದಾಗಿದಾದರೂ ಅಲ್ಲಿ ಜೀವಿಸಿರಲು ಅಥವಾ ಮಲಗಲು  ಕಲ್ಲು ಹಾಸಿದ ನೆಲವನ್ನು ಬಿಟ್ಟರೆ ಬೇರೆಯಾವ ವಿಧವಾದ ಸೌಕರ್ಯಗಳೂ ಏರ್ಪಾಟುಗಳೂ ಇರಲಿಲ್ಲ." ಹೀಗಿರಲು ಇದು ತನ್ನ ಶಿಷ್ಯರನ್ನು ಯೇಸುವಿನ ಬಳಿಗೆ ಕಳುಹಿಸಿ "ಬರಬೇಕಾದವನು ನೀನೋ ಅಥವಾ ನಾವು ಬೇರೊಬ್ಬನ ದಾರಿಯನ್ನು ನೋಡಬೇಕೋ?" ಎಂದು ವಿಚಾರಿಸಿದ್ದುದರಲ್ಲಿ ಯೋಹಾನನಿಗಿದ್ದ ಕುಶಲತೆಯ ಬಗ್ಗೆ ವಿವರಣೆ ನೀಡುತ್ತದೆ. ನಮ್ಮ ದೃಷ್ಟಿಯಲ್ಲಿ ಯೋಹಾನನು ತಂದೆಯು (ದೇವರು) ಉದ್ದೇಶಿಸಿದ್ದ ಕಾರ್ಯವನ್ನು ನೆರವೇರಿಸಿದ್ದನಾದರೂ, ತನಗಾದ ಅನುಭವಗಳು ತನಗೆ ಒಂದು ವಿಧದಲ್ಲಿ ನಿರಾಶೆಯನ್ನು ಉಂಟುಮಾಡಿರಬಹುದೆಂಬುದಕ್ಕೆ ನಾವು ಆಶ್ಚರ್ಯಪಡಬೇಕಿಲ್ಲ. ನಮಗೆ ಇದು ಒಂದು ಪಾಠವಾಗಿ ಪ್ರಯೋಜನಕಾರಿಯಾಗಬಹುದು. ನಾವು ಸಹ ನಮ್ಮ ಕೆಲಸವನ್ನು ಕರ್ತನಿಗೆಂದು ನಂಬಿಗಸ್ತಿಕೆಯಿಂದ ನಿರ್ವಹಿಸಿ ಫಲಿತಾಂಶವನ್ನು ಆತನ ಹಸ್ತಗಳಿಗೆ ಒಪ್ಪಿಸಿ ಅಂತ್ಯದಲ್ಲಿ ತನ್ನ ಕೃಪಾಪೂರ್ಣವಾದ ಉದ್ದೇಶಗಳು ನೆರವೇರಲು ಎಲ್ಲಾ ಕಾರ್ಯಗಳನ್ನು ಮಾರ್ಪಡಿಸಲು ಅತನಿಗಿರುವ ಜ್ಞಾನಸಾಮರ್ಥ್ಯಗಳಲ್ಲಿ ನಾವು ಭರವಸೆಯಿಂದಿರಬೇಕು. ಕವಿಯ ಈ ಮಾತುಗಳು ಯೋಹಾನನಿಗೂ ಹಾಗೂ ಇತರ ಹಲವು ನಂಬಿಗಸ್ತರಾದ ಆತ್ಮಗಳಿಗೂ ಯುಕ್ತವಾಗಿರುವುದು:–

"ನಾವು ಜೀವಿಸುವುದು ಕ್ರಿಯೆಗಳ ಮೂಲಕವಾಗಿ, ವರುಷಗಳ ಎಣಿಕೆಯಲ್ಲಿರದು; ಅದು ಆಲೋಚನೆಗಳಲ್ಲಿರದು, ಉಸಿರಾಡುವುದರಲ್ಲಿರದು; ಭಾವನೆಗಳಲ್ಲಿರದು, ಅಂಕೆಸಂಖ್ಯೆಗಳಲ್ಲಿರದು. ಆತನು ಬಹುವಾಗಿ ಜೀವಿಸುವುದು, ಬಹುವಾಗಿ ಆಲೋಚಿಸುವುದರಲ್ಲಿಯೂ, ಘನವಾದುದನ್ನು ಅನುಭವಿಸುವುದರಲ್ಲಿಯೂ, ಅತ್ಯುತ್ತಮವಾಗಿ ನಡೆಯುವುದರಲ್ಲಿಯೂ ಇರುವುದು. ಇಂಥಾ ಜೀವಿತವು ದೀರ್ಘಕಾಲದ್ದಾಗಿದ್ದು ಜೀವಿತದ ಮಹತ್ತರ ಗುರಿಯ ಬಗ್ಗೆ ಉತ್ತರಿಸುವದು."

ಯೋಹಾನನ ಮತ್ತು ಆತನಿಗೆ ಛಾಯೆಯಾಗಿರುವ ಎಲೀಯನ ನಡುವೆ ಒಂದು ಘಾಢವಾದ ಹೋಲಿಕೆಯಿರುವ ಹಾಗೆಯೇ ಯೋಹಾನನ ಮತ್ತು ನಿಜರೂಪದಲ್ಲಿನ ಮಹಾ ಎಲೀಯನಾದ ನಂಬಿಗಸ್ತರಾದ ಕ್ರೈಸ್ತಸಭೆಯ ಅನುಭವಗಳಿಗೂ ಒಂದು ಸುಧೀರ್ಘವಾದ ಹೋಲಿಕೆಗಳಿರುವುದು. ಎಲೀಯನು ಅಹಾಬನ ಬಳಿಯಿಂದ ಓಡಿಹೋದಾಗ್ಯೂ ಆತನ ಜೀವವನ್ನು ತೆಗೆಯ ಬಯಸಿದ ನಿಜವಾದ ಹಿಂಸಕಿಯು ಇಸಬೇಲಳಾಗಿದ್ದಳು. ಹೀಗೆಯೇ ಯೋಹಾನನು ಹೆರೋದನಿಂದ ಸೆರೆಗೆಹಾಕಲ್ಪಟ್ಟು ಕಡೆಯಲ್ಲಿ ತಲೆಹೋಯಿಸಿಕೊಂಡರೂ ಆತನ ನಿಜವಾದ ವಿರೋಧಿಯು ಹೆರೋದನ ಹೆಂಡತಿಯಾದ ಹೆರೋದ್ಯಳಾಗಿದ್ದಳು. ಇದರಂತೆಯೇ ಮಹಾ ಎಲೀಯನಾಗಿರುವ ಶರೀರದಲ್ಲಿರುವ ನಂಬಿಗಸ್ತರಾದ ಕ್ರಿಸ್ತನ ದೇಹವಾಗಿರುವವರು ನಾಗರೀಕ ದೇಶಾಧಿಕಾರಿಗಳಿಂದ ಹಿಂಸೆಯನ್ನು ಅನುಭವಿಸಿದ್ದು ಇನ್ನು ಮುಂದೆಯೂ ಹಿಂಸೆಯನ್ನು ಅನುಭವಿಸಲಿರುವವರಾದರೂ ಈ ನಾಗರೀಕ ಆಡಳಿತಾಧಿಕಾರಿಗಳ ಹಿಂದಿರುವ ನಿಜವಾದ ಹಿಂಸಕರು ಪ್ರಕಟನೆ 2:20ರಲ್ಲಿರುವ ನಿಜರೂಪದ ಇಸಬೇಲಳಾಗಿರುವಳು. ಅದು ನಿಜರೂಪದ ಹೆರೋದ್ಯಳೂ ಆಗಿದ್ದು, ಲೋಕದ

ಸರಕಾರಗಳೊಂದಿಗೆ ಅನೈತಿಕವಾಗಿ ಸಂಬಂಧಹೊಂದಿರುವ ಹೆಸರಿಗಾಗಿ ಕ್ರಿಸ್ತನಿಗೆ ಮದಲಗಿತ್ತಿಯಾಗಿರುವ ಹೆಸರಿನ ಕ್ರೈಸ್ತಸಭೆ. ಸತ್ಯವೇದ ವಿದ್ಯಾರ್ಥಿಗಳೆಲ್ಲರೂ–ಇದರ ಹೋಲಿಕೆಗಳನ್ನು ನಿರ್ದಿಷ್ಟವಾಗಿ ಅರ್ಥಮಾಡಿಕೊಂಡಿರುವರಾದರೂ ಅಥವ ಇಲ್ಲವಾದರೂ–ಪ್ರಕಟನಾ ಗ್ರಂಥದಲ್ಲಿರುವ ಈ ಮತಭ್ರಷ್ಟತೆಯ ವಿವಿಧ ಚಿತ್ರಣಗಳನ್ನು ಅವರು ಗುರುತುಮಾಡಿಕೊಂಡಿರುವರು.

## ಹೆರೋದನು, ಹೆರೋದ್ಯಳು ಮತ್ತು ಸಲೋಮೆ

ತನಗೆ ಉತ್ತರಾಧಿಕಾರಿಗಳಾಗಲು ಆಕಾಂಕ್ಷೆಯಿದ್ದ ಹಲವು ಮಕ್ಕಳನ್ನು ದೊಡ್ಡ ಹೆರೋದನು ಬಿಟ್ಟುಹೋಗಿದ್ದನು. ತಾನು ರಾಣಿಯಾಗಬಹುದೆಂದು ನಿರೀಕ್ಷಿಸಿ ಹೆರೋದ್ಯಳು ಇವರಲ್ಲಿ ಹಿರಿಯ ಮಗನನ್ನು ಮದುವೆಯಾಗಿದ್ದಳು. ರೋಮಾಯರ ಚಕ್ರವರ್ತಿಯು ಇದಕ್ಕೆ ಪ್ರತಿಯಾಗಿ ಈ ಪಾಠದಲ್ಲಿ ಬರುವ ಹೆರೋದನಾದ ಅಂತಿಪನನ್ನು ರಾಜನನ್ನಾಗಿ ಆಯ್ಕೆಮಾಡಿದ್ದನು. ಆನಂತರ ಹೆರೋದ್ಯಳು ದೃಢವಾದ ಇಚ್ಛೆಯುಳ್ಳವಳಾಗಿದ್ದು ರಾಣಿಯಾಗಲು ಮಹದಾಕಾಂಕ್ಷಿತಳಾಗಿ ಅಂತಿಪನನು ತನ್ನ ಮೇಲೆ ಮನಸೂರೆಗೊಳ್ಳುವ ಪ್ರಭಾವವನ್ನು ಬೀರಿ ಆತನು ತನ್ನ ಮೊದಲಿನ ಹೆಂಡತಿಯನ್ನು ತ್ಯಜಿಸಿ ಬದಲಾಗಿ ಈಕೆಯನ್ನು ರಾಣಿಯನ್ನಾಗಿ ಅಂಗೀಕರಿಸಿಕೊಳ್ಳುವಂತೆ ಮಾಡಿದ್ದಳು. ಸ್ನಾನಿಕನಾದ ಯೋಹಾನು ಪಾಪಕ್ಕೆ ವಿರೋಧವಾಗಿ ಉಪದೇಶಿಸುವನಾಗಿದ್ದು ಇದನ್ನು ಕಾನೂನು ಬಾಹಿರವಾದ ಒಂದುಗೂಡುವಿಕೆಯೆಂದು ಬಹಿರಂಗವಾಗಿ ಸ್ಪಷ್ಟವಾದ ರೀತಿಯಲ್ಲಿ ಸಾರಿ ಹೇಳುತ್ತಿದ್ದನು. ತನ್ನ ಮೊದಲಿನ ಹೆಂಡತಿಯಿಂದ ಪ್ರತ್ಯೇಕವಾಗಿ ತನ್ನ ಅಣ್ಣನಾದ ಫಿಲಿಪ್ಪನ ಹೆಂಡತಿಯನ್ನು ಅನೈತಿಕವಾಗಿ ಇಟ್ಟುಕೊಂಡವನಾಗಿದ್ದು, ಹೆರೋದನೂ ಮತ್ತು ಆತನ ಪತ್ನಿಯೂ ವ್ಯಭಿಚಾರದಲ್ಲಿ ಜೀವಿಸುತ್ತಿದ್ದಾರೆಂದು ಸಾರುತ್ತಿದ್ದನು. ಇಂಥಾ ಹಮ್ಮುಗಾರಿಕೆ ಮಹದಾಕಾಂಕ್ಷೆ ಧರ್ಮಭ್ರಷ್ಟ ಮನೋಭಾವವುಳ್ಳ ವ್ಯಕ್ತಿಗಳಾದ ಹೆರೋದನು ಮತ್ತು ಆತನ ಹೆಂಡತಿಯು ರಾಜದಂಪತಿಗಳಾದ ತಮ್ಮ ನಡತೆಯ ವಿಷಯವಾಗಿ ಪ್ರಶ್ನಿಸುವ ಯಾವುದೇ ಉಪದೇಶಕರ ವಿರುದ್ಧವಾಗಿ ಕೋಪಕ್ರೋಧದ ಭಾವನೆಯನ್ನು ಹೊಂದಿರುವುದು ಆಶ್ಚರ್ಯವೇನಲ್ಲ. ಇದರ ಫಲವು ಯೋಹಾನನ ಸೆರೆವಾಸ. ಈ ಕ್ರಮವು ಯೋಹಾನನ ಉಪದೇಶದ ಬಗ್ಗೆ ತಾನು ಭೀತಿಗೊಳಗಾಗಲು ಎಲ್ಲಾ ರೀತಿಯ ಕಾರಣವಿದ್ದ ಹೆರೋದಿಯಳ ಪ್ರಚೋದನೆಯಾಗಿತ್ತೆಂಬುದು ಸ್ಪಷ್ಟವಾಗಿತ್ತು. ಹೆರೋದನು ಆತ್ಮಸಾಕ್ಷಿಪೀಡನಾ ಭಾವನ್ನೇನ್ನಾದರೂ ಹೊಂದಿದ್ದೇಯಾಗಿದ್ದರೆ ಇಲ್ಲವೇ ಜನರೇನಾದರೂ ಈ ವಿಷಯದಲ್ಲಿ ಎಚ್ಚೆತ್ತವರಾಗಿ ಆತನ ಆತ್ಮಸಾಕ್ಷಿಯಾನುಸಾರ ಕ್ರಮವೇನಾದರೂ ತೆಗೆದುಕೊಳ್ಳುವಂತೆ ಪ್ರಭಾವ ಬೀರಿದ್ದೇಯಾದರೆ ಆಕೆಯ (ಹೆರೋದಿಯಳ) ಹಿತಾಸಕ್ತಿಗಳಿಗೆ ಅದು ಖಂಡಿತವಾಗಿ ಮಾರಕವಾಗುತ್ತಿತ್ತು. ತಾನು ಜೀವಿತದ ಪ್ರತಿಷ್ಠೆಯನ್ನೇ ತ್ಯಾಗಮಾಡಿ ಪಡೆದ ಈ ಅತ್ಯುನ್ನತವಾದ ಸಾಮಾಜಿಕ ಸ್ಥಾನಮಾನವನ್ನು ಕಳೆದುಕೊಳ್ಳುತ್ತಿದ್ದುದು ಮಾತ್ರವಲ್ಲದೆ ಆಕೆಯು ಎಲ್ಲವನ್ನೂ ಕಳಕೊಂಡವಳಾಗಿ ನಿರ್ಗತಿಕಳಾಗಿ ನೆಲೆಯಿಲ್ಲದೇ ಹೋಗುತ್ತಿದ್ದಳು. ಯೋಹಾನನು ಸೆರೆಯಾಗುವಾಗ ಆತನಿಗೆ ಮರಣ ವಿಧಿಸಲು ಆಕೆಯು ತನ್ನ ಗಂಡನನ್ನು ಪ್ರಚೋದಿಸಲು ಪರಿಶ್ರಮಿಸಿದ್ದುದು ಸ್ಪಷ್ಟವಾಗಿತ್ತು; ಆದರೆ ಯೋಹಾನನನ್ನು ಒಬ್ಬ ಪ್ರವಾದಿಯೆಂದು ಎಣಿಸಿದ್ದ ಹೆರೋದನು ಜನರ ಮೇಲೆ ಇಂಥಾ ಕ್ರಮವನ್ನು ಜರುಗಿಸಲು ಆತನು ಪಡುತ್ತಿದ್ದ ಭಯವು ಆಕೆಯ ಪ್ರಭಾವವನ್ನು ಇಲ್ಲದಂತೆ ಮಾಡಿತ್ತು.

ಸಂಚುಮಾಡುವುದನ್ನು ಇನ್ನೂ ಮುಂದುವರೆಸಿದ್ದ ರಾಣಿಯು ರಾಜನ ಹುಟ್ಟುಹಬ್ಬದಲ್ಲಿ ನಡೆದ ಔತಣಕೂಟದಲ್ಲಿನ ಲಾಭವನ್ನು ಪಡೆಯಲು ನಿರ್ಧರಿಸಿದ್ದಳು. ಆಕೆಯು ರಾಜನ ಮನೋಪ್ರವೃತ್ತಿಯನ್ನು ಅರಿತಿದ್ದಳು ಮತ್ತು ಇಂಥಾ ಸಂದರ್ಭಗಳಲ್ಲಿ ಸಂಭ್ರಮ ಉಲ್ಲಾಸಗಳಿದ್ದು ಅಮಲೇರಿಸುವ ಮದ್ಯವನ್ನು ಸಾಮಾನ್ಯ ಮಿತಿಗಿಂತಲೂ ಹೆಚ್ಚು ಬಳಸುವುದು ವಾಡಿಕೆಯಲ್ಲಿತ್ತು. ಪುರುಷರು ಸೇರಿರುವ ಇಂಥಾ ಕೂಟಗಳಲ್ಲಿ ಹೆಚ್ಚು ಕಡಿಮೆ ಪಾರದರ್ಶಕವಾದ ಉಡುಪು ಧರಿಸಿದ ಹುಡುಗಿಯರಿಂದ ಇಂದ್ರಿಯ ಪ್ರಚೋದನಾ ನೃತ್ಯಗಳನ್ನು ಏರ್ಪಡಿಸುವುದು ಆಗಿನ ಕಾಲದ ವಾಡಿಕೆಯಾಗಿದ್ದು ರಾಜನು ಏರ್ಪಡಿಸಿದ್ದ ಈ ಮೋಜಿನಕೂಟದಲ್ಲಿ ತನ್ನ ಹಿಂದಿನ ದಾಂಪತ್ಯದ ಫಲವಾಗಿ ಹುಟ್ಟಿದ ಮಗಳಾದ ಸಲೋಮೆಯು ಇಂಥಾ ಒಂದು ವಿಶೇಷ ಗೌರವಕ್ಕೆ ಪಾತ್ರಳಾಗುವಂತೆ ಈ ಸಂದರ್ಭವನ್ನು ಆಕೆಯು ಬಳಸಿಕೊಂಡಿದ್ದಳು. ಆಕೆಯು ರೂಪಿಸಿದ ಈ ಪಿತೂರಿಯು ಅತಿ ಯಶಸ್ಸನ್ನು ಕಂಡಿತ್ತು. ರಾಜನು ಮತ್ತು ಆಸ್ಥಾನಿಕರು ಮೆಚ್ಚಿಕೊಂಡರು ಅಲ್ಲದೆ ಇಂಥಾ ಒಂದು ಸಂದರ್ಭಗಳಲ್ಲಿ ಸಾಮಾನ್ಯವಾಗಿ ನೀಡುತ್ತಿದ್ದ ಅಲ್ಪ ಉಡುಗೊರೆಗಳಿಗೆ ಬದಲಾಗಿ ದಾಕ್ಷಾರಸದ ಅಮಲಿನಲ್ಲಿಯೂ ಮತ್ತು ತನ್ನ ಸಾಕು ಮಗಳಿಗೆ ಮಾಡಿದ ತನ್ನ ಶ್ಲಾಘನೆಯ ಭರದಲ್ಲಿ ಆತನು ಆಕೆಯನ್ನು ತನಗೆ ಏನು ಬೇಕಾದರೂ ಅಂದರೆ (ಮಾರ್ಕನು ಹೇಳಿರುವಂತೆ) ತನ್ನ ಅರ್ಧರಾಜ್ಯವನ್ನಾದರೂ ಸಹ ಕೇಳಿಕೊಳ್ಳಲು ಹೇಳಿದ್ದನು.

## ಅರಸನು ಮಾಡಿಕೊಂಡ ಕೆಟ್ಟ ವ್ಯವಹಾರಿಕ ಒಪ್ಪಂದ

ಕೇವಲ ಮದ್ಯದ ಅಮಲು ಹಾಗು ಭಾವೋದ್ವೇಗದಿಂದ ಕೂಡಿದ ಅಸ್ಥಿಮಿತವಾದ ನಿರ್ಣಯದ ಮೂಲಕವಾಗಿ ಮಾತ್ರ ಇಂಥಾ ದುಡುಕಿನ ವಾಗ್ದಾನವನ್ನು ನೀಡಿ ಮೂಲ ಪ್ರತಿಗಳಲ್ಲಿ ಸೂಚಿತವಾಗಿರುವಂತೆ ಅದಕ್ಕಾಗಿ ಅನೇಕ ಆಣೆಗಳನ್ನಿಟ್ಟುಕೊಳ್ಳಲು ಸಾಧ್ಯ. ಕರ್ತನ ಜನರು ಪಡೆದಿರುವ ಪ್ರಯೋಜನಕರವಾದ ಅಂಶಗಳಲ್ಲಿ ಒಂದು ಇಲ್ಲಿರುವುದು. ಅವರು ಇಂಥಾ ಒಂದು ಅತಿರೇಖಗಳು ಮತ್ತು ಅದರಿಂದ ಉಂಟಾಗುವ ಸಹಜವಾದ ನಿರ್ಣಯಗಳ ತಿರುಚುವಿಕೆಯಿಂದ ಕಾಪಾಡಲ್ಪಟ್ಟಿರುವುದು ಮಾತ್ರವಲ್ಲದೆ ಇದಕ್ಕೂ ಮಿಗಿಲಾಗಿ ಅಪೋಸ್ತಲನು ತಿಳಿಸಿರುವಂತೆ ಅವರು "ಶಿಕ್ಷಣದ (ಸ್ವಸ್ಥಚಿತ್ತದ) ಆತ್ಮವನ್ನು" ಪಡೆದಿರುವರು. (2 ತಿಮೋಥೆ 1:7) ಕ್ರಿಸ್ತನಲ್ಲಿದ್ದ ಮನಸ್ಸು ಅಂದರೆ ಕ್ರಿಸ್ತನ ಮನೋಭಾವವು ಹೃದಯಗಳನ್ನು ಇಂಥಾ

ಅವಿವೇಕತನಗಳಿಂದ ಮೇಲಕ್ಕೆ ತಂದು ಬಹು ವಿವೇಚಾನಾತ್ಮಕವಾದ ಸಂಗತಿಗಳ ಕಡೆಗೆ ಅದನ್ನು ಕೊಂಡುತರುವುದು. ವಸ್ತುವಿನ ನಿಜವಾದ ಮೌಲ್ಯವನ್ನು ಅಳೆಯುವಂತೆ ಅದು ನಮ್ಮನ್ನು ಮಾಡುವದು. ಆದರೆ ಲೌಕಿಕ ಮನೋಭಾವ, ಹೆಮ್ಮೆಯ ಮನೋಭಾವ, ಅಸೂಯೆ ಭಾವಕ್ಕೆ ಕಡಿಮೆಯಲ್ಲದ ಮಹದಾಕಾಂಕ್ಷೆಗಳು ತೆಗೆಯಲಾಗುವ ನಿರ್ಣಯಗಳನ್ನು ಶಿರುಚಿ ತಪ್ಪು ಮೌಲ್ಯಗಳ ಕಡೆಗೆ ನಡೆಸುವ ಪ್ರವೃತ್ತಿಯುಳ್ಳದ್ದಾಗಿರುವುದು.

ಇದಕ್ಕೆ ಅನುಗುಣವಾಗಿ ನಾವು ಹಲವಾರು ಕೆಟ್ಟದಾದ ವ್ಯವಹಾರೋಪ್ಪಂದಗಳು ಇರುವುದನ್ನು ನೆನಪಿಗೆ ತಂದುಕೊಳ್ಳುವವರಾಗಿದ್ದೇವೆ. ಅಬ್ರಹಾಮನಿಗಾದ ವಾಗ್ದಾನಕ್ಕೆ ಶಾರೀರಿಕ ರೀತಿಯಲ್ಲಿ ಬಾಧ್ಯನಾಗಿ ಇಸಾಕನ ಚೊಚ್ಚಲ ಮಗನಾಗಿ ಹುಟ್ಟಿದವನಾಗಿ ತನ್ನ ಚೊಚ್ಚಲುತನದ ಹಕ್ಕನ್ನು ಒಂದು ಬಟ್ಟಲು ಅಲಸಂದಿ ಗುಗ್ಗರಿ ಕಾಳುಗಳಿಗಾಗಿ ಮಾರಿದ ಏಸಾವನ ಸಂಗತಿಯು ಈ ಇತರ ದೃಷ್ಟಾಂತಗಳಲ್ಲಿ ಒಂದು. ಯೂದನ ಕೆಟ್ಟ ವ್ಯವಹಾರ ಒಪ್ಪಂದವನ್ನು ನೆನಪಿಗೆ ತಂದುಕೊಳ್ಳುವವರಾಗಿದ್ದೇವೆ. ಇದರಲ್ಲಿ ಆತನು ಮೂವತ್ತು ಬೆಳ್ಳಿ ನಾಣ್ಯಗಳಿಗಾಗಿ ತನ್ನ ಕರ್ತನನ್ನು ಮಾರಿ ಸರ್ವವನ್ನೂ ಕಳಕೊಂಡನು. ಹೆರೋದನದೂ ಈ ದುಷ್ಟ ಅಥವಾ ದುಬಾರಿ ವ್ಯವಹಾರೋಪ್ಪಂದಗಳಲ್ಲಿ ಒಂದು. ಪಾಠದಲ್ಲಿ ಉಲ್ಲೇಖಿತವಾದಂತೆ ಆತನು ತನ್ನ ಮನಶ್ಯಾಂತಿಯನ್ನು ಕಳಕೊಂಡಿದ್ದನು, "ಈ ಮಾತಿಗೆ ಅರಸನು ದುಃಖಪಟ್ಟರೂ..". ತಾನು ಮಾಡಿದ ಅನ್ಯಾಯದ ಬಗ್ಗೆ ಯೋಚಿಸಿ ಆತನ ಮನಸ್ಸು ಆಗ್ಗಾಗೆ ತೊಂದರೆಗೊಳಗಾಗುತ್ತಿತ್ತೆಂಬುದನ್ನು ನಾವು ಖಚಿತ ಮಾಡಿಕೊಳ್ಳಬಹುದು. ಅಲ್ಲದೆ ಆತನು ಮಾಡುತ್ತಿದ್ದ ಇನ್ನೂ ಹೆಚ್ಚಿನ ಆಲೋಚನೆಯು ತಾನು ಎಸಗಿದ ಅಪರಾಧವು ದೇವರಿಗೆ ವಿಶೇಷ ಪ್ರಿಯರಾದವರಲ್ಲಿ ಒಬ್ಬನ ಅಂದರೆ ಒಬ್ಬ ಪ್ರವಾದಿಯ ವಿರೋಧವಾಗಿತ್ತೆಂಬ ವಿಷಯುವಾಗಿರುವ ಸಂಭವವು ಬಹಳವಾಗಿತ್ತು. ಯೋಹಾನನ ಮರಣದವರೆಗೂ ಯೇಸುವಿನ ಜನಪ್ರಿಯತೆಯು ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರಲಿಲ್ಲ ವೆಂಬುದು ಸ್ಪಷ್ಟವಾಗಿತ್ತು. ಅದೇ ಸಮಯಕ್ಕೆ ಹೆರೋದನು ಈ ಸಂಗತಿಯನ್ನು ಕೇಳಿ ಗೊಂದಲಕ್ಕೀಡಾಗಿದ್ದನು. ಈ ದಿನಗಳಲ್ಲಿ (ಸತ್ತವರ) ಆತ್ಮಗಳನ್ನು ಸಂಪರ್ಕಿಸುವ ರೀತಿಯಲ್ಲಿ, ಹೆರೋದನು ಗ್ರೀಕರ ಸಿದ್ಧಾಂತದ ಪ್ರಕಾರ ಸತ್ತವರು ನಿಜವಾಗಿಯೂ ಸತ್ತಿರುವುದಿಲ್ಲ ಆದರೆ ಅವರಿಗೆ ಇತರ ವ್ಯಕ್ತಿಗಳ ಮೂಲಕ ಸಂಪರ್ಕಿಸುವ ಶಕ್ತಿಯಿರುವುದು ಎನ್ನುವದರಲ್ಲಿ ನಿಜಾಂಶವು ಇರುವುದು ಹೌದೋ ಅಲ್ಲವೋ ಎಂದು ಅಲೋಚಿಸಿ ಬೆರಗಾಗಿದ್ದನು. ಅವನ ಮನಸ್ಸು ತೊಂದರೆಗೆ ಈಡಾಗಿತ್ತಾದರೂ ಆತನು ಪಶ್ಚಾತ್ತಾಪಪಟ್ಟಿರಲಿಲ್ಲ.

ಈ ದಿನದಲ್ಲೂ ಇದೇ ಪರಿಸ್ಥಿತಿಯು ಪ್ರಚಲಿತ ದಲ್ಲಿರುವುದು. ಜನರು ತಮಗೆ ತಪ್ಪೆಂದು ತೋರುವದನ್ನೇ ಮಾಡುತ್ತಲಿರುವರು, ಅವರು ತಮ್ಮ ಮನಃಸಾಕ್ಷಿಯ ಉಲ್ಲಂಘನೆಯನ್ನು ಮಾಡುತ್ತಿರುವರು. ಆದರೂ ಇದಕ್ಕೆ ವಿಷಾದಿಸುವರಾದರೂ ಇದು ದೇವರ ಚಿತ್ತಾನುಸಾರವಾದ ದುಃಖಪಡುವಿಕೆಯಲ್ಲ, ಏಕೆಂದರೆ ಅಪೋಸ್ತಲನು ವಿವರಿಸಿರುವಂತೆ ದೇವರ ಚಿತ್ತಾನುಸಾರವಾದ ದುಃಖವು ಅಂದರೆ ದೇವರು ಮಾನ್ಯಮಾಡುವ ಮತ್ತು ಮೆಚ್ಚುವ ದುಃಖವು ಮಾನಸಾಂತರ ಹೊಂದುವದಕ್ಕೆ ನಡೆಸುವುದು. ಇತರ ಪ್ರತಿಯೊಂದು ಬಗೆಯ ದುಃಖವು ಕೇವಲ ಹಾನಿಕರವಾದ ಪರಿಣಾಮಗಳನ್ನು ಉಂಟುಮಾಡುವದು, ಆದರೆ ದೇವರ ಚಿತ್ತಾನುಸಾರವಾದ ದುಃಖವು ಪ್ರಯೋಜನಕಾರಿಯಾಗಿರುವದು. ಅದು ಮಾನಸಾಂತರ ಹೊಂದಿ ಸುಧಾರಣೆಯಾಗಿ ಯೇಸುವಿನಲ್ಲಿ ಮಾಡಲಾದ ಏರ್ಪಾಟಿನ ಮೂಲಕವಾಗಿ ದೇವರೊಂದಿಗೆ ಸಂಧಾನವಾಗುವುದಕ್ಕೆ ನಡೆಸುವದು. ಕರ್ತನ ಜನರಾಗಿ ನಾವು ಕರ್ತನ ಆತ್ಮದಿಂದ ಭರಿತರಾಗಲು ಬಯಸಿ ಅದೇ ಪ್ರಮಾಣದಲ್ಲಿ ಪ್ರಾಪಂಚಿಕ ಆತ್ಮವನ್ನು ಅಂದರೆ ಅಮಲಿನಿಂದ ಕೂಡಿದ ಆತ್ಮಭಾವವನ್ನು ಸ್ವಂತ ಚಿತ್ತವನ್ನು ತೆಗೆದುಹಾಕಿದವರಾಗಿ ಸ್ವಸ್ಥತೆಯಿಂದ ಕೂಡಿದ ನೂತನ ಮನಸ್ಸನ್ನು ಹೊಂದಿಕೊಳ್ಳುವುದಕ್ಕೆ ಯತ್ನಿಸೋಣ. ಹೀಗಿರಲು ಯಾವನಾದರೂ ಶಾರೀರಿಕ ಅಭಿಲಾಷೆಗಳಿಗೆ ಒಳಪಟ್ಟು ಪಾಪದಲ್ಲಿ ಬಿದ್ದರೆ ಆತನಲ್ಲಿ ಎಂದಾದರೂ ಒಳ್ಳೆಯದು ಫಲಿಸಬೇಕಾದಲ್ಲಿ ಅಥವಾ ಮುಂದೆ ಒಳ್ಳೆಯದನ್ನು ಪಡಕೊಳ್ಳಬೇಕಿದ್ದಲ್ಲಿ, ತಾನು ಕೆಳಮುಖವಾಗಿ ಇಳಿದುಹೋದ ಪ್ರತಿಯೊಂದು ಹೆಜ್ಜೆಯಿಂದಲೂ ಹಿಂದಕ್ಕೆ ಬರಬೇಕಾಗಿರುವುದೆಂಬುದನ್ನು ಆತನು ನೆನಪಿನಲ್ಲಿಟ್ಟುಕೊಂಡಿರಲಿ. ಅಂಥವರು ಏನೇ ಆಗಲಿ ತ್ವರಿತವಾಗಿ ಕರ್ತನನ್ನು ಹುಡುಕುವವರಾಗಿ ಆತನ ರಕ್ತದಲ್ಲಿನ ಆಶೀರ್ವಾದದ ಮೂಲಕವಾಗಿ ತೊಳಕೊಂಡವನಾಗಿ ಶುದ್ಧೀಕರಿಸಿಕೊಂಡು ತಾನು ನಿರ್ಮಲನಾಗಬೇಕು. ಮತ್ತು ಇನ್ನು ಮುಂದೆ ಹಿಂದೆಂದಿಗಿಂತಲೂ ಹೆಚ್ಚಾಗಿ ಪಾಪದ ಬಗ್ಗೆ ಜಾಗರೂಕನಾಗಿರಬೇಕು.

## ಯೋಹಾನನು ಅಚಾತುರ್ಯನಾಗಿ ನಡಕೊಂಡನೋ?

ಯೋಹಾನನು ರಾಜನನ್ನು ಮತ್ತು ರಾಣಿಯನ್ನು ಟೀಕೆ ಮಾಡಿದುದರಲ್ಲಿ ತನ್ನ ಕರ್ತವ್ಯವನ್ನು ಮೀರಿದನೋ ಇಲ್ಲವೋ ಎಂದು ಆತನ ನಡೆಯ ಬಗ್ಗೆ ನ್ಯಾಯಸ್ಥಾನದಲ್ಲಿ ಕುಳಿತುಕೊಂಡು ನಿರ್ಣಯಿಸುವುದು ನಮ್ಮ ಕೆಲಸವಲ್ಲ. ಹೀಗಿದ್ದರೂ ಆತನು ತನ್ನ ಕರ್ತವ್ಯವನ್ನು ಮೀರಿದ್ದನೆಂದು ನಾವು ಆಲೋಚಿಸುವ ಪ್ರವೃತ್ತಿಯಲ್ಲಿರುವೆವು. ಇದುವರೆಗೂ ನಾವು ತೀರ್ಮಾನಿಸಬಹುದಾಗಿರುವಂತೆ, ಆ ಕಾಲದಲ್ಲಿ ಯೇಸು ಮತ್ತು ಅಪೋಸ್ತಲರಿಗೆ ಗಂಭೀರವಾದ ಆರೋಪಗಳನ್ನು ಹೊರಿಸಲು ಹಲವಾರು ಅಧಿಕಾರಿಗಳು ಇದ್ದರೂ ಇವರಲ್ಲಿ ಯಾರೂ ಯೋಹಾನನು ತೆಗೆದುಕೊಂಡ ಕ್ರಮವನ್ನು ಅನುಸರಿಸಿದ್ದುದರ ಯಾವ ಪುರಾವೆಗಳೂ ಸಿಗುವುದಿಲ್ಲ. ಯೇಸುವು ಪಿಲಾತನ ಎದುರಿನಲ್ಲಿದ್ದನು ಆನಂತರ ಈ ಹೆರೋದನ ಎದುರಿನಲ್ಲಿಯೂ ಇದ್ದನು, ಆದರೂ ಯೋಹಾನನು ನುಡಿಯಲು ಉಚಿತವೆಂದು ಬಯಸಿದ ವಿಷಯವಾಗಿ ಆತನು ಒಂದು ಮಾತನ್ನಾದರೂ ಹೇಳಿರುವ ದಾಖಲೆಗಳು ಯಾವುದೂ ಇರುವುದಿಲ್ಲ. ಪೌಲನೂ ವೈಯುಕ್ತಿಕವಾಗಿ ಅಗ್ರಿಪ್ಪನ ಹಾಗು ಫೆಲಿಕ್ಸನ ಅಲ್ಲದೆ ಆ ಸಮಯದಲ್ಲಿ ಪ್ರಮುಖರಾಗಿದ್ದ ಇತರರ ಮುಂದೆ ನಿಂತಿದ್ದನು. ಚರಿತ್ರೆಯ ಪ್ರಕಾರ ಇವರಲ್ಲಿ ಕೆಲವರು ಅಪಕೀರ್ತಿಯುಳ್ಳ ಮನುಷ್ಯರಾಗಿದ್ದರು. ಆದರೂ ಆತನು ಅವರ ವೈಯುಕ್ತಿಕ ವಿಷಯವಾಗಿ ಯಾವ ಆಕ್ರಮಣವನ್ನೂ ಮಾಡಿರಲಿಲ್ಲ.

ಮತ್ತು ಆತನು ಮಾಡಿಕೊಂಡ ಒಂದೇ ಮನವಿಯೆಂದರೆ ಅದು ಅಗ್ರಿಪ್ಪನ ಮುಂದಾಗಿತ್ತು: "ನೀನು ಮಾತ್ರವಲ್ಲದೆ ಈಹೊತ್ತು ನನ್ನ ಮಾತುಗಳನ್ನು ಕೇಳುವವರೆಲ್ಲರೂ ಈ ಬೇಡಿಗಳ ಹೊರತು ನನ್ನಂತೆ ಆಗಬೇಕೆಂದು ದೇವರನ್ನು ಪ್ರಾರ್ಥಿಸುತ್ತೇನೆ..." ಮತ್ತು ಈ ಹೇಳಿಕೆಗೆ ಇದು ಅಗ್ರಿಪ್ಪನು ನೀಡಿದ ಉತ್ತರ: "ಅಲ್ಪಪ್ರಯತ್ನದಿಂದ ನನ್ನನ್ನು ಕ್ರೈಸ್ತನಾಗುವದಕ್ಕೆ ಒಡಂಬಡಿಸುತ್ತೀಯಾ?"

ಸತ್ಯವೇದದ ಬೋಧನೆಯನ್ನು ನಾವು ಅರ್ಥಮಾಡಿಕೊಂಡಿರುವ ಹಾಗೆ, ಲೋಕದಲ್ಲೆಲ್ಲಾ ಸಂಚರಿಸಿ ಪಾಪದ ವಿಷಯದಲ್ಲಿ ಗದರಿಸುವುದು ಕರ್ತನ ಜನರ ಕರ್ತವ್ಯವಲ್ಲ, ಆದರೆ ಸುವಾರ್ತೆಯನ್ನು ಸಾರುವುದಾಗಿರುವುದು. ನಾವು ನುಡಿಯಿಂದಲೂ ಮತ್ತು ನಮ್ಮ ಜೀವಿತದ ಮೂಲಕವಾಗಿಯೂ ಸಾರುವ ಸುವಾರ್ತೆಯು "ದೇವರ ಬಲಸ್ವರೂಪವಾಗಿದ್ದು ಅದು ...ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ." ಇದನ್ನು ನಾವು ಒತ್ತಿಹೇಳುವ ಕಾರಣ ಕರ್ತನ ಜನರಲ್ಲಿ ಕೆಲವರು ಇಂತಹ ವಿಷಯಗಳಲ್ಲಿ ಕರ್ತನನ್ನು ಮತ್ತು ಅಪೊಸ್ತಲರನ್ನು ಅನುಸರಿಸುವ ಬದಲು ಯೋಹಾನನ ವಿಧಾನವನ್ನು ಅನುಸರಿಸುವ ಮನಸ್ಸುಳ್ಳವರಾಗಿರುವುದನ್ನು ನಾವು ಗಮನಿಸಿರುತ್ತೇವೆ. ಇಲ್ಲಿ ಅವರು ತಪ್ಪುಮಾಡುತ್ತಿರುವರೆಂಬುದು ನಮ್ಮ ನಂಬಿಕೆ. ಸುವಾರ್ತೆಯು ಕಳುಹಿಸಲ್ಪಟ್ಟಿರುವುದು ಜನರ ಹೃದಯಗಳನ್ನು ಒಡೆಯುವುದಕ್ಕಲ್ಲ; ಆದರೆ ಒಡೆದ ಹೃದಯವನ್ನು ಕಟ್ಟುವುದಕ್ಕಾಗಿ ಅಂದರೆ ಈಗಾಗಲೇ ಒಡೆದು ಹೋಗಿರುವ ಹೃದಯವನ್ನು ಕಟ್ಟಿವಾಸಿಮಾಡುವುದಕ್ಕಾಗಿ. ಪಾಪ ಮತ್ತು ಅದಕ್ಕೆ ಸಹಜವಾಗಿ ಬಂದಿರುವ ಶಿಕ್ಷೆಯು ಭಾರವಾದ ಸುತ್ತಿಗೆಯಂತಿದ್ದು ಅದು ಮಾನವರ ಹೃದಯಗಳನ್ನು ಒಡೆದುಹಾಕಿರುವದು. ಈಗ ಸಮೀಪಿಸುತ್ತಿರುವ ಮಹಾ ಸಂಕಟದ ಕಾಲಗಳು ಲೋಕದವರೆಲ್ಲರ ಹೃದಯಗಳನ್ನು ಒಡೆದುಹಾಕಲು ದೇವರು ಅನುಸರಿಸುವ ವಿಧಾನವಾಗಿದ್ದು ಅದು ಈ ಕಾಲವನ್ನು ಹಿಂಬಾಲಿಸಿ ಬರಲಿರುವ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ (ನೊಂದ ಮನಕ್ಕೆ ಸಾಂತ್ವನ ನೀಡುವ) ಗಿಲ್ಯಾದಿನ ಮುಲಾಮಿನ ಔಷಧಿಯನ್ನು ಮತ್ತು ಅಲ್ಲಿ ಸಾಮಾನ್ಯವಾಗಿ ದೊರೆಯಲಿರುವ ಆಶೀರ್ವಾದಗಳನ್ನು ಹೊಂದಲು ಲೋಕದವರನ್ನು ಸಿದ್ಧಗೊಳಿಸುವ ಸಲುವಾಗಿರುವದು. ಯಾರು ಸುವಾರ್ತೆಯನ್ನು ಸುತ್ತಿಗೆಯಂತೆ ಬಳಸುವರೋ ಅವರು ತಮ್ಮ ಕಾರ್ಯಭಾರದ ವಿಷಯವಾಗಿ ತಪ್ಪುತಿಳುವಳಿಕೆ ಹೊಂದಿರುವರು. ಯಾಕೆಂದರೆ (ಶಿರಸ್ಸು ಮತ್ತು ದೇಹದಿಂದ ಕೂಡಿರುವ) ಕ್ರಿಸ್ತನ ಕಾರ್ಯಭಾರದ ವಿಷಯವಾಗಿ ಓದುವುದು: "ಕರ್ತನಾದ ಯೆಹೋವನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು; ಮನಮುರಿದವರನ್ನು ಕಟ್ಟಿವಾಸಿಮಾಡುವದಕ್ಕೂ," ಮುಂತಾದವುಗಳು. – ಯೆಶಾಯ 61:1

## ಒಳ್ಳೆಯ ಅಥವಾ ಕೆಟ್ಟ ಸಂಗತಿಗಳಲ್ಲಿ ತಂದೆತಾಯಿಗಳ ಪ್ರಭಾವ

ಹೆರೋದನ ಮೇಲಿದ್ದ ಹೆರೋದ್ಯಳ ಪ್ರಭಾವವು ಆಕೆಯು ತನ್ನ ಮಗಳಾದ ಸಲೋಮೆ ಮೇಲಿದ್ದ ಅಧಿಕಾರದಲ್ಲಿ ಸೂಚಿತವಾಗಿರುವುದು. ರಾಜನು ಮಾಡಿದ ಉದಾರ ಕೊಡುಗೆಯ ಪ್ರಸ್ತಾವನೆಯು ಆ ಬಾಲ್ಯದ ಹುಡುಗಿಯ ಮನಸ್ಸಿನಲ್ಲಿ ಪ್ರಮುಖವಾಗಿ ನೆಲೆಯೂರಿರಬೇಕು. ಐಶ್ವರ್ಯ ವೈಭವ ಉಡುಗೆ ಅರಮನೆ ಇವುಗಳು ಆಕೆಯ ಮನಸ್ಸಿನಲ್ಲಿ ಸ್ಪಷ್ಟವಾಗಿ ಸುಳಿದಾಡಿದವು; ಆದರೆ ಆಕೆಯ ಹಿಂದಿನ ನಡೆಯು ತನ್ನ ತಾಯಿಯ ಸೂಚನೆಯ ಮೇರೆಗೆ ಆಗಿದ್ದುದರಿಂದ ಆಕೆಯು ಈಗ ತನ್ನ ತಾಯಿಯ ಸಲಹೆಯನ್ನು ಬಯಸಿದಳು, "ಈಗ ನಾನು ಏನು ಕೇಳಲಿ?" (ಮಾರ್ಕ 6:24) ಇಲ್ಲಿ ನಾವು ಹೆತ್ತವರ ಪ್ರಭಾವದ ಒಂದು ದೃಷ್ಟಾಂತವನ್ನು ಪಡೆದಿರುವೆವು. ಆಕೆಯು ದುಷ್ಟಳಾದ ಹೆಂಗಸಾಗಿರಲಾಗಿ ಹೆರೋದ್ಯಳು ತನ್ನ ಮಗಳ ವಾತ್ಸಲ್ಯವನ್ನು ಉಳಿಸಿಕೊಂಡಿದ್ದೂ ಅಲ್ಲದೆ ಆಕೆಯ ಪೂರ್ಣ ವಿಶ್ವಾಸ ಮತ್ತು ವಿಧೇಯತೆಯನ್ನೂ ಗಳಿಸಿಕೊಂಡಿದ್ದಳು. ಆ ಬಾಲ್ಯಮನಸ್ಸನ್ನು ಒಳ್ಳೆಯ ಅಥವಾ ಕೆಟ್ಟ ಸಾಧನವನ್ನಾಗಿ ಬಳಸಲು ನಿರ್ದೇಶಿಸುವುದು ಆಕೆಯದಾಗಿತ್ತು. ಇದು ಕೆಲವು ಮಟ್ಟಿಗೆ ಪ್ರತಿಯೊಬ್ಬ ತಂದೆತಾಯಿಗಳ ವಿಷಯದಲ್ಲೂ, ವಿಶೇಷವಾಗಿ ತಾಯಿಯ ವಿಷಯದಲ್ಲಿ ನಿಜವಾಗಿರುವದು. ಹೀಗಿರಲು ತಮ್ಮ ಮಕ್ಕಳ ವರ್ತನೆಯ ಬಗ್ಗೆ ತಂದೆಯ ಮತ್ತು ತಾಯಿಯ ಜವಾಬ್ದಾರಿಯು ಎಷ್ಟೋ ಮಹತ್ತಾದುದಾಗಿರುವದು. ಕರ್ತನ ಜನರಲ್ಲಿನ ಸ್ವಸ್ಥತೆಯ ಮನೋಭಾವವು ಖಂಡಿತವಾಗಿ ಅವರಿಗೆ ಸಹಜವಾಗಿ ಲಭಿಸಿರುವ ಸಂಬಂಧ ಹಾಗು ಅವಕಾಶದ ದೆಸೆಯಿಂದ ಅವರು ಹೊಂದಿರುವ ಈ ಶಕ್ತಿಶಾಲಿಯಾದ ಪ್ರಭಾವವನ್ನು (ತಮ್ಮ ಮಕ್ಕಳನ್ನು) ಸನ್ಮಾರ್ಗದ ಕಡೆಗೆ ಮಾರ್ಗದರ್ಶನ ಮಾಡುವುದಕ್ಕಾಗಿ ಬಳಸಿಕೊಳ್ಳಲು ಅವರನ್ನು ಪ್ರೇರೇಪಿಸುವುದು.

ಕೆಲವು ಕ್ರೈಸ್ತ ತಾಯಂದಿರೂ ಸಹ ಇಂಥಾ ಅವಕಾಶಗಳನ್ನು ತಟ್ಟನೆ ಬಳಸಿಕೊಂಡು ತಮ್ಮ ಮಕ್ಕಳನ್ನು ಪರಲೋಕ ಮಾರ್ಗದೆಡೆಗೆ ನಡೆಸುವಲ್ಲಿ ವಿಫಲರಾಗಿರುವುದಕ್ಕಾಗಿ ಅವರ ಬಗ್ಗೆ ಅಯ್ಯೋ ಎನಿಸುತ್ತದೆ. ಅವರು ಪರಲೋಕದಲ್ಲಿ ಗಂಟುಮಾಡಿಕೊಳ್ಳ ಸಲುವಾಗಿ ತಮ್ಮ ಲೌಕಿಕ ಹಿತಾಸಕ್ತಿಗಳನ್ನು ತ್ಯಾಗಮಾಡಲು ಬಯಸಿದರೂ ಸಹ ತಮ್ಮ ಮಕ್ಕಳ ವಿಷಯದಲ್ಲಿ ಪಾಪಂಚಿಕಭಾವದವರಾಗಿ ತಮ್ಮ ಮಕ್ಕಳನ್ನು ಈ (ಪರಲೋಕದ) ವಿಷಯಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳುವಲ್ಲಿ ತಮ್ಮ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವವರಾಗಿರುವರು. ಜ್ಞಾನಮಾರ್ಗವು ಯಾವಾಗಲೂ ಹಿತಕರವಾಗಿದ್ದು ಉಳಿದ ಇತರ ಮಾರ್ಗಗಳೆಲ್ಲವೂ ಈಗಿನ ಮತ್ತು ಮುಂದಿನ ಸಂಕಟಗಳ ಕಡೆಗೆ ನಡೆಸುವವೆಂಬುದನ್ನು ಗ್ರಹಿಸಲು ವಿಫಲರಾಗಿರುವರು. ಅಪೊಸ್ತಲರ ಈ ಮಾತುಗಳನ್ನು ಮನವರಿಕೆಮಾಡಿಕೊಳ್ಳುವಲ್ಲಿ ವಿಫಲರಾಗಿರುವರು: "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೆಚ್ಚಿಕೆಯಾಗಿಯೂ ಮೀಸಲಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು." ಇತರ ಮಾರ್ಗಗಳೆಲ್ಲವೂ ಅಯುಕ್ತವೂ ವಿಚಾರಹೀನವೂ ಅವಿವೇಕವೂ ಆಗಿರುವವು.

ರಾಜನು ಪ್ರಸ್ತಾವನೆ ಮಾಡಿದ ಭವ್ಯವಾದ ಸಂಗತಿಗಳ ಬಗ್ಗೆ ತನ್ನ ಮಗಳ ಬಯಕೆಗೆ ಉತ್ತರವಾಗಿ ಯಾರೋ ಒಬ್ಬರು

ತಾಯಿಯ ಬಾಯಲ್ಲಿ ಈ ಮಾತುಗಳನ್ನು ಇರಿಸಿದ್ದಾರೆ: "ದಡ್ಡ ಹುಡುಗಿಯೇ, ನೀನು ಕೇಳಿಕೊಂಡಿರುವುದು ಏನೆಂಬುದು ನಿನಗೆ ತಿಳಿದಿಲ್ಲ: ಸ್ನಾನಿಕನಾದ ಯೋಹಾನು ಜೀವಿಸುವುದೇ ಆದರೆ ಯಾವುದೇ ದಿನದಲ್ಲಾದರೂ ರಾಣಿಪದವಿಯಿಲ್ಲದವಳಾಗಿ ಬಹಿಷ್ಕೃತಳಾದಲ್ಲಿ ಈ ಎಲ್ಲಾ ಸಂಗತಿಗಳು ನನಗೂ ಮತ್ತು ನಿನಗೂ ಯಾವುದಕ್ಕೂ ಬಾರದೆಂಬುದು ನಿನಗೆ ಗೊತ್ತಿಲ್ಲವೇ?' ಈ ಪ್ರವಾದಿಯು ತನ್ನ ದಾರಿಯಿಂದ ಹೊರಗೆ ಉಳಿದರೆ ತನಗೂ ಮತ್ತು ಆಕೆಗೂ ಇತರ ಎಲ್ಲಾ ಅನುಕೂಲಗಳೂ ಸುಲಭವಾಗಿ ಲಭಿಸುವುದೆಂಬುದು ತಾಯಿಯ ಅಭಿಪ್ರಾಯವಾಗಿದ್ದುದು ಸ್ಪಷ್ಟವಾಗಿತ್ತು. ಆಕೆಯು ಯೋಹಾನನ ತಲೆಯನ್ನು ಒಂದು ಪರಾತಿನಲ್ಲಿ (ಹಬ್ಬಗಳಲ್ಲಿ ಉಪಯೋಗಿಸುವ ದೊಡ್ಡ ತಟ್ಟೆಯಲ್ಲಿ) ಅಲ್ಲಿಗೆ ತರಿಸಿಕೊಡುವಂತೆ ಕೇಳಿಕೊಳ್ಳಲು ತನ್ನ ಮಗಳ ಮನವೊಲಿಸಿದಳು. ರಾಜನ ಉದ್ವೇಗವು ತಣ್ಣಗಾಗಿ ಉತ್ತಮ ನ್ಯಾಯವಿವೇಚಾನಾ ಶಕ್ತಿಯು ಆತನನ್ನು ಮತ್ತೆ ಹಿಡಿದುಕೊಳ್ಳಲು ಸಾಧ್ಯವಾಗದಂತೆ ಇದನ್ನು ಅವಸರವಾಗಿ ಮಾಡುವುದು ಅಗತ್ಯವೆಂದು ಎಣಿಸಲಾಗಿತ್ತು; ಅಂದರೆ ಭಾವೋದ್ವೇಗದಿಂದ ಮತ್ತು ಮದ್ಯಪಾನದಿಂದ ಉದ್ವೇಗಗೊಂಡಿರುವಾಗಲೇ ಮತ್ತು ಆತನ ಆಣೆಯನ್ನು ಕೇಳಿದ ಆತನ ಆಸ್ಥಾನಿಕರು ಇನ್ನೂ ಉಪಸ್ಥಿತರಾಗಿರುವಾಗಲೇ ಇದನ್ನು ಮಾಡಬೇಕಿತ್ತು. ಆತನ ಆಸ್ಥಾನಿಕರ ಮುಂದೆ ಏನಾದರೂ ಆ ಸೆರೆಯವನ ವಿಷಯವಾಗಿ ತೀರ್ಮಾನಿಸಲು ಅನಿಶ್ಚಿತನಾಗುವಲ್ಲಿ ಅದು ತನ್ನನ್ನು ಹಾಸ್ಯಾಸ್ಪದ ವಾಗುವಂತೆ ಮಾಡುತಿತ್ತು. ರಾಜನು ಮಣಿದುಹೋದನು; ಆದರೂ ಹೆರೋದಿಯಳು ತಾನು ದಿಗಿಲುಪಡುತ್ತಿದ್ದ ತನ್ನ ದುರ್ವಿಧಿಯಿಂದ ತಪ್ಪಿಸಿಕೊಳ್ಳಲಾಗಲಿಲ್ಲ; ಯಾಕೆಂದರೆ ಹತ್ತು ವರುಷಗಳಲ್ಲಿ ಆಕೆಯ ಮಹತ್ವಾಕಾಂಕ್ಷೆಯು ಹೆರೋದನನ್ನು ತನ್ನ ಉತ್ತಮವಾದ ನ್ಯಾಯವಿವೇಚನೆಗೆ ವಿರೋಧವಾಗಿ ರೋಮ್ ಸರಕಾರದಿಂದ ಇನ್ನೂ ಅಧಿಕವಾದ ಘನತೆಗೌರವಗಳನ್ನು ಬೇಡುವಂತೆ ಪ್ರೇರೇಪಿಸಿತ್ತೆಂದು ಇತಿಹಾಸದಲ್ಲಿ ಲಿಖಿತವಾಗಿ ರುವದು. ಆತನ ಬೇಡಿಕೆಯು ತಿರಸ್ಕರಿಸಲ್ಪಟ್ಟಿತ್ತು ಮತ್ತು ಹೆರೋದನು ತನ್ನ ಆಧಿಪತ್ಯವನ್ನು ಕಳಕೊಂಡವನಾಗಿ ಗಾಲ್ ದೇಶದ ಲಿಯೋನ್ ಎಂಬಲ್ಲಿಗೆ ಗಡಿಪಾರುಮಾಡಲ್ಪಟ್ಟವನಾಗಿ ಅಲ್ಲೇ ಸತ್ತನು.

## ಭವಿಷ್ಯದಲ್ಲಿ ನಮಗಿರುವ ಸಾಧ್ಯತೆಗಳು

ಯೋಹಾನನು ಎಲೀಯನ ನಿಜರೂಪವಾಗಿದ್ದನೆಂದು ಹಾಗೂ ಶಿರಸ್ಸು ಮತ್ತು ದೇಹಗಳನ್ನೊಳಗೊಂಡು ಶರೀರ ಸಂಬಂಧದಲ್ಲಿರುವ ಕ್ರಿಸ್ತನೆಂಬ ಸುವಾರ್ತಾಯುಗದ ಕ್ರೈಸ್ತ ಸಭೆಯು ಇದಕ್ಕೂ ಹೆಚ್ಚಾದ ಭವ್ಯವಾದ (ಎಲೀಯನ) ನಿಜರೂಪವಾಗಿರುವುದೆಂಬ ಅಂಶವನ್ನು ನಾವು ಈಗಾಗಲೇ ಪ್ರಸ್ತಾಪಿಸಿರುವೆವು. ಹದಿನೆಂಟು ಶತಮಾನಗಳಿಗೂ ಅಥವಾ ಇದಕ್ಕೂ ಮಿಗಿಲಾಗಿ ಈ ಶ್ರೇಷ್ಠ ಎಲೀಯನು ಲೋಕದಲ್ಲಿ ನೀತಿಯ ವಿಷಯವಾಗಿ ಸಾರಿಹೇಳುತ್ತಾ ಜನರನ್ನು ಮಾನಸಾಂತರ ಹೊಂದುವದು, ಮುಂತಾದವುಗಳಿಗೆ, ಕರೆನೀಡುತ್ತಾ ಇದ್ದು ಕ್ರಿಸ್ತನು ಅಂದರೆ ಪ್ರಭಾವ ಹೊಂದಿದ ಸಭೆಯು ದೇವರ ರಾಜ್ಯವಾಗಿ ಲೋಕಕ್ಕೆ ನ್ಯಾಯವಿಚಾರಣೆ ಮಾಡಿ ಆಶೀರ್ವದಿಸಲು ಬರುವನೆಂಬುದನ್ನು ಪ್ರಕಟಿಸುತ್ತಿರುವನು. ಎಲೀಯನು ಇಸ್ರಾಯೇಲ್ಯರಲ್ಲಿ ಕೆಲವೇ ಮಂದಿ ದೇವರಿಗೆ ನಿಷ್ಠೆಯುಳ್ಳವರನ್ನು ಕಂಡುಕೊಂಡ ಹಾಗೆಯೇ ಎರಡನೆಯ ಎಲೀಯನೂ ಶರೀರ ಸಂಬಂಧದಲ್ಲಿ ಬಂದ ಯೇಸುವನ್ನು ಸಂಧಿಸಲು ಕೇವಲ ಕೆಲವೇ ಮಂದಿ ಸಿದ್ಧರಿದ್ದುದನ್ನು ಕಂಡುಕೊಂಡಿದ್ದನು ಮತ್ತು ಇದೇ ರೀತಿಯಲ್ಲಿ ಉತ್ತಮವಾದ ನಿಜರೂಪದಲ್ಲಿರುವ ಎಲೀಯನು (ಶರೀರ ಸಂಬಂಧದಲ್ಲಿರುವ ಕ್ರೈಸ್ತಸಭೆ) ಕೇವಲ ಕೆಲವೇ ಮಂದಿಯು ಅಂದರೆ ಚಿಕ್ಕ ಹಿಂಡು ತನ್ನ ಮಾತಿಗೆ ಲಕ್ಷ್ಯಕೊಟ್ಟು ಸೂಕ್ತವಾದ ರೀತಿಯಲ್ಲಿ ಆ ರಾಜ್ಯಕ್ಕೆ ಸಿದ್ಧವಾಗಿರುವುದನ್ನು ಕಂಡುಕೊಂಡಿರುವನು. ಹೀಗಿದ್ದರೂ ಇದು ಹೀಗೆಯೇ ಕಲ್ಪಿಸಲಾದ ಕಾರ್ಯವಾಗಿದ್ದು ಪ್ರವಾದಿಯಾದ ಮಲಾಕಿಯು ಮುಂತಿಳಿಸಿದಂತೆ ಇದು ದೊಡ್ಡ ರೀತಿಯಲ್ಲಿ ಫಲಕಾರಿಯಾಗದೇ ಹೋಗಿರುವುದರ ಅರ್ಥವೇನೆಂದರೆ ದೇವರ ರಾಜ್ಯವನ್ನು ಶಾಂತ ರೀತಿಯಲ್ಲಿ ಪ್ರಾರಂಭಿಸದೆ ಬಲವಂತವಾಗಿ ಪ್ರಾರಂಭಿಸ ಲಾಗುವದೆಂಬುದು; ಅಲ್ಲದೆ ಮಹಿಮಾಸ್ವರೂಪನಾದ ಆ ಅರಸನನ್ನು ಭೂಲೋಕದ ಅಧಿಪತಿಯನ್ನಾಗಿ ಸ್ಥಾಪನೆ ಮಾಡಲು ಮಣ್ಣಿನ ಮಡಿಕೆಯನ್ನು ಚೂರು ಚೂರಾಗಿ ಒಡೆಯುವಂತೆ ಜನಾಂಗಗಳನ್ನು ಕಬ್ಬಿಣದ ಗದೆಯಿಂದ ಒಡೆದು ಹಾಕುವುದು ಅಗತ್ಯವಾಗಿರುವುದು; ಅಂದರೆ ಅನ್ಯಜನರು ದೇವರನ್ನು ಕಂಡುಕೊಳ್ಳುವದಕ್ಕಾಗಿ ಹಾಗು ದೇವರ ವಿಷಯವಾದ ಜ್ಞಾನವು ಲೋಕವನ್ನೆಲ್ಲಾ ತುಂಬಿಕೊಳ್ಳುವದಕ್ಕಾಗಿ ಆತನ ರಾಜ್ಯವು ಬಂದು ಆತನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರುವದಕ್ಕಾಗಿ ಹೀಗಾಗುವುದು ಅಗತ್ಯವಾಗಿರುವುದು.

ಇನ್ನೊಂದು ಅಂಶವು ಇಲ್ಲಿರುವುದು: ಮೊದಲ ಇಸಬೇಲಳು ಮೊದಲನೆಯ ಎಲೀಯನನ್ನು ಹಿಂಸಿಸಿದ್ದಳು. ಅದುದರಿಂದ ಆತನು ಅರಣ್ಯಕ್ಕೆ ಓಡಿಹೋದನು ಮತ್ತು ಆತನು ಮತ್ತೆ ಬಂದು ಒಂದು ಮಹತ್ಕಾರ್ಯವನ್ನು ಮಾಡಿ ಕೆಲವರ ಹೃದಯಗಳನ್ನು ಕರ್ತನ ಕಡೆಗೆ ತಿರುಗುವಂತೆ ಮಾಡಿದಾಗ್ಯೂ ಎರಡನೆಯ ಸಾರಿಯೂ ಆತನ ಜೀವವನ್ನು ತೆಗೆಯ ಬೇಕೆಂದಿದ್ದ ಇಸಬೇಲಳಿಂದ ತಪ್ಪಿಸಿಕೊಳ್ಳಲು ಆತನು ಅರಣ್ಯಕ್ಕೆ ಓಡಿಹೋಗ ಬೇಕಾಯಿತು. ಎರಡನೆಯ ಎಲೀಯನಾದ ಸ್ನಾನಿಕನಾದ ಯೋಹಾನನಿಗಾದ ಅನುಭವವೂ ಹೆಚ್ಚು ಕಡಿಮೆ ಇದೇ ರೀತಿಯಲ್ಲಿದ್ದು ಇಸಬೇಲಳಂತಿದ್ದ ಹೆರೋದಿಯಳು ಈ ಪ್ರವಾದಿಯನ್ನು ಸಂಹಾರ ಮಾಡಲು ಕಟ್ಟಕಡೆಯಲ್ಲಿ ಸಫಲಳಾದಳು. ಮೂರನೆಯ ಎಲೀಯನ (ಶರೀರ ಸಂಬಂಧ ದಲ್ಲಿರುವ ಸಭೆಯ) ವಿಷಯದಲ್ಲಿಯೂ ಇಸಬೇಲಳೆಂಬ ಹೆಂಗಸಿನ ಹೆಸರನ್ನು ಸೂಚಿಸಲಾಗಿರುವದು. (ಪ್ರಕಟನೆ 2:20) ವಿನಾಶಕರವಾದ ಆಕೆಯ ಕಾರ್ಯ, ಸಭೆಯು ಅರಣ್ಯಕ್ಕೆ ಓಡಿಹೋಗುವುದು, (ಪ್ರಕಟನೆ 12:6) ಮತಸುಧಾರಣೆಯ ಕಾಲದಿಂದ ಈಚೆಗೆ ಆಕೆಯು ಅರಣ್ಯದಿಂದ ಹಿಂದಿರುಗಿ ಬಂದಿರುವುದು, ಇವೆಲ್ಲವೂ ತಿಳಿದ ಸಂಗತಿಗಳಾಗಿರುವುದು. ಈಗ ಸತ್ಯ ಸಭೆಯ ಮೇಲೆ (ಹೆಸರಿನ ಸಂಸ್ಥೆಗಳ ಮೇಲೆ ಅಲ್ಲ) ಎರಡನೇ ಆಕ್ರಮಣವು ನಡೆಯುವುದನ್ನು ನಾವು ಎದುರು ನೋಡ – ಬೇಕಾಗಿರುವುದು ಮತ್ತು ಇದರ ಅರ್ಥವೇನಿರಬಹುದೆಂದರೆ,

ಸ್ನಾನಿಕನಾದ ಯೋಹಾನನ ವಿಷಯದಲ್ಲಿದ್ದಂತೆ ಬಾಬೇಲೆಂಬ ಸ್ತ್ರೀಗೆ ಮತ್ತು ಆಕೆಯ ಪ್ರಿಯಕರನಿಗೆ ಅಂದರೆ ಈ ಲೋಕಕ್ಕೆ ಶರೀರದಲ್ಲಿರುವ ಕ್ರಿಸ್ತನ ದೇಹವಾದ ನಂಬಿಗಸ್ತರ ಮೇಲೆ ಎರಡನೆಯ ಮತ್ತು ಸಂಪೂರ್ಣವಾದ ಜಯ ಲಭಿಸುವಂತೆ ಕಾಣುವದು. ಈ ಸಂಗತಿಯು ಹೀಗೆ ಪರಿಣಮಿಸಿದರೆ ನಾವು ಆಶ್ಚರ್ಯಪಡಬೇಕಾದುದಿಲ್ಲ. ಆದರೆ ಇದು ಮತ್ತು ಇತರ ಎಲ್ಲಾ ಸಂಗತಿಗಳೂ ಕರ್ತನನ್ನು ಪ್ರೀತಿಸುವವರಿಗೆ ಹಿತಕರವಾಗಿ ಪರಿಣಮಿಸಬೇಕಿರುವುದು. ತೆರೆಯ ಆಚೆಯಲ್ಲಿರುವ ಪರಲೋಕದ ಬಿರುದನ್ನು ಜಯಿಸಬೇಕಾದಲ್ಲಿ ನಾವೆಲ್ಲರೂ ಸಾಯಲೇಬೇಕು. ತೆರೆಯ ಈಚೆ ಕಡೆಯಲ್ಲಿರುವ ಎಲೀಯನೆಂಬ ವರ್ಗವು ಪೂರ್ಣಪರಾಭವಗೊಳ್ಳಬೇಕು. ಆದರೆ ಸೋಲಿನಂತೆ ಕಾಣುವ ಇದು ಕೇವಲ ಆ ರಾಜ್ಯದ ಪ್ರಭಾವ ಅಧಿಕಾರ ಮತ್ತು ವಾಗ್ದಾನ ಮಾಡಲ್ಪಟ್ಟ ಆಶೀರ್ವಾದಗಳು ಉಂಟಾಗಲು ತ್ವರೆಪಡಿಸುತ್ತದೆ. "ನೀನು ಸಾಯಬೇಕಾದರೂ ನಂಬಿಗಸ್ತನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು."

## ಹೋಗಿ ಇದನ್ನು ಯೇಸುವಿಗೆ ಹೇಳಿರಿ

ಯೋಹಾನನ ಶಿಷ್ಯರಿಗೆ ಈ ಸಮಾಚಾರವನ್ನು ತೆಗೆದುಕೊಂಡು ಎಲ್ಲಿಗೆ ಹೋಗ ಬೇಕೆಂಬುದು ಅಂದರೆ ತಮಗಾದ ನಷ್ಟಕ್ಕೆ ಎಲ್ಲಿ ಸಹಾನುಭೂತಿ ಮತ್ತು ಸಾಂತ್ವನಗಳನ್ನು ಕಂಡುಕೊಳ್ಳಬೇಕೆಂಬುದು ತಿಳಿದಿತ್ತು. ಇದರಲ್ಲಿ ನಮಗೆ ಒಂದು ಪಾಠವಿರುವುದು. ಪರಿಶೋಧನೆ ಸಂಕಷ್ಟ ದುಃಖ ತೊಂದರೆ ನಿರಾಶೆಗಳೊಂದಿಗೆ ನಾವು ಯಾರ ಬಳಿಗೆ ಹೋಗಬೇಕು? ನಮಗೆ ಹೊರಲು ಭಾರವಾದ ಎಲ್ಲಾ ಸಂಗತಿಗಳನ್ನು ಹಾಗೂ ನಿಮಗಿರುವ ಪ್ರತಿಯೊಂದು ಚಿಂತೆಗಳೊಂದಿಗೆ ನನ್ನ ಬಳಿಗೆ ಬನ್ನಿರೆಂದು ಕರ್ತನು ಆಹ್ವಾನಿಸಿರುವನು. ಆತನು ನಮಗೋಸ್ಕರ ಚಿಂತಿಸುತ್ತಾನೆ ಮತ್ತು (ತನ್ನ ಮೇಲೆ) ಭರವಸೆಯಿಡುವ ಆತ್ಮಗಳಿಗೆ ಆಶೀರ್ವಾದವನ್ನು ಅನುಗ್ರಹಿಸುವವನಾಗಿದ್ದಾನೆ. ನಿಸ್ಸಂದೇಹವಾಗಿಯೂ ಯಾರು ಯೇಸುವಿನ ಬಳಿಗೆ ಹೋದರೋ ಅವರು ಆತನ ಶಿಷ್ಯರಾದರು ಮತ್ತು ಹೀಗೆ ತಮ್ಮ ನಾಯಕರ ಹಾಗು ಬೋಧಕರ ಸಂಬಂಧದಲ್ಲಿ ಬಂದ ಪರಿಶೋಧನೆಗಳು ಅವರನ್ನು ಈ ದಿವ್ಯ ಬೋಧಕನ ಬಗ್ಗೆ ನಿಕಟವಾದ ತಿಳುವಳಿಕೆ ಹಾಗೂ ಆತನ ಅನ್ಯೋನ್ಯತೆಗೆ ಬರುವಂತೆ ಮಾಡಿದ್ದವು. ಅಲ್ಲದೆ ಈಗಿನ ಕಾಲದಲ್ಲಿ ಇರುವ ಕರ್ತನ ಜನರ ಮಿತ್ರರ ವಿಷಯವೂ ನಿಸ್ಸಂದೇಹವಾಗಿ ಹೀಗೆಯೇ ಇರುವುದು: ನಿಜರೂಪದ ಎಲೀಯನ ಮೇಲೆ ನಿಜರೂಪದ ಇಸಬೇಲಳಿಗಿರುವ ಸೇಡು ಅವರ ಮಿತ್ರರನ್ನು ಹಾಗೂ ಸಹಪಾಠಿಗಳನ್ನು ಇನ್ನು ಅಧಿಕವಾದ ಪ್ರೀತಿ ಮತ್ತು ಆಸಕ್ತಿಗಳನ್ನು ಹೊಂದುವಂತೆ ನಡೆಸುವುದು ಅಲ್ಲದೆ "ಮಹಾ ಸಮೂಹದ" ವರ್ಗಕ್ಕೆ ಸೇರಿದವರನ್ನು ಕರ್ತನ ಸನಿಹಕ್ಕೆ ಆಕರ್ಷಿಸಲು ಇದು ಸಾಧನವಾಗುವದು.

## ಸುವರ್ಣಮಯವಾದ ನಮ್ಮ ಪತ್ಯಭಾಗ

ಈ ಪತ್ಯಭಾಗವು ಯಾರಿಗೆ ಸಂಬೋಧಿಸಲಾಗಿರುವದೋ ಅವರ ಗುಂಪಿಗೆ ಸ್ನಾನಿಕನಾದ ಯೋಹಾನನು ಸೇರದೆ ರಕ್ಷಣೆಹೊಂದಿರುವ ಪ್ರತ್ಯೇಕವಾದ ಒಂದು ಗುಂಪಿಗೆ ಸೇರಿದವನೆಂದು ಈ ಪಾಠವನ್ನು ಸಿದ್ಧಮಾಡಿಸಿದವರಿಗೆ ಸ್ಪಷ್ಟವಾಗಿ ಕಾಣಬರುವುದಿಲ್ಲ. ಯೋಹಾನನಿಗೆ ಜೀವವೆಂಬ ಜಯಮಾಲೆಯು ವಾಗ್ದಾನ ಮಾಡಿರುವುದಿಲ್ಲ. ಆ ವಾಗ್ದಾನವು ಕರೆಯಲ್ಪಟ್ಟು ಆಯಲ್ಪಟ್ಟು ನಂಬಿಗಸ್ತರಾದ ಸುವಾರ್ತಾಯುಗದ ಸಭೆಯವರಾದ ನಮಗೆ ಸೇರಿರುವುದು. ಹೇಗೂ ಯೋಹಾನು ಒಂದು ಮಹಾ ಆಶೀರ್ವಾದವನ್ನು ಹೊಂದುವನು. ಏಕೆಂದರೆ ನಾವು ಪುನಃ ಕರ್ತನ ಈ ಮಾತನ್ನು ಗುರುತುಮಾಡಿ ಹೇಳುವೆವು: "ಸ್ತ್ರೀಯರಲ್ಲಿ ಹುಟ್ಟಿದವರೊಳಗೆ ಸ್ನಾನಿಕನಾದ ಯೋಹಾನನಿಗಿಂತ ದೊಡ್ಡವನು ಎದ್ದಿಲ್ಲ. ಆದರೂ ಪರಲೋಕರಾಜ್ಯದಲ್ಲಿನ ಚಿಕ್ಕವನು ಅವನಿಗಿಂತಲೂ ದೊಡ್ಡವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ."

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 ಪಸ್ಕ ಹಬ್ಬದ ಸಮೀಪ | ಕಪೆರ್ನೌಮ್(?); ಗಲಿಲಾಯದ ಈಶಾನ್ಯ ಭಾಗ | ಅಪೋಸ್ತಲರು ಉಪದೇಶ ಪ್ರವಾಸದಿಂದ ಹಿಂದಿರುಗಿದುದು, 5000 ಜನರಿಗೆ ಊಟ ಬಡಿಸಿದುದು | 14:13–21 | 6:30–44 | 9:10–17 | 6:1–13 |

## ಮತ್ತಾಯ 14:13–21

ಯೇಸು ಅದನ್ನು ಕೇಳಿ ದೋಣಿಯನ್ನು ಹತ್ತಿ ಆ ಸ್ಥಳವನ್ನು ಬಿಟ್ಟು ವಿಂಗಡವಾಗಿ ಅಡವಿಗೆ ಹೋದನು. ಇದನ್ನು ಕೇಳಿದ ಜನರು ಗುಂಪುಗುಂಪಾಗಿ ತಮ್ಮ ತಮ್ಮ ಊರುಗಳಿಂದ ಕಾಲುನಡಿಗೆಯಿಂದ ಆತನ ಹಿಂದೆ ಬಂದರು. ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಕನಿಕರ ಪಟ್ಟು ಅವರಲ್ಲಿದ್ದ ರೋಗಿಗಳನ್ನು ಸ್ವಸ್ಥಮಾಡಿದನು. ಸಂಜೆಯಾದಾಗ ಶಿಷ್ಯರು ಆತನ ಬಳಿಗೆ ಬಂದು–ಇದು ಅಡವಿ, ಈಗ ಹೊತ್ತುಹೋಯಿತು; ಈ ಗುಂಪಿಗೆ ಅಪ್ಪಣೆಕೊಡು; ಅವರು ಹಳ್ಳಿಪಳ್ಳಿಗಳಿಗೆ ಹೋಗಿ ಆಹಾರಪದಾರ್ಥಗಳನ್ನು ಕೊಂಡು ಕೊಳ್ಳಲಿ ಎಂದು ಹೇಳಲಾಗಿ ಯೇಸು–ಅವರು ಹೋಗುವದು ಅಗತ್ಯವಿಲ್ಲ; ನೀವೇ ಅವರಿಗೆ ಊಟಕ್ಕೆ ಕೊಡಿರಿ ಅಂದನು. ಅದಕ್ಕವರು–ನಮಗೆ ಇಲ್ಲಿ ಐದು ರೊಟ್ಟಿ ಎರಡು ಮೀನು ಹೊರತು ಮತ್ತೇನೂ ಇಲ್ಲ ಅನ್ನಲಾಗಿ ಆತನು–ಅವುಗಳನ್ನು ಇಲ್ಲಿ ನನಗೆ ತಂದು ಕೊಡಿರಿ ಅಂದನು. ಮತ್ತು ಜನರಿಗೆ ಹುಲ್ಲಿನ ಮೇಲೆ

ಕೂತುಕೊಳ್ಳುವದಕ್ಕೆ ಹೇಳಿ ಆ ಐದು ರೊಟ್ಟಿ ಎರಡು ಮೀನುಗಳನ್ನು ತಕ್ಕೊಂಡು ಆಕಾಶದ ಕಡೆಗೆ ನೋಡಿ ದೇವರ ಸ್ತೋತ್ರಮಾಡಿ ರೊಟ್ಟಿಗಳನ್ನು ಮುರಿದು ಶಿಷ್ಯರ ಕೈಗೆ ಕೊಟ್ಟನು; ಶಿಷ್ಯರು ಜನರಗುಂಪಿಗೆ ಕೊಟ್ಟರು. ಅವರೆಲ್ಲರೂ ಊಟಮಾಡಿ ತೃಪ್ತರಾದರು. ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಹನ್ನೆರಡು ಪುಟ್ಟಿ ತುಂಬಿತು. ಊಟಮಾಡಿದವರು ಹೆಂಗಸರೂ ಮಕ್ಕಳೂ ಅಲ್ಲದೆ ಗಂಡಸರೇ ಹೆಚ್ಚುಕಡಿಮೆ ಐದು ಸಾವಿರ ಮಂದಿ.

## ಮಾರ್ಕ 6:30–44

ಇತ್ತಲಾಗಿ ಅಪೊಸ್ತಲರು ಆತನ ಬಳಿಗೆ ಕೂಡಿ ಬಂದು ತಾವು ಮಾಡಿದ್ದನ್ನೂ ಉಪದೇಶಿಸಿದ್ದನ್ನೂ ಎಲ್ಲಾ ಆತನಿಗೆ ತಿಳಿಸಲು ಆತನು ಅವರಿಗೆ–ನೀವು ಮಾತ್ರ ವಿಂಗಡವಾಗಿ ಅಡವಿಗೆ ಬಂದು ಸ್ವಲ್ಪ ದಣುವಾರಿಸಿಕೊಳ್ಳಿರಿ ಎಂದು ಹೇಳಿದನು. ಯಾಕೆಂದರೆ ಬಹಳ ಮಂದಿ ಬರುತ್ತಾ ಹೋಗುತ್ತಾ ಇದ್ದದರಿಂದ ಅವರಿಗೆ ಊಟಮಾಡುವದಕ್ಕೂ ಅವಕಾಶ ಸಿಕ್ಕಲಿಲ್ಲ. ಆಗ ಅವರು ದೋಣಿಯಲ್ಲಿ ಹೊರಟು ವಿಂಗಡವಾಗಿ ಅಡವಿಗೆ ಹೋದರು. ಅವರು ಹೋಗುವದನ್ನು ಬಹು ಜನರು ಕಂಡು ಅವರ ಗುರುತನ್ನು ಹಿಡಿದು ಎಲ್ಲಾ ಊರುಗಳಿಂದ ಕಾಲುನಡಿಗೆಯಾಗಿ ಓಡಿ ಅವರಿಗಿಂತ ಮುಂಚೆ ಅಲ್ಲಿ ಸೇರಿದರು. ಆತನು ಹೊರಗೆ ಬಂದು ಬಹು ಜನರ ಗುಂಪನ್ನು ಕಂಡು ಇವರು ಕುರುಬನಿಲ್ಲದ ಕುರಿಗಳ ಹಾಗಿದ್ದಾರಲ್ಲಾ ಎಂದು ಕನಿಕರಪಟ್ಟು ಅವರಿಗೆ ಬಹಳ ಉಪದೇಶಮಾಡುತ್ತಿದ್ದನು. ಅಷ್ಟರಲ್ಲಿ ಬಹಳ ಹೊತ್ತಾದ್ದರಿಂದ ಆತನ ಶಿಷ್ಯರು ಆತನ ಬಳಿಗೆ ಬಂದು–ಇದು ಅಡವಿ, ಈಗ ಹೊತ್ತು ಬಹಳವಾಯಿತು; ಈ ಜನರಿಗೆ ಅಪ್ಪಣೆಕೊಡು; ಇವರು ಸುತ್ತಲಿರುವ ಹಳ್ಳಿಪಳ್ಳಿಗಳಿಗೆ ಹೋಗಿ ತಮ್ಮ ಊಟಕ್ಕೆ ಏನಾದರೂ ಕೊಂಡು ಕೊಳ್ಳಲಿ ಅಂದದ್ದಕ್ಕೆ ಯೇಸು–ನೀವೇ ಅವರಿಗೆ ಊಟಕ್ಕೆ ಕೊಡಿರಿ ಎಂದು ಉತ್ತರಕೊಟ್ಟನು. ಅದಕ್ಕವರು–ನಾವು ಹೋಗಿ ಇನ್ನೂರು ಹಣಕ್ಕೆ ರೊಟ್ಟಿಯನ್ನು ಕೊಂಡುಕೊಂಡು ಅವರಿಗೆ ಊಟಕ್ಕೆ ಕೊಡಬೇಕೋ? ಎಂದು ಕೇಳಲು ಆತನು–ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ? ಹೋಗಿ ನೋಡಿಕೊಂಡು ಬನ್ನಿ ಅಂದನು. ಅವರು ತಿಳುಕೊಂಡು ಬಂದು–ಐದು ರೊಟ್ಟಿ ಎರಡು ಮೀನು ಅಂದರು. ಆಗ ಆತನು ಅವರಿಗೆ–ಎಲ್ಲರೂ ಹಸುರುಹುಲ್ಲಿನ ಮೇಲೆ ಪಂಕ್ತಿಪಂಕ್ತಿಯಾಗಿ ಕೂತುಕೊಳ್ಳಲಿ ಎಂದು ಅಪ್ಪಣೆಕೊಟ್ಟಾಗ ಜನರು ಪಂಕ್ತಿಗೆ ನೂರರಂತೆ ಐವತ್ತರಂತೆ ಸಾಲುಸಾಲಾಗಿ ಕೂತುಕೊಂಡರು. ಆ ಮೇಲೆ ಆತನು ಅ ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ದೇವರ ಸ್ತೋತ್ರಮಾಡಿ ಆ ರೊಟ್ಟಿಗಳನ್ನು ಮುರಿದು–ನೀವು ಜನರಿಗೆ ಹಂಚಿರಿ ಎಂದು ಶಿಷ್ಯರ ಕೈಗೆ ಕೊಟ್ಟು ಆ ಎರಡು ಮೀನುಗಳನ್ನೂ ಎಲ್ಲರಿಗೆ ಹಂಚಿಸಿದನು. ಅವರೆಲ್ಲರೂ ಊಟಮಾಡಿ ತೃಪ್ತರಾದರು. ರೊಟ್ಟಿತುಂಡುಗಳನ್ನೂ ಮೀನಿನ ತುಂಡುಗಳನ್ನೂ ಕೂಡಿಸಲಾಗಿ ಹನ್ನೆರಡು ಪುಟ್ಟಿ ತುಂಬಿತು. ಊಟಮಾಡಿದವರು ಐದುಸಾವಿರ ಮಂದಿ ಗಂಡಸರು.

## ಲೂಕ 9:10–17

ಇತ್ತಲಾಗಿ ಅಪೊಸ್ತಲರು ಹಿಂತಿರುಗಿ ಬಂದು ತಾವು ಮಾಡಿದ್ದನ್ನೆಲ್ಲಾ ಯೇಸುವಿಗೆ ವಿವರವಾಗಿ ಹೇಳಲು ಆತನು ಅವರನ್ನು ಬೇತ್ಸಾಯಿದವೆಂಬ ಊರಿಗೆ ವಿಂಗಡವಾಗಿ ಕರಕೊಂಡು ಹೋದನು. ಆದರೆ ಜನರ ಗುಂಪು ಇದನ್ನು ತಿಳಿದು ಆತನ ಹಿಂದೆ ಹೋಗಲು ಆತನು ಅವರನ್ನು ಪ್ರೀತಿಯಿಂದ ಸ್ವೀಕರಿಸಿ ದೇವರ ರಾಜ್ಯದ ವಿಷಯವಾಗಿ ಅವರ ಸಂಗಡ ಮಾತಾಡಿ ಕ್ಷೇಮ ಬೇಕಾದವರಿಗೆ ವಾಸಿಮಾಡಿದನು. ಹೊತ್ತು ಇಳಿಯುತ್ತಾ ಬಂತು. ಆ ಹನ್ನೆರಡು ಮಂದಿ ಶಿಷ್ಯರು ಆತನ ಬಳಿಗೆ ಬಂದು–ಈ ಗುಂಪಿಗೆ ಅಪ್ಪಣೆಕೊಡು; ಇವರು ಸುತ್ತಲಿರುವ ಹಳ್ಳಿಪಳ್ಳಿಗಳಿಗೆ ಹೋಗಿ ಇಳುಕೊಂಡು ಊಟಕ್ಕೆ ಬೇಕಾದ ಪದಾರ್ಥಗಳನ್ನು ದೊರಕಿಸಿ ಕೊಳ್ಳಲಿ; ನಾವು ಇಲ್ಲಿ ಅಡವಿಯ ಸ್ಥಳದಲ್ಲಿ ಇದ್ದೇವಲ್ಲಾ ಎಂದು ಆತನಿಗೆ ಹೇಳಲಾಗಿ ಆತನು–ನೀವೇ ಅವರಿಗೆ ಊಟಕ್ಕೆ ಕೊಡಿರಿ ಅಂದನು. ಅದಕ್ಕವರು–ನಮ್ಮಲ್ಲಿ ಐದು ರೊಟ್ಟಿ ಎರಡು ಮೀನು ಹೊರತು ಹೆಚ್ಚೇನೂ ಇಲ್ಲ; ನಾವು ಹೋಗಿ ಈ ಜನರಿಗೆಲ್ಲಾ ಆಹಾರವನ್ನು ಕೊಂಡುಕೊಳ್ಳಬೇಕೋ ಎಂದರು. ಗಂಡಸರೇ ಹೆಚ್ಚುಕಡಿಮೆ ಐದು ಸಾವಿರ ಮಂದಿಯಿದ್ದರು. ಆಗ ಆತನು ತನ್ನ ಶಿಷ್ಯರಿಗೆ–ಇವರನ್ನು ಒಂದೊಂದು ಪಂಕ್ತಿಗೆ ಹೆಚ್ಚುಕಡಿಮೆ ಐವತ್ತರಂತೆ ಕೂಡ್ರಿಸಿರಿ ಎಂದು ಹೇಳಲು ಅವರು ಹಾಗೆಯೇ ಎಲ್ಲರನ್ನೂ ಕೂಡ್ರಿಸಿದರು. ಆ ಮೇಲೆ ಆತನು ಆ ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ಅವುಗಳನ್ನು ಆಶೀರ್ವದಿಸಿ ಮುರಿದು ಶಿಷ್ಯರ ಕೈಗೆ ಕೊಟ್ಟು–ಈ ಗುಂಪಿಗೆ ಹಂಚಿರಿ ಅಂದನು. ಅವರೆಲ್ಲರು ಊಟಮಾಡಿ ತೃಪ್ತರಾದರು; ಉಳಿದ ತುಂಡುಗಳನ್ನು ಕೂಡಿಸಲಾಗಿ ಅವು ಹನ್ನೆರಡು ಪುಟ್ಟಿ ಆದವು.

## ಯೋಹಾನ 6:1–13

ತರುವಾಯ ಯೇಸು ಗಲಿಲಾಯದ ಸಮುದ್ರದ ಆಚೆಗೆ ಹೋದನು; ಅದಕ್ಕೆ ತಿಬೇರಿಯದ ಸಮುದ್ರವೆಂತಲೂ ಹೇಳುತ್ತಾರೆ. ಬಹು ಜನರ ಗುಂಪು ರೋಗಿಗಳಲ್ಲಿ ಆತನು ನಡಿಸಿದ ಸೂಚಕಕಾರ್ಯಗಳನ್ನು ನೋಡಿದ್ದರಿಂದ ಆತನ ಹಿಂದೆ ಹೋಗುತ್ತಿತ್ತು. ಆದರೆ ಯೇಸು ಬೆಟ್ಟವನ್ನೇರಿ ಅಲ್ಲಿ ತನ್ನ ಶಿಷ್ಯರ ಸಂಗಡ ಕೂತುಕೊಂಡನು. ಆ ಕಾಲದಲ್ಲಿ ಯೆಹೂದ್ಯರ ಪಸ್ಕ ಹಬ್ಬವು ಹತ್ತರವಾಗಿತ್ತು. ಹೀಗಿರಲಾಗಿ ಯೇಸು ಕಣ್ಣೆತ್ತಿ ನೋಡಿದಾಗ ಬಹು ಜನರ ಗುಂಪು ತನ್ನ ಬಳಿಗೆ ಬರುವದನ್ನು ಕಂಡು–ಇವರ ಊಟಕ್ಕೆ ನಾವು ಎಲ್ಲಿಂದ ರೊಟ್ಟಿ ಕೊಂಡು ತರೋಣ? ಎಂದು ಫಿಲಿಪ್ಪನನ್ನು ಕೇಳಿದನು. ತಾನು ಮಾಡಬೇಕೆಂದಿದ್ದದ್ದು ತನಗೆ ತಿಳಿದಿದ್ದರೂ ಅವನನ್ನು ಪರೀಕ್ಷಿಸುವದಕ್ಕೆ ಈ ಮಾತನ್ನು ಹೇಳಿದನು. ಅದಕ್ಕೆ ಫಿಲಿಪ್ಪನು–ಒಬ್ಬೊಬ್ಬನಿಗೆ ಸ್ವಲ್ಪ ಸ್ವಲ್ಪ ಸಿಕ್ಕಬೇಕಾದರೆ ಇನ್ನೂರು ಹಣದ ರೊಟ್ಟಿಯದರೂ ಸಾಲದು ಅಂದನು. ಆಗ ಆತನ ಶಿಷ್ಯರಲ್ಲಿ ಒಬ್ಬನಾಗಿರುವ ಸೀಮೋನ್ ಪೇತ್ರನ ತಮ್ಮನಾದ ಅಂದ್ರೆಯನು ಆತನಿಗೆ–ಇಲ್ಲಿರುವ ಒಬ್ಬ ಹುಡುಗನ ಬಳಿಯಲ್ಲಿ ಐದು ಜವೆ ಗೋದಿಯ ರೊಟ್ಟಿಗಳೂ ಎರಡು ಮೀನುಗಳೂ ಅವೆ; ಆದರೆ ಇಷ್ಟು ಜನರಿಗೆ ಅವು ಯಾತಕ್ಕಾದಾವು? ಎಂದು ಹೇಳಲಾಗಿ ಯೇಸು–ಆ ಜನರನ್ನು ಊಟಕ್ಕೆ ಕೂಡ್ರಿಸಿರಿ ಅಂದನು. ಆ ಸ್ಥಳದಲ್ಲಿ ಬಹಳ ಹುಲ್ಲು ಬೆಳೆದಿತ್ತು; ಜನರು ಕೂತುಕೊಂಡರು. ಗಂಡಸರ

ಸಂಖ್ಯೆ ಹೆಚ್ಚುಕಡಿಮೆ ಐದು ಸಾವಿರವಿತ್ತು. ತರುವಾಯ ಯೇಸು ಆ ರೊಟ್ಟಿಗಳನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಕೂತು ಕೊಂಡವರಿಗೆ ಹಂಚಿಕೊಟ್ಟನು; ಅದರಂತೆ ಮೀನುಗಳಲ್ಲಿಯೂ ಅವರಿಗೆ ಬೇಕಾದಷ್ಟು ಹಂಚಿಕೊಟ್ಟನು. ಅವರಿಗೆ ತೃಪ್ತಿಯಾದ ಮೇಲೆ ಯೇಸು ತನ್ನ ಶಿಷ್ಯರಿಗೆ–ಮಿಕ್ಕ ತುಂಡುಗಳನ್ನು ಕೂಡಿಸಿರಿ; ಇದರಲ್ಲಿ ಯಾವದೂ ವ್ಯರ್ಥವಾಗಬಾರದು ಎಂದು ಹೇಳಿದನು. ಅವರು ಕೂಡಿಸಲಾಗಿ ಆ ಐದು ಜವೆಗೋದಿಯ ರೊಟ್ಟಿಗಳಲ್ಲಿ ತಿಂದು ಮಿಕ್ಕ ತುಂಡುಗಳಿಂದ ಹನ್ನೆರಡು ಪುಟ್ಟಿ ತುಂಬಿದವು.

# ಆತನು ಹಸಿದವರಿಗೆ ಆಹಾರವನ್ನು ಕೊಡುವನು

**ರೀಪ್ರಿಂಟ್ಸ್ ಪುಟ 3779**

## ಮಾರ್ಕ 6:30–44

**"ನನ್ನ ತಂದೆಯು ಪರಲೋಕದಿಂದ ಬರುವ ನಿಜವಾದ ರೊಟ್ಟಿಯನ್ನು ನಿಮಗೆ ಕೊಡುತ್ತಾನೆ" – ಯೋಹಾನ 6:32**

ಕರ್ತನು ಹನ್ನೆರಡು ಮಂದಿ ಅಪೋಸ್ತಲರನ್ನು ಇಬ್ಬಿಬ್ಬರನ್ನಾಗಿ ಕಳುಹಿಸಿಕೊಟ್ಟು ಮಾಡಲು ಹೇಳಿದ ಕಾರ್ಯಭಾರವನ್ನು ಅವರು ನೆರವೇರಿಸಿ ಹಿಂದಿರುಗಿ ಬಂದಿದ್ದರು. ಅವರು ಹಿಂದಿರುಗಿ ಬರುವ ಸಮಯವು ನಿಗದಿಯಾಗಿತ್ತೆಂಬು ದರಲ್ಲಿ ಸಂಶಯವಿಲ್ಲ ಮತ್ತು ಅವರು ಕೂಡಿಬರಲು ಕಪೆರ್ನೌಮು ನಿಗಧಿತ ಸ್ಥಳವಾಗಿರುವ ಸಂಭವವಿತ್ತು. ಯೇಸುವಿನ ಮತ್ತು ಆತನ ಅಪೋಸ್ತಲರ ಉಪಸ್ಥಿತಿಯು ಜನರಲ್ಲಿ ಗದ್ದಲವೆಬ್ಬಿಸಿತ್ತು, ಈ ಸಮಯಕ್ಕೆ ನಮ್ಮ ಕರ್ತನ ಪ್ರಖ್ಯಾತಿಯು ಹೊರ ದೇಶಗಳಲ್ಲಿಯೂ ಹಬ್ಬಿತ್ತು. ಯೇಸುವಿನ ಸೂಚನೆಯಂತೆ ಆ ಹನ್ನೆರಡು ಮಂದಿ ಆತನೊಡನೆ ಅಡವಿಯ ಏಕಾಂತ ಸ್ಥಳಕ್ಕೆ ಹೋದರು. ಅಲ್ಲಿ ಅವರು ಪ್ರಶಾಂತವಾಗಿ ತಮ್ಮ ಸಂಗತಿಗಳ ವಿಷಯವಾಗಿ ವಿಚಾರವಿನಿಮಯ ಮಾಡಿಕೊಂಡು ಅಂದರೆ ಕಾರ್ಯಭಾರದ ಅನುಭವಗಳನ್ನು ಹಂಚಿಕೊಳ್ಳಲಿದ್ದರು ಅಲ್ಲದೆ ಅವರಿಗಾದ ಅನುಭವಗಳ ಸಂಬಂಧದಲ್ಲಿ ಅವರು ಕಲಿಯುವ ಪಾಠಗಳನ್ನು ಯೇಸುವು ಒತ್ತಿಹೇಳ ಬಯಸಿದ್ದನು. ವಿಶ್ರಾಂತಿ ತೆಗೆದು ಕೊಳ್ಳುವುದು ಅವರಿಗೆ ಪ್ರಯೋಜನಕರವಾಗಿರುವುದೆಂದು ನಮ್ಮ ಕರ್ತನು ತಿಳಿಸಿದ್ದನು. ಇದೇ ಪಾಠವು ಈ ದಿನಗಳಲ್ಲಿಯೂ ನಮಗೆ ಅನ್ವಯಿಸುವುದಿಲ್ಲವೇ?

ನಾವಿರುವುದೂ ಸಹ ಮಾನಸಿಕವಾಗಿ ಮತ್ತು ಶಾರೀರಿಕ ವಾಗಿ ಮಹತ್ತಾದ ಚಟುವಟಿಕೆಗಳಿಂದ ಆಯಾಸತರುವಂಥ ಕಾಲವಾಗಿರುವುದು. ಕರ್ತನ ಜನರು ತಮ್ಮ ಜೀವಿತದ ಸಾಮಾನ್ಯ ವಿಷಯಗಳನ್ನು ಅಂದರೆ ಅವರಿಗೆ ಅಗತ್ಯವೂ ಗೌರವವೂ ಆದ ವಿಷಯಗಳನ್ನು ಒದಗಿಸಿಕೊಡಲು ಶ್ರಮಿಸುವುದರಲ್ಲಿಯೂ ಮತ್ತು ಶುಭವಾರ್ತೆಯನ್ನು ಹೇಳಿ ಒಡೆಯನ ಗುಣಾತಿಶಯಗಳನ್ನು ಪ್ರಚುರಗೊಳಿಸುವುದರಲ್ಲಿಯೂ ಅಲ್ಲದೆ ಆತನ ಪ್ರತ್ಯಕ್ಷತೆಯನ್ನು ಪ್ರಕಟಿಸುವುದರಲ್ಲಿ ಶ್ರಮಿಸುವದರಲ್ಲಿಯೂ ಕ್ರಿಯಾಶೀಲರಾಗಿದ್ದ ಅವರಿಗೆ ಈ ಮಾತುಗಳ ಕಡೆಗೆ ಲಕ್ಷ್ಯಕೊಡುವ ವಿಶೇಷವಾದ ಅವಶ್ಯಕತೆಯಿರುವುದು: "ನೀವು ಮಾತ್ರ ವಿಂಗಡವಾಗಿ ಅಡವಿಗೆ ಬಂದು ಸ್ವಲ್ಪ ದಣುವಾರಿಸಿಕೊಳ್ಳಿರಿ." ನಮ್ಮಲ್ಲಿ ಹಲವರು ವಿಶೇಷ ವಾಗಿ ನಯಾಗರಾ ಎಂಬಲ್ಲಿ ಕಳೆದ ವರ್ಷ ನಡೆದ ಮಹಾ ಸಮ್ಮೇಳನದಲ್ಲಿ ಸ್ವಲ್ಪ ಸಮಯ ವಿಶ್ರಾಂತಿ ಪಡೆದು ಪುನಶ್ಚೇತನ ಹೊಂದಿರುವೆವು. ಆದರೆ ವಿಶ್ರಾಂತಿಯು ಪ್ರಾಮುಖ್ಯತೆ ಗುಣಲಕ್ಷಣಗಳ ವಿಷಯವಾಗಿ ಅಲ್ಲಿಯೂ ಸಾಕಷ್ಟು ಒತ್ತುಕೊಟ್ಟು ಹೇಳಿರುವಂತೆ ಕಾಣುವುದಿಲ್ಲ. ಆದುದರಿಂದ ನಾವು ಪ್ರಸ್ತುತ ವರ್ಷದಲ್ಲಿ ಎರಡು ಸಾಮಾನ್ಯ ಮಹಾಸಮ್ಮೇಳನ ನಡೆಸುವ ಯೋಜನೆಯನ್ನು ಹಾಕಿಕೊಂಡಿರುವೆವು. ಅದರಲ್ಲಿ ಅಷ್ಟೇ ಸಂಖ್ಯೆಯ ಕೂಟಗಳಿದ್ದು ಅವುಗಳು ಈಗಿನದಕ್ಕಿಂತಲೂ ಎರಡರಷ್ಟು ಸಂಖ್ಯೆಯ ದಿನಗಳಲ್ಲಿ ವ್ಯಾಪಿತವಾಗಿರುವ ಹಾಗೆ ಮಾಡಿ ಅಲ್ಲಿ ಅನ್ಯೋನ್ಯತೆ ವಿಚಾರವಿನಿಮಯ ಮತ್ತು ವಿಶ್ರಾಂತಿ ಗಳಿಗೆ ಉತ್ತಮವಾದ ಅವಕಾಶಗಳನ್ನು ನೀಡಲಾಗುವದು. ಈ ಸಮ್ಮೇಳನಗಳಲ್ಲಿ ಭಾಗವಹಿಸುವವರಿಗೆ ವಿಶೇಷವಾಗಿ ರೈಲು ಪ್ರಯಾಣದ ಖರ್ಚುಗಳಿಗೆ ಸಾಕಷ್ಟು ಹಣ ವ್ಯಯವಾದರೂ ಇವು ಆತ್ಮಿಕವಾಗಿ ಪುನಶ್ಚೇತನಗೊಳ್ಳಲು ಬಹು ಪ್ರಯೋಜನಕಾರಿಯಾಗಿ ರುವುದೆಂಬುದು ನಮ್ಮ ಅನುಭವ. ಇದೇ ರೀತಿಯಲ್ಲಿರುವುದು ಒಂದು ದಿನದ ಸಮ್ಮೇಳನಗಳು, ಅವು ಅಲ್ಪ ಪ್ರಮಾಣದಲ್ಲಿಯಾಗಿ ದ್ದರೂ ಸ್ವಲ್ಪ ಸಂಖ್ಯೆಲ್ಲಿರುವವರಿಗೆ ಪ್ರಯೋಜನಕಾರಿಯಾಗಿರು ವವು. ನಾವು ಆತ್ಮಿಕವಾಗಿ ಬಲಗೊಳ್ಳುವುದು ಪುನಶ್ಚೇತನ ಪಡೆಯು ವುದು ಕೃಪೆ ಹೊಂದುವುದು ಇವುಗಳಿಗೆ ಖರ್ಚಾಗುವ ಹಣಕ್ಕಿಂತಲೂ ಈ ಸಂಗತಿಗಳನ್ನು ಅಮೂಲ್ಯವೆಂದು ಎಣಿಸುವುದು ಕರ್ತನಿಗೆ ಸಂತೋಷಕರವಾಗಿರುವುದೆಂಬುದು ನಮ್ಮ ನಂಬಿಕೆ. ಹೀಗಿದ್ದರೂ ಇದು ದುಂದುತನ ಪೋಲುಗಾರಿಕೆ ಕರ್ತವ್ಯಗಳ ನಿರ್ಲಕ್ಷ್ಯ ಇಲ್ಲವೇ ಸಾಲಕ್ಕೆ ಸಿಕ್ಕಿಕೊಳ್ಳುವುದು ಇವುಗಳನ್ನು ಸೂಚಿಸಬಾರದು.

## ಜನರೆಲ್ಲರೂ (ಮೆಸ್ಸೀಯನ ಬರುವಿಕೆಯನ್ನು) ಎದುರು ನೋಡುತ್ತಿದ್ದರು.

ಆದರೆ ಜನರು ಕರ್ತನ ಉಪದೇಶಗಳಿಗಾಗಿ ಹಸಿವು ಉಳ್ಳವರಾಗಿದ್ದರು ಮತ್ತು ದೋಣಿಯು ಹೋದ ದಾರಿಯ ಗುರುತನ್ನು ಹಿಡಿದುಕೊಂಡು ಅನೇಕರು ಕಾಲು ನಡಿಗೆಯಲ್ಲಿ ಮತ್ತು ಕೆಲವರು ಓಡುತ್ತಾ ಬಂದು ಕರ್ತನು ಇದ್ದ ದೋಣಿಯು ಬಂದು ದಡಸೇರುವುದನ್ನು ಕಾಯುತ್ತಿದ್ದರು. ತಾನು ಏಕಾಂತಕ್ಕೆ ಬಂದು ವಿಶ್ರಮಿಸಿಕೊಳ್ಳಲು ಮಾಡಿದ ಪ್ರಯತ್ನಕ್ಕೆ ತಾನು ಈಗಾಗಲೇ ಅಧಿಕವಾಗಿ (ಉಪಕಾರ) ಮಾಡಿರುವ ಜನರ ಮಧ್ಯಪ್ರವೇಶದಿಂದ ಅಡ್ಡಿಯಾಯಿತೆಂದು ಕರ್ತನು ಕೋಪಗೊಂಡನೋ? ಇಲ್ಲ! ಇದಕ್ಕೆ ಆತನು ಹೃದಯ

ಪೂರ್ವಕವಾಗಿ ಅನುಕಂಪವುಳ್ಳವನಾಗಿದ್ದನು. ಆತನು ಜನರನ್ನು ನೋಡಿ ಅವರ ಬಗ್ಗೆ ಕನಿಕರಪಟ್ಟನು, ಯಾಕೆಂದರೆ ಅವರು ಕುರುಬನಿಲ್ಲದ ಕುರಿಗಳಂತಿದ್ದರು. ಸ್ನಾನಿಕನಾದ ಯೋಹಾನನು ದೇವರ ರಾಜ್ಯವು ಬರುವುದನ್ನು ಸಾರುತ್ತಿದ್ದನು. ಯೇಸುವು ದೇವರ ರಾಜ್ಯವನ್ನು ಕುರಿತಾಗಿ ಸಾದೃಶ್ಯವಾದ ಸಾಮ್ಯಗಳನ್ನು ಹೇಳಿಕೊಡುತ್ತಿದ್ದನು; ಜನರೋ ಅದನ್ನು ಅಸ್ಪಷ್ಟವಾಗಿ ಗ್ರಹಿಸಿಕೊಂಡಿದ್ದರು. ಆತನು ಇಬ್ಬಿಬ್ಬರಾಗಿ ಕಳುಹಿಸಿದ ಶಿಷ್ಯರು ಮಾನಸಾಂತರವನ್ನು ಮತ್ತು ದೇವರ ರಾಜ್ಯಕ್ಕಾಗಿ ಸಿದ್ಧರಾಗುವುದನ್ನು ಸಾರಿದ್ದರು. ಅರಸನಾದ ಹೆರೋದನು ದುಷ್ಟತನದಲ್ಲಿ ಜೀವಿಸುವವನಾಗಿ ಶ್ರೇಷ್ಠ ಪ್ರವಾದಿಗಳಲ್ಲಿ ಒಬ್ಬನಾಗಿದ್ದ ಸ್ನಾನಿಕನಾದ ಯೋಹಾನನ ತಲೆಯನ್ನು ಹೋಯಿಸುವ ಹಂತಕ್ಕೆ ಹೋಗಿದ್ದನು. ಮತ್ತು ಆನಂತರದಲ್ಲಿ ಅವನು ತಾನು ತ್ಯಜಿಸಿದ ಹೆಂಡತಿಯ ತಂದೆಯೂ ಅರಬ್ಬೀ ದೇಶದ ಅರಸನೂ ಆದ ಆರೇತನ ಮೇಲೆ ಯುದ್ಧಕ್ಕೆ ಹೋಗಿದ್ದನು. ತನ್ನ ಸೈನ್ಯವು ಸೋಲನ್ನು ಹೊಂದಿ ಜನರಲ್ಲಿ ಬಹು ಮಟ್ಟಿನ ಗೊಂದಲ ಮತ್ತು ಉದ್ರೇಕಗಳು ಉಂಟಾಗಿದ್ದವು. ಈ ಸಂಕಷ್ಟಗಳ ಪರಿಣಾಮವೇನಾಗಬಹುದು ಹಾಗು ದೇವರ ರಾಜ್ಯವು ಎಂದು ಮತ್ತು ಹೇಗೆ ಸ್ಥಾಪನೆಯಾಗಬಹುದು ಎಂದು ಜನರು ಆಶ್ಚರ್ಯಪಡುತ್ತಿದ್ದರು. ಯೇಸುವು ನಿಜವಾಗಿಯೂ ಮೆಸ್ಸೀಯನೋ ಅಲ್ಲವೋ ಮತ್ತು ಶೀಘ್ರದಲ್ಲೇ ಆತನು ತನ್ನನ್ನು ರಾಜನನ್ನಾಗಿ ಪ್ರಕಟಮಾಡಿಕೊಂಡು ಸ್ವಯಂಸೇವಕರು ಸೈನಿಕರು ಮುಂತಾದವರಿಗಾಗಿ ಕರೆಮಾಡುವನೋ ಎಂದು ಪ್ರಶ್ನೆಮಾಡು ತ್ತಿದ್ದರು. ಜನರು ಈ ವಿಷಯವಾಗಿ ಬಹುವಾಗಿ ಚಿಂತೆಗೊಳಗಾಗಿ ದ್ದುದು ಸ್ಪಷ್ಟವಾಗಿತ್ತು ಮತ್ತು ಇದಾದ ಕೆಲವು ದಿನಗಳ ನಂತರವೇ ಯೇಸುವು–ಜನರು ದೇವರ ಯೋಜನೆಗೆ ಮತ್ತು ತನ್ನ ಕಾರ್ಯ ಸೂಚಿಗೆ ವಿರೋಧವಾಗಿ ತನ್ನನ್ನು ಹಿಡಿದುಕೊಂಡು ಹೋಗಿ ಅರಸನನ್ನಾಗಿ ಮಾಡಾರೆಂದು ತಿಳಿದು–ಆ ಸುತ್ತಮುತ್ತಲ ಪ್ರದೇಶ ದಲ್ಲಿನ ಬಹಿರಂಗ ಸೇವೆಯಿಂದ ತನ್ನನ್ನು ಕೆಲವು ಸಮಯದ ಮಟ್ಟಿಗೆ ಹಿಂದೆಗೆದುಕೊಂಡಿದ್ದನ್ನು ನಾವು ತಿಳಿದಿದ್ದೇವೆ.

ತನಗೆ ವಿಶ್ರಾಂತಿಯನ್ನು ಬಯಸಿದಾಗ್ಯೂ ನಮ್ಮ ಕರ್ತನು ಜನರಿಗೆ ಉಪದೇಶಮಾಡದೆ ಇರುವುದನ್ನು ಸಹಿಸಿಕೊಳ್ಳ ಲಾಗುತ್ತಿರಲಿಲ್ಲ. ಆತನು ಒಳ್ಳೆಯ ಕುರುಬನಾಗಿದ್ದು ತನ್ನ ಕಾರ್ಯಭಾರವನ್ನು ನೆರವೇರಿಸಲು ಎಲ್ಲಾ ಕಾಲಗಳಲ್ಲಿಯೂ ಸಿದ್ಧನಾಗಿರುತ್ತಿದ್ದನು. ಕುರಿಗಳಿಗಾಗಿ ತನ್ನ ಜೀವಿತದ ಪ್ರತಿಯೊಂದು ಅಂಶವನ್ನೂ ಅರ್ಪಣೆಮಾಡಲು ಅಂದರೆ ಕೇವಲ ಕಲ್ವಾರಿಯಲ್ಲಿ ಮಾತ್ರವಲ್ಲದೆ ತನ್ನ ಯಜ್ಞಾರ್ಪಣೆಯು ಭವ್ಯವಾದ ಮುಕ್ತಾಯದ ಹಂತವನ್ನು ತಲುಪುವವರೆಗೂ ದಿನದಿನವೂ ಗಂಟೆಗಂಟೆಗೂ ಅದನ್ನು ನೆರವೇರಿಸುತ್ತಾ ಬಂದಿದ್ದನು. ಇದೇ ಕರ್ತನ ನಿಜವಾದ ಶಿಷ್ಯರೆಲ್ಲರ ಮನೋಭಾವವೂ ಆಗಿರಬೇಕು. ಕರ್ತನ ಮಾತನ್ನು ಆಹಾರವನ್ನಾಗಿ ಮಾಡಿಕೊಂಡು ಮತ್ತು ಆತನ ಮಾರ್ಗದರ್ಶನ ವನ್ನು ಅನುಸರಿಸುವವರಾಗಿ ಅವರು (ಕರ್ತನ ವಿಷಯವಾದ) ಪರಿಜ್ಞಾನದಲ್ಲಿಯೂ ಕೃಪೆಯಲ್ಲಿಯೂ ಮತ್ತು ಪ್ರೀತಿಯಲ್ಲಿಯೂ ಬೆಳೆಯುತ್ತಾ ಬಂದು ಕರ್ತನ ಪವಿತ್ರಾತ್ಮದಲ್ಲಿ ಅಧಿಕ ಅಧಿಕವಾಗಿ ಪಾಲನ್ನು ಹೊಂದುತ್ತಾ ಬಂದ ಹಾಗೆಲ್ಲಾ ಈ ಮನೋಭಾವದಲ್ಲಿಯೂ ಹೆಚ್ಚುತ್ತಾಬರಬೇಕು.

## "ನಿನ್ನ ರಾಜ್ಯವು ಬರಲಿ"

ಈ ದಿನದಲ್ಲಿಯೂ ಬಾಬೇಲಿನಲ್ಲಿರುವ ಕರ್ತನ ಜನರು ಇದೇ ಸ್ಥಿತಿಯಲ್ಲಿರುವರು. ನಾವು ಅಸಾಧಾರಣವಾದ ಕಾಲದಲ್ಲಿದ್ದೇವೆಂಬುದಕ್ಕೆ, ಈಗಿನ ದೈವಿಕ ವ್ಯವಸ್ಥೆಯಲ್ಲಿ ದೊಡ್ಡ ಬದಲಾವಣೆಗಳು ಸನ್ನಿಹಿತವಾಗುತ್ತಿರುವುದೆಂಬುದಕ್ಕೆ ಅವರು ಸುಲಭವಾಗಿ ಮನವೊಲಿಸಲ್ಪಡುವರು. ಸಾವಿರ ವರುಷದ ಆಳ್ವಿಕೆಯ ರಾಜ್ಯವು ಸಮೀಪಿಸುತ್ತಿರುವುದನ್ನು ಹಲವರು ಕೇಳಿದವರಾಗಿದ್ದು, ಅದು ಹೇಗೆ ಎಂದು ಏಕೆ ಮತ್ತು ಎಲ್ಲಿ ಸ್ಥಾಪನೆಯಾಗುವದೆಂಬ ವಿಷಯದಲ್ಲಿ ಆಶ್ಚರ್ಯಪಡುತ್ತಿರುವರು. ರಾಜಕೀಯ ಕ್ಷೇತ್ರದಲ್ಲಿನ ನಾಯಕರ ಬಗ್ಗೆ ನೋಡುವುದಾದರೆ, ಅವರು ಯುದ್ಧವಾಗುತ್ತಿರುವುದನ್ನು ಯುದ್ಧವಾಗುವ ಸುದ್ದಿಯನ್ನು ಮತ್ತು ಬಹು ಸನಿಹದಲ್ಲೇ ಸಮಸ್ತ ಸಂಗತಿಗಳು ಬುಡಮೇಲಾಗು ವದನ್ನು ಸಮಾಜವಾದದ ಧ್ವನಿಯು ಸಾರುತ್ತಿರುವುದನ್ನು ಕೇಳಿ ಹೆಚ್ಚುಕಡಿಮೆ ಗೊಂದಲಕ್ಕೊಳಗಾಗಿ ರುವರು. ಶ್ರಮಿಕವರ್ಗ ಮತ್ತು ಬಂಡವಾಳಶಾಹಿಗಳ ನಡುವಿನ (ಸಂಘರ್ಷಣೆಯ) ಕಷ್ಟ ಕಾಲಗಳು ಸನ್ನಿಹಿತವಾಗುತ್ತಿರುವುದನ್ನು ಅವರು ಗಮನಿಸಿದ್ದು, ಇಲ್ಲಿ ತಾವು ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳಿಗಾಗಿ ತಿಳುವಳಿಕೆ ಮುಂದಾಳತ್ವ ಮಾರ್ಗದರ್ಶನ ಇವುಗಳಿಗಾಗಿ ಅವರು ಹಾತೊರೆ ಯತ್ತಿರುವರು. ಅವರು ಕುರುಬನಿಲ್ಲದ ಕುರಿಗಳಂತಿರುವರು.

ಬಾಬೇಲಿನಲ್ಲಿ ಅನೇಕ ಮಂದಿ ಕುರುಬರಿರುವುದು ನಿಜವೇ; ಆದರೆ ಅವರು (ಹೈಯರ್ ಕ್ರಿಟಿಸಿಸಮ್) ಹಾಗು ವಿಕಾಸವಾದದ ಸಿದ್ಧಾಂತಗಳ ಕಡೆಗೆ ನಡೆಸಲ್ಪಡುತ್ತಿರುವುದನ್ನು ಗಮನಿಸಿರುವಷ್ಟರ ಮಟ್ಟಿಗೆ ತಾವು ಇಂಥಾ ನಡೆಗಳ ವಿಷಯದಲ್ಲಿ ಭೀತಿಗೊಳಗಾಗಿ ಇವುಗಳ ಬಗ್ಗೆ ತಮಗಿರುವ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವರು. ಅವರು ಯಾರನ್ನು ಎದುರು ನೋಡಬೇಕೆಂಬುದನ್ನು ತಿಳಿಯದವ ರಾಗಿದ್ದಾರೆ. ಅವರ ಕಿವಿಗೆ ಬೀಳುತ್ತಿರುವ ಅತಿ ತೃಪ್ತಿಕರವಾದ ಸಂದೇಶವೆಂದರೆ ಅದು ನಾವು ಸಾರುತ್ತಿರುವ ದೇವರ ರಾಜ್ಯದ ವಿಷಯ; ಆದರೂ ತಮ್ಮ ಮೇಲೆ ಭಯ ಮೂಢನಂಬಿಕೆ ಹಾಗು ಸಭಾಪಾಲಕೋದ್ಯೋಗ ಇವುಗಳ ಮೂಲಕವಾಗಿ ಕೆಲವು ಪ್ರಮಾಣದ ಹಿಡಿತವನ್ನು ಹೊಂದಿರುವ ಕುರುಬರು ಇದನ್ನು ಉಗ್ರವಾಗಿ ಖಂಡಿಸಿರುವ ಹಾಗು ಬಹಿಷ್ಕರಿಸಿರುವ ಹಿನ್ನೆಲೆಯಲ್ಲಿ ಅವರು ಇದನ್ನು ಅಂಗೀಕರಿಸಲು ಅಂಜುತ್ತಿರುವರು. ಕ್ರಿಸ್ತನ ದೇಹದಲ್ಲಿನ ಅಂಗಗಳಾದ ಪ್ರತಿಯೊಬ್ಬನೂ ತಾನು ಕರ್ತನ ರಾಯಭಾರಿಯಾಗಿರುವನೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು ಹಾಗು ಆತನಿಗೆ ಬಾಯಾಗಿದ್ದು ಜನರಿಗೆಲ್ಲಾ ಸಂತೋಷವನ್ನುಂಟು ಮಾಡುವ ಶುಭ ಸಂದೇಶವನ್ನು ಸಾರುವುದರಲ್ಲಿ ಹಾಗೂ ಕುರಿಗಳನ್ನು ನಿಜವಾದ ಕುರುಬನೆಡೆಗೆ ನಡೆಸಲ್ಪಡಲು ಸಹಾಯ ಮಾಡುವುದರಲ್ಲಿ ಆನಂದವುಳ್ಳವನಾಗಿರಬೇಕು.

ಒಂದು ಪ್ರಮಾಣದಲ್ಲಿ ಹಸಿವು ಹೊಂದಿರುವವರೆಲ್ಲರ ಮೇಲೆ ಪ್ರಭಾವ ಬೀರುವುದನ್ನು ನಾವು ನಿರೀಕ್ಷಿಸಲು ಸಾಧ್ಯವಾಗದು; ಕೇವಲ ಚಿಕ್ಕ ಹಿಂಡು ಮಾತ್ರ ಇಂಥಾ ಹೃದಯದ ಸ್ಥಿತಿಯಲ್ಲಿದ್ದು ಅವರು ಅನ್ಯರ ಸ್ವರಕ್ಕೆ ಕಿವಿಗೊಡುವುದಿಲ್ಲವೆಂದೂ, ಆದರೆ ಸತ್ಯದ ಪರವಾದ ಮನುಷ್ಯ ಕುಮಾರನ ಸ್ವರವನ್ನು

ಅನುಸರಿಸಿ ಹೋಗುವರೆಂಬುದು ಸ್ಪಷ್ಟ. ಹೀಗಿದ್ದರೂ ನಮ್ಮ ಒಡೆಯನಂತೆ ನಾವು ಎಲ್ಲರ ವಿಷಯದಲ್ಲೂ ಅನುಕಂಪವುಳ್ಳವರಾಗಿದ್ದು, ಈಗಿನ ಕಾಲದಲ್ಲಿ ಯಾರು ಇದನ್ನು ನಿರ್ದಿಷ್ಟವಾಗಿ ಕೇಳಲು ಸಾಧ್ಯವಿಲ್ಲವೋ ಅವರು, ಅತಿ ಸನಿಹದಲ್ಲಿಯೇ ದೇವರ ರಾಜ್ಯವು ಸ್ಥಾಪಿತವಾಗಿ ಕಿವುಡರ ಕಿವಿಗಳೆಲ್ಲವೂ ತೆರೆಯಲ್ಪಟ್ಟು ದೇವರ ಮಹಿಮೆಯ ವಿಷಯವಾದ ಪರಿಜ್ಞಾನವು ಭೂಮಿಯನ್ನೆಲ್ಲಾ ತುಂಬಿಕೊಂಡಾಗ, ಇದನ್ನು ಸುಸ್ಪಷ್ಟವಾಗಿ ಕೇಳುವರೆಂಬುದಕ್ಕೆ ಉಲ್ಲಾಸಿಸಬೇಕು.

## "ಅವರಿಗೆ ಬಹಳ (ಅನೇಕ ವಿಷಯವಾಗಿ) ಉಪದೇಶಮಾಡಿದನು"

ನಾವು ಒಡೆಯನ ಉದಾಹರಣೆಯಿಂದ ಒಂದು ಪಾಠವನ್ನು ತೆಗೆದುಕೊಳ್ಳಬೇಕು. ಆತನು ಜನರ ಗುಂಪಿಗೆ ಸಹ ಅವರ ಪ್ರಯೋಜನಕ್ಕಾಗಿ, ಅವರ ಆದರಣೆಗಾಗಿ ಮತ್ತು ಅವರ ಏಳಿಗೆಗಾಗಿ ಸಿದ್ಧಗೊಳಿಸುವಂಥ ಅನೇಕ ಸಂಗತಿಗಳನ್ನು ಉಪದೇಶಿಸಲು ಸಾಧ್ಯವಿತ್ತು. ಹೀಗೆ ಅಂತ್ಯದಲ್ಲಿ ಅವರು ಗಾಢವಾದ ಸಂಗತಿಗಳನ್ನು ಗ್ರಹಿಸಿಕೊಳ್ಳಲು ಸಿದ್ಧರಾಗಬಹುದಾಗಿತ್ತು. ತನ್ನ ಹನ್ನೆರಡು ಮಂದಿ ಶಿಷ್ಯರಿಗೆ ಮತ್ತು ವಿಶೇಷವಾಗಿ ಪ್ರತಿಷ್ಠಿತರಾದ ತನ್ನ ಶಿಷ್ಯರಿಗೆ ಹೇಳಲು ಆತನಿಗೆ ಇನ್ನೂ ಬೇರೆ ಸಂಗತಿಗಳು ಸಹ ಇದ್ದು, ಹೀಗೆ ಅದನ್ನು ಹೇಳಿರುವನು: "ದೇವರ ರಾಜ್ಯದ ಗುಟ್ಟು ನಿಮಗೇ ಕೊಟ್ಟಿದೆ; ಹೊರಗಿನವರಿಗೆ ಎಲ್ಲವೂ ಸಾಮ್ಯದ ಮರೆಯಲ್ಲಿವೆ." (ಮಾರ್ಕ 4:11) ಅಲ್ಲದೆ ಹೀಗಾಗಿಯೂ ತನ್ನ ಶಿಷ್ಯರಿಗೆ ಹೇಳದೆಯೇ ಬಿಟ್ಟಿರಲು ಉತ್ತಮವೆಂದು ತೋರುವ ಕೆಲವು ಸಂಗತಿಗಳೂ ಇದ್ದವು; ಇದನ್ನು ನಮ್ಮ ಒಡೆಯನು ಹೀಗೆ ತಿಳಿಸಿರುವನು: "ನಾನು ನಿಮಗೆ ಹೇಳಬೇಕಾದದ್ದು ಇನ್ನೂ ಬಹಳ ಉಂಟು; ಆದರೆ ಅದನ್ನು ಸದ್ಯಕ್ಕೆ ಹೊರಲಾರಿರಿ. ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡೆಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿಸುವನು." – ಯೋಹಾನ 16:12–13

ಆದುದರಿಂದ ಅಪೋಸ್ತಲನು ಹೇಳಿರುವುದೆಂದರೆ, ಯಾರು ದೇವರ ಜ್ಞಾನದಲ್ಲಿ ಮುಂದುವರೆದಿರುವರೋ ಮತ್ತು ಯಾರ ಹೃದಯಗಳು ಆಳವಾದ ಸತ್ಯಾರ್ಥಗಳನ್ನು ತಿಳಿದುಕೊಳ್ಳಲು ಸಿದ್ಧವಾಗಿರುವದೋ ಅವರಿಗೆ ನಾವು ಮರ್ಮದ ರೂಪದಲ್ಲಿ ಗೂಢವಾಗಿರುವ ದೇವರ ಜ್ಞಾನದ ಆಳವಾದ ಸಂಗತಿಗಳ ಬಗ್ಗೆ ಮಾತನಾಡಬಹುದು. ಕ್ರಿಸ್ತನಲ್ಲಿ ಶಿಶುಗಳಂತಿರುವವರಿಗೆ ಗಟ್ಟಿಯಾದ ಆಹಾರವನ್ನು ನೀಡಿ ಅವರಿಗೆ ಉಸಿರುಕಟ್ಟುವಂತೆ ಮಾಡದ ಹಾಗೆ ಎಚ್ಚರವಾಗಿರಬೇಕು. ಆದರೆ ಹೀಗಿರುವಲ್ಲಿಯೂ ಅವರು ಹಸಿದವರಾಗಿರುವಂತೆಯೇ ಬಿಡಬಾರದು; ಅವರಿಗೆ ವಾಕ್ಯವನ್ನು ಹಾಲಿನ ರೂಪದಲ್ಲಿ ನೀಡಿ ಅದರಿಂದ ಅವರು ಬೆಳೆಯುವಂತಾಗ ಮಾಡಬೇಕು. ನಾವು ಕರ್ತನ ಮಾತನ್ನು ಆತನ ನಿದರ್ಶನವನ್ನು ನೆನಪಿನಲ್ಲಿಟ್ಟುಕೊಳ್ಳೋಣ; ಆತನು ಹೇಳಿದ್ದು, "ನೀವು ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರ್ರಿ." ನಿಸ್ಸಂದೇಹವಾಗಿ ಈ ವಾಕ್ಯವನ್ನು ಓದುವ ಪ್ರತಿಯೊಬ್ಬನೂ ತಾನು ಪ್ರಾರಂಭದಲ್ಲಿ ಕರ್ತನ ಮತ್ತು ಆತನ ಧ್ಯೇಯೋದ್ದೇಶಗಳ ವಿಷಯವಾಗಿ ಸೇವೆ ಮಾಡುವ ಪ್ರಯತ್ನದಲ್ಲಿ ಜ್ಞಾನ ಮತ್ತು ವಿವೇಚನೆಗಳು ಇಲ್ಲದ ಕಾರಣ, ಕರ್ತನ ಆದೇಶಗಳನ್ನು ಗಮನಕ್ಕೆ ತೆಗೆದುಕೊಳ್ಳುವುದರಲ್ಲಿ ವಿಫಲನಾಗಿ ಅಲ್ಲದೆ ಶಿಶುಗಳಿಗೆ ಹಾಲನ್ನು ನೀಡುವ ಮತ್ತು ಪ್ರಾಯಸ್ಥರಿಗೆ ಗಟ್ಟಿಯಾದ ಆಹಾರ ನೀಡುವ ಬಗ್ಗೆ ಆತನ ಮಾದರಿಯನ್ನು ಅನುಸರಿಸಲು ವಿಫಲನಾಗಿ ಒಳ್ಳೆಯದಕ್ಕಿಂತಲೂ ಹೆಚ್ಚು ಹಾನಿಯನ್ನು ಉಂಟುಮಾಡಿದ್ದದನ್ನು ಗ್ರಹಿಸಿಕೊಳ್ಳಬಹುದು.

ಸುವಾರ್ತೆಗಳು ನೀಡಿರುವ ಬೇರೊಂದು ವಿವರಣೆಯಲ್ಲಿ ಜನರಿಗೆ ಉಪದೇಶ ನೀಡಿದ ನಂತರ ಕರ್ತನು ಅವರನ್ನು ಬಿಟ್ಟು ಕೆಲಕಾಲ ತನ್ನ ಶಿಷ್ಯರ ಜೊತೆಯಲ್ಲಿ ಬೆಟ್ಟದ ಪ್ರದೇಶಗಳಿಗೆ ಹೋಗಿ ತಮ್ಮ ಸೇವೆಯ ವಿಷಯವಾಗಿ ಪುನರಾಮರ್ಶೆಗಳನ್ನು ಮಾಡಿದ್ದುದು ಸ್ಪಷ್ಟವಾಗಿ ತೋರುವುದು. ನಿಸ್ಸಂದೇಹವಾಗಿಯೂ ಅವರು ದೋಣಿಯಲ್ಲಿ ಪ್ರಯಾಣಿಸುವಾಗಲೂ ಸಹ ಇಂಥಾ ಮರುವಿಮರ್ಶನಾ ಕೂಟಗಳನ್ನು ನಡೆಸುವ ಅವಕಾಶಗಳನ್ನು ಹೊಂದಿದ್ದರು. ದಿನದ ನಂತರದ ಅವಧಿಯಲ್ಲಿ ಅಂದರೆ ಮಧ್ಯಾಹ್ನದಲ್ಲಿ ಆತನು ಬೆಟ್ಟದಿಂದ ಇಳಿದು ಬಂದಂತೆ ಕಾಣುವುದು; ಆಗಲೇ ಅಲ್ಲಿ ಜನರು ಗುಂಪುಗುಂಪುಗಳಲ್ಲಿ ಪ್ರಯಾಣಿಸಿ ಕಿಕ್ಕಿರಿದು ನೆರೆದು ಬಂದಿದ್ದರು. ಆ ಸಮಯದಲ್ಲಿ ಅದು ಪಸ್ಕದ ಹಬ್ಬಕ್ಕಾಗಿ ಯೆರೂಸಲೇಮಿಗೆ ಹೋಗುವ ದಾರಿಯಲ್ಲಿದ್ದು ಜನಸಮೂಹವು ಸಾವಿರಾರು ಸಂಖ್ಯೆಯಲ್ಲಿ ಕೂಡಿಬಂದಿತ್ತು. ಹೊಸದಾಗಿ ಬಂದವರಲ್ಲಿ ಪ್ರಶ್ನೆಗಳು ತುಂಬಿ ಆಸಕ್ತಿಭರಿತವಾಗಿದ್ದುದು ಸ್ಪಷ್ಟವಾಗಿದ್ದು ನಮ್ಮ ಕರ್ತನು ಅವೆಲ್ಲವುಗಳ ಬಗ್ಗೆ ಅವರಿಗೆ ಉಪದೇಶ ಮಾಡಿ ವಿವರಣೆ ನೀಡಿದ್ದನು.

## "ನೀವೇ ಅವರಿಗೆ ಊಟಕ್ಕೆ ಕೊಡಿರಿ"

ಹೊತ್ತು ಮುಳುಗುವದಕ್ಕೆ ತೊಡಗಿತ್ತು ಮತ್ತು ಜನರನ್ನು ಕಳುಹಿಸಿ ಬಿಡಬೇಕೆಂದು ಶಿಷ್ಯರು ಒತ್ತಾಯಪಡಿಸಿದ್ದರು, ಆದರೆ ಅವರು ತಿಳಿಯದಂಥ ಒಂದು ಉದ್ದೇಶವು ಆತನಲ್ಲಿತ್ತು; ತನ್ನ ಇಡೀ ಸೇವಾವಧಿಯಲ್ಲಿನ ಅತಿ ಶ್ರೇಷ್ಠವಾದ ಅದ್ಭುತವನ್ನು ಮಾಡುವದು ಆತನ ಮನಸ್ಸಿನಲ್ಲಿತ್ತು. ಹೀಗಿದ್ದರೂ ಅದನ್ನು ಹೇಳುವದಕ್ಕೆ ಬದಲಾಗಿ ಆತನು ಸಹಜವಾದ ರೀತಿಯಲ್ಲಿ ಈ ಸಂಗತಿಯು ನೆರವೇರ ಬಯಸಿದವನಾಗಿ ಅವರಿಗೆ ತಮ್ಮ ನಿಸ್ಸಹಾಯಕ ಸ್ಥಿತಿಗೆ ಸಹಾಯ ಮಾಡುವದಾಗಿ ಹೇಳಿ ಜನರನ್ನು ಕುಳಿತುಕೊಳ್ಳುವಂತೆ ಹೇಳಲು ಅವರಿಗೆ ಸೂಚಿಸಿದನು. ಅವರಲ್ಲಿ ಆಹಾರವೇನಾದರೂ ಇರುವುದೋ ಎಂದು ವಿಚಾರಿಸಿದನು ಮತ್ತು ಅಲ್ಲಿ ಒಬ್ಬ ಹುಡುಗನ ಬಳಿ ನಾಲ್ಕು ಜವೇಗೋದಿಯ ರೊಟ್ಟಿ ಹಾಗು ಎರಡು ಮೀನುಗಳು ಇದ್ದು ಬೇರೇನೂ ಇಲ್ಲದಿರುವುದು ಕಂಡುಬಂದಿತ್ತು. ಇದು ನಮ್ಮ ಕರ್ತನ ಉದ್ದೇಶಕ್ಕೆ ಪ್ರಯೋಜನಕಾರಿಯಾಗಿತ್ತು; ಹೇಗೂ ಆ ಜನರ ಗುಂಪಿಗೆ ಆಶೀರ್ವಾದ ಮಾಡುವ ಕಾರ್ಯದಲ್ಲಿ ಸಹಕರಿಸುವ ತನ್ನ ಇಚ್ಛೆಯನ್ನು ತೋರಲು ಆಶಿಸಿದ್ದನು; ಮತ್ತು ಹೀಗೆ ತಾನು ಜನರೊಂದಿಗೆ ಹಾಗೂ ಲೋಕದವರೊಂದಿಗೆ ವರ್ತಿಸುವ

ರೀತಿಯ ಬಗ್ಗೆ ಒಂದು ನಿದರ್ಶನವನ್ನು ನೀಡಿದ್ದನು. ಆತನು ನಮ್ಮ ಅಲ್ಪವಾದ ಮತ್ತು ಯೋಗ್ಯವಲ್ಲದ ಸಮಯ ಮತ್ತು ಸಾಮರ್ಥ್ಯ ಗಳನ್ನು ತೆಗೆದುಕೊಂಡು ಅವುಗಳನ್ನು ಆಶೀರ್ವದಿಸಿ ಅವುಗಳನ್ನು ತನ್ನ ಸೇವೆಯಲ್ಲಿ ಬಳಸಿಕೊಂಡು ಅವುಗಳ ಮೂಲಕವಾಗಿ ದೊಡ್ಡ ಸಂಗತಿಗಳು ನೆರವೇರುವ ಹಾಗೆ ಮಾಡುವನು. ಆತನು ಹೀಗೆ ತನ್ನ ಜನರ ಜೊತೆಗೂಡುವುದರಿಂದ ದೊರೆಯುವ ಅನುಭವ ಮತ್ತು ಪಾಠಗಳ ಮೂಲಕವಾಗಿ ಅವರಿಗೆ ಆಶೀರ್ವದಿಸುವನು. ಮತ್ತು ಆತನು ಯಾರ ಬಳಿಗೆ ಅವರನ್ನು ಕಳುಹಿಸಿಕೊಡುವನೋ ಅವರಿಗೆ ಪ್ರಾಪಂಚಿಕ ಹಾಗು ಆತ್ಮಿಕ ವಿಷಯಗಳಲ್ಲಿ ತನ್ನ ಕರುಣೆಯನ್ನು ತೋರುವದರ ಮೂಲಕವಾಗಿ ಆಶೀರ್ವಾದವನ್ನು ನೀಡುವದಕ್ಕಿಂತಲೂ ಹೆಚ್ಚಿನದನ್ನು ನೀಡುವನು.

ಒಡೆಯನು ಯಾವ ಸಂಗತಿಗಳನ್ನು ಪ್ರಸ್ತಾಪಿಸುವನೋ ಅವುಗಳಿಗೆ ಶಿಷ್ಯರು ವಿಧೇಯರಾಗುವುದನ್ನು ಕಲಿತುಕೊಳ್ಳುವಂತೆ ಮಾಡಿದ್ದನು; ಆದುದರಿಂದ ಅಲ್ಲಿ ಏನೂ ಇಲ್ಲದಿದ್ದರೂ ಜನರನ್ನು ನೂರರಂತೆ ಐವತ್ತರಂತೆ ಕುಳಿತು ಊಟಕ್ಕಾಗಿ ಅಣಿಯಾಗುವಂತೆ ಮಾಡಿದುದರಲ್ಲಿ ಶಿಷ್ಯರು ಜನರ ದೃಷ್ಟಿಯಲ್ಲಿ ಬುದ್ಧಿಯಿಲ್ಲದಂತೆ ಕಂಡುಬಂದರೂ ಕರ್ತನ ಈ ಅಪ್ಪಣೆಯ ವಿಷಯವಾಗಿ ನಾವು ಆಕ್ಷೇಪಿಸಲು ಯಾವ ಕಾರಣವೂ ಇರುವುದಿಲ್ಲ. ಯಾವಾತನು ತಮ್ಮ ಬಲೆಗಳು ಮೀನುಗಳಿಂದ ತುಂಬುವಂತೆ ಮಾಡಿದ್ದನೋ, ಯಾವಾತನು ಮರಣವೆಂಬ ನಿದ್ರೆಯಿಂದ ಎಚ್ಚರಗೊಳ್ಳುವಂತೆ ಮಾಡಿದ್ದನೋ, ಯಾವಾತನು ಬತ್ತಿ ಹೋದ ಕೈಗಳನ್ನು ಮತ್ತೆ ಸರಿಯಾಗುವಂತೆ ಮಾಡಿ ತಾನು ಮುಟ್ಟದೆಯೇ ತನ್ನ ಬಾಯ ಮಾತಿನಿಂದಲೇ ಗುಣವಾಗುವಂತೆ ಮಾಡಿರುವನೋ ಅವನು ತನ್ನಲ್ಲಿರುವ ನಿರ್ಣಾಯಕ ಹಾಗೂ ವಿಮರ್ಶನಾತ್ಮಕ ಶಕ್ತಿಯಲ್ಲಿ ತಮಗಿಂತಲೂ ವಿಭಿನ್ನವಾಗಿರುವನೆಂಬುದನ್ನು ಕಲಿತುಕೊಳ್ಳಲು ಅವರು ಆರಂಭಿಸಿದ್ದರು. ಅವರು ವಿಧೇಯರಾದರು; ಉಳಿದುದನ್ನು ಕರ್ತನು ನೆರವೇರಿಸಿದನು.

## ರೊಟ್ಟಿಯನ್ನು ಆಶೀರ್ವದಿಸುವುದು

ಕರ್ತನು ರೊಟ್ಟಿಯನ್ನು ಆಶೀರ್ವದಿಸಿದನೆಂದು ನಮ್ಮ ಪಾಠವು ಹೇಳುವುದು; "ಆತನು ದೇವಸ್ತೋತ್ರ ಮಾಡಿ.." ಎಂದು ಯೋಹಾನನ ಸುವಾರ್ತೆಯು ಇದೇ ವಿಷಯವನ್ನು ಸ್ಮರಿಸುತ್ತಾ ಹೀಗೆ ಹೇಳಿರುವುದು. ಈ ಎರಡು ಅಂಶಗಳೂ ನಿಕಟವಾದ ಹೊಂದಾಣಿಕೆಯಲ್ಲಿರುವುದು. ಹೇಗೆಂದರೆ ದೇವರಿಗೆ ಸ್ತೋತ್ರ ಮಾಡುವುದು ನಿಜವಾಗಿಯೂ ರೊಟ್ಟಿಗೆ ಆಶೀರ್ವಾದವನ್ನು ತಂದುಕೊಟ್ಟಿತು. ಇಲ್ಲಿ ನಾವು ಸ್ವಲ್ಪ ನಿಂತವರಾಗಿ ಸಲಹೆಮಾಡುವು ದೇನಂದರೆ: ತಂದೆಯ ಒಬ್ಬನೇ ಕುಮಾರನಿಗೆ ಅತ್ಯಲ್ಪವಾದ ಆಹಾರಕ್ಕೆ ಕೃತಜ್ಞತೆಯನ್ನು ಹೇಳಿ ಅದಕ್ಕೆ ಆಶೀರ್ವಾದವನ್ನು ಕೋರುವುದು ಸೂಕ್ತವೆಂದೆನಿಸಿದರೆ ಯಾರಾದರೂ ಯಾವುದೇ ಒಂದು ಅರ್ಥದಲ್ಲಿ ಆತನ ಹಿಂಬಾಲಕರಾಗಿ ತೋರ್ಪಡಿಸಿ ಕೊಳ್ಳುವವರಿಗೆ ನಿಜವಾಗಿಯೂ ಇದು ಈ ವಿಷಯದಲ್ಲಿಯೂ ಮತ್ತು ಬೇರೆ ವಿಷಯಗಳಲ್ಲಿಯೂ ಆತನ ಮಾದರಿಯನ್ನು ಅನುಕರಣೆ ಮಾಡುವಂತೆ ಮಾಡುವದು. ಆಹಾರವು ದೇವರ ಉದಾರವಾದ ಕೊಡುಗೆ ಹಾಗೂ ಏರ್ಪಾಟು ಎಂಬುದನ್ನು ಗ್ರಹಿಸಿದವರಾದ ನಾವು ಅದಕ್ಕೆ ಪ್ರತಿಯಾಗಿ ಕೃತಜ್ಞತೆಯನ್ನು ಇಲ್ಲವೇ ವಂದನೆಯನ್ನು ಹೇಳದೆ ಆ ಆಹಾರದಲ್ಲಿ ಪಾಲುತೆಗೆದುಕೊಳ್ಳಲು ಹೇಗೆ ಸಾಧ್ಯ? ಯಾರು ಕೃತಜ್ಞತೆಯನ್ನು ಪ್ರತಿಯಾಗಿ ಹೇಳುವರೊ ಅವರು ತಮ್ಮ ಅಹಾರದ ಜೊತೆಗೆ ಮತ್ತು ಅದರ ಮೇಲೆ ವಿಶೇಷ ಆಶೀರ್ವಾದವನ್ನು ಪಡೆಯುವರು. ಮತ್ತು ಅದನ್ನು ಬಳಸುವಲ್ಲಿ ಇತರರು ಪಡೆಯಲಾಗದ ಒಂದು ವಿಶೇಷ ಜ್ಞಾನತಿಳುವಳಿಕೆ ಯನ್ನು ಪಡೆಯುವರೆಂಬುದು ನಮಗೆ ಖಚಿತವೆನಿಸುತ್ತದೆ. ಕರ್ತನನ್ನು ಕೃತಜ್ಞತೆಯಿಂದ ನೋಡುವ ಫಲವಾಗಿ ಹೃದಯದಲ್ಲಿ ನಿಜವಾದ ಸಮಾಧಾನ ಮತ್ತು ವಿಶ್ರಾಂತಿ ಉಂಟಾಗಿ, ಸಹಜ ನಿಯಮಾನುಸಾರವಾಗಿ ದೊರೆಯುವ ಪ್ರಶಾಂತತೆಯನ್ನು ಖಚಿತಗೊಳಿಸಿ ಆ ಆಹಾರವು ಜೀರ್ಣವಾಗು ವುದಕ್ಕೆ ಅನುಕೂಲಿಸುವದು. ಉಲ್ಲಾಸಕರವಾದ ಮತ್ತು ಕೃತಜ್ಞತಾಪೂರ್ಣವಾದ ಮನೋಭಾವದಿಂದ ತಿಂದ ಆಹಾರವು ಕೃತಜ್ಞತೆಯಿಲ್ಲದೆ ಅಥವಾ ಕೋಪದಿಂದ ಇಲ್ಲವೇ ಅತೃಪ್ತಿಯ ಭಾವದಿಂದ ತಿಂದ ಆಹಾರಕ್ಕಿಂತಲೂ ಹೆಚ್ಚು ಪೋಷಕಾಂಶವನ್ನು ನೀಡಿ ಅಧಿಕವಾಗಿ ಪುನಶ್ಚೇತನಗೊಳಿಸುವುದು.

ನಮ್ಮ ಕರ್ತನು ಕೃತಜ್ಞತೆಯನ್ನು ಹೇಳಿದ ಊಟವು ಭರ್ಜರಿಯಾದುದೇನೂ ಆಗಿರಲಿಲ್ಲವೆಂಬುದನ್ನೂ ಸಹ ಗಮನಿಸಿ; ಅದನ್ನು ಅಲಂಕೃತವಾದ ಸೊಗಸಾದ ಪಾತ್ರೆಯಲ್ಲಿ ನೀಡಿರಲಿಲ್ಲ; ಅದು ಉತ್ಕೃಷ್ಟವಾದ ಆಹಾರವೂ ಆಗಿರಲಿಲ್ಲ; ಅದು ಸಮಾನ್ಯವಾದ ಜವೆಗೋದಿ ರೊಟ್ಟಿ ಹಾಗೂ ಒಣ ಮೀನಾಗಿತ್ತು. ನಮ್ಮ ಕರ್ತನ ದಿನದಲ್ಲಿನ ಹಾಗೂ ಈಗಲೂ ಪೌರಾತ್ಯ ದೇಶಗಳಲ್ಲಿನ ಜನರ ಸರಳವಾದ ಆಹಾರಕ್ರಮದ ಬಗ್ಗೆ ಯೋಚಿಸುವುದಾದರೆ ಮತ್ತು ಜಪಾನ್ ದೇಶದ ಸೈನ್ಯಕ್ಕೆ ಒದಗಿಸುವ ಆಹಾರ ಮತ್ತು ಜಪಾನಿಯರ ಕುಟುಂಬಗಳಿಗೆ ಸಾಧಾರಣವಾಗಿರುವ ಆಹಾರವನ್ನು ಪರಿಗಣನೆಗೆ ತೆಗೆದು ಕೊಳ್ಳುವುದಾದರೆ, ನಮ್ಮ ದಿನದಲ್ಲಿ ಅನೇಕ ಜನರು ಆಹಾರದ ಪ್ರಮಾಣದಲ್ಲಿಯೂ ಹಾಗು ಗುಣಾಂಶಗಳಲ್ಲಿಯೂ ಅತಿಯಾಗಿ ಸೇವನೆ ಮಾಡುತ್ತಿದ್ದು, ಅದರಿಂದಾಗಿ ಅವರಿಗೆ ಪ್ರಯೋಜನ ವೇನೂ ಆಗುತ್ತಿಲ್ಲ. ಸಾಧಾರಣವಾದ ಮತ್ತು ಸರಳವಾದ ಆಹಾರವು ಬಹು ಆರೋಗ್ಯಕರವೂ ಮಾತ್ರವಲ್ಲದೆ ಪರಲೋಕದಿಂದ ಇಳಿದು ಬಂದ ರೊಟ್ಟಿಯ ಮೂಲಕವಾಗಿ ಅಧಿಕ ಆತ್ಮೀಕ ಪುನಶ್ಚೇತನ ಪಡೆಯಲು ಮತ್ತು ಸತ್ಯದ ವಿಷಯವಾಗಿ ಇತರರಿಗೆ ಸೇವೆಮಾಡಲು ಹೆಚ್ಚು ಸಮಯ ಲಭಿಸುವಂತೆ ಮಾಡುವದು. ಪ್ರತಿಯೊಬ್ಬನೂ ಈ ವಿಷಯವನ್ನು ಪರಿಗಣನೆಗೆ ತೆಗೆದುಕೊಂಡು ತನ್ನ ಸನ್ನಿವೇಶಕ್ಕನುಗುಣವಾಗಿಯೂ ಮತ್ತು ಇತರರ ಆಸಕ್ತಿ ಮತ್ತು ಇಷ್ಟಗಳಿಗೆ ಅನುಸಾರವಾಗಿಯೂ ನಡೆದುಕೊಳ್ಳಬೇಕು; ಆತನು ಖಂಡಿತವಾಗಿಯೂ ಇದನ್ನು ಮಾಡುವ ಹಂಗಿನಲ್ಲಿರುವನು.

ಹೀಗಾಗಿ ಎಲ್ಲರೂ ಕಲಿತುಕೊಳ್ಳಬಹುದಾದ ಒಂದು ಪಾಠವೇನೆಂದರೆ, ನಮ್ಮ ಊಟವಸತಿಯು ಎಷ್ಟೇ ಸರಳ ವಾಗಿದ್ದರೂ ದೇವರಿಗೆ ಕೃತಜ್ಞತೆ ಸಲ್ಲಿಸುವುದು ಉಚಿತವಾದುದು. ನಾವು ಅಪೇಕ್ಷಿಸುವುದೇನೆಂದರೆ ಈ ಪತ್ರಿಕೆಯ ಓದುಗರು ತಮ್ಮ ಕುಟುಂಬದ ಜೊತೆಯಲ್ಲಿರುವಾಗ ಕುಟುಂಬದ

ಆಗುಹೋಗುಗಳಲ್ಲಿ ಸೂಕ್ತವಾದ ಅಧಿಕಾರ ಹೊಂದಿರುವ ಪರ್ಯಂತರ ತಮಗೆ ಸಾಧ್ಯವಾಗುವಷ್ಟರ ಮಟ್ಟಿಗೆ ಕೃತಜ್ಞತೆ ಸಲ್ಲಿಸುವ ಈ ಸವಲತ್ತಿನ ಬಗ್ಗೆ ಅಲಕ್ಷಿಸಬಾರದೆಂಬದೇ. ವಾಸ್ತವದಲ್ಲಿ, ಒಬ್ಬ ಅಪರಿಚಿತನಿಗೆ ಅಥವಾ ಸಂದರ್ಶಕನಿಗೆ ಕುಟುಂಬದ ಪದ್ಧತಿಯಲ್ಲಿ ಅಡ್ಡಬರುವುದು ಅಯುಕ್ತವಾಗಿರುವುದು. ಇಲ್ಲವೇ ಸಾರ್ವಜನಿಕ ಸ್ಥಳಗಳಲ್ಲಿ ಹೋಟೇಲುಗಳಲ್ಲಿ ಉಪಹಾರಗೃಹ, ಮುಂತಾದಲ್ಲಿರುವಾಗ ಕರ್ತನಿಗೆ ನಾವು ಬಹಿರಂಗವಾಗಿ ಕೃತಜ್ಞತೆ ಸಲ್ಲಿಸುವುದು ಯಾವಾಗಲೂ ಸೂಕ್ತವಾಗಿರುವುದೆಂದು ನಮಗೆ ಹೇಳಲಾಗುವುದಿಲ್ಲ. ಕರ್ತನನ್ನು ಹೀಗೆ ವಂದಿಸಿ ಅಂಗೀಕರಿಸಿ ಕೊಳ್ಳುವುದರಲ್ಲಿ ನಾವು ಸಂತೋಷಿಸಬಹುದಾದರೂ ನಮ್ಮ ಈ ನಡವಳಿಕೆಯು ಫರಿಸಾಯರ ರೀತಿಯ– ದೆಂದು ತಪ್ಪಾಗಿ ಅರ್ಥೈಸಲ್ಪಡುವ ಸಂದರ್ಭದಲ್ಲಿ ನಾವು ಇದನ್ನು ಮಾಡದಿರುವುದು ಸೂಕ್ತವಾಗಿರುವುದು. ಹೀಗಿದ್ದರೂ, ಇಂಥಾ ಸನ್ನಿವೇಶಗಳಲ್ಲಿ ಬಾಯತುಂಬ ಆಹಾರವನ್ನು ತೆಗೆದುಕೊಳ್ಳುವ ಮೊದಲು ಬಾಹ್ಯ ರೀತಿಯಲ್ಲಿ ಸೂಚ್ಯವಾಗಿ ಅಥವ ನುಡಿಯಲ್ಲಿ ಹೇಳಲಾಗದಿದ್ದರೂ ಯಾವಾಗಲೂ ಹೃದಯದಲ್ಲಿ ಕೃತಜ್ಞತೆ ಸಲ್ಲಿಸಬೇಕು.

## ಶಿಷ್ಯರು ಅದನ್ನು ಜನರಿಗೆ ಕೊಟ್ಟರು

ಕರ್ತನು ರೊಟ್ಟಿಯನ್ನು ಮುರಿದು ತನ್ನ ಶಿಷ್ಯರಿಗೆ ಹಂಚಿ ಕೊಡುತ್ತಿದ್ದಂತೆ ಅವರು ಪ್ರತಿಯಾಗಿ ಅದನ್ನು ಜನರಗುಂಪಿಗೆ ಕೊಡುತ್ತಿದ್ದರೆಂದು ಬೇರೊಂದು ವಿವರಣೆಯು ನಮಗೆ ತೋರಿಸಿ ಕೊಡುವುದು. ಈ ಸಂಗತಿಯನ್ನು ಹೀಗೆ ಏರ್ಪಡಿಸುವಲ್ಲಿ ನಮ್ಮ ಕರ್ತನಲ್ಲಿ ಎಂಥಾ ಔದಾರ್ಯವಿತ್ತು. ಈ ಅದ್ಭುತ ಶಕ್ತಿಗೆ ಶಿಷ್ಯರು ಹೀಗೆ ಉತ್ತಮವಾದ ಸಾಕ್ಷಿಗಳಾಗಿದ್ದುದಲ್ಲದೆ ಜನರು ಹೆಚ್ಚು ಕಡಿಮೆ ಶಿಷ್ಯರ ಒಡನಾಟದಲ್ಲಿರುತ್ತಿದ್ದು ಮುಂದೆ ಪಂಚಾಶತ್ತಮ ದಿನದ ನಂತರ ಶಿಷ್ಯರು ಕರ್ತನ ಪ್ರತಿನಿಧಿಗಳಾಗಿ ಅವರಲ್ಲಿ ಅನೇಕರನ್ನು ಭೇಟಿಮಾಡಿ ಪರಲೋಕದ ರೊಟ್ಟಿಯನ್ನು ತಂದುಕೊಟ್ಟಿದ್ದರು. ಈಗಲೂ ಇದು ಹೀಗೆಯೇ ಇರುವುದು, ಕಾರಣ ಕರ್ತನು ತನ್ನವರನ್ನು ಕಂಡುಕೊಂಡು ಅವರನ್ನು ಪೋಷಿಸಿ ಬಲಪಡಿಸುವನು, ಏಕೆಂದರೆ "ತನ್ನವರು ಯಾರಾರೆಂಬುದನ್ನು ಕರ್ತನು ತಿಳಿದಿದ್ದಾನೆಂತಲೂ.." (2 ತಿಮೋಥೆ 2:19) ಹಸಿದವರಾದ ಜನಸಮೂಹಕ್ಕೆ ಪ್ರಸ್ತುತ ಸತ್ಯವನ್ನು ಕೊಂಡುತರಲು ಕರ್ತನು ಎಂದೂ ನಮ್ಮನ್ನು ಅವಲಂಬಿಸಿರುವುದಿಲ್ಲ; ಆದರೆ ಅದು ನಮ್ಮ ಪ್ರಯೋಜನಕ್ಕಾಗಿಯೇ ಆತನೊಡನೆ ಜೊತೆಗೆಲಸದವರಾಗುವ ಸೌಭಾಗ್ಯವನ್ನು ನಮಗೆ ನೀಡಿರುವನು. ಇದನ್ನು ನಾವು ಹೇಗೆ ಪ್ರಶಂಶೆಮಾಡಬೇಕು! ನಾವು ಹೊಂದಿರುವ ಎಷ್ಟೇ ಅಲ್ಪ ಪ್ರಮಾಣದ ಜವೆಗೋದಿ ರೊಟ್ಟಿ, ಎಷ್ಟೇ ಸಣ್ಣ ಮೀನು, ಎಂಥಾ ಹಣ ಮತ್ತು ಕಾಸುಗಳು, ಸಮಯ ಮತ್ತು ಪ್ರಭಾವಗಳು ಇದ್ದಲ್ಲಿ ಅವುಗಳನ್ನು ಕರ್ತನ ಕಾರ್ಯದಲ್ಲಿ ಬಳಸಲು ನಾವು ಎಂಥಾ ಅಭಿಲಾಷೆಯುಳ್ಳವರಾಗಿರಬೇಕು!

ನಾವು ಅನುಸರಿಸುವ ಈ ವಿಧಾನವು ಸತ್ಯವೇದದಲ್ಲಿ ಯಜ್ಞವೆಂಬ ಹೆಸರಿನಿಂದ ಗೌರವಿಸಲ್ಪಟ್ಟಿದ್ದರೂ ನಿಜವಾಗಿ ಈ ಸನ್ನಿವೇಶಗಳನ್ನು ಸರಿಯಾಗಿ ಅರ್ಥಮಾಡಿಕೊಂಡಿರುವವರಿಗೆ, ಇದಕ್ಕೆ ತದ್ವಿರುದ್ಧವಾಗಿ, ಈ ಸಂಗತಿಯು ಒಂದು ಆಶೀರ್ವಾದ ಒಂದು ಸೌಭಾಗ್ಯ ಒಂದು ಅನುಗ್ರಹವಾಗಿ ಕಂಡುಬಂದಿರುವದು. ಈಗಿನ ಕಾಲದಲ್ಲಿ ಪ್ರಕಟವಾಗಿರುವ ಪ್ರಸ್ತುತ ಸತ್ಯದಲ್ಲಿ ಆನಂದಪಡುತ್ತಿರುವವರೆಲ್ಲರೂ ಈ ಸೌಭಾಗ್ಯವನ್ನು ಬಹು ಶ್ರೇಷ್ಠವೆಂದು ಎಣಿಸಿರುವುದಕ್ಕೆ ನಮಗೆ ಸಂತೋಷವಾಗುತ್ತದೆ. ಜಾತ್ರೆಪ್ರದರ್ಶನಗಳ ಮೂಲಕ ಲೋಕದವರಲ್ಲಿ ಹಣ ಸಹಾಯಕ್ಕಾಗಿ ಯಾವ ಕೋರಿಕೆಗಳನ್ನಾಗಲೀ ಹಾಕದೆ ಅಥವಾ ಪುಟ್ಟಿಗಳ ಮೂಲಕ ಯಾವ ಹಣಸಂಗ್ರಹವನ್ನಾಗಲೀ ಮಾಡದೆಯೇ ಸುವಾರ್ತಾ ಸುಗ್ಗಿಯ ವಿಷಯವಾದ ಸಂದೇಶವು ಸಾರಲ್ಪಡುವ ವಿಧಾನಗಳಲ್ಲಿ ಎಂದೂ ಕೊರತೆ ಕಂಡುಬರದಿರುವುದು ಸತ್ಯವನ್ನು ವಿರೋಧಿಸುವವರಿಗೆ ಹಾಗೂ ಇದರಲ್ಲಿ ಅಲ್ಪ ಆಸಕ್ತಿಯುಳ್ಳವರಿಗೆ ಸತತವಾಗಿ ಆಶ್ಚರ್ಯಪಡುವ ಸಂಗತಿಯಾಗಿರುವುದು. ಕರ್ತನ ಆತ್ಮವು ಸತ್ಯದೊಂದಿಗೆ ಜೊತೆಗೂಡಿ ಬಂದಿರುವುದಾಗಿ ತೋರುವುದು; ಹೀಗಾಗಿ ಸತ್ಯವನ್ನು ಹೊಂದಿದವರಾಗಿದ್ದು ಕರ್ತನ ಸೇವೆಯಲ್ಲಿ ಯಾವುದೇ ವಿಧವಾದ ಪ್ರತಿಭೆಗಳನ್ನು ಪಡೆದಿರುವವರು ಇವುಗಳನ್ನು ಬಳಸಲು ಹೇಳಲಶಕ್ಯವಾದ ಸಂತೋಷದಿಂದ ಉಲ್ಲಾಸಿಸಿ ತಮಗೆ ಲಭಿಸಿರುವ ಈ ಸೌಭಾಗ್ಯಗಳಿಗಾಗಿ ಒಡೆಯನಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿರುವರು.

## "ಅವರೆಲ್ಲರೂ ಊಟಮಾಡಿ ತೃಪ್ತರಾದರು"

ಕರ್ತನು ಒದಗಿಸಿದ್ದುದು ರುಚಿಕರವಾದ ಆಹಾರವು ಮಾತ್ರವಾಗಿರದೆ ತೃಪ್ತಿ ನೀಡುವಂತದ್ದಾಗಿಯೂ ಇದ್ದು ಎಲ್ಲರೂ ಅದನ್ನು ಹೇರಳವಾಗಿ ಪಡೆದಿದ್ದರು. ಹೀಗಿದ್ದರೂ ನಾವು ವಿವೇಚನಾಪೂರ್ಣರಾಗಿ ಭಾವಿಸಿಕೊಳ್ಳಬಹುದೆಂದರೆ, ಮಸಾಲೆ ಪದಾರ್ಥ, ಸಾಂಬಾರು ಗೊಜ್ಜು ಹಾಗೂ ಕೆಡದ ಆಹಾರ, ಸಿಹಿತಿಂಡಿ ಮುಂತಾದವುಗಳನ್ನು ಧಾರಾಳವಾಗಿ ತಿನ್ನುವಂತೆ ಜವೆಗೋದಿಯ ರೊಟ್ಟಿ ಮತ್ತು ಒಣ ಮೀನಿನಿಂದ ಕೂಡಿದ ಊಟವನ್ನು ತಿನ್ನಲಾಗದು. ಬಹುಶಃ ನಮ್ಮ ಸಹಜ ಗುಣವು ನಮ್ಮನ್ನು ಹೆಚ್ಚು ವಿವೇಕಪೂರ್ಣವಾಗಿ ವರ್ತಿಸುವಂತೆ ಮಾಡಿ ನಮ್ಮ ಜೀವಿತ ಸಾಗಿಸುವುದಕ್ಕೆ ಸಾಧಾರಣವಾದ ಆಹಾರಕ್ರಮವನ್ನು ಅನುಸರಿಸಿದ್ದೇ ಆದರೆ, ನಮಗೆ ಸೂಕ್ತವಾದ ಆಹಾರ ಸೇವನೆಯ ವಿಷಯವಾಗಿ ನಾವು ತಿಳುಕೊಂಡವರಾಗಿ ಕೇವಲ ಹಸಿವನ್ನು ಸೂಕ್ತವಾಗಿ ತೀರಿಸಿಕೊಳ್ಳುವದನ್ನು ಬಿಟ್ಟು ಅದಕ್ಕಿಂತಲೂ ಅತಿಯಾಗಿ ಸೇವಿಸುವುದನ್ನು ಆಶಿಸಿ ಆಹಾರವನ್ನು ದುರುಪಯೋಗಮಾಡದವರಾಗುತ್ತೇವೆ.

ಆ ದೊಡ್ಡ ಗುಂಪು ಕೆಲವು ವಿಧದಲ್ಲಿ ಸಾವಿರ ವರುಷದ ಆಳ್ವಿಕೆಯ ಕಾಲದ ಲೋಕವನ್ನು ಚಿತ್ರಿಸುತ್ತದೆ. ಈಗ ವಿಶೇಷ ಶಿಷ್ಯರಾಗಿ ಕರ್ತನನ್ನು ಹಿಂಬಾಲಿಸುವವರು ಆಗ ಕರ್ತನು ಹೇರಳವಾಗಿ ಒದಗಿಸುವ ನಿತ್ಯಜೀವ ಕೊಡುವ ರೊಟ್ಟಿಯನ್ನು ಭೂಲೋಕದ ಸಮಸ್ತ ಕುಲಗಳಿಗೆ ಹಂಚುವ ಸೌಭಾಗ್ಯವನ್ನು ಪಡೆಯುವರು. ಅವರೆಲ್ಲರೂ ಸಂತೃಪ್ತರಾಗಿ ಪುನಶ್ಚೇತನಹೊಂದಿ ಬಲಗೊಳ್ಳುವರು. ಲೋಕವು ಈ ವಿಷಯದಲ್ಲಿ ಈಗ ಎಷ್ಟು ಕೊರತೆಯಲ್ಲಿರುವುದೆಂದು ನಾವು ಈಗ ಕಾಣುವಂತೆಯೇ, ದೇವರು ಮಾಡಿರುವ ಸಮೃದ್ಧವಾದ ಏರ್ಪಾಡಿನ ವಿಷಯವಾಗಿ

ಮತ್ತು ಅದನ್ನು ಪ್ರತಿಯೊಂದು ಸೃಷ್ಟಿಗೂ ಹಂಚುವ ಕಾರ್ಯದಲ್ಲಿ ನಮ್ಮ ವಿಮೋಚಕನ ಜೊತೆಯಲ್ಲಿ ಪಾಲನ್ನು ಹೊಂದುವ ವಿಷಯವಾಗಿ ತಿಳಿಯಲು ನಮ್ಮ ಹೃದಯವು ಹರ್ಷಿಸುತ್ತದೆ. ಅಲ್ಲಿ ಇಚ್ಛಿಸುವವರೆಲ್ಲರೂ ಜೀವಜಲವನ್ನು ಮತ್ತು ಜೀವದ ರೊಟ್ಟಿಯನ್ನು ತೃಪ್ತಿಪಡುವಷ್ಟು ತೆಗೆದುಕೊಳ್ಳುವರು. ಈ ಅದ್ಭುತ ಮಾಡಿದ ಮಾರನೆಯ ದಿನವೇ ನಮ್ಮ ಕರ್ತನು ಜೀವಕೊಡುವ ರೊಟ್ಟಿಯ ವಿಷಯವಾಗಿ ತನ್ನ ಉಪದೇಶವನ್ನು ನೀಡಿದ್ದನು. – ಯೋಹಾನ 6:26–58

## ಮಿಕ್ಕ ತುಂಡುಗಳೆಲ್ಲವನ್ನು ಕೂಡಿಸಿಡುವದು

ತನ್ನ ಅಪೊಸ್ತಲರನ್ನು ಜನರ ಗುಂಪು ಮಿಗಿಸಿದ ತುಂಡುಗಳನ್ನು ಕೂಡಿಸಲು ಕಳುಹಿಸಿದ್ದರಲ್ಲಿ ಕರ್ತನು ಅನುಸರಿಸಿದ ತೀವ್ರ ಮಿತವ್ಯಯದ ಬಗ್ಗೆ ನಮ್ಮ ಗಮನ ಸೆಳೆಯುತ್ತದೆ. ಇದು ನಿಜವಾಗಿಯೂ ಐದು ಸಾವಿರ ಮಂದಿ ಬೆರಳಾಡಿಸಿ ಮಿಗಿಸಿದ ತುಂಡುಗಳಿಂದ ಬದುಕುವುದನ್ನು ಅನಿವಾರ್ಯಮಾಡಿಕೊಂಡ ಆತನ ನಂಬಿಗಸ್ತರಾದ ಹನ್ನೆರಡು ಮಂದಿ ಅನುಸರಿಸಿದ ತೀವ್ರ ಮಿತವ್ಯಯವಾಗಿತ್ತು. ಜನರ ಗುಂಪು ಮಿಗಿಸಿದ ಸಣ್ಣ ತುಣುಕುಗಳನ್ನು ಪಕ್ಷಿಗಳು ಮತ್ತು ಅಳಿಲುಗಳು ತಿನ್ನಲು ಬಿಡುವುದಾಗಿ ಭಾವಿಸುವುದು ಬಹು ಉಚಿತ ವಾದುದೆಂದು ತೋರುವುದು ಮತ್ತು ಅಪೊಸ್ತಲರು ಕಲೆಹಾಕಿದ ಆ ತುಣುಕುಗಳು ನಮ್ಮ ಕರ್ತನಿಂದ ಮುರಿಯಲ್ಪಟ್ಟದ್ದಾಗಿದ್ದವು. ಆತನು ರೊಟ್ಟಿಯನ್ನು ಮೀನನ್ನು ಮುರಿಯುತ್ತಿದ್ದಂತೆಯೇ ಅವು ಅಧಿಕವಾಗಿ ದ್ವಿಗುಣಗೊಳ್ಳುತ್ತಿದ್ದು ಆತನು ಅವುಗಳನ್ನು ಶಿಷ್ಯರಿಗೆ ಒದಗಿಸುತ್ತಾ ಒದಗಿಸುತ್ತಾ ಬಂದಂತೆ ಶಿಷ್ಯರು ಅವುಗಳನ್ನು ಜನರ ಗುಂಪುಗಳಿಗೆ ಕೊಂಡೊಯ್ಯುತ್ತಿದ್ದರು. ಅಲ್ಲಿ ಮಿಕ್ಕದ್ದು ಹನ್ನೆರಡು ಪುಟ್ಟಿಗಳನ್ನು ತುಂಬುವಷ್ಟು ಕರ್ತನಿಗೆ ದೊರಕಿ ಎಲ್ಲಾ ವಿಧದಲ್ಲಿಯೂ ಉತ್ತಮವಾಗಿಯೂ ಶುಚಿಯಾಗಿಯೂ ಇದ್ದು ಮುಂದೆ ಬಳಸಲು ಉಪಯುಕ್ತವಾಗಿತ್ತು.

ಮಿತವ್ಯಯದ ವಿಷಯವಾದ ಪಾಠವು ನಮ್ಮೆಲ್ಲರಿಗೂ ಸೂಕ್ತವಾಗಿರುವದು; ಆದರೂ ಲೋಕದ ಅತಿ ಬಡವರಿಗೆ ಮತ್ತು ಕರ್ತನ ಜನರಿಗೆ ಈ ಪಾಠವು ಅತ್ಯವಶ್ಯಕವಾಗಿರುವುದು. ತನಗೆ ಸೃಷ್ಟಿಮಾಡುವ ಶಕ್ತಿಯು ಯಥೇಚ್ಛವಾಗಿದ್ದರೂ ಕರ್ತನು ತನ್ನ ಶಿಷ್ಯರು ಮಿತವ್ಯಯ ತತ್ವವನ್ನು ಗಮನಿಸಿ ಅದನ್ನು ಅಭ್ಯಾಸಿಸ ಬೇಕೆಂದು ಬಯಸಿದ್ದನು. ತನ್ನಲ್ಲಿದ್ದ ಬಲಾಐಶ್ವರ್ಯವು ತನ್ನವ ರಲ್ಲಿ ದುಂದುಗಾರಿಕೆಯನ್ನು ಉಂಟುಮಾಡಕೂಡದಾಗಿತ್ತು. ಕರ್ತನ ಅನುಯಾಯಿಗಳಲ್ಲಿ ಯಾವುದೇ ವಿಧದಲ್ಲಿನ ದುಂದು ಗಾರಿಕೆಗೆ ಅವಕಾಶವಿರಬಾರದೆಂಬುದು ಕಾಣಬರುತ್ತದೆ. ನಮ್ಮಲ್ಲಿ ಅಗತ್ಯಕ್ಕಿಂತಲೂ ಹೆಚ್ಚಿನ ಪದಾರ್ಥಗಳು ಇದ್ದಲ್ಲಿ ಬೇರೆಯವರಿಗೆ ಅದು ಅಗತ್ಯಕ್ಕಿಂತಲೂ ಕಡಿಮೆ ಇರಬಹುದಲ್ಲವೇ? ನಾವು ಕರ್ತನ ಮನೋಭಾವವನ್ನು ಹೊಂದಿದ್ದಲ್ಲಿ ನಾವೂ ಸಹ ಉಪಕಾರ ಮತ್ತು ಉದಾರ ಮನೋಭಾವಗಳನ್ನೂ ಪಡೆದಿರು ತ್ತೇವೆ ಮತ್ತು ನಾವು ಆತನ ಗುಣಲಕ್ಷಣಗಳಿಗೆ ಸಮೀಪ ಬಂದಷ್ಟೂ ಈ ಮನೋಭಾವಗಳು ಅಧಿಕವಾಗಿ ಬೆಳೆಯುತ್ತಾ ಹೋಗುವದು.

ಇದೇ ಪಾಠವು ನಮಗೂ ಸುವಾರ್ತಾ ಸುಗ್ಗಿಯ ಕಾರ್ಯದ ಸಂಬಂಧದಲ್ಲಿ ಅನ್ವಯವಾಗುವಂತೆ ತೋರುತ್ತದೆ. ಕೆಲವು ಸಾರಿ ನಮಗೆ ನಾವು ಹೇಳಿಕೊಳ್ಳುವುದು: "ನಮ್ಮ ಕರ್ತನು ಐಶ್ವರ್ಯವಂತನಾಗಿರುವಲ್ಲಿ ಆತನ ಹಿಂಬಾಲಕರಲ್ಲಿ ಯಾರಾದರೂ ಏಕೆ ಬಡವರಾಗಿರಬೇಕು?" ನಿಸ್ಸಂಶಯವಾಗಿ ಅದು ನಮ್ಮ ಪ್ರಯೋಜನಕ್ಕಾಗಿಯೇ ಕರ್ತನು ಸ್ಪಷ್ಟವಾಗಿ ತನ್ನ ಕೆಲಸಗಳಿಗೆ ಎಷ್ಟು ಅಗತ್ಯವಿರುವುದಾಗಿ ತೋರುವುದೋ ಅಷ್ಟನ್ನು ಮಾತ್ರ ಒದಗಿಸುವನು ಹಾಗೂ ಅದಕ್ಕಿಂತಲೂ ಹೆಚ್ಚಿಗೆ ಇರುವುದಿಲ್ಲ. ಈ ಸಾಮ್ಯದಲ್ಲಿರುವ ಪಾಠವೇನೆಂದರೆ, ಆತನ ಹಿಂಬಾಲಕರಾದ ನಮಗೆ ತನ್ನ ಸೇವೆಯ ಸಂಬಂಧದಲ್ಲಿ ಯಜ್ಞವನ್ನಾಗಿ ಅರ್ಪಿಸಿ ಕೊಳ್ಳುವ ಸದವಕಾಶಗಳನ್ನು ನೀಡಿ ಹೀಗೆ ನಮ್ಮನ್ನು ಆಶೀರ್ವದಿಸಿ ನಾವು ನಮಗೆ ದೊರೆತ ಸವಲತ್ತು ಸೌಲಭ್ಯಗಳ ಬಗ್ಗೆ ಹೆಚ್ಚು ಹೆಚ್ಚಾಗಿ ಮನವರಿಕೆಮಾಡಿಕೊಳ್ಳುತ್ತಾ ಬರುವುದನ್ನು ಕರ್ತನು ಬಯಸುವನೆಂಬುದು. ಬಹುಶಃ ಸುವಾರ್ತಾ ಸುಗ್ಗಿಯ ಕಾರ್ಯವೂ ಸಹ ಐಶ್ವರ್ಯವಂತರಾದ ಮಿತ್ರರಿಂದ ಹಾಗು ಯಥೇಚ್ಛವಾದ ಹಣದಿಂದ ಆಶೀರ್ವದಿಸಲ್ಪಟ್ಟಲ್ಲಿ ಇದು ಅಧಿಕ ಪ್ರಾಪಂಚಿಕ ಮನೋಭಾವ, ಅಧಿಕ ಹೆಮ್ಮೆ ಹಾಗೂ ಬಾಹ್ಯ ತೋರಿಕೆಗಳನ್ನು ಬೆಳೆಯುವಂತಾಗ ಮಾಡುವದು; ಇದು ಈ ಕಾರ್ಯೋದ್ದೇಶಗಳಿಗೆ ಅನಾನುಕೂಲಕರವಾಗಿದ್ದು ನಮ್ಮ ಸ್ವಂತ ಅಭಿವೃದ್ಧಿಗೆ ಸಹಾಯಕವಾಗಿರುವುದಿಲ್ಲ. ನಮಗಿರುವವುಗಳಲ್ಲಿ ಅಂದರೆ ನಮ್ಮ ಕರ್ತನ ಆಶೀರ್ವಾದದಿಂದ ಕೂಡಿದ ಸಾಧಾರಣವಾದ ರೊಟ್ಟಿ ಮತ್ತು ಮೀನುಗಳೊಂದಿಗೆ ನಾವು ಸಂತೃಪ್ತರಾಗಿರೋಣ. ನಮಗೆ ಕೊಡಲ್ಪಟ್ಟ ಮನೇವಾರ್ತೆಯ ಕೆಲಸದ ವರದಿಯನ್ನು ನಂಬಿಗಸ್ತರಾಗಿ ಒಪ್ಪಿಸುವವರಾಗುವಂತೆ (ರೊಟ್ಟೀ ಮೀನಿನ) ತುಂಡುಗಳ ಬಗ್ಗೆಯೂ ಸಹ ಜಾಗರೂಕರಾಗಿರೋಣ. ಹೀಗೆ ನಮ್ಮ ವಶಕ್ಕೆ ಒಪ್ಪಿಸಲ್ಪಟ್ಟ ತಲಾಂತುಗಳನ್ನು ಭೂಮಿಯಲ್ಲಿ ಮುಚ್ಚಿಡದಂತೆ ಮಾಡಿ ನಮ್ಮ ಅತ್ಯುತ್ತಮವಾದ ಸಾಮರ್ಥ್ಯಗಳು ನಮ್ಮ ಅರಸನ ಮಹಿಮೆಗಾಗಿ ಬಳಸಲ್ಪಡುವಂತೆ ನೋಡಿಕೊಳ್ಳುವವರಾಗೋಣ.

ಸ್ವರ್ಣಮಯವಾದ ನಮ್ಮ ಪಠ್ಯಭಾಗವು ಪ್ರಕಟಿಸಿರುವಂತೆ, ಪರಲೋಕದಲ್ಲಿರುವ ನಮ್ಮ ತಂದೆಗೆ ನಾವು ಪ್ರತಿಯೊಂದು ಒಳ್ಳೆಯ ಸಂಗತಿಗಳಿಗಾಗಿ ಅಂದರೆ ಜೀವ ಕೊಡುವ ರೊಟ್ಟಿಯಾದ ಯೇಸುವಿಗಾಗಿ, ಆತನು ದಯಪಾಲಿಸಿರುವ ರಕ್ಷಣೆಗಾಗಿ, ಮತ್ತು ಆತನ ಮೂಲಕವಾಗಿ ಬರಲಿರುವ ದೇವರ ರಾಜ್ಯದ ಆಶೀರ್ವಾದ ಗಳಿಗಾಗಿ ಅಲ್ಲದೆ ಆತನಿಗೆ ಸಹಕಾರಿಗಳಾಗುವ ಭಾಗ್ಯಕ್ಕಾಗಿ ಕೃತಜ್ಞತೆ ಯನ್ನು ಸಲ್ಲಿಸಬೇಕು. ಸಮಸ್ತವೂ ತಂದೆಯದಾಗಿದ್ದು ಮತ್ತು ಸಮಸ್ತ ಕೃಪಾನುಗ್ರಹಗಳೂ ಮಗನಿಂದ ಮತ್ತು ಆತನ ಮೂಲಕವಾಗಿರುವದು. ಕಲ್ಪಿಸಿಕೊಳ್ಳಬಹುದಾದ ಅತ್ಯಲ್ಪ ವಿಷಯಗಳಲ್ಲಿ ಕೃತಜ್ಞತಾಭಾವವು ಒಂದಾಗಿದ್ದು ಅದು ಸ್ವಾರ್ಥತ್ಯಾಗ ಮನೋಭಾವದ ಸಹಿತವಾದ ಪರಿಪೂರ್ಣ ಪ್ರೀತಿಯ ಎಡೆಗೆ ನಡೆಸುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಗೆನ್ನಜರೇತ್; ಗಲಿಲಾಯದ ಈಶಾನ್ಯಭಾಗ | ಯೇಸುವಿಗೆ ಕಿರೀಟ ತೊಡಿಸುವ ಯತ್ನ, ಆತನು ಸಮುದ್ರದ ಮೇಲೆ ನಡೆಯುವುದು, ಸ್ವಸ್ಥಪಡಿಸುವುದು | 14:22–36 | 6:45–56 | –– | 6:14–21 |

## ಮತ್ತಾಯ 14:22–36

ಇದು ಆದ ಕೂಡಲೆ ಆತನು ತನ್ನ ಶಿಷ್ಯರಿಗೆ–ನಾನು ಈ ಜನರ ಗುಂಪುಗಳನ್ನು ಕಳುಹಿಸಿಬಿಡುವಷ್ಟರೊಳಗೆ ನೀವು ದೋಣಿಯನ್ನು ಹತ್ತಿ ಮುಂದಾಗಿ ಆಚೇ ದಡಕ್ಕೆ ಹೋಗಿರಿ ಎಂದು ಬಲವಂತ ಮಾಡಿದನು. ಆತನು ಜನರ ಗುಂಪುಗಳನ್ನು ಕಳುಹಿಸಿಬಿಟ್ಟ ಮೇಲೆ ಪ್ರಾರ್ಥನೆಮಾಡುವದಕ್ಕೆ ಏಕಾಂತವಾಗಿ ಬೆಟ್ಟವನ್ನು ಹತ್ತಿದನು. ಮತ್ತು ಹೊತ್ತು ಮುಳುಗಿದ ಮೇಲೆ, ಒಬ್ಬನೇ ಅಲ್ಲಿ ಇದ್ದನು. ಅಷ್ಟರಲ್ಲಿ ದೋಣಿಯು ಭೂಮಿಗೆ ಬಹು ದೂರ ಹೋಗಿತ್ತು. ಮತ್ತು ಎದುರುಗಾಳಿ ಬೀಸುತ್ತಿದ್ದದರಿಂದ ತೆರೆಗಳ ಬಡಿತಕ್ಕೆ ಸಿಕ್ಕಿ ಒದ್ದಾಡುತ್ತಿತ್ತು. ರಾತ್ರಿಯ ನಾಲ್ಕನೆಯ ಜಾವದಲ್ಲಿ ಯೇಸು ಸಮುದ್ರದ ಮೇಲೆ ನಡೆದು ಅವರ ಕಡೆಗೆ ಬಂದನು. ಸಮುದ್ರದ ಮೇಲೆ ನಡೆಯುವ ಆತನನ್ನು ಶಿಷ್ಯರು ನೋಡಿ ಭೂತವೆಂದು ತತ್ತರಿಸಿ ಭಯದಿಂದ ಕೂಗಿದರು. ಕೂಡಲೆ ಯೇಸು ಮಾತಾಡಿ ಅವರಿಗೆ–ಧೈರ್ಯವಾಗಿರಿ; ನಾನು; ಅಂಜಬೇಡಿರಿ ಎಂದು ಹೇಳಿದನು. ಅದಕ್ಕೆ ಪೇತ್ರನು–ಸ್ವಾಮೀ, ನೀನೇಯಾದರೆ ನನಗೆ ನೀರಿನ ಮೇಲೆ ನಡೆದು ನಿನ್ನ ಬಳಿಗೆ ಬರುವದಕ್ಕೆ ಅಪ್ಪಣೆ ಕೊಡು ಅನ್ನಲು ಆತನು–ಬಾ ಅಂದನು. ಆಗ ಪೇತ್ರನು ಯೇಸುವಿನ ಬಳಿಗೆ ಹೋಗುವದಕ್ಕೆ ದೋಣಿಯಿಂದ ಇಳಿದು ನೀರಿನ ಮೇಲೆ ನಡೆದನು. ಆದರೆ ಗಾಳಿಯನ್ನು ನೋಡಿ ಭಯಪಟ್ಟು ಮುಣುಗುತ್ತಾ–ಸ್ವಾಮೀ, ನನ್ನನ್ನು ಕಾಪಾಡು ಎಂದು ಕೂಗಿಕೊಂಡನು. ಆ ಕ್ಷಣವೇ ಯೇಸು ಕೈಚಾಚಿ ಅವನನ್ನು ಹಿಡಿದು–ಅಲ್ಪ ವಿಶ್ವಾಸಿಯೇ, ಯಾಕೆ ಸಂದೇಹ ಪಟ್ಟಿ ಎಂದು ಹೇಳಿದನು. ತರುವಾಯ ಅವರು ದೋಣಿಯನ್ನು ಹತ್ತಿದ ಮೇಲೆ ಗಾಳಿ ನಿಂತುಹೋಯಿತು. ಆಗ ದೋಣಿಯಲ್ಲಿದ್ದವರು–ನಿಜವಾಗಿ ನೀನು ದೇವಕುಮಾರನು ಎಂದು ಹೇಳಿ ಅತನಿಗೆ ನಮಸ್ಕರಿಸಿದರು. ಅವರು ಸಮುದ್ರವನ್ನು ದಾಟಿ ಗೆನೆಜರೇತ್ ದೇಶದ ದಡಕ್ಕೆ ಮುಟ್ಟಿದರು. ಆ ಸ್ಥಳದವರು ಆತನ ಗುರುತನ್ನು ಹಿಡಿದು ಆ ಸುತ್ತಲಿನ ಸೀಮೆಗೆಲ್ಲಾ ಹೇಳಿಕಳುಹಿಸಿ ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನು ಆತನ ಬಳಿಗೆ ಕರತರಿಸಿ ಆತನನ್ನು–ನಿನ್ನ ಉಡುಪಿನ ಗೊಂಡೆಯನ್ನಾದರೂ ಮುಟ್ಟಗೊಡಿಸಬೇಕೆಂದು ಬೇಡಿಕೊಂಡರು. ಮುಟ್ಟಿದವರೆಲ್ಲರೂ ಸ್ವಸ್ಥರಾದರು.

## ಮಾರ್ಕ 6:45–56

ಇದಾದ ಕೂಡಲೆ ಆತನು ತನ್ನ ಶಿಷ್ಯರಿಗೆ–ನಾನು ಈ ಜನರ ಗುಂಪನ್ನು ಕಳುಹಿಸಿಬಿಡುವಷ್ಟರೊಳಗೆ ನೀವು ದೋಣಿಯನ್ನು ಹತ್ತಿ ಮುಂದಾಗಿ ಆಚೇ ದಡಕ್ಕೆ ಬೇತ್ಸಾಯಿದಕ್ಕೆ ಹೋಗಿರಿ ಎಂದು ಬಲವಂತಮಾಡಿದನು. ಆತನು ಜನರಿಗೆ ಅಪ್ಪಣೆಕೊಟ್ಟನಂತರ ಪ್ರಾರ್ಥನೆಮಾಡುವದಕ್ಕಾಗಿ ಬೆಟ್ಟಕ್ಕೆ ಹೋದನು. ಹೊತ್ತು ಮುಳುಗಿದ ಮೇಲೆ ದೋಣಿಯು ಸಮುದ್ರದ ಮೇಲೆ ನಡುವೆ ಇತ್ತು; ಯೇಸು ಒಬ್ಬನೇ ದಡದಲ್ಲಿದ್ದನು. ಎದುರು ಗಾಳಿ ಬೀಸುತ್ತಿದ್ದರಿಂದ ಶಿಷ್ಯರು ಹುಟ್ಟು ಹಾಕಿ ಹಾಕಿ ಒದ್ದಾಡುವದನ್ನು ಆತನು ಕಂಡು ಹೆಚ್ಚುಕಡಿಮೆ ರಾತ್ರಿಯ ನಾಲ್ಕನೆಯ ಜಾವದಲ್ಲಿ ಸಮುದ್ರದ ಮೇಲೆ ನಡೆದು ಅವರ ಕಡೆಗೆ ಬಂದು ಅವರನ್ನು ದಾಟಿ ಮುಂದಕ್ಕೆ ಹೋಗಬೇಕೆಂದಿದ್ದನು. ಸಮುದ್ರದ ಮೇಲೆ ನಡೆಯುವ ಆತನನ್ನು ಅವರು ಕಂಡು ಭೂತವೆಂದು ಭಾವಿಸಿ ಅಬ್ಬರಿಸಿ ಕೂಗಿದರು; ಅವರೆಲ್ಲರೂ ಆತನನ್ನು ನೋಡಿ ತತ್ತರಿಸಿದರು. ಆತನು ಕೂಡಲೆ ಅವರನ್ನು ಮಾತಾಡಿಸಿ ಅವರಿಗೆ–ಧೈರ್ಯವಾಗಿರಿ; ನಾನು; ಅಂಜಬೇಡಿರಿ ಎಂದು ಹೇಳಿದನು. ತರುವಾಯ ಆತನು ದೋಣಿಯನ್ನು ಹತ್ತಿ ಅವರ ಬಳಿಗೆ ಬಂದ ಮೇಲೆ ಗಾಳಿನಿಂತುಹೋಯಿತು. ಆಗ ಅವರು ತಮ್ಮೊಳಗೆ ಬಹಳವಾಗಿ ಬೆರಗಾದರು. ಯಾಕೆಂದರೆ ಅವರು ರೊಟ್ಟಿಯ ವಿಷಯವಾದ ಮಹತ್ಕಾರ್ಯವನ್ನು ಗ್ರಹಿಸಲಿಲ್ಲ; ಅವರ ಮನಸ್ಸು ಕಲ್ಲಾಗಿತ್ತು. ಅವರು ಸಮುದ್ರವನ್ನು ದಾಟಿ ಗೆನೆಜರೇತ್ ದೇಶದ ದಡಕ್ಕೆ ಮುಟ್ಟಿ ದೋಣಿಯನ್ನು ಕಟ್ಟಿದರು. ಅವರು ದೋಣಿಯಿಂದ ಇಳಿದ ಕೂಡಲೆ ಜನರು ಆತನ ಗುರುತನ್ನು ಹಿಡಿದು ಆ ಸೀಮೆಯಲ್ಲೆಲ್ಲಾ ಓಡಾಡುತ್ತಾ ಮೈಯಲ್ಲಿ ನೆಟ್ಟಗಿಲ್ಲದವರನ್ನು ದೋಲಿಯ ಮೇಲೆ ಹಾಕಿಕೊಂಡು ಆತನು ಎಲ್ಲೆಲ್ಲಿ ಇದ್ದಾನೆಂದು ಕೇಳಿದರೋ ಅಲ್ಲಲ್ಲಿಗೆ ತೆಗೆದುಕೊಂಡು ಹೋದರು. ಆತನು ಯಾವ ಗ್ರಾಮಗಳಿಗೂ ಯಾವ ಊರುಗಳಿಗೂ ಹೋದನೋ ಅಲ್ಲಿಯವರು ರೋಗಿಗಳನ್ನು ಪೇಟೆಗಳಲ್ಲಿ ಇಟ್ಟು–ನಿನ್ನ ಉಡುಪಿನ ಗೊಂಡೆಯನ್ನಾದರೂ ಮುಟ್ಟಗೊಡಿಸಬೇಕೆಂದು ಆತನನ್ನು ಬೇಡಿಕೊಂಡರು; ಆತನನ್ನು ಮುಟ್ಟಿದವರೆಲ್ಲರೂ ಸ್ವಸ್ಥರಾದರು.

## ಯೋಹಾನ 6:14–21

ಆತನು ಮಾಡಿದ ಈ ಸೂಚಕಕಾರ್ಯವನ್ನು ಆ ಜನರು ನೋಡಿ–ಲೋಕಕ್ಕೆ ಬರಬೇಕಾದ ಪ್ರವಾದಿ ಈತನೇ ನಿಜ ಎಂದು ಹೇಳಿಕೊಂಡರು. ಆಗ ಯೇಸು–ಅವರು ಬಂದು ತನ್ನನ್ನು ಹಿಡುಕೊಂಡುಹೋಗಿ ಅರಸನನ್ನಾಗಿ ಮಾಡಬೇಕೆಂಬ ಯೋಚನೆಯಲ್ಲಿದ್ದಾರೆಂದು ತಿಳಿದುಕೊಂಡು ತಿರಿಗಿ ತಾನೊಬ್ಬನೇ ಒಂಟಿಗನಾಗಿ ಬೆಟ್ಟಕ್ಕೆ ಹೋಗಿಬಿಟ್ಟನು. ಸಂಜೆಯಾದಾಗ ಆತನ ಶಿಷ್ಯರು ಸಮುದ್ರಮಾರ್ಗವಾಗಿ ಕಪೆರ್ನೌಮಿನ ಕಡೆಗೆ ಹೊರಟರು. ಆಗಲೇ ಕತ್ತಲಾಗಿತ್ತು, ಮತ್ತು ಯೇಸು ಅವರ ಬಳಿಗೆ ಇನ್ನೂ ಬಂದಿರಲಿಲ್ಲ. ಇದಲ್ಲದೆ ಬಿರುಗಾಳಿ ಬೀಸುವದರಿಂದ ಸಮುದ್ರವು ಅಲ್ಲೋಲಕಲ್ಲೋಲವಾಗಿತ್ತು. ಹೀಗಿರಲಾಗಿ ಅವರು ಹುಟ್ಟು ಹಾಕುತ್ತಾ ಹೆಚ್ಚುಕಡಿಮೆ ಒಂದು ಹರದಾರಿ ದೂರ ಹೋದ ಬಳಿಕ ಯೇಸು ಸಮುದ್ರದ ಮೇಲೆ ನಡೆಯುತ್ತಾ ದೋಣಿಯ ಸಮೀಪಕ್ಕೆ ಬರುವದನ್ನು ನೋಡಿ ಅಂಜಿದರು. ಆದರೆ ಆತನು–ಅಂಜಬೇಡಿರಿ, ನಾನು, ಅಂದನು. ಆಗ ಆತನನ್ನು ದೋಣಿಯೊಳಗೆ ಕರಕೊಳ್ಳುವದಕ್ಕೆ ಮನಸ್ಸಾಗಿದ್ದರು; ಮತ್ತು ಆ ಕ್ಷಣವೇ ಆ ದೋಣಿಯು ಅವರು ಹೋಗಬೇಕೆಂದಿದ್ದ ಭೂಮಿಗೆ ಮುಟ್ಟಿತು.

# “ಸ್ವಾಮೀ ನನ್ನನ್ನು ಕಾಪಾಡು” ಎಂದು ಪೇತ್ರನು ಕೂಗಿಕೊಂಡನು

**ರೀಪ್ರಿಂಟ್ಸ್ ಪುಟ 4618**

## ಮತ್ತಾಯ 14:22–36

**’ಆಗ ದೋಣಿಯಲ್ಲಿದ್ದವರು–ನಿಜವಾಗಿ ನೀನು ದೇವಕುಮಾರನು ಎಂದು ಹೇಳಿ ಅತನಿಗೆ ನಮಸ್ಕರಿಸಿದರು.”**

ಬೇರೆ ಧಾರ್ಮಿಕ ಗ್ರಂಥಗಳಂತಲ್ಲದೆ ಸತ್ಯವೇದವು ತನ್ನ ಮಹಾ ಪುರುಷರ ವಿಷಯವಾಗಿ ನಗ್ನ ಸತ್ಯವನ್ನೇ ಹೇಳುತ್ತದೆ. ಇಂಥ ಅಧ್ಯಯನವು ಭಕ್ತನಾದ ಪೇತ್ರನ ಸಹಜ ಪ್ರವೃತಿಯ ವಿಷಯವಾಗಿ ಆತನ ಬಲ ಮತ್ತು ಬಲಹೀನತೆಗಳೆರಡರ ಬಗ್ಗೆ ಒತ್ತಿಹೇಳುತ್ತದೆ. ಇಲ್ಲಿ ಚಿತ್ರಸಲಾದ ಗುಣವು ಬೇರೆ ಸನ್ನಿವೇಶಗಳಲ್ಲಿ ಪ್ರದರ್ಶಿತವಾಗಿದ್ದಂಥ ಅದೇ ಘನತೆಯೂ ಧೀರತೆಯೂ ಉಳ್ಳದ್ದಾದರೂ ನಿಜವಾಗಿಯೂ ಅದು ಪ್ರಗತಿಪರವೂ ಬಡಾಯಿಯುಳ್ಳದ್ದೂ ಆಗಿತ್ತೆಂಬುದನ್ನು ನಾವು ಗುರುತಿಸಿದ್ದೇವೆ. ಸತ್ಯವೇದದ ಯಾವುದೇ ವ್ಯಕ್ತಿಗಳಲ್ಲಿನ ಗುಣದ ವರ್ಣನೆ ಮಾಡುವಾಗ ಯಾವ ಒಂದು ಬಲಹೀನತೆಯನ್ನೂ ಅದುಮಿಡುವದಾಗಲೀ ಇಲ್ಲವೇ ತೆಗೆದುಹಾಕಿದಂತಾಗಲೀ ತೋರುವುದಿಲ್ಲ. ಈ ಭಕ್ತನಾದ ಪೇತ್ರನೇ ಯೇಸುವು ತನಗೆ ಸಮೀಪಿಸುತ್ತಿರುವ ಮರಣದ ವಿಷಯವಾಗಿ ಹೇಳಿದ್ದನ್ನು ಕೇಳಿದ ನಂತರ ಒಡೆಯನನ್ನು ತರಾಟೆಗೆ ತೆಗೆದುಕೊಂಡು ಈ ರೀತಿಯಲ್ಲಿ ಮಾತನಾಡಿದ್ದಕ್ಕೆ ಗದರಿಸತೊಡಗಿ ಆತನು ನಿಜವನ್ನು ನುಡಿಯುತ್ತಿಲ್ಲವೆಂಬ ಭರವಸೆಯಿಂದ ಶಿಷ್ಯನು ಗುರಿವಿಗಿಂತಲೂ ಹೆಚ್ಚಿಗೆ ತಿಳಿದಿರುವನೆಂತಲೂ ಹೇಳಿದ್ದನು. ಇಲ್ಲಿ ಪೇತ್ರನು ಭವಿಷ್ಯದ ಬಗ್ಗೆ ತಿಳುವಳಿಕೆಯಿಲ್ಲದವನಾಗಿಯೋ ಇಲ್ಲವೇ ಇಚ್ಛಾಪೂರ್ವಕವಾಗಿ ತಪ್ಪಾಗಿ ನಿರೂಪಿಸುವವನಾಗಿಯೋ ಇದ್ದನು. ಕರ್ತನು ಈ ವಿಷಯದಲ್ಲಿ ಆತನು ವಿರೋಧಿಸುವವನಾಗಿದ್ದಾನೆಂದು ಗದರಿಸಿದ್ದುದರಲ್ಲಿ ಆಶ್ಚರ್ಯವೇನೂ ಇಲ್ಲ.

ಧೀರನಾದ ಈ ಮನುಷ್ಯನು ನಂತರದಲ್ಲಿ ತನ್ನ ಕತ್ತಿಯನ್ನು ಎಳೆದು ತನ್ನ ಒಡೆಯನನ್ನು ರಕ್ಷಿಸುವಸಲುವಾಗಿ ಮಹಾಯಾಜಕನ ಆಳಿನ ಕಿವಿಯನ್ನು ಕಡಿದಿದ್ದನು. ಇಷ್ಟೆಲ್ಲಾ ಆದರೂ ಕೇವಲ ಕೆಲವು ಗಂಟೆಗಳ ನಂತರ ಆತನು ಅವನನ್ನು (ಯೇಸುವನ್ನು) ಅಲ್ಲಗಳೆದು ತನ್ನ ವಿಷಯವಾಗಿ ಶಾಪಹಾಕಿಕೊಳ್ಳುವುದಕ್ಕೆ ತೊಡಗಿದ್ದನು. ಹೀಗಿದ್ದರೂ ಒಡೆಯನು ಆತನನ್ನು ಪ್ರೀತಿಸಿದ್ದನು; ತನ್ನಲ್ಲಿ ವಿಚಿತ್ರವಾಗಿ ಜತೆಗೂಡಿದ್ದ ತನ್ನ ದೋಷಬಲಗಳ ನಡುವೆಯೂ ಆತನು ಘನವಂತಿಕೆಯುಳ್ಳ ನಂಬಿಗಸ್ತವಾದ ಹೃದಯವನ್ನು ಹೊಂದಿದ್ದು ತಾನು ಬಡಾಯಿಕೊಚ್ಚಿಕೊಳ್ಳುವಾಗಲೂ ಹೀಗೆ ನುಡಿದಿದ್ದನು: “ಎಲ್ಲರೂ ನಿನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವುದಿಲ್ಲ...” ಭಕ್ತನಾದ ಪೇತ್ರನು ಇತರ ಶಿಷ್ಯರೊಂದಿಗೆ ಮೀನು ಹಿಡಿಯುವ ದೋಣಿಯಲ್ಲಿ ಅಲ್ಲೋಲಕಲ್ಲೋಲವಾದ ಸಮುದ್ರದ ಮೇಲಿದ್ದನೆಂದು ನಮ್ಮ ಅಧ್ಯಯನವು ತೋರಿಸಿ ಕೊಡುತ್ತದೆ. ಯೇಸುವು ಅವರೊಂದಿಗೆ ದೋಣಿಯಲ್ಲಿ ಹೋಗಲು ಒಪ್ಪದೆ ಕೆಲವು ಸಮಯ ಪ್ರಾರ್ಥನೆಮಾಡುವದಕ್ಕಾಗಿ ಪರ್ವತ ಪ್ರದೇಶಕ್ಕೆ ವಾಪಸ್ಸಾಗಿದ್ದನು. ಒಡೆಯನು ತಮ್ಮ ಬಳಿಗೆ ನಡೆದು ಬರುತ್ತಿರುವುದನ್ನು ಕಂಡಾಗ ದೋಣಿಯು ಇನ್ನೂ ಸೇರಬೇಕಾದ ಸ್ಥಳಕ್ಕೆ ತಲುಪಿರಲಿಲ್ಲ. ಮೊದಮೊದಲು ಅವರೆಲ್ಲರೂ ಭಯಭೀತರಾಗಿದ್ದರು; ಆನಂತರ ಆತನ ಮಾತಿನಿಂದ ಭರವಸೆಯು ಅವರಲ್ಲಿ ಹಿಂದಿರುಗಿ ಬಂದಿತ್ತು. ಕಡೆಯಲ್ಲಿ ಪೇತ್ರನು ಆತನ ಬಳಿಗೆ ನಡೆದು ಬರಲು ಅಪ್ಪಣೆ ಕೋರಿದ್ದನು. ಈ ಅಪ್ಪಣೆಯನ್ನು ಕೊಡಲಾಗಿತ್ತು ಮತ್ತು ಈ ಪೇತ್ರನು ತನ್ನ ನಂಬಿಕೆಯನ್ನು ಉಳಿಸಿಕೊಂಡಿದ್ದೇಯಾದಲ್ಲಿ ಆತನು ಕರ್ತನ ಬಳಿಗೆ ಸುರಕ್ಷಿತನಾಗಿ ತಲುಪಬಹುದಿತ್ತು ಎನ್ನುವುದರಲ್ಲಿ ನಾವು ಸಂದೇಹಪಡುವುದಕ್ಕಾಗದು. ಏಕೆಂದರೆ ತಾನು ಮತ್ತು ಇತರ ಶಿಷ್ಯರು ರೋಗಿಗಳನ್ನು ಗುಣಪಡಿಸು ವುದಲ್ಲಿಯೂ ಮತ್ತು ದೆವ್ವಗಳನ್ನು ಬಿಡಿಸುವುದರಲ್ಲಿಯೂ ಉಪಯೋಗಿಸಿದ ಅದೇ ಶಕ್ತಿಯು ಅವನನ್ನು ಮುಳುಗದಂತೆ ಕಾಪಾಡಲು ಪೂರ್ಣ ಸಾಮರ್ಥ್ಯವುಳ್ಳದ್ದಾಗಿತ್ತು.

## “ಅಲ್ಪವಿಶ್ವಾಸಿಯೇ, ಏಕೆ ಸಂದೇಹ ಪಟ್ಟಿ?”

ಭಕ್ತನಾದ ಪೇತ್ರನ ನಂಬಿಕೆಯು ಇತರರಿಗಿಂತಲೂ ಬಲವುಳ್ಳದ್ದಾಗಿದ್ದು ಮತ್ತು ಈ ದಿನದಲ್ಲಿ ನಮಗಿರುವುದಕ್ಕಿಂತಲೂ ಅದು ಬಲವುಳ್ಳದ್ದಾಗಿತ್ತು. ಸಮುದ್ರದ ಅಲ್ಲೋಲಕಲ್ಲೋಲದ ಮೇಲೆ ಕ್ಷಣಕಾಲ ಆತನ ಕಣ್ಣುಬಿದ್ದಾಗ ಆತನ ನಂಬಿಕೆ ವಿಫಲವಾಗ ತೊಡಗಿ ಆತನು ಮುಳುಗುವುದಕ್ಕೆ ತೊಡಗಿದನು. ಹೇಗೂ ಒಡೆಯನು ಆತನನ್ನು ಹಿಡಿದುಕೊಂಡು ಹೀಗೆ ಹೇಳಿದ್ದನು: “ಎಲೈ ಅಲ್ಪ ವಿಶ್ವಾಸಿಯೇ, ಏಕೆ ಸಂದೇಹ ಪಟ್ಟಿ?” ಆ ಸನ್ನಿವೇಶದಲ್ಲಿ ಕಲಿಯಬೇಕಿದ್ದ ಪಾಠವು ಪೂರ್ಣಗೊಂಡಿತ್ತು ಮತ್ತು ಬಿರುಗಾಳಿ ನಿಂತುಹೋಯಿತು. ನಂತರದಲ್ಲಿ ಶಿಷ್ಯರೆಲ್ಲವೂ ಈತನು ದೇವಕುಮಾರನೆಂಬುದನ್ನು ಹೊಸದಾಗಿ ಮನಗಂಡವರಾಗಿ ಗಾಳಿಯೂ ಸಮುದ್ರವೂ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ ಎಂದು ಕರ್ತನನ್ನು ನಮಸ್ಕರಿಸಿ ಆರಾಧಿಸಿದ್ದರು.

“ನಮ್ಮದಲ್ಲದ ಒಂದು ಕೈ
ನಮ್ಮ ಹೆಜ್ಜೆಗಳನ್ನೇ ಹಿಡಿದಿರುವುದು,
ನಮ್ಮದಲ್ಲದ ಒಂದು ವಾಣಿಯು
ಸಮುದ್ರತೆರೆಗಳಿಗೆ ಅಪ್ಪಣೆಮಾಡುವದು;
ಸಮುದ್ರತೆರೆಗಳಿಗೆ ಅಪ್ಪಣೆಮಾಡಿ
ನಮ್ಮ ಕಿವಿಗಳಲ್ಲಿ ಪಿಸುಗುಟ್ಟುವುದು:
ಎಲೈ ಅಲ್ಪ ವಿಶ್ವಾಸಿಯೇ
ಯಾಕೆ ಸಂದೇಹ ಪಟ್ಟಿ?”

ಎಲ್ಲರೂ ಪಾಪಿಗಳೇ. “ನೀತಿವಂತನು ಯಾರೂ ಇಲ್ಲ, ಒಬ್ಬನಾದರೂ ಇಲ್ಲ.” ಕೆಲವರಿಗೆ ತಮ್ಮ ದೋಷನಿರ್ಬಲಾವಸ್ಥೆಗಳ ಮಟ್ಟದ ಬಗ್ಗೆ ಗ್ರಹಿಕೆಯಾಗಿರುವುದಿಲ್ಲ. ಸ್ವಸ್ಥಚಿತ್ತರೆಲ್ಲರೂ ತಾವು (ದೋಷಪೂರಿತರಾದ) ಅಪರಿಪೂರ್ಣರಾಗಿದ್ದು ಮತ್ತು ಹೀಗಾಗಿ ಶ್ರೇಷ್ಠ ಸೃಷ್ಟಿಕರ್ತನಿಂದ ಮಾನ್ಯತೆಹೊಂದಲು ಯೋಗ್ಯರಲ್ಲವೆಂಬುದನ್ನು ಮನಗಂಡಿರುವರು. ತಮ್ಮ ವಿಷಯದಲ್ಲಿ ಆತನಿಂದ

(ದೇವರಿಂದ) ಅನುಗ್ರಹ ಮತ್ತು ನಿತ್ಯಜೀವ ಹೊಂದಲು ಅರ್ಹರೆಂದು ಹೇಳಿಕೊಳ್ಳಲು ಅವರಿಗೆ ಸಾಧ್ಯವಾಗದು. ತಮ್ಮ ಅನರ್ಹತೆಯ ವಿಷಯವಾದ ಇಂಥಾ ನಿಶ್ಚಿತಾಭಿಪ್ರಾಯವು ಆಳವಾಗಿ ನೆಲೆಯೂರಿದಾಗಲೇ, "ಪಾಪದ ಸಂಬಳವು ಮರಣ" ಎಂಬುದನ್ನು ಮನಗಾಣುವುದು; ಹೃದಯವು ಚುರುಕಾದಾಗಲೇ ನಿತ್ಯಜೀವದ ಬೆಲೆಯನ್ನು ಗ್ರಹಿಸಿಕೊಂಡದ್ದಾಗಿ ಕರ್ತನಿಗೆ ಈ ಅಂಧಕಾರದಿಂದ ಬಿಡಿಸಲು, ಪಾಪದ ದಾಸತ್ವದಿಂದ ಮತ್ತು ಮರಣ ದಂಡನೆಯಿಂದ ಬಿಡಿಸಲು ಕೂಗಿಕೊಳ್ಳುವುದು ಬಹು ಸಂಭವನೀಯವಾಗಿರುವುದು. ಪೇತ್ರನ ಸಂಗತಿಯಲ್ಲಿದ್ದಂತೆ, ಇಂಥವರೆಲ್ಲರಿಗೂ ರಕ್ಷಕನು ಸಹಾಯ ಹಸ್ತವನ್ನು ನೀಡಲು ಸಿದ್ಧನಿರುವನು. ಅವರು ತಮ್ಮ ಪಾಪಗಳಿಗಾಗಿ ಪಶ್ಚಾತಾಪಪಟ್ಟು ನೀತಿಯ ಕಡೆಗೆ ತಿರುಗಿಕೊಂಡದ್ದೇಯಾದರೆ ಅವನು ಅವರನ್ನು ನಿಂದಿಸಲಾರನು. ವಾಸ್ತವದಲ್ಲಿ ಆತನು ಹೇಳುವುದೆಂದರೆ, "ನೀನು ಇನ್ನೂ ಬೇಗನೆ ಏಕೆ ಬರಲಿಲ್ಲ? ನೀನು ಕೂಗಿಕೊಂಡಾಗಲೇ ನಾನು ನಿನ್ನ ಸಹಾಯಕ್ಕೆ ಬರಲು ಪೂರ್ಣಮನಸ್ಸಾಗಿದ್ದೆನು."

## (ನರಕ) ಯಾತನೆಯ ಬೆದರಿಕೆಯು ಲೋಕವನ್ನು ದೇವರೆಡೆಗೆ ತಿರುಗಿಸಲು ವಿಫಲವಾಗಿರುವುದು

ನಮ್ಮ ಪೂರ್ವಜರು ಪಾಪಿಗಳ ಮನಸ್ಸಿನಲ್ಲಿ ದೆವ್ವಗಳ ಕೈಯಿಂದ ನಿತ್ಯಯಾತನೆಯನ್ನು ಹೊಂದುವ ಚಿತ್ರಣವನ್ನು ನೀಡಬೇಕೆಂದು ಆಲೋಚಿಸುವ ಅಭ್ಯಾಸದಲ್ಲಿದ್ದರು. ಪಾಪದ ಸಂಬಳ ಮರಣ ಅಂದರೆ "ನಿತ್ಯನಾಶನ" (2 ಥೆಸಲೋನಿಕ 1:9) ಎಂದು ಸತ್ಯವೇದದಲ್ಲಿ ಹೇಳಿರುವ ದಂಡನೆಗಿಂತಲೂ ಇಂಥಾ ಚಿತ್ರಣಗಳು ಜನರನ್ನು ಪಾಪದಿಂದ ನೀತಿಯತ್ತ ಎಳೆತರುವುದಕ್ಕೆ ಹೆಚ್ಚು ಫಲಕಾರಿಯಾಗಿರುವುದೆಂದು ಅವರಿಗೆ ಕಾಣಬಂದಿತ್ತು. ಆದರೆ ಅವರು ಈ ವಿಷಯವನ್ನು ವಿಪರೀತವನ್ನಾಗಿಮಾಡಿದ್ದರು. ಅವರ ಸಂದೇಶವು ಲೋಕವನ್ನು ದೇವರ ಕಡೆಗೆ ತಿರುಗಿಸುವಲ್ಲಿ ವಿಫಲವಾಗಿತ್ತು. ಅದು ಪ್ರೀತಿಪೂರ್ಣರಾಗಿ ದೇವರ ಹೋಲಿಕೆಯಲ್ಲಿದ್ದ ಭಕ್ತರಿಗೆ ಕೇವಲ ಯಾತನೆಯನ್ನುಂಟು ಮಾಡಿತ್ತು. ಇಂಥಾ ಹೇಳಶಕ್ಯವಾದ ಯಾತನೆಯ ಜೀವದಲ್ಲಿ ಬಹುಕಾಲ ನಿಲ್ಲುವುದು ಮಾನುಷ್ಯ ಜೀವಿತಾನುಭವಗಳಿಗೆ ವಿರುದ್ಧವಾಗಿದ್ದರಿಂದ ಜನರು ಈ ವಿಷಯವಾಗಿ ಕೆಲವು ತಪ್ಪುಗಳು ಇರುವ ಸಂಭವವಿರುವುದೆಂದು ವಾದಿಸಿದರು. ಹೀಗಿರಲು ಇಂದು ಉತ್ಕೃಷ್ಟವಾದ ಭಾಷಾಂತರಗಳು ಮತ್ತು ಪುಟದಂಚಿನ ಉಲ್ಲೇಖನ ಪರಾಮರ್ಶೆಗಳು (ಮಾರ್ಜಿನಲ್ ರೆಫರೆನ್ಸಸ್) ಮುಂತಾದವುಗಳನ್ನೊಳಗೊಂಡ ನವೀನ ಸತ್ಯವೇದದ ಸಹಾಯದಿಂದ ದೇವಜನರು ದೇವರ ವಾಕ್ಯವು ನಿಜವೆಂಬುದನ್ನೂ ಮತ್ತು ಅವುಗಳನ್ನು ತಿರುಚಬಾರದೆಂಬುದರ ವಿಷಯವಾಗಿ ಅಂದರೆ ಅದು ಮರಣವೆಂದು ಹೇಳುವಾಗ ಅದನ್ನು ಯಾತನೆಯಲ್ಲಿರುವ ಜೀವವೆಂದು ಅರ್ಥೈಸ ಬಾರದೆಂಬುದರ ವಿಷಯವಾಗಿ ಅಧಿಕ ಅಧಿಕವಾದ ತಿಳುವಳಿಕೆಯನ್ನು ಹೊಂದುತ್ತಾ ಬಂದಿರುವರು.

ನಿಜವಾಗಿಯೂ ಕೆಲವರು ನಮಗೆ ಹೇಳಿರುವುದೇನಂದರೆ, ದೇವರು ನೀಡಿರುವ ಪ್ರತಿಯೊಂದು ಅವಕಾಶವನ್ನು ಮತ್ತು ರಕ್ಷಣೆಯ ವಿಷಯವಾಗಿ ಆತನು ನೀಡಿರುವ ಪ್ರಸ್ತಾಪವನ್ನು ನಿರಾಕರಿಸಿದವರ ಸ್ಥಿತಿಯು ಅಂದರೆ ಜೀವದಿಂದ ಸಂಪೂರ್ಣವಾಗಿ ಅಂಥವರನ್ನು ಅಳಿಸಿಬಿಡಲು ಆತನು (ದೇವರು) ಮಾಡಿರುವ ವಿಧಿಯು ಅಂಥವರು ಬೇರೆ ಯಾವುದೇ ಸ್ಥಿತಿಯಲ್ಲಾದರೂ ಜೀವದಲ್ಲಿ ಮುಂದುವರೆಯುದಕ್ಕಿಂತಲೂ ಬಹು ಭಯಂಕರವಾಗಿ ತಮ್ಮ ಮನಸ್ಸಿಗೆ ಕಂಡುಬರುವುದೆಂಬುದು. ಇದು ಅಧಿಕವಾಗಿ ದಿಗಿಲು ಹುಟ್ಟಿಸುವದಕ್ಕೆ ಕಾರಣವೆಂದರೆ: ನಿಸ್ಸಂಶಯವಾಗಿ ಅದು ವಿವೇಕಯುಕ್ತವುಳ್ಳದದ್ದೆನ್ನುವುದು ಮತ್ತು ಚಿಂತನಾಶೀಲರು ಇದನ್ನು ಹೆಚ್ಚು ಶ್ರದ್ಧೆಯಿಂದ ಅಂಗೀಕರಿಸಿ ಇದಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿರುವರೆಂಬುದೇ. ಈ ನಿತ್ಯನಾಶನದಿಂದಲೇ ಆದಾಮನ ಸಂತತಿಯವರೆಲ್ಲರನ್ನೂ ಬಿಡುಗಡೆ ಮಾಡಲು ರಕ್ಷಕನು ಸಿದ್ಧನಾಗಿ ನಿಂತಿರುವುದು. ಮರಣದಂಡನೆಯಿಂದ ಅಂದರೆ ಸಮಾಧಿಯಿಂದ ಮತ್ತು ಮರಣದ ಒಂದು ಭಾಗವಾಗಿರುವ ಮಾನಸಿಕ ಹಾಗೂ ಶಾರೀರಿಕ ಬಲಹೀನತೆಗಳಿಂದ ಬಿಡುಗಡೆ ಮಾಡಲು ಆತನು ಸಿದ್ಧನಿರುವುದು. ಮೊದಲ ಮನುಷ್ಯನ ಮತ್ತು ಆತನೊಡನೆ ಮರಣದಂಡನೆಯಲ್ಲಿ ಪಾಲನ್ನು ಹೊಂದಿದವರೆಲ್ಲರ ಪಾಪವನ್ನು ರದ್ದುಪಡಿಸುವದಕ್ಕೆ ಕಲ್ವಾರಿಯಲ್ಲಿನ ಯೇಸುವಿನ ಮರಣವು ಸಾಕಾಗುವಷ್ಟು ಯೋಗ್ಯತಾ ಮೌಲ್ಯವನ್ನು ಪಡೆದಿತ್ತು. ಕ್ರಿಸ್ತನ ಮರಣದ ಮೂಲಕವಾಗಿಯೇ ಹೊರತು ಪುನರುತ್ಥಾನವಾಗಲೀ ಮುಂದಿನ ಜೀವಿತವಾಗಲೀ ಇರುವುದಿಲ್ಲ.

ಕೆಲವು ಸಮಯಗಳಲ್ಲಿಯೇ, ನಂಬಿಗಸ್ತರಾದವರು ಕ್ರಿಸ್ತನೊಂದಿಗೆ ಸಹಬಾಧ್ಯರಾಗಲು "ಮೊದಲನೇ ಪುನರುತ್ಥಾನದಲ್ಲಿ" ಎದ್ದುಬರುವರು. ಆನಂತರದಲ್ಲಿ ಪ್ರಪಂಚದವರೆಲ್ಲರನ್ನು ಮರಣವೆಂಬ ನಿದ್ರೆಯಿಂದ ಎಬ್ಬಿಸುವ ಮತ್ತು ಇದರ ಜೊತೆಗೆ ಮಾನವರೆಲ್ಲರನ್ನೂ ಮೇಲಕ್ಕೆತ್ತಲು ನೇಮಿಸಿರುವ ಸಾಮಾನ್ಯವಾದ ಕಾಲವು ಬರುವದು. ಪೇತ್ರನಿಗೆ ನೀಡಿದ ನಮ್ಮ ಕರ್ತನ ಸಹಾಯವು ಸಮಸ್ತ ಲೋಕಕ್ಕೆಲ್ಲಾ ನೀಡುವ ಆತನ ವಿಶೇಷ ಸಹಾಯಕ್ಕೆ ಹೋಲಿಕೆಯಾಗಿರುವದು. ಈಗಾಗಲೇ ದೇವರ ಮಕ್ಕಳಾಗಿರುವವರಿಗೆ ಕರ್ತನ ಸಹಾಯ ಹಸ್ತವು ಇಲ್ಲದಿದ್ದಲ್ಲಿ ಅವರು ಮತ್ತೆ ಪಾಪಮಾಡುವ ಅಪಾಯದಲ್ಲಿ ಇರುವರೆಂಬುದಕ್ಕೆ ಸಹ ಇದು ನಿದರ್ಶನವಾಗಿರುವುದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಕಪೆರ್ನೌಮ್ | "ಜೀವಕೊಡುವ ರೊಟ್ಟಿ" ಎಂದು ತನ್ನನ್ನು ಗುರುತಿಸಿಕೊಂಡದ್ದು; ಹಲವು ಶಿಷ್ಯರು ಬಿಟ್ಟುಹೋದದ್ದು | -- | -- | -- | 6:22–71 |

# ಯೋಹಾನ 6:22-71

ಮರುದಿವಸ ಸಮುದ್ರದ ಆಚೇಕಡೆಯಲ್ಲಿ ನಿಂತು-ಕೊಂಡಿದ್ದ ಜನರು ಯೇಸುವನ್ನು ಹುಡುಕುತ್ತಿದ್ದರು; ಇಲ್ಲಿ ಒಂದೇ ಹಡಗು ಇದ್ದ ಹೊರತು ಬೇರೆ ದೋಣಿಯು ಇರಲಿಲ್ಲವೆಂದೂ ಶಿಷ್ಯರು ಮಾತ್ರ ಹೊರಟು ಹೋದದಲ್ಲದೆ ಯೇಸು ತನ್ನ ಶಿಷ್ಯರ ಸಂಗಡ ಆ ಹಡಗನ್ನು ಹತ್ತಲಿಲ್ಲವೆಂದೂ ಅವರಿಗೆ ತಿಳಿದಿತ್ತು. ಆದರೆ ಅಷ್ಟರೊಳಗೆ ಬೇರೆ ದೋಣಿಗಳು ತಿಬೇರಿಯದಿಂದ ಹೊರಟು ಸ್ವಾಮಿಯು ಸ್ತೋತ್ರಮಾಡಿ ಜನರಿಗೆ ರೊಟ್ಟೀ ಊಟಮಾಡಿಸಿದ ಸ್ಥಳದ ಸಮೀಪಕ್ಕೆ ಬಂದಿದ್ದವು. ಹೀಗಿರಲಾಗಿ ಯೇಸು ಇಲ್ಲಿ ಇಲ್ಲ, ಆತನ ಶಿಷ್ಯರೂ ಇಲ್ಲ ಎಂದು ಆ ಜನರು ನೋಡಿ ತಾವೇ ಆ ಸಣ್ಣ ದೋಣಿಗಳನ್ನು ಹತ್ತಿ ಯೇಸುವನ್ನು ಹುಡುಕುತ್ತಾ ಕಪೆರ್ನೌಮಿಗೆ ಬಂದರು. ಮತ್ತು ಸಮುದ್ರದ ಆಚೇಕಡೆಯಲ್ಲಿ ಆತನನ್ನು ಕಂಡುಕೊಂಡು-ಗುರುವೇ, ಯಾವಾಗ ಇಲ್ಲಿಗೆ ಬರೋಣವಾಯಿತು? ಎಂದು ಕೇಳಿದ್ದಕ್ಕೆ, ಯೇಸು ಅವರಿಗೆ-ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ನನ್ನನ್ನು ಹುಡುಕುವದು ಸೂಚಕಕಾರ್ಯಗಳನ್ನು ನೋಡಿದ್ದರಿಂದಲ್ಲ, ಆ ರೊಟ್ಟಿ ತಿಂದು ಹೊಟ್ಟೆ ತುಂಬಿಸಿಕೊಂಡದ್ದರಿಂದಲೇ. ದುಡಿಯಿರಿ; ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ; ಇಂಥ ಆಹಾರವನ್ನು ಮನುಷ್ಯಕುಮಾರನು ನಿಮಗೆ ಕೊಡುವನು; ಇದಕ್ಕಾಗಿ ತಂದೆಯಾದ ದೇವರು ಆತನನ್ನು ನೇಮಿಸಿ ಮುದ್ರೆಹಾಕಿದ್ದಾನೆ ಅಂದನು.

ಅವರು-ದೇವರಿಗೆ ಮೆಚ್ಚಿಕೆಯಾದ ಕೆಲಸಗಳನ್ನು ನಾವು ನಡಿಸಬೇಕಾದರೆ ಏನು ಮಾಡಬೇಕೆಂದು ಆತನನ್ನು ಕೇಳಿದ್ದಕ್ಕೆ ಯೇಸು-ದೇವರು ಮೆಚ್ಚುವ ಕೆಲಸ ಯಾವದಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ ಅಂದನು. ಅವರು ಆತನನ್ನು-ಹಾಗಾದರೆ ನಾವು ನೋಡಿ ನಿನ್ನ ಮಾತನ್ನು ನಂಬುವಂತೆ ಏನು ಸೂಚಕಕಾರ್ಯ ಮಾಡುತ್ತೀ? ನಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರು; ಪರಲೋಕದಿಂದ ರೊಟ್ಟಿಯನ್ನು ಅವರಿಗೆ ತಿನ್ನುವದಕ್ಕೆ ಕೊಟ್ಟನು ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ, ನೀನು ಏನು ಕೆಲಸ ನಡಿಸುತ್ತೀ? ಎಂದು ಕೇಳಿದಾಗ ಯೇಸು ಅವರಿಗೆ-ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಮೋಶೆಯು ನಿಮಗೆ ಪರಲೋಕದಿಂದ ರೊಟ್ಟಿ ಕೊಟ್ಟವನಲ್ಲ; ನನ್ನ ತಂದೆಯು ಪರಲೋಕದಿಂದ ಬರುವ ನಿಜವಾದ ರೊಟ್ಟಿಯನ್ನು ನಿಮಗೆ ಕೊಡುತ್ತಾನೆ. ದೇವರು ಕೊಡುವ ಆ ರೊಟ್ಟಿ ಯಾವದೆಂದರೆ ಪರಲೋಕದಿಂದ ಇಳಿದುಬಂದು ಲೋಕಕ್ಕೆ ಜೀವವನ್ನು ಉಂಟುಮಾಡುವಂಥದೇ ಎಂದು ಹೇಳಿದನು. ಆಗ ಅವರು-ಸ್ವಾಮೀ, ಆ ರೊಟ್ಟಿಯನ್ನು ನಮಗೆ ಯಾವಾಗಲೂ ಕೊಡು ಅನ್ನಲು ಯೇಸು ಅವರಿಗೆ-ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗು ವುದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವ ದಿಲ್ಲ. ಆದರೆ ನೀವು ನನ್ನನ್ನು ನೋಡಿದ್ದರೂ ನಂಬದೆ ಇದ್ದೀರಿ ಎಂದು ನಿಮಗೆ ಹೇಳಿದೆನಲ್ಲವೇ. ತಂದೆಯು ನನಗೆ ಕೊಡುವಂಥವರೆಲ್ಲರು ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವನನ್ನು ನಾನು ತಳ್ಳಿಬಿಡುವದೇ ಇಲ್ಲ. ನನ್ನ ಚಿತ್ತದಂತೆ ನಡೆಯುವದಕ್ಕಾಗಿ ನಾನು ಬಂದಿಲ್ಲ, ನನ್ನನ್ನು ಕಳುಹಿಸಿದಾತನ ಚಿತ್ತವನ್ನೇ ನೆರವೇರಿಸುವದಕ್ಕೆ ಪರಲೋಕದಿಂದ ಬಂದೆನು. ನನ್ನನ್ನು ಕಳುಹಿಸಿದಾತನ ಚಿತ್ತವು ಏನೆಂದರೆ ಆತನು ನನಗೆ ಕೊಟ್ಟವರಲ್ಲಿ ಒಬ್ಬನನ್ನೂ ನಾನು ಕೆಡಗೊಡಿಸದೆ ಅವನನ್ನು ಕಡೇದಿನದಲ್ಲಿ ಎಬ್ಬಿಸಬೇಕೆಂಬದೇ. ಮಗನನ್ನು ನೋಡಿ ಆತನನ್ನು ನಂಬುವ ಪ್ರತಿಯೊಬ್ಬನಿಗೆ ನಿತ್ಯಜೀವವು ಸಿಕ್ಕಬೇಕೆಂಬದೇ ನನ್ನ ತಂದೆಯ ಚಿತ್ತವಾಗಿದೆ; ಮತ್ತು ನಾನು ಕಡೇದಿನದಲ್ಲಿ ಅವನನ್ನು ಎಬ್ಬಿಸುವೆನು ಎಂದು ಹೇಳಿದನು.

ಆತನು-ಪರಲೋಕದಿಂದ ಇಳಿದುಬಂದ ರೊಟ್ಟಿ ನಾನೇ ಎಂದು ಹೇಳಿದ್ದಕ್ಕೆ ಯೆಹೂದ್ಯರು ಆತನ ವಿಷಯವಾಗಿ ಗುಣಗುಟ್ಟಿ-ಇವನು ಯೋಸೇಫನ ಮಗನಾದ ಯೇಸು ಅಲ್ಲವೇ. ಇವನ ತಂದೆತಾಯಿಗಳನ್ನು ನಾವು ಬಲ್ಲೆವಲ್ಲವೇ. ಈಗ ಇವನು ಪರಲೋಕದಿಂದ ಇಳಿದುಬಂದಿದ್ದೇನೆಂದು ಹೇಳುವುದು ಹೇಗೆ? ಅಂದರು. ಅದಕ್ಕೆ ಯೇಸು ಅವರಿಗೆ-ನಿಮ್ಮ ನಿಮ್ಮೊಳಗೆ ಗುಣಗುಟ್ಟಬೇಡಿರಿ. ನನ್ನನ್ನು ಕಳುಹಿಸಿಕೊಟ್ಟಂಥ ತಂದೆಯು ಎಳೆದ ಹೊರತು ಯಾವನೂ ನನ್ನ ಬಳಿಗೆ ಬರಲಾರನು; ಮತ್ತು ನಾನು ಅವನನ್ನು ಕಡೇದಿನದಲ್ಲಿ ಎಬ್ಬಿಸುವೆನು. ಅವರೆಲ್ಲರು ದೇವರಿಂದ ಶಿಕ್ಷಿತರಾಗಿರುವರು ಎಂದು ಪ್ರವಾದಿಗಳ ಗ್ರಂಥದಲ್ಲಿ ಬರೆದದೆ; ತಂದೆಯಿಂದ ಕೇಳಿ ಕಲಿತವರೆಲ್ಲರು ನನ್ನ ಬಳಿಗೆ ಬರುತ್ತಾರೆ. ಯಾವನಾದರೂ ತಂದೆಯನ್ನು ನೋಡಿದ್ದಾನೆಂದು ತಿಳಿಯಬೇಡಿರಿ; ದೇವರ ಬಳಿಯಿಂದ ಬಂದವನೊಬ್ಬನೇ ತಂದೆಯನ್ನು ನೋಡಿದ್ದಾನೆ. ನಂಬಿರುವವನು ನಿತ್ಯಜೀವವನ್ನು ಹೊಂದಿದ್ದಾನೆಂದು ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಜೀವಕೊಡುವ ರೊಟ್ಟಿ ನಾನೇ. ನಿಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರೂ ಸತ್ತುಹೋದರು; ಪರಲೋಕದಿಂದ ಇಳಿದುಬರುವ ರೊಟ್ಟಿ ಎಂಥದಂದರೆ ಅದನ್ನು ತಿಂದವನು ಸಾಯುವುದಿಲ್ಲ. ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು. ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು ಎಂದು ಹೇಳಿದನು.

ಆಗ ಯೆಹೂದ್ಯರು-ಇವನು ತನ್ನ ಮಾಂಸವನ್ನು ನಮಗೆ ಹೇಗೆ ತಿನ್ನುವದಕ್ಕೆ ಕೊಟ್ಟಾನು ಎಂದು ತಮ್ಮತಮ್ಮೊಳಗೆ ವಾಗ್ವಾದಮಾಡುತ್ತಿರಲು ಯೇಸು ಅವರಿಗೆ-ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೇ ಹೋದರೆ ನಿಮ್ಮೊಳಗೆ ಜೀವವಿಲ್ಲ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯಜೀವವನ್ನು ಹೊಂದಿದ್ದಾನೆ; ಮತ್ತು ನಾನು ಅವನನ್ನು ಕಡೇದಿನದಲ್ಲಿ ಎಬ್ಬಿಸುವೆನು. ಯಾಕೆಂದರೆ ನನ್ನ ಮಾಂಸವೇ ನಿಜವಾದ ಆಹಾರ, ನನ್ನ ರಕ್ತವೇ ನಿಜವಾದ ಪಾನ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನನ್ನಲ್ಲಿ ಇರುತ್ತಾನೆ; ನಾನು ಅವನಲ್ಲಿ ಇರುತ್ತೇನೆ; ಜೀವಸ್ವರೂಪನಾದ ತಂದೆಯು ನನ್ನನ್ನು ಕಳುಹಿಸಿಕೊಟ್ಟಿರಲಾಗಿ ನಾನು ತಂದೆಯಿಂದ

ಜೀವಿಸುತ್ತೇನೆ; ಅದರಂತೆ ನನ್ನನ್ನು ತಿನ್ನುವವನೇ ನನ್ನಿಂದ ಜೀವಿಸುವನು. ಪರಲೋಕದಿಂದ ಇಳಿದುಬಂದ ರೊಟ್ಟಿ ಇದೇ. ನಿಮ್ಮ ಹಿರಿಯರು ಮನ್ನಾ ತಿಂದರೂ ಸತ್ತರು; ಇದು ಹಾಗಲ್ಲ; ಈ ರೊಟ್ಟಿಯನ್ನು ತಿನ್ನುವವನು ಸದಾಕಾಲ ಜೀವಿಸುವನು ಎಂದು ಹೇಳಿದನು. ಕಪೆರ್ನೌಮಿನ ಸಭಾಮಂದಿರದಲ್ಲಿ ಉಪದೇಶ ಮಾಡುವಾಗ ಇದನ್ನು ಹೇಳಿದನು.

ಆತನ ಶಿಷ್ಯರಲ್ಲಿ ಅನೇಕರು ಇದನ್ನು ಕೇಳಿ–ಇದು ಕಠಿಣವಾದ ಮಾತು, ಇದನ್ನು ಯಾರು ಕೇಳಾರು? ಅಂದು ಕೊಂಡರು. ಯೇಸು ತನ್ನ ಶಿಷ್ಯರು ಇದಕ್ಕೆ ಗುಣುಗುಟ್ಟುತ್ತಾರೆಂದು ತನ್ನಲ್ಲಿ ತಿಳುಕೊಂಡು ಅವರಿಗೆ–ಈ ಮಾತಿನಿಂದ ನಿಮಗೆ ಬೇಸರವಾಯಿತೋ? ಹಾಗಾದರೆ ಮನುಷ್ಯಕುಮಾರನು ತಾನು ಮೊದಲು ಇದ್ದಲ್ಲಿಗೆ ಏರಿಹೋಗುವದನ್ನು ನೀವು ನೋಡಿದರೆ ಏನನ್ನುವಿರಿ? ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿದ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ. ಆದರೆ ನಿಮ್ಮಲ್ಲಿ ಕೆಲವರು ನಂಬದವರಾಗಿದ್ದಾರೆ ಅಂದನು. ನಂಬದವರು ಇಂಥವರು, ತನ್ನನ್ನು ಹಿಡುಕೊಡುವವನು ಇಂಥವನು ಎಂಬದು ಯೇಸುವಿಗೆ ಮೊದಲಿನಿಂದ ತಿಳಿದಿತ್ತು. ಮತ್ತು ಆತನು–ತಂದೆಯ ಅನುಗ್ರಹವಿಲ್ಲದೆ ಯಾರೂ ನನ್ನ ಬಳಿಗೆ ಬರಲಾರರು ಎಂಬದನ್ನು ನಾನು ನಿಮಗೆ ಅದರ ದೆಸೆಯಿಂದಲೇ ಹೇಳಿದೆನು ಅಂದನು.

ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರಮಾಡುವದನ್ನು ಬಿಟ್ಟರು. ಯೇಸು ಇದನ್ನು ನೋಡಿ ತನ್ನ ಹನ್ನೆರಡು ಮಂದಿಯನ್ನು–ನೀವು ಸಹ ಹೋಗಬೇಕೆಂದಿದ್ದೀರಾ? ಎಂದು ಕೇಳಿದ್ದಕ್ಕೆ ಸೀಮೋನ್‌ಪೇತ್ರನು–ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು; ನೀನು ದೇವರು ಪ್ರತಿಷ್ಠಿಸಿದವನೇ ಎಂದು ನಾವು ನಂಬಿದ್ದೇವೆ ಮತ್ತು ತಿಳಿದಿದ್ದೇವೆ ಅಂದನು. ಅದಕ್ಕೆ ಯೇಸು–ಹನ್ನೆರಡು ಮಂದಿಯಾದ ನಿಮ್ಮನ್ನು ನಾನು ಆರಿಸಿ ತೆಗೆದುಕೊಂಡನಲ್ಲವೋ? ನಿಮ್ಮಲ್ಲಿಯೂ ಒಬ್ಬನು ಸೈತಾನನ ಮಗನಾಗಿದ್ದಾನೆ ಅಂದನು. ಈ ಮಾತಿನಿಂದ ಆತನು ಸೀಮೋನನ ಮಗನಾದ ಇಸ್ಕರಿಯೋತ ಯೂದನನ್ನು ಸೂಚಿಸಿದನು. ಇವನು ಆ ಹನ್ನೆರಡು ಮಂದಿಯಲ್ಲಿ ಒಬ್ಬನಾಗಿದ್ದು ಮುಂದೆ ಆತನನ್ನು ಹಿಡುಕೊಡುವವನಾದನು.

# “ಜೀವಕೊಡುವ ರೊಟ್ಟಿ ನಾನೇ;”

**ರೀಪ್ರಿಂಟ್ಸ್ ಪುಟ 2651**

## ಯೋಹಾನ 6:22–40

ಐದು ರೊಟ್ಟಿ ಮತ್ತು ಎರಡು ಮೀನುಗಳಿಂದ ಊಟಮಾಡಿದ ಕೆಲವರು ಈ ಅದ್ಭುತದಿಂದ ಬಹು ಗಾಢವಾಗಿ ಪ್ರಭಾವಿತರಾಗಿದ್ದು ಇದರಿಂದ ಯೇಸುವಿನ ಬಗ್ಗೆ ವಿಶೇಷವಾದ ಗೌರವ ಹೊಂದಲು ಪ್ರೇರೇಪಿಸಲ್ಪಟ್ಟಿದ್ದರು. ಅವರಲ್ಲಿ ಕೆಲವು ಸಂಖ್ಯೆಯವರು (ಬಹು ಮಂದಿಯೆಂದು ನಮಗೆ ಕಲ್ಪಿಸಿಕೊಳ್ಳಲು ಸಾಧ್ಯವಾಗದು) ಇಂಥಾ ಅದ್ಭುತವಾದ ಶಕ್ತಿಯನ್ನು ಹೊಂದಿರುವ ಈ ದಿವ್ಯ ಬೋಧಕನನ್ನು ಹಿಂಬಾಲಿಸಬೇಕೆಂದು ತೀರ್ಮಾನಿಸಿದರು; ಆತನ ಶಿಷ್ಯರಾಗುವಲ್ಲಿ ಏನಿಲ್ಲದಿದ್ದರೂ ತಮ್ಮನ್ನು ಕೊರತೆಯಿಂದ ತಪ್ಪಿಸಿ ಕಾಪಾಡುವದೆಂಬ ಭರವಸೆಯಿರುವುದೆಂದು ಅಂದುಕೊಂಡಿದ್ದರು; ಮತ್ತು ಈ ವಿಧವಾದ ಜನರಿಗೆ ಇಂಥಾ ಸನ್ನಿವೇಶಗಳು ನಿಜವಾಗಿಯೂ ಒಂದು ಸ್ಪಷ್ಟವಾದ ಪ್ರೇರೇಪಣೆಯಾಗಿತ್ತು. ಹೇಗೂ ಅವರು ಕರ್ತನನ್ನು ಕೆರೆಯ ಆಚೇದಡದಲ್ಲಿನ ಕಪೆರ್ನೌಮಿನಲ್ಲಿ ಕಂಡುಕೊಂಡಾಗ ಅವರು–ಆತನನ್ನು ಹಿಂಬಾಲಿಸಿಕೊಂಡು ಬರಲು ಇದು ಹೇಗೆ ತಮ್ಮನ್ನು ನಡೆಸಿತೆಂದು ತಿಳಿಸಿ ಆತನಲ್ಲಿ ತಮಗಿದ್ದ ಆಸಕ್ತಿಯನ್ನು ವ್ಯಕ್ತಗೊಳಿಸಿದರು. ಆತನು ಅವರಿಗೆ–ತಮಗಿರುವುದು ಒಂದು ಸ್ವಾರ್ಥಭಾವನೆ ಅಥವಾ ಲಾಭದಾಸೆಯುಳ್ಳ ಆಸಕ್ತಿಯೆಂದು ಹಾಗು ತಾನು ಅವರಲ್ಲಿ ಬೆಳೆಯಲು ಬಯಸುವ ಬಗೆಯದಲ್ಲ ಅಂದರೆ ಸತ್ಯದ ವಿಷಯದ ಮೇಲಿಯ ಆಸಕ್ತಿಯಲ್ಲವೆಂದು ಸರಳವಾಗಿ ಹೇಳಿದನು.

ನಮ್ಮ ಕರ್ತನು ಈ ಸನ್ನಿವೇಶದ ಲಾಭವನ್ನು ಪಡೆದುಕೊಂಡು ಇವರಿಗೆ ಮಾತ್ರವಲ್ಲದೆ ತಮ್ಮ ಶಿಷ್ಯರಿಗೂ ಸಹ ಮತ್ತು ಅವರ ಮೂಲಕ ನಮಗೂ ಹುಡುಕಬೇಕಾಗಿರುವ ಸೂಕ್ತವಾದ ವಿಷಯಗಳ ಬಗ್ಗೆ ಒಂದು ಅಮೂಲ್ಯವಾದ ಪಾಠವನ್ನು ಹೇಳಿಕೊಟ್ಟಿದ್ದನು. ಜೀವನದ ಮುಖ್ಯ ಗುರಿಯು ಬಯಕೆ ಉದ್ದೇಶಗಳು ಕೆಟ್ಟುಹೋಗುವ ಆಹಾರಕ್ಕಾಗಲಿ ಲೌಕಿಕ ಸುಖಗಳಿಗಾಗಲಿ ಲೌಕೀಕ ಭೋಗಗಳಿಗಾಗಲೀ ಆಗಿರಬಾರದು; ಇವುಗಳು ಅತಿ ಹೆಚ್ಚೆಂದರೆ ಕ್ಷಣಿಕವಾದವುಗಳು, ಆದರೆ ಇದಕ್ಕೆ ಬದಲಾಗಿ ನಮ್ಮೆಲ್ಲರ ಮುಖ್ಯ ಗುರಿಯು ಮರಣಾವಸ್ಥೆಯ ಹಿಂದಿನಲ್ಲಿರುವ ನಿತ್ಯಜೀವವನ್ನು ಪಡೆದುಕೊಳ್ಳುವದಾಗಿರ ಬೇಕೆಂಬುದನ್ನು ಆತನು ತೋರಿಸಿಕೊಟ್ಟನು. ದೇವರು ತನ್ನ ಸೃಷ್ಟಿಗಳಿಗಾಗಿ ಮಾಡಿರುವ ಏರ್ಪಾಡುಗಳು ಕೇವಲ ನಮ್ಮ ಪ್ರಾಕೃತವಾದ ದೇಹದ ಪೋಷಣೆಗಾಗಿರುವ ಭೂಸಂಬಂಧವಾದ ಆಹಾರಕ್ಕೆ ಮಾತ್ರವಾಗಿರದೆ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾಗಿ ಆತ್ಮಿಕವಾದ ಪೋಷಣೆಗಾಗಿರುವುದು; ಇದರಲ್ಲಿ ಪಾಲು ತೆಗೆದುಕೊಂಡಲ್ಲಿ ನಾವು ನಿತ್ಯಜೀವವನ್ನು ಹೊಂದುವೆವು ಎಂಬುದನ್ನು ತೋರಿಸಿಕೊಟ್ಟಿದ್ದನು.

ತಾನು ಮಾಡಿದ ಅದ್ಭುತವು ಮತ್ತು ಅವರು ಪಾಲುಹೊಂದಿದ ಆ ಆಶೀರ್ವಾದವು ಕೇವಲ ಉತ್ತಮವಾದ

ಕೊಡುಗೆಯೂ ಅಧಿಕ ಬೆಲೆಯುಳ್ಳದ್ದೂ ಆದ ಜೀವಕೊಡುವ ರೊಟ್ಟಿಗೆ ಒಂದು ನಿದರ್ಶನವಾಗಿತ್ತೆಂಬುದನ್ನು ಅವರು ಕಂಡುಕೊಳ್ಳಬೇಕೆಂಬುದು ಆತನು ಬಯಸಿದ್ದನು; ಆ ಜೀವ ಕೊಡುವ ರೊಟ್ಟಿಯನ್ನು ದೇವಕುಮಾರನು ಒಬ್ಬನೇ ಕೊಡಲು ಶಕ್ತನಾಗಿದ್ದನು ಹಾಗು ನಮ್ಮೆಲ್ಲರ ವಿಷಯದಲ್ಲಿಯೂ ಇದೇ ಸತ್ಯವಾಗಿರುವುದು. ತಾನು ದೇವರ ಮಗನಾಗಿರುವದರಿಂದ ನಿತ್ಯಜೀವವನ್ನು ಕೊಡುವ ರೊಟ್ಟಿಯನ್ನು ಒದಗಿಸಲು ಶಕ್ತನೆಂಬುದನ್ನು ಆತನು ಶಾರೀರ ಸಂಬಂಧವಾದ ಆಹಾರವನ್ನು ಒದಗಿಸಿಕೊಡುವ ಮೂಲಕ ತೋರಿಸಿಕೊಟ್ಟಿದ್ದನು. ಇದಕ್ಕಾಗಿ ಪರಲೋಕದಲ್ಲಿರುವ ತಂದೆಯು ಆತನಿಗೆ ಮುದ್ರೆಹಾಕಿ ಗುರುತುಮಾಡಿ ಆತನು ಮಗನೆಂಬುದಕ್ಕೆ ಈ ಅಧಿಕಾರವನ್ನು ಕೊಡುವದರ ಮೂಲಕ ಸಾಕ್ಷಿಪ್ರಮಾಣಗಳನ್ನು ಆತನಿಗೆ ಅನುಗ್ರಹಿಸಿದ್ದನು. ಆ ಮುದ್ರೆಯು ಪವಿತ್ರಾತ್ಮವಾಗಿತ್ತು ಅಂದರೆ ದೇವರ ಪವಿತ್ರ ಶಕ್ತಿಯಾಗಿದ್ದು ನಮ್ಮ ಕರ್ತನಾದ ಯೇಸುವಿನಲ್ಲಿ ಅದು ಕಾರ್ಯಪ್ರವೃತ್ತವಾಗಿ ಆತನಿಗೆ ನೀರನ್ನು ದ್ರಾಕ್ಷಾರಸವನ್ನಾಗಿ ಪರಿವರ್ತಿಸುವ ಮತ್ತು ಜವೆಗೋದಿ ರೊಟ್ಟಿ ಮತ್ತು ಎರಡು ಮೀನುಗಳನ್ನು ಮುರಿದು ತುಂಡುಗಳನ್ನಾಗಿ ಮಾಡಿ ಅವುಗಳನ್ನು ಹೆಚ್ಚಿಸಿ ಅದರಿಂದ ಜನರ ಗುಂಪಿಗೆ ಊಟಮಾಡಿಸುವದಕ್ಕೆ ಶಕ್ತನನ್ನಾಗಿ ಮಾಡಿತ್ತು. ಈ ಅಧಿಕಾರಸಾಮರ್ಥ್ಯಗಳು ದೇವರ ಪರಿಶುದ್ಧ ಆತ್ಮನು ಆತನೊಂದಿಗಿದ್ದು ಒಬ್ಬ ಗೌರವಾನ್ವಿತ ಪ್ರತಿನಿಧಿಯಾದ ಒಬ್ಬ ಮಗನಾಗಿ ದೇವರೊಂದಿಗಿನ ಆತನ ಸಂಬಂಧವನ್ನು ಜನರಿಗೆ ಬಾಹ್ಯವಾಗಿ ಪ್ರದರ್ಶಿಸುವ ಸಾಕ್ಷಿಪ್ರಮಾಣಗಳಾಗಿದ್ದವು. ಈ ಸಾಕ್ಷಿಪ್ರಮಾಣಗಳ ಆಧಾರದಿಂದ ಹೃದಯದಲ್ಲಿ ಸೂಕ್ತ ಮನೋಭಾವವನ್ನು ಹೊಂದಿ ಸಾಕ್ಷಿಗಳಾದವರು ನಮ್ಮ ಕರ್ತನು ನೀಡಿದ ಪ್ರಮಾಣಸಾಕ್ಷಿಗಳಿಗೆ ತಂದೆಯಿಂದ ಬಂದ ಸಂದೇಶವನ್ನಾಗಿ ಅದಕ್ಕೆ ಲಕ್ಷ್ಯಕೊಡಲು ಸಿದ್ಧವಾಗಬೇಕಿತ್ತು.

ಆ ಉಪದೇಶವು ಪರಿಣಾಮಕಾರಿಯಾಗಿ ಇಲ್ಲದೇ ಇರಲಿಲ್ಲ: ಇದನ್ನು ಕೇಳಿದವರು ತಾವು ಹುಡುಕಬೇಕಾಗಿದ್ದ ಆಹಾರವು ನಿತ್ಯಜೀವ ಕೊಡುವಂಥದ್ದಾಗಿರಬೇಕೆಂಬ ಈ ಸೂಚನೆಗಳ ಹಿಂದಿದ್ದ ಬಲವನ್ನು ಅವರು ಗ್ರಹಿಸಿದವರಾಗಿದ್ದರು ಮತ್ತು ಯೆಹೂದ್ಯರಾಗಿ ಅವರು ದೇವರು ತಮ್ಮ ಜನಾಂಗದವರೊಡನೆ ಮಾಡಿಕೊಂಡ ಕ್ರಿಯಾ ಸಂಬಂಧವಾದ ಒಡಂಬಡಿಕೆಯಲ್ಲಿ ಅಂದರೆ ಮೋಶೆಯ ಮೂಲಕ ಮಾಡಿಕೊಂಡ ಧರ್ಮಶಾಸ್ತ್ರದ ಒಡಂಬಡಿಕೆಯಲ್ಲಿ ನಿತ್ಯಜೀವದ ವಾಗ್ದಾನವು ಸೇರಿಸಲಾಗಿರುವುದೆಂಬ ಹೆಚ್ಚಿನ ಅಂಶವನ್ನು ಅವರು ತಮ್ಮ ಮನಸ್ಸಿನಲ್ಲಿಟ್ಟುಕೊಂಡಿದ್ದರು. ಆದುದರಿಂದ ದೇವರನ್ನು ಮೆಚ್ಚಿಸಬೇಕಾದರೆ ನಾವು ಯಾವ ಕ್ರಿಯೆಗಳನ್ನು ಮಾಡಿ ಆ ಮೂಲಕವಾಗಿ ನಿತ್ಯಜೀವವನ್ನು ಪಡೆಯಬೇಕು? ಈ ವಿಷಯದಲ್ಲಿ ನಮಗೆ ಯಾವ ಯಾವ ಸಂದೇಶಗಳು ಸಹಾಯಕವಾಗುವವೋ ಅವುಗಳನ್ನು ನಮಗೆ ಕೊಡೆಂಬುದು ಅವರು ಮಾಡಿದ ವಿಚಾರಣೆಯಾಗಿತ್ತು.

ನಮ್ಮ ಕರ್ತನ ಉತ್ತರವು ಮೊದಲಿಗೆ ವಿಚಿತ್ರವಾಗಿ ನಮಗೆ ತೋರುವುದು; ಇದರಲ್ಲಿ ಆತನು ಹೇಳಿದ್ದೇನೆಂದರೆ ತನ್ನನ್ನು ನಂಬುವುದೇ ಅವರು ಮಾಡಬೇಕಾದ "ಕಾರ್ಯವು" ಹಾಗು ಇದು ಒಂದೇ ದೇವರಿಗೆ ಮೆಚ್ಚಿಗೆಯಾಗಬಹುದಾದ ಕಾರ್ಯವಾಗಲು ಸಾಧ್ಯವೆಂಬದೇ. ಇದರ ಅರ್ಥವೇನಾಗಿತ್ತೆಂಬುದನ್ನು ನಾವು ಮುಂದೆ ಪರಿಗಣನೆಗೆ ತೆಗೆದುಕೊಳ್ಳುವೆವು. ಆತನು ಹೇಳಿದರ ಅರ್ಥವೇನೆಂಬುದನ್ನು ಆತನನ್ನು ಆಲಿಸಿದವರಿಗೆ ಸರಿಯಾದ ರೀತಿಯಲ್ಲಿ ಸ್ಪಷ್ಟವಾಗಿ ಗ್ರಹಿಕೆಯಾಗಿತ್ತು. ಅದೇನೆಂದರೆ ದೇವರ ವಾಗ್ದಾನದ ಪ್ರಕಾರ ದೇವರ ರಾಜ್ಯವನ್ನು ಸ್ಥಾಪನೆಮಾಡಿ ಭೂಲೋಕದ ಎಲ್ಲಾ ಕುಲದವರಿಗೆ ಆಶೀರ್ವಾದ ಮಾಡುವದನ್ನು ಆರಂಭಿಸುವ ಸಲುವಾಗಿ ಲೋಕಕ್ಕೆ ಬರಬೇಕಾದ ದೇವಕುಮಾರನಾದ ಮೆಸ್ಸೀಯನೆಂದು ಅವರು ಆತನನ್ನು ಅಂಗೀಕರಿಸಬೇಕೆಂಬುದು ದೇವರ ದೃಷ್ಟಿಯಲ್ಲಿ ಅತಿ ಮೆಚ್ಚಿಕೆಯಾದ ಕಾರ್ಯವೆಂಬುದು. ಆದರೆ ಅವರು ದೇವರು ನೀಡಿದ ಸಂಕೇತ ಅಥವಾ ಗುರುತು ಅಥವಾ ಮುದ್ರೆಯು ಆಗಲೇ ಕರ್ತನಾದ ಯೇಸುವಿನ ಮೇಲಿರುವುದನ್ನು ಗ್ರಹಿಸಿಕೊಳ್ಳುವುದರ ಬದಲಾಗಿ ತಾನು ಮೆಸ್ಸೀಯನೆಂಬುದಕ್ಕೆ ಒಂದು ಸೂಚನೆಯನ್ನು ನೀಡಬೇಕೆಂದು ಆಗ ಕೇಳಿಕೊಂಡರು. ಆತನಲ್ಲಿದ್ದ ಪ್ರೀತಿ ಕರುಣೆ ಔದಾರ್ಯ ಉಪಕಾರ ಪರಿಶುದ್ಧತೆ ಮತ್ತು ಸತ್ಯದ ಆತ್ಮ ಅಲ್ಲದೆ ಆತನ ಬೋಧನೆಗಳಲ್ಲಿ ಈ ಮುದ್ರೆಯು ಅವರಿಗೆ ಪ್ರದರ್ಶಿತವಾಗಿದ್ದುದ್ದು ಮಾತ್ರವಲ್ಲದೆ, ಇದಕ್ಕೂ ಮಿಗಿಲಾಗಿ ಆತನಲ್ಲಿದ್ದ ದೈವಶಕ್ತಿಯ ಬಾಹ್ಯ ಪ್ರದರ್ಶನವನ್ನು ಮತ್ತು ಸಾಕ್ಷಿಪ್ರಮಾಣಗಳನ್ನೂ ಅವರು ನೋಡಿದ್ದರು. ದೃಷ್ಟಾಂತವಾಗಿ ಹೇಳುವುದಾದರೆ, ಆ ಹಿಂದಿನ ದಿನ ಆತನು ನಡೆಸಿದ ಅದ್ಭುತಕಾರ್ಯದಲ್ಲಿ ಅವರು ಇವುಗಳನ್ನು ನೋಡಿದ್ದರು. ಇದಕ್ಕೆ ಕಾರಣ ಸತ್ಯವೇದವು ಬೇರೊಂದೆಡೆ ವ್ಯಕ್ತಪಡಿಸಿರುವಂತೆ (ಮಾರ್ಕ 3:5; ಯೋಹಾನ 12:40) ಅವರು ಕಠಿಣ ಹೃದಯವುಳ್ಳವರಾಗಿದ್ದರೆನ್ನುವುದು. ಹೇಗೆಂದರೆ ಅವರು ನಂಬಿಕೆಯಿಲ್ಲದ ಮನೋಭಾವದವರಾಗಿದ್ದು ಸುಲಭವಾಗಿ ಪ್ರೇರಿತರಾಗಲಾರದೇ ವಾಸ್ತವದಲ್ಲಿ ಸಂದೇಹ ಪಡುವ ಮನೋಸ್ಥಿತಿಯಲ್ಲಿದ್ದರು. ಹೀಗಾಗಿ ಅವರಿಗೆ ಯೇಸುವಿನ ಮೇಲಿದ್ದ ದೇವರ ಮುದ್ರೆಯ ಗುರುತುಗಳು ಅಥವಾ ಸಾಕ್ಷಿಪ್ರಮಾಣಗಳು ಸಾಕಾಗಲಿಲ್ಲ.

ಹೀಗಾಗಿ ಸೂಚನೆಯ ಮೇಲೆ ಸೂಚನೆಯನ್ನು ನೀಡಿದ್ದರೂ "ಅಪನಂಬಿಕೆಯುಳ್ಳ ಕೆಟ್ಟ ಹೃದಯವು" ಒಂದು ಸೂಚನೆಯನ್ನು ನಿರಾಕರಿಸಿದಂತೆ ಹತ್ತು ಸೂಚನೆಗಳನ್ನೂ ನಿರಾಕರಿಸಲು ಸಾಧ್ಯವೆಂಬುದನ್ನು ನಾವು ಸುಲಭವಾಗಿ ಕಾಣಬಹುದು. ಫರೋಹನನ ವಿಷಯವೂ ಕೇವಲ ಹೀಗೆಯೇ ಇತ್ತು. ಆತನಿಗೆ ನಿಜವಾಗಿಯೂ ಮೋಶೆಯು ತೋರಿಸಿದ ಮೊದಲನೇಯ ಸೂಚನೆಯೇ ಮುಂದಿನವುಗಳಿಗಿಂತಲೂ ಪ್ರಭಾವಬೀರಿದ್ದು. ಆತನಿಂದ ಪ್ರತಿಯೊಂದು ಸೂಚನೆಯೂ ತಪ್ಪಾದ ಮನೋಭಾವದಿಂದ ತೆಗೆದುಕೊಳ್ಳಲ್ಪಟ್ಟು ಕಡೆಯ ಸೂಚನೆಯವರೆಗೂ ಆತನ ಹೃದಯವನ್ನು ಕಠಿಣಪಡಿಸುತ್ತಾ ಹೋದವು. ಈ ದಿನದಲ್ಲೂ ಕರ್ತನ ವಾಗ್ದಾನಗಳ ವಿಷಯವಾಗಿ ಕೆಲವರ ಮನೋಸ್ಥಿತಿಯೂ ಹೀಗೆಯೇ ಇರುವುದು. ಇದನ್ನು ಅಪೋಸ್ತಲನು ಹೇಳಿದ್ದಾನೆಯೇ? ಇದು ನನ್ನ ಪೂರ್ವಾಭಿಪ್ರಾಯಗಳಿಗೆ ವಿರೋಧವಾಗಿರುವುದು ಎಂದು ಅವರು ಕೇಳುವ ಪ್ರವೃತ್ತಿಯುಳ್ಳವರಾಗಿರುವರು. ಆ ಸಂಗತಿಯ ಬಗ್ಗೆ

ಮನವರಿಕೆಯಾದಲ್ಲಿ ಇದನ್ನು ಇತರ ಅಪೋಸ್ತಲರು ಹೇಳಿರುವರೋ ಎಂಬುದನ್ನು ತಿಳಿಯ ಬಯಸುವರು, ಮತ್ತು ಮೂರನೆಯದಾಗಿ ಕರ್ತನು ತಾನೇ ಏನಾದರು ಹೇಳಿರುವನೋ, ಮತ್ತು ನಾಲ್ಕನೆಯದಾಗಿ ಯಾರಾದರೂ ಪ್ರವಾದಿಗಳು ಇದನ್ನು ಹೇಳಿರುವರೋ ಎಂದು ಕೇಳಿ ನಂಬುವದಕ್ಕಾಗಿ ಇವುಗಳನ್ನು ಬಯಸುವ ಬದಲು ತಮ್ಮ ಅಪನಂಬಿಕೆಗೆ ಕಾರಣಗಳನ್ನು ಹುಡುಕುತ್ತಾ ಹೋಗುವರು. ಇಂಥಾ ವ್ಯಕ್ತಿಗಳು ಎಂದಿನಂತೆ ಸಾಮಾನ್ಯವಾಗಿ ಎಲ್ಲಾ ಸಾಕ್ಷಿಪ್ರಮಾಣಗಳನ್ನು ಹೊಂದಿದಾಗ್ಯೂ ಇಂಥಾ ಹಲವಾರು ಸಾಕ್ಷಿಗಳಿಂದಲೂ ಮನವರಿಕೆಯಾಗಲಾರರು. ಬದಲಾಗಿ ಯಾರು ನಿಜವಾಗಿಯೂ ಸತ್ಯವೇದವನ್ನು ದೇವರ ನುಡಿಯೆಂಬುದನ್ನು ನಂಬುವರೋ ಅವರು–ಅದು ಕರ್ತನಿಂದ ಬಂದದ್ದಾಗಲಿ ಇಲ್ಲವೇ ಅಪೋಸ್ತಲರಿಂದ ಹೇಳಲ್ಪಟ್ಟದ್ದಾಗಲೀ ಅಥವಾ ಪ್ರವಾದಿಗಳಿಂದ ನುಡಿಯಲ್ಪಟ್ಟದ್ದಾಗಲೀ ಮತ್ತು ಅದು ಒಂದೇ ಸಾರಿ ಹೇಳಿರುವುದಾಗಲೀ ಅಥವಾ ಹಲವು ಸಾರಿ ಹೇಳಲ್ಪಟ್ಟಿರುವುದಾಗಲೀ–ಅದರ ಪ್ರತಿಯೊಂದು ಅಧಿಕೃತ ಸಾಕ್ಷಿಪ್ರಮಾಣಗಳನ್ನು ಅವರು ನಂಬುವವರಾಗಿರುವರು.

ಕರ್ತನನ್ನು ಆಲಿಸಿದವರಲ್ಲಿ ಸಂದೇಹವು ಕಾರ್ಯವೆಸಗು –ತ್ತಿದ್ದುದು ಅವರ ಹೇಳಿಕೆಗಳಿಂದ ಸ್ಪಷ್ಟವಾಗುತ್ತಿತ್ತು. ಅವರು ಸಾರಾಂಶವಾಗಿ ಹೀಗೆ ಹೇಳುತ್ತಿದ್ದರು: "ನಿನ್ನ ಅದ್ಭುತವು ಬಹು ದೊಡ್ಡದೆಂದು ಇಲ್ಲವೆ ಆಶ್ಚರ್ಯವಾದುದೆಂದು ಮತ್ತು ಇವುಗಳಲ್ಲಿ ನೀನು ದೇವರ ಮಗನೆಂದು ಸೂಚಿಸಲು ಅಗತ್ಯವಾದ ಅಂಶವು ಅಡಕವಾಗಿರುವುದೆಂದು ಅಂಗೀಕರಿಸಲು ನಮಗೆ ಸಾಧ್ಯವಾಗದು, ಏಕೆಂದರೆ ಮೋಶೆಯೂ ಇದೇ ವಿಧವಾದ ಶಕ್ತಿಯನ್ನು ಉಪಯೋಗಿಸಿದ್ದುದು ನಮಗೆ ನೆನಪಿದೆ; ನಿಜವಾಗಿ ಅವನು ನಮ್ಮ ಪೂರ್ವಜರಿಗೆ ಅಂದರೆ ಇಸ್ರಾಯೇಲ್ ಜನಾಂಗಕ್ಕೆ ಬಹುಕಾಲ ಅರಣ್ಯದಲ್ಲಿ ಸಾಕಷ್ಟು ಆಹಾರವನ್ನು ಒದಗಿಸಿದ್ದನು. ಆತನು ಆರಂಭದಲ್ಲಿ ಯಾವ ರೊಟ್ಟಿಯನ್ನಾಗಲೀ ಮೀನನ್ನಾಗಲೀ ಬಳಸದೇ ಇದನ್ನು ಮಾಡಿದ್ದನು; ನಾವು ಇದನ್ನು ಮನ್ನವೆಂದು ಉಲ್ಲೇಖಿಸುವವರಾಗಿದ್ದೇವೆ.

ನಮ್ಮ ಕರ್ತನು ಇದಕ್ಕೆ ಸ್ಪಂದಿಸಿ ಹೇಳಿದ್ದು, ಮೋಶೆಯು ಮನ್ನವನ್ನು ಉತ್ಪಾದಿಸಿದವನಲ್ಲ; ಅದನ್ನು ಕಳುಹಿಸಿ ಕೊಡುವಲ್ಲಿ ಆತನಿಗೆ ಯಾವ ಪಾತ್ರವೂ ಇರಲಿಲ್ಲ; ಅದು ನೇರವಾಗಿ ಪರಲೋಕದ ತಂದೆಯಿಂದ ಏರ್ಪಾಡಾಗಿ ಬಂದಿತ್ತು, ಮೋಶೆಯು ಇದರಲ್ಲಿ ಯಾವ ಸಾಧನವಾಗಿಯೂ ಇರಲಿಲ್ಲ. ಆನಂತರ ನಮ್ಮ ಕರ್ತನು ಅಡವಿಯಲ್ಲಿ ಕೊಟ್ಟ ಮನ್ನವು ನಿತ್ಯಜೀವವನ್ನು ಕೊಡುವ ನಿಜವಾದ ರೊಟ್ಟಿಯಾದ ನಿಜರೂಪದ ಮನ್ನಕ್ಕೆ ಒಂದು ಛಾಯೆಯಾಗಿರುವುದೆಂದು ತೋರಿಸಿಕೊಟ್ಟು, ತಾನೇ ಆ ರೊಟ್ಟಿಯೆಂಬ ತನ್ನ ವಿಷಯವಾದ ಸತ್ಯಾಂಶವನ್ನು ಆತನು ಪ್ರಕಟಮಾಡಿ ಹೇಳಿದ್ದನು. ಅವರು ಈಗ ಅದನ್ನು ತನ್ನಿಂದ ಪಡಕೊಳ್ಳಬೇಕೆಂದು ಬಯಸಿದ್ದನು.

ಆತನು ತನ್ನ ವಿಷಯವಾಗಿಯೇ ಹೇಳಿಕೊಂಡಿದ್ದನೆಂಬ ಅಂಶವನ್ನು ಅವರು ಗ್ರಹಿಸಲಿಲ್ಲ; ಆದರೆ ವಾಸ್ತವದಲ್ಲಿ ಅವರು ಅರಣ್ಯದಲ್ಲಿ ಪೋಷಿಸಲು ತಮ್ಮ ಪೂರ್ವಜರಿಗೆ ದೇವರು ಪರಲೋಕದಿಂದ ಮನ್ನವನ್ನು ಕೊಟ್ಟಿದ್ದ ಹಾಗೆ ಈಗ ಈ ದಿವ್ಯ ಬೋಧಕನಾದ ಯೇಸುವು ಇನ್ನೂ ಉತ್ತಮ ದರ್ಜೆಯ ಮನ್ನದ ಬಗ್ಗೆ ಹೇಳುತ್ತಿರುವನೆಂದು ಮತ್ತು ಅದರಲ್ಲಿ ಪಾಲು ತೆಗೆದುಕೊಂಡಲ್ಲಿ ಅದು ನಿತ್ಯಜೀವವನ್ನು ಒದಗಿಸುವದೆಂಬ ಪ್ರಾಕೃತಿಕವೂ ಮತ್ತು ಸಹಜವೂ ಆದ ಅಭಿಪ್ರಾಯವನ್ನು ಹೊಂದಿದ್ದರು. ಹೀಗಾಗಿ ಅವರು ಉದ್ಗಾರವೆತ್ತಿ ಹೇಳಿದ್ದು: "ಸ್ವಾಮೀ, ಆ ರೊಟ್ಟಿಯನ್ನು ನಮಗೆ ಯಾವಾಗಲೂ ಕೊಡು!" ನಮ್ಮ ಕರ್ತನು ಆನಂತರದಲ್ಲಿ ಈ ಸಂಕೇತವನ್ನು ಅಥವಾ ಸಾಮ್ಯವನ್ನು ವಿವರಿಸುವವನಾಗಿ ಈ ಪಠ್ಯಭಾಗದಲ್ಲಿನ ಭಾಷಾರೂಪದಲ್ಲಿ ಪ್ರಕಟಮಾಡಿ ಹೇಳಿದ್ದು: "ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ."

"ನನ್ನ ಬಳಿಗೆ ಬರುವವನಿಗೆ" ಎಂಬ ಮಾತಿನಲ್ಲಿ ತನ್ನ ಕೇಳುಗರು ಮಾಡಿದಂತೆ ಕೆರೆಯನ್ನು ದಾಟಿ ಆತನ ಬಳಿಗೆ ಬರುವದೆಂಬುದು ನಮ್ಮ ಕರ್ತನ ಅರ್ಥವಲ್ಲವೆಂಬದು ಸ್ಪಷ್ಟವಾಗಿತ್ತು. ಆದುದರಿಂದ "ನನ್ನ ಬಳಿಗೆ ಬರುವದು" ಎಂಬ ಹೇಳಿಕೆಯನ್ನು ನೀತಿಗಾಗಿ ಹಸಿದು ಬಾಯಾರಿದವರಾಗಿಯೂ ನಿತ್ಯಜೀವದ ಬಯಕೆಯುಳ್ಳವರಾಗಿಯೂ ಮತ್ತು ಹೀಗಾಗಿ ಜೀವವನ್ನು ಹೊಂದಲು ಜೀವಕೊಡುವ ರೊಟ್ಟಿಯನ್ನು ಪಡಕೊಳ್ಳಲು ಕರ್ತನ ಬಳಿಗೆ ಬರುವುದು ಎಂದು ಗ್ರಹಿಸಿಕೊಳ್ಳ ಬೇಕು. ಯೇಸುವಿನ ಬಳಿಗೆ ಹೀಗೆ ಈ ಸೂಕ್ತ ಮನೋಭಾವದ ಹೃದಯದಿಂದ ಬರುವವರೆಲ್ಲರೂ ನಿಜವಾಗಿಯೂ ತೃಪ್ತವಾದ ಪಾಲನ್ನು ಕಂಡುಕೊಳ್ಳುವರು. ಇದೇ ರೀತಿಯಲ್ಲಿ "ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆ ಯಾಗದು," ಎಂಬ ಈ ಹೇಳಿಕೆಯನ್ನು – ಇಂಥಾ ಒಬ್ಬ ವ್ಯಕ್ತಿಯು ಜೀವಿಸಿದ್ದನೆಂದು ಕೇವಲ ನಂಬುವದಕ್ಕಿಂತಲೂ ಹೆಚ್ಚಿನದು ಇಲ್ಲಿ ಅರ್ಥೈಸುವು ದೆಂದು ಗ್ರಹಿಸಿಕೊಳ್ಳಬೇಕು. ಯಾಕೆಂದರೆ "ದೆವ್ವಗಳೂ ಕೂಡ ಹಾಗೆ ನಂಬಿ ನಡಗುತ್ತವೆ;" ಆದುದರಿಂದ "ಹೃದಯದಿಂದ ನಂಬುವುದರ ಮೂಲಕ ನೀತಿಯು ದೊರೆಕುತ್ತದೆ;" (ನೀತಿಯನ್ನು ಅಪೇಕ್ಷಿಸುವವರಾಗುವಂತೆ ಹೃದಯದಲ್ಲಿ ಮಾನಸಾಂತರವಾಗು – ವದು) ಎಂದು ಬರೆದಿರುವ ಪ್ರಕಾರ "ನಂಬುವದು" ಎಂದರೆ ಕೇವಲ ಬುದ್ಧಿಪೂರ್ವಕವಾಗಿ ಮಾತ್ರಲ್ಲದೆ ಹೃದಯಪೂರ್ವಕ ವಾಗಿಯೂ ಕರ್ತನನ್ನು ಅಂಗೀಕರಿಸುವದನ್ನು ಸೂಚಿಸುವದೆಂಬು ದಾಗಿ ಗ್ರಹಿಸಿಕೊಳ್ಳಬೇಕು. ಯಾವಾತನು ಹೀಗೆ ಕರ್ತನನ್ನು ಹೃದಯಪೂರ್ವಕವಾಗಿ ನಂಬಿದವನಾಗಿ ಮತ್ತು ದೇವರ ವಾಕ್ಯದಲ್ಲಿನ ಅಮೂಲ್ಯವೂ ಉತ್ಕೃಷ್ಟವೂ ಆದ ವಾಗ್ದಾನಗಳನ್ನು ನೆರವೇರಿಸಲಿರುವ ದೇವಕುಮಾರನು ಈತನೆಂಬುದನ್ನು ಗ್ರಹಿಸಿಕೊಳ್ಳುವನೋ ಅವನು ಎಂಥಾ ಪುನಶ್ಚೇತನವನ್ನು ಅಂದರೆ ಎಂಥಾ ಒಂದು ಬಾಯಾರಿಕೆಯನ್ನು ತಣಿಸಿಕೊಳ್ಳವನೆಂದರೆ, ಎಂಥಾ ಸಂತೃಪ್ತಿಯನ್ನು ಹೊಂದುವನೆಂದರೆ ಈ ನಂಬಿಕೆಯನ್ನು ಕಾಪಾಡಿಕೊಂಡಿರುವವರೆಗೂ ಇದು ಎಂದಿಗೂ ತೀರಿಹೋಗುವು ದಿಲ್ಲ. (ರೋಮಾ 10:10) ಇಂಥವರು ಕ್ರಿಸ್ತನಲ್ಲಿರುವ ದೈವಿಕ ಏರ್ಪಾಟುಗಳು ಎಷ್ಟು ಹೇರಳವಾಗಿರುವುದನ್ನು ಕಂಡುಕೊಳ್ಳುವರೆಂದರೆ ಇದಕ್ಕಿಂತಲೂ ಹೆಚ್ಚಿಗೆಯಾದುದನ್ನು

ಬೇಡಿಕೊಳ್ಳಲು ಸಾಧ್ಯವಾಗದೆ ಅವರು ಉದ್ಗಾರವೆತ್ತಿ ಹೇಳುವುದು: "ಬೇರೆ ಯಾವದೂ ಮಾಡಲಾಗದಂಥ ರೀತಿಯಲ್ಲಿ ಇದು ನನ್ನ ಹಂಬಲಿಕೆಗಳನ್ನೆಲ್ಲಾ ತೃಪ್ತಿಗೊಳಿಸಿರುವದು."

ಹಾಗು ಈಗ ನಾವು ವಚನ 29ರಲ್ಲಿ ಇರುವ ನಮ್ಮ ಕರ್ತನ ನುಡಿಯ ಅರ್ಥವನ್ನು ನೋಡುವವರಾಗಿರುವೆವು: "ದೇವರು ಮೆಚ್ಚುವ ಕೆಲಸ ಯಾವದಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ..." ನಂಬುವಿಕೆಯ ಸಂಬಂಧದಲ್ಲಿ ಕ್ರಿಯೆಯೂ ಇರುವುದು; ಅದು ನಮ್ಮ ಕೈಯಿಂದ ಮಾಡುವ ಕ್ರಿಯೆಯಲ್ಲ, ಆದರೆ ಅದು ನಮ್ಮ ಮನಸ್ಸಿನಲ್ಲಿಯೂ ಹೃದಯದಲ್ಲಿಯೂ ನಡೆಸುವ ಕ್ರಿಯೆ: ಇದರ ಹಾಗೆ ನಮ್ಮ ಕೈಯಿಂದ ನಡೆಸಿದ ಯಾವ ಕೆಲಸವೂ ದೇವರಿಗೆ ಮೆಚ್ಚಿಕೆಯಾಗಲಾರದು. ನಿಜವಾಗಿಯೂ ನಾವು ನಮ್ಮಲ್ಲಿರುವ (ಪರಿಪೂರ್ಣತೆಯಿಂದ) ಬಿದ್ದುಹೋದ ಮತ್ತು ಅಪರಿಪೂರ್ಣ ಸ್ಥಿತಿಯನ್ನು ಅರಿತವರಾಗಿ ನಮಗೆ ಯಾವದನ್ನೂ ಪರಿಪೂರ್ಣವಾದ ರೀತಿಯಲ್ಲಿ ಮಾಡಲು ಅಸಾಧ್ಯವೆಂಬುದನ್ನು ಗ್ರಹಿಸಿಕೊಂಡಾಗ ಮತ್ತು ದೇವರು ಪರಿಪೂರ್ಣನೆಂಬುದನ್ನೂ ಆತನ ಕಾರ್ಯಗಳೆಲ್ಲವೂ ಪರಿಪೂರ್ಣತೆಯುಳ್ಳವುಗಳೆಂಬುದನ್ನೂ ಮತ್ತು ಹೀಗಾಗಿ ಆತನು ಅಪರಿಪೂರ್ಣತೆಯ ವಿಷಯವಾಗಿಯೂ ಅಥವಾ ಯಾವ ಮಟ್ಟದ ಪಾಪಗಳ ವಿಷಯವಾಗಿಯೂ ಸಹಾನುಭೂತಿಯುಳ್ಳವನಲ್ಲವೆಂಬುದನ್ನು ನೆನಪುಮಾಡಿಕೊಂಡಾಗಲೇ ನಮಗೆ ನಂಬಿಕೆಯನ್ನು ಬಿಟ್ಟರೆ ಬೇರೆ ಯಾವ ಉತ್ಕೃಷ್ಟವಾದ ಕಾರ್ಯವೂ ದೇವರಿಗೆ ಮೆಚ್ಚಿಕೆಯಾಗಲಾರದೆಂಬುದನ್ನು ನಾವು ಸುಲಭವಾಗಿ ಕಾಣಲು ಸಾಧ್ಯ.

ಆದರೆ ದೇವರು ನಮಗಾಗಿ ವಿಶೇಷ ಕಾರ್ಯಗಳನ್ನು ಮಾಡುವದಾಗಿ ಪ್ರಸ್ತಾಪಿಸಿದ್ದಾನೆ; ಆತನು ಆ ವಿಶೇಷವಾದ ಕಾರ್ಯವನ್ನು ನೆರವೇರಿಸಿ ಅದರಲ್ಲಿ ಒಬ್ಬ ವಿಮೋಚಕನನ್ನು ಒದಗಿಸಿಕೊಟ್ಟು ಆತನ ಮೂಲಕ ನಮ್ಮ ಮಾನವ ಕುಲಕ್ಕೆ (ಶಾಪದಿಂದ ವಿಮೋಚಿಸಲು) ಈಡು ಬೆಲೆಯನ್ನು ದಯಪಾಲಿಸಿದ್ದಾನೆ: ಮತ್ತು ದೇವರು ಹೀಗೆ ನೀತಿವಂತನಾಗಿದ್ದು ಯೇಸುವಿನಲ್ಲಿ ನಂಬಿಕೆಯಿಡುವವನನ್ನು ನೀತಿವಂತನೆಂದು ನಿರ್ಣಯಿಸುವವನಾಗಿದ್ದಾನೆ. ಆದುದರಿಂದ ನಾವು (ಪಾಪದ ಮೂಲಕ) ಖಂಡನೆಗೆ ಒಳಗಾಗಿರುವಷ್ಟು ಕಾಲವೂ ನಾವು ನಿರ್ವಹಿಸುವ ಯಾವ ಕಾರ್ಯವೂ ದೇವರಿಗೆ ಅಂಗೀಕೃತವಾಗಲು ಸಾಧ್ಯವಾಗದು; ಆದರೂ ತಾನು ಸ್ವತಃ ಮಾಡಿದ ಏರ್ಪಾಡಿನ ಮೂಲಕವಾಗಿ ಕ್ರಿಸ್ತನಲ್ಲಿನ ನಮ್ಮ ನಂಬಿಕೆಯನ್ನು ಅಂಗೀಕರಿಸಿಕೊಂಡು ಆ ನಂಬಿಕೆಯ ಮೂಲಕ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವನು; ಆದುದರಿಂದ ಇದು ನಾವು ನಿರ್ವಹಿಸಲು ಸಾಧ್ಯವಾದ ಮೊದಲನೆಯ ಕಾರ್ಯ ಮತ್ತು ಇದಕ್ಕಾಗಿಯೇ ದೇವರು ನಮ್ಮನ್ನು ಕರೆದಿರುವುದು. ಈ ಕಾರ್ಯವನ್ನು ಅನುಸರಿಸಿ ಮಾಡುವ ಹಾಗು ಇದರ ಆಧಾರದ ಮೇಲೆ ಮಾಡುವ ಕಾರ್ಯಗಳನ್ನು ಉಳಿದು ಬೇರೆ ಯಾವುದನ್ನೂ ಆತನು ಅಂಗೀಕರಿಸಲಾರನು. ಓಹ್! ದೇವರ ದೃಷ್ಟಿಯಲ್ಲಿ ನಂಬಿಕೆಗೆ ಇರುವ ಮಹತ್ವವನ್ನು ನಾವು ಗ್ರಹಿಸಿಕೊಳ್ಳಬಲ್ಲವರಾದಲ್ಲಿ ಎಷ್ಟೋ ಒಳ್ಳೆಯದು! "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸಲು ಅಸಾಧ್ಯ." ನಾವು ನಂಬಿಕೆಯನ್ನು ಅಧಿಕವಾಗಿ ಬಳಸಿದಷ್ಟೂ ನಾವು ದೇವರನ್ನು ಹೆಚ್ಚಾಗಿ ಮೆಚ್ಚಿಸುವವರಾಗುತ್ತೇವೆ: ವಿಚಾರಮಾಡದೇ ನಂಬುವದಾಗಲೀ, ದೇವರು ಹೇಳದೇ ಇರುವ ಯಾವುದೇ ವಿಷಯದ ಬಗ್ಗೆ ನಂಬಿಕೆಯಿಡುವುದಾಗಲೀ, ನಮ್ಮ ಸ್ವಂತ ಕಲ್ಪನೆಯ ಅನುಸಾರವಾಗಿ ಅಥವ ಇತರರ ಅನುಸಾರವಾಗಿ ನಂಬುವದಾಗಲಿ ಮಾಡದೆ ದೇವರು ಹೇಳಿರುವುದರ ಮೇಲೆ ನಂಬಿಕೆಯಿಟ್ಟು ಅದರಲ್ಲಿ ಸ್ಥಿರವಾದ ವಿಶ್ವಾಸದಿಂದ ಭರವಸೆಯುಳ್ಳವರಾಗಿರುವುದೇ ದೇವರಿಗೆ ಅಂಗೀಕಾರವಾಗುವದು ಮತ್ತು ನಂಬಿಕೆಯನ್ನು ಹೀಗೆ ಬಳಸುವವರೆಲ್ಲರಿಗೂ ನೀತಿವಂತರೆಂಬ ನಿರ್ಣಯಹೊಂದಲು ಇದೇ ಆಧಾರ ಅಥವಾ ಅಸ್ತಿವಾರವಾಗಿರುವುದು. "...ನಾವು ನಂಬಿಕೆಯಿಂದ ನೀತಿವಂತರಾದ ಕಾರಣ ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ." – ರೋಮಾ. 5:1

ಕರ್ತನು ಇಲ್ಲಿ ಮುಂದಿನ ಹಂತವಾದ ಸುವಾರ್ತಾ ಯುಗದಲ್ಲಿನ ಉನ್ನತ (ಸ್ಥಾನದ) ಕರೆಯ ವಿಷಯವಾಗಿ ಚರ್ಚಿಸಲಿಲ್ಲ; ಆದುದರಿಂದ ನಾವು ಅದನ್ನು ಈಗ ಚರ್ಚಿಸುವುದಿಲ್ಲ. ಆತನು ಕೇವಲ ದೇವರನ್ನು ಸಮೀಪಿಸಲು ನಾವು ತೆಗೆಯಬೇಕಾದ ಮೊದಲನೆಯ ಹೆಜ್ಜೆಯ ವಿಷಯವಾಗಿ ಅಂದರೆ ನೀತಿ ನಿರ್ಣಯದ ಬಗ್ಗೆ ವಿಚಾರ ನಡೆಸುತ್ತಿದ್ದನು. ನೀತಿವಂತರೆಂದು ನಿರ್ಣಯ ಹೊಂದಲು ಅಗತ್ಯವಿರುವ ಅಂಶವೆಂದರೆ, ಕ್ರಿಸ್ತನನ್ನು ಜೀವಕೊಡುವ ರೊಟ್ಟಿಯನ್ನಾಗಿ ಅಂಗೀಕಾರಮಾಡುವುದು; ತಂದೆಯಾದ ಆದಾಮನ ಅಪರಾಧದ ಮೂಲಕ ಮರಣವು ಮಾನವ ಸಂತತಿಯವರಾದ ನಮ್ಮೆಲ್ಲರ ಮೇಲೆ ಬಂದಿರುವಲ್ಲಿ ನಮ್ಮಲ್ಲಿ ಸ್ವತಃ ಜೀವವಿರುವುದಿಲ್ಲವೆಂಬುದನ್ನು ನಾವು ಮನಗಂಡವರಾಗಿರ ಬೇಕೆಂಬುದನ್ನು ಇದು ಹಿಂಬಾಲಿಸಿ ಬರಬೇಕು. ಹಾಗೂ ತಂದೆಯಾದ ಆದಾಮನ ಮತ್ತು ಹೀಗೆ (ಆತನ ಅವಿಧೇಯತೆಯಿಂದ) ಮಾನವ ಸಂತತಿಯಾದ ನಮ್ಮೆಲ್ಲರ ಮೇಲೆ ಬಂದಿರುವ ಮರಣದಂಡನೆಯನ್ನು ತಾನು ತೆಗೆದುಕೊಳ್ಳಲು ಕರ್ತನಾದ ಯೇಸುವು ಶರೀರಧಾರಿಯಾದನು; ಆದುದರಿಂದ ಈಗ ಯಾವನು ಕ್ರಿಸ್ತನಲ್ಲಿರುವ ದೇವರ ಉಚಿತವಾದ ಕೃಪಾವರವನ್ನು ಅಂಗೀಕರಿಸಿಕೊಳ್ಳುವನೋ, ಹೇಗಂದರೆ ಯಾರು ಕ್ರಿಸ್ತನ ಯಜ್ಞಫಲದಲ್ಲಿ ತನಗಾಗಿ ಪಾಲನ್ನು ತೆಗೆದುಕೊಳ್ಳುವನೋ ಅಂದರೆ ಅದನ್ನು ತಿನ್ನುವುದರ ಮೂಲಕ ಲೋಕದ ಜೀವಕ್ಕಾಗಿ ತನ್ನ ಜೀವಿತವನ್ನೇ ಈಡು ಬೆಲೆಯಾಗಿ ಕೊಟ್ಟ ಈ ಅಭಿಷಕ್ತನಲ್ಲಿ ದೇವರು ಒದಗಿಸಿರುವ ಆ ವಿಶೇಷ ಸಹಾಯ ಮತ್ತು ಆಶೀರ್ವಾದದಲ್ಲಿ ಪಾಲು ತೆಗೆದುಕೊಳ್ಳುವನೋ ಅವನು ನೀತಿವಂತನೆಂಬ ನಿರ್ಣಯ ಹೊಂದುವನು. ಯಾವನು ಈ ಸಂಗತಿಯನ್ನು ಮಾನಸಿಕವಾಗಿ ಅಂಗೀಕರಿಸುವನೋ ಅವನು ಮನುಷ್ಯಕುಮಾರನ ಮಾಂಸದಿಂದ ಪೋಷಣೆಹೊಂದುತ್ತಿರು – ವನೆಂದು ಅಂದರೆ ಆತನಲ್ಲಿ ಒದಗಿಸಲಾಗಿರುವ (ಪರಿಪೂರ್ಣ) ಮಾನವನ ಹಕ್ಕುಬಾಧ್ಯತೆ ಸವಲತ್ತುಗಳು ಮತ್ತು ಪುನರ್– ನವೀಕರಣ ಫಲವಾದ ಆಶೀರ್ವಾದಗಳಲ್ಲಿ ಪಾಲನ್ನು ಹೊಂದುವದನ್ನು (ಅಥವಾ ಈಗಿನ ಕಾಲದಲ್ಲಿ ನೀತಿ ನಿರ್ಣಯಹೊಂದುವದು) ಸೂಚ್ಯವಾಗಿ ಹೇಳಲ್ಪಟ್ಟಿರುವದು.

ನಮ್ಮ ಕರ್ತನು ತನ್ನನ್ನು ಆಲಿಸುತ್ತಿದ್ದವರಿಗೆ ತೋರಿಸಿಕೊಟ್ಟದ್ದೇನಂದರೆ, ತನ್ನನ್ನು ಅಂಗೀಕರಿಸುವುದರಲ್ಲಿ ಅವರು ತಡಮಾಡುತ್ತಿದ್ದ ಮತ್ತು ಇಸ್ರಾಯೇಲ್ ಜನರು ಸಾಧಾರಣವಾಗಿ ತಡಮಾಡುತ್ತಿದ್ದ ಅಂಶವು ತಾನು ಮೆಸ್ಸೀಯನಲ್ಲವೆಂಬುದಕ್ಕೆ ಪ್ರಮಾಣವಾಗಿರಲಿಲ್ಲ, ಆದರೆ ನಿಜವಾಗಿಯೂ ಅವರು ಮೆಸ್ಸೀಯನನ್ನು ಅಂಗೀಕರಿಸುವ ಸ್ಥಿತಿಯಲ್ಲಿರಲಿಲ್ಲವೆಂಬುದಕ್ಕೆ ಪ್ರಮಾಣವಾಗಿತ್ತು. ಮತ್ತು ಇನ್ನೂ ಹೇಳುವುದಾದರೆ, ಆತನು ಯೆಹೂದ್ಯ ಜನರೆಲ್ಲರನ್ನೂ ಎಳೆದುಕೊಳ್ಳುವುದು ದೇವರ ಉದ್ದೇಶವಾಗಿರಲಿಲ್ಲ; ಆದರೆ ತನ್ನ ಬಾಯಿಂದ ಹೊರಡುವ ಕೃಪಾಪೂರ್ಣವಾದ ಮಾತುಗಳಿಂದಲೂ ಅದ್ಭುತಗಳ ಮೂಲಕವೂ ಇಲ್ಲವೇ ತನ್ನಲ್ಲಿರುವ ದೇವರ ಶಕ್ತಿಯ ಪ್ರಮಾಣದ ಮೂಲಕವಾಗಿ ತಂದೆಯು ತನಗೆ ಕೊಟ್ಟವರನ್ನು ಅಂದರೆ ತಂದೆಗೆ ಮೆಚ್ಚಿಕೆಯಾದಂಥವರನ್ನು, ತಂದೆಯು ಒದಗಿಸಿದ ಸಾಧನವಾದವನ ಮೂಲಕ ಹೆಚ್ಚಿನ ಒಂದು ಆಶೀರ್ವಾದವನ್ನು ಪಡೆಯಲು ಸಿದ್ಧವಾಗಿರುವಂಥವರನ್ನು ತನ್ನ ಬಳಿಗೆ ಎಳೆದುಕೊಳ್ಳುವುದು ದೇವರ ಉದ್ದೇಶವಾಗಿತ್ತು. ಎಲ್ಲರನ್ನು ಎಳಕೊಳ್ಳುವುದನ್ನು ಆತನು ನಿರೀಕ್ಷಿಸುತ್ತಿಲ್ಲವೆಂದೂ, ಹೀಗಿದ್ದರೂ ತಂದೆಯಿಂದ ಹೀಗೆ ಎಳೆಯಲ್ಪಟ್ಟವರೆಲ್ಲರನ್ನು ತಾನು ಸಂತೋಷದಿಂದ ಸ್ವಾಗತಿಸುವುದಾಗಿಯೂ ಅವರಿಗೆ ಖಚಿತವಾಗಿ ಹೇಳಿದ್ದನು. ಏಕೆಂದರೆ ತಾನು ಕೇವಲ ತನ್ನ ಸ್ವಂತ ಕಾರ್ಯದ ಮೇಲೆ ಲೋಕಕ್ಕೆ ಬಂದಿರಲಿಲ್ಲ ಆದರೆ ತಂದೆಯ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಬಂದಿದ್ದನು ಮತ್ತು ಈ ವಿಷಯದಲ್ಲಿ ಪೂರ್ಣ ಸಾಮರಸ್ಯವುಳ್ಳವನಾಗಿದ್ದನು.

ಮುಂದಿನ ಎರಡು ವಚನಗಳಲ್ಲಿ ನಮ್ಮ ಕರ್ತನು ರಕ್ಷಣೆ ಹೊಂದಿದ ಎರಡು ವರ್ಗಗಳಿಗಿರುವ ವ್ಯತ್ಯಾಸವನ್ನು ತೋರಿಸಿಕೊಟ್ಟಂತೆ ಕಾಣುತ್ತದೆ, ವಚನ 39ರಲ್ಲಿ ಈ ಸುವಾರ್ತಾಯುಗದಲ್ಲಿ ಆಯಲ್ಪಟ್ಟ ವರ್ಗದ ವಿಷಯವಾಗಿ ಉಲ್ಲೇಖವಿದೆ, ಮತ್ತು ವಚನ 40ರಲ್ಲಿ ಈ ಕಾಲವನ್ನು ಹಿಂಬಾಲಿಸಿ ಬರುವ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಮಾನವರಿಗೆ ಸಾಮಾನ್ಯವಾಗಿ ಬರುವ ಆಶೀರ್ವಾದದ ಬಗ್ಗೆ ಹಾಗೂ ನಮ್ಮ ಕರ್ತನು ತನ್ನ ಸ್ವಂತ ಜೀವವನ್ನೇ ಕೊಟ್ಟು ಕೊಂಡುಕೊಂಡಿರುವ ವಿಶೇಷ ಕೊಡುಗೆಯಾದ ನಿತ್ಯಜೀವದ ಮೂಲಕ ಆಶೀರ್ವದಿಸಲ್ಪಡುವ ಅವಕಾಶವನ್ನು ಪ್ರತಿಯೊಬ್ಬ (ಮಾನವ) ಸೃಷ್ಟಿಯೂ ಹೊಂದಲು ಸಮರ್ಥನನ್ನಾಗಿಸುವ ಬಗ್ಗೆ ಉಲ್ಲೇಖವಿದೆ.

ಇಲ್ಲಿ ಹೇಳಿರುವಂತೆ, (ಸಭೆಯಾಗಿ) ಆಯಲ್ಪಟ್ಟವರು ಯೇಸುವಿಗೆ ವಿಶೇಷವಾಗಿ ಕೊಡಲ್ಪಟ್ಟವರೆಂದು ಆಗಾಗ್ಗೆ ಹೇಳಲ್ಪಟ್ಟಿದ್ದು, ಮಾನವ ಕುಲದವರೆಲ್ಲರನ್ನೂ ಆತನು ಅಮೂಲ್ಯವಾದ ತನ್ನ ಸ್ವಂತ ರಕ್ತದ ಮೂಲಕ ಕೊಂಡುಕೊಂಡಿರುವ ಕಾರಣ ಅವರೂ ಆತನವರೆಂದು ಹೇಳಲ್ಪಟ್ಟಿರುವುದು. ಈ (ಸುವಾರ್ತಾ) ಯುಗದಲ್ಲಿ ತಂದೆಯು ಒಂದು ವಿಶೇಷ ಗುಂಪನ್ನು ಮಗನ ಬಳಿಗೆ ಎಳೆಯುತ್ತಿದ್ದು ತನ್ನ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಸಹ–ಬಾಧ್ಯರಾಗಿ ತನಗೆ ಜೊತೆಗಾರರಾಗುವಂಥ ಒಂದು ವರ್ಗವನ್ನು ಆತನಿಗೆ ನೀಡುವನು. ಯೇಸುವನ್ನು – "...ದೇವರು ತನ್ನ ಮಗನಿಗೆ ಅನೇಕ ಮಂದಿ ಸಹೋದರರಿದ್ದು ಅವರಲ್ಲಿ ಆತನೇ ಹಿರಿಯವನಾಗ ಬೇಕೆಂದು ಉದ್ದೇಶಿಸಿ.." (ರೋಮಾ 8:29) ಎಂದು ಹೇಳಲ್ಪಟ್ಟಿರುವಲ್ಲಿ, ಈ ವರ್ಗದವರನ್ನು ಕೆಲವು ಸಾರಿ "ಸಹೋದರು" ಎಂದು ಕರೆಯಲ್ಪಪಟ್ಟಿರುವುದು; ಮತ್ತು ಪುನಃ ಅವರನ್ನು ಆತನ ಮದಲಗಿತ್ತಿ ಹಾಗೂ ಸಹ–ಬಾಧ್ಯರೆಂದು ಹೆಸರಿಸಿ, ಇವರಿಗೂ ಮತ್ತು ಮಾನವ ಲೋಕದಿಂದ ರಕ್ಷಿಸಲ್ಪಟ್ಟು ಕ್ರಿಸ್ತನಿಗೆ ಮಕ್ಕಳಾಗುವವರೆಂದು ಗುರುತಿಸಲ್ಪಡುವರಿಗೂ ಇರುವ ವಿಭಿನ್ನತೆಗಳನ್ನು ತೋರಿಸಲಾಗಿರುವುದು. ಹೀಗೆ (ಮಕ್ಕಳಾಗುವ ಮಾನವ ಕುಲದವರಿಗೆ) ಆತನು "ನಿತ್ಯನಾದ ತಂದೆ" ಆಗುವನು. – ಪ್ರಕಟನೆ 21:9; 22:17; ರೋಮಾ. 8:17; ಯೆಶಾಯ 9:6

ತಂದೆಯು ತನಗೆ "ಕೊಟ್ಟವರೆಲ್ಲರೂ" ರಕ್ಷಣೆ ಹೊಂದಬೇಕೆಂಬುದು ಆತನ ಚಿತ್ತವಾಗಿದೆ. ಅವರು ಎಬ್ಬಿಸಲ್ಪಡುವರು – ಈ ಗುಂಪಿನಲ್ಲಿರುವವರಲ್ಲಿ ಒಬ್ಬನನ್ನಾದರೂ ಕಳಕೊಳ್ಳಬಾರದು ಎಂದು ನಮ್ಮ ಕರ್ತನು ಪ್ರಕಟಮಾಡಿ ಹೇಳಿದ್ದನು. ಹಾಗಾದರೆ ಹೀಗೆ ನಿಶ್ಚಯವಾಗಿಯೂ ರಕ್ಷಣೆಹೊಂದಲಿರುವ ಇವರು ಯಾರು? ನಾವು ಉತ್ತರಿಸುವುದೇನಂದರೆ ಅಪೋಸ್ತಲನಾದ ಪೌಲನು ಒಂದು ವರ್ಗವನ್ನು ತಂದೆಯು ಪೂರ್ವದಲ್ಲಿ ನೇಮಿಸಿ ಅವರನ್ನು ಆದುಕೊಂಡಿರುವನೆಂದು ಈ ವಿಷಯವಾಗಿ ಕೆಲವು ಮಾತುಗಳ ವಿವರಣೆಯನ್ನು ನಮಗೆ ಸೇರಿಸಿ ಹೇಳಿದ್ದಾನೆ: ಅವರು ಕರ್ತನಾದ ಯೇಸುವನ್ನು ಈಗ ನಂಬಿಕೆಯ ಮೂಲಕ ಸ್ವೀಕರಿಸಿರುವಂಥವರು, ಮತ್ತು ಈ ಸುವಾರ್ತಾ ಯುಗದಲ್ಲಿ ನೀಡಿದ "ಉನ್ನತ (ಸ್ಥಾನಕ್ಕಾಗಿರುವ) ಕರೆಯನ್ನು" ಕೇಳಿದವರಾಗಿ ಅವರು ಎಷ್ಟು ಪ್ರಭಾವಿತರಾಗಿರುವರೆಂದರೆ ಅದಕ್ಕಾಗಿ ಅವರು (ಅಭ್ಯಂತರ ಮಾಡುವ) ಎಲ್ಲಾ ಭಾರವನ್ನು ತೆಗೆದಿಟ್ಟು ಸುವಾರ್ತೆಯಲ್ಲಿ ತಮ್ಮ ಮುಂದಿಟ್ಟಿರುವ ಓಟವನ್ನು ತಾಳ್ಮೆಯಿಂದ ಓಡುವರು; ಮತ್ತು ಹೀಗೆ ಮಾಡುತ್ತಾ ಅವರು ದೇವರ ಏರ್ಪಾಟಿನ ಮತ್ತು ಮಾರ್ಗದರ್ಶನದ ಮೇರೆಗೆ ತಮ್ಮ ಗುಣನಡತೆಗಳಲ್ಲಿ "ದೇವರ ಪ್ರಿಯ ಕುಮಾರನ ಪ್ರತಿರೂಪಿಗಳಾಗಲು" ರೂಪುಗೊಂಡು ಆಕಾರ ಪಡೆಯುತ್ತಿರುವರು. – ರೋಮಾ 8:29 (ಡಯಾಗ್ಲಟ್)

ಪರಲೋಕದ ತಂದೆಯು ತಾನು ಮುಂದಾಗಿ ನೇಮಿಸಿರುವ ಈ ವರ್ಗದವರ ಸಂಖ್ಯೆಯನ್ನು ಮತ್ತು ಅದಕ್ಕಿರುವ ಷರತ್ತುಗಳನ್ನು ಗೊತ್ತುಮಾಡಿರುವನು; (ಈ ಸಂದೇಶವನ್ನು ಕಳುಹಿಸಿಕೊಡುವುದರಲ್ಲಿ ಆತನಿಗೆ ಮಾಡಬೇಕಿರುವುದು ಇದ್ದಾಗ್ಯೂ) ಶುಭ ವಾರ್ತೆಯನ್ನು ಕೇಳುವವರೆಲ್ಲರ ವಿಷಯವಾಗಿ ಹೆಚ್ಚಿಗೆ ಮಾಡುವಂಥದ್ದು ಏನಿರುವುದಿಲ್ಲ, ಕ್ರಿಸ್ತನಲ್ಲಿರುವ ತನ್ನ ಕೃಪೆಯ ಸಂಬಂಧವಾದ ಸಂದೇಶದ ಮೂಲಕ ಎಳೆಯಲ್ಪಟ್ಟವರೆಲ್ಲರ (ಆದರೂ ಎಳೆಯಲ್ಪಡುವ ವಿಷಯದಲ್ಲಿ ಆತನು ಮಾಡಬೇಕಿರುವಂಥವುಗಳು ಇದ್ದು, ಈಗಿನ ಕಾಲದಲ್ಲಿ ಕೇವಲ ಒಂದು ನಿರ್ದಿಷ್ಟವಾದ ಗುಂಪನ್ನು ಎಳೆದುಕೊಳ್ಳುತ್ತಿರವನು) ವಿಷಯವಾಗಿ ಹೆಚ್ಚಿಗೆ ಮಾಡುವುದು ಏನೂ ಇರುವುದಿಲ್ಲ; ಯೇಸುವನ್ನು ಅಂಗೀರಿಸಿರುವವರೆಲ್ಲರಿಗೆ ನೀಡಲಾದ ಕರೆಯ ಮತ್ತು ಅವರನ್ನು ಆತನ ಹೆಜ್ಜೆಯ ಜಾಡನ್ನು ಹಿಡಿದು ತಮ್ಮನ್ನು

ತಾವು ಯಜ್ಞವನ್ನಾಗಿ ಅರ್ಪಿಸಿಕೊಳ್ಳುವ ವಿಷಯದಲ್ಲಿ (ಆತನು ಈ ಕರೆಯ ವಿಷಯದಲ್ಲಿ ಆಸಕ್ತನಾಗಿದ್ದು ಈ ಕರೆಯನ್ನು ಅಂಗೀಕರಿಸುವವರ ಜೀವಿತದ ಸಂಗತಿಗಳ ಮೇಲ್ವಿಚಾರಣೆ ಮಾಡುತ್ತಿದ್ದು ಅವರಿಗೆ ಸಂಭವಿಸುವದೆಲ್ಲವನ್ನೂ ಅವರ ಒಳಿತಿಗಾಗಿ ಮಾರ್ಪಡಿಸುತ್ತಿರುವನಾದರೂ) ಹೆಚ್ಚಿಗೆ ಮಾಡುವುದೇನು ಇರುವುದಿಲ್ಲ; ಆದರೆ ಆತನು ವಿಶೇಷವಾಗಿ ಕ್ರಿಸ್ತನಿಗೆ ಮದಲಗಿತ್ತಿಯಾಗಿ ರೂಪುಗೊಳ್ಳಲಿರುವವರ ಸಂಖ್ಯೆಯನ್ನು ಮತ್ತು ಆ ಗುಂಪಿನಲ್ಲಿರುವವರ ಗುಣನಡತೆಗಳ ವಿಷಯವಾಗಿ ಮೊದಲೇ ನಿಷ್ಕರ್ಷೆಮಾಡಿರುವನು; ಮತ್ತು ಈ ಸುವಾರ್ತಾ ಯುಗದಲ್ಲಿ ಕ್ರಿಸ್ತನ ಅನುಭವಶಾಲೆಯಲ್ಲಿ ಸಂಪೂರ್ಣವಾದ ನಂಬಿಕೆ ಮತ್ತು ವಿಧೇಯತೆಗಳ ವಿಷಯವಾಗಿ ಪಾಠವನ್ನು ಕಲಿತವರಾಗಿ, ಯೇಸುವಿನಲ್ಲಿ ಬಹು ಭವ್ಯವಾಗಿ ಪ್ರದರ್ಶಿತವಾದ ಗುಣಸ್ವಭಾವಗಳನ್ನು ಮಾದರಿಯಾಗಿ ಅಭಿವೃದ್ಧಿಪಡಿಸಿಕೊಳ್ಳುವಂಥವರು ಮಾತ್ರ ಕೇವಲ ಈ ಗುಂಪಿನಲ್ಲಿ ಸೇರಿರುವರು. ತಾನು (ಯೇಸುವು) ಕೇವಲ ನಮ್ಮ ವಿಮೋಚಕನಾಗಿರುವುದು ಮಾತ್ರವಲ್ಲದೆ ನಮಗೆ ಮಾದರಿ ಯಾಗಿಯೂ ಇರಬೇಕೆಂದು ತಂದೆಯಿಂದ ಕಳುಹಿಸಲ್ಪಟ್ಟನು.

ತಂದೆಯ ಚಿತ್ತವೇನಂದರೆ, ದೈವಿಕ ಏರ್ಪಾಟಿನಲ್ಲಿ ಮಾಡಲಾದ ಮುನ್ನಡೆಸುವಿಕೆಗೆ ಹೀಗೆ ವಿಧೇಯರಾಗುವ ಮತ್ತು ತನ್ನ ಹೃದಯ ಚಿತ್ತ ಉದ್ದೇಶಗಳಲ್ಲಿ (ಶರೀರದಲ್ಲಿನ ಪರಿಪೂರ್ಣತೆಯನ್ನಲ್ಲ) ಕರ್ತನಾದ ಯೇಸುವಿನ ಹೋಲಿಕೆಯನ್ನು ಪಡಕೊಳ್ಳುವ ಪ್ರತಿಯೊಬ್ಬನು ಈ ವಿಶೇಷವಾದ ರಕ್ಷಣೆಯ ಮೂಲಕವಾಗಿ ರಕ್ಷಿಸಲ್ಪಟ್ಟು ಪ್ರಭಾವ ಮಾನ ನಿರ್ಲಯತ್ವಗಳಿಗೆ ನಡೆಸಲ್ಪಡುವ "ಮೊದಲನೇ ಪುನರುತ್ಥಾನದಲ್ಲಿ" ಯೇಸುವಿನೊಡನೆ ಪಾಲುತೆಗೆದುಕೊಳ್ಳಬೇಕೆಂಬುದೇ. ಇವರಲ್ಲಿ ಒಬ್ಬನೂ ಕಳೆದು ಹೋಗದೆ ಪ್ರತಿಯೊಬ್ಬನೂ ನೇಮಿತ ಕಾಲದಲ್ಲಿ ಅಂದರೆ "ಆ ಕಡೆಯ ದಿನದಲ್ಲಿ", ಸಾವಿರ ವರುಷದ ದಿನಗಳ, ಏಳನೇ (ಸಾವಿರ ವರುಷವೆಂಬ) ಮಹಾ ವಾರದಲ್ಲಿ, ಸಾವಿರ ವರುಷದ ಆಳ್ವಿಕೆಯ ಕಾಲವೆಂಬ ದಿನದಲ್ಲಿ, ಆ ಮಹಿಮೆಯುಳ್ಳ ಸ್ಥಾನಕ್ಕೆ ಸೇರಲು ಎಬ್ಬಿಸಲ್ಪಡಬೇಕು. ಮತ್ತು ಪ್ರವಾದಿಯು ಪ್ರಕಟಮಾಡಿ ಹೇಳಿರುವಂತೆ ಅದು ಆ ದಿನದ ಉದಯ ಕಾಲದಲ್ಲಿ ನೆರವೇರುವದು ಏಕೆಂದರೆ "ದೇವರು ಉದಯಕಾಲದಲ್ಲೇ ಇದರ (ಚಿಯೋನಿನ) ಸಹಾಯಕ್ಕೆ ಬರುವನು."

40ನೇ ವಚನವು ತಂದೆಯು ಮಗನಿಗೆ ಆ ರಾಜ್ಯದಲ್ಲಿ ಜೊತೆಗಾರರೂ ಸಹ–ಬಾಧ್ಯರೂ ಆಗುವದಕ್ಕೆ ವಿಶೇಷವಾಗಿ ಕೊಟ್ಟವರ ಮತ್ತು ಈ ಕಾಲದಲ್ಲಿ (ಸುವಾರ್ತಾಯುಗದಲ್ಲಿ) ತಾನು ಮಾಡಿರುವ ಏರ್ಪಾಡುಗಳ ಮೂಲಕವಾಗಿ ಎಳೆಯಲ್ಪಡುತ್ತಿರುವವರ ವಿಷಯವಾಗಿ ಉಲ್ಲೇಖಿಸುವುದಿಲ್ಲ; ಇದು ಉಳಿದ ಮಾನವ ಕುಲವನ್ನು ಮತ್ತು ಯಾರಿಗಾಗಿ ಕರ್ತನಾದ ಯೇಸುವು ಈಡು ಬೆಲೆಯನ್ನು ನೀಡಿರುವನೋ ಹಾಗು ಯಾರನ್ನು ತಂದೆಯ ಯೋಜನೆಯ ಅನುಸಾರ ಸಾವಿರ ವರುಷದ ಆಳ್ವಿಕೆಯ ಸಮಯದಲ್ಲಿ ಸ್ವತಃ ತಾನೇ ತನ್ನ ಬಳಿಗೆ ಎಳೆದುಕೊಳ್ಳಲಿರುವನೋ ಅವರ ವಿಷಯವಾಗಿ ಉಲ್ಲೇಖಿಸಲಾಗಿದೆ. ಈ ವಿಷಯವಾಗಿ ಹೀಗೆ ಹೇಳಲ್ಪಟ್ಟಿದೆ: "ನಾನು ಭೂಮಿಯಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು." ಆದರೆ ತಂದೆಯ ಏಳೆಯುವಿಕೆಯು ಹೇಗೆ ಖಡ್ಡಾಯವಲ್ಲವೋ ಹಾಗೆಯೆ ಮಗನ ಎಳೆಯುವಿಕೆಯು ಖಡ್ಡಾಯವಿರುವುದಿಲ್ಲ. ಆದರೆ ನಾವು ಊಹಿಸಬಹುದೇನಂದರೆ, ತಂದೆಯ ಎಳೆಯುವಿಕೆಯನ್ನು ವಿರೋಧಿಸುವವರಲ್ಲಿ ಬಹು ಪಾಲಿನ ಜನರು ಹೀಗೆ ಮಾಡುವದು ಅವರಲ್ಲಿರುವ ಕುರುಡುತನ ಅಜ್ಞಾನ, ಮುಂತಾದವುಗಳ, ಕಾರಣ; ಅದು ಇಹಲೋಕಾಧಿಕಾರಿಯು ಅಧಿಕಾರನಡೆಸುತ್ತಾ ಮರುಳುಗೊಳಿಸುತ್ತಿರುವ ಕಾರಣ; ನಾವು ಸೂಕ್ತವಾಗಿ ಭಾವಿಸ–ಬಹುದೇನಂದರೆ ನಮ್ಮ ಪ್ರಿಯ ವಿಮೋಚಕನ ಸಾವಿರ ವರುಷದ ಆಳ್ವಿಕೆಯ ರಾಜ್ಯವು ಸ್ಥಾಪನೆಗೊಂಡಾಗ ಮತ್ತು ಇಹಲೋಕಾಧಿಕಾರಿಯಾದ ಸೈತಾನನು "ಕಟ್ಟಲ್ಪಟ್ಟಾಗ" (ಪ್ರಕಟನೆ 20:2) ಮತ್ತು ಕರ್ತನ ವಿಷಯವಾದ ಜ್ಞಾನವು ಭೂಲೋಕ ವನ್ನೆಲ್ಲಾ ತುಂಬಿಕೊಳ್ಳುವಾಗ ಸ್ವತಃ ವಿಮೋಚಕನ ಹಾಗೂ ತನ್ನೊಡನೆ ಪ್ರಭಾವದಲ್ಲಿ ಸೇರಿದ ಆತನ ದೇಹವಾಗಿರುವ ಸಭೆಯು ಮಾನವ ಲೋಕದಲ್ಲಿ ಪ್ರಯೋಗಿಸುವ ಎಳೆಯುವಿಕೆಯ ಪ್ರಭಾವವು ಬಹು ದೊಡ್ಡ ಫಲಿತಾಂಶವನ್ನು ನೀಡುವದು ಮತ್ತು ಹೀಗಾಗಿ ಮನಃಪೂರ್ವಕವಾಗಿ ಪಾಪವನ್ನು ಆಶಿಸಿ ಅಲ್ಲಿ ವಿಧಿಸಲಾಗುವ ಆ ರಾಜ್ಯದ ನಂಬಿಕೆಯ ಮತ್ತು ವಿಧೇಯತೆಗಳ ವಿಷಯವಾದ ಶರತ್ತುಗಳನ್ನು ನಿರಾಕರಿಸುವವರನ್ನು ಬಿಟ್ಟರೆ ಅನೇಕರು ಈ ಪ್ರಭಾವಕ್ಕೆ ಒಳಗಾಗಿ ಕರ್ತನ ಬಳಿಗೆ ಯಥಾರ್ಥವಾಗಿಯೂ ಹೃದಯಪೂರ್ವಕವಾಗಿಯೂ ಬಂದು ಆತನಲ್ಲಿ ದೇವರು ಒದಗಿಸಿರುವ ಆಶೀರ್ವಾದವನ್ನು ಪಡೆದುಕೊಳ್ಳುವರು.

ಈ ವರ್ಗದ ವಿಷಯವಾಗಿ (ವಚನ 40) ಇಂಥವರೆಲ್ಲರೂ ಮಗನನ್ನು ನೋಡುವುವರೆಂಬುದು ತನ್ನ ತಂದೆಯ ಚಿತ್ತವೆಂದು ಕರ್ತನು ಪ್ರಕಟಿಸಿ ಹೇಳಿರುವುದು (ಪ್ರವಾದಿಗಳ ಮೂಲಕವಾಗಿ ಕರ್ತನು ವಾಗ್ದಾನ ಮಾಡಿರುವಂತೆ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಅವರ ಕಣ್ಣುಗಳು ತೆರೆಯಲ್ಪಡಲಿರುವುದು – ಜೆಕರ್ಯ 12:10). ಅವರ ಮನೋನೇತ್ರಗಳು ಆಗ ತೆರೆಯಲ್ಪಟ್ಟಿರಲು ಅವರು ಕರ್ತನ ಮತ್ತು ಆತನು ತನಗೆ ವಿಧೇಯರಾಗುವವರಿಗೆ ನೀಡುವ ನಿತ್ಯಜೀವದ ಒಡಂಬಡಿಕೆಯ ವಿಷಯವಾಗಿ ಮನವರಿಕೆ ಮಾಡಿಕೊಳ್ಳುವರು; ಇದನ್ನು ಈಗ ಅವರು ಮನವರಿಕೆ ಮಾಡಿಕೊಳ್ಳಲು ಸಾಧ್ಯವಾಗದು. ತಮ್ಮ ಮನೋನೇತ್ರಗಳನ್ನು ಮಂಕುಮಾಡಿರುವ ಈ ಪ್ರಪಂಚದ ದೇವರನ್ನು ಸಾವಿರ ವರುಷದ ವರೆಗೂ ಬಂಧಿಸಿ ಆಗ ಕರ್ತನ ಮತ್ತು ಮಹಿಮೆ ಹೊಂದಿದ ಆತನ ದೇಹವಾದ ಸಭೆಯೆಂಬ ನೀತಿ ಸೂರ್ಯನ ಮೂಲಕವಾಗಿ ಲೋಕದಲ್ಲಿ ಹೊಳೆಯುವ ದೇವರ ಜ್ಞಾನವೆಂಬ ಪ್ರಕಾಶವು ಆತನ ಪೀಡನಾ ಪ್ರಭಾವವನ್ನು ಇಲ್ಲದಂತೆ ಮಾಡುವದು.

ಆಗ ಕ್ರಿಸ್ತನನ್ನು ಅಂಗೀಕರಿಸುವವರೆಲ್ಲರೂ ಸಹ ನಿತ್ಯಜೀವವನ್ನು ಹೊಂದಬೇಕೆಂಬುದು ದೇವರ ಚಿತ್ತವಾಗಿದೆ; ಮತ್ತು ಅವರು ಸಹ ಕರ್ತನಾದ ಯೇಸುವಿನ ಮೂಲಕ ಪರಿಪೂರ್ಣತೆಗೆ ಎಬ್ಬಿಸಲ್ಪಡುವರು. ಅವರ ಪರಿಪೂರ್ಣತೆಯು ಭೂಲೋಕದ ಸಂಬಂಧವಾದುದಾದರೂ ಅದು ಇತರರ ಹಾಗೆ ಪರಲೋಕ ಸಂಬಂಧವಾದುದಾಗಿರುವುದಿಲ್ಲ; ಮತ್ತು ಅವರ ಎಬ್ಬಿಸುವಿಕೆಯು "ಕಡೇ ದಿನದಲ್ಲಿ ನಡೆಯುವುದು". ಆದರೆ ಅದು

"ಆಯಲ್ಪಟ್ಟವರ" ವಿಷಯವಾದ "ಮೊದಲನೆಯ ಪುನರುತ್ಥಾನವು" ಆಗುವಂತೆ ಆರಂಭದ ಕಾಲದಲ್ಲಿ ನಡೆಯು–ವುದಿಲ್ಲ. ಈ ಸುವಾರ್ತಾಯುಗದಲ್ಲಿ ಪೂರ್ಣ ಜಯಶಾಲಿಗಳಾಗಿ ಕ್ರಿಸ್ತನ ದೇಹವಾಗುವವರು ಒಂದು ಕ್ಷಣದಲ್ಲಿ ರೆಪ್ಪೆ ಬಡಿಯುವಷ್ಟರೊಳಗೆ ಪರಿಪೂರ್ಣರಾಗಿ ಆತನ ಹೋಲಿಕೆ –ಯಲ್ಲಿರುವರು, ಮತ್ತು ಇದು ನಡೆದ ನಂತರ ಆ ಕಾಲದ ಅಂತ್ಯದವರೆಗೂ ಮಾನವ ಕುಲದವರನ್ನು ಪಾಪ ಮತ್ತು ದುಷ್ಟತನ ಮತ್ತು ನೀತಿಭ್ರಷ್ಟತೆಯಿಂದ ಕ್ರಮೇಣವಾಗಿ ವಿಜೃಂಭಣೆಯಿಂದ ಮೇಲಕ್ಕೆ ಎತ್ತುತ್ತಾ ಬರಲಾಗುವದು. ಇದು ಸಾವಿರ ವರುಷದ ಆಳ್ವಿಕೆಯ ಕಾಲದ ಕೊನೆಯವರೆಗೂ ನಡೆಯಲ್ಪಟ್ಟು ಅಲ್ಲಿ ಮನಃಪೂರ್ವಕವಾಗಿ ವಿಧೇಯರಾದವರು ಪರಲೋಕದಿಂದ ಇಳಿದು ಬಂದ ರೊಟ್ಟಿಯನ್ನು ತಮಗೆ ತೃಪ್ತಿಯಾಗುವಷ್ಟು ತಿಂದು ಪಾಪ ಮತ್ತು ಮರಣದಿಂದ ನಿತ್ಯಜೀವ ಪಡೆದು ಆದಾಮನು ಪಾಪ ಮಾಡುವದಕ್ಕೆ ಮೊದಲಿದ್ದ ದೇವರ ಹೋಲಿಕೆ ಮತ್ತು ಪ್ರತಿರೂಪಕ್ಕೆ ಪೂರ್ಣವಾಗಿ ಎಬ್ಬಿಸಲ್ಪಡುವರು. ಆದರೂ ಅವರು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಾಗುವ ಅನುಭವಗಳ ಮೂಲಕ ಗುಣನಡತೆಗಳ ವಿಷಯದಲ್ಲಿ ಪರೀಕ್ಷಿತರಾಗಿ ಪರಿಪೂರ್ಣತೆ ಹೊಂದುವರು.

*****

# ರಕ್ತ ಮತ್ತು ಮಾಂಸ

### ರೀಪ್ರಿಂಟ್ಸ್ ಪುಟ 611

**"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೇ ಹೋದರೆ ನಿಮ್ಮೊಳಗೆ ಜೀವವಿಲ್ಲ; ನನ್ನ ಮಾಂಸವನ್ನು ತಿಂದು ನನ್ನ ರಕ್ತವನ್ನು ಕುಡಿಯುವವನು ನಿತ್ಯಜೀವವನ್ನು ಹೊಂದಿದ್ದಾನೆ;" "ಬದುಕಿಸುವಂಥದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿದ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ." – ಯೋಹಾನ 6:53–54, 63**

ಸತ್ಯವನ್ನು ಗೌಪ್ಯವಾಗಿ ವ್ಯಕ್ತಪಡಿಸುವುದು ನಮ್ಮ ಕರ್ತನ ಪದ್ಧತಿಯಾಗಿತ್ತು ಹಾಗು ಹಲವರಿಗೆ ಇದು ಅತಿ ಮಾರ್ಮಿಕವಾಗಿರುವುದು. ಇದನ್ನು ಕೇಳಿದಾಗ ಯೆಹೂದ್ಯರು ಬೆರಗಾಗಿ ಹೀಗೆ ಹೇಳಿದರು: "ಇವನು ತನ್ನ ಮಾಂಸವನ್ನು ನಮಗೆ ಹೇಗೆ ತಿನ್ನುವುದಕ್ಕೆ ಕೊಟ್ಟಾನು..." ಮತ್ತು ಶಿಷ್ಯರಲ್ಲಿ ಅನೇಕರು ಗುಣಗುಟ್ಟುವವರಾಗಿ ಹೀಗಂದರು: "ಇದು ಕಠಿಣವಾದ ಮಾತು, ಇದನ್ನು ಯಾರು ಕೇಳಾರು?" ಅಲ್ಲದೆ ಈದಿನವೂ ಯೇಸುವು ಹೇಳಿದುದರ ಅರ್ಥವು ಅವರು ಅಕ್ಷರಶಃ ಆತನ ಶರೀರದ ಮಾಂಸವನ್ನು ತಿನ್ನುವುದಲ್ಲವೆಂಬುದನ್ನು ಸಾಧಾರಣವಾಗಿ ಗ್ರಹಿಸಿಕೊಂಡಿದ್ದರೂ ಆತನು ಹೇಳಿದುದರ ಅರ್ಥವೇನೆಂಬುದರ ಸ್ಪಷ್ಟವಾದ ಕಲ್ಪನೆ ಯಾರಿಗೂ ಇರುವುದಿಲ್ಲ.

ತನ್ನ ಮಾತುಗಳು ಆತ್ಮವಾಗಿರುವುದು ಅಥವಾ ಆತ್ಮಿಕ ವಿಷಯಕ್ಕೆ ಸಂಬಂಧಿಸಿರುವುದೆಂದು ಒಡೆಯನು ಹೇಳಿರುವ ಕಾರಣ ಈ ಅಕ್ಷರಶಃವಾದ ಮಾತುಗಳಿಗೆ ವಿರುದ್ಧವಾಗಿರುವುಗಳಲ್ಲಿ ಅರ್ಥವನ್ನು ಹುಡುಕಬೇಕೆಂಬ ಆತುರದ ತೀರ್ಮಾನಕ್ಕೆ ಕೆಲವರು ಬಂದಿರುವರು; ಮತ್ತು ಇಂಥವರು "ರಕ್ತ ಮತ್ತು ಮಾಂಸ" ಎಂಬುದರ ಅರ್ಥ ಆತ್ಮಿಕ ಸ್ವಭಾವವೆಂದು ತೀರ್ಮಾನಿಸಿ ಕೊಂಡಿರುವರು. ಆದರೆ ತನ್ನ ಮಾತುಗಳು ಆತ್ಮಿಕವಾದವುಗಳು ಮಾಂಸವಲ್ಲ ಎಂದು ಯೇಸುವು ಹೇಳಿದ ಅಂಶವನ್ನು ಅವರು ಕಡೆಗಣಿಸಿರುವರು.

" ರಕ್ತ ಮತ್ತು ಮಾಂಸ" ಎನ್ನುವಾಗ ಕರ್ತನು ಆತ್ಮಿಕ ಸ್ವಭಾವವನ್ನು ಉಲ್ಲೇಖಿಸಿರಲಿಲ್ಲವೆಂಬುದನ್ನು ಆತನ ಮಾತುಗಳೆಲ್ಲವನ್ನೂ ಜ್ಞಾಪಿಸಿಕೊಳ್ಳುವಾಗ ಸುಲಭವಾಗಿ ಕಾಣಬಹುದು. "ನನ್ನ ಮಾಂಸವನ್ನು ...ನಾನು ಲೋಕದ ಜೀವಕ್ಕೋಸ್ಕರ ಕೊಡುತ್ತೇನೆ" (ವಚನ 51) ಎಂದು ಆತನು ಹೇಳಿದಾಗ ತನ್ನ ಆತ್ಮಿಕ ಸ್ವಭಾವವನ್ನು ಕೊಡುವೆನೆಂಬ ಅರ್ಥದಲ್ಲಿ ಹೇಳಿದ್ದನೇ? ಹಾಗಿದ್ದಲ್ಲಿ ಆತನು ಅದನ್ನು ನಮಗೆ ಕೊಟ್ಟಿದ್ದಲ್ಲಿ ಆತನಿಗೆ ಈಗ ಆತ್ಮಿಕ ಸ್ವಭಾವವಿರುತ್ತಿರಲಿಲ್ಲ; ಏಕೆಂದರೆ "ಆತನು ತನಗಿದ್ದುದೆಲ್ಲವನ್ನು ಕೊಟ್ಟುಬಿಟ್ಟಿದ್ದನು" (ಮತ್ತಾಯ 13:44) ಎಂಬುದು ನಮಗೆ ನೆನಪಿನಲ್ಲಿರುವುದು. ಇದು ಲೋಕದ ಜೀವಕ್ಕಾಗಿ ತನ್ನ ದೈವಿಕ ಸ್ವಭಾವದಲ್ಲಿರುವದನ್ನೆಲ್ಲಾ ಕೊಟ್ಟುಬಿಟ್ಟಿದ್ದನೆಂಬ ಅರ್ಥಕೊಡುವುದಿಲ್ಲ. ಇದೇ ವಿಷಯವನ್ನು ಮತ್ತೊಂದು ಸಾರಿ ಆತನು ಹೇಳಿದ್ದು: "ಇದು ನಿಮಗಾಗಿ ಮುರಿಯಲ್ಪಡುವ ನನ್ನ ದೇಹ.... ಇದು ನನ್ನ ರಕ್ತ... ಇದು ಪಾಪಗಳ ಕ್ಷಮೆಗಾಗಿ ಬಹು ಜನರಿಗೋಸ್ಕರ ಸುರಿಸಲ್ಪಡುವ ರಕ್ತ" ಇದು ಆತ್ಮಿಕ ಸ್ವಭಾವವೆಂಬ ಅರ್ಥಕೊಡುವದೆಂದು ಯಾರಿಗೆ ತಾನೇ ಒಂದು ಕ್ಷಣವಾದರೂ ಭಾವಿಸಿಕೊಳ್ಳಲು ಸಾಧ್ಯ? ಮರಣವನ್ನನುಭವಿಸುವುದರ (ಇಬ್ರಿಯ 2:9) ಮೂಲಕ ಯಜ್ಞಾರ್ಪಿತವಾಗುವದಕ್ಕಾಗಿ ಸಿದ್ಧಮಾಡಲ್ಪಟ್ಟ ದೇಹವು (ಇಬ್ರಿಯ 10:5) ಮುರಿಯಲ್ಪಟ್ಟು ಸುರಿಸಲ್ಪಟ್ಟುದುದು ಆತ್ಮಿಕವಾದುದೇ ಅಥವಾ ಶಾರೀರಿಕವಾದುದೇ? ಯಾವುದೆಂದು ನೀವು ನೆನಸುವಿರಿ?

ಇಲ್ಲಿನ ಹಾಗು ಸತ್ಯವೇದದ ಇತರ ಹೇಳಿಕೆಗಳ ದೃಷ್ಟಿಯಿಂದ, ಎಲ್ಲರೂ ತಿನ್ನುವ ಸಲುವಾಗಿ ಮುರಿಯಲ್ಪಟ್ಟದ್ದು ಆತ್ಮಿಕ ಸ್ವಭಾವವೆಂಬುದು ಯೇಸುವಿನ ಮಾತಿನ ಅರ್ಥವೆಂದು

ಯಾರೂ ವ್ಯಾಖ್ಯಾನಮಾಡದಿರಲಿ. "ಆತನು ಹೇಳಿದ್ದುದು ಏನೆಂಬುದು ನಮಗೆ ಹೇಳಲು (ಅರ್ಥೈಸಲು) ಸಾಧ್ಯವಿಲ್ಲ" ಎಂದು ಕೆಲವು ಯೆಹೂದ್ಯರು ಹೇಳಿದ ಹಾಗೆ ಅರಿಕೆಮಾಡುವುದು ನಮಗೆ ಉತ್ತಮ.

ಆದರೆ ಬೇರೆ ಕೆಲವರು ಸಲಹೆಮಾಡುವುದೆಂದರೆ, "ರಕ್ತ ಮಾಂಸ" ವೆಂದು ಇಲ್ಲಿ ಉಪಯೋಗಿಸಿರುವುದು ನೈತಿಕವಾದ ಪರಿಪೂರ್ಣತೆಯ ಬಗ್ಗೆ ಉಲ್ಲೇಖಿಸುವುದೆಂದು ಮತ್ತು ಎಲ್ಲರೂ ಯೇಸುವಿನ ನೈತಿಕವಾದ ಪರಿಪೂರ್ಣತೆಯನ್ನು ತಿನ್ನಬೇಕು ಅಥವಾ ಸ್ವೀಕರಿಸಬೇಕು ಇಲ್ಲವಾದಲ್ಲಿ ಅವರಲ್ಲಿ ಜೀವವಿರುವುದಿಲ್ಲ ವೆಂದು ಇತರರು ಸಲಹೆಮಾಡಿರುವುದು ಯೇಸುವಿನ ಮಾತಿನ ಅಭಿಪ್ರಾಯಕ್ಕೆ ಬಹು ದೂರವಾದುದಾದರೂ ನಿತ್ಯಜೀವವನ್ನು ಪಡೆಯಲು ಎಲ್ಲರೂ ನೈತಿಕ ಗುಣವನ್ನು ಹೊಂದಿರಬೇಕೆಂಬುದು ಸತ್ಯ. ಹೀಗಿದ್ದರೂ ಇವು ಈಗ ಪರಿಗಣನೆ ಮಾಡುತ್ತಿರುವ ನಮ್ಮ ಕರ್ತನ ಮಾತಿನ ಅರ್ಥವಾಗಿರುವುದಿಲ್ಲ. ಈಗ ನಾವು ಇದನ್ನು ಪರೀಕ್ಷಿಸಿ ನೋಡೋಣ. ನಮಗಾಗಿ "ತ್ಯಜಿಸಲ್ಪಟ್ಟದ್ದು" "ಕೊಡಲ್ಪಟ್ಟದ್ದು" ಅಥವಾ "ಮುರಿಯಲ್ಪಟ್ಟದ್ದು" ಯೇಸುವಿನ ನೈತಿಕ ಪರಿಪೂರ್ಣತೆಯೇ? ಖಂಡಿತವಾಗಿಯೂ ಅಲ್ಲ; ನೈತಿಕ ಪರಿಪೂರ್ಣತೆಯನ್ನು "ಮುರಿಯಲ್ಪಡುವುದು (ಒಡೆಯುವುದು)" ಇಲ್ಲವೇ ವರ್ಜಿಸುವುದು ಅಥವಾ ತ್ಯಜಿಸುವುದು ನೈತಿಕವಾಗಿ ಅಪರಿಪೂರ್ಣವಾಗುವುದು ಎಂದಾಗುತ್ತದೆ. ಆದುದರಿಂದ "ಆತ್ಮ" ಅಥವಾ ಯೇಸುವಿನ ಮಾತಿನ ಅರ್ಥವು ನಾವು ಆತನಲ್ಲಿರುವ ದೈವಿಕ ಸ್ವಭಾವವನ್ನು ಇಲ್ಲವೇ ಆತನ ನೈತಿಕ ಗುಣಗಳನ್ನು ತಿನ್ನಬೇಕೆಂಬುದಲ್ಲವೆಂಬದು ಸ್ಪಷ್ಟವಾಗುತ್ತದೆ.

ಹಾಗಾದರೆ ಆತ್ಮ ಅಥವಾ "ರಕ್ತಮಾಂಸ" ವೆಂದು ಇಲ್ಲಿ ಉಪಯೋಗಿಸಿರುವ ಮಾತುಗಳ ಭಾವ ಅಥವಾ ಅಭಿಪ್ರಾಯ ವೇನು? ಈ ಮಾತುಗಳಿಗೆ ಬೇರೆ ಕಡೆಯಲ್ಲಿರುವ ಭಾವ ಅಥವಾ ಮಹತ್ವವನ್ನೇ ಇಲ್ಲಿಯೂ ಕೊಡಬೇಕು. ಹಲವಾರು ಸತ್ಯವೇದ ವಚನಗಳು ಸಾಬೀತುಪಡಿಸಿರುವಂತೆ, ರಕ್ತಮಾಂಸವು ಏಕರೀತಿ – ಯಾಗಿ ಮಾನುಷಸ್ವಭಾವವನ್ನು ಸೂಚಿಸುತ್ತದೆ. (ಮತ್ತಾಯ 16:17; ಯೋಹಾನ 1:14; ಕೊಲೊಸ್ಸೆ 1:22; ಫಿಲೆಮೋನ 16; 1 ಕೊರಿಂಥ 15:50; 1 ಪೇತ್ರ 1:24, ಮತ್ತು 3:18, ಹಾಗೂ 4:1)

ನಾವು ಈಗ "ರಕ್ತಮಾಂಸ" ಎಂಬ ಪದದ ಅರ್ಥ – ವಿವರಣೆಗೆ ಪ್ರಯತ್ನಿಸಿ ನೋಡಿ, ಇದು ಎಲ್ಲಾ ಷರತ್ತುಗಳಿಗೆ ಸರಿಹೊಂದಿ ಪೂರ್ಣವಾಗುತ್ತದೋ ಇಲ್ಲವೋ ಎಂಬುದನ್ನು ನೋಡೋಣ. ಲೋಕದ ಜೀವಕ್ಕೋಸ್ಕರವಾಗಿ "ತ್ಯಜಿಸಲ್ಪಟ್ಟಿದ್ದು", "ಕೊಡಲ್ಪಟ್ಟದ್ದು" ಇಲ್ಲವೇ "ಮುರಿಯಲ್ಪಟ್ಟದ್ದು" ಯೇಸುವಿನ ಮಾನುಷ್ಯಸ್ವಭಾವವೇ? ನಿಜವಾಗಿಯೂ ಹೌದು; ನಮ್ಮೆಲ್ಲರಿ– ಗೋಸ್ಕರ ಈಡಾಗಿ ಒಪ್ಪಿಸಿಕೊಡಲು ಆತನು ದೇವದೂತರಿ– ಗಿಂತಲೂ ಸ್ವಲ್ಪವೇ ಕಡಿಮೆಯಾದ ನಮ್ಮ ಮಾನುಷ್ಯಸ್ವಭಾವವನ್ನು ತೆಗೆದುಕೊಂಡನು. ಆತನು ತನ್ನ ಮಾನುಷ್ಯಸ್ವಭಾವವನ್ನು ನಮ್ಮಗಳ ಮಾನುಷ್ಯಸ್ವಭಾವಕ್ಕೆ ಈಡಾಗಿ ಅರ್ಪಿಸಿದನು; ಆತನು ತನ್ನ ಅಮೂಲ್ಯವಾದ ರಕ್ತದಿಂದ ನಮ್ಮನ್ನು ಕೊಂಡುಕೊಂಡನು; ಆತನು ನಮಗಾಗಿ "ತನಗಿರುವುದೆಲ್ಲವನ್ನೂ ಕೊಟ್ಟುಬಿಟ್ಟನು" (ಮತ್ತಾಯ 13:44). "ಒಬ್ಬ ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಒಬ್ಬ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು." (1 ಕೊರಿಂಥ 15:21) ನಮಗಾಗಿ ತನ್ನ ಮಾನುಷ್ಯಸ್ವಭಾವವನ್ನು ಈಡು ಬಲಿಯಾಗಿ ಅರ್ಪಿಸಿದುದರಲ್ಲಿ, ಮನುಷ್ಯನಾದ ಕ್ರಿಸ್ತ ಯೇಸುವು ನಮಗೆ ಬದಲಿಯಾಗಿ ನಮ್ಮನ್ನು ಪ್ರತಿನಿಧಿಸಿದ್ದನು.

ಹಾಗಾದಲ್ಲಿ ಇಲ್ಲಿ ಉಪಯೋಗಿಸಿರುವ ಪದದಲ್ಲಿ ವ್ಯಕ್ತವಾಗಿರುವ ಷರತ್ತುಗಳಿಗೆ ಈ ವ್ಯಾಖ್ಯಾನವು ಸರಿಹೊಂದುವ ದಾದರೆ ಇದು ಒಡೆಯನ ಉಪದೇಶದ ಅಭಿಪ್ರಾಯದ ಸರಿಯಾದ ಭಾವ ಅಥವಾ ಅರ್ಥವೆಂಬುದನ್ನು ತೋರಿಸಿಕೊಡುತ್ತದೆ.

ಆದರೆ ನಾವು ವಿಚಾರಿಸುವುದೇನೆಂದರೆ: ಯಾವ ಅರ್ಥದಲ್ಲಿ ನಾವು ಯೇಸುವಿನ ಮಾನುಷ್ಯಸ್ವಭಾವವನ್ನು ತಿನ್ನಲು ಸಾಧ್ಯ? ಈ ಮಾತಿನ ಭಾವವನ್ನು ಮತ್ತು ಅರ್ಥವನ್ನು ಹುಡುಕಬೇಕಿರುವುದೆಂಬುದನ್ನು ಈಗಲೂ ನೆನಪಿನಲ್ಲಿಡಬೇಕು; ಯಾಕೆಂದರೆ ತಿನ್ನುವಿಕೆ ಎನ್ನುವುದು ರಕ್ತಮಾಂಸವೆನ್ನುವಷ್ಟೇ ಸಾಂಕೇತಿಕವಾದುದು. ತಿನ್ನುವುದು ಎಂಬುದು ತಿಂದ ವಸ್ತುವಿನಲ್ಲಿರುವ ಜೀವಕೊಡುವ ಗುಣವನ್ನು ತಮ್ಮ ಸ್ವಂತಕ್ಕಾಗಿ ಬಳಸಿಕೊಳ್ಳುವುದನ್ನು ಸೂಚಿಸುವುದು. ಈ ಉದ್ದೇಶದಿಂದ ಅರ್ಪಣೆಯಾಗಿ ಮುರಿಯಲ್ಪಟ್ಟು ಮುಡುಪಾಗಿಟ್ಟ ಯೇಸುವಿನ ಮಾನುಷ್ಯಸ್ವಭಾವವನ್ನು ಈಗ ನೀವು ನಿಮ್ಮ ಪರವಾಗಿ ಅಂಗಿಕಾರಮಾಡಿಕೊಳ್ಳದಿದ್ದರೆ ನಿಮ್ಮಲ್ಲಿ ಜೀವವಿಲ್ಲವೆನ್ನುವುದು ಇದಕ್ಕೆ ಎಷ್ಟು ಸರಿಹೊಂದುವುದೆಂದು ನಾವು ಈಗ ನೋಡೋಣ. ಇದು ಹೀಗೆ ಸಂಪೂರ್ಣವಾಗಿ ಹೊಂದಾಣಿಕೆಯಾಗಿರುವುದು. ಮಾನವರು ಜೀವದ ಎಲ್ಲಾ ಹಕ್ಕನ್ನು ಆದಾಮನ ಮೂಲಕವಾಗಿ ಕಳಕೊಂಡು ತಮ್ಮಲ್ಲಿ ಜೀವಿಸಲು ಯಾವ ಹಕ್ಕೂ ಇಲ್ಲವಾಗಿ ಈಗ ಸಾಯುವ ಸ್ಥಿತಿಯಲ್ಲಿದ್ದು ಸತ್ತುಹೋಗಿರುವರು. ಈಗ ಈಡು ಕೊಡಲ್ಪಟ್ಟಿದ್ದರೂ, ದೇಹವು ಈಗ ಮುರಿಯಲ್ಪಟ್ಟಿದ್ದರೂ, ಈಡು ಬೆಲೆಯ ಬಗ್ಗೆ ಪೂರ್ಣವಾಗಿ ಗ್ರಹಿಸಿಕೊಂಡು ಅದನ್ನು ನಂಬಿಕೆಯ ಮೂಲಕ ಮನುಷ್ಯನಾಗಿ ಬಂದ ಕ್ರಿಸ್ತ ಯೇಸುವು ತನ್ನ ಶರೀರವನ್ನು (ಮನುಷ್ಯಸ್ವಭಾವವನ್ನು) ಎಲ್ಲರಿಗಾಗಿ ಕೊಟ್ಟು ಸಂಪಾದಿಸಿದ ಜೀವದ ಹಕ್ಕುಗಳನ್ನು ತಮ್ಮ ಪರವಾಗಿ ಅಂಗೀಕಾರ ಮಾಡಿಕೊಳ್ಳದ ಹೊರತು ಯಾವ ಮನುಷ್ಯನೂ ಎಂದೂ ಮಾನವ ಪರಿಪೂರ್ಣತೆಗೆ (ಜೀವಕ್ಕೆ) ಮತ್ತೆ ತಲುಪಲು ಸಾಧ್ಯವಾಗುವದಿಲ್ಲವೆಂಬುದು ದೇವರ ಯೋಜನೆಯ ಒಂದು ಅಂಶವಾಗಿತ್ತು. ಮತ್ತು ಇದನ್ನು ಎಷ್ಟು ಬೇಗನೆ ತಮ್ಮ ಪರವಾಗಿ ಅಂಗೀಕರಿಸಿಕೊಳ್ಳುವೆವೋ, ಅಷ್ಟು ಬೇಗನೆ ದೇವರು (ಯಜ್ಞಫಲವಾದ) ನೀತಿಯನ್ನು ಒದಗಿಸಿಕೊಡುವನು; ಮತ್ತು ಹೀಗೆ ಕ್ರಿಸ್ತನು ಸಂಪಾದಿಸಿದ ನೀತಿ ಮತ್ತು ಅದರಲ್ಲಿನ ನಿತ್ಯಜೀವದ ಹಕ್ಕನ್ನು ನಮಗೆ ಒದಗಿಸಲಾಗುವದು.

ಹೀಗೆ ನಂಬಿಕೆಯ ಮೂಲಕ ನಮಗಾಗಿ ಯಜ್ಞಾರ್ಪಿತ ವಾದುದನ್ನು ನಾವು ತಿನ್ನುವೆವು ಅಥವಾ ನಮ್ಮ ಪರವಾದುದೆಂದು ಅಂಗೀಕರಿಸಿಕೊಳ್ಳುವೆವು. ನಮಗಾಗಿ ಯಜ್ಞಾರ್ಪಿತನಾದ ಮನುಷ್ಯನಾಗಿರುವ ಕ್ರಿಸ್ತ ಯೇಸುವು ಪಡಕೊಂಡ ಹಕ್ಕುಗಳು ಮತ್ತು

ಯಜ್ಞಫಲಗಳನ್ನು ಹೀಗೆ ತಿನ್ನದಿದ್ದಲ್ಲಿ ಅಥವಾ ನಮ್ಮ ಪರವಾಗಿ ಅಂಗೀಕರಿಸಿಕೊಳ್ಳದಿದ್ದಲ್ಲಿ ನಮ್ಮಲ್ಲಿ ಜೀವವಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನಾವು ಆತನಲ್ಲಿ ಇಲ್ಲವೇ ಆತನಿಂದ ಅಥವಾ ಆತನ ಮೂಲಕವಾಗಿ ಮೊದಲನೇ ಆದಾಮನ ಮೂಲಕವಾಗಿ ಕಳಕೊಂಡದ್ದನ್ನು ಪುನಃ ಪಡೆದುಕೊಳ್ಳುವೆವು. ಇಲ್ಲವೆ ಇತರ ಯಾರಲ್ಲಿಯೂ ರಕ್ಷಣೆಯು (ಜೀವವು) ದೊರೆಯುವುದಿಲ್ಲ; ಏಕೆಂದರೆ ಆ ಹೆಸರಿನಿಂದಲೇ ಹೊರತು ಅಕಾಶದ ಕೆಳಗೆ ಮನುಷ್ಯರೊಳಗೆ ಕೊಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ (ಮರಣದಿಂದ) ರಕ್ಷಣೆಯಾಗುವುದಿಲ್ಲ. ಅಪೋಸ್ತಲರ ಕೃತ್ಯಗಳು 4:12. ಹೀಗಿರುವಲ್ಲಿ ಯಾರು ಈ ಈಡು ಹಾಗು ಅದರ ಅಗತ್ಯತೆ ಮತ್ತು ಅದರ ಬೆಲೆಯನ್ನು ಅಲ್ಲದೆ ಇಡೀ ಲೋಕಕ್ಕೆಲ್ಲಾ ನೀಡಲಾಗಿರುವ ಜೀವವನ್ನು ಹಿಂದಿರುಗಿಸಿಕೊಡುವ ಅದರ ಶಕ್ತಿಯನ್ನು ನಿರಾಕರಿಸಿರುವವರೋ ಅವರ ಸ್ಥಿತಿಯು ಎಷ್ಟೋ ಅಪಾಯುದಲ್ಲಿರುವುದು. ಅವರಾಗಲಿ ಇಲ್ಲವೇ ಬೇರೆ ಯಾರಾಗಲೀ ಯಜ್ಞಾರ್ಪಿತವಾದುದನ್ನು ತಿನ್ನದ ಅಥವಾ ತನ್ನದಾಗಿ ಅಂಗೀಕರಿಸಿಕೊಳ್ಳದ ಹೊರತು ಎಂದೂ ಜೀವವನ್ನು ಪಡಕೊಳ್ಳಲಾರರು. ಹೀಗಾಗಿ ಈ ಯಜ್ಞವನ್ನು ಅಲ್ಪವೆಂದು ಎಣಿಸುವದಾಗಲೀ ಅಥವಾ ಅದರ ಅವಶ್ಯಕತೆಯನ್ನು ನಿರಾಕರಿಸುವದಾಗಲೀ ಯಾರಾದರೂ ಮಾಡಿದಲ್ಲಿ ಅದನ್ನು ಅತಿ ಘೋರವಾದ ಅಪರಾಧವೆಂದು ಅಪೋಸ್ತಲನು ಗುರುತಿಸಿ ಹೀಗೆ ಹೇಳಿರುವನು: "ಯಾವನು ದೇವಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ (ಸಾಧಾರಣ–ವೆಂದೆಣಿಸಿ) ದೇವರ ಕೃಪಾವರವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ."

ಹೀಗಿರುವಲ್ಲಿ ಯೇಸುವಿನ "ರಕ್ತಮಾಂಸವನ್ನು" (ಮಾನುಷ್ಯ ಸ್ವಭಾವವನ್ನು) ತಿನ್ನುವಿಕೆ ಅಥವಾ ತಮ್ಮ ಪರವಾಗಿ ಅಂಗೀಕರಿಸಿಕೊಳ್ಳುವುದು ನಮ್ಮನ್ನು ಪಾಪ ಮತ್ತು ಅದರ ಫಲವಾಗಿ ಬಂದ ಮರಣದಿಂದ ವಿಮೋಚಿಸಿ ನೀತಿವಂತರನ್ನಾಗಿ ನಿರ್ಣಯಿಸಿ ಮಾನವ ಜೀವದ ಹಕ್ಕುಬಾಧ್ಯತೆಗಳಿಗೆ ಅರ್ಹರನ್ನಾಗಿ ಮಾಡುವವದು. (ರೋಮಾ 5:18–19) ಇದನ್ನು "ಸಾಮಾನ್ಯವಾದ" ಅಂದರೆ ಹುದುವಾಗಿರುವ ರಕ್ಷಣೆ ಎಂದು ಹೇಳಬಹುದು. (ಯೂದ 3) ಆದರೆ "ಚಿಕ್ಕ ಹಿಂಡು" ರಕ್ಷಿಸಲ್ಪಟ್ಟ ಲೋಕದೊಳಗಿಂದ ಆಯಲ್ಪಟ್ಟು ಅಥವಾ ಆದುಕೊಂಡವರಾಗಿ ದೇವಜನರೆನಿಸಿಕೊಂಡು ದೇವರಿಗೆ ಯೇಸುಕ್ರಿಸ್ತನೊಡನೆ ಸಹಬಾಧ್ಯರಾಗುವರು; ಅಪೋಸ್ತಲರಿಂದ ತಿಳಿಸಲ್ಪಟ್ಟಿರುವ ಒಂದು ವಿಶೇಷವಾದ ರಕ್ಷಣೆಯೆಂಬುದು ಒಂದುಂಟು. (1 ತಿಮೋಥೆ 4:10)

ಇವರಿಗೆ ಈ "ಉನ್ನತ (ಸ್ಥಾನದ) ಕರೆಯು" ನೀಡಲಾಗಿದ್ದು ಇವರು "ದೈವಿಕ ಸ್ವಭಾವದಲ್ಲಿ ಪಾಲುಗಾರಿಕೆ – ಯನ್ನು" ಪಡೆಯಲು ಯೇಸುವಿನ ಯಜ್ಞದ ಫಲವನ್ನು ತಿನ್ನುವುದು ಅಥವಾ ಜೀವವನ್ನು ತಮ್ಮ ಪರವಾಗಿ ಅಂಗೀಕರಿಸಿಕೊಳ್ಳುವುದು ಮಾತ್ರವಲ್ಲದೆ ಅದಕ್ಕಿಂತಲೂ ಹೆಚ್ಚಿಗೆಯಾದುದನ್ನು ಮಾಡುವರು. ಹೇಗಂದರೆ ಅವರು ಮನುಷ್ಯರಾಗಿ ನೀತಿವಂತರೆಂದು ನಿರ್ಣಯಿಸಲ್ಪಟ್ಟು ಜೀವ ಹೊಂದಲು ಅರ್ಹರಾಗಿ ಅಂದರೆ ನಂಬಿಕೆಯ ಮೂಲಕವಾಗಿ ಆದಾಮನು ಕಳಕೊಂಡ ಜೀವದ ಹಕ್ಕನ್ನು ಮರಳಿ ಪಡಕೊಂಡವ –ರಾದ ಈ ವರ್ಗದವರಿಗೆ ಈ ಸುವಾರ್ತಾ ಯುಗದಲ್ಲಿ ಇರುವ ಕರೆ ಅಥವಾ ಭಾಗ್ಯವು ಯಾವುದೆಂದರೆ ತಮ್ಮ ಜೀವವನ್ನು ಯಜ್ಞವನ್ನಾಗಿ ಅಥವಾ "ಯೇಸುವು ಮಾಡಿದಂತೆ ಅವರು ತಮ್ಮ ಜೀವವನ್ನು ತಾವೇ ಮುರಿದುಕೊಂಡವರಾಗಿ, ಅರ್ಪಿಸಿಕೊಂಡು" "ಆತನೊಂದಿಗೆ ಸತ್ತವರಾಗುವದು." ಹೀಗೆ ತಮ್ಮ ಮಾನುಷ್ಯ ಸ್ವಭಾವವನ್ನು ಯಜ್ಞವಾಗಿ ಅರ್ಪಿಸಿಕೊಂಡುದರ ಫಲವಾಗಿ ಅವರು ತಮಗೆ ಮಾಡಲ್ಪಟ್ಟ ವಾಗ್ದಾನಕ್ಕೆ ಅಂದರೆ ಆತನೊಡನೆ ಜೀವಿಸುವವರಾಗಿದ್ದು ಆತನಿಗೆ ದಯಪಾಲಿಸಲಾದ ದೈವಿಕ ಸ್ವಭಾವದಲ್ಲಿ ಪಾಲನ್ನು ಹೊಂದಲು ಯೋಗ್ಯರಾಗಿ ಎಣಿಸಲ್ಪಡುವ –ರೆಂಬ ನಿರೀಕ್ಷೆಯುಳ್ಳವರಾಗಿರುವರು.

ಅಪೋಸ್ತಲನು ಹೀಗೆ ಈ ವರ್ಗದ ವಿಷಯವಾಗಿ ಉಲ್ಲೇಖಿಸಿ ಹೇಳಿರುವದೇನಂದರೆ, ಅವರು ಕ್ರಿಸ್ತನ ಯಜ್ಞ ಫಲವನ್ನು ತಿನ್ನುವುದು ಅಥವಾ ತಮ್ಮದಾಗಿ ಅಂಗೀಕರಿಕೊಳ್ಳು – ವುದು ಮಾತ್ರವಲ್ಲದೆ ಅವರು ಈ ಯಜ್ಞದಲ್ಲಿಯೂ ಆತನೊಡನೆ ಜೊತೆಗಾರರಾಗುವರು. ಕರ್ತನ ಭೋಜನದ ವಿಷಯವಾಗಿ ಆತನು ಹೇಳಿರುವುದು: "ನಾವು ದೇವಸ್ತೋತ್ರಮಾಡಿ ಪಾತ್ರೆಯಲ್ಲಿ ಪಾನಮಾಡುವದು ಕ್ರಿಸ್ತನ ರಕ್ತದಲ್ಲಿ ಪಾಲುಗಾರರಾಗಿದ್ದೇವೆಂಬ ದನ್ನು ಸೂಚಿಸುತ್ತದಲ್ಲವೇ. ನಾವು ರೊಟ್ಟಿಯನ್ನು ಮುರಿದು ತಿನ್ನುವುದು ಕ್ರಿಸ್ತನ ದೇಹದಲ್ಲಿ ಪಾಲುಗಾರರಾಗಿದ್ದೇವೆಂಬುದನ್ನು ಸೂಚಿಸುತ್ತದಲ್ಲವೇ." (ಹೀಗೆ ಇದು ಕ್ರಿಸ್ತನ ಬಾಧೆಗಳಲ್ಲಿ ಉಳಿದುದನ್ನು ಶರೀರದಲ್ಲಿ ಅನುಭವಿಸುವುದನ್ನು ನಿದರ್ಶಿಸುತ್ತ ದಲ್ಲವೇ? – ಕೊಲೊಸ್ಸೆ 1:24) "ರೊಟ್ಟಿಯು ಒಂದೇಯಾಗಿರುವು ದರಿಂದ ಅನೇಕರಾಗಿರುವ ನಾವು ಒಂದೇ ದೇಹದಂತಿದ್ದೇವೆ." (1 ಕೊರಿಂಥ 10:16–17)

ಹೀಗಿರುವಲ್ಲಿ ಒಂದೇ ಮಾತಿನಲ್ಲಿ ಹೇಳುವುದಾದರೆ, ಮಾನವ ಕುಲದವರೆಲ್ಲರಿಗೆ ಪರಲೋಕದಿಂದ ಒಂದೇ ಒಂದು ಜೀವಕೊಡುವ ರೊಟ್ಟಿಯನ್ನು ಒದಗಿಸಲಾಗಿದ್ದು ಈ ಸುವಾರ್ತಾಯುಗದ ಪರ್ಯಂತರ ಕ್ರಿಸ್ತನ ದೇಹದಲ್ಲಿ ಸೇರಿದವರಾಗಿ ಆತನೊಡನೆ ಮನುಷ್ಯಸ್ವಭಾವವನ್ನು ಯಜ್ಞವನ್ನಾಗಿ ಅರ್ಪಣೆಮಾಡಿಕೊಂಡು ಆತನೊಡನೆ ದೈವಿಕ ಸ್ವಭಾವದಲ್ಲಿ ಬಾಧ್ಯತೆಯನ್ನು ಪಡೆಯುವ ಅವಕಾಶವನ್ನು ಕೆಲವರಿಗೆ ನೀಡಲಾಗಿರುವದು.

ಹೀಗೆ ಯೇಸುವಿನ ಮಾಂಸವನ್ನು ಅಕ್ಷರಶಃ ತಿನ್ನುವುದು ಯಾವ ಪ್ರಯೋಜನಕ್ಕೂ ಬಾರದಿದ್ದರೂ, ಆತನು ಮಾನವರೆಲ್ಲರಿಗಾಗಿ ಅರ್ಪಣೆಮಾಡಿದ ತನ್ನ (ಜೀವದ) ಹಕ್ಕನ್ನು ತಮ್ಮದಾಗಿ ಅಂಗೀಕರಿಸಿಕೊಳ್ಳುವುದೆಂದರೆ (ಆತನ) ಪರಿಪೂರ್ಣವಾದ ಜೀವದ ಮತ್ತು ಅದರ ಸವಲತ್ತುಗಳನ್ನೆಲ್ಲಾ (ಪಾಲನ್ನು) ಹೊಂದುವ ಹಕ್ಕನ್ನು ಪಡೆಯುವುದು ಎಂಬುದನ್ನು ನಾವು ನೋಡುತ್ತೇವೆ. "ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ

# “ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು;”

**ರೀಪ್ರಿಂಟ್ಸ್ ಪುಟ 1710**

**“ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರಮಾಡುವದನ್ನು ಬಿಟ್ಟರು. ಯೇಸು ಇದನ್ನು ನೋಡಿ ತನ್ನ ಹನ್ನೆರಡು ಮಂದಿಯನ್ನು–ನೀವು ಸಹ ಹೋಗಬೇಕೆಂದಿದ್ದೀರಾ? ಎಂದು ಕೇಳಿದ್ದಕ್ಕೆ ಸೀಮೋನ ಪೇತ್ರನು–ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು;” – ಯೋಹಾನ 6:66–68**

“ನೀವೂ ಸಹ ಹೋಗಬೇಕೆಂದಿದ್ದೀರಾ?” ಎಂದು ಉಲ್ಲೇಖಿಸಿರುವ ನಮ್ಮ ಕರ್ತನ ಮಾತಿನಲ್ಲಿ ನಿರಾಶೆಯ ಒಂದು ಛಾಯೆಯಿರುವುದು. ಪ್ರತಿಯೊಂದು ಕ್ರಿಯೆಯ ಮತ್ತು ಮಾತಿಗೆ ಕಾರಣವನ್ನು ಹುಡುಕುವದನ್ನು ರೂಢಿಸಿಕೊಂಡಿರುವ ನಾವು ವಿಚಾರಿಸುವುದೇನೆಂದರೆ: ಕೆಲವು ಸಂಖ್ಯೆಯಲ್ಲಿನ ಹಿಂಬಾಲಕರು ಬಿಟ್ಟುಹೋದದ್ದು ನಮ್ಮ ಕರ್ತನನ್ನು ಏಕೆ ದುಃಖಪಡುವಂತೆ ಮಾಡಿತು? ಆತನು ಅಧಿಕ ಹಿಂಬಾಲಕರಿಗಾಗಿ ಆಕಾಂಕ್ಷೆಯುಳ್ಳವ –ನಾಗಿದ್ದನೋ? ಆತನು ಸಂಖ್ಯಾಬಲದಲ್ಲಿ ವಿಶ್ವಾಸವಿಟ್ಟಿದ್ದನೋ? ಈಗ ಫರಿಸಾಯರು ನನ್ನ ಬಗ್ಗೆ ಏನನ್ನುವರು, ಮೂರು ವರುಷಗಳ ನನ್ನ ಬೋಧನೆಯ ನಂತರವೂ ನನ್ನ ಅನೇಕ ಹಿಂಬಾಲಕರು ಬಿಟ್ಟುಹೋದುದನ್ನು ಅವರು ನೋಡಿರುವರು ಎಂದು ಆತನು ತನ್ನೊಳಗೆ ಹೇಳಿಕೊಂಡಿದ್ದನೇ? (ತನ್ನ ಹಿಂಬಾಲಕರ) ಈ ದಾರಿತಪ್ಪುವಿಕೆಯು ತನ್ನ ಆದಾಯವನ್ನು ಕಡಿತಮಾಡುವದೆಂಬ ಭಯವು ಆತನಿಗಿತ್ತೇ? ಇಲ್ಲ, ಇವುಗಳು ಯಾವುದೂ ಅಲ್ಲ; ಯಾಕೆಂದರೆ ಆತನು ತನ್ನನ್ನು ಹೆಚ್ಚಾಗಿ ಭಾವಿಸಿಕೊಂಡಿರಲಿಲ್ಲ. ಜನರೆಲ್ಲಾ ನಿಮ್ಮನ್ನು ಹೊಗಳಿದರೆ ನಿಮ್ಮ ಗತಿಯನ್ನು ಏನು ಹೇಳಲಿ! ಅವರ ಪಿತೃಗಳು ಸುಳ್ಳುಪ್ರವಾದಿ ಗಳನ್ನೂ ಹಾಗೆಯೇ ಹೊಗಳಿದರು ಎಂದು ಆತನು ತನ್ನ ಶಿಷ್ಯರಿಗೆ ಆಗಲೇ ಹೇಳಿದ್ದನು. ಎರಡು ಸಣ್ಣ ಮೀನುಗಳು ಹಾಗೂ ಮೂರು ಜವೆಗೋದಿ ರೊಟ್ಟಿಯಿಂದ ಐದು ಸಾವಿರ ಜನರಿಗೆ ಬಡಿಸುವಷ್ಟು ಊಟವನ್ನು ನೀಡುವ ಶಕ್ತಿಯನ್ನು ಸಹ ಆತನು ಪಡೆದಿದ್ದನು. ಮತ್ತು ತನ್ನ ನಂಬಿಗಸ್ತರಾದ ಹಿಂಬಾಲಕರು ಒಟ್ಟಾಗಿ “ಚಿಕ್ಕ ಹಿಂಡು” ಆಗಿರುವರೆಂಬುದು ಆತನಿಗೆ ಆಗಲೇ ತಿಳಿದಿತ್ತು. ಅಲ್ಲದೆ ಆ ಗುಂಪಿನಲ್ಲಿ ತನ್ನನ್ನು ನಂಬದವರು ಯಾರೆಂಬುದೂ ಆತನಿಗೆ ತಿಳಿದಿತ್ತು. – ವಚನ 64

ಹೀಗಿರುವಲ್ಲಿ ತನ್ನ ಜೊತೆಯನ್ನು ತೊರೆದವರ ವಿಷಯವಾಗಿ ಏಕೆ ಆತನ ಮಾತುಗಳಲ್ಲಿ ದುಃಖ ವ್ಯಕ್ತವಾಗಿತ್ತು? ಕಾರಣ ಆತನು ಸತ್ಯವಂತನೂ ಘನತೆಯುಳ್ಳವನೂ ಅನುಕಂಪ – ವುಳ್ಳವನೂ ಮತ್ತು ತನ್ನ ಸ್ನೇಹಿತರನ್ನು ಪ್ರೀತಿಸುವವನೂ ಆಗಿದ್ದು ಕುರುಬನನ್ನು ಹೊಡೆಯುವೆನು ಆಗ ಕುರಿಗಳು ಚದರಿ ಹೋಗುವವು ಎಂದು ಹೇಳುವ ಘಳಿಗೆಯು ಸಮೀಪವಾದುದನ್ನು ನೋಡಿ (ಸ್ವಲ್ಪ ಕಾಲವಾದ ಮೇಲೆ “ಎಲ್ಲರೂ ತನ್ನನ್ನು ಬಿಟ್ಟು ಓಡಿಹೋದುದರಲ್ಲಿ” ಇದು ನೆರವೇರಿತ್ತು) ತಾನು ಏಕಾಂತನಾಗುವ ದುಃಖವು ಆತನನ್ನು ಆವರಿಸಕೊಂಡಾಗ “ನೀವೂ ಸಹ ಹೋಗಬೇಕೆಂದಿದ್ದೀರಾ?” ಎಂಬ ಮಾತಿನಲ್ಲಿ ಅದು ವ್ಯಕ್ತವಾಗಿತ್ತು. ಅನುಕಂಪದ ಬಗ್ಗೆ ಇರುವ ಪ್ರೀತಿ, ಸ್ನೇಹಿತರಲ್ಲಿನ ಅನ್ಯೋನ್ಯತೆ, ಮುಂತಾದವುಗಳು, ಬಲಹೀನತೆಗಳಲ್ಲ, ಆದರೆ ಬದಲಾಗಿ ಇವು ನೈಜ ಗುಣನಡತೆಗಳ ಮುಖ್ಯಲಕ್ಷಣಗಳು. ಆದರೆ ತನ್ನ ಶಿಷ್ಯರು ಹಿಂದಕ್ಕೆ ತಿರುಗಿಕೊಂಡದ್ದು ನಮ್ಮ ಕರ್ತನ ಮೇಲೆ ಪ್ರಭಾವ ಬೀರಿದ್ದಾಗಲೀ ಅಥವಾ ತನ್ನ ತಂದೆಯು ಗೊತ್ತುಮಾಡಿದ ಯಜ್ಞಾರ್ಪಣೆಯ ಮಾರ್ಗದಿಂದ ತಪ್ಪಿನಡೆಯುವಂತೆ ಮಾಡಿದ್ದೇ ಯಾದಲ್ಲಿ ಅದು ಬಲಹೀನತೆಯಾಗಿ ಕಾಣಬರುತಿತ್ತು. ಇಂಥ ಬಲಹೀನತೆಗಳು ಯಾವುದೂ ಎಂದೂ ತೋರ್ಪಟ್ಟಿರಲಿಲ್ಲ. ಇದಕ್ಕೆ ಪ್ರತಿಯಾಗಿ ಇಲ್ಲಿ ಬಹು ಗಂಭೀರವಾಗಿ ನುಡಿದಿದ್ದ ಪೇತ್ರನು ಕೆಲ ದಿನಗಳ ನಂತರ ನಮ್ಮ ಕರ್ತನು ಯಜ್ಞಾರ್ಪಿತನಾಗುವದನ್ನು ತಪ್ಪಿಸಲು ಪ್ರಯತ್ನಿಸಿದಾಗ ಆತನು ಪ್ರಾಮಾಣಿಕವಾಗಿ ಹೀಗೆ ಉತ್ತರಿಸಿದ್ದನು: “ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಆಲೋಚನೆ ಮನುಷ್ಯರ ಆಲೋಚನೆಯೇ ಹೊರತು ದೇವರದ್ದಲ್ಲ...”

“ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು;” ಎಂಬ ಅಪೋಸ್ತಲನಾದ ಪೇತ್ರನ ಈ ಮಾತುಗಳು ಪೂರ್ಣ ಅರ್ಥಗರ್ಭಿತವಾದವುಗಳು. ದೇವಾನುಗ್ರಹ ವನ್ನು ಮತ್ತು ಆಜ್ಞಾವಿಧಿಗಳನ್ನು ಅನುಸರಿಸುವದರ ಮೂಲಕ ನಿತ್ಯಜೀವವನ್ನು ಬಯಸುವುದರ ಅರ್ಥವೇನೆಂಬುದು ಆತನಿಗೆ ತಿಳಿದಿತ್ತು; ಅಲ್ಲದೆ ಫರಿಸಾಯರ ಬೋಧನೆಯ ಮೂಲಕ ವಾಗಿಯೂ ಮತ್ತು ತನ್ನ ಸ್ವಂತ ಮನಸ್ಸಾಕ್ಷಿಯ ಮೂಲಕ ವಾಗಿಯೂ ತಾನು ಖಂಡನೆ ಗೊಳಗಾಗಿರುವುದನ್ನು ಕಂಡುಕೊಂಡವನಾಗಿ ಯೆಹೂದ್ಯರಲ್ಲಿನ ದೈನ್ಯತೆಯುಳ್ಳ ವರ್ಗದವರಂತೆ ಅಧೈರ್ಯಗೊಂಡಿದ್ದನು. ನಿಸ್ಸಂದೇಹವಾಗಿಯೂ ಮುಂದಿನ ಜೀವಿತದ ವಿಷಯವಾಗಿ ಅನ್ಯಜನಾಂಗದವರಲ್ಲಿನ ಅನೇಕ ತತ್ವಬೋಧನೆಗಳ ಬಗ್ಗೆ ಸಹ ಆತನಿಗೆ ತಿಳಿದಿತ್ತು. ಹೀಗಿದ್ದಲ್ಲಿ ಅವುಗಳು ಕೇವಲ ಮಾನವ ಕಲ್ಪಿತವಾದವುಗಳು ಇಲ್ಲವೇ ಊಹಾಪೋಹಗಳೆಂಬುದೂ ಆತನಿಗೆ ತಿಳಿದಿತ್ತು.

ಆದರೆ ಮೂರು ವರುಷಗಳಲ್ಲಿ ಆತನು ಯೇಸುವಿನ ಬಗ್ಗೆ ತಿಳಿದುಕೊಂಡಿದ್ದನು ಮತ್ತು ನಿತ್ಯಜೀವದ ವಿಷಯವಾಗಿ ಆತನ ಮಾತುಗಳನ್ನು ಕೇಳಿದ್ದನು. ಆತನ ಉಪದೇಶಗಳು ಕಲ್ಪಿತವಾದ ಊಹಾಪೋಹಗಳಾಗಿರಲಿಲ್ಲ. “ಆತನು ಅವರ ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶ ಮಾಡುತ್ತಿದ್ದನು”. ಇಲ್ಲವೇ ಆತನು ಧರ್ಮಶಾಸ್ತ್ರವನ್ನು ಅನುಸರಿಸುವುದರ ಮೂಲಕವಾಗಿ ನಿತ್ಯಜೀವವನ್ನು ನಿರೀಕ್ಷಿಸಲು ಉಪದೇಶಿಸುತ್ತಿರಲಿಲ್ಲ. (ಇದು ಅಸಾಧ್ಯವೆಂಬುದು ಅವರಿಗೆ

ತಿಳಿದಿತ್ತು) ಬದಲಾಗಿ, ಆತನ ಉಪದೇಶವು ಇತರ ಎಲ್ಲಾ ಬೋಧಕರುಗಳಿಗಿಂತಲೂ ಭಿನ್ನವಾಗಿತ್ತು. ತಾನು ಲೋಕಕ್ಕೆ ಬಂದಿರುವುದು ಸೇವೆಮಾಡಿಸಿಕೊಳ್ಳುವದಕ್ಕೆ ಅಥವಾ ಗೌರವವನ್ನು ಹೊಂದಿ ಬಿರುದನ್ನು ಗಳಿಸುವ ಸಲುವಾಗಿರದೆ ಜನರಿಗೆ ಸೇವೆಮಾಡಿ ಮತ್ತು ಕಡೆಯಲ್ಲಿ ತನ್ನ ಜೀವವನ್ನು ಆದಾಮನಿಗಾದ ಪರಿಶೋಧನೆ ಮತ್ತು ಆತನ ಅವಿಧೆಯತೆಯ ದೆಸೆಯಿಂದ ಜೀವದ ಹಕ್ಕನ್ನು ಕಳೆದುಕೊಂಡವರೆಲ್ಲರ ಜೀವಕ್ಕೆ ಈಡಾಗಿ ಅಥವಾ ವಿಮೋಚನಾ ಬೆಲೆಯಾಗಿ ತನ್ನ ಜೀವವನ್ನು ಕೊಡಲು ಬಂದಿರುವುದಾಗಿ ಆತನು ಉಪದೇಶಿಸಿದ್ದನು (ಮತ್ತಾಯ 20:28). ಆತನ ಬೋಧನೆ ಏನೆಂದರೆ, ದೇವರ ಪ್ರೀತಿ ಹಾಗೂ ಏರ್ಪಾಟಿನ ಅನುಸಾರವಾಗಿ ತಾನು ಎಲ್ಲರಿಗಾಗಿ ನೀಡಲಿದ್ದ ಈ ಈಡುಬಲಿಯ ಪರಿಣಾಮವಾಗಿ ಹೊಸ ಒಡಂಬಡಿಕೆಯಲ್ಲಿನ ಕೃಪಾಪೂರ್ಣವಾದ ಶರತ್ತುಗಳ ಪ್ರಕಾರ ವಿಧೇಯರಾಗುವ ವರೆಲ್ಲರೂ ನಿತ್ಯಜೀವ ಹೊಂದುವ ಅವಕಾಶವನ್ನು ಪಡೆಯುವರೆನ್ನುವದೇ; ಈ ಕಾರಣಕ್ಕಾಗಿ ಅವರು ಮಾತ್ರವಲ್ಲದೆ "ಸಮಾಧಿಗಳಲ್ಲಿರುವವರೆಲ್ಲರು ಆತನ (ಮನುಷ್ಯ ಕುಮಾರನ) ಧ್ವನಿಯನ್ನು ಕೇಳಿ ಎದ್ದು ಹೊರಬರುವರು ಮತ್ತು ಕೇಳಿದವರು (ವಿಧೇಯರಾದವರು) ಬದುಕುವರು ಅಂದರೆ ಪರಿಪೂರ್ಣವಾದ ಜೀವವನ್ನು ಪಡೆಯುವರು" (ಯೋಹಾನ 5:25; 28–29). ಪೇತ್ರನು ಈ ಸರಳವಾದ ಸೊಗಸಿನ ಸುವಾರ್ತೆಯನ್ನು ಕೇಳಿದ್ದನು; ಇದುವೇ ನಿಜವಾದ ನಿತ್ಯಜೀವದ ವಿಷಯವಾದ ಶುಭವಾರ್ತೆ. ಯೇಸುವು ದೇವರಿಂದ ಕಳುಹಿಸಲ್ಪಟ್ಟ ಮೆಸ್ಸೀಯನಾಗಿ ಲೋಕಕ್ಕೆ ಜೀವವನ್ನು ಕೊಡುವವನೂ, ಲೋಕದೊಳಗೆ ಬರುವ ಪ್ರತಿಯೊಬ್ಬ ಮನುಷ್ಯನಿಗೂ ಬೆಳಕು ಕೊಡುವ ನಿಜವಾದ ಬೆಳಕು ಎಂಬುದನ್ನು ಆತನು ಗುರುತುಹಿಡಿದಿದ್ದನು. – ಯೋಹಾನ 1:9

ಹೀಗಿದ್ದಲ್ಲಿ, ಈ ದೃಷ್ಟಿಯಿಂದ, ಪೇತ್ರನು ತಾನು ಹೇಳಿದಂತೆ, "ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನು ಉಂಟುಮಾಡುವ ವಾಕ್ಯಗಳುಂಟು;" ಎಂದು ಉತ್ತರಿಸಿದ್ದರಲ್ಲಿ ಏನು ಆಶ್ಚರ್ಯ! ಪೇತ್ರನ ನಂಬಿಕೆ ಮತ್ತು ನಿರೀಕ್ಷೆಗಳು ಕ್ರಿಸ್ತನ ಬೋಧನೆಗಳ ಮೇಲೆ ಆಧಾರವಾಗಿತ್ತು; ಇಂಥಾ ಒಂದು ಆಧಾರವಾಗಿಯೂ ಹಾಗೂ ಲಂಗರುಗಳಾಗಿಯೂ ಇರುವಂಥವುಗಳನ್ನು ಬೇರೆ ಎಲ್ಲಿಯೂ ಅವರು ಕಂಡುಕೊಳ್ಳಲು ಸಾಧ್ಯವಿಲ್ಲದಾಗಿತ್ತು.

ಮತ್ತು ಈ ದಿನದಲ್ಲಿಯೂ ಬುದ್ಧಿಪೂರ್ವಕವಾಗಿ ನಂಬಿದವರ ವಿಷಯದಲ್ಲಿ, ಅವರು ಈ ಅದ್ಭುತವಾದ ಸಜೀವ ವಾಕ್ಯಗಳನ್ನು ಕೇಳಿ ಅರ್ಥಮಾಡಿಕೊಂಡಷ್ಟರ ಪ್ರಮಾಣದಲ್ಲಿ ಇದು ಸತ್ಯವಾಗಿರುವುದು. ಇದರಲ್ಲಿ ಕ್ರಿಸ್ತನ ಮರಣವೇ ಮುಖ್ಯ ವಿಷಯವಾಗಿರುವುದು; ಇದು ಚಕ್ರದ ಕೇಂದ್ರದಂತಿದ್ದು ಉತ್ಕೃಷ್ಟವೂ ಅಮೂಲ್ಯವೂ ಆದ ವಾಗ್ದಾನಗಳನ್ನು ಒಳಗೊಂಡ ಪ್ರೀತಿ ಮತ್ತು ದೇವಾನುಗ್ರಹಗಳು ಈ ಚಕ್ರದಲ್ಲಿನ ಕಂಬಿಗಳಾಗಿ ಇವುಗಳ ಸುತ್ತಳತೆಯು ನಿತ್ಯಜೀವವಾಗಿರುವದು. ಸತ್ಯವನ್ನು ದೃಷ್ಟಿಸಿದವರಾಗಿ, ನಿತ್ಯಜೀವವನ್ನುಂಟು ಮಾಡುವ ವಾಕ್ಯಗಳ ನ್ನೊಳಗೊಂಡ ಶುಭವಾರ್ತೆಯನ್ನು ಒಂದು ಸಾರಿ ಕೇಳಿದ ನಂತರ ಇದಕ್ಕೆ ಅವರು ಏನನ್ನು ಕೊಟ್ಟು ಬದಲಿಸಿಕೊಳ್ಳಲು ಸಾಧ್ಯ?

ಹೊರಗೆ ಇತರೆಡೆ ದೃಷ್ಟಿಸಿದಲ್ಲಿ, ನಾವು ಈಗಲೂ ಕನ್‌ಫ್ಯೂಷಿಯುಸ್ಸನ ಬುದ್ಧನ ಬ್ರಹ್ಮನ ಜ಼ೋರಾಷ್ಟರನ ತತ್ವಬೋಧನೆಗಳು ಇರುವುದನ್ನು ಕಂಡುಕೊಂಡಿರುವೆವು, ಆದರೆ ಅವು ನಮ್ಮನ್ನು ತೃಪ್ತಿಪಡಿಸಲಾರವು. ಈ ಲೋಕದ ಜ್ಞಾನವು ವಿಕಾಸವಾದದ ವಿಷಯವಾಗಿ ಕಲ್ಪಿಸಿಕೊಂಡಿರುವುದನ್ನು ನಾವು ಕೇಳಿದ್ದೇವೆ. ಅದು ಮೂಲಜೀವದ್ರವ್ಯದಿಂದ (ಪ್ರೊಟೋಪ್ಲಾಸ್ಮ) ಗೊದವೊಟ್ಟೆಯಾಗಿ ಮತ್ತು ಗೊದವೊಟ್ಟೆಯಿಂದ ಕೋತಿಯುಂಟಾಗಿ ಮತ್ತು ಕೋತಿಯಿಂದ ಮನುಷ್ಯನು ಬಂದಿರುವುದಾಗಿ ಕಲ್ಪಿಸಿಕೊಂಡಿರುವರು. ಅದು ಇನ್ನೂ ಮುಂದುವರೆದು, ಮನುಷ್ಯನಿಗಿಂತಲೂ ಉನ್ನತವಾದ ಜೀವಿಯು ಅಭಿವೃದ್ಧಿಯಾಗುವುದೆಂಬುದನ್ನು ನಿರೀಕ್ಷಿಸಿ ಊಹಿಸಿಕೊಂಡು ಭರವಸೆ ನೀಡಲು ಯತ್ನಿಸಿರುವುದು. ಅದು ನಮಗೆ ಭರವಸೆಯಾಗಿ ಹೇಳಿರುವುದೇನೆಂದರೆ, ಆರಂಭದಲ್ಲಿ ಬುದ್ಧಿವಂತ ನಾದ ದೇವರು ಇದ್ದನೋ ಅಥವಾ ಇಲ್ಲವೋ, ಆದರೆ ಅವರು ವಿಕಾಸಗೊಂಡಾಗ ಅಂತ್ಯದಲ್ಲಿ ಲಕ್ಷಾಂತರ ಮಂದಿ ಜ್ಞಾನಬಲಗಳುಳ್ಳ ದೇವರುಗಳು ಇರುವರೆಂಬುದು. ಆದರೆ ನಮ್ಮ ಹೃದಯವು ಇಂಥಾ ವ್ಯರ್ಥ ಕಲ್ಪನೆಗಳಿಂದ ಹಿಂದಕ್ಕೆ ಸರಿದು ಯಾವ ಮನುಷ್ಯನೂ ಹಿಂದೆ ಎಂದೂ ಮಾತನಾಡದ ರೀತಿಯಲ್ಲಿ ಮಾತನಾಡಿದಾತನ ಅದ್ಭುತವಾದ ಸಜ್ಜೀವ ವಾಕ್ಯಗಳ ಕಡೆಗೆ ತಿರುಗಿಕೊಳ್ಳುವುದು. ಆ ವಾಕ್ಯಗಳಲ್ಲಿ ಲೋಕವು ಕೊಡಲಾಗದ ಅಥವಾ ತೆಗೆಯಲಾಗದಂಥ ರೀತಿಯ ವಿಶ್ರಾಂತಿ ಸಮಾಧಾನಗಳು ಅಡಕವಾಗಿರುವವು.

ಇದೇ ದಿವ್ಯ ಬೋಧಕನ ಉಪದೇಶಗಳನ್ನು ಅನುಸರಿಸುವ –ವರಾಗಿ ಎಲ್ಲರಿಗೂ ಅನುಗ್ರಹಿಸಿರುವ ಈ ನಿತ್ಯಜೀವದ ಬಗ್ಗೆ ನಾವು ಹೆಚ್ಚು ಹೆಚ್ಚಾಗಿ ಕಲಿಯುತ್ತಾ ಬಂದಿರುವೆವು. ಅನುದಿನಕ್ಕೆ ತಕ್ಕ ಆಹಾರವಾಗಿ ಈ ನಿತ್ಯಜೀವದ ವರವು ಕೇವಲ ತನ್ನನ್ನು ಪ್ರೀತಿಸುವವರಿಗಾಗಿರುವದೆಂದು ನಮಗೆ ಆತನು ಉಪದೇಶಿಸಿರು ವನು; ಈ ಸುವಾರ್ತಾಯುಗದ ಪರ್ಯಂತರವಾಗಿ ವಿಮೋಚಿತವಾದ ಲೋಕದಿಂದ ಕರೆಯಲ್ಪಟ್ಟು ಪ್ರೀತಿಪೂರ್ವಕ ವಾಗಿ ವಿಧೇಯರಾಗುವದರ ಮೂಲಕ ಯೋಗ್ಯರೆಂದು ಪ್ರಮಾಣೀಕರಿಸಲ್ಪಟ್ಟವರಾದ ಒಂದು ಚಿಕ್ಕ ಹಿಂಡು ಆತನೊಡನೆ ದೈವಿಕ ಸ್ವಭಾವದಲ್ಲಿನ ಪ್ರಭಾವ ಮಾನ ನಿರ್ಣಯತ್ವಗಳಲ್ಲಿ ಸಹಬಾಧ್ಯರಾಗಲಿರುವರು. ಹಾಗೂ ಮುಂದಿನ ಕಾಲದಲ್ಲಿ ಅಂದರೆ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಪರಿಪೂರ್ಣನಾದ ಮನುಷ್ಯನಾಗಿ ನಿತ್ಯಜೀವದೊಂದಿಗೆ ಪುನರುದ್ಧಾರ ಪಡೆಯುವ ಜ್ಞಾನಾವಕಾಶಗಳನ್ನು ನೀಡುವುದರ ಮೂಲಕವಾಗಿ ಭೂಲೋಕದ ಎಲ್ಲಾ ಕುಲಗಳನ್ನು ಆತನೊಡನೆ ಅವರು ಆಶೀರ್ವದಿಸುವರು. ಈಡುಬಲಿಯ ರಕ್ತದ ಮೂಲಕವಾಗಿ ಮುದ್ರಿತವಾದ ಹೊಸ ಒಡಂಬಡಿಕೆಯಲ್ಲಿನ ಶರತ್ತುಗಳಾನುಸಾರವಾಗಿ ಈ ನಿತ್ಯಜೀವ ವನ್ನು ಕೇವಲ ನಂಬಿಕೆ ಮತ್ತು ಹೃದಯಪೂರ್ವಕವಾದ ವಿಧೇಯತೆಯ ಆಧಾರದ ಮೇಲೆ ಅನುಗ್ರಹಿಸಲಾಗುವದು. ಪೂರ್ವ ಕಾಲದಲ್ಲಿದ್ದ ಸುವಾರ್ತೆಯು ಇದೇ. ಇವುಗಳು ಅದೇ ನಿತ್ಯಜೀವದ ವಾಕ್ಯಗಳು; ಇವುಗಳು ಭವ್ಯವಾಗಿ ನೆರವೇರುವದು ಸಮೀಪಿಸುತ್ತಾ ಬರುವಾಗ ಈ ವಿಷಯುವು ಕೇವಲ ವಿಸ್ತೃತವಾಗಿಯೂ ಬೃಹದಾಕಾರವಾಗಿಯೂ ಕಂಡುಬರುವದು.

ಯೆಹೂದ್ಯರ ಕಾಲದ ಸುಗ್ಗಿಯ ಸಮಯದಲ್ಲಿ ನಮ್ಮ ಕರ್ತನು ತನ್ನ ಶಿಷ್ಯರಿಗೆ "ನಿತ್ಯಜೀವದ ವಾಕ್ಯಗಳನ್ನು" ಹೇಳಿದ ನಂತರವೇ ಆತನು "ತೊಡಕುಗಳು" ಬಂದು ಗೋದಿಯ ಕಾಳನ್ನು ಹೊಟ್ಟಿನಿಂದ ಬೇರ್ಪಡಿಸುವಂತೆ ಮಾಡಿದ್ದು; ಆತನು ಹೇಳಿದ್ದು: "ತೊಡಕುಗಳು ಬಂದೇ ಬರುವವು." ಆ ಪರಿಶೋಧನೆಗಳು ಬಂದು ಮಾಗಿದ ಗೋದಿ ಕಾಳನ್ನು ಹೊಟ್ಟನ್ನು ಮತ್ತು ಜೊಳ್ಳು ಗೋದಿ ಕಾಳನ್ನು ಬೇರ್ಪಡಿಸುವದು. ಎರಡು ವರ್ಗದವರನ್ನು ವಿಶೇಷವಾಗಿ ಬೇರ್ಪಡಿಸಲಾಗಿತ್ತು. ಅದಾವದೆಂದರೆ ಕೇವಲ ಕುತೂಹಲವುಳ್ಳ ಮತ್ತು ಅಲ್ಪಾಸಕ್ತಿಯುಳ್ಳ ವರ್ಗದವರು ಮತ್ತು ಸಮರ್ಪಣೆ ಮಾಡಿಕೊಂಡವರಾದ ಒಂದು ವರ್ಗದವರಾಗಿದ್ದು ಗುಣನಡತೆಗಳಲ್ಲಿ ಆಳವಿಲ್ಲದವರಾಗಿ ನಮ್ಮ ಕರ್ತನ ಸಾಮ್ಯದಲ್ಲಿ (ಮತ್ತಾಯ 13:5–6) ಗಟ್ಟಿಯ ನೆಲದಂತಿರುವ ಕೇಳುಗರು ಸೂಚಿತವಾಗಿರುವರು. ಇವರು ಸುವಾರ್ತೆಯನ್ನು ಸಂತೋಷದಿಂದ ಕೇಳಿ ಹೃದಯವೆಂಬ ನೆಲದಲ್ಲಿ ಆಳವಿಲ್ಲದೆ ಹಾಗೂ ಶ್ರದ್ಧೆಯಳ್ಳ ಪ್ರೀತಿಯಲ್ಲಿ ಗಾಢತೆಯಿಲ್ಲದೆ ಮತ್ತು ಸತ್ಯದ ಬಗ್ಗೆ ತಮ್ಮನ್ನು ಸಮರ್ಪಣೆ ಮಾಡಿಕೊಳ್ಳದವರು; ಕಷ್ಟಸಂಕಟಗಳಾಗಲಿ ಅಥವಾ ಹಿಂಸೆಯಾಗಲಿ ಬಂದ ಕೂಡಲೆ ಎಡವಿಬಿದ್ದು ಅವರು ಹಿಂದೆ ಸರಿದವರಾಗಿ ಕರ್ತನೊಡನೆ ಮತ್ತು ಆತನ ನಂಬಿಗಸ್ತರೊಡನೆ ನಡೆಯುವುದನ್ನು ಬಿಟ್ಟುಬಿಡುವರು.

ಈಗಿನ ಸುವಾರ್ತಾಯುಗದ ಸುಗ್ಗಿಯ ಕಾಲದಲ್ಲೂ ಇದು ಸತ್ಯವಾಗಿರುವದು. ನಮ್ಮ ಕಣ್ಣುಗಳು ಧನ್ಯವಾದವುಗಳು; ಏಕಂದರೆ ಅವು ದೇವರ ಯುಗಾಂತರಗಳ ಯೋಜನೆಯ ಅನೇಕ "ಆಳವಾದ ಸಂಗತಿಗಳನ್ನು" ಕಂಡಿರುವವು. ನಮ್ಮ ಕಿವಿಗಳು ಧನ್ಯವಾದವುಗಳು; ಏಕೆಂದರೆ ಅವು ದಿವ್ಯ ಬೋಧಕನ ಪಾಠಗಳನ್ನು ಅಂದರೆ ಪ್ರಭಾವ ಮಾನ ನಿರ್ಣಯತ್ವಗಳನ್ನು ಒಳಗೊಂಡ ನಿತ್ಯಜೀವದ ವಾಕ್ಯಗಳನ್ನು ಅದ್ಭುತವಾದ ರೀತಿಯ ಸ್ಪಷ್ಟತೆಯಲ್ಲಿ ಕೇಳಿರುವದು. ಮತ್ತು ಈಗ ಕರ್ತನು ಅನುಸರಿಸುವ ಕ್ರಮದಂತೆ ನಾವು ಪರಿಶೋಧನೆಗಳು ಮತ್ತು ಬೇರ್ಪಡಿಸುವಿಕೆಗಳಿಗೆ ಸಿದ್ಧವಾಗ ಬೇಕಿರುವುದು. ಈಗ ಮತ್ತೆ ಎಲ್ಲರನ್ನು ಪರೀಕ್ಷಿಸುವ ಸಲುವಾಗಿ ಮತ್ತು ಸಮರ್ಪಣೆ ಮಾಡಿಕೊಳ್ಳದವರನ್ನು ಅಲ್ಲದೆ ಕ್ರಿಸ್ತನ ನಿಮಿತ್ತವಾಗಿ ಬರುವ ಸಂಕಷ್ಟಗಳು ಮತ್ತು ಹಿಂಸೆಯನ್ನು ಸಹಿಸಿಕೊಳ್ಳ ಮನಸ್ಸಿಲ್ಲದೆ ಗುಣನಡತೆಗಳಲ್ಲಿ ಆಳವಾದ ಬೇರಿಲ್ಲದವರನ್ನು ಹಿಂದಿರುಗುವಂತೆ ಮಾಡಲು ಕಷ್ಟತೊಡಕುಗಳು ಬರಬೇಕಿರುವದು. ಗಿದ್ಯೋನನ ಸೈನ್ಯದವರ ವಿಷಯವಾಗಿಯೂ ಹೀಗೆಯೇ ಇತ್ತು. ಕ್ರಿಸ್ತನೊಡನೆ ಸಹಬಾಧ್ಯರಾಗುವದರ ಮೂಲಕ ದೇವರಿಗೆ ಸ್ವಕೀಯ ಜನವಾಗಲಿರುವ ಒಂದು ಆಯಲ್ಪಟ್ಟ ವರ್ಗದವರಿದ್ದು ಅವರು ಒಂದು ವಿಶೇಷವಾದ ರೀತಿಯ ಉತ್ಸಾಹವನ್ನು ಹೊಂದಿದವರಾಗಿರುವಲ್ಲಿ ಆಶ್ಚರ್ಯವಿಲ್ಲ; "ಪ್ರೀಯರೇ, ನೀವು ಪರಿಶೋಧನೆಗಾಗಿ ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ; ವಿಪರೀತವಾದ ಸಂಗತಿ ಸಂಭವಿಸಿತೆಂದು ಯೋಚಿಸದಿರಿ." ವಾಸ್ತವದಲ್ಲಿ ಕಷ್ಟತೊಡಕುಗಳು ಬಂದು ಭಿನ್ನಾಭಿಪ್ರಾಯಗಳು ಉಂಟಾಗುವ ಹಾಗೆ ಮಾಡುವದು ಈ ಉದ್ದೇಶಕ್ಕಾಗಿಯೇ. "ನಿಮ್ಮಲ್ಲಿ ಇಂಥಿಂಥವರು ಯೋಗ್ಯರಾಗಿ ಕಾಣಬರುವಂತೆ ಭಿನ್ನಾಭಿಪ್ರಾಯಗಳೂ ಇರುವದು ಆವಶ್ಯವೇ." (ಏಕೆಂದರೆ ಆಗ ಅವರು ಪರಿಶೋಧನೆಗಳನ್ನು ಸಹಿಸಿಕೊಂಡು ಸತ್ಯದಲ್ಲಿ ದೃಢವಾಗಿ ನಿಲ್ಲುವರು) – 1 ಕೊರಿಂಥ 11:18–19

ಇಲ್ಲಿ ಯಾರು ಪರಿಶೋಧನೆಯಲ್ಲಿ ನಿಲ್ಲುವರೋ ಅವರು ಪೇತ್ರನು ಹಿಂದಿನ ಸುಗ್ಗಿಯ ಪರೀಕ್ಷೆಯಲ್ಲಿ ಉದ್ದೇಶಿಸಿ ಹೇಳಿದಂಥವರ ಹಾಗಿರುವರು. ಯಾರಾದರೂ ಸೋತು ಹೋಗಿ ಧೈರ್ಯಗೆಡುವರೋ, ಅವರು ಸಹ ಕೇಳುವುದು: "ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ?" ಅವರು ತಮ್ಮ ಸುತ್ತಲೂ ನೋಡಿಕೊಳ್ಳುವಾಗ ಅವರು ನೋಡುವದು, ಆತ್ಮಿಕವಾದ ಮತ್ತು ಹಲವಾರು ದೆವ್ವಗಳ ಬೋಧನೆಯ ಮೋಸಗೊಳಿಸುವಿಕೆಗಳು, ಪಾಶಾಂಡ ಬೋಧಕರ ಸತ್ಯವೇದದ ವೈಚಾರಿಕತೆಯಲ್ಲಿನ ಅಂಧಕಾರ ಮತ್ತು ವಿರೋಧಾಭೀಪ್ರಾಯಗಳು ಹಾಗೂ ಕ್ರೈಸ್ತರಲ್ಲಿರುವ ಹಲವಾರು ಪಂಗಡಗಳು. ಕರ್ತನು ಆದುಕೊಳ್ಳ ಬಯಸುವ ವರ್ಗದವರಿಗೆ (ಇವುಗಳ ಮೇಲೆ) ಒಮ್ಮೆ ಕಣ್ಣು ಹಾಯಿಸುವದಷ್ಟೇ ಸಾಕಾಗುವದು. ಅವರು ಬಿಟ್ಟು ಹೋಗಲು ಸಾಧ್ಯವಾಗದು, ಕರ್ತನ ಸೈನ್ಯವನ್ನು ತೊರೆಯಲು ಬಲಾತ್ಕರಿಸಲು ಸಾಧ್ಯವಾಗದು. ನಿಜವಾಗಿಯೂ ನಾವು ಎಲ್ಲಿಗೆ ಹೋಗೋಣ? ನಮ್ಮ ನಾಯಕನ ಬಳಿಗೇ, ಕೇವಲ ಆತನಲ್ಲೇ ನಿತ್ಯಜೀವ ಉಂಟುಮಾಡುವ ವಾಕ್ಯಗಳಿರುವದು. ನಾವು ಆತನ ಮಾತುಗಳನ್ನು ಕೇಳಿರಲಾಗಿ ಇತರ ಎಲ್ಲಾ ಸುವಾರ್ತೆಗಳು ತಮ್ಮ ಸೊಬಗನ್ನು ಕಳಕೊಂಡಿರುವವು. ನಾವು ನಮ್ಮ ಮಹಾ ರಕ್ಷಣಾವೀರನ ಜೊತೆಗಿದ್ದು ಅತನನ್ನು ಹಿಂಬಾಲಿಸಿ ಹೋಗುವೆವು. ಆತನ ನುಡಿಯಲ್ಲಿ ಆತನ ಪ್ರೀತಿಯಲ್ಲಿ ಆತನ ಸೇವೆಯಲ್ಲಿ ನಾವು ಜೀವಿಸುವವರಾಗಿ ಸಂಚರಿಸುವವರಾಗಿ ದೇವರಿಂದ ಆಯಲ್ಪಟ್ಟವರಾಗಿ ನಮ್ಮತನವನ್ನು ಕಾಪಾಡಿಕೊಳ್ಳುವೆವು.

ಎಷ್ಟು ಸ್ಥಿರ ಈ ಅಸ್ತಿವಾರವು, ಕರ್ತನ ಭಕ್ತರೇ,
ಆತನ ಉತ್ಕೃಷ್ಟ ವಾಕ್ಯದಲಿ ಹಾಕಿರುವದು
ನಿಮ್ಮ ನಂಬಿಕೆಗಾಗಿ,
ಆತನು ಹೇಳಿರುವದಕ್ಕಿಂತಲೂ ಹೆಚ್ಚಿಗೆ ಹೇಳಲು
ಏನು ಸಾಧ್ಯ ನಮಗೆ,
ಓಡಿಬಂದ ನಿಮಗೆ ಆಶ್ರಯಕ್ಕಾಗಿ ಯೇಸುವಿನ ಬಳಿಗೆ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 ಪಸ್ಕದ ನಂತರ | ಬಹುಶಃ ಕಪೆರ್ನೌಮ್ | ದೇವರ ವಾಕ್ಯವನ್ನು ನಿರರ್ಥಕ ಮಾಡುವ ಸಂಪ್ರದಾಯಗಳು | 15:1–20 | 7:1–23 | –– | 7:1 |

## ಮತ್ತಾಯ 15:1-20

ಆಗ ಯೆರೂಸಲೇಮಿನಿಂದ ಫರಿಸಾಯರೂ ಶಾಸ್ತ್ರಿಗಳೂ ಯೇಸುವಿನ ಬಳಿಗೆ ಬಂದು-ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯವನ್ನು ಯಾಕೆ ಮೀರುತ್ತಾರೆ? ಅವರು ಕೈತೊಳ - ಕೊಳ್ಳದೆ ಆಹಾರ ತೆಗೆದುಕೊಳ್ಳುತ್ತಾರಲ್ಲಾ ಎಂದು ಕೇಳಿದ್ದಕ್ಕೆ ಆತನು ಅವರಿಗೆ ಉತ್ತರಕೊಟ್ಟದ್ದೇನಂದರೆ - ನೀವು ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು ಯಾಕೆ ಮೀರುತ್ತೀರಿ? ಹೇಗಂದರೆ ತಂದೆತಾಯಿಗಳನ್ನು ಸನ್ಮಾನಿಸ ಬೇಕೆಂತಲೂ ತಂದೆಯನ್ನಾಗಲಿ ತಾಯನ್ನಾಗಲಿ ದೂಷಿಸಿದವನಿಗೆ ಮರಣದಂಡನೆ ಆಗಬೇಕೆಂತಲೂ ದೇವರು ಹೇಳಿದ್ದಾನೆ. ನೀವೋ ಯಾವನಾದರೂ ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ ನೋಡಿ-ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ ಎಂದು ಹೇಳುವದಾದರೆ ಅವನಿಗೆ ತನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕಾದ್ದಿಲ್ಲ ಅನ್ನುತ್ತೀರಿ. ಹೀಗೆ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದೀರಿ. ಕಪಟಿಗಳೇ, ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇನಂದರೆ-ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ ಎಂಬದೇ. ಆ ಮೇಲೆ ಯೇಸು ಜನರ ಗುಂಪನ್ನು ಹತ್ತರಕ್ಕೆ ಕರೆದು ಅವರಿಗೆ-ಕಿವಿಗೊಟ್ಟು ಕೇಳಿರಿ, ತಿಳುಕೊಳ್ಳಿರಿ. ಬಾಯೊಳಕ್ಕೆ ಹೋಗುವಂಥದು ಮನುಷ್ಯನನ್ನು ಹೊಲೆಮಾಡುವದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು ಎಂದು ಹೇಳಿದನು. ಆಗ ಶಿಷ್ಯರು ಬಂದು ಆತನನ್ನು-ಫರಿಸಾಯರು ಈ ಮಾತನ್ನು ಕೇಳಿ ಬೇಸರಗೊಂಡರೆಂದು ನಿನಗೆ ಗೊತ್ತಾಯಿತೋ ಎಂದು ಕೇಳಿದರು. ಅದಕ್ಕೆ ಆತನು-ಪರಲೋಕದಲ್ಲಿರುವ ನನ್ನ ತಂದೆಯು ನೆಡದೆ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡುವವು. ಅವರ ಮಾತನ್ನು ಬಿಡಿರಿ; ತಾವೇ ಕುರುಡರು, ಮತ್ತೊಬ್ಬರಿಗೆ ದಾರಿತೊರಿಸುವದಕ್ಕೆ ಹೋಗುತ್ತಾರೆ; ಕುರುಡನು ಕುರುಡನಿಗೆ ದಾರಿತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು ಅಂದನು. ಆಗ ಪೇತ್ರನು ಈ ಸಾಮ್ಯದ ಅರ್ಥವನ್ನು ನಮಗೆ ಹೇಳು ಅನ್ನಲು ಆತನು-ನಿಮಗೂ ಇನ್ನು ಬುದ್ಧಿ ಇಲ್ಲವೇ? ಬಾಯೊಳಕ್ಕೆ ಹೋಗುವಂಥದು ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುತ್ತದೆಂದು ನಿಮಗೆ ತಿಳಿಯಲಿಲ್ಲವೋ? ಆದರೆ ಬಾಯೊಳಗಿಂದ ಹೊರಡುವಂಥವುಗಳು ಮನಸ್ಸಿನೊಳಗಿಂದ ಬರುತ್ತವೆ; ಇವೇ ಮನುಷ್ಯನನ್ನು ಹೊಲೆಮಾಡುವವು. ಹೇಗೆಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ ಕೊಲೆ ಹಾದರ ಸೂಳೆಗಾರಿಕೆ ಕಳ್ಳತನ ಸುಳ್ಳುಸಾಕ್ಷಿ ಬೈಗಳು ಹೊರಟು ಬರುತ್ತವೆ. ಮನುಷ್ಯನನ್ನು ಕೆಡಿಸುವಂಥವುಗಳು ಇವೇ; ಆದರೆ ಕೈ ತೊಳಕೊಳ್ಳದೆ ಊಟಮಾಡುವದು ಮನುಷ್ಯನನ್ನು ಕೆಡಿಸುವದಿಲ್ಲ ಅಂದನು.

## ಮಾರ್ಕ 7:1-23

ತರುವಾಯ ಯೆರೂಸಲೇಮಿನಿಂದ ಬಂದಿದ್ದ ಫರಿಸಾಯರು ಶಾಸ್ತ್ರಿಗಳಲ್ಲಿ ಕೆಲವರೂ ಆತನ ಬಳಿಗೆ ಕೂಡಿ ಬಂದರು. ಫರಿಸಾಯರು ಯೆಹೂದ್ಯರೆಲ್ಲರೂ ಹಿರಿಯರಿಂದ ಬಂದ ಸಂಪ್ರದಾಯವನ್ನು ಹಿಡಿದು ತಮ್ಮ ಕೈಗಳನ್ನು ಚೆನ್ನಾಗಿ ತೊಳಕೊಳ್ಳದೆ ಆಹಾರ ತೆಗೆದುಕೊಳ್ಳುವದಿಲ್ಲ; ಮತ್ತು ಪೇಟೆಗೆ ಹೋಗಿ ಬಂದರೆ ನೀರನ್ನು ಪ್ರೋಕ್ಷಿಸಿಕೊಳ್ಳದೆ ಆಹಾರ ತೆಗೆದುಕೊಳ್ಳುವದಿಲ್ಲ; ಇದಲ್ಲದೆ ಅವರಲ್ಲಿ ತಂಬಿಗೆ ಬಟ್ಟಲು ತಪ್ಪಲೆಗಳನ್ನು ಬೆಳಗಿ ತೊಳೆಯುವದೇ ಮೊದಲಾದ ಅನೇಕಾಚಾರಗಳನ್ನು ನಡಿಸುವ ನೇಮಕವುಂಟು. ಆತನ ಶಿಷ್ಯರಲ್ಲಿ ಕೆಲವರು ಮೈಲಿಗೆಯ ಕೈಯಿಂದ, ಅಂದರೆ ಕೈ ತೊಳಕೊಳ್ಳದೆ ಆಹಾರ ತೆಗೆದುಕೊಳ್ಳುವದನ್ನು ಆ ಫರಿಸಾಯರು ಶಾಸ್ತ್ರಿಗಳು ಕಂಡು ಆತನನ್ನು-ನಿನ್ನ ಶಿಷ್ಯರು ಹಿರಿಯರಿಂದ ಬಂದ ಸಂಪ್ರದಾಯದಂತೆ ಯಾಕೆ ನಡೆದುಕೊಳ್ಳುವದಿಲ್ಲ? ಮೈಲಿಗೆಯ ಕೈಯಿಂದ ಯಾಕೆ ಆಹಾರ ತೆಗೆದುಕೊಳ್ಳುತ್ತಾರೆ ಎಂದು ಕೇಳಿದರು. ಅದಕ್ಕೆ ಆತನು-ಕಪಟಿಗಳಾದ ನಿಮ್ಮ ವಿಷಯದಲ್ಲಿ ಯೇಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇನಂದರೆ-ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿತೋರಿಸುವದು ವ್ಯರ್ಥ ಎಂಬದೇ. ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಕಲ್ಪಿಸಿದ ಸಂಪ್ರದಾಯವನ್ನು ಹಿಡಿದಿದ್ದೀರಿ ಎಂದು ಹೇಳಿದನು. ಆತನು ಇನ್ನೂ ಅವರಿಗೆ-ನೀವು ನಿಮ್ಮ ಸಂಪ್ರದಾಯವನ್ನು ಹಿಡಿದು ನಡಿಸುವದಕ್ಕಾಗಿ ದೇವರ ಆಜ್ಞೆಯನ್ನು ವ್ಯರ್ಥ ಮಾಡುತ್ತೀರಿ; ಬಹು ಚೆನ್ನಾಗಿದೆಯಲ್ಲವೇ. ತಂದೆತಾಯಿಗಳನ್ನು ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲಿ ತಾಯಿಯನ್ನಾಗಲಿ ದೂಷಿಸಿದವನಿಗೆ ಮರಣದಂಡನೆ ಆಗಬೇಕೆಂತಲೂ ಮೋಶೆಯು ಹೇಳಿದ್ದಾನೆ; ನೀವೋ ಒಬ್ಬನು ತನ್ನ ತಂದೆಯನ್ನಾಗಲಿ ತಾಯಿಯನ್ನಾಗಲಿ ನೋಡಿ-ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ಕೋರ್ಬಾನ್ ಮಾಡಿದ್ದೇನೆ (ಅಂದರೆ ದೇವರಿಗಾಗಿ ಇಟ್ಟಿದ್ದೇನೆ) ಎಂದು ಹೇಳುವದಾದರೆ ಅವನು ತನ್ನ ತಂದೆಗಾಗಲಿ ತಾಯಿಗಾಗಲಿ ಇನ್ನೇನೂ ಮಾಡಬಾರದೆಂದು ಹೇಳುತ್ತೀರಿ. ನೀವು ಕಲಿಸುತ್ತಾ ಬಂದಿರುವ ಸಂಪ್ರದಾಯದಿಂದ ದೇವರ ವಾಕ್ಯವನ್ನು ನಿರರ್ಥಕಮಾಡುತ್ತೀರಿ, ಮತ್ತು ಇಂಥ ಕಾರ್ಯಗಳನ್ನು ಇನ್ನೂ ಎಷ್ಟೋ ಮಾಡುತ್ತೀರಿ ಎಂದು ಹೇಳಿದನು. ಆ ಮೇಲೆ ಯೇಸು ಜನರ ಗುಂಪನ್ನು ತಿರಿಗಿ ಹತ್ತರಕ್ಕೆ ಕರೆದು ಅವರಿಗೆ-ಎಲ್ಲರೂ ಕಿವಿಗೊಟ್ಟು ನನ್ನ ಮಾತನ್ನು ಕೇಳಿರಿ, ತಿಳುಕೊಳ್ಳಿರಿ. ಹೊರಗಿನಿಂದ ಮನುಷ್ಯನೊಳಕ್ಕೆ ಹೋಗಿ ಅವನನ್ನು ಹೊಲೆಮಾಡತಕ್ಕಂಥದು ಒಂದೂ ಇಲ್ಲ; ಆದರೆ ಮನುಷ್ಯ ನೊಳಗಿಂದ ಹೊರಡುವಂಥವುಗಳೇ ಮನುಷ್ಯನನ್ನು ಹೊಲೆಮಾಡುವಂಥವುಗಳಾಗಿವೆ ಎಂದು ಹೇಳಿದನು. ತರುವಾಯ ಆತನು ಜನರನ್ನು ಬಿಟ್ಟು ಮನೆಯೊಳಕ್ಕೆ ಹೋದಾಗ ಆತನ ಶಿಷ್ಯರು ಆ ಸಾಮ್ಯದ ಅರ್ಥವೇನೆಂದು ಆತನನ್ನು ಕೇಳಲು ಆತನು ಅವರಿಗೆ-ನಿಮಗೂ ಅಷ್ಟು ಬುದ್ಧಿ ಇಲ್ಲವೇ? ಹೊರಗಿನಿಂದ ಮನುಷ್ಯನೊಳಕ್ಕೆ ಹೋಗುವಂಥದು ಅವನ ಹೃದಯದೊಳಕ್ಕೆ ಸೇರದೆ ಹೊಟ್ಟೆಯಲ್ಲಿ ಸೇರಿ ಬಹಿರ್ದೇಶಕ್ಕೆ ಹೋಗುವದರಿಂದ ಅವನನ್ನು ಹೊಲೆಮಾಡಲಾರದೆಂದು ನಿಮಗೆ ತಿಳಿಯಲಿಲ್ಲವೋ ಎಂದು ಹೇಳಿದನು. ಹೀಗೆ ಹೇಳಿದ್ದರಿಂದ ತಿನ್ನುವ ಪದಾರ್ಥಗಳೆಲ್ಲಾ ಶುದ್ಧವೆಂದು ಸೂಚಿಸಿದನು. ಆತನು ಇನ್ನೂ-

ಮನುಷ್ಯನೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು; ಒಳಗಿನಿಂದ ಅಂದರೆ ಮನುಷ್ಯರ ಮನಸ್ಸಿನೊಳಗಿಂದ ಸೂಳೆಗಾರಿಕೆ ಕಳ್ಳತನ ಕೊಲೆ ಹಾದರ ದ್ರವ್ಯಾಶೆ ಕೆಡುಕುತನ ಮೋಸ ಬಂಡತನ ಹೊಟ್ಟೇಕಿಚ್ಚು ಬೈಗಳು ಸೊಕ್ಕು ಬುದ್ಧಿಗೇಡಿತನ ಇವೇ ಮೊದಲಾದವುಗಳ ಕೆಟ್ಟ ಆಲೋಚನೆಗಳು ಹೊರಡುತ್ತವೆ. ಈ ಕೆಟ್ಟ ವಿಷಯಗಳೆಲ್ಲಾ ಒಳಗಿನಿಂದ ಹೊರಟು ಮನುಷ್ಯನನ್ನು ಹೊಲೆಮಾಡುತ್ತವೆ ಅಂದನು.

## ಯೋಹಾನ 7:1

ಈ ಸಂಗತಿಗಳಾದ ಮೇಲೆ ಯೇಸು ಗಲಿಲಾಯದಲ್ಲಿ ಸಂಚಾರಮಾಡುತ್ತಿದ್ದನು; ಯೆಹೂದ್ಯರು ಆತನನ್ನು ಕೊಲ್ಲುವ ಪ್ರಯತ್ನದಲ್ಲಿದ್ದದರಿಂದ ಆತನಿಗೆ ಯೂದಾಯದಲ್ಲಿ ಸಂಚಾರ ಮಾಡುವ ಮನಸ್ಸಿರಲಿಲ್ಲ.

# ಮನುಷ್ಯನದಲ್ಲ ಇದು ದೇವರ ನುಡಿ

**ರೀಪ್ರಿಂಟ್ಸ್ ಪುಟ 5096**

## ಮಾರ್ಕ 7:1–13

**ಯಾಕೆಂದರೆ ತಿನ್ನುವದೂ ಕುಡಿಯುವದೂ ದೇವರ ರಾಜ್ಯವಲ್ಲ; ನೀತಿಯೂ ಸಮಾಧಾನವೂ ಪವಿತ್ರಾತ್ಮನಿಂದಾಗುವ ಆನಂದವೂ ಆಗಿದೆ – ರೋಮಾ 14:17**

ಈ ದಿನದ ಅಧ್ಯಯನವು ತೋರಿಸಿಕೊಡುವುದೇನಂದರೆ, ಹದಿನೆಂಟು ಶತಮಾನಗಳ ಹಿಂದಿನ ಫರಿಸಾಯರು ದೇವಾಜ್ಞೆಗಳನ್ನು ಜಾಗರೂಕತೆಯಿಂದ ಕೈಗೊಳ್ಳುವವರಾಗಿದ್ದರೂ, ಹಾಗೂ ಈ ವಿಷಯದಲ್ಲಿ ನಂಬಿಗಸ್ತರಾಗಿರುವೆವೆಂದು ಹೊಗಳಿಕೊಳ್ಳುತ್ತಿದ್ದರೂ, ಕ್ರಮೇಣ ದೇವರ ವಾಕ್ಯವನ್ನು ಬಿಟ್ಟು ಮನುಷ್ಯರ ಸಂಪ್ರದಾಯಗಳನ್ನು ಅನುಸರಿಸುವವರಾದರು. ಈ ದಿನದ ಯೆಹೂದ್ಯರ ಸಂಗತಿಯೂ ಹೀಗೆಯೇ ಇರುವುದು. ಅವರು ಹಳೆ ಒಡಂಬಡಿಕೆಯ ಪವಿತ್ರ ವಾಕ್ಯಗಳನ್ನು ಓದುವವರಾದರೂ ಅದನ್ನು ಅರ್ಥಮಾಡಿಕೊಳ್ಳಲಾಗದಂಥ ಮುದ್ರಿತವಾದ ಗ್ರಂಥವೆಂದು ಪರಿಗಣಿಸಿರುವರು. ಇದರ ಅರ್ಥವನ್ನು ಗ್ರಹಿಸಿಕೊಳ್ಳಲು ಯತ್ನಿಸುವದಕ್ಕೆ ಬದಲು ಅವರು ತಾಲ್ಮುದ್ ಎಂಬ ಗ್ರಂಥವನ್ನು ಅಧ್ಯಯನಮಾಡಿ ತಮ್ಮ ಜೀವಿತವನ್ನು ಅದರ ಪ್ರಕಾರ ರೂಪಿಸಿಕೊಂಡಿರುವರು. ಈ ಎರಡನೆಯದು (ತಾಲ್ಮುದ್ ಗ್ರಂಥ) ಬುದ್ಧಿವಿವೇಕವುಳ್ಳ ಮತ್ತು ಬುದ್ಧಿವಿವೇಕವಿಲ್ಲದ ಹೇಳಿಕೆಗಳನ್ನು, ಸ್ವಸ್ಥ ಮತ್ತು ಅಸ್ವಸ್ಥ ಬುದ್ಧಿವಾದಗಳನ್ನು ಒಳಗೊಂಡಿರುವದು; ಆದರೂ ಇವುಗಳ ಪ್ರಕಾರವೇ ಸಂಪ್ರದಾಯಸ್ಥರಾದ ಯೆಹೂದ್ಯರು ತಮ್ಮ ಧಾರ್ಮಿಕ ಮನೋಭಾವಗಳೆಲ್ಲವನ್ನು ರೂಪಿಸಿಕೊಂಡಿರುವರು.

ಖಂಡಿತವಾಗಿಯೂ ಇಂದಿನ ಕ್ರೈಸ್ತರ ವಿಷಯದಲ್ಲೂ ಇದೇ ಸತ್ಯವಾಗಿರುವದು. ಸತ್ಯವೇದದ ಅಧಿಕಾರ ಮತ್ತು ಗುಣಮಟ್ಟಗಳನ್ನು ಮಾನ್ಯಮಾಡದೆ ಪತ್ರಿಯೊಂದು ಕ್ರೈಸ್ತಪಂಗಡಗಳು ತಮ್ಮದೇ ಆದ ಸಿದ್ಧಾಂತಗಳಿಗೆ, ತಮ್ಮದೇ ಆದ ವಾಕ್ಯಾಧಾರಗಳಿಗೆ ಹಾಗು ತಮ್ಮದೇ ಆದ ಪ್ರಶ್ನೋತ್ತರ ರೂಪದ ಬೋಧನೆಗಳಿಗೆ ಮಾನ್ಯತೆ ನೀಡಿರುವರು. ಸತ್ಯವೇದವು ಓದಲ್ಪಡುವಾಗ ಅವುಗಳ ಬಗ್ಗೆ ತಮ್ಮ ಮತಸೂತ್ರದಲ್ಲಿನ ಶಬ್ದಾರ್ಥ ಮತ್ತು ವ್ಯಾಖ್ಯಾನಗಳು ಮನಸ್ಸಿನಲ್ಲಿ ಬರುವಂತೆ ಮಾಡಿ ಅವುಗಳನ್ನು ಮಸಕುಮಾಡಲಾಗಿರುವದು. ಹೀಗೆ ನಮ್ಮ ಕೈಯಲ್ಲಿರುವ ಸತ್ಯವೇದದ ಮತ್ತು ಹೃದಯದಲ್ಲಿನ ಭಯಭಕ್ತಿಯ ವಿಷಯಗಳಲ್ಲಿ ಕ್ರೈಸ್ತರು ಆರು ನೂರು ವಿವಿಧ ಪಂಗಡಗಳಾಗಿ ವಿಂಗಡನೆಯಾಗಿದ್ದು ಎಲ್ಲರು ಒಂದುಗೂಡುವ ಸಂಭವಗಳು ಅತ್ಯಲ್ಪವಾಗಿರುವದು; ಇದಕ್ಕೆ ಕಾರಣ ಸತ್ಯವೇದ ಅಧ್ಯಯನ ಮಾಡುವಲ್ಲಿ ಪ್ರತಿಯೊಂದು ಪಂಗಡವೂ ತನ್ನ ಸ್ವಂತ ಮತಸೂತ್ರದ ಕನ್ನಡಿಯಲ್ಲಿ ನೋಡಲು ಒತ್ತಾಯಿಸುತ್ತಿರುವದೇ.

ನಿಜವಾಗಿಯೂ ಕ್ರೈಸ್ತರಲ್ಲಿ ಎಲ್ಲರೂ ಅಲ್ಲದಿದ್ದರೂ ಬುದ್ಧಿವಂತರಾದವರು ತಮ್ಮನ್ನು ಇಷ್ಟು ದೀರ್ಘಕಾಲ ಅಗಲಿಸಿ ಸತ್ಯವೇದದ ಹಲವಾರು ಪುಟಗಳ ನಿಜಾರ್ಥಗಳನ್ನು ಮರೆಮಾಡಿ ಮನಸ್ಸುಗಳನ್ನು ಸಾಮಾನ್ಯವಾಗಿ ಗೊಂದಲಕ್ಕೆ ಸಿಲುಕಿಸಿರುವ ಈ ಮತಸೂತ್ರವೆಂಬ ಕನ್ನಡಕವನ್ನು ತೆಗೆದಿಟ್ಟು ಅದನ್ನು ನಾಶಮಾಡಿದಲ್ಲಿ ಎಷ್ಟೋ ವಿಹಿತವಲ್ಲವೇ? ಪರಲೋಕದ ಸಮಾಲೋಚನೆಗಳನ್ನು ಮತ್ತು ಪರಲೋಕದ ಜ್ಞಾನವನ್ನು ಅನುಸರಿಸುವುದರಲ್ಲಿ ಭಿನ್ನವಾದ ಮಾರ್ಗವನ್ನು ತೆಗೆದುಕೊಂಡು ಈಗ ದೇವರ ವಾಕ್ಯಗಳ ಪುಟಗಳ ಮೇಲೆ ಹೊಳೆಯಲಾಗುತ್ತಿರುವ ಬೆಳಕಿನಲ್ಲಿ ಹೊಸದಾಗಿ ಅಧ್ಯಯವನ್ನು ಆರಂಭಿಸಿಸುವುದು ಒಳ್ಳೆಯದಲ್ಲವೇ? ಖಂಡಿತವಾಗಿ ನಾವೆಲ್ಲರೂ ಇದನ್ನು ತಾತ್ವಿಕವಾಗಿ ಒಪ್ಪುತ್ತೇವೆ; ಈ ನಮ್ಮ ಸಮ್ಮತಿ ಮತ್ತು ಮನೋನಿರ್ಧಾರಗಳನ್ನು ಅನುಷ್ಠಾನಗೊಳಿಸಬಹುದಲ್ಲವೇ?

## ಕೈತೊಳೆಯದೆ ಊಟಮಾಡುವದು

ಯೇಸುವಿನಂಥ ಬಹು ಸಮರ್ಥನಾದ ವ್ಯಕ್ತಿಯನ್ನು ತಮ್ಮಲ್ಲಿ ಒಬ್ಬನನ್ನಾಗಿ ಮಾಡಿಕೊಂಡು ತಮ್ಮ ಪದ್ಧತಿಗಳನ್ನು ಆತನೂ ಅನುಸರಿಸುವಂತೆ ಮಾಡಿ ಹೀಗೆ ಅತನ ಸಮ್ಮತಿಯಿಂದ ತಮ್ಮನ್ನು ಗುರುತಿಸಿಕೊಳ್ಳುವದಕ್ಕಿಂತಲೂ ಹೆಚ್ಚಿಗೆ ಏನೂ ಫರಿಸಾಯರು ಇಷ್ಟಪಡುತ್ತಿರಲಿಲ್ಲ. ಆತನ ಉಪದೇಶಗಳಲ್ಲಿದ್ದ ಉತ್ಕೃಷ್ಟ ಅಂಶಗಳಾದ ನ್ಯಾಯ ಕರುಣೆ ಪ್ರೀತಿ ಇವುಗಳನ್ನು ಗಮನಿಸುವದರಲ್ಲಿ ಅವರು ವಿಫಲರಾಗಲು ಸಾಧ್ಯವಿರಲಿಲ್ಲ. ತಮ್ಮ ಶಿಷ್ಟಾಚಾರಗಳನ್ನು ಆತನು ಅನುಷ್ಠಾನಕ್ಕೆ ತಂದುಕೊಂಡಲ್ಲಿ ತಮಗೆ ದಿಗಿಲುಪಡಿಸಿದ್ದ ಆತನ ನುಡಿಯ ಕೆಲವು ಸತ್ಯಾಂಶಗಳ

ವಿಷಯದಲ್ಲಿ ಅವರು ಆತನನ್ನು ಕ್ಷಮಿಸಲು ಸಾಧ್ಯವಿತ್ತು. ಆಗಿನ ಸ್ಥಿತಿಯಲ್ಲಿ, ಆತನಿಗೆ ಸರಿಬೀಳುವವರು ನಿಜವಾಗಿಯೂ ಯಾರೂ ಇರಲಿಲ್ಲ. ಅಶುದ್ಧರಿಗೆ ಆತನು ಅತಿ ಶುದ್ಧನಾಗಿದ್ದನು; ಅವರಲ್ಲಿನ ಅಬ್ಬರಿಸುವವರಿಗೆ ಹಾಗೂ ಮತಾಚಾರದಲ್ಲಿ ತೀವ್ರವಾಗಿ ಠೀಕಿಸುವವರಿಗೆ ಆತನು ಅತಿ ಪ್ರಾಮಾಣಿಕನಾಗಿದ್ದನು; ಪ್ರಾಪಂಚಿಕವಾದ ಬುದ್ಧಿಯುಳ್ಳವರಿಗೆ ಆತನು ಅತಿ ತೆರೆದಮನಸ್ಸುಳವನೂ ಮತ್ತು ಅತಿ ಸತ್ಯವಂತನೂ ಆಗಿದ್ದನು.

ಈ ಪಾಠದಲ್ಲಿ, ಯೇಸುವಿನ ಹಿಂಬಾಲಕರು ಆಹಾರ ತೆಗೆದುಕೊಳ್ಳುವದಕ್ಕೆ ಮೊದಲು ಕೈಗಳನ್ನು ತೊಳೆಯಲು ಬಹು ಜಾಗರೂಕತೆ ವಹಿಸ ಸಲುವಾದ ತಾಲ್ಮುದ್ ಗ್ರಂಥದಲ್ಲಿನ ನಿಯಮಗಳ ವಿಷಯದಲ್ಲಿ ಒಂದು ಧಾರ್ಮಿಕ ಕರ್ತವ್ಯವಾಗಿ ಯಾಕೆ ಉಪದೇಶಿಸಲ್ಪಟ್ಟಿಲ್ಲವೆಂದು ಫರಿಸಾಯರು ಆತನನ್ನು ವಿಚಾರಿಸಿದರು. ಯೇಸುವು ತನ್ನ ಹಿಂಬಾಲಕರನ್ನು ಯಾವ ಕಲ್ಮಷದ ಅಥವಾ ಅಶುದ್ಧತ್ವಗಳ ಬಗ್ಗೆಯೂ ಮಾದರಿಯಾಗಲು ಬಿಟ್ಟಿರಲಿಲ್ಲವೆಂಬುದನ್ನು ನಾವು ಖಚಿತಪಡಿಸಿಕೊಳ್ಳಬಹುದು. ವಾಸ್ತವವಾಗಿ, ಸತ್ಯವು ಹೃದಯದಲ್ಲಿ ಪ್ರವೇಶಿಸುವಷ್ಟರ ಪ್ರಮಾಣದಲ್ಲಿ ಅದು ಇಡೀ ಜೀವಿತದ ಮೇಲೆ ಅಂದರೆ ಸಂಪೂರ್ಣವಾಗಿ ವ್ಯಕ್ತಿಯ ಮಾನಸಿಕ ನೈತಿಕ ಹಾಗು ಶಾರೀರಿಕ ವಿಷಯಗಳಲ್ಲಿ ಸ್ವಚ್ಛತೆಯ ಮತ್ತು ಶುದ್ಧೀಕರಣದ ಪರಿಣಾಮವನ್ನು ಉಂಟುಮಾಡುವದೆಂದು ನಾವು ತಿಳಿದಿದ್ದೇವೆ. ಫರಿಸಾಯರು ಹೇಳಿದುದರ ಅರ್ಥವು ಒಂದು ಶುದ್ಧಾಚಾರದ ತೊಳೆದು ಕೊಳ್ಳುವಿಕೆಯ ಸಂಬಂಧವಾಗಿತ್ತು. ಕೈಗಳು ಶುದ್ಧವಾಗಿದ್ದವೋ ಇಲ್ಲವೇ ಅಶುದ್ಧವಾಗಿದ್ದವೋ, ಒಂದು ಸಾಂಪ್ರಾದಾಯಿಕವಾಗಿ ಅವುಗಳನ್ನು ತೊಳೆದುಕೊಳ್ಳುವದು ಅವರ ಧರ್ಮಾಚರಣೆಯ ಒಂದು ಭಾಗವಾಗಿತ್ತು. ಇದನ್ನೇ ಯೇಸುವು ಆಕ್ಷೇಪಿಸಿದ್ದುದು. ಆತನು ಈ ವಿಧವಾಗಿ ಉಪದೇಶಿಸಲು ಸಾಧ್ಯವಿರುತ್ತಿರಲಿಲ್ಲ ಯಾಕೆಂದರೆ ಅದು ಸಾಂಪ್ರಾದಾಯದ ಕಪಟಾಚಾರವಾಗುತ್ತಿತ್ತು. ಆತನು ಇನ್ನೊಂದು ಸಂದರ್ಭದಲ್ಲಿ ಹೇಳಿರುವ ಹಾಗೆ ತಮ್ಮ ವೈಯನ್ನು ಹಾಗೂ ಪಾತ್ರೆಗಳನ್ನು ಕಾಟಾಚಾರಕ್ಕೆ ಸಾಂಪ್ರದಾಯಿಕವಾಗಿ ವಿಶೇಷ ರೀತಿಯಲ್ಲಿ ತೊಳಕೊಳ್ಳುವ ಫರಿಸಾಯರ ಈ ಪದ್ಧತಿಯು ಅವರ ಹೆಚ್ಚು ಸಮಯಗಳನ್ನು ತೆಗೆದುಕೊಳ್ಳುತ್ತಿದ್ದು ತಮಗಾಗಿ ಈ ಸಂಗತಿಗಳನ್ನು ನಿರ್ವಹಿಸುವ ಆಳುಗಳನ್ನು ಹೊಂದಿರದ ಬಡವರಿಗೆ ಅದು ಹೊರೆಯಾಗಿತ್ತು; ಅಲ್ಲದೆ ಇವುಗಳನ್ನು ಮಾಡದಿರುವದು ಆಶುದ್ಧ ಅಪವಿತ್ರತೆ ಮತ್ತು ದೈವಿಕ ಏರ್ಪಾಡುಗಳಿಗೆ ಅನುಸಾರವಾದದ್ದಲ್ಲವೆಂದು ಪರಿಗಣಿಸಲ್ಪಟ್ಟು ಅಂಥವರು ನಿಜವಾದ ಯೆಹೂದ್ಯರಲ್ಲವೆಂದು ಎಣಿಸಲ್ಪಡುತ್ತಿದ್ದರು. ಈ ಅಂಶಗಳ ಮೇಲೆ ಫರಿಸಾಯರಿಗೆ ಉತ್ತರವಾಗಿ ಹೀಗೆ ಹೇಳಿದ್ದನು: ನೀವು ಪ್ರವಾದಿಯಾದ ಯೆಶಾಯನಿಂದ ತಿಳಿಸಿಸಲ್ಪಟ್ಟಿರುವ ಪರಿಶುದ್ಧವಾದ ಜನರು; ಅವನು ನಿಮ್ಮ ವಿಷಯವಾಗಿ ಹೇಳಿದ್ದು, "ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ." ಯಾಕೆಂದರೆ ನೀವು ದೇವರ ಆಜ್ಞೆಯನ್ನು ಬಿಟ್ಟು ಮನುಷ್ಯರು ಹಾಕಿದ ಸಂಪ್ರದಾಯಗಳನ್ನೇ ಹಿಡಿದುಕೊಂಡಿದ್ದೀರಿ.

ಅವರು ಹೇಗೆ ದೇವಾಜ್ಞೆಗ್ಗಳನ್ನು ಅಲಕ್ಷಿಸಿ ದೇವರು ನೇಮಿಸದಿರುವ ಅವರ ತಾಲ್ಮುದಿನಲ್ಲಿರುವ ಸಾಂಪ್ರಾದಾಯಿಕವಾದ ತೊಳೆಯುವಿಕೆಗಳಿಗೆ ಅತಿ ಹೆಚ್ಚು ಗಮನವನ್ನು ಕೊಡುತ್ತಿರುವ ರೆಂಬುದಕ್ಕೆ ಯೇಸುವು ಅವರಿಗೆ ಒಂದು ಉದಾಹರಣೆಯನ್ನು ನೀಡಿದ್ದನು. ಆ ನಿದರ್ಶನವು ಮೋಶೆಯ ಧರ್ಮಶಾಸ್ತ್ರದಲ್ಲಿ ವಿಧಿಸಿರುವ ತಂದೆತಾಯಿಗಳನ್ನು ಸನ್ಮಾನಿಸುವ ಮತ್ತು ಇವರಲ್ಲಿ ಯಾರೊಬ್ಬರನ್ನು ಕೆಟ್ಟದ್ದಾಗಿ ಹೇಳಿ ದೂಷಿಸಿದರೆ ಅವರಿಗೆ ಮರಣವಾಗಬೇಕೆಂಬುದರ ವಿಷಯವಾಗಿತ್ತು. ಆದರೆ ಈ ಆಜ್ಞೆಯು ತಾಲ್ಮುದ್ ಗ್ರಂಥದಲ್ಲಿ ಬದಲಿಸಲ್ಪಟ್ಟು ಯಾವನಾದರೂ ತನ್ನನ್ನು ಮತ್ತು ತನಗಿರುವದನ್ನು ದೇವರಿಗಾಗಿ ಮತ್ತು ಧಾರ್ಮಿಕ ಕಾರ್ಯಕ್ಕೆ ಉಪಯೋಗಿಸಲು ಪ್ರತಿಷ್ಠೆಮಾಡಿದಲ್ಲಿ, ಅವರನ್ನು ಇದು ತಂದೆತಾಯಿಯರ ವಿಷಯವಾದ ನಿಯಮದಿಂದ ಮುಕ್ತಗೊಳಿಸಿತ್ತು. ತಾಲ್ಮುದಿನ ಅನುಸಾರವಾಗಿ ಹೀಗೆ ಮಾಡಿದಲ್ಲಿ ಆತನನ್ನು ತನ್ನ ತಂದೆತಾಯಿಗಳ ಬಗ್ಗೆ ಮಾಡಬೇಕಾದ ಕರ್ತವ್ಯಗಳಿಂದ ಬಿಡುಗಡೆಮಾಡಲಾಗಿತ್ತು. ಹೀಗೆ ಅವರು ತಮಗೆ ಬದಲಿಸಲು ಹಕ್ಕಿಲ್ಲದ ದೇವರು ನೇರವಾಗಿ ನೀಡಿರುವ ಈ ವಿಷಯಕ್ಕೆ ಸಂಬಂಧಿಸಿದ ಆಜ್ಞೆಗ್ಗಳನ್ನು ನಿರರ್ಥಕ ಮಾಡಿದ್ದರು.

ಯೇಸುವಿನ ಬೋಧನೆಯ ಮತ್ತು ಫರಿಸಾಯರ ಬೋಧನೆಗಳ ನಡುವಿದ್ದ ಭಿನ್ನಾಭಿಪ್ರಾಯವು ಇದೇ. ಇಬ್ಬರೂ ಪವಿತ್ರತೆಯನ್ನು ಮತ್ತು ದೇವಾಜ್ಞೆಗ್ಗಳನ್ನು ಕಟ್ಟುನಿಟ್ಟಾದ ರೀತಿಯಲ್ಲಿ ಪಾಲಿಸುತ್ತಿದ್ದೇವೆಂದು ಹೇಳಿಕೊಳ್ಳುತ್ತಿದ್ದರು; ಆದರೆ ಯೇಸುವು ದೇವರ ವಾಕ್ಯಗಳನ್ನು ಹಿಡಿದುಕೊಂಡು ತಾಲ್ಮುದ್ ಗ್ರಂಥವನ್ನು, ಹಿರಿಯರಿಂದ ಬಂದ ಸಂಪ್ರದಾಯವನ್ನು ನಿರಾಕರಿಸಿದ್ದನು ಹಾಗು ಫರಿಸಾಯರು ದೇವರ ವಾಕ್ಯವನ್ನು ನಿರಾಕರಿಸಿ ಸಂಪ್ರದಾಯವನ್ನು ಹಿಡಿದುಕೊಂಡಿದ್ದರು. ಕ್ರೈಸ್ತರಾಗಿ ನಾವು ಈ ದಿನದಲ್ಲಿ ಮಾಡುತ್ತಿರುವುದೇನು? ನಂಬಿಗಸ್ತಿಕೆಯುಳ್ಳ ವಾಕ್ಯವನ್ನು ಅಂದರೆ "ನಮ್ಮನ್ನು ವಿವೇಕಿಗಳನ್ನಾಗಿ ಮಾಡಲು ಸಮರ್ಥವಾಗಿರುವ ದೇವರ ವಾಕ್ಯವನ್ನು" ಭದ್ರವಾಗಿ ಹಿಡಿದುಕೊಳ್ಳೋಣ. ನಾವು ಸತ್ಯವೇದವನ್ನು ಅನುದಿನವೂ ವಿಮರ್ಶನಾತ್ಮಕವಾಗಿ ಹುಡುಕಿ ನೋಡುವವರಾಗೋಣ ಮತ್ತು ನಾವು ಅದರಲ್ಲಿರುವ ಪ್ರತಿಯೊಂದು ಭಿನ್ನಾಭಿಪ್ರಾಯಗಳನ್ನು ತೊರೆದು ಬಿಡುವವರಾಗೋಣ.

## ದೇವರ ರಾಜ್ಯವೆಂದರೆ ಏನು?

ದೇವರ ರಾಜ್ಯವು ನೀತಿ ಸಮಾಧಾನ ಮತ್ತು ಪವಿತ್ರಾತ್ಮನಲ್ಲಿರುವ ಆನಂದದಲ್ಲಿ ಒಳಗೂಡಿರುವದೆಂದು ನಮ್ಮ ಈ ವಾಕ್ಯಭಾಗವನ್ನು ಪದೇ ಪದೇ ಅಪಾರ್ಥಮಾಡಲಾಗಿರುವದು. ಇದು ಸಂಪೂರ್ಣವಾಗಿ ತಪ್ಪಾದ ಆಲೋಚನೆಯೆಂದು ಇದನ್ನು ಹೇಳಿರುವ ಸಂದರ್ಭವು ತೋರಿಸುವದು. ನಾವು ಇದರ ಸಂದರ್ಭವನ್ನು ಹಿಂಬಾಲಿಸಿ ಹೋಗಿ ನೋಡೋಣ.

ಸತ್ಯವೇದದಲ್ಲಿ ದೇವರ ರಾಜ್ಯದ ಬಗ್ಗೆ ಹೇಳಿರುವದನ್ನು ನಾವು ಈಗಾಗಲೇ ನೋಡಿರುವುದು ಏನೆಂಬುನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವವರಾಗೋಣ. ಮಾನವರೆಲ್ಲರನ್ನು ಉನ್ನತಿಗೆ ತರಲಿರುವ ಮೆಸ್ಸೀಯನ ವೈಭವಯುತವಾದ ಆಳ್ವಿಕೆಯು ಒಂದು

ಸಾವಿರ ವರುಷಗಳ ಕಾಲದ್ದಾಗಿದ್ದು ಆ ಆಳ್ವಿಕೆಯಲ್ಲಿ ಸಭೆಯು ಯೇಸುವಿನ ರಾಜ್ಯದಲ್ಲಿನ ಪ್ರಭಾವ ಅಧಿಕಾರ ಮತ್ತು ಮಾನಗಳಲ್ಲಿ ಆತನೊಂದಿಗೆ ಜೊತೆಗಾರರಾಗುವರೆಂಬುದನ್ನು ಮನಸ್ಸಿನಲ್ಲಿಟ್ಟು ಕೊಳ್ಳೋಣ. ಈ ಸುವಾರ್ತಾಯುಗದಲ್ಲಿ ನೀಡಲಾಗಿರುವ ಕರೆಯು (ಕ್ರಿಸ್ತನ) ಮದಲಗಿತ್ತಿ ಎಂದೆನ್ನಿಸಿಕೊಳ್ಳುವ ವರ್ಗವನ್ನು ಆಯ್ಕೆಮಾಡಿ ಅವರನ್ನು ಅಭಿವೃದ್ಧಿಪಡಿಸಿ "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗಲು" ಅವರನ್ನು ಸಿದ್ಧಗೊಳಿಸುವ ಸಲುವಾಗಿರುವದು.

ಈಗಿನ ಕಾಲದಲ್ಲಿ (ದೇವರಿಂದ) ಕರೆಯಲ್ಪಟ್ಟವರು ಅಂದರೆ "ಯಜ್ಞದ ಕುರಿಯ ಹೆಂಡತಿಯಾಗತಕ್ಕ ಮದಲಗಿತ್ತಿ" ಎಂದು ಕರೆಯಲ್ಪಡುವವರು ಭ್ರೂಣಾವಸ್ಥೆಯಲ್ಲಿರುವ ಅಥವಾ ಪೂರ್ಣಾಭಿವೃದ್ಧಿಯಾಗದ ಸ್ಥಿತಿಯಲ್ಲಿರುವ ದೇವರ ರಾಜ್ಯವಾಗಿರು ವರು ಎಂಬುದನ್ನು ನಾವು ಕಂಡಿದ್ದೇವೆ. ದೇವರ ರಾಜ್ಯದಲ್ಲಿನ ಭಾಗವಾಗಲು ತರಬೇತು ಪಡೆಯುತ್ತಿರುವ ಇವರು ದಶಾಜ್ಞೆಗಳಲ್ಲಿ ವ್ಯಕ್ತವಾಗಿರುವ ಮೋಶೆಯ ಧರ್ಮಶಾಸ್ತ್ರಕ್ಕೆ ಅಧೀನರಾಗಿ ಅವುಗಳ ಮೂಲಕವಾಗಿ ನಿತ್ಯಜೀವವನ್ನು ಪಡೆಯುವದನ್ನು ನಿರೀಕ್ಷಿಸುವವರಾಗಿರದೆ ಕೃಪೆಗೆ ಅಧೀನರಾಗಿರುವರು. ಕ್ರಿಸ್ತನ ಮರಣದಿಂದ ಉಂಟಾದ ನೀತಿಫಲದ ಮೂಲಕ ವಾಗಿ ದೇವರು ಇವರಿಗಾಗಿ ಮಾಡಿರುವ ಕೃಪಾಪೂರ್ಣವಾದ ಏರ್ಪಾಡಿನ ಅಧೀನದಲ್ಲಿರುವರು. ಇವರು ಮೋಶೆಯ ಧರ್ಮಶಾಸ್ತ್ರದ ಅನೇಕ ನಿಯಮಗಳಿಂದ ಮುಕ್ತರಾಗಿದ್ದರೂ ಇವರು ನಿಯಮವಿಲ್ಲದವರಲ್ಲ, ಆದರೆ ಇವರು ಕ್ರಿಸ್ತನ ದೇಹದ ಅಂಗಗಳಾಗಿ ಶ್ರೇಷ್ಠವಾದ ದೈವಿಕ ನಿಮಯಗಳಿಗೆ ಅಧೀನ ರಾಗಿರುವರೆಂದು ಅಪೋಸ್ತಲನಾದ ಪೌಲನು ತೋರಿಸಿ ಕೊಟ್ಟಿರುವನು. ನಾವು ಹೀಗೆ ನಮ್ಮ ಶಾರೀರಿಕ ಬಲಹೀನತೆಯ ಕಾರಣ ಆಜ್ಞೆಯನ್ನು ಅದರ ಒಳಾರ್ಥದ ಅನುಸಾರ ಪೂರ್ಣವಾಗಿ ಕೈಗೊಂಡು ನಡೆಯಲು ಸಮರ್ಥರಲ್ಲದಿದ್ದರೂ, ಹೊಸ ಸೃಷ್ಟಿಗಳಾಗಿ "ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮನು ಸಾರವಾಗಿ ನಡೆಯುವವರಾದ ನಮ್ಮಲ್ಲಿ" ದೇವರ ನಿಯಮವು ನಿಜವಾದ ಅರ್ಥದಲ್ಲಿ ನೆರವೇರಿರುವುದೆಂದು ಹೇಳಿರುವನು. ನ್ಯಾಯವಿಚಾರಣೆಗೆ ಒಳಗಾಗಿರುವದು ಹೊಸ ಸೃಷ್ಟಿ ಅಂದರೆ (ಹೃದಯದಲ್ಲಿನ) ಉದ್ದೇಶಬಯಕೆಗಳು ಹೊರತು ಶರೀರಭಾವವಲ್ಲ.

ಇದರ ಅನುಸಾರವಾಗಿ, ಕ್ರಿಸ್ತನ ದೇಹದ ಅಂಗವಾಗಿ ಬಂದಿರುವ ಅನ್ಯಜನರಿಗೆ ಯೆಹೂದ್ಯರ ನಿಯಮವಿಧಿಗಳಿಗೆ ತಮ್ಮನ್ನು ಹೊಂದಿಸಿಕೊಂಡು ನಡೆಯುವ ಅಗತ್ಯವಿರುವುದಿಲ್ಲ. ದೃಷ್ಟಾಂತವಾಗಿ ಹೇಳುವುದಾದರೆ ಒಬ್ಬ ಯೆಹೂದ್ಯನು ಧರ್ಮನಿಯಮದ ಅನುಸಾರವಾಗಿ ಪರೆಗಳಿಲ್ಲದ ಮೀನು ಬಂಗಡೆ ಮೀನು ಮುಂತಾದವುಗಳನ್ನು ತಿನ್ನುವಂತಿಲ್ಲ ಇಲ್ಲವೇ ಮೊಲದ ಮಾಂಸ ಹಂದಿಯ ಮಾಂಸ ಮೊದಲಾದವುಗಳನ್ನು ತಿನ್ನಬಾರದಾಗಿದ್ದು, ಉಂಡು ಕುಡಿಯುವ ವಿಷಯದಲ್ಲಿ ನಿರ್ಬಂಧವುಳ್ಳವನಾಗಿರುವನು. ಆದರೆ ಅನ್ಯಜನಾಂಗಗಳೊಳಗಿಂದ ಬಂದವನಾಗಿ ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯಲ್ಲಿ ಎಂದೂ ಸೇರದ ಕ್ರೈಸ್ತನಿಗೆ ಈ ಯಾವ ನಿರ್ಬಂಧಗಳೂ ಅನ್ವಯಿಸುವದಿಲ್ಲ.

ಈಗಿನ ಕಾಲದಲ್ಲಿನ ಭ್ರೂಣಾವಸ್ಥೆಯಲ್ಲಿರುವ ದೇವರ ರಾಜ್ಯದ ವರ್ಗದವರಿಗೆ ತಾವು ಏನು ತಿನ್ನಬೇಕು ಕುಡಿಯಬೇಕು ಎಂಬುದರ ವಿಷಯವಾದ ಈ ಸ್ವಾತಂತ್ರ್ಯವು ನಿಜವಾದ ಆಶೀರ್ವಾದವೆಂದು ಭಾವಿಸಬಾರದೆಂದು ಅಪೋಸ್ತಲನಾದ ಪೌಲನು ನಮ್ಮ ಪಠ್ಯಭಾಗದಲ್ಲಿ ಒತ್ತಾಯಿಸಿದ್ದಾನೆ. ಅದು ಇದಕ್ಕೆ ದೂರವಾದುದು; ಈ ವರ್ಗದವರಿಗೆ ಇರುವ ನಿಜವಾದ ಆಶೀರ್ವಾದವು ಪವಿತ್ರಾತ್ಮನ ಮೂಲಕವಾದ ನೀತಿ ಸಮಾಧಾನ ಮತ್ತು ಸಂತೋಷಗಳನ್ನು ಅನುಭವಿಸುವದನ್ನು ಒಳಗೊಂಡಿರು –ತ್ತದೆ. ತಮ್ಮ ಮನಸ್ಸುಗಳನ್ನು ಹೊಸದಾಗಿ ಹುಟ್ಟುವದರ ಮೂಲಕ ನವೀಕರಿಸಿಕೊಂಡವರಾಗಿ ಅವರು ನೀತಿ ಮತ್ತು ಸತ್ಯದ ವಿಷಯವಾಗಿ ಮನಗಂಡು, ಕೆಟ್ಟ ಸಂಗತಿಗಳಿಗೆ ಬದಲಾಗಿ ಒಳ್ಳೆಯ ಸಂಗತಿಗಳನ್ನು, ಅಶುದ್ಧವಾದವುಗಳಿಗೆ ಬದಲಾಗಿ ಶುದ್ಧವಾದವುಗಳನ್ನು, ಭೂಸಂಬಂಧವಾದ ಸಂಗತಿಗಳಿಗೆ ಬದಲಾಗಿ ಆತ್ಮಿಕ ಸಂಗತಿಗಳನ್ನು ಆಶಿಸುವಂಥ ಸ್ಥಿತಿಗೆ ಬಂದವರಾಗಿ, ಅವರ ಪೌರತ್ವವನ್ನು ಆಗ ಭೂಲೋಕದ ರಾಜ್ಯದ ಬದಲಾಗಿ ಪರಲೋಕ ಸಂಸ್ಥಾನದ್ದಾಗಿ ಮಾಡಿಕೊಂಡಿದ್ದರು. "ಎಲ್ಲಾ ಗ್ರಹಿಕೆಯನ್ನು ಮೀರುವ ದೇವರ ಶಾಂತಿಯ" ವಿಷಯವಾಗಿಯೂ ಮತ್ತು ಅದು ತಮ್ಮ ಹೃದಯಗಳಲ್ಲಿ ಯಜಮಾನನಂತಿದ್ದು ಆಳ್ವಿಕೆಮಾಡುವದು ಒಂದು ಭವ್ಯವಾದ ಆಶೀರ್ವಾದವೆಂದು ಅವರು ಮನಗಂಡವರಾಗಿ, ಭ್ರೂಣಾವಸ್ಥೆ –ಯಲ್ಲಿರುವ ದೇವರ ರಾಜ್ಯದ ಅಂಗಗಳಾಗಿ ಆ ಶಾಂತಿಯನ್ನು ಅನುಭವಿಸುತ್ತಲಿರುವರು.

"ದುಷ್ಟರಿಗೆ ಸಮಾಧಾನವೇ ಇಲ್ಲವೆಂದು ನನ್ನ ದೇವರು ನುಡಿಯುತ್ತಾನೆ." "ದುಷ್ಟರಾದರೋ ಅಲ್ಲೋಲಕಲ್ಲೋಲವಾದ ಸಮುದ್ರದಂತಿದ್ದಾರೆ; ಅದು ಸುಮ್ಮನಿರದು..." ಪರಲೋಕ–ದಿಂದಾದ ನಮ್ಮ ಸಮಾಧಾನ ಮತ್ತು ದೇವರಲ್ಲಿ ನಮಗೆ ಲಭಿಸಿರುವ ಭರವಸೆಗಳು ಕ್ರಿಸ್ತನೊಡನೆ ಆತನ ರಾಜ್ಯದ ವರ್ಗದವರಾಗಿ ಆತನೊಡನೆ ಐಕ್ಯವಾಗಿರುವದರ ಫಲ. ನಾವು ಇದಕ್ಕೆ ಬೆಲೆಕೊಡುವವರಾಗಿರುವೆವು ಹೊರತು ಯೆಹೂದ್ಯರಿಗೆ ಬಹಿಷ್ಕರಿಸಲಾದ ಹಂದಿ ಮಾಂಸವನ್ನು ತಿನ್ನುವ ವಿಶೇಶವಾದ ಸವಲತ್ತುಗಳಿಗೆ ಅಲ್ಲ. ಪವಿತ್ರಾತ್ಮನಿಂದಾದ ಆನಂದ, ತಂದೆಯೊ–ಡನೆ ಮತ್ತು ಮಗನೊಡನೆ ಹಾಗು ನೀತಿಯ ಆತ್ಮವನ್ನು ಪಡೆದಿರುವವರೆಲ್ಲರೊಡನೆ ಇರುವ ಅನ್ಯೋನ್ಯತೆಯು ಭ್ರೂಣಾವಸ್ಥೆ ಯಲ್ಲಿರುವ ದೇವರ ರಾಜ್ಯದ ವರ್ಗದವರ ಅಂದರೆ ಕ್ರಿಸ್ತನ ದೇಹವಾದ ಸಭೆಯ ಪ್ರತಿಯೊಬ್ಬ ಸದಸ್ಯನಿಗೂ ಇರುವ ಆಶೀರ್ವಾದಕರವಾದ ವಿಶೇಷ ಸೌಭಾಗ್ಯ.

ಹೀಗೆ ಅಪೋಸ್ತಲನು ತನ್ನ ಕೇಳುಗರು ತಾವು ಪಡೆದುಕೊಂಡ ಅನೇಕ ಸೌಭಾಗ್ಯಗಳಿಗೆ ಒಂದು ಸರಿಯಾದ ಬೆಲೆಯನ್ನು ಕಟ್ಟುವವರಾಗಬೇಕೆಂದು ಆಶಿಸಿರುವನು. ಹೀಗಾಗಿ ಕರ್ತನ ಧ್ಯೇಯೋದ್ದೇಶ ಹಿತಾಸಕ್ತಿಗಳು ಅಥವಾ ಕ್ರಿಸ್ತನಲ್ಲಿರುವ ಸಹೋದರರ ಹಿತಾಸಕ್ತಿಗಳು ಎಂದಾದರೂ ತಿನ್ನುವುದು ಕುಡಿಯುವುದರ ವಿಷಯವಾದ ತಮ್ಮ ಸ್ವಾತಂತ್ರ್ಯವನ್ನು ಬಿಟ್ಟುಕೊಡುವುದು ಅಗತ್ಯವಾದಲ್ಲಿ ಅವರು ಕ್ರಿಸ್ತನಪರವಾದ ಮತ್ತು ಸಹೋದರರ ಪರವಾದ ಇಂಥಾ ಸ್ವಾರ್ಥ–ತ್ಯಾಗಗಳು ಏನೂ

ಅಲ್ಲವೆಂದೂ ಅಂದರೆ ಸಂತೋಷದಿಂದ ಮಾಡುವಂಥ ತ್ಯಾಗವೆಂದು ಅವರು ಎಣಿಸುವರು. ಯಾಕೆಂದರೆ ಅವರು ಕ್ರಿಸ್ತನಲ್ಲಿ ನಮಗೆ ದೊರೆತಿರುವ ಆಶೀರ್ವಾದಗಳ ಮತ್ತು ಸೌಭಾಗ್ಯಗಳ ನಿಜವಾದ ಮೌಲ್ಯಗಳಿಗೆ ಕನಿಷ್ಟವಾದ ರೀತಿಯಲ್ಲೂ ಮಧ್ಯಪ್ರವೇಶಿಸುವದಾಗಲೀ ಇಲ್ಲವೆ ಅಡ್ಡಿಯುಂಟು ಮಾಡುವದಾಗಲೀ ಮಾಡುವವರಲ್ಲ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಫೊಯಿನಿಕೆ, ದೆಕಪೊಲಿ | ತೂರ್ ಮತ್ತು ಸೀದೋನ್ ಸಮೀಪ; ನಂತರ ದೆಕಪೊಲಿಗೆ, 4000 ಜನರಿಗೆ ಊಟ | 15:21–38 | 7:24–8:9 | –– | –– |

## ಮತ್ತಾಯ 15:21–38

ಯೇಸು ಅಲ್ಲಿಂದ ಹೊರಟು ತೂರ್ ಸೀದೋನ್ ಪಟ್ಟಣಗಳ ಪ್ರಾಂತ್ಯಗಳಿಗೆ ಹೋದನು. ಆ ಸೀಮೆಯಿಂದ ಕಾನಾನ್ಯರವಳೊಬ್ಬಳು ಹೊರಟು ಬಂದು–ಸ್ವಾಮೀ, ದಾವೀದನ ಕುಮಾರನೇ, ನನ್ನನ್ನು ಕರುಣಿಸು. ನನ್ನ ಮಗಳಿಗೆ ದೆವ್ವದ ಕಾಟ ಬಹಳವಾಗಿದೆ ಎಂದು ಕೂಗಿಕೊಂಡಳು. ಆದರೆ ಆತನು ಆಕೆಗೆ ಎಂದೂ ಉತ್ತರಕೊಡಲಿಲ್ಲ; ಆಗ ಆತನ ಶಿಷ್ಯರು ಬಂದು–ನಮ್ಮ ಹಿಂದೆ ಕೂಗಿಕೊಂಡು ಬರುತ್ತಾಳೆ; ಆಕೆಯನ್ನು ಕಳುಹಿಸಿಬಿಡು ಎಂದು ಆತನನ್ನು ಬೇಡಿಕೊಂಡರು. ಅದಕ್ಕಾತನು–ತಪ್ಪಿಸಿಕೊಂಡ ಕುರಿಗಳಂತಿರುವ ಇಸ್ರಾಯೇಲನ ಮನೆತನದವರ ಬಳಿಗೇ ಹೊರತು ಮತ್ತಾರ ಬಳಿಗೂ ನಾನು ಕಳುಹಿಸಲ್ಪಟ್ಟವನಲ್ಲ ಅಂದನು. ಆಗ ಆಕೆ ಬಂದು ಆತನಿಗೆ ಅಡ್ಡಬಿದ್ದು–ಸ್ವಾಮೀ, ನನಗೆ ಅನುಗ್ರಹಮಾಡಬೇಕು ಅಂದಳು. ಅದಕ್ಕಾತನು–ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗಳಿಗೆ ಹಾಕುವದು ಸರಿಯಲ್ಲ ಎಂದು ಉತ್ತರಕೊಡಲು ಆಕೆ–ಸ್ವಾಮೀ, ಆ ಮಾತು ನಿಜವೇ; ನಾಯಿಮರಿಗಳಂತೂ ತಮ್ಮ ಯಜಮಾನರ ಮೇಜಿನಿಂದ ಬೀಳುವ ರೊಟ್ಟಿಯ ತುಂಡನ್ನು ತಿನ್ನುತ್ತವಲ್ಲಾ ಅಂದಳು. ಆಗ ಯೇಸು ಆಕೆಗೆ–ಅಮ್ಮಾ, ನಿನ್ನ ನಂಬಿಕೆ ಬಹಳ, ನಿನ್ನ ಮನಸ್ಸಿನಂತೆ ಆಗಲಿ ಎಂದು ಉತ್ತರಕೊಟ್ಟನು. ಅದೇ ಗಳಿಗೆಯಲ್ಲಿ ಆಕೆಯ ಮಗಳು ಸ್ವಸ್ಥಳಾದಳು. ಯೇಸು ಅಲ್ಲಿಂದ ಹೊರಟು ಗಲಿಲಾಯ ಸಮುದ್ರದ ಬಳಿಗೆ ಬಂದು ಬೆಟ್ಟವನ್ನು ಹತ್ತಿ ಅಲ್ಲಿ ಕೂತುಕೊಂಡನು. ಆಗ ಜನರು ಗುಂಪುಗುಂಪಾಗಿ ಆತನ ಬಳಿಗೆ ಬಂದು ಕುಂಟರು ಕುರುಡರು ಮೂಕರು ಕೈಕಾಲಿಲ್ಲದವರು ಈ ಮುಂತಾದ ಅನೇಕರನ್ನು ಕರತಂದು ಅವರನ್ನು ಆತನ ಪಾದಗಳ ಬಳಿಯಲ್ಲಿ ಬಿಟ್ಟರು; ಆತನು ಅವರನ್ನು ವಾಸಿಮಾಡಿದನು. ಮೂಕರಾಗಿದ್ದವರು ಮಾತಾಡಿದ್ದನ್ನೂ ಕೈಕಾಲಿಲ್ಲದವರು ಸ್ವಸ್ಥವಾದದ್ದನ್ನೂ ಕುಂಟರಿಗೆ ಕಾಲುಬಂದದ್ದನ್ನೂ ಕುರುಡರಿಗೆ ಕಣ್ಣುಬಂದದನ್ನೂ ಜನರು ಕಂಡು ಆಶ್ಚರ್ಯಪಟ್ಟು ಇಸ್ರಾಯೇಲ್ ಜನರ ದೇವರನ್ನು ಕೊಂಡಾಡಿದರು. ಆಗ ಯೇಸು ತನ್ನ ಶಿಷ್ಯರನ್ನು ಹತ್ತರಕ್ಕೆ ಕರೆದು ಅವರಿಗೆ–ಈ ಜನರನ್ನು ನೋಡಿ ಕನಿಕರಪಡುತ್ತೇನೆ; ಅವರು ನನ್ನ ಬಳಿಗೆ ಬಂದು ಈಗ ಮೂರು ದಿನವಾಯಿತು; ಅವರಿಗೆ ಊಟಕ್ಕೆ ಏನೂ ಇಲ್ಲ; ಅವರನ್ನು ಉಪವಾಸವಾಗಿ ಕಳುಹಿಸಿಬಿಡುವದಕ್ಕೆ ನನಗೆ ಮನಸ್ಸಿಲ್ಲ; ದಾರಿಯಲ್ಲಿ ಬಳಲಿಹೋದಾರು ಎಂದು ಹೇಳಿದನು. ಶಿಷ್ಯರು–ಇಷ್ಟು ಜನರನ್ನು ತೃಪ್ತಿಪಡಿಸಲಾಗುವಷ್ಟು ರೊಟ್ಟಿ ಈ ಅಡವಿಯಲ್ಲಿ ನಮಗೆ ಎಲ್ಲಿಂದ ಬಂದೀತು? ಅನ್ನಲು ಯೇಸು–ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ ಎಂದು ಕೇಳಿದ್ದಕ್ಕೆ ಅವರು–ಏಳು ರೊಟ್ಟಿಗಳು ಮತ್ತು ಕೆಲವು ಸಣ್ಣ ಮೀನುಗಳು ಅವೆ ಅಂದರು. ಆಗ ಆತನು ಜನರ ಗುಂಪಿಗೆ ನೆಲದ ಮೇಲೆ ಕೂತುಕೊಳ್ಳಿರಿ ಎಂದು ಅಪ್ಪಣೆ ಕೊಟ್ಟು ಆ ಏಳು ರೊಟ್ಟಿಗಳನ್ನೂ ಆ ಮೀನುಗಳನ್ನೂ ತೆಗೆದುಕೊಂಡು ದೇವರ ಸ್ತೋತ್ರಮಾಡಿ ಅವುಗಳನ್ನು ಮುರಿದು ಶಿಷ್ಯರಿಗೆ ಕೊಡಲು ಶಿಷ್ಯರು ಗುಂಪಿನವರಿಗೆ ಹಂಚಿಕೊಟ್ಟರು. ಎಲ್ಲರೂ ಊಟಮಾಡಿ ತೃಪ್ತರಾದರು. ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಏಳು ಹೆಡಿಗೆ ತುಂಬಿದವು. ಊಟಮಾಡಿದವರು, ಹೆಂಗಸರು ಮಕ್ಕಳು ಅಲ್ಲದೆ, ಗಂಡಸರೇ ನಾಲ್ಕು ಸಾವಿರ ಮಂದಿ.

## ಮಾರ್ಕ 7:24–8:9

ಅಲ್ಲಿಂದ ಯೇಸು ಎದ್ದು ಹೊರಟು ತೂರ್ ಪಟ್ಟಣದ ಪ್ರಾಂತ್ಯಗಳಿಗೆ ಹೋಗಿ ಒಂದು ಮನೆಯೊಳಗೆ ಇಳುಕೊಂಡು ಅದು ಯಾರಿಗೂ ಗೊತ್ತಾಗಬಾರದೆಂದಿದ್ದನು; ಆದರೆ ಆತನು ಗುಪ್ತವಾಗಿರುವದಕ್ಕೆ ಆಗದೆ ಹೋಯಿತು. ಕೂಡಲೆ ಒಬ್ಬ ಹೆಂಗಸು ಆತನ ಸುದ್ದಿಯನ್ನು ಕೇಳಿ ಬಂದು ಆತನ ಪಾದಕ್ಕೆ ಬಿದ್ದಳು. ಆಕೆಯ ಮಗಳಿಗೆ ದೆವ್ವ ಹಿಡಿದಿತ್ತು. ಆ ಹೆಂಗಸು ಅನ್ಯಮತದವಳೂ ಸುರೋಫೊಯಿನಿಕ್ಯರವಳೂ ಆಗಿದ್ದಳು. ಆಕೆಯು ತನ್ನ ಮಗಳ ದೆವ್ವವನ್ನು ಬಿಡಿಸಬೇಕೆಂದು ಆತನನ್ನು ಬೇಡಿಕೊಂಡಾಗ ಆತನು ಆಕೆಗೆ–ಮಕ್ಕಳಿಗೆ ಮೊದಲು ತೃಪ್ತಿಯಾಗಲಿ; ಮಕ್ಕಳು ತಿನ್ನುವ ರೊಟ್ಟಿಯನ್ನು ತಕ್ಕೊಂಡು ನಾಯಿಮರಿಗಳಿಗೆ ಹಾಕುವದು ಸರಿಯಲ್ಲ ಎಂದು ಹೇಳಿದನು. ಅದಕ್ಕೆ ಆಕೆಯು–ಸ್ವಾಮೀ, ಆ ಮಾತು ನಿಜವೇ; ಮೇಜಿನ ಕೆಳಗಿರುವ ನಾಯಿಮರಿಗಳಂತೂ ಮಕ್ಕಳ ಕೈಯಿಂದ ಬೀಳುವ ರೊಟ್ಟೀತುಂಡುಗಳನ್ನು ತಿನ್ನುತ್ತವಲ್ಲಾ ಎಂದು ಉತ್ತರಕೊಡಲು ಆತನು–ಈ ಮಾತನ್ನು ಹೇಳಿದ್ದರಿಂದ ದೆವ್ವವು ನಿನ್ನ ಮಗಳನ್ನು ಬಿಟ್ಟುಬಿಟ್ಟಿದೆ, ಹೋಗು ಅಂದನು. ಆಕೆಯು ತನ್ನ ಮನೆಗೆ ಹೋಗಿ ನೋಡಲಾಗಿ ಆ ಹುಡುಗಿ ಹಾಸಿಗೆಯ ಮೇಲೆ ಮಲಗಿದ್ದಳು; ದೆವ್ವ ಅವಳನ್ನು ಬಿಟ್ಟು ಹೋಗಿತ್ತು. ಅನಂತರ

ಆತನು ತೂರ್ ಪಟ್ಟಣದ ಪ್ರಾಂತ್ಯಗಳನ್ನು ಬಿಟ್ಟು ಸೀದೋನ್ ಪಟ್ಟಣದ ಮಾರ್ಗವಾಗಿ ದೆಕಪೊಲಿಯ ಪ್ರಾಂತ್ಯಗಳನ್ನು ಹಾದು ಗಲಿಲಾಯ ಸಮುದ್ರಕ್ಕೆ ಬಂದನು. ಆಗ ಕೆಲವರು ತೊದಲು ಮಾತಾಡುವ ಒಬ್ಬ ಕಿವುಡನನ್ನು ಆತನ ಬಳಿಕೆ ಕರತಂದು–ಇವನ ಮೇಲೆ ನಿನ್ನ ಕೈಯಿಡಬೇಕು ಎಂದು ಆತನನ್ನು ಬೇಡಿಕೊಂಡರು. ಆತನು ಅವನನ್ನು ಜನರ ಗುಂಪಿನಿಂದ ಒತ್ತಟ್ಟಿಗೆ ಕರಕೊಂಡು ಹೋಗಿ ತನ್ನ ಬೆರಳುಗಳನ್ನು ಅವನ ಕಿವಿಗಳಲ್ಲಿ ಇಟ್ಟು ಉಗುಳಿ ಅವನ ನಾಲಿಗೆಯನ್ನು ಮುಟ್ಟಿ ಆಕಾಶದ ಕಡೆಗೆ ನೋಡಿ ನಿಟ್ಟುಸುರುಬಿಟ್ಟು ಅವನಿಗೆ–ಎಪ್ಫಥಾ ಎಂದು ಹೇಳಿದನು. ಆ ಶಬ್ಧಕ್ಕೆ ತೆರೆಯಲಿ ಎಂದರ್ಥ. ಹೇಳುತ್ತಲೇ ಅವನ ಕಿವಿ ತೆರೆದವು; ಅವನ ನಾಲಿಗೆಯ ಕಟ್ಟು ಬಿಚ್ಚಿಹೋಯಿತು; ಅವನು ನೆಟ್ಟಗೆ ಮಾತಾಡಿದನು. ಆಗ ಆತನು–ಯಾರಿಗೂ ತಿಳಿಸಬಾರದೆಂದು ಅವರಿಗೆ ಖಂಡಿತವಾಗಿ ಹೇಳಿದನು. ಆದರೆ ಎಷ್ಟು ಖಂಡಿತವಾಗಿ ಹೇಳಿದರೂ ಅವರು ಮತ್ತಷ್ಟು ಹೆಚ್ಚಾಗಿ ಅದನ್ನು ಹಬ್ಬಿಸಿದರು. ಅವರು ಅತ್ಯಂತಾಶ್ಚರ್ಯಪಟ್ಟು–ಎಲ್ಲಾ ಚೆನ್ನಾಗಿ ಮಾಡಿದ್ದಾನೆ; ಕಿವುಡರಾದರೂ ಕೇಳುವಂತೆ ಮಾಡುತ್ತಾನೆ, ಮೂಕರಾದರೂ ಮಾತಾಡುವಂತೆ ಮಾಡುತ್ತಾನೆ ಅಂದುಕೊಂಡರು. ಆ ದಿವಸಗಳಲ್ಲಿ ಜನರು ತಿರಿಗಿ ಗುಂಪುಕೂಡಿ ಬಂದಾಗ ಅವರಿಗೆ ಊಟಕ್ಕೆ ಏನೂ ಇಲ್ಲದೆ ಇರಲು ಯೇಸು ತನ್ನ ಶಿಷ್ಯರನ್ನು ಹತ್ತರಕ್ಕೆ ಕರೆದು–ಈ ಜನರನ್ನು ನೋಡಿ ಕನಿಕರಪಡುತ್ತೇನೆ, ಇವರು ನನ್ನ ಬಳಿಗೆ ಬಂದು ಮೂರು ದಿನವಾಯಿತು; ಇವರಿಗೆ ಊಟಕ್ಕೆ ಏನೂ ಇಲ್ಲ; ಇವರನ್ನು ಉಪವಾಸವಾಗಿ ಮನೆಗೆ ಕಳುಹಿಸಿಬಿಟ್ಟರೆ ದಾರಿಯಲ್ಲಿ ಬಳಲಿ ಹೋಗುವರು; ಇವರಲ್ಲಿ ಕೆಲವರು ದೂರದಿಂದ ಬಂದಿದ್ದಾರಲ್ಲಾ ಎಂದು ಅವರಿಗೆ ಹೇಳಿದ್ದಕ್ಕೆ ಶಿಷ್ಯರು–ಈ ಅಡವಿಯಲ್ಲಿ ಎಲ್ಲಿಂದ ರೊಟ್ಟಿಯನ್ನು ತಂದು ಈ ಜನರನ್ನು ತೃಪ್ತಿಪಡಿಸುವದಕ್ಕಾದೀತು? ಅಂದರು. ಆತನು–ನಿಮ್ಮಲ್ಲಿ ಎಷ್ಟು ರೊಟ್ಟಿಗಳಿಗೆ ಎಂದು ಅವರನ್ನು ಕೇಳಿದ್ದಕ್ಕೆ ಅವರು–ಏಳು ಅವೆ ಅಂದರು. ಆಗ ಆತನು ಜನರ ಗುಂಪಿಗೆ–ನೆಲದ ಮೇಲೆ ಕೂತುಕೊಳ್ಳಿರಿ ಎಂದು ಅಪ್ಪಣೆಕೊಟ್ಟು ಆ ಏಳು ರೊಟ್ಟಿಗಳನ್ನು ತೆಗೆದುಕೊಂಡು ದೇವರ ಸ್ತೋತ್ರಮಾಡಿ ಅವುಗಳನ್ನು ಮುರಿದು ಹಂಚುವದಕ್ಕಾಗಿ ತನ್ನ ಶಿಷ್ಯರ ಕೈಗೆ ಕೊಟ್ಟನು; ಅವರು ಗುಂಪಿನವರಿಗೆ ಹಂಚಿಕೊಟ್ಟರು. ಇದಲ್ಲದೆ ಅವರಲ್ಲಿ ಕೆಲವು ಸಣ್ಣ ಮೀನುಗಳಿದ್ದವು; ಅವುಗಳನ್ನು ಆತನು ತೆಗೆದುಕೊಂಡು ದೇವರ ಸ್ತೋತ್ರಮಾಡಿ–ಇವುಗಳನ್ನೂ ಹಂಚಿಕೊಡಿರಿ ಅಂದನು. ಅವರು ಊಟಮಾಡಿ ತೃಪ್ತರಾದರು. ಮಿಕ್ಕ ತುಂಡುಗಳನ್ನು ಕೂಡಿಸಲಾಗಿ ಏಳು ಹೆಡಿಗೆ ಆದವು. ಊಟಮಾಡಿದವರು ಹೆಚ್ಚುಕಡಿಮೆ ನಾಲ್ಕುಸಾವಿರ ಮಂದಿ.

# "ಈತನು (ಕ್ರಿಸ್ತನು) ....ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು."

**ರೀಪ್ರಿಂಟ್ಸ್ ಪುಟ 3337**

## ಮಾರ್ಕ 7:24–37

**"ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ." – ಇಬ್ರೀಯ 11:6**

ಈ ಪಾಠದ ಮೂಲಕ ನಾವು ಕ್ರಿಸ್ತನ ಇಹಲೋಕ ಜೀವಿತದ ಒಂದು ಹೊಸ ಭಾಗದ ಅಧ್ಯಯನವನ್ನು ಆರಂಭಿಸುತ್ತಿದ್ದೇವೆ. ಈಸ್ಟರ್ ಭಾನುವಾರವೆಂದು ಸಾಮಾನ್ಯವಾಗಿ ಆಚರಿಸಲ್ಪಡುವ ಈ ದಿನದಲ್ಲಿ ಇದು ಬಿದ್ದಿರುವ ಕಾರಣ ಈ ಪಾಠಗಳನ್ನು ಆಯೋಜಿಸಿರುವವರ ಸಲಹೆ ಏನೆಂದರೆ ಕ್ರಿಸ್ತನ ಸೇವೆಯ ವಿವರಣೆಯು ನಿಲ್ಲದಂತೆ ಆಗುವದಕ್ಕಾಗಿ ಈ ಪಾಠವನ್ನು ಪುನರುತ್ಥಾನದ ದೃಷ್ಟಿಯಿಂದ ಕಾಣಬೇಕೆಂಬದು. ವಿಶೇಷವಾಗಿ ಈ ಜಗತ್ತು ನರಳುತ್ತಾ ಎದುರು ನೋಡಿ ಕಾದುಕೊಂಡಿರುವ ಸಾವಿರ ವರುಷದ ಆಳ್ವಿಕೆಯ ರಾಜ್ಯದ ಸಂಗತಿಗಳನ್ನು ಗ್ರಹಿಸಿಕೊಳ್ಳುವಂತೆ ಯಾರ ಮನೋನೇತ್ರಗಳು ತೆರೆಯಪಟ್ಟಿರುವದೋ ಅವರಿಗೆ ಇದು ಒಂದು ಒಳ್ಳೆಯ ಆಲೋಚನೆಯಾಗಿರುವದು. ನಮ್ಮ ಕರ್ತನು ಮಾಡಿದ ಅದ್ಭುತಗಳು ಹಾಗು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಉಂಟಾಗುವ ಪುನರುತ್ಥಾನದ ನಂತರದ ಜೀವಿತಗಳ ನಡುವೆ ಇರುವ ಸಂಬಂಧಗಳನ್ನು ಸರಿಯಾಗಿ ಗ್ರಹಿಸಿಕೊಳ್ಳಲು ಇವರಿಗೇ ಹೊರತು ಇತರ ಯಾರಿಗೂ ಸಾಧ್ಯವಿಲ್ಲ.

### ಜಗತ್ತಿಗಾಗಿ ಆ ಅಮೂಲ್ಯ ರಕ್ತದ ಮೂಲಕ ಪಡಕೊಂಡ ಜೀವದ ಹಕ್ಕುಗಳು

ಈ ದೃಷ್ಟಿಯಿಂದ ನಾವು ಅರಿತುಕೊಳ್ಳುವುದೇನೆಂದರೆ, ನಮ್ಮ ಕರ್ತನಾದ ಯೇಸುವು ಮಾನವರಿಗೋಸ್ಕರವಾಗಿ ಸತ್ತು ಆದಾಮನ ಮತ್ತು ಆತನ ಸಂತತಿಯನ್ನು ಪಾಪದ ಶಿಕ್ಷೆಯಾದ ಮರಣ ದಂಡನೆಯಿಂದ ವಿಮೋಚಿಸಲು ಬಂದಿದ್ದಾಗ್ಯೂ ಇದರ ಜೊತೆಗೆ ಅತನು ಬೇರೆ ಎರಡು ಮುಖ್ಯವಾದ ಕಾರ್ಯಗಳನ್ನೂ ನಿರ್ವಹಿಸಿದ್ದನು. ಆ ವಿಮೋಚನಾ ಕಾರ್ಯವೇ ಪ್ರಾಮುಖ್ಯವಾದುದಾಗಿತ್ತು, ಇದರಿಂದಲ್ಲದೆ ಯಾವುದೇ ವಿಧವಾದ ಮುಂದಿನ ಜೀವಿತವು ಸಾಧ್ಯವಿರುತ್ತಿರಲಿಲ್ಲ. ಆದುದರಿಂದ ಕಲ್ವಾರಿಯಲ್ಲಿ ಯಜ್ಞಾರ್ಪಣೆಯು ಅಂತ್ಯಗೊಳ್ಳುವವರೆಗೂ ಅನುದಿನವೂ ಜೀವವನ್ನು ಅರ್ಪಿಸುತ್ತಿದ್ದುದನ್ನು ನಮ್ಮ ಕರ್ತನು ನೆರವೇರಿಸಿದ್ದ ಪ್ರಾಮುಖ್ಯವಾದ ಅಥವಾ ಅಸ್ತಿವಾರದಂತಿರುವ ಕಾರ್ಯವೆಂದು ಹೆಸರಿಸಬಹುದು. ಇದರಿಂದಲ್ಲದೆ ಬೇರೆ ಯಾವುದರಿಂದಲೂ

ಪ್ರಯೋಜನವಾಗುತ್ತಿರಲಿಲ್ಲ, ಆದರೆ ಈ ಅಸ್ತಿವಾರದ ಆಧಾರದಿಂದಲೇ ಇತರ ಎರಡು ಕಾರ್ಯಗಳು ಮುಂದೆ ಸಾಗಲು ಸಾಧ್ಯವಾಗಿತ್ತು. ನಮ್ಮ ಕರ್ತನು ಸುವಾರ್ತೆಯ ಮೂಲಕವಾಗಿ ಜೀವ ಮತ್ತು ನಿರ್ಲಯತ್ವಗಳನ್ನು ಪ್ರಕಾಶಕ್ಕೆ ತಂದನೆಂದು ಅಪೋಸ್ತಲನು ಪ್ರಕಟಮಾಡಿ ಹೇಳಿರುವನು. ಅಂದರೆ ನಿತ್ಯಜೀವದ ವಿಷಯವಾಗಿ ಯಾವುದೇ ಸ್ಪಷ್ಟವಾದ ಹಾಗು ನಿರ್ಧಿಷ್ಟವಾದ ನಿರೀಕ್ಷೆಯನ್ನು ಯಾರಿಗೂ ಅಂದರೆ ಯೆಹೂದ್ಯರಿಗೂ ಸಹ ಹಿಂದೆಂದೂ ನೀಡಿರಲಿಲ್ಲವೆಂಬುದು ಇದರ ಅರ್ಥ. ಬೇರೆ ಜನಾಂಗಗಳು ದೇವರನ್ನು ಹೊಂದಿದವರಾಗಿರದೆ ಯಾವ ನಿರೀಕ್ಷೆಯೂ ಇಲ್ಲದಿರುವಾಗ ಯೆಹೂದ್ಯರು ಪುರುತ್ಥಾನದ ವಿಷಯವಾದ ನಿರೀಕ್ಷೆಯನ್ನು ಪಡೆಯಲು ಸಾಕಷ್ಟು ದೈವಿಕವಾದ ಪ್ರಕಟಣೆಗಳನ್ನು ಹೊಂದಿದ್ದರು. ಆದರೂ ಇದರ ಮೂಲತತ್ವವನ್ನು ಅಂದರೆ ದೇವರು ನೀತಿವಂತನಾಗಿದ್ದು ತಾನು ನ್ಯಾಯುವಾಗಿ ಮರಣದಂಡನೆಗೆ ಒಳಪಡಿಸಿದವರನ್ನು ವಿಮೋಚಿಸಲು ಆತನಿಗೆ ಹೇಗೆ ಸಾಧ್ಯ ಎಂಬ ವಿಚಾರವನ್ನು ಅರಿಯಲು ಸಾಧ್ಯವಾಗಲಿಲ್ಲ; ಏಕೆಂದರೆ ಅದನ್ನು ತಿಳಿಸಲು ಅದು ತಕ್ಕ ಸಮಯವಾಗಿರಲಿಲ್ಲ, ಆದುದರಿಂದ ಅಲ್ಲಿಯವರೆಗೂ ಅದನ್ನು ಪ್ರಕಟಮಾಡಿರಲಿಲ್ಲ.

ಕೇಳುವ ಕಿವಿಯುಳ್ಳವರಿಗೆ ಯೇಸುವು ತಾನು ಲೋಕಕ್ಕೆ ಬಂದಿರುವದು "ಅನೇಕರನ್ನು ಬಿಡಿಸಿಕೊಳ್ಳುವದಕ್ಕಾಗಿ ತನ್ನ ಪ್ರಾಣವನ್ನು ಈಡುಕೊಡುವುದಕ್ಕೂ" (ಮಾರ್ಕ 10:45) ಎಂಬುದನ್ನು ವಿವರಿಸುವದರ ಮೂಲಕವಾಗಿ ಜೀವವನ್ನು ಪ್ರಕಾಶಪಡಿಸಿದ್ದನು. ಆತನು ಇನ್ನೂ ಮುಂದುವರಿದು– ಸಮಾಧಿಗಳಲ್ಲಿರುವವರೆಲ್ಲರೂ ಅತನ ರಾಜಾಧಿಕಾರಯುತ ಧ್ವನಿಯನ್ನು ಕೇಳಿ ಮರಣವೆಂಬ ನಿದ್ರೆಯಿಂದ ಎಚ್ಚರವಾಗುವ ಅಂದರೆ ಸಮಾಧಿಯೆಂಬ ಸೆರೆಮನೆಯಿಂದ ಹೊರಬರುವ ಕಾಲವು ಬರುವದೆಂದು ವಿವರಿಸಿ ಹೇಳಿದ್ದನು. ಆಗಲೂ ಜನರು ನೋವುಬಾಧೆಗಳು ಮತ್ತು ಸೈತಾನನ ಪ್ರತಿರೋಧಗಳಿಗೆ ಒಳಗಾಗಿರುವಲ್ಲಿ ಈ ಬಿಡುಗಡೆಯಿಂದ ಯಾವ ಪ್ರಯೋಜನವಾಗ ಬಹುದೆಂದು ಅಗ ಅಚ್ಚರಿಪಟ್ಟಿರಬಹುದು. ಸಾವಿರ ವರುಷದ ಆಳ್ವಿಕೆಯ ಕಾಲದ ವಿಷಯವಾಗಿ ಪ್ರವಾದಿಗಳು ನೀಡಿದ ಸಾಕ್ಷಿಯನ್ನು ನಮ್ಮ ಕರ್ತನು ಸಮರ್ಥನೆಮಾಡಿ ಹೇಳಿದ್ದನು. ಯಾರಾರೂ ಕೇಡುಮಾಡದಿರುವ ಹಾಗೂ ಯಾರಾರೂ ಹಾಳುಮಾಡದಿರುವ ಆ ಪವಿತ್ರ ರಾಜ್ಯವು ಎಲ್ಲರೂ ಆಶೀರ್ವದಿಸಲ್ಪಡುವ ಕಾಲವೆಂದು ಆತನು ತಿಳಿಸಿದ್ದನು. ತಾನು ನಡೆಸಿದ್ದ ಅನೇಕ ಅದ್ಭುತಗಳ ಮೂಲಕವಾಗಿ ಇದು ಹೇಗೆ ಸಾಧ್ಯವಾಗುವದೆಂಬುದನ್ನು ತೋರಿಸಿಕೊಟ್ಟಿದ್ದನು: ಆತನು ಕೇವಲ ತನ್ನ ಶಿಷ್ಯರಿಗೆ ದೇವರ ರಾಜ್ಯದ ವಿಷಯವಾಗಿ ಉಪದೇಶಮಾಡಿ ಅವರು ಅದನ್ನು ಎದುರುನೋಡುವವರಾಗಬೇಕೆಂದೂ, ಅದು ಬರುವಂತಾಗಿ ಆಶೀರ್ವಾದ ಅದಿಕಾರಗಳು ಉಂಟಾಗಬೇಕೆಂದು ಅವರು ಪ್ರಾರ್ಥಿಸಬೇಕೆಂಬುದಾಗಿ ಬೋಧಿಸಿದ್ದುದೂ ಮಾತ್ರವಲ್ಲದೆ ತಾನು ನಡೆಸಿದ್ದ ಅದ್ಭುತಗಳ ಮೂಲಕವಾಗಿ ಆ ರಾಜ್ಯಾಧಿಕಾರವು ಮನುಷ್ಯರೆಲ್ಲರಲ್ಲಿಯೂ ವ್ಯಾಪನಗೊಂಡು ಅವರಿಗೆ ಆಶೀರ್ವಾದ ಉಂಟುಮಾಡುವದೆಂಬುದನ್ನು ನಿದರ್ಶಿಸಿ ತೋರಿಸಿದ್ದನು.

ಆತನು ಎಲ್ಲಾ ಬಗೆಯ ವ್ಯಾಧಿಗಳನ್ನು ಗುಣಪಡಿಸಿದ್ದನು ಮತ್ತು ದೆವ್ವಗಳನ್ನು ಹೊರಡಿಸಿದ್ದನು. ಅಲ್ಲದೆ ಹೀಗೆ ದೇವರ ನಿಗದಿತ ಕಾಲದಲ್ಲಿ ಆತನು ಒಬ್ಬ ದಿವ್ಯ ವೈದ್ಯನಾಗಿ ಸೈತಾನನನ್ನು ಮತ್ತು ಬಿದ್ದುಹೋದ ಆತನ ದೂತರನ್ನು ಮಾನವ ಕುಲಕ್ಕೆ ಯಾವ ಕೆಡುಕನ್ನೂ ಮಾಡದಂತೆ ಅವರನ್ನು ಸಂಪೂರ್ಣವಾಗಿ ನಿರ್ಭಂಧಿಸುವದಕ್ಕೆ ಇನ್ನೂ ಹೇರಳವಾದ ಆಧಿಕಾರ ಹೊಂದಿ ಸಜ್ಜಿತನಾಗುವನು. ಆಗ ಬಡವರನ್ನು ಕುಂಟರನ್ನು ಕಿವುಡರನ್ನು ಕುರುಡರನ್ನು ಮೂಕರನ್ನು ಅವರ ಈಗಿನ ದುರವಸ್ಥೆಯಿಂದ ಮೇಲಕ್ಕೆತ್ತುವನು. ಮತ್ತು ಇದಕ್ಕೂ ಮಿಗಿಲಾಗಿ, ತನ್ನ ಈ ಅನುಗ್ರಹವನ್ನು ನಂಬಿಕೆಯಿಂದ ಅಂಗೀಕರಿಸಿದವರನ್ನು ತಾತ್ಕಾಲಿಕವಾಗಿ ಮಾಡಲಾದ ಈ ಬಿಡುಗಡೆಯು ಇನ್ನೂ ಉನ್ನತವಾದ ಆಶೀರ್ವಾದ ಪರಿಶ್ರಮ ಸೌಕರ್ಯಸವಲತ್ತು ಇವುಗಳನ್ನು ಅಂದರೆ ಮನೋನೇತ್ರಗಳು ತೆರೆಯಲ್ಪಡುವದನ್ನು, ಪಾಪವೆಂಬ ಕುಷ್ಠವನ್ನು ನಿವಾರಿಸುವದನ್ನು, ಕುಂದಿಹೋದ ಬಲವನ್ನು ಮರಳಿ ಪಡೆಯುವುದನ್ನು, ಹಾಗು ಸತ್ತವರನ್ನು ಎಬ್ಬಿಸುವದರ ಸಹಿತವಾಗಿ ಇವೆಲ್ಲವನ್ನು ನಿದರ್ಶಿಸುವದಾಗಿತ್ತು. ಹೀಗಾಗಿ ಎಲ್ಲರೂ ದೇವರು ಮಾನ್ಯಮಾಡುವಂಥ ನೀತಿ ಹಾಗೂ ಅದರ ಪ್ರತಿಫಲವಾದ ನಿತ್ಯಜೀವವನ್ನು ಅಲ್ಲದೆ ಎಲ್ಲರೂ ಈಗಿನ ಪಾಪವೆಂಬ ದಾಸತ್ವದಿಂದ ಮತ್ತು ದೋಷ ಅಪರಿಪೂರ್ಣ ತೆಗಳಿಂದ ಹೊರಬರಲು ಸಹಾಯ ಪಡೆಯುವುದು ಮುಂತಾದವುಗಳ ಮೂಲಕ ದೇವಪುತ್ರರ ಪೂರ್ಣವಾದ ಬಿಡುಗಡೆಯಲ್ಲಿ ಸೇರುವುದನ್ನು ಇದು ನಿದರ್ಶಿಸುವದು. ಹೀಗೆ ಕರ್ತನು ನಿತ್ಯಜೀವವನ್ನು ಪ್ರಕಾಶಕ್ಕೆ ತಂದನು ಅಂದರೆ ಆ ರಾಜ್ಯದ ಮತ್ತು ಅಲ್ಲಿಂದ ಹರಿದುಬರುವ ಆಶೀರ್ವಾದದ ವಿಷಯವಾದ ತನ್ನ ಸಂದೇಶವನ್ನು ಆಲಿಸಿದವರು ತನ್ನ ಸಂದೇಶವನ್ನು ಅಂದರೆ ನಿತ್ಯಜೀವವನ್ನು ದೃಷ್ಟಿಸಿ ತಿಳಿದುಕೊಳ್ಳುವಂತೆ ಮಾಡಿರುವನು.

## ನಿರ್ಲಯತ್ವ ಅಥವಾ ದೈವಿಕ ಸ್ವಭಾವವು ಕೇವಲ ಆಯಲ್ಪಟ್ಟವರಿಗೆ ಮಾತ್ರ

ಆತನು ನಿರ್ಲಯತ್ವವನ್ನೂ ಸಹ ಬೆಳಕಿಗೆ ತಂದನು. ಲೋಕದವರಿಗೆ ನಿತ್ಯಜೀವಕ್ಕೂ ಮಿಗಿಲಾಗಿ ತನ್ನ ಹೆಜ್ಜೆಯನ್ನು ಹಿಂಬಾಲಿಸುವ ಒಂದು ವಿಶೇಷ ಗುಂಪು ತನ್ನೊಡನೆ ಪ್ರಭಾವ ಮಾನ ನಿರ್ಲಯತ್ವಗಳಲ್ಲಿ ಪಾಲನ್ನು ಹೊಂದುವಂತಾಗಲು ಒಂದು ಮಾರ್ಗವನ್ನು ತೆರೆದಿದ್ದನು. ಲೋಕದಲ್ಲಿನ ಸಾಧಾರಣ ಜನರು ಇದನ್ನು ಗ್ರಹಿಸಿಕೊಳ್ಳುವದಾಗಲಿ ಇಲ್ಲವೇ ಮನವರಿಕೆ ಮಾಡಿಕೊಳ್ಳುವದಾಗಲಿ ನಿರೀಕ್ಷಿಸಲಾಗಿರಲಿಲ್ಲ. ಬದಲಾಗಿ ತನ್ನನ್ನು ಪ್ರೀತಿಸುವವರಿಗಾಗಿ ಅಂದರೆ ಪವಿತ್ರಾತ್ಮನಿಂದ ಹುಟ್ಟಿದವರಾಗಿ ಆತನೊಡನೆ ಆ ರಾಜ್ಯದಲ್ಲಿ ಸಹ–ಬಾಧ್ಯರಾಗಲು ಕರೆಯಲ್ಪಟ್ಟವರು ತಾವು ಕರೆದದ್ದನ್ನು ಮತ್ತು ಆದುಕೊಂಡದನ್ನು ದೃಢಪಡಿಸಿ ಕೊಂಡು ನೂತನ ಸೃಷ್ಟಿಗಳಿಗಾಗಿ ದೇವರು ಸಿದ್ಧಮಾಡಿರುವಂಥ ದೆಲ್ಲವನ್ನು (ಸಾಧಾರಣ ಜನರ) ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ ಅದರ ಭಾವನೆಯು ಮನುಷ್ಯರ ಹೃದಯದಲ್ಲಿ ಹುಟ್ಟಲಿಲ್ಲ.

ನಮ್ಮ ಕರ್ತನ ಸೇವೆ ಮತ್ತು ಉಪದೇಶಗಳನ್ನು ಈ ಮೂರು ದೃಷ್ಟಿಯಿಂದ ನೋಡಿದಾಗಲೇ ಇದು ಸರಿಯಾಗಿ

ಗ್ರಹಿಸಲ್ಪಟ್ಟು ಮನವರಿಕೆಯಾಗುವದು:– (1) ತನ್ನ ಜೀವನವನ್ನು ತಾನು "ತೀರಿತು" ಎಂದು ಕೂಗಿಹೇಳುವವರೆಗೂ ಅನುದಿನವೂ ಅರ್ಪಿಸುತ್ತಿದ್ದ ಆತನ ಯಜ್ಞಾರ್ಪಣೆಯು ಆದಾಮನ ಮತ್ತು ಆತನ ಕುಲದವರ ವಿಮೋಚನಾರ್ಥವಾಗಿರುವ ಬೆಲೆಯೆನ್ನುವದು. (2) ಆತನ ಸಾಧಾರಣವಾದ ಉಪದೇಶವು ಅಂದರೆ ವಿಮೋಚನಾ ಕಾರ್ಯದ ಪರಿಣಾಮವಾಗಿ ಲೋಕದವರನ್ನು ದೇವರೊಡನೆ ಆಗುವ ಮರುಸಂಧಾನದ ವಿಷಯವಾಗಿ, ಲೋಕದ ಪಾಪಗಳನ್ನು ಸಂಪೂರ್ಣವಾಗಿ ಕ್ಷಮಿಸಲ್ಪಡುವದನ್ನು, ಆ ರಾಜ್ಯದ ಮೂಲಕವಾಗಿ ಆಗ ಲೋಕದವರಿಗೆ ಉಂಟಾಗುವ ಆ ಮಹಾಪರೀಕ್ಷೆ ಅಥವಾ ನ್ಯಾಯವಿಚಾರಣೆ ಇಲ್ಲವೇ ದೊರೆಯಲಿರುವ ಸದವಕಾಶಗಳು ಇವುಗಳು ಒಂದು ಕ್ಲುಪ್ತಕಾಲದಲ್ಲಿ ಲೋಕದವರಿಗೆಲ್ಲಾ ಅನ್ವಯವಾಗುವದು. ಇದನ್ನು ವಿಮೋಚಕನು ದೇವರಿಗೂ ಮನುಷ್ಯರಿಗೂ ಮಧ್ಯಸ್ಥನಾಗಿ ತಮ್ಮೊಳಗೂ ಹೊರಗೂ ಇರುವ ಈ ಪ್ರತಿಕೂಲವಾದ ಸ್ಥಿತಿಗತಿಯಿಂದ ಮಾನವಕುಲವನ್ನು ಬಿಡುಗಡೆಮಾಡಿ ಅವರನ್ನು ತಮ್ಮ ಸೃಷ್ಟಿಕರ್ತನೊಡನೆ ಹೊಂದಾಣಿಕೆಗೆ ತರುವ ಸಲುವಾಗಿ ಆ ರಾಜ್ಯವನ್ನು ಸ್ಥಾಪಿಸುವನು. (3) ತನಗೆ ವಿಶೇಷ ಶಿಷ್ಯರಾಗುವದಕ್ಕಾಗಿ ನೀಡಿರುವ ಕರೆಯು ಅಂದರೆ ಇಕ್ಕಟ್ಟಾದ ಮಾರ್ಗದಲ್ಲಿ ನಡೆದು ಆತನು ಹೊಂದಲಿದ್ದ ದೀಕ್ಷಾಸ್ನಾನವನ್ನು ಅವರೂ ಹೊಂದಿದವರಾಗಿ ಮತ್ತು ಹೀಗೆ ದೇವರ ಕೃಪೆಯಿಂದ ಈ ಏರ್ಪಾಡಿನ ಮೂಲಕವಾಗಿ ಪರಲೋಕ ರಾಜ್ಯದಲ್ಲಿ ಪಾಲನ್ನು ಹೊಂದಲು ಯೋಗ್ಯರನ್ನಾಗಿ ಮಾಡಿ ಅವರನ್ನು ಸಿದ್ಧಗೊಳಿಸುವ ಸಲುವಾಗಿರುವದು. ಅವರು ಈ ಮೂಲಕವಾಗಿ ಕ್ರಿಸ್ತನೊಡನೆ ಆತನ ಸಿಂಹಾಸನದಲ್ಲಿ ಕುಳಿತು ಭೂಲೋಕದ ಎಲ್ಲಾ ಕುಲದವರಿಗೂ ಸಾವಿರ ವರುಷದ ಆಳ್ವಿಕೆಯ ಕಾಲದ ಅದ್ಭುತವಾದ ಆಶೀರ್ವಾದಗಳನ್ನು ನೀಡುವುದರಲ್ಲಿ ಆತನೊಡನೆ ಪಾಲುಗಾರರಾಗುವರು.

ನಾವು ಈ ಆಲೋಚನೆಯುಳ್ಳವರಾಗಿಯೇ ನಮ್ಮ ಮುಂದಿರುವ ಈ ಪಾಠವನ್ನು ಅನುಸರಿಸಿಹೋಗುವೆವು. ಯೇಸು ಮತ್ತು ಆತನ ಶಿಷ್ಯರು ಐದು ಸಾವಿರ ಜನರಿಗೆ ಊಟವನ್ನು ನೀಡಿದ ಮತ್ತು ಗಲಿಲಾಯ ಸಮುದ್ರದಲ್ಲಿ ಬಿರುಗಾಳಿಯಿಂದ ಕೂಡಿದ ರಾತ್ರಿಯನ್ನು ಕಳೆದ ನಂತರ ಕಪೆರ್ನೌಮಿನಲ್ಲಿ ಕೆಲವು ಸಮಯ ಕಳೆದಿದ್ದರು. ಅಲ್ಲಿ ಕರ್ತನು ತನ್ನನ್ನು ಕೇಳುವವರು ತಮಗೆ ಕೊಟ್ಟಿದ್ದ ರೊಟ್ಟಿ ಮತ್ತು ಮೀನುಗಳ ವಿಷಯವಾಗಿ ಅಲ್ಪವಾಗಿ ಆಲೋಚಿಸುವವರಾಗಿರಲು ಅವರು ಉನ್ನತವಾದ ಸಂಗತಿಗಳನ್ನು ಗ್ರಹಿಸುವವರಾಗಬೇಕೆಂದು ಅವರಿಗೆ ಸವಿವರವಾಗಿ ಉಪದೇಶಿಸಿದ್ದನು. ಅವರು ತನ್ನನ್ನು ಪರಲೋಕದಿಂದ ಇಳಿದು ಬಂದ ಜೀವಕೊಡುವ ರೊಟ್ಟಿಯೆಂದು ಗುರುತಿಸಿಕೊಂಡು ತನ್ನ ಮಾತುಗಳ ಮೂಲಕ ಪೋಷಿತರಾಗಿ ನಿತ್ಯಜೀವವನ್ನು ಪಡಕೊಳ್ಳಬೇಕಾಗಿತ್ತು. ಹೀಗಿದ್ದರೂ ಈ ನಿತ್ಯಜೀವವನ್ನು ಎಲ್ಲರಿಗೂ ಸಾಧಾರಣವಾಗಿ ಒದಗಿಸಿಕೊಡುವ ಸಮಯವು ಆಗ ಇನ್ನೂ ಬಂದಿರಲಿಲ್ಲ. ಆದುದರಿಂದ ಆತನು ನಿರ್ಧಿಷ್ಟವಾದ ರೀತಿಯಲ್ಲಿ ನೀತಿಗಾಗಿ ಹಸಿದು ಬಾಯಾರಿದವರನ್ನು ವಿಶೇಷವಾಗಿ ಹುಡುಕುತ್ತಿದ್ದನು. ಅಪೋಸ್ತಲರು ಈ ಗುಂಪಿಗೆ ಸೇರಿದವರಾಗಿದ್ದರು; ಪಂಚಾಶತ್ತಮ ದಿನದಂದು ಪ್ರಾರಂಭವಾಗಲಿದ್ದ ನೂತನ ವ್ಯವಸ್ಥೆಯಲ್ಲಿ ತಾನು ಇವರ ಮೂಲಕವಾಗಿ ನಿರ್ವಹಿಸುವ ಆ ಮುಂದಿನ ಕಾರ್ಯಕ್ಕಾಗಿ ಅವರನ್ನು ಆಗ ಸಿದ್ಧಗೊಳಿಸುತ್ತಿದ್ದನು.

## ಪ್ರತಿಷ್ಠಿತರಾದ ತನ್ನ ಜನರಿಗಾಗಿರುವ ದೇವಾನುಗ್ರಹಗಳು

ನಮ್ಮ ಕರ್ತನು ತನ್ನ ಶಿಷ್ಯರ ಸಂಗಡ ದೇಶದ ವಾಯುವ್ಯ ಭಾಗದಲ್ಲಿರುವ ತೂರ್ ಸೀದೋನ್ ಎಂದು ಕರೆಯಲ್ಪಡುವ ದೇಶದ ಗಡಿಪ್ರದೇಶದಲ್ಲಿ ಪ್ರಯಾಣ ಮಾಡುತ್ತಿದ್ದನು. ಅಲ್ಲಿದ್ದ ಈ ಎರಡು ಪಟ್ಟಣಗಳು ಪ್ರಸಿದ್ಧವಾಗಿದ್ದ ಕಾರಣ ಆ ಪ್ರದೇಶಕ್ಕೆ ಈ ಹೆಸರು ಬಂದಿತ್ತು. ಅಲ್ಲಿನ ಜನರಿಗೆ ಆತನು ತನ್ನನ್ನು ಬಹಿರಂಗವಾಗಿ ಪ್ರಕಟಮಾಡಿಕೊಂಡಿರಲಿಲ್ಲ ಆದರೂ ಆತನಿರುವುದು ಅಲ್ಲಿನವರಿಗೆ ತಿಳಿದು ಬಂದಿತ್ತು. ಆತನು ಪಾಲೆಸ್ತೀನಾ ದೇಶದ ಪರ್ಯಂತರವಾಗಿ ನಡೆಸಿದ್ದ ಅದ್ಭುತಗಳು ಹಾಗು ಉಪದೇಶಗಳು ಅಲ್ಲಿ ಪ್ರಸಿದ್ಧಿಗೊಂಡಿದ್ದವೆಂದು ಇದು ತೋರಿಸುವದು. ಅನ್ಯಮತಸ್ಥಳಾಗಿದ್ದ ಒಬ್ಬ ಕಾನಾನ್ಯ ಸ್ತ್ರೀಯು ಆತನು ಬಂದಿರುವದನ್ನು ಕೇಳಿದವರಲ್ಲಿ ಮೊದಲಿಗಳಾಗಿದ್ದಳು. ಮತ್ತು ಆಕೆಯು ಆತನ ಬಳಿಗೆ ಬಂದು ತನ್ನ ಮಗಳಿಗೆ ಸಹಾಯ ಮಾಡಬೇಕೆಂದು ಅಳುತ್ತಾ ಬೇಡಿಕೊಂಡಳು. ನಮ್ಮ ಕರ್ತನು ಆ ಸಂದರ್ಭದಲ್ಲಿ ತಾನು ಅನುಸರಿಸುತ್ತಿದ್ದ ಪದ್ಧತಿಗಿಂತ ಬಹು ಭಿನ್ನವಾಗಿ ನಡಕೊಂಡಿದ್ದನು, ಅಲ್ಲದೆ ಇದು ನಿಸ್ಸಂದೇಹವಾಗಿ ಒಂದು ಪಾಠವನ್ನು ನೀಡುವ ಉದ್ದೇಶವಾಗಿತ್ತು. ಸಾಮಾನ್ಯವಾಗಿ ಆತನು ಕೇಳಿದೊಡನೆ ಅನುಕಂಪದಿಂದ ಗುಣಪಡಿಸುತ್ತಿದ್ದನಾದರೂ ಈ ಸಂದರ್ಭದಲ್ಲಿ ಆತನು ಆ ಸ್ತ್ರೀಗೆ ಗಮನ ಕೊಟ್ಟಿರಲಿಲ್ಲ. ಮತ್ತಾಯನು ನೀಡಿರುವ ವಿವರಣೆಯ ಪ್ರಕಾರ ಶಿಷ್ಯರು ಆತನ ಬಳಿಗೆ ಬಂದು ಆಕೆಯ ಬೇಡಿಕೆಯನ್ನು ಅನುಗ್ರಹಮಾಡಿ ಕಳುಹಿಸಿಕೊಡುವ ಇಲ್ಲವೇ ಆಕೆಯ ಬೇಡಿಕೆಯನ್ನು ನಿರಾಕರಿಸಿ ಆಕೆಯನ್ನು ಹೊರಡಿಸಿಬಿಡುವ ಅನುಮತಿಗಾಗಿ ಆತನನ್ನು ಒತ್ತಾಯಪಡಿಸಿದ್ದರು.

ಆ ಬಡ ಸ್ತ್ರೀಯು ಬೇಡುತ್ತಿದ್ದುದು ತನಗಾಗಿಯಲ್ಲದೆ ಅಶುದ್ಧಾತ್ಮವಾದ ಒಂದು ದೆವ್ವವು ಹಿಡಿದಿದ್ದ ತನ್ನ ಮಗಳಿಗಾಗಿತ್ತು. ನಮಗೆ ಈವರೆಗೂ ತಿಳಿದುಬಂದಿರುವ ಪ್ರಕಾರ (ಅವಿಧೇಯತೆಯ ಮೂಲಕ) ಬಿದ್ದುಹೋದ ಆತ್ಮಗಳು ದೆವ್ವಗಳು ಅಶುದ್ಧವಾದವುಗಳೂ ಕೆಟ್ಟುಹೋದವುಗಳೂ ಆಗಿದ್ದು ತಾವು ಹಿಡಿದುಕೊಂಡಿದ್ದವರ ಮೇಲೆ ಅವುಗಳು ಉಂಟುಮಾಡುತ್ತಿದ್ದ ಪ್ರಭಾವವು ಅಶುದ್ಧವೂ ಹಾನಿಕರವೂ ಆಗಿರುತಿದ್ದವು. ಕೆಲವು ಸಾರಿ ಅವುಗಳು ನಿಜವಾಗಿಯೂ ಶುದ್ಧವಾದವುಗಳಂತೆ ನಟಿಸುವವು; ಮತ್ತು ನಾವು ಕೇಳಿರುವಂತೆ ಅನೇಕ ಸಾರಿ ಅವು ಪವಿತ್ರರಂತೆ ಅಂದರೆ ನಮ್ಮ ಕರ್ತನಂತೆಯೂ ಸಹ ವ್ಯಕ್ತಿರೂಪದಲ್ಲಿ ಕಾಣಬರಲು ಪ್ರಯುತ್ನಿಸುವವು. ಹೀಗಿದ್ದರೂ ತಾವು ಹಿಡಿದುಕೊಂಡಿದ್ದವರ ವಿಷಯುವಾಗಿ ಅಥವಾ ಅವರ ಮೂಲಕವಾಗಿ ಇತರರ ಮೇಲಿನ ಈ ದುರಾತ್ಮಗಳ ಪ್ರವೃತ್ತಿಗಳು ಸಂಪೂರ್ಣವಾಗಿ ಅಶುದ್ಧವಾದ ಆಲೋಚನೆ ಮತ್ತು ನಡತೆಗಳ ಕಡೆಗಿರುತ್ತಿದ್ದುದು ತೋರಿಬರುತ್ತದೆ.

ಕಡೆಯದಾಗಿ ಆ ಸ್ತ್ರೀಯ ಕೂಗಿಗೆ ಮತ್ತು ಶಿಷ್ಯರು ಕೊಟ್ಟಿದ್ದ ಆಲೋಚನಾಭಿಪ್ರಾಯಗಳಿಗೆ ಉತ್ತರವಾಗಿ ನಮ್ಮ ಕರ್ತನು ನುಡಿದಿದ್ದನು, ಆದರೆ ಅದು ಸಾಮಾನ್ಯವಾಗಿ ತಾನು ಹೇಳುತ್ತಿದ್ದು ದಕ್ಕಿಂತಲೂ ಬಹು ಭಿನ್ನವಾದ ಸಂದೇಶವಾಗಿತ್ತು. ಆತನು ಆ ಸ್ತ್ರೀಗೆ ಕೇವಲ ತಿಳಿಸಿದ್ದು ಏನೆಂದರೆ, ತಾನು ಮಾಡುವ ಅದ್ಭುತಗಳು ಮತ್ತು ಸೇವೆಗಳು ಲೋಕದಲ್ಲಿನ ಸಾಮಾನ್ಯವಾದ ಜನರಿಗಲ್ಲದೆ ಅದು ದೇವರೊಂದಿಗೆ ಒಡಂಬಡಿಕೆ ಮಾಡಿ ಕೊಂಡಿದ್ದ ಜನರಾದ ಯೆಹೂದ್ಯರಿಗೆ ಮಾತ್ರವಾಗಿತ್ತೆಂಬುದು. ಆನ್ಯಜನರನ್ನು ನಾಯಿಗ ಳೆಂದು ಸಂಬೋಧಿಸುವ ಆಗಿನ ಕಾಲದಲ್ಲಿನ ಯೆಹೂದ್ಯರ ವಾಡಿಕೆಯನ್ನು ಅನುಸರಿಸಿದ್ದನಾದರೂ ಆತನು ಆ ಸಂಗತಿಯನ್ನು ಮಾರ್ಪಡಿಸಿ ಪೌರಾತ್ಯ ದೇಶದ ಜನರಿಗೆ ಅಸಹ್ಯವಾಗಿದ್ದ ಮೃಗವಾಗಿ ಅದನ್ನು ಸೂಚಿಸದೆ ಬೇರೊಂದು ಪದದ ಮೂಲಕ ಅಂದರೆ ಕುಟುಂಬದಲ್ಲಿನ ಮುದ್ದಿನ ಅಥವಾ ಚಿಕ್ಕ ಸಾಕುಪ್ರಾಣಿಯಾಗಿರುವ ನಾಯಿಮರಿ ಯನ್ನು ಸೂಚಿಸಿ ಹೇಳಿದ್ದನು. ಕರ್ತನ ಸಾಮರ್ಥ್ಯದಲ್ಲಿ ಬಲವಾದ ನಂಬಿಕೆ ಯನ್ನಿಟ್ಟಿದ್ದ ಆ ಸ್ತ್ರೀಯು ಪ್ರತಿಕೂಲವಾದ ಉತ್ತರವನ್ನು ತನಗೆ ಲಾಭವಾಗುವಂತೆ ಮಾಡಿಕೊಳ್ಳುವದರಲ್ಲಿಯೂ ಮತ್ತು ಆ ಸಣ್ಣ ನಾಯಿಮರಿಗಳು ಮಕ್ಕಳು ತಿನ್ನುವ ಮೇಜಿನಿಂದ ಬೀಳುವ ಹೆಚ್ಚಾದ ರೊಟ್ಟಿಯನ್ನು ತೆಗೆದುಕೊಳ್ಳುತ್ತವೆಂದೂ ಹೀಗಾಗಿ ತಾನು ಹೊರಗಿನವಳಾಗಿರಲಾಗಿ ಕರ್ತನ ಕೃಪೆಗಳಲ್ಲಿ ಕೆಲವನ್ನು ವಿಶೇಷ ವಾಗಿ ಕಳುಹಿಸಲ್ಪಟ್ಟಿರುವ ಯೆಹೂದ್ಯರಿಗೆ ಯಾವ ರೀತಿಯ ಲ್ಲಿಯೂ ಅನಾನುಕೂಲ ವಾಗದಂತೆ ಮಾಡಿ ತನಗೆ ಅನುಗ್ರಹ ಮಾಡಬಹುದೆಂದು ಒತ್ತಾಯಿಸುವದರಲ್ಲಿ ಸರಿಸಾಟಿಯಾಗಿದ್ದಳು.

## ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ

ಇದು ಆ ಸ್ತ್ರೀಯ ಶ್ರದ್ಧೆ ಮತ್ತು ನಂಬಿಕೆಯನ್ನು ತೋರಿಸು ತ್ತದೆ. ಇಂಥ ಒಂದು ಪ್ರದರ್ಶನವು ಕರ್ತನಿಗೆ ಮೆಚ್ಚಿಗೆಯಾಗು ವುದೆಂಬುದು ಖಚಿತವಾಗಿತ್ತು. ನಿಜವಾಗಿಯೂ ನಾವು ಕ್ರೈಸ್ತರಾಗಿ ಕರ್ತನು ಹಲವು ಸಂಗತಿಗಳಲ್ಲಿ ನಮ್ಮೊಡನೆ ನಡಕೊಳ್ಳುವದು ನಮ್ಮ ಪರೀಕ್ಷಾರ್ಥವಾಗಿ ಮತ್ತು ನಮ್ಮ ನಂಬಿಕೆಯನ್ನು ಬಲಗೊಳಿಸುವ ರೀತಿಯಲ್ಲಿರುವುದನ್ನು ನಮ್ಮ ಸ್ವಂತ ಅನುಭವಗಳಲ್ಲಿ ನಾವು ಕಾಣಲು ಸಾಧ್ಯ. ನಾವು ಹಿಂದೆ ಆತನನ್ನು ಅಪಾರ್ಥಮಾಡಿಕೊಂಡಿದ್ದಾಗ್ಯೂ ಮತ್ತು ಆತನ ಗುಣನಡತೆಗಳ ಮತ್ತು ಯೋಜನೆಗಳ ಬಗ್ಗೆ ವಿರೋಧಿಯಾದ ಸೈತಾನನಿಂದ ಅಪಪ್ರಚಾರ ಮತ್ತು ಅಪಾರ್ಥಮಾಡಲ್ಪಟ್ಟಿದ್ದಾಗ್ಯೂ ಆತನು ಒಳ್ಳೆಯವನಾಗಿಯೇ ಇದ್ದು ಕೃಪಾಪೂರ್ಣವಾದ ಹೃದಯ ವುಳ್ಳವನಾಗಿರುವನು. ಆತನ ಒಳ್ಳೆಯತನದಲ್ಲಿ ಆತನ ಶಕ್ತಿಯಲ್ಲಿ ಆತನ ಜ್ಞಾನದಲ್ಲಿ ಆತನ ಪ್ರೀತಿಯಲ್ಲಿ ನಂಬಿಕೆಯನ್ನು ತೋರಿಸದೇ ಮತ್ತು ಅದರಲ್ಲಿ ಭರವಸೆಯನ್ನಿಡದೆ ನಾವು ಆತನ ಬಳಿಗೆ ಬರಲು ಅಸಾಧ್ಯ. ಪೂರ್ವಕಾಲದಲ್ಲಿ ಅಪೋಸ್ತಲನು–"ಸ್ವಾಮೀ, ನಮ್ಮ ನಂಬಿಕೆಯನ್ನು ಹೆಚ್ಚಿಸು" ಎಂದು ಪ್ರಾರ್ಥಿಸಿರುವ ಹಾಗೆ, (ಕರ್ತನಿಗೆ) ಎಲ್ಲವೂ ಸಾಧ್ಯ ಕೇವಲ ನಂಬಬೇಕಷ್ಟೆ ಎಂಬುದು ಈ ದಿನದ ಆತ್ಮಿಕ ಇಸ್ರಾಯೇಲ್ಯರು ಸತತವಾಗಿ ಕಲಿಯುತ್ತಿರಬೇಕಾದ ಪಾಠ. ನಾವು ಇದರಲ್ಲಿ ದೇವರ ವಾಕ್ಯಕ್ಕೆ ವಿಧೇಯರಾಗುವ ಅವಶ್ಯಕತೆಯನ್ನು ಉಪೇಕ್ಷೆಮಾಡುವವರಾಗಿಲ್ಲ, ಆದರೆ ನಾವು ಎತ್ತಿಹಿಡಿಯುತ್ತಿರುವದೇನಂದರೆ: ಎಲ್ಲೆಲ್ಲಿ ನಂಬಿಕೆಯು ಇರುವದೋ ಅಲ್ಲಿ ಕ್ರಿಯೆಗಳೂ ಅದಕ್ಕೆ ಹೊಂದಿಕೊಂಡಿದ್ದು ಇದರ ಪ್ರಮಾಣಾನುಸಾರವಾಗಿ ಅವು ದೊಡ್ಡದಾಗಿಯೋ ಅಥವಾ ಸಣ್ಣದಾಗಿಯೋ ಇರುವದೆಂಬುದು. ಆದುದರಿಂದ ನಮ್ಮ ನಂಬಿಕೆಯು ಬಲವಾಗಿದ್ದಷ್ಟೂ ದೈವಿಕ ಏರ್ಪಾಟಿನ ಪ್ರಕಾರ ಕ್ರೀಯೆಗಳೂ ಅಧಿಕವಾಗಿರುವವೆಂಬುದು ಖಚಿತವಾಗಿರುವದು. ನಮ್ಮ ಸ್ವರ್ಣಖಚಿತವಾದ ಪಠ್ಯಭಾಗವು ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯವೆಂದು ಸಮರ್ಪಕವಾಗಿ ಹೇಳಿರುವದು.

ನಂಬಿಕೆಯು ಅಭ್ಯಾಸಮಾಡಿಕೊಳ್ಳುವಂಥ ಒಂದು ವಿಷಯ, ಅಂದರೆ ಅಭಿವೃದ್ಧಿಪಡಿಸಿಕೊಳ್ಳುವಂಥ ಸಂಗತಿ. ಗಲಿಲಾಯ ಸಮುದ್ರದ ಮೇಲೆ ಬಿರುಗಾಳಿ ಎದ್ದಾಗ ಭಯಭೀತಿ ಯಿಂದ ಕೂಗಿಕೊಂಡಿದ್ದ ಇದೇ ಅಪೋಸ್ತಲರು ನಂಬಿಕೆಯಲ್ಲಿ ಕ್ರಮೇಣ ಬೆಳೆದು ಬಲಗೊಳ್ಳುತ್ತಾ ಬಲಗೊಳ್ಳುತ್ತಾ ಬಂದು ದಾಖಲೆಗಳು ತೋರಿಸಿರುವಂತೆ ಕರ್ತನು ಇಲ್ಲದಿರುವಾಗಲೂ ಮತ್ತು ಆತನನ್ನು ಕಂಡುಕೊಳ್ಳಲು ಸಾಧ್ಯವಿಲ್ಲದಿರುವಾಗಲೂ ಆತನ ಮೇಲೆ ಭರವಸೆಯನ್ನಿಟ್ಟವರಾಗಿದ್ದರು. ಇದರಂತೆಯೇ ಅನುದಿನವೂ ಕರ್ತನಲ್ಲಿ ಭರವಸೆಯನ್ನು ಬೆಳೆಸಿಕೊಳ್ಳುವ ವಿಷಯದ ನಮ್ಮ ಪಾಠದಲ್ಲಿ ಇದು ಒಂದು ಅಂಶವಾಗಿಬೇಕು ಹಾಗು ಹಿಂದೆ ನಮ್ಮ ಜೀವಿತಗಳಲ್ಲಾದ ಅನುಭವಗಳನ್ನು ಮತ್ತು ಆತನ ವಾಕ್ಯದಲ್ಲಿ ದೊರೆತ ಈ ಎಲ್ಲಾ ಪಾಠಗಳನ್ನೂ ನಾವು ಆಲೋಚಿಸುವವರಾಗಬೇಕು; ಮತ್ತು ಹೀಗೆ ಆತನಲ್ಲಿರುವ ನಮ್ಮ ನಂಬಿಕೆಯು ಬೇರೂರಿ ಸ್ಥಿರಗೊಳ್ಳುವಂಥಾಗುವದು.

## ನಂಬಿಕೆಗೆ ಪ್ರತಿಫಲವು ಲಭಿಸುವುದು ಅದು ಪರೀಕ್ಷಿಸಲ್ಪಟ್ಟ ನಂತರವೇ

ನಮ್ಮ ಕರ್ತನು ಆಕೆಗೆ ಹೇಳಿದ್ದು, "ಅಮ್ಮಾ ನಿನ್ನ ನಂಬಿಕೆ ಬಹಳ." (ಮತ್ತಾಯ 15:28) ಆಕೆಯ ನಂಬಿಕೆಯು–ತನ್ನ ಮಗಳ ಮೇಲಿನ ಪ್ರೀತಿಯ ವಿಷಯದಲ್ಲಿ, ತನ್ನಲ್ಲಿನ ದೃಡನಿಷ್ಠೆ ಹಾಗು ಸತತವಾಗಿ ಪ್ರಯತ್ನಿಸುವದರಲ್ಲಿ, ತನ್ನಲ್ಲಿನ ದೀನತೆಯಲ್ಲಿ, ಕರ್ತನು ಗುರುತಿಸುವ ರೀತಿಯಲ್ಲಿಯೇ ವಿಷಯಗಳನ್ನು ಗುರುತಿಸುವಲ್ಲಿ, ಗ್ರೀಕರಲ್ಲಿ ಹಾಗೂ ಅನ್ಯಜನರಲ್ಲಿದ್ದ ಮನೋಭಾವಗಳ ಅನುಸಾರ ವಾಗಿರದೆ ಅದು ಬಲವುಳ್ಳದ್ದಾಗಿತ್ತು. ಯೆಹೂದ್ಯರು ದೇವಾನು–ಗ್ರಹದ ವಿಷಯದಲ್ಲಿ ಕೇವಲ (ತಾವೇ ಅರ್ಹರೆಂದು) ಸೋಗುಹಾಕುತ್ತಿದ್ದರೇ ಹೊರತು ಇತರ ಜನರಿಗಿಂತ ಅವರು ಹೆಚ್ಚೇನೂ ಇರಲಿಲ್ಲ. ಆಕೆಯ ನಂಬಿಕೆಯು ದೊಡ್ಡ ಅಡೆತಡೆ ಗಳನ್ನು ಅಂದರೆ ಕರ್ತನು ಮಾಡಿದ ಸ್ಪಷ್ಟವಾದ ನಿರಾಕರಣೆ ಯನ್ನೂ ದಾಟಿಬರುವಷ್ಟು ಬಲವಾಗಿತ್ತು. ಅನ್ಯಮತಸ್ಥಳಾದ ಈ ಸ್ತ್ರೀಯ ನಡವಳಿಕೆಯು ಯಾವ ಅರ್ಥದಲ್ಲಿಯೂ ಕರ್ತನ ಪ್ರತಿಷ್ಠಿತರಾಗಿ ತಿಳುವಳಿಕೆ ಹೊಂದಿದ ಜನರಿಗೆ ಮಾದರಿಯೆಂದು ಪರಿಗಣಿಸ ಲಾರೆವು. ಕೇವಲ ನಂಬಿಕೆಯಲ್ಲಿನ ಬಲವನ್ನೇ ನಾವು ಅನುಕರಣೆ ಮಾಡಬೇಕಿರುವುದು. ಕರ್ತನ ಜನರಾಗಿರುವ ನಮ್ಮ ವಿಷಯದಲ್ಲಿ ಯಾದರೋ, ಇನ್ನುಮೇಲೆ ಅನ್ಯಜನರೂ ಪರದೇಶಿಗಳೂ ನಾಯಿಗಳಂತಿರುವವರೂ ಆಗಿರದೆ ಮಕ್ಕಳಾಗಿ ತಂದೆಯ ಮನೆಯಲ್ಲಿ ಬಾಧ್ಯತೆ ಪಡೆಯಲು ಅಂಗೀಕರಿಸಲ್ಪಟ್ಟಿದ್ದು

ಕರ್ತನಿಂದ "ಸಹೋದರರು" ಎಂದು ಗುರುತಿಸಿಕೊಂಡವರಾದ ನಮಗೆ ನೀಡುವದಕ್ಕೆ ಕರ್ತನಿಗೆ ಸಂತೋಷವಿಲ್ಲದ ಸಂಗತಿಗಳ ವಿಷಯವಾಗಿ ನಾವು ಯಾವ ವಿಧದಲ್ಲಿಯಾದರೂ ಕಣ್ಣೀರು ಸುರಿಸುವುದಾಗಲಿ ಅಂಗಲಾಚಿಕೊಳ್ಳುವುದಾಗಲೀ ಬೇಡಿಕೊಳ್ಳುವ ದಾಗಲೀ ಮಾಡುವದು ಎಂದೂ ಸಮಂಜಸವಾಗಿರುವುದಿಲ್ಲ.

ನಾವು ಬೇಡಿಕೊಳ್ಳುವದು ತವಕಪಡುವದು ಕೇವಲ ಕೆಟ್ಟುಹೋಗುವ ಆಹಾರಕ್ಕಾಗಿರಬಾರದು. ಯಾಕೆಂದರೆ ಇಂಥವುಗಳಿಗಾಗಿ ಅನ್ಯಜನರೂ ತವಕಪಡುವರು, ಅಂದರೆ ಕೇವಲ ಭೂಸಂಬಂಧವಾದ ಸಂಗತಿಗಳಿಗೆ ಸತತವಾಗಿ ಬೇಡಿಕೊಳ್ಳುವರು; ಆದರೆ ನೀವು ಮೊದಲು ಪ್ರಾಮುಖ್ಯವಾಗಿ ದೇವರ ರಾಜ್ಯಕ್ಕಾಗಿಯೂ ಮತ್ತು ನೀತಿಗಾಗಿಯೂ ತವಕಪಡಿರಿ. ಹೀಗೆ ಮಾಡುವದು ಸೂಕ್ತವಾದುದು ಇದರ ಜೊತೆಗೆ ನಿಮಗೆ ಭೂಸಂಬಂಧವಾದ ಸಂಗತಿಗಳನ್ನೂ ಸೇರಿಸಿ ಕೊಡಲಾಗುವದು ಮತ್ತು ಇದು ನಿಮ್ಮ ಅತ್ಯುತ್ತಮ ಹಿತಾಸಕ್ತಿಯ ಅನುಸಾರ ವಾಗಿರುವದು ಎಂದು ನಮ್ಮ ಒಡೆಯನು ಹೇಳಿ ತಾನೇ ಅನ್ಯಜನರು ಮಾಡಬಹುದಾದ ಸಂಗತಿಗಳಿಗೂ ಹಾಗು ನಾವು ಆತನ ಶಿಷ್ಯರಾಗಿ ಮಾಡಬಹುದಾದ ಸಂಗತಿಗಳಿಗೂ ವ್ಯತ್ಯಾಸವನ್ನು ತಾನೇ ನಿರೂಪಿಸಿ ತೋರಿಸಿರುವನು. ಆದುದರಿಂದ ನಮ್ಮ ವಿಜ್ಞಾಪನೆಗಳು ಬೇಡಿಕೆಗಳು ಮೊರೆಯಿಡುವಿಕೆಗಳು ಹೃದಯದ ಪವಿತ್ರತೆಗಾಗಿ, ಆತನ ಆತ್ಮದಿಂದ ಭರಿತರಾಗುವ ದಕ್ಕಾಗಿ, ಆತ್ಮಿಕ ಆಹಾರ ಪುನಶ್ಚೇತನ ಬಲ ಇವುಗಳಿಗಾಗಿ ಆಗಿರಬೇಕು. ಪ್ರಾಕೃತಿಕ ವಿಷಯಗಳ ಬಗ್ಗೆ ಹೇಳುವದಾದರೆ ನಾವು ರೂಢಿಯಾಗಿ ತೆಗೆದುಕೊಳ್ಳುವದು ಮತ್ತು ನೂತನ ಸೃಷ್ಟಿಗಳಾಗಿ ನಮಗೆ ಅತ್ಯುತ್ತಮ ಪ್ರಯೋಜನಕಾರಿಯಾದವುಗಳು ಯಾವುದೆಂಬುದು ಆತನು ಬಲ್ಲನು. ನಾವು ಇದನ್ನು ಆತನಿಗೇ ಬಿಡಬೇಕು: ಆತನು ನಮಗೆ ಕೊಡದೇ ಇರುವ ವಿಷಯಗಳ ಬಗ್ಗೆ ನಾವು ಬೇಡಿಕೊಳ್ಳುವದು ಆತನಿಗೆ ಮೆಚ್ಚಿಗೆಯಾಗಿರುವದಿಲ್ಲ, ಯಾಕೆಂದರೆ ಹೀಗೆ ಮಾಡುವದು ಆತನಲ್ಲಿರುವ ನಮ್ಮ ನಂಬಿಕೆಗೆ ನಿದರ್ಶನವಾಗುವದಿಲ್ಲ, ಅದರೆ ಅದಕ್ಕೆ ವಿರುದ್ಧವಾಗಿರುವದು. ಆತನು ನಮಗೆ ಅಗತ್ಯವಾದವುಗಳನ್ನು ನೀಡಲು ಮಾಡಿರುವ ತನ್ನ ವಾಗ್ದಾನವನ್ನು ನೆರವೇರಿಸಲು ಮರೆತಿರುವನೆಂದಾಗಲೀ ಅಥವಾ ಅಲಕ್ಷಿಸುತ್ತಿರುವನೆಂದಾಗಲೀ ಭಾವಿಸುವುದು ನಾವು ಭಯವನ್ನು ತೋರ್ಪಡಿಸುತ್ತಿದ್ದೇವೆಂಬುದಕ್ಕೆ ಮತ್ತು ಸಂದೇಹಪಡುತ್ತಿದ್ದೇವೆ ಎಂಬುದಕ್ಕೆ ಇದು ಒಂದು ನಿದರ್ಶನವಾಗುವದು.

ನಮ್ಮ ಕರ್ತನು ಆ ಸ್ತ್ರೀಗೆ ಆಕೆಯಲ್ಲಿ ತೋರಿಬಂದ ನಂಬಿಕೆಯು ಆಕೆಯ ವಿಜ್ಞಾಪನೆಯನ್ನು ಅನುಗ್ರಹ ಮಾಡುವದಕ್ಕೆ ಸಾಕಷ್ಟಿತ್ತೆಂದು ಹೇಳಿದ್ದನು; ದೆವ್ವವು ಆಕೆಯ ಮಗಳನ್ನು ಬಿಟ್ಟುಹೋಗಿತ್ತು. ಆ ಸ್ತ್ರೀಯು ಕೂಡಲೇ ಹಿಂದೆ ಸರಿದುದರಲ್ಲಿ ಆಕೆಯ ನಂಬಿಕೆಯು ಮತ್ತಷ್ಟು ಪ್ರದರ್ಶಿತವಾಗಿತ್ತು. ಆಕೆಯು ಕರ್ತನ ಮಾತನ್ನು ಸಂಶಯಪಡದೆ ಅಂಗೀಕರಿಸಿಕೊಂಡಿದ್ದಳು. ಆಕೆಯು ಹೇಳಿಕೊಳ್ಳುವಂಥವನೇ ಆತನಾಗಿದ್ದಲ್ಲಿ ತಾನು ನಂಬಿದ್ದ ಅಧಿಕಾರವುಳ್ಳನಾಗಿದ್ದನು ಹಾಗು ಆಕೆಗೆ ಸುಳ್ಳು ಹೇಳುವವ ನಾಗಿರಲಿಲ್ಲ. ಈ ದಿನದ ಕರ್ತನ ಜನರಲ್ಲಿ ಅನೇಕರಿಗೆ ಈ ವಿಧವಾಗಿ ನಂಬಿಕೆಯಿಡುವುದರಲ್ಲಿ ಕೊರತೆಯುಳ್ಳವರಾಗಿರು ವಂತೆ ಅಂದರೆ ಈ ಬಡ ಅನ್ಯಮತಸ್ಥಳಿಗಿಂತಲೂ ಕಡಿಮೆ ನಂಬಿಕೆಯಿರುವಂತೆ ಕಾಣುತ್ತದೆ. ಅವರಲ್ಲಿ ಅನೇಕರು ತನ್ನ ಬಳಿಗೆ ಬರುವವರ ಪಾಪವು ಕ್ಷಮಿಸಲ್ಪಡುವದೆಂಬ ಕರ್ತನು ನೀಡಿರುವ ಆಶ್ವಾಸನೆಯನ್ನು ಕೇಳಿರುವರಾದರೂ ಅಲ್ಪವಾದ ನಂಬಿಕೆಯು ಅವರನ್ನು ಸಂದೇಹಪಡುವಂತೆ ಮಾಡಿ ತಮ್ಮ ಪಾಪಗಳ ವಿಷಯದಲ್ಲಿ ಸತತವಾಗಿ ಪ್ರಲಾಪಿಸುತ್ತಾ ಕ್ಷಮೆಯಾಚಿಸುವವ ರನ್ನಾಗಿ ಮಾಡಿರುವದು. ಈ ಮಾತನ್ನು ಅಂಗೀಕರಿಸಿಕೊಂಡ ಸಮಯದಿಂದಲೇ ಪಾಪಕ್ಷಮೆಯು ಉಂಟಾಗುವದೆಂದು ಕರ್ತನು ಅವರಿಗೆ ಆಶ್ವಾಸನೆ ನೀಡಿರುವನು. ಅವರು ನಂಬಿಕೆಯಿಡುವುದರಲ್ಲಿ ವಿಫಲರಾಗಿ ಮತ್ತು ಆ ಮಟ್ಟಿಗೆ ಆಶೀರ್ವಾದ ಮತ್ತು ಸಮಾಧಾನ ಮತ್ತು ಆನಂದ ಹೊಂದುವದರಲ್ಲಿ ವಿಫಲರಾಗಿರುವರು.

ಸುವಾರ್ತಾವಿವರಣೆಗಳು ಹೇಳಿರುವಂತೆ ನಮ್ಮ ಕರ್ತನು ಆ ಪ್ರದೇಶದಲ್ಲಿ ಈ ಬಡ ಸ್ತ್ರೀಯ ವಿಷಯವನ್ನು ಬಿಟ್ಟು ಬೇರೆ ಯಾವುದನ್ನೂ ಮಾಡಿರಲಿಲ್ಲ. ಮತ್ತು ಈ ಸಂಬಂಧದ ಆತ್ಮಿಕ ಪಾಠವು ಶಿಷ್ಯರಿಗಿಂತಲೂ ಆಕೆಗೆ ಕಡಿಮೆಯಿದ್ದುದು ಸ್ಪಷ್ಟವಾಗಿತ್ತು; ಏಕೆಂದರೆ ಆತನು ಆಕೆಗಾಗಲೀ ಅಥವಾ ಆ ಸುತ್ತಮುತ್ತಣ ಪ್ರದೇಶದಲ್ಲಿ ಯಾರಿಗಾಗಲೀ ಉಪದೇಶಮಾಡಿರುವದು ನಮಗೆ ದಾಖಲೆಗಳಿಲ್ಲ. ಅಲ್ಲಿಂದ ನಿರ್ಗಮಿಸಿ ನಮ್ಮ ಕರ್ತನು ಪೂರ್ವಾಭಿಮುಖವಾಗಿ ಪಾಲೆಸ್ತೀನಾ ದೇಶದ ಉತ್ತರ ಗಡಿಯ ಮಾರ್ಗವಾಗಿ ನಡೆದು ಯೊರ್ದಾನ್ ನದಿಯನ್ನು ದಾಟಿ ದಕ್ಷಿಣದ ಕಡೆಗೆ ತಿರುಗಿಕೊಂಡು ಗಲಿಲಾಯ ಸಮುದ್ರದ ಬಳಿಗೆ ಬರುವದಕ್ಕೆ ಆರಂಭಿಸಿದ್ದನು. ಆತನು ಪರ್ವತದಲ್ಲಿ ನಿಂತನೆಂದು ಮತ್ತು ಜನರ ಒಂದು ದೊಡ್ಡ ಗುಂಪು ತಮ್ಮಲ್ಲಿದ್ದ ಅಸ್ವಸ್ಥರನ್ನು ಆತನ ಬಳಿಗೆ ಕರತಂದರೆಂದು ಮತ್ತಾಯನು ಹೇಳಿರುವನು. ಕುಂಟರು ಕುರುಡರು ಮೂಕರು ಅಂಗವಿಹೀನರು ಮತ್ತು ಅನೇಕ ಇತರರನ್ನು ಯೇಸುವಿನ ಪಾದಗಳ ಬಳಿಗೆ ತಂದಿದ್ದರು ಮತ್ತು ಆತನು ಅವರನ್ನು ಗುಣಪಡಿಸಿದ್ದನು, ಹಾಗು ಜನರು ಬೆರಗಾಗಿ ಇಸ್ರಾಯೇಲ್ಯರ ದೇವರನ್ನು ಕೊಂಡಾಡಿದ್ದರು.

ಗುಣಹೊಂದಿದ ಈ ಗುಂಪಿನವರಿಂದ ಒಂದು ನಿರ್ದಿಷ್ಟವಾದ ದೃಷ್ಟಾಂತವನ್ನು ನಮ್ಮ ಪಾಠವು ನೀಡಿರುವದು. ಕಿವುಡನೂ ಮೂಕನೂ ಆಗಿರುವ ಒಬ್ಬನು ಯೇಸುವಿನ ಬಳಿಗೆ ತರಲ್ಪಟ್ಟಿದ್ದನು ಮತ್ತು ಆತನು ಅವನಿಗೆ ಗುಣಪಡಿಸಿದ್ದ ರೀತಿ ವಿಚಿತ್ರವಾಗಿತ್ತು. ಕರ್ತನು ಅವನನ್ನು ಹೊರಗೆ ಏಕಾಂತಕ್ಕೆ ಕರಕೊಂಡು ಹೋದನು; ಬಹುಶಃ ಇದು ಆತನಿಗೆ ಒಂದು ಪಾಠವನ್ನು ಒತ್ತಿಹೇಳಸಲುವಾಗಿ ಇರಬಹುದು. ಆ ಮನುಷ್ಯನಿಗೆ ಕೇಳಿಸಿಕೊಳ್ಳಲು ಸಾಧ್ಯವಿರಲಿಲ್ಲ; ಅದುದರಿಂದ ಕರ್ತನು ಸನ್ನೆಗಳ ಮೂಲಕ ಅವನಿಗೆ ಪಾಠವನ್ನು ಹೇಳಿಕೊಟ್ಟಿದ್ದನು. ಹೇಗಂದರೆ ಆತನ ನಾಲಿಗೆಯನ್ನು ಮತ್ತು ಆತನ ಕಿವಿಯನ್ನು ಮುಟ್ಟಿ ಮತ್ತು ಆಕಾಶದ ಕಡೆಗೆ ಕಣ್ಣೆತ್ತಿ ನೋಡಿ ನಿಟ್ಟುಸಿರು ಬಿಡುವುದರ ಮೂಲಕವಾಗಿ ಆ ಮನುಷ್ಯನ ಪರವಾಗಿ ಪರಲೋಕದಿಂದ ಅನುಕಂಪವು ಹುಟ್ಟಿಬಂದಿರುವದಾಗಿ ತೋರಿಸಿಕೊಟ್ಟಿದ್ದನು ಮತ್ತು ಆ ಕೂಡಲೇ ಆಶೀರ್ವಾದವು ಉಂಟಾಗಿ ಆತನು ಗುಣಹೊಂದಿ–ದ್ದನು. ಆ ಪ್ರದೇಶದಲ್ಲಿ ಇದು ಮೊದಲನೇ ಅದ್ಭುತವಾಗಿರ–ಬಹುದು ಮತ್ತು ಜನರ ಗುಂಪು ಬಂದಿದ್ದುದು ಸಾಧ್ಯವಿತ್ತು. ಹಾಗು ಮತ್ತಾಯನು ಬರೆದಿರುವಂತೆ, ಅವರು ಇದರಿಂದ ಆಕರ್ಶಿತ ರಾಗಿದ್ದರು. ಇದು ಯಾರಿಗೂ ತಿಳಿಯಬಾರದೆನ್ನುವ ನಮ್ಮ ಕರ್ತನ

ಆದೇಶವು ಆಜ್ಞೆಯಲ್ಲ ಸಲಹೆಯೆಂದು ಆತನು ಪ್ರಚಾರವನ್ನು ಬಯಸುತ್ತಿಲ್ಲವೆಂದು ಅರ್ಥಮಾಡಿಕೊಂಡಿದ್ದರು. ಹೀಗಾಗಿಯೂ ನಂಬಿಕೆಯನ್ನು ಪ್ರದರ್ಶಿಸಿದ ಬಡ ಬಾಧಿತರು ತನ್ನೆದುರಿನಲ್ಲಿರುವಾಗ ಕರ್ತನು ಆಶೀರ್ವಾದ ನೀಡಲು ಎಂದೂ ನಿರಾಕರಿಸಿರಲಿಲ್ಲ. ಭೂಲೋಕದ ಎಲ್ಲಾ ಕುಲದವರನ್ನು ಆಶೀರ್ವದಿಸಲು ನಿಗದಿತವಾದ ಕಾಲವು ಬಂದಾಗ ನಮ್ಮ ಕರ್ತನು ಯಾರಿಂದಲೂ ಆಶೀರ್ವಾದವನ್ನು ತಡೆಹಿಡಿಯುವುದಿಲ್ಲವೆಂಬುದಾಗಿ ನಾವು ಬೋಧಿಸಲ್ಪಟ್ಟಿರುವೆವು. ಆಗ ಯಾರೆಲ್ಲರೂ ಆಶೀರ್ವಾದ ಹೊಂದಲು ಬಯಸುವರೋ ಅವರೆಲ್ಲರೂ ಆತನ ಅನುಗ್ರಹವನ್ನು ಹೊಂದಬಹುದು.

## ನಮ್ಮ ಮನಸ್ಸಿನ ಕಣ್ಣುಗಳು ಮತ್ತು ಕಿವಿಗಳು ಧನ್ಯವಾದವುಗಳು

ಹೊಸ ಸೃಷ್ಟಿಗಳಾಗಿ ಸಾಂಕೇತಿಕವಾದ ಒಂದು ಅರ್ಥದಲ್ಲಿ ಈಗಾಗಲೇ ಹೊಸಬರಾಗಿ ಕ್ರಿಸ್ತನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಆತನೊಂದಿಗೆ ಎಬ್ಬಿಸಲ್ಪಟ್ಟಿರುವರಾದ ನಮ್ಮ ಕಣ್ಣುಗಳು ತೆರೆಯಲ್ಪಟ್ಟಿರುವದು ಮತ್ತು ನಮ್ಮ ಕಿವಿಗಳು ತೆರೆಯಲಾಗಿರುವದು ಮತ್ತು ನಮ್ಮ ನಾಲಿಗೆಯ ಕಟ್ಟುಬಿಚ್ಚಲಾಗಿರುವದು; ಹೀಗಾಗಿ ನಾವು ಸ್ವತಃ ದೇವರ ಕೃಪೆಯನ್ನು ಕಂಡು ಅನುಭವಿಸುತ್ತಿರುವದು ಮಾತ್ರವಲ್ಲದೆ ನಾವು ಆತನ ಶುಭವಾರ್ತೆ ಮತ್ತು ಪ್ರೀತಿಯನ್ನು ಇತರರಿಗೆ ಹೇಳಬಹುದಾಗಿದೆ. ಈಗಿನ ಕಾಲದಲ್ಲಿ ವಿಶೇಷವಾದ ಸತ್ಯದ ಜ್ಞಾನವನ್ನು ಕರ್ತನಿಂದ ಹಲವು ವಿಧದಲ್ಲಿ ಅನುಗ್ರಹಿಸಲ್ಪಟ್ಟಿರುವವರು ಸಲಹೆಮಾಡುವುದೇನಂದರೆ ಅದು ಎಲ್ಲರಿಗಾಗಿ ಇರುವಂಥದಲ್ಲ; ಹೀಗಾಗಿ ನಾವು ಸತ್ಯವನ್ನು ಹಂಚುವ ನಮ್ಮ ಪ್ರಯತ್ನದಲ್ಲಿ ವಿವೇಚನೆಯುಳ್ಳವರಾಗಿರಬೇಕು; ನಮಗೆ ಬಹು ಅಮೂಲ್ಯವಾದ ಮುತ್ತಿನಂತಿರುವ ಈ ವಿಶೇಷವಾದ ಆಶೀರ್ವಾದಗಳು ಎಲ್ಲರಿಗೋಸ್ಕರವಾಗಿರುವುದಿಲ್ಲ; ನಾವು ಹಂದಿಗಳ ಅಥವಾ ಕರ್ತನ ಅನುಗ್ರಹಗಳನ್ನು ತಿಳಿದುಕೊಳ್ಳುವ ಅಥವಾ ಅಂಗೀಕರಿಸಿಕೊಳ್ಳುವ ಮನೋಭಾವ ವಿಲ್ಲದವರ ಮುಂದೆ ನಮ್ಮ ಮುತ್ತುಗಳನ್ನು ಚೆಲ್ಲಬಾರದು. ಆದರೆ ನಮ್ಮ ವಿಷಯದಲ್ಲಿ ಈ ಪಾಠದಲ್ಲಿ ಗುಣಮಾಡಲ್ಪಟ್ಟವನ ಹಾಗೆ ಈ ಸಂದೇಶವು ನಮ್ಮಲ್ಲಿಯೇ ಇಟ್ಟುಕೊಂಡಿರುವಂಥ ರೀತಿಯದಲ್ಲ; ಈ ಸುದ್ದಿಯನ್ನು ಇತರರಿಗೆ ಹೇಳಲು ಇಷ್ಟವುಳ್ಳವರಾಗಿದ್ದೇವೆ, ಅದು ನಮಗೆ ಮಾಡಿರುವಂಥದು ಬಹುವಾಗಿರುವದು; ತಮ್ಮ ಕಣ್ಣು ಕಾಣದೆ ಕಿವಿ ಕೇಳದೆ ಇರುವಂಥವರೆಲ್ಲರೂ ನಮ್ಮ ಈ ದಿವ್ಯ ವೈದ್ಯನ ಬಳಿಗೆ ಬಂದು ಗುಣಹೊಂದುವವರಾಗಬೇಕೆಂದು ನಾವು ಬಯಸುವೆವು; ಶುಭ ಸಮಾಚಾರವನ್ನು ತಿಳಿಸುವ ತಮ್ಮ ಯತ್ನದಲ್ಲಿ ತೊದಲುವಂಥವರೆಲ್ಲರೂ ತಮ್ಮ ನಾಲಿಗೆಯು ಈ ಒಡೆಯನಿಂದ ಮುಟ್ಟಲ್ಪಟ್ಟು ಇನ್ನು ಮುಂದೆ ಅವರು ಕ್ರಿಸ್ತನ ಸುವಾರ್ತೆಯ ಭವ್ಯವಾದ ಸಂಗತಿಗಳನ್ನು ನೇರವಾಗಿ ನುಡಿಯುವವರಾಗಬೇಕೆಂದು ನಾವು ಬಯಸುವವರಾಗಿದ್ದೇವೆ. ಈ ಪಾಠದಲ್ಲಿ ಹೇಳಿರುವವನನ್ನು ನಮ್ಮ ಕರ್ತನು ಗದರಿಸಲಿಲ್ಲ. ಆದುದರಿಂದ ನಾವು ಇತರರಿಗೆ ಶುಭ ವರ್ತಮಾನವನ್ನು ತಿಳಿಸುವ ನಮ್ಮ ತೀವ್ರವಾದ ಯತ್ನದಲ್ಲಿ ಒಂದು ವೇಳೆ ಕೇಳುವ ಕಿವಿಯಿಲ್ಲದ ಕಾಣುವ ಕಣ್ಣುಗಳಿಲ್ಲದವರಿಗೆ ಹೇಳಿದಲ್ಲಿ ಅಥವಾ ಶಿಷ್ಯರನ್ನು ಮಾಡುವ ಯತ್ನದಲ್ಲಿ ಆತ್ಮಿಕ ವಿಷಯಗಳಲ್ಲಿ ಒಲವು ಇಲ್ಲದ ಮತ್ತು ಹಂದಿಯ ಸ್ವಭಾವವಿರುವರಿಗೆ ಅಥವಾ ಯಜ್ಞದ ಕುರಿಯು ಹೋದಲ್ಲೆಲ್ಲಾ ಆತನ ಹಿಂದೆ ಹೋಗದ ಕೆಲವರಿಗೆ ಕೆಲವು ಸಾರಿ ಹೇಳಿದಲ್ಲಿ ಕರ್ತನು ನಮ್ಮನ್ನೂ ಗದರಿಸಲಾರನು.

ಈ ಪಾಠದ ಮೂಲತತ್ವವೆಂದರೆ, ನಮ್ಮ ಮನಸ್ಸು ಆತ್ಮಗಳಲ್ಲಿ ಕ್ರಿಸ್ತನೊಂದಿಗೆ ಎಬ್ಬಿಸಲ್ಪಟ್ಟವರಾದ ನಾವು ಇನ್ನೂ ಮರಣಾಧೀನವಾದ ನಮ್ಮ ಈ ದೇಹದಲ್ಲಿರುವಾಗ ನೂತನ ಸ್ವಭಾವದಲ್ಲಿ ನಡಕೊಳ್ಳುವವರಾಗಬೇಕು ಮತ್ತು ಇನ್ನೂ ಮನುಷ್ಯರ ಮಧ್ಯೆ ಇರಬೇಕು; ಮೊದಲನೆಯ ಪುನರುತ್ಥಾನದಲ್ಲಿನ ಭವ್ಯವಾಗಿ ಮಾರ್ಪಡುವದನ್ನು ಎದುರು ನೋಡುವವರಾಗಬೇಕು, ಆಗ ನಾವು ನಿಜವಾಗಿಯೂ ಕರ್ತನ ಸಾರೂಪ್ಯದಲ್ಲಿರುವವರಾಗಿ ಆತನಿರುವಂತೆಯೇ ಆತನನ್ನು ನೋಡುವವರಾಗಿ, ಆತನೊಡನೆ ಪ್ರಭಾವದಲ್ಲಿ ಪಾಲುಗಾರರಾಗಿ ಜೀವಾಶೀರ್ವಾದವನ್ನು ಮತ್ತು ಗುಣಪಡಿಸುವಿಕೆಯನ್ನು ಅಂಗೀಕರಿಸಲು ಇಚ್ಛಿಸುವವರೆಲ್ಲರಿಗೆ ಈ ಅನುಗ್ರಹಗಳನ್ನು ಹಂಚುವದರಲ್ಲಿ ಆತನೊಡನೆ ಭಾಗವಹಿಸುವದನ್ನು ಎದುರು ನೋಡುವವರಾಗಬೇಕು. ಆ ಮಹಿಮೆಯುಳ್ಳ ರಾಜ್ಯವು ಈಗಾಗಲೇ ಸಮೀಪವಾಗಿರುವದೆಂಬುದನ್ನು ತಿಳಿಯಲು ನಾವು ಹರ್ಷಿಸುವವರಾಗಿದ್ದೇವೆ.

*****

# ಎಲ್ಲಾ ಚೆನ್ನಾಗಿ ಮಾಡಿದ್ದಾನೆ

**ರೀಪ್ರಿಂಟ್ಸ್ ಪುಟ 5103**

## ಮಾರ್ಕ 7:31–8:10

**"ಎಲ್ಲಾ ಚೆನ್ನಾಗಿ ಮಾಡಿದ್ದಾನೆ; ಕಿವುಡರಾದರೂ ಕೇಳುವಂತೆ ಮಾಡುತ್ತಾನೆ, ಮೂಕರಾದರೂ ಮಾತಾಡುವಂತೆ ಮಾಡುತ್ತಾನೆ" – ಮಾರ್ಕ 7:37**

ಹಿಂದಿನ ಅಧ್ಯಯನದಲ್ಲಿ ಯೇಸುವು ಮಾಡಿದ ತನ್ನ ಅದ್ಭುತಗಳ ಮೂಲಕ, ಗುಣಹೊಂದಿದವರಿಗೆ ವಿಶೇಷವಾಗಿ ಹಾಗು ಸಾಮಾನ್ಯವಾಗಿ ಅವುಗಳನ್ನು ನೋಡಿ ಸಾಕ್ಷಿಗಳಾಗಿದ್ದವರೆಲ್ಲರಿಗೆ, ದೇವರ ಮೇಲೆ ಅವರ ನಂಬಿಕೆಯನ್ನು ದೃಢಪಡಿಸುವ ಸಲುವಾಗಿ ಈ ಅದ್ಭುತವನ್ನು ನಡೆಸಿದ್ದ ಶಕ್ತಿಯು ದೇವರಿಂದ ಬಂದದ್ದು ಎಂಬುದನ್ನು ಎಲ್ಲರಿಗೂ ಬೇಧವಿಲ್ಲದೆ ಗ್ರಹಿಕೆಯಾಗುವಂತೆ ಮಾಡಿದ್ದ ಅಂಶವನ್ನು ನಾವು ಗಮನಿಸಿರುವೆವು. ನಮ್ಮ ಇಂದಿನ ಪಾಠವು ಈ ಸಂಬಂಧದಲ್ಲಿ ಒಂದು ವಿಶೇಷ ನಿದರ್ಶನವನ್ನು ನೀಡುವದು. ಮೂಕನಾಗಿದ್ದು ಮಾತನಾಡಲು ತೊದಲುತ್ತಿದ್ದ ಒಬ್ಬ ವ್ಯಕ್ತಿಯನ್ನು ಗುಣಪಡಿಸಿಕೊಳ್ಳಲು ರಕ್ಷಕನ ಬಳಿಗೆ ಕರಕೊಂಡು ಬಂದಿದ್ದರು. ಆತನ ಮೇಲೆ ಕೈಯಿಡಬೇಕೆಂದು ಅವರು ಬೇಡಿಕೊಂಡಿದ್ದರು.

ಹೀಗೆ ನಡೆಸಲಾಗುತ್ತಿದ್ದ ಅದ್ಭುತಗಳಲ್ಲಿ ಹೆಚ್ಚಾದವುಗಳನ್ನು ಕೈಯಿಡುವ ಮೂಲಕವಾಗಿ ಮಾಡಲಾಗುತ್ತಿತ್ತೆಂಬುದು ಸ್ಪಷ್ಟವಾಗಿ ಕಾಣಬರುತ್ತಾದರೂ ಕೆಲವರು ಆತನನ್ನು ಮುಟ್ಟುವುದರ ಮೂಲಕವಾಗಿ ಇಲ್ಲವೇ ಆತನ ಉಡುಪನ್ನು ಮುಟ್ಟುವುದರ ಮೂಲಕವಾಗಿ ಗುಣಹೊಂದುತ್ತಿದ್ದರೆಂಬ ಉಲ್ಲೇಖಗಳು ಸಹ ಇರುವವು. ಎರಡನೆಯದಾಗಿ ಹೇಳಿರುವ ಸಂಗತಿಗಳಲ್ಲಿ ಗುಣವಾದ ವ್ಯಕ್ತಿಯು ನಂಬಿಕೆಯನ್ನು ಪ್ರಯೋಗಿಸಿದ್ದನೆಂಬುದು ಸ್ಪಷ್ಟವಾಗಿತ್ತು, ಇಲ್ಲವಾದಲ್ಲಿ ಅವನು ಗುಣವಾಗುವ ಅಪೇಕ್ಷೆಯಿಂದ ಉಡುಪನ್ನು ಮುಟ್ಟುತ್ತಿರಲಿಲ್ಲ. ಒಂದು ಸ್ಥಳದಲ್ಲಿ, ಅಲ್ಲಿದ್ದವರಿಗೆ ನಂಬಿಕೆಯಿಲ್ಲದ ಕಾರಣ ಯೇಸುವಿಗೆ ಅನೇಕ ಮಹತ್ಕಾರ್ಯಗಳನ್ನು ನಡೆಸಲು ಸಾಧ್ಯವಾಗಲಿಲ್ಲವೆಂಬುದನ್ನು ನಾವು ಬೇರೊಂದು ಸಂದರ್ಭದಲ್ಲಿ ಓದುತ್ತೇವೆ. ಆದುದರಿಂದ ಗುಣಪಡಿಸುವ ಶಕ್ತಿಯು, ಇಚ್ಛಾಪೂರ್ವಕವಾಗಿಯೋ ಅಥವಾ ಇಚ್ಛಾಪೂರ್ವಕವಾಗಿಲ್ಲದೆಯೋ, ನಂಬಿಕೆಯನ್ನು ಪ್ರಯೋಗಿಸುವದರ ಜೊತೆಗೂಡಿರುತ್ತಿತ್ತು; ಆ ನಂಬಿಕೆಯು ರೋಗಿಯಲ್ಲಿಯೋ ಇಲ್ಲವೇ ಆತನಿಗೋಸ್ಕರವಾಗಿ ಅತನ ಸ್ನೇಹಿರಲ್ಲಿಯೋ ಇರುತ್ತಿತ್ತು.

ಇಲ್ಲಿ ಪರಿಗಣನೆಮಾಡುತ್ತಿರುವ ಸಂದರ್ಭವು ವಿಚಿತ್ರವಾಗಿರುವದು: (1) ಕಾರಣ ಯೇಸುವು ಆ ಮನುಷ್ಯನನ್ನು ಗುಂಪಿನಿಂದ ಹೊರಗೆ ಕರಕೊಂಡು ಹೋಗಿ ಏಕಾಂತವಾಗಿ ಆತನನ್ನು ಗುಣಪಡಿಸಿದ್ದನು; ಮತ್ತು (2) ಆತನು ಉಪಯೋಗಿಸಿದ ವಿಧಾನವೂ ವಿಚಿತ್ರವಾಗಿತ್ತು. ಆತನು ತನ್ನ ಬೆರಳುಗಳನ್ನು ಆ ಮನುಷ್ಯನ ಕಿವಿಗಳಲ್ಲಿಟ್ಟು ಅವುಗಳ ಮೂಲಕವಾಗಿ ಕೆಲವು ಜೀವಶಕ್ತಿಯು ಹರಿದು ಬರಲು ಆರಂಭಿಸುವ ಹಾಗೆ ಮಾಡಿದುದೋ ಎಂಬಂತೆ ಕಾಣುವದು; ಆನಂತರ ಆತನು ಉಗುಳಿ ಆ ಮನುಷ್ಯನ ನಾಲಿಗೆಯನ್ನು ಮುಟ್ಟಿದ್ದನು. ನಮ್ಮ ಕರ್ತನ ಶಕ್ತಿಯು ಈ ವಿಧಾನಗಳಿಗೇ ಸೀಮಿತವಾಗಿತ್ತೆಂದು ನಾವು ಕಲ್ಪಿಸಿಕೊಳ್ಳಲಾಗದು, ಇನ್ನೊಂದು ಸಂದರ್ಭದಲ್ಲಿ ಆತನು ಬೇರೊಂದು ವಿಧಾನವನ್ನು ಬಳಸಿದ್ದನು. ಆ ಮನುಷ್ಯನ ಗಮನವನ್ನು ಸೆಳೆದು ಹಾಗು ನಂಬಿಕೆಯನ್ನು ಪ್ರಯೋಗಿಸಲು ಆತನಿಗೆ ಸಹಾಯಮಾಡುವ ಸಲುವಾಗಿ ಈ ವಿಧಾನಗಳನ್ನು ಬಳಸಿಕೊಳ್ಳುತ್ತಿದ್ದನೆಂದು ಇಲ್ಲಿ ಅರ್ಥಮಾಡಿಕೊಳ್ಳುವದು ಉತ್ತಮವಾದದ್ದು.

ಆ ಮನುಷ್ಯನಿಗೆ ಕೇಳಿಸಿಕೊಳ್ಳಲು ಸಾಧ್ಯವಾಗದಿದ್ದುದರಿಂದ ಆತನಿಗೆ ಏನಾದರೂ ಹೇಳುವುದರಿಂದ ಪರಿಸ್ಥಿತಿಯನ್ನು ವಿವರಿಸಲು ಸಾಧ್ಯವಿರಲಿಲ್ಲ; ಉಗುಳುವದನ್ನು ನೋಡಲು ಆತನಿಗೆ ಸಾಧ್ಯವಿತ್ತು, ಮುಟ್ಟಿದ ಅನುಭವ ಹೊಂದಲು ಆತನಿಗೆ ಸಾಧ್ಯವಿತ್ತು, ಹೀಗೆ ಅಲ್ಲಿ ನಡೆಯುತ್ತಿರುವುದನ್ನು ಅರ್ಥಮಾಡಿಕೊಳ್ಳಲು ಆತನಿಗೆ ಸಾಧ್ಯವಾಗಿತ್ತು, ಮತ್ತು ಇದರ ಅನುಸಾರವಾಗಿ ತನಗೆ ಗುಣವಾದುದನ್ನು ತಿಳಿದುಕೊಳ್ಳಲು ಸಾಧ್ಯವಾಗಿತ್ತು. ಈ ವಿಧಾನಗಳು ಆತನ ಮನಸ್ಸು ಒಪ್ಪುವಂತೆ ಇಲ್ಲವೇ ಕೆಲವು ಮಟ್ಟದಲ್ಲಿ ನಂಬಿಕೆಯನ್ನು ಪ್ರಯೋಗಿಸುವಂತೆ ಮಾಡಿದ್ದವು. ಇದರ ಜೊತೆಯಲ್ಲಿ ಈ ಪಾಠಗಳನ್ನು ನೀಡಿದ ನಂತರ ಆ ಮನುಷ್ಯನು ಇನ್ನೂ ಆತನನ್ನು ನೋಡುತ್ತಿರುವಲ್ಲಿ ಯೇಸುವು ಆಕಾಶದ ಕಡೆಗೆ ನೋಡಿದ್ದನು. ಹೀಗೆ ಆ ರೋಗಿಯು ಈ ವಿಷಯದಲ್ಲಿ ಮೂರನೇ ಪಾಠವನ್ನು ಪಡೆದುಕೊಂಡಿದ್ದನು, ಅದೇನೆಂದರೆ, ಆತನನ್ನು ಗುಣಪಡಿಸುವ ಶಕ್ತಿಯು ದೇವರಿಂದ ನಿರೀಕ್ಷಿಸಲಾಗಿತ್ತೆಂಬುದು. ಯೇಸುವು ನಿಟ್ಟುಸಿರು ಬಿಟ್ಟು "ಎಫ್ಫಥಾ" ಅಂದರೆ "ತೆರೆಯಲ್ಪಡಲಿ" ಎಂದು ಹೇಳಿದ್ದನು ಮತ್ತು ಕೂಡಲೇ ಆ ಮನುಷ್ಯನ ಕಿವಿಗಳು ತೆರೆಯಲ್ಪಟ್ಟವು ಮತ್ತು ಆತನ ಮಾತಿನಲ್ಲಿ ತೊದಲುತ್ತಿದ್ದುದು ಹೊರಟುಹೋಗಿತ್ತು.

ಯೇಸುವು ನಿಟ್ಟುಸಿರು ಬಿಟ್ಟನೆಂದು ಹೇಳಿರುವದು ಗಮನಾರ್ಹವಾದದ್ದು; ಇದು ತನ್ನ ಮುಂದಿದ್ದ ಆ ಮನುಷ್ಯನ ಬಗ್ಗೆ ಹಾಗು ನರಳುತ್ತಿರುವ ಜಗತ್ತಿನ ಬಗ್ಗೆ ಆತನಿಗಿದ್ದ ಸಾಮಾನ್ಯವಾದ ಗಾಢ ಅನುಕಂಪವನ್ನು ಸೂಚಿಸುತ್ತದೆಂದು ನಾವು ಭಾವಿಸುವೆವು. ಯೇಸುವು "ಆತ್ಮದಲ್ಲಿ ನೊಂದುಕೊಂಡನು" ಎಂದು ಇನ್ನೊಂದು ಸಂದರ್ಭದಲ್ಲಿ ಹೇಳಿರುವುದನ್ನು ನಾವು ನೆನಪುಮಾಡಿಕೊಳ್ಳುವವರಾಗಿದ್ದೇವೆ. ಇದು ಆತನು ತನ್ನ ಸ್ನೇಹಿತನಾದ ಲಾಜರನನ್ನು ಇಟ್ಟಿದ್ದ ಸಮಾಧಿಯ ಎದುರಿನಲ್ಲಿ ನಿಂತು ಮರಿಯಳು ಮತ್ತು ಆಕೆಯೊಡನೆ ಯೆಹೂದ್ಯರು ಗೋಳಾಡುವುದನ್ನು ನೋಡಿದ ಸಂದರ್ಭವಾಗಿತ್ತು. "ಆತನು ಆತ್ಮದಲ್ಲಿ ನೊಂದುಕೊಂಡು ತತ್ತರಿಸಿ" ಕಣ್ಣೀರು ಬಿಟ್ಟಿದ್ದನು. ಇಲ್ಲಿರುವ ಸಾಮಾನ್ಯವಾದ ಪಾಠವು ಆತನ ವಿಷಯದಲ್ಲಿ ಪ್ರವಾದಿಸಿದ್ದಂತೆ –

ಮನುಷ್ಯರ ನಿರ್ಬಲಾವಸ್ಥೆಯ ವಿಷಯದಲ್ಲಿ
ಅನುತಾಪವುಳ್ಳವನಾಗಿದ್ದನು.

ಎಂಬುದನ್ನು ತೋರಿಸಿಕೊಟ್ಟಿರುವಂತೆ ಕಾಣುವದು. ವಾಸ್ತವದ ಸಂಗತಿಯೆಂದರೆ, ಆತನು ಪರಿಪೂರ್ಣನಾಗಿದ್ದು ಅಂದರೆ ಇತರ ಮನುಷ್ಯರಿಗಿದ್ದಂತೆ ಆತನಿಗೆ ನೋವುಬಾಧೆಗಳಿಂದ ಮತ್ತು ದೋಷಗಳಿಂದ ಕೂಡಿದ ಅಪರಿಪೂರ್ಣತೆಯುಳ್ಳ ದೇಹವಿರಲಿಲ್ಲ, ಆದರೂ ಇದು ಆತನನ್ನು ನಿರ್ದಯಿಯಾಗಿ ಅನುತಾಪವಿಲ್ಲದವನಂತೆ ಮಾಡಿರಲಿಲ್ಲ, ಬದಲಾಗಿ ಅದು ಇದಕ್ಕೆ ವಿರುದ್ಧವಾಗಿತ್ತು. ಆತನ ಪರಿಪೂರ್ಣವಾದ ಮನಸ್ಸು ಆತನ ಎಲ್ಲಾ ಇಂದ್ರೀಯ ಗ್ರಹಣಶಕ್ತಿಯನ್ನು ನಮಗಿಂತಲೂ ಹೆಚ್ಚು ಚಟುವಟಿಕೆಯಿಂದಿರುವಂತೆ ಮಾಡಿತ್ತು; ಆತನಲ್ಲಿದ್ದ ಅನುಕಂಪವು ನಮಗಿಂತಲೂ ಬಲವುಳ್ಳದ್ದಾಗಿತ್ತು, ಆತನಲ್ಲಿದ್ದ ನೋವು ಅರಿಯುವ ಶಕ್ತಿಯು ಸೂಕ್ಷ್ಮವಾಗಿತ್ತು. ಪರಿಪೂರ್ಣತೆಯಿಂದ ಬಿದ್ದುಹೋದ ಮಾನವಕುಲದವರಾದ ನಾವು ನಮ್ಮ ಸುತ್ತಲಿರುವ (ದುಃಖಕರ) ಸನ್ನಿವೇಶಗಳಿಗೆ ಎಷ್ಟು ಒಗ್ಗಿಹೋಗಿರುವೆವೆಂದರೆ ಅವು ನಮಗೆ ದಿನನಿತ್ಯದ ಸಂಗತಿಗಳಂತಾಗಿ ತೋರಿ ನಾವು ಅವುಗಳನ್ನು ಸಹಜವಾದುದೆಂದು ಎಣಿಸುವ (ನಿರ್ಲಕ್ಷಿಸುವ) ಪ್ರವೃತ್ತಿಯುಳ್ಳವರಾಗಿದ್ದು, ಮನುಷ್ಯನ ಸಹಜವಾದ ಸ್ಥಿತಿಯು ಪರಿಪೂರ್ಣತೆಯುಳ್ಳದ್ದೆಂದೂ ಮತ್ತು ಈ ದೋಷಪೂರಿತವಾದ ಸ್ಥಿತಿಯು ಸಹಜವಾದುದಲ್ಲವೆಂಬುದನ್ನು ಮರೆತುಹೋಗಿರುವೆವು.

ಹೀಗಾಗಿ ನಮ್ಮ ಒಡೆಯನು ಪ್ರತಿಯೊಂದು ಅದ್ಭುತವನ್ನು ಮಾಡುವುದರಲ್ಲಿ ತನ್ನ ಸತ್ವವನ್ನು ಕಳೆದುಕೊಳ್ಳುತ್ತಿದ್ದುದರ ಕಾರಣದಿಂದ ನಮ್ಮ ನಿರ್ಬಲಾವಸ್ಥೆಯನ್ನು ಕುರಿತು ಆತನಿಗೆ ಅನುತಾಪವಿತ್ತೆಂಬುದನ್ನು ನಾವು ಇನ್ನೊಂದು ವಿಧದಲ್ಲಿ ಊಹಿಸಬಹುದಲ್ಲವೇ. "ಈತನು ...ತನ್ನ ಪ್ರಾಣವನ್ನು (ಮರಣದಲ್ಲಿ) ಧಾರೆಯೆರೆದು..." ಎನ್ನುವ ಸತ್ಯವೇದ ವಚನದ ಅರ್ಥವು ಇದೇ ಆಗಿತ್ತಲ್ಲವೇ? ರೋಗಗುಣಪಡಿಸುವಲ್ಲಿ, ಆಶೀರ್ವಾದ

ಮಾಡುವಲ್ಲಿ, ಉಪಶಮನಗೊಳಿಸುವಲ್ಲಿ ಹಾಗೂ ತನ್ನ ಸಂಪರ್ಕಕ್ಕೆ ಬಂದವರಿಗೆ ಉಪದೇಶಿಸುವಲ್ಲಿ ಪ್ರತಿದಿನವೂ, ಪ್ರತಿಗಂಟೆಗೂ ಆತನಲ್ಲಿದ್ದ ಸತ್ವವು ಬರಿದಾಗುತ್ತಾ ಬಂದಿತ್ತು. ಇದೇ ವಿಷಯದಲ್ಲಿ ಬಹು ಸ್ಪಷ್ಟವಾದ ಅಭಿಪ್ರಾಯವು ರಕ್ತ ಕುಸುಮ ರೋಗವಿದ್ದ ಬಡ ಹೆಂಗಸಿನ ವಿಷಯದಲ್ಲಿ ನಮಗೆ ವ್ಯಕ್ತಪಡಿಸಲಾಗಿರುವದು. ಆಕೆಯು ನಿಶ್ಯಬ್ಧವಾಗಿಯೂ ನಿರಾಡಂಬರವಾಗಿಯೂ ಆತನ ಉಡುಪಿನ ಗೊಂಡೆಯನ್ನು ಮುಟ್ಟಿ ತನ್ನಲ್ಲಿ ತಾನು ಹೀಗಂದು ಕೊಂಡಿದ್ದಳು "ನಾನು ಆತನ ಉಡುಪನ್ನು ಮುಟ್ಟಿದರೆ ಸಾಕು ನೆಟ್ಟಗಾಗುವೆನು." ಆಕ್ಷಣವೇ ಆಕೆಯು ಗುಣಹೊಂದಿದ್ದಳು ಮತ್ತು ಯೇಸು ಹಿಂತಿರುಗಿ "ನನ್ನನ್ನು ಮುಟ್ಟಿದವರು ಯಾರು?" ಎಂದು ಕೇಳಿದ್ದನು; ಏಕೆಂದರೆ ತನ್ನಿಂದ ಶಕ್ತಿ ಅಂದರೆ ಸತ್ವವು ಹೊರಟಿತ್ತೆಂದು ತನ್ನಲ್ಲಿ ತಿಳುಕೊಂಡಿದ್ದನು.

ನಮ್ಮ ಒಡೆಯನು ದೇವರ ಪ್ರತಿನಿಧಿಯಾಗಿ ದೈವಿಕ ಶಕ್ತಿಯನ್ನು ಬಳಸುತ್ತಿದ್ದುದು ಮಾತ್ರವಲ್ಲದೆ ಆತನು ಮಾನವರಿಗೆ ಉಪಶಮನ ನೀಡಲು ತನ್ನ ಶಾರೀರಿಕ ಶಕ್ತಿಯನ್ನೂ ಬಳಸುತ್ತಿದ್ದನೆಂಬ ಈ ಆಲೋಚನೆಯು ನಮ್ಮನ್ನು ಆತನ ಅತಿ ಸಮೀಪದ ಸಂಪರ್ಕದಲ್ಲಿರುವಂತೆ ಮಾಡಿ, ಆತನಲ್ಲಿ ಸಹಾನುಭೂತಿಯುಳ್ಳವರಾಗಲು ನಮ್ಮ ಹೃದಯಗಳನ್ನು ಸೂಕ್ತವಾಗಿ ನಡೆಸಿ, ಮತ್ತು ನಮಗೆ ನಮ್ಮ ರಕ್ಷಕನ ಪ್ರೀತಿಯ ವಿಷಯವಾಗಿ ಸ್ಪಷ್ಟವಾದ ಅಭಿಪ್ರಾಯವನ್ನು ಹೊಂದಿರುವರನ್ನಾಗಿ ಮಾಡಿ, ಅಲ್ಲದೆ ನಮ್ಮ ಎಲ್ಲಾ ನಡವಳಿಕೆಗಳಲ್ಲಿ ಅತನನ್ನು ವಿಶ್ವಾಸಿಸುವದಕ್ಕೆ ಉತ್ತಮವಾದ ತಳಹದಿಯನ್ನು ಆತನಲ್ಲಿ ಹೊಂದಿದವರಾಗುವಂತೆ ಮಾಡಬೇಕು.

ಈ ಪಾಠದಲ್ಲಿ ಪರಿಗಣನೆ ಮಾಡುತ್ತಿರುವ ಅದ್ಭುತದಲ್ಲಿ ನಮ್ಮ ಕರ್ತನು ನಿಟ್ಟುಸಿರುಬಿಟ್ಟದ್ದು, ನಮ್ಮಲ್ಲಿರುವಂತೆಯೇ, ಆತನ ಶಾರೀರಿಕವಾದ ನಿಶ್ಯಕ್ತಿಗೆ ಅಂದರೆ ಆತನು ಆ ರೋಗಿಯನ್ನು ಗುಣಪಡಿಸಿದುದರ ಫಲವಾಗಿ ಕಳೆದುಹೋಗುತ್ತಿದ್ದ ಆತನ ಸತ್ವ ಮತ್ತು ಶಕ್ತಿಗೆ ಒಂದು ಪುರಾವೆಯಾಗಿರಲೂಬಹುದು. ಆದುದರಿಂದ ಯೇಸುವಿನ ಮರಣವು ಕೇವಲ ಕಲ್ವಾರಿಯಲ್ಲಿ ಪೂರ್ಣವಾಗಿ ನೆರವೇರಲ್ಪಟ್ಟಿತೆಂದು ನಾವು ಆಲೋಚಿಸುವ ಹಾಗಿಲ್ಲ. ನಾವು ನಿಜವಾಗಿಯೂ ಅರ್ಥಮಾಡಿಕೊಳ್ಳಬೇಕಿರು ವುದೆಂದರೆ, ಆತನ ಮರಣವು ಮೂವತ್ತನೇ ವಯಸ್ಸಿನಲ್ಲಿ ಯೊರ್ದಾನಿನಲ್ಲಿ ಆತನು ಮಾಡಿಕೊಂಡ ಪ್ರತಿಷ್ಠೆಯ ಮೂಲಕ ಪ್ರಾರಂಭವಾಗಿ ದಿನದಿನವೂ, ವರುಷವರುಷವೂ ಮುಂದುವರೆ ಯುತ್ತಾ ಬಂದು, ಕಡೆಯದಾಗಿ ಕಲ್ವಾರಿಯಲ್ಲಿ ಪೂರ್ಣ ಗೊಂಡಿತ್ತೆಂಬುದು.

ತಾನು ಶಿಲುಬೆಯ ಮರಣವನ್ನು ಹೊಂದುವ ಹಿಂದಿನ ದಿನ ನಮ್ಮ ಕರ್ತನು ಇದನ್ನು ತಿಳಿಸಿದ್ದನು. ಮರಣ ಪರ್ಯಂತರ ವಾಗಿ ಮಾಡಿಕೊಂಡಿದ್ದ ತನ್ನ ಪ್ರತಿಷ್ಠೆಯ ವಿಷಯವಾಗಿ ಮಾತನಾಡುತ್ತಾ ಆತನು ಹೀಗೆ ಹೇಳಿದ್ದನು: "ನನ್ನ ಪ್ರಾಣವು ಈಗ ಸಾಯುವಷ್ಟು ದುಃಖಕ್ಕೆ ಒಳಗಾಗಿದೆ; ನಾನು ಹೊಂದುವ ಸ್ನಾನದೀಕ್ಷೆ ಒಂದುಂಟು ಅದು ನೆರವೇರುವವರೆಗೂ ನಾನು ಎಷ್ಟೋ ಬಿಕ್ಕಟ್ಟಿನಲ್ಲಿದ್ದೇನೆ." ಮಾರನೆಯ ದಿನ ಆತನು ಕಲ್ವಾರಿಯಲ್ಲಿ (ಶಿಲುಬೆಯ ಮೇಲೆ) "ತೀರಿತು" ಎಂದು ಕೂಗಿ ಹೇಳಿದಾಗ ಇದು ಪೂರ್ಣವಾಗಿ ನೆರವೇರಲ್ಪಟ್ಟಿತ್ತು. ಆತನ ಮರಣಪರ್ಯಂತರವಾದ ಸ್ನಾನದೀಕ್ಷೆಯು ಪೂರ್ಣಗೊಂಡಿತ್ತು.

## "ಆತನು ಎಲ್ಲವನ್ನು ಚೆನ್ನಾಗಿ ಮಾಡಿದ್ದಾನೆ"

ಈ ಅದ್ಭುತದ ವಿವರಣೆಯ ನಂತರವೇ ನಮ್ಮ ಪಠ್ಯಭಾಗದ ಈ ಮಾತುಗಳನ್ನು ಜನರ ಗುಂಪು ಹೇಳಿತ್ತೆಂದು ನಾವು ಓದುತ್ತೇವೆ. ಹೀಗಿದ್ದರೂ ಕೇವಲ ಈ ಒಂದು ಅದ್ಭುತದ ಆಧಾರದ ಮೇಲೆ ಅವರು ಈ ವ್ಯಾಖ್ಯಾನವನ್ನು ಮಾಡಿದ್ದರೆಂದು ನಮಗೆ ಅರ್ಥಮಾಡಿಕೊಳ್ಳಲಾಗದು; ಯಾಕೆಂದರೆ ಇದೇ ಘಟನೆಯನ್ನು ವಿವರಿಸುವಾಗ (ಮತ್ತಾಯ 15:29–31) ತಮ್ಮೊಡನೆ ಕುಂಟರು ಕುರುಡರು ಮೂಕರು ಕೈಕಾಲಿಲ್ಲದವರು ಮುಂತಾದ ಅನೇಕರಿಂದ ಕೂಡಿದ ದೊಡ್ಡ ಗುಂಪು ಅಲ್ಲಿ ಸೇರಿದ್ದು, ಮತ್ತು ಆತನ ಪಾದಗಳ ಬಳಿಗೆ ಅವರನ್ನು ತಂದುಬಿಟ್ಟಿದ್ದರೆಂದು, ಅಲ್ಲದೆ ಆತನು ಅವರೆಲ್ಲ ರನ್ನು ವಾಸಿಮಾಡಿದ್ದನೆಂದು, ಮತ್ತು ಮೂಕರು ಮಾತಾಡಿದ್ದನ್ನು ಕೈಕಾಲಿಲ್ಲದವರು ಗುಣವಾದುದನ್ನು ಕುಂಟರು ನಡೆದಾಡಿದ್ದನ್ನು ಕುರುಡರಿಗೆ ಕಣ್ಣುಬಂದದ್ದನ್ನು ನೋಡಿ ಜನರಗುಂಪು ದೇವರನ್ನು ಕೊಂಡಾಡಿತ್ತೆಂದು ಮತ್ತಾಯನು ಹೇಳಿರುವನು.

## "ಆತನ ಮಹಿಮೆಯು ತೋರಿಬಂದಿತ್ತು"

ನಮ್ಮ ಕರ್ತನು ಮಾಡಿದ ಅದ್ಭುತಗಳ ಸಂಬಂಧವಾಗಿರುವ ಪ್ರಮುಖ ತತ್ವದ ಮೇಲಿನಿಂದ ನಮ್ಮ ದೃಷ್ಟಿಯನ್ನು ನಾವು ಕಳೆದುಕೊಳ್ಳದಿರೋಣ. ಆತನ ಕಾರ್ಯಭಾರವು ರೋಗಿಗಳನ್ನು ಗುಣಪಡಿಸುವದು ಮತ್ತು ದೆವ್ವಗಳನ್ನು ಬಿಡಿಸುವುದೇ ಆಗಿರಲಿಲ್ಲ, ಆದರೆ "ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು (ಈಡಾಗಿ) ಒಪ್ಪಿಸಿಬಿಟ್ಟನು. ಇದೇ ತಕ್ಕ ಸಮಯಗಳಲ್ಲಿ ಹೇಳಬೇಕಾದ ಸಾಕ್ಷಿಯು." ಆತನ ಕಾರ್ಯದ ಎರಡನೆಯ ಮುಖ್ಯ ವಿಷಯವು ಆತನ ಹೆಜ್ಜೆಯ ಜಾಡನ್ನು ಅನುಸರಿಸ ಸಲುವಾಗಿ "ನಿಜವಾದ ಇಸ್ರಾಯೇಲ್ಯರನ್ನು" ಕರೆಯುವದು ಮತ್ತು ಅವರು ತಂದೆಯಿಂದ ಅಂಗೀಕರಿಸಲ್ಪಟ್ಟವರಾಗಿ ಪಂಚಾಶತ್ತಮ ದಿನದಂದು ಮತ್ತು ನಂತರದಲ್ಲಿ ಪವಿತ್ರಾತ್ಮನಿಂದ ಹುಟ್ಟುವವರಾಗುವದು. ಅದ್ಭುತಗಳು ಮತ್ತು ರೋಗಗುಣಪಡಿಸುವಿಕೆಗಳು ನಡೆಸಲ್ಪಟ್ಟದ್ದು ಕೇವಲ ಸಾಂದರ್ಭಿಕವಾಗಿದ್ದು ಅವು ಆತನ ನಿಜವಾದ ಕೆಲಸವಾಗಿರಲಿಲ್ಲ. ಆ ಅದ್ಭುತಗಳು ಮತ್ತು ರೋಗಗುಣಪಡಿಸುವಿಕೆಗಳು ಒಂದು ಅರ್ಥದಲ್ಲಿ ಸಾಂದರ್ಭಿಕವಾಗಿದ್ದು ಆತನ ರಾಜ್ಯವು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ನಡೆಸುವ ದೊಡ್ಡ ಕಾರ್ಯಗಳ ಒಂದು ಸಣ್ಣ ಪ್ರಮಾಣದ ನಿದರ್ಶನಗಳಾಗಿರುವದು. ಆಗ "ಕುರುಡರ ಕಣ್ಣು ಕಾಣುವದು, ಕಿವುಡರ ಕಿವಿ ಕೇಳುವದು."

ದೈವಿಕ ಯೋಜನೆಯನ್ನು ವಿವರಿಸಿ ಹೇಳುವದು ಮತ್ತು ಜನರ ಮನೋನೇತ್ರಗಳನ್ನು ಮತ್ತು ಕಿವುಡಾದ ಅವರ ಕಿವಿಗಳನ್ನು ತೆರೆಯುವದು ಯೇಸುವಿಗೆ ಇನ್ನೂ ಮಹತ್ತರವಾದ ಹಾಗು ಭವ್ಯವಾದ ಕಾರ್ಯಗಳಾಗಿದ್ದವು; ಆದರೆ ಆತನು ಉನ್ನತ ಸ್ಥಾನಕ್ಕೆ ಏರಿಸಲ್ಪಡುವವರೆಗೂ ಮತ್ತು ತನ್ನ ಯಜ್ಞಫಲವನ್ನು ನಂಬುವ ವರಿಗೆ ಹಂಚಿಕೊಟ್ಟು ಅವರನ್ನು ನೀತಿವಂತರಾಗಿ ನಿರ್ಣಯಿಸುವ ವರೆಗೂ ಈ ಕಾರ್ಯವು ಯಾವ ಮಟ್ಟದಲ್ಲಿಯೂ ನೆರವೇರಲು ಸಾಧ್ಯವಾಗದೇ ಇತ್ತು. ಆದುದರಿಂದ ಯೇಸುವು ತನ್ನ ಶಿಷ್ಯರಿಗೆ

ಹೇಳಿದ್ದು, "ನನ್ನನ್ನು ನಂಬುವವನು ನಾನು ನಡೆಸುವ ಕ್ರಿಯೆಗಳನ್ನು ತಾನೂ ನಡಿಸುವನು; ಮತ್ತು ಅವುಗಳಿಗಿಂತ ಮಹತ್ತಾದ ಕ್ರಿಯೆಗಳನ್ನು ನಡಿಸುವನು. ಯಾಕೆಂದರೆ ನಾನು ತಂದೆಯ ಬಳಿಗೆ ಹೋಗುತ್ತೇನೆ."

ಮತ್ತು ಇದು ಈ ದಿನದಲ್ಲಿನ ಯೇಸುವಿನ ಹಿಂಬಾಲಕರ ವಿಷಯವೂ ಆಗಿರುವದು; ಆತನು ನಡೆಸಿದ್ದ ಕ್ರಿಯೆಗಳಿಗಿಂತಲೂ ಮಹತ್ತಾದ ಕ್ರಿಯೆಗಳನ್ನು ಇವರು ನಡೆಸಲು ಅನುವು ಮಾಡಲಾಗಿರುವದು. ಅವು ಈ ಅದ್ಭುಗಳಿಗಿಂತಲೂ ಮಹತ್ತಾದ ವುಗಳು ಕಾರಣ ಶಾರೀರಿಕವಾದ ಕಣ್ಣುಗಳನ್ನು ತೆರೆಯುವ ದಕ್ಕಿಂತಲೂ ಮನೋನೇತ್ರಗಳನ್ನು ತೆರೆಯುವದು ಖಂಡಿತ ವಾಗಿಯೂ ಮಹತ್ತಾದ ಅದ್ಭುತಕಾರ್ಯವಾಗಿರುವದು; ಶಾರೀರಿಕವಾದ ಕಿವಿಗಳನ್ನು ತೆರೆಯುವದಕ್ಕಿಂತಲೂ ಮನಸ್ಸಿನ ಕಿವಿಗಳನ್ನು ತೆರೆಯುವುದು ಹೆಚ್ಚು ಆಶ್ಚರ್ಯಕರವಾದದ್ದು; ಮೂಕನು ತನ್ನ ಮನಸ್ಸಿನಲ್ಲಿ ದೇವರಿಗೆ ಸ್ತೋತ್ರವನ್ನು ಹಾಡುವಂತೆ ಮಾಡುವದು ಸಹಜವಾಗಿ ನುಡಿಯುವಂತೆ ಮಾಡುವ ದಕ್ಕಿಂತಲೂ ಇನ್ನೂ ಮಹತ್ತದ ಕಾರ್ಯವಾಗಿರುವದು. ಯೇಸುವು ಮಾಡಿದ ಅದ್ಭುತಗಳಿಗಿಂತಲೂ ಮಹತ್ತಾದ ಕಾರ್ಯಗಳನ್ನು ನಾವು ಸ್ವತಃ ಮಾಡಲು ಸಾಧ್ಯವೆನ್ನುವದಲ್ಲ, ಇಲ್ಲವೇ ಇವುಗಳನ್ನು ನಾವು ಮಹಾ ಪುರುಷರಂತೆ ಮಾಡಲು ಸಾಧ್ಯವೆಂಬುದೂ ಅಲ್ಲ; ಯಾಕೆಂದರೆ ಆತನನ್ನು ಬಿಟ್ಟು ನಾವು ಏನೂ ಮಾಡಲಾರೆವು. ರೋಗಿಗಳನ್ನು ಗುಣಪಡಿಸಲು ಮತ್ತು ದೆವ್ವಗಳನ್ನು ಬಿಡಿಸಲು ಅಪೋಸ್ತಲರನ್ನು ಕಳುಹಿಸಿಕೊಟ್ಟಾಗ ಅವರು ನಡೆಸಿದ ಕಾರ್ಯಗಳನ್ನು ಮಾಡಿದುದು ಯೇಸುವೇ. ಹಾಗೆಯೇ ಈಗಲೂ ತನ್ನ ಪ್ರತಿಷ್ಠಿತರ ಮೂಲಕ ಮಹತ್ತಾದ ಕಾರ್ಯಗಳನ್ನು ನಡೆಸುತ್ತಿರುವವನು ಯೇಸುವೇ.

## ಬೇರೊಂದು ಗುಂಪಿಗೆ ಅದ್ಭುತವಾಗಿ ಆಹಾರ ಒದಗಿಸಿದ್ದು

ಈ ಪಾಠದ ಮುಕ್ತಾಯ ಭಾಗದ ವಿವರಣೆಯಲ್ಲಿ ಹೇಳಿರುವ, ಏಳು ರೊಟ್ಟಿಯಿಂದ ನಾಲ್ಕು ಸಾವಿರ ಜನರಿಗೆ ಊಟಮಾಡಿಸಿ ಏಳು ಹೆಡಿಗೆ ರೊಟ್ಟಿಯ ತುಂಡುಗಳನ್ನು ಕೂಡಿಸಿದ ಸಂಗತಿಯು ಯೇಸುವಿನ ಶಕ್ತಿಯ ಅಥವಾ, ಆತನೇ ವ್ಯಕ್ತಪಡಿಸಿ ಹೇಳಿರುವಂತೆ, ಆತನಲ್ಲಿದ್ದ ದೇವರ ಶಕ್ತಿಯ ಮತ್ತೊಂದು ಪ್ರದರ್ಶನವಾಗಿತ್ತು. ಐದು ಸಾವಿರ ಜನರಿಗೆ ಊಟಮಾಡಿಸಿದಾಗ ಐದು ರೊಟ್ಟಿ ಮತ್ತು ಎರಡು ಮೀನನ್ನು ಬಳಸಲಾಗಿತ್ತು ಮತ್ತು ಅವುಗಳನ್ನು ಒಬ್ಬ ಚಿಕ್ಕ ಹುಡುಗನಿಂದ ಪಡಕೊಂಡದ್ದಾಗಿತ್ತು. ಈ ಸಂದರ್ಭದಲ್ಲಿ ಶಿಷ್ಯರಲ್ಲಿಯೇ ಏಳು ರೊಟ್ಟಿಗಳಿದ್ದವು ಹಾಗು ಅವರು ಜನರಗುಂಪಿಗೆ ಊಟಮಾಡಿಸು ವದಕ್ಕಾಗಿ ತಮ್ಮಲ್ಲಿದ್ದ ಎಲ್ಲವನ್ನೂ ಕೊಟ್ಟುಬಿಟ್ಟಿದ್ದರು ಮತ್ತು ಎಲ್ಲರೂ ಸಾಕಾಗುವಷ್ಟನ್ನು ಹೊಂದಿದ್ದರು ಅಲ್ಲದೆ ನಮ್ಮ ಒಡೆಯನ ಆದೇಶದ ಅನುಸಾರವಾಗಿ ಮಿಕ್ಕ ರೊಟ್ಟಿ ತುಂಡುಗಳನ್ನು ಮತ್ತೆ ಕೂಡಿಸಲಾಗಿತ್ತು.

ಈ ಎರಡು ಸಂದರ್ಭಗಳಲ್ಲಿಯೂ ಒಡೆಯನು ಮಿತವನ್ನು ತೋರಿಸಿಕೊಟ್ಟಿದ್ದು ತನ್ನ ಹಿಂಬಾಲಕರಲ್ಲಿಯೂ ಮಿತವ್ಯಯವನ್ನು ಪ್ರೋತ್ಸಾಹಿಸಿದ್ದನೆಂಬುದು ಗಮನಾರ್ಹವಾದುದು. ನಿಸ್ಸಂದೇಹ ವಾಗಿಯೂ ಅತನಿಗೆ ಬಗೆಬಗೆಯ ರಸವತ್ತಾದ ಭಾರೀ ತಿಂಡಿತಿನಿಸುಗಳನ್ನು ಉಂಟುಮಾಡುವುದು ಅಷ್ಟೇ ಸುಲಭ ವಾಗಿತ್ತು. ಆಗ ಬಳಸಲಾಗಿದ್ದ ರೊಟ್ಟಿಯು ಪಾಲೆಸ್ತೀನಾದಲ್ಲಿನ ಸ್ಥಳೀಯರು ಈಗಲೂ ಬಳಸುವ ರೀತಿಯದೇ ಅಗಿತ್ತು; ಅದು ನಮ್ಮ ದೊಡ್ಡ ಸಿಹಿರೊಟ್ಟಿಗಳ (ಬನ್ನು) ಗಾತ್ರದಾಗಿದ್ದು ಅವುಗಳನ್ನು ಸಂಪೂರ್ಣವಾಗಿ ಗೋದಿಹಿಟ್ಟಿನಿಂದ ಮಾಡಲಾಗುತ್ತಿತ್ತು. ಐಗುಪ್ತ ಮತ್ತು ಪಾಲೆಸ್ತೀನಾದ ಸ್ಥಳೀಯರಲ್ಲಿ ಅನೇಕ ದೃಢಕಾಯರು ಹೆಚ್ಚುಕಡಿಮೆ ಪೂರ್ಣವಾಗಿ ಈ ರೊಟ್ಟಿಯ ಮೂಲಕವೇ ಜೀವಿಸುತ್ತಿರುವಂತೆ ಕಾಣುವದು; ಸುಮಾರು ಎರಡು ರೊಟ್ಟಿಗಳು ಅವರ ಒಂದು ಸಾರಿಯ ಊಟವಾಗಿರುವದು. ನಮ್ಮಲ್ಲಿ ಕೆಲವರು ಇದೇ ಬಗೆಯ ಸಾಧಾರಣವಾದ ಆಹಾರದ ಮೂಲಕ ಅಷ್ಟೇ ಆರೋಗ್ಯವಂತರೂ ದೃಢಕಾಯರೂ ಆಗಿರಲು ಖಂಡಿತ ವಾಗಿಯೂ ಸಾಧ್ಯ. ದೇವರಲ್ಲಿ ನಂಬಿಕೆಯನ್ನಿಟ್ಟು ನಮ್ಮ ಅನುದಿನದ ಆಹಾರವನ್ನು ಕೃತಜ್ಞತಾಪೂರ್ವಕವಾದ ಹೃದಯವುಳ್ಳವರಾಗಿ ಬಳಸುವದು ನಮಗೆ ಬಿಟ್ಟದ್ದು; ಎಷ್ಟು ಸರಳವಾಗಿದ್ದರೂ ಅದು ದೇವಾಶೀರ್ವಾದದಿಂದ ಕೂಡಿರುವದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಮಗದಾನ ಸೀಮೆ | ಸದ್ದುಕಾಯರು ಮತ್ತು ಫರಿಸಾಯರು ಒಂದು ಸೂಚನೆಯನ್ನು ಕೇಳಿಕೊಂಡದ್ದು | 15:39–16:4 | 8:10–26 | –– | –– |
| | ಬೇತ್ಸಾಯಿದ, ಗಲಿಲಾಯ ಸಮುದ್ರದ ಈಶಾನ್ಯ ಭಾಗ | ಫರಿಸಾಯರ ಹುಳಿಹಿಟ್ಟಿನ ವಿಷಯದಲ್ಲಿ ಎಚ್ಚರಿಸಿದ್ದು, ಕುರುಡನನ್ನು ಸ್ವಸ್ಥಪಡಿಸಿದ್ದು | 16:5–12 | –– | –– | –– |

## ಮತ್ತಾಯ 15:39–16:12

ಬಳಿಕ ಆತನು ಆ ಜನರ ಗುಂಪನ್ನು ಕಳುಹಿಸಿಬಿಟ್ಟು ದೋಣಿಯನ್ನು ಹತ್ತಿ ಮಗದಾನ ಸೀಮೆಗೆ ಬಂದನು. ತರುವಾಯ ಫರಿಸಾಯರೂ ಸದ್ದುಕಾಯರೂ ಬಂದು ಪರೀಕ್ಷಿಸುವದಕ್ಕಾಗಿ– ನೀನು ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ತೋರಿಸಿಕೊಡಬೇಕೆಂದು ಕೇಳಿದರು. ಆತನು ಅವರಿಗೆ– ಸಂಜೆವೇಳೆಯಲ್ಲಿ ನೀವು–ಆಕಾಶವು ಕೆಂಪಾಗಿದೆ. ನಿರ್ಮಲದಿನ ಬರುವದು ಅನ್ನುತ್ತೀರಿ; ಬೆಳಿಗ್ಗೆ–ಆಕಾಶವು ಮೋಡಮುಚ್ಚಿಕೊಂಡು

ಕೆಂಪಾಗಿದೆ, ಈ ಹೊತ್ತು ಗಾಳಿ ಮಳೆ ಅನ್ನುತ್ತೀರಿ ಅಲ್ಲವೇ. ಆಕಾಶದ ಸ್ಥಿತಿಯನ್ನು ನೋಡಿ ಇದು ಹೀಗೆ ಅದು ಹಾಗೆ ಅನ್ನುವದಕ್ಕೆ ಬಲ್ಲಿರಿ; ಆದರೆ ಈ ಕಾಲದ ಸೂಚನೆಗಳನ್ನು ತಿಳುಕೊಳ್ಳಲಾರಿರಿ. ವ್ಯಭಿಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ; ಆದರೆ ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವುದೂ ಇದಕ್ಕೆ ಸಿಕ್ಕುವದಿಲ್ಲ ಎಂದು ಉತ್ತರಕೊಟ್ಟು ಅವರನ್ನು ಬಿಟ್ಟುಹೋದನು.

ಶಿಷ್ಯರು ರೊಟ್ಟೀಬುತ್ತಿ ಕಟ್ಟಿಕೊಳ್ಳುವದನ್ನು ಮರೆತು ಆಚೇದಡಕ್ಕೆ ಬಂದಾಗ ಯೇಸು ಅವರಿಗೆ–ಎಚ್ಚರಿಕೆ, ಫರಿಸಾಯರ ಮತ್ತು ಸದ್ದುಕಾಯರ ಹುಳಿಹಿಟ್ಟಿನ ವಿಷಯದಲ್ಲಿ ಜಾಗರೂಕರಾಗಿರಿ ಎಂದು ಹೇಳಲು ಅವರು–ನಾವು ರೊಟ್ಟೀಬುತ್ತಿ ಕಟ್ಟಿಕೊಳ್ಳದೆ ಬಂದೆವಲ್ಲಾ ಎಂದು ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಯೇಸು ಅದನ್ನು ತಿಳಿದು–ಅಲ್ಪ ವಿಶ್ವಾಸಿಗಳೇ, ರೊಟ್ಟಿಯಿಲ್ಲವಲ್ಲಾ ಎಂದು ನಿಮ್ಮೊಳಗೆ ಮಾತಾಡಿಕೊಳ್ಳುವದೇಕೆ? ನೀವು ಇನ್ನೂ ಗ್ರಹಿಸಲಿಲ್ಲವೋ? ನಿಮಗೆ ನೆನಪಿಲ್ಲವೋ? ಆ ಐದು ರೊಟ್ಟಿಗಳನ್ನು ಐದು ಸಾವಿರ ಜನರಿಗೆ ಹಂಚಿದಾಗ ಎಷ್ಟು ಪುಟ್ಟಿ ತುಂಬಿಟ್ಟಿರಿ? ಇಲ್ಲವೆ ಆ ಏಳು ರೊಟ್ಟಿಗಳನ್ನು ನಾಲ್ಕು ಸಾವಿರ ಜನರಿಗೆ ಹಂಚಿದಾಗ ಎಷ್ಟು ಹೆಡಿಗೆ ತುಂಬಿಟ್ಟಿರಿ? ನಾನು ರೊಟ್ಟಿಯನ್ನು ಕುರಿತು ಮಾತಾಡಲಿಲ್ಲವೆಂದು ನಿಮಗೆ ತಿಳಿಯದೆ ಇರುವದು ಹೇಗೆ? ಎಚ್ಚರಿಕೆ, ಫರಿಸಾಯರ ಮತ್ತು ಸದ್ದುಕಾಯರ ಹುಳಿಹಿಟ್ಟಿನ ವಿಷಯದಲ್ಲಿ ಜಾಗರೂಕರಾಗಿರಿ ಅಂದನು. ಆಗ ಅವರು ರೊಟ್ಟಿಯ ಹುಳಿಹಿಟ್ಟನ್ನು ಕುರಿತು ಎಚ್ಚರಿಕೆಯಾಗಿರಬೇಕೆಂದು ಆತನು ತಮಗೆ ಹೇಳಲಿಲ್ಲ, ಫರಿಸಾಯರ ಮತ್ತು ಸದ್ದುಕಾಯರ ಬೋಧನೆಯನ್ನು ಕುರಿತು ಎಚ್ಚರಿಕೆಯಾಗಿರಬೇಕೆಂದು ಹೇಳಿದನು ಎಂಬದಾಗಿ ತಿಳುಕೊಂಡರು.

## ಮಾರ್ಕ 8:10–26

ಬಳಿಕ ಆತನು ಅವರನ್ನು ಕಳುಹಿಸಿಬಿಟ್ಟು ಕೂಡಲೆ ತನ್ನ ಶಿಷ್ಯರನ್ನು ಕರಕೊಂಡು ದೋಣಿಯನ್ನು ಹತ್ತಿ ದಲ್ಮನೂಥ ಸೀಮೆಗೆ ಬಂದನು. ತರುವಾಯ ಫರಿಸಾಯರು ಹೊರಟುಬಂದು ಆತನ ಕೂಡ ತರ್ಕಮಾಡುತ್ತಾ ಪರೀಕ್ಷಿಸುವದಕ್ಕಾಗಿ–ನೀನು ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ತೋರಿಸಿ ಕೊಡಬೇಕೆಂದು ಕೇಳುತ್ತಿರಲು ಆತನು ತನ್ನ ಆತ್ಮದಲ್ಲಿ ನೊಂದು ನಿಟ್ಟುಸಿರುಬಿಟ್ಟು–ಈ ಸಂತತಿಯು ಸೂಚಕಕಾರ್ಯವನ್ನು ಅಪೇಕ್ಷಿಸುವದು ಯಾಕೆ? ನಿಮಗೆ ಸತ್ಯವಾಗಿ ಹೇಳುತ್ತೇನೆ, ಈ ಸಂತತಿಗೆ ಸೂಚಕಕಾರ್ಯವು ಸಿಕ್ಕುವದೇ ಇಲ್ಲ ಎಂದು ಹೇಳಿ ಅವರನ್ನು ಬಿಟ್ಟು ತಿರಿಗಿ ದೋಣಿಯನ್ನು ಹತ್ತಿ ಆಚೇದಡಕ್ಕೆ ಹೋದನು.

ಆದರೆ ಶಿಷ್ಯರು ರೊಟ್ಟೀಬುತ್ತಿ ಕಟ್ಟಿಕೊಳ್ಳುವದನ್ನು ಮರೆತರು. ದೋಣಿಯಲ್ಲಿ ಅವರಿಗೆ ಒಂದು ರೊಟ್ಟಿ ಮಾತ್ರ ಇತ್ತು; ಬೇರೆ ಇರಲಿಲ್ಲ. ಯೇಸು ಅವರಿಗೆ–ಎಚ್ಚರಿಕೆ, ಫರಿಸಾಯರ ಮತ್ತು ಹೆರೋದನ ಹುಳಿಹಿಟ್ಟಿನ ವಿಷಯದಲ್ಲಿ ನೋಡಿಕೊಳ್ಳಿರಿ ಎಂದು ಖಂಡಿತವಾಗಿ ಹೇಳಲು ಅವರು–ನಮ್ಮಲ್ಲಿ ರೊಟ್ಟಿಯಿಲ್ಲವಲ್ಲಾ ಎಂದು ತಮ್ಮತಮ್ಮೊಳಗೆ ಮಾತಾಡಿಕೊಳ್ಳುತ್ತಿದ್ದರು. ಆತನು ಅದನ್ನು ತಿಳಿದು–ರೊಟ್ಟಿಯಿಲ್ಲವಲ್ಲಾ ಎಂದು ಮಾತಾಡಿಕೊಳ್ಳುವದೇಕೆ? ನೀವು ಇನ್ನೂ ಗ್ರಹಿಸಲಿಲ್ಲವೋ? ತಿಳುವಳಿಕೆ ಬರಲಿಲ್ಲವೋ? ನಿಮ್ಮ ಮನಸ್ಸು ಕಲ್ಲಾಗಿದೆಯೋ? ಕಣ್ಣಿದ್ದೂ ಕಾಣುವದಿಲ್ಲವೋ? ಕಿವಿಯಿದ್ದೂ ಕೇಳುವದಿಲ್ಲವೋ? ನಿಮಗೆ ನೆನಪಿಲ್ಲವೋ? ನಾನು ಆ ಐದು ರೊಟ್ಟಿಗಳನ್ನು ಮುರಿದು ಐದುಸಾವಿರ ಜನರಿಗೆ ಹಂಚಿಸಿದಾಗ ತುಂಡುತುಂಬಿದ ಎಷ್ಟು ಪುಟ್ಟಿಗಳನ್ನು ತೆಗೆದುಕೊಂಡು ಹೋದಿರಿ ಎಂದು ಕೇಳಿದ್ದಕ್ಕೆ ಅವರು–ಹನ್ನೆರಡು ಪುಟ್ಟಿ ಅಂದರು. ಮತ್ತು ಆ ಏಳು ರೊಟ್ಟಿಗಳನ್ನು ನಾಲ್ಕುಸಾವಿರ ಜನರಿಗೆ ಹಂಚಿಸಿದಾಗ ತುಂಡು ತುಂಬಿದ ಎಷ್ಟು ಹೆಡಿಗೆಗಳನ್ನು ತೆಗೆದುಕೊಂಡು ಹೋದಿರಿ ಎಂದು ಕೇಳಿದ್ದಕ್ಕೆ ಅವರು–ಏಳು ಹೆಡಿಗೆ ಅಂದರು. ಆಗ ಆತನು ಅವರಿಗೆ–ನಿಮಗೆ ಇನ್ನೂ ತಿಳುವಳಿಕೆ ಬರಲಿಲ್ಲವೇ? ಎಂದು ಹೇಳಿದನು.

ಮತ್ತು ಅವರು ಬೇತ್ಸಾಯಿದ ಊರಿಗೆ ಬಂದರು. ಅಲ್ಲಿ ಜನರು ಒಬ್ಬ ಕುರುಡನನ್ನು ಯೇಸುವಿನ ಬಳಿಗೆ ಕರಕೊಂಡು ಬಂದು–ಇವನನ್ನು ಮುಟ್ಟಬೇಕು ಎಂದು ಆತನನ್ನು ಬೇಡಿಕೊಂಡರು. ಆತನು ಕುರುಡನ ಕೈ ಹಿಡುಕೊಂಡು ಊರ ಹೊರಕ್ಕೆ ಕರಕೊಂಡು ಹೋಗಿ ಅವನ ಕಣ್ಣುಗಳಲ್ಲಿ ಉಗುಳಿ ಅವನ ಮೇಲೆ ಕೈಯಿಟ್ಟು–ನಿನಗೇನಾದರೂ ಕಾಣುತ್ತದೋ? ಎಂದು ಅವನನ್ನು ಕೇಳಿದನು. ಅವನು ತಲೆಯೆತ್ತಿ ನೋಡಿ–ನನಗೆ ಜನರು ಕಾಣುತ್ತಾರೆ; ಅವರು ಮರಗಳಂತೆ ಕಾಣಿಸಿದರೂ ತಿರುಗಾಡುತ್ತಾ ಇದ್ದಾರೆ ಅಂದನು. ಆಗ ಆತನು ಅವನ ಕಣ್ಣುಗಳ ಮೇಲೆ ತಿರಿಗಿ ಕೈಯಿಟ್ಟನು; ಅವನು ಕಣ್ಣುಬಿಟ್ಟು ನೋಡಲು ಅವನಿಗೆ ಗುಣವಾಗಿತ್ತು; ಎಲ್ಲವೂ ಸ್ಪಷ್ಟವಾಗಿ ಕಾಣಿಸಿತು. ತರುವಾಯ ಆತನು–ನೀನು ಊರೊಳಕ್ಕೇನೂ ಹೋಗಬೇಡ ಎಂದು ಹೇಳಿ ಅವನನ್ನು ಅವನ ಮನೆಗೆ ಕಳುಹಿಸಿಬಿಟ್ಟನು.

# ಆಕಾಶದಲ್ಲಿ ಒಂದು ಸೂಚನೆ

**ರೀಪ್ರಿಂಟ್ಸ್ ಪುಟ 5111**

## ಮಾರ್ಕ 8:11–26

**"ಯೇಸು ತಿರಿಗಿ ಅವರ ಸಂಗಡ ಮಾತನಾಡಲಾರಂಭಿಸಿ–ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು. – ಯೋಹಾನ 8:12**

ಯೇಸುವಿನ ದಿನದಲ್ಲಿದ್ದ ಧಾರ್ಮಿಕರು ಹಾಗು ಬೋಧಕರಲ್ಲಿ ಪ್ರಮುಖರಾಗಿದ್ದ ಶಾಸ್ತ್ರಿಗಳು ಮತ್ತು ಫರಿಸಾಯರು ಯೇಸುವು ಜನರನ್ನು ತಲುಪುವುದರಲ್ಲಿ ಯಶಸ್ಸಾಗಿದ್ದುದನ್ನು ನೋಡಿ ಕಂಗಾಲಾಗಿ ತೊಂದರೆಗೊಳಗಾಗಿದ್ದರು. ಆತನನ್ನು ಸಂತೋಷದಿಂದ ಕೇಳುತ್ತಿದ್ದವರು ಮುಖ್ಯವಾಗಿ ಸಾಮಾನ್ಯ ಜನರಾಗಿದ್ದುದು ನಿಜ. ಯೆಹೂದ್ಯರ ಧಾರ್ಮಿಕ ಬೋಧಕರು ಅವರನ್ನು "ಸುಂಕದವರು ಮತ್ತು ಪಾಪಿಗಳು' ಎಂದು ಹೆಸರಿಸಿ ಅವರನ್ನು ತಿರಸ್ಕಾರದಿಂದ ನೋಡುತ್ತಿದ್ದು ಅವರನ್ನು ಸಹೋದರರೆಂದು ಅಂಗೀಕರಿಸಲು ನಿರಾಕರಿಸಿದ್ದರು. ಅವರು ಯೇಸುವು ತಮಗೆ ಒಬ್ಬ ಪ್ರತಿಸ್ಪರ್ಧಿಯಾಗಿ ಯಶಸ್ಸಿನಲ್ಲಿರುವನೆಂದು ಎಣಿಸಿ ಹೆದರಿಕೊಂಡಿದ್ದರು. ಇದಕ್ಕೆ ಕಾರಣವೇನೂ ಇಲ್ಲದೆ ಇರಲಿಲ್ಲ, ಏಕೆಂದರೆ ಒಬ್ಬ ಬೋಧಕನಾಗಿ ಯೇಸುವಿನ ಉತ್ಕೃಷ್ಟತೆಯ ಕಾರಣದ ದೆಸೆಯಿಂದ ಬೋಧಕರಾಗಿ ಅವರ ಸ್ವಂತ ಪ್ರಖ್ಯಾತಿಯು ಕುಂದಿಹೋಗುತ್ತಿತ್ತು. ಆತನ "ಅದ್ಭುತವಾದ ಸಜ್ಜೀವವಾಕ್ಯಗಳು" ಅನೇಕರ ಹೃದಯಗಳನ್ನು ಸ್ಪರ್ಶಿಸಿತ್ತು.

ಈ ಫರಿಸಾಯರು ಯೇಸುವನ್ನು "ಪರೀಕ್ಷಿಸಿ" ಆತನಲ್ಲಿ ವಿಶೇಷವಾಗಿ ತಪ್ಪುಕಂಡುಹಿಡಿಯಲು ಬಂದಿದ್ದರು. ಆಕಾಶದಲ್ಲಿ ಒಂದು ಸೂಚನೆಯನ್ನು ಅವರು ಕೇಳಿಕೊಂಡಿದ್ದರು. ರೋಗಿಗಳನ್ನು ಗುಣಪಡಿಸುವದು ಮುಂತಾದವುಗಳಿಂದ ಜನರಿಗೆ ನೀಡುತ್ತಿದ್ದ ಅನೇಕ ಸೂಚನೆಗಳನ್ನು ಉಪೇಕ್ಷಿಸುವಂತೆ ಮಾಡುವದು ಅವರ ನಿಜವಾದ ಉದ್ದೇಶವಾಗಿತ್ತು. ಈ ಎಲ್ಲವನ್ನೂ ನಿರ್ಲಕ್ಷಿಸುವವರಾಗಿ ಅವರು ಹೇಳಿದ್ದು: ಯಾವ ಸೂಚನೆಯನ್ನು ನಮಗಾಗಿ ಆಕಾಶದಲ್ಲಿ ತೋರಿಸಲು ನಿನಗೆ ಸಾಧ್ಯ? ನಮಗಾಗಿ ಆಕಾಶದಲ್ಲಿ ಒಂದು ಸೂಚನೆಯನ್ನು ತೋರಿಸಿಕೊಡು; ಆಗ ನಾವು ನಿನ್ನನ್ನು ನಂಬುವೆವು.

ಮೆಸ್ಸೀಯನು ಮಾಡುವ ಕಾರ್ಯಗಳ ವಿಷಯದಲ್ಲಿ ತಮ್ಮದೇ ಆದ ಕಲ್ಪನೆಹೊಂದಿದ್ದ ಯೆಹೂದ್ಯರ ಪ್ರಮುಖ ಅಧಿಕಾರಿಗಳಿಂದ ತಾನು ಮೆಸ್ಸೀಯನೆಂಬುದಕ್ಕೆ ಸಾಕ್ಷಿಯಾಗಿ ಯೇಸುವು ಮಾಡುತ್ತಿದ್ದ ಕಾರ್ಯಗಳ ಬಗ್ಗೆ ಕೆಲಮಟ್ಟಿನ ಸಹಾನುಭೂತಿಯನ್ನು ಪಡೆಯ ಸಮರ್ಥನಾಗಲು ಆ ಕಾಲದಲ್ಲಿದ್ದ ಸಂಗತಿಗಳು ಎಷ್ಟೋ ವಿಭಿನ್ನವಾಗಿದ್ದವೆಂಬುದು ನಾವು ನೆನಪಿನಲ್ಲಿಡಬೇಕು. ಮೆಸ್ಸೀಯನ ಬಗ್ಗೆ ಪ್ರವಾದನೆಗಳು ಹಲವಾರು ಸಂಗತಿಗಳನ್ನು ಹೇಳಿದ್ದವು; ಆದರೆ ಅವರು ಅವುಗಳನ್ನು ಓದುವಾಗ ಆತನ ಮಹಿಮೆಯ ಮತ್ತು ಯೆಹೂದ್ಯ ಜನಾಂಗಕ್ಕೆ ಲಭಿಸುವ ಅಧಿಕಾರಗಳ ಬಗ್ಗೆ ಹಾಗು ಯೆಹೂದ್ಯ ಜನಾಂಗವು ಕಡೆಯಲ್ಲಿ ಎಲ್ಲಾ ಜನಾಂಗಗಳಿಗೂ ನೀಡುವ ಆಶೀರ್ವಾದಗಳ ಅಂದರೆ ಮೆಸ್ಸೀಯನ ರಾಜ್ಯದಲ್ಲಿ ಲೋಕಕ್ಕಾ ಗುವ ಆಶೀರ್ವಾದಗಳ ಬಗ್ಗೆ ವಿಶೇಷವಾದ ಗಮನನೀಡಿದ್ದರು. ಆದರೆ ಶಾಸ್ತ್ರವಚನಗಳು ಹೇಳುವ ಬೇರೆ ವಿಧವಾದ ಸಂಗತಿಗಳನ್ನು ಅವರು ನಿರ್ಲಕ್ಷಿಸುವವರಾಗಿ ಅವುಗಳನ್ನು ಜಾಗರೂಕತೆಯಿಂದ ಅಥವಾ ಗಾಢವಾಗಿ ಅಧ್ಯಯನ ಮಾಡಿರಲಿಲ್ಲ.

ಈ ಇತರ ಶಾಸ್ತ್ರವಚನಗಳು ಮೆಸ್ಸೀಯನು ಹೇಗೆ "ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲಿಲ್ಲ." {ತಾನು ಖಂಡನೆಗೊಳಗಾಗಿ ಮರಣದಂಡನೆ ಯಿಂದ ತಪ್ಪಿಸಿಕೊಳ್ಳಸಲುವಾಗಿ ಬಾಯಿ ತೆರೆಯಲ್ಲಿಲ್ಲವೆಂಬ ಅರ್ಥದಲ್ಲಿ ಆತನು "(ಮೂಕನಂತೆ) ಮೌನವಾಗಿದ್ದನು} ಆತನು ಹೇಗೆ "ಬಂದಿಗಳಿಗೆ ಕದ ತೆರೆಯುವದನ್ನು" ಬೋಧಿಸುವನೆಂಬುದನ್ನು ಮತ್ತು ಕುರುಡರ ಕಣ್ಣುಗಳನ್ನು ತೆರೆಯುವನು ಎಂಬುದನ್ನು ಅವರಿಗೆ ತಿಳಿಸಿದ್ದವು; ಆದರೆ ಅವರು ಇವುಗಳನ್ನು ಮೆಸ್ಸೀಯನು "ಆತನು ಧಿಕ್ಕರಿಸಲ್ಪಟ್ಟನು, ಮನುಷ್ಯರು ಸೇರಿಸಿಕೊಳ್ಳದವನು" ಜನರು ನಾಚಿಕೆಯಿಂದ ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾಗುವ ಕಾಲಗಳಿಗೆ ಹೊಂದಿಸುವದಕ್ಕೆ ಬದಲಾಗಿ ಆತನ ಮಹಿಮೆಯುಳ್ಳ ರಾಜ್ಯಕ್ಕೆ ಜೊತೆಗೂಡಿಸಿದ್ದರು.

ಅವರು ಶಾಸ್ತ್ರವಚನಗಳನ್ನು ಸರಿಯಾಗಿ ಅಧ್ಯಯನ ಮಾಡಬೇಕಾಗಿತ್ತೆಂಬುದು ನಿಜ. ಈ ತಪ್ಪನ್ನು ಮಾಡಿದ್ದರಲ್ಲಿ ಅವರನ್ನು ದೋಷಿಗಳಾಗಿ ಮಾಡಲಾಗದೆಂದು ಹೇಳಬಹುದು; ಇದು ಒಂದು ಅರ್ಥದಲ್ಲಿ ನಿಜವಾಗಿರಬಹುದು. ಇದಕ್ಕೆ ಬದಲಾಗಿ ನಾವು ನೆನಪಿನಲ್ಲಿಡಬೇಕಾದುದೆಂದರೆ ಅವರಿಗಿದ್ದ ನಿಜವಾದ ಅಡ್ಡಿಯು ಅವರ ಹೆಮ್ಮೆಯ ಹೃದಯ ಹಾಗು ಎಲ್ಲವೂ–ತಮಗೆ–ತಿಳಿದಿರುವದೆಂಬ ಮನೋಭಾವವೆಂಬದು. ಅವರಿಗೆ ದೀನಭಾವದ ಕೊರತೆಯಿದ್ದದರಿಂದ ಅವರು ಕಲಿತುಕೊಂಡು ತಮ್ಮನ್ನು ತಿದ್ದಿಕೊಳ್ಳಲಾಗಲಿಲ್ಲ. ಯೇಸುವಿನ ಸಂದೇಶವನ್ನು ಅಂಗೀಕರಿಸಿದ "ನಿಜವಾದ ಇಸ್ರಾಯೇಲ್ಯರು" ಪ್ರವಾದನೆಗಳ ಬಗ್ಗೆ ನಿಸ್ಸಂದೇಹವಾಗಿಯೂ ಇದೇ ರೀತಿಯಲ್ಲಿ ತಪ್ಪಾಗಿ ಅರ್ಥ ಮಾಡಿಕೊಂಡಿದ್ದರು; ಆದರೆ ನಿಶ್ಚಿತಾಭಿಪ್ರಾಯ ಹೊಂದುವ ಬಗ್ಗೆ ತೆರೆದ ಮನಸ್ಸುಳ್ಳವರಾಗಿದ್ದು ತಾವು ಮಾರ್ಗದರ್ಶನ ಹೊಂದಿ ನಡೆಸಲ್ಪಡುವದಕ್ಕೆ ಸಿದ್ಧರಾಗಿದ್ದರು. ಮತ್ತು ಇವರಿಗೆ ಒಡೆಯನ ಉಪದೇಶಗಳು ಆಕರ್ಶಿತವಾಗಿಯೂ ಆಶೀರ್ವಾದಕರವಾಗಿಯೂ ಆಶ್ಚರ್ಯಕರವಾಗಿಯೂ ಇದ್ದವು. ಕ್ಲುಪ್ತ ಕಾಲವು ಬಂದಾಗ ಅವರು ಕ್ರಮೇಣ ದೇವರ ಯೋಜನೆಯ ಪ್ರತಿಯೊಂದು ಮುಖ್ಯಲಕ್ಷಣಗಳ ಬಗ್ಗೆ ಸರಿಯಾದ ಗ್ರಹಿಕೆಗೆ ನಡೆಸಲ್ಪಟ್ಟವರಾಗಿದ್ದು ಹೀಗೆ ಅವರು ನಿಗದಿತ ಸಮಯವು ಬಂದಾಗ ಪಂಚಾಶತ್ತಮ ದಿನದ ಆಶೀರ್ವಾದಗಳಿಗೆ ಸಿದ್ಧರಾಗಿದ್ದು ಆಯಲ್ಪಟ್ಟವರಲ್ಲಿ ತಾವೂ ಭಾಗಿಗಳೆಂಬುನ್ನು ತೋರ್ಪಡಿಸಿಕೊಂಡಿದ್ದರು. ಮೆಸ್ಸೀಯನಿಗೆ ಮದಲಗಿತ್ತಿಯಾಗಿ ಆತನ ರಾಜ್ಯದಲ್ಲಿ ಸಹಬಾಧ್ಯರಾಗಲು ದೇವರು ಅವರನ್ನು ಆದುಕೊಳ್ಳುತ್ತಿದ್ದನು.

## ಯೋನನಲ್ಲಾದ ಸೂಚಕಕಾರ್ಯವೇ ಹೊರತು ಬೇರೆ ಯಾವದೂ ಸಿಕ್ಕದು

ಯೇಸುವು ನೊಂದು ನಿಟ್ಟುಸಿರುಬಿಟ್ಟು "ಈ ಸಂತತಿಯು ಸೂಚಕಕಾರ್ಯವನ್ನು ಅಪೇಕ್ಷಿಸುವದು ಯಾಕೆ?" ಎಂದು ಹೇಳಿ ಸೂಚಕಕಾರ್ಯವನ್ನು ಕೊಡಲು ನಿರಾಕರಿಸಿ ಅವರನ್ನು ಬಿಟ್ಟು ತಿರಿಗಿ ದೋಣಿಯನ್ನು ಹತ್ತಿ ಆಚೇದಡಕ್ಕೆ ಹೋದನೆಂದು ನಮ್ಮ ಪಾಠವು ತಿಳಿಸುತ್ತದೆ. ಭಕ್ತನಾದ ಮತ್ತಾಯನು (ಮತ್ತಾಯ 16:1–4) ಈ ಪ್ರಶ್ನೆ ಹಾಗು ಅದರ ಉತ್ತರದ ಬಗ್ಗೆ ಹೆಚ್ಚು ವಿವರವಾಗಿ ಹೇಳಿರುವನು: ಯೇಸುವು ತಾನು ಫರಿಸಾಯರಿಗಾಗಿ ಹೇರಳವಾಗಿ ಮಾಡುತ್ತಿದ್ದ ಸೂಚಕಕಾರ್ಯಗಳನ್ನು ಅವರ ಗಮನಕ್ಕೆ ತಂದು

ಅವರಿಗೆ ಆನಂತರ ಹೇಳಿದ್ದೇನೆಂದರೆ ಆ ಜನಾಂಗಕ್ಕೆ ಒಂದು ವಿಶೇಷವಾದ ಸೂಚಕಕಾರ್ಯವು ನೀಡಲಾಗುವದೆಂಬುದು; ಆದರೆ ಕಲ್ವಾರಿಯವರೆಗೂ ಅದನ್ನು ಕೊಟ್ಟಿರಲಿಲ್ಲ. ಅಪೋಸ್ತಲರ ಕೃತ್ಯಗಳಲ್ಲಿ ತಿಳಿಸಿರುವ ಪಂಚಾಶತ್ತಮ ದಿನದಂದು ಸಾವಿರಾರು ಜನರು ಸ್ನಾನದೀಕ್ಷೆ ಹೊಂದಿದ ಸಂಗತಿಯ ಮೂಲಕ ಮತ್ತು ಆನಂತರ ಭಕ್ತನಾದ ಪೇತ್ರನು ಯೇಸುವಿನ ಮರಣ, ಮೂರು ದಿನಗಳು ಆತನು ಸಮಾಧಿಯಲ್ಲಿ ಇದ್ದದ್ದು ಹಾಗು ಮೂರನೆಯ ದಿನದಂದು ಪುನರುತ್ಥಾನ ಹೊಂದಿದ ವಿಷಯವಾಗಿ ಮಾಡಿದ ಉಪದೇಶದ ಮೂಲಕ ಸ್ಪಷ್ಟವಾಗಿದ್ದೇನೆಂದರೆ, ಆ "ಸೂಚಕಕಾರ್ಯವು" ಯೆಹೂದ್ಯರಲ್ಲಿ ಬಹು ಮಂದಿಯ ಮೇಲೆ ಪರಿಣಾಮ ಬೀರಿರಲಿಲ್ಲವೆಂಬುದು.

ಯೇಸುವು ಯೋನನ ವಿಷಯವಾದ ಸೂಚನೆಯನ್ನು ಉಲ್ಲೇಖಿಸಿ ಆತನು (ಭಾಗಶಃ) ಮೂರು ದಿನಗಳು ಹಗಲುರಾತ್ರಿ ಮೀನಿನ ಹೊಟ್ಟೆಯಲ್ಲಿದ್ದ ಹಾಗೆಯೇ ಮನುಷ್ಯ ಕುಮಾರನು ಅದೇ ಅವಧಿಯ ಕಾಲ ಭೂಗರ್ಭದಲ್ಲಿರುವನೆಂದೂ ಹಾಗೂ ಯೋನನು ಹೊರಬಂದ ಹಾಗೆಯೇ ಮನುಷ್ಯಕುಮಾರನು ಹೊರಬರುವನೆಂತಲೂ ಹೇಳಿದ್ದನು.

ನಮ್ಮ ಕರ್ತನ ಹೇಳಿಕೆಗೆ ವಿರೋಧವಾಗಿ ಉನ್ನತ ಮಟ್ಟದ ವಿಮರ್ಶಕರು (ಹೈಯರ್ ಕ್ರಿಟಿಕ್ಸ್) ಮಂಡಿಸಿರುವ ಪ್ರಸ್ತಾಪದ ಬಗ್ಗೆ ವಿವಾದಮಾಡಿಕೊಂಡಿರಲು ಅವರಿಗೇ ಬಿಟ್ಟಿರುವೆವು. ಉನ್ನತ ಮಟ್ಟದ ವಿಮರ್ಶಕರ (ಹೈಯರ್ ಕ್ರಿಟಿಕ್ಸ್) ಅನುಸಾರವಾಗಿ ಅವರ ಮಾತಿನ ಅರ್ಥದಲ್ಲಿ ಯೇಸುವು ಮತ್ತು ಅಪೋಸ್ತಲರು ಘೋರವಾಗಿ ಮೋಸಹೋಗಿದ್ದಾರೆಂಬುದು; ಆದರೆ ಯೇಸುವಿನ ಹಾಗು ಅಪೋಸ್ತಲರ ಅನುಸಾರ ಈ ಉನ್ನತ ಮಟ್ಟದ ವಿಮರ್ಶಕರೇ (ಹೈಯರ್ ಕ್ರಿಟಿಕ್ಸ್) ಘೋರವಾಗಿ ಮೋಸಹೋಗಿರುವರು. "ಮಾನುಷಜ್ಞಾನವನ್ನು" ಅವಲಂಬಿಸಿರುವವರನ್ನು ಹಾಗೆಯೇ ಇರುವದಕ್ಕೆ ಬಿಟ್ಟುಬಿಟ್ಟು, ನಾವು ದೇವರ ವಾಕ್ಯವನ್ನು ಅವಲಂಭಿಸುವದನ್ನು ಆರಿಸಿಕೊಳ್ಳುವೆವು.

## ಫರಿಸಾಯರ ಹುಳಿಹಿಟ್ಟು

ದೋಣಿಯಲ್ಲಿ ಸೇರಿದ ನಂತರ ಯೇಸುವು ತನ್ನ ಶಿಷ್ಯರಿಗೆ ಫರಿಸಾಯರ ಬೋಧನೆಯ ವಿಷಯವಾಗಿ ಎಚ್ಚರಿಕೆಕೊಟ್ಟಿದ್ದನು. ಅದನ್ನು ಈಸ್ಟ್ ಎಂಬ ಹುಳಿಗೆ ಹೋಲಿಸಿದ್ದನು. ಹುಳಿಯೆಂಬುದು ಒಂದು ಬಗೆಯ ಕಿಣ್ವವಾಗಿದ್ದು ವಿಶೇಷವಾಗಿ ಅದು ರೊಟ್ಟಿಯ ಹಿಟ್ಟಿನಲ್ಲಿ (ಉಬ್ಬಿಕೊಂಡು) ಹರಡಿಕೊಳ್ಳುವ ಗುಣವುಳ್ಳದ್ದಾಗಿರುವದು. ದೇವರ ವಾಕ್ಯವು ಸತ್ಯವಾಗಿದ್ದು, ರೊಟ್ಟಿಯಾಗಿ ಅದು ದೇವಜನರನ್ನು ಪೋಷಣೆಮಾಡುತ್ತಿರುವದು. ಆದರೆ ಅವರು ಹುಳಿಯಿಲ್ಲದ ರೊಟ್ಟಿಯನ್ನು ಅಂದರೆ ಮಾನವ ತತ್ವಶಾಸ್ತ್ರವೆಂಬ ಹುಳಿಯಿಂದ ಬೆರೆಸಲ್ಪಡದೇ ಇರುವ ಶುದ್ಧ ರೊಟ್ಟಿಯನ್ನು, ಶುದ್ಧವಾದ ಸತ್ಯವನ್ನು ಉಪಯೋಗಿಸಬೇಕು.

ಈ ಎಚ್ಚರಿಕೆಯು ಅವಶ್ಯವಿತ್ತು. ಯಾಕೆಂದರೆ ಫರಿಸಾಯರು ಸ್ಪಷ್ಟವಾಗಿಯೂ ನಿಜವಾಗಿಯೂ ಯೆಹೂದ್ಯರಲ್ಲಿ ಅತಿ ಪವಿತ್ರವಾದ ಪಂಗಡ ಅಥವಾ ಪಕ್ಷವಾಗಿದ್ದರು. ಆದುದರಿಂದ ಯೆಹೂದ್ಯರಲ್ಲಿ ಅತಿ ಶ್ರದ್ಧೆಯುಳ್ಳವರು, ಅತ್ಯಾಸಕ್ತಿಯುಳ್ಳವರು ಮತ್ತು ಅತಿ ಪ್ರತಿಭೆಯುಳ್ಳವರು ಆ ಪಂಗಡಕ್ಕೆ ಸಹಜವಾಗಿ ಆಕರ್ಶಿತರಾಗುವರು. ಅತ್ಯುನ್ನತವಾದ ಮತ್ತು ಅತ್ಯುತ್ತಮವಾದ ಸಂಗತಿಗಳನ್ನು ಜೊತೆಗೂಡಿಸಿಕೊಂಡಿದ್ದುದು ಆ ಪಂಗಡವನ್ನು ಮತ್ತು ಅದರ ಬೋಧನೆಗಳನ್ನು ಬಹು ಅಪಾಯಕಾರಿಯನ್ನಾಗಿ ಮಾಡಿತ್ತೆಂದು ಹೇಳಲಾಗಿರುವುದು; ಕಾರಣ ಅದರ ಆಹಾರವನ್ನು ಅಂದರೆ ಅದರ ಸತ್ಯಾರ್ಥಗಳನ್ನು ಮನುಷ್ಯ ಸಂಪ್ರದಾಯಗಳಲ್ಲಿ ಮಿಶ್ರಣ ಮಾಡಿ ಅದನ್ನು ರೋಗಕಾರಕವನ್ನಾಗಿ ಮತ್ತು ಅಜೀರ್ಣಕರವನ್ನಾಗಿ ಮಾಡಿದ್ದು, ಅದನ್ನು ಸ್ವೀಕರಿಸಿದ ಮನಸ್ಸುಗಳೆಲ್ಲವನ್ನೂ ಅಷ್ಟರ ಮಟ್ಟಿಗೆ ವಿಷಮಯವಾಗ ಮಾಡಿರುವದು.

ಇದೇ ಪಾಠವು ಈ ದಿನವೂ ನಮಗೆ ಅನ್ವಯವಾಗುವದು; ಯಾವುದೇ ಕ್ರೈಸ್ತ ಪಂಗಡವು ಎಷ್ಟೇ ಪವಿತ್ರವೆಂದು ಹೇಳಿಕೊಂಡರೂ ಮತ್ತು ಹಾಗೆ ಕಂಡರೂ ನಾವು ಅವರ "ಹುಳಿಹಿಟ್ಟಿನ" ಅಂದರೆ ಅವರ ತಪ್ಪಾದ ಬೋಧನೆಯ ವಿಷಯವಾಗಿ ಎಚ್ಚರವಾಗಿದ್ದು ಅವುಗಳಿಂದ ದೂರವಿರಬೇಕೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ದೇವರ ವಾಕ್ಯದಲ್ಲಿನ ಶುದ್ಧವಾದ ಸತ್ಯಾರ್ಥಗಳು ನಮಗೆ "ರಕ್ಷಣೆಹೊಂದಿಸುವ ಜ್ಞಾನವನ್ನು" ಕೊಡುವದಕ್ಕೆ ಶಕ್ತವಾಗಿರುವದು ಮತ್ತು ಅದರ ವಿಷಯವಾಗಿ ಅಪೋಸ್ತಲನು ಹೇಳಿರುವದು: "ಅದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲಸತ್ಕಾರ್ಯಕ್ಕೆ ಸನ್ನದ್ಧನಾಗುವನು."

ಹೀಗೆ ಅನೇಕ ಪಂಗಡಗಳಿಗೆ ಸೇರಿದ ಕ್ರೈಸ್ತರಾದ ನಾವೆಲ್ಲರೂ ನಮ್ಮ ಹೃದಯ ಮನಸ್ಸುಗಳನ್ನು ಒಂದುಗೂಡಿಸಿಕೊಂಡು ತಂದೆ ದೇವರ ಚಿತ್ತ ನೆರವೇರಿಸುವದಕ್ಕಾಗಿ ನಮ್ಮ ಕರ್ತನೂ ವಿಮೋಚಕನೂ ಆಗಿರುವವನಿಗೆ ಸಂಪೂರ್ಣವಾಗಿ ಪ್ರತಿಷ್ಠೆಮಾಡಿಕೊಳ್ಳೋಣ; ಅಲ್ಲದೆ ಹಲವಾರು ಸಿದ್ಧಾಂತಗಳಲ್ಲಿರುವ "ಹುಳಿಹಿಟ್ಟಿನಿಂದ" ಮುಕ್ತರಾಗಿ ದೂರನಿಲ್ಲೋಣ. ಹಿಂದೆ ಇವು ಕರ್ತನ ಜನರನ್ನು ಬೇರ್ಪಡಿಸಿ ಆರುನೂರು ಪಂಗಡಗಳನ್ನಾಗುವಂತೆ ಮಾಡಿರುವವು. ಎಲ್ಲಾ ಕಡೆಯಲ್ಲಿಯೂ ದೇವಜನರನ್ನು ಅಧಿಕಾಧಿಕವಾಗಿ ಹಿಡಿದಿಟ್ಟುಕೊಂಡಿರುವ ಈ ವಿಭಾಗಗಳನ್ನು ನಾವು ಒಪ್ಪಲಾರೆವು; ಹಾಗು ಒಬ್ಬನೇ ಕರ್ತ ಒಂದೇ ನಂಬಿಕೆ ಒಂದೇ ಸ್ನಾನದೀಕ್ಷೆ ಮತ್ತು ಎಲ್ಲರಿಗೂ ತಂದೆಯಾಗಿರುವ ಒಬ್ಬನೇ ದೇವರು ಮತ್ತು "ಪರಲೋಕದಲ್ಲಿ ಹೆಸರು ಬರೆಸಿಕೊಂಡಿರುವ (ಒಂದೇ) ಚೊಚ್ಚಲು ಮಕ್ಕಳ ಸಭೆ" ಇವುಗಳಿಗೆ ಶ್ರದ್ಧೆಯುಳ್ಳ ಹೃದಯವುಳ್ಳವರನ್ನು ಐಕ್ಯಗೊಳಿಸಲು ಹೆಚ್ಚುಹೆಚ್ಚಾಗಿ ಬಯಸುವವರಾಗಿರುವೆವು.

## "ನೀವು ಇನ್ನೂ ಗ್ರಹಿಸಲಿಲ್ಲವೋ?"

ಫರಿಸಾಯರ ಹುಳಿಹಿಟ್ಟಿನ ಬಗ್ಗೆ ಯೇಸುವಿನ ಸಾಮ್ಯರೂಪದ ಹೇಳಿಕೆಯಲ್ಲಿನ ಅಂಶವನ್ನು ಗ್ರಹಿಸುವಲ್ಲಿ ಶಿಷ್ಯರು ವಿವೇಚನೆಯಿಲ್ಲದೆ ತಪ್ಪಿಹೋಗಿದ್ದರು. ಆವರು ಆ ಕೂಡಲೆ ಅಕ್ಷರಶಃ ಹುಳಿಹಿಟ್ಟಿನ ಹಾಗೂ ರೊಟ್ಟಿಯ ಬಗ್ಗೆ ಯೋಚಿಸುವವರಾಗಿ ತಮ್ಮಲ್ಲಿ ಕೇವಲ ಒಂದೇ ರೊಟ್ಟಿ

ಇರುವುದನ್ನು ಗಮನಿಸಿಕೊಂಡವರಾಗಿ ಒಡೆಯನು ತಮ್ಮ ಈ ತಪ್ಪನ್ನು ಎತ್ತಿತೋರಿಸುತ್ತಿರುವನೆಂದು ಭಾವಿಸಿದ್ದರು. ಅವರ ಮನೋನೇತ್ರಗಳನ್ನು ಅಂದರೆ ಗ್ರಹಿಸಿಕೊಳ್ಳುವ ಕಣ್ಣುಗಳು ವಿಶಾಲವಾಗಿ ತೆರೆಯಲ್ಪಟ್ಟಿರಲಿಲ್ಲ ಮತ್ತು ಯೇಸುವು ಪ್ರಾಮಾಣಿಕವಾಗಿ ಮತ್ತು ಬಹು ಸರಳವಾಗಿ ಇದನ್ನು ಹೇಳಿದ್ದನು; ಅಲ್ಲದೆ ಇಷ್ಟೆಲ್ಲಾ ಉಪದೇಶಗಳನ್ನು ಅವರಿಗೆ ನೀಡಿದ ನಂತರವೂ ಅವರು ಆತನ ಮಾತಿನ ಭಾವಾರ್ಥವನ್ನು ಗ್ರಹಿಸುವಲ್ಲಿ ಅವರು ಮಂದಗತಿಯುಳ್ಳವರಾಗಿರುವದಕ್ಕೆ ಸ್ಪಷ್ಟವಾಗಿ ಸ್ವಲ್ಪ ಮಟ್ಟಿನ ವ್ಯಥೆಯುಳ್ಳವನಾಗಿ ಹೇಳಿದ್ದನು.

ಆತನು ಐದು ರೊಟ್ಟಿಯಿಂದ ಐದುಸಾವಿರ ಜನರಿಗೆ ಊಟಮಾಡಿಸಿದ ಅದ್ಭುತವನ್ನು ಅವರ ನೆನಪಿಗೆ ತಂದು ಅವರು ತುಂಡುಗಳನ್ನು ಎಷ್ಟು ಪುಟ್ಟಿಗಳಲ್ಲಿ ಕೂಡಿಸಿದ್ದರೆಂದು ಕೇಳಿದನು. ಅವರು "ಹನ್ನೆರಡು" ಎಂದು ಉತ್ತರಿಸಿದರು. ಆತನು ಇನ್ನೊಂದು ಸಾರಿ ಏಳು ರೊಟ್ಟಿಯಿಂದ ನಾಲ್ಕುಸಾವಿರ ಜನರಿಗೆ ಊಟಮಾಡಿಸಿದ ಅದ್ಭುತವನ್ನು ಅವರ ನೆನಪಿಗೆ ತಂದು ಅವರು ಎಷ್ಟು ಪುಟ್ಟಿಗಳನ್ನು ತೆಗೆದುಕೊಂಡು ಹೋದರೆಂದು ಕೇಳಿದನು. ಅವರು "ಏಳು" ಎಂದು ಉತ್ತರಕೊಟ್ಟರು. ಹಾಗಾದರೆ ನೀವು ಒಂದು ರೊಟ್ಟಿಯನ್ನು ಹೊಂದಿರುವ ಬಗ್ಗೆ ನಿಮಲ್ಲಿ ತಪ್ಪನ್ನು ಹುಡುಕುತ್ತಿಲ್ಲವೆಂಬುದನ್ನು ನೀವು ಗ್ರಹಿಸಿಕೊಳ್ಳದೇ ಇರುವುದು ಹೇಗೆ; ನನಗೆ ಹಿಂದೆ ರೊಟ್ಟಿಯನ್ನು ಉಂಟುಮಾಡುವ ಶಕ್ತಿ ಇದ್ದಲ್ಲಿ ಖಂಡಿತವಾಗಿಯೂ ಈಗಲೂ ನಾನು ಆ ಶಕ್ತಿಯನ್ನು ಹೊಂದಿರುವೆನು ಮತ್ತು ನಿಮ್ಮಲ್ಲಿ ರೊಟ್ಟಿಯಿಲ್ಲದೆ ಇರುವುದನ್ನು ನಾನು ಸೂಚಿಸಲು ಸಾಧ್ಯವಿಲ್ಲವೆಂದು ಹೇಳಿದ್ದನು.

ಸತ್ಯವೇದವನ್ನು ಪದೇಪದೇ ಅಧ್ಯಯನ ಮಾಡುವ ಕರ್ತನ ಜನರಲ್ಲಿ ಇದೇ ವಿಷಯವನ್ನು ಈ ದಿನವೂ ಗಮನಿಸಬಹುದು. ಕೆಲವು ಸಣ್ಣಸಣ್ಣ ಸಾಂದರ್ಭಿಕ ಸಂಗತಿಗಳ ಸುತ್ತ ತಮ್ಮ ಮನಸ್ಸುಗಳನ್ನು ಕೇಂದ್ರೀಕರಿಸಿಕೊಂಡು ಕೆಲವರು ಕರ್ತನ ಉಪದೇಶಗಳಲ್ಲಿನ ಭಾವಾರ್ಥಗಳನ್ನು ಗ್ರಹಿಸುವಲ್ಲಿ ಸಂಪೂರ್ಣವಾಗಿ ತಪ್ಪಿಹೋಗಿರುವರು. ಇದಕ್ಕೆ ಪರಿಹಾರವೆಂದರೆ ದೇವರೊಂದಿಗೆ ಸನಿಹವಾಗಿ ನಡೆಯುವದು; ದೇವರ ವಾಕ್ಯಗಳನ್ನು ಬಹು ಎಚ್ಚರಿಕೆಯಿಂದ ಅಧ್ಯಯನಮಾಡುವದು, ಒಡೆಯನ ಹೆಜ್ಜೆಜಾಡನ್ನು ಅನುಸರಿಸುವವರಾಗಿ ಆತನ ಮನೋಭಾವದಲ್ಲಿ ಮತ್ತು ಆತನ ಕಾರ್ಯಗಳಲ್ಲಿ ಸೇರಿ ಪಾಲುಗಾರರಾಗುವದು. ಈ ಸಂಬಂಧದಲ್ಲಿ ಇನ್ನೊಂದು ಸಾಮ್ಯವು ನಮಗೆ ಹೇಳುವಂತೆ ಕಷ್ಟಕರವಾದ "ಮುಳ್ಳುಗಿಡಗಳು" ಬೆಳೆದು ದೇವಜನರ ಹೃದಯ ಮನಸ್ಸುಗಳನ್ನು ಪದೇಪದೇ ಆವರಿಸಿಕೊಂಡು ಸತ್ಯವಾಕ್ಯವು ಸೂಕ್ತವಾದ ಫಲಗಳನ್ನು ನೀಡದಂತೆ ಅಡ್ಡಿಮಾಡುವವೆಂಬುದನ್ನು ಮರೆಯಬಾರದು. ಯೇಸುವು ಹೇಳಿದ ಹಾಗೆ "ಮುಳ್ಳುಗಿಡಗಳು" ಎಂದರೆ "ಪ್ರಪಂಚದ ಚಿಂತೆ ಮತ್ತು ಐಶ್ವರ್ಯದಿಂದುಂಟಾಗುವ ಮೋಸಗಳು."

ಬೇತ್ಸಾಯಿದಕ್ಕೆ ಬಂದಾಗ ಒಬ್ಬ ಕುರುಡನನ್ನು ಸ್ವಸ್ಥ ಪಡಿಸಿಕೊಳ್ಳುವ ಬಯಕೆಯಿಂದ ಆತನ ಬಳಿಗೆ ಕರೆತರಲಾಗಿತ್ತು. ಯೇಸುವು ಆತನ ಕೈಹಿಡಿದುಕೊಂಡು ಹಳ್ಳಿಯ ಹೊರಗೆ ಕರಕೊಂಡು ಹೋದನು. ಆತನು ಅವನ ಕಣ್ಣಿನಲ್ಲಿ ಉಗುಳಿ ಆತನ ಮೇಲೆ ಕೈಯಿಟ್ಟು ತನಗೆ ಏನಾದರೂ ಕಾಣುತ್ತಿದೆಯೋ ಎಂದು ಕೇಳಿದನು. ಅವನು ತಲೆಎತ್ತಿ ನೋಡಿ ಕೆಲವು ಮರಗಳಂತೆ ಕಾಣುತ್ತಿದ್ದರೂ ಅವುಗಳು ಓಡಾಡುತ್ತಿರು ವಂತೆ ಕಾಣುವದೆಂದು ಮತ್ತು ಅವರು ಮನುಷ್ಯರಿರಬಹುದೆಂದು ಊಹಿಸಿ ಹೇಳಿದ್ದನು. ಯೇಸುವು ಮತ್ತೆ ಆತನ ಕಣ್ಣುಗಳಲ್ಲಿ ಕೈಯಿಟ್ಟು ಆನಂತರ ಅವನು ನೋಡಲು ಪ್ರಯತ್ನಿಸುವಂತೆ ಹೇಳಿದನು. ಆತನು ಹಾಗೆಯೇ ಮಾಡಿ ಸ್ಪಷ್ಟವಾಗಿ ನೋಡುವಂತಾದನು. ಈ ವಿಧಾನವನ್ನು ಅನುಸರಿಸಿದ್ದರಲ್ಲಿನ ಉದ್ದೇಶವು ನಮಗೆ ಸ್ಪಷ್ಟವಾಗಿಲ್ಲ; ಅದರೆ ಆ ಮನುಷ್ಯನಲ್ಲಿ ನಂಬಿಕೆ ಕಡಿಮೆಯಿದ್ದು ಯೇಸುವು ಅದನ್ನು ಸ್ವಲ್ಪಸ್ವಲ್ಪವಾಗಿ ವೃದ್ಧಿಗೊಳಿಸಿರುವ ಸಂಭವವು ಬಹಳವಾಗಿತ್ತು. ಆ ಅಂಶವು ಆತನ ಕಡೆಯ ಹೇಳಿಕೆಯಲ್ಲಿ ಅಂದರೆ ಆತನು ಸ್ಥಿರವಾಗಿ ನೋಡಿ ಕೆಲವು ಸಮಯ ನೋಡುತ್ತಲಿದ್ದು ಆನಂತರ ಅವನು ಎಲ್ಲವನ್ನೂ ಸ್ಪಷ್ಟವಾಗಿ ಕಾಣುತ್ತದೆಂದು ಹೇಳಿದ್ದರಲ್ಲಿ ಸಮರ್ಥನೆ ಯಾಗಿರುವದು. ಆ ಮನುಷ್ಯನು ತನ್ನ ಇಚ್ಛಾಶಕ್ತಿಯನ್ನು ಪೂರ್ಣವಾಗಿ ಬಳಸಿಕೊಂಡು ವಸ್ತುಗಳನ್ನು ನೋಡಲು ಯತ್ನಿಸಬೇಕೆಂಬುದನ್ನು ಕರ್ತನು ಸ್ಪಷ್ಟವಾಗಿ ಬಯಸಿದ್ದನು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಫಿಲಿಪ್ಪನ ಕೈಸರೈಯ | ಮೆಸ್ಸೀಯನಾದ ಯೇಸುವು; ಮರಣ ಪುನರುತ್ಥಾನಗಳನ್ನು ಮುಂತಿಳಿಸಿದ್ದು | 16:13–28 | 8:27–9:1 | 9:18–27 | –– |

## ಮತ್ತಾಯ 16:13–28

ಯೇಸು ಫಿಲಿಪ್ಪನ ಕೈಸರೈಯ ಎಂಬ ಪಟ್ಟಣದ ಪ್ರಾಂತ್ಯಕ್ಕೆ ಬಂದಾಗ–ಜನರು ಮನುಷ್ಯಕುಮಾರನೆಂಬ ನನ್ನನ್ನು ಯಾರು ಅನ್ನುತ್ತಾರೆ ಎಂದು ತನ್ನ ಶಿಷ್ಯರನ್ನು ಕೇಳಿದ್ದಕ್ಕೆ ಅವರು–ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ, ಕೆಲವರು ಎಲೀಯನು ಅನ್ನುತ್ತಾರೆ, ಕೆಲವರು ಯೆರೆಮೀಯನು, ಇಲ್ಲವೆ ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ ಎಂದು ಹೇಳಿದರು. ಆತನು ಅವರನ್ನು–ಆದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳಲಾಗಿ ಸೀಮೋನ್ ಪೇತ್ರನು–ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು ಎಂದು ಉತ್ತರಕೊಟ್ಟನು. ಅದಕ್ಕೆ ಯೇಸು–ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು

ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು. ಮತ್ತು ನಾನೂ ನಿನಗೆ ಒಂದು ಮಾತನನ್ನು ಹೇಳುತ್ತೇನೆ, ಅದೇನೆಂದರೆ–ನೀನು ಪೇತ್ರನು, ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು. ಪರಲೋಕರಾಜ್ಯದ ಬೀಗದ ಕೈಗಳನ್ನು ನಿನಗೆ ಕೊಡುವೆನು; ಭೂಲೋಕದಲ್ಲಿ ನೀನು ಯಾವುದನ್ನು ಕಟ್ಟುತ್ತೀಯೋ, ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀನು ಯಾವುದನ್ನು ಬಿಚ್ಚುತ್ತೀಯೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಅಂದನು. ಆಗ ಆತನು–ನಾನು ಕ್ರಿಸ್ತನಾಗಿದ್ದೇನೆಂಬುದನ್ನು ಯಾರಿಗೂ ಹೇಳಬೇಡಿರಿ ಎಂದು ಶಿಷ್ಯರಿಗೆ ಖಂಡಿತವಾಗಿ ಹೇಳಿದನು.

ಅಂದಿನಿಂದ ಯೇಸುಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವದಕ್ಕೆ ಪ್ರಾರಂಭಮಾಡಿದನು. ಆಗ ಪೇತ್ರನು ಆತನ ಕೈ ಹಿಡಿದು–ಸ್ವಾಮೀ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು ಎಂದು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು ಆತನು ತಿರುಗಿಕೊಂಡು ಪೇತ್ರನಿಗೆ–ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಹೇಳಿದನು. ಮತ್ತು ಯೇಸು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ–ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು? ಮನುಷ್ಯಕುಮಾರನು ತನ್ನ ತಂದೆಯ ಪ್ರಭಾವದೊಡನೆ ತನ್ನ ದೂತರ ಸಮೇತವಾಗಿ ಬರುವನು; ಆವಾಗ ಆತನು ಒಬ್ಬೊಬ್ಬನಿಗೆ ಅವನವನ ನಡತೆಗೆ ತಕ್ಕ ಫಲವನ್ನು ಕೊಡುವನು.

ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತವರೊಳಗೆ ಕೆಲವರು, ಮನುಷ್ಯಕುಮಾರನು ತನ್ನ ರಾಜ್ಯದಲ್ಲಿ ಬರುವದನ್ನು ನೋಡುವ ತನಕ ಮರಣಹೊಂದುವದಿಲ್ಲ ಅಂದನು.

## ಮಾರ್ಕ 8:27–9:1

ಯೇಸುವೂ ಆತನ ಶಿಷ್ಯರೂ ಫಿಲಿಪ್ಪನ ಕೈಸರೈಯ ಎಂಬ ಪಟ್ಟಣಕ್ಕೆ ಸೇರಿದ ಗ್ರಾಮಗಳಿಗೆ ಹೊರಟರು. ದಾರಿಯಲ್ಲಿ ಆತನು–ಜನರು ನನ್ನನ್ನು ಯಾರು ಅನ್ನುತ್ತಾರೆ ಎಂದು ತನ್ನ ಶಿಷ್ಯರನ್ನು ಕೇಳಿದ್ದಕ್ಕೆ ಅವರು–ನಿನ್ನನ್ನು ಕೆಲವರು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ; ಕೆಲವರು ಎಲೀಯನು ಅನ್ನುತ್ತಾರೆ; ಇನ್ನು ಕೆಲವರು ಪ್ರವಾದಿಗಳಲ್ಲಿ ಒಬ್ಬನು ಅನ್ನುತ್ತಾರೆ ಎಂದು ಹೇಳಿದರು. ಆತನು ಅವರನ್ನು–ಆದರೆ ನೀವು ನನ್ನನ್ನು ಯಾರನ್ನುತ್ತೀರಿ? ಎಂದು ಕೇಳಲಾಗಿ ಪೇತ್ರನು–ನೀನು ಬರಬೇಕಾಗಿರುವ ಕ್ರಿಸ್ತನು ಎಂದು ಉತ್ತರಕೊಟ್ಟನು. ಅದಕ್ಕೆ ಆತನು–ನನ್ನ ವಿಷಯವಾಗಿ ಯಾರಿಗೂ ಹೇಳಬೇಡಿರಿ ಎಂದು ಅವರಿಗೆ ಖಂಡಿತವಾಗಿ ಹೇಳಿದನು. ಇದಲ್ಲದೆ ಆತನು–ಮನುಷ್ಯಕುಮಾರನು ಬಹು ಕಷ್ಟಗಳನ್ನನುಭವಿಸಿ ಹಿರಿಯ–ರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ನಿರಾಕೃತನಾಗಿ ಕೊಲ್ಲಲ್ಪಟ್ಟು ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರಬೇಕಾಗಿದೆ ಎಂದು ಉಪದೇಶಮಾಡುವಕ್ಕೆ ಪ್ರಾರಂಭ ಮಾಡಿದನು. ಆತನು ಈ ಮಾತನ್ನು ಏನೂ ಗುಂಬವಿಲ್ಲದೆ ಹೇಳಿದನು. ಆಗ ಪೇತ್ರನು ಆತನ ಕೈ ಹಿಡಿದು ಆತನನ್ನು ಗದರಿಸುವದಕ್ಕೆ ಪ್ರಾರಂಭಿಸಲು ಆತನು ಹಿಂತಿರುಗಿಕೊಂಡು ತನ್ನ ಶಿಷ್ಯರನ್ನು ನೋಡಿ ಪೇತ್ರನಿಗೆ–ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ ಎಂದು ಗದರಿಸಿ ಹೇಳಿದನು.

ಆ ಮೇಲೆ ಆತನು ತನ್ನ ಶಿಷ್ಯರ ಜೊತೆಗೆ ಜನರ ಗುಂಪನ್ನೂ ಹತ್ತಿರ ಕರೆದು ಅವರಿಗೆ ಹೇಳಿದ್ದೆನಂದರೆ–ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿಯೂ ಸುವಾರ್ತೆಯ ನಿಮಿತ್ತವಾಗಿಯೂ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಡಬಹುದು? ವ್ಯಭಿಚಾರಿಣಿಯಂತಿರುವ ಈ ಪಾಪಿಷ್ಠ ಸಂತತಿಯಲ್ಲಿ ಯಾವನು ನನಗೂ ತನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು, ತಾನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧ ದೇವದೂತರ ಸಮೇತವಾಗಿ ಬರುವಾಗ ನಾಚಿಕೊಳ್ಳುವನು ಅಂದನು.

ಮತ್ತು ಅವರಿಗೆ–ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವು ಪ್ರಭಲವಾಗಿ ಬಂದಿರುವದನ್ನು ನೋಡುವ ತನಕ ಮರಣ ಹೊಂದುವದಿಲ್ಲ ವೆಂದು ಹೇಳಿದನು.

## ಲೂಕ 9:18–27

ಒಂದಾನೊಂದು ದಿವಸ ಆತನು ಏಕಾಂತವಾಗಿ ಪ್ರಾರ್ಥನೆ ಮಾಡುತ್ತಿರುವಾಗ ಆತನ ಶಿಷ್ಯರು ಆತನ ಸಂಗಡ ಇದ್ದರು. ಆತನು–ನನ್ನನ್ನು ಸಾಮಾನ್ಯ ಜನರು ಯಾರು ಅನ್ನುತ್ತಾರೆ ಎಂದು ಅವರನ್ನು ಕೇಳಿದ್ದಕ್ಕೆ ಅವರು–ನಿನ್ನನ್ನು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ; ಕೆಲವರು ಎಲೀಯನು ಅನ್ನುತ್ತಾರೆ; ಇನ್ನು ಕೆಲವರು ಪೂರ್ವದ ಪ್ರವಾದಿಗಳಲ್ಲಿ ಯಾವನೋ ಒಬ್ಬನು ಎದ್ದಿದ್ದಾನೆ ಅನ್ನುತ್ತಾರೆ ಎಂದು ಹೇಳಿದರು. ಆತನು ಅವರನ್ನು–

ಆದರೆ ನೀವು ನನ್ನನ್ನು ಯಾರು ಅನ್ನುತ್ತೀರಿ ಎಂದು ಕೇಳಲಾಗಿ ಪೇತ್ರನು–ನೀನು ದೇವರಿಂದ ಬರಬೇಕಾಗಿರುವ ಕ್ರಿಸ್ತನು ಎಂದು ಉತ್ತರ ಕೊಟ್ಟನು. ಆಗ ಆತನು–ಇದನ್ನು ಯಾರಿಗೂ ಹೇಳಬೇಡಿರಿ ಎಂದು ಬಹು ಖಂಡಿತವಾಗಿ ಅವರಿಗೆ ಅಪ್ಪಣೆ ಕೊಟ್ಟು–ಮನುಷ್ಯಕುಮಾರನು ಬಹು ಕಷ್ಟಗಳನ್ನನುಭವಿಸಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ನಿರಾಕೃತನಾಗಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕಾಗಿದೆ ಎಂದು ಹೇಳಿದನು. ಇದಲ್ಲದೆ ಆತನು ಎಲ್ಲರಿಗೂ ಹೇಳಿದ್ದೇನಂದರೆ–ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ದಿನಾಲೂ ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಉಳಿಸಿಕೊಳ್ಳುವನು. ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ತನ್ನನ್ನೇ ಕೆಡಿಸಿಕೊಂಡರೆ ಅಥವಾ ನಷ್ಟಪಡಿಸಿಕೊಂಡರೆ ಅವನಿಗೆ ಪ್ರಯೋಜನವೇನು? ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುತ್ತಾನೋ ಅವನಿಗೆ ಮನುಷ್ಯಕುಮಾರನು ತನಗೂ ತನ್ನ ತಂದೆಗೂ ಪರಿಶುದ್ಧ ದೂತರಿಗೂ ಇರುವ ಪ್ರಭಾವದೊಡನೆ ಬರುವಾಗ ನಾಚಿಕೊಳ್ಳುವನು. ನಿಮಗೆ ಸತ್ಯವಾಗಿ ಹೇಳುತ್ತೇನೆ, ಇಲ್ಲಿ ನಿಂತಿರುವವರೊಳಗೆ ಕೆಲವರು ದೇವರ ರಾಜ್ಯವನ್ನು ನೋಡುವ ತನಕ ಮರಣಹೊಂದುವದಿಲ್ಲವೆಂದು ಅಂದನು.

# ಆ ಮಹತ್ತರವಾದ ಪ್ರಶ್ನೆ

**ರೀಪ್ರಿಂಟ್ಸ್ ಪುಟ 5120**

## ಮಾರ್ಕ 8:27–9:1

**"ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು." – ಮತ್ತಾಯ 16:16**

ತನ್ನ ಸೇವಾವಧಿಯ ಬಹುತೇಕ ಕಾಲದವರೆಗೂ ನಮ್ಮ ಕರ್ತನು ತಾನೇ ಮೆಸ್ಸೀಯನೆಂಬುದನ್ನು ತನ್ನ ಶಿಷ್ಯರಿಗೂ ಪ್ರಕಟಮಾಡಿರಲಿಲ್ಲ. ನಿಸ್ಸಂದೇಹವಾಗಿ ಆತನು ವಿವೇಕವುಳ್ಳ ವಿಧಾನವನ್ನು ಆದುಕೊಂಡಿದ್ದನು. ತಾನು ಆ ಮಹಾ ಬೋಧಕನಾಗಿ ಜನರು "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ" ಎಂದು ಹೇಳಲ್ಪಡುವವರೆಗೂ ಅವರಿಗೆ ಉಪದೇಶ ಮಾಡುತ್ತಿದ್ದನು; ಜನರು "ಕ್ರಿಸ್ತನು ಬಂದಾಗ ಈತನು ಮಾಡಿದ್ದಕ್ಕಿಂತಲೂ ಹೆಚ್ಚು ಸೂಚಕಕಾರ್ಯವನ್ನು ಮಾಡಾನೋ?" ಎಂದು ಹೇಳಲ್ಪಡುವವರೆಗೂ ಆತನು ಅವರಿಗೆ ಸ್ವಸ್ಥಮಾಡುತ್ತಿದ್ದನು. ನಿಸ್ಸಂಶಯವಾಗಿ ಆರಂಭದಿಂದಲೂ ತಾನು ಮೆಸ್ಸೀಯನೆಂದು ಸ್ವತಃ ತಾನೇ ಹೇಳಿಕೊಳ್ಳುವದಕ್ಕಿಂತಲೂ ತನ್ನ ಹಿಂಬಾಲಕರ ಮನಸ್ಸಿನಲ್ಲಿ ನಿಧಾನವಾಗಿ ಈ ಆಲೋಚನೆಯು ಬರುವದು ಉತ್ತಮವಾದುದಾಗಿತ್ತು. ಅಂದರೆ ಸ್ವತಃ ತಾನೇ ಆ ಗೌರವವನ್ನು ವಹಿಸಿಕೊಳ್ಳುವದಕ್ಕಿಂತಲೂ ಜನರು ಆತನ ಬಗ್ಗೆ ಅದನ್ನು (ಮೆಸ್ಸೀಯನೆಂದು) ಹೇಳುವುದು ಉತ್ತಮವಾದುದು.

ಹೀಗಿರುವಲ್ಲಿ ಆತನು ತನ್ನ ಶಿಷ್ಯರು ಇದನ್ನು ತಿಳುಕೊಂಡಿರಬೇಕೆಂದು ಬಯಸಿ ಆತನು ಈ ಪ್ರಸ್ತಾವನೆಯನ್ನು ಹೀಗೆ ಕೇಳುವದರ ಮೂಲಕ ಆರಂಭಿಸಿದ್ದನು: "ಜನರು ನನ್ನನ್ನು ಯಾರು ಅನ್ನುತ್ತಾರೆ?" ಕೆಲವರು ಆತನು ಸ್ನಾನಿಕನಾದ ಯೋಹಾನನೇ ಸತ್ತವರೊಳಗಿಂದ ಎದ್ದು ಬಂದಿದ್ದಾನೆ ಎಂದು ಆಲೋಚಿಸಿರುವರು; ಬೇರೆಯವರು ಎಲೀಯನೇ ಸತ್ತವರೊಳಗಿಂದ ಎದ್ದು ಬಂದಿರುವನು ಎಂದು ಎಣಿಸಿರುವರು, ಹಾಗು ಇತರರು ಬೇರೆ ಪ್ರವಾದಿಗಳಲ್ಲಿ ಈತನು ಬಹುಶಃ ಒಬ್ಬನಾಗಿರಬಹುದೆಂದು ಆಲೋಚಿಸಿದ್ದರು ಎಂಬ ಒಂದು ಉತ್ತರವನ್ನು ಅವನು ಪಡಕೊಂಡಿದ್ದನು. ಆನಂತರ ಈ ಪ್ರಸ್ತಾಪವು ಮುಖ್ಯ ಭಾಗಕ್ಕೆ ತಲುಪಿತ್ತು: "ಆದರೆ ನೀವು ನನ್ನನ್ನು ಯಾರು ಅನ್ನುತ್ತೀರಿ?" ಭಕ್ತನಾದ ಪೇತ್ರನು ಉತ್ತರವಾಗಿ ಹೀಗೆ ಹೇಳಿದ್ದನು: "ನೀನು ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು." ಯೇಸುವು –"ಯೋನನ ಮಗನಾದ ಸೀಮೋನನೇ, ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು." ಎಂದು ಹೇಳಿ ಇದು ಸರಿಯಾದುದೆಂದು ಒಪ್ಪಿಕೊಂಡಿದ್ದನು.

ಅಂದಿನಿಂದ ಯೇಸುವು ತನ್ನ ಪ್ರಿಯರಾದ ಹನ್ನೆರಡು ಮಂದಿಗೆ ತನ್ನ ಮುಂದಿರುವ ಅನುಭವಗಳ ಬಗ್ಗೆ ವಿವರಿಸಲು ಆರಂಭಿಸಿದ್ದನು. ಹೇಗೆಂದರೆ ದೇವರ ರಾಜ್ಯವು ಹೇಗೆ ಯೆಹೂದ್ಯರಿಗೆ ಔಪಚಾರಿಕವಾಗಿ ಕೊಡೋಣವಾಗುವದು, ಹಾಗು ಅವರ ಪ್ರತಿನಿಧಿಗಳಾದ ಹಿರಿಯರು ಮಹಾಯಾಜಕರುಗಳು ಆತನನ್ನು ಹೇಗೆ ನಿರಾಕರಿಸುವರು; ಆತನು ಹೇಗೆ ಕೊಲ್ಲಲ್ಪಟ್ಟು ಆನಂತರ ಮೂರನೆಯ ದಿನದಲ್ಲಿ ಎದ್ದುಬರುವನು. ಆತನು ತನ್ನ ಮರಣದ ಬಗ್ಗೆ ಬಹು ಒತ್ತುಕೊಟ್ಟು ಹೇಳಿಕೆ ನೀಡಿದ್ದನು; ಹಾಗು ಆತನ ಶಿಷ್ಯರು ಅದನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿದ್ದರು. ತನ್ನ ಭವಿಷ್ಯದ ಬಗ್ಗೆ ತಾನು ಇಂಥಾ ದೃಷ್ಟಿಯುಳ್ಳವನಾಗಿರುವದು ನಮ್ಮ ಕರ್ತನಿಗೆ ಅಪಕೀರ್ತಿತರುವಂದೆಂದು ಎಣಿಸಿ ಯೂದನು ಕೋಪಗೊಂಡು ನಿರಾಶನಾಗಿದ್ದನು ಮತ್ತು ಅಪೋಸ್ತಲರಿಗೂ ಸಹ ಇದು ಅಪಕೀರ್ತಿಯುಂಟು ಮಾಡುವದು. ಯಾಕೆಂದರೆ ಯೇಸುವು ಇಂಥಾ ವಿಷಯಗಳನ್ನು ನಿರೀಕ್ಷಿಸುತ್ತಿದ್ದರೆ ಇವು ಆತನ ಮಾರ್ಗವನ್ನು ಬದಲಿಸುವಂತೆ ಮಾಡಿ ನಿಯಂತ್ರಿಸುವದು; ಮತ್ತು ಬೇಗನೆ ಆತನಿಗೆ ನಾಶನವು ಸಂಭವಿಸುವದು. ಅಲ್ಲದೆ ಆತನು ಪದೇಪದೇ ಬೋಧಿಸಿ ಅವರಲ್ಲಿ ಹುಟ್ಟುಹಾಕಿದ್ದ ಅವರ ನಿರೀಕ್ಷೆಗಳು ಅಂದರೆ ಆತನೊಡನೆ ಸಿಂಹಾಸನದಲ್ಲಿ ಕೂತುಕೊಳ್ಳುವದು, ಮುಂತಾದವುಗಳು ಭಗ್ನವಾಗುವದು.

ಅಪೋಸ್ತಲರೆಲ್ಲರೂ ನಿಸ್ಸಂಶಯವಾಗಿಯೂ ನಿರಾಶರಾಗಿದ್ದರು. ಆದರೆ ಕೇವಲ ಪೇತ್ರನು ಹೀಗೆ ವ್ಯಕ್ತಪಡಿಸಲು ಧೈರ್ಯಗೊಂಡಿದ್ದನು: "ಸ್ವಾಮೀ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು." ನಾವೆಲ್ಲರೂ ತಿಳಿದಿರುವಂತೆ, ನೀನು ಮೆಸ್ಸೀಯನಾಗಿ ಇಸ್ರಾಯೇಲ್ ಸಿಂಹಾಸನವನ್ನು ಪಡಕೊಂಡು ಮತ್ತು ಹೀಗೆ ಕಡೆಯಲ್ಲಿ ಭೂಲೋಕ ಸಿಂಹಾಸನವನ್ನೂ ಪಡಕೊಂಡವನಾಗಿ ಭೂಲೋಕದ ಎಲ್ಲಾ ಜನಾಂಗಗಳಿಗೆ ಆಶೀರ್ವಾದವನ್ನು ಉಂಟು ಮಾಡುವಿ; ಅಲ್ಲದೆ ನೀನು ವಾಗ್ದಾನ ಮಾಡಿರುವಂತೆ, ನಿನ್ನ ಸಿಂಹಾಸನದಲ್ಲಿ ನಾವೂ ನಿನ್ನೊಂದಿಗಿರುವೆವು.

## "ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ"

ಹೀಗೆ ಮಾಡುವಲ್ಲಿ ಭಕ್ತನಾದ ಪೇತ್ರನು ದೇವರ ಚಿತ್ತ ಹಾಗು ಸಂಕಲ್ಪವನ್ನು ವಿರೋಧಿಸುತ್ತಿದ್ದನು. ಯೇಸುವಿನ ಮರಣವು ದೇವರ ಈ ಚಿತ್ತ ಸಂಕಲ್ಪಗಳ ಕೇಂದ್ರ ಬಿಂಧು ಅಥವಾ ಗಾಲಿಯ ಕೇಂದ್ರದಂತಿದ್ದು ಇದರ ಮೂಲಕವೇ ಮೊದಲನೆಯದಾಗಿ ಸಭೆಯ ಆನಂತರ ಇಸ್ರಾಯೇಲ್ಯರ ಮತ್ತು ಕಡೆಯದಾಗಿ ಸಕಲ ಜನಾಂಗ ಪ್ರಜೆ ಕುಲ ಭಾಷೆಗಳವರಿಗೆ ಮಾಡಿರುವ ಹಲವಾರು ವಾಗ್ದಾನಗಳು ನೆರವೇರಲ್ಪಡುವದು. ಈ ದುಷ್ಪ್ರಭಾವಗಳು ತನ್ನ ಯಜ್ಞಾರ್ಪಣೆಯು ಪೂರ್ಣವಾಗುವದಕ್ಕೆ ಅಡ್ಡಿಪಡಿಸುವ ವೆಂಬುದನ್ನು ಯೇಸುವು ಗ್ರಹಿಸಿಕೊಂಡಿದ್ದನು. ಸೈತಾನನೂ ಸಹ ಆತನ ಪ್ರತಿಷ್ಠೆಯ ಆರಂಭದಲ್ಲಿ ಹೀಗೆ ಮಾಡಲು ಯತ್ನಿಸಿದ್ದನು.

ಈ ಸಂಗತಿಗೆ ಹೆಚ್ಚು ಒತ್ತುಕೊಡಲು ಆತನು ಭಕ್ತನಾದ ಪೇತ್ರನಿಗೆ ಹೀಗೆ ಹೇಳಿದ್ದನು: "ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ" ನಿನ್ನ ಮಾತುಗಳು ದೇವರ ಯೋಜನೆಯ ವಿಷಯಗಳಿಗೆ ಸರಿಬೀಳುವದಿಲ್ಲ, ಆದರೆ ಅದು ಮನುಷ್ಯರ ಆಲೋಚನಾಭಿಪ್ರಾಯ ಮತ್ತು ಅಭಿಲಾಷೆಗಳಿಗೆ ಸಂಬಂಧಿಸಿದ ವಿಷಯಗಳಾಗಿರುವವು. ಆನಂತರ ಆತನು ತನ್ನ ಶಿಷ್ಯರಿಗೆ ಇದು ಈ ಹಿಂದೆ ಅವರಿಗೆ ನೀಡುವ "ಅನುದಿನಕ್ಕೆ (ಅಶನಕ್ಕೆ) ಬೇಕಾದ ಆಹಾರ" ಆಗಿರಲಿಲ್ಲವೆಂಬುದನ್ನು ಬಹು ಸರಳರೀತಿಯಲ್ಲಿ ಸ್ವಷ್ಟಪಡಿಸಿ ಹೇಳುವದಕ್ಕೆ ಆರಂಭಿಸಿದ್ದನು; ಅದೇನೆಂದರೆ, ಯಾವನಾದರೂ ತನ್ನ (ಯೇಸುವಿನ)ಕಾರ್ಯದ ಯಾವುದೇ ಹಂತದಲ್ಲಿ ಭಾಗಿಯಾಗಿ ತನ್ನನ್ನು ಆತನೊಡನೆ (ಯೇಸುವಿನೊಡನೆ) ಎಣಿಸಿಕೊಳ್ಳಲು ಬಯಸುವವನೋ, ಅವನು ತನಗಿರುವ ಭೂಲೋಕದ ಎಲ್ಲಾ ಸಂಗತಿಗಳನ್ನು ತೊರೆಯಬೇಕಾಗುವದು; ಅವನು ತನ್ನನ್ನು ನಿರಾಕರಿಸಿಕೊಂಡು ತನ್ನ ಶಿಲುಬೆಯನ್ನು ತೆಗೆದುಕೊಂಡು ವಿಮೋಚಕನ ಹೆಜ್ಜೆಯ ಜಾಡನ್ನು ಅನುಸರಿಸಬೇಕೆಂಬುದನ್ನು ಅರಿತುಕೊಳ್ಳಬೇಕೆಂದು ಸರಳವಾಗಿ ಸ್ಪಷ್ಟಪಡಿಸಿ ಹೇಳಿದ್ದನು.

ಯಾವನಾದರೂ ಈಗಿನ ಜೀವಿತದ ಲೌಕಿಕ ವಿಷಯಗಳಲ್ಲಿನ ಹಕ್ಕುಗಳನ್ನು ಉಳಿಸಿಕೊಳ್ಳಲು ತವಕಿಸುವವನಾಗಿ ಅವುಗಳೆಲ್ಲವನ್ನು ತ್ಯಜಿಸಲು ಮನಸ್ಸಿಲ್ಲದೆ ಹೋದಲ್ಲಿ ಅವನು – ತನ್ನ ಶಿಲುಬೆಯನ್ನು ತೆಗೆದುಕೊಂಡು ತನ್ನ ಲೌಕೀಕ ವಿಷಯಗಳನ್ನು ಪೂರ್ಣವಾಗಿ ತ್ಯಜಿಸುವವರಿಗೆ ನೀಡಲಾಗುವ – ದೈವಿಕ ಸ್ವಭಾವವೆಂಬ ವಿಶೇಷವಾದ ಬಹುಮಾನವನ್ನು ಕಳಕೊಳ್ಳುವನು. ಮತ್ತು ಇದಕ್ಕೆ ಬದಲಾಗಿ ಯಾರು ನಂಬಿಗಸ್ತನಾಗಿದ್ದು ಯೇಸುವಿಗಾಗಿ ತನ್ನ ಜೀವವನ್ನು ಕಳಕೊಳ್ಳುವನೋ ಅವನು ಅದನ್ನು ಉಳಿಸಿಕೊಳ್ಳುವನು. ಅವನು ಆತ್ಮಿಕ ಸ್ವಭಾವದಲ್ಲಿ ಜೀವವೆಂಬ ಪ್ರತಿಫಲವನ್ನು ಪಡಕೊಳ್ಳುವನು.

ಇದು ಮಾತ್ರವಲ್ಲದೆ ಈಗ ಚಾಲ್ತಿಯಲ್ಲಿರುವ ಈ ತತ್ವವು ಯಾವಾಗಲೂ ಚಾಲ್ತಿಯಲ್ಲಿಯೇ ಇರುವದು, ಹೇಗಂದರೆ ಯಾವನು ಕೇವಲ ಸ್ವಾರ್ಥಪರನಾಗಿ ತನ್ನ ಸ್ವಂತ ಜೀವವನ್ನು ಮತ್ತು ಅದರ ಅಭಿಲಾಷೆಗಳನ್ನು ಪ್ರೀತಿಸುವವನಾಗಿರುವನೋ ಅವನು ನಿತ್ಯಜೀವಕ್ಕೆ ಯೋಗ್ಯನೆಂದು ಎಣಿಸಲ್ಪಡುವದಿಲ್ಲ; ಆದರೆ ಯಾವನು ಅಗತ್ಯಬಿದ್ದಲ್ಲಿ ಕರ್ತನ ಸಲುವಾಗಿ ಪ್ರಾಣವನ್ನು ಅರ್ಪಿಸಿಕೊಳ್ಳುವನೋ ಅವನು ತನ್ನ ಗುಣನಡತೆಗಳ ಮೂಲಕ ನಿತ್ಯಜೀವಕ್ಕೆ ಯೊಗ್ಯನೆಂದು ಎಣಿಸಲ್ಪಡುವನು.

## "ಒಬ್ಬ ಮನುಷ್ಯನಿಗೆ ಅದರಿಂದ ಏನು ಪ್ರಯೋಜನ?"

ಯೇಸುವು ಪೂರ್ಣಗೊಳಿಸಿದ ವಿಮೋಚನಾಕಾರ್ಯದ ಮೂಲಕವಾಗಿ ದೇವರು ಪ್ರತಿಯೊಬ್ಬ ಮನುಷ್ಯ ಜೀವಿಗೂ ಭವಿಷ್ಯದ ಜೀವಿತವನ್ನು ಒದಗಿಸಿದ್ದಾನೆ. ಆದರೆ ಕೇವಲ ಯಾರು ಹೃದಯ ಗುಣನಡತೆಯಲ್ಲಿ ಜೀವಿತದಲ್ಲಿ ಘನತೆಯುಳ್ಳವರಾಗಿದ್ದು ಈ ಮಹಾ ಆಶೀರ್ವಾದವನ್ನು ದೈವ ನೇಮಿತವಾದ ಮಾರ್ಗದಲ್ಲಿ ಅಂಗಿಕರಿಸಿಕೊಳ್ಳುವರೋ ಅವರು ಅದನ್ನು ಪಡೆದುಕೊಳ್ಳುವರು. ಅದರೆ ಯಾರು ಸ್ವಾರ್ಥಭಾವದಿಂದ ಲೋಕವನ್ನು ಪೂರ್ಣವಾಗಿ ಬಯಸುವರೋ ಅವರಲ್ಲಿ ಹೀಗೆ ಬೆಳೆದು ಬಂದ ಸ್ವಾರ್ಥಭಾವವು ಅವರನ್ನು ನಿತ್ಯಜೀವಕ್ಕೆ ಅನರ್ಹರನ್ನಾಗಿ ಮಾಡುವದು. ಏಕೆಂದರೆ ತನ್ನ ಜೀವಕ್ಕೆ ಬದಲಾಗಿ ಒಬ್ಬ ಮನುಷ್ಯನು ಏನು ಬದಲು ಕೊಡಲು ಸಾಧ್ಯ? ಈಗಿನ ಕಾಲದ ಕೆಲವು ವರುಷಗಳ ಐಶ್ವರ್ಯ ಕೀರ್ತಿ ಅಥವಾ ಒಳ್ಳೆಯ ಹೆಸರು ಇವುಗಳನ್ನು ನಿತ್ಯಪ್ರಭಾವ ಮತ್ತು ನಿತ್ಯಜೀವಕ್ಕೆ ಬದಲು ಕೊಡುವದು ಪ್ರಯೋಜನಕರವೆಂದು ಆತನು ಎಣಿಸುವನೋ? ಖಂಡಿತವಾಗಿಯೂ ಇಲ್ಲ. ಆದುದರಿಂದ ದೇವರು ತನ್ನ ಮಗನ ಮೂಲಕವಾಗಿ ಪ್ರಸ್ತಾಪಿಸಿರುವ ಯಾವುದೇ ಮಟ್ಟದ ನಿತ್ಯಜೀವವನ್ನು ಪಡೆಯಬೇಕಾದಲ್ಲಿ ನಾವು ಗುಣನಡತೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದು ಅತ್ಯವಶ್ಯಕ ವೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು.

ಯಾವನು ಕರ್ತನನ್ನು ಅನುಸರಿಸುವವನಾಗಿ ನಿತ್ಯಜೀವ ಮತ್ತು ಪ್ರಭಾವಮಹಿಮೆಗಳೆಂಬ ಬಹುಮಾನವನ್ನು ಪಡೆಯಬೇಕೆಂದು ಅಪೇಕ್ಷಿಸುವನೋ ಅವನು ಇದನ್ನು ಹೃದಯಪೂರ್ವಕವಾಗಿ ಮಾಡಬೇಕು ಮತ್ತು ಇದನ್ನು ಅಪ್ರಮಾಣಿಕತೆಯಿಂದಾಗಲಿ ಗುಟ್ಟಾದ ರೀತಿಯಲ್ಲಾಗಲಿ ಮಾಡುವಂತಿಲ್ಲ. ಆತನು ಬಹಿರಂಗವಾಗಿ ಧೈರ್ಯದಿಂದ ಸೂಕ್ತವಾದ ರೀತಿಯಲ್ಲಿ ಯೇಸುವನ್ನು ಮತ್ತು ಆತನ ಮಾತುಗಳನ್ನು ಒಪ್ಪಿಕೊಳ್ಳಬೇಕು. ಹಾಗು ಯೇಸುವು ತನ್ನ ಮತ್ತು

ತನ್ನ ಮಾತುಗಳಲ್ಲಿನ ವಿಭಿನ್ನತೆಯನ್ನು ಹೀಗೆ ಹೋಲಿಸಿ ಹೇಳಿರುವನು: "ಯಾವನು ನನಗೂ ನನ್ನ ಮಾತುಗಳಿಗೂ ನಾಚಿಕೊಳ್ಳುವನೋ" ಯೇಸುವಿನ ಮಾತುಗಳೆಂದರೆ ಆತನ ಬೋಧನೆಗಳು ಅಥವಾ ಉಪದೇಶಗಳು. ಮನುಷ್ಯರಲ್ಲಿ ಜನಪ್ರಿಯವಾಗದ ಕಾರಣದಿಂದ ಸತ್ಯದ ವಿಷಯದಲ್ಲಿ ನಾಚಿಕೊಳ್ಳುವದು, ದೇವರ ಯೋಜನೆಗಳ ಬಗ್ಗೆ ನಾಚಿಕೊಳ್ಳು ವದು, ದೇವರ ವಾಕ್ಯದಲ್ಲಿನ ಬೋಧನೆಗಳೆಂದು ಕಂಡುಕೊಂಡ ವುಗಳ ಬಗ್ಗೆ ನಾಚಿಕೊಳ್ಳುವದು ಕರ್ತನಿಗೆ ಅಸಂತೋಷವನ್ನು ಉಂಟುಮಾಡುವಂಥದಾಗಿದ್ದು ನಾವು ಆತನ ಕೃಪಾನುಗ್ರಹಗಳಿಗೆ ನಮ್ಮನ್ನು ಅಯೋಗ್ಯರನ್ನಾಗಿ ಮಾಡಿಕೊಂಡವರಾಗುತ್ತೇವೆ.

ತನ್ನ ಸಭೆಗೆ ಸೇರಿರುವರೆಲ್ಲರಿಗೂ ಸತತವಾಗಿ ಕ್ರಿಸ್ತನು ಸಹಾಯಕನಾಗಿರುವ ಅವಶ್ಯಕತೆಯಿದ್ದು, ಕಟ್ಟಕಡೆಯಲ್ಲಿ ಆತನು ತಂದೆಯ ಮುಂದೆ ಅವರನ್ನು ನಿರ್ದೋಷಿಗಳನ್ನಾಗಿಯೂ ನಿರಪರಾಧಿಗಳನ್ನಾಗಿಯೂ ಪ್ರೀತಿಪೂರ್ವಕವಾಗಿ ನಿಲ್ಲಿಸುವ – ವರೆಗೂ ಅವರಿಗೆ ಆತನು ಸಹಾಯಕನಾಗಿರುವ ಅವಶ್ಯಕತೆಯಿರು ವದು. (ಕೊಲೆಸ್ಸೆ 1:22) ಅಲ್ಲದೆ ಅವರು ಆತನನ್ನು ತಮ್ಮ ಸಹಾಯಕನನ್ನಾಗಿ ಉಳಿಸಿಕೊಂಡಿರಬೇಕಾದರೆ ಅವರು ಅತನ ಕಾರ್ಯೋದ್ದೇಶಗಳನ್ನು ಸಹ ಜನರಿಗೆ ಪ್ರತಿಪಾದಿಸುವವರಾಗ ಬೇಕು; ಅವರು ಆತನಿಗಾಗಲಿ ಮತ್ತು ಆತನ ಬೋಧನೆಗಳಿಗಾಗಲಿ, ಆತನ ಮಾತುಗಳಿಗಾಗಲಿ ನಾಚಿಕೊಳ್ಳಬಾರದು.

ಕರ್ತನು ತನ್ನ ಮಾತುಗಳನ್ನು ವಿಶೇಷವಾಗಿ ಶಿಷ್ಯರಿಗೆ ಸಂಬೋಧಿಸಿ ಹೇಳಿದ್ದನೆಂಬುದು ತನ್ನ ಶಿಷ್ಯರು ಮಾಡಿಕೊಂಡಂಥ ಪ್ರತಿಷ್ಠೆಯನ್ನು ಆ ಜನಾಂಗದಲ್ಲಿನ ಇತರರು ಮಾಡಿಕೊಂಡಿರಲಿಲ್ಲ ವೆಂದು ಸೂಚಿಸಿ ಹೇಳಿದ್ದರಲ್ಲಿ ತೋರಿ–ಬಂದಿರುವದು. ಇತರರು "ವ್ಯಭಿಚಾರಿಣಿಯಂತಿರುವ ಪಾಪಿಷ್ಠ ಸಂತತಿ" ಎಂದು ಕರೆಯಲ್ಪಟ್ಟಿದ್ದರು. ಕ್ರಿಸ್ತನ ಹಿಂಬಾಲಕರು ಸತ್ಯದ ಬೆಳಕನ್ನು ಲೋಕದವರ ಮುಂದೆ ಎತ್ತಿಹಿಡಿಯುವವರಾಗಬೇಕು ಮತ್ತು ನಂಬಿಗಸ್ತರಾಗಿ ಹೀಗೆ ಮಾಡುವವರನ್ನು ಕರ್ತನಾದ ಯೇಸುವು ಕ್ಲುಪ್ತ ಕಾಲದಲ್ಲಿ ಅಂದರೆ ಅತನು ತನ್ನ ತಂದೆಯ ಪ್ರಭಾವದೊಡನೆ ಪರಿಶುದ್ಧದೂತರ ಸಮೇತವಾಗಿ ಬರುವಾಗ ಅವರನ್ನು ತನ್ನವರೆಂದು ಒಪ್ಪಿಕೊಳ್ಳುವನು. ಅತನು ಅವರನ್ನು ಒಪ್ಪಿಕೊಳ್ಳಲು ನಾಚಿಕೊಳ್ಳುವದಿಲ್ಲ; ಅವರನ್ನು ತನ್ನ ತಂದೆಯ ಹಾಗೂ ಪರಿಶುದ್ಧದೂತರ ಮುಂದೆ ಪ್ರಸ್ತುತಪಡಿಸುವನು.

## ಆ ಮಹತ್ತರ ಪ್ರಶ್ನೆ

ಹದಿನೆಂಟು ಶತಮಾನಗಳ ಹಿಂದಿನ ಆ ಮಹತ್ತರ ಪ್ರಶ್ನೆಯು ಈ ದಿನವೂ ಮಹತ್ತರವಾದ ಪ್ರಶ್ನೆಯಾಗಿಯೇ ಇದೆ! ಯೇಸು ಯಾರು? ಕೆಲವರು ಹೇಳಿರುವಂತೆ ಆತನು ಕೇವಲ ಒಬ್ಬ ಒಳ್ಳೆಯ ಮನುಷ್ಯನೂ, ಸಮರ್ಥನಾದ ಒಬ್ಬ ಬೋಧಕನೂ, ಆಗಿದ್ದಲ್ಲಿ, ಆತನು ಆಗ ಕ್ರಿಸ್ತನಾಗುತ್ತಿರಲಿಲ್ಲ, ಏಕೆಂದರೆ ಕ್ರಿಸ್ತನು ಈ ಎಲ್ಲಾ ಗುಣಗಳನ್ನು ಮೈಗೂಡಿಸಿಕೊಂಡಿದ್ದಾಗ್ಯೂ ಆತನು ಇದಕ್ಕೂ ಹೆಚ್ಚಿನವನು, ಇನ್ನೂ ಹೆಚ್ಚಾದವನಾಗಿದ್ದನು. ಕ್ರಿಸ್ತನಾಗಿರಲು ಆತನು ಎಲ್ಲರಿಗೋಸ್ಕರ ವಿಮೋಚನಾರ್ಥವಾಗಿ ತನ್ನನ್ನು ಈಡಾಗಿ ಅರ್ಪಿಸಿಕೊಂಡು ಕ್ಲುಪ್ತಕಾಲದಲ್ಲಿ ಸಾಕ್ಷಿಯಾಗುವ ಸಲುವಾಗಿ "ಮನುಷ್ಯನಾದ ಕ್ರಿಸ್ತ ಯೇಸು" ಆಗಬೇಕಿತ್ತು. (1ತಿಮೋಥೆ 2:5–6) ಆತನು ಸಾಮಾನ್ಯವಾದ ರೀತಿಯಲ್ಲಿ ಹುಟ್ಟಿದವನಾಗಿರದೆ ಅಸಾಧಾರಣವಾದ ರೀತಿಯಲ್ಲಿ ಮೇಲಿನಿಂದ ಹುಟ್ಟಿದವನಾಗಿರ ಬೇಕೆಂಬುದನ್ನು ಇದು ಸೂಚಿಸುವದು; ಕಾರಣ ಆತನು ಸಹಜ ವಾದ ರೀತಿಯಲ್ಲಿ ಹುಟ್ಟಿದ್ದೇ ಆದಲ್ಲಿ ಆತನು ಮರಣ ದಂಡನೆ ಯಲ್ಲಿರುವ ಆದಾಮನ ಮಕ್ಕಳಲ್ಲಿ ಇತರರಂತೆ ಇರುತ್ತಿದ್ದನು. ಹೀಗಿರಲು ಆತನು ತನ್ನನ್ನಾಗಲಿ ಅಥವಾ ಇತರರನ್ನಾಗಲೀ ರಕ್ಷಿಸಲು ಸಾಧ್ಯವಿರುತ್ತಿರಲಿಲ್ಲ. ಆದರೆ ಆತನು ದೇವರಿಂದ ಕಳುಹಿಸಲ್ಪಟ್ಟ ಕ್ರಿಸ್ತನಾಗಿ "ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಲು" ತಂದೆಯ ಬಳಿಯಲ್ಲಿದ್ದ ತನ್ನ ಮಹಿಮೆಯನ್ನು ಬಿಟ್ಟು ಮನುಷ್ಯನಾಗಿ ಬರಬೇಕಿತ್ತು. ಆಗ ನಾವು ಆತನನ್ನು ಭೂಲೋಕದ ದಿವ್ಯ ವಿಮೋಚಕನನ್ನಾಗಿ ನೋಡುವೆವು. ಮಾನವ ಕುಲವನ್ನು ಮರಣದಂಡನೆಯಿಂದ ಬಿಡುಗಡೆ ಮಾಡಲು ಮತ್ತು ಆದಾಮ ಮತ್ತು ಅವನ ಸಂತತಿಗೆ ಪುನರುತ್ಥಾನ ವಾಗುವದನ್ನು ಸಾಧ್ಯವಾಗಿಸಲು ಒಂದು ಈಡಿನ ಅಥವಾ ಸಮಾನ ಬೆಲೆಯ ರೂಪದಲ್ಲಿ ಅತನು ಮರಣ ಹೊಂದುವದು ಅವಶ್ಯವಾಗಿತ್ತು.

ಇದಕ್ಕೂ ಮಿಗಿಲಾಗಿ, ಕ್ರಿಸ್ತನೆಂಬ ಶಬ್ದವು ಅಭಿಷೇಕಿಸಲ್ಪಟ್ಟ ವನು ಎಂಬುದನ್ನು ಸೂಚಿಸುವದು. ಅಭಿಷಕ್ತನಾದ ಕರ್ತನು ಮಹಾ ಅರಸನು ಪ್ರವಾದಿಯು ಮತ್ತು ಯಾಜಕನಾಗಿರುವನೆಂದು ಸತ್ಯವೇದವು ಪ್ರಕಟಿಸುವದು. ಆಕಾಶದ ಕೆಳಗಿರುವದು ಸಂಪೂರ್ಣ ವಾಗಿ ಆತನ ರಾಜ್ಯವಾಗಿರುವದು. ಆ ರಾಜ್ಯವು ಒಂದು ಸಾವಿರ ವರುಷಗಳದ್ದಾಗಿರುವದು; ಅದು ಪಾಪವನ್ನು ಮತ್ತು ಅದನ್ನು ಆಶಿಸುವವರೆಲ್ಲರನ್ನೂ ಸಂಹಾರಮಾಡುವದು; ಹಾಗು ಅದು ದೇವರೊಡನೆ ಹೊಂದಾಣಿಕೆಯಾಗಲು ಇಚ್ಛಿಸುವ ಮಾನವ ಕುಲದವರೆಲ್ಲರನ್ನೂ ಉನ್ನತಿಗೆ ತರುವದು. ಸತ್ಯವೇದದ ಅನುಸಾರ ಈ ಯೇಸುವು ಮೆಸ್ಸೀಯನಾಗಿರುವನು. ಮತ್ತು ಆತನ ಈಗಿನ ಕಾರ್ಯವು ತನ್ನ ಮಹಿಮೆಯ ರಾಜ್ಯದಲ್ಲಿ ತನಗೆ ಸಹಬಾಧ್ಯ ರಾಗಿರಲು ಮದಲಗಿತ್ತಿಯೆಂಬ ಒಂದು ಗುಂಪನ್ನು ಒಟ್ಟುಗೂಡಿಸು ವದಾಗಿರುವದು; ಮೊದಲನೆಯ ಪುನರುತ್ಥಾನದಲ್ಲಿ ಪ್ರಭಾವಕ್ಕೆ ಮಾರ್ಪಡುವದರ ಮೂಲಕ ಆಯಲ್ಪಟ್ಟ ಸಭೆಯು ಪೂರ್ಣ ಗೊಂಡ ಕೂಡಲೇ ಆ ರಾಜ್ಯವು ಸ್ಥಾಪನೆಯಾಗುವದು.

ಮೆಸ್ಸೀಯನ ಬಗ್ಗೆ ನೀವು ಏನು ಆಲೋಚಿಸುವಿರಿ? ತನ್ನ ರಾಜ್ಯ ಪ್ರಭಾವಗಳಲ್ಲಿ ಆತನ ಜೊತೆಗಾರರಾಗಲು ಆತನು ನೀಡಿರುವ ಆಹ್ವಾನದ ಬಗ್ಗೆ ನೀವು ಏನು ಆಲೋಚಿಸಿಕೊಳ್ಳುವಿರಿ? ತನ್ನನ್ನು ನಿರಾಕರಿಸಿಕೊಳ್ಳುವುದರ ಮತ್ತು ತನ್ನನ್ನು ಯಜ್ಞಾರ್ಪಣೆ ಮಾಡಿಕೊಳ್ಳುವ ಬಗ್ಗೆ ನೀವು ಏನು ಆಲೋಚಿಸುವಿರಿ? ಮಹಾ ಪ್ರತಿಫಲದ ಬಗ್ಗೆ ನೀವು ಏನು ಆಲೊಚಿಸುವಿರಿ? ತಮ್ಮನ್ನು ಪ್ರತಿಷ್ಠೆ ಮಾಡಿಕೊಂಡಿರುವವರು ಅದರಲ್ಲಿನ ಶರತ್ತುಗಳ ವಿಷಯವಾಗಿ ಪುನರಾಮರ್ಶೆಮಾಡಿಕೊಳ್ಳಲಿ; ಈ ಬಗೆಯ ಪ್ರತಿಷ್ಠೆಯನ್ನು ಮಾಡಿಕೊಳ್ಳದಿರುವವರು ಒಂದು ತೀರ್ಮಾನಕ್ಕೆ ಬರುವುದರ ಮೊದಲು ಯೇಸುವು ಹೇಳಿರುವ ಹಾಗೆ "ಕುಳಿತು ಇದಕ್ಕೆ ತಗಲುವ ಕಷ್ಟನಷ್ಟಗಳ ಬಗ್ಗೆ ಲೆಕ್ಕಾಚಾರ" ಹಾಕಲಿ; ಹೀಗಾಗಿ ಆತನ ಶಿಷ್ಯರಾಗುವವರು ಬುದ್ಧಿಪೂರ್ವಕವಾಗಿ ಇದನ್ನು ಮಾಡಿ ತಮ್ಮ ಮಾರ್ಗದಲ್ಲಿ ನಿಷ್ಠಾವಂತರೂ ನಂಬಿಗಸ್ತರೂ ಆಗಿರಲಿ.

ಕೇವಲ "ದೇವರು ಕ್ರಿಸ್ತನಲ್ಲಿ ಉನ್ನತಸ್ಥಾನಕ್ಕೆ ಕರೆದಿರುವುದನ್ನು" ಅಂದರೆ "ಪರಲೋಕದ ಬಾಧ್ಯತೆಗೆ ಕರೆದಿರುವುದನ್ನು" ಗ್ರಹಿಸಿಕೊಂಡಿರುವವರು ಮಾತ್ರ, ಇಂಥವರು ಮಾತ್ರ, ತಾವು ಪ್ರತಿಷ್ಠೆಮಾಡಿಕೊಂಡಾಗ ಆರಂಭಮಾಡಿದ ಓಟವನ್ನು ಸ್ಥಿರಚಿತ್ತದಿಂದ ಓಡಲು ಅಗತ್ಯವಾದ ಪ್ರೋತ್ಸಾಹಪ್ರೇರಣೆಗಳನ್ನು ಹೊಂದುವರು; ಅಲ್ಲದೆ ಕೇವಲ ನಂಬಿಗಸ್ತರಾಗಿ ಓಟವನ್ನು ಓಡುವವರು ಮಾತ್ರ ಆ ಬಹುಮಾನವನ್ನು ಗೆಲ್ಲುವರು; ಹಾಗೂ ಕೇವಲ ಆ ದಿವ್ಯಸಹಾಯಕನ ಸಹಾಯದಿಂದ ಮಾತ್ರ, ಆತನ ಅಮೂಲ್ಯದ ರಕ್ತದ ಮೂಲಕವಾಗಿ ಅವರು ಗೆದ್ದುಬರುವದನ್ನು ಮತ್ತು "ಪೂರ್ಣ ಜಯಶಾಲಿಗಳಾಗುವದನ್ನು" ನಿರೀಕ್ಷಿಸಲು ಯಾವನಿಗಾದರೂ ಸಾಧ್ಯ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಹೆರ್ಮೋನ್ ಪರ್ವತ | ಪೇತ್ರ ಯಾಕೋಬ ಮತ್ತು ಯೋಹಾನರ ಎದುರಿನಲ್ಲಿ ಯೇಸು ಪ್ರಕಾಶರೂಪ ಧರಿಸಿದ್ದು | 17:1–13 | 9:2–13 | 9:28–36 | –– |

## ಮತ್ತಾಯ 17:1–13

ಆರು ದಿವಸಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಇವನ ತಮ್ಮನಾದ ಯೋಹಾನನನ್ನೂ ಮಾತ್ರ ವಿಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು. ಅಲ್ಲಿ ಅವರ ಕಣ್ಣ ಮುಂದೆ ಆತನ ರೂಪ ಬೇರೆಯಾಯಿತು; ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು. ಇದಲ್ಲದೆ ಮೋಶೆಯೂ ಎಲೀಯನೂ ಆತನ ಸಂಗಡ ಮಾತಾಡುತ್ತಾ ಅವರಿಗೆ ಕಾಣಿಸಿಕೊಂಡರು. ಆಗ ಪೇತ್ರನು ಯೇಸುವಿಗೆ–ಸ್ವಾಮೀ, ನಾವು ಇಲ್ಲೇ ಇರುವದು ಒಳ್ಳೇದು. ಅಪ್ಪಣೆಯಾದರೆ ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು; ನಿನಗೊಂದು, ಮೋಶೆಗೊಂದು, ಎಲೀಯನಿಗೊಂದು ಎಂದು ಹೇಳಿದನು. ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ–ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು. ಶಿಷ್ಯರು ಇದನ್ನು ಕೇಳಿ ಬಹಳವಾಗಿ ಹೆದರಿ ಬೋರಲ ಬಿದ್ದರು. ಆದರೆ ಯೇಸು ಹತ್ತರಕ್ಕೆ ಬಂದು ಅವರನ್ನು ಮುಟ್ಟಿ–ಏಳಿರಿ, ಹೆದರಬೇಡಿರಿ ಅಂದನು. ಅವರು ಕಣ್ಣೆತ್ತಿ ನೋಡಿದಾಗ ಯೇಸುವನ್ನೇ ಹೊರತು ಮತ್ತಾರನ್ನೂ ಕಾಣಲಿಲ್ಲ.

ಅವರು ಆ ಬೆಟ್ಟದಿಂದ ಇಳಿದುಬರುತ್ತಿರುವಾಗ ಯೇಸು ಅವರಿಗೆ–ನೀವು ಈಗ ಕಂಡ ದರ್ಶನವನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎಬ್ಬಿಸಲ್ಪಡುವ ತನಕ ಯಾರಿಗೂ ಹೇಳಬೇಡಿರೆಂದು ಖಂಡಿತವಾಗಿ ಹೇಳಿದನು. ಆಗ ಆತನ ಶಿಷ್ಯರು–ಎಲೀಯನು ಮೊದಲು ಬರುವದು ಅಗತ್ಯವೆಂಬದಾಗಿ ಶಾಸ್ತ್ರಿಗಳು ಹೇಳುತ್ತಾರಲ್ಲಾ, ಇದು ಹೇಗೆ ಎಂದು ಆತನನ್ನು ಕೇಳಿದ್ದಕ್ಕೆ ಆತನು–ಎಲೀಯನು ಬರುವದು ನಿಜ; ಬಂದು ಎಲ್ಲವನ್ನು ತಿರಿಗಿ ಸರಿಮಾಡುವನು; ಆದರೆ ನಾನು ನಿಮಗೆ ಹೇಳುವದೇನಂದರೆ, ಎಲೀಯನು ಬಂದು ಹೋದನು; ಜನರು ಅವನ ಗುರುತು ಅರಿಯದೆ ತಮ್ಮ ಮನಸ್ಸಿಗೆ ಬಂದಂತೆ ಅವನಿಗೆ ಮಾಡಿದರು. ಅವನಿಗಾದಂತೆ ಮನುಷ್ಯಕುಮಾರನಿಗೆ ಸಹ ಅವರ ಕಡೆಯಿಂದ ಹಿಂಸೆಯಾಗುವದು ಎಂದು ಉತ್ತರಕೊಟ್ಟನು. ಆಗ ಸ್ನಾನಿಕನಾದ ಯೋಹಾನನ ವಿಷಯವಾಗಿ ತಮಗೆ ಈ ಮಾತನ್ನು ಹೇಳಿದನೆಂದು ಶಿಷ್ಯರು ತಿಳುಕೊಂಡರು.

## ಮಾರ್ಕ 9:2–13

ಆರು ದಿವಸಗಳಾದ ಮೇಲೆ ಯೇಸು ಪೇತ್ರ ಯಾಕೋಬ ಯೋಹಾನರನ್ನು ಮಾತ್ರ ವಿಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು. ಅಲ್ಲಿ ಅವರ ಕಣ್ಣಮುಂದೆ ಆತನ ರೂಪ ಬೇರೆಯಾಯಿತು. ಆತನ ವಸ್ತ್ರಗಳು ಬಹು ಬೆಳ್ಳಗೆ ಹೊಳೆಯುತ್ತಿದ್ದವು; ಭೂಲೋಕದಲ್ಲಿರುವ ಯಾವ ಅಗಸನಾದರೂ ಅಷ್ಟು ಬೆಳ್ಳಗೆ ಮಾಡಲಾರನು. ಇದಲ್ಲದೆ ಎಲೀಯನೂ ಮೋಶೆಯೂ ಅವರಿಗೆ ಕಾಣಿಸಿಕೊಂಡು ಯೇಸುವಿನ ಸಂಗಡ ಮಾತಾಡುತ್ತಿದ್ದರು. ಆಗ ಪೇತ್ರನು ಯೇಸುವಿಗೆ–ಗುರುವೇ, ನಾವು ಇಲ್ಲೇ ಇರುವದು ಒಳ್ಳೇದು; ಮೂರು ಪರ್ಣಶಾಲೆಗಳನ್ನು ಕಟ್ಟುವೆವು; ನಿನಗೊಂದು ಮೋಶೆಗೊಂದು ಎಲೀಯನಿಗೊಂದು ಎಂದು ಹೇಳಿದನು. ಏನು ಹೇಳಬೇಕೋ ತಿಳಿಯದೆ ಹೀಗೆ ಮಾತಾಡಿದನು. ಅವರು ಬಹಳವಾಗಿ ಹೆದರಿಕೊಂಡಿದ್ದರು. ಅಷ್ಟರಲ್ಲಿ ಮೋಡವು ಬಂದು ಅವರ ಮೇಲೆ ಕವಿಯಿತು. ಆ ಮೋಡದೊಳಗಿಂದ – ಈತನು ಪ್ರಿಯನಾಗಿರುವ ನನ್ನ ಮಗನು; ಈತನ ಮಾತನ್ನು ಕೇಳಿರಿ ಎಂದು ಆಕಾಶವಾಣಿ ಆಯಿತು. ಫಕ್ಕನೆ ಅವರು ಸುತ್ತಲೂ ನೋಡಿದಾಗ ತಮ್ಮ ಸಂಗಡ ಯೇಸುವನ್ನೇ ಹೊರತು ಆಗಿನಿಂದ ಮತ್ತಾರನ್ನೂ ಕಾಣಲಿಲ್ಲ.

ಅವರು ಆ ಬೆಟ್ಟದಿಂದ ಇಳಿದು ಬರುತ್ತಿರುವಾಗ ಆತನು ಅವರಿಗೆ–ನೀವು ಕಂಡಿರುವದನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎದ್ದು ಬರುವತನಕ ಯಾರಿಗೂ ತಿಳಿಸಬಾರದೆಂದು ಖಂಡಿತವಾಗಿ ಹೇಳಿದನು. ಅವರು ಈ ಮಾತನ್ನು ಹಿಡಿದು ಸತ್ತುಜೀವಿತನಾಗಿ ಏಳುವದಂದರೇನು ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡರು. ಇದಲ್ಲದೆ ಅವರು–ಎಲೀಯನು ಮೊದಲು ಬರುವದು ಅಗತ್ಯವೆಂಬದಾಗಿ ಶಾಸ್ತ್ರಿಗಳು ಹೇಳುತ್ತಾರಲ್ಲಾ, ಇದು ಹೇಗೆ? ಎಂದು ಆತನನ್ನು ಕೇಳಿದ್ದಕ್ಕೆ ಆತನು–ಎಲೀಯನು ಮೊದಲು ಬಂದು ಎಲ್ಲವನ್ನು ತಿರಿಗಿ ಸರಿಮಾಡುವದು ನಿಜ.

ಮತ್ತು ಮನುಷ್ಯಕುಮಾರನ ವಿಷಯವಾಗಿ–ಅವನು ಬಹು ಕಷ್ಟಗಳನ್ನನುಭವಿಸಿ ಹೀನೈಸಲ್ಪಡಬೇಕೆಂಬದಾಗಿ ಬರೆದದೆ, ಇದು ಹೇಗೆ? ಆದರೆ ನಾನು ನಿಮಗೆ ಹೇಳುವದೇನಂದರೆ–ಎಲೀಯನು ಬಂದನು; ಮತ್ತು ಅವನ ವಿಷಯವಾಗಿ ಬರೆದಿರುವ ಪ್ರಕಾರ ಜನರು ತಮ್ಮ ಮನಸ್ಸಿಗೆ ಬಂದಂತೆ ಅವನಿಗೆ ಮಾಡಿದರು ಅಂದನು.

## ಲೂಕ 9:28–36

ಯೇಸು ಈ ಮಾತುಗಳನ್ನು ಹೇಳಿ ಸುಮಾರು ಎಂಟು ದಿವಸಗಳಾದ ಮೇಲೆ ಪೇತ್ರ ಯೋಹಾನ ಯಾಕೋಬರನ್ನು ಕರಕೊಂಡು ಪ್ರಾರ್ಥನೆಮಾಡುವದಕ್ಕೆ ಬೆಟ್ಟವನ್ನು ಹತ್ತಿದನು. ಆತನು ಪ್ರಾರ್ಥನೆಮಾಡುತ್ತಿರಲಾಗಿ ಆತನ ಮುಖಭಾವವು ಬೇರೆಯಾಯಿತು. ಆತನ ಉಡುಪು ಬೆಳ್ಳಗಾಗಿ ಮಿಂಚುತ್ತಾ ಬಂತು. ಇದಲ್ಲದೆ ಇಬ್ಬರು ಪುರುಷರು ಆತನ ಸಂಗಡ ಮಾತಾಡುತ್ತಿದ್ದರು. ಇವರು ಯಾರಂದರೆ ಮೋಶೆಯೂ ಎಲೀಯನೂ. ಇವರು ವೈಭವದೊಡನೆ ಕಾಣಿಸಿಕೊಂಡು ಯೆರೂಸಲೇಮಿನಲ್ಲಿ ಆತನು ನೆರವೇರಿಸಬೇಕಾಗಿದ್ದ ಮರಣದ ವಿಷಯವಾಗಿ ಮಾತಾಡುತ್ತಿದ್ದರು. ಅಷ್ಟರಲ್ಲಿ ಪೇತ್ರನಿಗೂ ಅವನ ಸಂಗಡ ಇದ್ದವರಿಗೂ ನಿದ್ರೆಯಿಂದ ಮೈಭಾರವಾಗಿತ್ತು. ಆದರೆ ಎಚ್ಚರವಾದ ಮೇಲೆ ಅವರು ಆತನ ಮಹಿಮೆಯನ್ನೂ ಆತನ ಸಂಗಡ ನಿಂತಿದ್ದ ಆ ಇಬ್ಬರು ಪುರುಷರನ್ನೂ ಕಂಡರು. ಇವರು ಆತನನ್ನು ಬಿಟ್ಟುಹೋಗುತ್ತಿರುವಾಗ ಪೇತ್ರನು ಯೇಸುವಿಗೆ–ಗುರುವೇ ನಾವು ಇಲ್ಲೇ ಇರುವದು ಒಳ್ಳೇದು, ಮೂರು ಪರ್ಣಶಾಲೆಗಳನ್ನು ಕಟ್ಟುವೆವು; ನಿನಗೊಂದು ಮೋಶೆಗೊಂದು ಎಲೀಯನಿಗೊಂದು ಎಂದು ಹೇಳಿದನು. ತಾನಂದದ್ದು ತನಗೇ ಗೊತ್ತಾಗಲಿಲ್ಲ. ಅವನು ಇದನ್ನು ಹೇಳುತ್ತಿರುವಲ್ಲಿ ಮೋಡವು ಬಂದು ಅವರ ಮೇಲೆ ಕವಿಯಿತು. ಅವರು ಮೋಡದೊಳಗೆ ಸೇರಿದಾಗ ಹೆದರಿದರು. ಆಗ ಆ ಮೋಡದೊಳಗಿಂದ–ಈತನು ನನ್ನ ಮಗನು. ನಾನು ಆರಿಸಿಕೊಂಡವನು; ಈತನ ಮಾತನ್ನು ಕೇಳಿರಿ ಎಂಬ ಆಕಾಶವಾಣಿ ಆಯಿತು. ಆ ವಾಣಿ ಆದ ಮೇಲೆ ಯೇಸುವನ್ನು ಮಾತ್ರ ಕಂಡರು. ತಾವು ಕಂಡ ಈ ಸಂಗತಿಗಳೊಳಗೆ ಒಂದನ್ನಾದರೂ ಆ ದಿವಸಗಳಲ್ಲಿ ಯಾರಿಗೂ ತಿಳಿಸದೆ ಸುಮ್ಮನಿದ್ದರು.

# (ಯೇಸುವಿನ) ಪ್ರಕಾಶ ರೂಪದರ್ಶನ

**ರೀಪ್ರಿಂಟ್ಸ್ ಪುಟ 1761**

## ಲೂಕ 9:28–36 ಸಮಾನ ವಿವರಣೆಗಳು – ಮತ್ತಾಯ 17:1–13; ಮಾರ್ಕ 9:2–13

**"ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ ಈತನ ಮಾತನ್ನು ಕೇಳಿರಿ;" – ಮತ್ತಾಯ 17:5**

ಈ ಪಾಠವು 22ನೇ ವಚನದಿಂದ ಪ್ರಾರಂಭವಾಗಬೇಕು. ವಚನಗಳು 22–26, ನಮ್ಮ ಕರ್ತನು ತಾನು ಶೀಘ್ರದಲ್ಲಿ ತಲುಪಲಿರುವ ತನ್ನ ಜೀವನದ ದುಃಖಾಂತ್ಯವನ್ನು ಮತ್ತು ಮೂರನೇ ದಿನದಲ್ಲಿ ತಾನು ಪುನರುತ್ಥಾನವಾಗುವದನ್ನು ಖಚಿತಪಡಿಸಿ ತನ್ನ ಶಿಷ್ಯರಿಗೆ ಹೇಗೆ ಈ ಗುಪ್ತಸಂಗತಿಯನ್ನು ಬಹಿರಂಗಪಡಿಸಿದ್ದನೆಂಬುದನ್ನು ನಮಗೆ ತಿಳಿಸುತ್ತವೆ. ಆನಂತರ ಆತನು ತನ್ನ ಶಿಷ್ಯರು ಇದೇ ರೀತಿಯ ಹಿಂಸೆಯನ್ನು ಅನುಭವಿಸುವದಕ್ಕೆ ಹೊರತಾಗಿಲ್ಲವೆಂಬುದನ್ನು ತಿಳಿಸಿ ಇಂಥಾ ಪರಿಶೋಧನೆಯಲ್ಲಿಯೂ ಸಹ ಅವರು ನಂಬಿಗಸ್ತರಾಗಿರಬೇಕೆಂದು ಬುದ್ಧಿಮಾತು ಹೇಳಿ, ಇದಕ್ಕೆ ಅವರಿಗೆ ತನ್ನ ಎರಡನೇ ಬರುವಿಕೆಯಲ್ಲಿ ತನ್ನ ರಾಜ್ಯದ ಪ್ರಭಾವದಲ್ಲಿ ಮಹಾ ಪ್ರತಿಫಲವುಂಟೆಂದು ಭರವಸೆ ನೀಡಿದ್ದನು.

27ನೇ ವಚನವು ಒಂದು ಪ್ರವಾದನೆಯಾಗಿದ್ದು, ಈ ಪಾಠದ ವಿವರಣೆಗಳು ಪ್ರಮಾಣಿಸಿ ತೋರಿಸಿದಂತೆ ಅದು ಹೆಚ್ಚುಕಡಿಮೆ ಆ ಕೂಡಲೇ ನೆರವೇರಿಕೆಯನ್ನು ಕಂಡಿತ್ತು.

ವಚನಗಳು 28–36. ಇಲ್ಲಿ ಬರೆಯಲಾದ ಘಟನೆಯು ಒಂದು "ದರ್ಶನ", ಹಾಗು ಇದು ನಿಜವಲ್ಲ ಎಂಬುದನ್ನು ಸಾಬೀತುಪಡಿಸಿರುವುದಕ್ಕೆ ಸ್ವತಃ ನಮ್ಮ ಕರ್ತನ ಮಾತುಗಳನ್ನೇ ನಾವು ಹೊಂದಿದ್ದೇವೆ. "ಅವರು ಆ ಬೆಟ್ಟದಿಂದ ಇಳಿದು ಬರುತ್ತಿರುವಾಗ ಯೇಸು ಅವರಿಗೆ–ನೀವು ಈಗ ಕಂಡ ದರ್ಶನವನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎಬ್ಬಿಸಲ್ಪಡುವ ತನಕ ಯಾರಿಗೂ ಹೇಳಬೇಡಿರೆಂದು ಖಂಡಿತವಾಗಿ ಹೇಳಿದನು." – ಮತ್ತಾಯ 17:9

ಇದು "ದರ್ಶನ" ಎಂಬ ಅಭಿಪ್ರಾಯವನ್ನು ಅಪೋಸ್ತಲನಾದ ಪೇತ್ರನು ಸಹ ಸ್ಪಷ್ಟವಾಗಿ ಸೂಚಿಸಿರುವನು (2 ಪೇತ್ರ 1:16–18). ಇದು ಬರಲಿರುವ ಕ್ರಿಸ್ತನ ರಾಜ್ಯದಲ್ಲಿನ ಮಹಿಮೆಯ ಒಂದು "ದರ್ಶನ" ಆಗಿತ್ತೆಂಬುದನ್ನು ತಿಳಿಸಿ ಹೀಗೆ ಹೇಳಿರುವನು: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಪ್ರತ್ಯಕ್ಷತೆಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು. ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ಮೆಚ್ಚಿದ್ದೇನೆ ಎಂಬಂಥ ವಾಣಿಯು ಸರ್ವೋತ್ಕೃಷ್ಟಪ್ರಭಾವದಿಂದ ಆತನಿಗೆ ಉಂಟಾದದ್ದರಲ್ಲಿ ಆತನು ತಂದೆಯಾದ ದೇವರಿಂದ ಘನಮಾನಗಳನ್ನು ಹೊಂದಿದನಲ್ಲವೇ. ನಾವು ಪರಿಶುದ್ಧಪರ್ವತದ ಮೇಲೆ ಆತನ ಸಂಗಡ ಇದ್ದಾಗ ಆಕಾಶದಿಂದ ಬಂದ ಆ ವಾಣಿಯನ್ನು ನಾವೇ ಕೇಳಿದೆವು."

ಇದು ಒಂದು "ದರ್ಶನವಾಗಿ" ಕ್ರಿಸ್ತನ ಸಾವಿರ ವರುಷದ ಆಳ್ವಿಕೆಯ ರಾಜ್ಯದ ಮಹಿಮೆಯುನ್ನು ಸಾಂಕೇತಿಕವಾಗಿ ಸೂಚಿಸುವದೆಂಬುದನ್ನು ಅರ್ಥಮಾಡಿಕೊಳ್ಳಬೇಕು. ನಮ್ಮ ಕರ್ತನ ಬದಲಾದ ವ್ಯಕ್ತಿರೂಪ ಮತ್ತು ವಸ್ತ್ರಗಳು ಮುಂಬರುವ ಆತನ ವೈಯುಕ್ತಿವಾದ ಮಹಿಮೆಯ ಸಂಕೇತಗಳಾಗಿದ್ದವು. ಮತ್ತು ಮೋಶೆ ಮತ್ತು ಎಲೀಯರು ಪ್ರಭಾವದಿಂದ ಪ್ರತ್ಯಕ್ಷವಾಗಿದ್ದುದು

ಸಹ ಕರ್ತನ ರಾಜ್ಯದ ಪ್ರಭಾವದಲ್ಲಿ ಆತನ ಜೊತೆಯಲ್ಲಿರುವ ಎರಡು ಗುಂಪುಗಳನ್ನು ಸೂಚಿಸಿತ್ತು; ಅದು ಆ ರಾಜ್ಯದಲ್ಲಿನ ಪರಲೋಕದ ಸ್ವಾಸ್ಥ್ಯಕ್ಕೆ ಸಂಬಂಧಿಸಿದವರ ಹಾಗೂ ಭೂಲೋಕದ ಸ್ವಾಸ್ಥ್ಯಕ್ಕೆ ಸಂಬಂಧಿಸಿದವರ ಮನುಷ್ಯರ ಗುಂಪುಗಳನ್ನು ಒಳಗೊಂಡಿರುವದು. ಮೋಶೆಯು ಭೂಲೋಕ ಸ್ವಾಸ್ಥ್ಯಕ್ಕೆ ಸಂಬಂಧಿಸಿದವರನ್ನು ಸೂಚಿಸಿದ್ದನು ಮತ್ತು ಎಲೀಯನು ಪರಲೋಕದ ಸ್ವಾಸ್ಥ್ಯಕ್ಕೆ ಸಂಬಂಧಿಸಿದವರನ್ನು ಸೂಚಿಸಿದ್ದನು. ಈ ಸಾಂಕೇತಿಕವಾದ "ದರ್ಶನವು" ವಚನ 27ರಲ್ಲಿ ಉಲ್ಲೇಖಿಸಿರುವಂತೆ ಸ್ಥಾಪನೆಗೊಂಡ ಆ ರಾಜ್ಯಕ್ಕೆ ಸೂಚನೆಯಾಗಿತ್ತು – "ನಿಮಗೆ ನಿಜವಾಗಿ ಹೇಳುತ್ತೇನೆ, ಇಲ್ಲಿ ನಿಂತವರೊಳಗೆ ಕೆಲವರು, ಮನುಷ್ಯಕುಮಾರನು ತನ್ನ ರಾಜ್ಯದಲ್ಲಿ ಬರುವದನ್ನು ನೋಡುವ ತನಕ ಮರಣಹೊಂದುವದಿಲ್ಲ ಅಂದನು." ಅವರು ನಿಜವಾದ ಮೋಶೆ ಮತ್ತು ಎಲೀಯರಾಗಿರಲಿಲ್ಲ, ಯಾಕೆಂದರೆ ಅದು ಒಂದು "ದರ್ಶನ", ನಿಜವಾದುದಲ್ಲ. (ಯೊದ 9; ರೋಮಾ 5:12; ಪ್ರಸಂಗಿ 9:5; ಕೀರ್ತನೆ 146:4; ಯೋಬ 14:21; ಯೋಹಾನ 3:13; ಅಪೊಸ್ತಲರ ಕೃತ್ಯಗಳು 2:34; ಕೀರ್ತನೆ 90:3) ಇಲ್ಲವೇ ಅವರ ಪುನರುತ್ಥಾನಕ್ಕೆ ಅದು ಸೂಕ್ತಕಾಲವಾಗಿರಲಿಲ್ಲ: "ನಾವಿಲ್ಲದೆ (ಸಭೆ) ಅವರು (ಯೆಹೂದ್ಯರ ಕಾಲದಲ್ಲಿ ನಂಬಿಕೆಗೆ ಹೆಸರುಗೊಂಡವರು) ಸಿದ್ಧಿಗೆ ಬರಬಾರದೆಂದು ಸಂಕಲ್ಪಿಸಿದ್ದನು. (ಇಬ್ರಿಯ 11:40) ಆದುದರಿಂದ ಕ್ರಿಸ್ತನ ಎರಡನೆಯ ಬರುವಿಕೆಯು ನೆರವೇರಲ್ಪಟ್ಟು ಆ ರಾಜ್ಯದಲ್ಲಿನ ಪರಲೋಕ ಸ್ವಾಸ್ಥ್ಯದವರು ಅಂದರೆ ಸುವಾರ್ತಾಯುಗದ ಸಭೆಯು (ಮರಣದಿಂದ ಎಬ್ಬಿಸಲ್ಪಟ್ಟು) ಪೂರ್ಣವಾಗಿ ಸ್ಥಾಪನೆಯಾಗುವ ವರೆಗೂ ಅವರ ಪುನರುತ್ಥಾನವು ವಿಳಂಬವಾಗುವದು.

31ನೇ ವಚನವು ಪ್ರಭಾವ ಹೊಂದಿದ ಈ ಮೂವರ ಮೂಲತತ್ವಗಳನ್ನು ದಾಖಲಿಸಿರುವದು; ಅದು ಯೆರೂಸಲೇಮಿನಲ್ಲಿ ನೆರವೇರಿಸಲ್ಪಡುವ ಆ ವಿಶೇಷ ವ್ಯವಹಾರಿಕ ರೂಪದ ಕಾರ್ಯವು, ಅಂದರೆ ಕರ್ತನ ಶಿಲುಬೆಯ ಮರಣ, ನಮ್ಮ (ಬಿಡುಗಡೆಗಾಗಿ) ಈಡು ಬೆಲೆಯ ನೀಡುವಿಕೆ.

ಆ "ದರ್ಶನದ" ಉದ್ದೇಶವು ಎರಡು ಬಗೆಯದಾಗಿರುವ ಸಂಭವವಿತ್ತು. ಅದೇನೆಂದರೆ, ಕರ್ತನಿಗೆ ಸಮಾದಾನ ಬಲಪಡಿಸುವಿಕೆಗಳಿಗಾಗಿ ಮತ್ತು ಆತನು ಆದುಕೊಂಡ ಸಾಕ್ಷಿಗಳಿಗೆ ತಿಳುವಳಿಕೆ ನೀಡುವ ಸಲುವಾಗಿದ್ದವು. ಕರ್ತನಿಗೆ ತನ್ನ ಮರಣದ ವಿಷಯವಾಗಿ ಶಿಷ್ಯರು ನಿದ್ರಿಸುತ್ತಿರುವಾಗ (ವಚನ 32) ತಿಳಿಸಿರುವ ಸಂಭವವಿತ್ತು; ಅದುದರಿಂದ ಇದು ವಿಶೇಷವಾಗಿ ಆತನ ಸಮಾದಾನಕ್ಕಾಗಿತ್ತೆಂಬುದು ನಿಸ್ಸಂದೇಹವಾಗಿತ್ತು. ಆ "ದರ್ಶನವು" ಆತನ ಪ್ರಾರ್ಥನೆಗೆ ಉತ್ತರವಾಗಿ ಬಂದಿತ್ತು; ಹಾಗು ಆ ಸಮಯದಲ್ಲಿ ಶಿಷ್ಯರಿಗೆ ಇದು ಅರ್ಥವಾಗದಿದ್ದರೂ ಆನಂತರ ಅವರಿಗೆ ಇದು ಒಂದು ಭಾಗ್ಯಕರವಾದ ಪ್ರೇರಣೆಯಾಯಿತು ಮತ್ತು ಅದು ನಮಗೂ ಸಹ ಹೀಗೆಯೇ ಆಗಿರಬೇಕು. ಆದರೂ ಪೇತ್ರನು ಹೇಳಿರುವದು, "ಇದಲ್ಲದೆ (ಆ ರಾಜ್ಯ ಪ್ರಭಾವಗಳ ವಿಷಯವಾದ) ಪ್ರವಾದನಾವಾಕ್ಯವು ನಮಗೆ ಮತ್ತೂ ದೃಢವಾಗಿದೆ. (ಆ ಕಾಲದ ವಿಷಯವಾಗಿ ಜಗದುತ್ಪತ್ತಿ ಮೊದಲುಗೊಂಡು ಎಲ್ಲಾ ಪರಿಶುದ್ಧ ಪ್ರವಾದಿಗಳ ಬಾಯಿಂದ ಹೇಳಿಸಲಾಗಿರುವದು – ಅ.ಕೃ 3:19–21) ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು." (2 ಪೇತ್ರ 1:19) ಆ "ದರ್ಶನವು" ಸಾಂಕೇತಿಕವಾಗಿ ಆ ರಾಜ್ಯ ಕುರಿತಾಗಿ ಒಂದು ಬಗೆಬಗೆಯ ಮತ್ತು ಪುನಶ್ಚೇತನಗೊಳಿಸುವ ದೃಶ್ಯವಾಗಿತ್ತಾದರೂ "ದೃಢವಾದ ಪ್ರವಾದನಾ ವಾಕ್ಯಗಳ" ಸಮರ್ಥನೆಯ ಹೊರತಾಗಿ ಅದನ್ನು ಬುದ್ಧಿಪೂರ್ವಕವಾಗಿ ಗ್ರಹಿಸಲು ಸಾಧ್ಯವಿರುತ್ತಿರಲಿಲ್ಲ.

ವಚನ 34–35. ಇಲ್ಲಿ ನಮ್ಮ ಕರ್ತನು ದೇವರಿಗೆ ಮೆಚ್ಚಿಗೆಯಾಗಿಯೂ ಅಂಗೀಕೃತವಾಗಿಯೂ ಇರುವ ಕುಮಾರನು ಎಂದು ಪರಲೋಕದಿಂದ ಬಂದ ಒಂದು ವಾಣಿಯ ಸಾಕ್ಷಿಯಿರುವದು. ಆತನು ಹುಟ್ಟುವಾಗ ಪರಲೋಕದ ದೇವದೂತರು ಅದನ್ನು ಸಾರಿದ್ದರು; ಆತನು ಸ್ನಾನದೀಕ್ಷೆ ಹೊಂದುವಾಗ ಆತನು ದೇವರಿಗೆ ಮೆಚ್ಚಿಗೆಯಾದ ಮಗನು ಎಂದು ಪರಲೋಕದಿಂದ ಬಂದ ವಾಣಿಯು ತಿಳಿಸಿತ್ತು; ಮತ್ತು ಇಲ್ಲಿ ಆತನ ಮನುಷ್ಯನ ಅಸ್ತಿತ್ವವು ಮುಕ್ತಾಯವಾಗಲು ಸಮೀಪಿಸಿದ ಕಾಲದಲ್ಲಿ ಆತನು ಬಹು ಮೆಚ್ಚಿಕೆಯಾಗಿ ಅಂಗೀಕೃತನಾದ ಮಗನೆಂದು ಮತ್ತೆ ಸಾರಲಾಗಿತ್ತು.

ವಚನ 36. ಆ "ದರ್ಶನವು" ಆದ ನಂತರ ಆತನು ಒಬ್ಬನೇ ಇದ್ದನು. ಆ "ದರ್ಶನ" ವಾಣಿ ಮೋಡ ಇವೆಲ್ಲವೂ ಮುಗಿದು ಹೋಗಿ ಮತ್ತೆ ಸಹಜ ಸ್ಥಿತಿಗೆ ಬಂದದ್ದಾಗಿದ್ದರೂ ಆ ಪವಿತ್ರ ಗಳಿಗೆ ಸಂಬಂಧವಾದ ಪಾಠವು ಉಳಿದುಕೊಂಡು ಅದರ ಮಹತ್ವವು ಕ್ರಮೇಣ ವಿಸ್ತಾರವಾಗುತ್ತಾ ಬಂದು ಪಂಚಾಶತ್ತಮ ದಿನದಂದು ಪವಿತ್ರಾತ್ಮಾಭಿಷೇಕವಾದ ನಂತರ ಅವರಿಗೆ (ಶಿಷ್ಯರಿಗೆ) ಅದರ ಮಹತ್ವವು ಗ್ರಹಿಕೆಯಾಗಿತ್ತು.

ಹೀಗೆ ದೇವರ ಮಹಿಮೆಯುಳ್ಳ ಕೃಪಾಪೂರ್ಣವಾದ ಯೋಜನೆಗಳ ವಿಷಯವಾದ ಆತನ ಭಾಗ್ಯಕರವಾದ ಸತ್ಯಾರ್ಥಗಳು ಸೂತ್ರದ ಮೇಲೆ ಸೂತ್ರ ಮತ್ತು ಆಜ್ಞೆಯ ಮೇಲೆ ಆಜ್ಞೆಯಾಗಿ ಆತನ (ಕರ್ತನ) ಶಿಷ್ಯರ ಹೃದಯ ಮತ್ತು ಮನಸ್ಸುಗಳಲ್ಲಿ ನಾಟಿಕೊಂಡು ನೆಲೆಯಾಗಿದ್ದವು; ಅಲ್ಲದೆ ನಾವೂ ನಮ್ಮನ್ನು ಹೆಚ್ಚುಹೆಚ್ಚಾಗಿ ಆತನ ವಾಕ್ಯಗಳ ಅನ್ಯೋನ್ಯತೆಗೆ ನಮ್ಮನ್ನು ಕರತಂದಾಗ ಇವು ನಮ್ಮಲ್ಲಿಯೂ ಸಹ ಹೀಗೆಯೇ ಇರುವದು.

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಕೈಸರೈಯದ ಫಿಲಿಪ್ಪಿ | ಶಿಷ್ಯರು ಗುಣಪಡಿಸಲಾಗದಿದ್ದ ದೆವ್ವ ಹಿಡಿದವನನ್ನು ಗುಣಪಡಿಸಿದ್ದು | 17:14–20 | 9:14–29 | 9:37–43 | –– |

## ಮತ್ತಾಯ 17:14–20

ಅವರು ಜನರ ಗುಂಪಿನ ಬಳಿಗೆ ಬಂದಾಗ ಒಬ್ಬನು ಆತನ ಹತ್ತರಕ್ಕೆ ಬಂದು ಆತನ ಮುಂದೆ ಮೊಣಕಾಲೂರಿ ವಂದಿಸಿ–ಸ್ವಾಮೀ, ನನ್ನ ಮಗನನ್ನು ಕರುಣಿಸು; ಅವನು ಮೂರ್ಛಾ ರೋಗದಿಂದ ಬಹಳ ಕಷ್ಟಪಡುತ್ತಾನೆ; ಆಗಾಗ್ಗೆ ಬೆಂಕಿಯಲ್ಲಿಯೂ ಆಗಾಗ್ಗೆ ನೀರಿನಲ್ಲಿಯೂ ಬೀಳುತ್ತಿರುವನು. ಅವನನ್ನು ನಿನ್ನ ಶಿಷ್ಯರ ಬಳಿಗೆ ಕರಕೊಂಡು ಬಂದಿದ್ದೆನು; ಆದರೆ ಅವನಿಗೆ ವಾಸಿಮಾಡುವದಕ್ಕೆ ಅವರಿಂದ ಆಗದೆಹೋಯಿತು ಅಂದನು. ಅದಕ್ಕೆ ಯೇಸು–ಎಲಾ, ನಂಬಿಕೆಯಲ್ಲದಂಥ ಮೂರ್ಖ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ನನ್ನ ಬಳಿಗೆ ತಕ್ಕೊಂಡು ಬನ್ನಿರಿ ಅಂದನು. ಯೇಸು ಅವನನ್ನು ಗದರಿಸಲು ದೆವ್ವ ಅವನನ್ನು ಬಿಟ್ಟುಹೋಯಿತು; ಆ ಕ್ಷಣವೇ ಆ ಹುಡುಗನಿಗೆ ಸ್ವಸ್ಥವಾಯಿತು. ತರುವಾಯ ಶಿಷ್ಯರು ಏಕಾಂತವಾಗಿ ಯೇಸುವಿನ ಬಳಿಗೆ ಬಂದು–ಅದನ್ನು ಬಿಡಿಸಲಿಕ್ಕೆ ನಮ್ಮಿಂದ ಯಾಕೆ ಆಗಲಿಲ್ಲವೆಂದು ಕೇಳಲು ಆತನು ಅವರಿಗೆ–ನಿಮ್ಮ ನಂಬಿಕೆ ಕಡಿಮೆಯಾಗಿರುವದರಿಂದಲೇ ಆಗಲಿಲ್ಲ; ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೇಕಾಳಷ್ಟು ನಂಬಿಕೆ ನಿಮಗೆ ಇರುವದಾದರೆ ನೀವು ಈ ಬೆಟ್ಟಕ್ಕೆ–ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು; ಮತ್ತು ನಿಮ್ಮ ಕೈಯಿಂದಾಗದಂಥದು ಒಂದೂ ಇರುವದಿಲ್ಲ ಅಂದನು.

## ಮಾರ್ಕ 9:14–29

ತರುವಾಯ ಅವರು (ಉಳಿದ) ಶಿಷ್ಯರ ಬಳಿಗೆ ಬಂದು ಅವರ ಸುತ್ತಲು ಜನರ ದೊಡ್ಡ ಗುಂಪು ಇರುವದನ್ನೂ ಅವರ ಸಂಗಡ ಶಾಸ್ತ್ರಿಗಳು ತರ್ಕಮಾಡುವದನ್ನೂ ಕಂಡರು. ಕೂಡಲೆ ಆ ಗುಂಪಿನವರೆಲ್ಲರು ಯೇಸುವನ್ನು ಕಂಡು ಬಹು ಆಶ್ಚರ್ಯಪಟ್ಟು ಆತನ ಬಳಿಗೆ ಓಡಿಬಂದು ಆತನನ್ನು ವಂದಿಸಿದರು. ಆತನು ಶಾಸ್ತ್ರಿಗಳನ್ನು–ಇವರ ಸಂಗಡ ಏನು ತರ್ಕಮಾಡುತ್ತೀರಿ? ಎಂದು ಕೇಳಿದ್ದಕ್ಕೆ ಆ ಗುಂಪಿನಲ್ಲಿ ಒಬ್ಬನು–ಬೋಧಕನೇ, ನನ್ನ ಮಗನನ್ನು ನಿನ್ನ ಬಳಿಗೆ ಕರಕೊಂಡು ಬಂದೆನು; ಅವನಿಗೊಂದು ಮೂಗದೆವ್ವ ಹಿಡಿದದೆ; ಅದು ಎಲ್ಲಿ ಅವನ ಮೇಲೆ ಬಂದರೂ ಅವನನ್ನು ಕೆಡವುತ್ತದೆ; ಆಗ ಅವನು ನೊರೆಸುರಿಸುತ್ತಾ ಕರಕರನೆ ಹಲ್ಲು ಕಡಿಯುತ್ತಾ ಕುಂದಿಹೋಗುತ್ತಾನೆ. ಅದನ್ನು ಬಿಡಿಸಬೇಕೆಂದು ನಿನ್ನ ಶಿಷ್ಯರಿಗೆ ಹೇಳಿಕೊಂಡೆ; ಅವರ ಕೈಯಿಂದ ಆಗದೆಹೋಯಿತು ಎಂದು ಉತ್ತರ ಕೊಟ್ಟನು. ಅದಕ್ಕಾತನು–ಎಲಾ, ನಂಬಿಕೆಯಿಲ್ಲ ದಂಥ ಸಂತಾನವೇ, ನಾನು ಎನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ? ಅವನನ್ನು ನನ್ನ ಬಳಿಗೆ ತೆಗೆದುಕೊಂಡು ಬನ್ನಿರಿ, ಅನ್ನಲು ಅವನನ್ನು ಆತನ ಬಳಿಗೆ ತೆಗೆದುಕೊಂಡುಬಂದರು. ಆತನನ್ನು ಕಂಡಕೂಡಲೆ ಆ ದೆವ್ವವು ಅವನನ್ನು ಬಹಳವಾಗಿ ಒದ್ದಾಡಿಸಲು ಅವನು ನೆಲಕ್ಕೆ ಬಿದ್ದು ನೊರೆಸುರಿಸುತ್ತಾ ಹೊರಳಾಡಿದನು. ಯೇಸು ಅವನ ತಂದೆಯನ್ನು–ಇದು ಅವನಿಗೆ ಬಂದು ಎಷ್ಟು ದಿನವಾಯಿತು ಎಂದು ಕೇಳಿದಾಗ ಅವನು–ಚಿಕ್ಕಂದಿನಲ್ಲಿಯೇ ಬಂದಿದೆ; ಮತ್ತು ಇವನನ್ನು ಕೊಲ್ಲಬೇಕೆಂದು ಅಗಾಗ್ಗೆ ಬೆಂಕಿಯಲ್ಲಿಯೂ ನೀರಿನಲ್ಲಿಯೂ ಕೆಡವಿತು; ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣವಿಟ್ಟು ನಮಗೆ ಸಹಾಯಮಾಡು ಅಂದನು. ಯೇಸು ಅವನಿಗೆ–ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು ಎಂದು ಹೇಳಿದನು. ಕೂಡಲೆ ಆ ಹುಡುಗನ ತಂದೆಯು–ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು ಎಂದು ಕೂಗಿ ಹೇಳಿದನು. ಆಗ ಯೇಸು ಜನರ ಗುಂಪು ಓಡಿಬರುವದನ್ನು ಕಂಡು ಆ ದೆವ್ವವನ್ನು ಗದರಿಸಿ–ಎಲೇ, ಕಿವುಡಾದ ಮೂಗದೆವ್ವವೇ, ಇವನನ್ನು ಬಿಟ್ಟು ಹೋಗು; ಇನ್ನು ಮುಂದೆ ಹಿಡಿಯ ಬೇಡವೆಂದು ನಾನು ನಿನಗೆ ಅಪ್ಪಣೆಕೊಡುತ್ತೇನೆ ಅಂದನು. ಆಗ ಅದು ಅಬ್ಬರಿಸಿ ಅವನನ್ನು ಒದ್ದಾಡಿಸಿ ಬಿಟ್ಟು ಹೋಯಿತು. ಆ ಹುಡುಗನು ಸತ್ತಹಾಗೆ ಬಿದ್ದಿದ್ದರಿಂದ ಬಹುಜನರು–ಸತ್ತುಹೊದ ಅಂದರು. ಆದರೆ ಯೇಸು ಅವನನ್ನು ಕೈಹಿಡಿದು ಎಬ್ಬಿಸಲು ಅವನು ಎದ್ದು ನಿಂತನು. ಯೇಸು ಮನೆಗೆ ಬಂದಾಗ ಆತನ ಶಿಷ್ಯರು–ಅದನ್ನು ಬಿಡಿಸಲಿಕ್ಕೆ ನಮ್ಮಿಂದ ಯಾಕೆ ಆಗಲಿಲ್ಲವೆಂದು ಆತನನ್ನು ಏಕಾಂತದಲ್ಲಿ ಕೇಳಲು ಆತನು–ಈ ಜಾತಿಯು ದೇವರ ಪ್ರಾರ್ಥನೆಯಿಂದಲೇ ಹೊರತು ಬೇರೆ ಯಾತರಿಂದಲೂ ಬಿಟ್ಟು ಹೋಗುವದಿಲ್ಲವೆಂದು ಅವರಿಗೆ ಹೇಳಿದನು.

## ಲೂಕ 9:37–43

ಮರುದಿವಸ ಅವರು ಬೆಟ್ಟದಿಂದ ಇಳಿದು ಬಂದಾಗ ಜನರ ದೊಡ್ಡ ಗುಂಪು ಆತನೆದುರಿಗೆ ಬಂತು. ಆಗ ಆ ಗುಂಪಿನಲ್ಲಿ ಒಬ್ಬನು–ಬೋಧಕನೇ, ನನ್ನ ಮಗನ ಮೇಲೆ ದೃಷ್ಟಿಯಿಡಬೇಕು ಎಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಇವನೊಬ್ಬನೇ ಮಗನು. ಇವನನ್ನು ದೆವ್ವಹಿಡಿಯುತ್ತದೆ, ಹಿಡಿಯುತ್ತಲೇ ಕೂಗಿಕೊಳ್ಳುತ್ತಾನೆ. ಬಾಯಲ್ಲಿ ನೊರೆ ಬರುವಷ್ಟು ಇವನನ್ನು ಒದ್ದಾಡಿಸುತ್ತದೆ; ಮತ್ತು ಬಹು ಕಷ್ಟಕೊಟ್ಟು ಜಜ್ಜಿದ ಹೊರತು ಬಿಡುವದಿಲ್ಲ. ಅದನ್ನು ಬಿಡಿಸಬೇಕೆಂದು ನಿನ್ನ ಶಿಷ್ಯರನ್ನು ಬೇಡಿಕೊಂಡೆನು. ಆದರೆ ಅವರಿಂದ ಆಗದೆಹೋಯಿತು ಎಂದು ಕೂಗಿ ಹೇಳಿದನು. ಅದಕ್ಕೆ ಯೇಸು–ಎಲಾ, ನಂಬಿಕೆಯಿಲ್ಲದಂಥ ಮೂರ್ಖಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇದ್ದು ನಿಮ್ಮನ್ನು ಸಹಿಸಿಕೊಳ್ಳಲಿ? ನಿನ್ನ ಮಗನನ್ನು ಇಲ್ಲಿಗೆ ಕರಕೊಂಡು ಬಾ ಅಂದನು. ಆ ಹುಡುಗನು ಇನ್ನೂ ಬರುತ್ತಿರುವಾಗ ಆ ದೆವ್ವವು ಅವನನ್ನು ನೆಲಕ್ಕೆ ಅಪ್ಪಳಿಸಿ ಬಹಳವಾಗಿ ಒದ್ದಾಡಿಸಿತು. ಆದರೆ ಯೇಸು ಆ ದೆವ್ವವನ್ನು ಗದರಿಸಿ ಆ ಹುಡುಗನಿಗೆ ವಾಸಿಮಾಡಿ ಅವನ ತಂದೆಯ ಕೈಗೆ ಕೊಟ್ಟನು. ಅದನ್ನು ನೋಡಿ ಎಲ್ಲರು ದೇವರ ಮಹತ್ವಕ್ಕೆ ಬೆರಗಾದರು. ಯೇಸು ಮಾಡಿದ ಎಲ್ಲಾ ಕಾರ್ಯಗಳಿಗೆ ಎಲ್ಲರು ಆಶ್ಚರ್ಯಪಡುತ್ತಿರಲಾಗಿ ಆತನು ತನ್ನ ಶಿಷ್ಯರಿಗೆ–ನೀವಂತೂ ಈ ಮಾತುಗಳನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ; ಯಾಕಂದರೆ ಮನುಷ್ಯಕುಮಾರನು ಮನುಷ್ಯರ ಕೈಗೆ ಒಪ್ಪಿಸಲ್ಪಡುವನು ಎಂದು ಹೇಳಿದನು.

# ನಂಬುವವನಿಗೆ ಎಲ್ಲಾ ಆಗುವದು

**ರೀಪ್ರಿಂಟ್ಸ್ ಪುಟ 5128**

## ಮಾರ್ಕ 9:14–29

**"ಯೇಸು ಅವನಿಗೆ–ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು ಎಂದು ಹೇಳಿದನು."**

**– ಮಾರ್ಕ 9:23**

ಯೇಸುವು ಮತ್ತು ಮೂರು ಪ್ರಿಯ ಅಪೋಸ್ತಲರು ಮುಂಬರುವ ಮಹಿಮೆಯ "ದರ್ಶನವನ್ನು" ಕಂಡು ಆನಂದಿಸಿ ಬೆಟ್ಟದಿಂದ ಕೆಳಗೆ ಇಳಿದು ಬಂದಾಗ ಬೆಟ್ಟದ ಪಾದದ ಬಳಿಯಲ್ಲಿ ಇತರ ಒಂಭತ್ತು ಅಪೋಸ್ತಲರು ಗುಂಪಿನಿಂದ ಸುತ್ತುವರಿಯಲ್ಪಟ್ಟದ್ದನ್ನು ಕಂಡರು. ಅವರು ಒಬ್ಬ ಹುಡುಗನಿಂದ ಒಂದು ದೆವ್ವವನ್ನು ಬಿಡಿಸಲು ಹಲವು ನಿರರ್ಥಕ ಪ್ರಯತ್ನಗಳನ್ನು ಮಾಡಿದ್ದರು. ಆ ಹುಡುಗನ ತಂದೆಯು ಈ ಕಾರಣಕ್ಕಾಗಿ ಅವರ ಬಳಿಗೆ ಅವನನ್ನು ಕರಕೊಂಡು ಬಂದಿದ್ದನು.

ಕೆಲವು ಕರ್ತನ ಜನರ ವಿಷಯದಲ್ಲಿ ಹೀಗೆಯೇ ಇರುವದು; ಒಮ್ಮೊಮ್ಮೆ ಅವರು ನಂಬಿಕೆಯ ಮೂಲಕ ಬೆಟ್ಟವನ್ನು ಏರಿ ಆ ರಾಜ್ಯದೊಳಗೆ ಹೋಗುವರು; ನಂಬಿಕೆಯ ಮೂಲಕ ಕರ್ತನ ಮಹಿಮೆಯು ಪ್ರಕಟವಾದುದನ್ನು ನೋಡುವರು, ಮತ್ತು ಅವರು ಕರ್ತನೊಡನೆ ಆತನ ಮಹಿಮೆಯಲ್ಲಿ ಸೇರಬೇಕಾದರೆ ಆತನೊಡನೆ ಬಾಧೆಯನ್ನು ಅನುಭವಿಸಬೇಕೆಂಬುದನ್ನು ಹೊಸದಾಗಿ ಕೇಳುವರು. ಆನಂತರ ಮಹಿಮೆಯುಳ್ಳ ವಿಷಯುಗಳನ್ನು ಅವಲೋಕಿಸಲು ಎತ್ತರಿಸಲಾದ ಆ ಉನ್ನತಸ್ಥಳದಿಂದ ಇಳಿದು ಬಂದು ಈ ಕಾಲದ ವಾಸ್ತವಾಂಶನ್ನು ಎದುರಿಸುವರು; ಅಂದರೆ ವಿರೋಧಿಯಾದ ಸೈತಾನನು ಈಗಲೂ ಲೋಕವನ್ನು ಹಿಡಿದಿಟ್ಟುಕೊಂಡಿರುವದನ್ನು ಮನಗೊಳ್ಳುವರು; ಹಲವರು ಆತನ ದಾಸರಾಗಿದ್ದು ವಂಚಿತರಾಗಿರುವರು; ಆತನನ್ನು ಹೊರದೂಡಲು ಯಾವ ಲೌಕೀಕ ಬಲವೂ ಸಾಲದೆಂದು ಕಾಣಬರುವದು; ಅವರು ಉಳಿದ ಸಭೆಯವರ ಬಳಿಗೆ ಹಿಂದಿರುಗುವರು. ಆದರೆ ಒಡೆಯನು ಅವರೊಡನೆ ಇದ್ದರೆ ಕಡೆಯಲ್ಲಿ ಜಯವು ಅವರಿಗೆ ಲಭಿಸುವದು.

ಇದು ಆಗಾಗ್ಗೆ ದುರಾತ್ಮವು ಹಿಡಿದುಕೊಳ್ಳುವ ಒಂದು ಸಂಗತಿಯಾಗಿತ್ತು, ಆದರೆ ಇತರ ಹಲವರಲ್ಲಿ ಇದು ಸತತವಾಗಿರುವದು. ದುರಾತ್ಮವು ಕೆಲವು ಕಾಲ ಈ ಹುಡುಗನ ಮೇಲೆ ಬಂದು ಅವನು ನೊರೆಕಾರಿ ಮೂರ್ಛೆಯಿಂದ ಒದ್ದಾಡುವಂತೆಮಾಡಿ ಅವನು ಬೆಂಕಿಯಲ್ಲೋ ಅಥವಾ ನೀರಿನಲ್ಲೋ ಬೀಳುವಂತೆ ಇಲ್ಲವೇ ಅವನು ಸಂಹಾರವಾಗುವಂತೆ ಮಾಡುತ್ತಿತ್ತು. ತಂದೆತಾಯಿಗಳು ಆ ಮಗುವನ್ನು ಯೇಸುವಿನ ಬಳಿಗೆ ಗುಣವಾಗಿಸಿಕೊಳ್ಳಲು ಕರಕೊಂಡು ಬಂದಿದ್ದರು; ಆತನ ಅನುಪಸ್ಥಿತಿಯಲ್ಲಿ ಉಳಿದ ಒಂಭತ್ತು ಅಪೋಸ್ತಲರನ್ನು ಬೇಡಿಕೊಂಡಿದ್ದರು, ಅದರೆ ಅವರ ಪ್ರಯತ್ನವು ನಿಷ್ಫಲವಾಗಿತ್ತು; ಈ ದೆವ್ವವನ್ನು ಬಿಡಿಸಲು ಅವರಿಗೆ ಆಗಿರಲಿಲ್ಲ.

ವಿಫಲರಾದ ಅಪೊಸ್ತಲರು ಗೊಂದಲಕ್ಕೀಡಾಗಿದ್ದರು; ಹಿಂದೆಂದೂ ದೆವ್ವಗಳು ಆ ಒಡೆಯನ ಹೆಸರನ್ನು ಗೌರವಿಸಲು ತಪ್ಪಿರಲಿಲ್ಲ. ಯೇಸು ಮತ್ತು ಇತರ ಮೂವರು ಬೆಟ್ಟದಿಂದ ಇಳಿದು ಬಂದಾಗ ಶಾಸ್ತ್ರಿಗಳು ಅವರನ್ನು ಪ್ರಶ್ನೆಗಳ ಮೂಲಕವಾಗಿ ಪೀಡಿಸುತ್ತಿದ್ದರು. ಜನರು ಯೇಸುವನ್ನು ವಂದಿಸಿ ಆತನ ಬಳಿ ಗುಂಪುಗೂಡಿದ್ದರು, ಆದರೆ ಆತನು ಕೂಡಲೇ ಅಪೋಸ್ತಲರ ಸಹಾಯಕ್ಕೆ ಬಂದು ಅವರ ಸಮಸ್ಯೆ ಯಾವುದೆಂದು ವಿಚಾರಿಸಿದ್ದನು. ತಂದೆಯು ಮಧ್ಯೆ ಪ್ರವೇಶಿಸಿ ಹೀಗೆ ವಿವರಿಸಿದ್ದನು: "ಮೂಗದೆವ್ವಹಿಡಿದಿರುವ ನನ್ನ ಮಗನನ್ನು ಕರಕೊಂಡು ಬಂದೆನು; ಅದು ಎಲ್ಲಿ ಅವನ ಮೇಲೆ ಬಂದರೂ ಅವನನ್ನು ಕೆಡವುತ್ತದೆ; ಆಗ ಅವನು ನೊರೆಕಾರುತ್ತಾ ಕಟಕಟನೆ ಹಲ್ಲು ಕಡಿಯುತ್ತಾ ಕುಂದಿಹೋಗುತ್ತಾನೆ. ಅದನ್ನು ಬಿಡಿಸಲು ನಿನ್ನ ಶಿಷ್ಯರಿಗೆ ಕೇಳಿಕೊಂಡೆ; ಅವರಿಂದ ಆಗದೇ ಹೋಯಿತು" ಎಂದು ಉತ್ತರ ಕೊಟ್ಟನು.

ಮತ್ತು ಯೇಸು ಅವರಿಗೆ ಉತ್ತರವಾಗಿ ಹೇಳಿದ್ದು: "ಎಲಾ, ನಂಬಿಕೆಯಿಲ್ಲದಂಥ ಸಂತಾನವೆ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ; ಅವನನ್ನು ನನ್ನ ಬಳಿಗೆ ತೆಗೆದುಕೊಂಡು ಬನ್ನಿರಿ:" ಅವರು ಅವನನ್ನು ಆತನ ಬಳಿಗೆ ತೆಗದುಕೊಂಡು ಬಂದರು, ಕೂಡಲೇ ದೆವ್ವವು ಅವನನ್ನು ನೆಲಕ್ಕೆ ಬಿದ್ದು ನೊರೆಸುರಿಸುತ್ತಾ ಹೊರಳಾಡುವಂತೆ ಮಾಡಿತು. ಇವನಿಗೆ ಹೀಗಾಗಿ ಎಷ್ಟು ಕಾಲವಾಯಿತು ಎಂದು ಕೇಳಿದನು. ತಂದೆಯು ಉತ್ತರವಾಗಿ: "ಚಿಕ್ಕಂದಿನಿಂದಲೇ" ಮತ್ತು ಇವನನ್ನು ಕೊಲ್ಲಬೇಕೆಂದು ಆಗಾಗ್ಗೆ ಬೆಂಕಿಯಲ್ಲಿಯೂ ನೀರಿನಲ್ಲಿಯೂ ಕೆಡವಿತು; "ನಿನ್ನ ಕೈಲಿ ಏನಾದರೂ ಆಗುವಹಾಗಿದ್ದರೆ ನಮ್ಮ ಮೇಲೆ ಕರುಣವಿಟ್ಟು ನಮಗೆ ಸಹಾಯ ಮಾಡು ಅಂದನು."

## "ನಂಬುವವನಿಗೆ"

ಯೇಸು ಉತ್ತರವಾಗಿ ಹೇಳಿದ್ದು: "ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ? ನಂಬುವವನಿಗೆ ಎಲ್ಲಾ ಆಗುವದು..." ದೈವಿಕ ಶಕ್ತಿಯಲ್ಲಿ ನಂಬಿಕೆಯನ್ನು ತೊರಿಸಿದ ಎಲ್ಲಾ ಕಡೆಯಲ್ಲಿಯೂ ಹೇಗೆ ಕರ್ತನು ಅದಕ್ಕೆ ಬಹು ಒತ್ತುಕೊಟ್ಟಿರುವನು! "ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ." ಯಾರಿಗೆ ನಂಬಿಕೆಯನ್ನು ತೋರಿಸಲು ಸಾಧ್ಯವಾಗದೋ, ನಂಬಿಕೆಯನ್ನು ತೋರಿಸುವುದರ ಮೂಲಕವಾಗಿ ಇತರರು ಹೊಂದುವ ಆಶೀರ್ವಾದವನ್ನು ಪಡಕೊಳ್ಳಲು ಅವರಿಗೆ ಸಾಧ್ಯವಾಗುವದಿಲ್ಲ;

ಅಲ್ಲದೆ ನಾವು ನಂಬಿಕೆಯನ್ನು ಬಳಸಿದಷ್ಟೂ ನಮಗೆ ಆಶೀರ್ವಾದವು ಹೆಚ್ಚುತ್ತದೆ. ಹೀಗೆ ಕರ್ತನು (ನಂಬಿಕೆಯ) ಗುಣದಲ್ಲಿರುವ ಈ ಮುಖ್ಯಲಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿ, ತನ್ನ ಅನುಗ್ರಹ ಹೊಂದಲು ಇದನ್ನು ಅತ್ಯವಶ್ಯಕವನ್ನಾಗಿ ಮಾಡಿರುವನು.

ಈಗ ನಂಬಿಕೆಯನ್ನು ಉಪಯೋಗಿಸದ ಜನರು ಯಾವ ವಿಧವಾದ ಆಶೀರ್ವಾದವನ್ನೂ ಪಡೆಯಲಾರರೆಂಬುದು ಇಲ್ಲಿ ಅಡಕವಾಗಿರುವದಿಲ್ಲ. ಬದಲಾಗಿ, ಯಾರಿಗೆ ನಂಬಲು ಸಾದ್ಯವೋ ಮತ್ತು ಯಾರು ನಂಬಿಕೆಯನ್ನು ಇಟ್ಟಿರುವರೋ ಅಲ್ಲದೆ ಯಾರು ತಮ್ಮ ಶಕ್ತ್ಯಾನುಸಾರವಾಗಿ ವಿಧೇಯತೆಯಿಂದ ತಮ್ಮ ನಂಬಿಕೆಯನ್ನು ಅನುಸರಿಸುತ್ತಿರುವರೋ ಅವರಿಗೆ ಕರ್ತನು ಉತ್ಕೃಷ್ಟವಾಗಿಯೂ ಅಮೂಲ್ಯವಾಗಿಯೂ ಇರುವ ಕೆಲವು ವಾಗ್ದಾನಗಳನ್ನು ನೀಡಿರುವುದಾದರೂ ಮೆಸ್ಸೀಯನ ರಾಜ್ಯದಲ್ಲಿ ಕ್ರಮೇಣ ನಂಬಿಕೆ ಮತ್ತು ವಿಧೇಯತೆಯ ಮಾರ್ಗವು ಅತಿ ಸರಳವೂ ಸುಲಭವೂ ಆಗುವಂತೆ ಮಾಡಿ ಎಲ್ಲರೂ ಅದನ್ನು ಅನುಸರಿಸಿ ಅದರ ಪ್ರತಿಫಲವನ್ನು ಪಡೆಯ ಸಮರ್ಥರಾಗುವಂತೆ ಮಾಡುವ ವಾಗ್ದಾನವನ್ನೂ ಸಹ ನೀಡಿರುವನು. ಆದರೆ ಈಗ ನಂಬಿಕೆ ವಿಧೇಯತೆಗಳನ್ನು ಅನುಸರಿಸಲು ಸಾಧ್ಯವಿದ್ದವರಿಗೆ ಮತ್ತು ಅದನ್ನು ಅನುಸರಿಸುತ್ತಲಿರುವವರಿಗೆ ದೊರೆಯಲಿರುವ ಪ್ರತಿಫಲಕ್ಕಿಂತಲೂ ಅದು ಕಡಿಮೆಯಾದ ಒಂದು ಪ್ರತಿಫಲವಾಗಿರುವದು.

ಇದಕ್ಕೆ ಕಾರಣವೂ ವ್ಯಕ್ತವಾಗಿರುವದು. ಯೇಸುವಿನೊಂದಿಗೆ ಆತನ ಮಹಿಮೆಯುಳ್ಳ ರಾಜ್ಯದಲ್ಲಿ ಸಹ–ಬಾಧ್ಯರಾಗಿ ಹಾಗು ತನಗೆ ಬಾಧ್ಯರಾಗುವದಕ್ಕಾಗಿ ವಿಶೇಷವಾಗಿ ನಂಬಿಗಸ್ತರೂ ವಿಧೇಯರೂ ಆದ ಮಕ್ಕಳ ಒಂದು ವಿಶೇಷವಾದ ಗುಂಪನ್ನು ದೇವರು ಕಂಡುಕೊಳ್ಳುತ್ತಿರುವನು. ಅಂತ್ಯದಲ್ಲಿ ತನ್ನ ಆಶೀರ್ವಾದವನ್ನು ಲೋಕಾದ್ಯಂತ ನೀಡುವದಕ್ಕೆ ಬಳಸಿಕೊಳ್ಳಲು ಒಂದು ಗುಂಪನ್ನು ಆತನು ಈಗ ಆದುಕೊಳ್ಳುತ್ತಿರುವನು; ಈ ಗುಂಪು ಕೇವಲ ತನ್ನಲ್ಲಿ ಸಂಪೂರ್ಣವಾಗಿ ನಂಬಿಕೆಯಿಡುವಂಥವರಾಗಿಯೇ ಆಗಿರಬೇಕೆಂದು ಬಯಸುತ್ತಿರುವನು. ಆದುದರಿಂದ ಸಭೆಯೊಡನೆ ತನ್ನ ನಡಾವಳಿಗೆ ದೇವರು ಈಗ ಅನುಸರಿಸುತ್ತಿರುವ ನಿಯಮವೇಂದರೆ: “ನಿನ್ನ ನಂಬಿಕೆಯಂತೆಯೇ ನಿನಗಾಗಲಿ.”

ಅಲ್ಲದೆ ಈಗಿನ ಮತ್ತು ಇತರ ಅದ್ಭುತಗಳಲ್ಲಿ ಗುಣಪಡಿಸಲು ನಂಬಿಕೆಯೆಂಬ ಶರತ್ತನ್ನು ಕರ್ತನು ಅಗತ್ಯವನ್ನಾಗಿ ಮಾಡಿರುವನು. ತನ್ನ ರಾಜ್ಯದಲ್ಲಿ ಬರಲಿರುವ ತನ್ನ ಪ್ರಭಾವ ಮತ್ತು ಶಕ್ತಿಗಳನ್ನು ಆತನು ಹೀಗೆ ತೋರ್ಪಡಿಸಿರುವನು. ಆತನ ರಾಜ್ಯಾಡಳಿತದಲ್ಲಿ ದೇವರ ಶಕ್ತಿಯ ಎಂಥಾ ಪ್ರದರ್ಶನವಾಗುವದೆಂದರೆ ಮತ್ತು ಯಾರು ನಂಬಿಕೆಯನ್ನು ಪ್ರಯೋಗಿಸುವರೋ ಅಂಥವರಿಗೆ ಎಂಥಾ ಸಹಾಯವು ನೀಡಲಾಗುವದೆಂದರೆ, ಅದರಿಂದ ಎಲ್ಲರಿಗೂ ಪ್ರಯೋಜನವಾಗಿ ಎಲ್ಲರೂ ತಮ್ಮ ಶರೀರದಲ್ಲಿನ ಸ್ವಸ್ಥತೆಯನ್ನು ಪಡೆದವರಾಗುವರು ಮತ್ತು ಸೈತಾನನ ಮತ್ತು ಪಾಪದ ಅಧಿಕಾರದಿಂದ ಬಿಡುಗಡೆ ಹೊಂದಿದವರಾಗುವರು.

ಯೇಸುವಿನ ಮಾತಿನ ಮೂಲಕವಾಗಿ ಆ ನಿಸ್ಸಹಾಯಕನಾದ ತಂದೆಯು ತನ್ನಲ್ಲಿಯೇ ತೊಂದರೆ ಇರುವದಾಗಿ ಮನಗಂಡಿದ್ದನು. ಅದೇನಂದರೆ ತಾನು ನಂಬಿಕೆಯನ್ನು ತೋರಿಸಲೇಬೇಕಿರುವದೆಂಬುದು ಇಲ್ಲವಾದಲ್ಲಿ ತನ್ನ ಮಗನು ಮರಳಿ ಸ್ವಸ್ಥತೆಯನ್ನು ಹೊಂದುವದು ಸಾಧ್ಯವಿಲ್ಲದ್ದಾಗಿತ್ತು. ಆತನು ಕಣ್ಣೀರಿಟ್ಟು ಹೀಗೆ ಕೂಗಿಕೊಂಡನು: “ನಂಬುತ್ತೇನೆ, ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು...” ಆತನ ನಂಬಿಕೆಯು ಪ್ರತಿಫಲವನ್ನು ಹೊಂದಿತ್ತು. ಯೇಸುವು ದುರಾತ್ಮಕ್ಕೆ ಆ ಹುಡುಗನಿಂದ ಹೊರಬರುವಂತೆಯೂ ಮತ್ತು ಇನ್ನೆಂದಿಗೂ ಆ ಹುಡುಗನೊಳಗೆ ಸೇರದಂತೆಯೂ ಅಪ್ಪಣೆಕೊಟ್ಟನು. ಈ ಕಡೆಯ ಮಾತೇ ಈ ಸ್ವಸ್ಥತೆಯನ್ನು ಮಾಡಿದ್ದುದರ ವಿಶೇಷವಾದ ಅಂಶವಾಗಿತ್ತು. ದುರಾತ್ಮವು ಆ ಹುಡುಗನನ್ನು ಪದೇಪದೇ ಬಿಟ್ಟುಹೊಗುತ್ತಿತ್ತು, ಆದರೆ ಅದು ಕೇವಲ ಹಿಂದಿರುಗಿ ಬರುವದಕ್ಕಾಗಿ. ಅದು ಬಿಟ್ಟುಹೋಗಿ ಇನ್ನೆಂದಿಗೂ ಹಿಂದಿರುಗಿ ಬರಬಾರದೆಂಬುದು ಕರ್ತನ ಅಪ್ಪಣೆಯಾಗಿತ್ತು.

ಆ ದುರಾತ್ಮವು ಬಿಟ್ಟುಹೋಗುವಾಗ ಆ ಹುಡುಗನನ್ನು ಬೀಳಿಸುವುದು ಒದ್ದಾಡಿಸುವದು ಮುಂತಾದುದನ್ನು ಮಾಡಲು ಒಡೆಯನು ಬಿಟ್ಟಿದ್ದು ಏಕೆಂಬುದಕ್ಕೆ ಆಶ್ಚರ್ಯಪಡಬಹುದು. ಆತನಿಗೆ ಅದನ್ನು ಹೊರದೂಡಿಸಲು ಶಕ್ತಿಯಿದ್ದಲ್ಲಿ ಅದು ಹೊರಬರುವ ರೀತಿಯನ್ನೂ ನಿಯಂತ್ರಿಸುವ ಶಕ್ತಿಯು ಸಹ ಆತನಿಗೆ ಇತ್ತೆಂಬುದು ನಿಸ್ಸಂದೇಹವಾಗಿತ್ತು. ಆದುದರಿಂದ ನಾವು ಕೇವಲ ಕಲ್ಪಿಸಿಕೊಳ್ಳಲು ಸಾಧ್ಯವಾದುದೆಂದರೆ ಯೇಸುವು ಈಗಿನ ಮತ್ತು ಇತರ ಸನ್ನಿವೇಶಗಳಲ್ಲಿ ದುರಾತ್ಮಗಳಿಗೆ ಅವು ಹಿಡಿದವರನ್ನು ಬಿಟ್ಟುಹೋಗುವ ರೀತಿಯಲ್ಲಿ ಒಂದು ಮಟ್ಟದ ಸ್ವಾತಂತ್ರ್ಯ ಹೊಂದಿರಲು ಬಿಟ್ಟಿದ್ದರ ಉದ್ದೇಶವು ತಾವು ಹಿಡಿದವರನ್ನು ಎಷ್ಟು ಕೆಟ್ಟದ್ದಾಗಿ ಪೀಡಿಸುತ್ತವೆಂಬುದನ್ನು ತೋರ್ಪಡಿಸುವ ಸಲುವಾಗಿತ್ತು. ಮತ್ತು ಆತನು ಈ ರೀತಿಯಾಗಿ ಮಾಡಿದ ಅದ್ಭುತವು ಇದನ್ನು ಸ್ಪಷ್ಟವಾಗಿ ತೋರಿಸುವಂತಾಗಿತ್ತು. ಮತ್ತು ಹೀಗೆ ಇದು ಆತನಲ್ಲಿ ಆಸಕ್ತಿಯಳ್ಳವರು ಹೀಗೆಯೇ ಕರ್ತನನ್ನು ಹೆಚ್ಚಾಗಿ ಕೊಂಡಾಡುವ ಸಲುವಾಗಿಯೂ ಇತ್ತು.

## “ಆತನು ಸತ್ತುಹೋದನೆಂದು ಬಹು ಜನರು ಅಂದರು”

ಆ ಹುಡುಗನು ಸತ್ತುಹೋದ ಸ್ಥಿತಿಯಲ್ಲಿ ಬಿದ್ದಿದ್ದನು, ಆದರೆ ಯೇಸುವು ಆತನನ್ನು ಕೈಹಿಡಿದು ಎತ್ತಿ ನಿಲ್ಲಿಸಿದನು. ಇದರಲ್ಲಿ ನಮಗಿರುವ ಪಾಠವೆಂದರೆ ನಿಸ್ಸಹಾಯಕರಾದ ಲೋಕದವರಿಗೆ ಅಗತ್ಯವಿರುದು ವಿರೋಧಿಯಾದ ಸೈತಾನನನ್ನು ಮತ್ತು ಆತನ ಅಧಿಕಾರವನ್ನು ಕಿತ್ತೊಗೆಯುವುದು ಮಾತ್ರವಲ್ಲದೆ ಪಾಪ ಮರಣವೆಂಬ ಕೆಸರಿನಿಂದ ಅವರನ್ನು ಮೇಲಕ್ಕೆತ್ತಲು ಅವರಿಗೆ ದೈವಿಕ ಸಹಾಯವು ಅಂದರೆ ದೈವಾಧಿಕಾರವೆಂಬ ಹಸ್ತದ ನೆರವು ಬೇಕಿರುವದೆಂಬುದು. ಸತ್ಯವೇದದ ಅನುಸಾರವಾಗಿ ಸೈತಾನನನ್ನು ಬಂದಿಸಿಡುವ ಹಾಗೂ ಆತನ ದುಷ್ಪ್ರಭಾವಗಳನ್ನೆಲ್ಲಾ ನಿರ್ಬಂಧಿಸುವ ಸಮಯದ ಹತ್ತಿರದಲ್ಲಿ ನಾವು ಇದ್ದೇವೆ. ಸತ್ಯವೇದದ ಅನುಸಾರವಾಗಿ ಸೈತಾನನ ಈ ಬಂಧಿಸಿಡುವಿಕೆಯು

ನೆರವೇರಲ್ಪಡುವದು "ಲೋಕಹುಟ್ಟಿದ್ದು ಮೊದಲುಗೊಂಡು ಇಂದಿನವರೆಗೂ ಸಂಭವಿಸದಂಥ ಮತ್ತು ಮುಂದೆಂದೂ ಸಂಭವಿಸದ ಮಹಾಸಂಕಟದ ಕಾಲದಲ್ಲಿ." ಹಾಗು ಮಾನವ ಸಂತತಿಯು ಹೆಚ್ಚುಕಡಿಮೆ ಮರಣದ ಸ್ಥಿತಿಯಲ್ಲಿ ಬಿಡಲ್ಪಡುವದು. ಮಾನವರ ಗರ್ವ ನಿರೀಕ್ಷೆ ಆಕಾಂಕ್ಷೆಗಳು ಆ ಭಯಾನಕವಾದ ಕಾಲದಲ್ಲಿ ಕುಂದಿಹೋಗುವದು, ಆದರೆ ಒಡೆಯನು ರಾಜ್ಯಾಧಿ ಕಾರ ಹೊಂದಿದವನಾಗಿ ಅಲ್ಲಿದ್ದು ಅವರನ್ನು ಮೇಲಕ್ಕೆತ್ತುವನು.

ಮೆಸ್ಸೀಯನ ರಾಜ್ಯವು ವಿರೋಧಿಯಾದ ಸೈತಾನನನ್ನು ಬಂಧಿಸಿಟ್ಟು ಅವನು ಮಾನವ ಸಂತತಿಯಲ್ಲಿ ಮತ್ತೆ ನುಸುಳಿ ಅವರ ವ್ಯವಹಾರಗಳಲ್ಲಿ ಮಧ್ಯಪ್ರವೇಶಿಸದ ಹಾಗೆ ನಿಷೇಧಿಸುವದು ಮಾತ್ರವಲ್ಲದೆ ಆ ರಾಜ್ಯದಲ್ಲಿನ ಅಧಿಕಾರದ ಮೂಲಕವಾಗಿ ಆ ಸಾವಿರ ವರುಷಗಳಲ್ಲಿ (ಪರಿಪೂರ್ಣತೆಯಿಂದ) ಬಿದ್ದುಹೋಗಿ ದುರಾವಸ್ಥೆಯಲ್ಲಿರುವ ನಮ್ಮ ಸಂತತಿಯನ್ನು ಹಂತಹಂತವಾಗಿ ಪೂರ್ಣವಾದ ರೀತಿಯಲ್ಲಿ (ಅವಿಧೇಯನಾಗುವದಕ್ಕೆ ಮೊದಲು) ಆದಾಮನಲ್ಲಿದ್ದ ದೈವಿಕ ಗುಣಮಟ್ಟವನ್ನು ತಲುಪುವವರೆಗೂ ಅವರನ್ನು ಎತ್ತುತ್ತಾ ಬರಲಾಗುವದು. ಆದಾಮನು ಈ ಪರಿಪೂರ್ಣತೆಯ ಮೂಲಸ್ಥಿತಿಯಿಂದ ಅವಿಧೇಯನಾಗುವುದರ ಮೂಲಕವಾಗಿ ಬಿದ್ದುಹೋಗಿದ್ದನು. ಅಲ್ಲದೆ ಯೇಸುವು ಕಲ್ವಾರಿಯಲ್ಲಿ ನೆರವೇರಿಸಿದ ಯಜ್ಞಾರ್ಪಣೆಯ ಫಲದ ಮೂಲಕವಾಗಿ ಆ ಮೂಲಸ್ಥಿತಿಗೆ ಹಿಂದಿರುಗುವುದನ್ನು ಸಂಪಾದಿಸಿಕೊಳ್ಳಲಾಗಿರುವದು.

ಶಿಷ್ಯರು ತಾವು ಏಕೆ ದೆವ್ವವನ್ನು ಬಿಡಿಸಲಾಗಲಿಲ್ಲವೆಂದು ಯೇಸುವನ್ನು ಕೇಳಿದ್ದರು. ಹೀಗೆಯೇ ದೇವ ಜನರು ಸೈತಾನನನ್ನು ಮತ್ತು ಪಾಪವನ್ನು ಅವುಗಳ ದುಷ್ಟ ಆಳ್ವಿಕೆಯನ್ನು ವಿರೋಧಿಸು ವಲ್ಲಿ ತಾವು ಈಗ ಮಾಡುವದಕ್ಕಿಂತಲೂ ಹೆಚ್ಚಿನದನ್ನು ಏಕೆ ಮಾಡಲು ಸಾಧ್ಯವಾಗುತ್ತಿಲ್ಲವೆಂದು ಒಂದು ಸಮಯ ತಮ್ಮನ್ನು ತಾವು ಕೇಳಿಕೊಳ್ಳಬಹುದು. ಯೇಸುವು ನೀಡಿದ ಉತ್ತರವು ಅಲ್ಲಿ ಅನ್ವಯವಾಗಿದ್ದಂತೆ ಇಲ್ಲಿಯೂ ಅನ್ವಯವಾಗುವದು: "ಈ ಜಾತಿಯು ದೇವರ ಪ್ರಾರ್ಥನೆ ಮತ್ತು ಉಪವಾಸದಿಂದಲೇ ಹೊರತು ಬೇರೆ ಯಾತರಿಂದಲೂ ಬಿಟ್ಟು ಹೋಗುವದಿಲ್ಲವೆಂದು ಅವರಿಗೆ ಹೇಳಿದನು." ನಿಸ್ಸಂದೇಹವಾಗಿ ದೇವ ಜನರು ಯಾವಾಗಲೂ ಕರ್ತನಲ್ಲಿ ಪೂರ್ಣವಾದ ನಂಬಿಕೆಯನ್ನು ತೋರ್ಪಡಿಸಿ ಹೆಚ್ಚು ಆತ್ಮಿಕವಾಗಿ ಜೀವಿಸುವವರಾಗಿ ಶಾರೀರಿಕವಾಗಿ ಕಡಿಮೆಯಾಗಿದ್ದಲ್ಲಿ ಅವರು ಪಾಪ ಮತ್ತು ಸೈತಾನನ ವಿರುದ್ಧವಾಗಿ ಹೋರಾಡುವಲ್ಲಿ ಮತ್ತು ಇತರರು ಪಾಪದ ಅಧಿಕಾರದಿಂದ ಹೊರಬರಲು ಅವರಿಗೆ ಸಹಾಯ ಮಾಡುವಲ್ಲಿ ಇನ್ನೂ ಹೆಚ್ಚಾದುದನ್ನು ಸಾಧಿಸಬಹುದು. ಇದು ಉಪವಾಸವಿರುವದು ಅಥವಾ ತಮ್ಮನ್ನು ತಾವು ನಿರಾಕರಿಸಿ ಕೊಳ್ಳುವದು ಮತ್ತು ಪ್ರಾರ್ಥನೆ ಅಥವಾ ದೇವರೊಂದಿಗೆ ಅನ್ಯೋನ್ಯವಾಗಿ ರುವದೆಂಬ ಅರ್ಥ ಕೊಡುತ್ತದೆ. ದೇವರು ತನಗೆ ನಂಬಿಗಸ್ತರಾಗಿರುವವರಿಗೆ ವಾಗ್ದಾನಮಾಡಿರುವ ಪ್ರತಿಯೊಂದು ಆಶೀರ್ವಾದವೂ ನಂಬುವವನಿಗೆ ಸೇರಿದ್ದಾಗಿರುವುದು, ಅದರೂ ಯೇಸುವು ಇದಕ್ಕೆ ವಿಧಿಸಿರುವ ಶರತ್ತುಗಳು ನಮಗೆ ಬೇರೊಂದೆಡೆ ನೀಡಲಾಗಿರು ವದು: "ನೀವು ನನ್ನಲ್ಲಿಯೂ ನನ್ನ ವಾಕ್ಯಗಳು ನಿಮ್ಮಲ್ಲಿಯೂ ನೆಲಗೊಂಡಿದ್ದರೆ ಏನು ಬೇಕಾದರೂ ಬೇಡಿಕೊಳ್ಳಿರಿ, ಅದು ನಿಮಗೆ ದೊರೆಯುವದು."

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಗಲಿಲಾಯ | ತನ್ನ ಮರಣ ಪುನರುತ್ಥಾನಗಳನ್ನು ಮತ್ತೆ ಮುಂತಿಳಿಸಿದುದು | 17:22–23 | 9:30–32 | 9:43–45 | –– |
| " | ಕಪೆರ್ನೌಮ್ | ತೆರಿಗೆ ಹಣವನ್ನು ಅದ್ಭುತವಾಗಿ ಒದಗಿಸಿದ್ದು | 17:24–27 | –– | –– | –– |
| " | ಕಪೆರ್ನೌಮ್ | ದೇವರ ರಾಜ್ಯದಲ್ಲಿ ಹೆಚ್ಚಿನವನು, ತಪ್ಪುಗಳನ್ನು ಬಗೆಹರಿಸಿಕೊಳ್ಳುವದು, ಕರುಣೆ | 18:1–35 | 9:33–50 | 9:46–50 | –– |

## ಮತ್ತಾಯ 17:22 – 18:35

ಅವರು ಗಲಿಲಾಯದಲ್ಲಿ ಗುಂಪುಗುಂಪಾಗಿ ಕೂಡುತ್ತಿರು ವಾಗ ಯೇಸು ಅವರಿಗೆ–ಮನುಷ್ಯಕುಮಾರನು ಮನುಷ್ಯರ ಕೈಗೆ ಒಪ್ಪಿಸಿಕೊಡಲ್ಪಡುವನು. ಅವರು ಆತನನ್ನು ಕೊಲ್ಲುವರು; ಸತ್ತು ಮೂರನೆಯ ದಿನದಲ್ಲಿ ಆತನು ಜೀವಿತನಾಗಿ ಎಬ್ಬಿಸಲ್ಪಡುವನು ಎಂದು ಹೇಳಿದನು. ಅದನ್ನು ಕೇಳಿ ಅವರು ಬಹಳ ದುಃಖಪಟ್ಟರು.

ಅವರು ಕಪೆರ್ನೌಮಿಗೆ ಬಂದಾಗ ದೇವಾಲಯಕ್ಕಾಗಿ ತೆರಿಗೆಯನ್ನು ಎತ್ತುವವರು ಪೇತ್ರನ ಬಳಿಗೆ ಬಂದು–ನಿಮ್ಮ ಬೋಧಕನು ದೇವಾಲಯದ ತೆರಿಗೆಯನ್ನು ಸಲ್ಲಿಸುವದಿಲ್ಲವೇ ಎಂದು ಕೇಳಲು–ಹೌದು, ಸಲ್ಲಿಸುವನು ಅಂದನು. ಪೇತ್ರನು ಮನೆಯೊಳಕ್ಕೆ ಬಂದಾಗ ಯೇಸು ಅವನಿಗಿಂತ ಮೊದಲೇ–ಸೀಮೋನಾ, ನಿನಗೆ ಹೇಗೆ ತೋರುತ್ತದೆ? ಭೂಲೋಕದ ಅರಸರು ಸುಂಕವನ್ನಾಗಲಿ ಮಂಡೇತೆರಿಗೆಯನ್ನಾಗಲಿ ಯಾರಿಂದ ತೆಗೆದು ಕೊಳ್ಳುತ್ತಾರೆ? ತಮ್ಮ ಮಕ್ಕಳಿಂದಲೋ? ಬೇರೆಯವ ರಿಂದಲೋ? ಎಂದು ಕೇಳಿದನು. ಅವನು–ಬೇರೆಯವರಿಂದ ಎಂದು ಉತ್ತರಕೊಡಲು ಯೇಸು ಅವನಿಗೆ–ಹಾಗಾದರೆ ಮಕ್ಕಳು ಅದಕ್ಕೆ

ಒಳಗಾದವರಲ್ಲವಲ್ಲಾ. ಆದರೂ ನಮ್ಮ ವಿಷಯವಾಗಿ ಅವರು ಬೇಸರಗೊಳ್ಳಬಾರದು; ನೀನು ಸಮುದ್ರಕ್ಕೆ ಹೋಗಿ ಗಾಳಾಹಾಕಿ ಮೊದಲು ಸಿಕ್ಕುವ ಮೀನನ್ನು ಎತ್ತು; ಅದರ ಬಾಯಿತೆರೆದು ನೋಡಿದರೆ ಅದರಲ್ಲಿ ಒಂದು ರೂಪಾಯಿ ಸಿಕ್ಕುವದು; ಅದನ್ನು ತೆಗೆದುಕೊಂಡು ನಮ್ಮಿಬ್ಬರದಂತ ಹೇಳಿ ಅವರಿಗೆ ಕೊಡು ಎಂದು ಹೇಳಿದನು.

ಆ ವೇಳೆಯಲ್ಲಿ ಶಿಷ್ಯರು ಯೇಸುವಿನ ಬಳಿಗೆ ಬಂದು–ಪರಲೋಕರಾಜ್ಯದಲ್ಲಿ ಯಾವನು ಹೆಚ್ಚಿನವನು ಎಂದು ಕೇಳಲು ಆತನು ಚಿಕ್ಕ ಮಗುವನ್ನು ಹತ್ತರಕ್ಕೆ ಕರೆದು ಅವರ ನಡುವೆ ನಿಲ್ಲಿಸಿ ಅವರಿಗೆ–ನೀವು ತಿರಿಗಿಕೊಂಡು ಚಿಕ್ಕ ಮಕ್ಕಳಂತೆ ಆಗದೆ ಹೋದರೆ ನೀವು ಪರಲೋಕರಾಜ್ಯದಲ್ಲಿ ಸೇರುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಹೀಗಿರುವದರಿಂದ ಯಾವನು ಈ ಚಿಕ್ಕ ಮಗುವಿನಂತೆ ತನ್ನನ್ನು ತಗ್ಗಿಸಿಕೊಳ್ಳುತ್ತಾನೋ, ಅವನೇ ಪರಲೋಕರಾಜ್ಯದಲ್ಲಿ ಹೆಚ್ಚಿನವನು. ಇದಲ್ಲದೆ ಯಾವನಾದರೂ ನನ್ನ ಹೆಸರಿನಲ್ಲಿ ಇಂಥ ಒಂದು ಚಿಕ್ಕ ಮಗವನ್ನು ಸೇರಿಸಿಕೊಂಡರೆ ನನ್ನನ್ನು ಸೇರಿಸಿಕೊಂಡ ಹಾಗಾಯಿತು. ಆದರೆ ನನ್ನಲ್ಲಿ ನಂಬಿಕೆಯಿಡುವ ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವನಾದರೂ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲುಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಣುಗಿಸಿಬಿಡುವದು ಅವನಿಗೆ ಹಿತವಾಗುವದು.

ತೊಡಕುಗಳು ಬರುವದರಿಂದ ಲೋಕಕ್ಕೆ ಎಷ್ಟೋ ಕೇಡು! ತೊಡಕುಗಳು ಹೇಗಾದರೂ ಬರುವವು. ಆದಾಗ್ಯೂ ಯಾವ ಮನುಷ್ಯನಿಂದ ತೊಡಕು ಬರುತ್ತದೋ, ಅವನ ಗತಿಯನ್ನು ಏನು ಹೇಳಲಿ! ಹಾಗಾದರೆ ನಿನ್ನ ಕೈಯಾಗಲಿ ನಿನ್ನ ಕಾಲಾಗಲಿ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದು ಬಿಸಾಟುಬಿಡು; ಎರಡು ಕೈ ಎರಡು ಕಾಲು ಉಳ್ಳವನಾಗಿದ್ದು ನಿತ್ಯವಾಗಿರುವ ಬೆಂಕಿಯಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಕೈ ಕಾಲು ಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ. ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಟುಬಿಡು; ಎರಡು ಕಣ್ಣುಳ್ಳವನಾಗಿದ್ದು ಅಗ್ನಿನರಕದಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಒಂದೇ ಕಣ್ಣುಳ್ಳವನಾಗಿದ್ದು ಜೀವದಲ್ಲಿ ಸೇರುವದು ನಿನಗೆ ಉತ್ತಮ.

ಈ ಚಿಕ್ಕವರಲ್ಲಿ ಒಬ್ಬನನ್ನಾದರೂ ತಾತ್ಸಾರ ಮಾಡಬಾರದು ನೋಡಿರಿ; ಪರಲೋಕದಲ್ಲಿ ಅವರ ದೂತರು ಪರಲೋಕದಲ್ಲಿ –ರುವ ನನ್ನ ತಂದೆಯ ಮುಖವನ್ನು ಯಾವಾಗಲೂ ನೋಡುತ್ತಲಿದ್ದಾರೆ ಎಂದು ನಿಮಗೆ ಹೇಳುತ್ತೇನೆ. ನಿಮಗೆ ಹೇಗೆ ತೋರುತ್ತದೆ? ಒಬ್ಬ ಮನುಷ್ಯನಿಗೆ ನೂರು ಕುರಿಗಳು ಇರಲಾಗಿ ಅವುಗಳಲ್ಲಿ ಒಂದು ತಪ್ಪಿಸಿಕೊಂಡರೆ ಅವನು ತೊಂಭತ್ತೊಂಭತ್ತು ಕುರಿಗಳನ್ನು ಬಿಟ್ಟು ಬೆಟ್ಟಕ್ಕೆ ಹೋಗಿ ತಪ್ಪಿಸಿಕೊಂಡದ್ದನ್ನು ಹುಡುಕುತ್ತಾನಲ್ಲವೇ. ಅದು ಸಿಕ್ಕಿದರೆ ತಪ್ಪಿಸಿಕೊಳ್ಳದೆ ಇರುವ ತೊಂಭತ್ತೊಂಭತ್ತು ಕುರಿಗಳಿಗಿಂತ ಆ ಒಂದಕ್ಕೋಸ್ಕರ ಹೆಚ್ಚಾಗಿ ಸಂತೋಷಪಡುವನೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಹಾಗೆಯೇ ಈ ಚಿಕ್ಕವರಲ್ಲಿ ಒಬ್ಬನಾದರೂ ಕೆಟ್ಟುಹೋಗುವದು ಪರಲೋಕದಲ್ಲಿರುವ ನಿಮ್ಮ ತಂದೆಯ ಚಿತ್ತವಲ್ಲ.

ಇದಲ್ಲದೆ ನಿನ್ನ ಸಹೋದರನು ತಪ್ಪುಮಾಡಿದರೆ ನೀನು ಹೋಗಿ ನೀನೂ ಅವನೂ ಇಬ್ಬರೇ ಇರುವಾಗ ಅವನ ತಪ್ಪನ್ನು ಅವನಿಗೆ ತಿಳಿಸು. ಅವನು ನಿನ್ನ ಮಾತನ್ನು ಕೇಳಿದರೆ ನಿನ್ನ ಸಹೋದರನನ್ನು ಸಂಪಾದಿಸಿಕೊಂಡಿರುವಿ. ಅವನು ಕೇಳದೆ ಹೋದರೆ ಎರಡು ಮೂರು ಸಾಕ್ಷಿಗಳ ಬಾಯಿಂದ ಪ್ರತಿಯೊಂದು ಮಾತು ಸ್ಥಾಪನೆಯಾಗುವ ಹಾಗೆ ಇನ್ನೂ ಒಬ್ಬಿಬ್ಬರನ್ನು ನಿನ್ನ ಸಂಗಡ ಕರಕೊಂಡುಹೋಗು. ಅವನು ಅವರ ಮಾತನ್ನು ಕೇಳದೆಹೋದರೆ ಸಭೆಗೆ ಹೇಳು; ಆದರೆ ಸಭೆಯ ಮಾತನ್ನೂ ಕೇಳದೆಹೋದರೆ ಅವನು ನಿನಗೆ ಅಜ್ಞಾನಿಯಂತೆಯೂ ಭ್ರಷ್ಟನಂತೆಯೂ ಇರಲಿ.

ಭೂಲೋಕದಲ್ಲಿ ನೀವು ಏನೇನು ಕಟ್ಟುತ್ತೀರೋ ಅದು ಪರಲೋಕದಲ್ಲಿಯೂ ಕಟ್ಟಿರುವದು; ಮತ್ತು ಭೂಲೋಕದಲ್ಲಿ ನೀವು ಏನೇನು ಬಿಚ್ಚುತ್ತೀರೋ ಅದು ಪರಲೋಕದಲ್ಲಿಯೂ ಬಿಚ್ಚಿರುವದು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಇದಲ್ಲದೆ ನಿಮ್ಮಲ್ಲಿ ಇಬ್ಬರು ತಾವು ಬೇಡಿಕೊಳ್ಳತಕ್ಕ ಯಾವದಾದರೂ ಒಂದು ಕಾರ್ಯದ ವಿಷಯವಾಗಿ ಭೂಲೋಕದಲ್ಲಿ ಒಂದೇ ಮನಸ್ಸುಳ್ಳವರಾಗಿದ್ದರೆ ಅದು ಪರಲೋಕದಲ್ಲಿರುವ ನನ್ನ ತಂದೆಯಿಂದ ಅವರಿಗೆ ಆಗುವದೆಂದು ನಿಮಗೆ ಹೇಳುತ್ತೇನೆ. ಯಾಕಂದರೆ ಇಬ್ಬರು ಮೂವರು ನನ್ನ ಹೆಸರಿನಲ್ಲಿ ಎಲ್ಲಿ ಕೂಡಿಬಂದಿರುತ್ತಾರೋ ಅಲ್ಲಿ ಅವರ ನಡುವೆ ನಾನು ಇದ್ದೇನೆ ಅಂದನು.

ಆಗ ಪೇತ್ರನು ಆತನ ಬಳಿಗೆ ಬಂದು–ಸ್ವಾಮೀ, ನನ್ನ ಸಹೋದರನು ನನಗೆ ತಪ್ಪುಮಾಡುತ್ತಾ ಬಂದರೆ ನಾನು ಎಷ್ಟು ಸಾರಿ ಅವನಿಗೆ ಕ್ಷಮಿಸಬೇಕು? ಏಳು ಸಾರಿಯೋ ಎಂದು ಕೇಳಲು ಯೇಸು ಅವನಿಗೆ–ಏಳು ಸಾರಿ ಎಂದಲ್ಲ, ಏಳೆಪ್ಪತ್ತು ಸಾರಿ ಎಂದು ನಿನಗೆ ಹೇಳುತ್ತೇನೆ. ಆದದರಿಂದ ಪರಲೋಕರಾಜ್ಯವು ತನ್ನ ಸೇವಕರಿಂದ ಲೆಕ್ಕವನ್ನು ತೆಗೆದುಕೊಳ್ಳಬೇಕೆಂದಿದ್ದ ಒಬ್ಬ ಅರಸನಿಗೆ ಹೋಲಿಕೆಯಾಗಿದೆ. ಅವನು ಲೆಕ್ಕಾತೆಗೆದುಕೊಳ್ಳುವದಕ್ಕೆ ಪ್ರಾರಂಭ ಮಾಡಿದಾಗ ಕೋಟ್ಯಾಂತರ ಸಾಲಾ ಮಾಡಿದವನೊಬ್ಬನನ್ನು ಅವನ ಬಳಿಗೆ ಹಿಡತಂದರು. ಆ ಸಾಲಾ ತೀರಿಸುವದಕ್ಕೆ ಅವನಲ್ಲಿ ಏನೂ ಇಲ್ಲದ್ದರಿಂದ ಅವನ ಒಡೆಯನು ಅವನನ್ನೂ ಅವನ ಹೆಂಡತಿಮಕ್ಕಳನ್ನೂ ಅವನ ಬದುಕೆಲ್ಲವನ್ನೂ ಮಾರಿ ಅದನ್ನು ತೀರಿಸಬೇಕೆಂದು ಅಪ್ಪಣೆಮಾಡಿದನು. ಆ ಸೇವಕನು ಅವನ ಕಾಲಿಗೆ ಬಿದ್ದು ಅವನಿಗೆ–ಒಡೆಯನೇ, ಸ್ವಲ್ಪ ತಾಳಿಕೋ, ನಿನ್ನದೆಲ್ಲಾ ನಾನು ಕೊಟ್ಟು ತೀರಿಸುತ್ತೇನೆಂದು ನಮಸ್ಕರಿಸಲಾಗಿ ಆ ಸೇವಕನ ಒಡೆಯನು ಕನಿಕರಪಟ್ಟು ಅವನನ್ನು ಬಿಡಿಸಿ ಆ ಸಾಲವನ್ನೆಲ್ಲಾ ಬಿಟ್ಟುಬಿಟ್ಟನು. ತರುವಾಯ ಆ ಸೇವಕನು ಹೊರಕ್ಕೆ ಬಂದು ತನಗೆ ನೂರು ಹಣಾ ಕೊಡಬೇಕಾದ ಒಬ್ಬ ಜೊತೇಸೇವಕನನ್ನು ಕಂಡು ಅವನನ್ನು ಹಿಡಿದು–ಎಲಾ, ನನ್ನ ಸಾಲ ತೀರಿಸು ಎಂದು ಹೇಳಿ ಕುತ್ತಿಗೆ ಹಿಸಿಕಿದನು. ಆಗ ಅವನ ಜೊತೇಸೇವಕನು ಅವನ ಕಾಲಿಗೆ ಬಿದ್ದು–ಸ್ವಲ್ಪ ತಾಳಿಕೋ, ತೀರಿಸುತ್ತೇನೆ ಎಂದು ಬೇಡಿಕೊಂಡನು. ಅದರೆ ಅವನು ಒಪ್ಪದೆ ಹೊರಟುಹೋಗಿ ಆ ಸಾಲಾ ತೀರಿಸುವ ತನಕ ಅವನನ್ನು ಸೆರೆಮನೆಯಲ್ಲಿ ಹಾಕಿಸಿದನು. ಅವನ ಜೊತೇಸೇವಕರು ನಡೆದ ಸಂಗತಿಯನ್ನು ನೋಡಿ ಬಹಳವಾಗಿ ದುಃಖಪಟ್ಟು ಒಡೆಯನ ಬಳಿಗೆ ಬಂದು ನಡೆದದ್ದನ್ನೆಲ್ಲಾ ತಿಳಿಸಿದರು.

ಆಗ ಅವನ ಒಡೆಯನು ಅವನನ್ನು ಕರೆಸಿ–ಎಲಾ ನೀಚನೇ, ನೀನು ನನ್ನನ್ನು ಬೇಡಿಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟು ಬಿಟ್ಟೆನಲ್ಲಾ; ನಾನು ನಿನ್ನನ್ನು ಕರುಣಿಸಿದ ಹಾಗೆ ನೀನು ಸಹ ನಿನ್ನ ಜೊತೇಸೇವಕನನ್ನು ಕರುಣಿಸಬಾರದಾಗಿತ್ತೇ ಎಂದು ಹೇಳಿ ಸಿಟ್ಟು ಮಾಡಿ ತನಗೆ ಕೊಡಬೇಕಾದ ಸಾಲವನ್ನು ತೀರಿಸುವ ತನಕ ಪೀಡಿಸುವವರ ಕೈಗೆ ಒಪ್ಪಿಸಿದನು. ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆಯೇ ಮಾಡುವನು ಅಂದನು.

## ಮಾರ್ಕ 9:30–50

ಅಲ್ಲಿಂದ ಅವರು ಹೊರಟು ಗಲಿಲಾಯವನ್ನು ಹಾದು ಹೋಗುತ್ತಿದ್ದರು. ಇದು ಜನರಿಗೆ ಗೊತ್ತಾಗಬಾರದೆಂದು ಆತನಿಗೆ ಮನಸ್ಸಿತ್ತು. ಯಾಕಂದರೆ ಆತನು ತನ್ನ ಶಿಷ್ಯರಿಗೆ ಉಪದೇಶಮಾಡುತ್ತಾ–ಮನುಷ್ಯಕುಮಾರನು ಜನರ ಕೈಗೆ ಒಪ್ಪಿಸಲ್ಪಡುತ್ತಾನೆ; ಅವರು ಅವನನ್ನು ಕೊಲ್ಲುವರು; ಕೊಂದ ಮೂರು ದಿನದ ಮೇಲೆ ಆತನು ಜೀವಿತನಾಗಿ ಎದ್ದು ಬರುವನೆಂದು ಹೇಳಿದನು. ಅವರು ಆ ಮಾತನ್ನು ಗ್ರಹಿಸಲಿಲ್ಲ, ಆದರೆ ಆತನನ್ನು ಕೇಳುವದಕ್ಕೆ ಅಂಜಿದರು.

ಮತ್ತು ಅವರು ಕಪೆರ್ನೌಮಿಗೆ ಬಂದರು. ಅಲ್ಲಿ ಆತನು ಮನೆಯಲ್ಲಿದ್ದಾಗ–ನೀವು ದಾರಿಯಲ್ಲಿ ಏನು ಮಾತಾಡಿ ಕೊಳ್ಳುತ್ತಿದ್ದಿರಿ ಎಂದು ಶಿಷ್ಯರನ್ನು ಕೇಳಲು ಅವರು ಸುಮ್ಮನಿದ್ದರು; ಯಾಕಂದರೆ ಅವರು ದಾರಿಯಲ್ಲಿ ಒಬ್ಬರಕೂಡೊಬ್ಬರು – [ತಮ್ಮಲ್ಲಿ] ಯಾವನು ಹೆಚ್ಚಿನವನೆಂದು ವಾಗ್ವಾದಮಾಡಿ ಕೊಂಡಿದ್ದರು. ಆತನು ಕೂತುಕೊಂಡು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ಕರೆದು ಅವರಿಗೆ – ಯಾವನಾದರೂ ಮೊದಲಿನವನಾಗಬೇಕೆಂದಿದ್ದರೆ ಅವನು ಎಲ್ಲರಲ್ಲಿ ಕಡೆಯವನೂ ಎಲ್ಲರ ಆಳೂ ಆಗಿರಬೇಕು ಎಂದು ಹೇಳಿ ಒಂದು ಚಿಕ್ಕ ಮಗುವನ್ನು ತೆಗೆದುಕೊಂಡು ಅವರ ನಡುವೆ ನಿಲ್ಲಿಸಿ ಅಪ್ಪಿಕೊಂಡು ಅವರಿಗೆ – ಯಾವನಾದರೂ ನನ್ನ ಹೆಸರಿನಲ್ಲಿ ಇಂಥ ಚಿಕ್ಕ ಮಕ್ಕಳಲ್ಲಿ ಒಂದನ್ನು ಸೇರಿಸಿಕೊಂಡರೆ ನನ್ನನ್ನು ಸೇರಿಸಿಕೊಂಡ ಹಾಗಾಯಿತು; ಮತ್ತು ಯಾವನಾದರೂ ನನ್ನನ್ನು ಸೇರಿಸಿಕೊಂಡರೆ ನನ್ನನ್ನಲ್ಲ, ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಸೇರಿಸಿಕೊಂಡ ಹಾಗಾಯಿತು ಎಂದು ಹೇಳಿದನು.

ಯೋಹಾನನು ಆತನಿಗೆ–ಬೋಧಕನೇ, ಯಾವನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವಬಿಡಿಸುವದನ್ನು ನಾವು ಕಂಡು ಅವನು ನಮಗೆ ಸೇರಿದವನಲ್ಲವಾದ್ದರಿಂದ ಅವನಿಗೆ ಅಡ್ಡಿಮಾಡಿ–ದೆವು ಎಂದು ಹೇಳಲಾಗಿ ಯೇಸು–ಅವನಿಗೆ ಅಡ್ಡಿಮಾಡಬೇಡಿರಿ; ನನ್ನ ಹೆಸರಿನ ಮೇಲೆ ಮಹತ್ತನ್ನು ಮಾಡಿ ಏಕಾಏಕಿ ನನ್ನನ್ನು ದೂಷಿಸುವವನು ಒಬ್ಬನೂ ಇಲ್ಲ. ನಮ್ಮನ್ನು ಎದುರಿಸದವನು ನಮ್ಮ ಪಕ್ಷದವನೇ. ನೀವು ಕ್ರಿಸ್ತನವರೆಂದು ನಿಮಗೆ ಯಾವನಾ ದರೂ ಒಂದು ತಂಬಿಗೆ ನೀರನ್ನು ಕುಡಿಯುವದಕ್ಕೆ ಕೊಟ್ಟರೆ ಬರತಕ್ಕ ಪ್ರತಿಫಲವು ಅವನಿಗೆ ತಪ್ಪುವದೇ ಇಲ್ಲವೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಮತ್ತು ನಂಬುವ ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವನಾದರೂ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲು ಕಟ್ಟಿ ಅವನನ್ನು ಸಮುದ್ರದಲ್ಲಿ ಹಾಕಿದರೂ ಅವನಿಗೆ ಲೇಸು. ಇದಲ್ಲದೆ ನಿನ್ನ ಕೈ ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕತ್ತರಿಸಿಬಿಡು; ಎರಡು ಕೈಯುಳ್ಳವನಾಗಿದ್ದು ಆರದ ಬೆಂಕಿಯಾಗಿರುವ ನರಕದಲ್ಲಿ ಬೀಳುವದಕ್ಕಿಂತ ಕೈಕಳಕೊಂಡವ ನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ. ಮತ್ತು ನಿನ್ನ ಕಾಲು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಡಿದುಬಿಡು; ಎರಡು ಕಾಲುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳುವದಕ್ಕಿಂತ ಕಾಲುಕಳಕೊಂಡವನಾಗಿ ಜೀವದಲ್ಲಿ ಸೇರುವದು ನಿನಗೆ ಉತ್ತಮ. ನಿನ್ನ ಕಣ್ಣು ನಿನ್ನನ್ನು ಪಾಪದಲ್ಲಿ ಸಿಕ್ಕಿಸುವದಾದರೆ ಅದನ್ನು ಕಿತ್ತು ಬಿಸಾಡು; ಎರಡು ಕಣ್ಣುಳ್ಳವನಾಗಿದ್ದು ನರಕದಲ್ಲಿ ಹಾಕಿಸಿಕೊಳ್ಳು ವದಕ್ಕಿಂತ ಒಂದೇ ಕಣ್ಣುಳ್ಳವನಾಗಿದ್ದು ದೇವರ ರಾಜ್ಯದಲ್ಲಿ ಸೇರುವದು ನಿನಗೆ ಉತ್ತಮ. ನರಕದಲ್ಲಿ ಅವರನ್ನು ಕಡಿಯುವ ಹುಳ ಸಾಯುವದಿಲ್ಲ, ಬೆಂಕಿ ಆರುವದಿಲ್ಲ. ಪ್ರತಿಯೊಬ್ಬನಿಗೂ ಬೆಂಕಿಯೆಂಬ ಉಪ್ಪಿನ ಹದವು ಕೊಡಲ್ಪಡ ಬೇಕು. ಉಪ್ಪು ಒಳ್ಳೆಯ ಪದಾರ್ಥವೇ; ಉಪ್ಪು ಸಪ್ಪೆಯಾದರೆ ಅದನ್ನು ಇನ್ಯಾತರಿಂದ ರುಚಿಗೊಳಿಸುವಿರಿ? ನಿಮ್ಮೊಳಗೆ ಉಪ್ಪು ಇರಲಿ, ಒಬ್ಬರಿಗೊಬ್ಬರು ಸಮಾಧಾನದಿಂದಿರಿ.

## ಲೂಕ 9:43–50

ಅದನ್ನು ನೋಡಿ ಎಲ್ಲರೂ ದೇವರ ಮಹತ್ವಕ್ಕೆ ಬೆರಗಾದರು. ಯೇಸು ಮಾಡಿದ ಎಲ್ಲಾ ಕಾರ್ಯಗಳಿಗೆ ಎಲ್ಲರೂ ಆಶ್ಚರ್ಯಪಡುತ್ತಿರಲಾಗಿ ಆತನು ತನ್ನ ಶಿಷ್ಯರಿಗೆ–ನೀವಂತೂ ಈ ಮಾತುಗಳನ್ನು ನಿಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ; ಯಾಕಂದರೆ ಮನುಷ್ಯಕುಮಾರನು ಮನುಷ್ಯರ ಕೈಗೆ ಒಪ್ಪಿಸಲ್ಪಡುವನು ಎಂದು ಹೇಳಿದನು. ಅವರು ಈ ಮಾತನ್ನು ಗ್ರಹಿಸಲಿಲ್ಲ; ಅದು ಅವರಿಗೆ ಮರೆಯಾದದರಿಂದ ಅದರ ಅರ್ಥವನ್ನು ಅವರು ತಿಳಿಯದೆ ಹೋದರು. ಆ ಮಾತಿನ ವಿಷಯದಲ್ಲಿ ಅವರು ಆತನನ್ನು ಕೇಳುವದಕ್ಕೆ ಅಂಜಿದರು.

ತರುವಾಯ ಶಿಷ್ಯರೊಳಗೆ–ತಮ್ಮಲ್ಲಿ ಯಾವನು ಹೆಚ್ಚಿನವನಾಗುವನು ಎಂಬ ವಿಚಾರಹುಟ್ಟಿತು. ಯೇಸು ಅವರ ಮನಸ್ಸಿನ ವಿಚಾರವನ್ನು ತಿಳಿದು ಒಂದು ಚಿಕ್ಕ ಮಗುವನ್ನು ಹಿಡಿದುಕೊಂಡು ತನ್ನ ಬಳಿಯಲ್ಲಿ ನಿಲ್ಲಿಸಿ ಅವರಿಗೆ– ಯಾವನಾದರೂ ನನ್ನ ಹೆಸರಿನಲ್ಲಿ ಈ ಚಿಕ್ಕ ಮಗುವನ್ನು ಸೇರಿಸಿಕೊಂಡರೆ ನನ್ನನ್ನು ಸೇರಿಸಿಕೊಂಡ ಹಾಗಾಯಿತು; ಮತ್ತು ಯಾವನಾದರೂ ನನ್ನನ್ನು ಸೇರಿಸಿಕೊಂಡರೆ ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಸೇರಿಸಿಕೊಂಡ ಹಾಗಾಯಿತು; ಯಾಕಂದರೆ ನಿಮ್ಮೆಲ್ಲರಲ್ಲಿ ಯಾವನು ಚಿಕ್ಕವನೋ ಅವನೇ ದೊಡ್ಡವನು ಎಂದು ಹೇಳಿದನು.

ಅದಕ್ಕೆ ಯೋಹಾನನು–ಗುರುವೇ, ಯಾವನೋ ಒಬ್ಬನು ನಿನ್ನ ಹೆಸರನ್ನು ಹೇಳಿ ದೆವ್ವಬಿಡಿಸುವದನ್ನು ನಾವು ಕಂಡು ಅವನು ನಮಗೆ ಸೇರಿದವನಲ್ಲವಾದ್ದರಿಂದ ಅವನಿಗೆ ಅಡ್ಡಿಮಾಡಿದೆವು ಅನ್ನಲು ಯೇಸು ಅವನಿಗೆ–ಅಡ್ಡಿಮಾಡಬೇಡಿರಿ; ನಿಮ್ಮನ್ನು ಎದುರಿಸದವನು ನಿಮ್ಮ ಪಕ್ಷದವನೇ ಎಂದು ಹೇಳಿದನು.

# ಪರಲೋಕರಾಜ್ಯದಲ್ಲಿ ಚಿಕ್ಕವನು ಮತ್ತು ಹೆಚ್ಚಿನವನು

**ರೀಪ್ರಿಂಟ್ಸ್ ಪುಟ 2660**

## ಮತ್ತಾಯ 18:1–14

**"ಮಕ್ಕಳನ್ನು ನನ್ನ ಹತ್ತಿರಕ್ಕೆ ಬರಗೊಡಿರಿ; ಅವುಗಳಿಗೆ ಅಡ್ಡಿಮಾಡಬೇಡಿರಿ; ದೇವರ ರಾಜ್ಯವು ಇಂಥವರದೇ (ಇವರ ಹಾಗಿರುವವರದೇ)..." – ಮಾರ್ಕ 10:14**

ಈ ಪಾಠಕ್ಕೆ ಆದುಕೊಂಡಿರುವ ಸುವರ್ಣ ಪಠ್ಯಭಾಗವು ಬಹು ಅಸಮಂಜಸವೂ ದಾರಿತಪ್ಪಿಸುವದೂ ಆಗಿರುವದು. ಅದು ಮಕ್ಕಳ ವಿಷಯವಾಗಿ ಹೇಳಲ್ಪಟ್ಟದ್ದಾಗಿದ್ದು ಅದು ಅವರ ಪರವಾಗಿರುವ ನಮ್ಮ ಕರ್ತನ ಅನುಕಂಪ ಮತ್ತು ಪ್ರೀತಿಗಳನ್ನು ತೋರಿಸುವಂಥದಾಗಿತ್ತು. ನಿಜವಾದ ಯಾವ ದೊಡ್ಡ ಮನುಷ್ಯನಾಗಲಿ ಅಥವಾ ಮಹಿಳೆಯಾಗಲಿ ಬಾಲ್ಯದ ವಿಷಯವಾಗಿ ಪ್ರೀತಿಪೂರ್ವಕವಾದ ಅನುಕಂಪ ಆಸಕ್ತಿಯಿಂದ ಆಲೋಚಿಸುವುದಿಲ್ಲವೆಂಬುದನ್ನು ನಾವು ಯೋಚಿಸಲು ನಿಜವಾಗಿಯೂ ಸಾಧ್ಯವಾಗದು; ಅಲ್ಲದೆ ಅವರ (ಬಾಲ್ಯದವರ) ಜೀವಿತವನ್ನೊಳಗೊಂಡ ಖಾಲಿಯಾದ ಪುಟಗಳನ್ನು ದೃಷ್ಟಿಸಿದಾಗ ಅವರ ಜೀವಿತದ ಹಾದಿಯಲ್ಲಿ ಮುಂದಿರುವ ಕಷ್ಟಪರಿಶೋಧನೆ ನಿರಾಶೆಗಳ ವಿಷಯವಾಗಿ ಅನುಕಂಪದ ಭಾವನೆಗಳು ಏಳುವವು ಹಾಗು ಈ ಹೋರಾಟಾನುಭವಗಳ ಪರಿಣಾಮವಾಗಿ ಅವರು ಪಡೆಯುವ ಯಶಸ್ಸು ಹಾಗು ಅಪೇಕ್ಷಿತ ಗುಣಗಳನ್ನು ಪಡೆಯುವದನ್ನು ನಿರೀಕ್ಷಿಸಿ ಅವುಗಳಿಗಾಗಿ ಶುಭಹಾರೈಕೆಯುಂಟಾಗುವದು. ಯೇಸುವು ಚಿಕ್ಕ ಮಕ್ಕಳನ್ನು ಪ್ರೀತಿಸಿದ್ದನು, ಹೌದು, ಆತನು ನಿಷ್ಕಪಟವೂ ಪರಿಶುದ್ಧವೂ ಆದ ಪ್ರತಿಯೊಂದನ್ನೂ ಪ್ರೀತಿಸಿದ್ದನೆಂಬುದನ್ನು ಪ್ರಶ್ನಿಸುವ ಹಾಗಿರಲಿಲ್ಲ. ಅಲ್ಲದೆ ನಮ್ಮ ಪಠ್ಯಭಾಗವೂ ಈ ಘಾಡವಾದ ನಂಬಿಕೆಯನ್ನು ಸಮರ್ಥಿಸುತ್ತದೆ.

ದೇವರ ರಾಜ್ಯವು ಸಂಪೂರ್ಣವಾಗಿ ಇಲ್ಲವೇ ಕೆಲವು ಭಾಗಶಃ ಯಾವ ತಿಳುವಳಿಕೆ ಅನುಭವ ಗುಣಸಂಪಾದಿ–ಸುವಿಕೆಗಳನ್ನು ಹೊಂದಿಲ್ಲದೆಯೇ ಸತ್ತುಹೋಗಿರುವ ಶಿಶುಗಳಿಂದ ಕೂಡಿರುವುದಿಲ್ಲ. ಇದೇ ದೇವರ ಯೋಜನೆಯ ಉದ್ದೇಶವಾಗಿದ್ದಲ್ಲಿ "ಒಂದು ಲಕ್ಷದ ನಲವತ್ತು ನಾಲ್ಕು ಸಾವಿರ" ಮಂದಿಯಾದ "ಚಿಕ್ಕಹಿಂಡು" ಪೂರ್ಣಗೊಳ್ಳಲು ಸುಮಾರು ಹತ್ತೊಂಬತ್ತು ಶತಮಾನಗಳ ಅವಶ್ಯಕತೆಯಿರುತ್ತಿರಲ್ಲಿಲ್ಲ; ಇಲ್ಲವೇ ಒಂದು ಒಳ್ಳೆಯ ಹೋರಾಟವನ್ನು ಮಾಡಿ ಜಯಗಳಿಸಬೇಕೆಂಬುದನ್ನು, ಮತ್ತು "ಒಳ್ಳೆಯದನ್ನು ಮಾಡುವದರಲ್ಲಿ ಬೇಸರಗೊಳ್ಳದೆ" ಇರುವದರ ಮೂಲಕವಾಗಿ ಪವಿತ್ರಾತ್ಮನ ಕೃಪಾವರಗಳನ್ನು ಪಡೆಯಬೇಕೆಂಬುದನ್ನು, ಮತ್ತು ದೇವರ ರಾಜ್ಯವನ್ನು ಸೇರಬೇಕಾದಲ್ಲಿ ಶಾರೀರಿಕವಾಗಿ ಬಹು ಸಂಕಟವನ್ನು ಸ್ವಯಿಚ್ಛೆಯಿಂದಲೂ ಸಂತೋಷದಿಂದಲೂ ಅಂಗೀಕರಿಸಬೇಕೆಂಬುದನ್ನು ಹೇಳಲಾಗುತ್ತಿರಲಿಲ್ಲ. ಈ ಸುವಾರ್ತೆಯ ವಿಷಯವಾಗಿ ನೀಡಿರುವ ಕರೆಯಲ್ಲಿ ಶಿಶುಗಳಿಗೆ ಪಾಲಿರುವದಿಲ್ಲ; ಆದರೆ ಸಭೆಯು ರಾಜ್ಯಪ್ರಭಾವವನ್ನು ಪಡೆದು ಪೂರ್ಣಗೊಂಡ ಕೂಡಲೇ ಬರುವ ಭೂಸಂಬಂಧದ ಮಹಾ ಆಶೀರ್ವಾದದಲ್ಲಿ ಅವುಗಳು ಖಂಡಿತವಾಗಿ ಪಾಲನ್ನು ಹೊಂದುವವು.

ಈ ಪಠ್ಯಭಾಗವು ದಾರಿತಪ್ಪಿಸುವಂಥದ್ದು; ಈ ಪಾಠದ ಸಂಬಂಧವಾಗಿ "ಚಿಕ್ಕವರು" ಎಂದು ನಂತರದಲ್ಲಿ ವ್ಯಕ್ತವಾಗಿರುವ ಶಬ್ಧವು ಒಂದು ಸಾಂಕೇತಿಕಾರ್ಥದಲ್ಲಿ ಬಳಸಲಾಗಿದ್ದು ಅಕ್ಷರಶಃವಾದ ಅರ್ಥದಲ್ಲಿರುವದಿಲ್ಲ, ಕಾರಣ ಶಾರೀರಿಕ ಸಂಬಂಧವಾದ ತಂದೆತಾಯಿಗಳು ತಮ್ಮ ಚಿಕ್ಕ ಮಕ್ಕಳಿಗೆ ಮಾಡುವಂತೆ ದೀನರೂ ವಿಶ್ವಾಸಾರ್ಹರೂ ಆದ ತನ್ನ ಶಿಷ್ಯರನ್ನು ಕರ್ತನು ಕರುಣಿಸಿ ಮಮತೆಯಿಂದ ಪೋಷಿಸುವನಾಗಿ ಅವರನ್ನು ದೇವರಲ್ಲಿನ ಚಿಕ್ಕವರರೂ, ದೇವರ ಚಿಕ್ಕಮಕ್ಕಳೆಂದು ಉಲ್ಲೇಖಿಸಿರುವನು. ಇಲ್ಲವೇ ಇದೇನೂ ವಿರಳವಾದ ಸಂಗತಿಯೇನೂ ಆಗಿರುವುದಿಲ್ಲ; ಯಾಕೆಂದರೆ ಹೊಸದಾಗಿ ಸೇರಿದ ಮತ್ತು ಅಲ್ಪ ಅಭಿವೃದ್ಧಿಯಾಗಿರುವ ಕ್ರೈಸ್ತರನ್ನು ಸತ್ಯವೇದದಲ್ಲಿ ಪದೇಪದೇ ಶಿಶುಗಳಿಗೆ ಅಥವಾ ಚಿಕ್ಕ ಮಕ್ಕಳಿಗೆ ಹೋಲಿಸಿರುವದು. ಹೀಗೆ ಅಪೋಸ್ತಲನು ಬುದ್ಧಿವಾದ ಹೇಳಿರುವದು: "ಸಹೋದರರೇ, ಬುದ್ಧಿಯ ವಿಷಯದಲ್ಲಿ ಬಾಲಕರಾಗಿರಬೇಡಿರಿ; ಕೆಟ್ಟತನದ ವಿಷಯದಲ್ಲಿ ಶಿಶುಗಳಾಗಿಯೇ ಇದ್ದು ಬುದ್ಧಿಯ ವಿಷಯದಲ್ಲಿ ಪ್ರಾಯಸ್ಥರಾಗಿರಬೇಕು." ಮತ್ತು ಅಪೋಸ್ತಲನಾದ ಪೇತ್ರನು ಸಹೋದರಿಗೆ ಹೀಗೆ ಬುದ್ಧಿಪಾಠ ಹೇಳಿರುವನು: "ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ; ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ;" – 1 ಕೊರಿಂಥ 14:20; 1 ಪೇತ್ರ 2:2.

ಮಹಿಮಾರೂಪ ದರ್ಶನವಾದ ಬೆಟ್ಟದಿಂದ ಕಪೆರ್ನೌಮಿಗೆ ಹಿಂತಿರುಗಿದಾಗ ಈ ಪಾಠದಲ್ಲಿ ಹೇಳಿರುವ ಸಂಭಾಷಣೆಯು ನಡೆದಿತ್ತೆಂಬದು ಸ್ಪಷ್ಟವಾಗಿತ್ತು. ಮಾರ್ಕನು ಮತ್ತು ಲೂಕನು ನೀಡಿರುವ ವಿವರಣೆಗಳನ್ನು ಹೋಲಿಸಿ ನಾವು ಈ ಪ್ರಸ್ತಾವನೆಯನ್ನು ಕಲೆಹಾಕುವವರಾಗಿದ್ದೇವೆ; ಅದೇನಂದರೆ ಅಪೊಸ್ತಲರು ದಾರಿಯಲ್ಲಿ ತಮ್ಮಲ್ಲಿ ಯಾರು ಹೆಚ್ಚಿನವನೆಂದು ಅಥವಾ ಕರ್ತನು ವಾಗ್ದಾನ ಮಾಡಿದ ಆ ರಾಜ್ಯದಲ್ಲಿ ಯಾರು ಅತಿ ಹೆಚ್ಚು ಗೌರವಾನ್ವಿತರು ಎಂದು ಸಂವಾದ ಮಾಡುತ್ತಿದ್ದರು. ಅಲ್ಲದೆ ತಾವು ಅದರಲ್ಲಿ ಭಾಗಿಗಳಾಗುವದನ್ನು ನಿರೀಕ್ಷಿಸುತ್ತಿದ್ದರು. ಈ ಸಂವಾದಕ್ಕೆ ಪ್ರೇರಣೆ ಎಂದರೆ ಕರ್ತನ ವಿಶೇಷ ಅನುಗ್ರಹಿತರಾದ ಕೇವಲ ಮೂವರು ಮಾತ್ರ ಆತನೊಡನೆ ಬೆಟ್ಟದಲ್ಲಿದ್ದುದು. ಅವರ ನಡುವಿನ ಈ ಸಂವಾದವು ಯೇಸುವಿನ ಕಿವಿಗೆ ಬೀಳದಂತೆ ಮೆಲುಧ್ವನಿಯಲ್ಲಿ ತಮ್ಮಲ್ಲಿಯೇ ನಡೆಯಲ್ಪಟ್ಟಾಗ್ಯೂ, ಹಲವು ದೃಷ್ಟಿಯಿಂದ ಕೂಡಿದ ಹೇಳಿಕೆಗಳ ಮೂಲಕವಾಗಿ ಪುಷ್ಠಿಹೊಂದಿ ಜೀವಪಡೆದಿತ್ತು. ಇದು ನಡೆದ ಸ್ವಲ್ಪ ಸಮಯದ ನಂತರವೇ ನಮ್ಮ ಕರ್ತನು ಅವರು ದಾರಿಯಲ್ಲಿ ನಡೆಯುವಾಗ ತೀವ್ರಾಸಕ್ತಿಯಿಂದ ಮಾಡುತ್ತಿದ್ದ ಸಂವಾದದ ವಿಷಯವು ಯಾವುದಾಗಿತ್ತು ಮತ್ತು ಅದಕ್ಕೆ ಕಾರಣವು ಯಾವದೆಂದು ಅವರನ್ನು ವಿಚಾರಿಸಿದ್ದನು.

ಲೂಕನು ನೀಡಿದ ವಿವರಣೆಯ ಪ್ರಕಾರ ಅವರು ಸಂಕೋಚ ವುಳ್ಳವರಾಗಿ ತಮ್ಮ ವಾಗ್ವಾದದ ಬಗ್ಗೆ ತಿಳಿಸಲು ಮನಸ್ಸಿರಲಿಲ್ಲ; ಅವರು ನಿಜವಾಗಿ ನಾಚಿಕೊಂಡದ್ದರಲ್ಲಿ ಸಂದೇಹವಿರಲಿಲ್ಲ. ಆದರೆ ತಾವು ಈ ಸಂಗತಿ ಯನ್ನು ಕರ್ತನಿಂದ ಮುಚ್ಚಿಡಲು ಸಾಧ್ಯವಿಲ್ಲವೆಂಬುದನ್ನು ಅರಿತವ ರಾಗಿದ್ದರು ಮತ್ತು ಅವರಲ್ಲಿ ಕೆಲವರು ಈ ವಿಷಯವಾಗಿ ಆತನ ತೀರ್ಮಾನವಾಗಿ ನುಡಿಯುವದನ್ನು ಕೇಳಲು ಕುತೂಹಲವುಳ್ಳ ವರಾಗಿ, ತಮ್ಮ ಸಮಸ್ಯೆಯನ್ನು ಬಗೆಹರಿಸಲು ಆತನನ್ನು ಕೇಳಿಕೊಂಡಿದ್ದರು.

ನಮ್ಮ ಕರ್ತನು ತನ್ನ ನಂಬಿಗಸ್ತರಿಗೆ ಈ ವಿಷಯವಾಗಿ ಅವಶ್ಯವಿರುವ ಪಾಠವನ್ನು ನೀಡಲು ಕೇವಲ ಇಂಥಾ ಒಂದು ಅವಕಾಶವನ್ನು ಬಯಸಿದ್ದನು. ಮತ್ತು ತಾನು ಸಾಮಾನ್ಯವಾಗಿ ಮಾಡುತ್ತಿದ್ದಂತೆ ಇದನ್ನು ದೃಷ್ಟಾಂತದ ಮೂಲಕವಾಗಿ ವಿವರಿಸಿ ಹೇಳಿದ್ದನು. ಒಂದು ಚಿಕ್ಕ ಮಗುವನ್ನು ಕರೆದು ಅದನ್ನು ಅವರ ಮಧ್ಯದಲ್ಲಿ ಕುಳ್ಳರಿಸಿ, ಕೇವಲ ಈ ಚಿಕ್ಕ ಮಕ್ಕಳಂತೆ ಅಗುವವರೇ ದೇವರ ರಾಜ್ಯದಲ್ಲಿ ಸೇರಲು ಸಾಧ್ಯವೆಂದು ಆತನು ಅವರು ಬೆರಗಾಗುವಂತೆ ಪ್ರಕಟಿಸಿ ಹೇಳಿದನು. ಅವರು ಪ್ರಾಕೃತ ಮನುಷ್ಯರಾಗಿದ್ದುದು ಮಾತ್ರವಲ್ಲದೆ ಅವರಲ್ಲಿ ಅನೇಕರು ವಿದ್ಯೆಯಿಲ್ಲದವರಾಗಿರಲಾಗಿ, ಆ ಶಿಷ್ಯರು ನಿಸ್ಸಂದೇಹವಾಗಿ ಚಿಕ್ಕ ಮಗುವಿನಲ್ಲಿರುವ ಸರಳತೆಯ ಮೂಲಕವಾಗಿ ತಮಗೆ ಸಾಧ್ಯವಾದಷ್ಟು ಘನತೆಯ ಮನೋಭಾವವನ್ನು ಕಲ್ಪಿಸಿಕೊಳ್ಳುವ ಗುರಿಯನ್ನು ಇಟ್ಟುಕೊಂಡವ ರಾಗಿ ಅದಕ್ಕೆ ನಿಜವಾಗಿಯೂ ಪರಿಶ್ರಮಿಸುವವರಾಗಿದ್ದರು. ಈ ಸಂಗತಿಗಳನ್ನು ಮನದಲ್ಲಿ ಹೊಂದಿದ ಪ್ರಾಕೃತ ಮನುಷ್ಯನಿಗೆ ಸೂಕ್ತವಾಗಿ ಸಲಹೆಯಾಗುವ ರೀತಿಯಲ್ಲಿ ಅವರು ದೇವರ ರಾಜ್ಯದ ಆಡಳಿತ ವೈಭವದಲ್ಲಿ ಪಾಲನ್ನು ಹೊಂದುವ ನಿರೀಕ್ಷೆಯ ಲ್ಲಿದ್ದರು. ಕೆಚ್ಚೆದೆಯ ದೃಢಕಾಯುರು ವಿವೇಕಿಗಳೂ ಘನತೆಗೌರವವುಳ್ಳರು ಮುಂತಾದವರಿಗೆ ಬದಲಾಗಿ ಸರಳತೆಯಿಂದಲೂ ಸಾತ್ವಿಕ ರಾಗಿಯೂ ತಿದ್ದುಪಾಟು ಹೊಂದುವ ಮನೋಭಾವವುಳ್ಳವರಾಗಿ ಚಿಕ್ಕಮಕ್ಕಳಂತೆ ಇರುವವರನ್ನು ಕರ್ತನು ಬಯಸುತ್ತಿರುವನೆಂದು ತಿಳಿದಾಗ ಅವರಿಗೆ ಎಂಥಾ ಆಶ್ಚರ್ಯವುಂಟಾಗಿರಬೇಕು!

ಆದಾಗ್ಯೂ ನಮ್ಮ ಕರ್ತನ ಮಾತುಗಳು ಕೇವಲ ಅವರು ಬೆಳೆಸಿಕೊಂಡುಬಂದ ಮನೋಭಾವವನ್ನು ಖಂಡಿಸುವದಕ್ಕಾಗಿ ರಲಿಲ್ಲ ಆದರೆ ಆ ವಿಷಯದಲ್ಲಿ ಮನೋಭಾವವನ್ನು ಬದಲಾಯಿಸಿಕೊಳ್ಳ ಸಲುವಾಗಿ ನೀಡಿದ ಒಂದು ಪಾಠವಾಗಿದ್ದು, ಆತನ ಮಾತುಗಳು ಕೇವಲ ಈ ಸಾಧ್ಯತೆಗಳ ಬಗ್ಗೆ ಮಾತ್ರವಲ್ಲದೆ ಆ ರಾಜ್ಯದಲ್ಲಿ ಒಂದು ಪಾಲನ್ನು ಬಯಸುವವರ ಜೀವಿತದಲ್ಲಿ ಬದಲಾವಣೆಗಳಾಗುವ ಅಗತ್ಯವನ್ನೂ ಸಹ ತಿಳಿಸುವವು ಗಳಾಗಿದ್ದವು. ನಾವು ನಮ್ಮ ಕರ್ತನ ಮಾತುಗಳನ್ನು ಕಾಮನ್ ವರ್ಶನ್ ಎಂಬ ಭಾಷಾಂತರದಲ್ಲಿರುವಂತೆ "ನೀವು ಮತಾಂತರ ವಾಗದೆ (ಕನ್ವರ್ಟ್) ಹೋದರೆ" ಎಂಬುದಕ್ಕೆ ಬದಲಾಗಿ ನಾವು ರಿವೈಸ್ಡ್ ವರ್ಶನ್ ಭಾಷಾಂತರದಲ್ಲಿರುವಂತೆ "ನೀವು ತಿರಿಗಿಕೊಳ್ಳದಿದ್ದರೆ" ಎಂದು ಓದಿದಲ್ಲಿ ನಮ್ಮ ಕರ್ತನು ತನ್ನ ಶಿಷ್ಯರು ತಿಳಿದುಕೊಳ್ಳ ಬಯಸಿದ ವಿಷಯದ ನಿಜಾಂಶವು ನಮಗೆ ತಿಳಿದು ಬರುತ್ತದೆ. "ಕನ್ವರ್ಟ್" ಎಂಬ ಶಬ್ದದ ದುರುಪಯೋಗದ ಕಾರಣದಿಂದಾಗಿ ಇದರ ಮೂಲ ಅರ್ಥವು ಕಳೆದುಹೋಗಿರು ವದು. ಅವರು ಈ ವಿಷಯದ ಬಗ್ಗೆ ತಮ್ಮ ಆಲೋಚನೆಯನ್ನು ಬದಲಿಸಿಕೊಂಡು, ಈ ಪಾಠವನ್ನು ಅದರ ವಿರುದ್ಧ ದಿಕ್ಕಿನಿಂದ ಅಭ್ಯಾಸಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ಅಂದರೆ ಸಾತ್ವಿಕತೆಯ ದೀನತೆಯ ಶಿಶುಭಾವದ ಬಗ್ಗೆ ಪಾಠಗಳನ್ನು ಅಭ್ಯಾಸಿಸಿ ಅವುಗಳನ್ನು ಅನುಷ್ಠಾನಕ್ಕೆ ತರುವ ವಿಷಯವಾಗಿತ್ತು. ಯಾರು ಸಾತ್ವಿಕತೆಯ ಹಾಗು ಹೃದಯದಲ್ಲಿನ ಸರಳತೆಯ ವಿಷಯವಾಗಿ ಅತ್ಯುನ್ನತವಾಗಿ ಅಭಿವೃದ್ಧಿ ಹೊಂದುವನೋ ಅವನು ಆ ರಾಜ್ಯದಲ್ಲಿ ಹೆಚ್ಚಿನವನಾಗುವನೆಂದು ನಮ್ಮ ಕರ್ತನು ತಿಳಿಸಿರುವದರಲ್ಲಿ ಅಡಕವಾಗಿರುವದೇನಂದರೆ ಯಾರು ಸರಳತೆ ಹಾಗು ಸಾತ್ವಿಕತೆಯನ್ನು ಪಡೆಯುವ ಬಗ್ಗೆ ಪರಿಶ್ರಮಿಸುವರೋ ಅವರಿಗೆ ಆ ರಾಜ್ಯದಲ್ಲಿ ಒಂದು ಪಾಲನ್ನು ಅನುಗ್ರಹಿಸಲಾಗುವ ದೆಂಬದು; ಆದರೆ ಸ್ವಾರ್ಥಪರರು ಜಂಬಕೊಚ್ಚುವವರು ಆದವರಲ್ಲಿ ಯಾರಿಗೂ ಈ ವಿಷಯದಲ್ಲಿ ಯಾವ ಪಾಲೂ ಭಾಗವಹಿಸುವಿಕೆಯೂ ಇರುವದಿಲ್ಲ.

ತನ್ನ ರಾಜ್ಯದಲ್ಲಿನ ಅತ್ಯುನ್ನತವಾದ ಘನತೆ ಗೌರವಗಳನ್ನು ದಯಪಾಲಿಸಲಿರುವವರಿಗೆ ಇರಬೇಕಾದ ದೀನಮನಸ್ಸು ಹಾಗು ನಿರಾಡಂಬರ ಸ್ವಭಾವಗಳ ವಿಷಯವಾದ ವ್ಯಾಖ್ಯಾನಗಳನ್ನು ತಾನು ನೀಡಿದ ನಂತರ ಯೇಸುವು ತನ್ನ ಹಿಂಬಾಲಕರಲ್ಲಿನ "ಚಿಕ್ಕವರ" ಬಗ್ಗೆ ಒಂದು ಸಾಮಾನ್ಯವಾದ ಪಾಠವನ್ನು ನೀಡಲು ಮುಂದಾಗಿ ಆತನು ಹೇಳತೊಡಗಿದ್ದೇನೆಂದರೆ, ಯಾರು ತನ್ನ ಹೆಸರಿನಲ್ಲಿ ಇಂಥಾ ದೀನಮನಸ್ಸಿನ ಶಿಷ್ಯರನ್ನು ಸೇರಿಸಿಕೊಳ್ಳುವರೋ ಅವರು ತನ್ನನ್ನೇ ಸೇರಿಸಿಕೊಂಡಂತಾಗುವದೆಂದೂ ಮತ್ತು ಈ ದೀನಮನಸ್ಸಿನವರಲ್ಲಿ ಒಬ್ಬನಿಗೆ ಯಾರು ಅಡ್ಡಿಯಾಗುವರೋ ಅಥವಾ ಹಾನಿಮಾಡುವರೋ ಅವರು ಎಂಥಾ ಒಂದು ಘೋರ ಅಪರಾಧವನ್ನು ಎಸಗುವವರೆಂದರೆ ಅವರಿಗೆ ತಮ್ಮ ಜೀವವನ್ನು ಕಳೆದುಕೊಳ್ಳುವುದು ಉತ್ತಮವಾಗಿರುವದು ಅಂದರೆ ಅಂಥವನಿಗೆ ಬೀಸುವ ಕಲ್ಲನ್ನು ಕೊರಳಿಗೆ ಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಳುಗಿಸುವುದು ಉತ್ತಮವಾಗಿರುವದು. ಮತ್ತು ಹೀಗೆ, ಆತನ ಜೀವವನ್ನು ಕಾಪಾಡುವ ಎಲ್ಲಾ ನಿರೀಕ್ಷೆಯನ್ನು ನಾಶಮಾಡುವದು ಉತ್ತಮವಾಗಿರುವದು; ಶಿಷ್ಯರಲ್ಲಿ ಅತಿ ದೀನರೂ ಶಿಶುಭಾವವುಳ್ಳವರೂ ಸಾತ್ವಿಕರೂ ಆಗಿ ಕರ್ತನ ಮಾರ್ಗವನ್ನು ಅನುಸರಿಸುತ್ತಿರುವ ಈ "ಚಿಕ್ಕವರಿಗೆ" ಹಾನಿ ಮಾಡುವವದಕ್ಕಿಂತಲೂ ಇಂಥಾ ಒಂದು ಮಹಾ ವಿಪತ್ತು ಅವನ ಮೇಲೆ ಬರುವದು ಅವನಿಗೆ ಉತ್ತಮವಾಗಿರುವದು.

ಕರ್ತನು ದೀನತೆಗೆ ನೀಡಿರುವ ವಿಶೇಷವಾದ ಬೆಲೆಯನ್ನು ನಾವು ಹೀಗೆ ನೋಡುವವೆವು. ಅದು ನಿಜವಾದ ಶಿಷ್ಯರೆಲ್ಲರನ್ನೂ ಪ್ರೋತ್ಸಾಹಗೊಳಿಸಿ ಅವರು ಈ ಸ್ವಭಾವವನ್ನು ಅನುದಿನವೂ ವೃದ್ಧಿಗೊಳಿಸಿಕೊಳ್ಳುವಂತೆ ಮಾಡಿ, ಅವರು ಹೀಗೆ ನಿಷ್ಕಪಟ ಪ್ರಾಮಾಣಿಕತೆ ನಿಜವಾದ ದೈನ್ಯಭಾವ ಇವುಗಳಲ್ಲಿ ಹೆಚ್ಚು ಹೆಚ್ಚಾಗಿ ಬೆಳೆದು ಆ ದೊಡ್ಡ ಅರಸನ ದೃಷ್ಟಿಯಲ್ಲಿ ಬಹು ದೊಡ್ಡವರಾಗುತ್ತಾ ಬಂದವರಾಗುವರು. ಇದು ಬರಲಿರುವ ಆ ರಾಜ್ಯದಲ್ಲಿ ಉನ್ನತ ಸ್ಥಾನಕ್ಕೆ ಬರಲು ಅಧಿಕ ಅಧಿಕವಾಗಿ ಆತನವರನ್ನು ಯೋಗ್ಯರಾಗುತ್ತಾ ಬರುವಂತೆ ಮಾಡುವದು. ದೀನತೆಯಿಲ್ಲದೆ

ಯಾರೂ ಈ ರಾಜ್ಯದಲ್ಲಿ ಸೇರಲಾಗದೆಂಬುದನ್ನು ಕಂಡವರಾದ ನಮಗೆ ಸತ್ಯವೇದವು ಎಲ್ಲಾ ಕಡೆಯಲ್ಲಿಯೂ ಕರ್ತನ ಜನರಿಗೆ ದೀನತೆಯ ವಿಷಯವಾಗಿ ಬುದ್ಧಿವಾದ ಹೇಳಿರುವುದರ ಬಗ್ಗೆ ಆಶ್ಚರ್ಯವಾಗವೇಕಿಲ್ಲ. "ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು." ಆದರೂ ಸತ್ಯವೇದದಲ್ಲಿ ಈ ಎಲ್ಲಾ ಬುದ್ಧಿಮಾತು ಗಳಿದ್ದಾಗ್ಯೂ ಸಹ ಮಾನವನಲ್ಲಿರುವ ಸ್ವಭಾವವು ಎಂಥಾ ವಿಕೃತಿ – ಗೊಂಡಿರುವದೆಂದರೆ, ಯಾರು ಕರ್ತನ ಜನರಾಗಿ ಆತನ ಮಾರ್ಗದಲ್ಲಿ ಓಡಲು ತೊಡಗುವರೋ ಅವರಿಗೆ ಬೇರೆ ಯಾವದಕ್ಕಿಂತಲೂ ಈ ವಿಷಯವಾಗಿ ಹೆಚ್ಚು ತೊಂದರೆಗಳು ಉಂಟಾಗಿ, ಇದರ ವಿರುದ್ಧವಾದ ಹೋರಾಟವು ಹೆಚ್ಚಾಗಿ ಕಂಡುಬರುವಂತೆ ಮಾಡಿರುವದು. ಹಾಗು ತಮ್ಮನ್ನು ಚಿಕ್ಕವರನ್ನಾಗಿ ಮಾಡಿಕೊಂಡಿರುವ ಇತರ ಕೆಲವು ಸಹೋದರರು ತಮ್ಮನ್ನು ಅತಿ ಹೆಚ್ಚಿನವರೆಂದು ಇತರರು ಎಣಿಸಬೇಕೆಂಬ ಕಾತುರವೂ ಉಳ್ಳವರಾಗಿರುವರು. ಕರ್ತನಿಗೆ ಪ್ರಿಯರಾದ ಜನರೆಲ್ಲರೂ, ವಿಶೇಷವಾಗಿ ಮನ್ನಡೆಸುವ ಗುಣವವನ್ನು ಪಡೆದು ನಾಯಕರುಗಳಂತೆ ಸಹಜವಾಗಿ ಕಂಡುಬರುವಂಥವರೆಲ್ಲರೂ ಈ ಪಾಠವನ್ನು ಚೆನ್ನಾಗಿ ಅಧ್ಯಯನಮಾಡಿ ಕರ್ತನ ಕೃಪಾನುಗ್ರಹ ಗಳಲ್ಲಿ ತಾವು ಹೇಗೆ ಮುಂದುವರಿಯಬೇಕೆಂಬುದನ್ನೂ ಮತ್ತು ಆತನ ಗುಣಮಟ್ಟಗಳ ಅನುಸಾರ ನಿಜವಾಗಿಯೂ ಹೇಗೆ ಹೆಚ್ಚಿನವನಾಗಬೇಕೆಂಬುದನ್ನು ಕಲಿತುಕೊಳ್ಳಬೇಕೆಂಬುದನ್ನು ದೇವರು ಬಯಸುವನಲ್ಲವೇ? ಜಯಹೊಂದುವದು ಕೇವಲ ಇದೊಂದೇ ಸಂಗತಿ.

ವಚನ 6ರಲ್ಲಿ ಮತ್ತು ಇದರ ನಂತರ "ತಪ್ಪೆಸಗು" ಎಂದು ಅನುವಾದಿಸಿರುವ ಶಬ್ಧವನ್ನು "ಅಡ್ಡಿಯನ್ನುಂಟುಮಾಡು" ಎಂದು ಅನುವಾದಿಸುವದು ಉತ್ತಮ, ದಾರಿಯಲ್ಲಿ ಅಡೆತಡೆಯೊಡ್ಡುವದು ಎಂಬುದು ಇದರ ಅಭಿಪ್ರಾಯ. ನಿಜ ರೀತಿಯಲ್ಲಿರುವ ತನ್ನ ಜನರ ಮಾರ್ಗದಲ್ಲಿ, ಅವರು ನಿಜವಾಗಿಯೂ "ಚಿಕ್ಕವರಾಗಿ" ಅಂದರೆ ದೀನತೆಯುಳ್ಳವರಾಗಿರುವಷ್ಟೂ ಇಂತಹ ಹಲವಾರು ಅಡೆತಡೆ ಗಳು ಬರುವವೆಂಬುದನ್ನೂ ಕರ್ತನು ಬಹು ನಿರ್ದಿಷ್ಟವಾಗಿ ತಿಳಿಸಿರುವನು. ಈ ತೊಂದರೆಗಳು, ಈ ಪರೀಕ್ಷೆಗಳು ಮತ್ತು ಈ ಅಡೆತಡೆಗಳು ಬರುವದು ಅವಶ್ಯವೆಂಬುದನ್ನು ಕರ್ತನು ಪ್ರಕಟಿಸಿರುವನು. ಇವುಗಳು ಅವಶ್ಯವಾಗಿರುವದಕ್ಕೆ ಕಾರಣ ವೇನೆಂದರೆ ಆಯಲ್ಪಟ್ಟ ಸಭೆ ಎಲ್ಲವೂ ಸಂಪೂರ್ಣವಾಗಿ ಪರೀಕ್ಷಿಸಲ್ಪಟ್ಟು ಗುಣನಡತೆಗಳಲ್ಲಿ ಅಭಿವೃದ್ಧಿಹೊಂದಿ ಅವರು ಹೀಗೆ ದೇವರ ಪ್ರಿಯ ಕುಮಾರನ ಪ್ರತಿರೂಪಿಗಳಾಗಿ ದೃಢವಾದ ಗುಣನಡತೆಯುಳ್ಳವರಾಗಿ ಸತ್ಯದ ಪರವಾಗಿ ಹಿಂಸೆಯನ್ನು ಅನುಭವಿಸಲು ಇಚ್ಛಿಸುವವರಾಗಿ, ಲೌಕೀಕ ಸಂಗತಿಗಳನ್ನು ಕಳಕೊಳ್ಳಲು ಸಂತೋಷವೂ ಉಲ್ಲಾಸವೂ ಉಳ್ಳವರಾಗಿ, ಹೀಗೆ ಮಾಡುವದರ ಮೂಲಕ ಪರಲೋಕದಲ್ಲಿರುವ ತಂದೆಗೆ ಮೆಚ್ಚಿಕೆಯಾಗುವರು. ಮತ್ತು ಹೀಗೆ ಅವರು ದೈನ್ಯತೆ ಮತ್ತು ವಿಧೇಯತೆಗಳನ್ನು ವೃದ್ಧಿಪಡಿಸಿಕೊಂಡವರಾಗಿ ಕಡೆಯಲ್ಲಿ ಆತನು ಕೇವಲ ಯೇಸುವಿನ ಹೆಜ್ಜೆಯ ಜಾಡನ್ನು ನಂಬಿಗಸ್ತರಾಗಿ ಅನುಸರಿಸುವವರಿಗೆ ವಾಗ್ದಾನಮಾಡಿರುವ ಉನ್ನತಪದವಿಗೆ ಬರಲು ಸಿದ್ಧರಾಗುವರು.

ಈ ಅಡತಡೆಗಳು ಈ ಮಾರ್ಗದಲ್ಲಿ ಎಷ್ಟೇ ಅವಶ್ಯವಿದ್ದು ಕ್ರಿಸ್ತನ ದೇಹವಾಗಿರುವ ಸಭೆಯು ಅದರಿಂದ ಪರೀಕ್ಷಿತವಾದರೂ, ವಿರೋಧಿಯಾದ ಸೈತಾನನ ಪ್ರತಿನಿಧಿಗಳಾಗಿ ಆತನ ಪ್ರಭಾವಗಳಿಗೆ ತಮ್ಮನ್ನು ಒಳಪಡಿಸಿಕೊಂಡು ಭಕ್ತರ ಪಾದಗಳಿಗೆ ಅಡೆತಡೆಗಳನ್ನು ಒಡ್ಡುವವರು (ಹೀಗೆ ಮಾಡುವದರಿಂದ) ತಮ್ಮ ಹೊಣೆಗಾರಿಕೆ ಯನ್ನು ಹಗುರವಾಡಿಕೊಳ್ಳಲಾಗದು; ಅವರು ಯಾವ ಬಗೆಯ ಶಿಕ್ಷೆಯನ್ನು ತನ್ನಿಂದ ಪಡೆಯುವರೆಂದು ನಿಖರವಾಗಿ ಹೇಳದಿದ್ದರೂ ಇಂಥಾ ಕೆಡುಕರಿಗೆ ತನ್ನಿಂದ ಪ್ರತಿಫಲವಿರು ವದೆಂದು ನಮ್ಮ ಕರ್ತನ ಮಾತುಗಳು ನಮಗೆ ಖಚಿತಪಡಿಸು ವದು; ಆತನು ಹೇಳಿರುವದು: "ಮುಯ್ಯಿಗೆಮುಯ್ಯಿ ತೀರಿಸುವದು ನನ್ನ ಕೆಲಸ; ನಾನೇ ಪ್ರತಿಫಲವನ್ನು ಕೊಡುವೆನು."

ಈ ದಿನಗಳಲ್ಲಿ ಹಲವರು ಕರ್ತನಲ್ಲಿನ "ಚಿಕ್ಕವರ" ಅಂದರೆ ಆತನ ನಂಬಿಗಸ್ತರಾದ ಚಿಕ್ಕ ಹಿಂಡಿನ ಎದುರಿನಲ್ಲಿ ಅಡತಡೆಗಳನ್ನು ಇಡುತ್ತಿರುವ ಸಂಭವ ಬಹುವಾಗಿರುವದು. ಪೇತ್ರನು ತನಗೆ ತಿಳಿಯದಂತೆಯೇ ನಮ್ಮ ಒಡೆಯನಿಗೆ ತಾನು ಪ್ರತಿಷ್ಠೆಯನ್ನು ಮಾಡಿಕೊಳ್ಳುವಾಗ ತೆಗೆದುಕೊಂಡ ಪ್ರತಿಜ್ಞೆಯನ್ನು ಪೂರೈಸದಂತೆ ಪ್ರೇರಿಸುವಲ್ಲಿ ಆತನಿಗೆ ಒಬ್ಬ ಎಡಹುವ ಕಲ್ಲು ಅಂದರೆ ಅಡ್ಡಿಯನ್ನುಂಟುಮಾಡುವ ಬಂಡೆಯಾದಂತೆಯೇ ಇವರೂ ತಮಗೆ ಅರಿಯದೆಯೇ ಅಡ್ಡಿಯನ್ನು ಉಂಟುಮಾಡುವವ ರಾಗಿರುವರು. ಕರ್ತನಲ್ಲಿರುವ "ಚಿಕ್ಕವರ" ಎದುರಿನಲ್ಲಿ ಅಡೆತಡೆಯನ್ನು ಒಡ್ಡುವವರು ಈಗಲೂ ಅದೇ ರೀತಿಯಲ್ಲಿ ಅವರನ್ನು ಪೂರ್ಣವಾಗಿ ಪ್ರತಿಷ್ಠೆಪಡಿಸಿಕೊಳ್ಳುವದರಿಂದ ಮತ್ತು ತಮ್ಮನ್ನು ತಾವೇ ಯಜ್ಞಾರ್ಪಣೆ ಮಾಡಿಕೊಳ್ಳುವದರಿಂದ ಬೇರೆಡೆಗೆ ನಡೆಸುವವರಾಗಿ ಅವರನ್ನು ಪ್ರಾಕೃತ ಮನುಷ್ಯನಿಗಿರುವ ಅಲ್ಪ ದೀನತೆಯುಳ್ಳ ಸರಳವಾದ ಇನ್ನೊಂದು ಮಾರ್ಗಕ್ಕೆ ಅಂದರೆ ಬಹು ವ್ಯವಹಾರ ಕುಶಲತೆಯುಳ್ಳ, ಮೋಸತಂತ್ರದ ಮಾರ್ಗವನ್ನು ಮತ್ತು ಇಕ್ಕಟ್ಟಾದ ಮಾರ್ಗಕ್ಕೆ ಬದಲಾಗಿ ಲೋಕದ ಅನುಸಾರವಾಗಿ ಅದರಷ್ಟೇ ಉತ್ತಮವಾದ ಅಥವಾ ಅದಕ್ಕಿಂತಲೂ ಬಹು ಹೆಚ್ಚು ಉತ್ತಮವಾದ ಜ್ಞಾನವುಳ್ಳ ಮಾರ್ಗಕ್ಕೆ ನಡೆಸಲು ಅವರನ್ನು ಪ್ರೇರೇಪಿಸಲು ಪ್ರಯತ್ನಿಸುತ್ತಿರುವರು. ಇಂತಹ ಪರೀಕ್ಷೆಗಳು ಅವಶ್ಯ ಹಾಗೂ ಯಾರು ರಕ್ಷಕನ ಹೆಜ್ಜೆಯ ಜಾಡಿನ ಸಮೀಪದಲ್ಲಿ ನಡೆಯುವದಿಲ್ಲವೋ ಅಂಥವರನ್ನು ಶೋಧಿಸಿ ಬೇರ್ಪಡಿ ಸುವುದೂ ಅವಶ್ಯ; ಏಕೆಂದರೆ ದೇವರು ಕೇವಲ ಒಂದು ಚಿಕ್ಕ ಹಿಂಡನ್ನು ಹುಡುಕುತ್ತಿರುವನು. ಅವರೆಲ್ಲರೂ ತನ್ನ ಪ್ರಿಯ ಕುಮಾರನ ಪ್ರತಿರೂಪಿಗಳಾಗಿರುವರು. ಆದರೂ ಯಾವುದೇ ವಿಧದಲ್ಲಿ ಕರ್ತನ ಜನರು ತಮ್ಮ ಮಾರ್ಗದಲ್ಲಿ ಎಡವಿ ಬೀಳಲು ಸಹಾಯ ಮಾಡಿ ಇಲ್ಲವೇ ಅಡ್ಡಿಯನ್ನುಂಟುಮಾಡಿ ಈ ಹಿಂಡಿನವರನ್ನು ಬೇರೆಡೆಗೆ ಒಯ್ಯುವವರಿಗೆ, ಅವರು ಎಡಹುವ ಕಲ್ಲುಗಳಾಗಿ ಹೀಗೆ ಮಾಡಿದುದಕ್ಕೆ ಒಂದು ದೊಡ್ಡ ಹೊಣೆಗಾರರಾಗುವರು.

ಅಡ್ಡಿಗಳು, ಪರಿಶೋಧನೆಗಳು ಮತ್ತು ಪರೀಕ್ಷೆಗಳು ಎಲ್ಲರಿಗೂ ಬರಲೇಬೇಕೆಂಬ ಈ ಆಲೋಚನೆಯನ್ನು ಅನುಸರಿಸು ವವನಾಗಿ ನಮ್ಮ ಕರ್ತನು ಒತ್ತಾಯಗೊಳಿಸಿರುವುದೇನಂದರೆ, ಇಂಥಾ ಒಂದು ಪರೀಕ್ಷೆಗಳು––ನಮ್ಮ ಸಂತೋಷಗಳನ್ನು ಇಲ್ಲವೇ

ನಿರೀಕ್ಷೆಗಳನ್ನು ಅಥವಾ ಗುರಿಗಳನ್ನು ಅಥವಾ ಸಂಪ್ರದಾಯಗಳನ್ನು ಅಥವಾ ಸವಲತ್ತು ಸೌಕರ್ಯಗಳನ್ನು, ಇವುಗಳು ನಮ್ಮ ಬಲಗಣ್ಣಿನಂತೆ ಅಥವಾ ಬಲಗೈಯಂತೆ ಅಮೂಲ್ಯವಾಗಿದ್ದರೂ ಅಥವಾ ನಮ್ಮ ಕಾಲಿನಂತೆ ಪ್ರಯೋಜನಕಾರಿಯಾಗಿದ್ದರೂ, ಇವುಗಳನ್ನು ತ್ಯಜಿಸಬೇಕಾಗುವದೆಂಬುದು; ಮತ್ತು ನಾವು ಆ ರಾಜ್ಯದಲ್ಲಿ ಸೇರಬೇಕಾದರೆ ಇವುಗಳನ್ನು ಹೇಗೂ ಜಯಿಸುವವರಾಗಬೇಕೆಂಬದು. ಆತನು ಇನ್ನೊಂದು ಸಮಯದಲ್ಲಿ ಹೇಳಿದುದನ್ನು ಬೇರೊಂದು ವಿಧದವಾದ ಮಾತುಗಳಲ್ಲಿ ಹೀಗೆ ವ್ಯಕ್ತಪಡಿಸಿದಂತಿರುವದು: ಅದೇನಂದರೆ: "ನಾವು ಬಹು ಸಂಕಟಗಳನ್ನು ತಾಳಿ ದೇವರ ರಾಜ್ಯದೊಳಗೆ ಸೇರಬೇಕೆಂದು.." ದೇವರ ರಾಜ್ಯವನ್ನು ಕೇವಲ ಯೇಸುವಿನಲ್ಲಿ ನಂಬಿಕೆಯಿಡಬೇಕೆಂಬ ಶರತ್ತಿನ ಮೇಲೆ ಅನುಗ್ರಹಿಸಲಾಗುವದೆಂಬ ಆಲೋಚನೆಯನ್ನು ಹೊಂದಿರುವವನು ಸತ್ಯವೇದದಲ್ಲಿ ತಿಳಿಸದೇ ಇರುವ ಒಂದು ತಪ್ಪಾದ ಆಲೋಚನೆಯನ್ನು ಹೊಂದಿದವನಾಗಿರವನು. ದೇವರು ಅಂಗೀಕರಿಸುವ ರೀತಿಯಲ್ಲಿ ನಮ್ಮನ್ನು ನಾವು ಯಜ್ಞಾರ್ಪಣೆಮಾಡಿಕೊಳ್ಳುವ ರೂಪದಲ್ಲಿ ಏನನ್ನಾದರೂ ಮಾಡುವ ಮೊದಲು ನಾವು ನೀತಿವಂತರೆಂಬ ನಿರ್ಣಯವನ್ನು ಪಡೆಯಲು ನಮಗೆ ನಂಬಿಕೆಯು ಅವಶ್ಯ: ಆದರೆ ಯಾರು ಕ್ರಿಯೆಗಳಿಲ್ಲದೆ ಅಂದರೆ ತನ್ನನ್ನು ತಾನು ಯಜ್ಞಮಾಡಿಕೊಳ್ಳದೆ ನಂಬುವನೋ ಅವನು ದೇವರ ರಾಜ್ಯದ ಸಂಬಂಧದಲ್ಲಿನ ಎಲ್ಲಾ ಸವಲತ್ತುಗಳನ್ನು ಕಳಕೊಳ್ಳುವನು. ಅದನ್ನು ಪಡಕೊಳ್ಳಲು "ಪರಿಶ್ರಮಿಸುವದು" ಅಥವಾ "ಒಳ್ಳೆಯ ಹೋರಾಟವನ್ನು ಮಾಡುವದು" ಅಗತ್ಯವಿರುವದು, "ಒಳ್ಳೆಯ ಸೈನಿಕನಂತೆ ಶ್ರಮೆಯನ್ನು ಅನುಭವಿಸುವದು" ಬೇಕಿರುವದು, ಕೇವಲ ಪಾಪಭರಿತವಾದ ಉಲ್ಲಾಸಗಳನ್ನು ಕಡಿದುಕೊಳ್ಳಲು ಇಚ್ಛಿಸುವುದು ಮಾತ್ರವಲ್ಲದೆ ಕರ್ತನ ಸೇವೆಯಲ್ಲಿ ನಮ್ಮ ಪೂರ್ಣವಾದ ಶ್ರದ್ಧೆಗೆ ಮತ್ತು ಆತನೊಂದಿಗೆ ಸತ್ತವರಾಗಲು ಮಾಡಿಕೊಂಡ ಒಡಂಬಡಿಕೆಗೆ ಹಸ್ತಕ್ಷೇಪಮಾಡುವ ಎಲ್ಲಾ ಸಂಗತಿಗಳನ್ನು ಬಿಟ್ಟುಬಿಡಬೇಕು; ನಮ್ಮ ಪ್ರತಿಯೊಂದು ಕಾಲದ ಅಗತ್ಯತೆಗಳಿಗೆ ಬೇಕಿರುವ ದೇವರ ಕೃಪೆಯ ಸಹಾಯ ಪಡೆದವರಾಗಿ, ಮತ್ತು ದೇವರ ಸುಚಿತ್ತವನ್ನು ನೆರವೇರಿಸಸಲುವಾಗಿ ನಮ್ಮಲ್ಲಿ ಉದ್ದೇಶಗಳನ್ನೂ ಮತ್ತು ಪ್ರಯತ್ನಗಳನ್ನೂ ಉಂಟುಮಾಡಲು ಸಮರ್ಥವಾದ ದೇವರ ಅಮೂಲ್ಯವಾದ ಮತ್ತು ಉತ್ಕೃಷ್ಟವಾದ ವಾಗ್ದಾನಗಳ ಸಹಾಯಗಳನ್ನು ಪಡೆದವರಾಗಿ "ನಮ್ಮ ನಮ್ಮ ರಕ್ಷಣೆಯನ್ನು ನಾವು ಸಾಧಿಸಿಕೊಳ್ಳಬೇಕು."

ನಾವು ದೇವರ ರಾಜ್ಯದಲ್ಲಿ ಕಾಲು ಅಥವಾ ಕೈ ಅಥವಾ ಕಣ್ಣುಗಳು (ಇಲ್ಲದೆ) ಕೊರತೆಯುಳ್ಳವರಾಗಿರಬೇಕೆಂಬದಾಗಿ ಇದನ್ನು ಅರ್ಥಮಾಡಿಕೊಳ್ಳಬೇಕಿಲ್ಲ. ಆದರೆ ನಾವು ನಿಜವಾಗಿಯೂ ಅರ್ಥಮಾಡಿಕೊಳ್ಳುವದೇನಂದರೆ, ನಮ್ಮನ್ನು ಪಾಪಕ್ಕೆ ಸಿಕ್ಕಿಸುವ ಕಣ್ಣುಗಳು ನಮ್ಮ ಸಹಜವಾದ ಅಭಿರುಚಿಗಳನ್ನು ಸೊಗಸಾಗಿ ರಂಜಿಸಿ ನಮ್ಮನ್ನು ಪ್ರಾಪಂಚಿಕ ವಿಷಯಗಳಿಗೆ ಆಕರ್ಶಿಸುವ ಅಡ್ಡಿಗಳನ್ನು ಸೂಚಿಸುವದು, ಮತ್ತು ನಮ್ಮನ್ನು ಪಾಪಕ್ಕೆ ಸಿಕ್ಕಿಸುವ ಕೈಗಳು ನಮ್ಮ ಅತ್ಯುನ್ನತ ಆತ್ಮಿಕ ಹಿತಾಸಕ್ತಿಗಳಿಗೆ ವಿರುದ್ಧವಾದುದನ್ನು ಮಾಡುವುದನ್ನು ಸೂಚಿಸುವದು, ಮತ್ತು ಪಾಪಕ್ಕೆ ಸಿಕ್ಕಿಸುವ ನಮ್ಮ ಕಾಲುಗಳು ನಾವು ಪಾಪ ಮತ್ತು ಆತ್ಮತೃಪ್ತಿಗಾಗಿ ನಿಷೇಧಿತವಾದ ಮಾರ್ಗಗಳಿಗೆ ಹೋಗುವುದನ್ನು ಸೂಚಿಸುವದು; ಅಲ್ಲದೆ ಭೂಸಂಬಂಧವಾದ ಎಲ್ಲಾ ವಿಷಯಗಳಲ್ಲಿ ತೃಪ್ತಿಪಡಿಸಿಕೊಂಡು ಅದರಿಂದ ನಮಗುಂಟಾದ (ಸುವಾರ್ತಾಯುಗದ) ಕರೆಯಿಂದ ತಪ್ಪಿಹೋಗಿ ಆ ಮೂಲಕ ದೇವರು ಕರೆದದನ್ನೂ ಆದುಕೊಂಡದ್ದನ್ನು ದೃಢಪಡಿಸಿಕೊಳ್ಳಲು ವಿಫಲರಾಗುವದಕ್ಕೆ ಬದಲಾಗಿ ನಾವು ಈ ಕೆಲವು ಭೂಸಂಬಂಧವಾದ ಸೌಕರ್ಯಸವಲತ್ತುಗಳು ಮತ್ತು ಸಂತೋಷತೃಪ್ತಿಗಳು ಇಲ್ಲದೆಯೇ ನಿತ್ಯಜೀವಕ್ಕೆ ಸೇರಿ ಆ ರಾಜ್ಯದಲ್ಲಿ ಪಾಲನ್ನು ಹೊಂದಬೇಕೆಂಬುದನ್ನು ಸಮಂಜಸವಾಗಿ ಸೂಚಿಸುವದು.

ಇಲ್ಲಿ ತಿಳಿಸಲಾಗಿರುವ "ನಿತ್ಯವಾದ ಬೆಂಕಿ" ಮತ್ತು "ನರಕದ ಬೆಂಕಿ" ಇವುಗಳು ಅದರಂತೆಯೇ ಸಾಂಕೇತಿಕವಾದವುಗಳಾಗಿದ್ದು ಭಾಷೆಯ ಶಬ್ದಾಲಂಕಾರದ ಒಂದು ಭಾಗವಾಗಿ ಇವು ನಿಸ್ಸಂಶಯವಾಗಿ ಮನಃಪೂರ್ವಕವಾಗಿ ಪಾಪಮಾಡಿದವರಿಗೆ ಬರುವ ಪಾಪದ ಸಂಬಳವಾದ ನಾಶನವನ್ನು ಉಲ್ಲೇಖಿಸಿ ಸೂಚಿಸುತ್ತದೆ. ಅಂದರೆ ಅವರು "ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು." ಇಲ್ಲಿ ಹಾಗೂ ಸತ್ಯವೇದದ ಎಲ್ಲೆಡೆ ಬಳಸಲಾಗಿರುವ ಬೆಂಕಿಯೆಂಬುದು ನಾಶನವನ್ನು ಸೂಚಿಸುವದು ಆದರೆ ಯಾತನೆಯನ್ನಲ್ಲ. ಇದನ್ನು "ನರಕದ ಬಗ್ಗೆ ಸತ್ಯವೇದವು ಹೇಳುವದೇನು?" ಎಂಬ ಹೆಸರಿನ ಕರಪತ್ರದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಲಾಗಿದೆ.

ಇದೇ ವಿಷಯದ ಒಂದು ಭಾಗವಾಗಿ ನಮ್ಮ ಕರ್ತನು ನಮ್ಮೆಲ್ಲರಿಗೆ ಹುದುವಾಗಿರುವಂತೆ ಈ ಎಚ್ಚರಿಕೆಯನ್ನು ನೀಡಿರುವನು, "ಈ ಚಿಕ್ಕವರಲ್ಲಿ (ಅಂದರೆ, ಕರ್ತನಿಗೆ ಸೇರಿದ ಈ ದೀನರಲ್ಲಿ) ಒಬ್ಬನನ್ನಾದರೂ ತಾತ್ಸಾರಮಾಡಬಾರದು ನೋಡಿರಿ;" ಲೋಕದ ದೃಷ್ಟಿಯಿಂದ ನೋಡಿದಾಗ ಇವರು ದೀನತೆಯುಳ್ಳವರಾಗಿ ಯಾವ ಮಹತ್ವವೂ ಇಲ್ಲದವರಂತೆ ಕಾಣಬಹುದು, ಆದರೆ ಇವರು ದೇವರ ಸ್ನೇಹಿತರು, ಇವರು ದೇವರ ಮಕ್ಕಳು; ದೇವರು ಇವರನ್ನು ಪರಿಪಾಲಿಸುತ್ತಿರುವನು. ಆದುದರಿಂದ ಯಾರು ಇವರಿಗೆ ಹಾನಿಯನ್ನುಂಟುಮಾಡುವರೋ ಅವರು ಪರಲೋಕದಲ್ಲಿರುವ ಅವರ ತಂದೆಯನ್ನು ನಿಂದಿಸಿ ಆತನನ್ನು ವಿರೋಧಿಸುವವರಾಗಿರುವರು. ಇದೂ ಅಲ್ಲದೆ, ನಮ್ಮ ಕರ್ತನು ಖಚಿತಪಡಿಸಿರುವುದೇನಂದರೆ, ತನ್ನಲ್ಲಿ ನಂಬಿಗಸ್ತರಾಗಿದ್ದು ದೀನರೂ ಚಿಕ್ಕಹಿಂಡಿನವರೂ ಆದ ಈ ಚಿಕ್ಕವರಲ್ಲಿ ಪ್ರತಿಯೊಬ್ಬರ ಪರವಾಗಿಯೂ ತಂದೆಯ ಸಮ್ಮುಖದಲ್ಲಿ (ದೇವದೂತರಿಂದ) ಪ್ರತಿನಿಧಿಸಲ್ಪಡುತ್ತಿರುವರು. ಕರ್ತನ ಜನರಲ್ಲಿನ ಪ್ರತಿಯೊಬ್ಬನನ್ನೂ ಕಾಪಾಡಸಲುವಾಗಿ ಒಬ್ಬೊಬ್ಬ ದೇವದೂತನಿರುವನು (ಗಾರ್ಡಿಯನ್ ಎಂಜಲ್). ಅಲ್ಲದೆ ಇವರ ಕ್ಷೇಮ ಹಾಗು ಹಿತಾಸಕ್ತಿಗಳಿಗೆ ಸಂಬಂಧಿಸಿದ ಸಂಗತಿಗಳ ಬಗ್ಗೆ ಆ ದೊಡ್ಡ ಅರಸನ ಗಮನಕ್ಕೆ ತರುವದರಲ್ಲಿ ವಿಳಂಬವಾಗುವದಿಲ್ಲವೆಂಬುದನ್ನು ನಾವು ಗ್ರಹಿಸಿಕೊಳ್ಳಬೇಕು. ಕ್ರಿಸ್ತನ ಅಂಗಗಳಾಗಿರುವ ಈ ದೀನರನ್ನು ಅಲಕ್ಷಿಸಿ ಅಥವಾ ಯಾವುದೇ ವಿಧದಲ್ಲಿ ಇವರ ಮೇಲೆ ದೊರೆತನ ಮಾಡಿ ಇವರನ್ನು ತಪ್ಪಾಗಿ ನಡೆಸಿಕೊಳ್ಳುವ ಪ್ರವೃತ್ತಿಯುಳ್ಳವರ ಬಗ್ಗೆ ಎಂಥಾ ಒಂದು (ಕಠಿಣವಾದ)

ಅಭಿಪ್ರಾಯವು ಇಲ್ಲಿರುವದು! ಅಲ್ಲದೆ ಈ ದೀನರಿಗೆ ಸಹ ಎಂಥಾ ಒಂದು (ಉತ್ತೇಜನಕರವಾದ) ಪಾಠವಿರುವುದು ಅಂದರೆ ದೇವರ ಪರಿಪಾಲನೆಯಲ್ಲಿ ಮತ್ತು ಏರ್ಪಾಟುಗಳಲ್ಲಿ ಇವರ ವಿಷಯವಾಗಿ ಒಂದು ವಿಶೇಷ ಉದ್ದೇಶವಿರುವದೆಂಬುದು. ಆದುದರಿಂದ ಇವರಿಗಾಗಿ ಎಲ್ಲಾ ಸಂಗತಿಗಳು ಅನುಕೂಲಕರವಾಗಿರಬೇಕು; ಯಾಕೆಂದರೆ ಇವರು ದೇವರಿಗೆ ಸಂಬಂಧಪಟ್ಟವರು!

ಉಳಿದ ನಾಲ್ಕು ವಚನಗಳು ಈ ಪಾಠಕ್ಕೆ ಸೂಕ್ತವಾದ ಅಂಶಗಳಂತೆ ಕಾಣಬರುವುದಿಲ್ಲ; ಏಕೆಂದರೆ ಅವು ಮುಂದೆ ಬೇರೊಂದು ಪಾಠದ ಸೂಕ್ತವಾದ ಸಂಬಂಧದಲ್ಲಿ ಬರುವಂಥವು ಗಳಾಗಿರುವದು; ಇಲ್ಲಿ ನಾವು ಇದರ ಪ್ರಸ್ತಾಪವನ್ನು ಮಾಡದೆ ಬಿಟ್ಟಿರುವೆವು.

*****

# ಏಳೆಪ್ಪತ್ತು ಸಾರಿ ಕ್ಷಮಿಸು

**ರೀಪ್ರಿಂಟ್ಸ್ ಪುಟ 5134**

## ಮತ್ತಾಯ 18:15–35

**"ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ; ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ" – ಎಫೆಸ್ಸ 4:32**

ಈ ದಿನದ ಪಾಠವನ್ನು ಚೆನ್ನಾಗಿ ಕಲಿತುಕೊಳ್ಳುವದು ಪ್ರತಿಯೊಬ್ಬ ನಿಜವಾದ ಕ್ರೈಸ್ತನ ಜೀವಿತಕ್ಕೆ ಒಂದು ಆಶೀರ್ವಾದ. ಮತ್ತು ಇದು ಆತನಿಗೆ ನಿತ್ಯಜೀವ ಪಡೆಯುವದನ್ನು ಖಚಿತ ಪಡಿಸುವದೆಂದು ಹೇಳಬಹುದು; ಆತನು ದೇವರು ಬಯಸುವ ಅಗತ್ಯತೆಗಳಿಗೆ ಸಂಪೂರ್ಣವಾಗಿ ಹೊಂದಿಕೊಂಡವನಾಗಿರುವನು. ಸಹಜವಾಗಿ ಈ ಪಾಠವನ್ನು ತಮಗೆ ಅನ್ವಯಿಸಿಕೊಂಡು ಇತರರು ಈ ಮೂಲಕವಾಗಿ ಲಾಭಪಡೆಯಬಹುದಿದ್ದರೂ ಇದು ವಿಶೇಷವಾಗಿ ಪ್ರತಿಷ್ಠಿತರಿಗೆ ಅಂದರೆ ಕ್ರಿಸ್ತನ ದೇಹವಾಗಿರುವ ಸಭೆಗೆ ಸಂಬಂಧಿಸಿದುದಾಗಿರುವದು; ಕ್ರಿಸ್ತನು ಇದರ ಶಿರಸ್ಸಾಗಿರುವನು.

ತನ್ನ ಹಿಂಬಾಲಕರಿಗೆ ಒಡೆಯನ ಆದೇಶವೇನಂದರೆ, ಒಬ್ಬ ಸಹೋದರನು ನಿನಗೆ ಹಾನಿಮಾಡಿದರೆ (ತಪ್ಪುಮಾಡಿದರೆ) ಆ ವಿಷಯವನ್ನು ತೆಗೆದುಕೊಂಡು ನೀನೊಬ್ಬನೇ ಅವನ ಬಳಿಗೆ ಹೋಗಿ (ಅದನ್ನು ಬಗೆ ಹರಿಸಿಕೊಂಡು) ಒಂದು ಒಪ್ಪಂದಕ್ಕೆ ಅಂದರೆ ಸಹಮತಕ್ಕೆ ಬರಲು ಪ್ರಯತ್ನಿಸು. ಇಲ್ಲಿ ವಿಷಯವನ್ನು ಬಹುವಾಗಿ ಅಪಾರ್ಥಮಾಡಿಕೊಳ್ಳುವ ಸಂಭವವು ಅಧಿಕವಾಗಿರುವದು. ಆದರೆ ಇದು ಸಾಕಾಗದಿದ್ದಲ್ಲಿ ಈ ಸಂಗತಿಯು ಸೂಕ್ಷ್ಮವೆಂದು ಪರಿಗಣಿಸಿ ನಿನ್ನೊಂದಿಗೆ ತಪ್ಪಿತಸ್ಥನ ಬಳಿಗೆ ಬರಲು ಇನ್ನಿಬ್ಬರನ್ನು ಕೇಳಿಕೋ. ಅವರಿಗೆ ಈ ಕಾರ್ಯದ ವಿಷಯವಾಗಿ ಏನೂ ಹೇಳದೆ ಅವರೇ ವಿಷಯವನ್ನು ಕೇಳಿ ನಿನಗೂ ಮತ್ತು ತಪ್ಪಿತಸ್ಥನಿಗೂ ಬುದ್ಧಿಹೇಳುವದಕ್ಕೆ ಅವರ ಮನಸ್ಸುಗಳು ಮುಕ್ತವಾಗಿರಲಿ.

ಈ ಇಬ್ಬರು ಸಹೋದರರು ಮಾಡಿದ ಒಪ್ಪಂದ ಮತ್ತು ಅವರ ಬುದ್ಧಿವಾದವನ್ನು ಇಬ್ಬರೂ ಅನುಸರಿಸುವವರಾಗಬೇಕು. ಅವರು ನಿನ್ನ ವಿಷಯವನ್ನು ಒಪ್ಪಿಕೊಳ್ಳದಿದ್ದಲ್ಲಿ ನೀನೇ ತಪ್ಪುಮಾಡಿರುವಿಯೆಂಬುದನ್ನು ಒಪ್ಪಿಕೊಳ್ಳಬೇಕು ಅಲ್ಲದೆ ಸಂಗತಿಯು ಹೀಗೆ ತಿರುಗಿಕೊಳ್ಳಲೂ ಅವಕಾಶವಿರುತ್ತದೆ. ಅವರು ನಿನ್ನನ್ನು ಒಪ್ಪಿಕೊಂಡು ನಿನ್ನ ವಿರೋಧಿಯು ಅವರ ಬುದ್ಧಿವಾದಕ್ಕೆ ಕಿವಿಗೊಡದೆ ಹಠಹಿಡಿದು ನಿನಗೆ ಹಾನಿ ಮಾಡುವದನ್ನು ಮುಂದುವರೆಸಿದರೆ ಆಗ ನೀನು ಈ ಸಂಗತಿಯು ಇನ್ನು ಸಭೆಗೆ ತೆಗೆದುಕೊಂಡುಹೋಗುವ ತೊಂದರೆ ತೆಗೆದುಕೊಳ್ಳುವಷ್ಟು ಹೆಚ್ಚಿನ ಮಹತ್ವದ್ದೆಂದು ಆಲೋಚಿಸಬಹುದು ಮತ್ತು ನೀನು ಇದನ್ನು ಮಾಡುವದಕ್ಕೆ ಸ್ವತಂತ್ರನು. ಈ ವಿಷಯದಲ್ಲಿ ಸಭೆಯ ತೀರ್ಪು ಅಂತಿಮವಾಗಿದ್ದು ಇಬ್ಬರೂ ಇದಕ್ಕೆ ಬದ್ಧರು. ಸಭೆಯ ಮಾತನ್ನು ಕೇಳಲು ನಿರಾಕರಿಸುವವನನ್ನು ಆತನು ಒಬ್ಬ ಅನ್ಯನೆಂದು ಅವನೊಡನೆ ವರ್ತಿಸಬೇಕು ಮತ್ತು ಇದು ಆತನಿಗೆ ಹಾನಿಮಾಡುವ ಅರ್ಥದಲ್ಲಿರಬಾರದು. ಆದರೆ ಅವನು ತನ್ನ ನಡೆಯನ್ನು ಬದಲಾಯಿಸಿಕೊಳ್ಳುವವರೆಗೂ ಅವನನ್ನು ಸಭೆಯ ಯಾವ ಸ್ಥಾನಕ್ಕಾದರೂ ಅಥವಾ ಗೌರವಕ್ಕಾದರೂ ನೇಮಿಸಬಾರದು. ದೈವಿಕ ನಿರ್ದೇಶನವು ಎಷ್ಟು ಸರಳವಾದದ್ದು, ಇದನ್ನು ಅನುಸರಿಸುವದರಿಂದ ಎಂಥಾ ಆಶೀರ್ವಾದ ಬರುವದು.

## "ಏಳೆಪ್ಪತ್ತು ಸಾರಿ" ಕ್ಷಮಿಸು

ಒಬ್ಬ ಸಹೋದರನು ಎಷ್ಟು ಸಾರಿ ತಪ್ಪುಮಾಡಿ ಅದಕ್ಕೆ ಕ್ಷಮೆಕೇಳಿಕೊಂಡಲ್ಲಿ ಅವುಗಳನ್ನು ಕ್ಷಮಿಸಬಹುದು, ಏಳು ಸಾರಿಯ ಮಿತಿಯೇ? ಎಂಬ ತಾತ್ವಿಕವಾಗಿ ಕಲ್ಪಿತವಾದ ಒಂದು ಪ್ರಶ್ನೆಯನ್ನು ಭಕ್ತನಾದ ಪೇತ್ರನು ಹಾಕಿದನು. ಯಾವ ಸಹೋದರನಾದರೂ ತನ್ನ ತಪ್ಪನ್ನು ಒಪ್ಪಿಕೊಂಡು ಅದಕ್ಕೆ ಕ್ಷಮೆಯಾಚಿಸಿದರೆ ಅದನ್ನು ಕ್ಷಮಿಸಲೇಬೇಕು, ಅವನು ಮತ್ತೆ ಮತ್ತೆ ನಾನೂರ ತೊಂಬತ್ತು ಸಾರಿ ಹಾಗೆ ಮಾಡಿದರೂ ಸರಿಯೇ ಇದಕ್ಕೆ ಮಿತಿಯಿರುವುದಿಲ್ಲ ಎಂದು ಒಡೆಯನು ಕಾರ್ಯರೂಪವಾಗಿ ತಿಳಿಯಪಡಿಸಿದನು. ಅಲ್ಲಿ ಬೇರೆ ಯಾವ ನಿಲುವು ತೆಗೆದುಕೊಳ್ಳಲು ಆಗದು; ಕ್ಷಮೆಯನ್ನು ಕೇಳಿಕೊಂಡಾಗ ಕ್ಷಮಿಸುವದು ಅನಿವಾರ್ಯವಾಗುತ್ತದೆ. ಒಡೆಯನ ಆದೇಶವನ್ನು ಅನುಸರಿಸಿದಲ್ಲಿ ಅದಕ್ಕೆ ಉಂಟಾಗುವ ಪರಿಣಾಮಗಳ ಬಗ್ಗೆ ನಾವು ಅತಿಯಾಗಿ ಆತಂಕ ಪಡಬಾರದು. ನಾವು ಆ ಸಂಗತಿಯ (ಪರಿಣಾಮಗಳ) ಹೊಣೆಗಾರಿಕೆಯನ್ನು ಆತನ ಮೇಲೆ ಹಾಕಿ ಆತನ ಜ್ಞಾನವು ನಮ್ಮನು ತಪ್ಪಾಗಿ ನಡೆಸದೆಂಬ ಭರವಸೆಯುಳ್ಳವರಾಗಿರಬೇಕು.

ಆ ನಂತರ ನಮ್ಮ ಕರ್ತನು ದೇವರ ರಾಜ್ಯದ ಅಂದರೆ ಆಗ ಆರಂಭದ ಹಂತದಲ್ಲಿದ್ದ ಸಭೆಯ ವಿಷಯವಾದ ಸಂಗತಿಯ ನಿದರ್ಶನವನ್ನು ಕೊಟ್ಟು ಒಂದು ಸಾಮ್ಯವನ್ನು ಹೇಳಿದನು. ಒಬ್ಬಾನೊಬ್ಬ ರಾಜನು ತನ್ನ ಸೇವಕರಿಂದ ಸಾಲಪಾವತಿಯ ಲೆಕ್ಕತೆಗೆದುಕೊಳ್ಳುತ್ತಿದ್ದನು. ಅವರಲ್ಲಿ ಒಬ್ಬನು ಹತ್ತು ಸಾವಿರ ತಲಾಂತು ಸಾಲವನ್ನು ಪಡೆದಿದ್ದನು. ಆತನ ಒಡೆಯನು ಅವನನ್ನು ಅವನ ಪತ್ನಿಯನ್ನು ಹಾಗು ಅವನಿಗಿರುವದೆಲ್ಲವನ್ನು ಮಾರಿ ಸಾಲ ತೀರಿಸಲು ಆಜ್ಞಾಪಿಸಿದನು. ಆದರೆ ಆ ಸೇವಕನು ಅವನ ಪಾದಕ್ಕೆ ಬಿದ್ದು ತಾನು ಸಾಲವನ್ನು ತೀರಿಸುವುದಾಗಿಯೂ ತನಗೆ ಕರುಣೆತೋರಿಸಬೇಕೆಂತಲೂ ಬೇಡಿಕೊಂಡನು. ಆ ಒಡೆಯನು ಅವನನ್ನು ಕರುಣಿಸಿ ಅವನ ಸಾಲವೆಲ್ಲವನ್ನು ಬಿಟ್ಟುಬಿಟ್ಟು ಅದರ ವಸೂಲಿಯನ್ನು ನಿಲ್ಲಿಸಿದನು.

## "ಆತನಿಗೆ ನೂರು ಹಣ ಕೊಡಬೇಕಾಗಿದ್ದವನು"

ಆ ಸೇವಕನು ಹೀಗೆ ಬಿಡುಗಡೆ ಹೊಂದಿ ಹೊರಗೆ ಬಂದು ತನಗೆ ಸಾಲತೀರಿಸಬೇಕಿದ್ದವರಲ್ಲಿ ಕೆಲವರನ್ನು ಹುಡುಕತೊಡಗಿ ತನಗೆ ನೂರು ಹಣ ಕೊಡಬೇಕಿದ್ದ ಒಬ್ಬ ಜೊತೇಸೇವಕನನ್ನು ಹಿಡಿದನು. ಆ ಹಣವು ತಾನು ಕೊಡಬೇಕಿದ್ದುದಕ್ಕೆ ಹೋಲಿಸಿದಲ್ಲಿ ಅದು ಬಹು ಅಲ್ಪವಾಗಿತ್ತು. ಆತನು ತನ್ನ ಜೊತೇಸೇವಕನ ಕುತ್ತಿಗೆ ಹಿಡಿದು "ನೀನು ನನಗೆ ಕೊಡಬೇಕಾದ ನೂರು ಹಣವನ್ನು ಕೊಡು" ಎಂದು ಹೇಳಿದನು. ಆತನ ಜೊತೇಸೇವಕನು ಅವನ ಪಾದಕ್ಕೆ ಬಿದ್ದು ಕರುಣೆಯನ್ನು ಬೇಡಿಕೊಂಡು, "ನನ್ನನ್ನು ಕರುಣಿಸು, ನಿನ್ನ ಸಾಲವನ್ನೆಲ್ಲಾ ತೀರಿಸುವೆನು" ಎಂದು ಹೇಳಿದನು. ಆದರೆ ಆತನು ತಡಮಾಡದೆ ಅವನನ್ನು ಹಿಡಿಸಿ ಆ ಸಾಲವನ್ನೆಲ್ಲಾ ತೀರಿಸುವ ತನಕ ಅವನನ್ನು ಸೆರೆಮನೆಯಲ್ಲಿ ಹಾಕಿಸಿದನು. ಈ ಸಂಗತಿಯು ಕಡೆಯಲ್ಲಿ ಒಡೆಯನ ಕಿವಿಗೆ ಬಿತ್ತು; ಆತನು ಅವನನ್ನು ಕರೆಸಿ ಹೀಗೆ ಹೇಳಿದನು: "ಎಲಾ ನೀಚನೇ, ನೀನು ನನ್ನನ್ನು ಬೇಡಿಕೊಂಡದ್ದರಿಂದ ಆ ಸಾಲವನ್ನೆಲ್ಲಾ ನಾನು ಬಿಟ್ಟುಬಿಟ್ಟೇನಲ್ಲಾ; ನಾನು ನಿನ್ನನ್ನು ಕರುಣಿಸಿದ ಹಾಗೆ ನೀನು ಸಹ ನಿನ್ನ ಜೊತೇಸೇವಕನನ್ನು ಕರುಣಿಸಬಾರದಾಗಿತ್ತೇ" ಎಂದು ಹೇಳಿದನು. ಮತ್ತು ಆತನು ಕೋಪಗೊಂಡು ಶಿಕ್ಷೆವಿಧಿಸಿ ಅವನು ತನ್ನ ಸಾಲವನ್ನೆಲ್ಲಾ ತೀರಿಸುವ ತನಕ ಅವನನ್ನು ಪೀಡಿಸುವವರ ಕೈಗೆ ಒಪ್ಪಿಸಿದನು.

## "ಇಲ್ಲಿ ಒಂದು ಮುಖ್ಯವಾದ ಪಾಠವಿರುವುದು"

ಆ ಪಾಠವೇನು? ಅದೇನಂದರೆ ಕ್ರಿಸ್ತನ ಸಲುವಾಗಿ ದೇವರು ನಮ್ಮನ್ನು ಕರುಣಿಸಬೇಕೆಂಬುದನ್ನು ಬಯಸುವಂತೆ ನಾವು ಒಬ್ಬರನ್ನೊಬ್ಬರು ಕರುಣಿಸುವವರಾಗಬೇಕು. ನಮ್ಮ ಪಠ್ಯಭಾಗದಲ್ಲಿ ಈ ಪಾಠವು ಚೆನ್ನಾಗಿ ವ್ಯಕ್ತವಾಗಿರುವದು. ದೇವರು ನಮ್ಮನ್ನು ಕ್ರಿಸ್ತನಲ್ಲಿ ಕ್ಷಮಿಸಿದಂತೆ ಅಲ್ಲದೆ ಅನುದಿನವೂ ನಮ್ಮ ತಪ್ಪುಗಳನ್ನು ಕ್ಷಮಿಸುವದನ್ನು ಮುಂದುವರಿಸಿರುವಂತೆ ನಾವು ಒಬ್ಬರಿಗೊಬ್ಬರು ಕರುಣಿಸುವವರು ಅಂದರೆ ಮೃದುವಾದ ಹೃದಯವುಳ್ಳವರು ಆಗಿರಬೇಕು. ಇತರರು ನಮಗೆ ಮಾಡಿದ ತಪ್ಪುಗಳನ್ನು ನಾವು ಮಾಡಿರುವ ತಪ್ಪುಗಳಿಗೆ ಹೋಲಿಸಿದಲ್ಲಿ ಅವು ನಿಜವಾಗಿಯೂ ಅಲ್ಪವಾದವುಗಳು. ಆದುದರಿಂದ ನಮ್ಮನ್ನು ಕೇಳಿಕೊಳ್ಳುವವರೆಲ್ಲರನ್ನೂ ಏಳೆಪ್ಪತ್ತರವರೆಗೂ ಕ್ಷಮಿಸುವದಕ್ಕೆ ಹೆಚ್ಚು ಮನಸ್ಸುಳ್ಳವರಾಗಿರಬೇಕು. ಹೀಗೆ ಕರುಣೆತೋರಿಸುವದನ್ನು ಅಭ್ಯಾಸಿಸುವಲ್ಲಿ ನಾವು ದೈವಿಕ ಗುಣವನ್ನು ಅನುಕರಣೆ ಮಾಡುವವರಾಗುತ್ತೇವೆ. ನಮ್ಮ ಹೃದಯದಲ್ಲಿ ಹಾಗು ಜೀವಿತದಲ್ಲಿ ಅದರ ಪ್ರಭಾವವು ಘನತೆಯುಂಟುಮಾಡುವಂಥದ್ದು. ನಮ್ಮ ಕರ್ತನಾದ ಯೇಸುವು ತಂದೆಯ ವ್ಯಕ್ತಿತ್ವದ ಪ್ರತಿರೂಪವಾಗಿರುವನು ಮತ್ತು ನಾವು ಈ ಉದಾರಭಾವ ಮತ್ತು ಪ್ರೀತಿಯ ಗುಣಗಳನ್ನು ಅನುಕರಣೆಮಾಡುವಲ್ಲಿ ಅಧಿಕವಾಗಿ ಕ್ರಿಸ್ತನ ಹೋಲಿಕೆಗೆ ಬರುವವರಾಗುತ್ತೇವೆ ಮತ್ತು ಹೀಗಾಗಿ ಹೆಚ್ಚಾಗಿ ದೇವರ ಹೋಲಿಕೆಗೆ ಬರುತ್ತೇವೆ.

## ದೇವರು ನಿಮಗೆ ಸಹ ಮಾಡಿದಂತೆ

ದೇವರು ಕ್ರಿಸ್ತನ ದೇಹದ ಅಂಗಗಳಾಗಿರುವ ಸಭೆಯೊಂದಿಗೆ ನಡಕೊಳ್ಳಲು ಅನುಸರಿಸುವ ತತ್ವಗಳ ವಿಷಯವಾಗಿ ತನ್ನ ಸಾಮ್ಯವು ಬೋಧಿಸುವದೆಂದು ನಮ್ಮ ಕರ್ತನಾದ ಯೇಸುವು ವಿವರಿಸಿ ಹೇಳಿರುವನು. ಅವರು ಕ್ರೂರಿಗಳು ಅನುಕಂಪವಿಲ್ಲದವರೂ ಅಗಿ ತಮ್ಮ ಸಹೋದರರಿಂದ ನ್ಯಾಯದ ವಿಷಯದಲ್ಲಿ ಕಠಿಣವಾಗಿ ಲೆಕ್ಕತೆಗೆದುಕೊಳ್ಳುವವರಾದಲ್ಲಿ ಆಗ ಪರಲೋಕದಲ್ಲಿರುವ ತಂದೆಯೂ ಸಹ ಅವರ ವಿಷಯವಾಗಿಯೂ ಹಾಗೆಯೇ ನಡಕೊಳ್ಳುವವನಾಗಿ ಅವರ ದೋಷಗಳೆಲ್ಲವುಗಳ ವಿಷಯವಾಗಿ ಲೆಕ್ಕತೆಗೆದುಕೊಳ್ಳುವನು. ದೇವಜನರು ಈ ಪಾಠದ ಪ್ರಭಲತೆಯನ್ನು ಮನಗಂಡವರಾದಲ್ಲಿ ಸಹೋದರರ ತಪ್ಪು ದೊಷಗಳನ್ನು ಬಹು ಉಧಾರವಾಗಿ ಮತ್ತು ಬಹು ಸಾಧಾರಣವಾಗಿ ಕ್ಷಮಿಸುವ ಅಭ್ಯಾಸವನ್ನು ಬಳಕೆಗೆ ತಂದುಕೊಳ್ಳುವವರಾಗುವರು. ಯಾಕೆಂದರೆ ಪರಲೋಕದ ತಂದೆಯು ನಮ್ಮ ದೋಷಗಳೆಲ್ಲವುಗಳ ವಿಷಯವಾಗಿ ಪೂರ್ಣವಾಗಿ ಶಿಕ್ಷಿಸುವವನಾಗಿ ಅವುಗಳಲ್ಲಿ ಯಾವದನ್ನು ಕ್ಷಮಿಸಲು ನಿರಾಕರಿಸಿದರೆ ನಮ್ಮಲ್ಲಿ ಯಾರು ಅದನ್ನು ಭರಿಸಲು ಸಮರ್ಥರಾಗುವರು?

ನಾವು ದೇವರ ಕನಿಕರವನ್ನು ಮನಗಂಡವರಾಗಿರುವವೆಂಬುದನ್ನು ಆತನ ಗುಣಲಕ್ಷಣಗಳನ್ನು ಕಲಿತುಕೊಂಡವರಾಗಿ ನಂಬಿಗಸ್ತರ ಮನೆತನದವರ ವಿಷಯವಾಗಿ ಹೆಚ್ಚು ಹೆಚ್ಚು ಕನಿಕರವುಳ್ಳವರಾಗಿಯೂ ಉದಾರಿಗಳಾಗಿಯೂ ಇರುವುದರ ಮೂಲಕವಾಗಿ ನಾವು ತೋರಿಸಿಕೊಡುವವರಾಗಿರುವೆವು. ನಾವು ಸಹೋದರರ ವಿಷಯದಲ್ಲಿ ಕನಿಕರವುಳ್ಳವರಾದಲ್ಲಿ ಸಹಜವಾಗಿಯೇ ನಾವು ಮನುಷ್ಯರೆಲ್ಲರ ವಿಷಯವಾಗಿಯೂ ಉದಾರಿಗಳಾಗಿರುವೆವು. ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ನಾವು ನಮ್ಮ ದೋಷಬಲಹೀನತೆಗಳ ವಿಷಯವಾಗಿ ನೆನೆದು ಅವುಗಳ ವಿಷಯವಾಗಿ ಮನಗಂಡವರಾದರೆ ಅದು ನಮ್ಮನ್ನು ಸಹೋದರರ ವಿಷಯದಲ್ಲಿಯೂ ಮಾತ್ರವಲ್ಲದೆ ಮನುಕುಲದವರೆಲ್ಲರ ವಿಷಯವಾಗಿಯೂ ಅನುಕಂಪವುಳ್ಳವರಾಗಿರುವಂತೆ ಮಾಡುವದು. ದೇವರು ಇದರಲ್ಲಿ ಸಂತೋಷಿಸುವನು. ಪವಿತ್ರಾತ್ಮನ ಈ ಕೃಪಾವರಗಳನ್ನು ತಮ್ಮಲ್ಲಿ ಬೆಳೆಸಿಕೊಳ್ಳುವಂಥವರು ಕರ್ತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿರುವರು ಮತ್ತು ಅವರು ಆ ಮೂಲಕವಾಗಿ ಯೇಸುವಿನೊಡನೆ ಆತನ ಮಹಿಮಾ

ಸಿಂಹಾಸನದಲ್ಲಿ ಒಂದು ಪಾಲನ್ನು ಹೊಂದಲು ಯೋಗ್ಯರಾಗಿ ಅದಕ್ಕೆ ಸಿದ್ಧವಾಗುವರು; ಯಾಕೆಂದರೆ ಸ್ಪಷ್ಟವಾದ ಜ್ಞಾನ ಮತ್ತು ಅಲ್ಲಿ ಒದಗಿಸಲಾಗುವ ಸಹಾಯದ ಮೂಲಕ ದೈವಾನುಗ್ರಹ ಮತ್ತು ಆಶೀರ್ವಾದಗಳಿಗೆ ಮರಳಿ ಬರುವ ಮನುಕುಲದ ಸಾವಿರಾರು ಜನರಿಗೆ ಕರುಣೆತೋರಿಸುವ ಉದ್ದೇಶಕ್ಕಾಗಿಯೇ ಮೆಸ್ಸೀಯನ ಆ ಮಹಾ ರಾಜ್ಯವು ಸ್ಥಾಪಿತವಾಗುವದು.

## ಇದು ಆದಾಮನ ಪಾಪಕ್ಕಾಗಿ ಇರುವಂಥದಲ್ಲ.

ಈ ಸಾಮ್ಯವು ಆದಾಮನು ಮಾಡಿದ ಪಾಪಕ್ಕಾಗುವ ದೈವಿಕ ಕ್ಷಮೆಯನ್ನು ಉಲ್ಲೇಖಿಸುವದೆಂದು ನಾವು ಅರ್ಥಮಾಡಿಕೊಳ್ಳಲಾಗದು. ನಾವು ಕೇವಲ ಕುರುಣೆಯನ್ನು ಯಾಚಿಸಿದಲ್ಲಿ ಆದಾಮನ ಪಾಪವು ಕ್ಷಮಿಸಲ್ಪಡುವದಿಲ್ಲ. ಆದಾಮ ಮತ್ತು ಇಡೀ ಮನುಕುಲವು ಕರುಣೆಯನ್ನು ಹೊಂದುವದಕ್ಕೆ ಕರೆಯಲ್ಪಟ್ಟಿರ ಬಹುದಾದರೂ ಯೇಸುವಿನ ಹಾಗು ಅತನ ರಕ್ತದ ಮೇಲಿನ ನಂಬಿಕೆಯ ಮೂಲಕವಾಗಿ ದೇವರು ಮಾಡಿರುವ ಏರ್ಪಾಡಿನ ಹೊರತು ಯಾರೂ ಕರುಣೆಯನ್ನು ಹೊಂದಲಾರರು. ಇಲ್ಲವೇ ಯೇಸುವು ತನ್ನ ಯಜ್ಞಾರ್ಪಣೆಯನ್ನು ನೆರವೇರಿಸಿ ಉನ್ನತ ಸ್ಥಾನಕ್ಕೆ (ಪರಲೋಕಕ್ಕೆ) ಏರಿಹೋಗಿ ತನ್ನ ಯಜ್ಞಾರ್ಪಣೆಯ ಫಲದ ಮೂಲಕವಾಗಿ ತಂದೆಯ ಬಳಿಗೆ ಬರುವವರ ಪರವಾಗಿ ದೇವರ ಸಮಕ್ಷಮಕ್ಕೆ ಪ್ರವೇಶಿಸುವವರೆಗೂ ಈ ಪಾಪಕ್ಷಮೆಯನ್ನು ಅನುಗ್ರಹಿಸಲಾಗದು.

ಈ ಸಾಮ್ಯವು ಸಂಪೂರ್ಣವಾಗಿ (ಆದಾಮನ ನಂತರದ) ಪಾಪಗಳ ಅಂದರೆ ಕರ್ತನ ಪ್ರಾರ್ಥನೆಯಲ್ಲಿ ಉಲ್ಲೇಖಿಸಿರುವ (ನಮ್ಮ) ಪಾಪಗಳ ವಿಷಯವಾಗಿ ಸೂಚಿತವಾಗಿರುವದು, "ನಮಗೆ ತಪ್ಪುಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು." ಈ ಸಾಮ್ಯವು ಆ ಸೇವಕರ ವಿಷಯವಾಗಿ ಹೇಳಿರುವದೆಂಬ ಅಂಶದ ಮೂಲಕವಾಗಿ ಇದನ್ನು ತೋರಿಸಿಕೊಡಲಾಗಿರುವದು. ಲೋಕದವರು ಪಾಪಿಗಳಾಗಿರಲಾಗಿ ಅವರು ದೇವರ ಸೇವಕರಾಗಲಾರರು, ಆದರೆ ಅವರು ಅನ್ಯರೂ ಹೊರಗಿನವರೂ ಪರದೇಶಿಗಳೂ ಆಗಿರುವರು. ಕೇವಲ ಯಾರು ಯೇಸುವಿನ ಮೂಲಕವಾಗಿ ಅಂದರೆ ನಂಬಿಕೆ ಮತ್ತು ಪ್ರತಿಷ್ಠೆಯ ಮೂಲಕವಾಗಿ ತನ್ನ ಸಂಬಂಧಕ್ಕೆ ಮರಳಿಬರುವವರೋ ಅವರನ್ನು ಮಾತ್ರ ದೇವರು ತನ್ನ ಸೇವಕರೆಂದು ಗುರುತಿಸಿರುವನು. ಇವರು ದೇವರ ಸೇವಕರಾಗಿ ತಮ್ಮ ಜೊತೇಸೇವಕರ ಅಂದರೆ ಇತರ ಸಹೋದರರ ವಿಷಯವಾಗಿ ಕರುಣೆಯುಳ್ಳವರಾಗಬೇಕಿರುವದು.

ಯೇಸುವಿನ ಯಜ್ಞಫಲದ ಮೂಲಕ ದೇವರ ಮಕ್ಕಳಾಗಿ ಅಂಗೀಕರಿಸಲ್ಪಟ್ಟವನಾದ ನೂತನ ಸೃಷ್ಟಿಗಳಲ್ಲಿನ ಪ್ರತಿಯೊಬ್ಬನೂ ತನ್ನ ದೋಷಬಲಹೀನತೆಗಳಿಗೆ ಸ್ವತಃ ತಾನೇ ಹೊಣೆಯಾಗುವನು. ಆದರೆ ತಮ್ಮ ದೋಷಬಲಹೀನತೆಗಳನ್ನು ಒಪ್ಪಿಕೊಂಡು ಅದಕ್ಕಾಗಿ ಕ್ಷಮೆಯನ್ನು ಬೇಡಿಕೊಳ್ಳುವವರಿಗೆ ದೇವರ ಬಲಾಧಿಕಾರದ ಮೂಲಕವಾಗಿ ಕ್ರಿಸ್ತನ ಸಲುವಾಗಿ ಉಚಿತವಾಗಿ ಅವುಗಳನ್ನು ರದ್ದುಪಡಿಸಲಾಗುವದು. ಆದರೆ ದೇವರ ಮಕ್ಕಳಿಗಾಗುವ ಕ್ಷಮಾಪಣೆಯು ಅವರು ತಮ್ಮ ಸಹೋದರರ ವಿಷಯವಾಗಿ ಕ್ಷಮಾಭಾವವನ್ನು ಹೊಂದಿರುವುದರ ಮೇಲೆ ಆಧಾರ ಗೊಂಡಿರುವದು. ಯಾಕೆಂದರೆ "ನಿಮ್ಮಲ್ಲಿ ಪ್ರತಿಯೊಬ್ಬನು ತನ್ನ ಸಹೋದರನಿಗೆ ಮನಃಪೂರ್ವಕವಾಗಿ ಕ್ಷಮಿಸದೆಹೋದರೆ ಪರಲೋಕದಲ್ಲಿರುವ ನನ್ನ ತಂದೆಯೂ ನಿಮಗೆ ಹಾಗೆ ಮಾಡುವನು.." "ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು; ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು." ನೀವು ಕೊಡುವ ಅಳತೆಯಿಂದಲೇ ನಿಮಗೂ ಕೊಡುವರು. ದೇವರ ಏರ್ಪಾಟುಗಳು ಎಷ್ಟು ಆಶ್ಚರ್ಯಕರವಾದವುಗಳು! ದೇವರ ರಾಜ್ಯಕ್ಕಾಗಿ ನಾವು ಮಾಡಿಕೊಳ್ಳುವ ಸಿದ್ಧತೆಗಳಿಗೆ ಇವು ಎಷ್ಟು ಆಶೀರ್ವಾದಕರ ವಾದವುಗಳು, ನಮಗೆ ಎಷ್ಟು ಪ್ರಯೋಜನಕರವಾದವುಗಳು, ನಮಗೆ ಎಷ್ಟು ಸಹಾಯಕರವಾದವುಗಳು!

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಗಲಿಲಾಯ; ಸಮಾರ್ಯ | ಪರ್ಣಶಾಲೆಗಳ ಹಬ್ಬಕ್ಕಾಗಿ ಗಲಿಲಾಯವನ್ನು ಬಿಟ್ಟದ್ದು; ಸೇವೆ ಮಾಡುವ ಸಲುವಾಗಿ ಎಲ್ಲವನ್ನು ಬದಿಗೊತ್ತಿದುದು | 8:19–22 | –– | 9:51–62 | 7:2–10 |

## ಮತ್ತಾಯ 8:19–22

ಆಗ ಒಬ್ಬ ಶಾಸ್ತ್ರಿಯು ಹತ್ತರಕ್ಕೆ ಬಂದು ಆತನಿಗೆ–ಗುರುವೇ, ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ ಎಂದು ಹೇಳಲು ಯೇಸು ಅವನಿಗೆ–ನರಿಗಳಿಗೆ ಗುದ್ದುಗಳಿವೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ ಎಂದು ಹೇಳಿದನು. ಶಿಷ್ಯರಲ್ಲಿ ಬೇರೊಬ್ಬನು–ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿ ಬರುವಂತೆ ನನಗೆ ಅಪ್ಪಣೆಯಾಗಬೇಕು ಅನ್ನಲಾಗಿ ಯೇಸು ಅವನಿಗೆ–ನನ್ನ ಹಿಂದೆ ಬಾ, ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ ಎಂದು ಹೇಳಿದನು.

## ಲೂಕ 9:51-62

ಯೇಸು ತಾನು ಪರಲೋಕವನ್ನೇರುವ ದಿವಸಗಳು ತುಂಬುತ್ತಾ ಬರುವಾಗ ಯೆರೂಸಲೇಮಿಗೆ ಹೋಗುವದಕ್ಕೆ ಮನಸ್ಸನ್ನು ದೃಢಮಾಡಿಕೊಂಡು ತನ್ನ ಮುಂದಾಗಿ ದೂತರನ್ನು ಕಳುಹಿಸಿದನು. ಇವರು ಹೊರಟು ಆತನಿಗೆ ಬೇಕಾದುದನ್ನು ಸಿದ್ಧಮಾಡುವದಕ್ಕಾಗಿ ಸಮಾರ್ಯದವರ ಒಂದು ಹಳ್ಳಿಗೆ ಬಂದರು. ಆದರೆ ಆತನು ಯೆರೂಸಲೇಮಿಗೆ ಹೋಗುವವನಾದುದರಿಂದ ಆ ಸಮಾರ್ಯದವರು ಆತನನ್ನು ಸೇರಿಸಿಕೊಳ್ಳಲಿಲ್ಲ. ಆತನ ಶಿಷ್ಯರಾದ ಯಾಕೋಬ ಯೋಹಾನರು ಇದನ್ನು ಕಂಡು-ಸ್ವಾಮೀ, ಆಕಾಶದಿಂದ ಬೆಂಕಿಬಿದ್ದು ಇವರನ್ನು ನಾಶಮಾಡಲಿ ಎಂದು ನಾವು ಹೇಳುವದಕ್ಕೆ ನಿನಗೆ ಮನಸ್ಸುಂಟೋ ಎಂದು ಕೇಳಲು ಆತನು ತಿರಿಗಿಕೊಂಡು ಅವರನ್ನು ಗದರಿಸಿದನು. ಆಗ ಅವರೆಲ್ಲರು ಬೇರೆ ಹಳ್ಳಿಗೆ ಹೋದರು.

ಅವರು ದಾರಿಯಲ್ಲಿ ಹೋಗುತ್ತಿರುವಾಗ ಯಾವನೋ ಒಬ್ಬನು ಯೇಸುವಿಗೆ-ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ ಎಂದು ಹೇಳಲು ಆತನು ಅವನಿಗೆ-ನರಿಗಳಿಗೆ ಗುದ್ದುಗಳಿವೆ; ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟೂ ಸ್ಥಳವೂ ಇಲ್ಲ ಎಂದು ಹೇಳಿದನು. ಆತನು ಮತ್ತೊಬ್ಬನಿಗೆ-ನನ್ನನ್ನು ಹಿಂಬಾಲಿಸು ಎಂದು ಹೇಳಲು ಅವನು-ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿ ಬರುವಂತೆ ನನಗೆ ಅಪ್ಪಣೆಯಾಗಬೇಕು ಅಂದನು. ಆದರೆ ಆತನು ಅವನಿಗೆ-ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ, ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು ಎಂದು ಹೇಳಿದನು. ಇನ್ನೊಬ್ಬನು ಸಹ-ಸ್ವಾಮೀ, ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ಮೊದಲು ನನ್ನ ಮನೆಯವರಿಗೆ ಹೇಳಿ ಬರುವದಕ್ಕೆ ನನಗೆ ಅಪ್ಪಣೆಯಾಗಬೇಕು ಅಂದನು. ಯೇಸು ಅವನಿಗೆ-ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲವೆಂದು ಹೇಳಿದನು.

## ಯೋಹಾನ 7:2-10

ಪರ್ಣಶಾಲೆಗಳ ಹಬ್ಬವೆಂಬ ಯೆಹೂದ್ಯರದೊಂದು ಜಾತ್ರೆಯು ಸಮೀಪವಾದಾಗ ಆತನ ತಮ್ಮಂದಿರು ಆತನಿಗೆ-ನೀನು ಮಾಡುವ ಕಾರ್ಯಗಳನ್ನು ನಿನ್ನ ಶಿಷ್ಯರು ಸಹ ನೋಡುವಂತೆ ಇಲ್ಲಿಂದ ಹೊರಟು ಯೂದಾಯಕ್ಕೆ ಹೋಗು; ಪ್ರಸಿದ್ಧಿಗೆ ಬರಬೇಕೆಂದಿರುವ ಯಾವನಾದರೂ ತಾನು ಮಾಡುವದನ್ನು ಮರೆಯಲ್ಲಿ ಮಾಡುವದಿಲ್ಲವಲ್ಲಾ; ನೀನು ಇಂಥ ಕಾರ್ಯಗಳನ್ನು ಮಾಡುವವನಾದ್ದರಿಂದ ಲೋಕಕ್ಕೆ ತಿಳಿಯಪಡಿಸಿಕೋ ಎಂದು ಹೇಳಿದರು. ಯಾಕಂದರೆ ಆತನ ಅಣ್ಣತಮ್ಮಂದಿರು ಸಹ ಆತನನ್ನು ನಂಬದೆ ಇದ್ದರು. ಯೇಸು ಅವರಿಗೆ-ನನ್ನ ಸಮಯವು ಇನ್ನೂ ಬಂದಿಲ್ಲ; ನಿಮ್ಮ ಸಮಯವು ಯಾವಾಗಲೂ ಸಿದ್ಧವಾಗಿದೆ. ಲೋಕವು ನಿಮ್ಮನ್ನು ಹಗೆಮಾಡಲಾರದು; ಆದರೆ ನಾನು ಅದರ ಕ್ರಿಯೆಗಳು ಕೆಟ್ಟವುಗಳೆಂದು ಸಾಕ್ಷಿಹೇಳುವದರಿಂದ ನನ್ನನ್ನು ಹಗೆಮಾಡುತ್ತದೆ. ನೀವೇ ಜಾತ್ರೆಗೆ ಹೋಗಿರಿ; ನನ್ನ ಸಮಯವು ಇನ್ನೂ ಒದಗದೆ ಇರುವದರಿಂದ ನಾನು ಈ ಜಾತ್ರೆಗೆ ಈಗ ಹೋಗುವದಿಲ್ಲವೆಂದು ಹೇಳಿದನು. ಇದನ್ನು ಹೇಳಿ ಗಲಿಲಾಯದಲ್ಲಿಯೇ ನಿಂತನು. ಆದರೆ ಆತನ ಅಣ್ಣತಮ್ಮಂದಿರು ಜಾತ್ರೆಗೆ ಹೋದ ಮೇಲೆ ಆತನು ಸಹ ಹೋದನು; ಜನರಿಗೆ ಕಾಣುವಂತೆ ಹೋಗದೆ ಮರೆಯಾಗಿ ಹೋದನು.

# "ಆಕಾಶದಿಂದ ಬೆಂಕಿಬಿದ್ದು ಇವರನ್ನು ನಾಶಮಾಡಲಿ ಎಂದು ನಾವು ಹೇಳುವದಕ್ಕೆ ನಿನಗೆ ಮನಸ್ಸುಂಟೋ"

**ರೀಪ್ರಿಂಟ್ಸ್ ಪುಟ 4701**

## ಲೂಕ 9:51-56

**"ಯೇಸು ತಾನು ಪರಲೋಕವನ್ನೇರುವ ದಿವಸಗಳು ತುಂಬುತ್ತಾ ಬರುವಾಗ ಯೆರೂಸಲೇಮಿಗೆ ಹೋಗುವದಕ್ಕೆ ಮನಸ್ಸನ್ನು ದೃಢಮಾಡಿಕೊಂಡು ತನ್ನ ಮುಂದಾಗಿ ದೂತರನ್ನು ಕಳುಹಿಸಿದನು." – ಲೂಕ 9:51**

ಈ ವಾರದ ಪಾಠವು ನಮ್ಮ ಕರ್ತನು ತನ್ನ ಶಿಲುಬೆಯ ಮರಣಕ್ಕೆ ಸ್ವಲ್ಪ ಸಮಯದ ಹಿಂದೆ ಗಲಿಲಾಯದಿಂದ ಯೆರೂಸಲೇಮಿಗೆ ಪ್ರಯಾಣ ಮಾಡುವ ಸಂದರ್ಭದಲ್ಲಿ ನಡೆದ ಒಂದು ಘಟನೆಗೆ ಸಂಬಂಧಿಸಿದುದಾಗಿರುವದು. ತನ್ನ ಸಮಯವು ಬಂದಿರುವುದನ್ನು ಆತನು ತಿಳಿದುಕೊಂಡಿದ್ದನು; ತನ್ನ ಮೂರುವರೆ ವರುಷದ ಯಜ್ಞಾರ್ಪಿತವಾದ ಜೀವಿತವನ್ನು ಪೂರ್ಣಗೊಳ್ಳಬೇಕಿತ್ತು. ಆ ದಿವ್ಯ ಬೋಧಕನು ಪೂರ್ಣವಾಗಿ ಧೈರ್ಯದಿಂದಿದ್ದನು. ಅನುಕಂಪದಿಂದ ತನ್ನ ಸ್ಥಿತಿಯನ್ನು ಅರಿತಿದ್ದರೆಂಬ ಅರ್ಥದಲ್ಲಿ "ಜನಾಂಗದವರಲ್ಲಿ ಯಾರೂ ಆತನೊಡನೆ ಇರಲಿಲ್ಲ." ನಿಜ, ಆತನು ತನ್ನ ಕಾರ್ಯವು ಪೂರ್ಣಗೊಳ್ಳುವದನ್ನು ಮತ್ತು ಅದು ಸಮೀಪಿಸಿರುವುದೆಂಬುದರ ವಿಷಯವಾಗಿ ತನ್ನ ಹನ್ನೆರಡು ಮಂದಿಗೆ ತಿಳಿಸಿದ್ದನು ಆದರೆ ಅವರು ಮೋಶೆಯ ಧರ್ಮಶಾಸ್ತ್ರ ಮತ್ತು ಪ್ರವಾದಿಗಳ ಗ್ರಂಥಗಳಲ್ಲಿ ಆತನ ವಿಷಯವಾಗಿ ಬರೆದಿರುವದನ್ನು ನಂಬುವದರಲ್ಲಿ ಮಂದ ಹೃದಯರಾಗಿದ್ದರು. ಅವರ ಮನಸ್ಸುಗಳು ಸಹಜವಾಗಿ ಮೆಸ್ಸೀಯನ ವಿಷಯವಾಗಿ ಹೇಳಿದ ವೈಭವದ ಸಂಗತಿಗಳನ್ನು ಗ್ರಹಿಸಿಕೊಂಡಿತ್ತು. ಅವರು ಆತನ ಮಹಿಮೆಯುಳ್ಳ ರಾಜ್ಯದ ಮತ್ತು ತಾವು ಆ ಮಹಿಮೆಯಲ್ಲಿ ಆತನ ಜೊತೆಸೇರುವದನ್ನು ಆಲೋಚಿಸುವದರಲ್ಲಿ ಬಹುವಾಗಿ ಮಗ್ನರಾಗಿದ್ದು ಇದೇ ಸ್ಪಷ್ಟತೆಯಲ್ಲಿ ಮುಂತಿಳಿಸಿರುವ ಆತನ ಶ್ರಮಸಂಕಟ ಮತ್ತು ನಿಂದನಾಪಮಾನಗಳ ವಿಷಯವಾದ ಪ್ರವಾದನೆಗಳನ್ನು ಗಮನಿಸುವದರಲ್ಲಿ ವಿಫಲರಾಗಿದ್ದರು. ಹೀಗೆಯೇ ಅವರು ಒಡೆಯನ ಮರಣದ

ವಿಷಯವಾದ ಆತನ ಸ್ವಂತ ಮಾತುಗಳನ್ನು ಕಡೆಗಣಿಸಿದ್ದರು. ಆತನು ಕೆಲವು ಸಂಗತಿಗಳನ್ನು ಸಾಂಕೇತಿಕವಾಗಿಯೂ, ಉತ್ಪ್ರೇಕ್ಷಿತ ವಾಗಿಯೂ ಅದ ರೀತಿಯಲ್ಲಿ ಹೇಳುತ್ತಿರುವನೆಂದು ಅವರು ನೆನಸಿದ್ದರು. ಹಾಗು ಪೇತ್ರನು, "ಸ್ವಾಮೀ, ದೇವರು ನಿನ್ನನ್ನು ಕಾಯಲಿ; ನಿನಗೆ ಹೀಗೆ ಎಂದಿಗೂ ಆಗಬಾರದು" ಎಂದು ಹೇಳಿ ಅತನನ್ನು ಗದರಿಸುವ ಪ್ರಯತ್ನವನ್ನು ಸಹ ಮಾಡಿದ್ದನು.

## "ಸಮಾರ್ಯದವರು ಸೇರಿಸಿಕೊಳ್ಳದೆ ಹೋದದ್ದು"

ಯಾಕೋಬ ಮತ್ತು ಯೋಹಾನರು ತಂಡದವರಿಗೆ ಆಹಾರ ಸಾಮಾಗ್ರಿಗಳನ್ನು ಕೊಳ್ಳುವದಕ್ಕೆ ಸಮಾರ್ಯ ಪಟ್ಟಣಕ್ಕೆ ಭೇಟಿನೀಡಿದ್ದ ವಿಷಯವಾಗಿ ಬೇರೊಂದು ವಿವರಣೆಯು ತಿಳಿಸುತ್ತದೆ. ಸಮಾರ್ಯದವರು ಅವರ ಗುರುತುಹಿಡಿದು ಆ ದಿವ್ಯ ಬೋಧಕನು ಸಮಾರ್ಯದವರಿಗೆ ಮಾನ್ಯತೆನೀಡಿ ಅವರಲ್ಲಿರುವ ರೋಗಿಗಳನ್ನು ಸ್ವಸ್ಥಮಾಡುವನೋ ಅಥವಾ ಯೆಹೂದ್ಯರು ಸಾಮಾನ್ಯವಾಗಿ ತಮ್ಮನ್ನು ನಡೆಸಿಕೊಳ್ಳುವಂತೆ ಅಂದರೆ ಕರುಣೆ ಇಲ್ಲದವನಾಗಿ ನಡಕೊಳ್ಳುವನೋ ಎಂದು ವಿಚಾರಿಸಿದರು. ಅವರು ಎರಡನೆಯ ವಿಷಯವನ್ನು ನಂಬಿದ್ದರು. ಈ ದಿವ್ಯ ಬೋಧಕನು ಯೆಹೂದ್ಯರಿಗೆ ಮಾತ್ರ ಕಳುಹಿಸಲ್ಪಟ್ಟಿರುವನಾಗಿದ್ದು ಅವರಲ್ಲಿನ ಅಸ್ವಸ್ಥರನ್ನು ಗುಣಪಡಿಲು ಇಲ್ಲಿ ನಿಲ್ಲುವದಿಲ್ಲ ಯಾಕೆಂದರೆ "ಆತನು ತಪ್ಪಿಸಿಕೊಂಡಿರುವ ಕುರಿಗಳಂತಿರುವ ಇಸ್ರಾಯೇಲ್ಯರ ಮನೆತನದವರಿಗೇ ಹೊರತು ಮತ್ತಾರ ಬಳಿಗೂ ಕಳುಹಿಸಲ್ಪಟ್ಟವನಲ್ಲ" ಎಂದು ಅಪೋಸ್ತಲರು ಅವರಿಗೆ ಮುಚ್ಚುಮರೆಯಿಲ್ಲದೆ ಹೇಳಿದರು.

ಸಮಾರ್ಯದವರು ಪ್ರತಿರೋಧಿಸಿ ಕೋಪಗೊಂಡದ್ದು ಸಹಜವೇ. ಅವರು ಹೇಳಿದ್ದು ಸರಿಯೇ. ನೀವು ಯಾವ ಜನರಿಗೆ ಉಪದೇಶಿಸುತ್ತೀರೋ ಮತ್ತು ಯಾರನ್ನು ಗುಣಪಡಿಸುತ್ತಿರೋ ಅವರಿಂದಲೇ ರೊಟ್ಟಿಯನ್ನು ಕೊಂಡುಕೊಳ್ಳಿ.

ಭಕ್ತರಾದ ಯೋಹಾನ ಯಾಕೋಬರು ಈ ಬಗ್ಗೆ ಬಹು–ವಾಗಿ ಕುಪಿತರಾದರು. ಯೇಸುವು ದಿವ್ಯ ಬೋಧಕನಲ್ಲವೇ? ಆತನು ಮೆಸ್ಸೀಯನಲ್ಲವೇ? ಹೀಗಿರುವಲ್ಲಿ ಆತನ ದಯೋಪಕಾರ ವನ್ನು ಅಂಗೀಕರಿಸಿಕೊಳ್ಳದವರ ವಿಷಯವಾಗಿ ದೇವರ ಚಿತ್ತವನ್ನು ನಿರ್ಧರಿಸುವ ಹಕ್ಕು ಆತನು ಹೊಂದಿದ್ದನಲ್ಲವೇ? ಇವುಗಳಿಗೆ ಉತ್ತರವಾಗಿ ಅವರು ಯೇಸುವಿನ ಬಳಿಗೆ ಬಂದು ವಾಸ್ತವಾಂಶ ವನ್ನು ವಿವರಿಸಿ: "ಸ್ವಾಮೀ, ಆಕಾಶದಿಂದ ಬೆಂಕಿಬಿದ್ದು ಇವರನ್ನು ನಾಶವಾಡಲಿ ಎಂದು ನಾವು ಹೇಳುವದಕ್ಕೆ ನಿನಗೆ ಮನಸ್ಸುಂಟೋ?" ಎಂದು ಕೇಳಿದರು.

## "ನೀವೆಂಥಾ ಮನೋಭಾವವುಳ್ಳವರಾಗಿದ್ದೀರೆಂದು ನಿಮಗೆ ತಿಳಿಯದು"

ಒಡೆಯನ ಪ್ರತ್ಯುತ್ತರವನ್ನು ನಾವು ತೀರಾ ಕುತೂಹಲ ದಿಂದ ಆಲಿಸುವವರಾಗಿದ್ದೇವೆ. ನಾವು ದೇವರ ಕ್ರಮವಿಧಿಗಳನ್ನು ಒಂದು ಕಾಲದಲ್ಲಿ ವೀಕ್ಷಿಸಿದ್ದಂತೆ ಆ ದಿವ್ಯ ಬೋಧಕನು ಅಪೋಸ್ತಲರಿಗೆ ಹೀಗೆ ಹೇಳುವುದು ಸರಿಯೆಂದು ತೋಚುತ್ತಿತ್ತು– ಮನಸ್ಸಿಗೆ ತಂದುಕೊಳ್ಳದಿರಿ, ನನ್ನ ಪ್ರಿಯ ಶಿಷ್ಯರೇ, ಸ್ವಲ್ಪ ಕಾಲ ತಡೆಯಿರಿ, ಆ ಸಮಾರ್ಯದವರೆಲ್ಲರೂ ಸತ್ತುಹೋಗುವರು ಮತ್ತು ಪರಲೋಕದಲ್ಲಿರುವ ನಮ್ಮ ತಂದೆಯು ಅವರನ್ನು ನಿತ್ಯಯಾತನೆ ಪಡುವದಕ್ಕಾಗಿ ಸೈತಾನನಿಗೆ ಒಪ್ಪಿಸುವನು. ನಿತ್ಯಯಾತನೆಯನ್ನು ಹೋಲಿಸಿದಾಗ ಈ ಸಂದರ್ಭದಲ್ಲಿ ನೀವು ಪ್ರಸ್ತಾಪಿಸುವ ಕೆಲವು ನಿಮಿಷಗಳ ಕಾಲ ಅವರ ಪಟ್ಟಣವನ್ನು ಸುಡುವದು ಏನೂ ಅಲ್ಲ. ನಮ್ಮ ಪ್ರಿಯ ಶಿಷ್ಯರೇ, ನಿಮ್ಮ ಮನೋಭಾವವನ್ನು ಶ್ಲಾಘಿಸುವವ ನಾಗಿದ್ದೇನೆ, ಅದು ದೇವರಲ್ಲಿರುವಂಥದ್ದು; ನಿಮ್ಮ ವಶದಲ್ಲಿರುವವರೆಲ್ಲರನ್ನೂ ಸುಟ್ಟು ಬೇಯಿಸಲು ಬಯಸುವವ ರಾಗಿರುವಿರಿ, ಇದಕ್ಕಾಗಿ ನಾನು ನಿಮ್ಮನ್ನು ಪ್ರಸಂಶಿಸುತ್ತೇನೆ. ನಿಮ್ಮ ದೇವರನ್ನು ಹೀಗೆ ಅನುಸರಿಸುವದರಲ್ಲಿ ಮುಂದುವರೆದು ನಿಮ್ಮಂತೆ ಯೋಚಿಸದಿರುವ ನಿಮ್ಮ ಸಹ–ಜೀವಿಗಳಲ್ಲಿ ಸಾಧ್ಯವಿದ್ದವರೆಲ್ಲರನ್ನೂ ಯಾತನೆಪಡುವವರಾಗುವಂತೆ ಮಾಡಿ.

ಇದು ಆ ದಿವ್ಯ ಬೋಧಕನ ಉತ್ತರವಾಗಿತ್ತೇ? ಇಲ್ಲ, ದೇವರಿಗೆ ಸ್ತೋತ್ರ.! ಆತನ ಉಪದೇಶವು ಇದಕ್ಕೆ ತದ್ವಿರುದ್ಧವಾಗಿ ಅನುಕಂಪವೂ ಪ್ರೀತಿಪೂರ್ಣವೂ ಕರುಣೆಯುಳ್ಳದ್ದೂ ಆಗಿತ್ತು. ಆತನು ತಂದೆಯ ಮನೋಭಾವದಲ್ಲಿದ್ದು ಅದನ್ನು ಅರ್ಥಮಾಡಿ ಕೊಂಡು ಪರಿಪೂರ್ಣವಾಗಿ ಅದನ್ನು ಅನುಸರಿಸುವವನಾಗಿದ್ದನು. ಅವರ ವಿಚಾರಣೆಗೆ ಉತ್ತರವಾಗಿ ಯೇಸುವು ತಿರಿಗಿಕೊಂಡು ಅವರನ್ನು ಗದರಿಸಿ "ನೀವೆಂಥಾ ಆತ್ಮಕ್ಕೆ ಅಧೀನರಾದಿರೆಂದು ನಿಮಗೆ ತಿಳಿಯದು; ಮನಷ್ಯಕುಮಾರನು ಮನುಷ್ಯರ ಪ್ರಾಣಗಳನ್ನು ನಾಶಮಾಡುವದಕ್ಕೆ ಬಂದವನಲ್ಲ, ರಕ್ಷಿಸುವದಕ್ಕೆ ಬಂದವನು!" ಎಂದು ಹೇಳಿದನೆಂದು ನಾವು ಓದುತ್ತೇವೆ.

## "ರಕ್ಷಕ ಶ್ರೇಷ್ಠನು"

ಯೇಸುವಿನ ದಿನದಲ್ಲಿ ಪಾಲೆಸ್ತೀನಾದಲ್ಲಿ ಮಾತನಾಡುತ್ತಿದ್ದ ಭಾಷೆಯು ಆರಾಮ್ಯರ (ಸಿರಿಯ) ಭಾಷೆಯಾಗಿತ್ತು. ದಿವ್ಯ ಬೋಧಕನ ಬಿರುದುಗಳಲ್ಲಿ ರಕ್ಷಕನೆಂಬುದು ಒಂದು. ಮತ್ತು ಇದು ಆರಾಮ್ಯರ ಬಾಷೆಯಲ್ಲಿ "ಜೀವದಾಯಕನು" ಎಂಬುದನ್ನು ಸೂಚಿಸುತ್ತದೆ. ಯೇಸುವು ಬರುವದಕ್ಕೆ ಮೊದಲು ಇಡೀ ಲೋಕವೆಲ್ಲಾ ಖಂಡನೆಗೆ ಒಳಗಾಗಿತ್ತು. ಅವರಿಗೆ ಹೆಚ್ಚಾದ ಖಂಡನೆಯನ್ನು ಮಾಡುವದಕ್ಕೆ ಆತನು ಬರಲಿಲ್ಲ, ಆದರೆ ಅವರು ತನ್ನ ಮೂಲಕ ಜೀವವನ್ನು ಹೊಂದಬೇಕೆಂದು ಬಂದನು. – ಯೋಹಾನ 10:10; 3:17

ಜೀವ! ಅವರು ಜೀವಹೊಂದಿರಲಿಲ್ಲವೇ? ಇಲ್ಲ. ಮಾನವ ರೆಲ್ಲರ ಜೀವವು ತಂದೆಯಾದ ಆದಾಮನ ಅವಿಧೇಯತೆಯ ಮೂಲಕವಾಗಿ ಕಳೆದುಹೋಗಿತ್ತು. ಇದರ ಪರಿಣಾಮವಾಗಿ ಮಾನವರೆಲ್ಲರೂ ಸಾಯುತ್ತಲಿರುವರು. ಒಬ್ಬ ಜೀವದಾಯಕನು ಅಂದರೆ ಮರಣದಿಂದ (ನಿತ್ಯಯಾತನೆಯಿಂದಲ್ಲ) ರಕ್ಷಿಸುವವನ ಅಗತ್ಯತೆಯಿತ್ತು.

ರಕ್ಷಕನ ಮೊದಲನೇ ಕಾರ್ಯವು ಕಲ್ವಾರಿಯಲ್ಲಿ ಮಾಡಿದ ವಿಮೋಚನಾಕಾರ್ಯ. ಆತನ ಎರಡನೆಯ ಕಾರ್ಯವು ತನ್ನೊಡನೆ ಆ ರಾಜ್ಯದಲ್ಲಿ ಸಹಬಾಧ್ಯರಾಗಲು ತನ್ನ ಸಭೆಯನ್ನು

ಆದುಕೊಳ್ಳುವದು. ಆತನ ಮೂರನೆಯ ಕಾರ್ಯವು ಆದಾಮನು ಮತ್ತು ಅವನ ಸಂತತಿಯವರೆಲ್ಲರನ್ನು ಪಾಪಮರಣಗಳಿಂದ ರಕ್ಷಿಸುವುದು. ಅಂದರೆ ಅವರನ್ನು ತಂದೆಯಾದ ಆದಾಮನ ಅವಿಧೇಯತೆಯ ಮೂಲಕವಾಗಿ ಅತನ ಮಕ್ಕಳು ಪಾಪದಲ್ಲಿ ಹುಟ್ಟಿದವರಾಗಿ ಅನೀತಿಯಲ್ಲಿ ರೂಪುಗೊಂಡಿರುವದಲ್ಲದೆ ಅವರ ತಾಯಂದಿರು ಅವರನ್ನು ಪಾಪದಲ್ಲಿ ಹಡೆದ ಪರಿಣಾಮವಾಗಿ ಬಂದ ಮಾನಸಿಕ ನೈತಿಕ ಹಾಗು ಶಾರೀರಿಕವಾದ ಹೀನಸ್ಥಿತಿಯಿಂದ ರಕ್ಷಿಸುವದು.

ಸಭೆಯ ರಕ್ಷಣೆಯು ಒಂದು ಮಹಾ ಕಾರ್ಯ! ಕ್ರಿಸ್ತನ ಮದಲಗಿತ್ತಿಯಾಗುವ ಅದ್ಭುತವಾದ ಸೌಭಾಗ್ಯದ ವಿಷಯವಾಗಿ ನಾವು ಕೇಳಿದ್ದೇಯಾದರೆ, ನಮ್ಮ ಕಣ್ಣುಗಳು ಕಂಡಿದ್ದೆಯಾದರೆ, ನಮ್ಮ ಹೃದಯಗಳು ದೇವರ ಕೃಪೆಯನ್ನು ಅನುಭವಿಸಿದ್ದೇ – ಯಾದರೆ ನಾವು ಎಷ್ಟು ನಂಬಿಗಸ್ತರಾಗಿರಬೇಕು. ಆದರೂ ಕೇವಲ ಕೈ ಎಣಿಕೆಯಷ್ಟು ಆಯಲ್ಪಟ್ಟವರನ್ನು ರಕ್ಷಿಸುವುದೇ ಲೋಕವನ್ನು ಉಂಟುಮಾಡುವದರ ಹಾಗು ಲೋಕವನ್ನು ವಿಮೋಚಿಸುವದರ ದೇವರ ಉದ್ದೇಶವೆಂದು ನಾವು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಬದಲಾಗಿ ಆಯಲ್ಪಟ್ಟ ಈ "ಚಿಕ್ಕ ಹಿಂಡು" "ಆತನ ಸೃಷ್ಟಿಗಳಲ್ಲಿ ಪ್ರಥಮಫಲ" (ಯಾಕೋಬ 1:18; ಪ್ರಕಟನೆ 14:4) ಎಂದು ಹೇಳಲಾಗಿರುವದು. ನಂತರದ ಫಲಗಳು ಬಹು ಸಂಖ್ಯೆಯಲ್ಲಿರುವ ದೆಂಬುದನ್ನು ಇದು ಸೂಚಿಸುವದು. ದೇವರು ಯಾರನ್ನೂ ಆತನ ವೈಯುಕ್ತಿಕ ಚಿತ್ತಕ್ಕೆ ವಿರೋಧವಾಗಿ ಮರಣದಿಂದ ರಕ್ಷಿಸಿ ಜೀವಕ್ಕೆ ಸೇರಿಸುವ ಪ್ರಸ್ತಾವನೆಯನ್ನು ಮಾಡಿಲ್ಲವಾದರೂ ಆದಾಮನಲ್ಲಿ ಕಳೆದುಹೋಗಿ ಯೇಸುವಿನಿಂದ ವಿಮೋಚಿಸಲ್ಪಟ್ಟ ಪ್ರತಿಯೊಬ್ಬ ಸೃಷ್ಟಿಯೂ ರಕ್ಷಿಸಲ್ಪಡಲು ಸತ್ಯದ ಜ್ಞಾನವನ್ನು ಪಡೆಯಬೇಕೆಂಬು ದನ್ನು ಪ್ರಸ್ತಾಪಿಸಿರುವನು. ಕೇವಲ ಮನಃಪೂರ್ವಕವಾಗಿ ತಿದ್ದುಪಾಟುಹೊಂದಲಾಗದವರು ಮಾತ್ರ ನಷ್ಟಹೊಂದಬೇಕೆಂಬು ದನ್ನು ಆತನು ಪ್ರಸ್ತಾಪಿಸಿರುವನು; ಅವರಿಗಾಗುವ ನಷ್ಟವು ಜೀವದ ನಷ್ಟ, ಅಪೋಸ್ತಲನು ಪ್ರಕಟಿಸರುವಂತೆ, ಇದು "ನಿತ್ಯ ನಾಶನ."

*****

# "ಆತನ ಸೇವಕರು ಆತನಿಗೆ ಸೇವೆಮಾಡುವರು"

**ರೀಪ್ರಿಂಟ್ಸ್ ಪುಟ 5370**

## ಲೂಕ 8:1–3; 9:57; 10:38–42

**"ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ ಅದನ್ನು ನನಗೂ ಮಾಡಿದ ಹಾಗಾಯಿತು."**
**ಮತ್ತಾಯ 25:40 (ರಿವೈಸ್ಡ್ ವರ್ಶನ್)**

ದಾಖಲೆಗಳು ಹೇಳುವಂತೆ, ಈ ಅಧ್ಯಯನವನ್ನು ಆರಂಭಿಸುವ ವಚನವು ನಮಗೆ ಯೇಸುವು ಮಾಡಿದ ಉಪದೇಶ ಗಳೆಲ್ಲವುಗಳಿಗೆ ಅರ್ಥಮಾಡಿಸುವ ಸಾಧನವಾಗಿರುವದು. ಆತನ ಒಂದು ಸಂದೇಶವು ದೇವರ ರಾಜ್ಯದ ವಿಷಯವಾದ ಶುಭ ವಾರ್ತೆ. ಅದು ಈಗಲೂ ಶುಭವಾರ್ತೆಯಾಗಿರುವದು ಮತ್ತು ದೇವ ಜನರಲ್ಲಿ ಯಾರು ದೇವರ ರಾಜ್ಯವು ಸಭೆಯ ಮತ್ತು ಲೋಕದ ನಿರೀಕ್ಷೆಗೆ ಮೂಲವೂ ಮತ್ತು ಅದರ ಸಾರಾಂಶವೂ ಆಗಿರುವದೆಂಬುದನ್ನು ಕಲಿತುಕೊಂಡಿಲ್ಲವೋ ಅವನು ಸತ್ಯವೇದವನ್ನು ಪ್ರಯೋಜನಕಾರಿಯಾಗುವ ಹಾಗೆ ಓದಿದವನಾಗಿ ಅದನ್ನು ನಂಬಿದವನಲ್ಲ. ಯೇಹೂದ್ಯರು ಒಂದು ಜನಾಂಗವಾಗಿ ದೇವರ ರಾಜ್ಯಕ್ಕೆ ಸಿದ್ಧವಾಗದೆ ಆ ರಾಜ್ಯದಲ್ಲಿ ಮೆಸ್ಸೀಯನೊಡನೆ ಸಹಕಾರಿಯಾಗಲು ನಿರಾಕರಿಸಲ್ಪಟ್ಟರು; ಆದರೆ ಎಲ್ಲರೂ ನಿರಾಕರಿಸಲ್ಪಡಲಿಲ್ಲ; ಆದುದರಿಂದ ನಾವು ಓದುವದು, ಯಾರಾರು ಯೇಸುವನ್ನು ಅಂಗೀಕರಿಸಿದರೋ ಅವರಿಗೆ ಆತನು ಪಂಚಾಶತ್ತಮ ದಿನದಂದು ಮೊದಲು ಬಂದ ಪವಿತ್ರಾತ್ಮನಿಂದ ಹುಟ್ಟುವದರ ಹಾಗು ಅಭಿಷೇಕಿಸಲ್ಪಡುವುದರ ಮೂಲಕವಾಗಿ ದೇವರ ಮಕ್ಕಳಾಗುವ ಅಧಿಕಾರವನ್ನು ಕೊಟ್ಟನು.

### ಖಂಡಿತವಾಗಿಯೂ ಇದು ಶುಭವಾರ್ತೆಯೇ

ಆ ದೇವರ ಮಕ್ಕಳು ನಂಬಿಗಸ್ತರಾಗಿದ್ದಲ್ಲಿ ಯೇಸುವಿ – ನೊಂದಿಗೆ ಕಡೆಯಲ್ಲಿ ಆ ಪರಲೋಕ ರಾಜ್ಯದಲ್ಲಿ ದೇವರಿಗೆ ಬಾಧ್ಯರಾಗಿ ತಮ್ಮ ಒಡೆಯನಾದ ಯೇಸುವಿನೊಂದಿಗೆ ಸಹಬಾಧ್ಯರಾಗುವರು. ಅವರಿಗಾಗುವ ಗೌರವ ಆಶೀರ್ವಾದವು ಶ್ರೇಷ್ಠವಾದವುಗಳಾಗಿರುವವು; ಏಕೆಂದರೆ ಅವರು ತಮ್ಮ ಒಡೆಯನಂತಾಗಿ ಅತನಿರುವಂತೆಯೇ ಆತನನ್ನು ನೋಡುವವ ರಾಗಿ ಆತನ ಪ್ರಭಾವದಲ್ಲಿ ಪಾಲನ್ನು ಹೊಂದುವರು. ಆದರೆ ಇದೇ ಎಲ್ಲವೂ ಆಗಿರುವದಿಲ್ಲ. ಅವರು ಈ ಪ್ರೀತಿಯ ಮನೋಭಾವ ವನ್ನು ಬೆಳಸಿಕೊಂಡವರಾದರೆ ಆ ಮೂಲಕವಾಗಿ ಅವರು ಮಾನವ ಕುಲವನ್ನು ಆಶೀರ್ವದಿಸುವ ಆತನ ಮಹಾ ಕಾರ್ಯದಲ್ಲಿ ಅಂದರೆ ಶಾಪವನ್ನು ಹೋಗಲಾಡಿಸಿ ಮಾನವರನ್ನು ಪಾಪ ಮತ್ತು ಮರಣದ ಸ್ಥಿತಿಯಿಂದ ಮೇಲೆತ್ತುವ ಕಾರ್ಯದಲ್ಲಿ ಆತನಿಗೆ ಸಹಕಾರಿಗಳಾಗುವರು.

ಈ ಪಾಠದಲ್ಲಿ ಹೇಳಿರುವಂತೆ, ಇದು ಖಂಡಿತವಾಗಿಯೂ ಶುಭವಾರ್ತೆ. ಮತ್ತು ಇದೇ ಶುಭವಾರ್ತೆಯು ಒಡೆಯನ ಜನನವನ್ನು ಸಾರಿ ಹೇಳಿದ ದೇವದೂತರೂ ಹೇಳಿದ್ದಾಗಿತ್ತು; ಅವರು ಹೇಳಿದ್ದು: "ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ." ಈವರೆಗೂ ಇದು ಕೇವಲ ದೇವರ ಸೇವಕರು ಮತ್ತು ಸೇವಕಿಯರಾದ ಸಭೆಗೆ ಶುಭವಾರ್ತೆಯಾಗಿರುವದು. ಆದರೆ ಎಲ್ಲರ ಕಿವಿಗಳು ಕೇಳುವಂತಾಗಿ ಎಲ್ಲರ ಕಣ್ಣುಗಳು ತೆರೆಯಲ್ಪಟ್ಟು ಅವರು ಮೆಸ್ಸೀಯನ ರಾಜ್ಯದ ಮಹಿಮೆಯನ್ನು ಕಾಣುವಾಗ ಇದು ಎಲ್ಲರಿಗೂ ಶುಭವಾರ್ತೆಯಾಗುವದು.

ಯೇಸುವು ಹೀಗೆ ದೇವರ ರಾಜ್ಯದ ವಿಷಯವಾಗಿ ಸಾರುವಾಗ, ಆತನು ತನ್ನ ಮಾರ್ಗೋಪಾಯುಕ್ಕಾಗಿ

ಬಿಕ್ಷೆಬೇಡುತ್ತಿರಲಿಲ್ಲ. ಆತನು ಎಂದಾದರೂ ಅಥವಾ ಯಾವ ವಿಧದಲ್ಲಿಯಾದರೂ ಹಣವನ್ನು ಸಂಗ್ರಹಿಸಿರುವ ಸೂಚನೆಗಳು ನಮಗೆ ತಿಳಿದುಬಂದಿರು ವದಿಲ್ಲ. ಇದರಂತೆಯೇ ಕ್ರಿಸ್ತನ ಹಿಂಬಾಲಕರು ಹಣಕ್ಕಾಗಿ ಯಾವ ಬೇಡಿಕೆಯನ್ನು ಮಾಡಬಾರದೆಂದು ಆದರೆ ಅವರು ತಮ್ಮ ಸ್ವಂತ ಸ್ವತ್ತನ್ನು ಹಾಗು ಅವರಿಗೆ ಸ್ವಯಂ ಪ್ರೇರಣೆಯಿಂದ ನೀಡಿದ ಇತರ ಹಣವನ್ನು ಬಳಸಬೇಕೆಂಬ ಸಲಹೆಯು ಇಲ್ಲಿರುವದೆಂದು ಅನೇಕರು ನೆನಸುವರು. ಆದರೆ ಇದನ್ನು ಪ್ರತಿಯೊಬ್ಬನು ಸ್ವತಃ ತೀರ್ಮಾನಿಸಿಕೊಳ್ಳಬೇಕಿರುವದು.

ಗುಣಮಾಡಲ್ಪಟ್ಟವರಲ್ಲಿ ಮಗ್ದಲದ ಮರಿಯಳು ಒಬ್ಬಳಾಗಿದ್ದಳು. ಕರ್ತನು ಆಕೆಯಿಂದ ಏಳು ದೆವ್ವಗಳನ್ನು ಬಿಡಿಸಿದ್ದನು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ಈ ಬಡ ಹೆಂಗಸು ಮಾನಸಿಕವಾದ ಅಸ್ವಸ್ಥತೆಯವರ ಆಶ್ರಮದಲ್ಲಿರುವವರ ಸ್ಥಿತಿಯಲ್ಲಿದ್ದಳು. ಆಕೆಗಿದ್ದ ತೊಂದರೆಯು ದೇಹದ ಅಂಗಗಳಿಗೆ ಸಂಬಂಧಿಸಿದಂಥದ್ದಾಗಿರಲಿಲ್ಲ, ಅದರೆ ಅದು ಏಳು (ಅವಿಧೇಯರಾಗಿ) ಬಿದ್ದುಹೋದ ದೇವದೂತರು ಆಕೆಯನ್ನು ವಶಮಾಡಿಕೊಂಡು ಪೀಡಿಸುತಿದ್ದ ಕಾರಣದಿಂದಾಗಿತ್ತು. ಸತ್ಯವೇದ ಸಂದೇಶವನ್ನು ನಂಬುವವನು (ಪೂರ್ವದಲ್ಲಿ ಅವಿಧೇಯರಾಗಿ) ಬಿದ್ದುಹೋದ ದೇವದೂತರಿರುವರೆಂದು ನಂಬಬೇಕು. ಈ ಆತ್ಮಿಕ ಜೀವಿಗಳು ಮಾನವರನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಾಗುವಷ್ಟು ಹಾನಿಕರವಾದ ಪ್ರಭಾವವನ್ನು ಹೊಂದಿದವುಗಳಾಗಿದ್ದು, ಅವುಗಳನ್ನು ಮನಃಪೂರ್ವಕವಾಗಿ ಪ್ರತಿರೋಧಿಸಬೇಕು. ಮರಿಯಳು ಒಬ್ಬ ಶ್ರೀಮಂತ ಮಹಿಳೆಯಾಗಿದ್ದಳೆನ್ನುವದು ಸ್ಪಷ್ಟ. ದೆವ್ವಗಳ ಅಧಿಕಾರದಿಂದ ಬಿಡುಗಡೆಹೊಂದಿದವಳಾಗಿ ಆಕೆಯು ಯೇಸುವಿಗೆ ಬಹು ಕೃತಜ್ಞತೆಯುಳ್ಳವಳಾಗಿ ಆತನಿಗೆ ಅತ್ಯುತ್ತಮ ಸೇವೆಮಾಡಲು ಪ್ರತಿಯೊಂದು ಸಂದರ್ಭದಲ್ಲಿಯೂ ತನಗೆ ಸಾಧ್ಯವಾದುದೆಲ್ಲವನ್ನೂ ಮಾಡುತ್ತಿದ್ದಳು. ಇತರ ಕುಲೀನ ಸ್ತ್ರೀಯರೂ ಕರ್ತನಿಗೆ ಕೊಟ್ಟು ಪೋಷಿಸುತ್ತಿದ್ದರೆಂದು ಸಹ

## "ನನ್ನ ತಂದೆಯ ಉತ್ತರಕ್ರಿಯೆಯನ್ನು ಮಾಡಿಬರಲು ನನಗೆ ಅಪ್ಪಣೆಯಾಗಲಿ"

ಬಹುವಾಗಿ ಆತ್ಮವರಗಳನ್ನು ಹೊಂದಿರುವಾತನು ಹಾಗು ಬಹುವಾಗಿ ಅಗತ್ಯತೆಗಳ ಸರಬರಾಜನ್ನು ಪಡೆದಿರುವಾತನು ಧನವಂತನಾಗಿರಬೇಕೆಂಬ ಸ್ಪಷ್ಟವಾದ ಅಭಿಪ್ರಾಯದಿಂದ ಕೆಲವರು ಯೇಸುವಿನ ಬಳಿಗೆ ಆಕರ್ಷಿತರಾಗುತ್ತಿದ್ದರು. ಇಂಥವರಲ್ಲಿ ಒಬ್ಬನು ಯೇಸುವಿಗೆ ಹೇಳಿದ್ದು, "ನೀನು ಎಲ್ಲಿಗೆ ಹೋದರೂ ನಾನು ನಿನ್ನ ಹಿಂದೆ ಬರುತ್ತೇನೆ." ಆದರೆ ಯೇಸುವು ತನಗೆ ಅನೇಕ ಮನೆಗಳಲ್ಲಿ ಸ್ವಾಗತವಿದ್ದಾಗ್ಯೂ ತನಗಾಗಿ ಯಾವ ಸ್ವತ್ತೂ ಇಲ್ಲ, ತನಗೆ ಯಾವ ಮನೆಯೂ ಸ್ವಂತದ್ದಿಲ್ಲವೆಂದು ಆತನಿಗೆ ತಿಳಿಸಿದಾಗ ಸ್ಪಷ್ಟವಾಗಿ ಆತನ ಉತ್ಸಾಹವು ತಣ್ಣಗಾಯಿತು. ನರಿಗಳಿಗೆ ತಮ್ಮದೇ ಆದ ಗುದ್ದುಗಳಿವೆ ಹಕ್ಕಿಗಳಿಗೆ ತಮ್ಮದೇ ಆದ ಗೂಡುಗಳಿವೆ ಆದರೆ ಮನುಷ್ಯಕುಮಾರನಿಗೆ ತನ್ನ ಸ್ವಂತದ್ದೆಂದು ಹೇಳಲು ಯಾವ ಮನೆಯೂ ಇಲ್ಲ. ಇಂಥಾ ಸನ್ನಿವೇಶಗಳಲ್ಲಿ ಯಾರಿಲ್ಲದಿದ್ದರೂ ಕೇವಲ ಬಹು ಪ್ರಾಮಾಣಿಕರು ಮಾತ್ರ ಒಬ್ಬ ನಾಯಕನನ್ನು ಹಿಂಬಾಲಿಸಲು ಆಕರ್ಷಿಸಲ್ಪಡುವದು ಸಂಭವನೀಯ. ಧನವು ಹಲವರನ್ನು ಆಕರ್ಷಿಸುವದು, ಬಡತನವೋ ಕೆಲವರನ್ನು ಮಾತ್ರ.

ಮತ್ತೊಬ್ಬನು ಯೇಸುವಿಗೆ ಸಾರಾಂಶವಾಗಿ ಹೇಳಿದ್ದು, ಸ್ವಾಮೀ ನೀನು ನನ್ನನ್ನು ಶಿಷ್ಯರಲ್ಲಿ ಒಬ್ಬನಂತೆ ಎಣಿಸಬಹುದು; ಆದರೆ ನನಗೆ ಒಬ್ಬ ತಂದೆ ಇದ್ದಾನೆ, ಆತನು ಸಾಯುವವರೆಗೂ ನಾನು ಆತನೊಡನೆ ಇರಬೇಕೆಂದು ನನಗೆ ಅನ್ನಿಸುತ್ತದೆ. ಯೇಸುವಿನ ಉತ್ತರವು ನಾವು ಪರಲೋಕದಲ್ಲಿರುವ ತಂದೆಯ ಕಾರ್ಯೋದ್ದೇಶಗಳಿಗೆ ನಾವು ಸಲ್ಲಿಸುವ ಪ್ರತಿಯೊಂದು ಸೇವೆಗೆ ಆತನು ನೀಡುವ ಮುಖ್ಯತ್ವವನ್ನು ನಮಗೆ ತೋರಿಸಿಕೊಡುವದು. ಆತನು (ಯೆಸುವು) ಅವನಿಗೆ ಹೇಳಿದ್ದು, "ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ, ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು."

## ಇದು ಎಚ್ಚೆತ್ತುಕೊಳ್ಳುವ ಸಮಯವಲ್ಲವೇ?

ದೇವರ ದೃಷ್ಟಿಯಲ್ಲಿ ಈಗಾಗಲೇ ಲೋಕವೆಲ್ಲಾ ಸತ್ತುಹೋಗಿರುವದು. ಆದಾಮನ ಮೇಲಿರುವ ಮರಣ ದಂಡನೆಯು ಆತನ ಮಕ್ಕಳನ್ನೆಲ್ಲಾ ಒಳಗೊಂಡಿರುವದು. ಈಗಿನ ಕಾಲದಲ್ಲಿ ಯಾವದಾದರೂ ಬಗೆಯ ಜೀವವನ್ನು ಪಡೆದಿರುವರೆಂದು ಸತ್ಯವೇದವು ಗುರುತಿಸಿರುವದು ಯಾರನ್ನೆಂದರೆ ಕೇವಲ ಜೀವದಾಯಕನಾದ ಯೇಸುವಿಗೆ ಸಂಬಂಧಿಸಿದವರನ್ನು ಮಾತ್ರ. ಇಂಥವರೆಲ್ಲರೂ ಜೀವವೆಂಬುದನ್ನು ಇತರರಿಗಿಂತಲೂ ಬೇರೆ ಒಂದು ದೃಷ್ಟಿಯಿಂದ ನೋಡಬೇಕೆಂದು ಒಡೆಯನು ತಿಳಿಸಿರುತ್ತಾನೆ. ಲೌಕೀಕ ಸಂಗತಿಗಳನ್ನು ಪಡಕೊಳ್ಳಲು ಸಾಧ್ಯವಿರುವವರು ಈ ಲೋಕದಲ್ಲಿ ಹೇರಳವಾಗಿರುವರು; ದೇವರ ರಾಜ್ಯದ ವಿಷಯವಾಗಿ ಸಾರಿ ಹೇಳಿ ಆ ರಾಜ್ಯಕ್ಕೆ ಸೇರುವ ವರ್ಗದವರನ್ನು ಕೂಡಿಸುವ ಮಹತ್ತಾದ ಹಾಗು ಬಹು ಮುಖ್ಯವಾದ ಕಾರ್ಯವನ್ನು ಮಾಡುವವರು ಸ್ವಲ್ಪವೇ.

ಇದು ಲೋಕದಲ್ಲಿನ ಅತಿ ಮುಖ್ಯವಾದ ಕಾರ್ಯ, ಏಕೆಂದರೆ ಇದು ದೇವರ ಕಾರ್ಯ. ಇದರಲ್ಲಿ ನಿರತರಾಗಿರುವರು ದೇವರ ಜೊತೆಗೆಲಸದವರು. ಮತ್ತೊಮ್ಮೆ ಇದನ್ನು ಗಮನಿಸಲಿರುವದೇನಂದರೆ, ಈ ರೀತಿಯಲ್ಲಿ ಸಾರುವದಕ್ಕೆ ಮತ್ತು ಈ ವಿಧವಾದ ಯಜ್ಞಾರ್ಪಣೆಗೆ ಯೋಗ್ಯವಾದುದು ದೇವರ ರಾಜ್ಯದ ವಾರ್ತೆಯೇ. ಅಯ್ಯೋ, ನಂತರದ ಕಾಲಗಳಲ್ಲಿ ಈ ಸಾರುವಿಕೆಯು ಈ ವಿಧದಲ್ಲಿ ಬಹು ಅಲ್ಪವಾಗಿ ನಡೆಸಲಾಗುತ್ತಿರುವದೆಂಬದು ಬಹು ವಿಚಿತ್ರ! ಇನ್ನೊಂದು ರೀತಿಯಲ್ಲಿ ಹೇಳುವದಾದರೆ, ಯೇಸುವು ಮತ್ತು ಆತನ ಶಿಷ್ಯರು ನೀಡಿದ ಸುವಾರ್ತಾ ಸಂದೇಶವು ಇಲ್ಲದೆ ಹೋಗಿ ಅದು ಮರೆತದ್ದಾಗಿಯೂ ನಿರಾಕರಿಸಲ್ಪಟ್ಟದ್ದಾಗಿಯೂ ಇರುವದು. ಒಡೆಯನು ಮತ್ತು ಆತನಿಂದ ನೇಮಕವಾದವರು ಆತನ ಮೊದಲನೇ ಬರೋಣದಲ್ಲಿ ಸಾರಿದಂಥ ಅದೇ ಸಂದೇಶವನ್ನು ಸಾರುವ ಮಹಾ ಸೌಭಾಗ್ಯವನ್ನು ಹೊಂದಿಕೊಳ್ಳಲು ಎಚ್ಚೆತ್ತುಕೊಳ್ಳುವದಕ್ಕೆ ಸತ್ಯವೇದ ವಿಧ್ಯಾರ್ಥಿಗಳೆಲ್ಲರಿಗೆ ಇದು ಸುಸಮಯವಲ್ಲವೇ?

## ಕಲಿಯಲಿರುವ ಪಾಠ

ಬೇರೊಬ್ಬನು ಯೇಸುವಿನ ಬಳಿಗೆ ಬಂದು ಹೇಳಿದ್ದು, ನಿನ್ನನ್ನು ಹಿಂಬಾಲಿಸುತ್ತೇನೆ; ಆದರೆ ಮೊದಲು ಮನೆಯವರಿಗೆ ಹೇಳಿ ಬರುವದಕ್ಕೆ ಅಪ್ಪಣೆಯಾಗಬೇಕು. ನಾನು ಸ್ವಲ್ಪ ಸಮಯ ಅವರೊಂದಿಗೆ ಕಳೆಯುವೆನು; ಹಾಗು ಹೆಚ್ಚು ಸಮಯ ತೆಗೆದುಕೊಳ್ಳದೆ ನಾನು ನಿನ್ನೊಡನೆ ಕೆಲಸದಲ್ಲಿರುವೆನು. ಯೇಸುವು ಉತ್ತರವಾಗಿ ಹೀಗೆ ಸಲಹೆಮಾಡಿದ್ದರಲ್ಲಿ ಅತನಲ್ಲಿ ಹೃದಯವಂತಿಕೆಯು ಇರಲಿಲ್ಲವೆಂದಲ್ಲ; "ಯಾವನಾದರೂ ನೇಗಿಲಿನ ಮೇಲೆ ತನ್ನ ಕೈಯನ್ನು ಹಾಕಿ ಹಿಂದಕ್ಕೆ ನೋಡಿದರೆ ಅವನು ದೇವರ ರಾಜ್ಯಕ್ಕೆ ತಕ್ಕವನಲ್ಲ..." ಹೀಗಿರುವಲ್ಲಿ, ಮನಃಶೋಧಿಸುವಂತ ಈ ಮಾತಿನಾನುಸಾರ, ಈಗಿರುವ ಕರ್ತನ ಪ್ರತಿಷ್ಠಿತ ಜನರಲ್ಲಿಯೂ ಸಹ ದೇವರ ರಾಜ್ಯಕ್ಕೆ ಯಾರು ಅರ್ಹರಾಗಿರುವರು?


ನಾವು ಇತರರ ವಿಷಯವಾಗಿ ನ್ಯಾಯತೀರ್ಪು ಮಾಡುವ ಹಾಗಿಲ್ಲ, ಆದರೆ ಪ್ರತಿಯೊಬ್ಬನು ತನ್ನ ಬಗ್ಗೆ ವಿಚಾರ ಮಾಡಿಕೊಳ್ಳಬೇಕು. ಮತ್ತು ಹೀಗಿದ್ದರೂ, ಒಂದು ರೀತಿಯಲ್ಲಿ ಸಾಮಾನ್ಯವಾಗಿ ಹೇಳುವದಾದರೆ, ನಮ್ಮಲ್ಲಿ ಅನೇಕರು ತಮ್ಮ ಹಿಂದಿನ ಸಂಗತಿಗಳನ್ನು ತಿರುಗಿ ನೋಡಿದವರಾಗಿ ಜೀವನದ ಸಾಮಾಜಿಕ ಸೌಕರ್ಯಗಳಿಗಾಗಿ ವಿಶೇಷವಾದ ಏರ್ಪಾಡುಗಳನ್ನು ಮಾಡುವದು ಮಾತ್ರವಲ್ಲದೆ, ಇನ್ನೂ ಅಧಿಕವಾಗಿ ಲೋಕದ ಹಲವಾರು ಭೋಗವಸ್ತುಗಳು ಉಲ್ಲಾಸಗಳು ಮತ್ತು ನಿರರ್ಥಕವಾದ ವಿಷಯಗಳಿಗೆ ಆತುರಪಡುವ ಉದ್ದಟತನ ತೋರುತ್ತಿರುವೆವಲ್ಲವೇ? ಈ ಪ್ರಶ್ನೆಯು ಒಂದು ಆತ್ಮಪರೀಕ್ಷಾರ್ಥವಾದದ್ದು. ನಮ್ಮಲ್ಲಿ ಎಷ್ಟು ಮಂದಿಯನ್ನು ದೇವರ ರಾಜ್ಯಕ್ಕೆ ಯೋಗ್ಯರೆಂದು ಅಂದರೆ ಮೆಸ್ಸಿಯನ ಮಹಿಮೆಯುಳ್ಳ ಸಾಮ್ರಾಜ್ಯದಲ್ಲಿ ಆತನೊಡನೆ ಒಂದು ಸ್ಥಾನ ಪಡೆಯಲು ಯೋಗ್ಯರೆಂದು ಕರ್ತನು ಪರಿಗಣಿಸುವನು? ಆ ರಾಜ್ಯವು ಸಮೀಪಿಸಿದ್ದು, ಅದು ಬಾಗಿಲಿನ ಹತ್ತಿರವಿದೆ ಎಂದು ನಾವು ವಿಶ್ವಾಸಿರುವೆವು. ಇಲ್ಲಿ ಒಂದು ಸಿದ್ದಾಂತವು ಅಡಕವಾಗಿರುವ ದೆಂದು ತೋರುವುದು. ಯಾರು ದೇವರ ರಾಜ್ಯದ ವಿಷಯದಲ್ಲಿ ಆಸಕ್ತರಾಗಿ ಅದರಲ್ಲಿ ತಲ್ಲೀನರಾಗದೆ, ಇತರರಿಗೆ ಅದರಿಂದಾಗುವ ಆಶೀರ್ವಾದವನ್ನು ಬಯಸದೆ ಮತ್ತು ಅವರಿಗೆ ಆಶೀರ್ವಾದವನ್ನು ದಯಪಾಲಿಸುವ ಕಾರ್ಯದಲ್ಲಿ ತಾವು ಪಾಲುಗಾರರಾಗುವದನ್ನು ಬಯಸದೆ ಇರುವರೋ ಅವರು ಪುನರುತ್ಥಾನದಲ್ಲಿ ಮಾರ್ಪಾಟು ಹೊಂದಿ ಮಾನವಕುಲದವರಿಗೆ ದೇವರು ರೂಪಿಸಿರುವ ಕೆಲಸವನ್ನು ನಿರ್ವಹಿಸಲು ಅರ್ಹರಾಗುವ ಸಂಭವವಿರಲಾರದು.

ಮಾರ್ಥ ಮತ್ತು ಮರಿಯಳ ವೃತ್ತಾಂತವು ಪಾಠವನ್ನು ಪೂರ್ಣಗೊಳಿಸುತ್ತದೆ. ಇಬ್ಬರೂ ರಕ್ಷಕನನ್ನು ಪ್ರೀತಿಸಿದ್ದರು, ಆದರೆ ತಮ್ಮ ಪ್ರೀತಿಯನ್ನು ಬೇರೆಬೇರೆ ವಿಧದಲ್ಲಿ ತೋರಿಸಿದ್ದರು. ಯೇಸುವು ಮಾರ್ಥಳ ಹಾಗು ತನ್ನ ಸೌಕರ್ಯಕ್ಕಾಗಿ ಆಕೆಯು ಅಡಿಗೆಯ ವಿಷಯವಾಗಿ ಮಾಡುತ್ತಿದ್ದ ಗಡಿಬಿಡಿಯನ್ನು ಒಪ್ಪಿಕೊಂಡಿರಲಿಲ್ಲ; ಆದರೆ ಅದ್ಭುತವಾದ ಸಜ್ಜೀವ ವಾಕ್ಯಗಳನ್ನು ಕೇಳಲು ಆತನ ಪಾದಗಳ ಬಳಿಗೆ ಎಳೆಯಲ್ಪಟ್ಟಿದ್ದ ಮರಿಯಳ ಮನೋಭಾವವನ್ನು ವಿಶೇಷವಾಗಿ ಮೆಚ್ಚಿಕೊಂಡಿದ್ದನು. ಆಕೆಯು ಆದುಕೊಂಡದ್ದು ಉತ್ತಮವಾದ ಭಾಗವೆಂದು ಯೇಸುವು ಹೇಳಿದ್ದನು. ಹೀಗಿರುವಲ್ಲಿ ನಾವು ಆತನ ವಾಕ್ಯಗಳನ್ನು ಶ್ರದ್ಧೆಯಿಂದ ಗಮನಿಸುವುದನ್ನು ಮತ್ತು ಆತನ ಪವಿತ್ರಾತ್ಮದಿಂದ ತುಂಬಿದವರಾಗಿ ನಡೆಸಲ್ಪಡುವದನ್ನು ಒಡೆಯನು ವಿಶೇಷವಾಗಿ ಮೆಚ್ಚಿಕೊಳ್ಳುವನೆಂಬುದನ್ನು ನಾವು ಮಾಡುವ ಸೇವೆಯಲ್ಲಿ ಮನಸ್ಸಿನಲ್ಲಿಡೋಣ.

ಈ ದಿನದ ಅಧ್ಯಯನವು ನಮ್ಮ ಕರ್ತನ ಸೇವಾವಧಿಯಲ್ಲಿ ಬೇರೆಬೇರೆ ಸಮಯಗಳಲ್ಲಿ ಸಲ್ಲಿಸಲಾದ ವಿಶೇಷ ಸೇವೆಗಳನ್ನು ಪ್ರತಿಬಿಂಬಿಸುವದು. ಮೆಚ್ಚಿಕೆಯಾಗುವ ಸೇವೆ, ಮೆಚ್ಚಿಕೆಯಾಗುವ ಸ್ತುತಿಯು ಕರ್ತನಿಗಿರುವ ನಮ್ಮ ಪ್ರೀತಿಯ ಫಲವಾಗಿ ಬರಬೇಕು. ಯಾರು ಹೆಚ್ಚಾಗಿ ಪ್ರೀತಿಸುವರೋ ಅವರು ಹೆಚ್ಚಾಗಿ ಸೇವೆಮಾಡುವರು. ಸಂಬಳದಿಂದ ಈ ವಿಧವಾದ ಸೇವೆಯನ್ನು ಕೊಂಡುಕೊಳ್ಳಲಾಗದು ಅಲ್ಲದೆ ಹಿಂಸೆಯು ಇದನ್ನು ಅಡ್ಡಿಪಡಿಸಲಾಗದು.

ಕರ್ತನಿಗೆ ವೈಯುಕ್ತಿಕವಾಗಿ ಸೇವೆಮಾಡುವ ಸೌಭಾಗ್ಯವು ಯಾರಿಗೆ ದೊರೆತಿರುವದೋ ಅದು ಖಂಡಿತವಾಗಿಯೂ ಉತ್ಕೃಷ್ಟವಾದ ಸೌಭಾಗ್ಯ. ಕರ್ತನು ತನ್ನ ಸಹೋದರರೆಂದು ಪರಿಗಣಿಸಿರುವವರಿಗೆ ಯಾರು ಸೇವೆಮಾಡುವರೋ ಅವರು ನಿಜವಾಗಿಯೂ ಆತನಿಗೇ ಸೇವೆಮಾಡುವವರಾಗುವರು ಎಂದು ಈ ಪಾಠದಲ್ಲಿ ನಿರೂಪಿಸಲಾಗಿರುವ ಸಾಮಾನ್ಯವಾದ ನಿಯಮದ ಬಗ್ಗೆ ನಾವು ಖಚಿತಪಡಿಸಿಕೊಳ್ಳಬಹುದು. ಆತನು ಅದನ್ನು ತನಗಾಗಿ ಮಾಡಿದ ಸೇವೆಯೆಂದು ಅಂಗೀಕರಿಸುವನು. ಇದು ಎಷ್ಟೋ ಅತ್ಯಮೂಲ್ಯವಾದ ಆಲೋಚನೆ, ಇದು ಎಷ್ಟೋ ಬೆಲೆಯುಳ್ಳದ್ದು! ಯಾರು ಕರ್ತನ ಮಾತನ್ನು ನಿಜವಾಗಿಯೂ ನಂಬಿರುವರೋ ಅವರೆಲ್ಲರೂ ತಮ್ಮ ಸಹೋದರರಿಗೆ ಸೇವೆಮಾಡಲು ಉತ್ಸಾಹವುಳ್ಳವರಾಗಬೇಕೆಂಬದು ಏನಾಶ್ಚರ್ಯ! ಅಪೋಸ್ತಲನು ಸೂಚಿಸಿರುವಂತೆ ಕ್ರಿಸ್ತನು ನಮಗಾಗಿ ಪ್ರಾಣಕೊಟ್ಟಂತೆಯೇ ನಾವೂ ಸಹ ಸಹೋದರರಿಗೋಸ್ಕರ ಪ್ರಾಣವನ್ನು ಕೊಡುವ ಹಂಗಿನವರಾಗಿರಬೇಕು.

*****



**ಒಳ್ಳೆಯ ಸಮಾರ್ಯದವನು ಛತ್ರಕ್ಕೆ ಆಗಮಿಸಿದುದು**

**ಚತ್ರಕ್ಕೆ ಕರಕೊಂಡು ಹೋಗಿ ಅವನನ್ನು ಆರೈಕೆಮಾಡಿದನು (ಲೂಕ 10:34)**

## ಯೂದಾಯದಲ್ಲಿ ನಡೆಸಲಾದ ಯೇಸುವಿನ ನಂತರದ ಸೇವಾಕಾರ್ಯ

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಯೆರೂಸಲೇಮ್ | ಪರ್ಣಶಾಲೆಯ ಹಬ್ಬದಲ್ಲಿ ಯೇಸುವು ಮಾಡಿದ ಬಹಿರಂಗ ಉಪದೇಶ | –– | –– | –– | 7:11–52 |
| | ಯೆರೂಸಲೇಮ್ | ಹಬ್ಬದ ನಂತರದ ಉಪದೇಶ: ಕುರುಡನನ್ನು ಸ್ವಸ್ಥಪಡಿಸಿದ್ದು | –– | –– | –– | 8:12–9:41 |
| | ಬಹುಶಃ ಯೂದಾಯ | 70 ಮಂದಿಯನ್ನು ಸಾರುವದಕ್ಕೆ ಕಳುಹಿಸಿದ್ದು; ಅವರು ಹಿಂದಿರುಗಿದುದು, ವರದಿ ಒಪ್ಪಿಸಿದುದು | –– | –– | 10:1–24 | –– |
| | ಯೂದಾಯ; ಬೆಥಾನ್ಯ | ನೆರೆಯವನಾದ ಸಮಾರ್ಯದವನ ವಿಷಯವಾಗಿ ಹೇಳಿದುದು; ಮಾರ್ಥಳ ಮತ್ತು ಮರಿಯಳ ಮನೆಯಲ್ಲಿ | –– | –– | 10:25–42 | –– |
| | ಬಹುಶಃ ಯೂದಾಯ | ಮಾದರಿ ಪ್ರಾರ್ಥನೆಯ ಬಗ್ಗೆ ಮತ್ತೆ ಉಪದೇಶಮಾಡಿದ್ದು; ಎಡೆಬಿಡದೆ ಬೇಡಿಕೊಳ್ಳುವದು | –– | –– | 11:1–13 | –– |
| | ಬಹುಶಃ ಯೂದಾಯ | ಸುಳ್ಳು ಆರೋಪಗಳನ್ನು ತಳ್ಳಿಹಾಕಿದುದು; ಸಂತತಿಯು ದಂಡನೆಗೆ ಅರ್ಹವಾದುದೆಂದು ತೋರಿಸಿಕೊಟ್ಟದ್ದು | –– | –– | 11:14–36 | –– |
| | ಬಹುಶಃ ಯೂದಾಯ | ಫರಿಸಾಯನ ಊಟದ ಮೇಜಿನ ಬಳಿಯಲ್ಲಿ, ಯೇಸುವು ಕಪಟವನ್ನು ಅಲ್ಲಗಳೆದುದು | –– | –– | 11:37–54 | –– |
| | ಬಹುಶಃ ಯೂದಾಯ | ದೇವರ ಪರಿಪಾಲನೆಯ ಬಗ್ಗೆ ಸಂದೇಶ, ನಂಬಿಗಸ್ತನಾದ ಮನೆವಾರ್ತೆಯವನು | –– | –– | 12:1–59 | –– |
| | ಬಹುಶಃ ಯೂದಾಯ | ನಡುಬಗ್ಗಿದ ಸ್ತ್ರೀಯನ್ನು ಸಬ್ಬತ್ತಿನಲ್ಲಿ ಗುಣಪಡಿಸಿದುದು; ಮೂರು ದೃಷ್ಟಾಂತಗಳು | –– | –– | 13:1–21 | –– |
| | ಯೆರೂಸಲೇಮ್ | ದೇವಾಲಯದ ಪ್ರತಿಷ್ಠೆಯ ಹಬ್ಬದಲ್ಲಿ ಯೇಸು; ಒಳ್ಳೆಯ ಕುರುಬನು. | –– | –– | –– | 10:1–39 |

## ಯೋಹಾನ 7:11–52

ಜಾತ್ರೆಯಲ್ಲಿ ಯೆಹೂದ್ಯರು–ಅವನು ಎಲ್ಲಿದ್ದಾನೆಂದು ಆತನನ್ನು ಹುಡುಕುತ್ತಿದ್ದರು. ಮತ್ತು ಜನರ ಗುಂಪುಗಳಲ್ಲಿ ಆತನ ವಿಷಯವಾಗಿ ಬಹಳ ಗುಜುಗುಜು ಮಾತು ನಡೆಯುತ್ತಿತ್ತು. ಕೆಲವರು–ಆತನು ಒಳ್ಳೆಯವನು ಅಂದರು; ಇನ್ನು ಕೆಲವರು–ಅಲ್ಲ, ಜನರನ್ನು ತಪ್ಪಾದ ಮಾರ್ಗಕ್ಕೆ ಎಳೆಯುತ್ತಾನೆ ಅಂದರು. ಆದರೂ ಯೆಹೂದ್ಯರ ಭಯದಿಂದ ಯಾರೂ ಅತನ ವಿಷಯದಲ್ಲಿ ಧಾರಾಳವಾಗಿ ಮಾತಾಡಲಿಲ್ಲ.

ಜಾತ್ರೆಯ ಮಧ್ಯಕಾಲದಲ್ಲಿ ಯೇಸು ದೇವಾಲಯಕ್ಕೆ ಹೋಗಿ ಬೋಧಿಸುತ್ತಿದ್ದನು. ಯೆಹೂದ್ಯರು ಅದಕ್ಕೆ ಆಶ್ಚರ್ಯಪಟ್ಟು –ವಿದ್ಯಾಭ್ಯಾಸ ಮಾಡದಿರುವ ಈತನಿಗೆ ಶಾಸ್ತ್ರಗಳು ತಿಳಿದಿರುವದು ಹೇಗೆ ಎಂದು ಹೇಳುತ್ತಿದ್ದರು. ಅದಕ್ಕೆ ಯೇಸು–ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿಕೊಟ್ಟಾತನದು. ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸದೆಯೋ ಅವರಿಗೆ ಈ ಬೋಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದು. ಕಲ್ಪಿಸಿ ಹೇಳುವವನು ತನಗೆ ಮಾನಬರಬೇಕೆಂದು ಅಪೇಕ್ಷಿಸುತ್ತಾನೆ; ತನ್ನನ್ನು ಕಳುಹಿಸಿದವನಿಗೆ ಮಾನ ಬರಬೇಕೆಂದು ಅಪೇಕ್ಷಿಸುವವನು ಸತ್ಯವಂತನು, ಅಧರ್ಮವು ಅವನಲ್ಲಿ ಇಲ್ಲ. ಮೋಶೆಯು ನಿಮಗೆ ಧರ್ಮಶಾಸ್ತ್ರವನ್ನು ಕೊಟ್ಟಿದ್ದರೂ ನಿಮ್ಮಲ್ಲಿ ಒಬ್ಬನಾದರೂ ಧರ್ಮಶಾಸ್ತ್ರದಂದತೆ ನಡೆಯುವದಿಲ್ಲವಲ್ಲಾ; ಯಾಕೆ ನನ್ನನ್ನು ಕೊಲ್ಲುವದಕ್ಕೆ ನೋಡುತ್ತೀರಿ? ಎಂದು ಹೇಳಿದನು. ಅದಕ್ಕೆ ಆ ಜನರು–ನಿನಗೆ ದೆವ್ವಹಿಡಿದದೆ; ಯಾರು ನಿನ್ನನ್ನು ಕೊಲ್ಲುವದಕ್ಕೆ ನೋಡುತ್ತಾರೆ? ಅಂದರು. ಯೇಸು ಅವರಿಗೆ–ಒಂದೇ ಕ್ರಿಯೆಯನ್ನು ಮಾಡಿದೆನು;

ಅದಕ್ಕೆ ನೀವೆಲ್ಲರು ಬೆರಗಾಗಿದ್ದೀರಿ. ಮೋಶೆಯು ನಿಮಗೆ ಸುನ್ನತಿಯೆಂಬ ಸಂಸ್ಕಾರ ವನ್ನು ನೇಮಿಸಿದನು. ಅದು ಮೋಶೆಯಿಂದ ಬಂದದ್ದೆಂದು ನಾನು ಹೇಳುವದಿಲ್ಲ, ಮೂಲಪುರುಷರ ಕಾಲದಿಂದ ಬಂದದ್ದು. ಮತ್ತು ಆ ಸುನ್ನತಿಯನ್ನು ಸಬ್ಬತ್‌ದಿನದಲ್ಲಿಯೂ ಮಾಡುತ್ತೀರಿ. ಮೋಶೆಯ ನೇಮವನ್ನು ಮೀರಬಾರದೆಂದು ಒಬ್ಬನು ಸಬ್ಬತ್‌ದಿನದಲ್ಲಿ ಸುನ್ನತಿಮಾಡಿಸಿಕೊಳ್ಳುವದಾದರೆ ನಾನು ಸಬ್ಬತ್‌ದಿನದಲ್ಲಿ ಒಬ್ಬ ಮನುಷ್ಯನನ್ನು ಸಂಪೂರ್ಣವಾಗಿ ಸ್ವಸ್ಥಮಾಡಿದ್ದಕ್ಕೆ ನನ್ನ ಮೇಲೆ ಕೋಪಗೊಳ್ಳುತ್ತೀರೋ? ಕಣ್ಣಿಗೆ ತೋರಿದ್ದರ ಮೇಲೆ ತೀರ್ಪುಮಾಡಬೇಡಿರಿ; ನ್ಯಾಯವಾದ ತೀರ್ಪುಮಾಡಿರಿ ಎಂದು ಹೇಳಿದನು.

ಯೆರೂಸಲೇಮಿನವರಲ್ಲಿ ಕೆಲವರು ಇವನನ್ನಲ್ಲವೇ ಅವರು ಕೊಲ್ಲಬೇಕೆಂದಿರುವದು? ನೋಡಿರಿ, ಇವನು ಧಾರಾಳವಾಗಿ ಮಾತಾಡುತ್ತಾನೆ, ಅವರು ಅವನಿಗೆ ಏನೂ ಹೇಳುವದಿಲ್ಲ. ಹಿರೀಸಭೆಯವರು ಇವನೇ ಬರಬೇಕಾದ ಕ್ರಿಸ್ತನೆಂದು ನಿಶ್ಚಯ ಮಾಡಿಕೊಂಡಿದ್ದಾರೇನೋ? ಆದರೂ ಇವನು ಎಲ್ಲಿಯವನೆಂದು ಬಲ್ಲೆವು; ಕ್ರಿಸ್ತನು ಬರುವಾಗ ಅವನು ಎಲ್ಲಿಯವನೋ ಒಬ್ಬರಿಗೂ ತಿಳಿಯುವದಿಲ್ಲವೆಂದು ಮಾತಾಡಿ ಕೊಳ್ಳುತ್ತಿದ್ದರು. ಯೇಸು ಇದನ್ನು ತಿಳಿದು ದೇವಾಲಯದಲ್ಲಿ ಉಪದೇಶ ಮಾಡುವಾಗ–ನನ್ನನ್ನು ಬಲ್ಲಿರಿ, ನಾನು ಎಲ್ಲಿಯವನೆಂದು ಬಲ್ಲಿರಿ ನಿಜವೇ. ಆದರೂ ನಾನು ನನ್ನಷ್ಟಕ್ಕೆ ಬಂದವನಲ್ಲ, ನನ್ನನ್ನು ಕಳುಹಿಸಿದಾತನು ನಿಜವಾದವನು; ನೀವು ಅವನನ್ನು ಅರಿತವರಲ್ಲ. ನಾನು ಆತನನ್ನು ಬಲ್ಲೆನು; ಆತನ ಕಡೆಯಿಂದ ಬಂದವನಾದ್ದರಿಂದಲೂ ನನ್ನನ್ನು ಆತನೇ ಕಳುಹಿಸಿದ್ದರಿಂದಲೂ ಆತನನ್ನು ಬಲ್ಲೆನೆಂದು ಕೂಗಿ ಹೇಳಿದನು. ಇದಕ್ಕಾಗಿ ಆತನನ್ನು ಹಿಡಿಯುವದಕ್ಕೆ ನೋಡುತ್ತಿದ್ದರು; ಆದರೆ ಆತನ ಕಾಲ ಇನ್ನೂ ಬಾರದೆ ಇದ್ದಕಾರಣ ಯಾರೂ ಆತನ ಮೇಲೆ ಕೈಹಾಕಲಿಲ್ಲ. ಜನರಲ್ಲಿ ಅನೇಕರು ಆತನನ್ನು ನಂಬಿ–ಕ್ರಿಸ್ತನು ಬರುವಾಗ ಈತನು ಮಾಡಿದ್ದಕ್ಕಿಂತಲೂ ಹೆಚ್ಚು ಸೂಚಕಕಾರ್ಯಗಳನ್ನು ಮಾಡಾನೋ ಎಂದು ಹೇಳಿದರು.

ಜನರು ಆತನ ವಿಷಯವಾಗಿ ಗುಜುಗುಜು ಆಡಿದ ಈ ಮಾತುಗಳನ್ನು ಫರಿಸಾಯರು ಕೇಳಲು ಮಹಾಯಾಜಕರೂ ಫರಿಸಾಯರೂ ಆತನನ್ನು ಹಿಡಿಯುವದಕ್ಕೆ ಓಲೇಕಾರರನ್ನು ಕಳುಹಿಸಿದರು. ಆಗ ಯೇಸು–ಇನ್ನು ಸ್ವಲ್ಪ ಕಾಲ ನಾನು ನಿಮ್ಮಲ್ಲಿ ಇದ್ದು ಆ ಮೇಲೆ ನನ್ನನ್ನು ಕಳುಹಿಸಿದಾತನ ಬಳಿಗೆ ಹೊರಟು ಹೋಗುತ್ತೇನೆ. ನೀವು ನನ್ನನ್ನು ಹುಡುಕುವಿರಿ, ಆದರೆ ನನ್ನನ್ನು ಕಂಡುಕೊಳ್ಳದೆ ಹೋಗುವಿರಿ, ನಾನು ಇರುವಲ್ಲಿಗೆ ನೀವು ಬರಲಾರಿರಿ ಅಂದನು. ಅದಕ್ಕೆ ಯೆಹೂದ್ಯರು–ಇವನು ನಮಗೆ ಸಿಕ್ಕದ ಹಾಗೆ ಎಲ್ಲಿ ಹೋಗಬೇಕೆಂದಿರುತ್ತಾನೆ? ಗ್ರೀಕರೊಳಗೆ ಚದರಿಕೊಂಡಿರುವ ನಮ್ಮವರ ಬಳಿಗೆ ಹೋಗಿ ಆ ಗ್ರೀಕರಿಗೆ ಉಪದೇಶ ಮಾಡಬೇಕೆಂದಿರುತ್ತಾನೋ? ನನ್ನನ್ನು ಹುಡುಕುವಿರಿ, ಆದರೆ ನನ್ನನ್ನು ಕಂಡುಕೊಳ್ಳದೆ ಹೋಗುವಿರಿ, ನಾನು ಇರುವಲ್ಲಿಗೆ ನೀವು ಬರಲಾರಿರಿ ಎಂದು ಅವನು ಹೇಳಿದ ಮಾತು ಏನಿದ್ದೀತು? ಎಂಬದಾಗಿ ತಮ್ಮ ತಮ್ಮೊಳಗೆ ಮಾತಾಡಿಕೊಂಡರು.

ಆ ಜಾತ್ರೆಯ ಮಹಾದಿವಸವಾದ ಕಡೇ ದಿನದಲ್ಲಿ ಯೇಸು ನಿಂತುಕೊಂಡು–ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು ಎಂದು ಕೂಗಿ ಹೇಳಿದನು. ಇದನ್ನು ಯೇಸು ತಾನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು; ಆತನು ಇನ್ನೂ ತನ್ನ ಮಹಿಮೆಯ ಪದವಿಯನ್ನು ಹೊಂದದೆ ಇದ್ದಕಾರಣ ಪವಿತ್ರಾತ್ಮವರವು ಇನ್ನೂ ಬಂದಿದ್ದಿಲ್ಲ. ಜನರಲ್ಲಿ ಕೆಲವರು ಆ ಮಾತುಗಳನ್ನು ಕೇಳಿ–ನಿಜವಾಗಿ ಈತನು ಬರಬೇಕಾದ ಪ್ರವಾದಿ ಅಂದರು; ಮತ್ತು ಕೆಲವರು–ಈತನು ಬರಬೇಕಾದ ಕ್ರಿಸ್ತನು ಅಂದರು. ಇನ್ನೂ ಕೆಲವರು–ಕ್ರಿಸ್ತನು ಗಲಿಲಾಯದಿಂದ ಬರುವದು ಹೇಗೆ? ದಾವೀದನ ಸಂತಾನದಿಂದಲೂ ದಾವೀದನು ಇದ್ದ ಬೇತ್ಲೆಹೇಮೆಂಬ ಗ್ರಾಮದಿಂದಲೂ ಕ್ರಿಸ್ತನು ಬರುವನು ಎಂಬದಾಗಿ ಶಾಸ್ತ್ರದಲ್ಲಿ ಉಂಟಲ್ಲವೇ ಎಂದು ಹೇಳಿದರು. ಹೀಗೆ ಜನರಲ್ಲಿ ಆತನನ್ನು ಕುರಿತು ಬೇಧ ಉಂಟಾಯಿತು. ಅವರಲ್ಲಿ ಕೆಲವರು ಆತನನ್ನು ಹಿಡಿಯಬೇಕೆಂದಿದ್ದರೂ ಒಬ್ಬರೂ ಅತನ ಮೇಲೆ ಕೈಹಾಕಲಿಲ್ಲ.

ಬಳಿಕ ಆ ಓಲೇಕಾರರು ಮಹಾಯಾಜಕರ ಮತ್ತು ಫರಿಸಾಯರ ಬಳಿಗೆ ಬಂದಾಗ ಇವರು–ನೀವು ಯಾಕೆ ಅವನನ್ನು ಹಿಡತರಲಿಲ್ಲ? ಎಂದು ಅವರನ್ನು ಕೇಳಿದ್ದಕ್ಕೆ ಆ ಓಲೇಕಾರರು–ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ ಎಂದು ಉತ್ತರಕೊಟ್ಟರು. ಅದಕ್ಕೆ ಫರಿಸಾಯರು–ನೀವೂ ಮರುಳಾದಿರಾ? ಹಿರೀಸಭೆಯವರಲ್ಲಿಯಾಗಲಿ ಫರಿಸಾಯರಲ್ಲಿಯಾಗಲೀ ಯಾರಾದರೂ ಅವನನ್ನು ನಂಬಿದ್ದಾರೋ? ಧರ್ಮಶಾಸ್ತ್ರವನ್ನರಿಯದಂಥ ಈ ಹಿಂಡು ಶಾಪಗ್ರಸ್ತವಾದ್ದೇ ಅಂದರು. ಮುಂಚೆ ಯೇಸುವಿನ ಬಳಿಗೆ ಬಂದಿದ್ದ ನಿಕೋದೇಮನು ಅವರಲ್ಲಿ ಒಬ್ಬನಾಗಿದ್ದನು; ಅವನು ಅವರಿಗೆ–ನಮ್ಮ ಧರ್ಮಶಾಸ್ತ್ರವು ಮೊದಲು ಒಬ್ಬನನ್ನು ವಿಚಾರಿಸಿ ಅವನು ಮಾಡುವದೇನೆಂದು ತಿಳುಕೊಳ್ಳದೆ ಅವನ ವಿಷಯವಾಗಿ ತೀರ್ಪುಮಾಡುವದುಂಟೇ? ಎಂದು ಹೇಳಿದ್ದಕ್ಕೆ ಅವರು–ನೀನೂ ಗಲಿಲಾಯದವನೋ? ಗಲಿಲಾಯದಲ್ಲಿ ಪ್ರವಾದಿ ಹುಟ್ಟುವದೇ ಇಲ್ಲ, ವಿಚಾರಿಸಿ ನೋಡು ಅಂದರು.

# ಪರ್ಣಶಾಲೆಗಳ ಹಬ್ಬದಲ್ಲಿ

**ರೀಪ್ರಿಂಟ್ಸ್ ಪುಟ 2437**

## ಯೋಹಾನ 7:14, 28–37

**"ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ."**

ನಮ್ಮ ಹಿಂದಿನ ಪಾಠದಲ್ಲಿ ಗಮನಿಸಿರುವದೇನಂದರೆ, ಐದು ಸಾವಿರ ಜನರಿಗೆ ಅದ್ಭುತವಾಗಿ ಊಟಮಾಡಿಸಿದ ಫಲವಾಗಿ ಜನರ ಗುಂಪು ನಮ್ಮ ಕರ್ತನನ್ನು ಒಬ್ಬ ಮಹಾ ಪ್ರವಾದಿಯೆಂದು ಘೋಷಿಸಿ ಆತನನ್ನು ಹಿಡಿದುಕೊಂಡು ಹೋಗಿ ಅರಸನನ್ನಾಗಿ ಮಾಡುವ ಪ್ರಸ್ತಾವನೆ ಮಾಡಿದ್ದರೆಂಬದು. ಹೀಗಿರಲು ಇಂಥದ್ದು ತಂದೆಯ ಕಾರ್ಯಕ್ರಮದಲ್ಲಿಲ್ಲವೆಂಬದು ಆತನಿಗೆ ತಿಳಿದಿತ್ತು. ಅದಕ್ಕೆ ಬದಲಾಗಿ ತಾನು ಮರಣದ ಪರ್ಯಂತರ ಪಾಪಿಗಳಿಂದ ವಿರೋಧವನ್ನು ಎದುರಿಸುವಂಥ ಕಾರ್ಯಭಾರವನ್ನು ನೆರವೇರಿಸಬೇಕಾಗಿತ್ತು. ಮತ್ತು ಕೇವಲ ಈ ಮೂಲಕವೇ ತಾನು ಬಾಧ್ಯನಾಗಲಿರುವ ಆ ದೇವರ ರಾಜ್ಯವನ್ನು ಪಡಕೊಳ್ಳಲು ಸಾಧ್ಯವಿತ್ತು. ಆತನಿಗೆ ವಾಗ್ದಾನ ಮಾಡಲ್ಪಟ್ಟ ರಾಜ್ಯವು ಈ ಲೋಕದ್ದಾಗಿರಲಿಲ್ಲ, ಅಂದರೆ ಅದು ಈಗಿನ ಕಾಲದ ವ್ಯವಸ್ಥಾಕ್ರಮವುಳ್ಳದ್ದಾಗಿರದೆ ಒಂದು ಹೊಸ ವ್ಯವಸ್ಥೆಯದಾಗಿತ್ತು. ಆದುದರಿಂದ ನಮ್ಮ ಕರ್ತನು ತನ್ನ ಶಿಷ್ಯರನ್ನು ದೋಣಿಯಲ್ಲಿ ಸಾಗಕಳುಹಿಸಿ ತಾನು ಪರ್ವತ ಪ್ರದೇಶಕ್ಕೆ ಹೋಗಿ ನಂತರದಲ್ಲಿ ಸಮುದ್ರದ ನೀರಿನ ಮೇಲೆ ನಡೆದುಕೊಂಡು ಹೋಗಿ ತನ್ನ ಶಿಷ್ಯರನ್ನು ಸಂಧಿಸುವವನಾಗಿದ್ದನು.

ಆರು ತಿಂಗಳಿಗೂ ಹೆಚ್ಚು ಸಮಯ ಗಲಿಲಾಯದಲ್ಲಿ ಸಾರಿ ಉಪದೇಶ ಮಾಡುತ್ತಾ ತಾನು ಮಾಡಿದ ಅದ್ಭುತಗಳಿಗೆ ತೋರಿದ ಆಸಕ್ತಿ ಬಂದ ಜನಪ್ರಿಯತೆಗಳ ಸ್ಪಷ್ಟವಾದ ಲಾಭವನ್ನು ಒಬ್ಬ ರಾಜನಾಗಿ ತನ್ನ ಕಾರ್ಯೋದ್ಧೇಶವನ್ನು ಮುಂದುವರೆಸಲು ಬಳಸಿಕೊಳ್ಳದೆ ತನ್ನ ಸಹೋದದರು ಅಂದರೆ ಸ್ವಜನರಿಗೆ ಉಪದೇಶಿಸಲು ಆರಂಭಿಸಿದ್ದನು. ಅವರಾದರೋ ತಮ್ಮ ವಿಶ್ವಾಸವನ್ನು ಕಳಕೊಳ್ಳತೊಡಗಿದ್ದರು. ಯಾಕೆಂದರೆ ಅವರ ಆಸಕ್ತಿಯೆಲ್ಲವೂ ನಂಬಿಕೆಗಿಂತಲೂ ಹೆಚ್ಚಾಗಿ ಹೆಮ್ಮೆಪಡುವದ ರಲ್ಲಿತ್ತು. ಆಗ ಯೆರೂಸಲೇಮಿಗೆ ಹೋಗಿ ಪರ್ಣಶಾಲೆಗಳ ಹಬ್ಬವನ್ನು ಆಚರಿಸುವ ಸಮಯವು ಬಂದಿತ್ತು, ಯೇಸುವು ಅದರಲ್ಲಿ ಭಾಗವಹಿಸಲು ಯಾವ ವಿಶೇಷವಾದ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿಲ್ಲವೆಂಬುದನ್ನು ಅವರು ಗಮನಿಸಿದ್ದರು. ಆತನ ಶಕ್ತಿಯನ್ನು ಪರೀಕ್ಷೆಗೆ ಒಳಪಡಿಸಲು ಅವರು ಉತ್ಸುಕರಾಗಿದ್ದರು. ಲೋಕದವರ ಮುಂದೆ ಏನನ್ನಾದರೂ ಮಾಡಿ ನೀನು ಮಹಾಪುರುಷನೆಂದು ತೋರಿಸಿಕೋ ಇಲ್ಲವೇ ನೀನು ಮೆಸ್ಸೀಯನೆಂದು ಹೇಳಿಕೊಳ್ಳುವದು ಒಂದು ಪೊಳ್ಳಾದ ವಿಷಯವೆಂಬುದನ್ನು ಒಪ್ಪಿಕೊಂಡು ಅದೆಲ್ಲವನ್ನು ಬಿಟ್ಟುಬಿಡು ಎನ್ನುವದು ಅವರ ಮನೋಭಾವವಾಗಿತ್ತು. ಆದುದರಿಂದ ಅವರು ಹೇಳಿದ್ದು, ನೀನು ಹಬ್ಬಕ್ಕೆ ಏಕೆ ಹೋಗಬಾರದು? ಪ್ರಸಿದ್ಧಿಗೆ ಬರಬೇಕೆಂದಿರುವ ಯಾವನಾದರೂ ತಾನು ಮಾಡುವದನ್ನು ಮರೆಯಲ್ಲಿ ಮಾಡುವದಿಲ್ಲ; ಅದರೆ ಅದರ ಪ್ರಚಾರಕ್ಕೆ ಅತಿ ದೊಡ್ಡ ಅವಕಾಶವನ್ನು ಕಂಡುಕೊಳ್ಳಬಯಸುವನು. ನಿನ್ನಲ್ಲಿ ನಿತ್ಯಜೀವವಿರುವದೆಂದೂ ಅದನ್ನು ನೀನು ಇತರರಿಗೆ ದಯಪಾಲಿಸಲು ಶಕ್ತನೆಂದೂ ನೀನು ನಮಗೆ ಹೇಳುತ್ತಿ ಆದರೆ ನಿನ್ನ ಪ್ರಾಣವನ್ನು ಅಪಾಯಕ್ಕೆ ಗುರಿಮಾಡಿಕೊಳ್ಳಲು ನೀನು ಅಂಜುತ್ತೀ: "ಏಕೆಂದರೆ ಆತನ ಅಣ್ಣತಮ್ಮಂದಿರೂ ಅತನನ್ನು ನಂಬದೆ ಇದ್ದರು."

ಅವರ ಸಂಗತಿಯು ತನ್ನದಕ್ಕಿಂತಲೂ ಭಿನ್ನವಾಗಿರುವ ದೆಂಬುದನ್ನು ನಮ್ಮ ಕರ್ತನ ಉತ್ತರವು ತೋರಿಸಿಕೊಟ್ಟಿತ್ತು. ಅವರು ಯಾವಾಗ ಬೇಕಾದರೂ ಹೋಗಬಹುದಿತ್ತು ಆದರೆ ಆತನು ಕೆಲವು ನಿರ್ಬಂಧಗಳಿಗೆ ಒಳಗಾಗಿದ್ದನು. ಅವರು ಆ ಜನಾಂಗದವರಲ್ಲಿನ ಅತಿ ಪ್ರಭಾವೀ ಹಾಗು ಅಧಿಕಾರಸ್ಥ ವರ್ಗದವರಿಂದ ಮರಣಕರವಾದ ದ್ವೇಷವನ್ನು ತಮ್ಮ ಮೇಲೆ ಬರಮಾಡಿ ಕೊಂಡಿರಲಿಲ್ಲ. ತಾನು ಸತ್ಯದ ವಿಷಯವಾಗಿ ನಂಬಿಗಸ್ತನಾಗಿ ಸೇವೆಮಾಡಲು ಲೋಕಕ್ಕೆ ಬಂದವನಾಗಿ ಆತನು ಅದನ್ನು ತನ್ನ ಮೇಲೆ ತಂದುಕೊಂಡಿದ್ದನು. "ಯೆಹೂದ್ಯರು ಆತನನ್ನು ಕೊಲ್ಲುವ ಪ್ರಯತ್ನದಲ್ಲಿದ್ದದರಿಂದ ಆತನಿಗೆ ಯೂದಾಯದಲ್ಲಿ ಸಂಚಾರಮಾಡುವ ಮನಸ್ಸಿರಲಿಲ್ಲ" ಎಂಬುದು ನಿಜವಾಗಿದ್ದರೂ ಇದರಿಂದ ಆತನಿಗೆ ಸಾಯುವ ಯಾವ ಭಯವೂ ಇರಲಿಲ್ಲವೆಂಬುದು ಸ್ಪಷ್ಟವಾಗಿದ್ದರೂ "ತನ್ನ ಸಮಯವು ಇನ್ನೂ ಬಂದಿಲ್ಲ" ಎಂಬುದು ಆತನಿಗೆ ಸ್ಪಷ್ಟವಾಗಿ ಮನವರಿಕೆ ಯಾಗಿದ್ದುದರ ಕಾರಣಕ್ಕಾಗಿತ್ತು. ಆದುದರಿಂದ ತಾನು ತಿಳಿದಿದ್ದ ತಂದೆಯ ಯೋಜನೆಗೆ ತನ್ನ ಶಕ್ತ್ಯಾನುಸಾರ ಸಹಕರಿಸ ಬೇಕೆಂತಲೂ ಹಾಗು ಆ ಯೋಜನೆಯನ್ನು ಅಲಕ್ಷ್ಯ ಮಾಡಬಾರದೆಂತಲೂ ಹೀಗೆ ಅಲಕ್ಷವಾದಲ್ಲಿ ತನ್ನ ಬಿಡುಗಡೆಗೆ ಒಂದು ಅದ್ಭುತದ ಅವಶ್ಯಕತೆ ಉಂಟಾಗಿ ಆ ದೈವಿಕ ಯೋಜನೆಗೆ ಅಡ್ಡಿಯಾದಂತಾಗಬಾರದೆಂದು ಆತನಿಗೆ ಅನ್ನಿಸಿತು.

ಒಡೆಯನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಶ್ರಮಿಸುತ್ತಿರುವವರೆಲ್ಲರಿಗೆ ಇಲ್ಲಿ ಪಾಠಗಳಿವೆ:–

(1) ನಮಗೆ ಲೋಕದಿಂದ ವಿರೋಧಗಳು ಇಲ್ಲದಿರುವದು ಕಂಡುಬಂದಲ್ಲಿ ಅದು ನಾವು ತಂದೆಯ ಮಾತುಗಳಿಗೆ ಹಾಗು ನಮಗೆ ನೇಮಿತವಾದ ಕಾರ್ಯಭಾರದ ವಿಷಯದಲ್ಲಿ ಅಂದರೆ ತಂದೆಯ ಕಾರ್ಯಭಾರದ ವಿಷಯದಲ್ಲಿ ನಾವು ನಂಬಿಗಸ್ತರಲ್ಲದ ಕಾರಣಕ್ಕಾಗಿರುವುದು. ಏಕೆಂದರೆ ನಮ್ಮ ಒಡೆಯನು ಪ್ರಕಟಮಾಡಿ ಹೇಳಿರುವದೆಂದರೆ, ಆತನ ಹಿಂಬಾಲಕರಾದ ನಮ್ಮ ವಿಷಯವೂ ಆತನ ವಿಷಯವಾಗಿರುವಂತೆಯೇ ಇರುವದು; ನಾವು ಲೋಕದವರಲ್ಲದೆ ಇರುವ ಕಾರಣ ಲೋಕವು ನಮ್ಮನ್ನು ಹಗೆಮಾಡಿ ಕೆಟ್ಟಕೆಟ್ಟ ಮಾತುಗಳನ್ನು ನಮ್ಮ ಮೇಲೆ ಸುಳ್ಳಾಗಿ ಹೊರಿಸುವದು, ಮತ್ತು ನಮ್ಮನ್ನು ಹಿಂಸಿಸುವರು ದೇವರ ಸೇವೆಯನ್ನು ಮಾಡಿರುವೆವೆಂದು ಅಂದುಕೊಳ್ಳುವರು. ಖಚಿತವಾಗಿ ಪ್ರಕಟಗೊಂಡಿರುವದೆಂದರೆ: "ಕ್ರಿಸ್ತ ಯೇಸುವಿನಲ್ಲಿ ಸದ್ಭಕ್ತರಾಗಿ ನಡೆಯಲು ಮನಸ್ಸು ಮಾಡುವವರೆಲ್ಲರೂ ಹಿಂಸೆಗೆ ಗುರಿಯಾಗುವರು." (2 ತಿಮೋಥೆ 3:12) ನಾವೂ ಇನ್ನೂ ಈ ಹಿಂಸೆಯ ಕಾಲಗಳಲ್ಲಿದ್ದೇವೆ; ಆ ಮಹಾ ವಿರೋಧಿಯಾದ ಸೈತಾನನು ಇನ್ನೂ ಕಟ್ಟಿಹಾಕಲ್ಪಡಲಿಲ್ಲ, ಅಲ್ಲದೆ ನಾವು ಇಂಥ ವಿರೋಧಗಳಿಂದ ಸಂಪೂರ್ಣವಾಗಿ ಮುಕ್ತರಾಗಿ ದ್ದೇವೆಂದರೆ ಅದು ನಾವು ಭಕ್ತಿಸಂಬಂಧವಾದ ನಮ್ಮ ಸವಲತ್ತು ಗಳಿಗನುಸಾರವಾಗಿ ನಾವು ಜೀವಿಸುತ್ತಿಲ್ಲವೆಂಬುದು; ಅಂದರೆ ಯೇಸುವಿನ ಹೆಜ್ಜೆಗಳಿಗೆ ಸಾಕಷ್ಟು ಸಮೀಪದಲ್ಲಿ ನಡೆದು ವಿರೋಧಿಯಾದ ಸೈತಾನನ ಹಾಗು ಅಂಧಕಾರದಲ್ಲಿರುವ ಆತನ ಸೇವಕರ ದ್ವೇಷವನ್ನು ಎಬ್ಬಿಸುವವರಲ್ಲವೆಂದಾಗುತ್ತದೆ.

(2) ನಮ್ಮ ಒಡೆಯನನ್ನು ವಿಶೇಷವಾಗಿ ವಿರೋಧಿಸುತ್ತಿದ್ದವರು ನಂಬಿಕೆಯಿಲ್ಲದಂಥ ಲೋಕದ ಜನರಲ್ಲವೆಂದೂ ಆದರೆ ಅವರು ನಂಬಿಕೆಯಿಲ್ಲದ ಮತ್ತು ಪರಿಶುದ್ಧತೆಯ ಹಾಗು ದೇವರಾಜ್ಞೆಗಳಲ್ಲಿ ನಿಷ್ಠೆತೋರಿಸುವ ವೇಷಧಾರಿಗಳಾಗಿದ್ದ ಅಪನಂಬಿಗಸ್ತರಾಗಿದ್ದರೆಂಬುದನ್ನು ನಾವು ನೆನಪಿನಲ್ಲಿಡಬೇಕು. ನಮ್ಮ ವಿಷಯವೂ ಹೀಗೆಯೇ; ವಿಶೇಷವಾಗಿ ನಮ್ಮನ್ನು ವಿರೋಧಿಸುವವರು ಅಪಮಾನಪಡಿಸುವವರು ಅಲ್ಲದೆ ಹಿಂಸಿಸುವರು ಇವರುಗಳನ್ನು ಹೆಸರಿನ ಕ್ರೈಸ್ತರ ಸಭೆಯ ಎಲ್ಲೆಯೊಳಗೇ ಕಂಡುಕೊಳ್ಳಬೇಕಿರುವದು ಹೊರತು ಹೊರಗಲ್ಲ.

(3) ಅನಗತ್ಯವಾಗಿ ಮತ್ತು ಅವಿವೇಕದಿಂದ ನಮ್ಮನ್ನು ಅಪಾಯಕ್ಕೆ ಗುರಿಮಾಡಿಕೊಂಡು ದೇವರು ನಮ್ಮನ್ನು ಅದ್ಭುತವಾಗಿ ಸಂರಕ್ಷಿಸುವನೆಂದು ಅಪೇಕ್ಷಿಸದವರಾಗಿದ್ದು ನಮ್ಮ ಕರ್ತನ ನಿದರ್ಶನಗಳಿಂದ ನಾವು ಪ್ರಯೋಜನವನ್ನು ಪಡೆಯಬಹುದು. ನಮ್ಮ ಕರ್ತನಂತೆಯೇ ನಾವೂ ಸಹ ಯಾವ ಪರಿಗಣನೆಗಾಗಿಯೂ ಸತ್ಯವನ್ನು ನಿರಾಕರಿಸುವವರಾಗದೆ ಇಲ್ಲವೇ ನಮ್ಮ ಜೀವವನ್ನು ಕಾಪಾಡಿಕೊಳ್ಳುವ ಸಲುವಾದ ಕರ್ತವ್ಯವನ್ನು ನಿರ್ವಹಿಸದೇ ಬಿಟ್ಟುಬಿಡುವವರಾಗದೆ ಇರಬೇಕು. ನಮ್ಮ ಕರ್ತನಿಗೆ ಅತಿ ವಿವೇಕವೂ ಸೂಕ್ತವೂ ಆದ ಸಮಯ ಬಂದಾಗ ಆತನು ಹಬ್ಬಕ್ಕೆ ಹೋಗಿ ಯಾವ ಭಯವೂ ಇಲ್ಲದೆ ಧೈರ್ಯವಾಗಿ ಮಾತನಾಡಿದ್ದನ್ನು ನಾವು ನೋಡುತ್ತೇವೆ. ಹೀಗೆ ನಮ್ಮ ಜೀವವನ್ನು ಕಾಪಾಡಿಕೊಳ್ಳುವದರಲ್ಲಿ ನಾವು ವಹಿಸುವ ಜಾಗ್ರತೆ ಮುಂತಾದವುಗಳು ದೈವಿಕ ಏರ್ಪಾಡಿನ ಮೇಲೆ ನಮಗಿರುವ ಭಯದ ಅಥವಾ ವಿಶ್ವಾಸ ಕಡಿಮೆಯಿರುವ ಇಲ್ಲವೇ ನಮ್ಮ ಕರ್ತವ್ಯವನ್ನು ನಿರ್ವಹಿಸುವದರಲ್ಲಿ ನಮಗಿರುವ ಧೈರ್ಯದ ಕೊರತೆಯ ಫಲವಾಗಿ ಬಂದವುಗಳಾಗಲೀ ಆಗಿರಬಾರದು, ಆದರೆ ಅದು ಕೇವಲ ದೇವರ ಚಿತ್ತಕ್ಕೆ ಸಹಕರಿಸುವ ಬಯಕೆಯ ಸಲುವಾಗಿರುವ ಜಾಗ್ರತೆ ಹಾಗು ಮುಂದಾಲೋಚನೆಗಳ ಫಲವಾಗಿರಬೇಕು.

ತನ್ನನ್ನು ಕೊಲ್ಲಲಿರುವ ಫರಿಸಾಯರ ಪ್ರವೃತ್ತಿಯನ್ನು ನಮ್ಮ ಕರ್ತನು ಬಲ್ಲವನಾಗಿದ್ದನು. ಯೆರೂಸಲೇಮು ಯಾತ್ರಾರ್ಥಿಗಳಿಂದ ತುಂಬಿರುವ ಹಾಗೂ ಅವರಲ್ಲಿ ಸಾವಿರಾರು ಮಂದಿ ಗಲಿಲಾಯದಿಂದ ಬಂದವರಾಗಿರಲು ಅಲ್ಲದೆ ಅವರು ಹೆಚ್ಚು ಕಡಿಮೆ ತನಗೂ ಮತ್ತು ತನ್ನ ಶಿಷ್ಯರಿಗೂ ಮಿತ್ರರಾಗಿರುವರು ಸಹ ಗಲಿಲಾಯದಿಂದ ಬಂದಿರಲು ಈ ಹಬ್ಬದ ಸಂದರ್ಭದಲ್ಲಿ ತನ್ನನ್ನು ಹಿಡಿಯಲು ಹೆಚ್ಚಿಗೆ ಪ್ರಯತ್ನವನ್ನು ಮಾಡಲು ಅವರು ಹಿಂಜರಿಯುವರೆಂಬುದೂ ಸಹ ಆತನಿಗೆ ತಿಳಿದಿತ್ತು. ಹಬ್ಬದ ಆರಂಭದ ಸಮಯದಲ್ಲಿ ಅಂದರೆ ಯಾತ್ರಾರ್ಥಿಗಳು ಬಂದಿಳಿಯುವ ಗದ್ದಲದ ಸನ್ನಿವೇಶದಲ್ಲಿರುವಾಗ ತನ್ನನ್ನು ಹಿಡಿಯುವ ಕೆಲವು ಏರ್ಪಾಡುಗಳನ್ನು ಅಧಿಕಾರಿಗಳು ಮಾಡುತ್ತಿರುವರೆಂಬುದನ್ನು ಸಹ ಆತನು ಬಲ್ಲವನಾಗಿರಲೂ ಬಹುದು. ಏನೇ ಆಗಲಿ, ಅಲ್ಲಿನ ಸನ್ನಿವೇಶದ ಬಗ್ಗೆ ತನಗಿರುವ ಉತ್ಕೃಷ್ಟವಾದ ತಿಳುವಳಿಕೆಯಾನುಸಾರ ತಾನು ಅಲ್ಲಿಗೆ ಹೋಗುವದನ್ನು ಮುಂದಕ್ಕೆ ಹಾಕಿ ಆ ಗುಂಪೆಲ್ಲವೂ ಹೊರಟನಂತರ ಉಪದೇಶ ಮತ್ತು ಅದ್ಭುತಗಳು ಮುಂತಾದವುಗಳನ್ನು ಮಾಡದೆ ಆತನು ಮರೆಯಾಗಿ ಹೋಗಿದ್ದನು.

ಹಬ್ಬದ ವಾರದ ಮಧ್ಯದಲ್ಲಿ ಆತನು ದೇವಾಲಯದಲ್ಲಿ ಕಾಣಿಸಿಕೊಂಡು ಜನರಿಗೆ ಉಪದೇಶಮಾಡುತ್ತಿದ್ದನು. ಆತನ ವೈರಿಗಳು ಹಿಂದೆ ಆತನನ್ನು ಹಿಡಿಯಬೇಕೆಂದಿದ್ದು, ಆತನು ಬಂದಿರುವದು ಮತ್ತು ಎಂದಿನಂತಲ್ಲದೆ ಬಹಿರಂಗವಾಗಿ ಧೈರ್ಯದಿಂದ ಜನರಿಗೆ ಆತನು ಉಪದೇಶಮಾಡುತ್ತಿದ್ದುದನ್ನು ಅವರು ನೋಡುತ್ತಿದ್ದರು; ಆದರೆ ಅವರು ಜನರಿಗೆ ಹೆದರಿ ಆತನ ಮೇಲೆ ಕೈಹಾಕುವದನ್ನು ಬಿಟ್ಟುಬಿಟ್ಟಿದ್ದರು. ಗುಂಪಿನವರಲ್ಲಿ ಬಹು ದೊಡ್ಡಪಾಲು ಆತನ ಉಪದೇಶದ ಬಗ್ಗೆ ಕನಿಷ್ಠವಾಗಿಯಾದರೂ ಸಹಾನುಭೂತಿಯುಳ್ಳವರಾಗಿದ್ದು ಆತನು "ಅವರಿಗೆ ಅಧಿಕಾರ ವಿದ್ದವನಂತೆ ಉಪದೇಶಿಸುತ್ತಿದ್ದು" ಇದು ತಮ್ಮ ಅನಿಶ್ಚಿತವಾದ ರೀತಿಯದ್ದಾಗಿರದೆ ಖಚಿತವಾದ ರೀತಿಯದ್ದಾಗಿರುವದೆಂಬುದನ್ನು ಅವರು ಗುರುತು ಹಚ್ಚಿದ್ದರು. ಆ ಗುಂಪಿನವರಲ್ಲಿ ಹಲವರು ಆತನನ್ನು ಮೆಚ್ಚಿಕೊಂಡು ಪ್ರಭಾವಿತರಾಗಿ ತಮ್ಮಲ್ಲಿ ತಾವು ಮೆಸ್ಸೀಯನು ಬಂದಾಗ ಯೇಸುವು ಮಾಡಿದಕ್ಕಿಂತಲೂ ಹೆಚ್ಚಿನ ಅದ್ಭುತಗಳನ್ನು ಮಾಡುವನೋ ಏನೋ ಎಂದು ವಿಚಾರಣೆ ಮಾಡುತ್ತಿದ್ದರು; ಅಲ್ಲದೆ ಆತನು ಬಹಿರಂಗವಾಗಿ ಉಪದೇಶ ಮಾಡುತ್ತಿದ್ದುದು ಮತ್ತು ಅಧಿಕಾರಿಗಳು ಆತನ ವಿಷಯದಲ್ಲಿ ಮಧ್ಯಪ್ರವೇಶ ಮಾಡದಿದ್ದುದು ಅವರನ್ನು ಈ ರೀತಿಯಲ್ಲಿ ವಿಚಾರಿಸುವಂತೆ ನಡೆಸಿತ್ತು: "ಹಿರೀಸಭೆಯವರು ಇವನೇ ಬರಬೇಕಾದ ಕ್ರಿಸ್ತನೆಂದು ನಿಶ್ಚಯ ಮಾಡಿಕೊಂಡಿದ್ದಾರೇನೋ?"

ಹೀಗೆ ಆ ಹಿರೀಸಭೆಯ ಅಧಿಕಾರಿಗಳು ತಮ್ಮ ಅಂಜುವಿಕೆಯೇ ನಿಜವಾಗಿಯೂ ತಾವು ಹಗೆಮಾಡುತ್ತಿದ್ದ ಕಾರ್ಯವು ಮುಂದುವರೆಯುವಂತೆ ಮಾಡುತ್ತಿರುವದಾಗಿ ಕಂಡು ಆತನನ್ನು ಹಿಡಿದು ತರಲು ಅವರು ಓಲೆಕಾರರನ್ನು ಕಳುಹಿಸಿದರು; ಬಂಡಾಯದ ಅರಾಜಕತೆಯ ಮತ್ತು ದೇವದೂಷಣೆಯ ಮಾತುಗಳು ಆತನ ಬಾಯಿಂದ ಬರುವದನ್ನು ಅವರು ಕೇಳಿ ಆತನನ್ನು ಬಂಧಿಸುವದು ಜನರ ದೃಷ್ಟಿಯಲ್ಲಿ ನ್ಯಾಯಸಮ್ಮತವಾಗಿ ಕಂಡುಬರುವದೆಂದು ಅವರಿಗೆ ಅನ್ನಿಸಿತ್ತು, ಮತ್ತು ಹೀಗೆ ಓಲೆಕಾರರು ಆತನನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರು. "ಆತನ ಬಾಯಿಂದ ಹೊರಟ ಇಂಪಾದ ಮಾತುಗಳಿಗೆ" ಅವರು ಮಾರುಹೋಗಿ ಆತನನ್ನು ಹಿಡಿಯದೆ ಹಿಂದಿರುಗಿ ಬಂದು, "ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ" ಎಂದು ಹೇಳಿದ್ದರು. ಆಗ ನಿಕೋದೇಮನು ಯೇಸುವು ದೇವರಿಂದ ಕಳುಹಿಸಲ್ಪಟ್ಟ ಒಬ್ಬ ಬೋಧಕನೆಂದು ಹೃದಯದಲ್ಲಿ ನಂಬಿದವನಾಗಿದ್ದರೂ ಆತನು ಮೆಸ್ಸೀಯ ನೆಂಬುದರಲ್ಲಿ ಸಂದೇಹವುಳ್ಳವನಾಗಿದ್ದು ಹಿರೀಸಭೆಯ ಸದಸ್ಯನಾಗಿ ತನ್ನನ್ನು ಸಮರ್ಥಿಸಿಕೊಂಡು ತನ್ನ ಧ್ವನಿ ಎತ್ತಿ ಓಲೆಕಾರರ ಪಕ್ಷವನ್ನು ವಹಿಸಿದವನಾಗಿ ಹೀಗೆ ಉದ್ಗಾರವೆತ್ತಿದನು: "ನಮ್ಮ ಧರ್ಮಶಾಸ್ತ್ರವು ಮೊದಲು ಒಬ್ಬನನ್ನು ವಿಚಾರಿಸಿ ಅವನು ಮಾಡುವದೇನೆಂದು ತಿಳುಕೊಳ್ಳದೆ ಅವನ ವಿಷಯವಾಗಿ ತೀರ್ಪುಮಾಡುವದುಂಟೇ?" ನ್ಯಾಯಸಮ್ಮತವಾದ ಈ ಕೋರಿಕೆಯೂ ಅವರಿಂದ "ನೀನೂ ಗಲಿಲಾಯದವನೋ?"

ಎಂಬ ವ್ಯಂಗ್ಯವಾದ ಟೀಕೆಗೊಳಗಾಯಿತು. ಆ ಸಭೆಯು ವಿಸರ್ಜಿಸಲ್ಪಟ್ಟಿತು, ಅವರು ಕೋಪವುಳ್ಳವರಾದರು ಕಾರಣ ಅವರ ಮಾರಣಾಂತಿಕವಾದ ಪ್ರಯತ್ನವು ವಿಫಲವಾಗಿತ್ತು.

ಇದುವೇ ಕರ್ತನ ಹಿಂಬಾಲಕರೆಲ್ಲರ ವಿಷಯದಲ್ಲಿಯೂ ಸಾಧ್ಯವಾದಷ್ಟು ನಿಜವಾಗಿರಬೇಕು; ಅವರ ಮಾತು ಕೃಪೆಯಿಂದ ಕೂಡಿರಬೇಕು, ಸೌಜನ್ಯದಿಂದಿರಬೇಕು, ಸತ್ಯದ ವಿಷಯವಾಗಿ ಮತ್ತು ಅದನ್ನು ಪ್ರೀತಿಸಿ ಹುಡುಕುವವರ ವಿಷಯವಾಗಿ ಅವರ ಹೃದಯವು ಪ್ರೀತಿಪೂರ್ವಕವಾದ ಸಹಾನುಭೂತಿಯುಳ್ಳದ್ದಾಗಿರಬೇಕು. ಅವರ ಮಾತುಗಳು ಯಾವಾಗಲೂ ವಿವೇಚನೆ ಮತ್ತು ನೀತಿಯ ಮಿತಿಯಲ್ಲಿದ್ದು ಅವು ಕರ್ತನ ಮಾತುಗಳಿಗೆ ಅನುಗುಣವಾಗಿರಬೇಕು. ಮತ್ತು ಅವರು ಅನುಸರಿಸುವ ವಿಧಾನಗಳು ಮತ್ತು ಅವರ ನಡವಳಿಕೆಗಳು ಸಜೀವವಾದ ಸುವಾರ್ತಾ ಪತ್ರಿಕೆಗಳಂತಿದ್ದು ಇವೆಲ್ಲವೂ ಅವುಗಳಿಗೆ ಹೊಂದಿಕೊಂಡಂತಿರಬೇಕು; ಹೀಗಾಗಿ ಅವರ ವೈರಿಗಳೂ ಅವರು ಯೇಸುವಿನೊಡನಿದ್ದು ಅತನಿಂದ ಕಲಿತವರೆಂದು ಅವರ ವಿಷಯವಾಗಿ ತಿಳಿದುಕೊಳ್ಳುವಂತಾಗುವದು.

ತನ್ನ ವೈರಿಗಳು ಮಾಡುತ್ತಿದ್ದ ಮರಣಾಂತಿಕವಾದ ಸಂಚುಗಳನ್ನು ತನ್ನ ಮನಸ್ಸಿನಲ್ಲಿಟ್ಟುಕೊಂಡವನಾಗಿ ಮನುಷ್ಯಕುಮಾರನು ಹೀಗೆ ಬಾಧೆಪಟ್ಟು ಸತ್ತವರೊಳಗಿಂದ ಎದ್ದು ಬರುವದು ಸೂಕ್ತವಾದುದಾಗಿದ್ದು ಅಲ್ಲದೆ ತನ್ನ ಇಹಲೋಕ ಯಾತ್ರೆಯು ಮುಗಿಯಲು ಕೇವಲ ಆರು ತಿಂಗಳುಗಳಿರುವದೆಂದು ತಿಳಿದು ನಮ್ಮ ಕರ್ತನು ಹೇಳಿದುದು: ನಾನು ಇನ್ನು ಸ್ವಲ್ಪ ಕಾಲ ನಿಮ್ಮಲ್ಲಿ ಇದ್ದು "ಆ ಮೇಲೆ ನನ್ನನ್ನು ಕಳುಹಿಸಿಕೊಟ್ಟಾತನ ಬಳಿಗೆ ಹೊರಟುಹೋಗುತ್ತೇನೆ." ಆ ಮೇಲೆ ಇಸ್ರಾಯೇಲಿನ ಮೇಲೆ ಮುಂದೆ ಬರಲಿರುವ ಸಂಕಷ್ಟಗಳನ್ನು ಗಣನೆಗೆ ತೆಗೆದುಕೊಂಡು ನಂತರದಲ್ಲಿ ತನ್ನ ಅಪೊಸ್ತಲರಿಗೆ ತಾನು ಮತ್ತೆ ಅವರಿಗೆ ಎರಡನೆಯ ಬರೋಣದಲ್ಲಿ ತನ್ನನ್ನು ತೋರ್ಪಡಿಸಿಕೊಳ್ಳುವವರೆಗೆ ಅವರು ಬಹು ಸಂಕಟಗಳನ್ನು ಸಹಿಸಿಕೊಳ್ಳಬೇಕಾಗುವದೆಂದು ವಿವರಿಸಿ ಹೇಳಿದನು. (ಮತ್ತಾಯ 24 ಅಧ್ಯಾಯ) ಆತನು ಮತ್ತೂ ಹೇಳಿದ್ದೇನೆಂದರೆ, "ನೀವು ನನ್ನನ್ನು ಹುಡುಕುವಿರಿ, ಆದರೆ ನನ್ನನ್ನು ಕಂಡುಕೊಳ್ಳದೆ ಹೋಗುವಿರಿ." ಯೆಹೂದ್ಯರು ಅಂದಿನಿಂದ ತಮ್ಮ ಕಷ್ಟಾನುಭವಗಳಲ್ಲಿ ಹದಿನೆಂಟು ಶತಮಾನಗಳ ಪರ್ಯಂತರವಾಗಿ ಮೆಸ್ಸೀಯನನ್ನು ಹುಡುಕುವವರಾಗಿರುವರು. ಏಕೆಂದರೆ ಅಪೊಸ್ತಲನು ಸಾರಿ ಹೇಳಿರುವಂತೆ, ಕರ್ತನ ಮೊದಲನೆಯ ಬರುವಿಕೆಯಲ್ಲಿ ಅಂದರೆ "ದೇವರು ಅವರಿಗೆ ದರ್ಶನ ಕೊಟ್ಟ ದಿನದಲ್ಲಿ" ಅತನನ್ನು ಅಂಗೀಕರಿಸಿದ ಕೆಲವರಾದವರನ್ನು (ಉಳಿದವರನ್ನು) ಹೊರತುಪಡಿಸಿದರೆ "ಮಿಕ್ಕಾದವರು ಮೊಂಡರಾದರು." ಆದುದರಿಂದ ನಂತರದಲ್ಲಿ ನಮ್ಮ ಕರ್ತನು ಅವರಿಗೆ ಪ್ರಕಟಿಸಿ ಹೇಳಿದ್ದು: "ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವ ತನಕ ನೀವು ನನ್ನನ್ನು ನೋಡುವದೇ ಇಲ್ಲ..." ಆನಂತರ ಅವರು ತಾವು ಇರಿದವನನ್ನು ದಿಟ್ಟಿಸಿ ನೋಡುವರು; ಇದ್ದೊಬ್ಬ ಮಗನನ್ನು ಕಳೆದುಕೊಂಡಂತೆ ಅವನಿಗಾಗಿ ಗೋಳಾಡುವರು; ಆನಂತರ ದೇವರ ದಯೆಯನ್ನು ಹಂಬಲಿಸಿ ಬೇಡುವ ಭಾವವು ಅವರ ಮೇಲೆ ಸುರಿಸಲ್ಪಡುವದು, ಮತ್ತು ಆಗ ಅವರ ಭಕ್ತಿಹೀನತೆಯು (ಮೊಂಡತನವು ಅಥವಾ ಕುರುಡುತನ) ನಿವಾರಣೆಯಾಗುವದು. – ರೋಮಾ. 11:27–32

ನಮ್ಮ ಕರ್ತನು ತಾನು ಹೋಗುವ ಸ್ಥಳಕ್ಕೆ ಅವರು ತನ್ನ ಹಿಂದೆ ಬರಲು ಸಾಧ್ಯವಿಲ್ಲವೆಂದು ಪ್ರಕಟಮಾಡಿ ಹೇಳಿದಾಗ ಆತನು ಇಸ್ರಾಯೇಲಿನ ಕೀಳು ವರ್ಗಕ್ಕೆ (ಸುಂಕದವರಿಗೆ ಮತ್ತು ಪಾಪಿಗಳಿಗೆ) ಉಪದೇಶಮಾಡಲು ಇಚ್ಛೆಯುಳ್ಳವನಾಗಿರುವದಿಂದ ಆತನು ಈಗ ಪಾಲೆಸ್ತೀನಾವನ್ನು ಬಿಟ್ಟು "ಅನ್ಯಜನರಲ್ಲಿ ಚದರಿಕೊಂಡಿರುವವರಿಗೆ" ಅಂದರೆ ಗ್ರೀಕರೊಳಗೆ ಚದರಿಕೊಂಡಿರುವ ಯೆಹೂದ್ಯರ ಬಳಿಗೆ ಹೋಗುವನೇನೋ ಎಂದು ಊಹಿಸುವವರಾಗಿದ್ದರು. ಇವರು ಗ್ರೀಕ್ ಭಾಷೆಯನ್ನು ಮಾತನಾಡುವವರು ಪಾಲಿಸ್ತೇನಾದ ಸಿರಿಯ ಭಾಷೆಯನ್ನಲ್ಲ. ಇಲ್ಲಿ ನಾವು "ಕಳೆದುಹೋದ" (?) ಇಸ್ರಾಯೇಲ್ ಕುಲವೆಂಬ ಸಿದ್ಧಾಂತವನ್ನು ಪ್ರತಿಪಾದಿಸುವವರಿಂದ ಆಗುತ್ತಿರುವ "ಆಂಗ್ಲ–ಇಸ್ರಾಯೇಲ್ಯರು" ಎಂದು ಕರೆಯಲಾಗುವ ಹೊಸದಾದ ತಪ್ಪನ್ನು ನಾವು ನೋಡುತ್ತೇವೆ. ಚದರಿಕೊಂಡಿರುವ ಯೆಹೂದ್ಯರು ಯೇಸುವಿನ ಸಮಯದಲ್ಲಿ ಕಳೆದುಹೋದವರೆಂದು ಇನ್ನೂ ಸ್ಪಷ್ಟವಾಗಿ ಪರಿಗಣಿಸಲ್ಪಟ್ಟಿರಲಿಲ್ಲ; ಜನರ ಗುಂಪಿನ ಈ ಹೇಳಿಕೆಯು "ಚದರಿರುವ (ಇಸ್ರಾಯೇಲ್) ಹನ್ನೆರಡು ಕುಲಗಳು" ಎಂಬ ಅಪೊಸ್ತಲನ ಹೇಳಿಕೆಗೆ ಪೂರ್ಣವಾಗಿ ಸರಿಹೊಂದುತ್ತದೆ. ಈ ಕುಲಗಳು ಕಳೆದು ಹೋಗಿರುವದೆಂಬ ಒಂದೇ ಒಂದು ಅರ್ಥವೆಂದರೆ ಅವರು ಎಷ್ಟು ಸಂಪೂರ್ಣವಾಗಿ ಬೆರೆತು ಮಿಶ್ರಣಗೊಂಡಿರುವರೆಂದರೆ ಅವರ ಕುಲದ ವೈಶಿಷ್ಟ್ಯತೆಯು ಸಂಪೂರ್ಣವಾಗಿ ಕಳೆದುಹೋಗಿದ್ದು, ಈ ದಿನಗಳಲ್ಲಿ ಪ್ರಪಂಚದಲ್ಲಿನ ಕೆಲವೇ ಕೆಲವು ಯೆಹೂದ್ಯರು ತಮ್ಮ ಪೂರ್ವಜರು ಯಾವ ಕುಲಕ್ಕೆ ಸೇರಿರುವರೆಂಬುದರ ಬಗ್ಗೆ ಅತ್ಯಲ್ಪವಾದ ಕಲ್ಪನೆಯನ್ನು ಹೊಂದಿರುವರು.

"ನಾನು ಇರುವಲ್ಲಿಗೆ ನೀವು ಬರಲಾರಿರಿ.." ಎಂಬ ನಮ್ಮ ಕರ್ತನ ಟೀಕೆಯು ಇನ್ನೊಂದು ದೃಷ್ಟಿಯಿಂದ ಪರಿಗಣನೆಮಾಡಲು ಯೋಗ್ಯವಾದುದು. ತಾನು ಆ ರಾಜ್ಯವನ್ನು ಸ್ಥಾಪಿಸುವುದರಲ್ಲಿ – ದ್ದೇನೆಂಬುದು ಆತನ ಅರ್ಥವಾಗಿರಲಿಲ್ಲ, ಆದರೆ ತಾನು ಪರಲೋಕಕ್ಕೆ ಹೋಗುವನೆಂದೂ ಹಾಗು ಅವರು ಪರಲೋಕಕ್ಕೆ ಬರಲು ಸಾಧ್ಯವಿಲ್ಲವೆಂಬ ಅರ್ಥವೂ ಆಗಿರಲಿಲ್ಲ. ಆತನ ಈ ಮುಂದಿನ ಹೇಳಿಕೆಯಲ್ಲಿ ಇದು ಸ್ಪಷ್ಟವಾಗಿತ್ತು: "ನೀವು ಕೆಳಗಿನವರು, ನಾನು ಮೇಲಿನವನು; ನೀವು ಈ ಲೋಕದವರು, ನಾನು ಈ ಲೋಕದವನಲ್ಲ. ಆದದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದೆನು." ಯೋಹಾನ 8:21–29

ಆದರೆ ಕೇವಲ ಬಡವರಾದ ಆ ಅಪನಂಬಿಕೆಯುಳ್ಳ ಯೆಹೂದ್ಯರು ಮಾತ್ರ ಪರಲೋಕಕ್ಕೆ ಹೋಗಲು ಸಾಧ್ಯವಾಗಿರಲಿಲ್ಲ. ಸತ್ಯವೇದವು ಸ್ಪಷ್ಟವಾಗಿ ಸೂಚಿಸುವಂತೆ ಅಬ್ರಹಾಮ ಇಸಾಕ ಮತ್ತು ಯಾಕೋಬ ಅಲ್ಲದೆ ಎಲ್ಲಾ ಪರಿಶುದ್ಧ ಪ್ರವಾದಿಗಳೂ ಅಲ್ಲಿಗೆ ಹೋಗಿರುವದಿಲ್ಲ. (ಅ.ಕೃ. 2:34; ಇಬ್ರಿಯ 11:39–40 ನೋಡಿ) ಇದು ಮಾತ್ರವಲ್ಲದೆ, ಇದೇ ಹೇಳಿಕೆಯನ್ನು ಕರ್ತನು

ನಂಬುವವರಾದ ತನ್ನ ಶಿಷ್ಯರಿಗೆ ಪುನಃ ತಿಳಿಸಿದ್ದನು: "ಇನ್ನು ಸ್ವಲ್ಪಕಾಲವೇ ನಾನು ನಿಮ್ಮ ಸಂಗಡ ಇರುತ್ತೇನೆ. ನನ್ನನ್ನು ಹುಡುಕುವಿರಿ, ಆದರೆ ನಾನು ಹೋಗುವಲ್ಲಿಗೆ ನೀವು ಬರಲಾರಿರಿ ಎಂದು ನಾನು ಯೆಹೂದ್ಯರಿಗೆ ಹೇಳಿದಂತೆ ನಾನು ನಿಮಗೂ ಹೇಳುತ್ತೇನೆ." (ಯೋಹಾನ 13:33) ಅದು ಏಕೆಂದರೆ ಹಿಂದಿನ ಕಾಲದಲ್ಲಿ ನಂಬಿದವರು ಮಾತ್ರವಲ್ಲದೆ ಈಗಿನ ಕಾಲದಲ್ಲಿ ನಂಬಿದವರೂ ಸಹ ಕರ್ತನ ಬಳಿಗೆ ಹೋಗಲು ಸಾಧ್ಯವಿರಲಿಲ್ಲ; ಆತನ ವಾಕ್ಯದಿಂದ ಸೂಕ್ತವಾದ ತಿಳುವಳಿಕೆ ಹೊಂದಿರುವವರೆಲ್ಲರೂ ಆತನು ಹಿಂದಿರುಗಿ ಬರುವದನ್ನು ಅಂದರೆ ಆತನ ಎರಡನೇ ಬರೋಣವನ್ನು, ಅಂದರೆ ತನ್ನ ವಾಗ್ದಾನಾನುಸಾರವಾಗಿ ಆತನು ಪ್ರಭಾವದಿಂದ ಕೂಡಿ ರಾಜ್ಯಾಧಿಕಾರವನ್ನು ಪಡಕೊಂಡವನಾಗಿ ಬರುವದನ್ನು ಶ್ರದ್ಧೆಯಿಂದ ಎದುರು ನೋಡುತ್ತಲಿರುವರು. "ನಾನು ...ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕೆಂದರೆ ನಾನಿರುವ ಸ್ಥಳದಲ್ಲಿ ನೀವೂ ಸಹ ಇರಬೇಕು." ಯೋಹಾನ 14:3

ಅನೇಕರು ಸುವಾರ್ತೆಯಲ್ಲಿ ನಮ್ಮ ಮುಂದಿಟ್ಟಿರುವ ನಿರೀಕ್ಷೆಯ ಮೇಲಿನ ತಮ್ಮ ದೃಷ್ಟಿಯನ್ನು ಕಳಕೊಂಡವರಾಗಿದ್ದು ಇದರ ಬದಲಾಗಿ ಯಾವ ಆಧಾರವೂ ಇಲ್ಲದಂಥ ಒಂದು ನಿರೀಕ್ಷೆಯನ್ನು ಅಂಗೀಕರಿಸಿರುವರು. ತಮ್ಮ ಹಿರಿಯರಿಂದ ಬಂದ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದ ಶಾರೀರಿಕ ಸಂಬಂಧದ ಇಸ್ರಾಯೇಲ್ಯರು ಮಾಡುತ್ತಿದ್ದ ರೀತಿಯ ತಪ್ಪುಗಳನ್ನು ಹೊರತು ಪಡಿಸಿದರೆ ಇವರ ನಿರೀಕ್ಷೆಯು: ತಾವು ಸತ್ತಾಗ ಅವರು ನಿಜವಾಗಿಯೂ ಸತ್ತುಹೋಗಿರುವದಿಲ್ಲ ಆದರೆ ಎಂದಿಗಿಂತಲೂ ಇನ್ನೂ ಅಧಿಕವಾಗಿ ಜೀವಂತರಾಗಿರುವರೆಂಬ ಅಂಶದ ಮೇಲಿರುವದು; ಇದು ದೇವರ ವಾಕ್ಯದಲ್ಲಿನ ಅಭಿಪ್ರಾಯಗಳಿಗೆ ವಿರೋಧವಾಗಿದ್ದು ಇದಕ್ಕೆ ಆಧಾರವಾಗಿ ಒಂದೇ ಒಂದು ವಾಕ್ಯವಾದರೂ ಸಿಕ್ಕಲಾರದು. "ಆತನ ಮೇಲೆ ಈ ನಿರೀಕ್ಷೆಯನ್ನಿಟ್ಟಿರುವ [ತನ್ನವರನ್ನು ಸ್ವಕೀಯ ಜನರನ್ನಾಗಿ ಮಾಡಿಕೊಳ್ಳುವಸಲುವಾಗಿ ಅಂದರೆ ತನಗೆ ನಂಬಿಗಸ್ತರಾದವರನ್ನು ತನ್ನ ಬಳಿಯಲ್ಲಿ ಸೇರಿಸಿಕೊಳ್ಳಲು ಕರ್ತನು ಎರಡನೆಯ ಸಾರಿ ಬರುವದರ ವಿಷಯದ ಮೇಲಿನ ನಿರೀಕ್ಷೆ] ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ." ನಂಬಿಗಸ್ತಿಕೆಗಾಗಿ ಇರುವ ಈ ಪ್ರೋತ್ಸಾಹಕ್ಕಿಂತಲೂ ಮಿಗಿಲಾದದ್ದು ಬೇರೊಂದಿಲ್ಲ; ಸುವಾರ್ತೆಯಲ್ಲಿನ ನಿಜವಾದ ನಿರೀಕ್ಷೆಯು ಇದೇ.

ಪರ್ಣಶಾಲೆಗಳ ಹಬ್ಬದ ಕಡೆಯ ದಿನವು ಎಂಟನೆಯ ದಿನವಾಗಿತ್ತು; ಏಕೆಂದರೆ ಅದು ಆ ಹಬ್ಬದ ಕಾಲಗಳಲ್ಲಿನ ಕಡೆಯ ಆಚರಣೆಯಾಗಿತ್ತು. ಹಬ್ಬದ ಏಳು ದಿನಗಳು ಯಜ್ಞಗಳಿಗಾಗಿ ಮುಡುಪಾಗಿಡುತ್ತಿದ್ದು, ಎಪ್ಪತ್ತು ಹೋರಿಗಳು ಯಜ್ಞವೇದಿಯ ಮೇಲೆ ದಹಿಸಲ್ಪಟ್ಟು ಅದು ಲೋಕದವರೆಲ್ಲರ ಪರವಾಗಿ ಯಜ್ಞಾರ್ಪಿತವಾದ್ದೆಂದು ತಿಳಿಯಲಾಗಿತ್ತು. ಎಂಟನೆಯ ದಿನವು ವಿಶೇಷವಾಗಿ ಯೆಹೂದ್ಯರಿಗಾಗಿದ್ದು ಈ ಕೃತಜ್ಞತಾರ್ಪಣೆಯ ಸಂತೋಷಕರವಾದ ಹಬ್ಬದಲ್ಲಿನ ಅತಿ ಸಂತೋಷಕರ ದಿನವಾಗಿತ್ತು. ಇದನ್ನು ವರ್ಣಿಸುತ್ತಾ ಗೀಕೆ ಎನ್ನುವವರು ಹೀಗೆ ಹೇಳಿರುವರು"

"ಇಡೀ ವಾರವೆಲ್ಲವೂ ಉತ್ಸಾಹಭರಿತವಾಗಿರುತ್ತಿತ್ತು, ಆ ಮಹಾ ಯಜ್ಞವೇದಿಯಿಂದ ಬೆಳಗಿನ ಹಾಗು ಸಂಜೆಯ ಯಜ್ಞಾರ್ಪಣೆಗಳೂ, ಸಬ್ಬತ್ ದಿನದ ಅರ್ಪಣೆಗಳಲ್ಲದೆ ವೈಯುಕ್ತಿಕವಾಗಿ ಸ್ವೇಚ್ಛೆಯಿಂದ ಅರ್ಪಿಸಲಾದ ಅಸಂಖ್ಯ ಯಜ್ಞಾರ್ಪಣೆಗಳ ಜೊತೆಗೆ ಹೋರಿಗಳ ಕುರಿಗಳ ಟಗರುಗಳ ಸರ್ವಾಂಗ ಹೋಮದ ಹೊಗೆಯು ಏರುತ್ತಿತ್ತು. ಯೆರೂಸಲೇಮಿನೊಳಗೆ ಲಭ್ಯವಿರುವ ಪ್ರತಿಯೊಂದು ಸ್ಥಳದಲ್ಲಿಯೂ ಅಲ್ಲದೆ ಅದರ ಸುತ್ತಲಿರುವ ತಗ್ಗು ಇಳಿಜಾರು ಪ್ರದೇಶಗಳೆಲ್ಲವೂ (ಇವು ಧರ್ಮನಿಯಮದ ಕಲ್ಪನಾನುಸಾರವಾಗಿ ಪರಿಶುದ್ಧಸ್ಥಳವೆಂದು ಎಣಿಸಲ್ಪಟ್ಟಿದ್ದು) ಮರದ ಕೊಂಬೆಗಳು ಖರ್ಜೂರದ ಗರಿಗಳು ಹಾಗು ಸಕಲವಿಧವಾದ ಅಲಂಕಾರಿಕ ಸಸ್ಯಗಳು ಇವುಗಳಿಂದ ಮಾಡಿದ ತಡಿಕೆಗಳ ಮತ್ತು ಸಣ್ಣಕೊಂಬೆಗಳ ಮಡಿಕೆಗಳನ್ನು ಒಳಗೊಂಡ ಗುಡಿಸಲುಗಳು ಅಥವಾ ಗುಡಾರಗಳಿಂದ ಆವರಿತವಾಗಿರುತ್ತಿದ್ದವು."

ಆದರೆ ಹಬ್ಬದ ಮಹಾದಿನವೆಂದು ಕರೆಯಲ್ಪಡುವ ಅದರ ಕಡೆಯ ದಿನವು ವಿಶೇಷವಾಗಿ ಉಲ್ಲಾಸಪಡುವ ದಿನವಾಗಿದ್ದು ಒಂದು ವಿಶಿಷ್ಟವಾದ ಆಚರಣೆಯನ್ನು ಅಂದರೆ ನೀರಿನ ಅರ್ಪಣೆಯನ್ನು ಮಾಡುವದನ್ನು ಒಳಗೊಂಡಿದ್ದು ಈ ದಿನದಲ್ಲಿಯೇ ಬಹುಶಃ ಈ ನೀರನ್ನು ತರ್ಪಣವಾಗಿ ಎರಚುವ ಆಚಾರವಿಧಿಯ ಸಮಯದಲ್ಲಿ ಇದನ್ನೇ ಪಾಠದ ನಿದರ್ಶನವಾಗಿ ತೆಗೆದುಕೊಂಡು ನಮ್ಮ ಕರ್ತನು ಸ್ವರವೆತ್ತಿ ಹೀಗಂದನು: "ಯಾರಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ." ಆತನು ಸಮಾರ್ಯದ ಹೆಂಗಸಿನೊಡನೆ ಏಕಾಂತವಾಗಿ ಸಂಭಾಷಿಸಿದ ವಿಷಯವನ್ನು ಇಲ್ಲಿ ತಾನು ಜೀವಜಲವನ್ನು ದಯಪಾಲಿಸುವವನಾಗಿರುವನೆಂದು ತನ್ನನ್ನು ಬಹಿರಂಗವಾಗಿ ನಿರೂಪಿಸಿಕೊಂಡಿದ್ದನು. ತನ್ನನ್ನು ಅಂಗೀಕರಿ – ಸುವವನಿಗೆ ಆತನು ಜೀವದ ಬುಗ್ಗೆ, ಸತ್ಯಾರ್ಥಗಳನ್ನು ಚಿಮ್ಮಿಸುವ ಬುಗ್ಗೆ, ಪುನಶ್ಚೇತನಗೊಳಿಸುವ ಬುಗ್ಗೆಯಾಗಿದ್ದನು. ಪ್ರತಿಯೊಂದು ಮಾನವ ಹೃದಯಗಳಲ್ಲಿಯೂ ಬಾಯಾರಿಕೆಗಳು ಅಂದರೆ ಹಂಬಲ ಬಯಕೆಗಳು ಇರುತ್ತವೆ; ಈ ಬಯಕೆಗಳನ್ನು ಲೌಕಿಕವಾದ ಬುಗ್ಗೆಯಂತಿರುವ ಕೀರ್ತಿ ಅಥವಾ ಉಲ್ಲಾಸ ವಿನೋದಗಳ ಇಲ್ಲವೇ ಸಂಪತ್ತುಗಳ ಮೂಲಕವಾಗಿ ತೃಪ್ತಿಪಡಿಸಿಕೊಳ್ಳಲು ಯತ್ನಿಸುವವರೆಲ್ಲರೂ ಇವು ಯಾವದೂ ತೃಪ್ತಿತರಲಾರವೆಂಬುದನ್ನು ಕಂಡುಕೊಳ್ಳುವರು; ಆದರೆ ಯಾರು ಜೀವಜಲವನ್ನು ಅಂದರೆ ಸತ್ಯವನ್ನು ಕ್ರಿಸ್ತನಲ್ಲಿರುವ ದೇವರ ಕೃಪೆಯನ್ನು ಪಡೆದುಕೊಂಡಿರುವರೋ ಅವರು ಕೇವಲ ತೃಪ್ತಿದಾಯಕವಾದಂಥದನ್ನು ಪಡಕೊಂಡಿರುವರು. ಕರ್ತನೇ ಈ ನೀರನ್ನು ನಮಗೆ ಯಾವಾಗಲೂ ಕೊಡುತ್ತಿರು.

ಒಬ್ಬ ಸಮರ್ಥ ಲೇಕಖರಾಗಿ ಎಡರ್ಷೀಮ್ ಎಂಬವರು ಪರ್ಣಶಾಲೆಗಳ ಹಬ್ಬದ ಕಡೆಯ ಮಹಾ ದಿನದ ವಿಷಯವಾಗಿ ಈ ಮುಂದಿನ ಕೂತೂಹಲಕಾರೀ ವಿವರಗಳನ್ನು ನಮಗೆ ಒದಗಿಸಿರುತ್ತಾರೆ:–

"ಪರ್ಣಶಾಲೆಗಳ ಹಬ್ಬದ ಕಡೆಯ ಮಹಾ ದಿನದಂದು ಆರಾಧನೆಯಲ್ಲಿ ಭಾಗವಹಿಸಲು ಬೆಳಿಗ್ಗೆ ಸೂರ್ಯೋದಯವಾಗುವಾಗ ತಮ್ಮ "ಪರ್ಣಶಾಲೆಗಳಿಂದ" ಹೊರಬರುತ್ತಿರುವವ

ರಲ್ಲಿ ನಮ್ಮನ್ನು ಒಬ್ಬರನ್ನಾಗಿ ಭಾವಿಸಿಕೊಳ್ಳೋಣ. ಯಾತ್ರಿಕರೆಲ್ಲರು ಹಬ್ಬದ ಪೋಶಾಕಿನಲ್ಲಿರುವರು. ಪ್ರತಿಯೊಬ್ಬನೂ ತನ್ನ ಬಲಗೈಯಲ್ಲಿ ನೀರಿನ ಕಾಲಿವೆಗಳ ಬಳಿ ಬೆಳೆಯುವ ನೀರವಂಜಿ ಜಿಗುರನ್ನು ಖರ್ಜೂರದ ಗರಿಗಳಿಗೆ ಕಟ್ಟಿರುವ ಕೊಂಬೆಗಳನ್ನು ಹಿಡಿದುಕೊಂಡಿರುವನು. (ಯಾಜಕಕಾಂಡ 23:40) ತನ್ನ ಎಡಗೈಯಲ್ಲಿ ಅವನು ನಿಂಬೆಯ ಜಾತಿಗೆ ಸೇರಿರುವ ಒಂದು ಬಗೆಯ ಸೇಬಿನ ಹಣ್ಣಿನ ಮರದ ರೆಂಬೆಯನ್ನು ಹಿಡಿದವನಾಗಿರುವನು. ಹೀಗೆ ಸಜ್ಜಿತವಾದ ಹಬ್ಬದ ಗುಂಪು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳುವರು. ಇವರಲ್ಲಿ ಒಂದು ಗುಂಪು ವಾದ್ಯದ ಶಬ್ಧವಾದೊಡನೆ ಮೆರವಣಿಗೆಯಾಗಿ ದೇವಾಲಯದಿಂದ ಹೊರಡುವದು. ಅದು ಮೂರು ಸೇರು ಹಿಡಿಸುವ (ಅಂದರೆ ಸುಮಾರು ಎರಡು ಪಿಂಟ್) ಚಿನ್ನದ ಹೂಜಿಯನ್ನು ಹಿಡಿದಿರುವ ಒಬ್ಬ ಯಾಜಕನನ್ನು ಹಿಂಬಾಲಿಸುವದು. ಅವರು ದೇವಾಲಯದ ದಕ್ಷಿಣದ ತಗ್ಗಿನಲ್ಲಿರುವ ಶಿಲೋವ ಕೊಳಕ್ಕೆ ಸಾಗುವರು. ಇಲ್ಲಿನ ಬುಗ್ಗೆಯಿಂದ ಚಿನ್ನದ ಹೂಜಿಯಲ್ಲಿ ಯಾಜಕನು ನೀರುತುಂಬಿ ಕೊಳ್ಳುವನು ಮತ್ತು ಅಲ್ಲಿಂದ ಹಿಂದಿರುಗಿ ತಾಳ ವಾದ್ಯ ತುತ್ತೂರಿ ಧ್ವನಿ ಆನಂದ ಘೋಷಗಳ ನಡುವೆ ಆ ಹೂಜಿಯನ್ನು ದೇವಾಲಯದ ಅಂಗಳಕ್ಕೆ ತರುವನು. ಆ ಉಲ್ಲಾಸವು ಎಷ್ಟು ವಿಶೇಷವೆಂದರೆ, ಇತರ ಸಮಾರಂಭಗಳಿಗಿಂತಲೂ ವಿಭಿನ್ನ ವಾಗಿರುವ ಈ ಹಬ್ಬದ ಸಮಾರಂಭಕ್ಕೆ ಯಾರು ಎಂದೂ ಹೋಗಿರುವದಿಲ್ಲವೋ ಅವರಿಗೆ ಉಲ್ಲಾಸಿಸುವ ಅರ್ಥವೇ ತಿಳಿಯದೆಂದು ಅವರ ಧರ್ಮಬೋಧಕರುಗಳು (ರಬ್ಬಿಗಳು) ಹೇಳುತ್ತಿದ್ದರು. ಹಿಂದಿರುಗುವ ಆ ಕಾಲವನ್ನು ಎಷ್ಟು ನಿಖರವಾಗಿ ನಿರ್ಧರಿಸಿರುತ್ತಿದ್ದರೆಂದರೆ ಬೆಳಗಿನ ಸರ್ವಾಂಗ ಹೋಮದ ಪಶುವಿನ ಭಾಗಗಳನ್ನು ಆ ಮಹಾ ವೇದಿಯ ಮೇಲೆ ಜೋಡಿಸುವ ಸಮಯಕ್ಕೆ ಸರಿಯಾಗಿ ಬೆಳಗಿನ ಸಾಮಾನ್ಯ ಆರಾಧನೆ ಮುಗಿಯವಾಗ ಅವರು ಅಲ್ಲಿಗೆ ತಲುಪುತ್ತಿದ್ದರು. ಚಿನ್ನದ ಹೂಜಿಯಲ್ಲಿ ತಂದ ನೀರನ್ನು ವೇದಿಯ ಮೇಲೆ ಎರಚುತ್ತಿದ್ದರು. ಕೂಡಲೇ ಕೀರ್ತನೆ 113 ರಿಂದ 118 ಅಧ್ಯಾಯಗಳಲ್ಲಿನ ಮಹಾ ಸ್ತುತಿಗೀತವನ್ನು ಉತ್ತರ ಪ್ರತ್ಯುತ್ತರವಾಗಿ ಕೊಳಲು ವಾದ್ಯದೊಂದಿಗೆ ಪಠಣಮಾಡಲಾಗುತ್ತಿತ್ತು. ಈ ಹಬ್ಬದ ಬೆಳಗಿನ ಆರಾಧನೆಯ ಮುಕ್ತಾಯದಲ್ಲಿ ಆ ದಿನದ ವಿಶೇಷ ಯಜ್ಞಾರ್ಪಣೆಗೆ ಯಾಜಕರುಗಳು ಸಿದ್ಧಮಾಡಿಕೊಳ್ಳುವಾಗ ಸ್ವಲ್ಪ ಬಿಡುವು ಇರುತ್ತಿತ್ತು. ಈ (ಬಿಡುವಿನ) ಸಂದರ್ಭದಲ್ಲಿ ಆ ದೇವಾಲಯದಲ್ಲೆಲ್ಲಾ ಕೇಳುವ ಹಾಗೆ ಒಂದು ದೊಡ್ಡ ಸ್ವರವು ಕೇಳಿಬಂತು, ಅದು ಯೇಸುವಿನ ಸ್ವರ. ಆತನು ಆರಾಧನೆಯಲ್ಲಿ ಮಧ್ಯಪ್ರವೇಶಿಸಿರಲಿಲ್ಲ, ಯಾಕೆಂದರೆ ಆಗ ಅದು ಅಲ್ಲಿ ಸ್ವಲ್ಪ ಸಮಯ ನಿಲ್ಲಿಸಲ್ಪಟ್ಟಿತ್ತು; ಆಗ ಆತನು ಅವುಗಳ ಅರ್ಥವಿವರಣೆಯನ್ನು ನೀಡುವವನಾಗಿ ಅವುಗಳನ್ನು ಆತನು ನೆರವೇರಿಸಿದನು."

*****

# ಪರ್ಣಶಾಲೆಗಳ ಹಬ್ಬ

**ರೀಪ್ರಿಂಟ್ಸ್ ಪುಟ 3508**

## ಯೋಹಾನ 7:37–46

**"ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ"**

ಯೆಹೂದ್ಯರ ಎರಡು ದೊಡ್ಡ ಹಬ್ಬಗಳು ಯಾವುವೆಂದರೆ, ಮೊದಲನೆಯ ತಿಂಗಳಿನ ಹದಿನೈದನೇ ದಿನದಿಂದ ಇಪ್ಪತ್ತೊಂದನೇ ದಿನದ ವರೆಗೆ ನಡೆಯುವ ಪಸ್ಕಹಬ್ಬ ಮತ್ತು ಏಳನೇ ತಿಂಗಳಿನ ಹದಿನೈದನೇ ದಿನದಿಂದ ಇಪ್ಪತ್ತೆರಡನೇ ದಿನದವರೆಗೆ ನಡೆಯುವ ಪರ್ಣಶಾಲೆಗಳ (ಗುಡಾರದಲ್ಲಿ ವಾಸಿಸುವ) ಹಬ್ಬ. ಇದು ಅಕ್ಟೋಬರ್ ತಿಂಗಳಿನ ಒಂದನೇ ದಿನಾಂಕದ ಸಮೀಪದಲ್ಲಿ ಬೀಳುತ್ತದೆ. ಆದರೆ ಅದು ಚಾಂದ್ರಮಾನ ಕಾಲಗಣನೆಯ ಅನುಸಾರವಾಗಿರುವ ಯೆಹೂದ್ಯರ ಕಾಲಗಣನೆಯ ಪ್ರಕಾರ ಬದಲಾಗುತ್ತಿರುತ್ತದೆ. ಈ ಎರಡು ದೊಡ್ಡ ಹಬ್ಬಗಳು ಯೆಹೂದ್ಯರ ವರುಷದ ಕಾಲವನ್ನು ವಿಭಾಗಿಸಿದ್ದು ಜನರು ದೇಶದ ಎಲ್ಲಾ ಕಡೆಯಿಂದ ರಾಜಧಾನಿಯಾದ ಯೆರೂಸಲೇಮಿಗೆ ಭೇಟಿನೀಡಿ ಒಂದು ವಾರ ಅನ್ಯೋನ್ಯತೆಯಲ್ಲಿದ್ದು ದೇವರಿಗೆ ಕೃತಜ್ಞಾರ್ಪಣೆಗಳನ್ನು ಸಲ್ಲಿಸಿ ಅತನಿಗೆ ಹರಕೆ ಮಾಡಿಕೊಳ್ಳುವದನ್ನು ಅಪೇಕ್ಷಿಸುವ ಸಂದರ್ಭಗಳಾಗಿದ್ದವು. ಈ ಎರಡು ದೊಡ್ಡ ಹಬ್ಬಗಳು ವರುಷದ ಆರಂಭವನ್ನು ಸೂಚಿಸುತ್ತಿದ್ದವು; ಒಂದು ಸಾರ್ವಜನಿಕ ಪಂಚಾಂಗವನ್ನು ಮತ್ತೊಂದು ಸಭೆಯ (ಧಾರ್ಮಿಕ) ಪಂಚಾಂಗವನ್ನು ಸೂಚಿಸುವವುಗಳಾಗಿದ್ದವು. ಆದರೂ ಸಂಪೂರ್ಣವಾಗಿ ಆಡಳಿತವು ಧಾರ್ಮಿಕವಾದ ತಳಹದಿಯ ಮೇಲೆ ನಿರ್ಮಾಣಗೊಂಡಿರಲಾಗಿ ಇವು ಒಂದು ಅರ್ಥದಲ್ಲಿ ಧಾರ್ಮಿಕವಾದುದೆಂದು ಹೇಳಬಹುದಾಗಿತ್ತು. ಇಸ್ರಾಯೇಲು ದೇವರಿಗೆ ಸಂಬಂಧಿಸಿದ ಜನಾಂಗವಾಗಿತ್ತು ಮತ್ತು ಅದರ ಆಜ್ಞಾವಿಧಿಗಳು ಆತನಿಂದ ಬಂದವುಗಳಾಗಿದ್ದವು.

ಈ ಪ್ರತಿಯೊಂದು ಹಬ್ಬವೂ ವಿಶಿಷ್ಟವಾದ ಧಾರ್ಮಿಕ ಯಜ್ಞಾರ್ಪಣೆಗಳನ್ನು ಒಳಗೊಂಡವುಗಳಾಗಿ ಇವು ನಮ್ಮ ಕರ್ತನನ್ನು ಮತ್ತು ಆತನ ಯಜ್ಞವನ್ನು ಮತ್ತು ಆತನ ದೇಹವಾಗಿರುವ ಸುವಾರ್ತಾಯುಗದ ಸಭೆಯ ವಿಷಯವಾಗಿ ಸೂಚಿಸುವವುಗಳಾಗಿದ್ದವು. ವರುಷದ ಆರಂಭದಲ್ಲಿನ ಪಸ್ಕಹಬ್ಬವು ಐಗುಪ್ತದಿಂದ ಬಿಡುಗಡೆಯಾದುದರ ವಾರ್ಷಿಕಾಚರಣೆಯಾಗಿದ್ದು ನಮ್ಮ ಪಸ್ಕದ ಯಜ್ಞದ ಕುರಿಯಾದ ಕ್ರಿಸ್ತನನ್ನು ಮತ್ತು ನಂತರದ ಹಬ್ಬದ ಸಂಭ್ರಮಾಚರಣೆಯು ಕರ್ತನ ಜನರೆಲ್ಲರಿಗೆ ಆತನ ರಕ್ತದ ಮೇಲಿನ ನಂಬಿಕೆಯ ಮೂಲಕವಾಗಿ ಲಭಿಸುವ ಸ್ವಾತಂತ್ರ್ಯ ಸಂತೋಷ ಮತ್ತು ಆಶೀರ್ವಾದಗಳನ್ನು ಸೂಚಿಸುತ್ತಿತ್ತು. ಹಿಮಕಾಲದಲ್ಲಿ ನಡೆಯುವ ಹಬ್ಬವು ದೋಷಪರಿಹಾರ ಮಹಾ ದಿನವನ್ನು ಹಾಗು ಅದರ ಪಾಪನಿವಾರಣಾರ್ಥವಾದ ಬಲಿಗಳು ಸುವಾರ್ತಾಯುಗದಲ್ಲಿ ನಡೆಯುವ ಉತ್ತಮವಾದ ಯಜ್ಞಗಳನ್ನು

ಮತ್ತು ಕಡೆಯಲ್ಲಿ ಸಮಸ್ತ ಲೋಕದ ಪಾಪ ನಿವಾರಣೆಯನ್ನು ಹಾಗು ಅದರ ಫಲವಾಗಿ ಅಂತ್ಯದಲ್ಲಿ ಮಾನವಕುಲದ ಮೇಲೆ ಈಗಲೂ ನೆಲೆಗೊಂಡಿರುವ ಶಾಪ ತೆಗೆದುಹಾಕುವದನ್ನು ಛಾಯಾರೂಪದಲ್ಲಿ ನಿದರ್ಶಿಸುವದು. ಇಸ್ರಾಯೇಲ್ಯರು ಅರಣ್ಯದ ಮೂಲಕವಾಗಿ ವಾಗ್ದತ್ತ ದೇಶಕ್ಕೆ ದಾಟಿಹೋದ ಸಮಯದಲ್ಲಿ ಈ ಹಬ್ಬದ ಆಚರಣೆಯನ್ನು ನೇಮಿಸಲಾಗಿತ್ತು. ಅದು ಅರಣ್ಯ ಜೀವಿತವನ್ನು ಮತ್ತು ಕಾನಾನ್ ದೇಶವನ್ನು ಪ್ರವೇಶಿಸಿ ಅದರಲ್ಲಿನ ಬಾಧ್ಯತೆಯನ್ನು ಹಾಗೂ ಬಹು ವಿಸ್ತಾರವಾದ ವಾಸಸ್ಥಳಗಳನ್ನು ಅನುಭೋಗಿಸುವ ಸೌಭಾಗ್ಯವನ್ನು ಪಡೆದದ್ದರ ಸ್ಮರಣಾರ್ಥ ವಾಗಿತ್ತು. ಅದು ನಿಜವಾಗಿಯೂ ಹೊಸ ವರುಷದಾಚರಣೆಯ ಹಬ್ಬವಾಗಿದ್ದು ಆ ವರುಷದಲ್ಲಿನ ಫಲಗಳನ್ನು ಒಟ್ಟುಗೂಡಿಸಿ ಒಂದು ರೀತಿಯಲ್ಲಿ ಕೃತಜ್ಞತೆಯನ್ನು ಸೂಚಿಸುವ ಸಂದರ್ಭ ವಾಗಿತ್ತು. – ವಿಮೋಚನಾಕಾಂಡ 23:16; ಯಾಜಕಕಾಂಡ 23:33–44

## ಪರ್ಣಶಾಲೆಯ ಹಬ್ಬದ ಆಚರಣೆ

ಈ ಸಂದರ್ಭದಲ್ಲಿ ಜನರಲ್ಲಿ ಬಳಕೆಯಾಗಿದ್ದುದನ್ನು ಎಡರ್ಷೀಮ್ ಮತ್ತು ಇತರರಿಂದ ಹೀಗೆ ವರ್ಣಿಸಲ್ಪಟ್ಟಿರವದು:

ಯೆರೂಸಲೇಮಿನಲ್ಲಿ ಎಲ್ಲೆಲ್ಲಿಯೂ ಅಂದರೆ ಅಂಗಳಗಳಲ್ಲಿ ಮನೆಗಳ ಮೇಲೆ ರಸ್ತೆಗಳಲ್ಲಿ ಮತ್ತು ಚೌಕಗಳಲ್ಲಿ ಪರ್ಣಶಾಲೆ ಗಳನ್ನು ನಿರ್ಮಿಸಲಾಗುತ್ತಿತ್ತು. ಈ ಪರ್ಣಶಾಲೆಗಳನ್ನು ಖರ್ಜೂರ ಆಲ ಒಲಿವ ದೇವದಾರು ನೀರವಂಜಿ ಮುಂತಾದ ಮರಗಳ ಕೊಂಬೆಗಳಿಂದ ಮಾಡಲಾಗುತ್ತಿತ್ತು. ಯಾರೂ ಮನೆಗಳಲ್ಲಿ ವಾಸಿಸುತ್ತಿರಲಿಲ್ಲ. ಎಲ್ಲರೂ ಅಂದರೆ ಆ ಊರಿನವರೆಲ್ಲರೂ ಮತ್ತು ದೇಶದ ಇತರ ಕಡೆಗಳಿಂದ ಬಂದವರು ಈ ಪರ್ಣಶಾಲೆಗಳಲ್ಲಿ ವಾಸಿಸುತ್ತಿದ್ದರು. ಸಾಮಾಜಿಕ ಶ್ರೇಣಿಗಳು, ಐಶ್ವರ್ಯವಂತರು ಮತ್ತು ಬಡವರ ನಡುವಿನ ಅಂತರಗಳು, ಮುಂತಾದ ವೈವಿಧ್ಯತೆಗಳೆಲ್ಲವೂ ಒಂದು ಸಮಯಕ್ಕೆ ಮರೆತುಹೋಗಿ ಪ್ರತಿಯೊಬ್ಬನೂ ಇತರರನ್ನು ತನ್ನ ನೆರೆಯವನಂತೆ ಭಾವಿಸಿಕೊಂಡು ಜೀವಿಸುತ್ತಿದ್ದರು.

"ಪ್ರತಿ ಬೆಳಿಗ್ಗೆಯಲ್ಲಿಯೂ ಒಂದು ಉಲ್ಲಾಸಭರಿತವಾದ ಮೆರವಣಿಗೆಯು ಸಂಗೀತದೊಂದಿಗೆ ಶಿಲೋವ ಕೊಳಕ್ಕೆ ಇಳಿದು ಹೋಗಿ ಅಲ್ಲಿಂದ ಚಿನ್ನದ ಹೂಜೆಯಲ್ಲಿ ನೀರನ್ನು ತುಂಬಿಕೊಂಡು ಆ ನೀರನ್ನು ಯಜ್ಞವೇದಿಯ ಮೇಲೆ ಸ್ತುತಿಗೀತಗಳ ನಡುವೆ ಹೊಯ್ಯಲಾಗುತ್ತಿತ್ತು."

"ರಾತ್ರಿಯ ಸಮಯದಲ್ಲಿ ನಾಲ್ಕು ನಾಲ್ಕು ಚಿನ್ನದ ಬಟ್ಟಲುಗಳನ್ನು ಹೊಂದಿರುವ ನಾಲ್ಕು ಚಿನ್ನದ ದೊಡ್ಡ ದೀಪಸ್ತಂಭಗಳು ದೇವಾಲಯದ ಅಂಗಳದ ನಡುವೆ ಇಡಲಾಗಿದ್ದು ಅದರಿಂದ ಹೊರಬರುವ ಬೆಳಕು ಇಡೀ ಪಟ್ಟಣದಲ್ಲೆಲ್ಲಾ ಕಾಣಲ್ಪಡುತ್ತಿತ್ತು. ಈ ದೀಪಸ್ತಂಭದ ಬೆಳಕಿನ ಸುತ್ತಲೂ ಶ್ರದ್ಧಾಭಕ್ತಿಯುಳ್ಳವರು ಉರಿಯುವ ದೀವಟಿಕೆಗಳನ್ನು ಕೈಯಲ್ಲಿ ಹಿಡಿದುಕೊಂಡು ಜನರ ಮುಂದೆ ನೃತ್ಯಮಾಡುತ್ತಾ ಕೀರ್ತನೆ ಸ್ತುತಿಗೀತೆಗಳನ್ನು ಹಾಡುತ್ತಿರಲು ಲೇವಿಯರು ದೇವಾಲಯದ ಸ್ತ್ರೀಯರ ಅಂಗಳಕ್ಕೆ ಹೋಗುವ ಹದಿನೈದು ಮೆಟ್ಟಲುಗಳ ಮೇಲೆ ನಿಂತು ಆ ಹದಿನೈದು ಮೆಟ್ಟಲುಗಳನ್ನು ಸೂಚಿಸುವ ಯಾತ್ರಾಗೀತಗಳನ್ನು (ಕೀರ್ತನೆ 122–134) ಸಂಗೀತ ವಾದ್ಯದ ಸಹಿತವಾಗಿ ಹಾಡುತ್ತಿದ್ದರು."

"ದೇವಾಲಯಕ್ಕೆ ಮಾಡಲಾಗುತ್ತಿದ್ದ ದೀಪಾಲಂಕಾರವು ಆ ದೇವಾಲಯದ ಮೂಲಕವಾಗಿ ಅಂಧಕಾರದಲ್ಲಿರುವ ಅನ್ಯಜನರಿಗೆ ಹೊಳೆಯುವ ಬೆಳಕಿಗೆ ಸಂಕೇತವಾಗಿರುವದು; ಆನಂತರ ಬೆಳಿಗ್ಗೆ ಸೂರ್ಯೋದಯವಾಗುವಾಗ ಯಾಜಕರು ಊದುವ ಯೆಹೋವನ ಸೈನ್ಯದ ಬೆಳ್ಳಿಯ ತುತ್ತೂರಿಯ ಶಬ್ದವು ಹಬ್ಬದ ದಿನದ ತುತ್ತೂರಿಯ ಶಬ್ಧದಿಂದ ಮುಂದುವರಿಸಲ್ಪಟ್ಟು ಅದು ನಿದ್ರಿಸುವವರನ್ನು ಎಬ್ಬಿಸಲು ಹಾಗೂ ಅನ್ಯಧರ್ಮದ ವಿರೋಧ ವಾಗಿ ಪ್ರತಿರೋಧಿಸುವದಕ್ಕಾಗಿ ಕರೆಕೊಡುವವುಗಳಾಗಿರುವವು."

"ಹಬ್ಬದ ಕಡೆಯ ದಿನದ ಸಾಯಂಕಾಲದಲ್ಲಿ ಆ ಭವ್ಯವಾದ ದೀಪಾಲಂಕಾರವು ಕೊನೆಗೊಳ್ಳುವಾಗ ಕ್ರಿಸ್ತನು ತನ್ನ ಕಡೆಗೆ ಗಮನಸೆಳೆಯುವವನಾಗಿ "ನಾನು ಲೋಕಕ್ಕೆ ಬೆಳಕಾಗಿದ್ದೇನೆ" (ಯೋಹಾನ 8:12) ಎಂದು ಹೇಳಿದ್ದನೆಂದು ಭಾವಿಸಲಾಗಿರು ವದು. ಅದು ನಿರಂತರವೂ ಬೆಳಗುತ್ತಿದ್ದು ದೇವಾಲಯವನ್ನು ಹಾಗೂ ಪವಿತ್ರ ನಗರಿಯನ್ನು ಬೆಳಗುವದು ಮಾತ್ರವಲ್ಲದೆ ನೀತಿ ಸೂರ್ಯನಂತೆ ಸಮಸ್ತ ಲೋಕವನ್ನು ಬೆಳಗಿಸುವದು."

## "ಹಬ್ಬದ ಆ ಮಹಾ ದಿನ"

ಏಳು ದಿನದ ಹಬ್ಬದ ಕಡೆಯ ದಿನವನ್ನು ಮಹಾ ದಿನವೆಂದು ಕರೆಯಲಾಗುತ್ತಿತ್ತು. ಇದರಲ್ಲಿ ಹಬ್ಬದ ಆಚರಣೆಯ ಉಲ್ಲಾಸವು ತಾರಕಕ್ಕೆ ತಲುಪುತ್ತಿತ್ತು. ನಾವು ಮತ್ತೆ ಎಡರ್ಷೀಮ್ ಹಾಗು ಇತರರಿಂದ ಈ ಮುಂದಿನನ್ನು ಆದುಕೊಂಡಿದ್ದೇವೆ:

"ಯೆಹೂದ್ಯರ ಸಂಪ್ರದಾಯದ ಅನುಸಾರವಾಗಿ ದೇವರ ಪ್ರಸನ್ನತೆಯ ಹಾಗು ನಡಿಸುವಿಕೆಯ ಸಂಕೇತವಾಗಿ ಹಗಲಿನಲ್ಲಿ ಮೇಘಸ್ತಂಭವು ರಾತ್ರಿಯಲ್ಲಿ ಅಗ್ನಿಸ್ತಂಭವು ಏಳನೇ ತಿಂಗಳಿನ ಹದಿನೈದನೇ ದಿನದಲ್ಲಿ ಅಂದರೆ ಪರ್ಣಶಾಲೆಯ ಹಬ್ಬದ ಮೊದಲನೇ ದಿನದಲ್ಲಿ ಕಾಣತೊಡಗಿತ್ತು. ಆ ದಿನದಲ್ಲಿ ಮೋಶೆಯು ಬೆಟ್ಟದಿಂದ ಇಳಿದು ಬಂದು ಅವರ ಮಧ್ಯದಲ್ಲಿ ದೇವದರ್ಶನದ ಗುಡಾರವನ್ನು ಕಟ್ಟಬೇಕೆಂಬುದನ್ನು ಪ್ರಕಟಿಸಿದ್ದನು ಎಂಬುದಾಗಿ ಹೇಳಲ್ಪಟ್ಟಿರುವದು. ಸೊಲೋಮೋನನ ದೇವಾಲಯದ ಪ್ರತಿಷ್ಠೆ ಹಾಗು ಅದರ ಮೇಲೆ ಶೆಕೀನ ಬೆಳಕು ಈ ಹಬ್ಬದಲ್ಲಿ ಇಳಿದು ಬಂದಿತೆಂಬುದನ್ನು ನಾವು ಗಮನಿಸಿರುವೆವು. – 1 ಅರಸುಗಳು 8ನೇ ಅಧ್ಯಾಯ; 2 ಪೂರ್ವಕಾಲವೃತ್ತಾಂತ 7ನೇ ಅಧ್ಯಾಯ.

"ಹಬ್ಬದ ಕಡೆಯ ದಿನವು ಈ ಎಲ್ಲಾ ಸಾಂಕೇತಿಕ ವಾದವುಗಳ ಅತ್ಯಂತ ಮುಖ್ಯವಾದ ಘಟ್ಟವನ್ನು ತಲುಪುತ್ತಿತ್ತು. ಬೆಳಗ್ಗೆ ಉದಯಕಾಲದಲ್ಲಿ ಜನರಗುಂಪು ಒಂದು ಬಗೆಯ ಕಿತ್ತಲೆ ಹಣ್ಣನ್ನು ಎಡಗೈಯಲ್ಲಿ ಹಿಡಿದುಕೊಂಡು ಅದರ ಕೊಂಬೆಯನ್ನು ಬಲಗೈಯಲ್ಲಿ ಹಿಡಿದುಕೊಂಡು ಮೆರವಣಿಗೆಯಾಗಿ ಸಂಗೀತವಾದ್ಯದೊಡನೆ ದೇವಾಲಯದ ದಕ್ಷಿಣದಲ್ಲಿರುವ ಶಿಲೋವ ಕೊಳದಲ್ಲಿ ನೀರನ್ನು ತರಲು ಚಿನ್ನದ ಹೂಜೆಯನ್ನು

ಹಿಡಿದಿರುವ ಯಾಜಕನ ನೇತೃತ್ವದಲ್ಲಿ ಹೊರಡುತ್ತಿತ್ತು. ಯಾಜಕನು ಚಿನ್ನದ ಹೂಜೆಯಲ್ಲಿ ನೀರನ್ನು ತುಂಬಿಕೊಂಡು ಅದನ್ನು ಜನರ ಘೋಷಗಳ ಹಾಗೂ ತುತ್ತೂರಿ ತಾಳವಾದ್ಯಗಳ ಶಬ್ಧಗಳ ನಡುವೆ ದೇವಾಲಯದ ಅಂಗಳಕ್ಕೆ ಕೊಂಡು ತರುವನು. ಆ ಮೆರವಣಿಗೆಯ ಹಿಂದಿರುಗುವಿಕೆಯನ್ನು ಇತರ ಯಾಜಕರು ಬೆಳಗಿನ ಸಾಮಾನ್ಯ ನೈವೇದ್ಯದ ಆರಾಧನೆಯ ಕಡೆಯಲ್ಲಿ ಸರ್ವಾಂಗಹೋಮದ ಪಶುವಿನ ಭಾಗಗಳನ್ನು ಯಜ್ಞವೇದಿಯ ಮೇಲೆ ಇಡುವ ಸಮಯಕ್ಕೆ ಸರಿಯಾಗಿ ಹೊಂದಿಸಲಾಗಿರುತ್ತಿತ್ತು."

"ಆ ಪ್ರತಿ ಏಳು ದಿನಗಳಲ್ಲೂ ಯಾಜಕನು ಯಜ್ಞವೇದಿ ಯನ್ನು ಪ್ರದಕ್ಷಿಣೆ ಮಾಡುತ್ತಾ "ಓಹ್ ಈಗ ರಕ್ಷಣೆಯನ್ನು ನೆರವೇರಿಸು, ಯಾಹುವೇ! ಓಹ್ ಯಾಹುವೇ ನಮಗೆ ಶುಭವನ್ನು ಅನುಗ್ರಹಿಸು" ಎಂದು ಹೇಳುತ್ತಿದ್ದನು. ಆದರೆ ಆ ಏಳನೇ ದಿನ ಅವರು ಏಳು ಪ್ರದಕ್ಷಿಣೆ ಹಾಕಿ ಯೆರಿಕೋ ಪಟ್ಟಣದ ಗೋಡೆಗಳು ಇಂಥದೇ ಸಂದರ್ಭದಲ್ಲಿ ಬಿದ್ದುಹೋದು ದನ್ನು ನೆನೆಯುತ್ತಾ ದೇವರು ನಡುವೆ ಬಂದು ಅನ್ಯಜಾತಿಗಳೆಂಬ ಗೋಡೆಯು ಯೆಹೋವನ ಮುಂದೆ ಬೀಳುವಂತಾಗಿ ಆತನ ಜನರ ಮುಂದೆ ಲೋಕವು ತೆರೆಯಲ್ಪಟ್ಟಂತಾಗಿ ಅವರು ಹೋಗಿ ಅದನ್ನು ಸ್ವಾಧೀನಮಾಡಿಕೊಳ್ಳುವದನ್ನು ಅಪೇಕ್ಷಿಸುವ ವರಾಗಿದ್ದರು."

"ಚಿನ್ನದ ಆ ಹೂಜೆಯಲ್ಲಿ ತುಂಬಿದ ನೀರನ್ನು ಆನಂತರ ಯಜ್ಞವೇದಿಯ ಮೇಲೆ ಹೊಯ್ಯಲಾಗುತ್ತಿತ್ತು. ಈ ಆಚರಣೆಯು ಬಹು ಪ್ರಾಮುಖ್ಯವಾದುದೆಂದು ಪರಿಗಣಿಸಲ್ಪಟ್ಟು ಅದು ಸ್ಪಷ್ಟವಾಗಿ ಪವಿತ್ರಾತ್ಮವು ಸುರಿಸಲ್ಪಡುವದಕ್ಕೆ ಸಂಕೇತವಾಗಿತ್ತು. ನೀರನ್ನು ಹೊಯ್ದ ಕೂಡಲೇ ಸ್ತುತಿಗೀತೆಗಳು ಹಾಡಲ್ಪಡುತ್ತಿದ್ದವು. ಇದು ಕೀರ್ತನೆ 113–118ನೇ ಅಧ್ಯಾಯಗಳನ್ನು ಒಳಗೊಂಡಿರುತ್ತಿತ್ತು. ಇವುಗಳು ಉತ್ತರ ಪ್ರತ್ಯುತ್ತವಾಗಿ ಕೊಳಲು ವಾದ್ಯಗಳೊಂದಿಗೆ ಪಠಣವಾಗುತ್ತಿತ್ತು. ಲೇವಿಯರು ಕೀರ್ತನೆಯ ಮೊದಲನೆ ಸಾಲನ್ನು ಹಾಡಿದಾಗ ಜನರು ಅದನ್ನು ಪುನರಾವರ್ತನೆ ಮಾಡುತ್ತಿದ್ದರು. ಇತರ ಪ್ರತಿಯೊಂದು ಸಾಲಿಗೂ ಅವರು "ಯೇಹೋವನೇ ನಿನಗೆ ಸ್ತೋತ್ರ" ಎಂದು ಪ್ರತ್ಯುತ್ತರವಾಗಿ ಹೇಳುತ್ತಿದ್ದರು. ಆನಂತರ ಯಾಜಕರು ತಮ್ಮ ಬೆಳ್ಳಿಯ ತುತ್ತೂರಿಯಿಂದ ಮೂರು ಸಾರಿ ಗಟ್ಟಿಯಾಗಿ ಊದುತ್ತಿದ್ದರು."

## ಹಬ್ಬದಲ್ಲಿ ಯೇಸುವು

ನಮ್ಮ ಪಾಠವು ಕರ್ತನು ಕಡೆಯದಾಗಿ ಪರ್ಣಶಾಲೆಗಳ ಹಬ್ಬದಲ್ಲಿ ಭಾಗವಹಿಸಿದುದಕ್ಕೆ ಸಂಬಂಧಪಟ್ಟಿರುವದು. ಈ ಒಂದು ಹಬ್ಬವು ಆತನ ಶಿಲುಬೆಯ ಮರಣಕ್ಕೆ ಕೇವಲ ಆರು ತಿಂಗಳ ಹಿಂದೆ ನಡೆದಿತ್ತು. ಹಿಂದಿನ ಒಂದು ಪಾಠದಲ್ಲಿ ಐದು ಸಾವಿರ ಜನರಿಗೆ ಊಣಬಡಿಸಿದುದು ಜನರು ಪಸ್ಕಹಬ್ಬಕ್ಕಾಗಿ ಯೆರೂಸಲೇಮಿಗೆ ಹೋಗುವ ಮಾರ್ಗದಲ್ಲಿದ್ದ ಸಮಯವಾಗಿತ್ತೆಂದು ನಾವು ನೋಡಿದ್ದೆವು. ಹೀಗಾಗಿ ಈಗಿನ ಪಾಠವು ಕನಿಷ್ಠವೆಂದರೂ ಆರು ತಿಂಗಳ ನಂತರ ಸಮಯದ್ದಾಗಿತ್ತು. "ಆ ದಿನದಿಂದ ಆತನನ್ನು ಕೊಲ್ಲುವದಕ್ಕೆ ಆಲೋಚಿಸುತ್ತಿದ್ದರು. ಹೀಗಿರಲಾಗಿ ಯೇಸು ಇನ್ನೂ ಯೆಹೂದ್ಯರೊಳಗೆ ಬಹಿರಂಗವಾಗಿ ತಿರುಗಾಡದೆ ಅಲ್ಲಿಂದ ಅಡವಿಯ ಹತ್ತಿರದ ಪ್ರದೇಶಕ್ಕೆ ಹೋಗಿ ಎಫ್ರಾಯಿಮ್ ಎಂಬ ಊರಿನಲ್ಲಿ ಶಿಷ್ಯರ ಸಂಗಡ ಇದ್ದನು." ಇಂಥಾ ಸಮಯ ಬರಲು ಸುಸ್ಪಷ್ಟವಾಗಿ ಸುಮಾರು ಒಂದು ವರುಷ ಆರು ತಿಂಗಳ ಅಂತರವಿರುವ ಸಾಧ್ಯತೆಯು ಬಹುವಾಗಿದ್ದಿರಬೇಕು.

ಈ ಹಬ್ಬದ ಸಂದರ್ಭದಲ್ಲಿ ಅನೇಕರು ಯೇಸುವು ಇದಕ್ಕೆ ಬರುವನೋ ಇಲ್ಲವೋ ಎಂದು ಆಶ್ಚರ್ಯಪಡುತ್ತಿದ್ದರು; ಯಾಕೆಂದರೆ ಮಹಾ ಯಾಜಕರು ಕರ್ತನಿಗೆ ವಿರೋಧವಾಗಿ ಎಷ್ಟೋ ಅಸೂಯೆ ದ್ವೇಷ ಕಟುಭಾವನೆ ಉಳ್ಳವರಾಗಿದ್ದು ಆತನ ಜೀವಕ್ಕೆ ಬೆದರಿಕೆ ಹಾಕಿದ್ದರೆಂಬುದನ್ನು ಅಧಿಕ ಸಂಖ್ಯೆಯ ಜನರು ಅರ್ಥಮಾಡಿಕೊಂಡಿದ್ದರು. ತನ್ನ "ಗಳಿಗೆಯು" ಬರುವ ವರೆಗೂ ತನ್ನ ಜೀವವು ದೇವರ ಸಂರಕ್ಷಣೆಯಲ್ಲಿರುವದೆಂಬುದನ್ನು ನಮ್ಮ ಕರ್ತನು ಮನಗಂಡವನಾಗಿದ್ದರೂ ಆತನು ಅನಗತ್ಯವಾಗಿ ಅಪಾಯದ ದಾರಿಯಲ್ಲಿ ಹೋಗಿ ದೈವಿಕವಾದ ಏರ್ಪಾಡುಗಳನ್ನು ಪರೀಕ್ಷೆ ಮಾಡುವದಿಲ್ಲವೆಂಬಂತೆ ಕಾಣುತ್ತದಾದರೂ ನಿಜವಾಗಿಯೂ ಆತನು ತನ್ನ ಮಾರ್ಗವನ್ನು ತನಗೆ ಕಂಡುಬಂದ ಸನ್ನಿವೇಶಕ್ಕೆ ಅನುಗುಣವಾಗಿ ರೂಪಿಸಿಕೊಳ್ಳುತ್ತಿದ್ದನು. ಹೀಗೆಯೇ ಸಹ ಆತನು ತನ್ನ ಶಿಷ್ಯರಿಗೆ ಬುದ್ಧಿಹೇಳಿದ್ದನು, "ಒಂದು ಊರಲ್ಲಿ ನಿಮ್ಮನ್ನು ಹಿಂಸೆಪಡಿಸಿದರೆ ಬೇರೊಂದು ಊರಿಗೆ ಓಡಿಹೋಗಿ."

ಆ ಸಮಯದಲ್ಲಿ ನಮ್ಮ ಕರ್ತನ ಅಣ್ಣತಮ್ಮಂದಿರಲ್ಲಿ ಕೆಲವರು (ಅವರು ದಾಯಾದಿಗಳಾಗಿರುವ ಸಂಭವವಿತ್ತು ಯಾಕೆಂದರೆ ದಾಯಾದಿಗಳನ್ನೂ ಆ ಕಾಲದಲ್ಲಿ "ಅಣ್ಣತಮ್ಮಂದಿರು" ಎಂದು ಕರೆಯಲಾಗುತ್ತಿತ್ತು.) ಆತನು ಮೆಸ್ಸೀಯನೆಂಬುದರ ಬಗ್ಗೆ ಸಂದೇಹವುಳ್ಳವರಾಗಿರುವಂತೆ ತೋರುತ್ತಿದ್ದು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ತಮ್ಮ ಜನಾಂಗದಲ್ಲಿನ ಪಾಂಡಿತ್ಯವುಳ್ಳರ ಮುಂದೆ ಮಹತ್ಕಾರ್ಯಗಳನ್ನು ಮಾಡಲು ಹೇಳಿದ್ದರು. ಅದನ್ನು ನೋಡುವ ಅವರು ಆತನನ್ನು ಟೀಕಿಸಿ ಅವನಲ್ಲಿ ದೋಷವನ್ನು ಕಂಡುಹಿಡಿಯುವ ಹಾಗು ಸಾಧ್ಯವಾದಲ್ಲಿ ಅತನು ಹೇಳಿಕೊಳ್ಳುವದನ್ನೂ ಆತನು ಮಾಡುವ ಅದ್ಭುತಗಳನ್ನೂ ತಪ್ಪಾದುದೆಂದು ರುಜುವಾತುಪಡಿಸುವ ಅವಕಾಶ ಉಂಟಾಗುವದೆಂಬುದು ಅವರ ಉದ್ದೇಶವಾಗಿತ್ತದೆಂದು ಆ ಸಂದರ್ಭವು ಸೂಚಿಸುತ್ತದೆ. "ನೀವೇ ಜಾತ್ರೆಗೆ ಹೋಗಿರಿ; ನನ್ನ ಸಮಯವು ಇನ್ನೂ ಒದಗದೆ ಇರುವದರಿಂದ ನಾನು ಈ ಜಾತ್ರೆಗೆ ಈಗ ಹೋಗುವದಿಲ್ಲ..." ಎಂಬುದು ಆತನ ಉತ್ತರವಾಗಿತ್ತು. ಯಾಕೆಂದರೆ ನಮ್ಮ ಕರ್ತನು ಹಬ್ಬಕ್ಕೆ ಮುಂಚಿತವಾಗಿ ಹೋಗುವದರಿಂದ ಧಾರ್ಮಿಕ ಬೋಧಕರ ದ್ವೇಷವನ್ನು ಹೆಚ್ಚು ಕೆರಳಿಸುವಂತಾಗುತ್ತಿತ್ತು. ಅದಲ್ಲದೆ ಆತನು ತಡವಾಗಿ ಹೋಗುವದರಿಂದ ಆತನ ಜನಪ್ರಿಯತೆಗಾಗಲಿ ಅಥವಾ ಬೋಧನೆಗಳಿಗಾಗಲಿ ಧಕ್ಕೆಯುಂಟಾಗುತ್ತಿರಲಿಲ್ಲ ಕಾರಣ ಜನರು ಸಹಜವಾಗಿ ತಾವಾಗಿಯೇ ಅತನ ಬಗ್ಗೆ ವಿಚಾರಿಸುತ್ತಿದ್ದು ಆಶ್ಚರ್ಯವನ್ನು ವ್ಯಕ್ತಪಡಿಸುವವರಾಗಿ ಆತನು ಹೇಳಿಕೊಳ್ಳುವದರ ಬಗ್ಗೆ ಚರ್ಚೆಮಾಡುವವರಾಗಿ ತಾವು ತಮ್ಮ ಊರುಹಳ್ಳಿ ಮುಂತಾದವುಗಳಲ್ಲಿ ಆತನ ಬಗ್ಗೆ ಕಂಡುಕೇಳಿದ್ದನ್ನು ಅವರು

ಒಬ್ಬರಿಗೊಬ್ಬರು ಹೇಳಿಕೊಳ್ಳುತ್ತಿದ್ದರು. ನಮ್ಮ ಕರ್ತನು ಹಬ್ಬದ ವಾರದ ಕಡೆಯ ದಿನಗಳಲ್ಲಿ ಅಲ್ಲಿಗೆ ಆಗಮಿಸಿ ನೇರವಾಗಿ ದೇವಾಲಯಕ್ಕೆ ಹೋಗಿ ಜನರ ಧಾರ್ಮಿಕ ಭಾವನೆಗಳು ತಾರಕಕ್ಕೇರಿರುವಾಗ ಅವರು ವರುಷ ವರುಷವೂ ಸತತವಾಗಿ ಆಚರಿಸುತ್ತಿರುವ ಸಾಂಕೇತಿಕವಾದವು ಗಳಲ್ಲಿರುವ ಆಳವಾದ ಆತ್ಮಿಕ ವಿಷಯಗಳ ಕಡೆಗೆ ಅವರ ಗಮನವನ್ನು ಸೆಳೆದಿದ್ದನು.

ಆ ಚಿನ್ನದ ಹೂಜೆಯಲ್ಲಿ ತುಂಬಿರುವ ನೀರನ್ನು ಯಜ್ಞವೇದಿಯ ಮೇಲೆ ದೇವರಿಗೆ ತರ್ಪಣವಾಗಿ ಎರೆಯುವದನ್ನು ಮುಗಿಸುವಾಗ ಅಲ್ಲದೆ ಆಗ ಜನರಗುಂಪು ಆ ಉಷ್ಣಹವಾಮಾನದಲ್ಲಿ ಬಾಯಾರಿದವರಾಗಿರುವ ಸಂಭವವಿದ್ದು, ಆ ನೀರಿನ ದೃಶ್ಯವನ್ನು ಕಂಡು ಆ ಬಾಯಾರಿಕೆಯು ಇನ್ನೂ ಹೆಚ್ಚಾಗಿ ಉಲ್ಬಣಗೊಂಡಿರುವಾಗ ಯೇಸುವು ನಮ್ಮ ಪಾಠದಲ್ಲಿ ಸಾರಾಂಶವಾಗಿ ಒಳಗೊಂಡಿರುವದನ್ನು ಕೂಗಿಹೇಳಿದ್ದನೆಂದು ಭಾವಿಸಲಾಗಿರುವದು, "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು..."

ನಮ್ಮ ಕರ್ತನು ಸಾಮ್ಯರೂಪವಾಗಿಯೂ ಒಗಟಿನ ರೂಪವಾಗಿಯೂ ಹೇಳುವನೆಂದು ಪ್ರವಾದಿಯು ಮುಂದಾಗಿ ಹೇಳಿರುವಂತೆ ಜನರು ಹೇಳುತ್ತಿದ್ದುದರಲ್ಲಿ ಆಶ್ಚರ್ಯವಿಲ್ಲ. ಈ ಸಂದೇಶವನ್ನು ಕೇಳಿದ ಗುಂಪಿನವರಲ್ಲಿ ಇದರ ಬಗ್ಗೆ ಯಾವ ವಿಧವಾಗಿಯಾದರೂ ಸೂಕ್ತ ಗ್ರಹಿಕೆಯನ್ನು ಪಡಕೊಂಡಿದ್ದವರು ಎಷ್ಟು ಅಲ್ಪ ಮಂದಿ! ಪ್ರಭಾವಯುತವಾದ ಆಶೀರ್ವಾದಗಳುಳ್ಳ ಆತ್ಮಿಕ ಏರ್ಪಾಟುಗಳಿಂದ ಕೂಡಿರುವ ನಮ್ಮ ಈಗಿನ ಕಾಲದವರ ವಿಷಯವಾಗಿಯೂ ಹೀಗೆಯೇ ಇದ್ದು ಅವರಲ್ಲಿ ಎಷ್ಟು ಅಲ್ಪ ಮಂದಿಗೆ ಈ ಮಾತುಗಳು ಸೂಚಿಸುವದು ಏನೆಂಬುದರ ಬಗ್ಗೆ ಸಾಕಷ್ಟು ಸೂಕ್ತವಾದ ಕಲ್ಪನೆಗಳನ್ನು ಹೊಂದಿರಲು ಸಾಧ್ಯ?

## ಆ ಬುಗ್ಗೆಯಲ್ಲಿ (ನೀರನ್ನು) ಕುಡಿಯುವದು

ಸಹಜವಾಗಿರುವ ಬಾಯಾರಿಕೆಯೆನ್ನುವುದು ಏನೆಂಬುದರ ಬಗ್ಗೆ ಹಾಗೂ ಪ್ರಕೃತಿದತ್ತವಾದ ನೀರನ್ನು ತೆಗೆದುಕೊಳ್ಳುವದರ ಮೂಲಕವಾಗಿ ದೊರೆಯುವ ಪುನಶ್ಚೇತನದ ಬಗ್ಗೆ ನಮ್ಮೆಲ್ಲರಿಗೂ ಕೆಲವು ಕಲ್ಪನೆಗಳಿರುವದು. ಮತ್ತು ನಮ್ಮ ಕರ್ತನು ನೀಡಲಿರುವ ಜೀವಕೊಡುವ ನೀರಿನ ಬಗ್ಗೆ ಅರ್ಥಮಾಡಿಕೊಳ್ಳಲು ನಾವು ಈ ಸಂಕೇತವನ್ನು ಮುಂದುವರಿಸಿ ಮಾನವ ಸ್ವಭಾವದಲ್ಲಿಯೂ ಇತರ ವಿಧವಾದ ಬಾಯಾರಿಕೆ ಮತ್ತು ಹಂಬಲಿಕೆಗಳಿದ್ದು ಅವುಗಳನ್ನು ತೃಪ್ತಿಪಡಿಸುವ ಅಗತ್ಯತೆಯಿದ್ದು ಇವುಗಳನ್ನು ತೃಪ್ತಿಪಡಿಸದಿದ್ದಲ್ಲಿ ಅವುಗಳು ಅಶಾಂತಿ ವ್ಯಥೆಸಂಕಟಗಳನ್ನು ಉಂಟುಮಾಡುತ್ತವೆಂಬುದನ್ನು ಅರಿತಿರಬೇಕು. ಹೃದಯದ ಈ ಹಂಬಲಿಕೆಗಳನ್ನು ನಾವು ಸಂಕ್ಷೇಪವಾಗಿ ವಿಶ್ರಾಂತಿ ಸಮಾಧಾನ ಸಂತೋಷ ಮತ್ತು ಅನ್ಯೋನ್ಯತೆಯ ಸಂಬಂಧವಾದ ಬಾಯಾರಿಕೆಗಳೆಂಬುದನ್ನು ಮತ್ತೆ ಉಲ್ಲೇಖಿಸುವವರಾಗಿದ್ದೇವೆ. ಕೇವಲ ಇಂಥಾ ಬಾಯಾರಿಕೆಗಳುಳ್ಳವರು ಕರೆಯಲ್ಪಟ್ಟಿರುವರು–"ಹಸಿದುಬಾಯಾರಿದವರು ಧನ್ಯರು." ನಮ್ಮ ಈ ಮಾನವ ಕುಲದ ಹಲವರು ಈಗಿನ ಕಾಲದಲ್ಲಿ ಮಾನಸಿಕವಾಗಿ ಹಾಗೂ ಶಾರೀರಿಕವಾಗಿ ಎಷ್ಟು ಕೆಟ್ಟುಹೋಗಿರುವರೆಂದರೆ ಅವರಿಗೆ ಈಗ ಹೊಂದಿರುವದಕ್ಕಿಂತಲೂ ಉತ್ತಮವಾದ ಸಂಗತಿಗಳ ಬಗ್ಗೆ ಯಾವ ಹಸಿವೆಯಾಗಲೀ ಬಾಯಾರಿಕೆಯಾಗಲೀ ಇರುವದಿಲ್ಲ; ತಾವು ಹೊಂದಿರುವ ಅಪರಿಪೂರ್ಣವಾದ ಸಂಗತಿಗಳಲ್ಲಿಯೇ ಈಗಾಗಲೇ ಪೂರ್ಣವಾಗಿ ತೃಪ್ತರಾಗಿರುವರು. ಈ ಕಾಲದಲ್ಲಿ ನಮ್ಮ ಕರ್ತನು ನೀಡಿರುವ ಮನವಿ ಆಹ್ವಾನಗಳು ಇವರಿಗೋಸ್ಕರವಾಗಿರದೆ ಹಸಿದು ಬಾಯಾರಿಕೆಯುಳ್ಳವರಿ ಗೋಸ್ಕರವಾಗಿರುವದು, "ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ."

ಇವೇ ಸುವಾರ್ತಾಯುಗದಲ್ಲಿ ನೀಡಾಲಾಗಿರುವ ಮನವಿ ಆಹ್ವಾನಗಳು: ಕರ್ತನು ಬಾಯಾರಿದವರನ್ನು ಕಂಡುಕೊಳ್ಳ ಬಯಸುತ್ತಿರುವನು ಮತ್ತು ಅವರನ್ನು ಕಂಡುಕೊಂಡ ನಂತರ ಅವರು ಆತನ ಸತ್ಯ ಕೃಪೆಗಳೆಂಬ ಬುಗ್ಗೆಯಿಂದ ಕುಡಿದದ್ದೇಯಾದರೆ ಅವರು ಸಂತೃಪ್ತಿ ಆದರಣೆ ಸಂತೋಷ ಸಮಾಧಾನ ವಿಶ್ರಾಂತಿ ಆಶೀರ್ವಾದಗಳನ್ನು ಕಂಡುಕೊಳ್ಳುವರು. ಇದನ್ನು ಲೋಕವು ಕೊಡಲು ಸಾಧ್ಯವಾಗದು, ತೆಗೆದುಹಾಕಲೂ ಸಾಧ್ಯವಾಗದು. ಆದುದರಿಂದ ಬಾಯಾರಿದವರು ಧನ್ಯರು ಹಾಗು ಆ ಸೀಳಲ್ಪಟ್ಟ ಬಂಡೆಯಾಗಿರುವ ನಮ್ಮ ಕರ್ತನಿಂದ ಬರುವ ನೀರನ್ನು ಕುಡಿಯುವವರು ಅನುಗ್ರಹಿತರು. 1 ಕೊರಿಂಥ 10:4

ಅಪೋಸ್ತಲನು ನಮ್ಮ ಕರ್ತನ ಮಾತಿನ ಬಗ್ಗೆ ವ್ಯಾಖ್ಯಾನ ಮಾಡುತ್ತಾ ಮೊದಲನೇ ಭಾಗವನ್ನು ವಿವರಿಸಿದ್ದು ಎರಡನೇ ಭಾಗವನ್ನು ವಿವರಿಸಿಲ್ಲ. ಆತನು ಹೇಳಿರುವದು: "ಇದನ್ನು ಯೇಸುವು ತನ್ನನ್ನು ನಂಬಿದವರು ಹೊಂದಲಿರುವ ಪವಿತ್ರಾತ್ಮವರವನ್ನು ಕುರಿತು ಹೇಳಿದನು;" ಪವಿತ್ರಾತ್ಮವನ್ನು ಪಡೆಯುವುದು ನಮ್ಮ ಬಾಯಾರಿಕೆಯನ್ನು ತೃಪ್ತಿಗೊಳಿಸುವದು. ನಮ್ಮ ಜೀವನದ ಪರ್ಯಂತರವಾಗಿ ಈ ಬುಗ್ಗೆಯೊಳಗಿಂದ ಕುಡಿಯುತ್ತಿರುವೆವಾದರೂ, ಕರ್ತನ ಸಾರೂಪ್ಯದಲ್ಲಿ ನಾವು ಎದ್ದು ಬರುವವರೆಗೂ ನಾವು ತೃಪ್ತಿಹೊಂದಲಾರೆವು: ಆನಂತರ ಅಪೋಸ್ತಲನು ಹೇಳಿರುವ ಹಾಗೆ "ಎಚ್ಚೆತ್ತಾಗ ನಿನ್ನ ಸ್ವರೂಪ ದರ್ಶನದಿಂದ ತೃಪ್ತನಾಗಿರುವೆನು." – ಅಂದರೆ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ನಾವು ನಮ್ಮ ಪ್ರಿಯ ವಿಮೋಚಕನ ಹೋಲಿಕೆಯಲ್ಲಿದ್ದು ಆತನಿರುವ ಹಾಗೆಯೇ ಆತನನ್ನು ನೋಡುವವರಾಗಿ ಅತನ ದೇಹದ ಅಂಗಗಳಾಗಿ ಆತನ ಮಹಿಮೆಯಲ್ಲಿ ಪಾಲುಗಾರರಾಗುವೆವು.

## ಪವಿತ್ರಾತ್ಮವು ಇನ್ನೂ ಬಂದಿರಲಿಲ್ಲ

ಪವಿತ್ರಾತ್ಮವು ಪ್ರವಾದಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಅದರ ಪ್ರಭಾವದಿಂದ ಅವರು ನುಡಿಯುತ್ತಿದ್ದರು, ಬರೆಯುತ್ತಿದ್ದರು. ಆದರೆ ಸುವಾರ್ತಾಯುಗದ ಸಭೆಗೆ ಪಂಚಾಶತ್ತಮ ದಿನದಂದು ಮತ್ತು ಆನಂತರ ಅನುಗ್ರಹಿಸಲ್ಪಟ್ಟ ಪವಿತ್ರಾತ್ಮವು ಬೇರೆಯಾಗಿತ್ತು. ಅದು ಪ್ರವಾದನೆಯ ಆತ್ಮವಾಗಿರದೆ ಪುತ್ರ ಭಾವವನ್ನು ಉಂಟುಮಾಡುವ ವಿವೇಕದಾಯಕ ಆತ್ಮವಾಗಿತ್ತು.

ನಮ್ಮ ಪರವಾದ ಯೇಸುವಿನ ಈಡು ಬಲಿಯು ಪೂರ್ಣಗೊಳ್ಳುವ ವರೆಗೂ ಮತ್ತು ಆತನು ಪರಲೋಕ್ಕೇರಿ ಆ ಯಜ್ಞಫಲವನ್ನು ನಮ್ಮ ಪರವಾಗಿ ತಂದೆಗೆ ಅರ್ಪಿಸಿ ಅದು ತಂದೆಯಿಂದ ಅಂಗೀಕಾರ ವಾಗುವವರೆಗೂ ಯಾರಿಗೂ ದೇವರ ಮಕ್ಕಳಾಗಿ ಪವಿತ್ರಾತ್ಮನಿಂದ (ಗರ್ಭಾಂಕುರವಾಗಿ) ಹುಟ್ಟುವದು ಸಾಧ್ಯವಿರಲಿಲ್ಲ. ಆ ನಂತರ ಪುತ್ರಭಾವವನ್ನು ಒದಗಿಸುವ ಆತ್ಮವು ಆಶೀರ್ವಾದವಾಗಿ ಅಪೋಸ್ತಲರ ಮೇಲೆ ಸುರಿಸಲ್ಪಟ್ಟಿತ್ತು. ಕ್ರಿಸ್ತನ ದೇಹದಲ್ಲಿ ಅಂಗಗಳಾಗಿ ತಮ್ಮ ಜೊತೆ ಸದಸ್ಯರೊಂದಿಗೆ ಅನ್ಯೋನ್ಯತೆಗೆ ಬರುವವವರೆಲ್ಲರೂ ಈ ಒಂದೇ ಆತ್ಮದಲ್ಲಿ ಪಾಲುಹೊಂದುವಂತೆ ಮಾಡಲಾಗಿರುವದು. ಈ ಮೂಲಕವಾಗಿ ಎಲ್ಲರೂ ವಿಮೋಚನೆಯ ದಿನಕ್ಕಾಗಿ ಮುದ್ರೆಹಾಕಲ್ಪಟ್ಟಿರುವರು. – ಎಫೆಸ್ಸ 4:30

## ಹೊಳೆಯಾಗಿ ಹರಿಯುವದು

"...ಹೊಟ್ಟೆಯೊಳಗಿಂದ ...ಜೀವಕರವಾದ ನೀರಿನ ಹೊಳೆಗಳು ಹರಿಯುವವು..." ಈ ವಾಕ್ಯವು ಪಂಚಾಶತ್ತಮ ದಿನದಂದು ನೆರವೇರಲ್ಪಡಲಿಲ್ಲ; ಅಲ್ಲಿ ಕರ್ತನ ಹಿಂಬಾಲಕರು ಆತ್ಮಿಕವಾದ ಸತ್ಯಾರ್ಥಗಳನ್ನು ಕೇವಲ ಕುಡಿಯಲು ಆರಂಭಿಸಿದ್ದರು ಮತ್ತು ಅವರ ಮೂಲಕವಾಗಿ ಒಂದೇ ದೇಹದ ಅಂಗಗಳಾಗಿರುವ ಅನೇಕರು (ಕ್ರಿಸ್ತನ ದೇಹದಲ್ಲಿ) ಅಂಗಗಳಾಗಿ ಐಕ್ಯವಾಗತೊಡಗಿದ್ದರು, ಅದರ ಶಿರಸ್ಸು ಕ್ರಿಸ್ತನಾಗಿರುವನು. ಈ ಒಂದು ದೇಹದ ಮೂಲಕವಾಗಿ ಕಡೆಯಲ್ಲಿ ಸಾವಿರ ವರುಷದ ಆಳ್ವಿಕೆಯ ಸಮಯದಲ್ಲಿ ಜೀವಕರವಾದ ನೀರುಗಳು ಸಮಸ್ತಲೋಕವನ್ನು ಆಶೀರ್ವದಿಸಲು ಹರಿಯಲ್ಪಡುವದು. ನಮ್ಮ ಕರ್ತನು ಇದನ್ನು ಉಲ್ಲೇಖಿಸಿ ಹೀಗೆ ಹೇಳಿದ್ದನು: "ನನ್ನ ಮಾತುಗಳು; ಅದೇ ಅವನಿಗೆ ಕಡೇ ದಿನದಲ್ಲಿ ತೀರ್ಪುಮಾಡು ವದು." ಕಡೆಯ ದಿನ ಅಂದರೆ ಅದು ಆ ಮಹಾದಿನ, ಸಾವಿರ ವರುಷದ ಆಳ್ವಿಕೆಯ ದಿನ: ಲೋಕವು ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನ ಮೂಲಕವಾಗಿ ತೀರ್ಪುಹೊಂದುವದು. ಜೀವಕರವಾದ ನೀರು ಸತ್ಯವನ್ನು ಸೂಚಿಸುವದು ಮತ್ತು ನಮ್ಮ ಕರ್ತನ ಬಾಯಿಂದ ಹೊರಡುವ, ಅಂದರೆ ಮಹಿಮಾ ಪದವಿಗೆ ಸೇರಿದ ಸಭೆಯ ಬಾಯಿಂದ ಹೊರಡುವ ಆ ಜೀವಕರವಾದ ನೀರಿನ ಅಥವಾ ಸತ್ಯವೆಂಬ ಹೊಳೆಯ ಗಾತ್ರವು ಎಷ್ಟಿರುವದೆಂದರೆ, ಆ ಹರಿಯುವಿಕೆಯು ಭೂಲೋಕದ ಪ್ರತಿಯೊಂದು ಭಾಗವನ್ನು ತಲುಪುವಷ್ಟಿರುವದು. "ಭೂಮಿಯಲ್ಲಿ ಯೆಹೋವನ ಮಹಿಮೆಯ ಜ್ಞಾನವು ತುಂಬಿಕೊಂಡಿರುವದು."

ಈಗಿನ ಕಾಲದಲ್ಲಿ ಜೀವಕರವಾದ ನೀರಿನ ಬುಗ್ಗೆಯಿಂದ ಕುಡಿಯುವವರು ಕೇವಲ ಕ್ರಿಸ್ತನಲ್ಲಿ ಪ್ರತಿಷ್ಠಿತರಾಗಿರುವವರು ಮಾತ್ರ. ಮತ್ತು ಇವರಲ್ಲಿ ತನ್ನ ಕೃಪಾಸತ್ಯತೆಗಳು ನೀರಿನ ಬಾವಿಗಳಂತಿದ್ದು ಅದರಿಂದ ನಿತ್ಯಜೀವವನ್ನುಂಟುಮಾಡುವ ಒರತೆಗಳು ಉಕ್ಕಿಹರಿಯುವದೆಂದು ನಮ್ಮ ಕರ್ತನು ಇವರ ವಿಷಯವಾಗಿ ಪ್ರಕಟಮಾಡಿ ಹೇಳಿರುವನು. ಪ್ರಕಟನಾ ಗ್ರಂಥದ 21ನೇ ಅಧ್ಯಾಯದಲ್ಲಿ ಮಹಿಮಾ ಪದವಿಗೆ ಸೇರಿದ ಕ್ರಿಸ್ತನ ದೇಹದ ಅನೇಕ ಅಂಗಗಳಾಗಿ ಒಟ್ಟುಗೂಡಿರುವ ಚಿತ್ರಣವನ್ನು ನಮಗೆ ನೀಡಲಾಗಿರುವದು. ಅವರೆಲ್ಲರೂ ಒಟ್ಟಾಗಿ ಹೊಸ ಯೆರೂಸಲೆಮ್ ಆಗಿ ಚಿತ್ರಿತರಾಗಿರುವರು ಮತ್ತು ಇದರ ಮೂಲಕವಾಗಿ ನಮ್ಮ ಕರ್ತನು ತನ್ನ ವಾಕ್ಯಸಂದೇಶದಲ್ಲಿ ಸೂಚಿಸಿರುವ ಜೀವಕರವಾದ ನೀರಿನ ಹೊಳೆಯು ಹರಿಯುವದು. ಅದು ಜೀವಕರವಾದ ನೀರಿನ ದೊಡ್ಡ ಹೊಳೆಯಾಗುವದು ಮತ್ತು ಅದರ ಎರಡು ಪಕ್ಕಗಳಲ್ಲಿಯೂ ಈ ಹೊಳೆಯ ಮೂಲಕವಾಗಿ ಪೋಷಣೆ ಹೊಂದಿ ಒಳ್ಳೆಯ ಫಲಗಳನ್ನು ಬಿಡುವ ಜೀವವೃಕ್ಷಗಳು ಇರುವವು ಮತ್ತು ಆ ವೃಕ್ಷದ ಎಲೆಗಳು ಜನಾಂಗಗಳನ್ನು ವಾಸಿಮಾಡುವದಕ್ಕೆ ಪ್ರಯೋಜನಕಾರಿಯಾಗಿರುವದು.

ಹೀಗೆ ನೋಡಿದಲ್ಲಿ ಕರ್ತನ ವಾಕ್ಯಸಂದೇಶವು ಈ ಸುವಾರ್ತಾಯುಗದಲ್ಲಿ ತನ್ನ ಹಿಂಬಾಲಕರಿಗೆ ಬರುವ ಆಶೀರ್ವಾದವನ್ನು ಮತ್ತು ಇವರ ಮೂಲಕವಾಗಿ ಮುಂದಿನ ಕಾಲದಲ್ಲಿ ಭೂಲೋಕದ ಸಮಸ್ತ ಕುಲದವರನ್ನು ಸಂತೈಸುವ, ಅಶೀರ್ವದಿಸಿ ಉನ್ನತಸ್ಥಿತಿಗೆ ತರುವ, ಅವರು ಕಳೆದು ಕೊಂಡದ್ದನ್ನು ಹಿಂತರುವ ಸಲುವಾಗಿರುವ ಆಶೀರ್ವಾದಗಳನ್ನು ಸಂಕ್ಷೇಪವಾಗಿ ಚಿತ್ರಿಸಿರುವದು. ಆಗ ಅವರಲ್ಲಿ ಯಾರು ಉಚಿತವಾಗಿ ಹರಿಯುವ ಆ ಜೀವಕರವಾದ ನೀರಿನ ನದಿಯಿಂದ ಕುಡಿಯ ಬಯಸುವರೋ ಅವರೆಲ್ಲರಿಗೆ ಸ್ಪಷ್ಟವಾಗಿಯೂ ವಿಭಿನ್ನವಾಗಿಯೂ ಇರುವ ಆಹ್ವಾನವು ಆತ್ಮ ಮತ್ತು ಮದಲಗಿತ್ತಿಯ ಮೂಲಕವಾಗಿ ನೀಡಲಾಗುವದು.

## ಜನರಲ್ಲಿ ಉಂಟಾಗುವ ಭೇದಗಳು

ಸಮಾಧಾನ ಮತ್ತು ಐಕ್ಯತೆಗಳನ್ನು ಅಧಿಕವಾಗಿ ಬಯಸಬೇಕು; ಆದರೂ ಇದು ಯಾವಾಗಲೂ ಸಾಧ್ಯವಿರುವದಿಲ್ಲ, ಅದು ಯಾವಾಗಲೂ ಪ್ರಯೋಜನಕಾರಿಯಾಗಿರುವದಿಲ್ಲ. ಎಲ್ಲವೂ ಪರಿಪೂರ್ಣತೆಯಿಂದಿದ್ದಲ್ಲಿ ಸಮಾಧಾನ ಐಕ್ಯತೆಗಳು ಖಂಡಿತವಾಗಿಯೂ ಸೂಕ್ತವಾಗಿರುವ ಒಂದೇ ಸನ್ನಿವೇಶ ವಿರುವದು, ಆದರೆ ಅಪರಿಪೂರ್ಣತೆಗಳು ತಪ್ಪಾದವುಗಳು ಮುಂತಾದವುಗಳು ಇರುವವರೆಗೂ ವೈವಿಧ್ಯತೆಗಳು ಇರಲೇಬೇಕು. ಇದರ ಅನುಸಾರವಾಗಿಯೇ ಈಗಿನ ಸನ್ನಿವೇಶದಲ್ಲಿ ತನ್ನ ಸಂದೇಶಗಳು ಸಮಾಧಾನವನ್ನು ಉಂಟುಮಾಡುವದಿಲ್ಲ, ಖಡ್ಗವನ್ನು ಹಾಕಿದಂತಿರುವದೆಂದು ನಮ್ಮ ಕರ್ತನು ಸಾರಿ ಹೇಳಿದ್ದನು. ಆತನು ಅಂತಿಮವಾಗಿ ಸಮಾಧಾನದ ಪ್ರಭುವಾಗಿರು ವನು, ಆದರೆ ನೀತಿ ಆಧಾರವಾಗಿರುವ ಸಮಾಧಾನವು ಸ್ಥಾಪಿತವಾಗುವವರೆಗೂ ಅದು ನೆರವೇರುವದಿಲ್ಲ. ಆ ಕಾಲವು ಬರುವದಕ್ಕೆ ಮೊದಲು ಆತನು ರಾಜನಾಗಿ ನೀತಿಯಿಂದ ಆಳ್ವಿಕೆಮಾಡಿ ಕೆಟ್ಟುಹೋಗಿರುವ ವ್ಯವಸ್ಥೆಯನ್ನು ಹಾಗು ಕೆಟ್ಟ ಸಂಗತಿಗಳನ್ನು ಕಬ್ಬಿಣದ ಕೋಲಿನಿಂದ ಮಡಿಕೆಯನ್ನು ಒಡೆಯುವಂತೆ ಚೂರುಚೂರಾಗಿ ಒಡೆದುಹಾಕುವನು.

ಸಮಾಧಾನವಿಲ್ಲದಿರುವಾಗ ಅಲ್ಲದೆ ಸಮಾಧಾನವು ಸಾಧ್ಯವಿಲ್ಲದಿರುವಾಗ ಸಮಾಧಾನ, ಸಮಾಧಾನ ಎನ್ನುವವರಿರು ವರು; ಮತ್ತು ಕರ್ತನ ಜನರು ಇಂಥವರಾಗಿರಬಾರದು. ಕರ್ತನ ಜನರು ಅಸಮಾಧಾನವನ್ನು ಬಿತ್ತುವವರೆಂಬುದು ಇದರ

ಅರ್ಥವಲ್ಲ. ಬದಲಾಗಿ ಅವರು ಸಮಾಧಾನದಿಂದಿರಬೇಕು ಮತ್ತು ಸಮಾಧಾನ ಪಡಿಸುವವರಾಗಿರಬೇಕು ಅಲ್ಲದೆ ಸಮಾಧಾನದ ಮೇಲಿರುವ ಅವರ ಪ್ರೀತಿ ಹಾಗೂ ಅವರ ಸಮಾಧಾನಪಡಿಸುವ ಗುಣವು ಸತತವಾಗಿ ಹೆಚ್ಚುತ್ತಿರಬೇಕೆಂದು ಸತ್ಯವೇದದಲ್ಲಿ ಎಲ್ಲೆಡೆ ಅವರಿಗೆ ಬುದ್ಧಿವಾದವಾಗಿ ಹೇಳಲಾಗಿರುವದು. ನಮ್ಮ ಕರ್ತನು ನೀಡುವ ಸಂದೇಶವು ಅವರಲ್ಲಿ ತೊಂದರೆ ಅಡಚಣೆಗಳನ್ನು ಉಂಟುಮಾಡುವದು ಯಾಕೆ? ನಮ್ಮ ಉತ್ತರ, ಕರ್ತನ ಮಾತಿನ ಪ್ರಕಾರವಾಗಿ ಕತ್ತಲೆಗೂ ಬೆಳಕಿಗೂ ಒಡನಾಟವಿಲ್ಲದ ಕಾರಣ ಇವೆರಡರ ನಡುವೆ ಸಮಾಧಾನವಾಗಲಿ ಸಂಧಾನವಾಗಲಿ ಸಾಧ್ಯವಾಗಲಾರದು; ಇದರಲ್ಲಿ ಯಾವುದಾದರೂ ಒಂದರ ಹಿಡಿತ ಸಾಧಿಸಿದಷ್ಟರ ಪ್ರಮಾಣದಲ್ಲಿ ಬೇರೊಂದನ್ನು ಹೊರದೂಡುವದು.

ಇದರ ಅನುಸಾರವಾಗಿ ಈ ಪಾಠದಲ್ಲಿ ಆತನ (ಉಪದೇಶದ) ಕಾರಣದಿಂದ ಜನರಲ್ಲಿ ಭಿನ್ನಾಭಿಪ್ರಾಯಗಳು ಉಂಟಾಗಿದ್ದವು–ಕೆಲವರು ಒಪ್ಪಿಕೊಳ್ಳುತ್ತಿದ್ದರು ಮತ್ತು ಕೆಲವರು ವಿರೋಧಿಸುತ್ತಿದ್ದರು. ನಾವು ನೀತಿ ಧ್ವಜವನ್ನು ಎತ್ತಿಹಿಡಿಯುವಾಗ ನಮ್ಮಲ್ಲಿಯೂ ಹೀಗೆಯೇ ಇರಬೇಕು: ನಾವು ಸತ್ಯದ ಜ್ಯೋತಿಯನ್ನು ಪ್ರಜ್ವಲಿಸುವಂತೆ ಮಾಡಿದಲ್ಲಿ, ಸತ್ಯವನ್ನು ಪ್ರೀತಿಸುವವರೆಲ್ಲರೂ ಹೆಚ್ಚುಕಡಿಮೆ ಅವರು ತಮ್ಮಲ್ಲಿರುವ ಹೃದಯದ ಪ್ರಮಾಣಿಕತೆಗೆ ಅಂದರೆ ಸತ್ಯದ ಮೇಲಿನ ಪ್ರೀತಿಗೆ ಅನುಗುಣವಾಗಿ ಆಕರ್ಶಿತರಾಗುವರು. ತಪ್ಪಾದುದನ್ನು ಪ್ರೀತಿಸುವವರು ತಮ್ಮಲ್ಲಿರುವ ಪ್ರಾಮಾಣಿಕತೆಯ ಕೊರತೆಗೆ ಅನುಗುಣವಾಗಿ ವಿರೋಧವುಳ್ಳವರಾಗಿರುವರು. ಇದು ಕರ್ತನಲ್ಲಿದ್ದ ಸಂಗತಿಯಾಗಿದ್ದಲ್ಲಿ ಆತನ ಶಿಷ್ಯರಿಗೆ ಭಿನ್ನವಾದುದನ್ನು ಕಂಡುಕೊಳ್ಳಲು ಸಾಧ್ಯವಿರುವದೇ? ಖಂಡಿತವಾಗಿಯೂ ಇರದು. ನಾವು ಸಮಾಧಾನದ ವಿಷಯವಾದ ಸುವಾರ್ತೆಯನ್ನು ಸಾರುವದರಲ್ಲಿ ಸಿದ್ಧಮನಸ್ಸೆಂಬ ಪಾದರಕ್ಷೆಗಳನ್ನು ಮೆಟ್ಟಿಕೊಂಡಿರಬೇಕು. ನಾವು ಹೊಂದಿರುವದು ಸಮಾಧಾನದ ವಿಷಯವಾದ ಸುವಾರ್ತೆ. ಆದರೂ ನಾವು ಇದನ್ನು ಇತರರ ಬಳಿಗೆ ಕೊಂಡು ಹೋಗಿ ಮುಂದುವರಿಯುವಾಗ ಇದು ಕಷ್ಟಕರವಾಗುವದು ಮತ್ತು ಆಗ ನಾವು ಏನನ್ನು ನಿರೀಕ್ಷಿಸಬೇಕೆಂದು ಕರ್ತನು ಮುಂದಾಗಿ ಹೇಳಿರುವ ಸಕಲ ವಿಧವಾದ ರಕ್ಷಣಾ ಕ್ರಮಗಳು ಹಾಗು ಆತನು ಜಯಶಾಲಿಗಳಾಗುವವರಿಗೆ ವಾಗ್ದಾನ ಮಾಡಿರುವ ಆಶೀರ್ವಾದ ಮಹಿಮೆಗಳು ನಮಗೆ ಅಗತ್ಯವಾಗುವದು.

## ಅಸೂಯೆ ದ್ವೇಷ ಹಗೆತನ ಕೊಲೆ

ನಮ್ಮ ಕರ್ತನು ದೇವಾಲಯದಲ್ಲಿದ್ದು ಉಪದೇಶ ಮಾಡುತ್ತಿದ್ದಾಗ ಯೆಹೂದ್ಯರ ಅಧಿಕಾರಿಗಳು ಅತನಿರುವದನ್ನು ಅರಿತವರಾಗಿ ಆತನ ಪ್ರಾಣಕ್ಕೆ ಸಂಚುಹಾಕುತ್ತಿದ್ದರು. ಹಿರೀಸಭೆಯ ಕೂಟವನ್ನು ಕರೆದು ಅದರ ಪ್ರತಿನಿಧಿಗಳಾದ ಅಧಿಕಾರಿಗಳು ಜನರ ಮಧ್ಯದಲ್ಲಿರುವಂತೆ ಮಾಡಿ, ಕರ್ತನ ಉಪದೇಶದಲ್ಲಿ ಕೆಲವು ದೋಷವನ್ನು ಅವರು ಕಂಡುಹಿಡಿದು ಅದರ ನೆಪದಿಂದ ಒಂದು ವಿಧವಾದ ಬಂಡಾಯ ಏಳುವದಕ್ಕೆ ನೆಪವಾಗ ಮಾಡಿ, ನಮ್ಮ ಕರ್ತನನ್ನು ಮೋಶೆಯ ಆಜ್ಞಾವಿಧಿಗಳಿಗೆ ವಿರೋಧವಾದ ಅಥವಾ ರೋಮಾಯರ ಆಜ್ಞೆಗಳಿಗೆ ವಿರೋಧವಾದ ಉಪದೇಶ ಮಾಡುವವನೆಂದು ಆರೋಪಿಸಿ ಆತನನ್ನು ಬಂಧಿಸುವ ಒಂದು ಜವಾಬ್ದಾರಿಯನ್ನು ಅವರಿಗೆ ಕೊಡಲಾಗಿತ್ತು. ಪ್ರತಿಯೊಂದು ಸಂದರ್ಭಗಳಲ್ಲಿಯೂ ಆತನನ್ನು ಮಾತಿನಲ್ಲಿ ಸಿಕ್ಕಿಸುವದಕ್ಕೆ ಪ್ರಯತ್ನಿಸಿ, ಹಾಗೆ ಮಾಡಿ ಆತನನ್ನು ಬಂಧಿಸಲು ಸಾಧ್ಯವಾಗದೆ ಆ ಅಧಿಕಾರಿಗಳು ಹಿರೀಸಭೆಗೆ ವರದಿ ಸಲ್ಲಿಸಲು ಹಿಂದಿರುಗಿದ್ದರು.

ಯೇಸುವನ್ನು ಹೀಗೆ ಹಿಡಿದು ಮರಣಕ್ಕೊಳಪಡಿಸಲು ಬಯಸುತ್ತಿದ್ದ ಜನರು ಭೂಲೋಕದಲ್ಲೆಲ್ಲಾ ಅತಿ ಪರಿಶುದ್ಧವಾದ ಜನಾಂಗದಲ್ಲಿದ್ದ ಅತಿ ಪ್ರಭಾವೀ ಪುರುಷರೆಂಬುದು ಮಾನವ ಹೃದಯದ ಮರುಳತನದ ಎಂಥಾ ವಿಷಾದನೀಯ ವರ್ಣನೆಯಿದು. ಇದು ಮಾತ್ರವಲ್ಲದೆ, ಇವರು ಧರ್ಮಶಾಸ್ತ್ರದ ಪಂಡಿತರುಗಳಾಗಿದ್ದು ಮೋಶೆಯ ಧರ್ಮಶಾಸ್ತ್ರದ ನಿಯಮಗಳ ಅಕ್ಷರಶಃ ವರ್ಣನೆ ಹಾಗೂ ಅದರ ತಾತ್ಪರ್ಯರೂಪಗಳನ್ನು ವಿವರಿಸುವದರಲ್ಲಿ ಅತಿ ನಿಪುಣರಾಗಿದ್ದರೆಂದು ಊಹಿಸಲಾದ ಈ ಜನರ ಸ್ಥಾನಮಾನಗಳು ಈಗಿನ ಕಾಲದ ಕ್ರೈಸ್ತ ಸಮುದಾಯದಲ್ಲಿನ ದೈವಶಾಸ್ತ್ರದ ಪಂಡಿತರಿಗೆ (ಡಾಕ್ಟರ್ಸ್ ಆಫ್ ಡಿವಿನಿಟಿ) ಸರಿಹೋಲುತ್ತದೆ. ಪಿಲಾತನು ನಂತರದಲ್ಲಿ ಮಾಡಿದಂತೆ, “ಯಾಕೆ? ಕೆಟ್ಟದ್ದೇನು ಮಾಡಿದನು?” ಎಂದು ನಾವೂ ಸಹ ಚೆನ್ನಾಗಿ ಕೇಳಬಹುದು. ಇದಕ್ಕೆ ಉತ್ತರವೇನೆಂದರೆ ಲೋಕದಲ್ಲಿನ ಅತಿ ಪ್ರತಿಭಾವಂತರೂ ವಿದ್ಯಾವಂತರೂ ಮತ್ತು ಹೆಸರಿಗೆ ಅತಿ ಧರ್ಮಿಷ್ಠರೂ ಆದ ಜನರ ಹೃದಯದಲ್ಲಿನ ಕೆಟ್ಟತನವೇ ಹೊರತು ಅಲ್ಲಿ ಬೇರೆ ವಿಧದ ಕೆಟ್ಟದ್ದೇನೂ ಇರಲಿಲ್ಲ.

ಅವರ ಉದ್ದೇಶವು ಏನಾಗಿತ್ತೆಂದು ಯಾವನಾದರೂ ಕೇಳಿದಲ್ಲಿ ಅದಕ್ಕೆ ಅವರು ಕೊಡುವ ಉತ್ತರವನ್ನು ನಾವು ಕಲ್ಪಿಸಿಕೊಳ್ಳುವದೇನಂದರೆ, ನಾವು ದೇವರಿಗೆ ಮತ್ತು ಮೋಶೆಯ ಮುಖಾಂತರವಾದ ಆತನ ಆಜ್ಞಾವಿಧಿಗಳಿಗೆ ಅತಿ ನಿಷ್ಠೆಯುಳ್ಳವರಾಗಿದ್ದು ದೇವರು ಈ ಬಲಿಷ್ಠ ಜನರ ಮೇಲೆ ನಮ್ಮನ್ನು ಅಧಿಕಾರಿಗಳನ್ನಾಗಿಯೂ ಬೋಧಕರುಗಳನ್ನಾಗಿಯೂ ಮಾಡಿರುವದರಿಂದ ನಾವು ಈ ಮನುಷ್ಯನನ್ನು ಅಡಗಿಸುವದರಲ್ಲಿ ಆಸಕ್ತರಾಗಿರುವೆವು; ಈ ಮನುಷ್ಯನು ಬಡವರ ವಿಷಯದಲ್ಲಿ ಅನುಕಂಪಪಡುವವನಾಗಿ ದೇವಭಯವುಳ್ಳವನಂತೆ ಕಂಡರೂ ಇವನು ಅತಿ ಕೆಡುಕನು. ಇವನು ತನ್ನನ್ನು ಮೇಸ್ಸೀಯನೆಂದು ಪ್ರತಿನಿಧಿಸಿಕೊಳ್ಳುವಲ್ಲಿ ಕೇಡನ್ನು ಉಂಟುಮಾಡುತ್ತಿರುವನು, ಯಾಕೆಂದರೆ ಈತನು ನಿಜವಾಗಿಯೂ ಸಾಮರ್ಥ್ಯವುಳ್ಳವನು, ಜನರಿಗೆ ಮರುಳು ಮಾಡಿರುವನು. ನಾವು ಅವನನ್ನು ಹೀಗೆಯೇ ಬಿಟ್ಟರೆ, ಈ ಜನಾಂಗದವರ ಮೇಲೆ ನೈತಿಕವಾಗಿ ಬೌದ್ಧಿಕವಾಗಿ ನಾಯಕರಾಗಿ ಈ ಜನಾಂಗವನ್ನು ನಿಯಂತ್ರಿಸಲು ನಮ್ಮ ವಶದಲ್ಲಿರುವ ಆಧಿಕಾರವು ನಮ್ಮ ಹಿಡಿತದಿಂದ ತಪ್ಪಿಹೋಗುವದು; ಈ ಮನುಷ್ಯನು ತನ್ನನ್ನು ಸ್ಥಿರಪಡಿಸಿಕೊಳ್ಳುವನು ಹಾಗು ಸಮಸ್ತ ಇಸ್ರಾಯೇಲ್ ಜನವೆಲ್ಲವೂ ನಮ್ಮನ್ನು ಬುದ್ಧಿಹೀನರೆಂದೂ ನೋಡುವರು; ಮತ್ತು ತಾವು ಮೆಸ್ಸೀಯನನ್ನು ತಿಳಿದುಕೊಳ್ಳಲು ಶಕ್ತರಲ್ಲವೆಂದೂ ಅಲ್ಲದೆ ಬುದ್ಧಿ ಶ್ರೇಷ್ಠರಾದ ತಮ್ಮ ಹಿರಿಯರು ಅವಿವೇಕಿಗಳಾಗಿ ದೇವಾನುಗ್ರಹಕ್ಕೆ ಹೊರತಾದವರಾಗಿದ್ದರಿಂದ ನಾವು ದೇವರು ದರ್ಶನಕೊಟ್ಟ ಸಮಯಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಲಿಲ್ಲವೆಂದು ತಿಳುಕೊಳ್ಳುವರು.

ಇದು ಈ ವಿಷಯದಲ್ಲಿ ಇವರು ತರ್ಕಿಸುತ್ತಿದ್ದ ರೀತಿಯಾಗಿದ್ದರೂ ಈ ಸನ್ನಿವೇಶದ ಬಗ್ಗೆ ಕರ್ತನ ದೃಷ್ಟಿಯು ಬಹು ವ್ಯತಿರಿಕ್ತವಾಗಿತ್ತು; ಅವರು ಕಪಟಿಗಳಾಗಿದ್ದು ತಾವು ನಿಜವಾಗಿಯೂ ಅಂಥವರಲ್ಲದಿದ್ದರೂ ಸೊಗುಹಾಕುವವರಾಗಿ ದೇವರ ವಿಷಯವಾದ ಅವರ ಸ್ತುತಿ ಮತ್ತು ಸೇವೆಗಳು ಔಪಚಾರಿಕವಾಗಿ ಬಾಯೋಪಚಾರಕ್ಕಾಗಿದ್ದು ಹೆಮ್ಮೆಯು ಅವರ ಪ್ರಯತ್ನ ಅವರ ವೃತ್ತಿಯ ಹಿಂದಿದ್ದು ನಮ್ಮ ಕರ್ತನ ಮತ್ತು ಆತನ ಜ್ಞಾನದ ಸಫಲತೆ ಮತ್ತು ಜನರಗುಂಪು ಆತನ ಸಂದೇಶಕ್ಕೆ ಗಮನ ಕೊಡುತ್ತಿರುವದು ಆ ಹೆಮ್ಮೆಯನ್ನು ತಾಕುತ್ತಿತ್ತು; ಅವರು ಅಸೂಯೆಯುಳ್ಳವರಾಗಿ, ದ್ವೇಷವೆಂಬುದು ಅವರ ಹೃದಯದಲ್ಲಿ ಉರಿಯಹತ್ತಿದ್ದು, ಅವರು ನಿಷ್ಕಾರಣವಾಗಿ ಆತನನ್ನು ದ್ವೇಷಿಸತೊಡಗಿದ್ದರು. ಕಾರಣವೇನೆಂದರೆ, ಆತನು ಕೇವಲ ಇವರಿಗಿಂತಲೂ ಉತ್ತಮನೂ ಪರಿಶುದ್ಧನೂ ವಿವೇಕಿಯೂ ಆಗಿರುವನೆಂಬುದು ಮತ್ತು ಈ ಅಂಶವನ್ನು ಜನರು ಗುರುತುಹಿಡಿದಿದ್ದರೆಂಬುದು.

ಅಸೂಯೆಯು ಅಂದರೆ ಸ್ವಾರ್ಥವು ಎಂಥಾ ಅಪಾಯಕರವಾದ ಸಂಗತಿ. ನಮ್ಮ ಕರ್ತನ ಜನರಲ್ಲಿ ಎಷ್ಟು ಮಂದಿ ಈ ದಿನಗಳಲ್ಲಿ ಇದರಿಂದ ಬಾಧಿತರಾಗಿರುವರೆಂದರೆ ಅವರು ಕರ್ತನ ಆತ್ಮವನ್ನು ಗುರುತಿಸುವದನ್ನು ಬಿಟ್ಟವರಾಗಿ ಒಬ್ಬರನ್ನೊಬ್ಬರು ಪ್ರೋತ್ಸಾಹಿಸಲು ಹಾಗು ಒಬ್ಬರನ್ನೊಬ್ಬರ ಪ್ರಭಾವವನ್ನು ಹೆಚ್ಚಿಸಿಕೊಂಡು ಕರ್ತನ ಈ ಕಾರ್ಯಗಳೆಲ್ಲವೂ ಒಂದೇ ಆಗಿರುವದೆಂಬುದನ್ನು ಅರಿತುಕೊಳ್ಳುವದನ್ನು ಬಯಸುವದಕ್ಕೆ ಬದಲಾಗಿ, ಅಯ್ಯೋ, ಹೋರಾಟ ಮನೋಭಾವ ಮತ್ತು ನಿರರ್ಥಕವಾದ ಕೀರ್ತಿಗೌರವಗಳು ಅವರಲ್ಲಿ ಕಂಡುಬರುತ್ತಿರುವವು. ಈ ವಿಧವಾದವುಗಳೆಲ್ಲವೂ ನಮ್ಮ ಕರ್ತನ ದೃಷ್ಟಿಯಲ್ಲಿ ಎಷ್ಟೋ ಅಸಂತೋಷವನ್ನು ಉಂಟುಮಾಡುವಂಥವುಗಳು!

## ನಿನ್ನ ಮಾತುಗಳು ಬಹಳ ಮಧುರ

ಆ ಓಲೆಕಾರರು ಹಿರಿಯಸಭೆಯವರ ಬಳಿಗೆ ಹಿಂದಿರುಗಿ ಬಂದಾಗ ಅವರಿಗೆ ಕೇಳಿದ ಪ್ರಶ್ನೆಯೆಂದರೆ, ನೀವು ಹಿಡಿದು ತಂದವನು ಎಲ್ಲಿ? ಅವನನ್ನು ಯಾಕೆ ಕರೆತರಲಿಲ್ಲ? ಆತನ ಮಾತಿನಲ್ಲಿ ಅವನನ್ನು ಸಿಕ್ಕಿಸಲು ನಿಮಗೆ ಆಗಲಿಲ್ಲವೇ? ಯಾವ ಮನುಷ್ಯನಾದರೂ ಬಹಿರಂಗವಾಗಿ ಮಾತನಾಡಿದಾಗ ಆತನು ಹೇಳಿದ ಯಾವದಾದರೂ ಒಂದು ವಿಷಯದಲ್ಲಿ ಆತನನ್ನು ಸಿಕ್ಕಿಸಿ ಬೋಧಕನಾಗಿ ಆತನ ಮೇಲೆ ಜನರಿಗೆ ಹಾನಿ ಉಂಟು ಮಾಡುವನೆಂಬ ಅರೋಪವನ್ನು ಹೊರಿಸಿ ಆತನು ಹೇಳಿದ್ದರಲ್ಲಿ ಮೋಶೆಯ ಆಜ್ಞಾವಿಧಿಗಳ ಅಥವಾ ರೋಮಾಯರ ನಿಯಮಗಳ ಉಲ್ಲಂಘನೆಯ ಅರ್ಥಬರುವಂತೆ ಮಾಡಲು ಸೂಕ್ಷ್ಮ ಮನಸ್ಸುಳ್ಳ ನಿಮ್ಮಂಥವರು ಅಶಕ್ತರಾಗಿರಲು ಸಾಧ್ಯವೇ? ಆ ಉತ್ತರವು ತನ್ನಲ್ಲಿ ಗ್ರಂಥವನ್ನೇ ಅಡಕವಾಡಿಕೊಂಡಿತ್ತು–"ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ."

ಕರ್ತನ ಹೆಜ್ಜೆಯ ಜಾಡಿನಲ್ಲಿ ನಡೆಯ ಬಯಸುವ ಆತನ ಜನರು ಲೋಕವು ಇನ್ನೂ ಅಸೂಯೆ ದ್ವೇಷ ಮತ್ತು ಹಗೆತನಗಳಲ್ಲಿ ತುಂಬಿಕೊಂಡಿರುವದನ್ನು ನಿರಂತರವಾಗಿ ಕಂಡುಕೊಳ್ಳುತ್ತಿರುವರು. ಇದು ಇನ್ನೂ ಸತ್ಯವೆಂಬುದನ್ನು ಅವರು ಕಂಡುಕೊಳ್ಳುವರು, "ಲೋಕವು ನಮ್ಮನ್ನು ತಿಳಿದುಕೊಳ್ಳುವದಿಲ್ಲ, ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ." ಅವರು ಇನ್ನೂ ಕಂಡುಕೊಳ್ಳುವದೆಂದರೆ, ತಮ್ಮನ್ನು ವಿರೋಧಿಸುವವರಲ್ಲಿ, ತಮಗೆ ಹಾನಿಯನ್ನುಂಟು ಮಾಡುವವರಲ್ಲಿ ತಮ್ಮ ಮಾತಿನಲ್ಲಿ ತಮ್ಮನ್ನು ಸಿಕ್ಕಿಸಲು ಪ್ರಯತ್ನಿಸುವವರಲ್ಲಿ ತಮ್ಮ ಘನತೆಗೆ ಹಾನಿಯುಂಟು ಮಾಡಲು ಬಯಸುವವರಲ್ಲಿ, ಅದು ವೈಯುಕ್ತಿಕವಾಗಿಲ್ಲದಿದ್ದರೂ, ಅವರು ಲೌಕೀಕವಾಗಿ ಘನವಂತರೂ ಲೌಕಿಕ ವಿಷಯದಲ್ಲಿ ಜ್ಞಾನಿಗಳೂ ಮತ್ತು ಲೌಕಿಕ ರೀತಿಯಲ್ಲಿ ದೈವಭಕ್ತರೂ ಆಗಿರುವರೆಂಬುದು. ಇವರಿಗೆ ಇರುವ ಕರ್ತನ ಸಂದೇಶವೆಂದರೆ: "ನಿಮ್ಮ ಸೈರಣೆಯಿಂದ ನಿಮ್ಮ ಪ್ರಾಣಗಳನ್ನು ಪಡಕೊಳ್ಳುವಿರಿ." ಇವರಿಗೆ ಇರುವ ಸೂಕ್ತವಾದ ವಿಧಾನವೆಂದರೆ, ಅವರು ತಮ್ಮ ನುಡಿಗಳಿಂದ ಪಾಪಮಾಡದಂತೆ ತಮ್ಮ ತುಟಿಗಳನ್ನು ಕಾದುಕೊಳ್ಳಬೇಕು; ಇವರು ತಮ್ಮ ಮಾತುಗಳು ಮತ್ತು ತಮ್ಮ ಹೃದಯದ ಧ್ಯಾನಗಳು ದೇವರಿಗೆ ಮೆಚ್ಚಿಕೆಯಾಗಿರಲೆಂದು ಪ್ರಾರ್ಥಿಸಬೇಕಿರುವದು ಮಾತ್ರವಲ್ಲದೆ ತಮ್ಮ ವಿಷಯದಲ್ಲಿ ಇದು ನಿಜವಾಗಿರುವಷ್ಟರ ಪ್ರಮಾಣದಲ್ಲಿ ಅವರು ಇತರರಿಗಿಂತಲೂ ತಮ್ಮ ಭಾಷೆಯಲ್ಲಿ ವಿವೇಕಿಗಳೂ ಹೆಚ್ಚು ವಿವೇಚನೆಯುಳ್ಳವರೂ ಆಗಿರಬೇಕು ಅಂದರೆ ಹೆಚ್ಚುಕಡಿಮೆ ಯಾವ ಮನುಷ್ಯನೂ ಮಾತನಾಡದ ರೀತಿಯಲ್ಲಿ ಮಾತನಾಡಿದಾತನ ಹಾಗಿರಬೇಕೆಂಬುದು.

ಆದರೆ ನಾಲಿಗೆಯನ್ನು ಕಾದುಕೊಳ್ಳುವದು ಎಂಬ ಈ ವಿಷಯವು ಎಂಥದ್ದು? ಅದು ನಿಜವಾಗಿಯೂ ಅಪೋಸ್ತಲನು ಹೇಳಿರುವಂತೆ ಯಾವನಾದರೂ ಮಾತಿನಲ್ಲಿ ತಪ್ಪದಿದ್ದರೆ ಅವನು ತನ್ನ ದೇಹವನ್ನೆಲ್ಲಾ ಸ್ವಾಧೀನಪಡಿಸಿಕೊಳ್ಳುವದಕ್ಕೆ ಸಮರ್ಥನೂ ಆಗಿರುವನು. ಹೇಳಬಾರದನ್ನು ಹೇಳುವದು ಯಾವನಿಗಾದರೂ ಬಹು ಸುಲಭ, ಒಂದು ಕೆಟ್ಟ ವದಂತಿಯನ್ನು ಪುನರುಚ್ಚರಿಸುವದು ಅಂದರೆ ಇತರರ ನಡವಳಿಕೆಯ ಬಗ್ಗೆ ಟೀಕಿಸುವದು, ಈ ರೀತಿಯಲ್ಲಿ ಅವಹೇಳನ ಮಾಡುವದು ಅಥವಾ ಇತರರ ಹಿತಾಸಕ್ತಿಗಳಿಗೆ ಅಥವಾ ಭಾವನೆಗಳಿಗೆ ಒಳ್ಳೆಯ ಹೆಸರಿಗೆ ಗಾಯ ಮಾಡುವದು ಅಥವಾ ನೋವನ್ನುಂಟುಮಾಡುವದು ಬಹುಪಾಲು ಜನರಿಗೆ ಅತಿ ಸುಲಭ. ನಾವು ಈ ನಿಟ್ಟಿನಲ್ಲಿ ನಮ್ಮ ಕರ್ತನಂತೆ ಇತರ ಮನುಷ್ಯರು ಮಾತನಾಡಲಾರದ ರೀತಿಯಲ್ಲಿ ಮಾತನಾಡುವದಕ್ಕೆ ಹೆಚ್ಚು ಹೆಚ್ಚಾಗಿ ಶ್ರಮಿಸುವವರಾಗೋಣ ಮತ್ತು ಹೀಗೆ ನಮ್ಮನ್ನು ಕತ್ತಲೆಯಿಂದ ತನ್ನ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನ ಗುಣಾತಿಶಯಗಳನ್ನು ಪ್ರಚಾರ ಮಾಡುವವರಾಗೋಣ.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಯೆರೂಸಲೇಮ್ | ಹಬ್ಬದ ನಂತರ ಮಾಡಿದ ಉಪದೇಶ; ಕುರುಡನನ್ನು ಸ್ವಸ್ಥಪಡಿಸಿದುದು | –– | –– | –– | 8:12–9:41 |

# ಯೋಹಾನ 8:12–59

ಯೇಸು ತಿರಿಗಿ ಅವರ ಸಂಗಡ ಮಾತಾಡಲಾರಂಭಿಸಿ–ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು ಎಂದು ಹೇಳಿದನು. ಇದನ್ನು ಕೇಳಿ ಫರಿಸಾಯರು ಆತನಿಗೆ–ನಿನ್ನ ವಿಷಯವಾಗಿ ನೀನೇ ಸಾಕ್ಷಿ ಹೇಳಿಕೊಳ್ಳುತ್ತೀ; ನಿನ್ನ ಸಾಕ್ಷಿ ನಿಜವಾಗದು ಎಂದು ಹೇಳಲು ಯೇಸು ಅವರಿಗೆ–ನಾನು ಎಲ್ಲಿಂದ ಬಂದವನಾಗಿಯೂ ಎಲ್ಲಿಗೆ ಹೋಗುವವನಾಗಿಯೂ ಇದ್ದೇನೆಂಬದು ನನಗೆ ಗೊತ್ತಿರುವದರಿಂದ ನನ್ನ ವಿಷಯವಾಗಿ ನಾನೇ ಸಾಕ್ಷಿ ಹೇಳಿಕೊಂಡರೂ ನನ್ನ ಸಾಕ್ಷಿ ನಿಜವಾಗಿರುವದು. ನೀವಾದರೋ ನಾನು ಎಲ್ಲಿಂದ ಬಂದವನು, ಎಲ್ಲಿಗೆ ಹೋಗುವವನು ಎಂಬುದನ್ನು ತಿಳಿಯದವರು. ನೀವು ಹೊರಗಿನ ತೋರಿಕೆಯ ಪ್ರಕಾರ ತೀರ್ಪುಮಾಡುವವರು; ನಾನು ಯಾವನಿಗೂ ತೀರ್ಪುಮಾಡುವದಿಲ್ಲ. ತೀರ್ಪುಮಾಡಿದರೂ ನನ್ನ ತೀರ್ಪು ಸರಿಯಾದದ್ದೇ; ಯಾಕಂದರೆ ನಾನು ಒಂಟಿಗನಲ್ಲ; ನಾನೂ ನನ್ನನ್ನು ಕಳುಹಿಸಿಕೊಟ್ಟ ನನ್ನ ತಂದೆಯೂ ಇಬ್ಬರು ಇದ್ದೇವೆ. ಇಬ್ಬರ ಸಾಕ್ಷಿ ನಿಜವಾಗುತ್ತದೆಂಬದಾಗಿ ನಿಮ್ಮ ಧರ್ಮಶಾಸ್ತ್ರದಲ್ಲೇ ಬರೆದದೆ. ನನ್ನನ್ನು ಕುರಿತು ನಾನು ಸಾಕ್ಷಿ ಹೇಳುವವನಾಗಿದ್ದೇನೆ, ಅಲ್ಲದೆ ನನ್ನನ್ನು ಕಳುಹಿಸಿದ ತಂದೆಯೂ ನನ್ನ ವಿಷಯವಾಗಿ ಸಾಕ್ಷಿಹೇಳುತ್ತಾನೆ ಅಂದನು. ಅವರು–ನಿನ್ನ ತಂದೆ ಎಲ್ಲಿದ್ದಾನೆ? ಎಂದು ಕೇಳಲು ಯೇಸು–ನೀವು ನನ್ನನ್ನೂ ತಿಳಿದಿಲ್ಲ, ನನ್ನ ತಂದೆಯನ್ನೂ ತಿಳಿದಿಲ್ಲ; ನನ್ನನ್ನು ತಿಳಿದಿದ್ದರೆ ನನ್ನ ತಂದೆಯನ್ನೂ ತಿಳಿದಿರುವಿರಿ ಅಂದನು. ಯೇಸು ದೇವಾಲಯದೊಳಗೆ ಕಾಣಿಕೆಯ ಪೆಟ್ಟಿಗೆಗಳು ಇರುವ ಅಂಗಳದಲ್ಲಿ ಉಪದೇಶ ಮಾಡುತ್ತಿರುವಾಗ ಈ ಮಾತುಗಳನ್ನು ಹೇಳಿದನು. ಆತನ ಕಾಲ ಇನ್ನೂ ಬಾರದೆ ಇದ್ದ ಕಾರಣ ಯಾರೂ ಆತನನ್ನು ಹಿಡಿಯಲಿಲ್ಲ.

ಯೇಸು ತಿರಿಗಿ ಅವರಿಗೆ–ನಾನು ಹೋಗುತ್ತೇನೆ; ನೀವು ನನ್ನನ್ನು ಹುಡುಕುವಿರಿ; ಮತ್ತು ನಿಮ್ಮ ಪಾಪದಲ್ಲೇ ಸಾಯುವಿರಿ. ನಾನು ಹೋಗುವಲ್ಲಿಗೆ ನೀವು ಬರಲಾರಿರಿ ಅಂದನು. ಆ ಮಾತಿಗೆ ಯೆಹೂದ್ಯರು–ನಾನು ಹೋಗುವಲ್ಲಿಗೆ ನೀವು ಬರಲಾರಿರೆಂದು ಹೇಳುತ್ತಾನಲ್ಲಾ? ಇವನು ತನ್ನನ್ನು ತಾನೇ ಕೊಂದು ಕೊಳ್ಳಬೇಕೆಂದಿದ್ದಾನೋ ಎಂದು ಮಾತಾಡಿಕೊಂಡರು. ಆತನು ಅವರಿಗೆ–ನೀವು ಕೆಳಗಿನವರು, ನಾನು ಮೇಲಿನವನು; ನೀವು ಈ ಲೋಕದವರು, ನಾನು ಈ ಲೋಕದವನಲ್ಲ. ಆದುದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದೆನು; ನನ್ನನ್ನು ಆತನೆಂದು ನೀವು ನಂಬದೆ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದನು. ಆಗ ಅವರು–ನೀನು ಯಾರು? ಅಂದಾಗ ಯೇಸು–ನಾನು ನಿಮಗೆ ಹೇಳಿದಂಥದೇ. ನಿಮ್ಮ ವಿಷಯವಾಗಿ ಮಾತಾಡುವದಕ್ಕೂ ನಿಮ್ಮ ಮೇಲೆ ತೀರ್ಪುಮಾಡುವದಕ್ಕೂ ಅನೇಕ ಸಂಗತಿಗಳು ನನಗುಂಟು; ಆದರೆ ನನ್ನನ್ನು ಕಳುಹಿಸಿಕೊಟ್ಟಾತನು ಸತ್ಯವಂತನು; ಆತನಿಂದ ನಾನು ಕೇಳಿದವುಗಳನ್ನೇ ಲೋಕಕ್ಕೆ ಹೇಳುತ್ತೇನೆ ಅಂದನು. ಆತನು ತಂದೆಯನ್ನು ಸೂಚಿಸಿ ಇದನ್ನು ಹೇಳಿದನೆಂದು ಅವರಿಗೆ ಗೊತ್ತಾಗಲಿಲ್ಲ. ಹೀಗಿರಲಾಗಿ ಯೇಸು–ನೀವು ಮನುಷ್ಯಕುಮಾರನನ್ನು ಎತ್ತರದಲ್ಲಿಟ್ಟಾಗ ಇವನೇ ಆತನೆಂದೂ ತನ್ನಷ್ಟಕ್ಕೆ ತಾನೇ ಏನೂ ಮಾಡದೆ ತಂದೆಯು ತನಗೆ ಬೋಧಿಸಿದ ಹಾಗೆ ಅದನ್ನೆಲ್ಲಾ ಮಾತಾಡಿದನೆಂದೂ ನನ್ನ ವಿಷಯವಾಗಿ ನಿಮಗೆ ತಿಳಿಯುವದು. ನನ್ನನ್ನು ಕಳುಹಿಸಿಕೊಟ್ಟಾತನು ನನ್ನ ಸಂಗಡ ಇದ್ದಾನೆ, ನಾನು ಆತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ ಅಂದನು. ಆತನು ಈ ಮಾತುಗಳನ್ನಾಡುವಾಗ ಅನೇಕರು ಆತನಲ್ಲಿ ನಂಬಿಕೆಯಿಟ್ಟರು. ಆಗ ಯೇಸು ತನ್ನನ್ನು ನಂಬಿದ ಯೆಹೂದ್ಯರಿಗೆ–ನೀವು ನನ್ನ ವಾಕ್ಯದಲ್ಲಿ ನೆಲೆಗೊಂಡವರಾದರೆ ನಿಜವಾಗಿ ನನ್ನ ಶಿಷ್ಯರಾಗಿದ್ದು ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು ಎಂದು ಹೇಳಿದನು. ಅದಕ್ಕವರು–ನಾವು ಅಬ್ರಹಾಮನ ಸಂತಾನದವರು; ನಾವು ಯಾರಿಗೂ ಎಂದೂ ದಾಸರಾಗಿಲ್ಲ; ನಿಮಗೆ ಬಿಡುಗಡೆಯಾಗುವದೆಂದು ನೀನು ಹೇಳುವದು ಹೇಗೆ? ಅಂದರು. ಅದಕ್ಕೆ ಯೇಸು–ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಪಾಪಮಾಡುವವರೆಲ್ಲರು ಪಾಪಕ್ಕೆ ದಾಸರಾಗಿದ್ದಾರೆ. ದಾಸನು ಮನೆಯಲ್ಲಿ ಶಾಶ್ವತವಾಗಿ ಇರುವದಿಲ್ಲ; ಮಗನು ಶಾಶ್ವತವಾಗಿ ಇರುವನು; ಆದದರಿಂದ ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು. ನೀವು ಅಬ್ರಹಾಮನ ಸಂತಾನದವರು ನಿಜ; ಆದರೂ ನನ್ನ ವಾಕ್ಯವು ನಿಮ್ಮಲ್ಲಿ ಸಾಗದೆ ಇರುವ ಕಾರಣ ನನ್ನನ್ನು ಕೊಲ್ಲುವದಕ್ಕೆ ನೋಡುತ್ತೀರಿ. ನಾನು ತಂದೆಯ ಬಳಿಯಲ್ಲಿ ನೋಡಿದ್ದನ್ನು ಹೇಳುತ್ತೇನೆ; ನೀವೂ ತಂದೆಯಿಂದ ಕೇಳಿದ್ದನ್ನು ಮಾಡಿರಿ ಅಂದನು. ಅದಕ್ಕವರು–ನಮ್ಮ ತಂದೆಯು ಅಬ್ರಹಾಮನೇ ಅಂದಾಗ ಯೇಸು ಅವರಿಗೆ–ನೀವು ಅಬ್ರಹಾಮನ ಮಕ್ಕಳಾಗಿದ್ದರೆ ಅಬ್ರಹಾಮನು ಮಾಡಿದಂಥ ಕೃತ್ಯಗಳನ್ನು ಮಾಡುತ್ತಿದ್ದಿರಿ. ನೀವು ಹಾಗೆ ಮಾಡದೆ ದೇವರಿಂದ ಕೇಳಿದ ಸತ್ಯವನ್ನು ನಿಮಗೆ ಹೇಳಿದವನಾದ ನನ್ನನ್ನು ಕೊಲ್ಲುವದಕ್ಕೆ ನೋಡುತ್ತೀರಿ; ಅಬ್ರಹಾಮನು ಹೀಗೆ ಮಾಡಲಿಲ್ಲ. ನೀವು ನಿಮ್ಮ ತಂದೆಯ ಕೃತ್ಯಗಳನ್ನು ಮಾಡುತ್ತೀರಿ ಅಂದನು. ಅದಕ್ಕವರು–ನಾವು ಹಾದರಕ್ಕೆ ಹುಟ್ಟಿದವರಲ್ಲ; ನಮಗೆ ಒಬ್ಬನೇ ತಂದೆ, ಆತನು ದೇವರೇ ಅಂದರು. ಯೇಸು ಅವರಿಗೆ–ದೇವರು ನಿಮ್ಮ ತಂದೆಯಾಗಿದ್ದರೆ, ನನ್ನನ್ನು ಪ್ರೀತಿಸುತ್ತಿದ್ದಿರಿ; ಯಾಕಂದರೆ ನಾನು ದೇವರಿಂದಲೇ ಹೊರಟು ಲೋಕಕ್ಕೆ ಬಂದವನಾಗಿದ್ದೇನೆ. ನನ್ನಷ್ಟಕ್ಕೆ ನಾನೇ ಬರಲಿಲ್ಲ; ಆತನೇ ನನ್ನನ್ನು ಕಳುಹಿಸಿದ್ದಾನೆ. ನೀವು ನನ್ನ ಮಾತನ್ನು ಗ್ರಹಿಸದೆ ಇರುವದಕ್ಕೆ ಕಾರಣವೇನು? ನನ್ನ ಬೋಧನೆಗೆ ಕಿವಿಗೊಡಲಾರದೆ ಇರುವದೇ ಕಾರಣ. ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡೆಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ. ನಾನು ಸತ್ಯವನ್ನು ಹೇಳುವವನಾದದರಿಂದ ನೀವು ನನ್ನನ್ನು ನಂಬುವದಿಲ್ಲ. ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು

ನಿಮ್ಮೊಳಗೆ ಯಾರಿದ್ದಾರೆ? ನಾನು ಸತ್ಯವನ್ನು ಹೇಳುವವನಾಗಿರುವಲ್ಲಿ ನೀವು ನನ್ನ ಮಾತನ್ನು ನಂಬದೆ ಇರುವದು ಯಾಕೆ? ದೇವರಿಂದ ಹುಟ್ಟಿದವನು ದೇವರ ಮಾತುಗಳನ್ನು ಕೇಳುತ್ತಾನೆ. ನೀವು ದೇವರಿಂದ ಹುಟ್ಟದ ಕಾರಣ ಅವುಗಳನ್ನು ಕೇಳುವದಿಲ್ಲ ಎಂದು ಹೇಳಿದನು.

ಅದಕ್ಕೆ ಯೆಹೂದ್ಯರು–ನೀನು ಸಮಾರ್ಯನೂ ದೆವ್ವಹಿಡಿದವನೂ ಆಗಿದ್ದೀ ಎಂದು ನಾವು ಹೇಳುವದು ಸರಿಯಲ್ಲವೋ ಎಂದು ಹೇಳಲು ಯೇಸು–ನಾನು ದೆವ್ವಹಿಡಿದವನಲ್ಲ, ನನ್ನ ತಂದೆಯನ್ನು ಸನ್ಮಾನಿಸುವವನಾಗಿದ್ದೇನೆ; ಆದರೂ ನೀವು ನನ್ನನ್ನು ಅವಮಾನ ಪಡಿಸುತ್ತೀರಿ. ನನಗೆ ಮಾನಬರಬೇಕೆಂದು ನಾನು ಅಪೇಕ್ಷಿಸುವದಿಲ್ಲ; ನನಗೆ ಮಾನಬರಬೇಕೆಂದು ಅಪೇಕ್ಷಿಸುವವನು ಒಬ್ಬನಿದ್ದಾನೆ; ಆತನೇ ನ್ಯಾಯತೀರಿಸುವನು. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಯಾವನಾದರೂ ನನ್ನ ವಾಕ್ಯವನ್ನು ಕೈಕೊಂಡು ನಡೆದರೆ ಅವನು ಎಂದಿಗೂ ಸಾವನ್ನು ಕಾಣುವದಿಲ್ಲ ಅಂದನು. ಅದಕ್ಕೆ ಯೆಹೂದ್ಯರು–ನೀನು ದೆವ್ವಹಿಡಿದವನೆಂದು ಈಗ ನಮಗೆ ತಿಳಿಯಿತು; ಅಬ್ರಹಾಮನು ಸತ್ತನು. ಪ್ರವಾದಿಗಳೂ ಸತ್ತರು; ಆದರೆ ನೀನು–ನನ್ನ ವಾಕ್ಯವನ್ನು ಕೈಕೊಂಡು ನಡೆಯುವವನು ಎಂದಿಗೂ ಸಾವನ್ನು ಅನುಭವಿಸುವದಿಲ್ಲವೆಂದು ಹೇಳುತ್ತೀ. ನಮ್ಮ ಮೂಲಪುರುಷನಾದ ಅಬ್ರಹಾಮನಿಗಿಂತ ನೀನು ದೊಡ್ಡವನೋ? ಅವನೂ ಸತ್ತುಹೋದನು, ಪ್ರವಾದಿಗಳೂ ಸತ್ತುಹೋದರು; ನಿನ್ನನ್ನು ಯಾರೆಂತ ಮಾಡಿಕೊಳ್ಳುತ್ತೀ ಎಂದು ಹೇಳಲು ಯೇಸು–ನನ್ನನ್ನು ನಾನೇ ಮಹಿಮೆಪಡಿಸಿಕೊಂಡರೆ ನನ್ನ ಮಹಿಮೆ ಹುರುಳಿಲ್ಲದ್ದು; ನನ್ನನ್ನು ಮಹಿಮೆಪಡಿಸುವನು ನನ್ನ ತಂದೆಯೇ. ನೀವು ಆತನನ್ನು ನಮ್ಮ ದೇವರು ಅನ್ನುತ್ತೀರಿ; ಆದರೂ ನೀವು ಆತನನ್ನು ತಿಳಿಯದೆ ಇದ್ದೀರಿ. ನಾನಂತೂ ಆತನನ್ನು ಬಲ್ಲೆನು; ಆತನನ್ನು ಅರಿಯೆನೆಂದು ಹೇಳಿದರೆ ನಿಮ್ಮ ಹಾಗೆ ಸುಳ್ಳುಗಾರನಾಗುವೆನು; ಆದರೆ ಆತನನ್ನು ತಿಳಿದಿದ್ದೇನೆ, ಆತನ ವಾಕ್ಯವನ್ನು ಕೈಕೊಂಡು ನಡೆಯುತ್ತೇನೆ. ನಿಮ್ಮ ಮೂಲಪುರುಷನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು ಅಂದನು. ಅದಕ್ಕೆ ಯೆಹೂದ್ಯರು–ನಿನಗೆ ಇನ್ನೂ ಐವತ್ತು ವರುಷವಾಗಿಲ್ಲ; ಅಬ್ರಹಾಮನನ್ನು ನೋಡಿದ್ದೀಯಾ? ಅಂದಾಗ ಯೇಸು–ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ ಅಂದನು. ಅವರು ಈ ಮಾತುಗಳನ್ನು ಕೇಳಿ ಆತನನ್ನು ಕೊಲ್ಲುವದಕ್ಕಾಗಿ ಕಲ್ಲುತಕ್ಕೊಳ್ಳಲು ಯೇಸು ಅಡಗಿಕೊಂಡು ದೇವಾಲಯದೊಳಗಿಂದ ಹೊರಟುಹೋದನು.

## ಯೋಹಾನ 9:1–41

ಯೇಸು ಹಾದುಹೋಗುತ್ತಿರುವಾಗ ಒಬ್ಬ ಹುಟ್ಟುಕುರುಡನನ್ನು ಕಂಡನು. ಆತನ ಶಿಷ್ಯರು–ಗುರುವೇ, ಇವನು ಕುರುಡನಾಗಿ ಹುಟ್ಟಿರುವದಕ್ಕೆ ಯಾರು ಪಾಪಮಾಡಿದರು? ಇವನೋ? ಇವನ ತಂದೆತಾಯಿಗಳೋ? ಎಂದು ಆತನನ್ನು ಕೇಳಿದ್ದಕ್ಕೆ ಯೇಸು–ಇವನೂ ಪಾಪಮಾಡಲಿಲ್ಲ, ಇವನ ತಂದೆತಾಯಿಗಳೂ ಪಾಪಮಾಡಲಿಲ್ಲ; ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವದಕ್ಕೆ ಇದಾಯಿತು. ನನ್ನನ್ನು ಕಳುಹಿಸಿ ದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು. ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ ಅಂದನು. ಇದನ್ನು ಹೇಳಿ ನೆಲದ ಮೇಲೆ ಉಗುಳಿ ಆ ಉಗುಳಿನಿಂದ ಕೆಸರು ಮಾಡಿ ಆ ಕೆಸರನ್ನು ಅವನ ಕಣ್ಣುಗಳಿಗೆ ಹಚ್ಚಿ–ನೀನು ಸಿಲೋವ ಕೊಳಕ್ಕೆ ಹೋಗಿ ತೊಳಕೋ ಅಂದನು. (ಸಿಲೋವ ಎಂಬ ಮಾತಿಗೆ ಕಳುಹಿಸಲ್ಪಟ್ಟವನು ಎಂದರ್ಥ) ಅವನು ಹೋಗಿ ತೊಳಕೊಂಡು ಕಣ್ಣು ಹೊಂದಿದವನಾಗಿ ಬಂದನು.

ಆಗ ನೆರೆಹೊರೆಯವರೂ ಅವನು ಬಿಕ್ಷಗಾರನಾಗಿದ್ದದ್ದನ್ನು ಮೊದಲು ನೋಡಿದವರೂ–ಇವನು ಕೂತಿದ್ದ ಆ ಬಿಕ್ಷಕನಲ್ಲವೇ ಅಂದರು. ಕೆಲವರು–ಹೌದು, ಅವನೇ ಅಂದರು; ಇನ್ನೂ ಕೆಲವರು–ಅವನಲ್ಲ, ಅವನ ಹಾಗಿದ್ದಾನೆ ಅಂದರು. ಅವನಾದರೆ–ನಾನೇ ಅವನು ಅಂದನು. ಆಗ ಅವರು–ನಿನಗೆ ಕಣ್ಣು ಹೇಗೆ ಬಂದವು? ಎಂದು ಅವನನ್ನು ಕೇಳಿದ್ದಕ್ಕೆ ಇವನು–ಯೇಸು ಎಂಬುವನಿದ್ದಾನಲ್ಲಾ, ಅವನು ಕೆಸರುಮಾಡಿ ನನ್ನ ಕಣ್ಣಿಗೆ ಹಚ್ಚಿ ಸಿಲೋವ ಕೊಳಕ್ಕೆ ಹೋಗಿ ತೊಳಕೋ ಎಂದು ಹೇಳಿದನು. ನಾನು ಹೋಗಿ ತೊಳಕೊಂಡೆನು; ಕಣ್ಣುಬಂದವು ಅಂದನು. ಅವರು–ಅವನೆಲ್ಲಿದ್ದಾನೆ ಎಂದು ಅವನನ್ನು ಕೇಳಿದ್ದಕ್ಕೆ ಅವನು–ನನಗೆ ಗೊತ್ತಿಲ್ಲ ಅಂದನು.

ಮುಂಚೆ ಕುರುಡನಾಗಿದ್ದ ಇವನನ್ನು ಫರಿಸಾಯರ ಬಳಗೆ ಕರಕೊಂಡು ಹೋದರು. ಯೇಸು ಕೆಸರುಮಾಡಿ ಅವನಿಗೆ ಕಣ್ಣುಕೊಟ್ಟ ದಿವಸವು ಸಬ್ಬತ್ ದಿವಸವಾಗಿತ್ತು. ಆದಕಾರಣ ಆ ಫರಿಸಾಯರು ಸಹ ಅವನನ್ನು ವಿಚಾರಿಸಿ–ನಿನಗೆ ಹೇಗೆ ಕಣ್ಣುಬಂದವು ಎಂದು ಕೇಳಿದರು. ಅವನು ಅವರಿಗೆ–ಕೆಸರನ್ನು ನನ್ನ ಕಣ್ಣಿನ ಮೇಲೆ ಇಟ್ಟನು, ನಾನು ತೊಳಕೊಂಡೆನು, ಕಣ್ಣು ಕಾಣುತ್ತವೆ ಎಂದು ಉತ್ತರಕೊಟ್ಟನು. ಆ ಫರಿಸಾಯರಲ್ಲಿ ಕೆಲವರು–ಈ ಮನುಷ್ಯನು ದೇವರಿಂದ ಬಂದವನಲ್ಲ; ಅವನು ಸಬ್ಬತ್ ದಿವಸವನ್ನು ಲಕ್ಷ್ಯಮಾಡುವದಿಲ್ಲವಲ್ಲಾ ಅಂದರು. ಇನ್ನು ಕೆಲವರು–ಇಂಥ ಮಹತ್ತುಗಳನ್ನು ಮಾಡುವದು ಭಕ್ತಿಹೀನನ ಕೈಯಿಂದ ಹೇಗಾದೀತು? ಅಂದರು. ಹೀಗೆ ಅವರಲ್ಲಿ ಭೇದವಾಯಿತು. ಹೀಗಿರಲಾಗಿ ಅವರು ತಿರಿಗಿ ಆ ಕುರುಡನನ್ನು–ಅವನು ನಿನಗೆ ಕಣ್ಣುಕೊಟ್ಟದ್ದರಿಂದ ನೀನು ಅವನ ವಿಷಯವಾಗಿ ಏನು ಹೇಳುತ್ತೀ ಎಂದು ಕೇಳಿದಾಗ ಅವನು–ಆತನು ಪ್ರವಾದಿ ಅನ್ನುತ್ತೇನೆ ಎಂದು ಹೇಳಿದನು.

ಆದರೆ ಕಣ್ಣುಬಂದವನ ವಿಷಯವಾಗಿ ಆ ಯೆಹೂದ್ಯರು–ಇವನು ಕುರುಡನಾಗಿದ್ದು ಈಗ ಕಣ್ಣುಳ್ಳವನಾದನೆಂದು ನಂಬದೆ ಅವನ ತಂದೆತಾಯಿಗಳನ್ನು ಕರೆಯಿಸಿ–ಕುರುಡನಾಗಿ ಹುಟ್ಟಿದನೆಂದು ನೀವು ಹೇಳುವಂಥ ನಿಮ್ಮ ಮಗನು ಇವನೋ? ಈಗ ಇವನಿಗೆ ಕಣ್ಣು ಹೇಗೆ ಬಂದವು ಎಂದು ಅವರನ್ನು ಕೇಳಿದರು. ಅವನ ತಂದೆತಾಯಿಗಳು–ಇವನು ನಮ್ಮ ಮಗನೆಂದೂ

ಕುರುಡನಾಗಿ ಹುಟ್ಟಿದನೆಂದೂ ಬಲ್ಲೆವು; ಈಗ ಹೇಗೆ ಕಣ್ಣು ಬಂದವೋ ಅರಿಯೆವು; ಕಣ್ಣುಕೊಟ್ಟವನು ಯಾರೋ ಅರಿಯೆವು; ಇವನನ್ನೇ ಕೇಳಿರಿ; ಪ್ರಾಯದವನಾಗಿದ್ದಾನಲ್ಲಾ; ಇವನೇ ತನ್ನ ವಿಷಯವಾಗಿ ಹೇಳುವನು ಎಂದು ಉತ್ತರಕೊಟ್ಟರು. ಅವನ ತಂದೆತಾಯಿಗಳು ಯೆಹೂದ್ಯರಿಗೆ ಅಂಜಿದ ಕಾರಣ ಈ ಪ್ರಕಾರ ಹೇಳಿದರು. ಯಾಕಂದರೆ–ಯಾವನಾದರೂ ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಂಡು ಹೇಳಿದರೆ ಅಂಥವನಿಗೆ ಬಹಿಷ್ಕಾರ ಹಾಕಬೇಕೆಂದು ಯೆಹೂದ್ಯರು ಅದಕ್ಕೆ ಮುಂಚೆ ಗೊತ್ತುಮಾಡಿ ಕೊಂಡಿದ್ದರು. ಇವನು ಪ್ರಾಯದವನು, ಇವನನ್ನೇ ಕೇಳಿರಿ ಎಂದು ಅವನ ತಂದೆತಾಯಿಗಳು ಹೇಳಿದ್ದಕ್ಕೆ ಇದೇ ಕಾರಣ.

ಆದಕಾರಣ ಅವರು ಕುರುಡನಾಗಿದ್ದ ಆ ಮನಷ್ಯನನ್ನು ಎರಡನೆಯ ಸಾರಿ ಕರೆದು–ನೀನು ದೇವರಿಗೆ ಮಾನಬರುವಂತೆ ಹೇಳು; ಆ ಮನುಷ್ಯನು ಭಕ್ತಿಹೀನನೆಂದು ನಾವು ಬಲ್ಲೆವು ಎಂದು ಹೇಳಲು ಅವನು–ಆತನು ಭಕ್ತಿಹೀನನೋ ಏನೋ ನಾನರಿಯೆ, ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೆನು, ಈಗ ಕಣ್ಣುಕಾಣುತ್ತವೆ ಅಂದನು. ಅವರು ಅವನನ್ನು–ನಿನಗೆ ಏನು ಮಾಡಿದನು? ನಿನಗೆ ಹೇಗೆ ಕಣ್ಣುಕೊಟ್ಟನು ಎಂದು ಕೇಳಿದ್ದಕ್ಕೆ ಅವನು–ನಿಮಗೆ ಆಗಲೇ ಹೇಳಿದೆನಲ್ಲಾ, ನೀವು ಕೇಳಲಿಲ್ಲ; ಯಾಕೆ ತಿರಿಗಿ ಕೇಳಬೇಕೆಂದಿ – ದ್ದೀರಿ? ಆತನ ಶಿಷ್ಯರಾಗುವದಕ್ಕೆ ನಿಮಗೂ ಮನಸ್ಸದೆಯೋ? ಅಂದನು. ಅದಕ್ಕೆ ಅವರು ಅವನನ್ನು ಬೈದು–ನೀನು ಆ ಮನುಷ್ಯನ ಶಿಷ್ಯ; ನಾವು ಮೋಶೆಯ ಶಿಷ್ಯರು; ಮೋಶೆಯ ಸಂಗಡ ದೇವರು ಮಾತಾಡಿದನೆಂದು ನಾವು ಬಲ್ಲೆವು; ಆದರೆ ಇವನು ಎಲ್ಲಿಯವನೋ ಅರಿಯೆವು ಅಂದರು. ಅದಕ್ಕೆ ಆ ಮನುಷ್ಯನು–ಆತನು ನನಗೆ ಕಣ್ಣುಕೊಟ್ಟರೂ ಆತನು ಎಲ್ಲಿಯವನೋ ನಿಮಗೆ ಗೊತ್ತಿಲ್ಲದೆ ಇರುವದು ಆಶ್ಚರ್ಯವಲ್ಲವೇ. ಭಕ್ತಿಹೀನರ ಪ್ರಾರ್ಥನೆಯನ್ನು ದೇವರು ಕೇಳುವದಿಲ್ಲ; ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆಯನ್ನು ಕೇಳುತ್ತಾನೆಂದು ಬಲ್ಲೆವು. ಹುಟ್ಟುಕುರುಡನಿಗೆ ಯಾರಾದರೂ ಕಣ್ಣು ಕೊಟ್ಟ ಸಂಗತಿಯನ್ನು ಲೋಕಾದಿಯಿಂದ ಒಬ್ಬರೂ ಕೇಳಿದ್ದಿಲ್ಲ; ಈತನು ದೇವರಿಂದ ಬಂದವನಲ್ಲದಿದ್ದರೆ ಏನೂ ಮಾಡಲಾರದೆ ಇರುತ್ತಿದ್ದನು ಅಂದನು. ಆ ಮಾತಿಗೆ ಅವರು–ನೀನು ಕೇವಲ ಪಾಪದಲ್ಲಿ ಹುಟ್ಟಿದವನು, ನಮಗೆ ಉಪದೇಶ ಮಾಡುತ್ತೀಯೋ ಎಂದು ಹೇಳಿ ಅವನನ್ನು ಹೊರಗೆ ಹಾಕಿದರು.

ಅವನನ್ನು ಹೊರಗೆ ಹಾಕಿದರೆಂದು ಯೇಸು ಕೇಳಿ ಅವನನ್ನು ಕಂಡುಕೊಂಡು–ನೀನು ಮನುಷ್ಯಕುಮಾರನನ್ನು ನಂಬುತ್ತೀಯೋ ಎಂದು ಕೇಳಿದನು. ಅದಕ್ಕವನು–ಆತನು ಯಾರು, ಸ್ವಾಮೀ? ತಿಳಿಸಿದರೆ ಆತನನ್ನು ನಂಬುತ್ತೇನೆ ಅಂದಾಗ ಯೇಸು–ನೀನು ಅವನನ್ನು ಕಂಡಿದ್ದೀ; ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಅವನು ಅಂದನು. ಅವನು–ನಂಬುತ್ತೇನೆ, ಸ್ವಾಮೀ, ಎಂದು ಹೇಳಿ ಆತನಿಗೆ ಅಡ್ಡಬಿದ್ದನು.

ಆಗ ಯೇಸು–ನಾನು ನ್ಯಾಯತೀರ್ಪಿಗಾಗಿ ಈ ಲೋಕಕ್ಕೆ ಬಂದಿದ್ದೇನೆ; ಆ ತೀರ್ಪು ಏನಂದರೆ, ಕಣ್ಣಿಲ್ಲದವರಿಗೆ ಕಣ್ಣು ಬರುವವು, ಕಣ್ಣಿದ್ದವರು ಕುರುಡರಾಗುವರು ಅಂದನು. ಇದನ್ನು ಆತನ ಸಂಗಡ ಇದ್ದ ಫರಿಸಾಯರು ಕೇಳಿ–ನಾವೂ ಕುರುಡರೇನು? ಎಂದು ಕೇಳಿದಾಗ ಯೇಸು ಅವರಿಗೆ–ನೀವು ಕುರುಡರಾಗಿದ್ದರೆ ನಿಮಗೆ ಪಾಪವು ಇರುತ್ತಿರಲಿಲ್ಲ, ನಮಗೆ ಕಣ್ಣು ಕಾಣುತ್ತದೆ ಅನ್ನುತ್ತೀರಾದ್ದರಿಂದ ನಿಮ್ಮ ಪಾಪವು ಉಳಿದದೆ.

# "ನಿಮಗೆ ನಿಜವಾಗಿಯೂ ಬಿಡುಗಡೆಯಾಗುವದು"

**ರೀಪ್ರಿಂಟ್ಸ್ ಪುಟ 2438**

## ಯೋಹಾನ 8:12,31–36

**"ಆದದರಿಂದ ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು." – ಯೋಹಾನ 8:36**

ಈ ಪಾಠದಲ್ಲಿನ ನಮ್ಮ ಕರ್ತನ ಉಪದೇಶವು ನಮ್ಮ ಹಿಂದಿನ ಪಾಠದಲ್ಲಿ ಪ್ರಸ್ತಾಪಿಸಿರುವ ಪರ್ಣಶಾಲೆಗಳ ಹಬ್ಬದ ಎಂಟನೆಯ ದಿನ ಅಥವಾ ಮಹಾದಿನದ ಮಾರನೆಯ ದಿನದಂದು ನೀಡಲಾಗಿರುವದೆಂದು ಭಾವಿಸಲಾಗಿರುವದು: ಈ ನಿರ್ಣಯವು ಈ (ಎಂಟನೇ) ಅಧ್ಯಾಯದ ಮೊದಲನೇ ವಚನದ ಮೇಲೆ ಮತ್ತು ಏಳನೇ ಅಧ್ಯಾಯದ ಕಡೆಯ ವಚನದ ಮೇಲೆ ಆಧಾರವಾಗಿರುವದು. ಎಂಟನೇ ದಿನವು ಸರಿಯಾಗಿ ಹಬ್ಬದ ಕಡೆಯ ದಿನವಾದರೂ ಜನರು ಈ ಹಬ್ಬದ ಸಂತೋಷವನ್ನು ಬಿಟ್ಟುಕೊಡಲು ಮನಸ್ಸಿಲ್ಲದ್ದರಿಂದ ಮತ್ತೊಂದು ದಿನವನ್ನು ಕೆಲವು ಮಟ್ಟಿಗೆ ಆಚರಿಸಲಾಗುತ್ತಿತ್ತೆಂದು ತೋರುತ್ತದೆ. ಇನ್ನೊಂದು ಅಭಿಪ್ರಾಯವೆಂದರೆ ಇದು ಎಂಟನೆಯ ದಿನದಲ್ಲಿ ಮಾಡಿದ ಉಪದೇಶದ ಭಾಗವಾಗಿತ್ತೆಂಬುದು.

ಈ ಹಬ್ಬದಲ್ಲಿ ಎರಡು ದೊಡ್ಡ ದೀಪಗಳನ್ನು ದೇವಾಲಯದ ದ್ವಾರದ ಮಂಟಪದಲ್ಲಿ ಇರಿಸಲಾಗುತ್ತಿತ್ತೆಂದು ಹೇಳಲಾಗಿರುವದು. ಈ ಸ್ಥಳದಲ್ಲಿಯೇ ಯೇಸುವು ಉಪದೇಶ ಮಾಡಿದ್ದುದು. (ದೇವಾಲಯದ ಈ ಭಾಗವನ್ನು ಸ್ತ್ರೀಯರಿಗೆ ಮತ್ತು ಪುರುಷರಿಗೆ ಸಹ ತೆರೆಯಲಾಗಿದ್ದು ಇದನ್ನು ಸ್ತ್ರೀಯರ ಅಂಗಳವೆಂದು ಕರೆಯಲಾಗುತ್ತಿತ್ತು.) ಈ ದೀಪಗಳು ಅಥವಾ ದೀಪಸ್ತಂಭಗಳು ಚಿನ್ನದ ಮುಲಾಮಿನ ಲೇಪನದಿಂದ ಅಲಂಕರಿತವಾಗಿ ಎಪ್ಪತ್ತೈದು ಅಡಿ ಎತ್ತರವಾಗಿದ್ದು ಪಟ್ಟಣದ ಮೇಲೆಲ್ಲಾ ಬೆಳಕನ್ನು ಚೆಲ್ಲುತ್ತಿದ್ದು ಆ ಸಮಯದಲ್ಲಿ ಇದು ಬಹು ಅಸಾಧಾರಣವಾಗಿತ್ತು. ಇದು ಲೋಕಕ್ಕೆ ಬೆಳಕು ಎಂಬ ಯೇಸುವಿನ ಉಪದೇಶಕ್ಕೆ ಆಧಾರವಾಗಿತ್ತೆಂದು ಭಾವಿಸಲಾಗಿರುವದು: ಆದರೂ ಯೆಹೂದ್ಯರು ಮಾಡುತ್ತಿದ್ದ ಕೆಲವು

ಆಚರಣೆಗಳ ಸಂದರ್ಭವನ್ನು ಉಪಯೋಗಿಸಿಕೊಂಡು ನಮ್ಮ ಕರ್ತನು ಈ ಹೇಳಿಕೆಗಳನ್ನು ನೀಡಿರುವ ಸಾಧ್ಯತೆಗಳಿವೆ. ಬರ್ಕ್ಸ್‌ಡಾರ್ಫ್ ಎಂಬುವವರು ಈ ಮುಂದಿನ ವರ್ಣನೆಯನ್ನು ನೀಡಿರುವರು:

"ಒಂಭತ್ತನೆಯ ದಿನ ಅಂದರೆ "ಪರ್ಣಶಾಲೆಗಳ" ಹಬ್ಬದ ಎಂಟನೇ ದಿನದ ಮಾರನೆಯ ದಿನವು ಹೀಗೆಯೇ ಪರಿಶುದ್ಧ ದಿನವಾಗಿದ್ದು ಅದನ್ನು "ಧರ್ಮಶಾಸ್ತ್ರದ ಸಲುವಾದ ಸಂತೋಷದ ಹಬ್ಬ" ಎಂದು ಕರೆಯಲಾಗುವದು; ಏಕೆಂದರೆ ಧರ್ಮಶಾಸ್ತ್ರದ ಕಡೆಯ ಭಾಗವನ್ನು ಆ ದಿನದಲ್ಲಿ ಓದಲಾಗುತ್ತಿತ್ತು; ಉಳಿದ ಭಾಗಗಳನ್ನು ಹಿಂದಿನ ಸಬ್ಬತ್ ದಿನಗಳಲ್ಲಿ ಓದಲಾಗಿರುತ್ತಿತ್ತು. ಒಂಭತ್ತನೆಯ ದಿನದಲ್ಲಿ ಯೆಹೂದ್ಯರು ವಾಡಿಕೆಯಾಗಿ ಮಾಡುತ್ತಿದ್ದದೆಂದರೆ ಧರ್ಮಶಾಸ್ತ್ರದ ಎಲ್ಲಾ ಗ್ರಂಥಗಳನ್ನು ಅದರ ಪೆಟ್ಟಿಗೆಯಿಂದ ಹೊರತೆಗೆದು ಜ್ಞಾನೋಕ್ತಿ 6:23 ಅಲ್ಲದೆ ಬಹು ನಿರ್ದಿಷ್ಟವಾಗಿ ಕೀರ್ತನೆ 119:105 ವಾಕ್ಯಭಾಗಗಳ ಸೂಚನೆಯಾಗಿ ಅದರಲ್ಲಿ ದೀಪವನ್ನು ಇಡುತ್ತಿದ್ದುದು" – ಯೆಹೂದ್ಯ ಸಭಾಮಂದಿರ, ಪುಟ 122

ಈ ಕಾರ್ಯವನ್ನು ಸಾಂಕೇತಿಕವಾಗಿ ಪರಿಗಣಿಸಿದಾಗ ಮೊದಲು ಧರ್ಮಶಾಸ್ತ್ರವು ಬೆಳಕಾಗಿತ್ತೆಂಬುದು, ಮತ್ತು ಎರಡನೆಯದಾಗಿ, ನಿಜವಾದ ಬೆಳಕು ಅಂದರೆ ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿರುವ ದೇವರ ಕೃಪೆಯ ವಿಷಯವಾದ ಸುವಾರ್ತೆಯು ಯೆಹೂದ್ಯರ ಆಜ್ಞಾವಿಧಿಗಳನ್ನು ಕಡೆಯಲ್ಲಿ ರದ್ದುಪಡಿಸುವದೆಂಬುದು ಅನ್ವಯವಾಗಿರುತ್ತದೆ.

ಕಡೆಯದಾದ ಈ ವಿಷಯವು ಅಥವಾ ಆ ದೊಡ್ಡ ಎರಡು ದೀಪಗಳು ಇಲ್ಲವೇ ಇವೆರಡೂ ನಮ್ಮ ಕರ್ತನು ಪಾಠವನ್ನು ಒತ್ತಿಹೇಳಲು ರಚಿಸಿದ ಒಂದು ಬಹು ಸೂಕ್ತವಾದ ಸಲಹೆ ಅಥವಾ ನಿದರ್ಶನವಾಗಿತ್ತು. ಒಂದರ ಆಲೋಚನೆಯೆಂದರೆ ಲೋಕವು ಕತ್ತಲೆಯಲ್ಲಿದ್ದು ಜೀವಕೊಡುವ ಬೆಳಕಿನ ಅಗತ್ಯವಿರುವದೆಂದು ಅಲ್ಲದೆ ಯಾರು ಆ ಬೆಳಕಿನಲ್ಲಿ ನಡೆಯುವನೋ ಅವನು ಎಡಹುವದಿಲ್ಲವೆಂಬದು. ಇನ್ನೊಂದರ ಸಲಹೆ ಅಥವಾ ಅಲೋಚನೆಯು ಇದರಂತೆಯೇ ಗ್ರಹಿಸಬಹುದಾದದ್ದು. ಅದೇನಂದರೆ ಅಜ್ಞಾನವೆಂಬ ತೆರೆಯು ಕಡೆಯದಾಗಿ ತೆಗೆದುಹಾಕಲಾಗುವದನ್ನು ಹಾಗೂ ಸತ್ಯದ ಆತ್ಮವನ್ನು ಅರಿತುಕೊಳ್ಳಲಾಗುವದನ್ನು ಅನ್ವಯಿಸಲಾಗಿರುವದು. ಮತ್ತು ಹೀಗೆ ಯೇಸು ನಿಜವಾದ ಬೆಳಕಾಗಿ ಲೋಕಕ್ಕೆ ಬರುವ ಪ್ರತಿ ಮನುಷ್ಯನಿಗೂ ದೇವರ ಗುಣಗಳ ಮತ್ತು ಆಜ್ಞೆಗಳ ಅಲ್ಲದೆ ನಿತ್ಯಜೀವವನ್ನು ಹೊಂದಿ ಅನುಭವಿಸಲು ಇರುವ ಶರತ್ತುಗಳ ವಿಷಯವಾದ ಬೆಳಕನ್ನು ಕೊಡುವವನಾಗಿರುವನು.

ಇನ್ನೊಂದು ಸಲಹೆಯೆಂದರೆ, ಪರ್ಣಶಾಲೆಗಳ ಹಬ್ಬವು ಇಸ್ರಾಯೇಲ್ಯರು ಅರಣ್ಯದ ಮಾರ್ಗವಾಗಿ ಕಾನಾನಿಗೆ ಪ್ರಯಾಣಿಸುತ್ತಿದ್ದುದನ್ನು ಸೂಚಿಸಿರುವಂತೆ ಅವರು ಹಿಂಬಾಲಿಸಬೇಕಿದ್ದ ಈ ಎರಡು ದೊಡ್ಡ ಬೆಳಕುಗಳು ಅಗ್ನಿಸ್ತಂಭ ಮತ್ತು ಮೇಘಸ್ತಂಭಗಳ ವಿಷಯವನ್ನು ಉಲ್ಲೇಖಿಸಿರುವ ಸಂಭವವಿದೆ. ಇವು ಇಸ್ರಾಯೇಲ್ಯರನ್ನು ಅರಣ್ಯ ಪ್ರಯಾಣದಲ್ಲಿ ನಡೆಸಿದ ದೊಡ್ಡ ಬೆಳಕಾಗಿದ್ದು ಅವರನ್ನು ಬೆನ್ನಟ್ಟಿ ಬಂದ ಅವರ ಶತೃಗಳಿಗೆ ಘೋರವಾದ ಕತ್ತಲಾಗಿದ್ದವು. ಈ ಅಂಶವು ಇನ್ನೊಂದನ್ನು ಸಂಪೂರ್ಣವಾಗಿ ಹೊಂದಿಕೊಂಡಿರುವದು ಕಾರಣ ಆತ್ಮಿಕ ಇಸ್ರಾಯೇಲ್ಯರು ಪಾಪವೆಂಬ ಅರಣ್ಯದ ಮೂಲಕವಾಗಿ ಪರಮ ಕಾನಾನಿನ ಕಡೆಗೆ ಪ್ರಯಾಣಿಸುತ್ತಿದ್ದಾರೆಂದು ಮತ್ತು ನಮ್ಮ ಕರ್ತನು ಹಾಗೂ ಆತನ ಉಪದೇಶಗಳು ತನ್ನ ಜನರಿಗೆ ಅಂದರೆ ಒಂದೇ ಮನೆಯವರಂತಿರುವ ನಂಬಿಕೆಯುಳ್ಳವರಿಗೆ ಅದರಲ್ಲಿ ವಿಶೇಷವಾಗಿ ಪರಲೋಕದಿಂದಾದ ಮಾರ್ಗದರ್ಶನಗಳಿಗೆ ಜಾಗರೂಕರಾಗಿ ಲಕ್ಷ್ಯಕೊಡುವವರಿಗೆ ಬೆಳಕು ಮತ್ತು ಮಾರ್ಗದರ್ಶನವೂ ಆಗಿರುವದನ್ನು ನಾವು ಅರಿತುಕೊಂಡಿರುವೆವು.

ಕ್ರಿಸ್ತನೊಂದಿಗಿರುವ ಸಂಬಂಧವು ಪ್ರತಿಷ್ಠೆಯಲ್ಲಿ ತಕ್ಷಣವೇ ಹೊಂದಿಕೊಳ್ಳುವ ಮತ್ತು ಅದನ್ನು ಎಂದೂ ಕಳಕೊಳ್ಳಲಾಗದ ಸಂಗತಿಗಳು ಎಂಬುದಲ್ಲವೆಂದು ವಚನ 31 ಮತ್ತು 32ರಲ್ಲಿನ ಹೇಳಿಕೆಗಳು ಸ್ಪಷ್ಟವಾಗಿ ತೋರಿಸಿರುವದು. ಇದರಲ್ಲಿ ಶಿಷ್ಯತನವೆನ್ನುವದು ಯಾರು ತನ್ನನ್ನು ರಕ್ಷಕನೆಂದು ಅಂಗೀಕರಿಸಿಕೊಂಡು ಕೇವಲ ಆತನ ಮೂಲಕವಾಗಿ ಸೌಭಾಗ್ಯ ಆಶೀರ್ವಾದಗಳನ್ನು ಪಡಕೊಳ್ಳುವರೋ ಅವರು ಅಂಗೀಕರಿಸುವ ವಿಷಯವೆಂಬುದನ್ನು ನಮ್ಮ ಕರ್ತನು ಪ್ರತಿಪಾದಿಸಿರುವನು. ಮತ್ತು ಇಲ್ಲಿ ತೋರಿಸಿಕೊಟ್ಟಿರುವಂತೆ ಶಿಷ್ಯತನವೆನ್ನುವದು ಪ್ರವೀಣತೆಗೆ ಬರುವದನ್ನು ಸೂಚಿಸುವದಿಲ್ಲ; ಬದಲಾಗಿ ಶಿಷ್ಯನಾಗುವವನು ಪರಿಪೂರ್ಣತೆಯನ್ನು ಪಡೆಯುವವರೆಗೆ ಒಬ್ಬ ಅನನುಭವಿಯಂತಿ–ರುವನು; ಅವನು ತನ್ನ ಗುರುವಿನ ಉಪದೇಶಗಳಿಗೆ ಅಧೀನನಾಗಿ ತಾನು ನೈತಿಕವಾಗಿ ಬೌದ್ಧಿಕವಾಗಿ ಕ್ರಿಸ್ತನಲ್ಲಿ ಪೂರ್ಣ ಮನುಷ್ಯನ ಸ್ಥಿತಿಯನ್ನು ತಲುಪವವರೆಗೂ ಶಿಷ್ಯನಾಗಿಯೇ ಇರುವನು. ಕ್ರಿಸ್ತನ ಹೆಸರನ್ನು ಹೇಳಿಕೊಳ್ಳುವವರೆಲ್ಲರೂ ಎಲ್ಲಾ ಸಂಗತಿಗಳಲ್ಲಿ ಪರಿಪೂರ್ಣತೆ ಹೊಂದಬೇಕೆನ್ನುವದನ್ನು ನಿರೀಕ್ಷಿಸುವ ಲೋಕದ ಜನರು ಮಾತ್ರವಲ್ಲದೆ ಕ್ರೈಸ್ತರೂ ಸಹ ಪೂರ್ಣವಾದ ಪ್ರತಿಷ್ಠೆಯು ತಮ್ಮಲ್ಲಿ ತಕ್ಷಣವೇ ಪರಿಪೂರ್ಣತೆಯನ್ನು ಉಂಟುಮಾಡುವದೆಂಬ ವ್ಯರ್ಥವಾದ ಕಲ್ಪನೆಗಳನ್ನು ಹೊಂದಿದವರಾಗಿ ಈ ವಿಷಯದಲ್ಲಿ ದೊಡ್ಡ ತಪ್ಪನ್ನು ಮಾಡಿರುವರು; ತಮ್ಮಲ್ಲಿ ಪಾಪವಿಲ್ಲವೆಂದು ಕೆಲವರು ನಿರರ್ಥಕವಾಗಿ ಹಾಗೂ ಪಾಪಪೂರ್ಣರಾಗಿ ಹೇಳಿಕೊಳ್ಳುವರು. ಮತ್ತು ಈ ಮೂಲಕವಾಗಿ ಅವರು ತಮಗೆ ಒಬ್ಬ ಮಧ್ಯಸ್ಥನಾಗಿ ತನ್ನ ಯಜ್ಞಫಲದ ಮೂಲಕವಾಗಿ ತಮ್ಮ ಲೋಪದೋಷ ಅತಿರೇಕಗಳನ್ನು ಮುಚ್ಚಿಹಾಕುವ ರಕ್ಷಕನ ಅವಶ್ಯಕತೆಯಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿರುವದನ್ನು ಸೂಚಿಸುವರು.

ಹೊಂದಬೇಕಿರುವ ಸರಿಯಾದ ಅಭಿಪ್ರಾಯವೆಂದರೆ ಅದು ನಮ್ಮ ಕರ್ತನ ವಾಕ್ಯದಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿರುವಂಥದೇ; ಅದೇನಂದರೆ ಶಿಷ್ಯತನ ಹೊಂದುವದಕ್ಕೆ ಪಾಪಿಗಳನ್ನು ಕರೆಯಲಾಗಿರುವದಿಲ್ಲ, ಆದರೆ ಅವರು ಪಶ್ಚಾತಾಪಪಟ್ಟು ಮಾನಸಾಂತರವಾಗಿ ವಿಮೋಚಕನ ಮೂಲಕವಾಗಿ (ನೀತಿನಿರ್ಣಯ ಹೊಂದಿ) ತಮ್ಮ ಪಾಪಗಳಿಗೆ ಕ್ಷಮೆಯನ್ನು ಹೊಂದಿಕೊಳ್ಳಲು ಕರೆಯಲ್ಪಟ್ಟಿರುವರು: ಆದರೂ ಇದೆಲ್ಲವೂ ಅವರು ನೀತಿ ನಿರ್ಣಯ ಹೊಂದಿದವರಾಗಿ ತಮ್ಮನ್ನು

ಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವದರ ಮೂಲಕ ಕ್ರಿಸ್ತನ ಶಿಷ್ಯರಾಗಿ ಆತನ ಅನುಭವ ಶಾಲೆಯಲ್ಲಿ ಕಲಿಯುವ ಉದ್ದೇಶಕ್ಕಾಗಿರುವದು.

ಯಾಕೆ ನಾವು ಕ್ರಿಸ್ತನ ಅನುಭವಶಾಲೆಗೆ ಸೇರಬೇಕು? ಇದರಲ್ಲಿ ನಾವು ಕಲಿತುಕೊಳ್ಳಲಿರುವ ಪಾಠಗಳು ಯಾವುದು? ಮತ್ತು ನಾವು ಯಾವ ಕಾರಣಕ್ಕಾಗಿ ಈ ಪಾಠಗಳನ್ನು ಕಲಿಯಲು ಬಯಸುವವರಾಗಿ ಅವುಗಳನ್ನು ಅಧ್ಯಯನ ಮಾಡಲು ನಾವು ಪ್ರತಿಷ್ಠಿಸಿಕೊಳ್ಳಲಿರುವದು?

ಕ್ರಿಸ್ತನ ಅನುಭವಶಾಲೆಗೆ ಸೇರಲು ಇರುವ ಉತ್ತೇಜನ ಕರವಾದ ಸಂಗತಿಯೆಂದರೆ, ನೀತಿ ನಿರ್ಣಯ ಹೊಂದಿದ ನಂಬಿಕೆಯುಳ್ಳವರಿಗೆ ಪರಲೋಕದ ತಂದೆಯು ಕ್ರಿಸ್ತನೆಂಬ ನೂತನವಾದ ಜೀವವುಳ್ಳ ಮಾರ್ಗದ ಮೂಲಕವಾಗಿ ತನ್ನ ಕೃಪಾಸನದ ಬಳಿಗೆ ಬರಲು ನೀಡಿರುವ ಆಹ್ವಾನ. ಇಂಥವರಿಗೆ ಒಂದು ಉನ್ನತವಾದ ಸ್ಥಾನಕ್ಕೆ ಅಂದರೆ "ದೇವರ ಮಕ್ಕಳು" ಆಗುವದಕ್ಕೆ ಆತನು ಕರೆಯನ್ನು ನೀಡಿರುವನು; ಮತ್ತು "ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು; ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ಪಾಲುಗಾರರಾಗುವದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು."

ಕ್ರಿಸ್ತನ ಈ ಅನುಭವಶಾಲೆಯನ್ನು–ಶ್ರದ್ಧೆಭಕ್ತಿಯಿಂದ ಮತ್ತು ಪ್ರೀತಿಯಿಂದ ಪ್ರೇರಿತವಾಗಿ ತನ್ನನ್ನು ನಿರಾಕರಿಸುವದನ್ನು ಕಲಿಯುವ ಅನುಭವಶಾಲೆ, ಸ್ವಾರ್ಥತ್ಯಾಗವನ್ನು ಕಲಿಯುವ ಅನುಭವಶಾಲೆ, ಎಂದು ಪರಿಗಣಿಸಬಹುದು. "ಸಹೋದರರಾಗಿ" ತನ್ನಿಂದ ಅಂಗೀಕರಿಸಲ್ಪಡುವವರನ್ನು ಶಿಕ್ಷಿಸಲು ತಂದೆಯಿಂದ ನೇಮಿತನಾದ ಈ ಅನುಭವಶಾಲೆಯ ಮಹಾಬೋಧಕನು ಸ್ವತಃ ತಾನೇ ಈ ಅನುಭವಶಾಲೆಯಲ್ಲಿ ತಂದೆಯ ಪರಿಶೀಲನೆ ಹಾಗು ನಿರ್ದೇಶನದ ಮೂಲಕವಾಗಿ ಕಲಿತವನಾಗಿರುವನು–"ಹೀಗೆ ಆತನು ಮಗನಾಗಿದ್ದರೂ ಅನುಭವಿಸಿದ ಬಾಧೆಗಳಿಂದಲೇ ವಿಧೇಯತೆಯನ್ನು ಕಲಿತುಕೊಂಡನು. ಇದಲ್ಲದೆ ಆತನು ಸಿದ್ಧಿಗೆ ಬಂದು [ತಾನು ಕರೆಯಲ್ಪಟ್ಟ ಉನ್ನತ ಸ್ಥಾನಕ್ಕೆ ಅಂದರೆ ದೈವೀಕ ಸ್ವಭಾವಕ್ಕೆ ಅಂಗೀಕರಿಸಲ್ಪಟ್ಟವನಾಗಿ] ...ತನಗೆ ವಿಧೆಯ ರಾಗುವವರೆಲ್ಲರಿಗೂ ನಿರಂತರವಾದ ರಕ್ಷಣೆಗೆ ಕಾರಣನಾದನು." – ಇಬ್ರಿಯ 5:8

"ಕೃಪೆಯಿಂದಲೂ ಸತ್ಯತೆಯಿಂದಲೂ ಕೂಡಿದ ತಂದೆಯ ಒಬ್ಬನೇ ಮಗನನ್ನು" ನಮ್ಮಂತೆ ಸಕಲ ವಿಷಯಗಳಲ್ಲಿ ಪರಿಶೋಧಿ ಸುವದು ಅವಶ್ಯವಾಗಿತ್ತು. ಹೀಗೆ ಆತನು ಏನೇ ಬಂದರೂ ತಂದೆಯ ಚಿತ್ತಕ್ಕೆ ತಾನು ವಿಧೇಯನಾಗಿರುವದನ್ನು ಹಾಗು ತನ್ನ ನೆರೆಯವನನ್ನು ಅಂದರೆ ತಂದೆಯ ಏರ್ಪಾಡಿನ ಮೂಲಕವಾಗಿ ವಿಮೋಚಿಸಿ ಮೇಲಕ್ಕೆತ್ತಲಿರುವ ಮಾನವರನ್ನು ಪ್ರೀತಿಸುವದನ್ನು ಪೂರ್ಣವಾಗಿ ಪ್ರಮಾಣೀಕರಿಸಿ ತೋರಿಸಿಕೊಡ ಬೇಕಿತ್ತು. ಇದಕ್ಕೂ ಮಿಗಿಲಾಗಿ, (ಪರಿಪೂರ್ಣತೆಯಿಂದ) ಬಿದ್ದುಹೋಗಿದ್ದು ನಂತರದಲ್ಲಿ ವಿಮೋಚಿತರಾಗಿ ತನ್ನೊಂದಿಗೆ (ಕ್ರಿಸ್ತನೊಂದಿಗೆ) ಸಹಬಾಧ್ಯರಾಗಲು ಕರೆಯಲ್ಪಟ್ಟಿರುವ ಮಾನವ ಕುಲದವರಾದ ನಾವು ತಂದೆಯು ಅಂಗಿಕಾರ ಹೊಂದಿದ ಕ್ರಿಸ್ತನ ಮನೋಭಾವವನ್ನು ಪಡೆಯುವ ಉದ್ದೇಶಕ್ಕಾಗಿ ಆ ಅನುಭವ ಶಾಲೆಯಲ್ಲಿ ಶಿಕ್ಷಣ ಪಡೆದು ಶಿಕ್ಷಿತರಾಗುವದು ಅವಶ್ಯವಿತ್ತು. ಕ್ರಿಸ್ತನ ಈ ಅನುಭವಶಾಲೆಯನ್ನು ತಂದೆಯು ತನ್ನ ಮಕ್ಕಳಿಗಾಗಿ ಅಂದರೆ ದೈವಿಕ ಸ್ವಭಾವದಲ್ಲಿ ಪಾಲನ್ನು ಹೊಂದಲು ಕರೆಯಲ್ಪಟ್ಟವರಿಗಾಗಿ ಏರ್ಪಡಿಸಿಕೊಟ್ಟಿರುವನು. ನಿಜವಾಗಿಯೂ, ದೇವರು ಪೂರ್ವದಲ್ಲಿ ಮೊದಲೇ ಮಾಡಿದ ತನ್ನ ಸಂಕಲ್ಪದ ಮೇರೆಗೆ ನಾವು ಕರೆಯಲ್ಪಟ್ಟು ಕ್ರಿಸ್ತನ ಪ್ರತಿರೂಪಿಗಳಾಗಿ ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗಲು ಯೋಗ್ಯರನ್ನಾಗಿ ಮಾಡುವ ಸಲುವಾಗಿರುವದೆಂಬ ಸರಳವಾದ ಹೇಳಿಕೆಯನ್ನು ನಾವು ಪಡೆದಿರುವೆವು.

ಇದರಿಂದಾಗಿ ನಾವು ನೋಡುವುದೇನೆಂದರೆ, ನಂಬಿಕೆ ಮತ್ತು ಪ್ರತಿಷ್ಠೆಯ ಮೂಲಕವಾಗಿ ಕರ್ತನನ್ನು ಸೇರುವಲ್ಲಿ ನಾವು ನಮ್ಮನ್ನು ಉನ್ನತ ಮಟ್ಟಕ್ಕೆ ತಲುಪಿದವರು ಮತ್ತು ಬಾಧ್ಯತೆ ಹೊಂದಿದವರೆಂದು ಘೋಷಿಸಿಕೊಳ್ಳಲಾಗದು, ಆದರೆ ನಮ್ಮನ್ನು–"ದೇವರು ತನ್ನನ್ನು ಪ್ರೀತಿಸುವವರಿಗೆ ಸಿದ್ಧಮಾಡಿರುವಂಥ ದೆಲ್ಲವನ್ನು" ಭಾಧ್ಯವಾಗಿ ಹೊಂದಲು ಸಿದ್ಧವಾಗ ಬಯಸುವ ವಿದ್ಯಾರ್ಥಿಗಳೆಂದು, ಶಿಷ್ಯರೆಂದು ನಮ್ಮ ವಿಷಯವಾಗಿ ಘೋಷಿಸಿ ಕೊಳ್ಳುವೆವು. ದೇವರು ಈ ವಿಷಯವಾಗಿ ಮಾಡಿರುವ ಬೋಧನೆ ಯಾಗಿರುವದೆಂದು ಈ ಅಂಶವನ್ನು ಮನಸ್ಸಿನಲ್ಲಿಟ್ಟು ಕೊಂಡದ್ದೇ ಯಾದರೆ, ಮಾಡಬಾರದ ಸಂಗತಿಗಳನ್ನು ನಾವು ಅನಿವಾರ್ಯ ವಾಗಿ ಮಾಡಬೇಕಾಗಿ ಬಂದಾಗ, ಮತ್ತು ನಾವು ಮಾಡಬೇಕಾದ ಸಂಗತಿಗಳನ್ನು ಮಾಡದೆ ಇರುವದನ್ನು ಅಲ್ಲದೆ ನಮ್ಮ ಶರೀರದಲ್ಲಿ ಪರಿಪೂರ್ಣತೆಯೆಂಬುದು ಇಲ್ಲವೆಂಬುದನ್ನು ನಾವು ಕಂಡು ಕೊಂಡಾಗ, ನಮ್ಮ ವಿಷಯವಾಗಿ ನಾವು ನಿರಾಶರಾಗದಂತೆ ಇವು ನಮ್ಮನ್ನು ತಡೆಯುವದು. – 1 ಕೊರಿಂಥ 2:9; ರೋಮಾ. 7:25

ಇದಕ್ಕೂ ಹೆಚ್ಚಾಗಿ, ಕ್ರಿಸ್ತನ ಅನುಭವಶಾಲೆಯಲ್ಲಿ ಸೇರಿ ದೇವರ ರಾಜ್ಯಕ್ಕಾಗಿ ನಾವು ಆತನಿಂದ ಶಿಕ್ಷಣ ಹೊಂದಿ ಸಿದ್ಧವಾಗುತ್ತಿರುವದು ನಮ್ಮ ಶರೀರಭಾವವಲ್ಲವೆಂಬುದನ್ನು ನಾವು ನೆನಪಿನಲ್ಲಿಡಬೇಕು, ಯಾಕೆಂದರೆ ರಕ್ತಮಾಂಸವು ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು. (1 ಕೊರಿಂಥ 15:50) ನಾವು ಆತ್ಮಿಕಭಾವವನ್ನು ಹೊಂದಲು ನೀಡಿರುವ ದೇವರ ಕರೆಯನ್ನು ಅಂಗೀಕರಿಸಿರುವದು ಆ ಮಾತಿನ ಪತ್ರಿಯೊಂದು ಅರ್ಥದಲ್ಲಿಯೂ ಭೂಸಂಬಂದವಾದ ಸ್ವಭಾವಗಳನ್ನು ತೊಡೆದುಹಾಕುವ ಸಲುವಾಗಿರುವದು ಮತ್ತು ಇದರ ಅರ್ಥವೇನಂದರೆ ನಾವು ನೂತನ ಸೃಷ್ಟಿಗಳಾಗಿ ಅಂದರೆ ದೇವರ ಮಕ್ಕಳಾಗಿ ಹುಟ್ಟುವದು. ಕ್ರಿಸ್ತನ ಅನುಭವಶಾಲೆಯಲ್ಲಿರುವದು ನೂನತ ಮನಸ್ಸು ನೂತನ ಚಿತ್ತಗಳನ್ನು ಒಳಗೊಂಡ "ನೂತನ ಸೃಷ್ಟಿ". ಇದನ್ನೇ ಪರಿಪೂರ್ಣತೆಗೆ ತರಬೇಕಿರುವದು ಅಂದರೆ ದೇವರ ಚಿತ್ತಕ್ಕೆ ಪೂರ್ಣವಾಗಿ ಹೊಂದಿಸಿಕೊಂಡು ಕರ್ತನ ಪ್ರತಿರೂಪ ಅಥವಾ ಸಾರೂಪ್ಯಕ್ಕೆ ಬರಬೇಕಾಗಿರುವದು. ಪಾರಂಪರ್ಯವಾಗಿ ಹೊಂದಿರುವ ಇಲ್ಲವೇ ಬೇರೆ ರೀತಿಯಲ್ಲಿ ಬಂದದ್ದಾಗಿರುವ ನಮ್ಮಲ್ಲಿನ ಅಪರಿಪೂರ್ಣತೆಯು ಕಾರಣದಿಂದ ನಮ್ಮ ಶರೀರಭಾವವನ್ನು ದೇವರ ನಿಯಮಗಳಿಗೆ ಸಂಪೂರ್ಣವಾಗಿ ಹೊಂದಾಣಿಕೆ ಮಾಡಿಕೊಳ್ಳುವದರಲ್ಲಿ ನಾವು ಎಂದೂ ಸಫಲರಾಗಲಾರೆವು. ಮತ್ತು ಯಾವಾತನು ತನ್ನ ಶರೀರದಲ್ಲಿ

ಪರಿಪೂರ್ಣತೆ ಹೊಂದುವದನ್ನು ಎದುರುನೋಡುವವನಾಗಿ ಆ ವಿಷಯವಾಗಿ ತನ್ನ ನಂಬಿಕೆಯನ್ನು ಇಟ್ಟುಕೊಂಡಿರುವನೋ ಅವನು ಕ್ರಿಸ್ತನ ಸಾರೂಪ್ಯವನ್ನು ಎಂದಾದರೂ ಹೊಂದಿಕೊಳ್ಳುವ ಅಂದರೆ (ದೇವರು) ಮುಂದಾಗಿ ಆರಿಸಿಕೊಂಡಿರುವ ವರ್ಗದಲ್ಲಿ ಒಬ್ಬನಂತಾಗಿ ಆತನ ಮಗನ ಪ್ರತಿರೂಪವಾಗುವ ವಿಷಯದಲ್ಲಿ ಅವನಿಗಿರುವ ನಿರೀಕ್ಷೆಯು ಕ್ಷೀಣವಾಗುವದು. – ರೋಮಾ. 8:29

ತನ್ನಲ್ಲಿ ಕ್ರಿಸ್ತನ ಮನಸ್ಸಿನ ಹೋಲಿಕೆಯನ್ನು ಅಭಿವೃದ್ಧಿಪಡಿಸಿಕೊಂಡಿರುವಷ್ಟರ ಪ್ರಮಾಣದಲ್ಲಿ ನೂತನ ಮನಸ್ಸು ಶರೀರಭಾವವನ್ನು ಮತ್ತು ಅದರ ಪಾಪಾಧೀನಸ್ವಭಾವದ ನಡೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲು, ಅಂದರೆ ಶರೀರಭಾವವನ್ನು ಮರಣಸ್ಥಿತಿಯಲ್ಲಿಡಲು ಮಾಡುವ ಪ್ರಯತ್ನಗಳನ್ನು ಸಡಿಲಗೊಳಿಸಬಾರದೆಂಬುದನ್ನು ಹೇಳುವ ಅವಶ್ಯಕತೆಯಿಲ್ಲ. ಖಂಡಿತವಾಗಿಯೂ ಪವಿತ್ರಾತ್ಮನಿಂದ ಹುಟ್ಟಿರುವ ಯಾವ ದೇವರ ಮಗನಾದರೂ ಪಾಪವು ತನ್ನ ಶರೀರದಲ್ಲಿ ಆಳ್ವಿಕೆಮಾಡಲು ಬಿಡುವದಿಲ್ಲ, ಪಾಪವು ಯಾವ ಮಟ್ಟದಲ್ಲಿಯೇ ಆಗಲಿ ಆತನನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವದೇ ಆದಲ್ಲಿ ಅದು ಆತನ ಇಚ್ಛಾಪೂರ್ವಕವಾಗಿರುವದಿಲ್ಲ. ಆದುದರಿಂದ ಅದು ಕ್ಷಣಿಕವಾದದ್ದು ಅಂದರೆ ನೂತನ ಮನಸ್ಸನ್ನು ಪಡೆದಿರುವ ನೂತನ ಸೃಷ್ಟಿಯು ಶರೀರಭಾವವು ಬಂಡಾಯವೇಳುತ್ತಿರುವದನ್ನು ಕಂಡುಕೊಂಡು ಕ್ರಿಸ್ತನೆಂಬ ಕೃಪಾಪೂರ್ಣವಾದ ಪರಲೋಕದ ಬೊಕ್ಕಸದಿಂದ ವಾಗ್ದಾನಮಾಡಲ್ಪಟ್ಟ ಸಕಾಲಿಕ ಕೃಪಾಸಹಾಯವನ್ನು ಪಡಕೊಂಡು ಅದನ್ನು ಜಯಿಸುವವರೆಗೆ ಮಾತ್ರ ಅದು ಇರುವದು.

ಈ ಅಂಶವನ್ನು ಸರಿಯಾದ ರೀತಿಯಲ್ಲಿ ಸ್ವೀಕರಿಸಿದ್ದೇ – ಯಾದಲ್ಲಿ ಅದು ನಿಜವಾದ ಶಿಷ್ಯರಿಗೆ ತಮ್ಮ ಸ್ಥಿತಿಯನ್ನು ಅರಿತುಕೊಳ್ಳಲು ಸಹಾಯಮಾಡುವದು ಮತ್ತು ಯಾವುದೇ ಒಂದು ಶಾರೀರಿಕ ದೋಷವು ಅವರನ್ನು ಬೀಳುವಂತೆ ಮಾಡಿದಲ್ಲಿ ತಮ್ಮ ಹೃದಯವು ಆ ಪಾಪ ಮತ್ತು ಅನೀತಿಯ ವಿಷಯದಲ್ಲಿ ಅನುಕಂಪವಿಲ್ಲದೆ ಇರುವಷ್ಟು ಕಾಲ ಅವರು ಪೂರ್ಣವಾಗಿ ಕೆಡವಲ್ಪಟ್ಟವರಾಗಬೇಕಿಲ್ಲ; ಪ್ರತಿಯಾಗಿ ಅವರು ನಮ್ಮ ಬೋಧಕನ ತತ್ವಗಳು ಹಾಗು ಆದೇಶಗಳ ವಿಷಯದಲ್ಲಿ ಪೂರ್ಣ ಸಹಾನುಭೂತಿಯುಳ್ಳವರಾಗಿ ಮತ್ತು ಆತನ ದೃಷ್ಟಿಯಲ್ಲಿ ಮೆಚ್ಚಿಕೆಯಾಗಿಯೂ ಅಂಗೀಕೃತರಾಗಿಯೂ ಇರುವದಕ್ಕೆ ಹಾತೊರೆಯತಕ್ಕವರಾಗಬೇಕು. ಮತ್ತು ಈ ಸರಿಯಾದ ಅಂಶವು ಇಂಥವರೆಲ್ಲರನ್ನೂ ತಮ್ಮ ವಿಷಯವಾಗಿಯೂ ಕ್ರಿಸ್ತೀಯ ಅನುಭವಶಾಲೆಯಲ್ಲಿ ಇದರಂತೆಯೇ ಕಲಿಯುತ್ತಿರುವ ಶಿಷ್ಯರಾಗಿ, ಅನುಯಾಯಿಗಳಾಗಿದ್ದು ಶಾರೀರಿಕವಾಗಿಲ್ಲದೆ ತಮ್ಮ ಮನೋಭಾವದಲ್ಲಿ, ಅಂದರೆ ಮನಸ್ಸಿನಲ್ಲಿ ನೂತನ ಸೃಷ್ಟಿಗಳಾಗಿರುವ "ಸಹೋದರರ" ವಿಷಯವಾಗಿಯೂ ಉತ್ಸಾಹ ಭರಿತವಾದ ಪ್ರೀತಿ ತೋರುವದನ್ನು ಅಭ್ಯಾಸಿಸುವರಾಗುವಂತೆ ಸಹಾಯಮಾಡುವದು. ಆದುದರಿಂದ ಪ್ರತಿಯೊಬ್ಬನು ತನ್ನ "ಸಹೋದರರ" ಶರೀರಭಾವದಲ್ಲಿರುವ ದೋಷದ ವಿಷಯದಲ್ಲಿ ಅದನ್ನು ಅನುಮೋದಿಸದೆ ಅದಕ್ಕೆ ವಿರುದ್ಧವಾಗಿ ಹೋರಾಡುತ್ತಿರು –ವದನ್ನು ಕಂಡರೆ, ಅವನು ತನ್ನ ಹೃದಯ ತನ್ನ ಚಿತ್ತವು ಕರ್ತನ ಹಾಗು ಆತನ ಪ್ರೀತಿಗೆ ಸಂಬಂಧವಾದ ಆಜ್ಞೆಗಳಿಗೆ ಅನುಸಾರವಾಗಿರುವದೆಂಬುದನ್ನೂ; ಮತ್ತು ಪ್ರತಿದಿನವೂ ಆತನು ಕ್ರಿಸ್ತೀಯ ಅನುಭವಶಾಲೆಯಲ್ಲಿ ಪಾಠಗಳನ್ನು ಕಲಿಯಲು ಶ್ರಮಿಸುತ್ತಿರುವನೆಂದೂ ಮತ್ತು ತನ್ನ ಶಾರೀರಿಕ ಬಲಹೀನತೆಗಳ ವಿರೋಧವಾಗಿ ಫಲಪ್ರದವಾಗಿ ಹೋರಾಡಲು ಪರಿಶ್ರಮಿಸುತ್ತಿರುವದೆಂಬುದನ್ನೂ ನಮಗೆ ಭರವಸೆ ನೀಡಿದಲ್ಲಿ ತಾನು ನೋಡುತ್ತಿರುವ ಕೆಟ್ಟಗುಣವು ತನ್ನ ಸಹೋದರನ ಶತ್ರುವಿಗೆ ಸಂಬಂಧಿಸಿದ್ದು ಅದು ನೂತನ ಸೃಷ್ಟಿಯಾಗಿರುವ ಆ ಸಹೋದರನ ಕೆಟ್ಟತನವಲ್ಲವೆಂಬುದನ್ನು ಪ್ರತಿಯೊಬ್ಬನು ನೆನಪಿನಲ್ಲಿಟ್ಟುಕೊಳ್ಳಬೇಕಿರುವುದು.

ಇದನ್ನು ಬೆಳಕಿನಲ್ಲಿ ನಡೆಯುತ್ತಿರುವದೆಂದೂ ಮತ್ತು ಕತ್ತಲೆಯಲ್ಲಿ ಮುಗ್ಗರಿಸುತ್ತಿಲ್ಲವೆಂದು ಸತ್ಯವೇದದಲ್ಲಿ ಹೆಸರಿಸಲಾಗಿರುವದು. ಇದು ದೇವರ ಏರ್ಪಾಡುಗಳನ್ನು ಅರ್ಥಮಾಡಿಕೊಂಡು ಅವುಗಳ ಅನುಸಾರವಾಗಿ ನಡೆದುಕೊಳ್ಳುವದಾಗಿರು –ವದು; ಅಂದರೆ ದೇವರು ತನ್ನ ಕೃಪಾವಾಕ್ಯಗಳಲ್ಲಿ ತೋರಿಸಿಕೊಟ್ಟಿರುವ ಹಾಗೆ ಆತನು (ದೇವರು) ದೃಷ್ಟಿಸುವ ರೀತಿಯಲ್ಲಿ ವಿಷಯಗಳನ್ನು ತಾನು ದೃಷ್ಟಿಸುವದನ್ನು ಇದು ಒಳಗೊಂಡಿರುವದು. ಹೀಗಿದ್ದಲ್ಲಿ ಪ್ರಾಪಂಚಿಕ ಮನೋಭಾವವುಳ್ಳವರು ಕರ್ತನ ಪ್ರತಿಷ್ಠಿತ ಜನರನ್ನು ಈ ಬೆಳಕಿನಡಿಯಲ್ಲಿ ಅಂದರೆ ಪ್ರೀತಿ ಔದಾರ್ಯ ತಾಳ್ಮೆ ದೀರ್ಘಶಾಂತಿ ಸಹೋದರ ಪ್ರೀತಿ ಈ ದೃಷ್ಟಿಯಿಂದ ನೋಡಲು ಇಚ್ಛಿಸುವರೆಂಬದಾಗಲಿ ಇಲ್ಲವೇ ಹೀಗೆ ನೋಡಲು ಸಮರ್ಥರಾಗಿರುವರೆಂಬದಾಗಲಿ ಅಪೇಕ್ಷಿಸುವ ಅಗತ್ಯವಿಲ್ಲ. ಪ್ರತಿಯಾಗಿ ಇವರ ವಿಷಯವಾಗಿ ನಮ್ಮ ವಿರೋಧಿಯು ಅಂದರೆ "ಈ ಪ್ರಪಂಚದ ದೇವರು" ಕ್ರಿಸ್ತನ ಹೆಸರನ್ನು ಮತ್ತು ಪ್ರೀತಿ ಸಂಬಂಧವಾದ ಆಜ್ಞೆಗಳನ್ನು ತಮ್ಮ ದುರ್ಭಾವ ಸ್ವಾರ್ಥ ಮುಂತಾದವುಗಳನ್ನು ಮರೆಮಾಡುವ ವಸ್ತ್ರಗಳನ್ನಾಗಿ ಬಳಸುತ್ತಿರುವ ಕಪಟಿಗಳೆಂದು ಅವರಿಗೆ ತೋರಿಸಿಕೊಡಲು ಪ್ರಯತ್ನಿಸುತ್ತಿರುವನು. ಮತ್ತು ಈ ವಿರೋಧಿಯು ಕ್ರಿಸ್ತನ ಅನುಭವಶಾಲೆಯ ಸಂಬಂಧವಾದ ಶರತ್ತುವಿಧಿಗಳ ವಿಷಯವಾಗಿ ಲೋಕಕ್ಕೆ ಮತ್ತು ಕಪಟವಾಗಿ ಕ್ರೈಸ್ತರಂತೆ ತೋರ್ಪಡಿಸಿಕೊಳ್ಳುವವರಿಗೆ ಮಾತ್ರವಲ್ಲದೆ ವಿಶೇಷವಾಗಿ ನಿಜವಾದ ಶಿಷ್ಯರಿಗೂ ತಪ್ಪಾಗಿ ಪ್ರತಿಪಾದಿಸಿ ಅವರನ್ನು ಅಧೈರ್ಯಪಡಿಸಿ ಅವರು ಸರಿಯಾದ ಮಾರ್ಗದಿಂದ ತಿರುಗಿಕೊಳ್ಳುವಂತೆ ಅಂದರೆ ಕರ್ತನ ವಾಕ್ಯಗಳಿಗೆ ವಿರೋಧವಾಗಿ ಅವರು ಶಾರೀರಭಾವಾನುಸಾರವಾಗಿ ತೀರ್ಪು ಹೊಂದುತ್ತಿರುವದಾಗಿಯೂ, ಆತ್ಮಾನುಸಾರವಾಗಿ ಅಂದರೆ ನೂತನ ಮನಸ್ಸಿನ ಅನುಸಾರವಾಗಿಲ್ಲವೆಂಬುದಾಗಿ ಮನವೊಲಿಸಲು ಸತತವಾಗಿ ಯತ್ನಿಸುತ್ತಿರುವನು.

"ನಿಜವಾಗಿಯೂ ಶಿಷ್ಯರಾಗಿರುವವರು" ಯಾರೆಂದರೆ ಕ್ರಿಸ್ತನ ಈ ಅನುಭವಶಾಲೆಯಲ್ಲಿ ತಮ್ಮ ಕಲಿಯುವಿಕೆಯನ್ನು ಪೂರ್ಣಗೊಳಿಸಿ, ಪರಿಣಿತರಾಗಿ ತಮ್ಮ ಕರ್ತನೊಂದಿಗೆ ಸಹಬಾಧ್ಯರಾಗುವಂಥವರು ಮತ್ತು ಅವರು ಕಡೆಯಲ್ಲಿ ಭೂಲೋಕದ ಸಮಸ್ತ ಕುಲಗಳಿಗೆ ಉಪದೇಶಮಾಡಿ ಆಶೀರ್ವದಿಸುವ ಕಾರ್ಯದಲ್ಲಿ ಆತನಿಗೆ ಸಹಕಾರಿಗಳಾಗುವಂಥವರು. ಆದರೆ ಈ ಅನುಭವಶಾಲೆಯಲ್ಲಿ ಸೇರುವದು ಆ ಫಲಿತಾಂಶಗಳನ್ನು ಅಗತ್ಯವಾಗಿ ತಂದುಕೊಡಬೇಕೆಂದೇನೂ ಇಲ್ಲ; ಆದರೆ ಅದು ನಮ್ಮ ಕರ್ತನು ಸೂಚಿಸಿರುವಂತೆ, ಈ ಅನುಭವಶಾಲೆಯಲ್ಲಿ ಮುಂದುವರೆಯು

ವದರಲ್ಲಿ ಅಂದರೆ ಆತನ ನಿರ್ದೇಶನದಲ್ಲಿ ಮತ್ತು ಆತನ ಸತ್ಯವಾಕ್ಯದಲ್ಲಿ ನಂಬಿಗಸ್ತರಾಗಿಯೂ ನಿರಂತರವಾಗಿ ಪರಿಶ್ರಮಿಸುತ್ತಾ ಮುಂದುವರೆಯುವವರಾಗಿ ಈ ಅನುಭವ ಶಾಲೆಯ ಭವ್ಯವಾದ ಉದ್ದೇಶಗಳು ಈಡೇರಮಾಡಿಕೊಳ್ಳುವದರ ಮೂಲಕವಾಗಿ ಈ ಫಲಿತಾಂಶಗಳು ಅವರಿಗೆ ಲಭಿಸುವವು. ಹೀಗಿದ್ದರೂ ನಮ್ಮ ಪ್ರಯಾಣದ ಪ್ರತಿಯೊಂದು ಹಂತದಲ್ಲೂ ನಾವು ಪ್ರಗತಿ ಹೊಂದುತ್ತಿದ್ದೇವೆಂಬುದನ್ನು ಅಂದರೆ ಸತ್ಯವನ್ನು ಹೆಚ್ಚುಹೆಚ್ಚಾಗಿ ತಿಳಿದುಕೊಳ್ಳುತ್ತಾ ಬರುತ್ತಿರುವ ಹಾಗೆ ಮತ್ತು ಅದು ನಮ್ಮನ್ನು ಹೆಚ್ಚುಹೆಚ್ಚಾಗಿ ಬಿಡುಗಡೆಮಾಡುತ್ತಿರುವ ಹಾಗೆ ನೋಡಿಕೊಳ್ಳುವದು ನಮಗೆ ದೊರೆತಿರುವ ವಿಶೇಷ ಸೌಭಾಗ್ಯ. ನಾವು ತತ್‌ಕ್ಷಣದಲ್ಲಿ ಜ್ಞಾನವನ್ನು ಪಡೆಯುವೆವೆನ್ನುವದಾಗಲಿ ಇಲ್ಲವೆ ಒಡನೆಯೇ ಬಿಡುಗಡೆ ಹೊಂದುವದನ್ನಾಗಲೀ ಅಪೇಕ್ಷಿಸುವಂತಿಲ್ಲ.

ದೇವರ ವಾಕ್ಯವೆಂಬ ದೀಪದಿಂದ ಹೊರಡುವ ಸತ್ಯವೆಂಬ ಬೆಳಕಿನ ಮೂಲಕ ಸಾಧಾರಣವಾಗಿ ಉಂಟಾಗುವ ಪರಿಣಾಮ ವೆಂದರೆ, ಮೂಢನಂಬಿಕೆಯೆಂಬ ಸಂಕೋಲೆಯನ್ನು ಕಳಚಿ ಹಾಕುವದು ಮತ್ತು ಜನರನ್ನು ಸ್ವತಂತ್ರರನ್ನಾಗಿ ಮಾಡುವದು; ಆದರೆ ಕ್ರಿಸ್ತನ ಅನುಭವಶಾಲೆಗೆ ಸೇರದೆ ಇರುವವರಿಗೆ ಈ ಬಗೆಯ ಪರಿಣಾಮಗಳಿಂದ ಪ್ರಯೋಜನವಾಗುವದೆಂಬುದು ವಿವಾದಾಸ್ಪದವಾಗಿರುವದು. ಸ್ವಾತಂತ್ರ್ಯ ಮತ್ತು ಜ್ಞಾನದ ಬೆಳಕು ಇತರರನ್ನು ಅನೇಕ ಸಾರಿ ಅಹಂಕಾರ ಸ್ವಪ್ರತಿಷ್ಠೆ ನಿಷ್ಕರುಣೆ ಬಡಾಯಿ ಹೋರಾಟ ಅತೃಪ್ತಿ ಅಸಂತೋಷ ಇವುಗಳಿಗೆ ನಡೆಸಿ ಆಶೀರ್ವಾದಕ್ಕಿಂತಲೂ ಹೆಚ್ಚಾಗಿ ಇವು ಕೆಡುಕನ್ನು ಉಂಟುಮಾಡು –ವವು. ಈ ದುಷ್ಪರಿಣಾಮಗಳು ಕೆಲವು ವಿಷಯಗಳಲ್ಲಿ ಅವರನ್ನು ಬಿಡುಗಡೆಮಾಡಿ ಮತ್ತು ಇತರ ಕೆಲವು ವಿಷಯಗಳಲ್ಲಿ ಅವರನ್ನು ಬಂಧಿತರಾಗಿಯೇ ಇರುವಂತೆ ಮಾಡುವವು; ಅಲ್ಲದೆ ಇದು ಈಗಿನ ಕಾಲದ ನಾಗರಿಕ ಜಗತ್ತಿನಲ್ಲಿ ಹಾಗು ಬಹು ಪಾಲು ಹೆಸರಿನ ಕ್ರೈಸ್ತರಲ್ಲಿ ಸಾಮಾನ್ಯವಾಗಿರುವ ಸ್ಥಿತಿಯಾಗಿಯೂ ಮತ್ತು ಹೆಚ್ಚುತ್ತಾ ಬರುತ್ತಿರುವ ಸ್ಥಿತಿಯಾಗಿಯೂ ಇರುವದು.

ಆದರೆ ನಿಜವಾದ ಶಿಷ್ಯರು ಆ ದಿವ್ಯ ಬೋಧಕನ ಮಾತುಗಳಿಗೆ ಕಿವಿಗೊಡುವದರ ಮೂಲಕವಾಗಿ ಮತ್ತು ಎಲ್ಲಾ ಸಂಗತಿಗಳಲ್ಲಿಯೂ ಆತನ ಶಿಷ್ಯರಾಗಿ ಮುಂದುವರೆಯುತ್ತಿರು ವವರಾಗಿ ಮೂಢನಂಬಿಕೆ ಅಜ್ಞಾನಗಳಿಂದ ಬಿಡುಗಡೆ ಹೊಂದುವದು ಮಾತ್ರವಲ್ಲದೆ ಪಾಪದ ದಾಸತ್ವದಿಂದಲೂ ಬಿಡುಗಡೆಹೊಂದುವರು; ಮತ್ತು ಇದಕ್ಕೆ ಬದಲಾಗಿ ತಮ್ಮಲ್ಲಿ ಸಹಜವಾಗಿರುವ ದೋಷಬಲಹೀನತೆಗಳ ಬಗ್ಗೆ ಮತ್ತು ಸತ್ಯವೆಂಬ ದೈವಿಕ ಸಂಕಲ್ಪದ ವಿಷಯವಾಗಿ ಸೂಕ್ತವಾಗಿ ಅರಿವನ್ನು ಹೊಂದಿದವರಾಗಿರುವರು. ಇದರ ಪರಿಣಾಮವಾಗಿ ಅವರ ಸ್ವತಂತ್ರವು ಅವರಿಗೆ ಹಾನಿಗೆ ಬದಲಾಗಿ ಆಶೀರ್ವಾದವನ್ನು ತರುವಂಥದ್ದಾಗಿರುವದು; ಅದು ಅಹಂಕಾರ ಅಹಂಭಾವಗಳಿಗೆ ಬದಲಾಗಿ ದೀನತೆಯನ್ನು ಉಂಟುಮಾಡುವಂಥದ್ದಾಗಿರುವದು; ಅದು ಕೋಪಕ್ರೋಧಗಳಿಗೆ ಬದಲಾಗಿ ತಾಳ್ಮೆಯನ್ನು ತರುವಂಥ–ದ್ದಾಗಿರುವದು; ದ್ವೇಷಹಗೆತನ ಮತ್ತು ಸ್ವಾರ್ಥಮನೋಭಾವಗಳಿಗೆ ಬದಲಾಗಿ ಔದಾರ್ಯ ಉಪಕಾರ ಮನೋಭಾವವುಳ್ಳವ–ರಾಗಿರುವಂತೆ ಮಾಡುವದು; ಅದು ಅತೃಪ್ತಿ ಅಸಂತೋಷ ಮನೋಭಾವಗಳಿಗೆ ಬದಲಾಗಿ ಸಂತೋಷ ಸಮಾಧಾನಗಳನ್ನು ತಂದುಕೊಡುವದಾಗಿರುವದು. ಸತ್ಯವಾಗಿಯೂ, ಮಗನು ಮಾತ್ರವೇ ನಮ್ಮನ್ನು ನಿಜವಾಗಿ ಬಿಡುಗಡೆ ಮಾಡಲು ಸಾಧ್ಯ.

ಹೀಗಿದ್ದರೂ ನಮ್ಮ ಸ್ವಾತಂತ್ರ್ಯವು ಶಾರೀರಿಕ ವಿಷಯಗಳಿಗೆ ಸಂಬಂಧಿಸಿದುದಾಗಿರದೆ ಅದು ಹೃದಯ ಮನಸ್ಸು ಇಚ್ಛೆ ನೂತನ ಸ್ವಭಾವ ಇವುಗಳಿಗೆ ಸಂಬಂಧಿಸಿದುದಾಗಿರುವದೆಂಬುದು ನೆನಪಿರಲಿ. ಅಲ್ಲದೆ ನಾವು ಈ ನಿಕ್ಷೇಪಗಳನ್ನು ಮಣ್ಣಿನ ಘಟಗಳಲ್ಲಿ ಹೊಂದಿರುವ ಸಮಯಗಳವರೆಗೂ ಅಂದರೆ ನೂತನ ಸೃಷ್ಟಿಯು ಅಪೂರ್ಣವಾದ ಶರೀರವನ್ನು ತನ್ನ ಸಾಧನವನ್ನಾಗಿಯೂ ಪ್ರತಿನಿಧಿಯನ್ನಾಗಿ ಬಳಸಿಕೊಳ್ಳುತ್ತಿರುವ ಸಮಯಗಳವರೆಗೂ ಈ ಸ್ವಾತಂತ್ರ್ಯವು ಅಪೂರ್ಣವಾಗಿರುವದು. ಕ್ರಿಸ್ತನ ಈ "ಸಹೋದರರು" ಅಂದರೆ "ಪರಾತ್ಪರನ ಮಕ್ಕಳು" ಪ್ರಥಮ ಪುನರುತ್ಥಾನದಲ್ಲಿ ಪಾಲನ್ನು ಹೊಂದುವಾಗ ಪೂರ್ಣಾರ್ಥದಲ್ಲಿ ಅವರು ಬಿಡುಗಡೆಹೊಂದಿದವರಾಗಿರುವರು–"ನಾನು ಎಚ್ಚೆತ್ತಾಗ ನಿನ್ನ ಸ್ವರೂಪ ದರ್ಶನದಿಂದ ತೃಪ್ತನಾಗಿರುವೆನು."

ಯಾರು ಪಾಪವನ್ನು ಮಾಡುವರೋ ಅವರು ಪಾಪಕ್ಕೆ ದಾಸರಾಗಿಯೇ ಇರುವರೆಂದೂ ಅವರು ಬಿಡುಗಡೆಯಾಗಿಲ್ಲ ವೆಂದೂ ನಮ್ಮ ಕರ್ತನು ತೋರಿಸಿಕೊಟ್ಟಿರುವನು. ಅಪೋಸ್ತಲನು ಪ್ರಕಟವಾಡಿ ಹೇಳಿರುವಂತೆ–"ಪಾಪ ಮಾಡುವವನು ಸೈತಾನನಿಂದ ಹುಟ್ಟಿದವನಾಗಿರುವನು" ಆದಾಗ್ಯೂ ಆತನು ತಿಳಿಸಿರುವದು–"ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲ." (1 ಯೋಹಾನ 3:8; 1:8) ಹೀಗಿರುವಾಗ ಈ ತದ್ವಿರುದ್ಧವಾದ ಹೇಳಿಕೆಗಳನ್ನು ನಾವು ಹೇಗೆ ಹೊಂದಾಣಿಕೆ ಮಾಡಿಕೊಂಡು "ಪಾಪದಿಂದ ಬಿಡುಗಡೆಹೊಂದಿ ನೀತಿಗೆ ದಾಸರಾಗಿರುವದರಿಂದಲೂ ದೇವರಿಗೆ ಸ್ತೋತ್ರವಾಗಲಿ." ಎಂದು ಸತ್ಯವೇದವು ಹೇಳಿರುವುದನ್ನು ಹೇಗೆ ಅರ್ಥಮಾಡಿಕೊಳ್ಳುವದು? (ರೋಮಾ 6:8)

ನಮ್ಮ ಉತ್ತರವೇನಂದರೆ, ಸತ್ಯವೇದವು ಯಾವ ಪಾಪ–ವನ್ನೂ ನೂತನ ಮನಸ್ಸಿಗೆ ಲಗತ್ತಿಸುವದಿಲ್ಲ ಮತ್ತು ನೀತಿಯ ಯಾವ ಪರಿಪೂರ್ಣತೆಯನ್ನು ಬಿದ್ದುಹೋಗಿರುವ ಶಾರೀರಭಾವಕ್ಕೆ ಲಗತ್ತಿಸುವದಿಲ್ಲ. ಈ ವಿಷಯವನ್ನು ಅಧ್ಯಯನ ಮಾಡುವಾಗ ಆ ಎರಡೂ ಅಂಶಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ದೇವರಿಂದ ಹುಟ್ಟಿದ್ದಾಗಿ ನೂನತ ಮನಸ್ಸಿನ ಮೂಲಕವಾಗಿ ಸೂಚಿತವಾದ (ಶರೀರವನ್ನು ಸತ್ತದ್ದನ್ನಾಗಿ ಪರಿಗಣಿಸಿರುವ) "ನೂತನಸೃಷ್ಟಿಯು" ಪಾಪಮಾಡಲಾರದು; ಏಕೆಂದರೆ ಪ್ರಾಮುಖ್ಯ ವಾಗಿ, ಆಂತರ್ಯದಲ್ಲಿ ನೆಡಲಾದ ಬೀಜದಂತಿರುವ ಸತ್ಯ–ಎಂಬುದು ಅಂದರೆ "ಸತ್ಯದ ಆತ್ಮವು" ಪಾಪಕ್ಕೆ ವಿರೋಧವಾಗಿರು ವದು. (ಯಾಕೋಬ 1:18) ಈ ನೂತನ ಸೃಷ್ಟಿಯು ನೀತಿಯನ್ನು ಎಷ್ಟು ಹೊಂದಿಕೊಂಡಿರುವದೆಂದರೆ, ಕರ್ತನ ಆತ್ಮದಿಂದ ಅಂದರೆ ಪರಿಶುದ್ಧಾತ್ಮದಿಂದ ಎಷ್ಟು ತುಂಬಲ್ಪಟ್ಟದ್ದಾಗಿರುವದೆಂದರೆ, ಅದು ಪರಿಶುದ್ಧತೆಯಲ್ಲಿಯೇ ಉಲ್ಲಾಸಿಸುವದು, ಪಾಪದಲ್ಲಿ ಅಲ್ಲ. ಪರಿಶುದ್ಧಾತ್ಮನಿಂದ ಹುಟ್ಟಿದ ಸ್ಥಿತಿಯಲ್ಲಿ ಇರುವವರೆಗೂ ಅದು ಇದೇ ರೀತಿಯಲ್ಲಿ ಮುಂದುವರೆಯುತ್ತಿರಬೇಕು. ದೇವರಿಂದ

ಹುಟ್ಟಿದವನು (ಮನಃಪೂರ್ವಕವಾಗಿ ಅಂದರೆ ಪಾಪವನ್ನು ಅನುಮೋದಿಸುವದಿಲ್ಲ ಇಲ್ಲವೇ ಅದರಲ್ಲಿ ಆನಂದಿಸುವದೂ ಇಲ್ಲ) ಪಾಪವನ್ನು ಮಾಡಲಾರನು; ಪವಿತ್ರಾತ್ಮನೆಂಬ ಬೀಜವು ಅಂದರೆ ತಾನು (ನೂತನ ಸೃಷ್ಟಿಯಾಗಿ) ಹುಟ್ಟಿರುವದಕ್ಕೆ ಕಾರಣವಾದ ಸತ್ಯವೆಂಬ ಪರಿಶುದ್ಧವಾದ ಬೀಜವು ಆತನಲ್ಲಿ ನೆಲೆಸಿರುವದು, ಮತ್ತು "ಕೆಡುಕನು ಆತನನ್ನು ಹಿಡಿಯಲಾರನು" – 1 ಯೋಹಾನ 3:9; 5:18.

ಎಲ್ಲಿಯವರೆಗೂ ಹೃದಯವು (ಮನಸ್ಸು, ಇಚ್ಛೆ) ದೇವರೊಂದಿಗೆ ಮತ್ತು ನೀತಿಯೊಂದಿಗೆ ಹೊಂದಿಸಿಕೊಂಡು ಪರಿಶುದ್ಧವಾಗಿರುವದೋ ಅಂದರೆ ಎಲ್ಲಿಯುವರೆಗೂ (ಹೊಸದಾಗಿ) ಹುಟ್ಟುವಂತೆ ಮಾಡಿರುವ ಸತ್ಯದ ಆತ್ಮವೆಂಬ ಪವಿತ್ರವಾದ ಆತ್ಮದ ಬೀಜವು ನಮ್ಮಲ್ಲಿ ನೆಲೆಗೊಂಡು ಮುಂದುವರಿಯುತ್ತಿರುವದೋ ಅಲ್ಲಿಯವರೆಗೆ ನೂತನ ಮನಸ್ಸು ಪಾಪವನ್ನು ಒಪ್ಪಿಕೊಳ್ಳದೆ ಅದಕ್ಕೆ ವಿರೋಧವಾಗಿರಬೇಕು ಅಲ್ಲದೆ ಅದರ ವಿರೋಧಿಯಾಗಿಯೇ ಇರುವದು. ಅನೇಕ ಹೋರಾಟ ಗಳು (ಪರಿಪೂರ್ಣತೆಯಿಂದ) ಬಿದ್ದುಹೋದ ನಮ್ಮ ಸ್ವಂತ ಶರೀರದ ಅಂಗಗಳ ಅಂದರೆ ಮಾನವಸ್ವಭಾವದಲ್ಲಿರುವ ಬಲಹೀನತೆಗಳು ಅದರ ಬಯಕೆಗಳ ವಿರುದ್ಧವಾಗಿ ನಡೆಯುತ್ತಿ–ದ್ದಾಗ್ಯೂ ನಾವು "ನೂತನ ಸೃಷ್ಟಿಗಳಾಗಿ" ಶರೀರಭಾವ ದಿಂದ ಪ್ರತ್ಯೇಕಿಸಲ್ಪಟ್ಟವರೂ ಭಿನ್ನವಾದವರೂ ಆಗಿದ್ದು ಶರೀರಭಾವದ ದೋಷನ್ಯೂನ್ಯತೆಗಳು ಕ್ರಿಸ್ತನಲ್ಲಿರುವ ನೂತನ ಸೃಷ್ಟಿಗೆ ಲಗತ್ತಿಸಲ್ಪಡದೆ ಅವುಗಳು ನಮ್ಮ ಕರ್ತನು (ನಮ್ಮ) ವಿಮೋಚನಾರ್ಥವಾಗಿ ಅರ್ಪಿಸಿದ ಯಜ್ಞದ ಮೂಲಕವಾಗಿ ಸಂಪಾದಿಸಿದ (ಪರಿಪೂರ್ಣತೆಯೆಂಬ) ಯಜ್ಞಫಲದಿಂದ ಮುಚ್ಚಲ್ಪಟ್ಟು ಮರೆಮಾಡಲ್ಪಟ್ಟದ್ದಾಗಿ ಎಣಿಸಲ್ಪಡುವದು.

ಹೀಗೆ (ಪರಿಪೂರ್ಣತೆಯಿಂದ) ಬಿದ್ದುಹೋದ ಕಾರಣದ ಬಲಹೀನತೆಯ ದೆಸೆಯಿಂದಾಗಿಯೂ ಮತ್ತು ಸುತ್ತಲೂ ಆವರಿಸಿ ಕೊಂಡಿರುವ ಕೆಟ್ಟತನದ ದೆಸೆಯಿಂದಾಗಿಯೂ ದೈವಿಕ ವಿಧಿನಿಯ ಮಗಳು ಬಯಸುವ ಮಟ್ಟಕ್ಕೆ ನಮ್ಮ ಶರೀರವು ಎಂದೂ ತಲುಪ ಲಾಗದು. ನಾವು ಇವುಗಳನ್ನು ಅಧೀನಮಾಡಿಕೊಳ್ಳಲು ಮಾಡುತ್ತಿರುವ ಪ್ರಯತ್ನಗಳೆಲ್ಲವುಗಳ ನಡುವೆಯೂ "ನೂತನ ಸೃಷ್ಟಿಗಳಾಗಿ" ನಮಗೆ ಸತ್ಯವೇದದಲ್ಲಿ ನೀಡಲಾಗಿರುವ ಭರವಸವೇನಂದರೆ, "ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ (ಆದರೂ ಅನುದಿನವೂ ದೇವರ ಸಹಾಯವನ್ನು ಅಪೇಕ್ಷಿಸುವವರಾಗಿ ಪಾಪದ ದುಷ್ಪ್ರೇರಣೆಗಳನ್ನು ನಮ್ಮ ಸಾಮರ್ಥ್ಯಾನುಸಾರವಾಗಿ ಎದುರಿಸುವವರಾಗಿದ್ದು) ಪವಿತ್ರಾತ್ಮಾನು–ಸಾರವಾಗಿ ನಡೆಯುವವರಾದ ನಮ್ಮಲ್ಲಿ (ಹೊಸ ಸೃಷ್ಟಿಗಳಲ್ಲಿ) ಧರ್ಮಶಾಸ್ತ್ರದ (ನೀತಿ) ನಿಯಮವು ನೆರವೇರುವದಕ್ಕೆ ಮಾರ್ಗ ವಾಯಿತು. (ನಾವು ನಡೆಯುವವರಾಗಿ ಬಹುಶಃ ಆತ್ಮಾನುಸಾರ ವಾದ ಮಟ್ಟಕ್ಕೆ ತಲುಪದಿದ್ದರೂ, ಕಡೆಯಲ್ಲಿ ನಮ್ಮ ದಿವ್ಯ ಬೋಧಕನ ಕೃಪಾಸಹಾಯದ ಮೂಲಕವಾಗಿ "ನೂತನ ಸೃಷ್ಟಿಗಳಾಗಿ" ಪರಲೋಕದ ತಂದೆಯಿಂದ ಆತನ ಕುಮಾರನ ಪ್ರತಿರೂಪಿಗಳಾಗಿ ಅಂಗೀಕರಿಸಲ್ಪಟ್ಟು ಭವ್ಯವಾದ ಸ್ಥಿತಿಗೆ ತಲುಪುವ ಉದ್ದೇಶದಿಂದ ಅನುದಿನವೂ ಪವಿತ್ರಾತ್ಮನ ನಿಯಮಗಳನ್ನು ಅನುಸರಿಸುವವರಾಗಿ ನಡೆಯುತ್ತಿರುವೆವು.) – ರೋಮಾ 8:4

ಇದಕ್ಕೆ ಪ್ರತಿಯಾಗಿ, ಯಾರು ಹೀಗೆ "ನೂತನ ಸೃಷ್ಟಿಯಾಗಿ" ಮಾಡಲ್ಪಡದೆ ಇಚ್ಛಾಪೂರ್ವಕವಾಗಿಯೂ ಹೃದಯಪೂರ್ವಕವಾಗಿಯೂ ಪಾಪದಲ್ಲಿ ನಡೆಯುತ್ತಾ ಶರೀರಭಾವಾನುಸಾರ ಜೀವಿಸುವವರಾದದಲ್ಲಿ, ಖಂಡಿತವಾಗಿ ಇದರ ಸೂಚನೆಯೇನೆಂದರೆ ತನ್ನನ್ನು (ನೂತನ ಸೃಷ್ಟಿಯಾಗಿ) ಹುಟ್ಟುವಂತೆ ಮಾಡಿದ ಸತ್ಯವೆಂಬ ಬೀಜವು ನಶಿಸಿಹೋಗಿರುವ ದೆಂಬುದು; ಏಕೆಂದರೆ ಎಲ್ಲಿಯವರೆಗೂ ಈ ಬೀಜವು ಆತನಲ್ಲಿ ನೆಲೆಗೊಂಡಿರುವದೋ ಅಲ್ಲಿಯವರೆಗೆ ಆತನು ಮನಃಪೂರ್ವಕ ವಾಗಿ ಪಾಪಮಾಡಲಾರನು. – 1 ಯೋಹಾನ 3:9

ಯಾರು ಪಾಪಕ್ಕೆ ದಾಸರಾಗಿದ್ದು ನಿಜವಾಗಿಯೂ ಬಿಡುಗಡೆಹೊಂದದೆ (ದೇವರ) ಮಕ್ಕಳಾಗಿ ಅಂಗೀಕಾರ ವಾಗಿಲ್ಲವೋ ಅವರನ್ನು ಈಗಿನ ಕಾಲದಲ್ಲಿ ಕೆಲವು ಸಮಯ ದೇವರ ಯೋಜನೆಯು ನೆರವೇರಮಾಡ ಸಲುವಾಗಿ ಆ ಯೋಜನೆಗೆ ಸೇವಕರನ್ನಾಗಿ ಬಳಸಲ್ಪಡುವಂತಾಗಬಹುದು; ದೃಷ್ಟಾಂತವಾಗಿ, ಕೆಲವು ಸಮಯದಲ್ಲಿ ದೇವರು ಮನುಷ್ಯರ ಕೋಪವನ್ನು ಮತ್ತು ಸೈತಾನನು ಮಾಡುವ ವಿರೋಧವನ್ನು ತನ್ನ ಉದ್ದೇಶವು ನೆರವೇರಲ್ಪಡುವಂತೆ ಮಾರ್ಪಡಿಸಿ ಅವುಗಳನ್ನು ಬಳಸಿಕೊಳ್ಳುವನು; ಆದರೂ ದೇವರು ಪಾಪ ಮತ್ತು ಅದರ ದಾಸರನ್ನು ನಿರಂತರವಾಗಿ ಮುಂದುವರೆಯುವ ಹಾಗೆ ಯಾವ ಏರ್ಪಾಡನ್ನು ಮಾಡಿರುವದಿಲ್ಲ. ಕಡೆಯಲ್ಲಿ ಉಳಿದುಕೊಂಡ ವರಾಗಿ ಇರುವಂಥ ಸೌಭಾಗ್ಯವನ್ನು ಪಡೆದವರು ಯಾರೆಂದರೆ ಅವರು ಕೇವಲ ದೇವರ ಮಕ್ಕಳು. ಇಲ್ಲಿ ಇದನ್ನು ಅಪಾರ್ಥಮಾಡಿ ಕೊಳ್ಳಬಾರದು, ಏನಂದರೆ ಎರಡು ಕಾಲಗಳಲ್ಲಿಯೂ ದೇವರ ಮಕ್ಕಳಿರುವರೆಂಬುದನ್ನು ನಾವು ನೆನಪಿನಲ್ಲಿಡೋಣ:–

(1) ಈ ಸುವಾರ್ತಾಯುಗದಲ್ಲಿನ ಮಕ್ಕಳು ನಮ್ಮ ಕರ್ತನಾದ ಯೇಸು ಕ್ರಿಸ್ತನಿಗೆ "ಸಹೋದರರಾಗಿ" ಆತನೊಡನೆ ಸಹಬಾಧ್ಯರಾಗುವದಕ್ಕಾಗಿ ತಂದೆಯಿಂದ ಹುಟ್ಟಿದವರಾಗಿದ್ದು ಚೊಚ್ಚಲು ಮಕ್ಕಳಾದ ಮದಲಗಿತ್ತಿಯೆಂದು ಇನ್ನೊಂದು ರೀತಿಯಲ್ಲಿ ಕರೆಯಲ್ಪಟ್ಟಿದ್ದು ಸಮಸ್ತಕ್ಕೂ ಬಾಧ್ಯರಾಗಿರುವರು. "ನಾವು ಈಗ (ಹೀಗೆ) ದೇವರ ಮಕ್ಕಳಾಗಿದ್ದೇವೆ." ಈ ಮಕ್ಕಳೆಂಬ ಮನೆತನದವರು ಆತ್ಮಿಕ ಸ್ವಭಾವದಲ್ಲಿ ಹುಟ್ಟಿದವರಾಗಿ (ಇವರ ಸಂಖ್ಯೆಯು) ಶೀಘ್ರದಲ್ಲಿ ಮುಕ್ತಾಯಗೊಳ್ಳಲಿದ್ದು ಮುಂದೆ ಎಂದೂ ಇವರ ಗುಂಪಿನ ಸಂಖ್ಯೆಗೆ ಹೆಚ್ಚಿಗೆ ಸೇರಿಸಲಾಗುವದಿಲ್ಲ; ಆದರೆ ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದುದೇನಂದರೆ–

(2) ಮಕ್ಕಳೆಂಬ ಮತ್ತೊಂದು ಮನೆತನವು ಸ್ವಲ್ಪಕಾಲದಲ್ಲಿ ಪ್ರಾರಂಭವಾಗಲಿರುವದೆಂಬದು. ಯಾಕೆಂದರೆ, ಕರ್ತನಾದ ಯೇಸುವು ಲೋಕಕ್ಕೆ ತಂದೆ ಅಂದರೆ ಜೀವಕೊಡುವವ ನಾಗುವನೆಂದು ಹೇಳಲ್ಪಟ್ಟಿರುವದು. ಯಾರು ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಹೊಸ ಒಡಂಬಡಿಕೆಯ ಶರತ್ತುಗಳಿಗೆ ಅನುಸಾರವಾಗಿ ಈತನನ್ನು (ಯೇಸುವನ್ನು) ದೇವರ ವರವನ್ನಾಗಿ ಅಂಗೀಕರಿಸುವರೋ ಅವರಿಗೆ ಈತನು ಜೀವಕೊಡುವ ತಂದೆಯಾಗಿರುವನು. ಅವರು ಆನಂತರದ ಪುನರುತ್ಥಾನದಲ್ಲಿ ಮಕ್ಕಳೆನ್ನಿಸಿಕೊಳ್ಳುವವರಾದರೂ ಸಭೆಯು ಮೊದಲನೆ ಪುನರುತ್ಥಾನದಲ್ಲಿ ಮಕ್ಕಳು ಅಂದರೆ ಚೊಚ್ಚಲು ಮಕ್ಕಳಾಗುವರು.

ಕ್ರಿಸ್ತನ ಮಕ್ಕಳಾಗಿ ಸಾವಿರ ವರುಷದ ಆಳ್ವಿಕೆಯ ಕಾಲದಲ್ಲಿ ಹುಟ್ಟುವವರಾದ ಇವರು ಆ ಕಾಲವು ಅಂತ್ಯವಾಗುವಾಗ ಪೂರ್ಣವಾದ ರೀತಿಯಲ್ಲಿ ಹುಟ್ಟಿದಂಥ ಮಕ್ಕಳಾಗುವರೆಂದು ಇವರ ವಿಷಯವಾಗಿ ಉಲ್ಲೇಖಿಸಿ ಅಪೋಸ್ತಲನು ಹೀಗೆ ಹೇಳಿರುವನು: "...ನಾಶನದ ವಶದಿಂದ ಬಿಡುಗಡೆಯಾಗಿ ದೇವರ ಮಕ್ಕಳ ಮಹಿಮೆಯುಳ್ಳ ವಿಮೋಚನೆಯಲ್ಲಿ ಪಾಲುಹೊಂದುವರು;" ಅಂದರೆ ಪಾಪ ಮರಣ ನರಳುವಿಕೆ ಗೋಳಾಟ ನೋವು ಮುಂತಾದವುಗಳಿಂದ ಬಿಡುಗಡೆಹೊಂದುವರು. ಅವರು ದೇವರ ಮಕ್ಕಳಿಗೆ ಸಾಮಾನ್ಯವಾಗಿ ನೀಡಲಾಗುವ ಸವಲತ್ತುಗಳನ್ನು ಬಾಧ್ಯವಾಗಿ ಹೊಂದುವರು ಮತ್ತು ಇದಕ್ಕೂ ಮಿಗಿಲಾಗಿ ದೋಷಪರಿಹಾರ ಮಹಾ ಯಜ್ಞದ ಮೂಲಕವಾಗಿ "ಕೊಂಡುಕೊಳ್ಳಲ್ಪಟ್ಟ ಭೂಸ್ವಾಸ್ಥ್ಯವನ್ನು" ಅಂದರೆ ಭೂಲೋಕದ ಬಾಧ್ಯತೆಯನ್ನು ಪಡೆಯುವರು. – ರೋಮಾ 8:21–23

ಭೂಲೋಕ ಸ್ವಾಸ್ಥ್ಯವನ್ನು ಪುನರುದ್ಧಾರದ ಮೂಲಕವಾಗಿ ಪಡೆಯಲಿರುವ ಗುಂಪು ಹೀಗೆ ಕ್ರಿಸ್ತನ ಮಕ್ಕಳಾಗುವರು. ಆದಾಮನಲ್ಲಿ ಕಳೆದುಕೊಂಡಂಥ ಅವರ ಜೀವವನ್ನು ಕ್ರಿಸ್ತನು ತನ್ನ ಜೀವವನ್ನೇ ಕೊಟ್ಟು ಕೊಂಡುಕೊಂಡವನಾಗಿದ್ದು ಆ ಜೀವವನ್ನು ಅವರಿಗೆ ಮತ್ತೊಮ್ಮೆ ಕೊಡುವನು. ಆದರೆ ಇಂಥವರು ಕಡೆಯಲ್ಲಿ ಯೆಹೋವನನ್ನು ತಮ್ಮ ತಂದೆಯನ್ನಾಗಿ ಪಡೆಯುವದಿಲ್ಲ, ಅಲ್ಲದೆ ಆತನೂ ಸಹ ಇವರನ್ನು ಮಕ್ಕಳನ್ನಾಗಿ ಪಡೆಯುವದಿಲ್ಲ. ಪ್ರತಿರೂಪವಾಗಿ ಈ ವಿಷಯವಾಗಿ ಇಸ್ರಾಯೇಲ್ಯರಲ್ಲಿದ್ದ ಛಾಯಾರೂಪವಾದ ಸಂಪ್ರದಾಯದಲ್ಲಿ ಇದೆಲ್ಲವನ್ನು ಸ್ಪಷ್ಟಪಡಿಸಲಾಗಿರುವದು. ದೃಷ್ಟಾಂತವಾಗಿ ಹೇಳುವದಾದರೆ, ಇಸ್ರಾಯೇಲ್ಯರೆಲ್ಲರು ಅಬ್ರಹಾಮನ ಮಕ್ಕಳು, ಇಸಾಕನ ಮಕ್ಕಳು ಮತ್ತು ಯಾಕೋಬನ ಮಕ್ಕಳು ಎಂದು ತಿಳಿಯಲಾಗಿತ್ತು.

ಆದರೆ ನಾವು ಮನದಟ್ಟುಮಾಡಿ ಕೊಡುವ ಇದರಲ್ಲಿನ ಮೂಲಾಂಶವು ಯಾವದೆಂದರೆ ಯಾವುದೇ ಸಮಯದಲ್ಲಿ ದೇವರಿಂದ ಮಕ್ಕಳಾಗಿ ಮನ್ನಣೆ ಪಡೆಯುವಂಥವರು ಮಧ್ಯಸ್ಥನಾಗಿರುವ ದೇವರ ಒಬ್ಬನೇ ಕುಮಾರನ ಮೂಲಕವಾಗಿ ತಮ್ಮನ್ನು ಕಾಡುತ್ತಿರುವ ಪಾಪದ ವಶದಿಂದ ಬಿಡುಗಡೆ ಹೊಂದಿದವರಾಗಬೇಕು; ಮತ್ತು ಇಂಥವರು ಮಾತ್ರವೇ ನಿಜವಾಗಿಯೂ ಬಿಡುಗಡೆಹೊಂದಿದವರಾಗಿರುವರು.

*****

# "ನಾನು ಕುರುಡನಾಗಿದ್ದೆನು, ಈಗ ಕಾಣುತ್ತದೆ"

**ರೀಪ್ರಿಂಟ್ಸ್ ಪುಟ 4148**

## ಯೋಹಾನ 9:1–41

**"ನಾನು ಲೋಕಕ್ಕೆ ಬೆಳಕಾಗಿದ್ದೇನೆ" – ಯೋಹಾನ 9:5**

ನಮ್ಮ ಕರ್ತನು ತನ್ನ ಸೇವಾವಧಿಯ ಮೂರನೇ ವರುಷದಲ್ಲಿ, ತಾನು ಮರಣಹೊಂದವದಕ್ಕೆ ಕೇವಲ ಆರು ತಿಂಗಳಿಗೆ ಮೊದಲು ಪರ್ಣಶಾಲೆಯ ಹಬ್ಬದ ಸಂದರ್ಭದಲ್ಲಿ ಯೆರೂಸಲೇಮಿನಲ್ಲಿದ್ದನು. ವಿಶೇಷವಾಗಿ ವರುಷದ ಈ ಸಮಯದಲ್ಲಿ ಜನರ ಗುಂಪು ದೇವಾರಾಧನೆಗಾಗಿ ಕೂಡಿಬರುವಾಗ ಮತ್ತು ಅವರು ಸಹಜವಾಗಿ ಉದಾರಭಾವವುಳ್ಳವರಾಗಿರುವಲ್ಲಿ ಅನೇಕ ಮಂದಿ ಕುರುಡರು ಬಿಕ್ಷೇಬೇಡುವದಕ್ಕಾಗಿ ದಾರಿಯ ಎರಡು ಕಡೆಯಲ್ಲಿ ಕುಳಿತಿದ್ದುದರಲ್ಲಿ ಸಂದೇಹವಿಲ್ಲ. ನಮ್ಮ ಕರ್ತನು ಈ ಕುರುಡರೆಲ್ಲರನ್ನೂ ಗುಣಪಡಿಸಿರಲಿಲ್ಲ; ಕೇವಲ ಆರು ಲಿಖಿತ ನಿದರ್ಶನಗಳಿದ್ದವು. ಆತನ ಕಾರ್ಯಭಾರವು ರೋಗಿಗಳನ್ನು ಗುಣಪಡಿಸುವುದು ಆಗಿರದೆ ಸುವಾರ್ತೆಯನ್ನು ಸಾರುವದಾಗಿದ್ದು ಈ ಪಾಠದಲ್ಲಿ ನೀಡಲಾಗಿರುವ ನಿದರ್ಶನ ದಲ್ಲಿರುವಂತೆ, ಗುಣಪಡಿಸುವ ಶಕ್ತಿಯನ್ನು ಸುವಾರ್ತೆಯ ಸಂದೇಶದ ಕಡೆಗೆ ಗಮನವನ್ನು ಸೆಳೆಯುವ ಸಲುವಾಗಿ ಬಳಸಲಾಗಿರುತ್ತಿತ್ತು.

ನಮ್ಮ ಕರ್ತನು ಮತ್ತು ಆತನ ಶಿಷ್ಯರು ಹಾದು ಹೋಗುತ್ತಿರುವಾಗ ಈ ಕುರುಡರಲ್ಲಿ ಒಬ್ಬನು ಹುಟ್ಟುಕುರುಡನಾಗಿದ್ದುದನ್ನು ಗಮನಿಸಿದ್ದರು. ಆತನು ಬಿಕ್ಷೆಯನ್ನು ಬೇಡುತ್ತಿದ್ದುದೇ ಶಿಷ್ಯರು ಎತ್ತಿದ ಒಂದು ಮುಖ್ಯವಾದ ಪ್ರಶ್ನೆಯ ವಿಷಯವಾಗಿ ಸಂವಾದಿಸುವ ಹಾಗೆ ನಡೆಸಿದ್ದ ಸಂಭವವಿತ್ತು– "ಗುರುವೇ, ಇವನು ಕುರುಡನಾಗಿ ಹುಟ್ಟಿರುವದಕ್ಕೆ ಯಾರು ಪಾಪ ಮಾಡಿದರು? ಇವನೋ? ಇವನ ತಂದೆತಾಯಿಗಳೋ?" ಅಪೋಸ್ತಲರು ತಮ್ಮ ತರ್ಕದಲ್ಲಿ ಎಂದಿಗಿಂತಲೂ ಕಡಿಮೆ ಸ್ಪಷ್ಟತೆಯುಳ್ಳವರಾಗಿದ್ದಿರಬಹುದು, ಇಲ್ಲದಿದ್ದಲ್ಲಿ ಈ ಮನುಷ್ಯನು ಹುಟ್ಟುವ ಮೊದಲು ಪಾಪಮಾಡಲು ಸಾಧ್ಯವಿಲ್ಲವೆಂಬದು ಅವರಿಗೆ ತಿಳಿದಿರುತ್ತಿತ್ತು; ಆದರೆ ಆತ್ಮಗಳು ಪುನರ್ಜನ್ಮ ಪಡೆಯುವ ವಿಷಯವಾಗಿ ಅನ್ಯಜಾತಿಯವರಲ್ಲಿರುವ ಕೆಲವು ಭಾವನೆಗಳು ಅವರ ಗಮನಕ್ಕೆ ಬಂದಿದ್ದುದು ಕೇವಲ ಸಂಭವನೀಯವಾಗಿತ್ತು. ಅನ್ಯಜಾತಿಯವರು ತಾವು ಹಿಂದೆ ಬೇರೊಂದು ರೂಪದಲ್ಲಿ ಜನ್ಮತಳೆದಿದ್ದುದಾಗಿಯೂ ಅಲ್ಲದೆ ಈ ಲೋಕದಲ್ಲಿ ಹುಟ್ಟಿಬಂದಿರುವದು ಹಿಂದಿನ ಜೀವಿತಕ್ಕಿಂತಲೂ ಉತ್ತಮವಾದ ಇಲ್ಲವೆ ಕೀಳಾದ ಜನ್ಮವು ಈ ಬದಲಾದ ಸ್ಥಿತಿಯಲ್ಲಿ ಹೊಸದಾಗಿ ಜನ್ಮತಳೆದಿರುವದೆಂದು ಸೈತಾನನು ಅವರ ಮನಸ್ಸುಗಳನ್ನು ಮರಳುಗೊಳಿಸಿರುವನು. ಲಕ್ಷಾಂತರ ಮಂದಿ ಬೌದ್ಧರು ಮತ್ತು ಮರ್ಮೋನರು ಸಹ ಈ ಅಭಿಪ್ರಾಯವನ್ನು ಹಿಡಿದುಕೊಂಡಿರುವರು. ಸತ್ಯವೇದವು ಹೇಗೂ ಇದಕ್ಕೆ ಪ್ರತಿಯಾಗಿ ಸ್ಪಷ್ಟಗೊಳಿಸಿ ಬೋಧಿಸಿರುವದೇನಂದರೆ, ಆದಾಮನು ದೇವರಿಂದಾದ ನೇರ ಸೃಷ್ಟಿಯಾಗಿದ್ದು ಮಾನವ ಕುಲದವರೆಲ್ಲರೂ ನೇರವಾಗಿ ಆತನ ಮೂಲಕವಾಗಿ ಸಹಜವಾದ ಹುಟ್ಟುವಿಕೆಯಿಂದ ಬಂದಿರುವರೆಂಬದು.

ಈ ಮನುಷ್ಯನೂ ಪಾಪ ಮಾಡಲಿಲ್ಲ ಇಲ್ಲವೇ ಇವನ ತಂದೆತಾಯಿಗಳೂ ಪಾಪಮಾಡಲಿಲ್ಲವೆಂಬ ನಮ್ಮ ಕರ್ತನ ಉತ್ತರವನ್ನು ಆತನು ಮತ್ತು ಆತನ ತಂದೆತಾಯಿಗಳು ಮೂಲಪಿತನಾದ ಆದಾಮನಿಗಾದ ಹಾಗೂ ಆತನ ಮೂಲಕವಾಗಿ ಅವನ ಸಂತತಿಯವರೆಲ್ಲರಿಗೂ ಸಾಧಾರಣವಾಗಿ ಬಂದಿರುವ ಖಂಡನೆಯಲ್ಲಿ ಪಾಲುಗಾರರಲ್ಲದವರಾಗಿ ಅವರು ದೋಷರಹಿತ ರಾಗಿದ್ದರೆಂಬದಾಗಲಿ ಇದರ ಅರ್ಥವೆಂದು ತಿಳಿದುಕೊಳ್ಳಬಾರದು. ಇದರ ಬಗ್ಗೆ ಅಪೋಸ್ತಲನು ಹೇಳಿರುವದು: "ಒಬ್ಬ ಮನುಷ್ಯ ನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು." (ರೋಮಾ. 5:12) ಈ ಕುರುಡನು ಮತ್ತು ಆತನ ತಂದೆತಾಯಿಗಳು ಆದಾಮನ ಸಂತತಿಯ ಸದಸ್ಯರಾಗಿ ನಮ್ಮಂತೆ ಹಾಗು ಇತರರಂತೆ ಅವರು ಮರಣದ ತೀರ್ಪಿಗೊಳಗಾಗಿದ್ದರು. ಆ ಮನಷ್ಯನಾಗಲಿ ಅಥವಾ ಅವನ ತಂದೆತಾಯಿಗಳಾಗಲಿ ಮಾಡಿದ ಯಾವುದೇ ವಿಶೇಷವಾದ ಪಾಪದ ದೆಸೆಯಿಂದ ಅವನು ಕುರುಡನಾಗಿ ಹುಟ್ಟಲಿಲ್ಲವೆಂಬುದು ನಮ್ಮ ಕರ್ತನು ಹೇಳಿದ ಮಾತಿನ ಅರ್ಥವೆಂಬದು ಸ್ಪಷ್ಟವಾಗಿತ್ತು. ಆತನು ಇನ್ನೊಂದು ಸಂದರ್ಭದಲ್ಲಿ ಹೀಗೆಯೇ ಸಿಲೋವಾಮಿನ ಬುರುಜು ಬಿದ್ದವರ ವಿಷಯವಾಗಿ ಮಾತನಾಡುತ್ತಾ ಹೇಳಿದ್ದು: "ಇದಲ್ಲದೆ ಸಿಲೋವಾಮಿನಲ್ಲಿ ಬುರುಜುಬಿದ್ದು ಸತ್ತ ಆ ಹದಿನೆಂಟು ಮಂದಿಯು ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಮನುಷ್ಯರಿಗಿಂತಲೂ ಅಪರಾಧಿಗಳೆಂದು ಭಾವಿಸುತ್ತೀರೊ? ಹಾಗಲ್ಲವೆಂದು ನಿಮಗೆ ಹೇಳುತ್ತೇನೆ. ದೇವರ ಕಡೆಗೆ ತಿರುಗಿಕೊಳ್ಳ ದಿದ್ದರೆ ನೀವೆಲ್ಲರೂ ಅವರಂತೆಯೇ ಹಾಳಾಗಿ ಹೋಗುವಿರಿ..." (ಲೂಕ 13:4) ಮರಣದ ತೀರ್ಪು ಎಲ್ಲರ ಮೇಲಿರುವದು ಅಲ್ಲದೆ ನಮ್ಮಲ್ಲಿ ಯಾರಾದರೂ ಕೇವಲ ಆ ಜೀವದಾಯಕನೊಡನೆ ಸಂಬಂಧಕ್ಕೆ ಬಂದಲ್ಲಿ ಅವರು ಇದರಿಂದ ತಪ್ಪಿಸಿಕೊಳ್ಳುವದನ್ನು ನಿರೀಕ್ಷಿಸಲು ಸಾಧ್ಯ.

## ಶ್ರಮಸಂಕಟಗಳು ದೇವರು ಅಸಂತೋಷ–ಗೊಂಡಿರುವನೆಂಬದಕ್ಕೆ ಸಾಕ್ಷ್ಯಾಧಾರವಲ್ಲ.

ಆದುದರಿಂದ ಈ ಪಾಠದ ಪ್ರಾಮುಖ್ಯವಾದ ಅಂಶವೆಂದರೆ ಕೇಡುವಿಪತ್ತುಗಳು ಅವಶ್ಯವಾಗಿ ದೇವರ ಅಸಮ್ಮತಿಯ ಗುರುತಾಗಿರಲಾರದು. ಇದು ಈ ಮನುಷ್ಯನ ಸಂಗತಿಯಾಗಿರಲಿಲ್ಲ; ಇದು ಯೋಬನ ಸಂಗತಿಯೂ ಆಗಿರಲಿಲ್ಲ ಇಲ್ಲವೇ ಬಿದ್ದ ಶಿಲೋವಾಮಿನ ಬುರುಜಿನ ಅಡಿಯಲ್ಲಿ ಹೂತುಹೋಗಿದ್ದವರ ಸಂಗತಿಯೂ ಆಗಿರಲಿಲ್ಲ. ಹೀಗಿದ್ದರೂ ನಮ್ಮ ಕರ್ತನು ಯೆಹೂದ್ಯರ ವಿಷಯದಲ್ಲಿ ಅನ್ವಯವಾಗುವಂತೆ ವಿಶೇಷವಾದ ರೋಗಗಳು ಅನೇಕ ಸಾರಿ ವೈಯುಕ್ತಿಕವಾದ ಪಾಪಗಳಿಗಾಗಿರುವ ಪೆಟ್ಟುಗಳು ಅಥವಾ ಶಿಕ್ಷೆಗಳು ಎಂಬುದನ್ನು ಅರ್ಥೈಸಿಹೇಳಿದ್ದನು. ಹೀಗೆ ಬೇತೆಸ್ದ ಕೊಳದ ಹತ್ತಿರ ಬಿದ್ದುಕೊಂಡಿದ್ದ ಆ ಅಸ್ವಸ್ಥ ಮನುಷ್ಯನ ವಿಷಯವೂ ಆಗಿತ್ತು. ಹಿಂದಿನ ಒಂದು ಪಾಠದಲ್ಲಿ ಸ್ವಸ್ಥವಾದವನೊಬ್ಬನಿಗೆ ನಮ್ಮ ಕರ್ತನು ಹೀಗೆ ಹೇಳಿದ್ದನ್ನು ಗಮನಿಸಿದ್ದೇವೆ: "ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು..." ಮಾನವರನ್ನು ಬಾಧಿಸುತ್ತಿರುವ ಹಲವು ವ್ಯಾಧಿಗಳು ಅವರ ಅಥವಾ ಅವರ ಪೂರ್ವಜರು ಅನುಚಿತವಾಗಿ ಜೀವಿಸಿದ್ದರ ಪರಿಣಾಮಗಳೆಂಬದು ಸತ್ಯವೆನ್ನುವದರಲ್ಲಿ ಸಂದೇಹವಿಲ್ಲ. ಸ್ಕ್ರೋಫುಲ ಎಂಬುದು ಅಂಥ ಒಂದು ವ್ಯಾಧಿಯಾಗಿದ್ದು ಹಲವು ಸಾರಿ ಅದು ಹಲವಾರು ತಲೇಮಾರಿನ ವರೆಗೆ ಪ್ರಸರಣೆಯಾಗುತ್ತದೆ; ಗೌಟ್ ಎಂಬದು ಮತ್ತೊಂದು. ನಿಜವಾಗಿಯೂ ನಾವು ಇಂಥ ಹತ್ತಾರು (ವ್ಯಾಧಿಗಳನ್ನು) ಹೆಸರಿಸಲು ಸಾಧ್ಯ. ನಾವು ಅಸ್ವಸ್ಥರಾಗಿರುವದು ಕಂಡುಬಂದಾಗ ಇದಕ್ಕೆ ನಾವು ಅತಿಯಾಗಿ ತಿಂದುಕುಡಿಯುವದರ ಅಥವಾ ನಮ್ಮ ಸನ್ನಿವೇಶಕ್ಕೆ ಸರಿಹೊಂದದ ಆಹಾರವನ್ನು ಬಳಸುವದರ ಮೂಲಕವಾಗಿ ಅಜಾಗರೂಕರಾಗಿ ಜೀವಿಸುತ್ತಿರುವದು ಎಷ್ಟರ ಮಟ್ಟಿಗೆ ಹೊಣೆಯೆಂಬುದನ್ನು ಎಚ್ಚರಿಕೆಯಿಂದ ಪರಿಶೀಲಿಸುವದು ಸೂಕ್ತವಾದುದು. ನಮ್ಮ ಈ ಬಗೆಯ ಅಸ್ವಸ್ಥತೆಗೆ ಇದು ಕಾರಣವೆಂದು ಕಂಡುಕೊಂಡಾಗ ನಾವು ಅದನ್ನು ಬಿಟ್ಟು ತಿರಿಗಿಕೊಂಡವರಾಗಿ ನಮಗೆ ಸಾಧ್ಯವಿರುವ ಪ್ರತಿಕ್ರಮಗಳನ್ನು ತೆಗೆದುಕೊಂಡು, ಹೀಗೆ ಮಾಡುವಲ್ಲಿ ಕರ್ತನ ಸಹಾಯದಿಂದ ಮುಂದೆ ಹೆಚ್ಚು ಸ್ಥಿರತೆಯಿಂದ ನಡೆಯುವದಾಗಿ ಪ್ರಾರ್ಥನಾಪೂರ್ವಕವಾಗಿ ನಿರ್ಧಾರವನ್ನು ಮಾಡಿಕೊಳ್ಳುವದು ಒಳ್ಳೆಯದಾಗಿರುವದು; ಹೀಗೆ ನಾವು ತಿಂದರೂ ಕುಡಿದರೂ ನಾವು ಏನನ್ನಾದರೂ ಮಾಡಿದರೂ ಅದೆಲ್ಲವನ್ನು ದೇವರ ಘನಕ್ಕಾಗಿ ಮಾಡುವಂತಾಗಿ ನಾವು ಆತನ ಸೇವೆಗೆ ಪ್ರತಿಷ್ಠಿಸಿಕೊಂಡಿರುವ ನಮ್ಮ ಮರ್ತ್ಯಶರೀರವನ್ನು ಸಾಧ್ಯವಾದಷ್ಟು ಉತ್ತಮ ರೀತಿಯಲ್ಲಿ ಕಾಪಾಡಿಕೊಂಡು ಪ್ರಯೋಜನಕಾರಿಯಾಗುವಂತೆ ಮಾಡಬಹುದು.

ಆದರೂ ನಮ್ಮನ್ನು ವಿಚಾರಿಸಿಕೊಂಡಾಗ, ನಮ್ಮ ಈ ಕಷ್ಟಾನುಭವವಾಗಲಿ ಮತ್ತು ಅಸ್ವಸ್ಥತೆಯಾಗಲಿ ನಾವು ಆತ್ಮತೃಪ್ತಿಗಾಗಿ ಮಾಡಿದ ಕಾರ್ಯಗಳ ಅಥವಾ ನಮ್ಮ ನಿಯತ್ರಣಕ್ಕೆ ಮೀರಿ ವಂಶಪಾರಂಪರ್ಯವಾಗಿ ಬಂದ ಖಾಯಿಲೆಯಿಂದ ಬಂದದ್ದಾದುದೆಂದು ಕಂಡುಬಾರದೆ ಇದ್ದಲ್ಲಿ, ನಾವು ಆಗ ಈ ಕಷ್ಟಉಪದ್ರವಗಳು ಕರ್ತನ ಸೇವೆಯಲ್ಲಿ ನಾವು ಮಾಡುವ ಕಾರ್ಯಗಳ ಫಲವಾಗಿ ಬಂದುದ್ದಾಗಿರುವದೋ ಇಲ್ಲವೋ ಎಂದು ಜಾಗ್ರತೆಯಿಂದ ಪರಿಶೀಲಿಸುವದು ನಮಗೆ ಉಚಿತವಾದದ್ದು. ಅದು ಹೀಗೆ ಬಂದಿರುವದಾದಲ್ಲಿ ನಾವು ಆಗ ಅದರಲ್ಲಿ ಉಲ್ಲಾಸಿಸುವವರಾಗಬೇಕು; ನಮಗಾಗಿ ಇಷ್ಟೆಲ್ಲಾ ಮಾಡಿರುವಾತನ ಸೇವೆಯಲ್ಲಿ ನಮ್ಮ ಜೀವಿತದ ಕೆಲವು ಸಂಗತಿಗಳನ್ನು ಮತ್ತು ಆರೋಗ್ಯವನ್ನು ವ್ಯಯಮಾಡಿ ಅರ್ಪಿಸಲು ಶಕ್ತರಾದುದಕ್ಕೆ ಆನಂದಿಸಬೇಕು. ಹೀಗಿದ್ದರೂ ನಾವು ವಿವೇಕಿಗಳಾದ ಮನೆವಾರ್ತೆಯವರಾಗಿ ಬೇರೊಂದು ಮಾರ್ಗದಿಂದ ಅಂದರೆ ಕಡಿಮೆ ಬಳಲಿಕೆಯ ಅಥವಾ ಕಡಿಮೆ ನಿತ್ರಾಣಗೊಳ್ಳುವ ವಿಧಾನದಿಂದ ಒಳ್ಳೆಯ ಅಥವಾ ಉತ್ತಮವಾದ ಫಲಿತಾಂಶಗಳನ್ನು ಪಡೆಯಬಹುದೋ ಇಲ್ಲವೋ ಎಂದು ಕಂಡುಕೊಳ್ಳಲು ನಾವು ಪ್ರಯತ್ನಿಸಬೇಕು. ಹೀಗಿದ್ದರೂ ನಮ್ಮ ಮನಸ್ಸಿನಲ್ಲಿರಬೇಕಾದ ಅಂಶವೇನಂದರೆ ಇವುಗಳು ನಮ್ಮ ಸ್ವರಕ್ಷಣೆಗಾಗಿ ಇರುವಂಥದ್ದಾಗಿರಬಾರದು, ಏಕೆಂದರೆ ತನ್ನ ಜೀವವನ್ನು ಅಯುಕ್ತವಾದ ಮಟ್ಟಕ್ಕೆ ಪ್ರೀತಿಸುವವನಾದರೆ ಅದನ್ನು

ಕಳಕೊಳ್ಳುವನು. ಮನೇವಾರ್ತೆಯವರಾಗಿ ನಮ್ಮ ದೇಹದ ಮೂಲಕವಾಗಿ ಆತನಿಗೆ ಮೆಚ್ಚಿಕೆಯಾಗಿಯೂ ಅಂಗೀಕೃತ ವಾಗಿಯೂ ಇರುವಂಥದನ್ನು ನೆರವೇರಿಸುವಂಥ ವಿಷಯಗಳ ಬಗ್ಗೆ ನಮ್ಮ ಅಲೋಚನೆಗಳು ಇರುವಂತೆ ಮಾಡುವದು ನಮ್ಮ ಜವಾಬ್ದಾರಿ. ಈ ಸಲಹೆಗಳಲ್ಲಿ ಯಾವದೂ ನಮ್ಮ ವಿಷಯಕ್ಕೆ ಸರಿಹೊಂದದಿದ್ದಲ್ಲಿ, ನಮಗೆ ಪರಿಶೀಲಿಸಲು ಆಗಲೂ ಇತರ ಎರಡು ಸಂಗತಿಗಳುಂಟು, ಅದೇನಂದರೆ:–

(1) ನಮಗೆ ಬಂದ ವ್ಯಾಧಿಯು ಕರ್ತನಿಗೆ ಮೆಚ್ಚಿಕೆಯಾಗದ ವಿಧಾನವನ್ನು ಅನುಸರಿಸಿದ ಫಲವಾಗಿ ಶಿಕ್ಷೆಯ ರೂಪದಲ್ಲಿ ಬಂದದ್ದಾಗಿರಬಹುದೋ? ಅದು ನಮಗೆ ಪೆಟ್ಟುಗಳ ರೂಪದಲ್ಲಿ ಇರಬಹುದೋ? ನಮ್ಮ ಹೃದಯದ ಬಾಗಿಲಿನ ಅಂಚಿನಲ್ಲಿ ಪಾಪವಿರುವದು ಅಂದರೆ ನಮ್ಮ ಜೀವಿತವು ಒಂದು ತಪ್ಪಾದ ಮಾರ್ಗದಲ್ಲಿರುವದು ನಮ್ಮ ಮನಸ್ಸಿಗೆ ತೋಚಿದ್ದೇಯಾದಲ್ಲಿ ಆ ಕಷ್ಟಾನುಭವವನ್ನು ಒಂದು ಶಿಕ್ಷೆಯಾಗಿ ಅಂಗೀಕರಿಸಿ ಅದರಿಂದ ಪ್ರಯೋಜನ ಪಡೆಯಲು ಯತ್ನಿಸುವದು ನಮಗೆ ಕ್ಷೇಮಕರವಾಗಿರುವದು. ಇಲ್ಲವಾದರೆ, (2) ಇವುಗಳು ಯಾವುದೂ ನಮ್ಮ ಸಂಗತಿಗಳಿಗೆ ಸರಿಬೀಳದಿರುವದು ಕಂಡುಬಂದಲ್ಲಿ ನಮ್ಮ ಪಾಠದಲ್ಲಿರುವ ಸಂಗತಿಯಂತೆ ನಮ್ಮ ಸಂಕಷ್ಟಗಳು ನಮ್ಮ ಒಳಿತಿಗಾಗಿರುವದೆಂದೂ, ಕೆಲವು ಅಮೂಲ್ಯ ವಾದ ಆತ್ಮಿಕ ಪಾಠಗಳನ್ನು ನಮಗೆ ಅನ್ವಯಿಸಿಕೊಳ್ಳಲು ಸಹಾಯಕ ವಾಗಿರುವದೆಂದೂ, ಇಲ್ಲವೆ ನಮ್ಮ ಕರ್ತನು ವ್ಯಕ್ತಪಡಿಸಿರುವಂತೆ ದೇವರ ಕ್ರಿಯೆಗಳು (ನಮ್ಮಲ್ಲಿ) ತೋರಿಬರುವದಕ್ಕಾಗಿರುವದೆಂದೂ ಪರಿಗಣಿಸಿಕೊಳ್ಳಬೇಕು. ಒಳ್ಳೆಯ ಪಾಠಗಳನ್ನು ತೆಗೆದುಕೊಳ್ಳು ವದರ ಮೂಲಕವಾಗಿ ಆಗಲಿ ಇಲ್ಲವೆ ಇತರರಿಗೆ ಒಳ್ಳೆಯ ಪಾಠವನ್ನು ತೋರಿಸಿಕೊಡುವದರ ಮೂಲಕವಾಗಿ ಆಗಲಿ ನಮ್ಮ ದೇಹ ಮತ್ತು ಆತ್ಮಗಳ (ಮನಸ್ಸುಗಳ) ಮೂಲಕವಾಗಿ ದೇವರಿಗೆ ಮಹಿಮೆಯುಂಟುಮಾಡುವದು ನಮಗೆ ಸಂತೋಷಕರವಾದದ್ದು. ನಾವು ಮುಂದೆ ನೋಡುವ ಹಾಗೆ ಇದು ಬಹತೇಕ ಆ ಕುರುಡನ ಅನುಭವವಾಗಿತ್ತು; ತನಗೆ ಆಶೀರ್ವಾದವಾಗಿ ನಡೆಸಲ್ಪಟ್ಟ ಆತನ ಸಂಗತಿಯು ಕರ್ತನಾದ ಯೇಸುವನ್ನು ಮತ್ತು ಆತನ ಶಕ್ತಿಯನ್ನು ತೋರ್ಪಡಿಸುವ ಸಂಗತಿಯಾಗಿಯೂ ಮತ್ತು ಆತನ ಕಾಲದಲ್ಲಿದ್ದ ಫರಿಸಾಯರು ಹಾಗು ಇತರರಿಗೆ ಒಂದು ಪರೀಕ್ಷಾರ್ಥವಾದ ಸಂಗತಿಯಾಗಿಯೂ ಅಲ್ಲದೆ ಕರ್ತನ ಜನರಿಗೆ ಆ ದಿನದಿಂದ ಈ ಕಾಲದವರೆಗೂ ಒಂದು ಅಮೂಲ್ಯವಾದ ಪಾಠೋಪದೇಶ ವಾಗಿಯೂ ಇರುವ ಸಂಗತಿಯಾಗಿತ್ತು.

## "ದೇವರ ಕ್ರಿಯೆಗಳು"

ದೇವರ ಕ್ರಿಯೆಗಳು ಕೇವಲ ಸಾವಿರಮಂದಿ ರೋಗಿಗಳಲ್ಲಿ ಮತ್ತು ಕುರುಡರಲ್ಲಿ ಒಬ್ಬನನ್ನು ಸ್ವಸ್ಥಪಡಿಸುವದಾಗಿರಲಿಲ್ಲವೆಂದೂ, ಆದರೆ ಯೇಸುವನ್ನು ಲೋಕಕ್ಕೆ ಬೆಳಕಾಗಿರುವನೆಂದೂ ಮತ್ತು ಯೆಹೂದ್ಯರಿಗೆ ಪ್ರಭಾವವಾಗಿಯೂ ಪರೀಕ್ಷಾರ್ಥವಾಗಿಯೂ ಇರುವನೆಂದು ತೋರ್ಪಡಿಸುವದಾಗಿತ್ತೆಂಬುದನ್ನೂ ಒತ್ತಿಹೇಳುವವರಾಗಿದ್ದೇವೆ. ಇದು ಅವರಿಂದ ನಿಜವಾಗಿಯೂ ಇಸ್ರಾಯೇಲ್ಯರಾಗಿರುವ ಒಂದು ಬೆರಳೆಣಿಕೆಯಷ್ಟು ಚಿಕ್ಕದಾದ ಜನರನ್ನು ಮದಲಗಿತ್ತಿಯು ವರ್ಗದ ಸದಸ್ಯರಾಗುವದಕ್ಕೆ ಒಟ್ಟುಗೂಡಿಸಿ ಉಳಿದ ಆ ಜನಾಂಗದ ದೊಡ್ಡ ಗುಂಪನ್ನು ದೇವರ ರಾಜ್ಯದಲ್ಲಿ ಪಾಲನ್ನು ಹೊಂದಲು ಅನರ್ಹರೆಂದು ನಿರಾಕರಿಸುವದಕ್ಕಾಗಿತ್ತು. ನಮ್ಮ ಕರ್ತನು ಕುರುಡನಾದ ಈ ಮನುಷ್ಯನನ್ನು ಸ್ವಸ್ಥಮಾಡುವದರ ಮೂಲಕವಾಗಿ–"ನನ್ನನ್ನು ಕಳುಹಿಸಿಕೊಟ್ಟಾತನ ಕೆಲಸವನ್ನು ನಾನು ಹಗಲಿರುವಾಗಲೇ ಮಾಡಬೇಕು. ರಾತ್ರಿ ಬರುತ್ತದೆ ಆಗ ಯಾರೂ ಕೆಲಸ ಮಾಡಲಾರರು" ಎಂದು ಹೇಳಿ ಈ ಕಾರ್ಯವನ್ನು ಮಾಡಲು ಮುಂದಾಗಿದ್ದನು. ನಮ್ಮ ಕರ್ತನ ಸದಾವಕಾಶದ ದಿನವು ತ್ವರಿತವಾಗಿ ಮುಕ್ತಾಯವಾಗುವದಕ್ಕೆ ಬಂದಿತ್ತು. ಈ ಅದ್ಭುತ ಮತ್ತು ಬೇರೆಯವುಗಳು, ವಿಶೇಷವಾಗಿ ಲಾಜರನನ್ನು ಎಬ್ಬಿಸಿದ್ದು ಆತನನ್ನು ಜನರ ಮುಂದೆ ಎಷ್ಟು ಪ್ರಾಮುಖ್ಯನನ್ನಾಗಿ ಮಾಡಿತ್ತೆಂದರೆ ಈ ವಿಷಯವಾಗಿ ಅವರಲ್ಲಿ ಭೇದಗಳಾಗಿ, ಕೆಲವರು ಆತನನ್ನು ಒಪ್ಪಿಕೊಂಡು ಕೆಲವರು ಆತನನ್ನು ನಿರಾಕರಿಸುವವರಾಗಿದ್ದರು. ಅಲ್ಲದೆ ಈ ಭೇದವು ಸಮಸ್ತ ಜನಾಂಗದಲ್ಲೆಲ್ಲಾ ಉಂಟಾಗಬೇಕಿರುವದು ಅವಶ್ಯವಾಗಿತ್ತು. ಇದು ಒಂದು ಪರೀಕ್ಷಾರ್ಥವಾಗಿ ಬಂದು ಯೇಸುವೆಂಬ ಲೋಕದ ಬೆಳಕು ಇಸ್ರಾಯೇಲ್ ಜನರ ಎದುರು, ಪಿಲಾತನ ಎದುರು, ಕಲ್ವಾರಿಯಲ್ಲಿ ಒಂದು ಕಾಲದ ವರೆಗೆ ಸಂಪೂರ್ಣವಾಗಿ ನಂದಿಹೋಗುವದರಲ್ಲಿ ಕೊನೆಗೊಳ್ಳಬೇಕಿತ್ತು. ಇದೇ ರೀತಿಯಲ್ಲಿ ಪ್ರತಿಯೊಬ್ಬ ಕರ್ತನ ಹಿಂಬಾಲಕರ ವಿಷಯದಲ್ಲಿಯೂ ಒಂದು ಸದವಕಾಶದ ಸುದಿನವೆಂಬದು ಇರುತ್ತದೆಂದೂ ಆಗ ಆತನ ಸಮಯ ಪ್ರತಿಭೆ ಉತ್ಸಾಹಗಳು ಕರ್ತನ ಸ್ತುತಿಯೆಂಬ ಫಲವನ್ನು ತರುವಂಥದಾಗಿದ್ದು ಆಗ ಒದಗಿದ ಆ ಸದವಕಾಶವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳಬೇಕು, ಏಕೆಂದರೆ ಪ್ರತಿಯೊಬ್ಬನಿಗೂ ರಾತ್ರಿಯೆಂಬ ಸಮಯವು ಬರುವದು ಆಗ ಆತನು ಮರಣಕ್ಕೆ ದಾಟಿಹೋಗುವದರಿಂದ ಅವಕಾಶಗಳು ಅವನಿಂದ ದಾಟಿಹೋಗುವವು.

ಇದರ ಅನುಸಾರವಾಗಿಯೇ ಈ ಪ್ರವಾದನಾ ಹೇಳಿಕೆ –ಯಿರುವದು: "ನಿನ್ನ ಕೈಗೆ ಸಿಕ್ಕಿದ ಕೆಲಸವನ್ನೆಲ್ಲಾ ನಿನ್ನ ಪೂರ್ಣ ಶಕ್ತಿಯಿಂದ ಮಾಡು; ನೀನು ಸೇರಬೇಕಾದ ಪಾತಾಳದಲ್ಲಿ (ಶೀಯೋಲ್) ಯಾವ ಕೆಲಸವೂ ಯುಕ್ತಿಯೂ ತಿಳುವಳಿಕೆಯೂ ಜ್ಞಾನವೂ ಇರುವದಿಲ್ಲ." (ಪ್ರಸಂಗಿ 9:10) ಮತ್ತು ಇಲ್ಲಿ ಅನ್ವಯವಾಗುವ ಬೇರೊಂದು ಸಂಗತಿಯು ಈಗಲೂ ಇರುವದೆಂಬುದನ್ನು ನಾವು ಮರೆಯಬಾರದು; ಅದೇನಂದರೆ ಸಭೆಯು ಒಟ್ಟಾರೆ ಬಗೆಬಗೆಯ ಅನುಭವಗಳನ್ನು ಹೊಂದಿರು–ವಂಥದ್ದಾಗಿರುವದೆಂಬದು. ಆದಿ ಸಭೆಗೆ ಜ್ಞಾನೋದಯದ ಒಂದು ಬೆಳಕು ಪಂಚಾಶತ್ತಮ ದಿನದಿಂದ ಪ್ರಾರಂಭವಾಗಿತ್ತು; ಆದರೆ ಅದು ಉದಯದ ಸಮಯವಾಗಿರಲಿಲ್ಲ, ಅದು ಸಾಯಂಕಾಲದ ಸಮಯವಾಗಿತ್ತು. ಅವರ ಮೇಲೆ ಪ್ರಕಾಶಿಸುತ್ತಿದ್ದ ಬೆಳಕು ಸೂರ್ಯಾಸ್ತಮದ ಕಾಲದ್ದಾಗಿತ್ತು; ಕತ್ತಲು ಸುವಾರ್ತಾಯುಗದ ಸುದೀರ್ಘ ಸಮಯದ ಪರ್ಯಂತರವಾಗಿ ಆವರಿಸುತ್ತಾಬಂದು ಕ್ರಮೇಣ ಘಾಡವಾದ ಕಾರ್ಗತ್ತಲು ಉಂಟಾಗಿ ಕರ್ತನ ಜನರು ಆ ಒಂದು ಕಾಲದಲ್ಲಿ ದಾರಿಯನ್ನು ಕೇವಲ ಸ್ವಲ್ಪಮಾತ್ರವೇ ಕಾಣಲು ಸಾಧ್ಯವಾಗಿತ್ತು; ಅದು ಹೀಗೆ ಬರೆದಿರುವಂತಾಯಿತು: "ನಿನ್ನ

ವಾಕ್ಯಗಳು ನನ್ನ ಕಾಲಿಗೆ ದೀಪವೂ ಮಾರ್ಗಕ್ಕೆ ಬೆಳಕೂ ಆಗಿರುವದು." ಈ ಸುದೀರ್ಘಕಾಲವನ್ನು ಸಾಧಾರಣವಾಗಿ "ಜ್ಞಾನಾಂಧಕಾರದ ಯುಗ" (ಡಾರ್ಕ್ ಏಜಸ್) ಎಂದು ಕರೆಯಲಾಗಿರುವದು, ಅಲ್ಲದೆ ನಾವು ಈಗ ಬೆಳಕು ಉದಯಿಸುತ್ತಿರವ ಕಾಲವನ್ನು ಸಮೀಸುತ್ತಿರುವೆವು ಹಾಗು ಮುಂದಿರುವ ದಾರಿಯು ಹೆಚ್ಚುಹೆಚ್ಚು ಬೆಳಗುತ್ತಾಬರುತ್ತಿರುವದು.

ಈಗ ಪ್ರಕಾಶಿಸುತ್ತಿರುವ ಬೆಳಕು ಆದಿಸಭೆಯ ಮೇಲೆ ಪ್ರಕಾಶಿಸುತ್ತಿದ್ದಕ್ಕೆ ಬಹುವಾಗಿ ಹೊಲುತ್ತಿರುವದು, ಮತ್ತು ಈ ಎರಡು ಸಂದರ್ಭಗಳಲ್ಲಿಯೂ ಇದು (ಕರ್ತನ) ಪ್ರತ್ಯಕ್ಷತೆಯ ಜ್ಞಾನಪ್ರಕಾಶದ ಬೆಳಕು, 'ಪರೋಷೀಯ' ಅಂದರೆ ಮನುಷ್ಯ ಕುಮಾರನ ಪ್ರತ್ಯಕ್ಷತೆಯ ಜ್ಞಾನಪ್ರಕಾಶದ ಬೆಳಕಾಗಿರುವದು. ಅದರೂ ಮುಂಜಾನೆಯ ಈ ಬೆಳಕಿನ ಕಾಲದಲ್ಲೂ ನಾವು ಇನ್ನೊಂದು ಕಾರ್ಗತ್ತಲೆಯನ್ನು ನಿರೀಕ್ಷಿಸಬೇಕಿರುವದು ಅಂದರೆ ಕೆಲವೊಂದು ಅರ್ಥದಲ್ಲಿ ರಾತ್ರಿಕಾಲವು ನಡುವೆ ಪ್ರವೇಶಿಸುವದು. ಕರ್ತನು ಪ್ರವಾದಿಗಳ ಮೂಲಕವಾಗಿ ಮುಂತಿಳಿಸಿರುವಂತೆ, ಅದು ಮುಂಜಾನೆಯ (ಕಾರ್ಮೋಡ ಸಹಿತವಾದ) ಬಿರುಗಾಳಿಯು ಆಕಾಶವನ್ನೆಲ್ಲಾ ಕವಿದುಕೊಳ್ಳುವ ಸಮಯವಾಗಿರುವದು: "ಉದಯವು ಬರುತ್ತಿದೆ, ರಾತ್ರಿಯೂ ಬರುತ್ತದೆ." (ಯೆಶಾಯ 21:12) ಬೆಳಕು ಈಗ ಉದಯಿಸಿದ್ದು ಅದು ಸಾವಿರ ವರುಷದ ಆಳ್ವಿಕೆಯ ಕಾಲದ ಪ್ರಕಾಶವಾಗಿ ಪ್ರಜ್ವಲಿಸುವ ಮೊದಲು ಮಹಾ ಸಂಕಟದ ಕಾಲವೆಂಬ ಬಿರುಗಾಳಿಯು ಭೇದಿಸಿಕೊಂಡು ಬರುವದು–"ಮೊಟ್ಟಮೊದಲು ಜನಾಂಗವು ಉಂಟಾದಂದಿನಿಂದ ಆವರೆಗೆ ಸಂಭವಿಸದಂಥ ಸಂಕಟವು ಸಂಭವಿಸುವದು;" (ದಾನಿಯೇಲ 12:1) ಆದುದರಿಂದ ನಾವು ವೈಯುಕ್ತಿಕವಾಗಿಯೂ ಕ್ರಿಸ್ತನ ದೇಹವಾಗಿಯೂ ನಮಗೆ ನಾವು ಚೆನ್ನಾಗಿ ಹೇಳಿಕೊಳ್ಳ–ಬಹುದಾದುದೇನಂದರೆ, "ನಮ್ಮನ್ನು ಕಳುಹಿಸಿಕೊಟ್ಟಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡೆಸಬೇಕು" ಅಂದರೆ ನಮಗೆ ವಹಿಸಲಾದ ಕಾರ್ಯಭಾರವು ಹಗಲಿನ ಕಾಲದಲ್ಲಿ ಸೂರ್ಯನ ಬೆಳಕು ನಮ್ಮ ಮೇಲೆ ಉದಯಿಸಿರುವಾಗ ನೆರವೇರಿಸುವಂಥದ್ದಾಗಿರುವದು. ಏಕೆಂದರೆ ಸಂಕಟವೆಂಬ ಕತ್ತಲೆಯ ಕಾಲವು ಬರುತ್ತದೆ ಆಗ ಯಾರೂ ಕೆಲಸ–ಮಾಡಲಾರರು; ಆ ನಮ್ಮ ಕಾರ್ಯೋದ್ದೇಶದ ವಿಷಯ–ವಾಗಿಯಾಗಲಿ ಸಹೋದರ ಬಗ್ಗೆಯಾಗಲಿ ಸತ್ಯವನ್ನು ಬಹಿರಂಗವಾಗಿ ಸಾರುವ ವಿಷಯವಾಗಿಯಾಗಲಿ ಸೇವೆಮಾಡುವ ಸದವಕಾಶವು ಆಗಿರುವ ಅಧಿಕಾರಸ್ಥರ ಮೂಲಕವಾಗಿ ಬಲವಂತವಾಗಿ ನಿಲ್ಲಿಸಲ್ಪಡುವದು.

## ಲೋಕಕ್ಕೆ ಬೆಳಕು

ನಮ್ಮ ಕರ್ತನು ಮತ್ತೂ ಹೇಳಿದ್ದು, "ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ." ಆ ಬೆಳಕು ಅವರ ಮಧ್ಯದಲ್ಲಿ ಅವರ ಕೆಟ್ಟತನವನ್ನು ಖಂಡಿಸಲು ಮತ್ತು ಒಳ್ಳೆಯದನ್ನು ಪ್ರೊತ್ಸಾಹಿಸಲು ಮುಂದೆ ಆರು ತಿಂಗಳು ಅಂದರೆ ನಮ್ಮ ಕರ್ತನು ಶಿಲುಬೆಯ ಮರಣವನ್ನು ಹೊಂದುವವರೆಗೆ ಹೊಳೆಯಲ್ಪಟ್ಟಿತ್ತು, ಆದರೆ ಆತನು ಆ ಬೆಳಕಿನಿಂದ ಪ್ರಭಾವಹೊಂದಿದವರನ್ನು ಅಂದರೆ ತನ್ನ ಆತ್ಮವನ್ನು ಹೊಂದಿ ಪಂಚಾಶತ್ತಮ ದಿನದ ಆಶೀರ್ವಾದದ ಮೂಲಕ ಜ್ಞಾನಪ್ರಕಾಶ ಪಡೆದ ಕೆಲವರನ್ನು ತನ್ನ ಹಿಂದೆ ಬಿಟ್ಟುಹೋದನು. ಇವರ ವಿಷಯವಾಗಿ ಆತನು ಹೇಳಿದ್ದು: "ನೀವು ಲೋಕಕ್ಕೆ ಬೆಳಕಾಗಿದ್ದೀರಿ." "...ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು." ಹೀಗೆ ಅಪೋಸ್ತಲನು ಹೇಳಿರುವಂತೆ, "ಕ್ರಿಸ್ತನು ಎಂಥವನಾಗಿದ್ದಾನೋ ನಾವು ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ." ಬೆಳಕುಗಳು ಕತ್ತಲೆಯಲ್ಲಿ ಹೊಳೆದವು, ಅವುಗಳನ್ನು ಅರಿತುಕೊಳ್ಳಲಾಗಲಿಲ್ಲ, ಗ್ರಹಿಸಲಾಗಲಿಲ್ಲ, ಅದನ್ನು ಅರ್ಥಮಾಡಿಕೊಳ್ಳಲಾಗಲಿಲ್ಲ; ಅದು ಬಹು ದೊಡ್ಡಪಾಲು ಜನರಿಂದ ಮಾತ್ರವಲ್ಲದೆ ದೇವಜನರೆಂದು ಹೇಳಿಕೊಂಡಾಗ್ಯೂ ತಮ್ಮ ಹೃದಯವು ಪವಿತ್ರಾತ್ಮನಿಂದ ಜ್ಞಾನಪ್ರಕಾಶವನ್ನು ಪಡೆದುಕೊಳ್ಳಲು ಆ ಬೆಳಕಿನ ವಿಷಯದಲ್ಲಿ ಸಹಮತವಿಲ್ಲದೇ ಇರುವವರಿಂದಲೂ ಸಹ ಆ ಬೆಳಕು ನಿರಾಕರಿಸಲ್ಪಟ್ಟು ಹಿಂದೂಡಲ್ಪಟ್ಟಿತ್ತು. ಯಾಕೆಂದರೆ ಪವಿತ್ರಾತ್ಮವನ್ನು ಹೊಂದಿ ನಮ್ಮ ಬೆಳಕನ್ನು ಪ್ರಕಾಶಿಸುವಂತೆ ಮಾಡಸಲುವಾಗಿ ಆ ಮೂಲಕ ಜ್ಞಾನಪ್ರಕಾಶವನ್ನು ಪಡೆಯುವದಕ್ಕೂ ಮತ್ತು ಇದಕ್ಕೆ ಬದಲಾಗಿ (ಕೇವಲ) ಆ ಜ್ಞಾನಪ್ರಕಾಶವನ್ನು ಹೊಂದಿದವರಾಗಿರುವದಕ್ಕೂ ಬಹು ವ್ಯತ್ಯಾಸವಿರುವದೆಂಬುದನ್ನು ಗಮನದಲ್ಲಿಟ್ಟುಕೊಳ್ಳೋಣ. ನಮ್ಮ ಕರ್ತನು ಅನೇಕರ ಮೇಲೆ ತನ್ನ ಬೆಳಕನ್ನು ಹೊಳೆಯುವಂತೆ ಮಾಡಿದ್ದನು ಮತ್ತು ನಮಗೂ ಸಹ ನಮ್ಮ ಬೆಳಕನ್ನು ಅನೇಕರ ಮೇಲೆ ಹೊಳೆಯವಂತೆ ಮಾಡುವ ಅವಕಾಶಗಳಿರುವವು. ಆದರೆ ಪವಿತ್ರಾತ್ಮನಿಂದ ಹುಟ್ಟದ ಹೊರತು ಯಾರೂ ತನ್ನಲ್ಲಿಯೇ ಬೆಳಕನ್ನು ಹೊಂದಲಾಗುವದಿಲ್ಲ – ಇಬ್ರೀಯ 10:32

## ಕುರುಡನ ಕಣ್ಣುಗಳಿಗೆ ಹಚ್ಚುವದು

ಈ ಒಂದು ಸಣ್ಣ ಸಂಬಾಷಣೆಯು ಆ ಕುರುಡನು ಕೇಳಿಸಿಕೊಳ್ಳುವಂತೆ ನಡೆದ ಸಂಭವವಿದ್ದು ಅದು ಕೇವಲ ಅವನಿಗಾಗಿ ಮಾತ್ರವಲ್ಲದೆ ಆತನ ಶಿಷ್ಯರಿಗೂ ಮತ್ತು ಅಲ್ಲಿಂದೀಚೆಗೆ ಅವರ ಮೂಲಕವಾಗಿ ಕರ್ತನ ಮಾತನ್ನು ನಂಬುವವರ ಸಲುವಾಗಿಯೂ ಸಹ ಇರುವ ಉದ್ದೇಶವಾಗಿತ್ತು. ಆನಂತರ ನಮ್ಮ ಕರ್ತನು ನೆಲದ ಮೇಲೆ ಉಗುಳಿ ಮತ್ತು ಆ ಉಗುಳು ಮತ್ತು ಮಣ್ಣಿನಿಂದ ಲೇಪನಮಾಡಿ ಅದನ್ನು ಆ ಕುರುಡನ ಕಣ್ಣುಗಳಿಗೆ ಲೇಪಿಸಿದ್ದನು. ಇದೆಲ್ಲವೂ ಆ ಕುರುಡು ಮನುಷ್ಯನಿಂದ ಕೆಲವು ಸಹಕಾರವನ್ನು ಪಡೆಯುವದಕ್ಕೆ ಸೂಚಿತವಾಗಿತ್ತು. ನಂಬಿಕೆಯು ಮೊದಲು ಕ್ರಿಯೆಗಳಿಂದ ಹಿಂಬಾಲಿಸಲ್ಪಡಬೇಕು ಇದು ಒಂದು ಮಟ್ಟದ ಪರಿಪೂರ್ಣತೆಗೆ ಪ್ರಮಾಣವಾಗಿರುವದು. ಆತನು ನಮ್ಮ ಕರ್ತನ ಅಪ್ಪಣೆಯಂತೆ ಶಿಲೋವ ಕೊಳದ ನೀರಿನಲ್ಲಿ ತೊಳಕೊಳ್ಳಲು ಹೋದುದರಲ್ಲಿ ಅತನ ಒಪ್ಪಿಗೆಯೂ ಸಹ ಅನ್ವಯವಾಗಿತ್ತು. ಅವನು ಇದನ್ನು ನಂಬದಿದ್ದಲ್ಲಿ ಕಣ್ಣಿಗೆ ಹಚ್ಚಿಸಿಕೊಳ್ಳಲು ತಾನು ಒಪ್ಪಿಕೊಳ್ಳುತ್ತಿರಲಿಲ್ಲ ಇಲ್ಲವೇ ತಾನು ಬಿಕ್ಷುಕನಾಗಿದ್ದು ಹೋಗಿ ತೊಳಕೊಳ್ಳಲು ತನ್ನ ಜಾಗವನ್ನು ಬಿಟ್ಟು ಹೊರಡುತ್ತಿರಲಿಲ್ಲ. ನಮ್ಮ ಕರ್ತನು ಮಾಡಿದ ಆ ಉಗುಳಿನ

ಲೇಪನದಲ್ಲಿ ಯಾವುದೇ ಗುಣಕಾರೀಶಕ್ತಿಯಿರಲಿಲ್ಲ ಇಲ್ಲವೇ (ತೊಳೆಯಲು) ಬಳಸಿದ ನೀರಿನಲ್ಲಿ ಯಾವ ಗುಣಕಾರೀಶಕ್ತಿಯೂ ಇರಲಿಲ್ಲವೆಂದು ನಾವು ಸುರಕ್ಷಿತವಾಗಿ ಹೇಳಬಹುದು; ಮತ್ತು ಈ ಅಂಶವನ್ನು ಈ ವಿವರಣೆಯ ಪರ್ಯಂತರವಾಗಿ ಗುರುತಿಸಲಾಗಿರುವದು. ಅದು ಕೇವಲ ಆ ಕುರುಡನ ನಂಬಿಕೆಗೆ ಸಹಾಯಕವಾಗುವ ಸಲುವಾಗಿದ್ದು ಇದರಿಂದ ಆತನ ಮನಸ್ಸಿನಲ್ಲಿ ಯಾವುದೇ ನಿವಾರಣಾಶಕ್ತಿಯನ್ನು ಉಂಟುಮಾಡಿರಲಿಲ್ಲ. ಫರಿಸಾಯರಂತೆ ಅವನೂ ಇದನ್ನು ಒಂದು ಅದ್ಭುತವೆಂದು ಗ್ರಹಿಸಿಕೊಂಡಿದ್ದನು. ಆತನು ಹುಟ್ಟುಕುರುಡನೆಂಬ ಅಂಶವು ಈ ಅದ್ಭುತಕ್ಕೆ ಬಹು ವಿಶೇಷ ಮಹತ್ವವನ್ನು ಉಂಟುಮಾಡಿತ್ತು ಹಾಗೂ ನಂತರದಲ್ಲಿ ಅವನೇ ಹೇಳಿದಂತೆ ಅದುವವರೆಗೂ ಹುಟ್ಟುಕುರುಡನಿಗೆ ಕಣ್ಣು ಬರುವಂತೆಮಾಡಿದ್ದು ಎಂದೂ ಯಾರೂ ಕೇಳಿರಲಿಲ್ಲ. ಹೌದು, ಈ ವಿಷಯವಾಗಿ ಈವರೆಗಿನ ವೈಜ್ಞಾನಿಕ ಬೆಳವಣಿಗೆಯ ಮೂಲಕವಾಗಿಯೂ ಸಹ ಕಣ್ಣಿನ ಪೊರೆಯ ತೊಂದರೆಯ ವಿಷಯವನ್ನು ಹೊರತು ಪಡಿಸಿದರೆ ಹುಟ್ಟುಕುರುಡರಿಗೆ (ದೃಷ್ಟಿಪಡೆಯುವ) ಯಾವುದೇ ನಿರಿಕ್ಷೆಯಿರುವದಿಲ್ಲವೆಂದು ಇಂದಿನ ನೇತ್ರತಜ್ಞರು ನಮಗೆ ಹೇಳುವರು. ಮತ್ತು (ಕಣ್ಣಿನ ಗುಡ್ಡೆಯ ಹಿಂದಿರುವ ಪಾರದರ್ಶಕ) ಮಸೂರವನ್ನು ತೆಗೆದು ಕೃತಕಮಸೂರವನ್ನು ಜೋಡಿಸುವ ಈ ಶಸ್ತ್ರಚಿಕಿತ್ಸೆಯ ಮೂಲಕವಾಗಿ ಲಭಿಸುವ ಪರಿಹಾರವು ಕೇವಲ ಭಾಗಶಃವಾಗಿರುವದು.

ಈ ಅದ್ಭುತವು ಆ ಮನುಷ್ಯನ ಮನೆಯ ಹತ್ತಿರದವರೆಲ್ಲರ ಮಾತಾಗಿತ್ತೆಂಬದು ಸ್ಪಷ್ಟವಾಗಿದ್ದು ನೆರೆಹೊರೆಯವರು ಮತ್ತು ಮಿತ್ರರು ಅವನನ್ನು ಅಭಿನಂದಿಸಿದ್ದರು; ಆದರೆ ಕೆಲವರು ಈತನು ಅದೇ ವ್ಯಕ್ತಿಯೆಂಬುದನ್ನು ನಂಬಲು ಅಸಮರ್ಥರಾಗಿ ಒಬ್ಬ ಹುಟ್ಟುಕುರುಡನಾಗಿ ಹುಟ್ಟಿದವನು ಎಂದೂ ಕಾಣಲು ಸಾಧ್ಯವೆಂಬುದನ್ನು ನಂಬಲು ಅಸಮರ್ಥರಾಗಿದ್ದರು. ಇದು ಯೇಸುವಿನ ಬಗ್ಗೆ ಒಂದು ದೊಡ್ಡ ಪ್ರಚಾರವಾಯಿತು. ಕಾರಣ ಆ ಮನುಷ್ಯನಿಗೆ ಹೇಗೆ ನೋಡುವಂತಾಯಿತೆಂದು ಕೇಳಿದಾಗ ಅವನು ಯೇಸುವೆಂಬ ಹೆಸರಿನ ಒಬ್ಬ ವ್ಯಕ್ತಿಯು ಈ ಅದ್ಭುವನ್ನು ಮಾಡಿದನೆಂದು ಹೇಳಿದನು. ಫರಿಸಾಯರು ಆಗಲೇ ಮತ್ಸರವುಳ್ಳವರಾಗಿದ್ದು ನಮ್ಮ ಕರ್ತನನ್ನು ಕೊಲ್ಲುವದಕ್ಕೆ ಸಂದರ್ಭವನ್ನು ನೋಡಿತ್ತಿದ್ದು, ನಮಗೆ ಹೇಳಲ್ಪಟ್ಟಿರುವಂತೆ, ಯಾವನಾದರೂ ಯೇಸುವನ್ನು ಮೆಸ್ಸೀಯನೆಂದು ಅರಿಕೆಮಾಡಿದರೆ ಅವನನ್ನು ನಿಜವಾದ ಯೆಹೂದ್ಯನಾಗಿ ಮಾನ ಸ್ವಾತಂತ್ರ್ಯ ಮತ್ತು ಸವಲತ್ತುಗಳಿಗೆ ಅನರ್ಹನೆಂದು ನಿರ್ಣಯಿಸಿ ಸಭಾಮಂದಿರದ ಮತ್ತು ಅದರಿಂದ ದೊರೆಯುವ ಸವಲತ್ತು ಸೌಕರ್ಯಗಳೆಲ್ಲವುಗಳಿಂದ ಹೊರಗೆಹಾಕುವ ತೀರ್ಮಾನ ಮಾಡಿದ್ದರು. ಈ ವಿಷಯವು ಹಬ್ಬದಂತೆ ಮತ್ತು ಸಾಧ್ಯವಾದಲ್ಲಿ ಇದನ್ನು ಮೂಲೆಗೆ ತಳ್ಳಿ ಅದಕ್ಕೆ ಪ್ರಾಮುಖ್ಯತೆಯಿಲ್ಲದಂತೆ ಮಾಡಲು ಅವರು ಒಂದು ವಿಚಾರಣೆಯನ್ನು ನಡೆಸಿದ್ದರು. ಆ ಮನುಷ್ಯನ ತಂದೆತಾಯಿಗಳನ್ನು ಕರೆಸಿದಾಗ ಅವರು ಅವನು ತಮ್ಮ ಮಗನೆಂದೂ ಮತ್ತು ಅವನು ಕುರುಡನಾಗಿ ಹುಟ್ಟಿದನೆಂಬುದನ್ನು ಬಲ್ಲೆವೆಂದೂ ಆದರೆ ಅವನು ಈಗ ಹೇಗೆ ನೋಡುವವನಾದನೆಂದು ಅವರಿಗೆ ಹೇಳಲು ಸಾಧ್ಯವಾಗುತ್ತಿಲ್ಲ; ಅವನು ವಯಸ್ಸಿಗೆ ಬಂದವನಾಗಿರಲು ಅವನೇ ಹೇಳಶಕ್ತನೆಂಬ ಸತ್ಯವನ್ನು ಹೇಳಿ ಮುಂದಾಗುವದರಿಂದ ತಪ್ಪಿಸಿಕೊಂಡಿದ್ದರು. ಒಮ್ಮೆ ಕುರುಡನಾಗಿದ್ದ ಮನುಷ್ಯನು ಮತ್ತೆ ವಿಚಾರಿಸಲ್ಪಟ್ಟನು: ಅದು ಹೇಗೆ? ಯಾವಾಗ? ಎಲ್ಲಿ? ಎಂದು ಕೇಳಿ ಅವನನ್ನು ಸುಳ್ಳಿನಲ್ಲಿ ಸಿಕ್ಕಿಸ ಸಲುವಾಗಿ ಮಾಡಿದ್ದರು. ತನ್ನ ಹೃದಯವು ಪ್ರಾಮಾಣಿಕವಾಗಿರಲಾಗಿ, ಪರಿಶುದ್ಧರೆಂದು ಕರೆಯಲ್ಪಡುವ ಅವರು ಯೇಸುವನ್ನು ಬಲವಾಗಿ ವಿರೋಧಿಸಿ ಅದ್ಭುತವನ್ನು ಪ್ರತಿಯೊಂದು ವಿಧವಾಗಿಯೂ ಇಲ್ಲವಾಗಿಸಿ ಇಲ್ಲವೆ ಅಲಕ್ಷಿಸುವಂತೆ ಮಾಡುತ್ತಿರುವರೆಂಬುದನ್ನು ಅವನು ಅರಿತುಕೊಂಡಿದ್ದನು.

ಗುಣಹೊಂದಿದವನ ಕಡೆಗೆ ತಿರುಗಿಕೊಂಡು ಅವನಿಗೆ ಇದು ಒಂದು ಕೆಟ್ಟ ಸಾಧನದ ಮೂಲಕವಾಗಿ ಉಂಟಾಗಿದ್ದರೂ ದೇವರಿಗೆ ಸ್ತೋತ್ರಮಾಡು; ಯಾಕೆಂದರೆ ನಿನ್ನನ್ನು ಗುಣಪಡಿಸಿದ ಈ ಯೇಸುವು ಒಬ್ಬ ಪಾಪಿ, ಒಬ್ಬ ಕಪಟಿ, ಮೆಸ್ಸೀಯನೆಂದು ಹೇಳಿಕೊಳ್ಳುವ ಸುಳ್ಳುಗಾರನು; ಅವನು ಕೆಟ್ಟ ಮನುಷ್ಯನು ಎಂದು ಫರಿಸಾಯರು ಹೇಳಿದ್ದರು. ಒಮ್ಮೆ ಆ ಕುರುಡನಾಗಿದ್ದವನಿಗೆ ಇದು ಸಹಿಸಿಕೊಳ್ಳಲು ಸಾಧ್ಯವಾದುದಕ್ಕಿಂತಲೂ ಸಹಿಸಿಕೊಳ್ಳಬೇಕಾದುದಕ್ಕಿಂತಲೂ ಹೆಚ್ಚಾದುದಾಗಿತ್ತು. ತನ್ನ ಅತ್ಯುತ್ತಮನಾದ ಸ್ನೇಹಿತನ ಗುಣವು ನಿಂದನೆಯಾಗುತ್ತಿರುವದಕ್ಕೆ ಪ್ರತಿಪಾದನೆಗಾಗಿ ಆತನ ಪರವಾಗಿ ಒಂದು ಮಾತನ್ನು ಹೇಳದೇ ಕೇಳಿಕೊಂಡಿರಬಾರದು; ಆದುದರಿಂದ ಆತನು ಹೇಳಿದ್ದು, ಹಿಂದೆಂದೂ ಕೇಳದಂಥ ಒಂದು ಅದ್ಭುತವು ಮಾಡಲಾಗಿದ್ದು ಅದನ್ನು ಮಾಡಿದ ಮನುಷ್ಯನು ಪಾಪಿಯಾಗಿರಬೇಕೆಂದೂ ಅವನೊಡನೆ ದೇವರು ಯಾವ ಸಂಬಂಧವನ್ನೂ ಹೊಂದಿರುವದಿಲ್ಲವೆಂಬದು ಒಂದು ಬಹು ಅಸಾಧಾರಣವಾದ ಸಂಗತಿಯಾಗಿರುವದು; ಅದು ನಿಜಕ್ಕೂ ಒಂದು ಅಸಾಧಾರಣವಾದ ಸಂಗತಿಯಾಗಿರುವದು. ದೇವರು ಪಾಪಿಗಳ ಪ್ರಾರ್ಥನೆಯನ್ನೂ ಕೇಳನು ಎಂಬದು ಯೆಹೂದ್ಯರಾದ ನಮ್ಮಲ್ಲಿ ಒಂದು ಬೋಧನೆಯಾಗಿರಲು, ಇಂಥಾ ಒಂದು ಭಾರೀ ಅದ್ಭುತವನ್ನು ಪಾಪಿಯಾದ ಈ ಮನುಷ್ಯನಿಗೆ ಮಾಡಲು ಹೇಗೆ ಸಾಧ್ಯ? ಆನಂತರ ಅವರು ಅದು ಹೇಗೆ ಯಾವಾಗ ಮತ್ತು ಎಲ್ಲಿ ನಡೆಯಿತೆಂದು ಮತ್ತೆ ಅವನಿಗೆ ಅಡ್ಡ ಪ್ರಶ್ನೆಗಳನ್ನು ಹಾಕತೊಡಗಿದ್ದರು. ಆದರೆ ಅವನು ಅವರ ಹೃದಯದ ಅಪ್ರಮಾಣಿಕತೆಯನ್ನು ಗ್ರಹಿಸಿಕೊಂಡವನಾಗಿ ಅವರಿಗೆ ಹೀಗೆ ಹೇಳಿದ್ದನು–ಅದನ್ನು ಮತ್ತೆ ಏಕೆ ಕೇಳುತ್ತಿದ್ದೀರಿ? ನಾನು ಹೇಳಿದ್ದನ್ನು ನೀವು ನೆನಪಿಸಿಕೊಳ್ಳಿ: ನೀವು ಆತನ ಶಿಷ್ಯರಾಗುವದಕ್ಕೆ ಉತ್ಸುಕರಾಗಿದ್ದು ನಾನು ಹೆಚ್ಚು ವಿವರವಾಗಿ ಹೇಳಬೇಕೆಂದು ಬಯಸುತ್ತಿರುವಿರಾ? ಅಥವಾ ಇದನ್ನು ಪುನಃ ಕೇಳುವಲ್ಲಿ ನಿಮ್ಮ ಉದ್ದೇಶವೇನು? ತಮ್ಮ ಕಪಟತಂತ್ರವನ್ನು ಆವನು ಕಂಡುಕೊಂಡನೆಂದು ಅವರು ತಿಳುಕೊಂಡವರಾಗಿ ಆತನನ್ನು ಬೈದು ಹೀಗೆ ಹೇಳಿದ್ದರು: ಇಲ್ಲ, ನಾವು ಯೇಸುವಿನ ಶಿಷ್ಯರಲ್ಲ; ನೀನು ಆತನವರಲ್ಲಿ ಒಬ್ಬನು, ನಾವು ಮೋಶೆಯ ಶಿಷ್ಯರು. ದೇವರು ಮೋಶೆಯನ್ನು ನೇಮಿಸಿಕೊಂಡಿದ್ದನೆಂದು ನಮಗೆ ತಿಳಿದಿರುವದು ಹಾಗು ನಾವು ಆತನ ನೇಮವಿಧಿಗಳ ಪರವಾಗಿ ನಿಲ್ಲುವೆವು; ಆದರೆ ಈ ಮನುಷ್ಯನ ಬಗ್ಗೆ ಯಾರಿಗೆ ಏನು ತಿಳಿದಿರುವದು? ಅವನು ನಜರೇತಿನಿಂದ ಬಂದವನೆಂದು ಹೇಳುವರು ಆದರೆ ಅವನು ಗಣ್ಯರಾದ ತಂದೆತಾಯಿಗಳಿಂದ ಹುಟ್ಟಿಬಂದವನಲ್ಲ; ನಾವು ನಿರೀಕ್ಷಿಸುತ್ತಿರುವಂಥ ರೋಮಾಯರ

ಕೈಯಿಂದ ನಮ್ಮನ್ನು ತನ್ನ ವಿಶೇಷ ಬಲ ಪ್ರಭಾವ ಸಾಮರ್ಥ್ಯಗಳ ಮೂಲಕವಾಗಿ ಬಿಡಿಸುವ ಮೆಸ್ಸೀಯನಂಥವನು ಇವನಲ್ಲ. ಅವನನ್ನು ಹಿಂಬಾಲಿಸುವದು ನಿನಗೆ ಅತ್ಯುತ್ತಮ, ನಿನ್ನೊಡನೆಯಾಗಲಿ ಅಥವಾ ಅತನೊಡನೆಯಾಗಲಿ ನಮಗೆ ಯಾವ ಸಂಬಂಧವೂ ಇಲ್ಲ; ನಮ್ಮ ಸಭಾಮಂದಿರಕ್ಕೆ ಪುನಃ ಬರಬೇಡ. ನಿನ್ನ ಧಾರ್ಮಿಕ ಸ್ವಜನರೊಳಗಿಂದ ನೀನು ಹೊರಹಾಕಲ್ಪಟ್ಟವನೆಂದು ಪರಿಗಣಿಸಿಕೊಳ್ಳುವವನಾಗು.

ಅವರು ಅವನನ್ನು ಹೊರಗೆ ಹಾಕಿದರೆಂದು ಯೇಸುವು ಕೇಳಿ ಅವನನ್ನು ಕಂಡುಕೊಂಡು ಅವನಿಗೆ–ದೇವಕುಮಾರನನ್ನು ನಂಬುತ್ತೀಯೋ? ತನ್ನ ಬಗ್ಗೆ ಹೆಚ್ಚಾಗಿ ತಿಳುಕೊಳ್ಳುವದಕ್ಕೆ ಅವನಿಗೆ ಬಯಕೆಯುಂಟೆಂದು ಅವನ ಉತ್ತರದ ಮೂಲಕವಾಗಿ ತಿಳುಕೊಂಡ ನಮ್ಮ ಕರ್ತನು ತಾನು ಮೆಸ್ಸೀಯನೆಂಬುದನ್ನು ಅವನಿಗೆ ತಿಳಿಯಪಡಿಸಿದನು. ಆಗ ಅವನು ಯೇಸುವನ್ನು ಆರಾಧಿಸಿದನು. ಈ ಮನುಷ್ಯನ ಹಿತದ ವಿಷಯವಾಗಿಯೂ ಅವನ ಆಸಕ್ತಿಯ ವಿಷಯವಾಗಿಯೂ ಕರ್ತನು ಮಾಡಿದ ಮುಂದಾಲೋಚನೆಯನ್ನು ಗಮನಿಸಿ. ಆತನನ್ನು ಯೆಹೂದ್ಯರ ಸಭಾಮಂದಿರದಿಂದ ಹೊರಹಾಕದಂತೆ ಆತನನ್ನು ತಡೆಯಲಿಲ್ಲ ಆದರೆ ಅದನ್ನು ಅವನಿಗೆ ಎಲ್ಲಾ ವಿಧದಲ್ಲಿಯೂ ಒಂದು ವಿಶೇಷ ಆಶೀರ್ವಾದಕರವನ್ನಾಗಿಸಿ ಬಹು ಉಪಯುಕ್ತವಾದ ಶಿಕ್ಷಣವಾಗುವಂತೆ ಅದನ್ನು ಪರಿವರ್ತಿಸಿದ್ದನು.

ಈ ಘಟನೆಯು ಒಳಗೊಂಡಿರುವ ಹಲವು ಲಕ್ಷಣಗಳಿಂದ ಇಂದು ನಾವು ಒಂದು ಉನ್ನತ ಮಟ್ಟದ ಪಾಠವನ್ನು ಕಂಡುಕೊಳ್ಳುತ್ತೇವೆ. ನಮ್ಮಲ್ಲಿ ಕೆಲವರು ಕರ್ತನ ವಿಷಯದಲ್ಲಿ ಮತ್ತು ಆತನ ನಿಜವಾದ ಗುಣಗಳ ವಿಷಯದಲ್ಲಿ ಕುರುಡರು, ದೇವರ ವಾಕ್ಯಗಳ ಸತ್ಯತೆಯ ವಿಷಯದಲ್ಲಿ ಕುರುಡರು ಅಂದರೆ ಹುಟ್ಟುಕುರುಡರಾಗಿದ್ದೆವು. ನಮ್ಮ ಕುರುಡುತನವು ನಮ್ಮ ತಪ್ಪಿನ ಕಾರಣದಿಂದಾಗಲಿ ಇಲ್ಲವೇ ನಮ್ಮ ತಂದೆತಾಯಿಗಳ ತಪ್ಪಿನ ಕಾರಣದಿಂದಾಗಲಿ ಆಗಿರಲಿಲ್ಲ. ಅವರಂತೆಯೇ ನಾವೂ ಕರ್ತನ ವಿಷಯದಲ್ಲಿ ಪ್ರಾಮಾಣಿಕವಾದ ಹೃದಯವುಳ್ಳವರಾಗಿದ್ದೆವು. ಆದುದರಿಂದ ನಮ್ಮ ಕುರುಡುತನವು ಪಾಪಗಳಿಗಾದ ಶಿಕ್ಷೆಯಲ್ಲ. ಇದುವರೆಗೂ ಕ್ರೈಸ್ತಸಮೂಹದವರ ಮೇಲೆ ಹರಡಿಕೊಂಡಿರುವ ಕತ್ತಲು, ಕುರುಡುತನವು ಇತರರ ಸಹಿತವಾಗಿ ನಮ್ಮನ್ನೂ ಮರುಳುಗೊಳ್ಳುವಂತೆ ಮಾಡಿತ್ತು; ಆದರೆ ನಮ್ಮ ಕರ್ತನು ನಮ್ಮ ಮೇಲೆ ಕರುಣೆಯಿಟ್ಟು ನಮ್ಮ ದಾರಿಯಲ್ಲಿ ಮುಂದೆ ಸಾಗಿ ಮತ್ತು ನಮಗಾಗಿ ಲೇಪನವನ್ನು ಅಂದರೆ ಕಣ್ಣಿಗೆ ಅಂಜನವನ್ನು ಮಾಡಿಕೊಟ್ಟಿರುವನು. ಆತನು ಮಾನವ ಸಾಧನವೆಂಬ ಮಣ್ಣನ್ನು ತೆಗೆದುಕೊಂಡು ತನ್ನ ಬಾಯಫಲವಾದ ತನ್ನ ಮಾತನ್ನು ಅದಕ್ಕೆ ಮಿಶ್ರಣಮಾಡಿ ಆ ಸಮ್ಮಿಶ್ರಣವನ್ನು ನಮ್ಮ ಮನೋನೇತ್ರಗಳಿಗೆ ಲೇಪಿಸಿ ನಾವು ಶಿಲೋವದ ನೀರಿನಲ್ಲಿ ಅಂದರೆ ಆತನ (ಕ್ರಿಸ್ತನ) ಕೃಪೆ ಮತ್ತು ಸತ್ಯತೆಯೆಂಬ ನೀರಿನಲ್ಲಿ ತೊಳಕೊಳ್ಳುವಂತೆ ಹೇಳಿರುವನು. ನಾವು ಆತನ ಆದೇಶವನ್ನು ಪಾಲಿಸಿದ್ದು ಈಗ ಕಣ್ಣುಕಾಣುವವರಾಗಿದ್ದೇವೆ. ನಮ್ಮ ಮುಂದೆ ಒಂದು ಹೊಸ ಪ್ರಪಂಚ ತೆರೆದುಕೊಂಡಿರುವದು, "ಸತ್ಯವೇದದ ಅದ್ಭುತವಾದ ಸಂಗತಿಗಳನ್ನು ನಾವು ನೋಡುತ್ತಿರುವೆವು." ನಮ್ಮ ದಿನಗಳಲ್ಲಿರುವ ಶಾಸ್ತ್ರಿಗಳು ಮತ್ತು ಫರಿಸಾಯರುಗಳು ಆಶ್ಚರ್ಯಪಟ್ಟು, ನಮ್ಮನ್ನು ಟೀಕಿಸಿ ನಮಗೆ ಬಂದಿರುವ ಆಶೀರ್ವಾದ ಬಗ್ಗೆ ವಿವರಣೆಯನ್ನು ತಿಳುಕೊಳ್ಳಲು ಯತ್ನಿಸುವವರಾಗಿದ್ದು ವಾಸ್ತವದಲ್ಲಿ ಕರ್ತನು ನಮ್ಮನು ಆಶೀರ್ವದಿಸುವ ಸಂಬಂಧದಲ್ಲಿ ಬಳಸಿಕೊಂಡಿರುವ ಆಶೀರ್ವಾದದ ಮೂಲದಲ್ಲಿರುವ ಪ್ರತಿಯೊಂದು ಸಾಧನಗಳ ವಿಷಯವಾಗಿಯೂ ತಪ್ಪುಗಳನ್ನು ಕಂಡುಹಿಡಿಯುವರು; ಏಕೆಂದರೆ ಅವರ ಹೃದಯಗಳು ದೇವಾನುಗ್ರಹವೆಂಬ ಬೆಳಕನ್ನು ಅರಿತುಕೊಳ್ಳುವ ಸರಿಯಾದ ಮನೋಭಾವಗಳಲ್ಲಿರುವದಿಲ್ಲ.

ಈ ಕುರುಡು ಮನುಷ್ಯನು ತೆಗೆದುಕೊಂಡಂತೆಯೇ ನಾವೂ ನಿಲುವನ್ನು ತೆಗೆದುಕೊಳ್ಳುವದು ಅಂದರೆ ಸತ್ಯದ ವಿಷಯವಾಗಿ ಅರಿಕೆಮಾಡುವುದು, ಬೆಳಕಿನ ವಿಷಯವಾಗಿ ಅರಿಕೆಮಾಡುವುದು, ನಮ್ಮ ಹೃದಯವನ್ನು ತನಗೆ ನೀಡಸಲುವಾಗಿ ಕರ್ತನು ನಮ್ಮ ಮನೋನೇತ್ರಗಳ ವಿಷಯದಲ್ಲಿ ಅದ್ಭುತ ಮಾಡಿದ್ದನ್ನು ಅರಿಕೆಮಾಡುವದು ನಮಗೆ ಬಿಟ್ಟಿರುವದು. ಮತ್ತು ಇದರಿಂದ ನಮ್ಮ ದಿನದ ಶಾಸ್ತ್ರಿಗಳ ಮತ್ತು ಫರಿಸಾಯರ ಕೋಪ ದೂಷಣೆ ಹಗೆತನಗಳನ್ನು ನಮ್ಮ ಮೇಲೆ ಬರಮಾಡಿಕೊಂಡಿರುವದನ್ನು ಕಂಡುಕೊಳ್ಳುವದು ನಮಗೆ ಬಿಟ್ಟಿರುವದು. ಜನರು ನಮ್ಮನ್ನು ತಮ್ಮ ಸಹವಾಸದಿಂದ ಬೇರ್ಪಡಿಸಿಕೊಳ್ಳುವಂತೆ ಅಂದರೆ ನಮ್ಮನ್ನು ಸಭಾಮಂದಿರದಿಂದ ಹೊರಗೆ ಹಾಕುವಂತೆ ಇದು ನಡೆಸಿದುದನ್ನು ಕಂಡುಕೊಳ್ಳುವದು ನಮಗೆ ಬಿಟ್ಟದ್ದು. ಪ್ರವಾದಿಗಳ ಮುಖಾಂತರ ಕರ್ತನು ಇದನ್ನು ಮುಂತಿಳಿಸಿ ಹೀಗೆ ಹೇಳಿರುವನು: "ನನ್ನ ಹೆಸರಿನ ನಿಮಿತ್ತ ನಿಮ್ಮನ್ನು ದ್ವೇಷಿಸಿ ಬಹಿಷ್ಕರಿಸಿದ ನಿಮ್ಮ ಸಂಬಂಧಿಗಳು–ಯೆಹೋವನು ಮಹಿಮೆಪಡಲಿ [ನಾವು ಈ ಬಹಿಷ್ಕಾರವನ್ನು ದೇವರ ಕಾರ್ಯೋದ್ದೇಶಗಳಿಗೆ ಒಳ್ಳೆಯದಾಗುವ ದಕ್ಕಾಗಿ ಆತನನ್ನು ಘನಪಡಿಸುವದಕ್ಕಾಗಿ ಮಾಡಿರುವೆವು] ....ಎಂದು ಹೇಳಿದ್ದಾರಲ್ಲಾ; ನಿಮಗಾಗುವ ಉತ್ಸಾಹವನ್ನು ನೋಡುವೆವು ಎಂದು ಹೇಳಿದ್ದಾರಲ್ಲಾ ಅವರಿಗಂತೂ ಅವಮಾನ ವಾಗುವದು." (ಯೆಶಾಯ 66:5) ತಮಗಾದ ಆಶೀರ್ವಾದದ ದೊಡ್ಡ ಪಾಲು ತಾವು ಸತ್ಯವನ್ನು ಅಂಗೀಕರಿಸಿಕೊಂಡು ಅದರ ವಿಷಯವಾಗಿ ಎದ್ದು ದೃಢವಾಗಿ ನಿಂತವರಾಗಿ ಇದರ ಸಂಬಂಧದಲ್ಲಿ ಉಂಟಾದ ಕೆಲವು ಹಿಂಸೆಯನ್ನು ಸಹಿಸಿಕೊಂಡ ನಂತರವೇ ಎಂಬುದನ್ನು ಕರ್ತನ ಜನರಲ್ಲಿ ಎಷ್ಟು ಮಂದಿ ಕಂಡುಕೊಂಡಿರುವರು! ಆನಂತರವೇ ಕರ್ತನು ಅವರನ್ನು ಕಂಡುಕೊಳ್ಳುವದು, ಅವರು ಎಲ್ಲಿರುವರೆಂದು ಅವರ ವಿಷಯ ವಾಗಿ ಎಲ್ಲಾ ಸಮಯಗಳಲ್ಲಿಯೂ ಎಲ್ಲವೂ ಅತನಿಗೆ ತಿಳಿದಿರು ವದು; ಆದರೆ ಆ ನಂತರವೇ ಅವರು ತನ್ನನ್ನು ವಿಶೇಷವಾಗಿ ತಿಳುಕೊಂಡವರಾಗಿ ಅವರು ತನ್ನ ಅನ್ಯೋನ್ಯತೆಯನ್ನು ಹೊಂದಿ ಕೊಂಡು ತನ್ನಿಂದ ಒಂದು ಆಶೀರ್ವಾದವನ್ನು ಹೊಂದಿಕೊಳ್ಳು ವಂತೆ ಕರ್ತನು, ಆ ಕುರುಡು ಮನುಷ್ಯನ ವಿಷಯದಲ್ಲಿದ್ದಂತೆ, ಅವರಿಗೆ ತನ್ನನ್ನು ಪ್ರಕಟಮಾಡಿಕೊಳ್ಳುವದು.

## "ನಾವೂ ಸಹ ಕುರುಡರೇನು?"

ನಮ್ಮ ಪಾಠದ ಕಡೆಯ ಎರಡು ವಚನಗಳು ಫರಿಸಾಯರಲ್ಲಿದ್ದ ಧರ್ಮಶಾಸ್ತ್ರಬೋಧನೆಗಳ ವಿಷಯಗಳಲ್ಲಿನ ಹೆಮ್ಮೆಯ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತವೆ. ಮತ್ತು, ಅಯ್ಯೋ, ಇದೂ ಸಹ, ಆತ್ಮಿಕ ಇಸ್ರಾಯೇಲ್ಯರಲ್ಲಿನ ಕೆಲವು

ಉತ್ತರಾಧಿಕಾರಿಗಳ ಆತ್ಮಿಕ ಹೆಮ್ಮೆಯನ್ನು ಇವು ಸೂಕ್ತವಾಗಿ ಸೂಚಿಸುತ್ತದೆಂದು ನಾವು (ಅರೆಮನಸ್ಸಿನಿಂದಾದರೂ) ಒಪ್ಪಿಕೊಳ್ಳಲೇಬೇಕಿರುವದು. ತಾನು ಲೋಕಕ್ಕೆ ಬಂದಿರುವದು ಈ ಒಂದು ವ್ಯವಸ್ಥಾಕ್ರಮಗಳಿಗೆ ಒಂದು ಪರೀಕ್ಷೆಯಾಗಿ ಪರಿಣಮಿಸುವದೆಂದು ಅಂದರೆ ಅವರಲ್ಲಿ ಕುರುಡರಾಗಿದ್ದ ಕೆಲವರಿಗೆ ಕಣ್ಣುಕಾಣುವಂತೆ ಮಾಡಲಾಗುವದು ಮತ್ತು ಆಗ ಕಣ್ಣುಕಾಣುತ್ತಿದ್ದವರಲ್ಲಿ ಕೆಲವರು ಕುರುಡಾಗುವರೆಂದು ನಮ್ಮ ಕರ್ತನು ಪ್ರಕಟಮಾಡಿ ಹೇಳಿದ್ದನು. ಅಂದರೆ ಸತ್ಯವು ಹಲವರಿಗೆ ಪರೀಕ್ಷೆಯಾಗಿ ಪರಿಣಮಿಸುವದು; ಕೆಲವರು ಕುರುಡುತನ ಅಂಧಕಾರ ಅಜ್ಞಾನ ಮೂಢನಂಬಿಕೆಗಳಿಂದ ಹೊರ ಬಂದು ದೇವರಾಶೀರ್ವಾದಗಳಲ್ಲಿನ ಅತಿ ಭವ್ಯವಾದವುಗಳನ್ನು ಅರಿತವರಾಗಿರುವರು ಮತ್ತು ಅನುಗ್ರಹಗಳನ್ನು ಬಹು ದೊಡ್ಡ ಪ್ರಮಾಣದಲ್ಲಿ ಹಿಂದೆ ಹೊಂದಿದ್ದಂಥ ಇತರರು ಅಂಧಕಾರದ ಹೀನಸ್ಥಿತಿಗೆ ಇಳಿದುಹೋಗುವರು. ಯಾರು ಕರ್ತನನ್ನು ಸ್ವೀಕರಿಸಿದ್ದರೋ ಅವರು ಪಂಚಾಶತ್ತಮ ದಿನದಲ್ಲಿ ಜ್ಞಾನಪ್ರಕಾಶವನ್ನು ಹೊಂದಿದ್ದು ಉಳಿದವರು ಕುರುಡಾಗಿಮಾಡಲ್ಪಟ್ಟು ಅವರು ಈ ಸುವಾರ್ತಾಯುಗದ ಅಂತ್ಯದವರೆಗೂ ಕುರುಡರಾಗಿಯೇ ಉಳಿಯುವರೆಂಬುದನ್ನು ಅಪೋಸ್ತಲನು ಗಮನಿಸಿ ಹೇಳಿರುವನು.

ಕುರುಡರಾಗಿದ್ದವರು ಕಾಣುವರೆಂದೂ ಹಾಗು ಕಣ್ಣು ಕಾಣುತ್ತಿದ್ದವರು ಕುರುಡರಾಗುವರೆಂದು ತಾನು ಟೀಕೆಮಾಡಿ ಹೇಳಿದ್ದನ್ನು ಕೇಳಿದ ಫರಿಸಾಯರು ತಮ್ಮನ್ನು ಯಾವ ಪಟ್ಟಿಯಲ್ಲಿ ಸೇರಿಸುವಿಯೆಂದೂ, ಕುರುಡರಲ್ಲಿಯಲ್ಲವೆಂದು ನಾವು ನಿರೀಕ್ಷಿಸುವೆವು? ಎಂದು ನಮ್ಮ ಕರ್ತನನ್ನು ಕೇಳಿದ್ದರು. ಯೇಸುವು ಉತ್ತರವಾಗಿ ಅವರು ಕುರುಡರಾಗಿದ್ದಲ್ಲಿ, ಅವರ ಮಾರ್ಗವು ಪೂರ್ಣವಾದ ಅಜ್ಞಾನದಿಂದ ಕಾರ್ಯಪ್ರವೃತ್ತವಾದದ್ದಾಗಿದ್ದಲ್ಲಿ ಅವರಿಗೆ ಉತ್ತಮವಾಗಿತ್ತೆಂದೂ ಆದರೆ ಅವರ ವಿಷಯವು ಬೇರೆಯಾಗಿತ್ತೆಂದು ಹೇಳಿದ್ದನು. ಅವರು ಗಣನೀಯವಾದ ಪ್ರಮಾಣದಲ್ಲಿ ತಿಳುವಳಿಕೆಯನ್ನು ಹೊಂದಿದವರಾದ್ದರಿಂದ ಇದರ ಅನುಗುಣವಾಗಿಯೇ ಜವಾಬ್ದಾರಿಯೂ ಇರುವದೆಂದೂ ಆದರೆ ತಮ್ಮ ಅಹಂಕಾರದ ಮತ್ತು ಆತ್ಮತೃಪ್ತಿಯ ದೆಸೆಯಿಂದ ತಾವು ಕಂಡದ್ದೇ ಪೂರ್ಣವಾದ ಸತ್ಯವೆಂದು ತೆಗೆದುಕೊಂಡವರಾಗಿ ಕರ್ತನ ನಿಜವಾದ ಸಂದೇಶವನ್ನು ನಿರ್ಲಕ್ಷಿಸುವದರ ಮೂಲಕವಾಗಿ ಬೆಳಕಿಗೆ ಅಂದರೆ ಸತ್ಯಕ್ಕೆ ವಿರೋಧವಾಗಿ ತಮ್ಮನ್ನು ಕಠಿಣ ಮಾಡಿಕೊಂಡಿದ್ದರು; ಅಲ್ಲದೆ ಪಾಪವು ಅವರನ್ನು ಬಂಧಿಸುತ್ತಾ ಬಂದು ಆಗ ನಿಗದಿತವಾದ ಬೆಳಕನ್ನು ಹೊಂದಿಕೊಳ್ಳಲು ಸಾಧ್ಯವಾಗದಂತೆ ಮಾಡಿ ಸಂಕೋಲೆಯಿಂದ ಅವರನ್ನು ಕಟ್ಟಿಹಿಡಿಯಲಾಗಿತ್ತು. ಮತ್ತು ಅವರು ಅಂದು ನಿಗದಿತವಾದ ಬೆಳಕನ್ನು ಪಡೆದುಕೊಳ್ಳಲಿಲ್ಲ.

ಈ ದಿನದಲ್ಲೂ ಒಂದು ಒಳ್ಳೆಯ ಸಂಖ್ಯೆಯಲ್ಲಿನ ಜನರು ಈ ಸನ್ನಿವೇಶದಲ್ಲಿ ಇರುವರಲ್ಲವೇ, ಕ್ರೈಸ್ತರಲ್ಲಿನ ಪ್ರಮುಖರು ತಾವು ಜ್ಞಾನಪ್ರಕಾಶ ಹೊಂದಿರುವ ವಿಷಯದಲ್ಲಿ ಹೊಗಳಿಕೊಳ್ಳುವವರಾದರೂ, ದೇವರ ವಾಕ್ಯದ ಬೆಳಕಿನ ವಿಷಯದಲ್ಲಿ ಅಂಜಿಕೆಯುಳ್ಳವರಾಗಿ ಮತ್ತು ಈಗ ಕರ್ತನ ಪ್ರತ್ಯಕ್ಷತೆಯಲ್ಲಿ ಆತನು ಬಳಸಿಕೊಳ್ಳುತ್ತಿರುವ ತನ್ನ ಸಾಧನಗಳ ಮೂಲಕವಾಗಿ ಹರಡುತ್ತಿರುವ ಬೆಳಕಿನ ಬಗ್ಗೆ ಮತ್ತು ತಮ್ಮ ಅಜ್ಞಾನದ ಮೇಲೆ ಅದು ಪ್ರಕಾಶಿಸುತ್ತಿರುವದರ ವಿಷಯವಾಗಿ ಒಪ್ಪಿಕೊಳ್ಳಲು ಅಂಜುವವರಾಗಿ ನಾಚಿಕೆಪಡುತ್ತಿರುವರಲ್ಲವೇ? ನಮ್ಮ ಸ್ವಂತದ್ದು ಯಾವದೂ ನಮ್ಮಲ್ಲಿ ಇಲ್ಲವೆಂಬುದನ್ನು – ಅದು ನಮ್ಮ ಸ್ವಂತದ ಬೆಳಕೇ ಆಗಿರಲಿ, ಜ್ಞಾನವೇ ಆಗಿರಲಿ ನಮ್ಮಲ್ಲಿಲ್ಲವೆಂಬುದನ್ನು– ಪ್ರಾಮಾಣಿಕತೆಯಿಂದ ಒಪ್ಪಿಕೊಳ್ಳುವವರಾಗೋಣ ಮತ್ತು ನಾವು ಕರ್ತನ ಹಸ್ತದಿಂದ ನಿಜವಾದ ಜ್ಞಾನವನ್ನು ಅಂದರೆ ಮೇಲಣಿಂದ ಬರುವ ನಿಜವಾದ ಜ್ಞಾನಪ್ರಕಾಶವನ್ನು ಸ್ವೀಕರಿಸಿಕೊಳ್ಳುವವರಾಗೋಣ. ಎಲ್ಲರೂ ಈ ಸ್ಥಿತಿಗೆ ತ್ವರಿತವಾಗಿ ತಲುಪಲು ಸಾಧ್ಯವಾದಲ್ಲಿ ಸತ್ಯವು (ತ್ವರಿತವಾಗಿ) ಪ್ರಸರಣೆಯಾಗುವದು. ತಾವು ತಿಳಿದವರೆಂದು ಹೇಳಿಕೊಂಡರೂ ನಿಜವಾದ ರೀತಿಯಲ್ಲಿ ಅದನ್ನು ತಿಳಿದುಕೊಳ್ಳದೇ ಇರುವವರ ಮೂಲಕವಾಗಿ ದೊಡ್ಡ ವಿರೋಧವು ಉಂಟಾಗುವದು; ಅವರ ಹೊಗಳಿಕೆ ಮತ್ತು ಹೆಮ್ಮೆಯು ಅವರು ಬೆಳಕಿನಲ್ಲಿ ಸೇರುವದಕ್ಕೆ ಅಡ್ಡಿಮಾಡುತ್ತಿರುವದಲ್ಲದೆ ಅದನ್ನು ಮನವರಿಕೆ ಮಾಡಿಕೊಳ್ಳುತ್ತಿರುವ ಇತರರನ್ನೂ ಅಡ್ಡಿಪಡಿಸುವಂತೆ ಅವರನ್ನು ನಡೆಸುತ್ತಿರುವದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 ಪಸ್ಕದ ನಂತರ | ಬಹುಶಃ ಯೂದಾಯ | 70 ಮಂದಿಯನ್ನು ಸಾರುವದಕ್ಕೆ ಕಳುಹಿಸಿದ್ದು, ಅವರು ಹಿಂದಿರುಗಿದುದು, ವಿವರ ನೀಡುವಿಕೆ | –– | –– | 10:1–24 | –– |

## ಲೂಕ 10:1–24

ಇದಾದ ಮೇಲೆ ಸ್ವಾಮಿಯು ಇನ್ನೂ ಎಪ್ಪತ್ತು ಮಂದಿಯನ್ನು ನೇಮಿಸಿ ಅವರನ್ನು ಇಬ್ಬಿಬ್ಬರಾಗಿ ತಾನು ಹೋಗಬೇಕೆಂದಿದ್ದ ಪ್ರತಿಯೊಂದೂರಿಗೂ ಪ್ರತಿಯೊಂದು ಸ್ಥಳಕ್ಕೂ ಮುಂದಾಗಿ ಕಳುಹಿಸಿದನು. ಕಳುಹಿಸುವಾಗ ಅವರಿಗೆ ಹೇಳಿದ್ದೇನಂದರೆ–ಬೆಳೆಯು ಬಹಳ, ಕೆಲಸದವರು ಸ್ವಲ್ಪ; ಆದುದರಿಂದ ಬೆಳೆಯ ಯಜಮಾನನನ್ನು–ನಿನ್ನ ಬೆಳೆಗೆ ಕೆಲಸದವರನ್ನು ಕಳುಹಿಸಬೇಕೆಂದು ಬೇಡಿಕೊಳ್ಳಿರಿ. ಹೋಗಿರಿ; ತೋಳಗಳ ನಡುವೆ ಕುರಿಮರಿಗಳನ್ನು ಹೋಗಿಸಿದಂತೆ ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ ನೋಡಿರಿ. ಹಣದ ಚೀಲ–ವನ್ನಾಗಲಿ ಹಸಿಬೆಯನ್ನಾಗಲಿ ಕೆರಗಳನ್ನಾಗಲಿ ತೆಗೆದುಕೊಂಡು

ಹೋಗಬೇಡಿರಿ; ದಾರಿಯಲ್ಲಿ ಯಾರಿಗೂ ವಂದಿಸಬೇಡಿರಿ. ಇದಲ್ಲದೆ ನೀವು ಯಾವ ಮನೆಯೊಳಗೆ ಹೋದರೂ–ಈ ಮನೆಗೆ ಶುಭವಾಗಲಿ ಎಂದು ಮೊದಲು ಹೇಳಿರಿ. ಆಶೀರ್ವಾದಪಾತ್ರನು ಅಲ್ಲಿ ಇದ್ದರೆ ನಮ್ಮ ಆಶೀರ್ವಾದವು ಅವನ ಮೇಲೆ ನಿಲ್ಲುವದು; ಇಲ್ಲದಿದ್ದರೆ ಅದು ನಿಮಗೆ ಹಿಂತಿರುಗುವದು. ಆ ಮನೆಯಲ್ಲಿಯೇ ಇದ್ದುಕೊಂಡು ಅವರು ಕೊಡುವಂಥದನ್ನು ಊಟಮಾಡಿರಿ, ಕುಡಿಯಿರಿ. ಆಳು ತನ್ನ ಕೂಲಿಗೆ ಯೋಗ್ಯನಷ್ಟೆ. ಒಂದು ಮನೆಯನ್ನು ಬಿಟ್ಟು ಮತ್ತೊಂದು ಮನೆಗೆ ಹೋಗಿ ಇಳುಕೊಳ್ಳಬೇಡಿರಿ. ಮತ್ತು ನೀವು ಯಾವ ಊರಿಗಾದರೂ ಹೋದ ಮೇಲೆ ಆ ಜನರು ನಿಮ್ಮನ್ನು ಸೇರಿಸಿಕೊಂಡರೆ ಅವರು ನಿಮಗೆ ಬಡಿಸಿದ್ದನ್ನು ಊಟಮಾಡಿರಿ. ಅಲ್ಲಿರುವ ರೋಗಿಗಳಿಗೆ ವಾಸಿಮಾಡಿ ಅವರಿಗೆ–ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದದೆ ಎಂದು ಹೇಳಿರಿ. ಆದರೆ ನೀವು ಯಾವ ಊರಿಗಾದರೂ ಹೋದ ಮೇಲೆ ಆ ಜನರು ನಿಮ್ಮನ್ನು ಸೇರಿಸಿಕೊಳ್ಳದೆಹೋದರೆ ನೀವು ಆ ಊರ ಬೀದಿಗಳಿಗೆ ಬಂದು–ನಿಮ್ಮ ಊರಿಂದ ನಮ್ಮ ಕಾಲುಗಳಿಗೆ ಹತ್ತಿದ ಧೂಳನ್ನು ಒರಸಿ ಬಿಡುತ್ತೇವೆ; ಅದು ನಿಮಗೇ ಇರಲಿ; ಆದಾಗ್ಯೂ ದೇವರ ರಾಜ್ಯವು ಸಮೀಪಕ್ಕೆ ಬಂದದೆ ಎಂದು ನಿಮಗೆ ತಿಳಿದಿರಲಿ ಎಂಬದಾಗಿ ಹೇಳಿರಿ. ಆ ದಿವಸದಲ್ಲಿ ಅಂಥ ಊರಿನ ಗತಿಯು ಸೊದೋಮೂರಿನ ಗತಿಗಿಂತಲೂ ಕಠಿಣ ವಾಗಿರುವದು ಎಂದು ನಿಮಗೆ ಹೇಳುತ್ತೇನೆ. ಅಯ್ಯೋ ಖೋರಾಜಿನೇ, ಅಯ್ಯೋ ಬೇತ್ಸಾಯಿದವೇ, ನಿಮ್ಮಲ್ಲಿ ನಡೆದ ಮಹತ್ಕಾರ್ಯಗಳು ತೂರ್ ಮತ್ತು ಸೀದೋನ್ ಪಟ್ಟಣಗಳಲ್ಲಿ ನಡೆದಿದ್ದರೆ ಅಲ್ಲಿಯವರು ಆಗಲೇ ಗೋಣೀತಟ್ಟು ಹೊದ್ದು ಕೊಂಡು ಬೂದಿಯಲ್ಲಿ ಕೂತುಕೊಂಡು ದೇವರ ಕಡೆಗೆ ತಿರುಗಿ ಕೊಳ್ಳುತ್ತಿದ್ದರು. ಆದರೆ ನ್ಯಾಯವಿಚಾರಣೆಯಲ್ಲಿ ನಿಮ್ಮ ಗತಿಗಿಂತಲೂ ತೂರ್ ಸೀದೋನ್ ಪಟ್ಟಣಗಳ ಗತಿಯೂ ಮೇಲಾಗಿರುವದು. ಎಲಾ ಕಪೆರ್ನೌಮೇ, ನೀನು ಪರಲೋಕಕ್ಕೆ ಏರಿಸಲ್ಪಡುವೆಯಾ? ಪಾತಾಳಕ್ಕೇ ಇಳಿಯುವಿ. ನಿಮ್ಮ ಮಾತನ್ನು ಕೇಳುವವನು ನನ್ನ ಮಾತನ್ನು ಕೇಳುವವನಾಗಿದ್ದಾನೆ; ನಿಮ್ಮನ್ನು ಅಲಕ್ಷ್ಯಮಾಡುವವನು ನನ್ನನ್ನು ಅಲಕ್ಷ್ಯಮಾಡುವವನಾಗಿದ್ದಾನೆ; ನನ್ನನ್ನು ಅಲಕ್ಷ್ಯಮಾಡುವವನು ನನ್ನನ್ನು ಕಳುಹಿಸಿಕೊಟ್ಟಾತನನ್ನೇ ಅಲಕ್ಷ್ಯಮಾಡುವವನಾಗಿದ್ದಾನೆ ಅಂದನು.

ತರುವಾಯ ಆ ಎಪ್ಪತ್ತು ಮಂದಿಯು ಸಂತೋಷ ವುಳ್ಳವರಾಗಿ ಹಿಂತಿರುಗಿ ಬಂದು–ಸ್ವಾಮೀ, ದೆವ್ವಗಳು ಕೂಡಾ ನಿನ್ನ ಹೆಸರನ್ನು ಕೇಳಿ ನಮಗೆ ಅಧೀನವಾಗುತ್ತವೆ ಅಂದರು. ಆತನು ಅವರಿಗೆ–ಸೈತಾನನು ಸಿಡಿಲಿನಂತೆ ಆಕಾಶದಿಂದ ಬೀಳುವದನ್ನು ಕಂಡೆನು. ನೋಡಿರಿ, ಹಾವುಗಳನ್ನೂ ಚೇಳುಗಳನ್ನೂ ವೈರಿಯ ಸಮಸ್ತ ಬಲವನ್ನು ತುಳಿಯುವದಕ್ಕೆ ನಿಮಗೆ ಅಧಿಕಾರ ಕೊಟ್ಟಿದ್ದೇನೆ. ಯಾವದೂ ನಿಮಗೆ ಕೇಡುಮಾಡುವದೇ ಇಲ್ಲ. ಆದರೂ ದೆವ್ವಗಳು ನಮಗೆ ಅಧೀನವಾಗಿವೆ ಎಂದು ಸಂತೋಷಪಡದೆ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆದಿರುತ್ತವೆ ಎಂದು ಸಂತೋಷಪಡಿರಿ ಎಂಬದಾಗಿ ಹೇಳಿದನು.

ಅದೇ ಗಳಿಗೆಯಲ್ಲಿ ಅವನು ಪವಿತ್ರಾತ್ಮನ ಪ್ರೇರಣೆಯಿಂದ ಉಲ್ಲಾಸಗೊಂಡು ಹೇಳಿದ್ದೇನಂದರೆ–ತಂದೆಯೇ, ಪರಲೋಕ ಭೂಲೋಕಗಳ ಒಡೆಯನೇ, ನೀನು ಜ್ಞಾನಿಗಳಿಗೂ ಬುದ್ಧಿವಂತರಿಗೂ ಈ ಮಾತುಗಳನ್ನು ಮರೆಮಾಡಿ ಬಾಲಕರಿಗೆ ಪ್ರಕಟಮಾಡಿದ್ದೀ ಎಂದು ನಿನ್ನನ್ನು ಕೊಂಡಾಡುತ್ತೇನೆ. ಹೌದು, ತಂದೆಯೇ, ಹೀಗೆ ಮಾಡುವದೇ ಒಳ್ಳೇದೆಂದು ನಿನ್ನ ದೃಷ್ಟಿಗೆ ತೋರಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನನ್ನ ತಂದೆಯು ಎಲ್ಲವನ್ನು ನನಗೆ ಒಪ್ಪಿಸಿದ್ದಾನೆ. ಮಗನು ಇಂಥವನೆಂದು ತಂದೆಯೇ ಹೊರತು ಇನ್ನಾವನೂ ತಿಳಿದವನಲ್ಲ; ತಂದೆ ಇಂಥವನೆಂದು ಮಗನೇ ಹೊರತು ಇನ್ನಾವನೂ ತಿಳಿದವನಲ್ಲ; ಮತ್ತು ಮಗನು ತಂದೆಯನ್ನು ಯಾರಿಗೆ ಪ್ರಕಟಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೋ ಅವನೂ ಆತನನ್ನು ತಿಳಿದವನಾಗಿ ದ್ದಾನೆ ಅಂದನು. ಆ ಮೇಲೆ ಆತನು ಶಿಷ್ಯರ ಕಡೆಗೆ ತಿರುಗಿಕೊಂಡು ಏಂಗಡವಾಗಿ ಹೇಳಿದ್ದೇನಂದರೆ–ನೀವು ನೋಡುತ್ತಿರುವ ಸಂಗತಿಗಳನ್ನು ನೋಡುವವರು ಧನ್ಯರು. ಬಹು ಮಂದಿ ಪ್ರವಾದಿಗಳೂ ಅರಸರೂ ನೀವು ನೋಡುತ್ತಿರುವ ಸಂಗತಿಗಳನ್ನು ನೋಡಬೇಕೆಂದು ಅಪೇಕ್ಷಿಸಿದರೂ ನೋಡಲಿಲ್ಲ, ನೀವು ಕೇಳುತ್ತಿರುವ ಸಂಗತಿಗಳನ್ನು ಕೇಳಬೇಕೆಂದು ಅಪೇಕ್ಷಿಸಿದರೂ ಕೇಳಲಿಲ್ಲ ಎಂಬದಾಗಿ ನಿಮಗೆ ಹೇಳುತ್ತೇನೆ ಅಂದನು.

# ಎಪ್ಪತ್ತು ಮಂದಿ ಸೇವಕರನ್ನು ನೇಮಿಸಿದುದು

**ರೀಪ್ರಿಂಟ್ಸ್ ಪುಟ 5362**

## ಲೂಕ 10:1–24

**"ಮಾತಾಡುವವರು ನೀವಲ್ಲ, ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು." – ಮತ್ತಾಯ 10:20**

ದೇವಸೇವಕರಿಗೆ ದೀಕ್ಷೆಕೊಡುವದು ಶತಮಾನಗಳಿಂದಲೂ ಒಂದು ವಿವಾದದ ಸಂಗತಿಯಾಗಿರುವದು. ಹಿಂದೆ ಅದು ಪರೋಕ್ಷವಾಗಿ ರಕ್ತಪಾತ ಹಿಂಸಾಚಾರಗಳಿಗೆ ನಡೆಸಿರುವದು. ದೇವರಿಗೆ ಸ್ತೋತ್ರ! ಬಹು ಪಾಲು ಕ್ರೈಸ್ತರಿಗೆ ಆ ದಿನಗಳು ಕಳೆದುಹೋಗಿರುವವು. ಮತ್ತು ಹೀಗಿದ್ದರೂ ಹೆಚ್ಚುಪಾಲಿನವರು ಈ ದೀಕ್ಷೆಯ ವಿಷಯವನ್ನು ಸ್ಪಷ್ಟವಾಗಿ ತಿಳಿಯದೇ ಇರುವ ಕಾರಣ ಈ ಸಂಬಂಧದಲ್ಲಿ ಹಿಂಸಾಚಾರವು ಮರುಕಳಿಸುವ ಅಪಾಯವು ಯಾವಾಗಲೂ ಇರುವದು. ಪ್ರೆಸ್ಬಿಟೇರಿಯನ್ನರು ಬ್ಯಾಪ್ಟಿಸ್ಟರು ಮೆಥೋಡಿಸ್ಟರು ಲೂದರನ್ನರು ಎಪಿಸ್ಕೋಪಲರು ಇವರೆಲ್ಲರೂ ಈ ದೇವಸೇವಕರ ದೀಕ್ಷೆಯ ವಿಷಯವಾದ ತಪ್ಪುತಿಳುವಳಿಕೆಯ ದೆಸೆಯಿಂದುಂಟಾದ ಹಿಂಸಾಚಾರದಲ್ಲಿ ಪಾಲುಹೊಂದಿರುವರು. ಗತಿಸಿಹೋದ ಕಾಲಗಳಲ್ಲಿ ಈ ಸಂಬಂಧದಲ್ಲಿ ಅವರು ಒಬ್ಬರನ್ನೊಬ್ಬರು ಹಿಂಸೆಪಡಿಸಿ ಕೊಂಡಿದ್ದರು.

ಅವರು ಹೇಳಿಕೊಳ್ಳುತ್ತಿದ್ದದ್ದು ಏನಂದರೆ, ತಾನು ಒಂದು ವಿಶೇಷವಾದ ದೀಕ್ಷೆ ಪಡೆಯದಿದ್ದಲ್ಲಿ ಅತನಿಗೆ ಉಪದೇಶಿಯಾಗಲು ಅಥವಾ ಬೋಧಕನಾಗಲು ಸಾಧ್ಯವಿಲ್ಲವೆಂಬದು; ಉಪದೇಶಿಸಲಾಗಲಿ ಅಥವಾ ಬೋಧಿಸಲಾಗಲಿ ದೀಕ್ಷೆಹೊಂದದೇ ಇರುವದು ದೈವಿಕ ಏರ್ಪಾಟುಗಳ ವಿರೋಧವಾಗಿ ದಂಗೆ ಎದ್ದಂತಾಗುತ್ತಿತ್ತು; ಮತ್ತು ಅಂಥವರ ಬೋಧನೆಯನ್ನು ಅವಲಂಭಿಸಿದವರೆಲ್ಲರೂ ಮತ್ತು ಅವರಿಗೆ ಬೆಂಬಲ ನೀಡಿದವರೆಲ್ಲರೂ ಪಾಶಾಂಡಿಗಳು ಮತ್ತು ಹೀಗಾಗಿ ಅವರು ಯಾವ ಅನುಕಂಪ ಹೊಂದಲೂ ಅರ್ಹರಲ್ಲ ಆದರೆ ನಿಜವಾಗಿ ಹಿಂಸೆಹೊಂದಬೇಕಿರುವರು.

ದೀಕ್ಷೆಯೆಂಬುದು ಒಂದು ಆಚಾರ ವಿಧಿವಿಧಾನಗಳಿಗೆ ಸಂಬಂಧಿಸಿದುದಲ್ಲವೆಂದು ಹಲವರು ಭಾವಿಸಿರುವರು. ಅದು ಉಪದೇಶಿಸಲು ಒಂದು ಅಧಿಕಾರ ನೀಡುವದನ್ನು ಅಥವಾ ಕಾರ್ಯಭಾರ ವಹಿಸುವದನ್ನು ಸೂಚಿಸುವದಾಗಿರುವದು. ತಮ್ಮ ಮತಸೂತ್ರಗಳನ್ನು ಉಪದೇಶಿಸಲು ಒಪ್ಪಿಕೊಳ್ಳುವವರಿಗೆ ಬ್ಯಾಪ್ಟಿಸ್ಟರು (ಉಪದೇಶಿಸುವ) ಕಾರ್ಯಭಾರವನ್ನು ವಹಿಸಿಕೊಡುವರು. ಲೂಥರನ್ನರು ಮೆಥೊಡಿಸ್ಟರು ಮುಂತಾದವರು ಮಾಡುವಂತೆ, ಪ್ರೆಸ್ಬಿಟೇನಿಯರೂ ತಮ್ಮ ಶಿಷ್ಯರಿಗೆ ಹೀಗೆಯೇ ಕಾರ್ಯಭಾರವನ್ನು ವಹಿಸಿಕೊಡುವರು. ರೋಮನ್ ಕೆಥೋಲಿಕರು ಮತ್ತು ಎಪಿಸ್ಕೋಪಲರು ದೀಕ್ಷೆಯೆಂಬುದು ದೇವರಿಂದ ಹೊಂದಿರುವಂಥದೆಂದು ಹೇಳಿಕೊಳ್ಳುವರು. ಅವರ ಬಿಷೋಪರುಗಳೆಲ್ಲರೂ ಅಪೋಸ್ತಲರ ಉತ್ತರಾಧಿಕಾರಿಗಳೆಂದೂ ಅಪೋಸ್ತೋಲಿಕ ಅಧಿಕಾರದಿಂದ ಸಜ್ಜಿತರಾದವರು ಎಂದು ಹೇಳಿಕೊಳ್ಳುವರು. ಆದುದರಿಂದ ಯಾರಾದರೂ ತಮ್ಮ ಬಿಷೋಪರಿಂದ ಸೇವಾಕಾರ್ಯಭಾರ (ಸೇವಾದೀಕ್ಷೆಯನ್ನು) ಪಡೆಯದಿದ್ದಲ್ಲಿ ಅಥವಾ ಅಧಿಕಾರ (ದೀಕ್ಷಾಪತ್ರವನ್ನು) ಪಡಕೊಳ್ಳದಿದ್ದಲ್ಲಿ ಅವರಿಗೆ ಉಪದೇಶಿಸುವ ಹಕ್ಕು ಇರುವುದಿಲ್ಲ, ಅವರು ಪಾಶಾಂಡಿಗಳು. ಅವರ ದೃಷ್ಟಿಯಲ್ಲಿ ಇತರ ಪ್ರೊಟೆಸ್ಟೆಂಟರೆಲ್ಲರೂ ಪಾಶಾಂಡಿಗಳಾಗಿ ಅಧಿಕಾರವಿಲ್ಲದೆ ಉಪದೇಶಿಸುತ್ತಿರುವರು.

ಆದರೆ ಸಹಿಷ್ಣತೆಯ ಭಾವವು ಬೆಳೆಯುತ್ತಿದೆ. ಕಳೆದ ಎರಡು ವರುಷಗಳಿಂದ ಎಪಿಸ್ಕೋಪಲರು ಇತರ ಪ್ರೊಟೆಸ್ಟೆಂಟರ ಮೇಲೆ ಹಾಕಿದ್ದ ನಿರ್ಭಂಧವನ್ನು ತೆಗೆದುಹಾಕಿರುವರು. ಇದರಿಂದ ಒಬ್ಬ ಎಪಿಸ್ಕೋಪಲರ ದೇವಸೇವಕನು ಇನ್ನೊಂದು ಪಂಗಡದ ಪ್ರಸಂಗಪೀಠದ ಮೂಲಕವಾಗಿ ಉಪದೇಶಿಸಬಹುದಾಗಿರುವದು, ಇಲ್ಲವೇ ಎಪಿಸ್ಕೋಪಲರು ದೀಕ್ಷೆ ನೀಡದಂಥ ಒಬ್ಬ ದೇವಸೇವಕನು ತಮ್ಮ ಪ್ರಸಂಗಪೀಠದ ಮೂಲಕವಾಗಿ ಉಪದೇಶಿಸಲು ಅನುಮತಿ ನೀಡಬಹುದಾಗಿರುವದು. ಆದರೆ ಇದು ಬಹು ಇತ್ತೀಚೆಗೆ ನೀಡಲಾದ ಒಂದು ರಿಯಾಯಿತಿ.

ಈ ದಿನದ ಅಧ್ಯಯನದಲ್ಲಿ (ದೇವಸೇವಕರ) ದೀಕ್ಷೆಯ ಸರಿಯಾದ ಆಲೋಚನಾಭಿಪ್ರಾಯನ್ನು ಪ್ರಸ್ತುತಿಪಡಿಸಲಾಗಿರುವದು. ಯೇಸುವು ಆಗಲೇ ಹನ್ನೆರಡು ಮಂದಿಯನ್ನು ತನ್ನ ವಿಶೇಷ ಅಪೋಸ್ತಲರನ್ನಾಗಿ ನೇಮಿಸಿದ್ದನು; ಈಗ ಆತನು ಇನ್ನೂ ಎಪ್ಪತ್ತು ಮಂದಿಯನ್ನು ಅಪೋಸ್ತಲರನ್ನಾಗಿಯಲ್ಲ ಆದರೆ ಸಾಧಾರಣವಾದ ಸೇವಕರನ್ನಾಗಿ ಅಥವಾ ಕಾರ್ಯಭಾರಿಗಳನ್ನಾಗಿ ಮಾಡಿ ಅವರಿಗೆ ವಿಧಿವತ್ತಾದ ಅಧಿಕಾರ ನೀಡಿದ್ದನು ಅಥವಾ ನೇಮಕಮಾಡಿದ್ದನು. ದಾಖಲೆಗಳು ತೋರಿಸಿರುವಂತೆ, ಅವರ ನೇಮಕದ ಅಥವಾ ಅಧಿಕಾರ ನೀಡುವ ಸಂಬಂಧದಲ್ಲಿ ಯಾವ ಸಮಾರಂಭವೂ ಇರಲಿಲ್ಲ. ಏನನ್ನು ಹೇಳಬೇಕೆಂದು ಅವರಿಗೆ ತಿಳಿಸಿಕೊಟ್ಟು ಯೇಸುವು ಅವರನ್ನು ಸರಳ ರೀತಿಯಲ್ಲಿ ಕಳುಹಿಸಿಕೊಟ್ಟಿದ್ದನು. ನಮ್ಮ ಸುವರ್ಣ ಪಠ್ಯಭಾಗವು ಸಂಗತಿಯನ್ನು ಹೀಗೆ ವಿವರಿಸಿರುವದು–"ಮಾತಾಡುವವರು ನೀವಲ್ಲ; ನಿಮ್ಮ ತಂದೆಯ ಆತ್ಮನೇ ನಿಮ್ಮ ಮುಖಾಂತರವಾಗಿ ಮಾತಾಡುವನು."

ನಿಖರವಾಗಿ ಹೇಳಬೇಕಾದರೆ, ಅಪೋಸ್ತಲರು ಇನ್ನೂ ತಂದೆಯ ಆತ್ಮವನ್ನು ನೇರವಾಗಿ ಹೊಂದಿರಲಿಲ್ಲ. ತಂದೆಯ ಆತ್ಮವು ಮಗನಿಗೆ ಕೊಡಲ್ಪಟ್ಟಿತ್ತು ಮತ್ತು ಮಗನು ಆತನ (ತಂದೆಯ) ಹೆಸರಿನಲ್ಲಿ ಉಪದೇಶಿಸಲು ಕಳುಹಿಸಿಕೊಡುವಾಗ ಆ ಆತ್ಮವನ್ನು ಅವರೊಡನೆ ಹಂಚಿಕೊಂಡಿದ್ದನು. ಪಂಚಾಶತ್ತಮ ದಿನದವರೆಗೂ ಸುವಾರ್ತಾ ಸಂದೇಶವನ್ನು ಸಾರಲು ತಂದೆಯು ನೇರವಾಗಿ ಯಾರಿಗೂ ಮನ್ನಣೆ, ಅಧಿಕಾರ ಅಥವಾ ದೀಕ್ಷೆ ನೀಡಿರಲಿಲ್ಲ. ಸಾಕ್ಷಿನುಡಿಯುತ್ತಿದ್ದ ಶಿಷ್ಯರ ಮೇಲೆ ಸುರಿಸಲ್ಪಟ್ಟ ಪವಿತ್ರಾತ್ಮವು ತಂದೆಯಿಂದ ಮಗನ ಮುಖಾಂತರವಾಗಿ ಬಂದಿತ್ತೆಂದು ಭಕ್ತನಾದ ಪೇತ್ರನು ವಿವರಿಸಿ ಹೇಳಿರುವನು – ಅ. ಕೃ. 2:32–33

ಪವಿತ್ರಾತ್ಮವು ಹಿಂದೆ ನೀಡಲಾಗಿರಲಿಲ್ಲ, ಕಾರಣ ಯೇಸುವು ಮಹಿಮೆಯ ಪದವಿಯನ್ನು ಹೊಂದಿರಲಿಲ್ಲವೆಂದು ಬೇರೊಂದು ಕಡೆ ವಿವರಿಸಲಾಗಿರುವದು. ಪರಲೋಕದಲ್ಲಿರುವ ತಂದೆಯು ಅವರನ್ನು ಹೊಸ ವ್ಯವಸ್ಥೆಯಲ್ಲಿನ ಮಕ್ಕಳೆಂದು ಮಾನ್ಯಮಾಡಿ ಅವರಿಗೆ ಪವಿತ್ರಾತ್ಮನಿಂದ ಹುಟ್ಟುವದನ್ನು ಅನುಗ್ರಹಿಸುವದಕ್ಕೆ ಮೊದಲು ಯೇಸುವು ಬಾಧೆಪಟ್ಟು (ಸತ್ತು) ಉನ್ನತಕ್ಕೆ ಏರಿ ತನ್ನ ಶಿಷ್ಯರ ಪರವಾಗಿ ತನ್ನ ಯಜ್ಞಫಲವನ್ನು ಅರ್ಪಿಸುವದು ಅವಶ್ಯವಾಗಿತ್ತು. ಪವಿತ್ರಾತ್ಮನಿಂದ ಹುಟ್ಟುವದೆಂದರೆ, ಪವಿತ್ರನಾದಾತನಿಂದ ಆತನ ರಾಯಭಾರಿಗಳಾಗಲು ಅಥವಾ ಪ್ರತಿನಿಧಿಗಳಾಗಲು ಅಭಿಷೇಕ ಹೊಂದುವದು, ಅಧಿಕಾರ ಪಡೆಯುವದು ಇಲ್ಲವೇ ದೀಕ್ಷೆ ಹೊಂದುವದಾಗಿತ್ತು; ಮತ್ತು ಅವರು ನಂಬಿಗಸ್ತರಾಗಿದ್ದಲ್ಲಿ ಕಡೆಯಲ್ಲಿ ಯೇಸುವಿನೊಂದಿಗೆ ಪರಲೋಕ ರಾಜ್ಯದಲ್ಲಿ ಸಹಾಯಕರಾಗುವರು. ಅದು ಭೂಲೋಕವನ್ನು ಆಶೀರ್ವದಿಸಿ ಶಾಪವನ್ನು ನಿವಾರಣ ಮಾಡಸಲುವಾದ ಒಂದು ಸಾವಿರ ವರುಷಕಾಲದ ಸಮಯವಾಗಿರುವದು.

ಪುತ್ರಭಾವವುಳ್ಳ ಪವಿತ್ರಾತ್ಮವನ್ನು ನೀಡುವ ಅರ್ಥದಲ್ಲಿ ದೇವರು ಕೇವಲ ಯಾರನ್ನು ನಿಯಮಿಸುವನೋ ಅವರೇ ಯಾವುದೇ ಒಂದು ಅರ್ಥದಲ್ಲಿ ಕರ್ತನ ಹೆಸರಿನಲ್ಲಿ ಉಪದೇಶಿಸುವ ಕಾರ್ಯಭಾರವನ್ನು ವಹಿಸಿಕೊಂಡವರು ಅಥವಾ ಅಧಿಕಾರವನ್ನು ಪಡಕೊಂಡವರು ಆಗಿರುವರು. ಭೂಮಿಯ ಮೇಲೆ ನಡೆಯುವ ಎಲ್ಲಾ ಆಚರಣೆಸಮಾರಂಭಗಳು ಹಾಗು ಬಿಷೋಪರೆಲ್ಲರ ಕೈಗಳೆಲ್ಲವೂ ಯಾರಿಗಾದರೂ ದೇವರ ಹೆಸರಿನಲ್ಲಿ ಮಾತನಾಡುವ ಅಧಿಕಾರವನ್ನು ನೀಡಲು ಸಾಧ್ಯವಿಲ್ಲ. ದೇವರಿಂದ

ನೇಮಕವನ್ನು ಹೊಂದುವವರೆಗೂ ಯೇಸುವು ತನ್ನ ಸೇವೆಯನ್ನು ಆರಂಭಿಸಿರಲಿಲ್ಲ. ತಾನು ಪ್ರತಿಷ್ಠೆಮಾಡಿಕೊಂಡು ಸ್ನಾನದೀಕ್ಷೆ ಹೊಂದುವ ಸಮಯದಲ್ಲಿ ಆತನ ಮೇಲೆ ಪವಿತ್ರಾತ್ಮವು ಬಂದು ಆತನಿಗೆ ಬಡವರಿಗೆ ಶುಭಸಮಾಚಾರವನ್ನು ಸಾರಲು, ಮನಮುರಿದವರ್ನು ಕಟ್ಟಿ ವಾಸಿಮಾಡಲು, ಸೆರೆಯವರಿಗೆ ಬಿಡುಗಡೆಯಾಗುವದನ್ನು ಪ್ರಕಟಿಸಲು, ಬಂಧಿಗಳಿಗೆ (ಕದ) ತೆರೆಯುವದನ್ನು ಪ್ರಸಿದ್ಧಿಪಡಿಸಲು, ದೇವರು ನೇಮಿಸಿರುವ ಶುಭವರುಷ ವನ್ನು ಪ್ರಚುರಗೊಳಿಸಲು, ದುಃಖಿತರನ್ನು ಸಂತೈಸಲು ಅಭಿಷೇಕಿಸಿ, ಪ್ರತಿಷ್ಠಿಸಿ ಅಧಿಕಾರ ನೀಡಲಾಗಿತ್ತು; – ಯೆಶಾಯ 61:1–2.

ಪವಿತ್ರಾತ್ಮವನ್ನು ಪಡೆದ ಯಾರಿಗಾದರೂ ದೇವರ ಯೋಜನೆಯ ವಿಷಯವಾಗಿ ತಾನು ಗ್ರಹಿಸಿಕೊಂಡಿರುವದೆಲ್ಲವನ್ನು ಕೇಳುವ ಕಿವಿಯುಳ್ಳವರಿಗೆ ವಿಶೇಷವಾಗಿ ದೀನರಿಗೆ, ಮನಮುರಿದವರಿಗೆ, ದೇವರನ್ನು ಬಯಸುವವರಿಗೆ ಹೇಳುವ ಅಧಿಕಾರವು ಈ ಪವಿತ್ರಾತ್ಮದಾನವೇ ಆಗಿರುವದು. ಸಭೆಯ ಸ್ತ್ರೀಸದಸ್ಯರಿಗೆ (ಸಭೆಯಲ್ಲಿ) ಸಾರ್ವಜನಿಕವಾಗಿ ಬೋಧಿಸುವ ಹಾಗಿಲ್ಲವೆಂದು ಅಪೋಸ್ತಲನು ತಿಳಿಸಿರುವನಾದರೂ, ಇದು ಪವಿತ್ರಾತ್ಮವರವನ್ನು ಪಡೆದ ಸ್ತ್ರೀಸದಸ್ಯರು ಸೀಮಿತವಾದ ಅವಕಾಶಕ್ಕೆ ಅನುಸಾರವಾಗಿ ತಮ್ಮಂಥವರಿಗೆ (ಸ್ತ್ರೀಯರಿಗೆ) ಉಪದೇಶಿಸಿ ಬೋಧಿಸಲು ಹೊಂದಿರುವ ಅಭಿಷೇಕದ ವಿಷಯವಾಗಿ ಹಸ್ತಕ್ಷೇಪಮಾಡುವದಿಲ್ಲ. ಅಲ್ಲದೆ ಕೆಲವು ಸಮಯಗಳಲ್ಲಿ ಏಕಾಂತವಾಗಿ ಬೋಧಿಸುವದು ಸಾರ್ವಜನಿಕವಾಗಿ ಬೋಧಿಸುವದಕ್ಕಿಂತಲೂ ಹೆಚ್ಚು ಪರಿಣಾಮಕಾರಿಯಾಗಿರುವದು.

ಸ್ನಾನಿಕನಾದ ಯೋಹಾನನಿಂದ ಪ್ರಾರಂಭವಾಗಿ ಕ್ರಿ.ಶ. 70 ರಲ್ಲಿ ಯೆರೂಸಲೇಮಿನ ನಾಶನದಲ್ಲಿ ಮುಕ್ತಾಯಗೊಂಡ ಯೆಹೂದ್ಯರ ಯುಗದ ನಾಲ್ವತ್ತು ವರುಷಗಳು ಶಾರೀರಿಕ (ಛಾಯಾರೂಪದ) ಇಸ್ರಾಯೇಲ್ಯರಿಗೆ ಸುಗ್ಗಿಯ ಕಾಲವಾಗಿತ್ತು. ಅದು ನಿಜವಾದ ಗೋದಿಕಾಳನ್ನು ಸುವಾರ್ತಾ (ಯುಗದ) ಕಣಜಕ್ಕೆ ತುಂಬಿಸಿಕೊಂಡು ಉಳಿದುದ್ದನ್ನು ಸಾಂಕೇತಿಕವಾದ ಬೆಂಕಿಯೆಂಬ ಮಹಾ ಸಂಕಟದ ಕಾಲದಲ್ಲಿ ಹೊಟ್ಟಿನಂತೆ ನಿರಾಕರಿಸಲಾಗಿತ್ತು. ಮತ್ತಾಯ 13ನೇ ಅಧ್ಯಾಯದಲ್ಲಿ, ನಮ್ಮ ಕರ್ತನು ಸುವಾರ್ತಾಯುಗದ ಅಂತ್ಯದ ಸಮಯವು ಹೀಗೆಯೇ ಸುಗ್ಗಿಯ ಕಾಲವಾಗಿರುವದೆಂದು ಹೇಳಿರುವನು. ಅದು 1874ರಲ್ಲಿ ಆರಂಭವಾಗಿದ್ದು 1915ರಲ್ಲಿ ಮುಕ್ತಾಯವಾಗುವದೆಂದು ಅನೇಕರು ನಂಬಿರುವರು.

ಯೆಹೂದ್ಯರ ಯುಗದ ಮುಕ್ತಾಯದಲ್ಲಿ ಕರ್ತನಲ್ಲಿ ನಂಬಿಗಸ್ತರಾದವರೆಲ್ಲರೂ ಸುಗ್ಗಿ ಕಾರ್ಯದಲ್ಲಿ ತೊಡಗಿಸಿಕೊಳ್ಳವದು ಒಂದು ಮಹಾ ಸೌಭಾಗ್ಯವೆಂಬುದನ್ನು ಗುರುತಿಸಿ–ಕೊಂಡಿದ್ದರು ಮತ್ತು ಅದೇ ಈಗಲೂ ಸತ್ಯವಾಗಿರಬೇಕು. ಕರ್ತನ ಹಿಂಬಾಲಕರನ್ನು ನಯವಿನಯವುಳ್ಳ ಕೇಡುಬಗೆಯದ ಕುರಿಮರಿ ಮತ್ತು ಕುರಿಗಳಿಗೆ ಹೋಲಿಸಲಾಗಿದ್ದು ಹಾಗೂ ಸ್ವಾರ್ಥಭಾವವುಳ್ಳ ಸುಧಾರಣೆಯಾಗದ ಲೋಕದ ಜನರನ್ನು ಆತನು (ಕರ್ತನು) ತೋಳಗಳನ್ನಾಗಿ ಚಿತ್ರಣಮಾಡಿರುವನು. ಯೆಹೂದ್ಯರ ಯುಗದಲ್ಲಿ ಆತನು ಅವರನ್ನು (ಶಿಷ್ಯರನನ್ನು) ಮನೆಮನೆಗಳಿಗೆ ಹೋಗಿ ಬಿಕ್ಷೆಬೇಡುವಂತೆ ಮಾಡಲಿಲ್ಲ, ಅದರೆ ಅವರು ಪ್ರತಿಯೊಂದು ಹಳ್ಳಿಯಲ್ಲಿಯೂ ಬಹು ಯೋಗ್ಯರು ಯಾರೆಂಬುದನ್ನು ವಿಚಾರಣೆ ಮಾಡಿ ಅವರು ಇವರನ್ನು ಸ್ವೀಕರಿಸಿದಲ್ಲಿ ಆ ಹಳ್ಳಿಯಲ್ಲಿ ಅವರು ಸಾಕ್ಷಿಹೇಳುವವರೆಗೂ ಅಲ್ಲಿಯೇ ಇರುವಂತೆ ಮಾಡಿದ್ದನು. ಅವರು ಪೂರ್ಣವಾಗಿ ಕರ್ತನನ್ನು ಅವಲಂಭಿಸಿದವರಾಗಬೇಕಿತ್ತು ಮತ್ತು ತಮ್ಮ ಅಗತ್ಯತೆಗಳಿಗೆ ಯಾವ ಏರ್ಪಾಡನ್ನು ಮಾಡಿಕೊಳ್ಳಲು ಪ್ರಯತ್ನಿಸಬಾರದಿತ್ತು. ಇದು ಅವರಿಗೆ ಮುಂದಿನ ಕಾಲಕ್ಕೆ ಒಂದು ಪ್ರಯೋಜನಕಾರಿಯಾದ ಪಾಠವಾಗಬೇಕಿತ್ತು. ನಂತರ ಯೇಸುವು ತನ್ನ ಶಿಷ್ಯರನ್ನು ಕಳುಹಿಸಿಕೊಟ್ಟು ಅವರಿಗೆ ತಮ್ಮ ಅತ್ಯುತ್ತಮ ಶಕ್ತಿಯಾನುಸಾರ ತಮಗೆ ಬೇಕಾದವುಗಳನ್ನು ಹೊಂದಿಸಿಕೊಳ್ಳಲು ಹೇಳಿದ್ದನು. ಅವರ ಮೊದಲನೆಯ ಅನುಭವವು ಒಂದು ವಿಶೇಷ ರೀತಿಯದಾಗಿದ್ದು ಅದರಲ್ಲಿ ಅವರು ತಮ್ಮಲ್ಲಿ ಪ್ರತಿನಿಧಿಸುತ್ತಿದ್ದ ದೈವಿಕ ಶಕ್ತಿಯಲ್ಲಿ ಅವರಿಗೆ ಭರವಸೆ ಮೂಡಿಸುವದು ಇದರಲ್ಲಿ ಅಡಕವಾಗಿತ್ತು.

ತಮ್ಮ ಒಡೆಯನು ಮಾಡಿದಂತೆ ರೋಗಿಗಳನ್ನು ಗುಣಪಡಿಸುವ, ದೆವ್ವಗಳನ್ನು ಬಿಡಿಸುವ, ಮುಂತಾದವುಗಳನ್ನು ಮಾಡಲು ಶಕ್ತರಾಗುವಂತೆ ಆ ಪ್ರಮಾಣದಲ್ಲಿ ಅವರಿಗೆ ತಮ್ಮ ಒಡೆಯನಲ್ಲಿದ್ದ ಆತ್ಮವನ್ನು ಕೊಡಲಾಗಿತ್ತು. ಇಂಥ ಒಂದು ಅಧಿಕಾರವು ಈ ದಿನದ ಕರ್ತನ ಜನರಿಗೆ ಇರುವದೆಂದು ನಾವು ತಿಳಿಯಬಾರದು. ಪರಿಸ್ಥಿತಿಗಳು (ಈಗ) ಬದಲಾಗಿರುವದು. ಅವುಗಳಿಗಿಂತಲೂ ಮಹತ್ತರವಾಗಿರುವ ಆತ್ಮಿಕವಾದ ರೋಗಗಳನ್ನು ಕುರುಡುತನವನ್ನು ಮತ್ತು ಕಿವುಡುತನವನ್ನು ವಾಸಿ ಮಾಡುವದು ಈ ದಿನದ ಕರ್ತನ ಜನರ ಸೌಭಾಗ್ಯವಾಗಿರುವದು.

ದೇವರ ರಾಜ್ಯವು ಸಮೀಪಿಸಿರುವದೆಂಬುದು ಶಿಷ್ಯರು ನೀಡುತ್ತಿದ್ದ ಒಂದು ಸಂದೇಶವಾಗಿತ್ತು. ಯಾರಿಗೆ ಪ್ರಭಾವಿತರಾಗಲು ಸಾಧ್ಯವಿತ್ತೋ ಅವರು ಈ ಸಂದೇಶದಿಂದ ಪ್ರಭಾವಿತ –ರಾಗುತ್ತಿದ್ದರು. ಹಲವು ಶತಮಾನಗಳಿಂದಲೂ ಇಸ್ರಾಯೇಲ್ಯರು ದೇವರ ರಾಜ್ಯಕ್ಕಾಗಿ ಕಾದುಕೊಂಡಿದ್ದರು. ಅಯ್ಯೋ, ಆದರೆ ಅದನ್ನು ಪ್ರಸ್ತುತಪಡಿಸಿದಾಗ ಹೋಲಿಸಿ ನೋಡಿದಲ್ಲಿ ಕೇವಲ ಸಣ್ಣ ಸಂಖ್ಯೆಯಲ್ಲಿನ ಯೆಹೂದ್ಯರು ಅದನ್ನು ಸ್ವೀಕರಿಸಿಕೊಳ್ಳಲು ಸಿದ್ಧರಿದ್ದರು! ಆನಂತರ ಆ ರಾಜ್ಯವನ್ನು ನೀಡುವ ಪ್ರಸ್ತಾವನೆಯು ಅವರಿಂದ ತೆಗೆಯಲ್ಪಟ್ಟಿತು; ಮತ್ತು ಅಲ್ಲಿಂದೀಚೆಗೆ ಅದನ್ನು ಲೋಕಕ್ಕೆಲ್ಲಾ ನೀಡಲಾಗಿದ್ದು ಆ ಮೂಲಕವಾಗಿ ಮೆಸ್ಸೀಯನಿಗೆ ಮದಲಗಿತ್ತಿಯಾಗಿ ಅತನೊಡನೆ ಸಹಬಾಧ್ಯರಾಗಲು ಒಂದು ವರ್ಗವನ್ನು ಪ್ರತಿಯೊಂದು ಜನಾಂಗದವರಿಂದಲೂ ಆದುಕೊಂಡು ಕೂಡಿಸಲಾಗುತ್ತಿರುವದು. ಇವರ ಮೂಲಕವಾಗಿ ಶೀಘ್ರದಲ್ಲೇ ದೇವರ ರಾಜ್ಯವು ಭೂಲೋಕದಲ್ಲಿ ಸ್ಥಾಪಿತವಾಗುವದು ಮತ್ತು ಅದರ ಆಶೀರ್ವಾದವನ್ನು ಸಮೀಪದಲ್ಲಿರುವವರಿಗೂ ದೂರದಲ್ಲಿರುವವರಿಗೂ ಅಂತೂ ಮಾನವಕುಲದವರೆಲ್ಲರಿಗೂ ನೀಡಲಾಗುವದು.

ಕಪೆರ್ನೌಮಿನಲ್ಲಿಯೂ ಬೇತ್ಸಾಯಿದದಲ್ಲಿಯೂ ಖೋರಾಜಿನಿನಲ್ಲಿಯೂ ಮಾಡಿದ ತನ್ನ ಉಪದೇಶದ ಮತ್ತು ಮಹತ್ಕಾರ್ಯಗಳ ಬಗ್ಗೆ ಒಡೆಯನು ಉಲ್ಲೇಖಿಸಿದ್ದನು. ಈ ಪಟ್ಟಣಗಳು ಪಡೆದ ಸೌಭಾಗ್ಯಗಳ ಸಂಬಂಧವಾಗಿ ಸಾಂಕೇತಿಕ ರೀತಿಯಲ್ಲಿ ಉನ್ನತ ಸ್ಥಾನಕ್ಕೆ ಏರಿಸಲ್ಪಟ್ಟಿದ್ದವೆಂದು ಹೇಳಲಾಗಿತ್ತು,

ಮತ್ತು ಕರ್ತನು ನೀಡಿದ ಅನುಗ್ರಹಗಳನ್ನು ಅವುಗಳು ನಿರಾಕರಿಸಿದಾಗ ಅವುಗಳನ್ನು ಪಾತಾಳಕ್ಕೆ ದೊಬ್ಬಲಾಗುವದು. ಶಿಥಿಲಗೊಂಡು (ಹೇಡ್ಸ್ ಅಂದರೆ ಗೋರಿಗಳೆಂಬ) ನರಕಕ್ಕೆ ಇಳಿದ ಅಂದರೆ ಧೂಳಿನಸ್ಥಿತಿಗೆ ಇಳಿದಿದ್ದ ಸೋದೋಮ್ ಮತ್ತು ತೂರ್ ಪಟ್ಟಣಗಳ ಉದಾಹರಣೆಗಳನ್ನೂ ಕೊಡಲಾಗಿತ್ತು.

ಹೇಗಿದ್ದರೂ, ನಮ್ಮ ಕರ್ತನು ತನ್ನ ಉಪದೇಶದ ಮೂಲಕವಾಗಿ ನೀಡಿದ ಪರೀಕ್ಷೆ ಪರಿಶೋಧನೆಗಳು ಅಂತಿಮ ವೇನಲ್ಲವೆಂದೂ ಮುಂದೆ ಒಂದು ನ್ಯಾಯವಿಚಾರಣೆ ಅಥವಾ ಪರೀಕ್ಷಾಸಮಯವು ಇರುವದೆಂದೂ ತಿಳಿಸಿದ್ದನು. ಭಕ್ತನಾದ ಪೌಲನ ಅನುಸಾರವಾಗಿ ಆ ಸಾವಿರ ವರುಷದ ಕಾಲವು ಸಂಪೂರ್ಣವಾಗಿ ಒಂದು ನ್ಯಾಯವಿಚಾರಣೆಯ ದಿನವಾಗಿರುವದು; ಅದರಲ್ಲಿ ಲೋಕವೆಲ್ಲವೂ ಸತ್ಯದ ಜ್ಞಾನವನ್ನು ಹೊಂದಿಕೊಳ್ಳುವಂತೆ ಅಂದರೆ ದೇವರ ವಿಷಯವಾದ ಪರಿಜ್ಞಾನವನ್ನು ಪಡೆದುಕೊಳ್ಳುವ ಪೂರ್ಣಾವಕಾಶವನ್ನು ಪಡೆದುಕೊಳ್ಳುವಂತೆ ಮಾಡಲಾಗುವದು. (ಅ.ಕೃ. 17:31) ಹೀಗಾಗಿಯೂ ಯೇಸುವಿನಿಂದ ಕೇಳಿ ಪ್ರಭಾವಿತರಾಗದೆ ತಮ್ಮ ಹೃದಯಗಳನ್ನು ಕಠಿಣಮಾಡಿಕೊಂಡವರಿಗೆ ಇದರ ಅನುಗಣವಾಗಿ ಆ ನ್ಯಾಯವಿಚಾರಣೆಯ ದಿನದಲ್ಲಿ ಅನುಕೂಲಕರಸ್ಥಿತಿಯು ಇಲ್ಲದೆ ಹೋಗುವದು. ಯೇಸುವು ಈ ವಿಷಯವು ಬಹು ಕಠಿಣವಾಗಿರುವದೆಂದು ಸೂಚಿಸಿ, ಇವರ (ಆ ಪಟ್ಟಣಗಳವರ) ಗತಿಗಿಂತಲೂ ಸೋದೋಮಿನವರ ಗತಿಯು ಮೇಲಾಗಿರುವದೆಂದೂ; ಕಾರಣ ಸೋದೋಮಿನವರ ಪಾಪವು (ಅಂದು) ಸ್ವಲ್ಪವಾಗಿ ಪ್ರಕಟವಾದ ಬೆಳಕು ಮತ್ತು ಸವಲತ್ತುಗಳ ವಿರೋಧವಾಗಿತ್ತೆಂಬುದನ್ನು ಅಡಕವಾಡಿ ಹೇಳಿದ್ದನು. ಯೆಹೆಜ್ಕೇಲ 16: 48–63 ಸಹ ನೋಡಿ.

ಪ್ರಸ್ತಾಪವನ್ನು ಮುಗಿಸುವಾಗ, ಒಡೆಯನು ತನ್ನ ದೂತರಿಗೆ ಅವರ ಮಾತನ್ನು ಕೇಳಿಯೂ ಅವರನ್ನು ತಿರಸ್ಕರಿಸಿದವರು ತನ್ನನ್ನೂ ಮತ್ತು ತಂದೆಯನ್ನೂ ತಿರಸ್ಕರಿಸಿದವರಾಗುವರೆಂದು ಖಚಿತವಾಗಿ ಹೇಳಿದ್ದನು. ಕರ್ತನು ಅಭಿಷೇಕಿಸಿ ಕಳುಹಿಸಿಕೊಟ್ಟಂಥ ಅಂದರೆ ನಿಜವಾಗಿಯೂ ಅಭಿಷೇಕಿಸಲ್ಪಟ್ಟ ಸುವಾರ್ತಾ ಸೇವಕರಾದವರೆಲ್ಲರ ವಿಷಯದಲ್ಲಿ ಇದೇ ಸಂಗತಿಗಳು ನಿಸ್ಸಂದೇಹವಾಗಿಯೂ ಸತ್ಯವಾಗಿರುವದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಯೂದಾಯ; ಬೆಥಾನ್ಯ | ನೆರೆಯವನಾದ ಸಮಾರ್ಯದವನ ಬಗ್ಗೆ ಹೇಳಿದುದು; ಮಾರ್ಥಳ ಮರಿಯಳ ಮನೆಯಲ್ಲಿ | -- | -- | 10:25–42 | -- |

## ಲೂಕ 10:25–42

ಆಗ ಒಬ್ಬ ಧರ್ಮೋಪದೇಶಕನು ಎದ್ದು ಆತನನ್ನು ಪರೀಕ್ಷಿಸುವದಕ್ಕಾಗಿ–ಬೋಧಕನೇ, ನಾನು ನಿತ್ಯಜೀವಕ್ಕೆ ಬಾಧ್ಯನಾಗುವಂತೆ ಏನು ಮಾಡಬೇಕು ಎಂದು ಕೇಳಲು ಆತನು ಅವನಿಗೆ–ಶಾಸ್ತ್ರದಲ್ಲಿ ಏನು ಬರೆದದೆ? ಹೇಗೆ ಓದಿದ್ದೀ? ಎಂದು ಹೇಳಿದನು. ಅದಕ್ಕೆ ಅವನು–ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಶಕ್ತಿಯಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು. ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂದು ಬರೆದದೆ ಅಂದನು. ಆತನು ಅವನಿಗೆ–ನೀನು ಸರಿಯಾಗಿ ಉತ್ತರಕೊಟ್ಟೆ; ಇದರಂತೆ ಮಾಡು, ಮಾಡಿದರೆ ಜೀವಿಸುವಿ ಎಂದು ಹೇಳಿದನು. ಆದರೆ ಅವನು ತನ್ನನ್ನು ನೀತಿವಂತನೆಂದು ತೋರಿಸಿಕೊಳ್ಳುವದಕ್ಕೆ ಅಪೇಕ್ಷಿಸಿ–ನನ್ನ ನೆರೆಯವನು ಯಾರು ಎಂದು ಯೇಸುವನ್ನು ಕೇಳಲು ಯೇಸು ಅವನಿಗೆ ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ–ಒಬ್ಬಾನೊಬ್ಬ ಮನುಷ್ಯನು ಯೆರೂಸಲೇಮಿನಿಂದ ಘಟ್ಟಾ ಇಳಿದು ಯೆರಿಕೋವಿಗೆ ಹೋಗುತ್ತಿರುವಾಗ ಕಳ್ಳರ ಕೈಗೆ ಸಿಕ್ಕಿದನು. ಅವರು ಅವನನ್ನು ಸುಲಿಗೆ ಮಾಡಿಕೊಂಡು ಗಾಯವಾಗುವಷ್ಟು ಹೊಡೆದು ಅವನನ್ನು ಅರೆಜೀವಮಾಡಿ ಬಿಟ್ಟುಹೋದರು. ಆಗ ಹೇಗೋ ಒಬ್ಬ ಯಾಜಕನು ಆ ದಾರಿಯಲ್ಲಿ ಇಳಿದುಬರುತ್ತಾ ಅವನನ್ನು ಕಂಡು ವಾರೆಯಾಗಿ ಹೋದನು. ಅದೇ ರೀತಿಯಲ್ಲಿ ಒಬ್ಬ ಲೇವಿಯನೂ ಆ ಸ್ಥಳಕ್ಕೆ ಬಂದು ಅವನನ್ನು ಕಂಡು ವಾರೆಯಾಗಿ ಹೋದನು. ಆದರೆ ಒಬ್ಬ ಸಮಾರ್ಯದವನು ಪ್ರಯಾಣಮಾಡುತ್ತಾ ಅವನಿದ್ದಲ್ಲಿಗೆ ಬಂದು ಅವನನ್ನು ಕಂಡು ಕನಿಕರಿಸಿ ಅವನ ಹತ್ತಿರಕ್ಕೆ ಹೋಗಿ ಅವನ ಗಾಯಗಳಲ್ಲಿ ಎಣ್ಣೆಯನ್ನೂ ದ್ರಾಕ್ಷಾರಸವನ್ನೂ ಹೊಯ್ದು ಕಟ್ಟಿ ತನ್ನ ಸ್ವಂತ ವಾಹನದ ಮೇಲೆ ಹತ್ತಿಸಿಕೊಂಡು ಛತ್ರಕ್ಕೆ ಕರಕೊಂಡು ಹೋಗಿ ಅವನನ್ನು ಆರೈಕೆಮಾಡಿದನು. ಮರುದಿನ ಅವನು ಎರಡು ಹಣಗಳನ್ನು ತೆಗೆದು ಛತ್ರದವನಿಗೆ ಕೊಟ್ಟು–ಇವನನ್ನು ಆರೈಕೆಮಾಡು; ಇದಕ್ಕಿಂತ ಹೆಚ್ಚಾಗಿ ಏನಾದರೂ ವೆಚ್ಚಮಾಡಿದರೆ ನಾನು ಹಿಂತಿರುಗಿ ಬಂದಾಗ ನಿನಗೆ ಕೊಡುವೆನು ಅಂದನು. ಈ ಮೂವರಲ್ಲಿ ಯಾವನು ಕಳ್ಳರ ಕೈಗೆ ಸಿಕ್ಕಿದವನಿಗೆ ನೆರೆಯಾದವನೆಂದು ನಿನಗೆ ತೋರುತ್ತದೆ ಹೇಳು ಎಂದು ಕೇಳಿದ್ದಕ್ಕೆ ಆ ಧರ್ಮೋಪದೇಶಕನು–ಅವನಿಗೆ ದಯತೋರಿಸಿದವನೇ ಅಂದನು. ಆಗ ಯೇಸು ಅವನಿಗೆ–ಹೋಗು, ನೀನೂ ಅದರಂತೆ ಮಾಡು ಎಂದು ಹೇಳಿದನು.

ಅವರು ಸಂಚಾರ ಮಾಡುತ್ತಿರುವಾಗ ಆತನು ಒಂದಾನೊಂದು ಹಳ್ಳಿಗೆ ಬಂದನು; ಅಲ್ಲಿ ಮಾರ್ಥಳೆಂಬ ಒಬ್ಬ

ಸ್ತ್ರೀಯು ಆತನನ್ನು ತನ್ನ ಮನೆಯಲ್ಲಿ ಇಳಿಸಿಕೊಂಡಳು. ಆಕೆಗೆ ಮರಿಯಳೆಂಬ ಒಬ್ಬ ತಂಗಿ ಇದ್ದಳು. ಈಕೆಯು ಸ್ವಾಮಿಯ ಪಾದಗಳ ಬಳಿಯಲ್ಲಿ ಕೂತುಕೊಂಡು ಆತನ ವಾಕ್ಯವನ್ನು ಕೇಳುತ್ತಿದ್ದಳು. ಆದರೆ ಮಾರ್ಥಳು ಬಹಳ ಸೇವೆಯ ವಿಷಯವಾಗಿ ಬೇಸತ್ತು ಆತನ ಬಳಿಗೆ ಬಂದು–ಸ್ವಾಮೀ, ನನ್ನ ತಂಗಿಯು ಸೇವೆಗೆ ಒಬ್ಬಳನ್ನೇ ಬಿಟ್ಟಿದ್ದಾಳೆ, ಇದಕ್ಕೆ ನಿನಗೆ ಚಿಂತೆಯಿಲ್ಲವೋ? ನನಗೆ ನೆರವಾಗಬೇಕೆಂದು ಆಕೆಗೆ ಹೇಳು ಅಂದಳು. ಸ್ವಾಮಿಯು ಆಕೆಗೆ–ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ. ಕೆಲವು ಮಾತ್ರ ಬೇಕಾದದ್ದು, ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ; ಅದು ಆಕೆಯಿಂದ ತೆಗೆಯಲ್ಪಡುವದಿಲ್ಲ ಎಂದು ಉತ್ತರ ಕೊಟ್ಟನು.

# “ನನ್ನ ನೆರೆಯವನು ಯಾರು?”

**ರೀಪ್ರಿಂಟ್ಸ್ ಪುಟ 3803**

## ಲೂಕ 10:25–37

**“ಕರುಣೆಯುಳ್ಳವರು ಧನ್ಯರು; ಅವರು ಕರುಣೆಯನ್ನು ಹೊಂದುವರು” – ಮತ್ತಾಯ 5:7**

ಯೇಸುವು ಸಾಮಾನ್ಯ ಜನರಿಗೆ (ಮೋಶೆಯ) ನಿಯಮವಿಧಿಗಳನ್ನು ಭೋಧಿಸುವವನಾಗಿಯೂ ಅವುಗಳ ಅರ್ಥವಿವರಣೆಯನ್ನು ನೀಡುವವನಾಗಿಯೂ ಇದ್ದನು, ಆದರೂ ಆತನು ತನ್ನನ್ನು ಯೆಹೂದ್ಯರಲ್ಲಿನ ಶಾಸ್ತ್ರಿಗಳ ಮತ್ತು ಧರ್ಮೋಪದೇಶಕರ ವರ್ಗದವನನ್ನಾಗಿ ಮಾಡಿಕೊಂಡಿರಲಿಲ್ಲ. ಧರ್ಮಶಾಸ್ತ್ರದ ಮೇಲಿನ ಅವರ ಅಭಿಪ್ರಾಯಗಳಿಂದ ತಾನು ಭಿನ್ನವಾದ ಅಭಿಪ್ರಾಯ ಹೊಂದಿದವನಾಗಿದ್ದು ಅವುಗಳನ್ನು ಭಿನ್ನವಾದ ರೀತಿಯಲ್ಲಿ ಬೋಧಿಸುತ್ತಿದ್ದನು. ಸಾಧಾರಣ ಜನರು ಅತನಿಂದ ಸಂತೋಷವಾಗಿ ಕೇಳುತ್ತಿದ್ದರು. ಆದರೆ ಧರ್ಮೋಪದೇಶಕರು ಸಾಧಾರಣ ಜನರ ಗೊಡವೆಗೇ ಹೋಗುತ್ತಿರಲಿಲ್ಲ ಅಥವಾ ಅವರಿಗೆ ಬೋಧಿಸಲು ಪ್ರಯತ್ನಿಸುತ್ತಿರಲಿಲ್ಲ; ಆದರೆ ಅವರು ಕೇವಲ ದೇವರ ಆಜ್ಞೆಗಳಲ್ಲಿನ ಕ್ಲಿಷ್ಟಕರವಾದ ಸಮಸ್ಯೆಗಳ ವಿಷಯವಾಗಿ ತಮ್ಮಲ್ಲಿಯೇ ಮತ್ತು ಜನರಲ್ಲಿ ಹೆಚ್ಚು ವಿರಕ್ತರಾದ ಫರಿಸಾಯರೊಡನೆ ಚರ್ಚಿಸಿಕೊಳ್ಳುತ್ತಿದ್ದರು.

ಸಾಧಾರಣ ಜನರು ಕರ್ತನಿಂದ ಸಂತೋಷವಾಗಿ ಕೇಳುತ್ತಿ–ದ್ದರೂ ಆತನ ಬೋಧನೆಗಳನ್ನು ಸ್ಪಷ್ಟವಾಗಿ ಗ್ರಹಿಸುತ್ತಿರಲಿಲ್ಲ. ಯಾಕೆಂದರೆ ಆತನು ಅವರಿಗೆ ಸಾಮ್ಯದ ರೂಪದಲ್ಲಿಯೂ ಹಾಗು ಒಗಟುಗಳಾಗಿಯೂ ಹೇಳುವವನಾಗಿದ್ದನು. ಇದರ ಉದ್ದೇಶವೇನಂದರೆ ಜನಸಮೂಹದಿಂದ ಅದು ಗ್ರಹಿಸಲ್ಪಡದೆ ವಿಶೇಷವಾಗಿ ಇಸ್ರಾಯೇಲ್ಯರಲ್ಲಿ ಆಸಕ್ತರಾದವರು ಇದರ ನಿಕಟವಾದ ಅಧ್ಯಯನ ಮತ್ತು ವಿಚಾರಣೆಗಳಿಗೆ ಆಕರ್ಶಿತರಾಗುವ ಸಲುವಾಗಿತ್ತು. ಇವರಿಗೆ ಆತನು ಸಾಮ್ಯಗಳನ್ನು ವಿವರಿಸುತ್ತಾ ಹೀಗೆ ಹೇಳಿದ್ದನು: “ದೇವರ ರಾಜ್ಯದ ಗುಟ್ಟು ನಿಮಗೇ ಕೊಟ್ಟಿದೆ; ಹೊರಗಿನವರಿಗೆ [ಇವುಗಳನ್ನು ಅನುಸರಿಸುವ ವಿಶೇಷ ಆಸಕ್ತಿಯಿಲ್ಲದಿರುವವರಿಗೆ] ಎಲ್ಲವೂ ಸಾಮ್ಯದ ಮರೆಯಲ್ಲಿವೆ.” (ಮಾರ್ಕ 4:11) ಆದರೂ ಒಡೆಯನು ನುಡಿಯುವ ಶೈಲಿಯಲ್ಲಿ ಬಹು ಆಕರ್ಶಕವಾದ ಕೆಲವು ಸಂಗತಿಗಳಿದ್ದವು; ಹೀಗಾಗಿ ಆತನ ಬೋಧನೆಗಳನ್ನು ಪೂರ್ಣವಾಗಿ ಗ್ರಹಿಸದವರೂ, “ಈ ಮನುಷ್ಯನು ಹೇಳುವ ರೀತಿಯಲ್ಲಿ ಯಾರೂ ಎಂದು ನುಡಿದಿದ್ದಿಲ್ಲ” ಎಂದು ಹೇಳಿದ್ದರು. ಅಲ್ಲದೆ ನಾವು ಮತ್ತೂ ಓದುವದು: “ಅವರು ಆತನ ಬಾಯಿಂದ ಹೊರಟ ಇಂಪಾದ ಮಾತುಗಳಿಗೆ ಆಶ್ಚರ್ಯಪಟ್ಟು...” “ಯಾಕಂದರೆ ಆತನು ಅವರ ಶಾಸ್ತ್ರಿಗಳಂತೆ [ಸಂದೇಹವುಳ್ಳವನಾಗಿ] ಉಪದೇಶಮಾಡದೆ ಅಧಿಕಾರವಿದ್ದವನಂತೆ [ಅಂದರೆ ತಾನು ಹೇಳುವ ವಿಷಯವನ್ನು ಸುದೀರ್ಘವಾಗಿ ಗ್ರಹಿಸಿಕೊಂಡವನಂತೆ] ಅವರಿಗೆ ಉಪದೇಶಮಾಡುತ್ತಿದ್ದನು.” – ಯೋಹಾನ 7:46; ಲೂಕ 4:22; ಮತ್ತಾಯ 7:29.

ಈ ಕಾರಣಕ್ಕಾಗಿ ಧರ್ಮೋಪದೇಶಕರಿಗೆ ಯೇಸುವಿನ ಮೇಲೆ ಅಸೂಯೆ ಹುಟ್ಟಿತ್ತು. ಅವರಿಗೆ ಈತನು ಒಬ್ಬ ಬೋಧಕ ಪ್ರತಿಸ್ಪರ್ಧಿಯಾಗಿದ್ದನು ಮತ್ತು ಇದರ ಅನುಸಾರವಾಗಿ ಅವರು ಈತನನ್ನು ಸಿಕ್ಕಿಸಿ “ವಿದ್ಯೆಯಿಲ್ಲದ ಜನರು” ಎಂದು ಗುರುತಿಸಿದ್ದ ಆತನ ಹಿಂಬಾಲಕರ ಮುಂದೆ ಆತನ ಗುಟ್ಟನ್ನು ರಟ್ಟುಮಾಡಿ ಹಾಸ್ಯಾಸ್ಪದನನ್ನಾಗಿ ಮಾಡಲು ಹವಣಿಸುತ್ತಿದ್ದರು. ಆದರೆ ಯಾವ ವಿಷಯದಲ್ಲಿಯೂ ಅವರು ಯಶಸ್ವಾಗಲಿಲ್ಲ; ಪ್ರತಿಯೊಂದು ಲಿಖಿತವಾದ ಸಂದರ್ಭದಲ್ಲಿಯೂ ಕರ್ತನ ಜ್ಞಾನವು ಅವರಿಗೆ ಬಹು ಉನ್ನತವಾಗಿ ಕಂಡುಬಂದಿದ್ದು ಆತನು ಅವರ ವಾದಗಳಲ್ಲಿಯೇ ಅವರುಗಳು ಸಿಕ್ಕಿಸಿಬೀಳುವಂತೆ ಮಾಡುತ್ತಿದ್ದನು. ಈಗಿರುವ ಪಾಠವು ಇದಕ್ಕೆ ಒಂದು ನಿದರ್ಶನವಾಗಿರುವದು. ಧರ್ಮೋಪದೇಶಕರಲ್ಲಿ ಒಬ್ಬನು ಪ್ರೀತಿಕರುಣೆಯ ವಿಷಯವಾದ ನಮ್ಮ ಕರ್ತನ ಉಪದೇಶಗಳು ಧರ್ಮಶಾಸ್ತ್ರವು ಬಯಸುವ ನ್ಯಾಯನೀತಿಯ ಸಂಬಂಧದ ಕಠಿಣ ವಿಧಿಗಳಿಗೆ ವಿರುದ್ಧವಾಗಿರುವವೆಂಬ ಸ್ಪಷ್ಟವಾದ ಅಭಿಪ್ರಾಯದಿಂದ ನಮ್ಮ ಕರ್ತನನ್ನು ಒಂದು ಪ್ರಶ್ನೆಯಿಂದ ಸಿಕ್ಕಿಸಲು ಆಲೋಚಿಸಿದ್ದನು. ತಾನು ನಿತ್ಯಜೀವವನ್ನು ಹೊಂದುವದು ಯಾವ ಷರತ್ತಿನ ಅನುಸಾರವಾಗಿ ಎಂದು ಕೇಳುವನು. ಅವನು ಯೇಸುವಿನಿಂದ ಉತ್ತರವಾಗಿ–“ಯಾರು ದೇವರ ಹೋಲಿಕೆಯಲ್ಲಿರುವಂಥ ಪ್ರೀತಿಯೆಂಬ ಉದಾರಗುಣವನ್ನು ತೋರ್ಪಡಿಸುವರೋ ಅವರಿಗೆ ನಿತ್ಯಜೀವವು ಕೊಡೋಣವಾಗುವದು” ಎನ್ನವದೋ ಅಥವಾ “ನೀನು ನನ್ನ ಶಿಷ್ಯನಾಗಿ ನನ್ನ ಉಪದೇಶಗಳನ್ನು ಅನುಸರಿಸಿ ನಡೆಯುವದರಿಂದ ನಿನಗೆ ನಿತ್ಯಜೀವವನ್ನು ಹೊಂದಲು ಸಾಧ್ಯ.” ಎಂದು ಹೇಳುವನೆಂದಾಗಲಿ ಅಪೇಕ್ಷಿಸಿದ್ದನು. ಹೀಗಾಗಿ ಈ ಧರ್ಮೋಪದೇಶಕನು ಯೇಸುವಿನ ಉಪದೇಶಗಳು ಧರ್ಮೋಪದೇಶವನ್ನು ರದ್ದುಗೊಳಿಸಿ ಅದನ್ನು ನಿರರ್ಥಕಮಾಡುವದೆಂಬ ಮತ್ತು ಆತನು ಧರ್ಮೋಪದೇಶವನ್ನು ಅಲಕ್ಷ್ಯಮಾಡುವನೆಂಬ ಅಂಶಕ್ಕೆ ಕೂಡಲೇ ಗಮನ ಸೆಳೆಯುವವನಾಗಿದ್ದನು.

## “ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರುವದು”

ನಮ್ಮ ಕರ್ತನು ಆ ಶಾಸ್ತ್ರಿಯ ಬಾಯಿಂದ ಬಂದ ಮಾತುಗಳ ಮೂಲಕವಾಗಿಯೇ ಪೂರ್ಣವಾಗಿ ಉತ್ತರಿಸಿದ್ದನು: ಆತನು ಅವನಿಗೆ ಹೇಳಿದ್ದು, “ನೀನು ಧರ್ಮೋಪದೇಶಕನಾಗಿರುವಿ; ನಿತ್ಯಜೀವವನ್ನು ಹೇಗೆ ಪಡೆಯಬಹುದೆಂಬುದರ ಬಗ್ಗೆ ಧರ್ಮಶಾಸ್ತ್ರವು ಏನು ತಿಳಿಸಿರುವದೆಂಬದಕ್ಕೆ ನಿನ್ನ ಹೇಳಿಕೆಯನ್ನು ಕೊಡು?” ಇದು ಒಂದು ಗುರಿನಾಟುವಂಥ ಉತ್ತರವಾಗಿದ್ದು ಆ ನ್ಯಾಯಶಾಸ್ತ್ರಿಯು ಇದಕ್ಕೆ ಉತ್ತರಿಸಲು ಪೂರ್ಣವಾಗಿ ಸಿದ್ಧನಿದ್ದನು; ಏಕೆಂದರೆ ಧರ್ಮಶಾಸ್ತ್ರವು ಏನು ಹೇಳುವದು? ಎನ್ನುವದು ಯೆಹೂದ್ಯರು ತಮ್ಮಲ್ಲಿ ಧರ್ಮವಿಧಿಗಳನ್ನು ಉಲ್ಲೇಖಿಸುವಾಗ ಸಾಧಾರಣವಾಗಿ ಕೇಳುವ ಒಂದು ಪ್ರಶ್ನೆಯಾಗಿತ್ತು. (ಧರ್ಮೋ. 6:5; ಯಾಜಕ 19:18) ಈ ವ್ಯಾಖ್ಯಾನವನ್ನೇ ನಮ್ಮ ಕರ್ತನು ಕೆಲವು ಸಮಯಗಳ ಹಿಂದೆ ಒಂದು ಸಂದರ್ಭದಲ್ಲಿ ಐಶ್ವರ್ಯವಂತನಾದ ಒಬ್ಬ ಯೌವನಸ್ಥನಿಗೆ ಉಲ್ಲೇಖಿಸಿ ಹೇಳಿದ್ದುದು. ಆ ನ್ಯಾಯಶಾಸ್ತ್ರಿಯು ಬಹು ಪರಿಚಿತವಾದ ಒಂದು ಧರ್ಮಶಾಸ್ತ್ರದ ಸೂತ್ರವನ್ನು ಸ್ಪಷ್ಟವಾಗಿ ಪುನರಾವರ್ತಿಸಿ ಹೇಳಿದ್ದನು, “ನೀನು ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣ ಹೃದಯದಿಂದಲೂ ನಿನ್ನ ಪೂರ್ಣ ಪ್ರಾಣದಿಂದಲೂ ನಿನ್ನ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು.” ಯೇಸುವು ಉತ್ತರಿಸಿದ್ದು, “ನೀನು ಸರಿಯಾಗಿ ಉತ್ತರಕೊಟ್ಟಿ; ಇದರಂತೆ ಮಾಡು, ಮಾಡಿದರೆ ಜೀವಿಸುವಿ.” ಅಂದರೆ ನಿತ್ಯಜೀವ ಹೊಂದುವಿ.

## ಧರ್ಮಶಾಸ್ತ್ರ ಮತ್ತು ಸುವಾರ್ತೆಗಳ ಎದುರಾಳಿಸ್ಥಾನ

ಯೇಸುವು ಹೀಗೆ ಯಾಕೆ ಧರ್ಮಶಾಸ್ತ್ರವನ್ನು ಉಲ್ಲೇಖಿಸಿದ್ದನು? ಆತನು ಯಾಕೆ ಹೀಗೆ ಈ ಅವಕಾಶವನ್ನು ಸುವಾರ್ತೆ ಸಾರಲು ಬಳಸಿಕೊಳ್ಳಲಿಲ್ಲ? “ನಿತ್ಯಜೀವ ಪಡೆಯುವ ಒಂದೇ ಮಾರ್ಗವೆಂದರೆ ಅದು ನನ್ನ ಮೇಲಿನ ನಂಬಿಕೆಯು ಮೂಲಕವಾಗಿ ಮತ್ತು ಇದನ್ನು ಅನುಸರಿಸಿಕೊಂಡು ನನ್ನ ಶಿಷ್ಯನಾಗಿ ನನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಲು ಪೂರ್ಣವಾಗಿ ಪ್ರತಿಷ್ಠಿಸಿಕೊಳ್ಳುವದರ ಮೂಲಕವಾಗಿ” ಎಂದು ಆತನು ಆ ಧರ್ಮೋಪದೇಶಕನಿಗೆ ಏಕೆ ಹೇಳಲಿಲ್ಲ? “ಆ (ಯೇಸುವಿನ) ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ” ಎಂದು ಆ ಧರ್ಮೋಪದೇಶಕನಿಗೆ ಏಕೆ ಹೇಳಲಿಲ್ಲ? “ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು: ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಜೀವವಿಲ್ಲ.” ಎಂದು ಆತನಿಗೆ ಏಕೆ ಹೇಳಲಿಲ್ಲ? – ಅ.ಕೃ. 4:12; 1 ಯೋಹಾನ 5:12.

ನಮ್ಮ ಉತ್ತರವೇನಂದರೆ, ಇದು ಆ ಧರ್ಮೋಪದೇಶಕನ ಮನೋಸ್ಥಿತಿಗೆ ಅತಿ ಗಟ್ಟಿಯಾದ ಆಹಾರವಾಗುತ್ತಿತೆಂಬುದು. ಮೊದಲು ಆತನು ದೇವಾಜ್ಞೆಗಳನ್ನು ಪೂರ್ಣ ಅಕ್ಷರಾರ್ಥದಲ್ಲಿ ಕೈಗೊಂಡು ನಡೆಯಲು ತನ್ನ ಅಸಮರ್ಥತೆಯ ವಿಷಯವಾಗಿ ಆತನು ಅರಿವನ್ನು ಹೊಂದಬೇಕು; ಆಗ ಆತನು ಯೇಸುವಿನಲ್ಲಿರುವ ದೇವರ ಕರುಣೆಯನ್ನು ಎದುರುನೋಡಲು ಸಿದ್ಧನಾಗಬಹುದು. ಫರಿಸಾಯರು ಮತ್ತು ಶಾಸ್ತ್ರಿಗಳಲ್ಲಿದ್ದ ಸಮಸ್ಯೆಯೆಂದರೆ, ಇತರರಂತೆ ತಾವೆಲ್ಲರೂ ಸತ್ತುಹೋಗುವವೆಂಬುದನ್ನು ಅವರಿಗೆ ಚೆನ್ನಾಗಿ ತಿಳಿದಿದ್ದರೂ, ಮತ್ತು ಈ ವಿಷಯವಾಗಿ ಯೋಚಿಸುವಾಗ ದೈವನಿಯಮಗಳು ಬಹು ಉನ್ನತವಾದವುಗಳೆಂದೂ, ಬಹು ಭವ್ಯವಾದವುಗಳೆಂದೂ, ಅತಿ ಪರಿಪೂರ್ಣವಾದವುಗಳೆಂದೂ ಹಾಗು ತಮ್ಮ ಬಲಹೀನವಾದ, (ಪರಿಪೂರ್ಣತೆಯಿಂದ) ಬಿದ್ದುಹೋದ ಸ್ಥಿತಿಯಲ್ಲಿ ಅದರ ಅಗತ್ಯತೆಗಳನ್ನು ಪರಿಪೂರ್ಣವಾಗಿ ನೆರವೇರಿಸಲು ತಾವು ಅಸಮರ್ಥರೆಂಬುದನ್ನು ಸಹ ತಿಳಿದಿದ್ದರೂ, ಅವರು ಧರ್ಮಶಾಸ್ತ್ರವನ್ನು ಕೈಗೊಂಡು ನಡೆಯುವವರಂತೆ ಸೋಗುಹಾಕುತ್ತಿದ್ದರು, ಆ ಮೂಲಕವಾಗಿ ತಾವು ನೀತಿವಂತರೆಂಬ ನಿರ್ಣಯವನ್ನು ಹೊಂದಿರುವದಾಗಿ ತೋರ್ಪಡಿಸಿಕೊಳ್ಳುತ್ತಿದ್ದರು, ಅದರಿಂದ ತಾವು ನಿತ್ಯಜೀವವನ್ನು ಹೊಂದಿರುವದಾಗಿ ನಟಿಸುತ್ತಿದ್ದರು.

ದೇವರು ಒಂದು ಪರಿಪೂರ್ಣವಾದ ಗುಣಮಟ್ಟವನ್ನು ಹೊಂದಿರುವನೆಂದೂ ಆ ಗುಣಮಟ್ಟಗಳಿಗೆ ತಮ್ಮನ್ನು ಹೊಂದಿಸಿಕೊಳ್ಳದ ಹೊರತು ಯಾರು ನಿತ್ಯಜೀವ ಪಡೆಯುವದನ್ನು ಅಪೇಕ್ಷಿಸಲು ಸಾಧ್ಯವಿಲ್ಲವೆಂಬುದನ್ನು ಅಂಗೀಕರಿಸಿಕೊಳ್ಳಲು ಸಿದ್ಧರಿರುವ ಇದೇ ರೀತಿಯ ಕೆಲವು ಜನರು ಈ ದಿನಗಳಲ್ಲಿಯೂ ಇರುವರು; ಮತ್ತು ನಿತ್ಯಜೀವವನ್ನು ಪಡೆಯಲು ದೈವಿಕ ಗುಣಮಟ್ಟಗಳಿಗೆ ತಾವು ಸಾಕಷ್ಟು ಸಮೀಪದಲ್ಲಿರುವದಾಗಿಯೂ, ಆದುದರಿಂದ ತಾವು ರಕ್ಷಕನನ್ನು ಎದುರುನೋಡುತ್ತಿಲ್ಲವೆಂದೂ, ಅಂದರೆ ತಮಗೆ ಪಾಪಕ್ಷಮೆಯನ್ನು ಮತ್ತು ಬಿಡುಗಡೆಯನ್ನು ಅನುಗ್ರಹಿಸಿ ತಮ್ಮ ದೋಷಗಳನ್ನು ಮುಚ್ಚಿದವನಾಗಿ ತನ್ನ ಮೂಲಕವಾಗಿ ತಂದೆಯೊಡನೆ ಸಂಧಾನಮಾಡುವ ಒಬ್ಬ ವಿಮೋಚಕನು ನಮಗಾಗಿ ಈಡು ಬೆಲೆಯನ್ನು ನೀಡುವದನ್ನು ಎದುರುನೋಡುತ್ತಿಲ್ಲವೆಂದು ನಂಬಿರುವ ಅನೇಕರು ಈ ದಿನಗಳಲ್ಲಿರುವರು, ಮತ್ತು ಹಿಂದೆಯೂ ಯೆಹೂದ್ಯರಲ್ಲಿ ಅನೇಕರಿದ್ದರು. ಇಂಥವರೆಲ್ಲರೂ ದೈವನ್ಯಾಯವು ನೇಮಿಸಿರುವದು ಒಂದೇ ಒಂದು ಮಾನದಂಡವೆಂಬದನ್ನು ಮತ್ತು ಅದು ಒಂದು ಅತ್ಯುನ್ನತವಾದುದೆಂಬ ಪಾಠವನ್ನು ಮೊದಲು ಕಲಿಯುವದು ಅಗತ್ಯ. ದೇವರು ನೇಮಿಸಿರುವ ಆ ಮಾನದಂಡವು ಎಷ್ಟು ಉನ್ನತವಾದುದೆಂಬುದನ್ನು ಮತ್ತು ಆ ಗುಣಮಟ್ಟಕ್ಕೆ ತಮ್ಮನ್ನು ಸರಿಗಟ್ಟಿಸಿಕೊಳ್ಳಲು ತಮ್ಮ ಅತ್ಯುತ್ತಮವಾದ ಪ್ರಯತ್ನಗಳೆಲ್ಲವೂ ಬಹು ಅಪೂರ್ಣವಾದವುಗಳೆಂಬುದನ್ನು ಅವರು ಕಂಡುಕೊಂಡಾಗಲೇ ಮತ್ತು ಇದನ್ನು ಕಂಡುಕೊಂಡ ನಂತರವೇ ನಿತ್ಯಜೀವವನ್ನು ಪಡೆಯಲು ಕರ್ತನಿಂದ ಸಹಾಯವನ್ನು ಎದುರುನೋಡಲು ಪ್ರಾರಂಭಿಸುವದು. ಆ ಧರ್ಮೋಪದೇಶಕನು ಈ ಪಾಠವನ್ನು ಕಲಿತುಕೊಳ್ಳುವದನ್ನು ಕರ್ತನು ಬಯಸಿದ್ದನು ಮತ್ತು ಆದುದರಿಂದ ಧರ್ಮಶಾಸ್ತ್ರವು ಏನು ಬಯಸುವದೆಂಬುದರ ಹೇಳಿಕೆ ನೀಡುವಂತೆ ಅವನನ್ನು ಒತ್ತಾಯಿಸಿದ್ದನು.

ದೇವರನ್ನು ಪೂರ್ಣ ಹೃದಯ ಪ್ರಾಣ ಶಕ್ತಿ ಮತ್ತು ಬುದ್ಧಿಯಿಂದ ಪ್ರೀತಿಸುವದು ಏನನ್ನು ಒಳಗೊಂಡಿರುಬದೆಂಬ ವಿಷಯದಲ್ಲಿ ಜುಗ್ಗಾಡುವದನ್ನು ಆ ಧರ್ಮೋಪದೇಶಕನು ಬಿಡಲಿಲ್ಲ. ಕೆಲವರು ದೇವರನ್ನು ಪ್ರೀತಿಸಿ ಸೇವಿಸುತ್ತಿರುವದಾಗಿ ಹೇಳಿಕೊಳ್ಳಬಹುದು ಮತ್ತು ಇತರರು ಯಾವುದನ್ನೂ ಪ್ರಮಾಣಿಸಿ ತೋರಿಸಲು ಅಸಮರ್ಥರಾದಾಗ್ಯೂ ಆ ಹೇಳಿಕೆಯಲ್ಲಿನ ಸತ್ಯಾಂಶದ ಬಗ್ಗೆ ಸಂದೇಹಪಡಬಹುದು. ಏಕೆಂದರೆ ಕೇವಲ ಕರ್ತನು ಮತ್ತು ಆ ಮನುಷ್ಯನ ಸ್ವಂತ ಹೃದಯ ಮಾತ್ರವೇ ಈ ಸಂಗತಿಯನ್ನು ಪರಿಪೂರ್ಣವಾಗಿ ತೀರ್ಮಾನಿಸಲು ಸಾಧ್ಯ. ಆ ಧರ್ಮೋಪದೇಶಕನು ಈ ಮಹತ್ತರವಾದ ಪ್ರಶ್ನೆಯು ಇತ್ಯರ್ಥವಾಗಿ ಇದು ಏನೂ ಅಲ್ಲವೆಂಬಂತೆ ಅದನ್ನು ಬಿಟ್ಟುಬಿಟ್ಟನು. ಆದರೆ ಆತನೇನಾದರೂ ಕರ್ತನಿಗೆ ಪೂರ್ಣವಾದ ರೀತಿಯಲ್ಲಿ ಪ್ರತಿಷ್ಠಿಸಿಕೊಳ್ಳುವದರ ಬಗ್ಗೆ ಗಂಭೀರವಾಗಿ ಪರಿಶೀಲಿಸಿದ್ದೇಯಾದಲ್ಲಿ ತಾನು ಆ ಮಟ್ಟಕ್ಕೆ ಅತಿ ಕಡಿಮೆಯಾಗಿ ತೋರಿಬರುತ್ತಿದ್ದನು.

ನಾವು ಈ ಪ್ರಶ್ನೆಯನ್ನು ಅತಿ ಬೇಗನೆ ಬಿಟ್ಟುಬಿಡುವವರಾಗದೇ ಅಥವಾ ಅತಿ ಲಘುವಾಗಿ ತೆಗೆದುಕೊಳ್ಳದೇ ಇರೋಣ. ದೇವರನ್ನು ಸಂಪೂರ್ಣ ಹೃದಯದಿಂದ ಪ್ರೀತಿಸುವದೆಂದರೆ ಒಟ್ಟಾರೆ ನಮ್ಮ ಪ್ರೀತಿಯೆಲ್ಲವೂ ದೇವರ ಮೇಲೆ ಕೇಂದ್ರೀಕರಿಸುವದೆಂಬುದನ್ನು ತಿಳಿದವರಾಗಿರೋಣ. ಹೀಗಾಗಿ ನಮ್ಮ ಮನೆಯಲ್ಲಿ ಮತ್ತು ನಮ್ಮ ಕುಟುಂಬದಲ್ಲಿ ಮತ್ತು ಇಡೀ ಪ್ರಪಂಚದಲ್ಲಿ ನಮಗೆ ಪ್ರಿಯರಾದವರೆಲ್ಲರ ಮೇಲಿನ ಪ್ರೀತಿಗಿಂತಲೂ ಇದು ಬಹು ಉತ್ಕೃಷ್ಟವಾಗಿರುವಂಥದ್ದು. ದೇವರನ್ನು ಪೂರ್ಣ ಪ್ರಾಣದಿಂದ ಪ್ರೀತಿಮಾಡುವದು ನಮ್ಮದೆಲ್ಲದರ ಮೂಲಕವಾಗಿ ಪ್ರೀತಿಸುವದನ್ನು ಸೂಚಿಸುವದು. ಅಂದರೆ ನಮ್ಮ ಪ್ರೀತಿಯನ್ನು ನಮ್ಮ ಮಾತುಗಳ ಮತ್ತು ನೋಟಗಳ, ನಮ್ಮ ಸ್ತುತಿಗಳ ಮೂಲಕವಾಗಿ ತೋರ್ಪಡಿಸುವದು ಮಾತ್ರವಲ್ಲದೆ ನಾವು ಮಾಡುವ ನಮ್ಮ ಸೇವೆಗಳೆಲ್ಲವುಗಳ ಮೂಕವಾಗಿ ಮತ್ತು ನಮ್ಮ ಜೀವಿತದ ನಡಾವಳಿಯ ಮೂಲಕವಾಗಿ ನಾವು ಪ್ರೀತಿಮಾಡುವ ವಿಷಯಗಳೆಲ್ಲವುಗಳಲ್ಲಿ ಮತ್ತು ನಮ್ಮ ಜೀವಿತದ ಹಿತಾಸಕ್ತಿಗಳೆಲ್ಲವುಗಳಲ್ಲಿ ದೇವರೇ ಮೊದಲಿಗನೆಂಬುದನ್ನು ಪ್ರಮಾಣಿಸಿ ತೋರಿಸುವದಾಗಿರುವದು. ಮೂರನೆಯದಾಗಿ, ನಮ್ಮ ಪೂರ್ಣ ಶಕ್ತಿಯಿಂದ ಪ್ರೀತಿಸುವದು ಸಮಯ ಸಾಮರ್ಥ್ಯ ಪ್ರಭಾವಗಳನ್ನು ನಮ್ಮ ದೇವರ ಸೇವೆಯಲ್ಲಿ ತೊಡಗಿಸುವದನ್ನು ಅಂದರೆ ಇವೆಲ್ಲವುಗಳನ್ನೂ ಬಳಸಲು ಸಿದ್ಧವಾಗಿರುವದು, ಆತನ ಹೆಸರನ್ನು ಮಹಿಮೆಪಡಿಸಲು ಇವೆಲ್ಲವುಗಳನ್ನು ತೊಡಗಿಸುವದನ್ನು ಆತನ ಧ್ಯೇಯೋದ್ದೇಶಗಳು ಈಡೇರಿಸಲು ಸೇವೆಮಾಡುವದನ್ನು ಸೂಚಿಸುವದು. ಇದು ಆತನ ಚಿತ್ತವಾಗಿರುವುದೆಂಬುದನ್ನು ನಾವು ಅರ್ಥಮಾಡಿಕೊಳ್ಳಬಹುದು. ನಾಲ್ಕನೆಯದಾಗಿ, ನಾವು ಬುದ್ಧಿವಂತಿಕೆಯಿಂದ ನಮ್ಮ ಕರ್ತನನ್ನು ಅರಿತುಕೊಳ್ಳಲು ಪ್ರಯತ್ನಿಸುವದು ಅಂದರೆ ಆತನ ನೇಮವಿಧಿಗಳನ್ನು ಅರ್ಥಮಾಡಿಕೊಂಡು ಅವುಗಳ ವಿಷಯವಾಗಿ ನಮ್ಮ ಹೃದಯಗಳಲ್ಲಿ ಸಹಾನುಭೂತಿಯುಳ್ಳವರಾಗಿರುವದು ನಮ್ಮ ದೇವರನ್ನು ಪೂರ್ಣ ಬುದ್ಧಿಯಿಂದ ಪ್ರೀತಿಸುವರದಲ್ಲಿ ಅಡಕವಾಗಿರುವದೆಂಬುದನ್ನು ಸೂಚಿಸುವದೆಂದು ತೋರುತ್ತದೆ. ಹೀಗಾಗಿ ನಾವು ಮಾಡುವ ಸೇವೆ ಮತ್ತು ಆರಾಧನೆಗಳು ನಮ್ಮ ಕರ್ತನು ಈ ಕೆಳಗೆ ವರ್ಣಿಸಿರುವ ರೀತಿಯಲ್ಲಿ ಹೆಚ್ಚು ಬುದ್ಧಿವಂತಿಕೆಯಿಂದ ಕೂಡಿದ್ದಾಗಿರುವದು: "ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕಂತೆ (ಬುದ್ಧಿಪೂರ್ವಕವಾಗಿ) ಆರಾಧಿಸಬೇಕು."

## "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು"

ದೇವರ ಕಡೆಗಿರುವ ಕರ್ತವ್ಯವನ್ನು ಬಿಟ್ಟು ಆ ಧರ್ಮೋಪದೇಶಕನು ತನ್ನ ಅನುದಿನದ ನಡವಳಿಕೆಯು ತಾನೇ ಅರ್ಥನೀಡಿದ ಆಜ್ಞೆಯ ಎರಡನೆಯ ಭಾಗವನ್ನು ಅಂದರೆ "ನಿನ್ನ ನೆರೆಯನವನ್ನು ನಿನ್ನಂತೆಯೇ ಪ್ರೀತಿಸಬೇಕು" ಎಂಬುದನ್ನು ಉಲ್ಲಂಘಿಸಿರುವುದಾಗಿ ಖಂಡಿಸುವದೆಂಬುದನ್ನು ಅರಿತುಕೊಂಡಂತೆ ಕಾಣುವದು. ಇದು ಆತಲ್ಲಿರುವ ಅತಿ ದುರ್ಬಲವಾದ ಅಂಶವೆಂಬುದನ್ನು ಸ್ಪಷ್ಟವಾಗಿ ಗ್ರಹಿಸಿಕೊಂಡಿದ್ದನು ಮತ್ತು ಕರ್ತನು ಆತನು ಕೊಟ್ಟ ಆತನ ಉತ್ತರದಲ್ಲೇ ತಾನು ಸಿಕ್ಕಿಬೀಳುವ ಹಾಗೆ ಮಾಡಿದ್ದನು. ತನ್ನ ಅನುದಿನದ ಜೀವಿತದಲ್ಲಿ ತನ್ನ ನೆರೆಯವನನ್ನು ತನ್ನಂತೆಯೇ ಪ್ರೀತಿಸುತ್ತಿಲ್ಲವೆಂಬುದುದನ್ನು ತಿಳಿದಿದ್ದನು. ಅಂದರೆ ಆತನು ತನ್ನ ಗುಂಪಿನವರ ಮತ್ತು ಸುಂಕದವರು ಹಾಗು ಪಾಪಿಗಳು ಆದ ಸಾಧಾರಣ ಜನರ ಮಧ್ಯದಲ್ಲಿ ದೊಡ್ಡ ತಾರತಮ್ಯವನ್ನು ಮಾಡುತ್ತಿರುವದಾಗಿಯೂ ಮತ್ತು ಯೇಸುವನ್ನು ಸಿಕ್ಕಿಬೀಳಿಸುವ ಆಗಿನ ಆತನ ಪ್ರಯತ್ನದಲ್ಲೂ ತಾನು ತನ್ನ ನೆರೆಯವನನ್ನು ತನ್ನಂತೆಯೇ ಪ್ರೀತಿಸುತ್ತಿಲ್ಲವೆಂದೂ ಆದರೆ ಆತನನ್ನು ತನ್ನ ಒಬ್ಬ ವಿರೋಧಿಯನ್ನಾಗಿ ಕಾಣುತ್ತಿರುವದಾಗಿ ಆತನು ತಿಳಿದಿದ್ದನು. ತನ್ನ ಗುಂಪಿನಲ್ಲಿರುವ ಇತರರಂತೆ ತಾನು ತನ್ನ ಸ್ವಜನರಲ್ಲಿನ ಕೀಳು ವರ್ಗದವರ ಕಡೆಗೆ ಗರ್ವದ ಅಸಡ್ಡೆಯ ಮನೋಭಾವವುಳ್ಳವನಾಗಿರುವನೆಂದು ಆತನಿಗೆ ಅನ್ನಿಸಿತ್ತು. ಆತನು ಧರ್ಮಶಾಸ್ತ್ರದ ವಿಷಯದಲ್ಲಿ ನಿಪುಣನಾಗಿದ್ದು ಇದು ಹೇಗಿದ್ದರೂ ಆತನಿಗೆ ತಪ್ಪಿಸಿಕೊಳ್ಳಲಾಗದಂತ ಹೊಸ ವಿಷಯವೇನಾಗಿರಲಿಲ್ಲ. ತನ್ನ ಗುಂಪಿನ ಇತರ ಶಾಸ್ತ್ರಿಗಳ ಮತ್ತು ಫರಿಸಾಯರಲ್ಲಿ ಸಾಮಾನ್ಯವಾಗಿರುವಂತೆ ಈ ವಿಷಯದಲ್ಲಿ ಆದೇ ವಿವರಣೆಯನ್ನು ಅಂದರೆ ಧರ್ಮಶಾಸ್ತ್ರದ ಪ್ರಕಾರ ತಮ್ಮಂತೆಯೇ ಪ್ರೀತಿಸಬೇಕಾದವರು ಯಾರಂದರೆ ತಮ್ಮ ಗುಂಪಿಗೆ, ತಮ್ಮ ಮತಕ್ಕೆ, ಜೀವನದಲ್ಲಿ ತಮ್ಮ ಅಂತಸ್ತಿಗೆ ಸೇರಿದವರೆಂಬುದು. ಆದುದರಿಂದ ಸ್ಪಷ್ಟವಾಗಿ ಆತನು ದೊಡ್ಡ ಆತ್ಮವಿಶ್ವಾಸದಿಂದ ಯೇಸುವಿಗೆ ಹೀಗೆ ಉತ್ತರಿಸಿದ್ದನು: "ನನ್ನ ನೆರೆಯವನು ಯಾರು?" ಇದನ್ನು ಆತನು ಹೀಗೆ ಹೇಳುವಂತಿತ್ತು: "ಈ ವಿಷಯದಲ್ಲೇ ನಾವು ಭಿನ್ನಾಭಿಪ್ರಾಯ ಹೊಂದಿರಲು ಸಾಧ್ಯವೆಂದು ನಾನು ಭಾವಿಸುತ್ತೇನೆ. ನಾನು ನನ್ನ ಸ್ವಂತ ವರ್ಗದವರನ್ನು ಪ್ರೀತಿಸುವಲ್ಲಿ ಮತ್ತು ಅವರೊಡನೆ ಅನ್ಯೋನ್ಯತೆಯುಳ್ಳವನಾಗಿರುವಲ್ಲಿ ಇತರರ ವಿಷಯವಾಗಿ ಹೆಚ್ಚುಕಡಿಮೆ ಅಸಡ್ಡೆಯುಳ್ಳವನಾಗಿ ನಡಕೊಳ್ಳುವವನಾಗಿರುವನೆಂದು ನನಗೆ ಅನ್ನಿಸುತ್ತದೆ. ನೀನು ಮೋಶೆಯ ಧರ್ಮಶಾಸ್ತ್ರವನ್ನು ಭಿನ್ನವಾದ ರೀತಿಯಲ್ಲಿ ಅನ್ವಯಿಸುವದು ಹೇಗೆ? ಪ್ರತಿಯೊಬ್ಬನೂ ತನ್ನ ವರ್ಗದವರನ್ನು ತನ್ನ ನೆರೆಯನನ್ನಾಗಿ ಪರಿಗಣಿಸಿ ಅವರನ್ನು ಪ್ರೀತಿಸಿ ಅವರಿಗೆ ಸಹಕರಿಸಬೇಕು; ಹಾಗು

ಅದು ಲೋಕದಲ್ಲಿರುವ ಇತರರೊಡನೆ ಅಲ್ಲವೆಂದು ನೇಮ ವಿಧಿಗಳು ಅರ್ಥೈಸುತ್ತವೆಂಬುದನ್ನು ನೀನು ಒಪ್ಪಿಕೊಳ್ಳುವಿಯೆಂದು ನನಗೆ ಖಂಡಿತವಾಗಿ ಅನ್ನಿಸುತ್ತದೆ."

ನಮ್ಮ ಕರ್ತನು ತನ್ನ ಅಸಾಧಾರಣವಾದ ಜ್ಞಾನದ ಮೂಲಕವಾಗಿ ಆ ಶಾಸ್ತ್ರಿಯು ಯಾವ ದಿನದಲ್ಲಾದರೂ ಇದು ತನಗೆ ಸಂಭವಿಸಬಹುದೆಂದು ಚೆನ್ನಾಗಿ ತಿಳಿದಿದ್ದ ಒಂದು ಸಾಮ್ಯವನ್ನು ರೂಪಿಸಿದ್ದನು. ಕೆಲವು ಸ್ಥಳಗಳಲ್ಲಿ ಬಹು ಕಡಿದಾಗಿದ್ದು ಯೆರೂಸಲೇಮಿನಿಂದ ಯೆರಿಕೋವಿಗೆ ಇಳಿದು ಹೋಗುವ ಪರ್ವತದ ಕಣಿವೆ ಮಾರ್ಗವನ್ನು ಮತ್ತು ಅದರ ಸಮಿಪದಲ್ಲಿರುವ ಅನೇಕ ಗುಹೆಗಳಲ್ಲಿ ದರೋಡೆಕೋರರು ತುಂಬಿಕೊಂಡವರಾಗಿದ್ದು ಆಗಾಗ್ಗೆ ಪ್ರಯಾಣಿಕರ ಮೇಲೆ ಹಲ್ಲೆ ಮಾಡುತ್ತಿದ್ದುದನ್ನು ಆತನು ಚಿತ್ರಿಸಿದ್ದನು. ಈ ಮಾರ್ಗವಾಗಿ ಯೆರಿಕೋವಿಗೆ ಪ್ರಯಾಣ ಮಾಡುವವರು ಶಸ್ತ್ರಸಜ್ಜಿತನಾದ ಒಬ್ಬ ಅರಬೀಯ ಬೆಂಗಾವಲಿನ ಅಂಗರಕ್ಷಕನನ್ನು ಹೊಂದಿರುವದು ಈ ದಿನಗಳಲ್ಲಿಯೂ ಸಹ ಒಂದು ವಾಡಿಕೆಯಾಗಿರುವದು. ಈ ದಾರಿಯಲ್ಲಿ ದರೋಡೆಕೋರರಿಂದ ತೊಂದರೆಗೊಳಗಾಗಿ ನಿಸ್ಸಹಾಯಕ ಸ್ಥಿತಿಗೆ ಬರುವಂತೆ ಪೆಟ್ಟುತಿಂದು ತನ್ನ ಬಟ್ಟೆಗಳು ಕಳಚಲ್ಪಟ್ಟ ಒಬ್ಬ ಪ್ರಯಾಣಿಕನನ್ನು ನಮ್ಮ ಕರ್ತನು ಚಿತ್ರಿಸಿದ್ದನು. ಅಲ್ಲಿ ಯಾಜಕನು ದಾಟಿ ಹೋಗುತ್ತಿದ್ದು ಆ ಮನುಷ್ಯನನ್ನು ನೋಡಿ ದರೋಡೆಕೋರರಿಂದ ತನಗೆ ತೊಂದರೆಯಾಗ ಬಾರದೆಂದು ಅವಸರದಿಂದ ವಾರೆಯಾಗಿ ಹೋದುದನ್ನು ಆತನು ಚಿತ್ರಿಸಿದ್ದನು; ಹೀಗೆಯೇ ಒಬ್ಬ ಲೇವಿಯು ಅವನಿಗೆ ಸಹಾಯಮಾಡಲು ಅಗತ್ಯವಿರುವ ಸಮಯವನ್ನು ಅಲ್ಲಿ ಕಳೆಯ ಮನಸ್ಸಿಲ್ಲದೆ ದಾಟಿಹೋಗುವನು. ಆನಂತರ ಸಮಾರ್ಯದ ಒಬ್ಬ ಮನುಷ್ಯನು ಆ ದಾರಿಯಲ್ಲಿ ಬರುವನು ಮತ್ತು ಅನುಕಂಪದಿಂದ ಕೂಡಿದವನಾಗಿ ಆ ಗಾಯ ಹೊಂದಿದವನಿಗೆ ಸಹಾಯಮಾಡಿ ಆತನ ಗಾಯವನ್ನು ಕಟ್ಟುವನು; ಮತ್ತು ಕಡೆಯದಾಗಿ ಆತನನ್ನು ತನ್ನ ಸ್ವಂತ ವಾಹನಪಶುವಿನ ಮೇಲೆ ಕುಳ್ಳಿರಿಸಿಕೊಂಡು ಹತ್ತಿರದ ಛತ್ರಕ್ಕೆ ಕರೆದುಕೊಂಡು ಹೋಗುವನು, ಆ ರಾತ್ರಿಯೆಲ್ಲಾ ಅವನಿಗೆ ಆರೈಕೆಮಾಡಿ ಮತ್ತು ಮುಂದಿನ ಆರೈಕೆಗೆ ಕೆಲವು ಏರ್ಪಾಡುಗಳನ್ನು ಮಾಡುವನು.

ಲೇವಿಯರು ಕರ್ತನ ಪರಿಶುದ್ಧ ಸೇವೆಗಾಗಿ ಪ್ರತ್ಯೇಕಿಸಲಾಗಿದ್ದು ಅವರು ಜನರಿಗೆ ಉಪದೇಶಿಸುವವರಾಗಿ ಅವರನ್ನು ನುಡಿಗಳಿಂದ ಮತ್ತು ಮಾದರಿಯಿಂದ ಅವರಿಗೆ ಕರ್ತನ ಮಾರ್ಗದಲ್ಲಿ ಮಾರ್ಗದರ್ಶನ ಮಾಡಬೇಕಿತ್ತೆಂಬುದನ್ನು ನೆನೆದಾಗ ಮತ್ತು ಯಾಜಕರೂ ಸಹ ಇದೇ ಕುಲಕ್ಕೆ ಸೇರಿದವರಾಗಿದ್ದು ಕರ್ತನಿಂದ ತನ್ನ ಮತ್ತು ಇಸ್ರಾಯೇಲ್ ಜನರ ವಿಷಯವಾದ ಅತ್ಯುನ್ನತವಾದ ಸೇವೆಗೆ ದೇವರು ಆದುಕೊಂಡಿದ್ದ ವಿಶೇಷವಾದ ಕುಟುಂಬವೆಂಬುದನ್ನು ಮತ್ತಷ್ಟು ನೆನೆದಾಗ ಮಾತ್ರ ನಮ್ಮ ಕರ್ತನು ನೀಡಿದ ನಿದರ್ಶನದಲ್ಲಿನ ಪ್ರಭಾವವನ್ನು ಕಾಣುವದು. ಸಮಾರ್ಯದವರು ಒಂದು ಮಿಶ್ರಜನಾಂಗವಾಗಿದ್ದು ಯೆಹೂದ್ಯರು ಅವರನ್ನು ತಿರಸ್ಕರಿಸಿ ಅವರೊಡನೆ ಯಾವ ಹೊಕ್ಕುಬಳಕೆಯನ್ನೂ ಮಾಡುತ್ತಿರಲಿಲ್ಲವೆಂಬುದನ್ನು ನಾವು ನೆನಪಿಸಿಕೊಂಡಾಗ ಈ ಚಿತ್ರಣವು ಇನ್ನೂ ಉನ್ನತವಾಗಿ ಕಾಣುವದು. – ಯೋಹಾನ 4:9

ಈ ಸಂಗತಿಗಳನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಂಡು ನಮ್ಮ ಒಡೆಯನ ಈ ಪ್ರಶ್ನೆಯನ್ನು ಗುರುತಿಸಿ: "ಈ ಮೂವರಲ್ಲಿ ಯಾವನು ಕಳ್ಳರ ಕೈಗೆ ಸಿಕ್ಕಿದವನಿಗೆ ನೆರೆಯವನಾದನೆಂದು ನಿನಗ ತೋರುತ್ತದೆ..." ಆ ಧರ್ಮೋಪದೇಶಕನಿಗೆ ನೀಡಲು ಇದ್ದದ್ದು ಒಂದೇ ಉತ್ತರ. ತಾನೇ ಲೇವಿಯ ವರ್ಗಕ್ಕೆ ಸೇರಿದವನಾಗಿದ್ದು ಈ ಸಾಮ್ಯದ ಮೂಲಕವಾಗಿ ಖಂಡಿಸಲ್ಪಟ್ಟಿದ್ದನು. ಆ ಉತ್ತರವು: "ಅವನಿಗೆ ದಯತೋರಿಸಿದವನೇ.." ನಮ್ಮ ಕರ್ತನು ಆ ಉತ್ತರವನ್ನು ಮಾನ್ಯಮಾಡಿ ಅದಕ್ಕೆ ಸ್ಪಂದಿಸುವವನಾಗಿ ಹೇಳಿದ್ದು: "ಹೋಗು, ನೀನೂ ಅದರಂತೆ ಮಾಡು.." ಅಂದರೆ ಹೋಗು, ಕರುಣೆತೋರಿಸು; ಹೋಗು, ಯಾವ ಮನುಷ್ಯನೇ ಆದರೂ–ಅವನು ಮಿತ್ರನೇ ಅಥವಾ ಶತ್ರುವೇ ಆಗಿದ್ದರೂ–ಅವನು ನಿನಗೆ ನೆರೆಯವನು ಮತ್ತು ನಿನಗೆ ಅವಕಾಶ ದೊರೆತಂತೆಲ್ಲಾ ಅವನನ್ನು ಪ್ರೀತಿಸಿ ಅವನಿಗೆ ಸೇವೆಮಾಡಬೇಕೆಂಬುದನ್ನು ಅರ್ಥಮಾಡಿಕೋ. ಅವನು ನಿನಗೆ ಏನು ಮಾಡಬೇಕೆಂದು ಬಯಸುವಿಯೋ ಅದನ್ನೇ ನೀನು ಅವನಿಗೆ ಮಾಡು. ಅವನು ನಿನ್ನನ್ನು ಪ್ರೀತಿಸಿ ಮೀಸಲಾದ ಸ್ಥಿತಿಗತಿಗಳಲ್ಲಿ ನಿನಗೆ ಸೇವೆಮಾಡುವದನ್ನು ನೀನು ಬಯಸುವಂತೆಯೇ ನೀನು ಅವನನ್ನು ನಿನ್ನಂತೆಯೇ ಪ್ರೀತಿಸಿ ಅವನಿಗೆ ಸೇವೆಮಾಡು.

## ರಾಜಾಜ್ಞೆ

ಕರ್ತನ ಜನರಲ್ಲಿ ಕೆಲವರು ಈ ಆಜ್ಞೆಯ ಅಗತ್ಯತೆಯಲ್ಲಿ ಮತ್ತು ನಮ್ಮ ಕರ್ತನ ನಿದರ್ಶನದಲ್ಲಿ ಅಡಕವಾಗಿರುವ ಪ್ರಭಾವದಿಂದ ತಪ್ಪಿಸಿಕೊಳ್ಳುವ ಪ್ರವೃತ್ತಿಯುಳ್ಳವರಾಗಿ ಹೀಗೆ ಹೇಳುವದನ್ನು ನಾವು ಕಂಡಿದ್ದೇವೆ: "ಹೌದು, ಗಾಯ ಹೊಂದಿದ ಆ ಮನುಷ್ಯನಿಗೆ ದಯೆತೋರಿಸಿದ ಸಮಾರ್ಯದವನೇ ನಿಜವಾದ ನೆರೆಯವನು; ಆತನಿಗೆ ದಯೆ ತೋರದ ಯಾಜಕನು ಮತ್ತು ಲೇವಿಯನು ಅವನಿಗೆ ನೆರೆಯವನೆಂದು ಎಣಿಸಬಾರದು. ಆದುದರಿಂದ ಆ ಗಾಯ ಹೊಂದಿದವನು ತಾನು ಗುಣವಾದ ಮೇಲೆ ತನಗೆ ಸಹಾಯ ಮಾಡಿದ ಸಮಾರ್ಯದವನೊಡನೆ ಯಾವಾಗಲೂ ಬಳಕೆಯಲ್ಲಿರಬೇಕು ಮತ್ತು ತನ್ನಂತೆಯೇ ಅವನನ್ನು ಪ್ರೀತಿಸಿ ಅವನ ಸೇವೆಯಲ್ಲಿ ಪ್ರಾಣವನ್ನೂ ಕೊಡಲು ಇಚ್ಛೆಯುಳ್ಳನಾಗಿರಬೇಕು. ತನಗೆ ನೆರೆಯವನಂತೆ ನಡಕೊಳ್ಳದ ಆ ಇಬ್ಬರನ್ನು ತನಗೆ ನೆರೆಯವನೆಂದು ಅವನು ಎಣಿಸಬಾರದು ಮತ್ತು ಅವರನ್ನು ತನ್ನಂತೆಯೇ ಪ್ರೀತಿಸಬಾರದು."

ನಮ್ಮ ಉತ್ತರವೇನಂದರೆ, ಇದು ನಮ್ಮ ಕರ್ತನ ಮಾತಿನ ಭಾಷಾಶೈಲಿಯನ್ನು ತಿರುಚಿಹಾಕಿರುವಂಥದ್ದೆಂಬುದು. ನಿಜ, ಆತನು (ಕರ್ತನು) ಯೆಹೂದ್ಯರಲ್ಲಿ ಸಾಮಾನ್ಯವಾಗಿದ್ದ ಈ ಅಭಿಪ್ರಾಯವನ್ನು ನಿಷ್ಫಲಗೊಳಿಸಲು ಯತ್ನಿಸಿದ್ದನು. ಯಾಕೆಂದರೆ ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ಶತ್ರುವಿನ ವಿಷಯದಲ್ಲಿ ಕಟುವಾಗಿರಬೇಕೆಂಬದು (ಹಗೆಮಾಡಬೇಕೆಂದು) ಯೇಹೂದ್ಯರಲ್ಲಿನ ಗಾದೆಯ ಮಾತಾಗಿತ್ತು. ನೆರೆಯವನು ಎಂಬ ಶಬ್ಧವು ತನಗೆ ಸಮೀಪದಲ್ಲಿರುವವನನ್ನು ಸೂಚಿಸುವದು ಮತ್ತು ಶಾಸ್ತ್ರಿಗಳು ಮತ್ತು ಫರಿಸಾಯರು ಇದನ್ನು ತಮ್ಮ ಪ್ರವೃತ್ತಿಗಳಲ್ಲಿ, ತಮ್ಮ ನಂಬಿಕೆಯಲ್ಲಿ ಮತ್ತು ತಮ್ಮ ಪಂಗಡದ ಸಂಬಂಧಗಳಲ್ಲಿ ತಮ್ಮ

ವಿಷಯದಲ್ಲಿ ಸಹಾನುಭೂತಿಯುಳ್ಳವರಿಗೆ ಇದನ್ನು ಅನ್ವಯ ಮಾಡಿಕೊಳ್ಳುತ್ತಿದ್ದರು. ಹೀಗೆ ಒಬ್ಬ ಫರಿಸಾಯನು ಮತ್ತೊಬ್ಬ ಫರಿಸಾಯನಿಗೆ ಸಂತೋಷವಾಗಿ ಸೇವೆಮಾಡುವನು ಮತ್ತು ಒಬ್ಬ ಶಾಸ್ತ್ರಿಯು ಮತ್ತೊಬ್ಬ ಶಾಸ್ತ್ರಿಗೆ ಸಂತೋಷವಾಗಿ ಸೇವೆ ಮಾಡು–ವನು. ಹೀಗೆ ಅವರು ತಮ್ಮಂಥವರ ವಿಷಯಗಳಲ್ಲಿ ಒಂದೇ ಪಂಗಡಕ್ಕೆ ಸೇರಿದವರೆಂಬ ಸ್ವಾರ್ಥಭಾವದಿಂದ ಧರ್ಮಶಾಸ್ತ್ರದ ಪ್ರಕಾರವಾಗಿ ತಮ್ಮ ನೆರೆಯವನೆಂದು ಅವರು ಮಾನ್ಯಮಾಡಿ, ಇತರ ಬೇರೆ ವರ್ಗದವರನ್ನು ಹೆಚ್ಚು ಕಡಿಮೆ ವಿರೋಧಿಯೆಂದು ಪರಿಗಣಿಸಿ ಅವರನ್ನು ಪ್ರೀತಿಸದೆ ಇದ್ದು ಅಥವಾ ಅವರು ತಮ್ಮನ್ನು ವಿರೋಧಿಸುವವರಾಗಿದ್ದಲ್ಲಿ ಅವರನ್ನು ಹಗೆಮಾಡುತ್ತಿದ್ದರು.

ಕ್ರೈಸ್ತರಾಗಿ ನಾವು ಈ ಸಂಗತಿಯ ವಿಷಯವಾಗಿ ಇದಕ್ಕಿಂತಲೂ ಹೆಚ್ಚು ಉನ್ನತವಾದ ದೃಷ್ಟಿಯುಳ್ಳವರಾಗಿರಬೇಕು. ಈ ಅಭಿಪ್ರಾಯದ ವಿರುದ್ಧವಾಗಿ ನಮ್ಮ ಕರ್ತನು ನುಡಿದಿರುವದನ್ನು ನಾವು ನೆನಸುವರಾಗಿದ್ದೇವೆ. ಆತನು ಹೇಳಿದ್ದು: "ನಿನ್ನ ನೆರೆಯವರನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು ಹೇಳಿದೆ ಎಂಬದಾಗಿ ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನಂದರೆ–ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ, ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುತ್ತಾನೆ." (ಮತ್ತಾಯ 5:43–45) ಯಾವನಾದರೂ ತನ್ನ ಸ್ನೇಹಿತರನ್ನು ಪ್ರೀತಿಸುವದು ಮಾತ್ರವಲ್ಲದೆ ವೈರಿಗಳನ್ನೂ ಸಹ ಪ್ರೀತಿಸುವ ಈ ಮಟ್ಟಕ್ಕೆ ತಲುಪದಿದ್ದರೆ ಅವನು ದೇವರಿಂದ ತನ್ನ ಮಕ್ಕಳೆಂದು ಬಹು ಹೆಚ್ಚುಕಾಲ ಮಾನ್ಯತೆಪಡೆಯಲಾರನು.

ಈ ರಾಜಾಜ್ಞೆಯು ಪೂರ್ಣವಾದ ದೇವರ ಚಿತ್ತವೆಂಬ ಹೇಳಿಕೆ ನೀಡುವದರ ಮೂಲಕ ನಮ್ಮ ಕರ್ತನು ಮೊಟ್ಟ ಮೊದಲು ಇದನ್ನು ಆರಂಬಿಸಿದ್ದನು; ಈ ನಿಯಮವು ಆತನ ಶಿಷ್ಯರಾಗು ವರೆಲ್ಲರನ್ನು ಆಳುವಂತಾಗಬೇಕು. ಈ ರಾಜಾಜ್ಞೆಯು ನಮಗೆ ಕರುಣೆತೋರಿದವರನ್ನು ಮಾತ್ರ ಸಹೋದರರೆಂದು ಪ್ರೀತಿಮಾಡ ಬೇಕೆಂದು ಹೇಳುವದಿಲ್ಲ. ಈ ಮಾತನ್ನು ಹೇಳುವಾಗ ನಮ್ಮ ಕರ್ತನು ಸ್ವಾರ್ಥಪೂರ್ಣವಾದ ಈ 'ಪ್ರೀತಿಯನ್ನು ಖಂಡಿಸಿದ್ದನು: "ನಿಮಗೆ ಪ್ರೀತಿ ತೋರಿಸುವವರನ್ನೇ ಪ್ರೀತಿಸಿದರೆ ಫಲವೇನು? ಭ್ರಷ್ಟರೂ (ಸುಂಕದವರೂ) ಹಾಗೆ ಮಾಡುವದಿಲ್ಲವೇ?" ಆದುದರಿಂದ ತಮ್ಮ ಜೀವವನ್ನು ನಮಗೋಸ್ಕರವಾಗಿ ಅಪಾಯಕ್ಕೆ ಗುರಿಮಾಡಿಕೊಂಡವರನ್ನು ನಾವು ನಮ್ಮ ನೆರೆಯವನಂತೆ ಪ್ರೀತಿ ಮಾಡಬೇಕು ಎನ್ನುವದನ್ನು ಈ ಒಂದು 'ಸಾಮ್ಯದ ಅರ್ಥ ವಿವರಣೆಯೆಂದು ಉಪದೇಶಿಸುವದು ನಮ್ಮ ಕರ್ತನ ಉಪದೇಶ ಕ್ಕಿಂತಲೂ ಬಹು ಕೆಳಮಟ್ಟದ್ದಾಗಿದ್ದು, ಮತ್ತು ಆತನೇ ಹೇಳಿರು ವಂತೆ ಇದು ಪಾಪಿಗಳಲ್ಲಿರುವ ಸಾಧಾರಣವಾದ ಪ್ರವೃತ್ತಿಗೆ ಸರಿಬೀಳುವದು.

ವಿಮೋಚಕನ ಹಿಂಬಾಲಕರಾಗಿ ನಾವು ಬಹು ಉನ್ನತವಾದ ಗುಣಮಟ್ಟವನ್ನು ಹೊಂದಿರಬೇಕು; ಯಾವನು ಸಂಕಷ್ಟದಲ್ಲಿದ್ದು ಅವನಿಗೆ ನಮ್ಮ ಸಹಾಯದ ಅವಶ್ಯಕತೆ ಯಿರುವದೋ ಅವನನ್ನು ನಮ್ಮ ನೆರೆಯನವೆಂದು ಗುರುತಿಸಿ ಅವನನ್ನು ಸಹಾನುಭೂತಿಯಿಂದ ಪ್ರೀತಿಸಿ ಅವನಿಗಾಗಲೀ ಅಥವಾ ಅವಳಿಗಾಗಲೀ ನಮಗೆ ಸಾಧ್ಯವಾದ ಮಟ್ಟಿಗೆ ಅವರಿಗೆ ಸೇವೆ ಮಾಡಲು ಸಿದ್ಧರಿರಬೇಕು. ನಾವೇ ಆ ವ್ಯಕ್ತಿಯ ಕಷ್ಟದ ಪರಿಸ್ಥಿತಿಯಲ್ಲಿ ಇದ್ದಲ್ಲಿ ನಾವು ಆ ವ್ಯಕ್ತಿಯಿಂದ ಹೊಂದಲು ಆಶಿಸುತ್ತಿದ್ದ ಮಟ್ಟಕ್ಕೇ ಅವನಿಗೆ (ಸೇವೆಯನ್ನು) ಮಾಡಬೇಕು. ನಾವು ಈ ಉನ್ನತ ಮಟ್ಟದ ಪ್ರೀತಿ ಅನುಕಂಪ ಸಹಕಾರ ಔದಾರ್ಯಗಳನ್ನು ಯಾವ ಪ್ರಮಾಣದಲ್ಲಿ ಪಡಕೊಂಡಿರುವೆವೋ, ಹಾಗೂ ನಮ್ಮ ಹೃದಯವನ್ನು ಕರುಣಾಭಾವಕ್ಕೆ ಅಧೀನಮಾಡಿಮಾಡಿಕೊಂಡಿರುವೆವೋ, ಅಲ್ಲದೆ ಇವುಗಳನ್ನು ನಮ್ಮ ನಡವಳಿಕೆಯ ಸೂತ್ರವನ್ನಾಗಿ ಮಾಡಿಕೊಂಡಿರುವೆವೋ ಆ ಪ್ರಮಾಣದಲ್ಲಿ ನಾವು ಖಂಡಿತವಾಗಿಯೂ ಅಧಿಕವಾಗಿ ದೇವರ ಹೋಲಿಕೆಯಲ್ಲಿ, ಅಧಿಕವಾಗಿ ಕ್ರಿಸ್ತನ ಸ್ವರೂಪದಲ್ಲಿ ಇರುವೆವು; ಯಾಕೆಂದರೆ ನಮ್ಮ ಪ್ರಿಯ ವಿಮೋಚಕನು ಗಮನಿಸಿ ಹೇಳಿರುವಂತೆ ದೇವರು ಉಪಕಾರ ನೆನಸದವರಿಗೂ ಕರುಣೆಯುಳ್ಳವನಾಗಿದ್ದಾನೆ.

## ನಿನ್ನ ವೈರಿಯನ್ನು ಪ್ರೀತಿಸು

ನಮ್ಮ ಕರ್ತನು ತನ್ನ ಶಿಷ್ಯರಾಗಿ ನಮ್ಮಿಂದ ಕೇಳಿಕೊಳ್ಳು ವದು ನೆರೆಯವನನ್ನು ಪ್ರೀತಿಸುವದಕ್ಕಿಂತಲೂ ಕೇವಲ ಹೆಚ್ಚಿನದನ್ನು. ಕಡೆಯ ಪಕ್ಷದಲ್ಲಿ ನಾವು ನಮ್ಮ ವೈರಿಯ ಬಗ್ಗೆ ಸಹಾನುಭೂತಿಯುಳ್ಳ ಪ್ರೀತಿಯನ್ನು ಹೊಂದಿರಬೇಕು; ಹೀಗಾಗಿ ನಾವು ಕೇವಲ ಅವರಿಗೆ ನಮ್ಮ ನಡೆನುಡಿಗಳ ಮೂಲಕ ಕೇಡುಮಾಡಲು ಯತ್ನಿಸದೆ ನಮ್ಮ ಅಧಿಕಾರದಲ್ಲಿರಬಹುದಾದ ಎಲ್ಲವುಗಳ ಮೂಲಕವಾಗಿ ಅವರಿಗೆ ಸಹಾಯ ಮಾಡಲು ಸಂತೋಷವುಳ್ಳವರಾಗಿ ಅದಕ್ಕೆ ಸಿದ್ಧವಾಗಿರುವೆವು. ಹೀಗಿದ್ದರೂ ನಮ್ಮ ಕರ್ತನನ್ನು ಪ್ರೀತಿಸುವಂತೆ ಇಲ್ಲವೇ ನಮ್ಮ ಸಹೋದರರನ್ನು ಪ್ರೀತಿಸುವಂತೆ ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕೆಂಬದು ನಮ್ಮ ಕರ್ತನ ಮಾತಿನ ಅರ್ಥವೆಂದು ಯಾರಾರೂ ಭಾವಿಸಕೂಡದು. ನಮ್ಮ ದೇವರ ಮೇಲಿನ ಮತ್ತು ನಮ್ಮ ಸಹೋದರರ ಮೇಲಿನ ಪ್ರೀತಿಯು ಅತಿ ಉನ್ನತ ಬಗೆಯದು; ಅಂದರೆ ಅದು ನಮ್ಮ ಪರಲೋಕದ ತಂದೆಯ ಗುಣಸ್ವಭಾವಗಳಲ್ಲಿ ಸೂಚಿತವಾದ ತತ್ವಗಳನ್ನು ಅರಿತುಕೊಂಡು ಅವುಗಳನ್ನು ಪ್ರಸಂಶಿಸುವದರಲ್ಲಿ ಒಳಗೊಂಡಂಥ ಪ್ರೀತಿ; ನಿಜವಾಗಿಯೂ ಆತನವರೆಲ್ಲರೂ ಇದನ್ನು ಅನುಕರಣೆಮಾಡಲು ಪ್ರಯತ್ನಿಸುವರು.

ನಮ್ಮ ವೈರಿಗಳಿಗಾಗಿರುವ ಮತ್ತು ನೆರೆಯವರಲ್ಲಿ ಹಲವರ ಮೇಲಿರುವ ಪ್ರೀತಿಯು ಅವಶ್ಯವಾಗಿ ಅವರ ಗುಣನಡತೆಗಳಿಗೆ ಅನುಗುಣವಾಗಿರಬೇಕು; ಅವರ ನಿರೀಕ್ಷೆಗಳು ಅವರ ಯೋಜನೆಗಳು ನಾವು ಅಳವಡಿಸಿಕೊಂಡಿರುವದಕ್ಕಿಂತಲೂ ವ್ಯತ್ಯಾಸವಾಗಿರುವಂಥವುಗಳು. ನಮ್ಮ ಕರ್ತನಲ್ಲಿದ್ದಂತೆಯೇ ಅವರ ವಿಷಯವಾದ ನಮ್ಮ ಪ್ರೀತಿಯು ಸಹಾನುಬೂತಿಯುಳ್ಳ ದ್ದಾಗಿರಬೇಕು, ಅದು ದೇವರಲ್ಲಿದ್ದ ಪ್ರೀತಿಯಂತಿರಬೇಕು– "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ

ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ದೇವರು ಅನ್ಯೋನ್ಯಭಾವವುಳ್ಳ ಪ್ರೀತಿಯ ಮೂಲಕವಾಗಿ ಲೋಕವನ್ನು ಪ್ರೀತಿಸುವದಿಲ್ಲ; ನಾವುಗಳೂ ಹಾಗೆಯೇ ಮಾಡಬೇಕು. ಆತನಂತೆ ನಾವು ಲೋಕದ ವಿಷಯದಲ್ಲಿ ಸಹಾನುಬೂತಿಯಿಂದ ಕೂಡಿದ ಪ್ರೀತಿಯುಳ್ಳವರಾಗಿ ರಬೇಕು. (ಪರಿಪೂರ್ಣತೆಯಿಂದ) ಬಿದ್ದು ಕೆಟ್ಟುಹೋಗಿರುವ ಲೋಕದ ಸ್ಥಿತಿಯನ್ನು ಮನಗಂಡವರಾಗಿ ಅದನ್ನು ರಕ್ಷಿಸುವ ಸಲುವಾಗಿ, ನೀತಿ ಮತ್ತು ಕರುಣೆಯ ಅನುಸಾರವಾಗಿ ಅದನ್ನು ಸಂತೈಸಲು ನಮ್ಮ ಸಾಮರ್ಥ್ಯದಲ್ಲಿರುವದೆಲ್ಲವನ್ನೂ ಮಾಡಲು ಸಂತೋಷಿಸುವವರಾಗಬೇಕು.

ಧರ್ಮಶಾಸ್ತ್ರದ ಆದೇಶದ ಅನುಸಾರ ಪ್ರೀತಿಗೆ ಒಂದು ಮಿತಿಯಿರುವದಾಗಿ ತೋರುವದು, "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" ಅಂದರೆ ನಮಗಿಂತಲೂ ಉತ್ತಮವಾಗಿ ಅಲ್ಲ. ಆದುದರಿಂದ ಒಬ್ಬ ನೆರೆಯನ ಜೀವವು ಗಂಡಾತರದಲ್ಲಿದ್ದಲ್ಲಿ ಕೇವಲ ನಮ್ಮ ಜೀವವನ್ನೇ ತ್ಯಾಗಮಾಡಿ ಅವನಿಗೆ ಸಹಾಯಮಾಡಲು ಸಾಧ್ಯವಿರುವದು; ಪ್ರೀತಿಯ ವಿಷಯವಾದ ದೈವಿಕ ನಿಯಮಗಳು ಅವನನ್ನು ನಮಗಿಂತಲೂ ಹೆಚ್ಚಾಗಿ ಪ್ರೀತಿಸುವವರಾಗಲು ನಾವು ಅವನ ಜೀವಕ್ಕಾಗಿ ನಮ್ಮ ಜೀವವನ್ನು ತ್ಯಾಗಮಾಡಬೇಕೆಂಬುದನ್ನು ಬಯಸುವದಿಲ್ಲ ಮತ್ತು ಇದು ದೇವರ ನಿಯಮಗಳು ಬಯುಸುವದಕ್ಕಿಂತಲೂ ಅಧಿಕವಾದದ್ದು. ಅದರಂತೆಯೇ ನಮ್ಮ ನೆರೆಯವನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟವನಾಗಿ ಆತನು ತನಗಿಂತಲೂ ನಮ್ಮನ್ನು ಹೆಚ್ಚು ಪ್ರೀತಿಸುವದನ್ನು ನಾವು ಸಹ ಅಪೇಕ್ಷಿಸಬಾರದು. ಹಾಗೇನಾದರೂ ಮಾಡುವದಕ್ಕೆ ಅವನು ಪ್ರಯತ್ನಿಸಿದ್ದೇಯಾದರೆ ಅದನ್ನು ತಡೆಯುವದು, ತನಗೆ ಶಾಶ್ವತವಾದ ಅನಾಹುತವನ್ನು ಮಾಡಿಕೊಳ್ಳದಂತೆ ನೋಡಿಕೊಳ್ಳುವದು, ನಾವು ಆತನಿಗೆ ಸಂತೋಷದಿಂದ ಮಾಡಲಿಚ್ಛಿಸುವದಕ್ಕಿಂತಲೂ ಹೆಚ್ಚಿನದನ್ನು ನಮಗೆ ಅವನು ಮಾಡದಂತೆ ನೋಡಿಕೊಳ್ಳುವದು ನಮ್ಮ ಸೂಕ್ತ ಮನೋಭಾವವಾಗಿರುವದು. ಈ ಒಂದು ನಿರ್ದಿಷ್ಟವಾದ ರೀತಿಯಲ್ಲಿ ನಮಗಾಗಿ ತನ್ನ ಜೀವವನ್ನು ಯಜ್ಞಾರ್ಪಣೆಯನ್ನಾಗಿ ಮಾಡಿಕೊಂಡ ನಮ್ಮ ಕರ್ತನ ವಿಧಾನವು ಧರ್ಮಶಾಸ್ತ್ರವಿಧಿಯು ಕೇಳಿಕೊಳ್ಳುವ ಯಾವ ಸಂಗತಿಗಿಂತಲೂ ಮೀರಿದ್ದಾಗಿರುವದು. ತನ್ನ ಜೀವವನ್ನು ಎಲ್ಲರಿಗೋಸ್ಕರ ಈಡಾಗಿ ಅರ್ಪಿಸಿದುದರಲ್ಲಿ ಆತನು ಧರ್ಮಶಾಸ್ತ್ರವಿಧಿಗಳು ಬಯುಸುವದಕ್ಕಿಂತಲೂ ಹೆಚ್ಚಿನದನ್ನು ಮಾಡಿದ್ದನು. ಈ ಕಾರಣದಿಂದ ಅದನ್ನು ಒಂದು ಯಜ್ಞವೆಂದು ವರ್ಗೀಕರಿಸಲಾಗಿರುವದು. ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ಕೈಗೊಂಡು ನಡೆಯುವದು ಆತನ ಕರ್ತವ್ಯವಾಗಿತ್ತು; ಆದರೆ ಇದನ್ನು ದಾಟಿ ಹೋಗಿ ತನ್ನ ಜೀವವನ್ನು ಮಾನವ ಕುಲಕ್ಕೆ ಈಡು ಬೆಲೆಯನ್ನಾಗಿ ನೀಡಿದಾಗ ಅದು ಒಂದು ಯಜ್ಞವಾಗಿತ್ತು ಮತ್ತು ಒಂದು ಯಜ್ಞವಾಗಿ ಅದು ತಂದೆಯಿಂದ ಮೆಚ್ಚಲ್ಪಟ್ಟು ಇದಕ್ಕೆ ಪ್ರತಿಫಲವಾಗಿ ನಿತ್ಯಜೀವಕ್ಕಿಂತಲೂ ಅಧಿಕವಾದುದನ್ನು ವಿಶೇಷವಾಗಿ ನೀಡಲಾಯಿತು. ಮತ್ತು ಇದೇ ನಿಯಮವು ನಮಗೆ ಅನ್ವಯವಾಗುವದು, ಏಕೆಂದರೆ ಆತನು (ಕ್ರಿಸ್ತನು) ಎಂಥವನಾಗಿದ್ದಾನೋ ನಾವೂ ಅಂಥವರಾಗಿಯೇ ಈ ಲೋಕದಲ್ಲಿದ್ದೇವೆ–ನಾವು ಆತನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕು. – 1 ಯೋಹಾನ 4:17

ಧರ್ಮಶಾಸ್ತ್ರವಿಧಿಗಳು ಈಗಲೂ ಬಯಸುವದೇನಂದರೆ ನಾವು ನಮ್ಮ ನೆರೆಯವನು ನಮಗೆ ಏನು ಮಾಡಬೇಕೆಂದು ಇಚ್ಛಿಸುವೆವೋ ಅದನ್ನೇ ನಾವು ಆತನಿಗೆ ಮಾಡುವದನ್ನು. ಇದಕ್ಕಿಂತಲೂ ಕಡಿಮೆಯಾದುದನ್ನು ನಾವು ಯಾವನಿಗೂ ಮಾಡುವ ಹಾಗಿಲ್ಲ; ಆದರೆ ಕರ್ತನ ಹಿಂಬಾಲಕರಾಗಿ ಅತನಲ್ಲಿದ್ದ ತ್ಯಾಗದ ಮನೋಭಾವನ್ನು ಹೊಂದಿದವರಾಗಿಲಾಗಿ ನಾವು ನಮ್ಮ ಜೀವಿತಗಳನ್ನು ನಮ್ಮ ಸಹೋದರರಿಗಾಗಿ ಸಂತೋಷದಿಂದ ಅರ್ಪಿಸುವವರಾಗಿರುವೆವು. ದೈವಿಕ ಏರ್ಪಾಡಿನ ಅನುಗುಣವಾಗಿ ಈ ನಂಬಿಗಸ್ತರ ಮನೆತನಕ್ಕೆ ಸೇರಿದವರಾದ ಚಿಕ್ಕ ಹಿಂಡನ್ನು ಆಯ್ಕೆಮಾಡಲಾಗುತ್ತಿದ್ದು, ಈಗ ಅವರು ಕ್ರಿಸ್ತನೊಡನೆ ಯಜ್ಞಮಾಡಿಕೊಳ್ಳುವವರಾಗಿ ಕಡೆಯಲ್ಲಿ ಆತನ ರಾಜ್ಯದಲ್ಲಿ ಮತ್ತು ಲೋಕವನ್ನು ಪುನರುಜ್ಜೀವಗೊಳಿಸಿ ಆಶೀರ್ವದಿಸುವ ಮಹಾ ಕಾರ್ಯದಲ್ಲಿ ಆತನೊಡನೆ ಸಹಬಾಧ್ಯರಾಗುವರು. ಧರ್ಮಶಾಸ್ತ್ರವು ಬಯಸುವಂಥವುಗಳ ವಿಷಯದಲ್ಲಿ, ಯಾವ ಜೀವಿಯ ವಿಚಾರದಲ್ಲಿ ನ್ಯಾಯವು ಬಯಸುವದೇನೆಂಬುದರ ವಿಷಯದಲ್ಲಿ, ಅಲ್ಲದೆ ನಾವು ಮಾಡುವ ಯಾವ ಸಂಗತಿಯು ನಮ್ಮ ಯಜ್ಞಾರ್ಪಣೆಯ ಒಂದು ಭಾಗವಾಗುವದೆಂಬ ವಿಷಯ ದಲ್ಲಿಯೂ ಸಹ ಸ್ಪಷ್ಟವಾದ ತಿಳುವಳಿಕೆಯನ್ನು ಹೊಂದಿರುವದು ನಮಗೆ ಅತ್ಯವಶ್ಯಕವಾಗಿರುವದು.

## "ಧರ್ಮಪ್ರಮಾಣವು ನಮ್ಮಲ್ಲಿ ನೆರವೇರಿರುವದು"

ನಮ್ಮ ಕರ್ತನು ಆ ಧರ್ಮೋಪದೇಶಕನಿಗೆ ಕೃಪೆಯ ವಿಷಯವಾದ ಸುವಾರ್ತೆಯನ್ನು ಉಪದೇಶಿಸುವದಕ್ಕೆ ಬದಲಾಗಿ ಧರ್ಮಶಾಸ್ತ್ರದಲ್ಲಿನ ಬೋಧನೆಗಳ ಬಗ್ಗೆ ವಿವರಣೆಯನ್ನು ನೀಡಿದುದನ್ನು ಈ ಪಾಠದ ಆರಂಭದಲ್ಲಿ ನಾವು ಗಮನಿಸಿದ್ದೇವೆ. ಈಗ ಕರ್ತನು ತನ್ನ ಹಿಂಬಾಲಕರಿಗೆ ಧರ್ಮಶಾಸ್ತ್ರ ಮತ್ತು ಸುವಾರ್ತೆಗಳೆರಡನ್ನೂ ಅನ್ವಯಗೊಳಿಸಿರುವನೆಂಬುದನ್ನು ಗಮನಿಸೋಣ. ದೇವರು ಕೇವಲ ಒಂದೇ ಮಾನದಂಡವನ್ನು, ಕೇವಲ ಒಂದೇ ನಿಯಮವಿಧಿಯನ್ನು ಹೊಂದಿರುವನಾಗಿದ್ದು ಅದನ್ನು ಎಂದೂ ರದ್ದುಪಡಿಸುವದಿಲ್ಲ. ಧರ್ಮಶಾಸ್ತ್ರ ಸಂಬಂಧವಾದ ಒಡಂಬಡಿಕೆಯು ತನ್ನ ಉದ್ದೇಶವನ್ನು ಈಡೇರಿಸಿದ ನಂತರ ನಿಜವಾಗಿ ರದ್ದಾಗಿಹೋಯಿತು; ಆದರೆ ಒಡಂಬಡಿಕೆಗೆ ಆಧಾರವಾಗಿರುವ ದೇವರ ನಿಯಮವಿಧಿಗಳು ಎಂದೂ ವಿಫಲವಾಗುವದಿಲ್ಲ. ಯೆಹೂದ್ಯರ ಸಹಿತವಾಗಿ ನಮಗೂ ದೇವರನ್ನು ನಮ್ಮ ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣ ಮನಸ್ಸಿನಿಂದಲೂ ಮತ್ತು ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕೆಂದೂ ಮತ್ತು ನಮ್ಮ ನೆರೆಯವರನ್ನು ನಮ್ಮಂತೆಯೇ ಪ್ರೀತಿಸಬೇಕೆಂದೂ ಆಜ್ಞಾಪಿಸಲ್ಪಟ್ಟಿರುವದು. ಈ ಗುಣಮಟ್ಟವನ್ನು ನಮ್ಮ ಮತ್ತು ಯೆಹೂದ್ಯರ ಎದುರಿನಲ್ಲಿಯೂ ಇಡಲಾಗಿರುವದು. ಯೆಹೂದ್ಯನಿಗೆ ಇದನ್ನು ಕೈಗೊಂಡು ನಡೆಯಲು ಸಾಧ್ಯವಾಗಲಿಲ್ಲ.

ಆತನು ತನ್ನ ನೆರೆಯವನ ವಿಷಯದಲ್ಲಿ ನಡೆದುಕೊಳ್ಳುವದರಲ್ಲಿ ತಾನು ಕಡಿಮೆಯಾಗಿ ಕಂಡುಬಂದಿದ್ದು ಮಾತ್ರವಲ್ಲದೆ ತನ್ನ ಸೃಷ್ಟಿಕರ್ತನ ಕಡೆಗೆ ತೋರಬೇಕಿರುವ ತನ್ನ ಸಂಪೂರ್ಣವಾದ ಪ್ರೀತಿಯ ವಿಷಯದಲ್ಲಿಯೂ ಕಡಿಮೆಯಾಗಿ ಕಂಡುಬಂದಿದ್ದನು. ಇದು ಇತರ ಎಲ್ಲಾ ಪ್ರೀತಿಗಿಂತಲೂ ಮಿಗಿಲಾಗಿರಬೇಕಿದ್ದು ಜೀವಿತದ ಎಲ್ಲಾ ನಡವಳಿಕೆಗಳಲ್ಲೂ ತೋರಿಬರಬೇಕಾಗಿರುವದು.

ಕೇವಲ ನಮ್ಮ ಕರ್ತನಿಗೆ ಮಾತ್ರ ಈ ಪ್ರೀತಿಯನ್ನು ಅದರ ಅಕ್ಷರಾರ್ಥದಲ್ಲಿಯೂ ಮತ್ತು ಭಾವಾರ್ಥದಲ್ಲಿಯೂ ಪರಿಪೂರ್ಣವಾದ ರೀತಿಯಲ್ಲಿ ಕೈಗೊಂಡು ನಡೆಯಲು ಸಾಧ್ಯವಾಗಿತ್ತು ಮತ್ತು ಹಾಗೆಯೇ ಆತನು ನಡೆದಿದ್ದನು. ನಮ್ಮ ಕರ್ತನ ಕಾಲದ ಹಿಂದಿದ್ದ ಯೆಹೂದ್ಯನು ಹೇಗೂ ಧರ್ಮಶಾಸ್ತ್ರನಿಯಮವಿಧಿಗಳ ವಿಷಯದಲ್ಲಿ ಹೆಚ್ಚು ಸೂಕ್ತವಾದ ಮನೋಭಾವವನ್ನು ಅಧಿಕ ಮಟ್ಟದಲ್ಲಿ ಪಡೆದವನಾಗಿದ್ದಾಗ್ಯೂ ಅವುಗಳು ಬಯಸುವ ಮಟ್ಟಕ್ಕೆ ಬರಲಿಲ್ಲವಾದ ಕಾರಣ ಅವನಿಗೆ ನಿತ್ಯಜೀವವನ್ನು ಹೊಂದಲು ಸಾಧ್ಯವಾಗಲಿಲ್ಲ. ನಮ್ಮ ಸ್ಥಿತಿಯು ಬೇರೆಯಾಗಿರುವದು. ನಮ್ಮ ಕರ್ತನು ಧರ್ಮಪ್ರಮಾಣಗಳನ್ನು ಪರಿಪೂರ್ಣವಾಗಿ ಕೈಗೊಂಡು ನಡೆದವನಾಗಿ ತನ್ನ ಜೀವವನ್ನು ಆದಾಮನ ಮತ್ತು ಆತನ ಸಂತತಿಯ ಪರವಾಗಿ ಯಜ್ಞವಾಗಿ ಅರ್ಪಿಸಿಕೊಂಡಿದ್ದನು; ಮತ್ತು ಈ ಅಂಶದ ಬಗ್ಗೆ ತಿಳುವಳಿಕೆ ಹೊಂದಿದವರಾದ ನಾವು ಇದನ್ನು ನಂಬಿಕೆಯಿಂದ ಅಂಗೀಕರಿಸಿಕೊಂಡವರಾಗಿದ್ದು ಕ್ರಿಸ್ತನ ಮೂಲಕವಾಗಿ ದೇವರಿಗೆ ಮಾನ್ಯವಾಗಿ ಒಂದು ಸ್ಥಾನವನ್ನು ಪಡಕೊಂಡವರಾದೆವು; ಹೀಗಾಗಿ ಧರ್ಮಪ್ರಮಾಣವನ್ನು ಅನುಸರಿಸಿ ನಡೆಯಲು ನಾವು ಮಾಡುವ ಅತ್ಯುತ್ತಮ ಪ್ರಯತ್ನಗಳು ಕ್ರಿಸ್ತನು ಅರ್ಪಿಸಿದ ಯಜ್ಞದ ಫಲದ ಮೂಲಕವಾಗಿ ಸಹಾಯಪಡೆದವುಗಳಾಗಿ ದೇವರಿಗೆ ಅಂಗೀಕಾರವಾಗುವ ಹಾಗೆ ಮಾಡಲ್ಪಟ್ಟಿರುವದು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ದೇವರನ್ನು ನಮ್ಮ ಹೃದಯದಿಂದಲೂ ನಮ್ಮ ಪೂರ್ಣ ಪ್ರಾಣದಿಂದಲೂ ನಮ್ಮ ಶಕ್ತಿಯಿಂದಲೂ ನಮ್ಮ ಮನಸ್ಸಿನಿಂದಲೂ ಉತ್ಕೃಷ್ಟವಾಗಿ ಪ್ರೀತಿಸುವ ಮತ್ತು ನಮ್ಮ ನೆರೆಯವನನ್ನು ನಮ್ಮ ಸಾಮರ್ಥ್ಯಾನುಸಾರವಾಗಿ ನಮ್ಮಂತೆಯೇ ಪ್ರೀತಿಸುವ ವಿಷಯದಲ್ಲಿ ನಾವು ಮಾಡುವ ನಮ್ಮ ಅತ್ಯುತ್ತಮ ಪರಿಶ್ರಮಗಳನ್ನು ದೇವರು ಅಂಗೀಕಾರವಮಾಡುವನು. ಆ ನಮ್ಮ ಪರಿಶ್ರಮಗಳಲ್ಲಿನ ನ್ಯೂನ್ಯತೆಗಳನ್ನು ಕ್ರಿಸ್ತನ ಯಜ್ಞದ ಫಲದ ಮೂಲಕವಾಗಿ ಪರಿಪೂರ್ಣಮಾಡಲ್ಪಟ್ಟದ್ದೆಂದು ಎಣಿಸಿ ದೇವರು ಅದನ್ನು ಸ್ವೀಕರಿಸಿಕೊಳ್ಳುವನು. ಅಪೋಸ್ತಲನು ನಮಗೆ ಹೀಗೆ ಹೇಳಿರುವನು: "ಹೀಗಿರಲು ಶರೀರಭಾವಕ್ಕೆ ಅನುಸಾರವಾಗಿ ನಡೆಯದೆ ಪವಿತ್ರಾತ್ಮಾನು ಸಾರವಾಗಿ ನಡೆಯುವವರಾದ [ನಮ್ಮ ಸಾಮರ್ಥ್ಯಾನುಸಾರ ದೈವಿಕ ವಿಧಿನಿಯಮಗಳ ಒಳಾರ್ಥಗಳ ಪ್ರಕಾರ ಕೈಗೊಂಡು ನಡೆಯುವವರಾದ] ನಮ್ಮಲ್ಲಿ ಧರ್ಮಶಾಸ್ತ್ರದ ನಿಯಮವು ನೆರವೇರುವದಕ್ಕೆ ಮಾರ್ಗವಾಯಿತು."

## ಸುವರ್ಣಮಯವಾದ ಪಠ್ಯಭಾಗ

ನಮ್ಮ ಸುವರ್ಣಮಯವಾದ ಪಠ್ಯಭಾಗವು ನಮಗೆ ಅಪೋಸ್ತಲನ ಈ ಹೇಳಿಕೆಯನ್ನು ನಮ್ಮ ನೆನಪಿಗೆ ತರುವದು: "ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು." (1 ಯೋಹಾನ 4:20) ಬೇರೊಂದು ಮಾತಿನಲ್ಲಿ ಹೇಳುವದಾದರೆ, ನಮ್ಮ ಸಹಾನುಬೂತಿ ಮತ್ತು ನಮ್ಮ ಗಮನದ ಅವಶ್ಯಕತೆಯಿರುವ ನಮ್ಮ ಜೊತೆ–ಸೃಷ್ಟಿಗಳ ಕಡೆಗೆ ವ್ಯಕ್ತವಾಗುವ ನಮ್ಮ ಹೃದಯದಲ್ಲಿರುವ ಪ್ರೀತಿಯ ಪ್ರಮಾಣದಲ್ಲಿ ನಾವು ಕಡಿಮೆಯಾಗಿ ಕಂಡುಬಂದಲ್ಲಿ ಅದು ನಮ್ಮ ಸೃಷ್ಟಿಕರ್ತನ ಬಗ್ಗೆ ನಮಗಿರುವ ಪ್ರೀತಿಯು ಕಡಿಮೆಯಾಗಿರುವದೆಂಬದು ಅಡಕವಾಗಿರುವದು. ಇದಕ್ಕೆ ಪ್ರತಿಯಾಗಿ, ಇತರರ ವಿಷಯದಲ್ಲಿ ಕನಿಕರ ಔದಾರ್ಯ ಕರುಣೆ ಇವುಗಳ ಮೂಲಕವಾಗಿ ನಮ್ಮ ಜೊತೆ–ಸೃಷ್ಟಿಗಳ (ಕಷ್ಟಗಳನ್ನು) ಪರಿಹರಿಸುವದರ ಬಗ್ಗೆ, ವಿಶೇಷವಾಗಿ ಒಂದೇ ಮನೆಯವರಂತಿರುವ ನಂಬಿಕೆಯುಳ್ಳವರ ಬಗ್ಗೆ, ನಮಗೆ ಸಾಧ್ಯವಿರುವವುಗಳನ್ನು ಮಾಡುವಲ್ಲಿ ಸಂತೋಷಿಸುವವರಾದಲ್ಲಿ, ಅಲ್ಲದೆ ಇದನ್ನು ಕ್ರಿಸ್ತನ ಅಮೂಲ್ಯವಾದ ರಕ್ತದ ಮೇಲೆ ಭರವಸವಿಟ್ಟವರಾಗಿ ಮಾಡಿದ್ದಲ್ಲಿ, ನಮ್ಮ ಕರ್ತನು ಈ ಮನೋಭಾವವನ್ನು ಮೆಚ್ಚುವವನಾಗಿ ಅದನ್ನು ತನ್ನ ಸ್ವಂತದ್ದಾಗಿ ಅಂಗೀಕರಿಸುವನೆಂಬುದಕ್ಕೆ ಇದು ಒಂದು ಗುರುತಾಗಿರುವದು. ಕರುಣೆಯುಳ್ಳ ಇಂಥಾ ಕರ್ತನ ಹಿಂಬಾಲಕರು ಕರ್ತನ ಹಸ್ತದಿಂದ ಕರುಣೆಯನ್ನು ಹೊಂದುವರು. ಅವರೊಂದಿಗೆ ಆತನು ನಯವಿನಯದಿಂದ ನಡಕೊಳ್ಳುವನು. ತಮಗೆ ತಪ್ಪುಮಾಡಿದವರ ವಿಷಯದಲ್ಲಿ ಅವರು ಔದಾರ್ಯದ ಮತ್ತು ಕ್ಷಮಿಸುವ ಮನೋಭಾವವನ್ನು ಹೊಂದಿರುವಷ್ಟರ ಪ್ರಮಾಣದಲ್ಲಿ ಅವರ ದೋಷಬಲಹೀನತೆಗಳನ್ನು ಕರ್ತನೂ ಕ್ಷಮಿಸುವವನಾಗಿರುವನು.

# ಉತ್ತಮ ಭಾಗವನ್ನು ಆರಿಸಿಕೊಳ್ಳುವದು

**ಹಾರ್ವೆಸ್ಟ್ ಗ್ಲೀನಿಂಗ್ಸ್, ಗ್ರಂಥ 2 ಪುಟ 80** [**ಆದುಕೊಂಡದ್ದು**]

**ಮಾರ್ಥಳೇ, ಮಾರ್ಥಳೇ, ನೀನು ಅನೇಕ ವಿಷಯವಾಗಿ ಚಿಂತೆಯಲ್ಲಿಯೂ ಗಡಿಬಿಡಿಯಲ್ಲಿಯೂ ಸಿಕ್ಕಿಕೊಂಡಿದ್ದೀ.**
**ಕೆಲವು ಮಾತ್ರ ಬೇಕಾದದ್ದು, ಅಥವಾ ಒಂದೇ, ಮರಿಯಳು ಆ ಉತ್ತಮ ಭಾಗವನ್ನು ಆರಿಸಿಕೊಂಡಿದ್ದಾಳೆ;**
**ಅದು ಆಕೆಯಿಂದ ತೆಗೆಯಲ್ಪಡುವದಿಲ್ಲ ಎಂದು ಉತ್ತರಕೊಟ್ಟನು – ಲೂಕ 10:41–42**

ಪ್ರತಿದಿನವೂ ಪ್ರತಿಗಳಿಗೆಯೂ ಪರಸ್ಪರ ವಿರುದ್ಧವಾದ ಹಿತಾಸಕ್ತಿಯುಳ್ಳ ಸಂಗತಿಗಳು ಮತ್ತು ಸಲಹೆಗಳು ನಮಗೆ ಎದುರಾಗುತ್ತಿರುವವು. ಇವುಗಳನ್ನು ಸಕ್ರಿಯವಾಗಿ ಆರಿಸಿಕೊಳ್ಳುವದರ ಮೂಲಕವಾಗಲೀ ಅಥವಾ ಅದು ತಾನಾಗಿಯೇ ಲಭಿಸುವದೆಂದು ನಿರಾಸಕ್ತರಾಗಿ ಸುಮ್ಮನಿರುವದರ ಮೂಲಕವಾಗಲೀ ನಾವು ಇವುಗಳಲ್ಲಿ ಒಂದನ್ನು ಸತತವಾಗಿ

ಆದುಕೊಳ್ಳುತ್ತಿರುವೆವು. ಈ ಹಲವು ಬಗೆಯ ಪ್ರಸ್ತಾಪಗಳಲ್ಲಿ ಸೂಕ್ತವಾಗಿರುವದನ್ನು ಆರಿಸಿಕೊಳ್ಳುವುದರ ಬೆಲೆಯನ್ನು ಯೌವನಸ್ಥರು ಅಪರಿಪೂರ್ಣವಾದ ರೀತಿಯಲ್ಲಿ ಅರ್ಥಮಾಡಿ ಕೊಂಡು ಮನವರಿಕೆಮಾಡಿಕೊಂಡಿರುವರು. ವರುಷಗಳು ಹೆಚ್ಚು ಹೆಚ್ಚಾಗಿ ಮುನ್ನಡೆದಂತೆಲ್ಲಾ ಜೀವಿತಾನುಭವಗಳ ಮೂಲಕವಾಗಿ ಪಾಠವನ್ನು ಕಲಿತವರಾಗಿ ನಾವು ನ್ಯಾಯವಾದ ನಿರ್ಣಯಕ್ಕೆ ಬರುವ ವಿಧವನ್ನು ಕಲಿತಿರುತ್ತೇವೆ. ಅಂದರೆ ನಾವು ಸರಿಯಾಗಿ ಆಯ್ಕೆಮಾಡುವಂಥದ್ದರ ಮಹತ್ವವನ್ನು ಕಲಿತಿರುತ್ತೇವೆ; ನಮ್ಮ ಮುಂದಿನ ಜೀವಿತಗಳು ನಮ್ಮನ್ನೇ ಅಧಿಕವಾಗಿ ಅವಲಂಬಿಸಿ ಕೊಂಡಿರುವದು. ನಮ್ಮಲ್ಲಿ ಉಂಟಾಗುವ ಒಳ್ಳೆಯ ಅಥವಾ ಕೆಟ್ಟ ಆಂತರಿಕ ಪ್ರಚೋದನೆ/ಪ್ರೇರಣೆಗಳನ್ನು ಮತ್ತು ದೊರೆಯುವ ಅವಕಾಶಗಳನ್ನು ಅಂಗೀಕರಿಸಿಕೊಂಡವರಾಗಿಯೋ ಅಥವಾ ನಿರಾಕರಿಸುವವರಾಗಿಯೋ ನಾವು ನಮ್ಮ ಜೀವಿತಗಳಿಗೆ ಕೊಡುವ ಆಕಾರಗಳ ಮೇಲೆ ನಮ್ಮ ಮುಂದಿನ ಜೀವಿತಗಳು ಅವಲಂಬಿತವಾಗಿರುತ್ತವೆ.

ಬಹು ಮಟ್ಟಿಗೆ ಇದು ಎಲ್ಲಾ ಕಾಲಗಳಲ್ಲಿಯೂ ಸತ್ಯವಾಗಿರುವದಾದರೂ ನಮ್ಮ ದಿನದಲ್ಲಿ ಇದು ಎಂದಿಗಿಂತಲೂ ಅಧಿಕ ಸತ್ಯವಾಗಿರುವದು, ಕಾರಣ ನಮ್ಮ ಪೂರ್ವಜರಿಗೆ ಇದ್ದುದಕ್ಕಿಂತಲೂ ಅಧಿಕವಾದ ಅವಕಾಶಗಳಿರುವ ಕಾಲಗಳಲ್ಲಿ ನಾವು ಜೀವಿಸುತ್ತಿದ್ದೇವೆ. ಹೊಸ ಆವಿಷ್ಕಾರಗಳು ಯಂತ್ರಗಳು ಟಪಾಲು ತಂತಿಸಂದೇಶ ದೂರವಾಣಿ ಮುದ್ರಣಶಾಲೆಗಳು ನಮ್ಮ ಅವಕಾಶಗಳನ್ನು–ಅವು ಒಳ್ಳೆಯದಕ್ಕಾಗಲಿ ಮತ್ತು ಕೆಟ್ಟದ್ದಕ್ಕಾಗಲಿ– ಅನೇಕ ವಿಧದಲ್ಲಿ ಹೆಚ್ಚುಗೊಳಿಸಿರುವವು. ಹೀಗಾಗಿ ನಮಗಾಗಿರುವ ಅನುಭವಗಳು ಮತ್ತು ದೊರೆತಿರುವ ಅವಕಾಶಗಳು ನಿಜವಾಗಿಯೂ ನಮ್ಮ ಪೂರ್ವಜರಿಗೆ ಇದ್ದುದಕ್ಕಿಂತಲೂ ಏಳರಷ್ಟಾಗಿರುವದು. ಎಲ್ಲಾ ಮನುಷ್ಯರ ಮೇಲೆ, ಮತ್ತು ವಿಶೇಷವಾಗಿ ದೈವಿಕ ಸತ್ಯಾರ್ಥಗಳ ಮೂಲಕ ಜ್ಞಾನಪ್ರಕಾಶವನ್ನು ಪಡೆದವರಾಗಿ, ದೇವರ ಮನೆತನದವರಾಗುವದಕ್ಕೆ ಅಂಗೀಕರಿಸಲ್ಪಟ್ಟು, ದೇವರ ರಾಯಭಾರಿಗಳಾಗಿ ಕಾರ್ಯ ಭಾರವನ್ನು ಹೊಂದಿದ್ದು ಪರಲೋಕದ ತಂದೆಯನ್ನು ಮಹಿಮೆಪಡಿಸುವ ಸಲುವಾಗಿ ತಮ್ಮ ಬೆಳಕನ್ನು ಜನರ ಮುಂದೆ ಪ್ರಕಾಶಿಸುವವರಾದ ನಮ್ಮ ಮೇಲೆ ಎಂಥಾ ಒಂದು ಜವಾಬ್ದಾರಿಯನ್ನು ಇದು ಹೊರಿಸಿರುವದಲ್ಲವೇ!

## ಒಳ್ಳೆಯ, ಉತ್ತಮವಾದ ಮತ್ತು ಅತ್ಯುತ್ತಮವಾದ ಆಯ್ಕೆಗಳು

ನಮ್ಮ ಪಠ್ಯಭಾಗವು ಎರಡು ಒಳ್ಳೆಯ ಸಂಗತಿಗಳಲ್ಲಿ ಒಂದನ್ನು ಆಯ್ಕೆಮಾಡುವ ಬಗ್ಗೆ ಉಲ್ಲೇಖಿಸಿದ್ದು, ನಿಜವಾಗಿಯೂ ಕರ್ತನವರಿಗೆ ಇದು ಒಳ್ಳೆಯ ಅಥವಾ ಉತ್ತಮವಾದುದನ್ನು ಆಯ್ಕೆಮಾಡಿಕೊಳ್ಳಲು ತಿಳಿಸುತ್ತದೆ. ಆದುದರಿಂದ ನಮ್ಮ ಪಠ್ಯಭಾಗದಲ್ಲಿನ ಚಿಂತನೆಯು ಪ್ರಾಮಾಣಿಕರಾಗಿ ಕರ್ತನ ಜನರಾಗುವವರೆಲ್ಲರಿಗೆ ಬಲವಾದ ರೀತಿಯಲ್ಲಿ ವಿಶೇಷವಾಗಿ ಅನ್ವಯವಾಗುವಂತೆ ಕಾಣಬರುತ್ತದೆ. ಮಾರ್ಥಳು ಒಳ್ಳೆಯ ಭಾಗವನ್ನು ಆಯ್ಕೆಮಾಡಿಕೊಂಡಳು, ಆಕೆಯು ನಿಜವಾಗಿಯೂ "ಜಾಗ್ರತೆ ಬೇಕಾದಲ್ಲಿ ಆಲಸ್ಯವಾಗಿರದೆ ಆಸಕ್ತರಾಗಿದ್ದು ಕರ್ತನ ಸೇವೆಮಾಡುವವರಾಗಿರ್ರಿ." ಎಂಬ ಮನಃಸ್ಥಿತಿಯಲ್ಲಿದ್ದು ತಿದ್ದುಪಾಟಿಗೆ ದೂರವಾಗಿ ಕರ್ತನಿಂದ ಉತ್ಕೃಷ್ಟವಾದ ರೀತಿಯಲ್ಲಿ ಮೆಚ್ಚಿಸಿಕೊಂಡಿದ್ದಳೆಂಬುದು ನಮಗೆ ಖಚಿತವಾಗಿರುವದು. ಬಹುಶಃ ಮಾರ್ಥಳು ಮನೆಯಲ್ಲಿ ಸರಿಯಾದ ರೀತಿಯಲ್ಲಿ ಅತಿಥಿಸತ್ಕಾರ ಮಾಡುವದರಲ್ಲಿ ತನ್ನ ತಂಗಿಯ ಉದಾಸೀನತೆಯ ಬಗ್ಗೆ ಆಲೋಚಿಸಿ ತಾನು ಅದಕ್ಕೆ ಗುಣಗುಟ್ಟದಿದ್ದಲ್ಲಿ ನಮ್ಮ ಕರ್ತನು ಈ ಇಬ್ಬರು ಸಹೋದರಿಯಲ್ಲಿನ ವ್ಯತ್ಯಾಸವನ್ನು ಹೇಳಿ ತಾನು ಮರಿಯಳು ಆದುಕೊಂಡ ಮಾರ್ಗವನ್ನು ವಿಶೇಷವಾಗಿ ಅನುಮೋದಿಸುವ ಸಂದರ್ಭವು ಬರುತ್ತಿರಲಿಲ್ಲ. ಇಬ್ಬರು ಸಹೋದರಿಯರನ್ನೂ ಪ್ರಸಂಶಿಸಿದ್ದ ನಮ್ಮ ಕರ್ತನು ಮಾರ್ಥಳಿಗೆ ತಾನು ಆದುಕೊಂಡ ಮಾರ್ಗವು ಖಂಡಿತವಾಗಿಯೂ ಅಮೂಲ್ಯವಾಗಿರುವಂಥದ್ದೂ ಮತ್ತು ಖಂಡಿತವಾಗಿಯೂ ಮೆಚ್ಚಿಗೆಯಾಗಿರುವದಾಗಿಯೂ ಆಗಿದ್ದರೂ ಮರಿಯಳು ಆದುಕೊಂಡದ್ದು ಇನ್ನೂ ಅಧಿಕವಾಗಿ ಮೆಚ್ಚಿಸಿಕೊಳ್ಳುವಂಥ ದ್ದೆಂಬುದನ್ನು ಆಕೆಗೆ ತೊರಿಸಿಕೊಡಲು ಈ ಅವಕಾಶವನ್ನು ಬಳಸಿಕೊಂಡಿದ್ದನು. ಮಾರ್ಥಳು ಕರ್ತನನ್ನು ಪ್ರೀತಿಸಿದ್ದಳು ಹೀಗಾಗಿ ಅವಳು ಆತನಿಗೆ ಉಪಚಾರ ಮಾಡಬೇಕೆಂದಿದ್ದಳು; ಮರಿಯಳು ಕರ್ತನನ್ನು ಮತ್ತು ಕರ್ತನು ಆಶಿಸುತ್ತಿದ್ದ ಮತ್ತು ಮಾತನಾಡಲು ಸಂತೋಷಿಸುತ್ತಿದ್ದ ವಿಷಯಗಳನ್ನು ಎಷ್ಟು ಪ್ರೀತಿಸಿದ್ದಳೆಂದರೆ ಆತನ ಜೊತೆಯಲ್ಲಿ ಮತ್ತು ಅನ್ಯೋನ್ಯತೆಯಲ್ಲಿ ಇರುವದರ ಸಂತೋಷವನ್ನು ಬಿಟ್ಟುಕೊಡಲು ಆಕೆಗೆ ಸಾಧ್ಯವಾಗುತ್ತಿರಲ್ಲಿಲ್ಲ. ಕರ್ತನ ಗೌರವಕ್ಕಾಗಿ ಏರ್ಪಡಿಸಿದ್ದ ಔತಣಕೂಟವನ್ನು ಸಿದ್ಧಮಾಡುವಲ್ಲಿ ತನ್ನ ಅಕ್ಕನ ಜೊತೆಗೂಡುವದನ್ನು ಇಷ್ಟಪಟ್ಟಿದ್ದಲ್ಲಿ ಆಕೆಯು ಇನ್ನೂ ಹೆಚ್ಚಿನದನ್ನು ಮಾಡಬಹುದಿತ್ತು. ಕರ್ತನು ನೀಡುತ್ತಿದ್ದ ಆತ್ಮಿಕ ಆಹಾರದ ಬಗ್ಗೆ ಮರಿಯಳು ಮಾರ್ಥಳಿಗಿಂತಲೂ ಹೆಚ್ಚಾಗಿ ಮನವರಿಕೆಮಾಡಿಕೊಂಡಿದ್ದಳು. ಅದು ಯಾವ ಬಗೆಯಲ್ಲಿತ್ತೆಂದರೆ, ಸಮಾರ್ಯಕ್ಕೆ ಹತ್ತಿರವಿದ್ದ ಬಾವಿಯ ಬಳಿಯಲ್ಲಿ ತನ್ನ ಶಿಷ್ಯರು "ಗುರುವೇ, ತಿನ್ನು" ಎಂದು ತನಗೆ ಪ್ರಾರ್ಥಿಸಿಕೊಂಡಾಗ "ನಿಮಗೆ ತಿಳಿಯದಂಥ ಆಹಾರವು ನನಗುಂಟು" ಎಂದು ಅವರಿಗೆ ಉತ್ತರಿಸಿ, ಪುನಃ "ನನ್ನನ್ನು ಕಳುಹಿಸಿದಾನ ಚಿತ್ತದಂತೆ ಮಾಡಿ ಆತನ ಕೆಲಸಗಳನ್ನು ಪೂರೈಸುವದೇ ನನ್ನ ಆಹಾರವು" ಎಂದು ಹೇಳಿದ ಬಗೆಯಲ್ಲಿತ್ತು.

ಈಗಾಗಲೇ ಕರ್ತನನ್ನು ಆಯ್ಕೆಮಾಡಿಕೊಂಡವರಾಗಿ, ಕೃಪಾಪೂರ್ಣವಾದ ವಾಗ್ದಾನಗಳನ್ನು ಆಯ್ಕೆಮಾಡಿಕೊಂಡ ವರಾಗಿ, ನೀತಿಯನ್ನು ಆಯ್ಕೆಮಾಡಿಕೊಂಡವರಾಗಿ, ಮತ್ತು ಹೀಗೆ ಪಾಪವನ್ನು ಮತ್ತು ಸೈತಾನನನ್ನು ಹಾಗೂ ಲೋಕವನ್ನು ಅಲ್ಲದೆ ಸ್ವಾರ್ಥವನ್ನು ನಿರಾಕರಿಸುವದನ್ನು ಆಯ್ಕೆಮಾಡಿಕೊಂಡ ವರಾಗಿರುವ ಇಂಥವರಿಗೆ ನಮ್ಮ ಕರ್ತನು ಮಾರ್ಥಳಿಗೆ ಹೇಳಿದ ಮಾತುಗಳಲ್ಲಿ ಒಂದು ಪಾಠವಿರುವದು. ಹೀಗೆ ಈ ಎಲ್ಲಾ ವಿಧದಲ್ಲಿ ಒಳ್ಳೆಯದನ್ನು ಆಯ್ಕೆಮಾಡಿಕೊಂಡಿರುವ ನಮಗೆ ಕರ್ತನ ದೃಷ್ಟಿಯಲ್ಲಿ ಒಳ್ಳೆಯದವುಗಳ ಜೊತೆಯಲ್ಲಿ ಉತ್ತಮವಾದವುಗಳು ಮತ್ತು ಅತ್ಯುತ್ತಮವಾದವುಗಳು ಇರುವದೆಂಬುದನ್ನು ನಾವು ತಿಳಿದಿರಬೇಕು. ಇಲ್ಲಿರುವ ಪಾಠವೇನಂದರೆ ಕರ್ತನ ಸೇವೆಯಲ್ಲಿ

ಆತ್ಮಿಕ ಮತ್ತು ಲೌಕಿಕ ವಿಷಯಗಳಿಗಾಗಿ ಪರಿಶ್ರಮಿಸುವದು ಸರಿಯಾದವುಗಳೂ ಪ್ರಸಂಶಾರ್ಹವಾದವುಗಳೂ ಆಗಿ ನಮ್ಮ ಕರ್ತನಿಂದ ಮೆಚ್ಚಿಸಿಕೊಳ್ಳುವಂತದ್ದಾಗಿದ್ದರೂ, ಅದೇ ಸಮಯದಲ್ಲಿ ಕರ್ತನು ಇನ್ನೂ ಹೆಚ್ಚಾಗಿ ಮೆಚ್ಚಬಹುದಾದ ಕೆಲವು ಸಂಗತಿಗಳಿರುವದೆಂಬದು. ನೀತಿಗೆ ಹಸಿದುಬಾಯಾರಿದವರನ್ನು, "ಅತನ ಮಾತುಗಳನ್ನು ಆಹಾರಮಾಡಿಕೊಂಡವರನ್ನು", "ತನ್ನ ಪಾದಗಳ ಬಳಿಯಲ್ಲಿ ಕುಳಿತುಕೊಳ್ಳುವವರನ್ನು" ತನ್ನ ಮಹಿಮೆಯುಳ್ಳ ಯೋಜನೆಗಳಲ್ಲಿ ಉಲ್ಲಾಸಿಸುವವರನ್ನು ಮತ್ತು ಅವುಗಳು ಪ್ರಕಟವಾಗುವಾಗ ಉಂಟಾಗುವ ಪ್ರಕಟಣಾ ಪ್ರಭೆಯಲ್ಲಿ ಆನಂದಿಸುವರು ಈ ಎಲ್ಲರನ್ನು ಆತನು ಬಹುವಾಗಿ ಮೆಚ್ಚುವನು.

ಜೀವಿತದ ಸಂಗತಿಗಳೆಲ್ಲವುಗಳಲ್ಲಿ ಸರಿಯಾದವುಗಳನ್ನು ಆಯ್ಕೆಮಾಡುವದರ ಮತ್ತು ಇವುಗಳಲ್ಲಿ ಆಗುವ ಅಲ್ಪವಾದ ತಪ್ಪುಗಳೂ ಜೀವಿತದ ಮುಂದಿನ ಸಂಗತಿಗಳೆಲ್ಲವುಗಳ ಮೇಲೆ ದುಷ್ಪರಿಣಾಮ ಬೀರುವದೆಂಬುದನ್ನು ಅರಿತುಕೊಳ್ಳುವದರ ಪ್ರಾಮುಖ್ಯತೆಯ ಜೊತೆಗೆ ನಾವು ಮನವರಿಕೆಮಾಡಿಕೊಡಲು ಬಯಸುವ ಒಂದು ವಿಶೇಷ ಪಾಠವೇನಂದರೆ ಆತನ ಸೇವೆಯಲ್ಲಿ ಕ್ರಿಯಾಶಿಲರಾಗಿರಬೇಕೆಂಬದು. ಇದು ಕರ್ತನ ಮೇಲಿರುವ ನಮ್ಮ ಪ್ರೀತಿಯ ಗುರುತಾಗಿರುವದು ಮಾತ್ರವಲ್ಲದೆ ಪ್ರಾರ್ಥನೆ ಮತ್ತು ಆತನ ವಾಕ್ಯಗಳ ಅಧ್ಯಯನದ ಮೂಲಕವಾಗಿ ಆತನೊಡನೆ ಅನ್ಯೋನ್ಯವಾಗಿರುವದನ್ನು ನಾವು ಶ್ರೇಷ್ಠವೆಂದು ಎಣಿಸುವೆವೆಂಬುದಕ್ಕೆ ಇದು ಇನ್ನೂ ಒಂದು ಉನ್ನತವಾದ ಗುರುತಾಗಿ ತೋರಿಬರುವದು. ಕರ್ತನ ಪಾದಗಳ ಬಳಿಯಲ್ಲಿ ಕುಳಿತುಕೊಂಡು ಕೇಳಲು ಮರಿಯಳು ತನ್ನ ಸಮಯಗಳೆಲ್ಲವನ್ನೂ ಕಳೆಯುತ್ತಿರಲಿಲ್ಲ; ಅದರೆ ಈ ವಿಧದ ಅನುಕೂಲಕರವಾದ ಅವಕಾಶವು ದೊರೆತಾಗ ಆಕೆಯು ಅದನ್ನು ಬಿಟ್ಟುಕೊಡುತ್ತಿರಲಿಲ್ಲ. ಆಕೆ ಅದನ್ನು ಆಯ್ಕೆಮಾಡಿಕೊಂಡಳು, ಆಕೆ ಅದನ್ನು ಪಡಕೊಂಡಿದ್ದಳು, ಆಕೆಯು ಇದರೊಂದಿಗೆ ಆಶೀರ್ವಾದವನ್ನೂ ಹೊಂದಿದ್ದಳು ಮತ್ತು ನಂತರದ ಕಾರ್ಯಗಳಿಗೆ ಆಕೆಯು ಉತ್ತಮವಾದ ರೀತಿಯಲ್ಲಿ ಸಿದ್ಧಳಾಗಿದ್ದಳೆಂಬುದಕ್ಕೆ ಸಂದೇಹವಿರಲಿಲ್ಲ. ಕರ್ತನ ಜನರ ವಿಷಯದಲ್ಲಿಯೂ ಹೀಗೆಯೇ ಇರಬೇಕು; ಕರ್ತನ ಅನ್ಯೋನ್ಯತೆಯಲ್ಲಿರಲು ತೆಗೆದುಕೊಂಡ ಕಾಲವನ್ನು ಮತ್ತು ಆತನ ವಾಕ್ಯಗಳನ್ನು ಅಧ್ಯಯನ ಮಾಡುವದರಲ್ಲಿ ಕಳೆದ ಸಮಯಗಳನ್ನು ವ್ಯರ್ಥವೆಂದು ಯೋಚಿಸಬಾರದು. ಪ್ರತಿಯಾಗಿ ಅವರು ಹೀಗೆ ಒಡೆಯನ ಪಾದಗಳ ಬಳಿಯಲ್ಲಿ ಆತನ ಮಾತುಗಳನ್ನು ಮತ್ತು ಆತನ ಆತ್ಮವನ್ನು ಪಾನಮಾಡುವದರಲ್ಲಿ ಕಾಲ ಕಳೆಯುವದು (ಕರ್ತನ) ಸೇವೆಯಲ್ಲಿ ಬರುವ ಪರಿಶೋಧನೆಗಳನ್ನು ಎದುರಿಸಲು ಸಿದ್ಧಗೊಳಿಸುವದೆಂಬುದನ್ನು ಅವರು ತಿಳುಕೊಳ್ಳಬೇಕು. ಅಲ್ಲದೆ ಇವು ಕರ್ತನ ಸೇವೆಯಲ್ಲಿನ ಇನ್ನೂ ವಿವೇಕಪೂರ್ಣವಾದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಿದ್ಧಗೊಳಿಸುವ ದೆಂಬುದನ್ನೂ ಅವರು ಅರಿತುಕೊಳ್ಳಬೇಕು. ಇಂಥಾ ಒಂದು ವಿಧಾನವು ಕರ್ತನಿಗೆ ಮೆಚ್ಚಿಗೆಯಾಗಿರುವದು. ನಾವು ಉತ್ತಮವಾದ ಭಾಗವನ್ನು ಆಯ್ಕೆಮಾಡಿಕೊಳ್ಳೋಣ, ನಮ್ಮ ಕರ್ತನಿಗೆ ಅತಿ ಸಂತೋಷವಾಗುವ ಭಾಗವನ್ನು ಆರಿಸಿಕೊಳ್ಳುವವರಾಗೋಣ.

ಪ್ರಿಯ ಕರ್ತನೇ, ಓಹ್, ನಮ್ಮ ಜೀವಿತಗಳೂ ಹೀಗೆಯೇ ಇರಲಿ,
ಬಿರುಗಾಳಿಯು ಬೀಸಿದಾಗ ಇದರ ಪರಿಮಳವು
ಸುಗಂಧ ವಾಸನೆಯಾಗಿ ಹರಿದು ಬರಲಿ!

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಯೂದಾಯ | ಮಾದರಿ ಪ್ರಾರ್ಥನೆಯನ್ನು ಪುನಃ ಉಪದೇಶಿಸುವದು; ಬೇಡಿಕೊಳ್ಳುವದರಲ್ಲಿ ಪಟ್ಟುಹಿಡಿಯುವದು | –– | –– | 11:1–13 | –– |
| | ಬಹುಶಃ ಯೂದಾಯ | ಸುಳ್ಳು ಅಪಾದನೆಯನ್ನು ತಪ್ಪೆಂದು ರುಜುವಾತುಪಡಿಸಿದುದು; ಆ ಸಂತತಿಯು ಖಂಡನಾರ್ಹವೆಂಬುದನ್ನು ತೋರಿಸುವದು. | –– | –– | 11:14–36 | –– |

## ಲೂಕ 11:1–36

ಆತನು ಒಂದಾನೊಂದು ಸ್ಥಳದಲ್ಲಿ ಪ್ರಾರ್ಥನೆಮಾಡಿ ಮುಗಿಸಿದಾಗ ಆತನ ಶಿಷ್ಯರಲ್ಲಿ ಒಬ್ಬನು ಆತನಿಗೆ–ಸ್ವಾಮೀ, ಯೋಹಾನನು ತನ್ನ ಶಿಷ್ಯರಿಗೆ ಕಲಿಸಿದ ಹಾಗೆ ನಮಗೂ ಪ್ರಾರ್ಥನೆ ಮಾಡುವದನ್ನು ಕಲಿಸು ಎಂದು ಕೇಳಿದನು. ಅದಕ್ಕಾತನು–ನೀವು ಪ್ರಾರ್ಥಿಸುವಾಗ–ತಂದೆಯೇ, ನಿನ್ನ ನಾಮವು ಪರಿಶುದ್ಧವೆಂದು ಎಣಿಸಲ್ಪಡಲಿ. ನಿನ್ನ ರಾಜ್ಯವು ಬರಲಿ. ನಮ್ಮ ಅನುದಿನದ ಆಹಾರವನ್ನು ಪ್ರತಿದಿನವೂ ದಯಪಾಲಿಸು. ನಮಗೆ ತಪ್ಪು ಮಾಡಿರುವ ಪ್ರತಿಯೊಬ್ಬನನ್ನು ನಾವು ಕ್ಷಮಿಸುತ್ತೇವಾದ್ದರಿಂದ ನಮ್ಮ ಪಾಪಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸಬೇಡ ಎಂದು ಹೇಳಿರಿ ಅಂದನು.

ಮತ್ತು ಅವರಿಗೆ ಹೇಳಿದ್ದೇನಂದರೆ–ನಿಮ್ಮಲ್ಲಿ ಒಬ್ಬನಿಗೆ ಸ್ನೇಹಿತನಿದ್ದಾನೆ ಎಂದು ಹೇಳೋಣ. ಅವನು ಸರುಹೊತ್ತಿನಲ್ಲಿ ಆ ಸ್ನೇಹಿತನ ಬಳಿಗೆ ಹೋಗಿ–ಸ್ನೇಹಿತನೇ, ನನಗೆ ಮೂರು

ರೊಟ್ಟಿಗಳನ್ನು ಕಡವಾಗಿ ಕೊಡು. ನನ್ನ ಸ್ನೇಹಿತರಲ್ಲಿ ಒಬ್ಬನು ಎಲ್ಲಿಗೋ ಪ್ರಯಾಣವಾಗಿ ನನ್ನ ಬಳಿಗೆ ಬಂದಿದ್ದಾನೆ; ಅವನಿಗೆ ಊಟಮಾಡಿಸುವದಕ್ಕೆ ನನ್ನಲ್ಲಿ ಏನೂ ಇಲ್ಲ ಎಂದು ಕೇಳಲು ಆ ಸ್ನೇಹಿತನು–ನನಗೆ ತೊಂದರೆಕೊಡಬೇಡ; ಈಗ ಕದಹಾಕಿ ಅದೆ; ನನ್ನ ಚಿಕ್ಕ ಮಕ್ಕಳು ನನ್ನ ಕೂಡ ಮಲಗಿದ್ದಾರೆ; ನಾನು ಎದ್ದು ನಿನಗೆ ಕೊಡುವದಕ್ಕಾಗುವದಿಲ್ಲ ಎಂದು ಒಳಗಿನಿಂದ ಉತ್ತರಕೊಟ್ಟರೂ ಕೊಡಬಹುದು. ಆದರೆ ಸ್ನೇಹದ ನಿಮಿತ್ತವಾಗಿ ಎದ್ದು ಕೊಡದೆ ಇದ್ದರೂ ಅವನ ಕಾಟದ ದೆಸೆಯಿಂದ ಎದ್ದು ಬಂದು ಕೇಳಿದಷ್ಟು ಅವನಿಗೆ ಕೊಡುವನೆಂದು ನಿಮಗೆ ಹೇಳುತ್ತೇನೆ. ಹಾಗೆಯೇ ನಾನು ನಿಮಗೆ ಹೇಳುವದೇನಂದರೆ–ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; ಹುಡುಕಿರಿ, ನಿಮಗೆ ಸಿಕ್ಕುವದು; ತಟ್ಟಿರಿ, ನಿಮಗೆ ತೆರೆಯುವದು. ಯಾಕಂದರೆ ಬೇಡಿಕೊಳ್ಳುವ ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು. ನಿಮ್ಮಲ್ಲಿ ತಂದೆಯಾದವನು ಮೀನನ್ನು ಕೇಳುವ ಮಗನಿಗೆ ಮೀನು ಕೊಡದೆ ಹಾವನ್ನು ಕೊಡುವನೇ? ಅಥವಾ ತತ್ತಿಯನ್ನು ಕೇಳಿದರೆ ಚೇಳನ್ನು ಕೊಡುವನೇ? ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪವಿತ್ರಾತ್ಮವರವನ್ನು ಕೊಡುವನಲ್ಲವೇ ಅಂದನು.

ಒಂದಾನೊಂದು ಸಮಯದಲ್ಲಿ ಆತನು ಮೂಕದೆವ್ವವನ್ನು ಬಿಡಿಸುತ್ತಿದ್ದನು. ಆ ದೆವ್ವವು ಬಿಟ್ಟುಹೊದ ಮೇಲೆ ಮೂಕನು ಮಾತಾಡಿದನು; ಅದಕ್ಕೆ ಜನರು ಆಶ್ಚರ್ಯಪಟ್ಟರು. ಆದರೆ ಅವರಲ್ಲಿ ಕೆಲವರು–ಇವನು ದೆವ್ವಗಳ ಒಡಯನಾದ ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಾನೆ ಅಂದರು. ಬೇರೆ ಕೆಲವರು ಆತನನ್ನು ಪರೀಕ್ಷಿಸುವದಕ್ಕಾಗಿ–ನೀನು ಆಕಾಶದಲ್ಲಿ ಒಂದು ಸೂಚಕಕಾರ್ಯವನ್ನು ತೋರಿಸಿ ಕೊಡಬೇಕು ಎಂದು ಕೇಳಿದರು. ಆತನು ಅವರ ಆಲೋಚನೆಗಳನ್ನು ತಿಳುಕೊಂಡು ಅವರಿಗೆ ಹೇಳಿದ್ದೇನಂದರೆ–ತನ್ನಲ್ಲಿ ಬೇಧಹುಟ್ಟಿದ ರಾಜ್ಯವು ಹಾಳಾಗುತ್ತದೆ; ಮತ್ತು ತನ್ನಲ್ಲಿ ಬೇಧಹುಟ್ಟಿದ ಮನೆ ಬೀಳುತ್ತದೆ. ಅದರಂತೆ ಸೈತಾನನು ತನ್ನಲ್ಲಿ ಬೇಧ ಹುಟ್ಟಿಸಿಕೊಂಡರೆ ಅವನ ರಾಜ್ಯವು ಹೇಗೆ ಉಳಿದೀತು? ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುತ್ತೀ ಎಂದು ನನಗೆ ಹೇಳುತ್ತೀರಲ್ಲಾ. ನಾನು ಬೆಲ್ಜೆಬೂಲನ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ಆದದರಿಂದ ಅವರೇ ನಿಮಗೆ ನ್ಯಾಯತೀರಿಸುವವರಾಗುವರು. ನಾನು ದೇವರ ಬಲದಿಂದಲೇ ದೆವ್ವಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ ಬಂತಲ್ಲಾ. ಒಬ್ಬ ಬಲಿಷ್ಠನು ಸರ್ವಾಯುಧಗಳನ್ನು ಧರಿಸಿಕೊಂಡು ತನ್ನ ಮನೆಯನ್ನು ಕಾಪಾಡಿಕೊಂಡಿರುವಾಗ ಅವನ ವಸ್ತುಗಳು ಭದ್ರವಾಗಿಯೇ ಇರುವವು; ಆದರೆ ಅವನಿಗಿಂತ ಬಲಿಷ್ಠನು ಬಂದು ಅವನನ್ನು ಸೋಲಿಸಿದ ಮೇಲೆ ಆ ಮೊದಲಿನವನು ನೆಚ್ಚಿಕೊಂಡಿದ್ದ ಆಯುಧಗಳನ್ನೆಲ್ಲಾ ತೆಗೆದುಕೊಂಡು ತಾನು ಸುಲಿಗೆ ಮಾಡಿದ್ದನ್ನು ಹಂಚಿಕೊಡುವನು. ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ; ನನ್ನ ಜೊತೆಯಲ್ಲಿ ಒಟ್ಟುಗೂಡಿಸದವನು ಚದರಿಸುವವನಾಗುತ್ತಾನೆ. ದೆವ್ವವು ಮನುಷ್ಯನನ್ನು ಬಿಟ್ಟುಹೋದ ಮೇಲೆ ವಿಶ್ರಾಂತಿಯನ್ನು ಹುಡುಕುತ್ತಾ ನೀರಿಲ್ಲದ ಸ್ಥಳಗಳಲ್ಲಿ ತಿರುಗಾಡುತ್ತದೆ; ವಿಶ್ರಾಂತಿ ಸಿಕ್ಕದ ಕಾರಣ ಅದು–ನಾನು ಬಿಟ್ಟು ಬಂದ ನನ್ನ ಮನೆಗೆ ಹಿಂತಿರುಗಿ ಹೋಗುತ್ತೇನೆ ಅಂದುಕೊಂಡು ಬಂದು ಆ ಮನೆ ಗುಡಿಸಿ ಅಲಂಕರಿಸಿದ್ದಾಗಿರುವದನ್ನು ಕಂಡು ಹೊರಟುಹೋಗಿ ತನಗಿಂತ ಕೆಟ್ಟವುಗಳಾದ ಬೇರೆ ಏಳು ದೆವ್ವಗಳನ್ನು ಕರಕೊಂಡು ಬರುವದು; ಅವು ಒಳಹೊಕ್ಕು ಅಲ್ಲಿ ವಾಸಮಾಡುವವು; ಆಗ ಆ ಮನುಷ್ಯನ ಅಂತ್ಯಸ್ಥಿತಿಯು ಮೊದಲಿಗಿಂತ ಕೆಟ್ಟದ್ದಾಗುವದು ಅಂದನು.

ಆತನು ಈ ಮಾತುಗಳನ್ನು ಹೇಳುತ್ತಿರುವಾಗ ಜನರಲ್ಲಿ ಒಬ್ಬ ಸ್ತ್ರೀಯು–ನಿನ್ನನ್ನು ಹೊತ್ತ ಗರ್ಭವೂ ನೀನು ಕುಡಿದ ಮೊಲೆಗಳೂ ಧನ್ಯವಾದವುಗಳು ಎಂದು ಕೂಗಿದಳು. ಆತನು–ಹಾಗನ್ನ ಬೇಡ; ದೇವರ ವಾಕ್ಯವನ್ನು ಕೇಳಿ ಅದಕ್ಕೆ ಸರಿಯಾಗಿ ನಡಕೊಳ್ಳುವವರೇ ಧನ್ಯರು ಅಂದನು.

ಜನರು ಗುಂಪುಗುಂಪಾಗಿ ಕೂಡಿಬರುತ್ತಿರುವಾಗ ಆತನು ಹೇಳುವದಕ್ಕೆ ತೊಡಗಿದ್ದೇನಂದರೆ–ಈ ಸಂತತಿ ಕೆಟ್ಟ ಸಂತತಿಯೇ; ಇದು ಸೂಚಕಕಾರ್ಯವನ್ನು ನೋಡಬೇಕೆಂದು ಅಪೇಕ್ಷಿಸುತ್ತದೆ. ಆದರೆ ಯೋನನಲ್ಲಿ ಆದ ಸೂಚಕಕಾರ್ಯವೇ ಹೊರತು ಬೇರೆ ಯಾವದೂ ಇದಕ್ಕೆ ಸಿಕ್ಕುವದಿಲ್ಲ. ಹೇಗೆಂದರೆ ಯೋನನು ನಿನೆವೆ ಪಟ್ಟಣದವರಿಗೆ ಗುರುತಾದ ಹಾಗೆಯೇ ಮನುಷ್ಯಕುಮಾರನು ಈ ಸಂತತಿಗೆ ಗುರುತಾಗಿರುವನು. ದಕ್ಷಿಣದೇಶದ ರಾಣಿಯು ನ್ಯಾಯವಿಚಾರಣೆಯಲ್ಲಿ ಈ ಸಂತತಿಯವರೊಂದಿಗೆ ಎದ್ದುನಿಂತು ಇವರನ್ನು ಅಪರಾಧಿಗಳೆಂದು ಹೇಳುವಳು; ಆಕೆಯು ಸೊಲೊಮೋನನ ಜ್ಞಾನವನ್ನು ತಿಳುಕೊಳ್ಳುವದಕ್ಕೆ ಭೂಮಿಯ ಕಟ್ಟಕಡೆಯಿಂದ ಬಂದಳು; ಆದರೆ ಇಲ್ಲಿ ಸೊಲೊಮೋನನಿಗಿಂತಲೂ ಹೆಚ್ಚಿನವನಿದ್ದಾನೆ. ನ್ಯಾಯವಿಚಾರಣೆಯಲ್ಲಿ ನಿನೆವೆ ಪಟ್ಟಣದವರು ಈ ಸಂತತಿಯವರೊಂದಿಗೆ ನಿಂತು ಇವರನ್ನು ಅಪರಾಧಿಗಳೆಂದು ಹೇಳುವರು. ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರ ಕಡೆಗೆ ತಿರುಗಿಕೊಂಡರು; ಆದರೆ ಇಲ್ಲಿ ಯೋನನಿಗಿಂತಲೂ ಹೆಚ್ಚಿನವನಿದ್ದಾನೆ.

ಯಾರೂ ದೀಪವನ್ನು ಹಚ್ಚಿ ಮರೆಯಲ್ಲಾಗಲಿ ಕೊಳಗದೊಳಗಾಗಲಿ ಇಡುವದಿಲ್ಲ. ಮನೆಯೊಳಕ್ಕೆ ಬರುವವರಿಗೆ ಬೆಳಕು ಕಾಣಿಸುವಂತೆ ಆ ದೀಪವನ್ನು ದೀಪಸ್ತಂಭದ ಮೇಲೆ ಇಡುತ್ತಾರಷ್ಟೆ. ನಿನ್ನ ಕಣ್ಣು ದೇಹಕ್ಕೆ ದೀಪವಾಗಿದೆ; ನಿನ್ನ ಕಣ್ಣು ನೆಟ್ಟಗಿರುವಾಗ ಅದರಂತೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು; ಅದು ಕೆಟ್ಟದ್ದಾಗಿರುವಾಗ ಅದರಂತೆ ನಿನ್ನ ದೇಹವು ಕತ್ತಲಾಗಿರುವದು. ಆದದರಿಂದ ನಿನ್ನೊಳಗಿರುವ ಬೆಳಕೇ ಕತ್ತಲಾಗಿದೆಯೋ ಏನೋ ನೋಡು. ನಿನ್ನ ದೇಹವೆಲ್ಲಾ ಬೆಳಕಾಗಿದ್ದು ಒಂದು ಭಾಗದಲ್ಲಿಯೂ ಕತ್ತಲಿಲ್ಲದ್ದಾಗಿದ್ದರೆ ದೀಪವು ಹೊಳೆದು ನಿನಗೆ ಬೆಳಕನ್ನು ಕೊಡುವ ಕಾಲದಲ್ಲಿ ಹೇಗೋ ಹಾಗೆಯೇ ಅದು ಪೂರ್ಣವಾಗಿ ಬೆಳಕಾಗಿರುವದು ಅಂದನು.

*****

# ಬೆಳಕಿನ ಪ್ರಭುವಿನ ಪ್ರತಿಸ್ಪರ್ಧಿಯಾಗಿ ಅಂಧಕಾರದ ಅಧಿಪತಿ

**ರೀಪ್ರಿಂಟ್ಸ್ ಪುಟ 5377**

## ಲೂಕ 11:14–26, 33–36

**"ಆದದರಿಂದ ನಿನ್ನೊಳಗಿರುವ ಬೆಳಕೇ ಕತ್ತಲಾಗಿದೆಯೋ ಏನೋ ನೋಡು." – ಲೂಕ 11:35**

ಸೈತಾನನೆಂಬ ವ್ಯಕ್ತಿಯಿದ್ದಾನೆ ಮತ್ತು ಅತನು ದೇವರ ಆಳ್ವಿಕೆಗೆ ವಿರೋಧವಾಗಿ ಬಂಡಾಯವೇಳುವ ದೆವ್ವಗಳೆಂಬ ಆತ್ಮಿಕ ಜೀವಿಗಳ ಸೈನ್ಯಕ್ಕೆ ಒಡೆಯನಾಗಿರುವನು ಎಂಬ ಸತ್ಯವೇದದ ಬೋಧನೆಗೆ ಪ್ರಾಪಂಚಿಕ ಜ್ಞಾನಿಗಳು ಎಷ್ಟೇ ಅಧಿಕವಾಗಿ ಅವಹೇಳನಮಾಡಿದಾಗ್ಯೂ ಇದು ಆದಿಕಾಂಡದಿಂದ ಪ್ರಕಟನೆಯ ಗ್ರಂಥದವರೆಗೂ ಇರುವ ಸತ್ಯವೇದದ ಬೋಧನೆಯೆಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರೋಣ. ಪ್ರಾಪಂಚಿಕ ಜ್ಞಾನಿಗಳಲ್ಲಿರುವ ಸಮಸ್ಯೆ ಎಂದರೆ ಅವರಲ್ಲಿರುವ ಸಹಜವಾದ ತಾರ್ಕಿಕ ಸಾಮರ್ಥ್ಯವು ದೇವರ ವಾಕ್ಯದ ಮೂಲಕ ಮಾರ್ಗದರ್ಶನ ಪಡೆಯದೆ ಇರುವದೇ. ಅವರು ಹೇಳುವದೆಂದರೆ ದೇವರಲ್ಲಿ ಮತ್ತು ಆತ್ಮಿಕ ಜೀವಿಗಳಾಗಿ ಮನುಷ್ಯರ ಕಣ್ಣಿಗೆ ಅಗೋಚರವಾಗಿರುವ ಆತನ ಸೇವಕರಾದ ದೂತ ಸೈನ್ಯದಲ್ಲಿ ನಂಬಿಕೆ ಇಡುವದು ಬಹು ಕಷ್ಟಕರವಾದುದೆನ್ನುವದು. ಹೌದು, ದೇವ ವಿರೋಧಿಗಳಾದ ಬೇರೊಂದು ಆತ್ಮಿಕ ಸೈನ್ಯದ ಮತ್ತು ಅವುಗಳಿಗೆ ಒಡೆಯನಾಗಿರುವ ಆತ್ಮಿಕನಾದ ಅಧಿಪತಿಯಲ್ಲಿ ನಂಬಿಕೆಯಿಡುವದು ಅವರಿಗೆ ಇನ್ನೂ ಅಧಿಕ ಕಷ್ಟಕರವಾಗಿರುವದು. ತನ್ನನ್ನು ವಿರೋಧಿಸುವ ಜೀವಿಗಳನ್ನು ದೇವರು ಸೃಷ್ಟಿಸಿರುವನೆಂದಾಗಲಿ ಅಥವಾ ಪವಿತ್ರಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟದ್ದಲ್ಲಿ ಅವರು ನೀತಿಗೆ ವಿರೋಧಿಸುವವರಾಗಿದ್ದು ಅವರನ್ನು ಸರ್ವ ಅಧಿಕಾರವುಳ್ಳ ದೇವರು ನಾಶಮಾಡದೆ ಅವರು ದುಷ್ಟರಾಗಿ ವಿರೋಧಿಸುವದನ್ನು ಮುಂದುವರೆಸಲು ಬಿಟ್ಟಿರುವದನ್ನು ಯೋಚಿಸಲಾಗದೆನ್ನುವದು ಅವರ ವಾದ.

ಸೈತಾನನು (ದೇವಾಜ್ಞೆ ಮೀರಿದ) ಮೊದಲ ಅಪರಾದಿಯಾಗಿದ್ದು ಅವನು ಹಿಂದೆ ಉತ್ಕೃಷ್ಟವಾದ ದರ್ಜೆ ಮತ್ತು ಗುಣಸ್ವಭಾವವುಳ್ಳ ಒಬ್ಬ ದೇವದೂತನಾದ ಕೆರೂಬಿಯಾಗಿ ತನ್ನ ಅಹಂಕಾರ ಮತ್ತು ಆಕಾಂಕ್ಷೆಯ ಮೂಲಕವಾಗಿ ದೇವರ ಮೇಲಿನ ತನ್ನ ನಿಷ್ಠೆಯನ್ನು ಕಳಕೊಂಡನೆಂದು; ಹಾಗು ಸತ್ಯವೇದವು ಹೆಸರಿಸಿರುವ ದೆವ್ವಗಳೆಂಬ ದಂಡನ್ನು ಅವಿಧೇಯರಾಗಲು ದುಷ್ಪ್ರೇರಣೆ ಮಾಡಿರುವನೆಂಬುದನ್ನು ಸತ್ಯವೇದವು ವಿವರಿಸುವದು. ಈ ಆತ್ಮಿಕ ಜೀವಿಗಳ ಸೈನ್ಯವು ನಮ್ಮ ಭೂಲೋಕಕ್ಕೆ ಸಂಬಂಧಿಸಿದವುಗಳಾಗಿದ್ದು ಬಹು ದೂರದಲ್ಲಿರುವ ಅಗ್ನಿಕೊಂಡದಲ್ಲಿ ಸತ್ತ ಮನುಷ್ಯರನ್ನು ಹಿಂಸೆ ನೀಡುತ್ತಿಲ್ಲವೆಂಬುದನ್ನು ಸತ್ಯವೇದವು ಎಲ್ಲೆಡೆ ಪ್ರತಿಪಾದಿಸಿರುವದು.

ಈ ದಂಗೆಕೋರರನ್ನು ಅಡಗಿಸಲು ದೇವರಿಗೆ ಶಕ್ತಿಯಿಲ್ಲವೆಂದಲ್ಲ, ಆದರೆ ಅವರು ಪಾಪ ರೋಷ ಮತ್ಸರ ಹಗೆತನ ದ್ವೇಷ ಕಲಹವೆಂಬ ಫಲಗಳನ್ನು ತೋರ್ಪಡಿಸುವದು ದೇವದೂತರಿಗೂ ಮತ್ತು ಮನುಷ್ಯರಿಗೂ ಅವು ಒಂದು ಪಾಠವಾಗಿರಲೆಂದು ಆತನು ಒಂದು ಕಾಲದವರೆಗೆ ಬಿಟ್ಟಿರುವನೆಂದು ಸತ್ಯವೇದವು ತೋರಿಸಿಕೊಟ್ಟಿರುವದು. ಅಪೋಸ್ತಲನು ತನ್ನ ಶೈಲಿಯಲ್ಲಿ ಹೇಳಿರುವಂತೆ "ಕತ್ತಲೆಯೆಂಬ ಸರಪಣಿಗಳಿಂದ" ಅವುಗಳು ಬಂಧಿಸಲ್ಪಟ್ಟಿದ್ದು ಕೆಲವು ಪ್ರತಿಬಂಧನಗಳಿಗೆ ಒಳಗಾಗಿರುವವು. ಪ್ರಳಯದ ನಂತರದಲ್ಲಿ ಅವುಗಳು ಮನುಷ್ಯದೇಹವನ್ನು ಧರಿಕೊಳ್ಳಲು ಬಿಡಲಾಗಿಲ್ಲ. ಆದರೆ ಅವುಗಳು ಮಾನವರೊಂದಿಗೆ ಸಂಪರ್ಕಸಾಧಿಸಲು ಯತ್ನಿಸುವವುಗಳಾಗಿದ್ದು ಇದರಲ್ಲಿ ಅವುಗಳು ಯಶಸ್ಸನ್ನು ಗಳಿಸುವಷ್ಟರ ಮಟ್ಟಿಗೆ ಅವುಗಳ ಬಲಿಪಶುಗಳನ್ನು ದುರಾತ್ಮಗಳ ವಶವಾಗಿರುವರೆಂದು ಹೇಳಲಾಗಿರುವದು. ಆವುಗಳ ಯಶಸ್ಸು ಪೂರ್ಣವಾದಾಗ ಆ ಬಲಿಪಶುಗಳನ್ನು ದೆವ್ವಹಿಡಿದವರೆಂದು ಬುದ್ಧಿಭ್ರಮಣರೆಂದು ಹೇಳಲ್ಪಟ್ಟಿರುವದು.

ಬುದ್ಧಿವಿಕಲರ ಆಶ್ರಮದಲ್ಲಿರುವ ಅರ್ಧದಷ್ಟು ಜನರು ದೆವ್ವಹಿಡಿದವರಾಗಿರುವರು. ಈ ದೆವ್ವಗಳು ನಮ್ಮ ಕರ್ತನ ಸೇವಾಕಾರ್ಯದ ಸಂಬಂಧದಲ್ಲಿ ಪದೇ ಪದೇ ಅಧಿಕವಾಗಿ ಪ್ರಸ್ತಾಪಿಸಿರುವ ದೆವ್ವಗಳೆಂಬ ಗುಂಪಿಗೆ ಸೇರಿದವುಗಳಾಗಿರುವವು. ಹಿಂದೆ ಇದ್ದ ರೀತಿಯಲ್ಲಿ, ಬೇತಾಳಿಗರು ಮಾಂತ್ರಿಕರು ಸತ್ತವರನ್ನು ವಿಚಾರಿಸುವವರು ಮುಂತಾದವರ ಮೂಲಕವಾಗಿ (ಸತ್ತವರ ಆತ್ಮಗಳ) ಸಂಪರ್ಕ ಸಾಧಿಸುತ್ತಿದ್ದಂತೆಯೇ ಈ ದಿನಗಳಲ್ಲೂ ಒಯಿಜಾ ಬೋರ್ಡ್ (ಎಂಬ ಅಕ್ಷರಸಂಖ್ಯೆಗಳುಳ್ಳ ತಿರುಗು ಮಣೆಗಳು) ಪ್ಲಾನ್ಚೆಟ್ (ಎಂಬ ಅಕ್ಷರಸಂಖ್ಯೆಗಳ ಸುತ್ತುಗಾಲಿಗಳು) ಮತ್ತು (ಸತ್ತವರ) ಆತ್ಮವನ್ನು ವಿಚಾರಿಸುವ ಮಾಧ್ಯಮಿ – ಗಳೆನ್ನುವವರ ಮೂಲಕವಾಗಿ ಸಂಪರ್ಕ ಸಾಧಿಸಲಾಗುತ್ತಿರುವದು. ಜ್ಞಾನಾಂಧಕಾರ ಯುಗದಲ್ಲಿ (ಡಾರ್ಕ್ ಏಜಸ್) ಮೈಗೂಡಿಸಿಕೊಂಡ ದೆವ್ವಗಳ ಬೋಧನೆಗಳ (ತಿಮೋಥೆ 4:1) ಮೂಲಕವಾಗಿ ಮರುಳಾಗಿರುವ ಮಾನವಕುಲವು – ಸತ್ತವರು ದೀರ್ಘನಿದ್ರಾವಸ್ಥೆಯಲ್ಲಿದ್ದು ಅವರಿಗೆ "ಯಾವ ತಿಳುವಳಿಕೆಯೂ ಇಲ್ಲ" (ಪ್ರಸಂಗಿ 9:5) ನೂತನ ವ್ಯವಸ್ಥೆಯ ಆರಂಭದಲ್ಲಿ ಅವರು (ಮರಣನಿದ್ರೆಯಿಂದ) ಎಚ್ಚರವಾಗುವವರೆಗೂ ಅಂದರೆ "ಕ್ರಿಸ್ತನ ದಿನವು" ಎಂದು ಹೇಳಲಾದ ಸಾವಿರ ವರುಷದ ಆಳ್ವಿಕೆಯ ದಿನವಾದ "ಸಮಸ್ತವನ್ನು ಸರಿಮಾಡುವ ಕಾಲವು" ಉದಯವಾಗುವ ವರೆಗೂ "ಅವನ ಸಂಕಲ್ಪಗಳೆಲ್ಲಾ ಅದೇ ದಿನದಲ್ಲಿ ಹಾಳಾಗುವವು" ಎಂಬ ದೇವರ ಸಾಕ್ಷಿಪ್ರಮಾಣಗಳನ್ನು ನಿರ್ಲಕ್ಷಿಸಿರುವದು. (ಫಿಲಿಪ್ಪಿ 1:10; ಅ.ಕೃ. 3:21) ಈ ದಿನದ ಅಧ್ಯಯನವು ಒಡೆಯನು ದೆವ್ವಹಿಡಿದ ಒಬ್ಬ ಮನುಷ್ಯನಿಗೆ ದೆವ್ವಬಿಡಿಸಿದುದನ್ನು ಪರಿಚಯಿಸುತ್ತದೆ. ಜನರು ಸಮಸ್ಯೆಯು ಏನೆಂಬುದನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದರು; ಆದರೆ ಅವರಲ್ಲಿ ಕೆಲವರು ಒಡೆಯನನ್ನು ವಿರೋಧಿಸುವವರಾಗಿದ್ದು, ದೆವ್ವಗಳು ಯೇಸುವಿಗೆ ವಿಧೇಯರಾಗಿರುವ ಕಾರಣ ಆತನೇ ದೆವ್ವಗಳ ಒಡೆಯನಾದ ಬೆಲ್ಜೆಬೂಲನಾಗಿರುವ ಸೈತಾನನಾಗಿರುವನೆಂದು ಕೆಟ್ಟದ್ದಾಗಿ

ಸಾರಿಹೇಳುತ್ತಿದ್ದರು. ಕೆಲವರು–ನಿನ್ನ ಅದ್ಭುತಕಾರ್ಯಗಳು ಭೂಸಂಬಂಧವಾದ ವುಗಳು; ನಮಗೆ ಆಕಾಶದಲ್ಲಿ ಸೂಚನೆಯನ್ನು ತೋರಿಸು ಎಂದು ಹೇಳಿದ್ದರು.

ತಾನು ಬೆಳಕಿಗೆ ಒಡೆಯನಾಗಿರುವದಕ್ಕೆ ಬದಲಾಗಿ ದೆವ್ವಗಳಿಗೆ ಒಡೆಯನಾಗಿ ಸೈತಾನನು ತನ್ನ ಸ್ವಂತ ಸೈನ್ಯವನ್ನು ಹೊರಡಿಸುವುದನ್ನು ತೋರಿಸಿದ್ದಲ್ಲಿ ಇದು ಆ ಕೆಡುಕರ ಪಾಳ್ಯದಲ್ಲಿ ಹೋರಾಟವಾಗುತ್ತಿರುವದನ್ನು ಸೂಚಿಸುವದು ಮತ್ತು ಇದು ಸೈತಾನನ ಮನೆಯು ಇಬ್ಭಾಗವಾಗಿದ್ದು ಶೀಘ್ರದಲ್ಲಿ ಇದು ಬಿದ್ದುಹೋಗುವದೆಂಬುದು ಅಡಕವಾಗಿರುವದೆಂದು ಯೇಸುವು ಅವರ ಆಪಾದನೆಗೆ ಉತ್ತರವಾಗಿ ಹೇಳಿದ್ದನು. ಆದುದರಿಂದ ಸೈತಾನನು ಸೈತಾನನನ್ನು ಹೊರಹಾಕುವದು ಮೂರ್ಖತನ ವಾಗಿರುವದು; ಹೀಗಾಗಿ ಇಂಥ ಒಂದು ವಾದವು ಹುರುಳಿಲ್ಲದ್ದು. ಆದರೆ ಬೇರೆ ಯೆಹೂದ್ಯರು ದೆವ್ವಗಳನ್ನು ಬಿಡಿಸುವ ಶಕ್ತಿಯನ್ನು ಪ್ರಯೋಗಿಸುತ್ತಿರುವಾಗ ನೀವು ಇವರನ್ನು ದೆವ್ವಗಳ ಒಡೆಯನ ಸಹಾಯದಿಂದ ಬಿಡಿಸುತ್ತಿರುವರೆಂದು ಎಂದೂ ಆಪಾದಿಸಿ ಹೇಳುವದಿಲ್ಲವೆಂದು ಹೇಳಿದನು. ಅಲ್ಲದೆ ದೆವ್ವಗಳಿಗೆ ಅನೇಕ ಒಡೆಯರಿರುವುದು ಹೇಗೆ ಸಾಧ್ಯ? ಇದರ ಅನುಸಾರವಾಗಿ ನನ್ನ ವಿರೋಧವಾಗಿ ನೀವು ಮಾಡುವ ವಾದವು ಒಳ್ಳೆಯದೇ ಎನ್ನುವದನ್ನು ನೀವೇ ತೀರ್ಮಾನಿಸಿರಿ. ಆದರೆ ಇದಕ್ಕೆ ಪ್ರತಿಯಾಗಿ, ನಾನು ದೇವರ (ಹಸ್ತದ) ಸಹಾಯದಿಂದ ದೆವ್ವಗಳನ್ನು ಬಿಡಿಸುತ್ತಿರುವ ಸತ್ಯವನ್ನು ಅರಿತವರಾದ ನಿಮಗೆ ಇತರರಿಗಿಂತ ಹೆಚ್ಚಾಗಿ ಹೊಂದಿರುವ ನನ್ನ ಈ ಅಧಿಕಾರವು ಮತ್ತು ನನ್ನ ಅಪೋಸ್ತಲರ ಮೂಲಕವಾಗಿ ನಾನು ಪ್ರಯೋಗಿಸುತ್ತಿರುವ ಅಧಿಕಾರವು ದೇವರಿಂದ ನಾನು ವಿಶೇಷ ಅನುಗ್ರಹವನ್ನು ಪಡೆದಿರುವೆನೆಂಬದಕ್ಕೆ ಮತ್ತು ದೇವರ ರಾಜ್ಯವು ನಿಮ್ಮ ಸಮೀಪಕ್ಕೆ ಬಂದಿರುವದಾಗಿ ಅಂದರೆ ದೇವರ ರಾಜ್ಯದ ಅದಿಕಾರವು ನಿಮ್ಮ ಮಧ್ಯದಲ್ಲಿ ಪ್ರಯೋಗವಾಗುತ್ತಿರುವದಕ್ಕೆ ನಾನು ನೀಡಿರುವ ಸಾಕ್ಷಿಗೆ ಒಂದು ಪ್ರಮಾಣವಾಗಿರುವದೆಂಬುದಕ್ಕೆ ನಿಮ್ಮಲ್ಲಿ ಸಂದೇಹ ವಿರಲಾರದು ಎಂದೂ ಯೇಸು ಹೇಳಿದ್ದನು.

ಆದರೆ ವಾಸ್ತವದಲ್ಲಿ, ಆ ಜನಾಂಗವು ಕ್ರಿಸ್ತನನ್ನು ನಿರಾಕರಿಸಿದಾಗ ಅವರಿಗೆ ನೀಡಲಾಗಿದ್ದ ದೇವರ ರಾಜ್ಯದ ಪ್ರಸ್ತಾವನೆಯನ್ನು ಅವರಿಂದ ತೆಗೆಯಲಾಗಿತ್ತು. ಆ ಪ್ರಸ್ತಾವನೆ ಯನ್ನು ನಿಲ್ಲಿಸಲಾಗಿತ್ತು. ಕೃಪೆಯ ಮತ್ತು ಸತ್ಯದ ವಿಷಯವಾದ ಸಂದೇಶವು ಬೇರೊಂದು ಇಸ್ರಾಯೇಲ್ಯರನ್ನು ಕೂಡಿಸುತ್ತಿರುವ ವರೆಗೂ, ಆ ಒಂದು ಕಾಲದವರೆಗೆ ಅವರು (ಇಸ್ರಾಯೇಲ್ ಜನಾಂಗದವರು) ದೇವಾನುಗ್ರಹದಿಂದ ಹೊರಹಾಕಲ್ಪಟಿದ್ದರು. ಮೊಟ್ಟಮೊದಲನೆಯದಾಗಿ ಆ ಸಂದೇಶವು ಇಸ್ರಾಯೇಲ್ಯರಲ್ಲಿ ನಿಜವಾದ ಇಸ್ರಾಯೆಲ್ಯರನ್ನು ಎಳೆದುಕೊಳ್ಳುವದು; ಆನಂತರದಲ್ಲಿ ಅದು ಎಲ್ಲಾ ಕಡೆಯಲ್ಲಿಯೂ ಹೊರಟುಹೋಗಿ ಪ್ರತಿಯೊಂದು ಜನಾಂಗದವರಿಂದ ಭಕ್ತರಾದ ಒಂದು ವರ್ಗವನ್ನು ಕೂಡಿಸಿಕೊಳ್ಳುವದು.

ಯೇಸುವಿನಲ್ಲಿದ್ದ ದೆವ್ವಬಿಡಿಸುವ ಶಕ್ತಿಯು ತಾನು ಇಹಲೋಕದ ಅಧಿಕಾರಿಯೂ, ಅಂಧಕಾರದ ಅಧಿಪತಿಯೂ ಆದ ಸೈತಾನನನ್ನು ಅಡಗಿಸುವ ವಿಷಯದಲ್ಲಿ ಪೂರ್ಣ ಸಮರ್ಥನಾಗಿದ್ದನೆಂದು ತೋರಿಸಿಕೊಟ್ಟಿತ್ತು; ಮತ್ತು ಆ ಕಾಲದಲ್ಲಿ ದೇವರ ರಾಜ್ಯವು ಸ್ಥಾಪಿತವಾಗಿದ್ದಲ್ಲಿ ಆಗ ಸೈತಾನನು ಮತ್ತು ಆತನ ದೂತರು ಬಂಧಿಸಲ್ಪಡುತ್ತಿದ್ದರು ಇಲ್ಲವೇ (ಅವರ ಪ್ರಭಾವು) ನಿಯಂತ್ರಿಸಲ್ಪಡುತ್ತಿತ್ತು. ಹೀಗಿದ್ದರೂ ಯೇಸುವನ್ನು ಮತ್ತು ದೇವರ ರಾಜ್ಯವನ್ನು ನಿರಾಕರಿಸಲ್ಪಡುವದು ಮುಂದಾಗಿ ಹೇಳಲ್ಪಟ್ಟಿದ್ದು ಅದು ಮೊದಲೇ ತಿಳಿದಿರುವ ದೃಷ್ಟಿಯಿಂದ ಸೈತಾನನನ್ನು ಬಂಧಿಸುವ ಕಾರ್ಯವು ಮುನ್ನಡೆಯಲಿಲ್ಲ, ಆದರೆ ಅದನ್ನು ಯೇಸುವಿನ ಎರಡನೆಯ ಬರೋಣದವರೆಗೂ ವಿಳಂಬಿಸಲಾಗುವದು. ಈ ಮಧ್ಯೆ ಆ ರಾಜ್ಯದಲ್ಲಿ ಆತನೊಡನೆ ಸಹಬಾಧ್ಯರಾಗಲು ಆತನ ಮದಲಗಿತ್ತಿಯ ವರ್ಗವು ಆಯ್ಕೆ ಮಾಡಲಾಗುತ್ತಿದ್ದು ಆನಂತರದಲ್ಲಿ ಆತನು ತನ್ನ ಮಹಾಧಿಕಾರ ವನ್ನು ತೆಗೆದುಕೊಂಡು ಆಳ್ವಿಕೆಮಾಡುವನು. ಆ ಕಾಲದಲ್ಲಿ ಆತನು ಸೈತಾನನೊಡನೆ ಮತ್ತು ಆತನಿಗೆ ಅಧೀನರಾದ ದೆವ್ವಗಳೊಡನೆ ಆತನು (ಅಧಿಕಾರಯುತವಾಗಿ) ವ್ಯವಹರಿಸುವನು; ಹೌದು, ಪಾಪವನ್ನು ವೃದ್ಧಿಸಿಕೊಂಡವರೊಡನೆ ಮತ್ತು ಬಿದ್ದುಹೋದ ಸ್ಥಿತಿಯಲ್ಲಿರುವ ಮಾನವಕುಲವನ್ನು ತೀವ್ರವಾಗಿ ಹತೋಟಿ ಯಲ್ಲಿಟ್ಟುಕೊಂಡಿರುವ ಸೈತಾನನ ಮನೋಭಾವದೊಡನೆ (ಅಧಿಕಾರಯುತವಾಗಿ) ವ್ಯವಹರಿಸುವನು.

## ಸೈತಾನನನ್ನು ಬಂಧಿಸುವದು

ಈ ಸುವಾರ್ತಾಯುಗದ ಅಂತ್ಯದಲ್ಲಿ ಸೈತಾನನು ಒಂದು ಸಾವಿರ ವರುಷಗಳವರೆಗೆ (ಮೆಸ್ಸೀಯನ ಸಾವಿರ ವರುಷದ ವೈಭವಯುತವಾದ ಆಳ್ವಿಕೆಯ ಕಾಲದಲ್ಲಿ) ಇನ್ನು ಅತನು ಮಾನವಕುಲವನ್ನು ಮರುಳುಗೊಳಿಸದ ಹಾಗೆ ಬಂಧಿಸಲ್ಪಡುವ ನೆಂದು ನಮ್ಮ ಕರ್ತನು ನಮಗೆ ಹೇಳಿರುವನು. ಆತನು ಆರು ಸಾವಿರ ವರುಷಗಳವರೆಗೆ ಮಾನವಕುಲವನ್ನು ಮರುಳು ಮಾಡುತ್ತಾ ಭ್ರಾಂತಿಗೊಳಗಾಗ ಮಾಡಿರುವನು; ಕತ್ತಲೆಯನ್ನು ಬೆಳಕೆಂದು ಮಾಡಿ, ಪರಲೋಕದ ತಂದೆಯನ್ನು ಹುಟ್ಟಲಿರುವ ಕೋಟ್ಯಾಂತರ ಮಂದಿಯನ್ನು ಮುಂದಾಗಿಯೇ ನಿತ್ಯಯಾತನೆಗೆ ಗುರಿಯಾಗಿಸುವ ಸಂಚುಮಾಡಿರುವ ಊಹಿಸಲು ಅತಿ ಹೀನನಾದ ವ್ಯಕ್ತಿಯೆಂದು ತಪ್ಪಾಗಿ ಪ್ರತಿನಿಧಿಸಿರುವನು.

ಈಗಿನ ಕಾಲದಲ್ಲಿ ಸೈತಾನನು ಪ್ರಪಂಚ ನಿಯಂತ್ರಣ ಮಾಡುತ್ತಿರುವದನ್ನು ಯೇಸುವು ಶಸ್ತ್ರಸಜ್ಜಿತನಾಗಿ ತನ್ನ ಅರಮನೆಯನ್ನು ಕಾಯುತ್ತಿರುವ ಒಬ್ಬ ಬಲಿಷ್ಠನಿಗೆ ಹೋಲಿಕೆ ಮಾಡಿ ಚಿತ್ರಿಸಿರುವನು. ಒಬ್ಬ ಬಲಿಷ್ಠನು ಅವನ (ಸೈತಾನನ) ಮೇಲೆ ಬಂದು ಅವನನ್ನು ಜಯಿಸಿ ಅವನು ಅನ್ಯಾಯವಾಗಿ ಸಂಪಾದಿಸಿದ್ದ ಅಮೂಲ್ಯವಸ್ತುಗಳನ್ನು ವಶಕ್ಕೆ ತೆಗೆದುಕೊಳ್ಳುವ ವರೆಗೂ ಅವನು ತನ್ನ ನಿಯಂತ್ರಣವನ್ನು ಉಳಿಸಿಕೊಂಡಿರ ಬಹುದು. ಹೀಗೆ ಯೇಸುವು ತಾನು ಮೆಸ್ಸೀಯನಾಗಿ ಆಳುವ ರಾಜ್ಯವು ಸೈತಾನನದಕ್ಕಿಂತಲೂ ಬಲಿಷ್ಠವಾದುದೆಂದೂ ಮತ್ತು ಅದನ್ನು (ಸೈತಾನನ ರಾಜ್ಯವನ್ನು) ನಿಯಂತ್ರಣಕ್ಕೆ ತೆಗೆದುಕೊಂಡು ಅವನನ್ನು ಬಂಧಿಸುವದೆಂದು ಮುಂತಿಳಿಸಿದ್ದನು. ಇದರ ಫಲಿತಾಂಶವೇನಾಗುವದಂದರೆ, ಈಗ ಆರು (ಪ್ರತಿ ಸಾವಿರ ವರುಷಗಳನ್ನೊಳಗೊಂಡ) ಮಹಾದಿನಗಳ ವರೆಗೆ ತನ್ನ ಮೇಲೆ

ನೆಲೆಯಾಗಿರುವ ಪಾಪ ಮತ್ತು ಮರಣಗಳೆಂಬ ಶಾಪದಿಂದ ಮಾನವಕುಲವು ಬಿಡುಗಡೆಯಾಗುವದು. ಮೆಸ್ಸೀಯನ ರಾಜ್ಯವು ಆ ಏಳನೇ (ಸಾವಿರ ವರುಷದ) ಮಹಾದಿನ ಅಥವಾ ಸಬ್ಬತ್ ದಿನವಾಗಿರುವದು ಮತ್ತು ರಕ್ಷಕನನ್ನು ಅಂಗೀಕರಿಸಿಕೊಳ್ಳುವವರೆಲ್ಲರೂ ಅಲ್ಲಿನ ವಿಶ್ರಾಂತಿಯಲ್ಲಿ ಸೇರಬಹುದು.

ಈ ಮಧ್ಯೆ ಯೇಸುವು ತಂದೆಯ ಯೋಜನೆಯ ಅನುಸಾರವಾಗಿ ಈ ಸುವಾರ್ತಾಯುಗದಲ್ಲಿ ತನ್ನ ವಾಕ್ಯಸಂದೇಶ ಮತ್ತು ಅಪೋಸ್ತಲರ ವಾಕ್ಯಸಂದೇಶದ ಮೂಲಕವಾಗಿ ಲೋಕದೊಳಗಿಂದ ಮದಲಗಿತ್ತಿಯೆಂಬ ಒಂದು ವರ್ಗವನ್ನು ತನ್ನ ರಾಜ್ಯದಲ್ಲಿ ತನಗೆ ಸಹಬಾಧ್ಯರಾಗಲು ಕೂಡಿಸಿಕೊಳ್ಳುತ್ತಿರುವನು. ಇವರ ನಿಷ್ಠೆಯನ್ನು ಪರೀಕ್ಷಿಸುವ ಸಲುವಾಗಿ ಸೈತಾನನಿಗೆ ಬಹಮಟ್ಟಿನ ಸ್ವಾತಂತ್ರ್ಯವನ್ನು ನೀಡಲಾಗಿರುವದು. ಕೇವಲ ಇಬ್ಬರು ಒಡೆಯರು ಇರಲು ಸಾಧ್ಯ. ತಿಳಿದೋ ತಿಳಿಯದೆಯೋ ಜನರು ಇಬ್ಬರಲ್ಲಿ ಒಬ್ಬನನ್ನಾಗಲಿ ಅಥವಾ ಇನ್ನೊಬ್ಬನನ್ನಾಗಲಿ ಸೇವಿಸುತ್ತಿರುವರು. ಯೇಸುವು ಹೇಳಿರುವಂತೆ, "ನನ್ನ ಪಕ್ಷ ಹಿಡಿಯದವನು ನನಗೆ ವಿರೋಧಿ;"

## ಲೋಕವೆಲ್ಲವೂ (ಭ್ರಾಂತಿಯಲ್ಲಿ) ಹಿಡಿಯಲ್ಪಟ್ಟಿರುವದು

ಈ ಪ್ರಪಂಚದ ದೇವರು (ಸೈತಾನನು) "ನಂಬಲೊಲ್ಲ –ದವರನ್ನು ಅವಿಧೇಯತೆಗೆ ಈಗ ಪ್ರೇರೇಪಿಸುವ[ನು]." ಎಂದು ಭಕ್ತನಾದ ಪೌಲನು ತಿಳಿಸಿರುವನು. ಯೇಸುವು ಇದೇ ಅಂಶವನ್ನು ತೆಗೆದುಕೊಂಡು ತಾನು ಸೈತಾನನ ಹಿಡಿತದಿಂದ ಬಿಡಿಸಿದ್ದ ದೆವ್ವಪೀಡಿತನಾಗಿದ್ದ ಆ ಬಡ ಮನುಷ್ಯನಿಗೆ ಹೋಲಿಸಿರುವನು. ಹೀಗೆಯೇ ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವವರೆಲ್ಲರೂ ಸೈತಾನನ ಅಧಿಕಾರದಿಂದ ಬಿಡುಗಡೆ ಮಾಡಲ್ಪಡುವರು. ಆದುದರಿಂದ ಸಾಯತಕ್ಕ ನಿಮ್ಮ ದೇಹದ ಮೇಲೆ ಪಾಪವು ಆಳ್ವಿಕೆಮಾಡದಿರಲಿ. –ರೋಮಾ. 6:12

ಪಾಪಗಳು ಕ್ಷಮಿಸಲ್ಪಟ್ಟು ದೇವರ ಕೃಪೆಯನ್ನು ಸ್ವೀಕರಿಸಿರುವ ಇಂಥಾ ಹೃದಯಗಳನ್ನು ಯೇಸುವು ಗುಡಿಸಿ ಅಲಂಕರಿಸಲ್ಪಟ್ಟಿರುವದೆಂದು ವರ್ಣಿಸಿರುವನು. ಆದರೆ ಸೈತಾನನು ಇಂಥವುಗಳನ್ನು ಪ್ರಾಪಂಚಿಕ ಭಾವದ ಮೂಲಕವಾಗಿ ಅಂದರೆ ಹೆಮ್ಮೆ ಕೋಪ ಮತ್ಸರ ಹಗೆತನ ಜಗಳ ಶಾರೀರಿಕ ಹಾಗು ದೆವ್ವಗಳಿಗೆ ಸಂಬಂಧಿಸಿದ ಕ್ರಿಯೆಗಳ ಮೂಲಕವಾಗಿ ಮರಳಿ ನಿಯಂತ್ರಿಸಿಕೊಳ್ಳುವದಕ್ಕೆ ಯತ್ನಿಸುವನೆಂದು ಯೇಸುವು ತಿಳಿಸಿರುವನು. (ಮತ್ತಾಯ 12:43–45) "ನೀವು ನಂಬಿಕೆಯಲ್ಲಿ ದೃಢವಾಗಿದ್ದು ಅವನನ್ನು ಎದುರಿಸಿರಿ;" ಎಂದು ಅಪೋಸ್ತಲನು ಹೇಳಿರುವನು. (1 ಪೇತ್ರ 5:9) ಸೈತಾನನನ್ನು ಎದುರಿಸದಿದ್ದರೆ ಉಂಟಾಗುವ ಅಪಾಯವೇನಂದರೆ ದೇವರ ವಿಷಯವಾದ ಜ್ಞಾನದ ಮೂಲಕವಾಗಿ ಪಡಕೊಂಡ ಬೆಳಕು ಮತ್ತು ಆಶೀರ್ವಾದಗಳು ಶಾಪವಾಗಿ ಮತ್ತು ಹಾನಿಕರವಾಗಿ ಮಾರ್ಪಡುತ್ತವೆ; ಅಲ್ಲದೆ ಅಂಥ ವ್ಯಕ್ತಿಯಲ್ಲಿ ಉಂಟಾಗುವ ಪರಿಣಾಮವೇನಂದರೆ ಆತನು ಕ್ರಿಸ್ತನೊಡನೆ ಸಂಬಂಧಕ್ಕೆ ಬರುವ ಮೊದಲು ಇದ್ದದಕ್ಕಿಂದಲೂ ಬಹು ಕೆಟ್ಟವನಾಗುವನು.

ಯೇಸುವು ಇದರ ಪ್ರಾಮುಖ್ಯತೆಯನ್ನು ಹೀಗೆ ಒತ್ತಿಹೇಳಿದ್ದಾನೆ: ದೀಪವನ್ನು ಹತ್ತಿಸಿ ಕೊಳಗದೊಳಗೆ ಇಟ್ಟು ಮರೆಮಾಡಬಾರದೆಂದು ಆದರೆ ಅದನ್ನು (ಇತರರಿಗೆ) ಅನುಕೂಲವಾಗುವಂತೆ ಹೊರಗಿಡಬೇಕು; ಇದರಂತೆಯೇ ಸತ್ಯದ ಬೆಳಕು ಮತ್ತು ದೇವರ ಕೃಪೆಯನ್ನು ಹೊಂದಿಕೊಂಡು ಅದನ್ನು ಮುಚ್ಚಿಡದೆ ಅವುಗಳು ಪ್ರಜ್ವಲಿಸಿ ದೇವರಿಗೆ ಮಹಿಮೆ ಉಂಟಾಗುವಂತೆ ಮಾಡಬೇಕು. ಇಲ್ಲವಾದಲ್ಲಿ ಆ ಬೆಳಕು ನಂದಿಹೋಗಿ ಕತ್ತಲು ಆವರಿಸಿಕೊಳ್ಳುವದು. ಕಣ್ಣುಗಳು ಬುದ್ಧಿವಂತಿಕೆಯನ್ನು ಸೂಚಿಸುವದು; ನಾವು ನಿಜವಾದ ಜ್ಞಾನಪ್ರಕಾಶವನ್ನು ಅಥವಾ ಬುದ್ಧಿವಂತಿಕೆಯನ್ನು ಎಲ್ಲಿಯವರೆಗೂ ಹೊಂದಿರುವೆವೋ ಅಲ್ಲಿಯವರೆಗೆ ಈ ಮೂಲಕವಾಗಿ ದೇಹವು ಸಂಪೂರ್ಣವಾಗಿ ಆಶೀರ್ವದಿಸಲ್ಪಟ್ಟಿರುತ್ತದೆ; ಆದರೆ ಆ ಬುದ್ಧಿವಂತಿಕೆಯು ನಶಿಸಿಹೋದಲ್ಲಿ ಅಂದರೆ ಕಣ್ಣು ಕುರುಡಾದಲ್ಲಿ ಇಡೀ ದೇಹವು ಕತ್ತಲಲ್ಲಿದ್ದು ನರಳುವಂತಾಗುತ್ತದೆ.

ಅದುದರಿಂದ ಪ್ರತಿಯೊಬ್ಬನೂ ಬೆಳಕನ್ನು ಪಡೆದುಕೊಂಡ ಮೇಲೆ ಅದನ್ನು ಅಮೂಲ್ಯ ವಸ್ತುವೆಂದು ಎಣಿಸಿ ಅದು ಕಳೆದುಹೋಗಿ ಅದಕ್ಕೆ ಬದಲಾಗಿ ಅಂಧಕಾರವುಂಟಾಗದಂತೆ ತನ್ನ ವಿಷಯವಾಗಿ ನೋಡಿಕೊಳ್ಳಬೇಕು. ಕಣ್ಣು ಅಂದರೆ ಬೆಳಕು ಇಲ್ಲಿ ಪವಿತ್ರಾತ್ಮನಿಂದ ಉಂಟಾಗುವ ಜ್ಞಾನಪ್ರಕಾಶವನ್ನು ಸೂಚಿಸುವದು. ಅದು ನಮಗೆ ಆಶೀರ್ವಾದವನ್ನು ದಯಪಾಲಿಸಲು ಮಹಾ ಸಾಮರ್ಥ್ಯವುಳ್ಳದ್ದಾಗಿರುವದು; ಮತ್ತು ಇದನ್ನು ನಾವು ಕಳೆದುಕೊಂಡದ್ದೇಯಾದರೆ ನಾವು ದೇವರ ವಿಷಯದ ಪರಿಜ್ಞಾನವನ್ನು ಹೊಂದುವದಕ್ಕೆ ಮೊದಲು ನಮ್ಮಲ್ಲಿದ್ದ ಅಂಧಕಾರಕ್ಕಿಂತಲೂ ದೊಡ್ಡ ಅಂಧಕಾರ ಉಂಟಾಗುವದೆಂಬ ಅರ್ಥಬರುವದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಯೂದಾಯ | ಫರಿಸಾಯರ ಮೇಜಿನ ಬಳಿಯಲ್ಲಿ, ಯೇಸುವು ಕಪಟವನ್ನು ಬಹಿರಂಗವಾಗಿ ಖಂಡಿಸಿದುದು | –– | –– | 11:37–54 | –– |

## ಲೂಕ 11:37–54

ಆತನು ಮಾತಾಡುತ್ತಿರುವಾಗ ಒಬ್ಬ ಫರಿಸಾಯನು ಆತನನ್ನು ಊಟಕ್ಕೆ ಬರಬೇಕೆಂದು ಕೇಳಿಕೊಳ್ಳಲು ಆತನು ಒಳಕ್ಕೆ ಹೋಗಿ ಊಟಕ್ಕೆ ಕೂತುಕೊಂಡನು. ಆತನು ತೊಳಕೊಳ್ಳದೆ ಊಟಕ್ಕೆ ಕೂತದ್ದನ್ನು ಆ ಫರಿಸಾಯನು ಕಂಡು ಆಶ್ಚರ್ಯಪಟ್ಟನು. ಸ್ವಾಮಿಯು ಅವನಿಗೆ–ಫರಿಸಾಯರಾದ ನೀವು ಪಂಚಪಾತ್ರೆ ಬಟ್ಟಲು ಇವುಗಳ ಹೊರಭಾಗವನ್ನು ಶುಚಿಮಾಡುತ್ತೀರಿ ಸರಿ; ಆದರೆ ನಿಮ್ಮ ಒಳಭಾಗವು ಸುಲಿಗೆಯಿಂದಲೂ ಕೆಟ್ಟತನದಿಂದಲೂ ತುಂಬಿರುತ್ತದೆ. ಬುದ್ಧಿಯಿಲ್ಲದವರೇ, ಹೊರಭಾಗವನ್ನು ಮಾಡಿದಾತನು ಒಳಭಾಗವನ್ನೂ ಮಾಡಿದನಲ್ಲವೇ. ಹೇಗೂ ಒಳಗಿರುವಂಥದನ್ನು ದಾನಾಕೊಡಿರಿ; ಆಗ ಸಕಲವೂ ನಿಮಗೆ ಶುದ್ಧವಾಗಿರುವದು. ಅಯ್ಯೋ ಫರಿಸಾಯರೆ, ನೀವು ಮರುಗ ಸದಾಪು ಮುಂತಾದ ಸಕಲ ಪಲ್ಯಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ ಸರಿ; ಆದರೆ ನ್ಯಾಯವನ್ನೂ ದೇವರ ಪ್ರೀತಿಯನ್ನೂ ಒತ್ತಟ್ಟಿಗೆ ಬಿಟ್ಟಿದ್ದೀರಿ; ಇವುಗಳನ್ನು ಮಾಡಬೇಕಿತ್ತು, ಅವುಗಳನ್ನೂ ಬಿಡಬಾರದು. ಅಯ್ಯೋ ಫರಿಸಾಯರೇ, ಸಭಾಮಂದಿರಗಳಲ್ಲಿ ಮುಖ್ಯ ಪೀಠಗಳೂ ಅಂಗಡಿ ಬೀದಿಗಳಲ್ಲಿ ನಮಸ್ಕಾರಗಳೂ ನಿಮಗೆ ಇಷ್ಟ. ನಿಮ್ಮ ಗತಿಯನ್ನು ಏನು ಹೇಳಲಿ; ನೆಲಸಮವಾದ ಸಮಾಧಿಗಳ ಹಾಗಿದ್ದೀರಿ; ಅವುಗಳ ಮೇಲೆ ತಿರುಗಾಡುವ ಜನರಿಗೆ ಇವು ಸಮಾಧಿಗಳೆಂದು ತಿಳಿಯದು ಎಂದು ಹೇಳಿದನು.

ಇದನ್ನು ಕೇಳಿ ಒಬ್ಬ ಧರ್ಮೋಪದೇಶಕನು ಆತನಿಗೆ–ಬೋಧಕನೇ, ಈ ಮಾತುಗಳನ್ನು ಹೇಳುವದರಿಂದ ನಮ್ಮನ್ನೂ ನಿಂದಿಸಿದ ಹಾಗಾಯಿತು ಎಂದು ಹೇಳಲು ಆತನು–ಧರ್ಮೋಪದೇಶಕರೇ, ನಿಮ್ಮ ಗತಿಯನ್ನು ಏನು ಹೇಳಲಿ? ನೀವು ಜನರ ಮೇಲೆ ಹೊರಲಾರದ ಹೊರೆಗಳನ್ನು ಹೊರಿಸುತ್ತೀರಿ; ನೀವಾದರೋ ಆ ಹೊರೆಗಳನ್ನು ಒಂದು ಬೆರಳಿನಿಂದಲೂ ಮುಟ್ಟುವದಿಲ್ಲ. ನಿಮ್ಮ ಗತಿಯನ್ನು ಏನು ಹೇಳಲಿ? ನೀವು ಪ್ರವಾದಿಗಳ ಗೋರಿಗಳನ್ನು ಕಟ್ಟುತ್ತೀರಿ; ಅವರನ್ನು ಕೊಂದವರು ನಿಮ್ಮ ಪಿತೃಗಳೇ. ಹೀಗಿರುವದರಿಂದ ನಿಮ್ಮ ಪಿತೃಗಳು ಮಾಡಿದ್ದಕ್ಕೆ ನೀವೇ ಸಾಕ್ಷಿಗಳಾಗಿರುವದಲ್ಲದೆ ಅವರ ಕೃತ್ಯಗಳಿಗೆ ಒಪ್ಪಿಕೊಂಡ ಹಾಗಾಯಿತು. ಹೇಗಂದರೆ ಅವರು ಪ್ರವಾದಿಗಳನ್ನು ಕೊಂದರು, ನೀವು ಅವರ ಗೋರಿಗಳನ್ನೇ ಕಟ್ಟುತ್ತೀರಿ. ಆದದರಿಂದ ದೇವರ ಜ್ಞಾನವು ಹೇಳಿದ್ದೇನಂದರೆ–ನಾನು ಅವರ ಬಳಿಗೆ ಪ್ರವಾದಿಗಳನ್ನೂ ಅಪೋಸ್ತಲರನ್ನೂ ಕಳುಹಿಸುವೆನು; ಅವರಲ್ಲಿ ಕೆಲವರನ್ನು ಕೊಲ್ಲುವರು; ಕೆಲವರನ್ನು ಹಿಂಸೆಪಡಿಸುವರು. ಹೀಗೆ ಲೋಕಾದಿಯಿಂದ ಹೇಬೆಲನ ರಕ್ತವು ಮೊದಲುಗೊಂಡು ಯಜ್ಞವೇದಿಗೂ ದೇವಾಲಯಕ್ಕೂ ನಡುವೆ ಹತವಾದ ಜಕರೀಯನ ರಕ್ತದವರೆಗೂ ಸುರಿಸಲ್ಪಟ್ಟ ಎಲ್ಲಾ ಪ್ರವಾದಿಗಳ ರಕ್ತಕ್ಕೂ ಈ ಸಂತತಿಯವರು ಉತ್ತರ ಕೊಡಬೇಕು ಎಂಬದೇ; ಹೌದು, ಈ ಸಂತತಿಯವರೇ ಉತ್ತರಕೊಡಬೇಕೆಂದು ನಿಮಗೆ ಹೇಳುತ್ತೇನೆ. ಅಯ್ಯೋ ಧರ್ಮೋಪದೇಶಕರೇ, ಜ್ಞಾನಕ್ಕೆ ಸಾಧನವಾದ ಬೀಗದಕೈಯನ್ನು ತೆಗೆದುಬಿಟ್ಟಿರಿ. ನೀವೂ ಒಳಕ್ಕೆ ಹೋಗಲಿಲ್ಲ; ಒಳಕ್ಕೆ ಹೋಗುತ್ತಿರುವವರಿಗೂ ಅಡ್ಡಿಮಾಡಿದಿರಿ ಅಂದನು.

ಬಳಿಕ ಆತನು ಅಲ್ಲಿಂದ ಹೊರಗೆ ಬಂದಾಗ ಶಾಸ್ತ್ರಿಗಳೂ ಫರಿಸಾಯರೂ ಆತನನ್ನು ಕಠಿನವಾಗಿ ವಿರೋಧಿಸಿ ಅನೇಕ ವಿಷಯಗಳನ್ನು ಕುರಿತು ಆತನನ್ನು ಅಡ್ಡಾದಿಡ್ಡೀ ಪ್ರಶ್ನೆಮಾಡುತ್ತಾ ಆತನ ಬಾಯಿಮಾತಿನಲ್ಲಿ ಏನಾದರೂ ಹಿಡಿಯಬೇಕೆಂದು ಆತನನ್ನು ಹೊಂಚಿ ನೋಡುತ್ತಿದ್ದರು.

# ಅಯ್ಯೋ ಫರಿಸಾಯರೇ!

**ರೀಪ್ರಿಂಟ್ಸ್ ಪುಟ 5389**

## ಲೂಕ 11:37–54

**"ಮೋಸಹೋಗಬೇಡಿರಿ; ದೇವರು ತಿರಸ್ಕಾರ ಸಹಿಸುವವನಲ್ಲ" – ಗಲಾತ್ಯ 6:7**

ನಮ್ಮ ಕರ್ತನ ದಿನಗಳಲ್ಲಿದ್ದ ಯೆಹೂದ್ಯ ಮತದ ಬಗೆಬಗೆಯ ಪಂಗಡಗಳಲ್ಲಿ ಫರಿಸಾಯರು ಅತ್ಯುತ್ತಮವಾಗಿ ವ್ಯವಸ್ಥಿತವಾಗಿದ್ದರೆಂಬುದನ್ನು ಅಂದರೆ ದೇವರ ಮತ್ತು ಆತನ ಆಜ್ಞೆಗಳಿಗೆ ಅತಿ ನಿಷ್ಠೆಯಳ್ಳವರಾಗಿದ್ದರೆಂಬುದನ್ನು ನಂಬಲು ನಮಗೆ ಅನೇಕ ಕಾರಣಗಳಿರುವವು. ಸದ್ದುಕಾಯರು ಮುಂದಿನ ಜೀವಿತದಲ್ಲಿ ನಂಬಿಕೆಯಿಲ್ಲವೆಂಬುದನ್ನು ಪ್ರತಿಪಾದಿಸುತ್ತಿದ್ದರು. ಅವರು ಅವಿಶ್ವಾಸಿಗಳೂ ಮತ್ತು ರಾಜಕಾರಣಿಗಳೂ ಆಗಿದ್ದರು. ಎಸ್ಸೇನರು ಒಂದು ಸಣ್ಣದಾದ ಪಂಗಡದವರಾಗಿದ್ದು ಉನ್ನತ ವಿಮರ್ಶಕರು (ಹೈಯರ್ ಕ್ರಿಟಿಕ್ಸ್) ಎಂಬ ವಿಧದದವರೂ ನಂಬಿಕೆಯಿಲ್ಲದವರೂ ಆಗಿದ್ದು ಅನ್ಯಧರ್ಮ ಮತ್ತು ಯೆಹೂದ ಧರ್ಮಗಳನ್ನು ಮಿಶ್ರಮಾಡಿಕೊಂಡು ಗೊಂದಲಮಾಡಿಕೊಂಡವರಾಗಿದ್ದು ಸತ್ಯವೇದದಲ್ಲಿ ಅವರನ್ನು ಹೆಸರಿಸಲಾಗಿಲ್ಲ. ಫರಿಸಾಯರನ್ನು ಯೆಹೂದ್ಯಮತದಲ್ಲಿನ ಸಂಪ್ರದಾಯಸ್ಥರ ಗುಂಪೆಂದು ಹೆಸರಿಸಬಹುದಾಗಿತ್ತು. ಅವರ ಹೆಸರು "ಪರಿಶುದ್ಧ ಜನರು" ಎಂಬುದನ್ನು ಸೂಚಿಸುತ್ತಿತ್ತು. ಈ ದಿನದ ಅಧ್ಯಯನದಲ್ಲಿ ಯೇಸುವು ದೇವರನ್ನು ಪೂರ್ಣವಾಗಿ ತೊರೆದ ಇತರ ಪಂಗಡಗಳನ್ನು ಹೆಸರಿಸುವಲ್ಲಿ ಕೃಪೆತೋರದೆ ತನ್ನನ್ನು ವಿಶೇಷವಾಗಿ ಫರಿಸಾಯರಿಗೆ ಸಂಬೋಧಿಸಿಕೊಂಡವನಾಗಿ ಅವರು ಪರಿಶುದ್ಧತೆಯ ವಿಷಯದಲ್ಲಿ ತಮ್ಮನ್ನು ಹೊಗಳಿಕೊಳ್ಳುವವರಾದರೂ ದೇವರಿಗೆ ಅಂಗೀಕಾರವಾಗುವ ಸಂಗತಿಗಳಲ್ಲಿ ಅವರು ಬಹು ಕಡಿಮೆಯಾಗಿ ತೋರಿಬಂದಿದ್ದರೆಂಬದನ್ನು ಎತ್ತಿತೋರಿಸುವವನಾಗಿದ್ದನು.

ಒಬ್ಬ ಫರಿಸಾಯನು ಯೇಸುವನ್ನು ತನ್ನ ಮನೆಯಲ್ಲಿ ತನ್ನ ಜೊತೆ ಊಟಮಾಡಲು ಆಹ್ವಾನಿಸಿದ್ದನು. ಆ ಆಹ್ವಾನವು ಪ್ರಾಮಾಣಿಕವಾಗಿ ಅಂಗೀಕರಿಸಲ್ಪಟ್ಟಿತ್ತು ಮತ್ತು ಯೇಸುವು ಒಳಗೆ ತೆರಳಿ ಫರಿಸಾಯರಲ್ಲಿ ವಾಡಿಕೆಯಾಗಿದ್ದಂಥ ಕೈತೊಳಕೊಳ್ಳುವ ವಿಧಿಯನ್ನು ಪಾಲಿಸದೆಯೇ ಹೋಗಿ ಇತರರೊಂದಿಗೆ ಊಟಕ್ಕೆ ಕೂತುಕೊಂಡಿದ್ದನು. ಯೇಸುವು ಅಜಾಗರೂಕನಾಗಿದ್ದನೆಂದು ಇದರಿಂದ ನಾವು ಭಾವಿಸುವ ಹಾಗಿಲ್ಲ. ವಾಸ್ತವದಲ್ಲಿ ತಮ್ಮ ಕೈಗಳನ್ನು ತೊಳಕೊಳ್ಳುವದು ಫರಿಸಾಯರ ಒಂದು ಶಿಷ್ಟಾಚಾರವಾಗಿದ್ದು, ಇದು ಚೆನ್ನಾಗಿ ನಿದರ್ಶಿಸುತ್ತಿದ್ದ ಅವರ ಮನೋಭಾವವನ್ನು ಟೀಕೆಮಾಡುವ ಅವಕಾಶವನ್ನು ಪಡೆಯುವ ಸಲುವಾಗಿ ಯೇಸುವು ಇದನ್ನು ನಿರ್ಲಕ್ಷಿಸಲು ಆಶಿಸಿದ್ದನೆಂಬುದನ್ನು ನಾವು ಗುರುತಿಸಿಕೊಳ್ಳಬೇಕು.

ಯೇಸುವು ಒಬ್ಬ ಪರಿಶುದ್ಧನೆಂದೂ ಸುಂಕದವನಂತಾಗಲಿ ಅಥವಾ ಪಾಪಿಯಂತಾಗಲಿ ಅಲ್ಲವೆಂದು ಆತಿಥ್ಯಮಾಡುತ್ತಿದ್ದ ಫರಿಸಾಯನು ಆಲೋಚಿಸಿದ್ದನು. ಅಲ್ಲದೆ ಈತನು ಕೈತೊಳಕೊಳ್ಳುವ ಶಿಷ್ಟಾಚಾರವನ್ನು ಪಾಲಿಸದಿದ್ದುದು ವಿಚಿತ್ರವೆಂದು ಅವನು ಟೀಕಿಸಿದ್ದನು. ಈ ವಿಷಯದಲ್ಲಿ ಒಂದು ಪ್ರಭೋದನೆ ಮಾಡಲು ಈ ಟೀಕೆಯು ಅವಕಾಶ ನೀಡಿತ್ತು. ಯೆಹೂದ್ಯರಲ್ಲಿ ಅತಿ ಪರಿಶುದ್ಧರೂ ಅನುಸರಿಸುತ್ತಿರುವ ಬಹುತೇಕ ಧರ್ಮಾಚರಣೆಗಳು ಕೇವಲ ಆಚರಣೆಗಳು, ಔಪಚಾರಿಕವಾದವುಗಳು ನಿಜವಾದ ಧರ್ಮವಲ್ಲವೆಂಬುದನ್ನು ಯೇಸುವು ತೋರಿಸಿಕೊಟ್ಟಿದ್ದನು. ಬಾಹ್ಯವಾಗಿ ಅವರು ಶುದ್ಧವಾಗಿದ್ದರು ಆದರೆ ಆಂತರ್ಯವಾಗಿ ಅವರ ಹೃದಯಗಳು ಅಶುದ್ಧವಾಗಿದ್ದು, ಆತ್ಮಿಕ ದುಷ್ಟತನವಾದ ಸುಲಿಗೆಮಾಡುವ ಅಭ್ಯಾಸದಲ್ಲಿದ್ದರು. ದೇವರ ದೃಷ್ಟಿಯಲ್ಲಿ ಹೃದಯುವು ಮುಖ್ಯವಾದ ವಿಷಯುವಾಗಿದ್ದು ಹಾಗು ಬಾಹ್ಯಶುದ್ಧತೆಯು ಎರಡನೆಯ ಸ್ಥಾನದಲ್ಲಿರುವದೆಂಬುದನ್ನು ತೊರಿಸಿಕೊಡಲು ಕರ್ತನು ಪ್ರಯತ್ನಿಸಿದ್ದನು. ಪಾತ್ರೆಯ ಒಳಭಾಗಕ್ಕೆ ಮೊದಲು ಗಮನಕೊಡಬೇಕು, ಆನಂತರ ಹೊರಭಾಗ.

ವಾಸ್ತವದಲ್ಲಿ ಹೇಳಬೇಕಾದರೆ, ಯಾರು ದೇವರೊಡನೆ ಹೃದಯದಲ್ಲಿ ಹೊಂದಾಣಿಕೆಗೆ ಬರುವರೋ ಹಾಗು ಯಾರು ಆತನ ಸಂದೇಶಕ್ಕೆ ಕಿವಿಗೊಡುವ ಮತ್ತು ಆತನ ಮನೋಭಾವವನ್ನು ಹೊಂದಿಕೊಳ್ಳುವ ಮುಖಾಂತರ ವಿಧೇಯರಾಗಿ ತಮ್ಮನು ಶುಚಿವಾಡಿಕೊಳ್ಳುವರೋ ಅವರು ಆ ಮೂಲಕವಾಗಿ ಬಾಹ್ಯವಾಗಿಯೂ ಅಲ್ಲದೆ ಆಂತರಿಕವಾಗಿ ಪ್ರತಿಯೊಂದು ಸಂಗತಿಗಳಲ್ಲೂ ಶುದ್ಧರಾಗಿ ಮಾಡಲ್ಪಡುವರು. ಹೃದಯದಲ್ಲಿ ಶುದ್ಧನಾಗಿರುವ ಪ್ರತಿಯೊಬ್ಬನೂ ತಾನಿರುವ ಸನ್ನಿವೇಶಗಳ ಮತ್ತು ಮತ್ತು ದೊರೆಯುವ ಅವಕಾಶಗಳ ಅನುಸಾರ ತನ್ನ ವ್ಯಕ್ತಿತ್ವದಲ್ಲಿ ಮಾತಿನಲ್ಲಿ ಮತ್ತು ಎಲ್ಲಾ ವಿಧದಲ್ಲಿಯೂ ಶುದ್ಧನಾಗಿರಲು ಪರಿಶ್ರಮಿಸುವನು ಎಂದು ಹೇಳುವದು ಕ್ಷೇಮಕರವಾದುದು. ತನ್ನ ಹೃದಯದಲ್ಲಿ ಕಾರ್ಯವೆಸಗುವ ತತ್ವವು ಎಲ್ಲಾ ದಿನದಲ್ಲಿಯೂ ಹಾಗು ಎಲ್ಲಾ ಸಮಯದಲ್ಲಿಯೂ ಆತನ ಪ್ರತಿಯೊಂದು ನುಡಿಗಳ ಆಲೋಚನೆಗಳ ಮತ್ತು ಕ್ರಿಯೆಗಳ ಮೇಲೆ ಪ್ರಭಾವ ಬೀರುವದು.

ಫರಿಸಾಯರ ಒಂದು ದೊಡ್ಡ ವೈಫಲ್ಯತೆಯೇನಂದರೆ ಅದು ಲೋಭವೆಂದು ತೋರುವದಾಗಿ ಇಲ್ಲಿ ಮತ್ತು ಎಲ್ಲೆಡೆ ನಮ್ಮ ಕರ್ತನು ವ್ಯಕ್ತಪಡಿಸಿದ್ದನು. ಮತ್ತು ಗ್ರೀಕ್ ಭಾಷೆಯ ಅನುಸಾರವಾಗಿ ಯೇಸುವು ಅವರನ್ನು "ಹಣದಾಸೆಯುಳ್ಳವರು" ಎಂದು ಕರೆದಿದ್ದನು. ಒಂದು ಸಂದರ್ಭದಲ್ಲಿ ಆತನು ಅವರಿಗೆ–ಈ ಲೋಭ ದುರಾಶೆ ಹಣದಾಸೆಗಳು ಅವರನ್ನು ಇತರರ ಹಕ್ಕುಗಳನ್ನು ಅಪ್ರಮಾಣಿಕವಾಗಿ ನಿರ್ಲಕ್ಷಿಸುವಂತೆ ನಡೆಸಿರುವವೆಂದು ಹೇಳಿದ್ದನು. ನೀವು ವಿಧವೆಯರ ಮನೆಗಳನ್ನು ನುಂಗುವಿರೆಂದು ಅಂದರೆ ತಮಗಾಗಿ ಆಸ್ತಿಯನ್ನು ಕೂಡಿಸಿಕೊಳ್ಳುವ ಸಲುವಾಗಿ ವಿಧವೆಯರನ್ನು ನಿಮ್ಮ ಲಾಭಕ್ಕಾಗಿ ಬಳಸಿಕೊಳ್ಳುವಿರೆನ್ನುವ ಅರ್ಥದಲ್ಲಿ ಆತನು ಹೇಳಿದ್ದನು. ವಾಸ್ತವದಲ್ಲಿ, ಫರಿಸಾಯರಲ್ಲಿ ಅನೇಕರು ಬಹು ಐಶ್ವರ್ಯವಂತರಾಗಿದ್ದರೆಂದು ತೋರುವದು.

ಬಾಹ್ಯಾಚಾರ ಸಂಬಂಧವಾದ ಯೆಹೂದ್ಯರ ಧರ್ಮವಿಧಿಗಳನ್ನು ಅವರು ಯಾವಾಗಲೂ ಬಹು ಜಾಗರೂಕತೆಯಿಂದ ಕೈಗೊಳ್ಳುವವರಾದರೂ, ಹೃದಯದಲ್ಲಿನ ಇಂಥಾ ಒಂದು ಕೆಟ್ಟಸ್ಥಿತಿಯು ದೇವರಿಗೆ ಬಹು ಮೆಚ್ಚಿಗೆಯಾಗಲು ಸಾಧ್ಯವಿಲ್ಲವೆಂಬುದನ್ನು ಯೇಸುವು ತೋರಿಸಿಕೊಟ್ಟಿದ್ದನು. ಬಾಹ್ಯಾಚಾರವಾಗಿ ಅವರು ಕೊಡುವ ದಶಮಾಂಶವು (ತಮ್ಮ ಪ್ರತಿವರುಷದ ಆದಾಯದಲ್ಲಿ ಹತ್ತರಲ್ಲಿ ಒಂದು ಪಾಲನ್ನು ಕೊಡುವದು) ಅಂದರೆ ಅವರು ಬೆಳೆಯುತ್ತಿದ್ದ ಸಣ್ಣ ದಾನ್ಯಗಳ ವಿಷಯಗಲ್ಲಿಯೂ ವಿಶೇಷ ಗಮನ ನೀಡುತ್ತಿದ್ದರಾದರೂ ಅದರ ಪ್ರಮಾಣವು ಅತ್ಯಲ್ಪವಾಗಿತ್ತೆಂಬ ಅಂಶದ ಕಡೆಗೆ ಅವರ ಗಮನವನ್ನು ಸೆಳೆದಿದ್ದನು. ಪ್ರತಿಯೊಂದು ವಸ್ತುವಿನಲ್ಲಿಯೂ ದಶಮಾಂಶವನ್ನು ಕೊಡುವದರಲ್ಲಿ ಅವರು ಜಾಗರೂಕರಾಗಿದ್ದರು; ಅದರೆ ಧರ್ಮಶಾಸ್ತ್ರದ ಮಹತ್ವವುಳ್ಳ ವಿಷಯಗಳಲ್ಲಿ ಅಂದರೆ ತಮ್ಮ ವ್ಯವಹಾರಗಳಲ್ಲಿ ನ್ಯಾಯವನ್ನು ಅನುಸರಿಸುವದು ಮತ್ತು ಇತರರ ವಿಷಯದಲ್ಲಿ ಕರುಣೆಯುಳ್ಳವರಾಗಿರುವದು ಇವುಗಳಲ್ಲಿ ಅಲಕ್ಷ್ಯವುಳ್ಳವರಾಗಿದ್ದರು. ಎಲ್ಲವುಗಳಲ್ಲಿ ಅವರು ಹತ್ತರಲ್ಲೊಂದು ಪಾಲು ಕೊಡುವ ವಿಷಯದಲ್ಲಿ ಒಡೆಯನು ಅಕ್ಷೇಪಿಸಿರಲಿಲ್ಲ; ಆದರೆ ಇವುಗಳನ್ನು ಅವರು ಮಾಡಬೇಕು ಮತ್ತು ಬಹು ಮುಖ್ಯವಾದವುಗಳನ್ನೂ ಮಾಡದೆ ಬಿಟ್ಟುಬಿಡಬಾರದೆಂದು ಸಾರಿ ಹೇಳಿದ್ದನು.

ಇನ್ನೊಂದು ಸಮಯದಲ್ಲಿ ಆತನು ಅವರನ್ನು ಖಂಡಿ–ಸುತ್ತಾ ಹೀಗೆ ಹೇಳಿದ್ದನು: ನೀವು ಸೊಳ್ಳೆಯನ್ನು ಸೋಸುವವರು ಒಂಟೆಯನ್ನು ನುಂಗುವವರು. ಇದು ಒಂದು ಅತಿಶಯೋಕ್ತಿ ಎಂಬ ಶಬ್ದಾಲಂಕಾರವಾಗಿದ್ದು ಅವರು ಪ್ರತಿಪಾದಿಸುವ ವಿಷಯಗಳು ಮತ್ತು ನಡೆದುಕೊಳ್ಳುವ ರೀತಿಗಳು ಇವುಗಳಲ್ಲಿ ಹೇಗೆ ಸಾಮರಸ್ಯವಿಲ್ಲವೆಂಬುದನ್ನು ತೋರಿಸುವದಾಗಿತ್ತು. ಸೊಳ್ಳೆಯನ್ನು ಸೋಸುವದೆಂಬುದು ಅವರು ಕತ್ತುಹಿಸುಕಿ ಕೊಂದದ್ದನ್ನು ತಿನ್ನದಿರುವಲ್ಲಿ ಜಾಗರೂಕರಾಗಿರುವದನ್ನು ಸೂಚಿಸುವದು. ಪ್ರತಿಯಾಗಿ, ಒಂಟೆಯನ್ನು ನುಂಗುವದೆಂಬದು–ಸಣ್ಣ ವಿಷಯಗಳಲ್ಲಿ ಅವರು ಜಾಗರೂಕರಾಗಿದ್ದರೂ ದೇವರಾಜ್ಞೆಯಲ್ಲಿನ ಮಹತ್ವವುಳ್ಳ ವಿಷಯಗಳನ್ನು ಪೂರ್ಣವಾಗಿ ನಿರ್ಲಕ್ಷಮಾಡಿರುವ ರೆಂಬ ಅರ್ಥಕೊಡುವದು. ಅವರು ಲೋಭಿಗಳೂ ಸ್ವಾರ್ಥಚಿಂತಕರೂ ಆಗಿರುವದಕ್ಕೆ ಬದಲಾಗಿ ಉಪಕಾರಿಗಳಾಗಿರಬೇಕೆಂದೂ ಮತ್ತು ಇದು ಅವರ ಹೃದಯದ ಪ್ರವೃತ್ತಿಯಾದಲ್ಲಿ ಬಾಹ್ಯ ಶುದ್ಧತೆಯು ಅಲ್ಪ ಮಹತ್ವವುಳ್ಳದ್ದಾಗಿರುವದೆಂದು ಆತನು ತಿಳಿಸಿದ್ದನು.

ಅವರು ಸಭಾಮಂದಿರಗಳಲ್ಲಿ ಮುಖ್ಯಸ್ಥಾನಗಳನ್ನು ಆರಿಸಿಕೊಳ್ಳುವವರು ಮತ್ತು ಅಂಗಡಿ ಬೀದಿಗಳಲ್ಲಿ ನಮಸ್ಕಾರ ಗಳನ್ನು ಬಯಸುವವರೆಂದು ಆತನು ತಿಳಿಸಿದ್ದನು. ಅವರಲ್ಲಿದ್ದ ಲೋಭವು ಅವರಲ್ಲಿ ಹೆಮ್ಮೆಯ ಮತ್ತು ಅಪ್ರಮಾಣಿಕತೆಯ ರೂಪತಳೆದಿತ್ತು. ಅವರು "ರಬ್ಬಿ" ಎಂದು ಅಂದರೆ ಗುರು ಅಥವಾ ಧರ್ಮಶಾಸ್ತ್ರಪಾರಂಗತರೆಂಬ ಹೊಗಳಿಕೆಯ ವಂದನೆ ಸ್ವೀಕರಿಸಿಕೊಂಡು ಬಹು ಪ್ರಚಲಿತರಾಗಿ ಧಾರ್ಮಿಕ ವಿಷಯಗಳಲ್ಲಿ ಪ್ರಮುಖರಾಗಿರಲು ಬಯಸುತ್ತಿದ್ದರು. ಅವರು ಹೊರಗೆ ಸುಣ್ಣಾಹಚ್ಚಿ ಶುಚಿಮಾಡಲಾದ ಹಾಗೂ ಒಳಗೆ ಮರಣ ಕೊಳೆಯುವಿಕೆ ಅಶುದ್ಧತೆ ಅಪವಿತ್ರತೆ ಇವುಗಳಿಂದ ತುಂಬಿರುವ ಸಮಾಧಿಗಳಂತಿರುವರೆಂಬುದನ್ನು ಸಾರಿ ಹೇಳಿದ್ದನು. ಅವರು ಕೇವಲ ತೋರಿಕೆಯ ರೂಪದಲ್ಲಿ ಅಥವಾ ಶಿಷ್ಟಾಚಾರಕ್ಕಾಗಿ ಪರಿಶುದ್ಧ ಜನರಾಗಿದ್ದರು.

ಕ್ರೈಸ್ತರ ಎಲ್ಲಾ ಪಂಗಡಗಳ ಅಥವಾ ಯಾವುದೇ ಒಂದು ಪಂಗಡದ ವಿಷಯವಾಗಿ ತೀರ್ಪುಮಾಡಿ ಒಡೆಯನ ಈ ಮಾತುಗಳನ್ನು ಅವರಿಗೆ ಅನ್ವಯಿಸುವದು ನಮಗೆ ಸಂಬಂಧಿಸಿದ ವಿಷಯವಾಗಿರುವದಿಲ್ಲ. ಯೇಸುವಿನಲ್ಲಿದ್ದ ಮನುಷ್ಯರ ಹೃದಯ ಗಳನ್ನು ತಿಳುಕೊಳ್ಳುವ ಶಕ್ತಿಯು ಇಲ್ಲವೇ ಅವರನ್ನು ಕಪಟಿಗ ಳೆಂದು ಸಂಬೋಧಿಸುವ ಅಧಿಕಾರವು ನಮಗಿರುವದಿಲ್ಲ; ನಮಗಿರುವ ಕರ್ತನ ಸಂದೇಶವೇನಂದರೆ: "...ಕಾಲಕ್ಕೆ ಮೊದಲೇ ಯಾವುದನ್ನು ಕುರಿತೂ ತೀರ್ಪುಮಾಡಬೇಡಿರಿ (ಖಂಡಿಸ ಬೇಡಿರಿ);" ಆತನು ಎರಡನೆಯ ಸಾರಿ ಬರುವಾಗ ಎಲ್ಲವನ್ನು ಬೆಳಕಿಗೆ ತರುವನು. ಪ್ರತಿಯೊಬ್ಬನ ನಿಜ ಸ್ಥಿತಿಯನ್ನು ತೋರಿಸಿ ಕೊಡಲಾಗುವದು. ಆತನು ತಿಳಿಸಿರುವದೆಂದರೆ, ಸ್ವಾಮೀ, ನಿನ್ನ ಹೆಸರಿನ ಮೇಲೆ ಅನೇಕ ಮಹತ್ಕಾರ್ಯಗಳನ್ನು ನಡೆಸಲಿಲ್ಲವೇ ಎಂದು ಆ ಸಮಯದಲ್ಲಿ ಎಷ್ಟೋ ಜನರು ನನಗೆ ಹೇಳುವರೆನ್ನು ವದು. ಆದರೆ ಆತನು ಅವರಿಗೆ–ನಿಮ್ಮ ಗುರುತು ನನಗಿಲ್ಲ. ನೀವು ನನ್ನ ಹೆಸರಿನಲ್ಲಿ ಅಧರ್ಮವನ್ನು ನಡೆಸುವವರು, ಅನೀತಿಕಾರ್ಯ ವನ್ನು ಮಾಡುವವರೆಂದು ಅತನು ಅವರಿಗೆ ತಿಳಿಸುವನು.

ವೈಯುಕ್ತಿಕವಾಗಿ ಯಾರಿಗೂ ತೀರ್ಪುಮಾಡದೆ, ನಮ್ಮ ಕಾಲದ ಕ್ರೈಸ್ತತ್ವದಲ್ಲಿ ಅಧಿಕವಾಗಿರುವದನ್ನು ಪೌಲನು ಸಮರ್ಪಕ ವಾಗಿ ವರ್ಣಿಸಿರುವದರಲ್ಲಿ ನಮ್ಮೆಲ್ಲರಿಗೂ ಅಂಜಿಕೆಯಾಗ ಬಹುದು. ನಮ್ಮ ದಿನಗಳ ವಿಷಯವಾಗಿ ಹೇಳುತ್ತಾ ಆತನು ಹೀಗೆ ನುಡಿದಿರುವನು: "ಭಕ್ತಿಯ ವೇಷವಿದ್ದು ಅದರ ಬಲವನ್ನು ಬೇಡವೆನ್ನುವರು" ಅಂದರೆ ಹೊರಗೆ ಕ್ರೈಸ್ತರಾಗಿದ್ದು ಒಳಗೆ ಲೋಭ ಸುಲಿಗೆ ಅನೀತಿ ಎಂಬವುಗಳಿಂದ ಕೂಡಿದವರಾಗಿ ಸಂದೇಹವಾದಿಗಳಾಗಿರುವದು. ಜನರಿಗೆ ಇಂಥಾ ವಿಷಯಗಳಲ್ಲಿ ಸರಿಯಾಗಿ ತೀರ್ಪುಮಾಡುವ ಸಾಮರ್ಥ್ಯವಿರುವದಿಲ್ಲ. ಕರ್ತನಿಗೆ ನಿಷ್ಠೆಯುಳ್ಳವರಾಗಿ ಆಸಕ್ತರಾದ ಕೆಲವರು ಕಪಟಿಗಳೆಂದೂ ಮೋಸಗಾರರೆಂದು ಮುದ್ರಿತರಾಗಿರುವರು; ಆದರೆ ಇತರರು ನಿಷ್ಠೆಯಿಲ್ಲದವರಾಗಿದ್ದರೂ ಅಂದರೆ ಕೇವಲ ಸುಣ್ಣಾಹಚ್ಚಿದ ಸಮಾಧಿಗಳಂತಿದ್ದರೂ ಅವರನ್ನು ಪಂಗಡದಲ್ಲಿನ ಪೂಜ್ಯವ್ಯಕ್ತಿ ಗಳೆಂದು ಇಲ್ಲವೇ ಲೌಕಿಕ ವ್ಯವಸ್ಥೆಗಳಲ್ಲಿನ ಉದಾರಮನಸ್ಸಿಗರು, ಜನೋಪಕಾರಿಗಳು ಎಂದು ಆಕಾಶದ ಮಟ್ಟಿಗೂ ಅವರನ್ನು ಕೊಂಡಾಡಲ್ಪಡಬಹುದಾಗಿರುವದು.

ಪರಿಸಾಯರಲ್ಲಿ ಕೆಲವರು ವಿಶೇಷವಾದ ಶಾಸ್ತ್ರವಿದ್ಯೆ ಯುಳ್ಳವರೂ ಪ್ರತಿಭಾವಂತರೂ ಧರ್ಮಶಾಸ್ತ್ರ ಹಾಗೂ ಪ್ರವಾದಿಗಳ ಗ್ರಂಥದ ಬೋಧನೆಗಳಲ್ಲಿ ಪಾರಂಗತರೂ ಆಗಿದ್ದು ಅವರನ್ನು ಶಾಸ್ತ್ರಿಗಳೆಂದು ಅಂದರೆ ಈ ದಿನದಲ್ಲಿನ ದೈವಶಾಸ್ತ್ರ ಪಂಡಿತರಿಗೆ (ಡಾಕ್ಟರ್ಸ್ ಆಫ್ ಡಿವಿನಿಟಿ) ಸಮನಾಗಿರುವ ಧರ್ಮಶಾಸ್ತ್ರಪಂಡಿತರೆಂಬ ಶೈಲಿಯಲ್ಲಿ ಸಂಬೋಧಿಸಲಾಗುತ್ತಿತ್ತು. ಅವರ ಕಡೆಗೆ ತಿರುಗಿಕೊಂಡು ಯೇಸುವು ಅವರನ್ನು ತರಾಟೆಗೆ ತೆಗೆದುಕೊಂಡು, ಅವರು ಭಾರವಾದ ಹೊರೆಗಳನ್ನು ಸಾಮಾನ್ಯ ಜನರ ಮೇಲೆ ಹೊರಿಸುವರು ಆದರೆ ತಾವೇ ಅದನ್ನು ಹೊರುವುದಿಲ್ಲವೆಂದು ಹೇಳಿದ್ದನು. ಆತನು ಹೇಳಿದುದರ ಅರ್ಥವೇನಾಗಿತ್ತೆಂದರೆ, ಅವರು ದೇವರ ಧರ್ಮಶಾಸ್ತ್ರದ ನಿಯಮಗಳ ವಿಷಯವಾಗಿ ಎಂಥಾ ಒಂದು ಕಠಿಣವಾದ ವ್ಯಾಖ್ಯಾನಮಾಡಿದ್ದರೆಂದರೆ ಅದು ಸಾಮಾನ್ಯ ಜನರನ್ನು ಹಿಂಜರಿಯುವಂತೆ ಮಾಡಿತ್ತು. ಉತ್ಕೃಷ್ಟವಾಗಿಯೂ ಪರಿಪೂರ್ಣವಾಗಿಯೂ ಇರುವ ನೈತಿಕ ಮಟ್ಟವನ್ನು ಸುಂಕದವರ ಮತ್ತು ಪಾಪಿಗಳ ಎದುರಿನಲ್ಲಿ ಇಡುತ್ತಿದ್ದರು, ಆದರೆ ತಾವು ಅದರಂತೆ ನಡೆಯ ಪ್ರಯತ್ನಿಸಲು ಆಲೋಚಿಸುತ್ತಲೂ ಇರಲಿಲ್ಲ. ಈ ಮೂಲಕವಾಗಿ ಜನಸಾಮಾನ್ಯರಿಗೆ ದೇವರ ಸೇವಕರ ಪವಿತ್ರತೆಯ ಬಗ್ಗೆ ಮನವರಿಕೆಮಾಡಿಕೊಟ್ಟು ಅವರ ವಿಷಯವಾಗಿ ಹೆಚ್ಚು ಭಯಭಕ್ತಿಯುಳ್ಳವರಾಗಿರಬೇಕೆಂಬುದನ್ನು ತೋರಿಸುವದು ಇದರ ಸ್ಪಷ್ಟವಾದ ಅಭಿಪ್ರಾಯವಾಗಿತ್ತು. ಅವರು ಪೂರ್ವದಲ್ಲಿದ್ದ ಪ್ರವಾದಿಗಳ ಸಮಾಧಿಗಳನ್ನು ಕಟ್ಟಿದ್ದರು; ತಮ್ಮ ಪಿತೃಗಳೇ ಆ ಪ್ರವಾದಿಗಳನ್ನು ಹಿಂಸೆ ಪಡಿಸಿ ಅವರನ್ನು ಕೊಂದಿದ್ದರೆಂಬುದನ್ನು ಮರೆತುಹೋಗಿದ್ದರು; ಅವರ ಮನೋಬಾಭಾವವನ್ನೇ ಇವರೂ ಹೊಂದಿದ್ದರು.

## ಅಯ್ಯೋ! ಅಯ್ಯೋ! ಅಯ್ಯೋ! ಅಯ್ಯಯ್ಯೋ!

ಯೇಸುವು ಫರಿಸಾಯರ ದುರ್ಗತಿಯ ಬಗ್ಗೆ ಪ್ರವಾದಿಸಿದ್ದಾಗ ಆತನು ಅವರನ್ನು ನಿತ್ಯಯಾತನೆಗೆ ಗುರಿಮಾಡಿ ಅವರಿಗೆ ಖಂಡಿಸಿ ತೀರ್ಪುಮಾಡಿದ್ದನೆಂದಾಗಲಿ ಇಲ್ಲವೇ ಇದು ಅವರ ಮೇಲೆ ಬರಲಿರುವ ದುರ್ಗತಿಯ ಲಕ್ಷಣವೆಂಬುದನ್ನು ತಿಳಿಸಿದ್ದನೆಂದಾಗಲಿ ನಾವು ಭಾವಿಸುವ ಹಾಗಿಲ್ಲ. ಫರಿಸಾಯರ ದುರ್ಗತಿಯೇನಾಗಿತ್ತೆಂದರೆ ದೇವರು ಇಸ್ರಾಯೇಲ್ ಜನಾಂಗಕ್ಕೆ ನೀಡಿದ್ದ ಶ್ರೇಷ್ಠ ಆಶೀರ್ವಾದವು ಅವರಿಂದ ತಪ್ಪಿಹೋಗಲಿರುವ ದೆಂಬುದು, ಅದೇನಂದರೆ ಮೆಸ್ಸೀಯನ ರಾಜ್ಯದಲ್ಲಿ ಮುಖ್ಯ ಸಹಕಾರಿಗಳಾಗುವ ಪದವಿ (ಆದಿಕಾಂಡ 12:3). ಆ ವಾಗ್ದಾನವು ಪ್ರಥಮವಾಗಿ ಇಸ್ರಾಯೇಲ್ಯರಿಗೆ ಸಂಬಂಧಿಸಿದುದಾಗಿತ್ತು. ಅವರು ಸಿದ್ಧರಾಗಿಲ್ಲದೆ ಇದ್ದ ಕಾರಣಕ್ಕಾಗಿ ಅದನ್ನು ಅವರಿಂದ ತೆಗೆಯಲ್ಪಟ್ಟು ಬೇರೊಂದು ಬಗೆಯ ಇಸ್ರಾಯೇಲ್ಯರಿಗೆ ಕೊಡಲಾಗುವದು. ದೇವರು ಮುಂದಾಗಿ ನಿಗದಿಮಾಡಿದ್ದ ಆಯಲ್ಪಟ್ಟವರರಾದ ಕ್ರಿಸ್ತನ ಮದಲಗಿತ್ತಿಯ ಸಂಖ್ಯೆ ಪೂರ್ಣವಾಗಲು ಅವರಲ್ಲಿ "ನಿಜವಾದ ಇಸ್ರಾಯೇಲ್ಯರು" ಸಾಕಷ್ಟು ಮಂದಿ ದೊರೆತಿದ್ದ ಪಕ್ಷಕ್ಕೆ ದೇವರ ರಾಜ್ಯದ ಪ್ರಸ್ತಾವನೆಯು ಅನ್ಯಜನರಿಗೆ ಹೋಗುತ್ತಿರಲಿಲ್ಲ.

ಎಲ್ಲಾ ಇಸ್ರಾಯೇಲ್ಯರಲ್ಲಿ ಫರಿಸಾಯರು ಮೆಸ್ಸೀಯ ನೊಂದಿಗೆ ಸಹಬಾಧ್ಯತೆಯನ್ನು ಪಡೆದುಕೊಳ್ಳಲು ಬಹು ಪ್ರೋತ್ಸಾಹಕರವಾದ ಸ್ಥಿತಿಯಲ್ಲಿದ್ದರು; ಆದರೆ ಯೇಸುವು ಕಂಡುಕೊಂಡ ಹಾಗೆ ತಾವು ಕಳೆದುಕೊಳ್ಳುತ್ತಿರುವದು ಏನೆಂಬುದನ್ನು ಅವರು ಕಂಡುಕೊಳ್ಳಲಿಲ್ಲ. ಆದುದರಿಂದ "ಅಯ್ಯೋ, ನಿಮ್ಮ ಗತಿ" ಎಂದು ಆತನು ವ್ಯಕ್ತಪಡಿಸಿದಾಗ ಅದು ಸಹಾನುಭೂತಿಪೂರ್ವಕವಾಗಿತ್ತೆಂದು, ಕನಿಕರದಿಂದ ಕೂಡಿತ್ತೆಂದು ಪರಿಗಣಿಸಬೇಕು. ಈ ಅಂಶವನ್ನು ಆ ಸನ್ನಿವೇಶವು ರುಜುವಾತು ಪಡಿಸಿದ್ದು ಇದನ್ನು ಅನುಸರಿಸಿಯೇ–ಯೇಸುವನ್ನು ಶಿಲುಬೆಗೆ ಹಾಕಿದ ಸಮಯದಿಂದ ಆರಂಭವಾಗಿ ಕ್ರಿ.ಶ. 70ರಲ್ಲಿ ಅವರ ಪಟ್ಟಣ ಮತ್ತು ರಾಜ್ಯಾಡಳಿತ ವ್ಯವಸ್ಥೆಗಳ ಸಂಪೂರ್ಣ ನಾಶನದಲ್ಲಿ ಅಂತ್ಯಗೊಳಿಸಲು ಅವರ ಜನಾಂಗದ ಮೇಲೆ ಬಂದಿದ್ದ–ಮಹಾ ಸಂಕಟದ ಕಾಲದ ವಿಷಯವಾಗಿ ಪ್ರಕಟಿಸಲ್ಪಟ್ಟಂಥದ್ದು.

ಕರ್ತನು ಇಲ್ಲಿ ಪ್ರಕಟಿಸಿದ್ದಂತೆ, ಆ ಭಯಾನಕವಾದ ಸಂಕಷ್ಟವು ಸುರಿಸಲ್ಪಟ್ಟ ಎಲ್ಲಾ ನೀತಿವಂತರ ರಕ್ತದ ಮತ್ತು ಅವುಗಳಿಗೆ ಪ್ರಾಯಶ್ಚಿತ್ತವಾಗದ ವಿಷಯದಲ್ಲಿ ಯೆಹೋವನು ಯೆಹೂದ್ಯ ಜನಾಂಗದವರೊಂದಿಗೆ ಲೆಕ್ಕತೀರಿಸುವದಕ್ಕಾಗಿತ್ತು. ತಮ್ಮಲ್ಲಿದ್ದ ಕಪಟವು ತಮ್ಮನ್ನು ಮೆಸ್ಸೀಯನ ರಾಜ್ಯದಲ್ಲಿ ಆತನೊಡನೆ ಸಹಬಾಧ್ಯರಾಗುವದಕ್ಕೆ ಸಿದ್ಧವಾಗಲು ಅಡ್ಡಿಮಾಡುತ್ತಿದ್ದುದು ಮಾತ್ರವಲ್ಲದೆ ತಿಳುವಳಿಕೆಗಾಗಿ ಅವರನ್ನು ಅವಲಂಭಿಸಿದ್ದ ಜನ ಸಮೂಹದವರನ್ನೂ ಸಹ ಅಡ್ಡಿಪಡಿಸುತ್ತಿತ್ತೆಂದು ಫರಿಸಾಯರಿಗೆ ತಿಳಿದೇ ಇರಲಿಲ್ಲ. ಯೇಸುವು ಇದನ್ನು ಮುಂದಿನ ವಚನದಲ್ಲಿ (52) ಉಲ್ಲೇಖಿಸಿ ಹೀಗೆ ಹೇಳಿರುವನು: ನೀವು ಜ್ಞಾನಕ್ಕೆ ಸಾಧನವಾದ ಬೀಗದಕೈಯನ್ನು ತೆಗೆದು ಬಿಟ್ಟಿರಿ. ನೀವೂ ಆ ರಾಜ್ಯದ ಒಳಗೆ ಹೋಗಲಿಲ್ಲ ಇಲ್ಲವೇ ಇತರರನ್ನೂ ಒಳಗೆ ಹೋಗಲು ಬಿಡುವದಿಲ್ಲ; ಜನರು ಇದನ್ನು ಮಾಡಲು ಸಂತೋಷ ವುಳ್ಳವರಾದರೂ ನಿಮ್ಮ ನಿರ್ಣಯಗಳನ್ನು ಅವಲಂಭಿಸಿ ದಾರಿತಪ್ಪಿರುವರು.

ಯೆಹೂದ್ಯರ ಕಾಲವನ್ನು ಅಂತ್ಯಗೊಳಿಸಿದ ಆ ಮಹಾ ಸಂಕಟದ ಸಮಯವು ಒಂದು ಮುಂದುವರಿಯಲ್ಪಟ್ಟ ಚಿತ್ರಣ ಅಥವಾ ಪ್ರವಾದನೆಯಾಗಿದ್ದು ಈ ಸುವಾರ್ತಾಯುಗದ ಮುಕ್ತಾಯದಲ್ಲಿ ಇದಕ್ಕಿಂತಲೂ ವಿಸ್ತಾರವಾಗಿ ವ್ಯಾಪಿಸಿಕೊಳ್ಳುವ ಸಂಕಟದ ಸಮಯವನ್ನು ಸೂಚಿಸುವದೆಂದು ಸತ್ಯವೇದ ವಿದ್ಯಾರ್ಥಿಗಳು ಅತಿ ಸಾಧಾರಣವಾದ ರೀತಿಯಲ್ಲಿ ನಂಬಿರುವರು. ಅದು ನಮ್ಮ ದಿನದ ಫರಿಸಾಯರಲ್ಲಿ ಹಲವರ ಮೇಲೆ ದುರ್ಗತಿಯನ್ನು ಬರಮಾಡುವದು ಮಾತ್ರವಲ್ಲದೆ ಈ ಕಾಲದ ವ್ಯವಸ್ಥೆಗಳನ್ನು ಉಚ್ಚಾಟಿಸುವ ಸಂಬಂಧದ ಸಲುವಾಗಿ ಕೆಟ್ಟದ್ದನ್ನು ನಡೆಸುವ ಎಲ್ಲರ ಮೇಲೆ ಬರುವ ಸಂಕಟವನ್ನು ಸಹ ಸೂಚಿಸುವದು. ಇದು ನೀತಿಯನ್ನು ಸ್ಥಾಪಿಸುವದಕ್ಕೆ ಅಂದರೆ ಮೆಸ್ಸೀಯನ ಮಹಿಮೆಯುಳ್ಳ ಆಳ್ವಿಕೆ ಸ್ಥಾಪನೆಯಾಗುವದಕ್ಕೆ ಒಂದು ಪೀಠಿಕೆಯಂತಿರುವದು.

*****

| ದಿನಾಂಕ | ಸ್ಥಳ | ಘಟನೆ | ಮತ್ತಾಯ | ಮಾರ್ಕ | ಲೂಕ | ಯೋಹಾನ |
|---|---|---|---|---|---|---|
| ಕ್ರಿ.ಶ. 32 | ಬಹುಶಃ ಯೂದಾಯ | ದೇವರ ಪರಿಪಾಲನೆ ಬಗ್ಗೆ ಪ್ರಬೋಧನೆ; ನಂಬಿಗಸ್ತನಾದ ಮನೆವಾರ್ತೆಯವನು | –– | –– | 12:1–59 | –– |

## ಲೂಕ 12:1–59

ಇಷ್ಟರಲ್ಲಿ ಸಾವಿರಾರು ಜನರು ಒಬ್ಬರನ್ನೊಬ್ಬರು ತುಳಿಯುವಷ್ಟು ಕೂಡಿಬಂದಿರಲಾಗಿ ಆತನು ಮೊದಲು ತನ್ನ ಶಿಷ್ಯರಿಗೆ ಹೇಳುವದಕ್ಕೆ ತೊಡಗಿದ್ದೇನಂದರೆ–ಫರಿಸಾಯರ ಕಪಟವೆಂಬ ಹುಳಿಹಿಟ್ಟಿನ ವಿಷಯದಲ್ಲಿ ಜಾಗರೂಕರಾಗಿರ್ರಿ. ಮರೆಯಾಗಿರುವ ಯಾವದದೂ ವ್ಯಕ್ತವಾಗದೆ ಇರುವದಿಲ್ಲ; ಹೊರಪಡದ ರಹಸ್ಯವೂ ಇಲ್ಲ. ಹೀಗಿರುವದರಿಂದ ನೀವು ಕತ್ತಲಲ್ಲಿ ಹೇಳಿದಂಥದು ಬೆಳಕಿನಲ್ಲಿ ಕೇಳಲಾಗುವದು; ಮತ್ತು ನೀವು ಕೋಣೆಗಳೊಳಗೆ ಕಿವಿಮಾತು ಆಡಿದ್ದು ಮಾಳಿಗೆಗಳ ಮೇಲೆ ಸಾರಲಾಗುವದು.

ನನ್ನ ಸ್ನೇಹಿತರಾದ ನಿಮಗೆ ಹೇಳುತ್ತೇನೆ–ದೇಹವನ್ನು ಕೊಂದು ಅದಕ್ಕಿಂತ ಹೆಚ್ಚಿನದೇನೂ ಮಾಡಲಾರದವರಿಗೆ ಹೆದರಬೇಡಿರಿ. ನೀವು ಯಾರಿಗೆ ಹೆದರಬೇಕೋ ನಿಮಗೆ ತಿಳಿಸುತ್ತೇನೆ; ಕೊಂದ ಮೇಲೆ ನರಕದೊಳಗೆ ಹಾಕುವ ಅಧಿಕಾರವುಳ್ಳವನಿಗೆ ಹೆದರಬೇಕು; ಹೌದು, ಆತನಿಗೇ ಹೆದರಬೇಕೆಂದು ನಿಮಗೆ ಹೇಳುತ್ತೇನೆ. ಐದು ಗುಬ್ಬಿಗಳನ್ನು ಎರಡು ದುಡ್ಡಿಗೆ ಮಾರುತ್ತಾರಲ್ಲಾ? ಆದಾಗ್ಯೂ ಅವುಗಳಲ್ಲಿ ಒಂದಾದರೂ ದೇವರಿಗೆ ಮರೆತುಹೋಗುವದಿಲ್ಲ. ನಿಮ್ಮ ತಲೇಕೂದಲುಗಳು ಸಹ ಎಲ್ಲವೂ ಎಣಿಕೆಯಾಗಿವೆ. ಹೆದರಬೇಡಿರಿ; ಬಹಳ ಗುಬ್ಬಿಗಳಿಗಿಂತ ನೀವು ಹೆಚ್ಚಿನವರು. ನಾನು ನಿಮಗೆ ಹೇಳುತ್ತೇನೆ, ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ ಮನುಷ್ಯಕುಮಾರನು ಸಹ ಅವನನ್ನು ದೇವದೂತರ ಮುಂದೆ ತನ್ನವನೆಂದು ಒಪ್ಪಿಕೊಳ್ಳುವನು. ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನಲ್ಲವೆಂದು ಹೇಳುವನೋ ಅವನನ್ನು ನಾನು ದೇವದೂತರ ಮುಂದೆ ನನ್ನವನಲ್ಲವೆಂದು ಹೇಳುವೆನು. ಮನುಷ್ಯಕುಮಾರನ ಮೇಲೆ ಏನಾದರೂ ಮಾತಾಡುವ ಪ್ರತಿಯೊಬ್ಬನಿಗೆ ಕ್ಷಮಾಪಣೆ ಯಾಗುವದು; ಆದರೆ ಪವಿತ್ರಾತ್ಮನನ್ನು ದೂಷಿಸಿದವನಿಗೆ

ಕ್ಷಮಾಪಣೆಯಿಲ್ಲ. ಅವರು ನಿಮ್ಮನ್ನು ಸಭಾಮಂದಿರಗಳ ಅಧ್ಯಕ್ಷರ ಮುಂದಕ್ಕೂ ಅಧಿಕಾರಿಗಳ ಮುಂದಕ್ಕೂ ಅಧಿಪತಿಗಳ ಮುಂದಕ್ಕೂ ಹಿಡುಕೊಂಡು ಹೋಗುವಾಗ ಹೇಗೆ ಉತ್ತರ ಕೊಡಬೇಕು? ಏನು ಉತ್ತರಕೊಡಬೇಕು? ಏನು ಹೇಳಬೇಕು ಎಂದು ಚಿಂತೆಮಾಡ ಬೇಡಿರಿ. ಯಾಕಂದರೆ ನೀವು ಹೇಳತಕ್ಕದ್ದನ್ನು ಪವಿತ್ರಾತ್ಮನು ಆ ಗಳಿಗೆಯಲ್ಲಿಯೇ ನಿಮಗೆ ಕಲಿಸಿಕೊಡುವನು ಅಂದನು.

ಆಗ ಜನರಲ್ಲಿ ಒಬ್ಬನು–ಬೋಧಕನೇ, ತಂದೆಯ ಆಸ್ತಿಯನ್ನು ನನಗೆ ಪಾಲುಮಾಡಿಕೊಡುವಂತೆ ನನ್ನ ಅಣ್ಣನಿಗೆ ಹೇಳು ಎಂದು ಆತನನ್ನು ಕೇಳಿಕೊಳ್ಳಲು ಆತನು–ಎಲಾ ಮನುಷ್ಯಾ, ನನ್ನನ್ನು ನಿಮಗೆ ನ್ಯಾಯಾಧಿಪತಿಯನ್ನಾಗಿ ಅಥವಾ ಪಾಲುಮಾಡುವವನನ್ನಾಗಿ ನೇಮಿಸಿದವರಾರು ಎಂದು ಅವನನ್ನು ಕೇಳಿ ಜನರಿಗೆ–ಎಲ್ಲಾ ಲೋಭಕ್ಕೂ ಎಚ್ಚರಿಕೆಯಾಗಿದ್ದು ನಿಮ್ಮನ್ನು ಕಾಪಡಿಕೊಳ್ಳಿರಿ. ಒಬ್ಬನಿಗೆ ಎಷ್ಟು ಆಸ್ತಿಯಿದ್ದರೂ ಅದು ಅವನಿಗೆ ಜೀವಾಧಾರವಾಗುವದಿಲ್ಲ ಎಂದು ಹೇಳಿ ಒಂದು ಸಾಮ್ಯವನ್ನು ಹೇಳಿದನು; ಅದೇನಂದರೆ ಒಬ್ಬಾನೊಬ್ಬ ಐಶ್ವರ್ಯವಂತನ ಭೂಮಿಯು ಚೆನ್ನಾಗಿ ಬೆಳೆಯಿತು. ಆಗ ಅವನು ತನ್ನೊಳಗೆ–ನಾನೇನು ಮಾಡಲಿ? ನನ್ನ ಬೆಳೆಯನ್ನು ತುಂಬಿಡುವದಕ್ಕೆ ನನಗೆ ಸ್ಥಳವಿಲ್ಲವಲ್ಲಾ ಎಂದು ಆಲೋಚಿಸಿ–ಒಂದು ಕೆಲಸ ಮಾಡುತ್ತೇನೆ; ನನ್ನ ಕಣಜಗಳನ್ನು ಕೀಳಿಸಿ ಅವುಗಳಿಗಿಂತ ದೊಡ್ಡ ಕಣಜಗಳನ್ನು ಕಟ್ಟಿಸುವೆನು. ಅಲ್ಲಿ ನನ್ನ ಎಲ್ಲಾ ದವಸಧಾನ್ಯಗಳನ್ನೂ ಸರಕುಗಳನ್ನೂ ತುಂಬಿಟ್ಟು ನನ್ನ ಜೀವಾತ್ಮಕ್ಕೆ–ಜೀವವೇ, ಅನೇಕ ವರುಷಗಳಿಗೆ ಬೇಕಾದಷ್ಟು ಸರಕು ನಿನಗೆ ಬಿದ್ದವೆ; ವಿಶ್ರಮಿಸಿಕೋ, ಊಟಮಾಡು, ಕುಡಿ, ಸುಖಪಡು ಎಂದು ಹೇಳುವೆನು ಅಂದುಕೊಂಡನು. ಆದರೆ ದೇವರು ಅವನಿಗೆ–ಬುದ್ಧಿಹೀನನು ನೀನು! ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು; ಆಗ ನೀನು ಸಿದ್ಧಮಾಡಿಟ್ಟಿರುವದು ಯಾರಿಗಾ ಗುವದು ಎಂದು ಹೇಳಿದನು. ತನಗೋಸ್ಕರ ದ್ರವ್ಯವನ್ನಿಟ್ಟು ಕೊಂಡು ದೇವರ ವಿಷಯಗಳಲ್ಲಿ ಐಶ್ವರ್ಯವಂತನಾಗದೆ ಇರುವವನು ಅವನಂತೆಯೇ ಇದ್ದಾನೆ ಅಂದನು.

ಇದಲ್ಲದೆ ಆತನು ತನ್ನ ಶಿಷ್ಯರಿಗೆ ಹೇಳಿದ್ದೇನಂದರೆ–ಈ ಕಾರಣದಿಂದ ಪ್ರಾಣಾಧಾರಣೆಗೆ ಏನು ಊಟಮಾಡಬೇಕು? ದೇಹರಕ್ಷಣೆಗೆ ಏನು ಹೊದ್ದುಕೊಳ್ಳಬೇಕು ಎಂದು ಚಿಂತೆಮಾಡ ಬೇಡಿರಿ ಎಂಬದಾಗಿ ನಿಮಗೆ ಹೇಳುತ್ತೇನೆ. ಊಟಕ್ಕಿಂತ ಪ್ರಾಣವು ಉಡುಪಿಗಿಂತ ದೇಹವು ಮೇಲಾದದ್ದಷ್ಟೆ. ಕಾಗೆಗಳನ್ನು ಲಕ್ಷ್ಯವಿಟ್ಟು ಯೋಚಿಸಿರಿ; ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಅವುಗಳಿಗೆ ಉಗ್ರಾಣವೂ ಇಲ್ಲ, ಕಣಜವೂ ಇಲ್ಲ; ಆದಾಗ್ಯೂ ದೇವರು ಅವುಗಳನ್ನು ಸಾಕಿ ಸಲಹುತ್ತಾನೆ. ಹಕ್ಕಿಗಳಿಗಿಂತ ನೀವು ಎಷ್ಟೋ ಹೆಚ್ಚಿನವರಲ್ಲವೇ. ಚಿಂತೆಮಾಡಿ ಮಾಡಿ ಒಂದು ಮೊಳ ಉದ್ದ ಬೆಳೆಯುವದು ನಿಮ್ಮಲ್ಲಿ ಯಾರಿಂದಾದೀತು? ಅದದರಿಂದ ಕೇವಲ ಅಲ್ಪವಾದದ್ದನ್ನಾದರೂ ಮಾಡುವದಕ್ಕೆ ನೀವು ಅಶಕ್ತರಾಗಿರಲಾಗಿ ಮಿಕ್ಕಾದದ್ದರ ವಿಷಯದಲ್ಲಿ ಚಿಂತೆಮಾಡುವದೇಕೆ? ಹೂವುಗಳು ಬೆಳೆಯುವ ರೀತಿಯನ್ನು ಲಕ್ಷ್ಯವಿಟ್ಟು ಯೋಚಿಸಿರಿ; ಅವು ದುಡಿಯುವದಿಲ್ಲ, ನೂಲುವದಿಲ್ಲ; ಆದರೂ ಈ ಹೂವುಗಳೊಳಗೆ ಒಂದಕ್ಕಿರುವಷ್ಟು ಅಲಂಕಾರವು ಅರಸನಾದ ಸೊಲೋಮೋನನಿಗೆ ಸಹ ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ. ಎಲೈ ಅಲ್ಪವಿಶ್ವಾಸಿಗಳೇ, ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ ನಿಮಗೆ ಉಡಿಸಿ ತೊಡಿಸುವನು. ಏನು ಊಟಮಾಡಬೇಕು? ಏನು ಕುಡಿಯಬೇಕು ಎಂದು ತವಕಪಡಬೇಡಿರಿ, ಮತ್ತು ಅನುಮಾನ ಪಡಬೇಡಿರಿ. ಇವೆಲ್ಲವುಗಳ ಮೇಲೆ ಇಹಲೋಕದ ಜನರು ತವಕಪಡುತ್ತಾರೆ; ಇವು ನಿಮಗೆ ಅವಶ್ಯವೆಂದು ನಿಮ್ಮ ತಂದೆಗೆ ತಿಳಿದಿದೆ. ನೀವಾದರೋ ದೇವರ ರಾಜ್ಯಕ್ಕಾಗಿ ತವಕಪಡಿರಿ; ಇದರ ಕೂಡ ಅವೂ ನಿಮಗೆ ದೊರಕುವವು. ಚಿಕ್ಕ ಹಿಂಡೇ, ಹೆದರಬೇಡ; ಆ ರಾಜ್ಯವನ್ನು ನಿಮಗೆ ದಯಪಾಲಿಸುವದಕ್ಕೆ ನಿಮ್ಮ ತಂದೆಯು ಸಂತೋಷವುಳ್ಳವನಾಗಿದ್ದಾನೆ. ನಿಮಗಿರುವದನ್ನು ಮಾರಿಬಿಟ್ಟು ದಾನಾಕೊಡಿರಿ; ಹಳೇವಾಗದಂಥ ಹಮ್ಮಿಣಿಗಳನ್ನು ಮಾಡಿಕೊಂಡು ಪರಲೋಕದಲ್ಲಿ ಲಯವಾಗದ ದ್ರವ್ಯವನ್ನು ಇಟ್ಟುಕೊಳ್ಳಿರಿ. ಅಲ್ಲಿ ಕಳ್ಳನು ಸಮೀಪಕ್ಕೆ ಬರುವದಿಲ್ಲ; ಅದು ನುಸಿಹಿಡಿದು ನಾಶವಾಗುವದಿಲ್ಲ. ನಿಮ್ಮ ಗಂಟು ಇದ್ದಲ್ಲಿಯೇ ನಿಮ್ಮ ಮನಸ್ಸೂ ಇರುವದಷ್ಟೆ.

ನಿಮ್ಮ ನಡುಗಳು ಕಟ್ಟಿರಲಿ; ನಿಮ್ಮ ದೀವಟಿಗೆಗಳು ಉರಿಯುತ್ತಾ ಇರಲಿ. ನೀವಂತೂ ತಮ್ಮ ಯಜಮಾನನು ಬಂದು ತಟ್ಟಿದ ಕೂಡಲೆ ಕದವನ್ನು ತೆರೆಯುವದಕ್ಕೆ ಸಿದ್ಧವಾಗಿದ್ದು ಮದುವೇ ಊಟವನ್ನು ಯಾವಾಗ ತೀರಿಸಿಕೊಂಡು ಬರುವನೋ ಎಂದು ಅವನನ್ನು ಎದುರುನೋಡುತ್ತಿರುವ ಮನುಷ್ಯರಂತಿರಿ. ಯಜಮಾನನು ಬಂದು ಯಾವ ಯಾವ ಆಳುಗಳು ಎಚ್ಚರವಾಗಿರುವದನ್ನು ಕಂಡುಕೊಳ್ಳುವನೋ ಆ ಆಳುಗಳೇ ಧನ್ಯರು. ಆತನೇ ನಡುಕಟ್ಟಿಕೊಂಡು ಅವರನ್ನು ಊಟಕ್ಕೆ ಕೂಡ್ರಿಸಿ ಹತ್ತರಕ್ಕೆ ಬಂದು ಅವರಿಗೆ ಸೇವೆಮಾಡುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಎರಡನೆಯ ಜಾವದಲ್ಲಿಯಾಗಲಿ ಮೂರನೆಯ ಜಾವದಲ್ಲಿಯಾಗಲಿ ಬಂದಾತನಿಗೆ ಹಾಗೆ ಕಾಣಿಸಿಕೊಂಡವರು ಧನ್ಯರು. ಕಳ್ಳನು ಬರುವ ಗಳಿಗೆಯು ಮನೇಯಜಮಾನನಿಗೆ ತಿಳಿದಿದ್ದರೆ ಅವನು ಎಚ್ಚರವಾಗಿದ್ದು ತನ್ನ ಮನೆಗೆ ಕನ್ನಾಹಾಕಗೊಡಿಸುತ್ತಿರಲಿಲ್ಲವೆಂದು ತಿಳುಕೊಳ್ಳಿರಿ. ನೀವು ಸಹ ಸಿದ್ಧವಾಗಿರ್ರಿ. ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ ಅಂದನು.

ಆಗ ಪೇತ್ರನು–ಸ್ವಾಮೀ, ನೀನು ಈ ಸಾಮ್ಯವನ್ನು ನಮಗೆ ಮಾತ್ರ ಹೇಳುತ್ತೀಯೋ? ಎಲ್ಲರಿಗೂ ಹೇಳುತ್ತೀಯೋ ಎಂದು ಕೇಳಲು ಸ್ವಾಮಿ ಹೇಳಿದ್ದೇನಂದರೆ–ಹೊತ್ತುಹೊತ್ತಿಗೆ ಅಶನಕ್ಕೆ ಬೇಕಾದದ್ದನ್ನು ಅಳೆದುಕೊಡುವದಕ್ಕಾಗಿ ಯಜಮಾನನು ತನ್ನ ಮನೆಯವರ ಮೇಲೆ ನೇಮಿಸಿದ ನಂಬಿಗಸ್ತನೂ ವಿವೇಕಿಯೂ ಆಗಿರುವ ಮನೆವಾರ್ತೆಯವನು ಯಾರು? ಯಜಮಾನನು ಬಂದು ಯಾವ ಆಳು ಹೀಗೆ ಮಾಡುವದನ್ನು ಕಾಣುವನೋ ಆ ಆಳು ಧನ್ಯನು. ಅಂಥವನನ್ನು ಅವನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ಆ ಆಳು–ನನ್ನ ಯಜಮಾನನು ಬರುವದಕ್ಕೆ ತಡಮಾಡುತ್ತಾನೆ ಅಂತ ತನ್ನ ಮನಸ್ಸಿನಲ್ಲಿ ಅಂದುಕೊಂಡು

ಗಂಡಾಳು ಹೆಣ್ಣಾಳುಗಳನ್ನು ಹೊಡೆಯುವದಕ್ಕೂ ತಿಂದು ಕುಡಿದು ಅಮಲೇರುವದಕ್ಕೂ ತೊಡಗಿದರೆ ಅವನು ನೆನಸದ ದಿನದಲ್ಲಿಯೂ ತಿಳಿಯದ ಗಳಿಗೆಯಲ್ಲಿಯೂ ಆ ಆಳಿನ ಯಜಮಾನನು ಬಂದು ಅವನನ್ನು ಕಠಿನವಾಗಿ ಹೊಡಿಸಿ ಅಪನಂಬಿಗಸ್ತರಿಗೆ ಆಗತಕ್ಕ ಗತಿಯನ್ನು ಅವನಿಗೆ ನೇಮಿಸುವನು. ತನ್ನ ಯಜಮಾನನ ಚಿತ್ತವನ್ನು ತಿಳಿದ ಆಳು ಸಿದ್ಧಮಾಡದೆ ಹೋದರೆ ಅಥವಾ ಅವನ ಚಿತ್ತಕ್ಕನುಸಾರ ನಡೆಯದಿದ್ದರೆ ಅವನು ಬಹಳ ಪೆಟ್ಟು ತಿನ್ನುವನು. ತಿಳಿಯದೆ ಪೆಟ್ಟುಗಳಿಗೆ ಯೋಗ್ಯವಾದದ್ದನ್ನು ನಡಿಸಿದವನು ಸ್ವಲ್ಪ ಪೆಟ್ಟು ತಿನ್ನುವನು. ಯಾವನಿಗೆ ಬಹಳವಾಗಿ ಕೊಟ್ಟದಯೋ ಅವನ ಕಡೆಯಿಂದ ಬಹಳವಾಗಿ ನಿರೀಕ್ಷಿಸಲ್ಪಡುವದು; ಇದಲ್ಲದೆ ಯಾವನ ವಶಕ್ಕೆ ಬಹಳವಾಗಿ ಒಪ್ಪಿಸಿದೆಯೋ ಅವನ ಕಡೆಯಿಂದ ಇನ್ನೂ ಹೆಚ್ಚಾಗಿ ಕೇಳುವರು.

ನಾನು ಬೆಂಕಿಯನ್ನು ಭೂಮಿಯ ಮೇಲೆ ಹಾಕಬೇಕೆಂದು ಬಂದೆನು; ಅದು ಇಷ್ಟರೊಳಗೆ ಹತ್ತಿಕೊಂಡರೆ ನನಗೆ ಎಷ್ಟೋ ಸಂತೋಷ! ಆದರೆ ನಾನು ಹೊಂದತಕ್ಕ ದೀಕ್ಷಾಸ್ನಾನ ಒಂದುಂಟು. ಅದು ನೆರವೇರುವ ತನಕ ನಾನು ಎಷ್ಟೋ ಬಿಕ್ಕಟ್ಟಿನಲ್ಲಿದ್ದೇನೆ. ಭೂಲೋಕದಲ್ಲಿ ಸಮಾಧಾನವನ್ನುಂಟು ಮಾಡುವದಕ್ಕೆ ಬಂದೆನೆಂದು ಭಾವಿಸುತ್ತೀರೋ? ಅದಕ್ಕೆ ಬರಲಿಲ್ಲ, ಭೇದವನ್ನುಂಟು ಮಾಡುವದಕ್ಕೆ ಬಂದೆನೆಂದು ನಿಮಗೆ ಹೇಳುತ್ತೇನೆ. ಹೇಗಂದರೆ–ಇಂದಿನಿಂದ ಒಂದೇ ಮನೆಯಲ್ಲಿರುವ ಐದು ಮಂದಿಯೊಳಗೆ ಇಬ್ಬರಿಗೆ ವಿರೋಧವಾಗಿ ಮೂವರು, ಮೂವರಿಗೆ ವಿರೋಧವಾಗಿ ಇಬ್ಬರು, ಈ ಮೇರೆಗೆ ಭೇದವುಳ್ಳವರಾಗಿರುವರು. ಮಗನಿಗೆ ವಿರೋಧವಾಗಿ ತಂದೆಯು, ತಂದೆಗೆ ವಿರೋಧವಾಗಿ ಮಗನು, ಮಗಳಿಗೆ ವಿರೋಧವಾಗಿ ತಾಯಿಯು, ತಾಯಿಗೆ ವಿರೋಧವಾಗಿ ಮಗಳು, ಸೊಸೆಗೆ ವಿರೋಧವಾಗಿ ಅತ್ತೆಯು, ಅತ್ತೆಗೆ ವಿರೋಧವಾಗಿ ಸೊಸೆಯು ಭೇದವುಳ್ಳವರಾಗಿರುವರು ಅಂದನು.

ಇದಲ್ಲದೆ ಆತನು ಜನರೆಲ್ಲರಿಗೂ ಹೇಳಿದ್ದೇನಂದರೆ– ಪಶ್ಚಿಮ ದಿಕ್ಕಿನಲ್ಲಿ ಮೋಡ ಏಳುವದನ್ನು ನೀವು ನೋಡಿದ ಕೂಡಲೆ ಮಳೆ ಬರುತ್ತದೆ ಅನ್ನುತ್ತೀರಿ; ಹಾಗೇ ಆಗುತ್ತದೆ. ದಕ್ಷಿಣ ದಿಕ್ಕಿನ ಗಾಳಿ ಬೀಸಲಾಗಿ ಸೆಕೆ ಹುಟ್ಟುವದು ಅನ್ನುತ್ತೀರಿ; ಅದೂ ಆಗುತ್ತದೆ. ಕಪಟಿಗಳು ನೀವು, ಭೂವ್ಯಾಕಾಶಗಳ ಭಾವವನ್ನು ಶೋಧಿಸುವದಕ್ಕೆ ನಿಮಗೆ ಗೊತ್ತಿರುವಲ್ಲಿ ಈ ಸಮಯವನ್ನು ಶೋಧಿಸುವದಕ್ಕೆ ನಿಮಗೆ ಯಾಕೆ ಗೊತ್ತಿಲ್ಲ?

ಇದಲ್ಲದೆ ಇಂಥಿಂಥದು ನ್ಯಾಯವಾದದ್ದೆಂದು ನೀವೇ ಯಾಕೆ ತೀರ್ಮಾನಮಾಡಿಕೊಳ್ಳುವದಿಲ್ಲ? ನೀನು ವಾದಿಯ ಸಂಗಡ ನ್ಯಾಯಾಧಿಪತಿಯ ಮುಂದಕ್ಕೆ ಹೋಗುತ್ತಿರುವಾಗ ದಾರಿಯಲ್ಲೇ ತಂಟೆಹರಿಸಿಕೊಳ್ಳಲು ಪ್ರಯತ್ನಮಾಡು; ಇಲ್ಲದಿದ್ದರೆ ಅವನು ನಿನ್ನನ್ನು ನ್ಯಾಯಾಧಿಪತಿಯ ಬಳಿಗೆ ಎಳಕೊಂಡು ಹೋದಾನು; ನ್ಯಾಯಾದಿಪತಿಯು ನಿನ್ನನ್ನು ಸೆರೇಯಜಮಾನನ ವಶಕ್ಕೆ ಒಪ್ಪಿಸಾನು; ಸೆರೇಯಜಮಾನನು ನಿನ್ನನ್ನು ಸೆರೆಮನೆಯಲ್ಲಿ ಹಾಕಾನು. ನೀನು ಒಂದು ಕಾಸನ್ನಾದರೂ ನಿಲ್ಲಿಸಿಕೊಳ್ಳದೆ ಎಲ್ಲಾ ಸಲ್ಲಿಸುವ ತನಕ ಅಲ್ಲಿಂದ ಬರುವದೇ ಇಲ್ಲವೆಂದು ನಿನಗೆ ಹೇಳುತ್ತೇನೆ ಅಂದನು.

# ಒಳ್ಳೆಯ ರೀತಿಯ ಅರಿಕೆಗೆ ಪ್ರತಿಯಾದ ಕೆಟ್ಟ ಅರಿಕೆ

**ರೀಪ್ರಿಂಟ್ಸ್ ಪುಟ 5390**

## ಲೂಕ 12:1–12

**"ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನೆಂದು ಒಪ್ಪಿಕೊಳ್ಳುವನೋ ಮನುಷ್ಯಕುಮಾರನು ಸಹ ಅವನನ್ನು ದೇವದೂತರ ಮುಂದೆ ತನ್ನವನೆಂದು ಒಪ್ಪಿಕೊಳ್ಳುವನು." – ಲೂಕ 12:8**

ಒಂದು ದೊಡ್ಡ ಗುಂಪು ರಕ್ಷಕನನ್ನು ಸುತ್ತುವರಿದು, "ಯಾವ ಮನುಷ್ಯನೂ ಮಾತನಾಡದ ರೀತಿಯಲ್ಲಿ ಮಾತನಾಡು –ತ್ತಿದ್ದವನನ್ನು", ಕೇಳಲು ಉತ್ಸುಕರಾಗಿದ್ದರು. ಜನರಗುಂಪನ್ನು ನಿರ್ಲಕ್ಷಿಸಿ ಯೇಸು ತನ್ನ ಶಿಷ್ಯರಿಗೆ ಹೀಗೆ ಹೇಳಿದ್ದನು: "ಫರಿಸಾಯರ ಕಪಟವೆಂಬ ಹುಳಿಹಿಟ್ಟಿನ ವಿಷಯದಲ್ಲಿ ಜಾಗರೂಕರಾಗಿರ್ರಿ." ಇಲ್ಲಿ ಮತ್ತು ಎಲ್ಲೆಡೆ ತನ್ನ ಬೋಧನೆಗಳಲ್ಲಿ ಯೇಸುವು ಹುಳಿಹಿಟ್ಟನ್ನು ಒಂದು ದುಷ್ಪ್ರಭಾವಕ್ಕೆ ಸಂಕೇತವಾಗಿ ಅಥವಾ ಸಚಿತ್ರನಿದರ್ಶನವಾಗಿ ಉಪಯೋಗಿಸಿರುವನು. ಹುಳಿ–ಹಿಟ್ಟನ್ನು ಯಾವುದೇ ಒಂದು ಒಳ್ಳೆಯದನ್ನಾಗಲೀ ಅಥವಾ ಶುದ್ಧ ವಾದದನ್ನಾಗಲೀ ಸೂಚಿಸುವದಕ್ಕೆ ಬಳಸಿರುವ ಒಂದು ನಿದರ್ಶನ ವಾಗಲೀ ನಮಗೆ ತಿಳಿದಿರುವದಿಲ್ಲ. ಪಸ್ಕಹಬ್ಬದ ಸಮಯದಲ್ಲಿ ಯೆಹೂದ್ಯರು ಇದನ್ನು ಬಳಸುವದನ್ನು ನಿರ್ಬಂಧಿಸಲಾಗಿದ್ದು, ಹೀಗೆ ಇದು ಪಾಪವನ್ನು ವಿಸರ್ಜಿಸುವದಕ್ಕೆ ಸಂಕೇತವಾಗಿತ್ತು.

ಆ ಸಮಯದಲ್ಲಿ ವಿದ್ಯಾವಂತರಾಗಿದ್ದ ಫರಿಸಾಯರು ಅಭ್ಯಾಸಿಸುತ್ತಿದ್ದ ಕಪಟವು ಹುಳಿ ಅಶುದ್ಧತೆ ಪಾಪಗಳಾಗಿದ್ದು ಅವರ ಪ್ರಭಾವವನ್ನು ಕಲುಶಿತಗೊಳಿಸಿದ್ದವೆಂದು ಯೇಸುವು ತಿಳಿಸಿದ್ದನು. ಆತನ ಶಿಷ್ಯರು ಪ್ರಾಮಾಣಿಕರೂ ಯಥಾರ್ಥರೂ ಶುದ್ಧರೂ ವ್ಯರ್ಥಮಾತುಗಳಿಂದ ಮತ್ತು ಮೋಸಗಳಿಂದ ಮುಕ್ತರೂ ಆಗಿರಬೇಕು. ಅವರ ಮಾತುಗಳು ಮತ್ತು ಕ್ರಿಯೆಗಳು ಮುಚ್ಚುಮರೆಯಿಲ್ಲವುಗಳಾಗಿರಬೇಕು. ಎಲ್ಲಾ ಕಪಟಗಳು ಮತ್ತು ಪಾಪಗಳು ಬಹಿರಂಗಮಾಡಲ್ಪಟ್ಟು ಪ್ರಕಟಗೊಳ್ಳುವವೆಂದು ಯೇಸುವು ತಿಳಿಸಿರುವನು. ತನ್ನ ರಾಜ್ಯದಲ್ಲಿ ಪುನರುತ್ಥಾನ ಗೊಳಿಸುವ ಶಕ್ತಿಯು ಪ್ರಯೋಗಿಸಲ್ಪಟ್ಟಾಗ ಕತ್ತಲಲ್ಲಿ ಅಡಗಿದ್ದ ಸಂಗತಿಗಳೆಲ್ಲವೂ ರದ್ದುಮಾಡಲ್ಪಟ್ಟು ಮನುಷ್ಯರೆಲ್ಲರ ಗುಟ್ಟುಗಳು ಹೊರಹಾಕಲ್ಪಡುವದೆನ್ನುವದು ಆತನ ಮಾತಿನ ಅರ್ಥವಾಗಿ ತ್ತೆಂಬುದು ನಿಸ್ಸಂದೇಹವಾಗಿತ್ತು. ಮುಂತಿಳಿಸಿರುವಂತೆ, ಇದು

ಹಲವರು ಅವಮಾನ ಹೊಂದುವದಕ್ಕೆ ಮತ್ತು ತಿರಸ್ಕರಿಸಲ್ಪಡುವದಕ್ಕೆ ಮೂಲವಾಗುವದೆಂಬುದರಲ್ಲಿ ಸಂಶಯವಿರುವದಿಲ್ಲ.

ಹೀಗೆ ಕೆಲವರು ಪುನರುತ್ಥಾನದಲ್ಲಿ ಎದ್ದುಬಂದು ಆಕಾಶದ ನಕ್ಷತ್ರಗಳಂತೆ ಹೊಳೆಯುವರೆಂದು ಮತ್ತು ಇತರರು ನಿಂದನೆ ನಿತ್ಯತಿರಸ್ಕಾರಗಳನ್ನು ಹೊಂದುವರೆಂದು ನಾವು ಓದುತ್ತೇವೆ. (ದಾನಿಯೇಲ 12:2) ಹೀಗಾದರೂ ಇಬ್ರೀಯ ಭಾಷೆಯ ಪಠ್ಯಭಾಗವು ಇದನ್ನು ಒಂದು ದೀರ್ಘಕಾಲದ್ದೆಂದು ಆದರೆ ನಿತ್ಯವಾಗಿರುವಂಥದಲ್ಲವೆಂದು ಸೂಚಿಸುವದೆಂಬುದನ್ನು ತಿಳಿಯುವದು ಒಂದು ಆದರಣೆಯ ಮಾತಾಗಿರುವದು. ನಿಂದನೆ ತಿರಸ್ಕಾರದ ಸ್ಥಿತಿಯು ನಿಂದನಾಸ್ಪದವಾದ ಮತ್ತು ತಿರಸ್ಕಾರ ಹೊಂದುವ ಪರಿಸ್ಥಿತಿಗಳು ಇರುವವರೆಗೂ ಮುಂದುವರೆಯುವದು ಅಂದರೆ ವ್ಯಕ್ತಿಯು ಸುಧಾರಣೆಯಾಗುವವರೆಗೂ ಅಥವಾ ವೈಪಲ್ಯಗಳು ಎರಡನೆಯ ಮರಣದಲ್ಲಿ ವ್ಯಕ್ತಿಯು ನಾಶವಾಗುವವರೆಗೂ ಮುಂದುವರೆಯುವದು.

## ಹಿಂಸೆಗಳಿಗೆ ಹೆದರಬೇಡಿರಿ

ಜೀವನದಲ್ಲಿ ಪ್ರಾಮಾಣಿಕರಾಗಿರುವದು ತನ್ನ ಶಿಷ್ಯರಿಗೆ ಕಪಟಿಗಳಿಂದ ಹಿಂಸೆಯನ್ನು ಬರಮಾಡುವದೆಂದೂ ಆದರೆ ಹಿಂಸೆಗಳು ಅವರ ಮರಣವನ್ನು ಫಲಿಸುವದಾದರೂ ಅವರು ಅದಕ್ಕೆ ಹೆದರಬಾರದೆಂದೂ ಯೇಸುವು ತಿಳಿಸಿದ್ದನು. ಈಗಿನ ಜೀವಿತವು ಅತ್ಯುತ್ತಮ ಸ್ಥಿತಿಯಲ್ಲಿದ್ದರೂ ಅದು ಕೇವಲ ಕ್ಷಣಿಕವಾದ್ದದು. ಪರಿಗಣಿಸಲು ಯೋಗ್ಯವಾದ ಜೀವಿತವೆಂದರೆ ದೇವರು ಮನಃಪೂರ್ವಕವಾಗಿ ವಿಧೇಯರಾಗುವವರಿಗೆ ಕ್ರಿಸ್ತನ ಯಜ್ಞಫಲದ ಮೂಲಕವಾಗಿ ಕಡೆಯಲ್ಲಿ ಪಡಕೊಳ್ಳುವ ನಿರಂತರವಾಗಿರುವಂಥದ್ದು. ಇದನ್ನು ಹೀಗೆ ನಂಬುವವರೆಲ್ಲರೂ ಮನುಷ್ಯರು ತಮಗೆ ಏನುಮಾಡುವರೆಂಬುದಕ್ಕೆ ಹೆದರಬಾರದು, ಆದರೆ ದೇವರು ಮತ್ತು ಮುಂದಿನ ಜೀವಿತಕ್ಕೆ ಆತನು ಮಾಡಿರುವ ಕೃಪಾಪೂರ್ಣವಾದ ಏರ್ಪಾಟುಗಳಿಂದ ತಮ್ಮನ್ನು ಬೇರ್ಪಡಿಸುವ ಯಾವ ಸಂಗತಿಗಾದರೂ ಅವರು ಹೆದರುವವರಾಗಬೇಕು.

"ಕೊಂದ ಮೇಲೆ ನರಕದಲ್ಲಿ ಹಾಕಿ ನಾಶಮಾಡುವ ಅಧಿಕಾರವುಳ್ಳವನಿಗೇ ಹೆದರಬೇಕು;" ಇಲ್ಲಿ ನರಕ ಎನ್ನುವ ಶಬ್ಧವು ಗ್ರೀಕ್ ಭಾಷೆಯ ಗೆಹೆನ್ನ ಎಂದಾಗಿರುವದು. ಪ್ರಥಮವಾಗಿ, ಇದು ಯೆರೂಸಲೇಮಿನ ಹೊರಗೆ ಇರುವ ತಗ್ಗು ಪ್ರದೇಶದ ಹೆಸರಾಗಿರುವದು; ಅದರಲ್ಲಿ ಪಟ್ಟಣದ ತ್ಯಾಜ್ಯವಸ್ತುಗಳನ್ನು ಸಂಪೂರ್ಣವಾಗಿ ನಾಶವಾಗಲು ಎಸೆಯಲಾಗುತ್ತಿತ್ತು ಮತ್ತು ಅತಿಕೆಟ್ಟ ಅಪರಾಧಿಗಳನ್ನು ಮರಣದಂಡನೆಯ ನಂತರ ಅಲ್ಲಿಗೆ ಎಸೆಯಲಾಗುತ್ತಿತ್ತು; ಅವರನ್ನು ಯಾತನೆಪಡಿಸುವದಕ್ಕಲ್ಲ ಆದರೆ ದುಷ್ಟರಿಗೆ ಭವಿಷ್ಯವಿಲ್ಲವೆಂಬುದನ್ನು ಸಾಂಕೇತಿವಾಗಿ ಸೂಚಿಸಲು ಹೀಗೆ ಮಾಡಲಾಗುತ್ತಿತ್ತು. ಯೇಸುವು ಎರಡನೆಯ ಮರಣಕ್ಕೆ ಒಂದು ಛಾಯೆಯಾಗಿ ಗೆಹೆನ್ನ ಎಂಬ ಪದವನ್ನು ಉಪಯೋಗಿಸಿದ್ದನು; ಇದು ಬೆಳಕು ಮತ್ತು ಜ್ಞಾನಕ್ಕೆ ವಿರುದ್ಧವಾಗಿ ಮನಃಪೂರ್ವಕವಾಗಿಯೂ ಬುದ್ಧಿಪೂರ್ವಕವಾಗಿಯೂ ಉದ್ದೇಶಪೂರ್ವಕವಾಗಿಯೂ ಪಾಪಮಾಡುವರೆಲ್ಲರ ಪಾಲಾಗಿರುವದು.

ದೇವರ ಭಯವೇ ಜ್ಞಾನಕ್ಕೆ ಮೂಲವು ಮತ್ತು ಭಕ್ತಿಪೂರ್ವಕವಾದ ಭಯವು ಯಾವಾಗಲೂ ಸೂಕ್ತವಾದದ್ದು. ಅದರೆ ದೇವಜನರು ಆತನೊಂದಿಗೆ ನಿಕಟವಾದ ಸಂಬಂಧಕ್ಕೆ ಬಂದು ಆತನ ನೀತಿನ್ಯಾಯ ಜ್ಞಾನವಿವೇಕ ಪ್ರೀತಿಕರುಣೆ ಮತ್ತು ಬಲಾಧಿಕಾರವನ್ನು ತಿಳಿದುಕೊಂಡವರಾಗಿ ಆತನು ನೀತಿಯನ್ನು ಪ್ರೀತಿಸುವವರೆಲ್ಲರ ಸ್ನೇಹಿತನೆಂಬುದನ್ನು ಅರಿತುಕೊಂಡಾಗ ಅವರು ದೇವರನ್ನು ಪ್ರೀತಿಮಾಡುವವರಾಗುವರು; ಮತ್ತು ಅಪೋಸ್ತಲನು ಸಾರಿ ಹೇಳಿರುವಂತೆ "ಪೂರ್ಣವಾದ ಪ್ರೀತಿಯು ಹೆದರಿಕೆಯನ್ನು (ಅಪರಾಧವೆಸಗಲು ಹೆದರುವದು) ಹೊರಡಿಸಿ ಬಿಡುತ್ತದೆ"; ಇದು ವಿಶ್ರಾಂತಿಯನ್ನು ಸೂಚಿಸುವದು. ಪರಲೋಕದ ತಂದೆಯು ತಮ್ಮ ಬಗ್ಗೆ ಲಕ್ಷ್ಯಕೊಡುವನೆಂಬುದನ್ನು ಕರ್ತನ ಶಿಷ್ಯರು ಅರಿತುಕೊಳ್ಳಬೇಕಿತ್ತು. ಮತ್ತು ಆತನ ಜ್ಞಾನ ವಿವೇಕದ ವಿಷಯವಾಗಿ ಅಂದರೆ ಆತನು ಗುಬ್ಬಿಗಳನ್ನೂ ಮರೆಯದಿರುವಂತೆಯೇ ತಮ್ಮನ್ನೂ ಮರೆಯುವದಿಲ್ಲ ವೆಂಬುದನ್ನು ಅವರು ಅರಿತುಕೊಳ್ಳಬೇಕಿತ್ತು; ಆತನ ತಿಳುವಳಿಕೆಗೆ ಬಾರದೆ ಮತ್ತು ಆತನ ಅನುಮತಿಯಿಲ್ಲದೆ ಅವರ ಕೇವಲ ಒಂದು ಕೂದಲಿಗಾದರೂ ಹಾನಿಯಾಗದು; ತನ್ನ ಮಕ್ಕಳಾಗಿರುವ ತನ್ನ ಜನರ ಮೇಲೆ ಬರುವ ಪ್ರತಿಯೊಂದು ಸಂಗತಿಯೂ ಆತನ ಅನುಮತಿಯಿಂಲೇ ಸಂಭವಿಸುವದೆಂದೂ, ಅವುಗಳು ಅವರಿಗೆ ಆಶೀರ್ವಾದಕರವಾಗುವದೆಂದೂ ಆತನು ಅವರಿಗೆ ಭರವಸೆ ನೀಡಿರುವನು.

## ನನ್ನನ್ನು ಜನರ ಮುಂದೆ ಒಪ್ಪಿಕೊಳ್ಳುವದು

ಯಾವನು ದೇವರೊಡನೆ ಹೊಂದಾಣಿಕೆಗೆ ಬಂದಿರುನೋ ಅವನು ತಾನು ಆತನವನೆಂದು (ದೇವರವನು) ಅರಿಕೆ ಮಾಡಬೇಕು. ಮತ್ತು ಕ್ರಿಸ್ತನು ಆತನ (ದೇವರ) ಪ್ರತಿನಿಧಿಯಾಗಿ ಆತನಿಂದ ಲೋಕಕ್ಕೆ ಕಳುಹಿಸಲ್ಪಟ್ಟಿರುವನೆಂದು ಅರಿಕೆಮಾಡಬೇಕು. ಯಾರು ಯೇಸುವಿನ ವಿಷಯವಾಗಿ ಅರಿಕೆಮಾಡುವನೋ ಅವನು ಆತನನ್ನು ಕಳುಹಿಸಿಕೊಟ್ಟ ತಂದೆಯ ವಿಷಯವಾಗಿಯೂ ಅರಿಕೆ ಮಾಡುವನು. ಅವರೆಲ್ಲರೂ ಕರ್ತನ ಅನುಗ್ರಹವನ್ನು ಪಡೆದವರಾಗಿದ್ದು ಅವರು ಕಡೆಯದಾಗಿ ಪುನರುತ್ಥಾನದಲ್ಲಿ ಕ್ರಿಸ್ತನ ಮದಲಗಿತ್ತಿಯೆಂಬ ವರ್ಗದ ಸದಸ್ಯರೆಂದು ದೇವರಿಂದಲೂ ಮತ್ತು ಪರಿಶುದ್ಧ ದೂತರಿಂದಲೂ ಅಂಗೀಕರಿಸಲ್ಪಡುವರು. ಆದರೆ ಕ್ರಿಸ್ತನ ಶಿಷ್ಯರಾದ ನಂತರವೂ ಆತನನ್ನು ಒಪ್ಪಿಕೊಳ್ಳುವದಿಲ್ಲವೋ ಅವರನ್ನು ಪ್ರಭಾವಕ್ಕೆ ಸೇರಿದ ಶಿಷ್ಯರೆಂದು ಆತನೂ ಅಂಗೀಕರಿಸುವದಿಲ್ಲ.

ಯೇಸುವಿನ ಮಾತುಗಳು ಶಿಷ್ಯರಿಗೆ ಸಂಬೋಧಿಸ–ಲ್ಪಟ್ಟಿದ್ದವು, ಜನರ ಗುಂಪಿಗಲ್ಲ. ಯಾವನು ಯೇಸುವನ್ನು ಒಪ್ಪಿಕೊಳ್ಳುವನೋ ಅವನು ಆತನ ಶಿಷ್ಯನಾಗುವನು. ಆತನನ್ನು ಎಂದೂ ಅಂಗಿಕರಿಸದವನು ಆತನನನ್ನು ಅಲ್ಲಗಳೆಯಲು ಸಾಧ್ಯವಾಗದು. ಆತನನ್ನು (ಕ್ರಿಸ್ತನನನ್ನು) ಕೇವಲ ಸ್ನಾನದೀಕ್ಷೆಯ ಮೂಲಕ ಇಲ್ಲವೇ ಬಾಹ್ಯ ರೀತಿಯಲ್ಲಿ ಅರಿಕೆಮಾಡುವದಲ್ಲ. ಅತನ ಶಿಷ್ಯರು ಆತನನ್ನು ತಮ್ಮ ಜೀವಿತದಲ್ಲಿ ತಮ್ಮ ನಡವಳಿಕೆಯಲ್ಲಿ ತಮ್ಮ ಮಾತುಗಳಲ್ಲಿ ಆತನನ್ನು ಒಪ್ಪಿಕೊಳ್ಳಬೇಕು. ಅವರು ಆತನ ಆತ್ಮವನ್ನು (ಮನೋಭಾವವನ್ನು) ಹೊಂದಿಕೊಂಡವರಾಗಿ

"ತಮ್ಮನ್ನು ಕತ್ತಲೆಯಿಂದ ತನ್ನ ಆಶ್ಚರ್ಯಕರವಾದ ಬೆಳಕಿಗೆ ಕರೆದಾತನ ಗುಣಾತಿಶಯಗಳನ್ನು ಪ್ರಚಾರಮಾಡುವವರಾಗಬೇಕು." ಯಾವನಾದರೂ ತನ್ನನ್ನು ಒಬ್ಬ ಶಿಷ್ಯನೆಂದು ತೋರಿಸಿಕೊಂಡು ಆನಂತರ ಆತನ ಬೋಧನೆಗಳನ್ನು ಅಲಕ್ಷ್ಯ ಮಾಡಿ ಆತನನ್ನು ತಪ್ಪಾಗಿ ಪ್ರತಿಪಾದಿಸುವವನಾಗಿ ಆತನನ್ನು ನಿಂದಿಸಿ ಅಲ್ಲಗಳೆಯುವನೋ ಅವನು ಈ (ಸುವಾರ್ತಾ) ಯುಗದ ಅಂತ್ಯದಲ್ಲಿ (ಕ್ರಿಸ್ತನ) ಮದಲಗಿತ್ತಿಯನ್ನು ವೈಭವದಿಂದ ಪ್ರಸ್ತುತಿಪಡಿಸುವ ಕಾರ್ಯದಲ್ಲಿ ಭಾಗಿಯಾಗಲಾರನು.

ವಾಸ್ತವದಲ್ಲಿ ಜನರಗುಂಪುಗಳು ಸಂದೇಹಪೂರಿತರಾಗಿದ್ದು ಎಂದೂ ಅವರುಗಳು ಶಿಷ್ಯರಾಗಲಿಲ್ಲ. ಕೆಲವರು ಆತನು ದೆವ್ವ ಹಿಡಿಯಲ್ಪಟ್ಟಿರುವನು, ಹುಚ್ಚನು ಎಂದು ಹೇಳಿ ಅವನಿಗೆ ಅವಹೇಳನವನ್ನೂ ಮಾಡಿದ್ದರು. ಅಂಥವರು ತನ್ನನ್ನು ತಪ್ಪಾಗಿ ಅರ್ಥಮಾಡಿಕೊಂಡಿರುವರೆಂದು ಮತ್ತು ಅವರು ತಿಳಿಯದೇ ನಿಂದನೆಮಾಡಿದ್ದಲ್ಲಿ ಅವುಗಳು ಕ್ಷಮಿಸಲ್ಪಡುವಂಥವುಗಳೆಂದು ಒಡೆಯನು ತಿಳಿಸಿದ್ದನು. ಆದರೆ ಕೆಲವರು ಇನ್ನೂ ಮುಂದೆ ಹೋಗಿ ಆತನು ನಡೆಸುತ್ತಿದ್ದ ಪವಿತ್ರಾತ್ಮನ ಕಾರ್ಯಗಳು ಸೈತಾನನ ಅಧಿಕಾರದಿಂದ ಅಂದರೆ ಬೆಲ್ಜೆಬೂಲನ ಸಹಾಯದಿಂದ ಮಾಡುತ್ತಿರುವವುಗಳೆಂದು ಪ್ರಕಟಿಸಿದ್ದಾಗ, ಅವರು ಕ್ಷಮಿಸಲಾಗದಂಥ ಪಾಪವಮಾಡುವವರಾಗಿದ್ದು ಅವರು ಅದರಿಂದ (ಅದಕ್ಕಾಗುವ ಶಿಕ್ಷೆಯಿಂದ) ಪಾರಾಗುವದಿಲ್ಲ.

ಅಂಥ ಪಾಪವು ಮನಃಪೂರ್ವಕವಾಗಿದ್ದಿರಬೇಕು; ಯಾಕೆಂದರೆ ಅವರು ಮಾಡಿದ ಆರೋಪಗಳಿಗೆ ಆಧಾರವಿರಲಿಲ್ಲ. ಒಡೆಯನ ಬೋಧನೆಗಳು ಶುದ್ಧತೆಯುಳ್ಳವುಗಳಾಗಿದ್ದವು. ಆತನ ನಡತೆ, ಆತನ ಮಾತುಗಳು ಮತ್ತು ಆತನು ಮಾಡುತ್ತಿದ್ದ ಅದ್ಭುತಕಾರ್ಯಗಳು ಎಲ್ಲವೂ ಒಳ್ಳೆಯ ಕಾರ್ಯಗಳಾಗಿದ್ದವು. ಕೇವಲ ಮನಃಪೂರ್ವಕವಾಗಿ ಮಾಡುತ್ತಿದ್ದ ತಿರುಚುವಿಕೆಗಳು ಮಾತ್ರ ಇವುಗಳನ್ನು ಸೈತಾನನದೆಂದು ಆರೋಪಿಸಲು ಸಾಧ್ಯವಿತ್ತು. ಹೀಗಿದ್ದರೂ, (ಆತನನ್ನು) ಕೆಟ್ಟದ್ದಾಗಿ ಆರೋಪಿಸುತ್ತಿದ್ದವರು ಎಂದೂ ಕ್ಷಮಿಸಲ್ಪಡುವದಿಲ್ಲವೆಂಬ ಅಂಶವು ಅವರು ಯಾವ ನಿರೀಕ್ಷೆಯೂ ಇಲ್ಲದೆ ನಾಶವಾಗಿ ಹೋಗುವರೆಂಬುದನ್ನು ಸೂಚಿಸುವದಿಲ್ಲ. ಅವರು ಮನಃಪೂರ್ವಕವಾಗಿ ಮಾಡಿರುವಷ್ಟರ ಮಟ್ಟಿಗೆ ಅವರು ಶಿಕ್ಷೆಯನ್ನು ಅನುಭವಿಸುವರು. ಅವರಿಗಾಗುವ ಶಿಕ್ಷೆಯು ಅವರಿಗೆ ತಿದ್ದುಪಾಟಿ ಮಾಡಿದ್ದಲ್ಲಿ ಅದು ಒಳ್ಳೆಯದಾಗಿರುವದು; ಆದರೆ ಹಾಗೆ ಆಗದಿದ್ದಲ್ಲಿ, ಅದು ಅವರ ಸಂಪೂರ್ಣವಾದ ನಾಶನದಲ್ಲಿ ಅಂದರೆ ಅವರ ಎರಡನೆಯ ಮರಣದಲ್ಲಿ ಕೊನೆಗೊಳ್ಳುವದು.

ಪವಿತ್ರಾತ್ಮನಿಗೆ ವಿರೋಧವಾಗಿ ಮಾಡಿದ ಪಾಪವೆಂಬ ವಿಷಯವು ಇತರ ಎಲ್ಲಾ ವಿಷಯಗಳಿಗಿಂತಲೂ ಅಲ್ಪವಾಗಿ ಅರ್ಥಮಾಡಿಕೊಳ್ಳಲಾಗಿರುವದು. ಇಂಥಾ ಒಂದು ಸನ್ನಿವೇಶದಲ್ಲಿ ಆತ್ಮ ಎಂಬ ಶಬ್ಧವು ಶಕ್ತಿ ಅಥವಾ ಪ್ರಭಾವಗಳೆಂಬ ಅರ್ಥಕೊಡುವದು. ದೃಷ್ಟಾಂತವಾಗಿ ಹೇಳುವದಾದರೆ, ಸೈತಾನನ ಆತ್ಮವೆಂಬದು ದೇವರಿಗೆ ಮತ್ತು ನೀತಿಗೆ ವಿರೋಧವಾಗಿರುವ ಶಕ್ತಿ ಅಥವಾ ಪ್ರಭಾವ ಎಂದಾಗುವದು. ತಪ್ಪಾದ ಆತ್ಮವೆನ್ನುವದು ಸುಳ್ಳಿನ ವಿಷಯವಾದ ಶಕ್ತಿ ಅಥವಾ ಪ್ರಭಾವ ಎಂದಾಗುವದು. ಇದಕ್ಕೆ ಪ್ರತಿಯಾಗಿ, ಸತ್ಯದ ಆತ್ಮ, ದೇವರ ಆತ್ಮ ಮತ್ತು ಪವಿತ್ರ ಆತ್ಮವೆಂಬುದು ಎಲ್ಲೆಲ್ಲಿ ಗುರುತಿಸಲಾಗಿರುವದೋ ಅದು ದೇವರ ಪ್ರಭಾವ ಮತ್ತು ಶಕ್ತಿ ಎಂಬುದನ್ನು ಸೂಚಿಸುವದು. ಪ್ರತಿಯೊಬ್ಬ ವ್ಯಕ್ತಿಯ ಮೇಲಿರುವ ಜವಾಬ್ದಾರಿಯು ತಾನು ಹೊಂದಿರುವ ತಿಳುವಳಿಕೆಯ ಮಟ್ಟದ ಅನುಸಾರವಾಗಿರುತ್ತದೆ. ಮಾನಸಿಕವಾಗಿ ಮತ್ತು ನೈತಿಕವಾಗಿ ಅಂಧಕಾರದಲ್ಲಿರುವವರನ್ನು ಹೋಲಿಸಿದಲ್ಲಿ ಅವರಿಗೆ ಜವಾಬ್ದಾರಿಯೂ ಕಡಿಮೆಯಿರುವದು; ಕಾರಣ ಅವರಿಗೆ ಸತ್ಯದ ಆತ್ಮ ಮತ್ತು ಸುಳ್ಳಿನ ಆತ್ಮ, ದೇವರ ಆತ್ಮ ಮತ್ತು ಸೈತಾನನ ಆತ್ಮ ಇವುಗಳ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಅರಿತವರಾಗಿರಲು ಸಾಧ್ಯವಾಗಲಾರದು.

ಮನುಷ್ಯನು ಸರಿ ತಪ್ಪುಗಳ, ಒಳ್ಳೆಯ ಕೆಟ್ಟವುಗಳ ಬೇಧವನ್ನು ಅರಿಯುಲು ಅಸಮರ್ಥನಾದ ಸ್ಥಿತಿಯಲ್ಲಿ ಸೃಷ್ಟಿಸಲ್ಪಡಲಿಲ್ಲ. ಆತನು ದೇವರ ಹೋಲಿಕೆಯಲ್ಲಿ ಮತ್ತು ಆತನ ಸ್ವರೂಪದಲ್ಲಿ ಪರಿಪೂರ್ಣನಾಗಿ ಸೃಷ್ಟಿಸಲ್ಪಟ್ಟನು. ಮನುಷ್ಯ ದೇಹಕ್ಕೆ ಮಾತ್ರವಲ್ಲದೆ ಆತನ ಮನಸ್ಸು ಮತ್ತು ಮನಸ್ಸಾಕ್ಷಿಗೂ ಪಾಪವು ಮರಣವನ್ನು ತಂದುಕೊಟ್ಟಿರುವದು. ಆದುದರಿಂದ ಸರಿತಪ್ಪುಗಳ ನಡುವಿನ ಬೇಧವನ್ನು ಅರಿಯುವ ಸಾಮರ್ಥ್ಯದಲ್ಲಿ ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಿರುವದು. ಜೊತೆಗೆ, ಕೆಲವರು ಇತರರಿಗಿಂತ ತಿಳುವಳಿಕೆ ಹೊಂದಲು ಹೆಚ್ಚಿನ ಅವಕಾಶವನ್ನು ಪಡೆದಿರುವರು ಮತ್ತು ಹೀಗೆ ಅವರ ಜವಾಬ್ದಾರಿಯೂ ಹೆಚ್ಚಾಗಿರುವದು. ಲೋಕವು ಸಾಧಾರಣವಾಗಿ ದೇವರನ್ನು ತಿಳಿದಿಲ್ಲ; ಮತ್ತು ಹೀಗಾಗಿ ಎರಡನೆಯ ಮರಣದ ಶಿಕ್ಷೆಗೆ ಒಳಗಾಗುವಂಥ ಪವಿತ್ರಾತ್ಮನಿಗೆ ವಿರೋಧವಾದ ಪಾಪವನ್ನು ಪೂರ್ಣ ಅರ್ಥದಲ್ಲಿ ಅಥವಾ ಮಟ್ಟದಲ್ಲಿ ಮಾಡಲು ಲೋಕಕ್ಕೆ ಸಾಧ್ಯವಾಗದು. "ಈ ಪ್ರಪಂಚದ ದೇವರು ನಂಬಿಕೆಯಿಲ್ಲದವರ ಮನಸ್ಸುಗಳನ್ನು ಮಂಕುಮಾಡಿರುವನು." – 2 ಕೊರಿಂಥ 4:4

ಕ್ರಿಸ್ತನು ದೇವರಿಂದ ಕಳುಹಿಸಲ್ಪಟ್ಟವನೆಂದು ಮನವರಿಕೆ ಮಾಡಿಕೊಳ್ಳಲು ಕೆಲವು ಮಟ್ಟಿನ ತಿಳುವಳಿಕೆಯು ನಮಗೆ ಅಗತ್ಯವಾಗಿರುವದು. ಆಗ ನಾವು ಆತನನ್ನು ಅಂಗೀಕರಿಸಿ ಆತನ ಶಿಷ್ಯರು ಅಥವಾ ಹಿಂಬಾಲಕರು ಆಗಿದ್ದಲ್ಲಿ ನಾವು ಪವಿತ್ರಾತ್ಮನಿಂದಾದ ಹುಟ್ಟುವಿಕೆಯನ್ನು (ಅಂಕುರಿಸುವಿಕೆಯನ್ನು) ಪಡೆಯುವೆವು. ಇದು ನಾವು ಪ್ರವಿತ್ರಾತ್ಮನಿಂದ ತುಂಬಿದವರಾದಷ್ಟು ಮಟ್ಟಿಗೆ ತಮ್ಮ ಮನೋನೇತ್ರಗಳು ಹೆಚ್ಚು ಹೆಚ್ಚು ವಿಶಾಲವಾಗಿ ತೆರೆಯಲ್ಪಡುವ ಒಂದು ಅನುಕೂಲಕರ ಸ್ಥಿತಿಗೆ ತರುವದು. ಕರ್ತನಲ್ಲಿ ನಾವು ಸಂತೋಷಿಸುವದಕ್ಕಾಗಿ ಮತ್ತು ನಾವು ಪರಲೋಕದ ಮಹಿಮೆಯನ್ನು ಹೊಂದುವದಕ್ಕಾಗಿ ಸಿದ್ಧರಾಗಲು ಕರೆಯಲ್ಪಟ್ಟಿದ್ದು, ನಮ್ಮಲ್ಲಿ ಇವು ಹೆಚ್ಚಾಗುವಷ್ಟರ ಮಟ್ಟಿಗೆ ನಮ್ಮ ಜವಾಬ್ದಾರಿಯೂ ಹೆಚ್ಚಾಗುವದು. ಹೀಗೆ ಮುಂದುವರಿದವನಾದ ಶಿಷ್ಯನೇ ತಾನು ಮುದ್ರೆಯಾಗಿ ಹೊಂದಿದ ಪವಿತ್ರಾತ್ಮವನ್ನು ದುಃಖಪಡಿಸುವ ಅಂದರೆ ತನ್ನ ಹೃದಯದಲ್ಲಿರುವ ಪವಿತ್ರಾತ್ಮವನ್ನು ನಂದಿಸುವ ಅಪಾಯಕ್ಕೆ ಒಳಗಾಗುವನು. (ಎಫೆಸ್ಸ 4:30; 1 ಥೆಸಲೋನಿಕ 5:19) (ಪವಿತ್ರಾತ್ಮವನ್ನು) ದುಃಖಪಡಿಸುವದು ಮತ್ತು ನಂದಿಸುವದು ಕೂಡಲೇ ನೆರವೇರುವ

ಕಾರ್ಯವಾಗಿಲ್ಲದಿದ್ದರೂ ಅವು ಎರಡನೆಯ ಮರಣಕ್ಕೆ ನಡೆಸುವ ಮಾರ್ಗವಾಗಿರುವದು. ಆದುದರಿಂದ ಪ್ರತಿಯೊಬ್ಬ ಕ್ರೈಸ್ತನು ಪರಿಶುದ್ಧತೆಯಲ್ಲಿ ಸಿದ್ಧಿಗೆ ಬರಲು ಅಂದರೆ ಪವಿತ್ರಾತ್ಮಭರಿತನಾಗಿರಲು ಪ್ರಯತ್ನಿಸುತ್ತಲೇ ಇರಬೇಕು.

ಅಪೋಸ್ತಲನು ಇಬ್ರೀಯ 6:4–6ರಲ್ಲಿ ಈ ಅಂಶವನ್ನು ಪ್ರಸ್ತುತಪಡಿಸುತ್ತಾ ಹೀಗೆ ತಿಳಿಸಿರುವನು: ದೇವರ ಒಳ್ಳೆಯ ವಾಕ್ಯಗಳ ಮತ್ತು ಮುಂದೆ ಬರುವ ಕಾಲದ ಅನುಭವವನ್ನು ಸವಿದುನೋಡಿ ಪವಿತ್ರಾತ್ಮವರದಲ್ಲಿ ಪಾಲನ್ನು ಹೊಂದಿದವರು ಮನಃಪೂರ್ವಕವಾಗಿಯೂ ಉದ್ದೇಶಪೂರ್ವಕವಾಗಿಯೂ ಕ್ರಿಸ್ತನನ್ನು ಮತ್ತು ನೀತಿಯನ್ನು ತಿರಸ್ಕರಿಸಿ ಮತ್ತೆ ಪಾಪಕ್ಕೆ ತಿರುಗಿಕೊಂಡರೆ ಅವನಲ್ಲಿ ತಿರಿಗಿ ಮಾನಸಾಂತರ ಹುಟ್ಟಿಸುವದಕ್ಕೆ ಸಾಧ್ಯವಾಗದು. ಅನಂತರದಲ್ಲಿ ಮತ್ತೆ ಆತನು ಹೇಳಿರುವದು (ಇಬ್ರೀಯ 10:26–27): "ಯಾಕಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿದರೆ ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ; ಅತ್ಯಂತ ಭಯದಿಂದ ಎದುರುನೋಡತಕ್ಕ ನ್ಯಾಯ ತೀರ್ಪು ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು." ಕ್ರಿಸ್ತನಿಂದಾದ ಸಂಧಾನದ ಕ್ರಿಯೆಯನ್ನು ನಿರಾಕರಿಸುವುದರ ವಿಷಯವಾಗಿ ಅಪೋಸ್ತಲನು ವಿಶೇಷವಾಗಿ ತಿಳಿಸುತ್ತಾ ಹೇಳಿರುವದೇನಂದರೆ, ಅಂಥವರು ಒಡಂಬಡಿಕೆಯ ರಕ್ತವನ್ನು ಅಂದರೆ ತನ್ನನ್ನು ಶುದ್ಧಿಮಾಡಿದ ರಕ್ತವನ್ನು ಸಾಧಾರಣವೆಂದು ಎಣಿಸಿ ಈವರೆಗೂ ತನ್ನನ್ನು ಕೊಂಡು–ತಂದಿರುವ ದೇವರ ಕೃಪಾವರವಾಗಿರುವ ಆತ್ಮನಿಗೆ ವಿರೋಧವಾಗಿ ನಡೆಯುವವರೆಂಬುದು.

ಪವಿತ್ರಾತ್ಮವನ್ನು ನಂದಿಸುವ ಅಥವಾ "ಪವಿತ್ರಾತ್ಮವನ್ನು ದುಃಖಪಡಿಸುವ" ಅಂಥವರನ್ನು ಭಕ್ತನಾದ ಯಾಕೋಬನು (5:4) ಆತ್ಮಿಕವಾಗಿ ಅಸ್ವಸ್ಥರೆಂದು ವರ್ಣಿಸಿರುವನು. ದೇವರ ಅನ್ಯೋನ್ಯತೆಯಿಂದ ಬೇರ್ಪಟ್ಟವರಿಗೆ ಇರುವ ಒಂದೇ ಒಂದು ಮಾರ್ಗವೆಂದರೆ ಅದು ಪವಿತ್ರಾತ್ಮನಿಗೆ ಸಂಕೇತವಾಗಿರುವ ಎಣ್ಣೆಯನ್ನು ಹಚ್ಚಿ ತನಗೆ ಪ್ರಾರ್ಥಿಸ ಸಲುವಾಗಿ ಅವನು ಸಭೆಯ ಪ್ರತಿಷ್ಠಿತರಾದ ಹಿರಿಯರ ಸಹಾಯವನ್ನು ಕೇಳಿಕೊಳ್ಳುವದು. ನಂಬಿಕೆಯಿಂದ ಮಾಡಿದ ಪ್ರಾರ್ಥನೆಯು ಆತ್ಮಿಕವಾಗಿ ಅಸ್ವಸ್ಥನಾಗಿರುವವನನ್ನು ರಕ್ಷಿಸುವದು; ಮತ್ತು ಕರ್ತನು ಅವನನ್ನು ಎಬ್ಬಿಸುವನು; ಅವನು ಪಾಪಮಾಡಿದವನಾಗಿದ್ದರೆ ಅದು ಪರಿಹಾರವಾಗುವದು.

## ಪವಿತ್ರಾತ್ಮನು ಉಪದೇಶಿಸುವದು

ಕರ್ತನನ್ನು ನಂಬಿಗಸ್ತರಾಗಿ ಹಿಂಬಾಲಿಸುವವರು ತಮಗಾಗುವ ಉಪದ್ರವಗಳಲ್ಲಿ ಸುಳ್ಳು ಆರೋಪಕ್ಕೆ ಒಳಗಾಗಿ ತಮ್ಮನ್ನು ಅದು ನ್ಯಾಯಾಧಿಪತಿಗಳ ಎದುರು ಬರಮಾಡುವದೆಂಬುದನ್ನು ನಿರೀಕ್ಷಿಸಲ್ಪಡಬೇಕಿತ್ತು. ಯಾಕೆಂದರೆ ಶಿಷ್ಯರಲ್ಲಿ ಬಹು ಪಾಲು ಕಲಿತವರಾಗಿರಲಿಲ್ಲ ಮತ್ತು ವಿದ್ಯಾವಂತರಾಗಿದ್ದ ಅಧಿಕಾರಿಗಳ ಎದುರಿನಲ್ಲಿ ಬಹು ಆತಂಕಕ್ಕೊಳಗಾಗುತ್ತಿರುವೆವೆಂದು ಅವರಿಗೆ ಅನ್ನಿಸಿತ್ತು. ಹೀಗಾದರೂ ಕರ್ತನ ಆಶೀರ್ವಾದವು ತಮ್ಮ ಮೇಲಿರುವದೆಂದು ಮತ್ತು ತಮ್ಮಲ್ಲಿ ಸಹಜವಾಗಿರುವದಕ್ಕಿಂತಲೂ ಉತ್ಕೃಷ್ಟವಾಗಿರುವ ಜ್ಞಾನವನ್ನು ಹೊಂದಿರುವೆವೆಂಬುದು ಅವರಿಗೆ ತಿಳಿದಿರಬೇಕಿತ್ತು. ಅವರು ತಾವೇನು ಉತ್ತರಕೊಡಬೇಕು ಎಂಬದಾಗಿ ಚಿಂತೆಮಾಡದೆ ದೈವಿಕ ಸಹಾಯವನ್ನು ನಿರೀಕ್ಷಿಸುವರಾಗಿ ಎಲ್ಲವನ್ನೂ ಕರ್ತನಿಗೆ ಒಪ್ಪಿಸಿಕೊಡಬೇಕಿತ್ತು.

ಕ್ರಿಸ್ತನ ಸೇವಕರು ತಾವು (ಬೋಧಿಸುವ ವಿಷಯವನ್ನು) ಅಧ್ಯಯನ ಮಾಡದೆ ಪ್ರಸಂಗ ಪೀಠದ ಮೂಲಕವಾಗಲಿ ಇಲ್ಲವೇ ಆಧ್ಯಯನ ಕೂಟಗಳಲ್ಲಿಯಾಗಲಿ (ತಮ್ಮ ಉಪದೇಶದ ಮೂಲಕವಾಗಿ) ಕರ್ತನನ್ನು ಪ್ರತಿನಿಧಿಸಲು ಯತ್ನಿಸಬೇಕೆಂಬ ಯಾವ ಸೂಚನೆಯೂ ಇಲ್ಲಿ ಅನ್ವಯವಾಗುವದಿಲ್ಲ. ಇದಕ್ಕೆ ಪ್ರತಿಯಾಗಿ, ಭಕ್ತನಾದ ಪೌಲನು ತಿಮೋಥೆಯನಿಗೆ ಹೇಳಿದ ಈ ಮಾತುಗಳನ್ನು ಪ್ರತಿಯೊಬ್ಬನೂ ಅಂಗೀಕರಿಸಿಕೊಳ್ಳಬೇಕು: "ನೀನು ದೇವರ ದೃಷ್ಟಿಗೆ ಯೋಗ್ಯನಾಗಿ ಕಾಣಿಸಿಕೊಳ್ಳುವದಕ್ಕೆ ಪ್ರಯಾಸಪಡು. ಅವಮಾನಕ್ಕೆ ಗುರಿಯಾಗ ಕೆಲಸದವನೂ ಸತ್ಯವಾಕ್ಯವನ್ನು ಸರಿಯಾಗಿ (ವಿಭಾಗಿಸಿ) ಉಪದೇಶಿಸುವವನೂ ಆಗಿರು." (2 ತಿಮೋಥೆ 2:15) ಕರ್ತನ ಮಾತುಗಳನ್ನು ನುಡಿಯಲು ಆತನಿಗೆ ಬಾಯಾಗಿ ದೇವಜನರ ಸಭೆಯ ಮುಂದೆ ನಿಲ್ಲುವದಕ್ಕೂ ಮತ್ತು ನ್ಯಾಯಾಧಿಪತಿಗಳ ಎದುರಿಗೆ ಕರೆಯಲ್ಪಡುವದಕ್ಕೂ ವ್ಯತ್ಯಾಸವಿರುವದು.

*****

# "ನಿಮ್ಮ ಗಂಟು ಇದ್ದಲ್ಲಿಯೇ..."

**ರೀಪ್ರಿಂಟ್ಸ್ ಪುಟ 5396**

## ಲೂಕ 12:13–34

**"ನಿಮ್ಮ ಗಂಟು ಇದ್ದಲ್ಲಿಯೇ ನಿಮ್ಮ ಮನಸ್ಸೂ ಇರುವದಷ್ಟೆ." – ಲೂಕ 12:34**

ಯೇಸುವು ಯೆಹೂದ್ಯರ ಗುಂಪಿನಿಂದ ಸುತ್ತುವರಿಯ – ಲ್ಪಟ್ಟಿದ್ದು ಅವರಲ್ಲಿ ಒಬ್ಬನು ಆತನನ್ನು ಒಬ್ಬ ಪ್ರಭಾವೀ ವ್ಯಕ್ತಿಯೆಂದು ಗುರುತಿಸಿಕೊಂಡವನಾಗಿ ತನ್ನ ಅಣ್ಣನು ತನಗೆ ಕುಟುಂಬದ (ತಂದೆಯ) ಆಸ್ತಿಯಲ್ಲಿ ಭಾಗವನ್ನು ಕೊಡಲು ಬುದ್ಧಿಹೇಳುವಂತೆ ಆತನನ್ನು ಕೇಳಿಕೊಂಡನು. ತಾನು ನ್ಯಾಯಾಧಿಪತಿಯೂ ಅಲ್ಲ ಆಸ್ತಿಪಾಲುಮಾಡಿಸುವವನೂ ಅಲ್ಲವೆಂದು ಹೇಳಿ ಯೇಸುವು ಅದನ್ನು ನಿರಾಕರಿಸಿದನು. ಯೇಸುವಿನ ಹಿಂಬಾಲಕರು ಈ ವಿಷಯದಲ್ಲಿ ಮತ್ತು ಇತರ ವಿಷಯಗಳಲ್ಲಿಯೂ ತಮ್ಮ

ಒಡೆಯನನ್ನು ಅನುಸರಿಸಿದಲ್ಲಿ ಒಳ್ಳೆಯದಾಗಿರುವದು. ಬಹು ಹೆಚ್ಚು ಮಂದಿ ಇತರರ ವಿಷಯಗಳಲ್ಲಿ ತಲೆಹಾಕುವವರಾಗಿ ಕರ್ತನು ತಮಗೆ ಒಪ್ಪಿಸಿರುವ ಸುವಾರ್ತೆಯನ್ನು ಸಾರುವ ಕಾರ್ಯಭಾರವನ್ನು ಉಪೇಕ್ಷಿಸಿರುವರು.

ಸಮಾಜವು ಕೆಲವು ನಿಯಮಗಳು ಶಾಸನಗಳು ಮತ್ತು ನಿಬಂಧನೆಗಳನ್ನು ಒದಗಿಸಿಕೊಟ್ಟಿರುವದು.–"ಅಧಿಕಾರಗಳು ದೇವರಿಂದ ನೇಮಕವಾದವುಗಳು." ಈ ನಿಯಮಗಳಲ್ಲಿ ಯಾವಾವದು ನಮಗೆ ಸಮ್ಮತಿಸುವದಿಲ್ಲವೋ ಅವುಗಳನ್ನು ನಾವು ಬಿಟ್ಟುಬಿಡಬೇಕು. ನಮಗೆ ಇರುವವುಗಳಲ್ಲಿ ಮತ್ತು ದೇವರ ಏರ್ಪಾಡಿನ ಮೂಲಕ ಭರವಸೆಯಾಗಿ ನೀಡಿರುವ ಸಂಗತಿಗಳಲ್ಲಿ ನಾವು ಸಂತೃಪ್ತರಾಗಿರಬೇಕು. ಯೇಸುವಿಗೆ ನಿರ್ವಹಿಸಲು ಇನ್ನೊಂದು ಕಾರ್ಯವಿದ್ದಂತೆ ಆತನ ಶಿಷ್ಯರಿಗೂ ಇರುವದು. ಆ ಇನ್ನೊಂದು ಕಾರ್ಯವೆಂದರೆ ಅದು ಮೆಸ್ಸೀಯನ ಮಹಿಮೆಯುಳ್ಳ ರಾಜ್ಯಕ್ಕೆ ಸಿದ್ಧಮಾಡುವದು. ನಮಗೆ ವಾಗ್ದಾನ ಮಾಡಿರುವ ಐಶ್ವರ್ಯಗಳು ಭೂಲೋಕದಲ್ಲಿ ಕಾಣುವ ಐಶ್ವರ್ಯಗಳೆಲ್ಲವು–ಗಳಿಗಿಂತಲೂ ಇದು ಬಹು ಅತಿಶಯವಾಗಿರುವದು; ಭಕ್ತನಾದ ಪೌಲನು ಪ್ರಕಟಿಸಿ ಹೇಳಿರುವಂತೆ ಕರ್ತನು ಮುಂದಿನ ಕಾಲಕ್ಕೆ ವಾಗ್ದಾನ ಮಾಡಿರುವ ಭಾಗ್ಯಕರವಾದ ಸಂಗತಿಗಳನ್ನು ಈ ಭೂಲೋಕದ ಸಂಗತಿಗಳಿಗೆ ಹೋಲಿಸಿ ನೋಡಿದಲ್ಲಿ ಇವು ಬಹು ಅಲ್ಪವಾಗಿರುವವು.

ಯೇಸುವು ತಾನು ಇಲ್ಲಿ ಮಧ್ಯಪ್ರವೇಶಿಸಲು ನಿರಾಕರಿಸಿ–ದ್ದನ್ನು ಆಧರಿಸಿಕೊಂಡು ಎಲ್ಲಾ ಲೋಭದ ವಿಷಯವಾಗಿ ಎಚ್ಚರಿಕೆ ಕೊಟ್ಟನು. ತನ್ನ ಅಣ್ಣನಿಗೆ ಸೇರಿರುವ ಭೂಸೊತ್ತು ನ್ಯಾಯವಾಗಿ ಆತನಿಗೇ ಸೇರಿರುವದೆಂಬುದು ಮತ್ತು ಯೇಸುವನ್ನು ಕೇಳಿಕೊಂಡವನು ತನಗೆ ನ್ಯಾಯವಾಗಿ ಸಲ್ಲುವ ಹಕ್ಕಿರುವದಕ್ಕಿಂತಲೂ ಹೆಚ್ಚಿನದನ್ನು ಬಯಸುತ್ತಿದ್ದನೆಂಬುದು ಇಲ್ಲಿ ಅಡಕವಾಗಿರುವದು. ಆತನು ಮತ್ತೊಬ್ಬನಿಗೆ ನ್ಯಾಯವಾಗಿ ಸೇರಿದ್ದನ್ನು ದುರಾಶೆಯಿಂದ ಅಪೇಕ್ಷಿಸುತ್ತಿದ್ದನು. ಭೂಲೋಕದ ಆಸ್ತಿ ಮತ್ತು ಸಂಪತ್ತುಗಳ ಸಮೃದ್ಧಿಯೇ ಜೀವಿತದ ಸಾರಾಂಶ ವಲ್ಲವೆಂಬುದನ್ನು ಆತನೂ ಮತ್ತು ನಾವೆಲ್ಲರೂ ಕಾಣುವವರಾಗ ಬೇಕೆಂದು ಯೇಸುವು ಬಯಸಿರುವನು. ಒಬ್ಬ ಮನುಷ್ಯನು ಸಂಪತ್ತನ್ನು ಗಳಿಸುವ ವಿಷಯದಲ್ಲಿ ಅತಿ ನಿಕೃಷ್ಟನಾಗಿರಬಹುದು ಅಥವಾ ತನ್ನ ಬಡತನದಲ್ಲಿಯೂ ಸಂತೋಷವುಳ್ಳವನಾಗಿರ ಬಹುದು. ಸಂತೋಷ ಮೂಲದ ಪರಿಮಾಣವನ್ನು ದೇವರೊಡನೆ ಆತ್ಮಕ್ಕೆ ಇರುವ ಸಂಬಂಧದ ಮತ್ತು ಆತನಲ್ಲಿ ಇಟ್ಟಿರುವ ನಿರೀಕ್ಷೆಯ ವಿಷಯಗಳಲ್ಲಿ ಅಳೆಯಬೇಕು.

ಯೆಹೂದ್ಯರು ಅಂದರೆ ವಂಶಪಾರಂಪರ್ಯವಾಗಿ ಬಂದ ಇಸ್ರಾಯೇಲ್ಯರನ್ನು ಹೋಲಿಸಿ ನೋಡಿದಲ್ಲಿ ಸುವಾರ್ತಾ ಯುಗದಲ್ಲಿನ ಆತ್ಮಿಕ ಇಸ್ರಾಯೇಲ್ಯರಿಗೆ ಅವರು ಒಂದು ಛಾಯೆಯಾಗಿರುವರು. ವಂಶಪಾರಂಪರ್ಯವಾಗಿ ಬಂದ ಇಸ್ರಾಯೇಲ್ಯರಿಗೆ ಇದ್ದ ದೇವರ ವಾಗ್ದಾನವೇನಂದರೆ ಅವರು ಧರ್ಮಶಾಸ್ತ್ರದ ನೇಮವಿಧಿಗಳನ್ನು ಅನುಸರಿಸುವವರಾದಲ್ಲಿ ಅವರು ಅಬ್ರಹಾಮನಿಗೆ ಮಾಡಿದ ವಾಗ್ದಾನಕ್ಕೆ ಬಾಧ್ಯರಾಗಿ ಭೂಲೋಕವನ್ನು ಆಶೀರ್ವದಿಸಲು ತನ್ನ ರಾಜ್ಯವಾಗಿ ದೇವರಿಂದ ಅವರು ಬಳಸಲ್ಪಡುವರೆಂಬುದು. ಅವರಲ್ಲಿದ್ದ ಸಮಸ್ಯೆಯೆಂದರೆ, ಅವರು ಉಳಿದ ಇತರ ಮನುಷ್ಯರಂತೆ ಪಾಪಿಗಳಾಗಿ ದೇವರ ನೇಮವಿಧಿಗಳನ್ನು ಕೈಗೊಂಡು ನಡೆಯಲು ಅಶಕ್ತರಾಗಿದ್ದುದು; ಇದರಿಂದಾಗಿ ಅವರು  ತನ್ನ ರಾಜ್ಯವಾಗಿ ಜನಾಂಗಗಳಿಗೆ ಆತನ ಆಶೀರ್ವಾದವನ್ನು ಹಂಚಿಕೊಡಲು ದೇವರಿಂದ ಉಪಯೋಗಿಸ–ಲ್ಪಡಲು ಅರ್ಹರಾಗಿರಲಿಲ್ಲ. ಹೀಗಿದ್ದರೂ ಆ ರಾಜ್ಯದ ವಿಷಯವಾದ ನಿರೀಕ್ಷೆಯು ಅವರ ಮನಸ್ಸುಗಳಲ್ಲಿ ಯಾವಾಗಲೂ ಅತ್ಯುನ್ನತವಾಗಿದ್ದು, ಅವರೆಲ್ಲರೂ ಅದನ್ನು ಪಡಕೊಳ್ಳಲು ಪರಿಶ್ರಮಿಸುತ್ತಿದ್ದರು.

ತಾನು "ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು (ಈಡಾಗಿ) ಒಪ್ಪಿಸಿಕೊಡಲು" (1 ತಿಮೋಥೆ 2:6) ಮತ್ತು ತನ್ನ (ಮೆಸ್ಸೀಯನ) ರಾಜ್ಯದಲ್ಲಿ ತನಗೆ ಸಹಕಾರಿಗಳಾಗಿ ರೂಪುಗೊಳ್ಳಲು "ನಿಜವಾದ ಇಸ್ರಾಯೇಲ್ಯರಿಗೆ" ಕರೆನೀಡಿ ಅವರನ್ನು ತನ್ನ ಬಳಿಗೆ ಎಳಕೊಳ್ಳಲು ಯೇಸುವು ಲೋಕಕ್ಕೆ ಬಂದಿದ್ದನು. ಆತನಿಗೆ ಧರ್ಮಶಾಸ್ತ್ರದ ನೇಮವಿಧಿಗಳನ್ನು ಪರಿಪೂರ್ಣವಾಗಿ ಕೈಗೊಂಡು ನಡೆಯಲು ಸಾಧ್ಯವಿದ್ದು ಮತ್ತು ಅದರಂತೆಯೇ ನಡೆದು–ಕೊಂಡಿದ್ದನು; ಜೊತೆಗೆ ತನ್ನ ಜೀವವನ್ನು ಆದಾಮನು ಮತ್ತು ಆತನ ಸಂತತಿಗೋಸ್ಕರ ಯಜ್ಞವಾಗಿ ಅರ್ಪಿಸಿಕೊಂಡಿದ್ದನು. ಈ ಯಜ್ಞಾರ್ಪಣೆಯು ಯಾವ ಕಪಟವೂ ಇಲ್ಲದ "ನಿಜವಾದ ಇಸ್ರಾಯೇಲ್ಯರ" ಕುಂದುಕೊರತೆಗಳನ್ನು ಸರಿದೂಗಿಸಲು ಅತನಿಗೆ ಅನುವುಮಾಡಿಕೊಟ್ಟಿತ್ತು. ಅವರಿಗೆ ಧರ್ಮಶಾಸ್ತ್ರವಿಧಿಗಳನ್ನು ಕೈಗೊಂಡು ನಡೆಯಲು ಮತ್ತು ಆ ಮೂಲಕವಾಗಿ ಅವರಿಗೆ ಆ ರಾಜ್ಯವನ್ನು ಪಡಕೊಳ್ಳಲು ಸಾಧ್ಯವಿಲ್ಲದಿದ್ದರೂ ಅವರು ಕ್ರಿಸ್ತನನ್ನು ಅಂಗೀಕರಿಸಿಕೊಳ್ಳುವ ಮೂಲಕ ಧರ್ಮಶಾಸ್ತ್ರದ ನೀತಿಯನ್ನು ಪಡಕೊಂಡು ದೇವರಿಗೆ ಅಂಗೀಕಾರವಾಗಲು ಅವರಿಗೆ ಸಾಧ್ಯವಿತ್ತು. ಆದುದರಿಂದ ಯೇಸುವಿನ ಉಪದೇಶವು ಪೂರ್ಣವಾಗಿ ಶತಮಾನಗಳಿಂದಲೂ ತಾವು ಆ ರಾಜ್ಯವಾಗಲು ಯೋಗ್ಯರಾಗಿ ದೇವರಿಂದ ಅಂಗೀಕಾರವಾಗಲು ಪರಿಶ್ರಮಿಸುತಿದ್ದ ಜನರಿಗೆ ಆ ರಾಜ್ಯವನ್ನು ನೀಡುವ ಬಗೆಯ ವಿಷಯವಾಗಿತ್ತು. ಆ ರಾಜ್ಯಕ್ಕೆ ಸೇರುವ ವರ್ಗದ ಸದಸ್ಯರಾಗುವ ಅವಕಾಶವನ್ನು ಮೊದಲನೆಯದಾಗಿ ಯೆಹೂದ್ಯ ಜನಾಂಗಕ್ಕೆ ಅನುಗ್ರಹಿಸಲಾಗಿತ್ತು; ಮತ್ತು ಕೇವಲ ಅವರಲ್ಲಿ ಅದನ್ನು ನಿರಾಕರಿಸಿದವರ ಸಂಖ್ಯೆಗೆ ಅನುಗುಣವಾಗಿ ಈ ಅನುಗ್ರಹವು ಅವರಿಂದ ದಾಟಿ ಅನ್ಯಜನಾಂಗದವರಿಗೆ ಹೋಯಿತು. ಭಕ್ತನಾದ ಪೌಲನು ಕೆಲವರಿಗೆ ಹೇಳಿದಂತೆ: "ದೇವರ ವಾಕ್ಯವನ್ನು ಮೊದಲು ನಿಮಗೇ ಹೇಳುವದು ಅವಶ್ಯವಾಗಿತ್ತು; ಆದರೆ ನೀವು ಅದನ್ನು ತಳ್ಳಿಬಿಟ್ಟು ನಿಮ್ಮನ್ನು ನಿತ್ಯಜೀವಕ್ಕೆ ಅಪಾತ್ರರೆಂದು ತೀರ್ಪುಮಾಡಿ–ಕೊಂಡದ್ದರಿಂದ ಇಗೋ, ನಾವು ನಿಮ್ಮನ್ನು ಬಿಟ್ಟು ಅನ್ಯಜನರ ಕಡೆಗೆ ಹೋಗುತ್ತೇವೆ." (ಅ. ಕೃ. 13:46) ಎಂದು ಆಗಿತ್ತು. ಈ ಅಂಶಗಳ ದೃಷ್ಟಿಯಿಂದ, ಯೇಸುವಿನ ಉಪದೇಶಗಳು ಲೋಕಕ್ಕೆ ಸಂಬೋಧಿಸದೆ,  ಅದು ಲೋಕದಿಂದ ಪ್ರತ್ಯೇಕವಾಗಿ ಮೆಸ್ಸೀಯನ ರಾಜ್ಯದಲ್ಲಿ ಸಹಬಾಧ್ಯತೆಯನ್ನು ಪಡಕೊಳ್ಳಲು ಪರಿಶ್ರಮಿಸುತ್ತಿರುವ ದಾಗಿ ಅಥವಾ ಬಯಸುತ್ತಿರುವದಾಗಿ ಹೇಳಿಕೊಂಡ ಜನರಿಗೆ ಸಂಬೋಧಿಸಲ್ಪಟ್ಟದ್ದಾಗಿತ್ತು.

ಹೊಸ ಒಡಂಬಡಿಕೆಯ ಉಪದೇಶಗಳೆಲ್ಲವೂ ನಿಜವಾಗಿಯೂ ಇಂಥಾ ವ್ಯಕ್ತಿಗಳಿಗಾಗಿಯೇ ಇತ್ತು. ಕೇವಲ ಇವರು ಮಾತ್ರವೇ ಕೇಳುವ ಕಿವಿಯನ್ನು ಹೊಂದಿದ್ದರು; ಮತ್ತು ನಾವೂ ಹೀಗೆಯೇ ಆಜ್ಞಾಪಿಸಲ್ಪಟ್ಟಿರುವೆವು: "ಕಿವಿಯುಳ್ಳವನು ಕೇಳಲಿ." ಪರಲೋಕರಾಜ್ಯದ ಸುವಾರ್ತೆಯು ಸಾತ್ವಿಕರು ದೀನರು ಮತ್ತು ಮನಮುರಿದವರಿಗೆ ಸಾರಲ್ಪಡಬೇಕೆಂದು ಪುನಃ ನಾವು ಆದೇಶಿಸಲ್ಪಟ್ಟಿರುವೆವು; ಯಾಕೆಂದರೆ ಕೇವಲ ಇಂಥವರೇ ಯಾವುದೇ ಒಂದು ಅರ್ಥದಲ್ಲಿ ಆ ಸಂದೇಶವನ್ನು ಸ್ವೀಕರಿಸಿ ಕೊಳ್ಳಲು ಸಿದ್ಧರಾಗಿರುವದು. ಇತರರೆಲ್ಲರೂ ದೇವರ ರಾಜ್ಯದ ಸುವಾರ್ತೆಯ ವಿಷಯದಲ್ಲಿ ಕಣ್ಣಿಲ್ಲದವರೂ ಕಿವಿಯಿಲ್ಲದ ವರೂ ಆಗಿರುವರು. ಈಗ ಯಾರಿಗೆ ನೋಡಲಾಗದೋ ಮತ್ತು ಕೇಳಲಾಗದೋ ಅವರಿಗೆ ಕಡೆಯಲ್ಲಿ ಮೆಸ್ಸೀಯನ ಆಳ್ವಿಕೆಯಲ್ಲಿ ತಮ್ಮ ಕಣ್ಣುಗಳು ಮತ್ತು ಕಿವಿಗಳು ತೆರೆಯಲ್ಪಡುವದು, ಯಾಕೆಂದರೆ ಆತನು ಎಲ್ಲಾ ಮನುಷ್ಯರಿಗೋಸ್ಕರ ಮರಣವನ್ನು ಅನುಭವಿಸಿದ್ದನು. ಆದರೆ ಇಂಥವರು ಈ ಸುವಾರ್ತಾಯುಗದಲ್ಲಿ ಮಾಡಲಾಗಿರುವ ಪ್ರಭಾವದಿಂದ ಕೂಡಿದ ಉನ್ನತ (ಸ್ಥಾನದ) ಕರೆಯನ್ನು ಸ್ವೀಕರಿಸುವ ವಿಷಯದಲ್ಲಿ ಪೂರ್ಣವಾಗಿ ವಿಫಲರಾಗುವರು.

## "ಜೀವವೇ... ಸುಖಪಡು"

ಭೂಲೋಕ ಸಂಬಂಧವಾದ ಆಕಾಂಕ್ಷೆಗಳೆಲ್ಲವುಗಳೂ ಹೋಲಿಸಿ ನೋಡಿದ್ದಲ್ಲಿ ಅವು ಅವಿವೇಕವಾದವುಗಳೆಂಬುದನ್ನು ನಿದರ್ಶಿಸಲು ನಮ್ಮ ಕರ್ತನು ಒಂದು ಸಾಮ್ಯವನ್ನು ನೀಡಿದ್ದನು. ಭೂಲೋಕದ ಆಕಾಂಕ್ಷೆಗಳು ಅತಿ ಕೆಟ್ಟವುಗಳೆಂದು ಇದು ಅರ್ಥವಾಗುವದಿಲ್ಲ; ಆದರೆ ನಿಜವಾಗಿಯೂ ಆ ರಾಜ್ಯದಲ್ಲಿ ಸಂಭವಿಸುವಂಥ ವಿಶೇಷ ಸಂಗತಿಗಳಿಗೆ ಹೋಲಿಸಿದಲ್ಲಿ ಇವುಗಳು ಕಳಪೆಯಾಗಿ ತೋರುವದು. ಅದು ಬಹು ಬೆಲೆಯುಳ್ಳ ಒಂದು ಮುತ್ತು. ಅದನ್ನು ಪಡಕೊಳ್ಳಲು ಇತರ ಮುತ್ತುಗಳೆಲ್ಲವನ್ನು ಅಂದರೆ ಇತರ ಎಲ್ಲಾ ಅಮೂಲ್ಯ ವಸ್ತುಗಳು, ಇತರ ಎಲ್ಲಾ ಆಕಾಂಕ್ಷೆಗಳು, ಮತ್ತು ಇತರ ಎಲ್ಲಾ ನಿರೀಕ್ಷೆಗಳು ಇವೆಲ್ಲವುಗಳನ್ನು ತಳ್ಳಿಹಾಕಬೇಕು ಮತ್ತು ಅವುಗಳನ್ನು ಕಸವೆಂದು ಎಣಿಸಬೇಕು.

ಆ ಸಾಮ್ಯವು ಒಬ್ಬ ಐಶ್ವರ್ಯವಂತನಾದ ವ್ಯವಸಾಯಗಾರನ ಬಗ್ಗೆ ಹೇಳುವದು. ತನ್ನ ಸಂಪತ್ತನ್ನು ಒಳ್ಳೆಯ ಕಾರ್ಯಗಳಿಗೆ ಉಪಯೋಗಿಸುವದರ ಬದಲು ಅವನು ಜಿಪುಣನಾಗಿ ಅವುಗಳನ್ನು ಕೂಡಿಸಿಟ್ಟುಕೊಳ್ಳುವದರಲ್ಲಿ ಸಂತೋಷಿಸು – ತ್ತಿದ್ದನು. ಆತನು ದೊಡ್ಡ ಕಣಜಗಳನ್ನು ಮತ್ತು ಉಗ್ರಾಣಗಳನ್ನು ಕಟ್ಟಿಸಿದನು. ತನ್ನ ಸಮೃದ್ಧಿಗೆ ಸಾಕಾಗುವದಕ್ಕಿಂತಲೂ ಹೆಚ್ಚಾಗಿ ಹೊಂದಿರುವೆನೆಂದೂ, ಆದುದರಿಂದ ಇನ್ನು ಮುಂದೆ ವಿರಮಿಸಿ ಕೊಂಡು ಸುಖಪಡಬಹುದೆಂಬ ಅಂಶದ ಮೂಲಕ ತನ್ನನ್ನು ಸಂತೈಸಿಕೊಂಡನು. ಸ್ವಲ್ಪಕಾಲದಲ್ಲೇ ಆತನು ಸತ್ತುಹೋದನೆಂದು ಸಾಮ್ಯವು ತೋರಿಸಿತ್ತು. ನಾವು ವಿಚಾರಿಸುವದೆಂದರೆ, ತಾನು ಕೂಡಿಸಿಕೊಂಡಿರುವ ದೊಡ್ಡ ಸಂಪತ್ತನ್ನು ಉಪಯೋಗಿಸಿಕೊಳ್ಳಲು ವಿಫಲನಾದ ಆ ಮನುಷ್ಯನಿಗೆ ನಿಜವಾಗಿಯೂ ಅದರಿಂದ ಯಾವ ಪ್ರಯೋಜನವಾಗಿತ್ತೆಂಬದು. ಇತರರು ಜಗಳವಾಡುವದಕ್ಕಾಗಿ ಮತ್ತು ಅದರಿಂದ ಹೆಚ್ಚುಕಡಿಮೆ ಹಾನಿಮಾಡಿಕೊಳ್ಳುವ ಸಲುವಾಗಿ ಆತನು ಅದನ್ನು ಬಿಟ್ಟುಹೋಗಿದ್ದನು. ಆತನು ಬುದ್ಧಿಯಿಲ್ಲದ ಒಬ್ಬ ಐಶ್ವರ್ಯವಂತನಾಗಿದ್ದನು. ತನ್ನ ಸಂಪತ್ತನ್ನು ಹೀಗೆ ಬಿಟ್ಟು ಹೋಗುವ ಬದಲು ಅದನ್ನು ಇತರರ ಒಳಿತಿಗಾಗಿ ಮತ್ತು ದೇವರ ಮಹಿಮೆಗಾಗಿ ವಿವೇಕದಿಂದ ವಿನಿಯೋಗಿಸಿ ಸಂತೋಷಿಸಲು ಆತನಿಗೆ ಸಾಧ್ಯವಿತ್ತು. ಹೀಗೆ ಆತನು ದೇವರ ವಿಷಯದಲ್ಲಿ ಐಶ್ವರ್ಯವಂತನಾಗಬಹುದಿತ್ತು. ಆದರೆ ಇದಕ್ಕೆ ಬದಲಾಗಿ, ಆತನು ತನಗಾಗಿ ದ್ರವ್ಯವನ್ನಿಟ್ಟುಕೊಂಡು ದೇವರ ವಿಷಯದಲ್ಲಿ ಐಶ್ವರ್ಯವಂತನಾಗದೇ ಇರುವವನಿಗೆ ಒಂದು ನಿದರ್ಶನವಾದನು.

ಹಲವರು ಈ ಸಾಮ್ಯದೊಳಗೆ ಅಡಕವಾಗಿಲ್ಲದ ಸಂಗತಿಗಳನ್ನು ಓದುವರು. ಆ ಐಶ್ವರ್ಯವಂತನು ನಿತ್ಯಯಾತನೆಗೆ ಹೋದನೆಂದು ಅವರು ಊಹಿಸಿಕೊಳ್ಳುವರು; ಆದರೆ ಕರ್ತನ ಮಾತುಗಳಲ್ಲಿ ಹೀಗೆ ಏನೂ ತಿಳಿಸಲ್ಪಟ್ಟಿರಲಿಲ್ಲ. ಇಲ್ಲಿ ವ್ಯಕ್ತಮಾಡಲಾದ, "ಈ ಹೊತ್ತು ರಾತ್ರಿ ನಿನ್ನ ಪ್ರಾಣವನ್ನು ನಿನ್ನ ಕಡೆಯಿಂದ ಕೇಳುವರು;" ಎನ್ನುವದು ಈ ರಾತ್ರಿ ನೀನು ನಿನ್ನ ಪ್ರಾಣವನ್ನು ಕಳಕೊಳ್ಳುವಿ, ನೀನು ಬಡತನದಲ್ಲಿಯೇ ಸಾಯುವಿ ಎಂಬುದನ್ನು ಸೂಚಿಸುವದು. ಮುಂದೆ ನಿನ್ನನ್ನು ಐಶ್ವರ್ಯವಂತನನ್ನಾಗಿ ಮಾಡುವ ಆತ್ಮಿಕವಾದ ಸಂಪತ್ತನ್ನು ನೀನು ಹೃದಯದಲ್ಲಿ, ಮನಸ್ಸಿನಲ್ಲಿ ಮತ್ತು ಒಳ್ಳೆಯ ಕಾರ್ಯಗಳ ಮೂಲಕ ಕೂಡಿಸಿಟ್ಟುಕೊಳ್ಳದೆ ಹೋದರೆ ಭೂಸಂಬಂಧವಾದ ಐಶ್ವರ್ಯವು ಮುಂದೆ ಯಾವ ಗಣನೆಗೂ ಬಾರದು.

ತಾನು ಕೂಡಿಸಿಟ್ಟುಕೊಂಡ ಸಂಪತ್ತಿನ ಮೂಲಕ ಪ್ರಯೋಜನ ಹೊಂದುವದಕ್ಕೆ ಬದಲಾಗಿ ಆ ಐಶ್ವರ್ಯವಂತನು ಮುಂದಿನ ಜೀವಿತದಲ್ಲಿ ಇವುಗಳಿಂದ ಪ್ರಯೋಜನ ಹೊಂದದ ಸ್ಥಿತಿಯಲ್ಲಿರುವನು. ಆತನು ತನ್ನ ಸಂಪತ್ತನ್ನು ಯಜ್ಞವನ್ನಾಗಿ ಅರ್ಪಿಸಿಕೊಳ್ಳಸಬಹುದಿತ್ತು ಅಥವಾ ಆತನು ತನ್ನ ಜೀವಿತವನ್ನು ಕ್ರಿಸ್ತನ ಮೂಲಕವಾಗಿ ದೇವರಿಗೆ ಸಂಪೂರ್ಣವಾಗಿ ಪ್ರತಿಷ್ಠಿಸಿಕೊಂಡವನಾಗಿ ನಂತರದಲ್ಲಿ ತನ್ನ ಸಮಯ ಪ್ರತಿಭೆ ಅವಕಾಶ ಮತ್ತು ಸಂಪತ್ತನ್ನು ನಂಬಿಗಸ್ತಿಕೆಯಿಂದ (ತ್ಯಾಗವಾಗಿ) ಬಳಸಬಹುದಿತ್ತು. ಹೀಗೆ ಆತನು ಇದೇ ಪ್ರಮಾಣದಲ್ಲಿ ಪರಲೋಕದಲ್ಲಿ ಸಂಪತ್ತನ್ನು ಕೂಡಿಸಿಟ್ಟುಕೊಳ್ಳುತ್ತಿದ್ದನು; ಮತ್ತು ಹೀಗಾಗಿ ಅತನು ಪುನರುತ್ಥಾನದಲ್ಲಿ ನಂಬಿಗಸ್ತನಾದ ಹಿಂಬಾಲಕನಾಗಿ ಕರ್ತನಿಂದ ಅಂಗೀಕರಿಸಲ್ಪಟ್ಟು ಆತನ ಪ್ರಭಾವ ಮಾನ ನಿರ್ಲಯತ್ವಗಳಲ್ಲಿ ಪಾಲುಹೊಂದುವವನಾಗಿ ಆ ರಾಜ್ಯಕ್ಕೆ ಸೇರುವ ವರ್ಗದ ಸದಸ್ಯನಾಗಿರುತ್ತಿದ್ದನು. ಅವರ ಕಾರ್ಯಭಾರವೇನಂದರೆ ಒಂದು ಸಾವಿರ ವರುಷಗಳ ಕಾಲ ಯೇಸುವಿನ ಮರಣವು ಸಂಪಾದಿಕೊಟ್ಟ ಆಶೀರ್ವಾದಗಳು ಆದಾಮನ ಸಂತತಿಗಳೆಲ್ಲವುಗಳಿಗೆ ವ್ಯಾಪಿಸಿ ಕೊಳ್ಳುವಂತೆ ಮಾಡುವದಾಗಿರುವದು.

ಆ ಐಶ್ವರ್ಯವಂತನು ತನ್ನ ಅವಕಾಶವನ್ನು ಕಳಕೊಂಡವನಾಗಿದ್ದರೂ ಕ್ರಿಸ್ತನ ಸಾವಿರ ವರುಷದ ರಾಜ್ಯದಲ್ಲಿ ಎದ್ದುಬರುವನು, ಯಾಕೆಂದರೆ ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಎದ್ದು ಹೊರಬರುವರೆಂದು ನಾವು ಓದುತ್ತೇವೆ. ಆದರೆ ಮೊದಲನೆ ಪುನರುತ್ಥಾನದಲ್ಲಿ ಪಾಲು ಹೊಂದಲು ಸಮ್ಮತನಾಗಿ

ಎದ್ದು ಹೊರಬರುವದಕ್ಕೆ ಬದಲಾಗಿ ಆತನು ದೇವರಿಂದ ಇದಕ್ಕೆ ಸಮ್ಮತಿಸಲ್ಪಡದವನಾಗಿ ಹೊರಬರುವನು. ಅಲ್ಲದೆ ಆತನು ಹೊಂದುವ ಪುನರುತ್ಥಾನದ ಅವಕಾಶವು ತೀರ್ಪಿಗಾಗಿ ಪುನರುತ್ಥಾನವೆಂದು ವರ್ಣಿಸಲ್ಪಟ್ಟಿ ರುವದು. (ಯೋಹಾನ 5:29 ರಿವೈಸ್ಡ್ ವರ್ಷನ್) ಆತನು ಅಪಮಾನ ನಿಂದನೆ ಹೊಂದಲು ಎದ್ದುಬರುವನು; ಆ ಸಮಯದಲ್ಲಿನ ನ್ಯಾಯವಿಚಾರಣೆಯಲ್ಲಿ ಆತನು ತನ್ನ ಪಾಠವನ್ನು ಕಲಿತು ಉತ್ತಮವಾದ ಗುಣಗಳನ್ನು ಬೆಳೆಸಿಕೊಳ್ಳುವವರೆಗೂ ಅಥವಾ ಹೀಗೆ ಮಾಡಲು ನಿರಾಕರಿಸಿದಲ್ಲಿ ಎರಡನೆಯ ಮರಣದಲ್ಲಿ ಆತನು ತೆಗೆದು ಹಾಕಲ್ಪಡುವವರೆಗೂ ಈ ನಿಂದನಾಪಮಾನ ಸ್ಥಿತಿಯು ಮುಂದುವರೆಯುವದು.

## ಮೊದಲು ದೇವರ ರಾಜ್ಯಕ್ಕಾಗಿ ತವಕಪಡಿರಿ

ಆತನ ರಾಜ್ಯದವರನ್ನು ಕಂಡುಕೊಳ್ಳುವ ನಿರೀಕ್ಷೆಯಿಂದ ಭೂಲೋಕದ ರಾಜ್ಯಗಳಲ್ಲಿ ಅವರಿಗಾಗಿ ಹುಡುಕಬೇಕೆನ್ನುವದು ಒಳ್ಳೆಯ ಬೋಧಕನ ಮಾತಿನ ಅರ್ಥವೆಂಬುದನ್ನು ನಾವು ಗ್ರಹಿಸಿಕೊಳ್ಳುವಂತಿಲ್ಲ. ಇದಕ್ಕೆ ಪ್ರತಿಯಾಗಿ, ಆತನು ತನ್ನ ರಾಜ್ಯವು ಮುಂದಿನ ಕಾಲದ್ದೆಂದು ತಿಳಿಸಿರುವನು. "ನನ್ನ ರಾಜ್ಯವು ಇಲ್ಲಿಯದ್ದಲ್ಲ." – ಈ ವ್ಯವಸ್ಥಾಕ್ರಮದಲ್ಲ. (ಯೋಹಾನ 18:36) ಆತನ ರಾಜ್ಯಕ್ಕಾಗಿಯೇ, ಅಂದರೆ ದೇವರ ರಾಜ್ಯಕ್ಕಾಗಿಯೇ, "ನಿನ್ನ ರಾಜ್ಯವು ಬರಲಿ." ಎಂದು ನಾವು ಪ್ರಾರ್ಥಿಸುವದು. ಆ ರಾಜ್ಯವನ್ನೇ ನಾವು ನಿರೀಕ್ಷಿಸುವದು, ಅದಕ್ಕಾಗಿಯೇ ನಾವು ಕಾಯುತ್ತಿರುವದು ಹಾಗೂ ಸಿದ್ಧವಾಗುತ್ತಿರುವದು. ನಾವು ಅದಕ್ಕಾಗಿ ತವಕಪಡುವದು ಎನ್ನುವದು "ಬೆಳಕಿನ ರಾಜ್ಯದೊಳಗೆ ದೇವಜನರ ಬಾಧ್ಯತೆಯಲ್ಲಿ ಪಾಲುಗಾರರಾಗುವದಕ್ಕೆ" ನಮ್ಮನ್ನು ಯೋಗ್ಯರನ್ನಾಗಿಸುವ ಕಾರ್ಯಗಳನ್ನು ಮಾಡುವದು ಎಂದು ಅರ್ಥವಾಗುತ್ತದೆ. ನಾವು ಪರಲೋಕದಲ್ಲಿ ಗಂಟುಮಾಡಿಟ್ಟು ಕೊಳ್ಳಬೇಕು. ನಾವು ನಮ್ಮಲ್ಲಿರುವ ವೊಹರಿಗಳನ್ನು ತಲಾಂತುಗಳನ್ನು ಎಷ್ಟು ವಿವೇಕದಿಂದ ಉಪಯೋಗಿಸಬೇಕೆಂದರೆ ರಕ್ಷಕನ ಎರಡನೇ ಬರುವಿಕೆಯಲ್ಲಿ ಆತನು ತನ್ನ ಸೇವಕರಿಂದ ಲೆಕ್ಕತೆಗೆದುಕೊಳ್ಳುವಾಗ ನಾವು ಆತನ ಸೇವಕರೊಂದಿಗಿರುವದು ಮಾತ್ರವಲ್ಲದೆ "ಭಲಾ ನಂಬಿಗಸ್ತನಾದ ಒಳ್ಳೆಯ ಆಳು ನೀನು; ನಿನ್ನ ದಣಿಯ ಸೌಭಾಗ್ಯಗಳಲ್ಲಿ – ಅಂದರೆ ರಾಜ್ಯದ ಉಲ್ಲಾಸಗಳಲ್ಲಿ – ಸೇರು" "ಎರಡು ಗ್ರಾಮಗಳ ಮೇಲೆ ಅಧಿಕಾರಿಯಾಗಿರು" ಅಥವಾ "ಐದು ಗ್ರಾಮಗಳ" ಮೇಲೆ ಎಂದು ಆತನಿಂದ ಹೇಳಿಸಿಕೊಳ್ಳಬೇಕು.

ಆ ರಾಜ್ಯದಲ್ಲಿ ಬಾಧ್ಯರಾಗುವವರಿಗೆ ಅನುಸರಿಸಲು ಎರಡು ನಿಶ್ಚಿತವಾದ ಕಾರ್ಯವಿಧಾನಗಳಿರುವವು. (1) ಅವರು ತಾವು ಪಾಪಿಗಳಾಗಿದ್ದು ದೇವರ ಗಮನಕ್ಕೆ ಬರಲು ಅನರ್ಹರೆಂಬುದನ್ನು ಗುರುತಿಸಿಕೊಳ್ಳಬೇಕು. (2) ಯೇಸುವನ್ನು ಲೋಕದ ಪಾಪವನ್ನು ಹೊತ್ತುಕೊಂಡುಹೋಗಲು ದೇವರು ನೇಮಿಸಿದ ಯಜ್ಞದ ಕುರಿಯೆಂಬುದನ್ನು ಗುರುತಿಸಬೇಕು. (3) ದೇವರಿಗೆ ವಿಧೇಯರಾಗಲು ಇಚ್ಛಿಸುವವರನ್ನು ಮರುಸಂಧಾನ ಮಾಡಿ ಲೋಕವನ್ನು ಕಡೆಯದಾಗಿ ಶುದ್ಧೀಕರಿಸುವದಕ್ಕೆ ಆತನ ಯಜ್ಞವು ಆಧಾರವೆಂಬುದನ್ನು ಮಾತ್ರವಲ್ಲದೆ ಆ ಕಾರ್ಯವು ಇನ್ನೂ ಆರಂಭವಾಗಿಲ್ಲವೆಂಬುದನ್ನೂ ಅರಿತುಕೊಳ್ಳಬೇಕು. ಆತನು ತನ್ನ ಸಾವಿರ ವರುಷದ ಆಳ್ವಿಕೆಯಲ್ಲಿ ಆ ಕಾರ್ಯವನ್ನು ನೆರವೇರಿಸಬೇಕಿರುವದು. (4) ಆತನು ಈಗ ಆ ರಾಜ್ಯದಲ್ಲಿ ಸೇರಲಿರುವ ವರ್ಗಕ್ಕೆ ಅಂಗಗಳಾಗುವವರನ್ನು ಹುಡುಕುತ್ತಿರುವ ನೆಂಬ ಮತ್ತು ಅದರ ಅಂಗಗಳಾಗುವಕ್ಕೆ ಇರುವ ಮಾರ್ಗವು ಇಕ್ಕಟ್ಟಾದ ಮಾರ್ಗವಾಗಿರುವದೆಂಬ ಕರ್ತನ ಸಂದೇಶವನ್ನು ಆಲಿಸಬೇಕು. "ಯಾವನಾದರೂ ನನ್ನ ಸೇವೆಮಾಡುವವನಾದರೆ ಅವನು ತನ್ನನ್ನು ನಿರಾಕರಿಸಿಕೊಂಡು ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ;" ಮತ್ತು "ಎಲ್ಲಿ ನಾನು ಇರುತ್ತೇನೋ ಅಲ್ಲಿ ನನ್ನ ಸೇವಕನೂ ಸಹ ಇರುವನು." ಈ ವರ್ಗದವರಿಗಾಗುವ ಪರೀಕ್ಷೆಯು ಬಹು ಹಿಂಸೆಯನ್ನು ತಾಳುವದರ ಮೂಲಕವಾಗಿರುವದೆಂಬುದನ್ನು ಅವರು ಅರಿತುಕೊಳ್ಳಬೇಕು; ದೇವರು ಭಕ್ತರನ್ನು ಕರೆಯುತ್ತಿರುವದು ಮಾತ್ರವಲ್ಲದೆ, ದೇವರ ಮೇಲಿರುವ ಮತ್ತು ಸಹೋದರ ಮೇಲಿರುವ ತಮ್ಮ ಪ್ರೀತಿಯ ಮತ್ತು ತಮ್ಮ ನಿಷ್ಠೆಯ ವಿಷಯವಾಗಿ ಬರುವ ಕಠಿನ ಪರಿಶೋಧನೆ ಪರೀಕ್ಷೆಗಳನ್ನು ಸಹಿಸಿಕೊಳ್ಳುವಂಥಾ ಭಕ್ತಿಯುಳ್ಳವರನ್ನೂ ಕರೆಯುತ್ತಿರುವನು.

ಕರ್ತನ ಸೇವಕರಾಗಿ ತಮ್ಮನ್ನು ನೀತಿಯ ವಿಷಯವಾದ ಸೇವೆಯಲ್ಲಿ ಮರಣದ ಪರ್ಯಂತರ ಪೂರ್ಣವಾಗಿ ಪ್ರತಿಷ್ಠಿಸಿಕೊಂಡ ಸಮಯದಿಂದ ಅವರು ಪರಲೋಕರಾಜ್ಯವನ್ನು ಯಾವ ವಿಧದಲ್ಲೂ ಬೆಲೆಕಟ್ಟಲಾಗದಂಥ ಉತ್ಕೃಷ್ಟವಾದ ನಿಧಿಯೆಂದು ಎಣಿಸುವರು. ಅವರು ಅದನ್ನು ಪತ್ರಿ ದಿನವೂ ಪ್ರತಿ ಗಳಿಗೆಯಲ್ಲಿಯೂ ಬಯಸುವರು. ಅವರ ಮನಸ್ಸು ಅದರಲ್ಲಿಯೇ ಅಂದರೆ ಆ ನಿಧಿಯ ಮೇಲೆಯೇ ಇರುವದು. ಅದು ಅವರು ಹಗಲಲ್ಲಿ ಆಲೋಚಿಸುವ ಮುಖ್ಯ ವಿಷಯವಾಗಿದ್ದು ರಾತ್ರಿಯಲ್ಲಿ ಅದು ಅವರ ಧ್ಯಾನದ ಮುಖ್ಯ ಸಂಗತಿಯಾಗುವದು. ತಮಗೆ ಅಗತ್ಯವಿರುವ ಮತ್ತು ಯೋಗ್ಯವಾದ ವಸ್ತುಗಳನ್ನು ಹೊಂದಿಸಿಕೊಳ್ಳಲು ಲೌಕಿಕ ಉದ್ಯೋಗವು ಇನ್ನೂ ಅವರಿಗೆ ಅವಶ್ಯವಿರುವದು. ಆದರೆ ಅವರ ಪರಿಗಣನೆಯಲ್ಲಿ ಪರಲೋಕದಲ್ಲಿ ದೊರೆಯುವ ಪ್ರತಿಫಲಗಳಿಗೆ ಹೋಲಿಸಿ ನೋಡಿದಲ್ಲಿ ಪ್ರಾಪಂಚಿಕವಾದ ಯಾವ ಬಹುಮಾನಗಳೂ ಬೆಲೆಯಿಲ್ಲದಾಗುವದು. ಇಂಥವರು ಆ ರಾಜ್ಯಕ್ಕೆ ಬಾಧ್ಯರಾಗುವದರಲ್ಲಿ ಯಶಸ್ಸನ್ನು ಪಡೆಯುವರು; ತಾವು ಮನೆಯನ್ನಾಗಲಿ ಅಥವಾ ಭೂಮಿಯನ್ನಾಗಲಿ, ತಂದೆತಾಯಿಗಳನ್ನಾಗಲಿ ಅಥವಾ ಮಕ್ಕಳನ್ನಾಗಲಿ ಇಲ್ಲವೇ ತನ್ನನ್ನಾಗಲಿ ಪ್ರೀತಿಸಿಕೊಳ್ಳುವದಕ್ಕಿಂತಲೂ ತನ್ನನ್ನು (ದೇವರನ್ನು) ಹೆಚ್ಚಾಗಿ ಪ್ರೀತಿಸುವ ಇಂಥವರಿಗೇ ದೇವರು ಆ ರಾಜ್ಯದ ಬಾಧ್ಯತೆಯನ್ನು ನೀಡುವ ವಾಗ್ದಾನ ಮಾಡಿರುವದು.

*****

# “ತಮ್ಮ ಯಜಮಾನನಿಗಾಗಿ ಕಾಯುತ್ತಿರುವ ಮನುಷ್ಯರಂತೆ ಇರ್ರಿ.”

**ರೀಪ್ರಿಂಟ್ಸ್ ಪುಟ 3354**

## ಲೂಕ 12:35–48

**“ಯಜಮಾನನು ಬಂದು ಯಾವ ಯಾವ ಆಳುಗಳು ಎಚ್ಚರವಾಗಿರುವದನ್ನು ಕಂಡುಕೊಳ್ಳುವನೋ ಆ ಆಳುಗಳೇ ಧನ್ಯರು.”**

ಸಮೀಪಿಸುತ್ತಿರುವ ತನ್ನ ಮರಣ ಮತ್ತು ಪುನರುತ್ಥಾನದ ವಿಷಯವಾಗಿ ತನ್ನ ಬೋಧನೆಯನ್ನು ಮುಂದುವರೆಸುತ್ತಾ, ಮತ್ತು ಈ ಪಾಠದ ಮಹತ್ವವನ್ನು ಅಪೊಸ್ತಲರಿಗೆ ತೋರಿಸಿಕೊಟ್ಟಿದ್ದ ಮಹಿಮಾರೂಪ ದರ್ಶನವಾದ ನಂತರ ನಮ್ಮ ಕರ್ತನು ತನ್ನ ಎರಡನೆಯ ಬರುವಿಕೆಯ ವಿಷಯವಾಗಿ, ಮತ್ತು ಈ ಮಧ್ಯದಲ್ಲಿ ಅವರ ಮನೋಭಾವು ಏನಾಗಿರಬೇಕೆಂಬ ವಿಷಯವಾಗಿ ಕೆಲವು ಅಂಶವನ್ನು ವಿವರಿಸಲು ಆರಂಭಿಸಿದನು. ಈಗಿನ ಪಾಠವು ಈ ಅಂಶಗಳಿಗೆ ಒತ್ತುಕೊಡುತ್ತದೆ. ಕರ್ತನು ಇಲ್ಲದಿರುವಾಗ ಆತನ ಜನರು ಸತತವಾಗಿ ಎಚ್ಚರಿಕೆಯಿಂದಿರಬೇಕಿತ್ತು; ಅವರ ನಡುಗಳು ಕಟ್ಟಿರುವದು ಅವರು ಎಲ್ಲಾ ಸಮಯದಲ್ಲಿಯೂ ಸೇವೆಗೆ ಸಿದ್ಧವಾಗಿರಬೇಕೆಂಬುದನ್ನು ಅಂದರೆ ಆ ರಾಜ್ಯದ ಹಿತಾಸಕ್ತಿಗಳ ವಿಷಯವಾಗಿ ಪ್ರಚಾರವಮಾಡುವದರಲ್ಲಿ ಕ್ರೀಯಾಶೀಲ ರಾಗಿರಬೇಕೆಂಬದನ್ನು ಸೂಚಿಸುತ್ತದೆ. ಆ ಕಾಲದಲ್ಲಿ ವಾಡಿಕೆ ಯಾಗಿದ್ದಂತೆ ಸಡಿಲವಾಗಿಯೂ ನೀಳವಾಗಿಯೂ ಇರುವ ಉಡುಪುಗಳನ್ನು ಬಳಸಲ್ಪಡುತ್ತಿದ್ದು, ಸೊಂಟಕ್ಕೆ ನಡುಕಟ್ಟನ್ನು ಕಟ್ಟಿಕೊಳ್ಳುವದು ಜೀವನದ ಸಾಮಾನ್ಯವಾದ ಸೇವೆಗಳನ್ನು ಮಾಡಲು ಸೂಕ್ತವಾದ ಸ್ಥಾನಕ್ಕೆ ಅವುಗಳನ್ನು ಎಳೆದುತರಲು ಅನುವುಮಾಡಿಕೊಡುತ್ತಿತ್ತು. ವಿಶ್ರಾಂತಿಯನ್ನು ಬಯಸಿದಾಗ ನಡುಕಟ್ಟು ಸಡಿಲಮಾಡಲ್ಪಡುತ್ತಿತ್ತು. ಇದರ ಪರಿಣಾಮವಾಗಿ ಈ ಚಿತ್ರಣದಲ್ಲಿ ನೀಡಿರುವ ಪಾಠವೆಂದರೆ ಕರ್ತನು (ಭೂಲೋಕದಲ್ಲಿ) ಇಲ್ಲದೆ ಇರುವಾಗ ಆತನ ಜನರು ಸತತವಾಗಿ ಕ್ರಿಯಾಶೀಲರಾಗಿರ ಬೇಕೆಂಬುದು. ನಾವು ಈ ಪ್ರಪಂಚದ ಚಿಂತಾಭಾರಗಳಿಂದ ತೂಕಡಿಸುವದನ್ನಾಗಲಿ ಮತ್ತು ನಿದ್ರಿಸುವದನ್ನಾಗಲಿ ಮಾಡಿ ನಮಗೆ ಅಧಿಕಾರಯುಕ್ತವಾಗಿ ವಹಿಸಲಾದ ಕರ್ತವ್ಯವನ್ನು ನಿರ್ವಹಿಸುವದರಿಂದ ಹಿಂದೆಗೆಯಬಾರದು.

ಕರ್ತನ ಸೇವಕರಲ್ಲಿ ಪ್ರತಿಯೊಬ್ಬನೂ ಬೆಳಕನ್ನು ಹೊತ್ತವನಾಗಿ ಪ್ರತಿನಿಧಿಸಲ್ಪಟ್ಟಿದ್ದು ತನ್ನ ಬೆಳಕನ್ನು ಜನರ ಮುಂದೆ ಪ್ರಕಾಶಿಸುವಂತೆ ಮಾಡಿ ತನ್ನ ಒಳ್ಳೆಯ ಕಾರ್ಯವನ್ನು ನೋಡಿದ ಅವರು ಪರಲೋಕದಲ್ಲಿರುವ ತಂದೆಯನ್ನು ಕೊಂಡಾಡುವರು. ಅಂಧಕಾರ ಅಜ್ಞಾನ ಮೂಢನಂಬಿಕೆ ಮತ್ತು ಪಾಪವು ಲೋಕದಲ್ಲಿ ಸಾಮಾನ್ಯವಾಗಿರುವ ಚಿತ್ರಣವಾಗಿರುವಲ್ಲಿ, ಕರ್ತನ ಶಿಷ್ಯರು ದೈವಿಕ ಪ್ರಕಟಣೆ ಮತ್ತು ಜ್ಞಾನ ಮತ್ತು ತಿಳುವಳಿಕೆಯೆಂಬ ಬೆಳಕನ್ನು ಅನುಗ್ರಹಿಸಲ್ಪಟ್ಟವರಾಗಿದ್ದಾರೆ. ಇದು ಅವರನ್ನು ಮಾರ್ಪಡಿಸಿ ನೂತನ ಸೃಷ್ಟಿಗಳನ್ನಾಗಿ ಮಾಡುವದು ಮಾತ್ರವಲ್ಲದೆ ಇವರ ಮೂಲಕವಾಗಿ ತಮ್ಮ ಸಂಪರ್ಕಕ್ಕೆ ಬರುವವರೆಲ್ಲರ ಮುಂದೆ ಹೊಳೆಯುವವದಾಗಿರುವದು. “ನೀವು ಲೋಕಕ್ಕೆ ಬೆಳಕಾಗಿದ್ದೀರಿ.” ಇಲ್ಲಿ ಒಂದು ಸಲಹೆಯು ಸೂಕ್ತವಾಗಿರುವದು; ಅದೇನಂದರೆ ಆ ಸಾವಿರ ವರುಷದ ಆಳ್ವಿಕೆಯ ಕಾಲದ ಸೂರ್ಯೋದಯದ ದೊಡ್ಡ ಬೆಳಕು ಇನ್ನೂ ಉಂಟಾಗಲಿಲ್ಲವೆಂಬದು; ಕರ್ತನ ಜನರು ಇನ್ನೂ ಲೋಕದಲ್ಲಿ ಸಾಮಾನ್ಯವಾಗಿರುವ ಅಂಧಕಾರದ ನಡುವೆ ಸಣ್ಣ ಬೆಳಕಾಗಿ ಮುಂಜಾನೆಯನ್ನು ಎದುರು ನೋಡುತ್ತಾ ಕಾಯುತ್ತಲಿರುವವರ ಮಧ್ಯೆ ಪ್ರಕಾಶಿಸುತ್ತಿರುವರು. ಈ ಸಂಬಂಧವಾಗಿ ಪ್ರವಾದಿಯ ಈ ಮಾತುಗಳು ಇವುಗಳಿಗೆ ಸರಿ ಬೀಳುವದು: “ಸಂಜೆಗೆ ದುಃಖವೆಂಬುದು ನಮ್ಮ ಬಳಿಯಲ್ಲಿ ಇಳುಕೊಂಡರೂ ಮುಂಜಾನೆ ಹರ್ಷಧ್ವನಿ ಕೇಳಿಸುವದು.” ಅಂಧಕಾರ ಅಜ್ಞಾನ ಮತ್ತು ಪಾಪವೆಂಬ ಕತ್ತಲಿನ ಕಾಲವು ಮರಣವೆಂಬ ಶಾಪದ ಮೂಲಕ ಆರಂಭವಾಗಿರುವದು; ಮತ್ತು ಇದು ಆದಾಮನ ಅವಿಧೇಯತೆಯ ಮೂಲಕವಾಗಿ ನಮ್ಮ ಈ ಮಾನವಕುಲದ ಮೇಲೆ ಬಂದಿರುವದು. ಸೃಷ್ಟಿಯೆಲ್ಲವೂ ನರಳುತ್ತಾ ಪ್ರಸವವೇದನೆಪಡುತ್ತಿದ್ದು, ಮುಂಜಾನೆಗಾಗಿ ಕಾಯುತ್ತಿರುವದು; ಅದು ದೇವರ ಮಕ್ಕಳು ಅಂದರೆ ಕ್ರಿಸ್ತ ಯೇಸುವು ಮತ್ತು ಆ ರಾಜ್ಯದಲ್ಲಿ ಆತನಿಗೆ ಸಹಬಾಧ್ಯರಾಗಲಿರುವ ಆತನ ಸಹೋದರರು ಮಹಿಮೆ ಹೊಂದುವದನ್ನು ಎದುರುನೋಡುತ್ತಾ ಕಾದುಕೊಂಡಿ – ರುವದು.

ತನ್ನ ಹಿಂಬಾಲಕರು ಎಚ್ಚರವಾಗಿದ್ದು ಎದುರುನೋಡುವ ಗುಣವುಳ್ಳವರಾಗಬೇಕೆಂಬುದಕ್ಕೆ ನಮ್ಮ ಕರ್ತನು ಒಂದು ಸಾಮ್ಯವನ್ನು ನೀಡಿದ್ದನು. ಯೆಹೂದ್ಯರಿಗೆ (ಮನೆಯ) ಸೇವಕರಂತೆ ಹಗಲಿನಲ್ಲಿಯಾಗಲಿ ಅಥವಾ ರಾತ್ರಿಯಲ್ಲಾಗಲಿ ತಮ್ಮ ಯಜಮಾನನು ತನ್ನ ಮದಲಗಿತ್ತಿಯೊಡನೆ ತನ್ನ ಮನೆಗೆ ಬರುವದನ್ನು ಎದುರುನೋಡುವದಕ್ಕಿಂತಲೂ ತಮ್ಮ ಮನೆತನದವರ ವಿಷಯವಾಗಿ ಹೆಚ್ಚು ಎಚ್ಚರದಿಂದಿರುವದು ಇಲ್ಲವೇ ತಮ್ಮ ಮನೆತನದವರ ಕ್ಷೇಮದ ಬಗ್ಗೆ ಹೆಚ್ಚು ಆಸಕ್ತಿತೋರುವದನ್ನು ಅಪೇಕ್ಷಿಸುವ ಸಂದರ್ಭಗಳು ಇರಲಿಲ್ಲ. ಮತ್ತು ತನ್ನ ಹಿಂಬಾಲಕರು ತಾನು ಎರಡನೆಯ ಸಾರಿ ಬರುವದಕ್ಕೆ ಹೀಗೆ ಕಾದುಕೊಂಡು ಎಚ್ಚರವಾಗಿರುವದು ಅವರ ಗುಣವಾಗಿರಬೇಕೆಂದುದಕ್ಕೆ ನಮ್ಮ ಕರ್ತನು ಇದನ್ನು ಸೂಕ್ತವಾದ ನಿದರ್ಶನವನ್ನಾಗಿ ಆದುಕೊಂಡನು. ವಾಸ್ತವದಲ್ಲಿ, ಈ ಸಾಮ್ಯದಲ್ಲಿನ ಸೇವಕರು ಇನ್ನೊಂದು ಸಾಮ್ಯದಲ್ಲಿ ಮದಲಗಿತ್ತಿಯಾಗಿರುವರು, ಆದರೆ ಆ ಸಂಗತಿಯು ಬೇರೊಂದು ದೃಷ್ಟಿಯಲ್ಲಿರುವದು. ಇಲ್ಲಿರುವ ಏಕೈಕ ಪಾಠವೆಂದರೆ ಸೇವೆಯಲ್ಲಿ ಶ್ರದ್ಧೆಯಿಂದ ಕ್ರಿಯಾಶೀಲರಾಗಿರುವದು, ಹೇಗಂದರೆ ಒಡೆಯನ ಕಾರ್ಯೋದ್ದೇಶಗಳನ್ನು ನೆರವೇರಿಸುವ ವಿಷಯವಾಗಿ ಎಚ್ಚರಿಕೆಯಿಂದಿದ್ದು, ಆತನು ಹಿಂದಿರುಗಿ ಬರುವದರ ವಾಗ್ದಾನದ ವಿಷಯದಲ್ಲಿ ಮತ್ತು ಆ ಮುಖ್ಯವಾದ ಘಟನೆಯನ್ನು ನಿರೀಕ್ಷಿಸುವ ವಿಷಯದಲ್ಲಿ ನಂಬಿಕೆಯುಳ್ಳವನಾಗಿ, ಸೂಕ್ತ ಸೇವೆಯನ್ನು ಮಾಡಲು ಒಬ್ಬ ಸಹಾಯುಕ ಅಥವಾ

ಪ್ರೋತ್ಸಾಹಕನಾಗಿರುವದು. ಮನೆಯ ಯಜಮಾನನು ತನ್ನ ಪರಿವಾರದೊಂದಿಗೆ ಬಂದಾಗ ಆತನ ಸೇವಕರು ನಿದ್ರಿಸುತ್ತಿರುವ ದಾಗಲಿ ಇಲ್ಲವೇ ತನ್ನ ಯಜಮಾನನು ಬರುವ ಸಮಾಚಾರ ಬಂದೊಡನೆಯೇ ಬಾಗಿಲು ತೆರೆಯಲು ಸಿದ್ಧವಾಗಿರುವದನ್ನು ಬಿಟ್ಟು ಬೇರೆ ಯಾವ ಕೆಲಸವನ್ನಾದರೂ ಮಾಡುತ್ತಿರುವದು ಆ ಸೇವಕರ ಹಿತಾಸಕ್ತಿಗಳಿಗೆ ವಿರೋಧವಾಗಿರುವದನ್ನು ಮತ್ತು ಆತನ ಮೇಲಿನ ಅವರ ಪ್ರೀತಿ ಭಕ್ತಿಗಳಿಗೆ ವಿರುದ್ಧವಾದುದನ್ನು ಅದು ಪ್ರತಿಬಿಂಬಿಸುವದು.

## ನೀವು ಎಚ್ಚರವಾಗಿಲ್ಲದಿದ್ದಲ್ಲಿ ನಿಮಗೆ ತಿಳಿದುಕೊಳ್ಳಲಾಗದು

ಈ ಸಾಮ್ಯದಲ್ಲಿ ಅಡಕವಾಗಿರುವದೇನಂದರೆ, ನಮ್ಮ ಕರ್ತನು ಎರಡನೆಯ ಸಾರಿ ಬರುವಾಗ ನಂಬಿಗಸ್ತರಾದ ತನ್ನ ಸೇವಕರು ಈ ವಿಚಾರವನ್ನು ತಿಳಿದುಕೊಳ್ಳುವ ಮೊದಲೇ ಆತನು ಬಂದಿರುವನೆಂಬುದು. ಆತನು ಪ್ರತ್ಯಕ್ಷನಾಗಿರುವದು ಬಾಗಿಲನ್ನು ತಟ್ಟುವದರ ಮೂಲಕವಾಗಿ ತಿಳಿಯಪಡಿಸಲಾಗುವದು ಮತ್ತು ಆ ತಟ್ಟುವಿಕೆಯೆಂಬುದು ಬಾಯಿ ಮಾತಿನಿಂದಾಗಲಿ ಇಲ್ಲವೇ ಮುದ್ರಿತವಾದ ಹಾಳೆಗಳ ಮೂಲಕವಾಗಲಿ ಒಡೆಯನು ಪ್ರತ್ಯಕ್ಷನಾಗಿರುವದರ ಸಾಕ್ಷಿಪ್ರಮಾಣಗಳನ್ನು ಕೆಲವು ವಿಶೇಷವಾದ ಸೇವಕನ ಅಥವಾ ಸೇವಕರ ಮುಖಾಂತರವಾಗಿ ಪ್ರಕಟಿಸುವದಕ್ಕೆ ಹೋಲಿಕೆಯಾಗಿರುವದು. ದೃಷ್ಟಾಂತವಾಗಿ ಹೇಳುವದಾದರೆ, ಕಾಲವು ಪರಿಪೂರ್ಣವಾಗಿರುವದೆಂಬುದನ್ನು ಕಾಲಗಣನೆಯ ವಿಷಯವಾದ ಪ್ರವಾದನೆಗಳು ನೆರವೇರಲ್ಪಟ್ಟಿರುವದರ ಮೂಲಕವಾಗಿ ಅಂದರೆ ಆ ಘಟನೆಯು ಸುವಾರ್ತಾಯುಗದ ಅಂತ್ಯಕಾಲಕ್ಕೆ ಮತ್ತು ಸಾವಿರ ವರುಷದ ಆಳ್ವಿಕೆಯ ಆರಂಭದ ಕಾಲಕ್ಕೆ ಸಂಬಂಧಿಸಿರುವದೆಂದು ಮತ್ತು ಸತ್ಯವೇದದಲ್ಲಿ ನೀಡಲಾಗಿರುವ ಕೆಲವು ಸೂಚನೆಗಳು ನೆರವೇರಿರುವದಾಗಿ ಪ್ರಕಟಿಸುವದು; ಇಂಥಾ ಸಾಕ್ಷ್ಯಾಧಾರಗಳು ಬಾಗಿಲು ತಟ್ಟುವಿಕೆಯ ವಿಧದಲ್ಲಿದ್ದು ಯಾವ ಸೇವಕರನ್ನು ಕರ್ತನು ಎಚ್ಚರಗೊಳಿಸು ವನೋ ಅವರು ಅದನ್ನು ಕೇಳಿಸಿಕೊಳ್ಳುವರು. ಈ ಬಾಗಿಲು ತಟ್ಟುವಿಕೆಯು ಕಾರ್ಯ ಮಾಡುವದು ಸಾಮಾನ್ಯ ಸೇವಕರಿಗಾಗಿರುವದಿಲ್ಲ, ಆದರೆ ಬಾಗಿಲು ತಟ್ಟುವಿಕೆಯ ಮತ್ತು ಪ್ರಕಟಿಸುವ ಕಾರ್ಯದ ನಿರ್ವಹಣೆಗಾಗಿ ಬಳಸಲಾಗುವ ಪಡೆಗಳನ್ನು ಮತ್ತು ಸಂಸ್ಥೆಗಳನ್ನು ಕರ್ತನು ತಾನೇ ಆದುಕೊಂಡು ಅವುಗಳನ್ನು ಕಾರ್ಯಪ್ರವೃತ್ತರನ್ನಾಗಿ ಮಾಡಿಕೊಳ್ಳಬಹುದು.

ಯಾವ ಸೇವಕರು ಎಚ್ಚರವಾಗಿದ್ದು ಬಾಗಿಲು ತಟ್ಟುವುದನ್ನು ಕೇಳಿ ಅದನ್ನು ತಿಳಿದುಕೊಂಡು ಒಡೆಯನನ್ನು ಸ್ವಾಗತಿಸುವರೋ ಅವರಿಗೆ ಒಂದು ಆಶೀರ್ವಾದವು ವಾಗ್ದಾನ ಮಾಡಲ್ಪಟ್ಟಿರುವದು. ವಚನ 39 ಬಹು ನಿರ್ದಿಷ್ಟವಾಗಿ ತೋರಿಸಿಕೊಡುವದೇನಂದರೆ, ಸೇವಕರನ್ನು ಬಿಟ್ಟರೆ ಬೇರೆ ಯಾರೂ ಬಾಗಿಲು ತಟ್ಟುವಿಕೆಯನ್ನು ಅರಿತುಕೊಳ್ಳಲಾರರೆಂಬದು; ಲೋಕವು ಸಾಧಾರಣವಾಗಿ ಒಡೆಯನು ಹಿಂದಿರುಗಿ ಬರುವ ಕಾಲವನ್ನು ತಿಳಿದುಕೊಳ್ಳುವದಿಲ್ಲ; ಆದರೆ ಸೇವಕರು ಮಾತ್ರ (ತಿಳಿದುಕೊಳ್ಳುವರು). ಒಡೆಯನು ಬರುವ ನಿರ್ದಿಷ್ಟವಾದ ಕಾಲವನ್ನು ನಿಗದಿ ಮಾಡಲಾಗಿಲ್ಲ; ಕಾಲವನ್ನು ಸಮಯವನ್ನು ತಿಳಿದುಕೊಳ್ಳುವದು ಅವರ ಕೆಲಸವಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿಸಿಕೊಡಲಾಗಿತ್ತು, ಆದರೆ ಅವರು ಸತತವಾಗಿ ಎಚ್ಚರವಾಗಿರ ತಕ್ಕದ್ದು, ಅದು ಮೊದಲನೆಯ ಜಾವದಲಿ ಮಾತ್ರವಲ್ಲದೆ ಎರಡನೆಯ ಮತ್ತು ಮೂರನೆಯ ಜಾವದಲ್ಲಿಯೂ ಸಹ ಅವರು ಎಚ್ಚರವಾಗಿದ್ದು ಯಾವ ಸಮಯದಲ್ಲಿಯಾಗಲಿ ಒಡೆಯನ ಬಾಗಿಲುತಟ್ಟುವಿಕೆಯನ್ನು ಕೇಳಿಸಿಕೊಂಡರೂ ಅವರು ಪ್ರಾಮಾಣಿಕ ರಾಗಿ ಅದಕ್ಕೆ ಸ್ಪಂದಿಸಬೇಕು. ಇಲ್ಲಿ ಗಮನಿಸಬೇಕಾದುದೆಂದರೆ, ಒಡೆಯನು ಯಾವಾಗ ಬರುವನೆಂಬುದನ್ನು ಸೇವಕರಿಗೆ ಎಂದೂ ಗೊತ್ತಾಗುವದಿಲ್ಲವೆನ್ನುವದು ಇದರ ಅಭಿಪ್ರಾಯವಲ್ಲ. ಆತನು ಬಂದಾಗ ಜಾಗೃತರಾಗಿ ಕಾದುಕೊಂಡು ಎಚ್ಚರವಾಗಿರುವ ಆತನ ಸೇವಕರೆಲ್ಲರೂ ಅರಿತುಕೊಳ್ಳುವಂಥಾ ವಿಧವಾಗಿ ಬಾಗಿಲು ತಟ್ಟುವಿಕೆಯು ಉಂಟಾಗುವದೆಂಬದು ಇದರ ಅಭಿಪ್ರಾಯ. ಸೇವಕರು ಬಾಗಿಲು ತಟ್ಟುವಿಕೆಯಾದಾಗ ಅದನ್ನು ತಿಳಿದು ಕೊಳ್ಳಲಾಗದಿದ್ದಲ್ಲಿ ಬಾಗಿಲು ತಟ್ಟುವಿಕೆಯಿಂದ ಉಂಟಾಗುವ ಪ್ರಯೋಜನವೇನು? ಬಾಗಿಲುತಟ್ಟುವಿಕೆಯು (ಒಡೆಯನು) ಪ್ರತ್ಯಕ್ಷನಾಗಿರುವದಕ್ಕೆ ಸಾಕ್ಷ್ಯಾಧಾರವಾಗಿರುವದು. ಅಲ್ಲದೆ ಸೇವಕರು ಇದನ್ನು ಮುಂದಾಗಿ ತಿಳಿದುಕೊಳ್ಳುವಂತಿಲ್ಲ; ಆದರೆ (ಆತನ) ಬರುವಿಕೆಯ ಕಾಲದಲ್ಲಿ ಅವರು ಅದನ್ನು ತಿಳುಕೊಳ್ಳುವರು, ಅದನ್ನು ನೋಡದೆಯೇ ತಿಳುಕೊಳ್ಳುವರು.

## ಯಜಮಾನನೇ ತನ್ನ ಸೇವಕರಿಗೆ ಸೇವೆಮಾಡುವನು

ಈ ಸೇವಕರಿಗೆ ದೊರೆಯುವ ವಿಶೇಷ ಪ್ರತಿಫಲವೇನು? ಈ ಸಾಮ್ಯವು ಅದನ್ನು ಹೇಳುವದು: ಅವರ ಯಜಮಾನನೇ "ನಡುಕಟ್ಟಿಕೊಂಡು [ಆತನು ಅವರ ಸೇವಕನಾಗುವನು] ಅವರನ್ನು ಊಟಕ್ಕೆ ಕೂಡ್ರಿಸಿ ಹತ್ತರಕ್ಕೆ ಬಂದು ಅವರಿಗೆ ಸೇವೆಮಾಡುವನು." ನಮ್ಮ ಕರ್ತನ ಎರಡನೆಯ ಬರುವಿಕೆಯಲ್ಲಿ ಯಾವನೇ ತನ್ನ ಸೇವಕರು ತಾನು ಬಂದಿರುವದನ್ನು ತಿಳಿಯುವದಕ್ಕೆ ಮೊದಲೇ ಆತನು ಪ್ರತ್ಯಕ್ಷನಾಗಿರುವನೆಂಬುದನ್ನು ಇದು ವ್ಯಕ್ತಗೊಳಿಸುವದು. ಆತನು ಬಾಗಿಲುತಟ್ಟುವನು ಅಥವಾ ತಾನು ಪ್ರತ್ಯಕ್ಷನಾಗಿರುವದನ್ನು ಪ್ರಕಟಮಾಡಿಸುವನು. ಯಾರು ಆ ತಟ್ಟುವಿಕೆಯನ್ನು ಕೇಳುವರೋ ಅಂಥವರು ಮಾತ್ರ ಎಚ್ಚರವಾಗಿದ್ದು ಸಿದ್ಧರಾಗಿರುವರು, ಅಂದರೆ ಆತನನ್ನು ನಿರೀಕ್ಷಿಸುತ್ತಾ ಬಾಗಿಲುತಟ್ಟುವದನ್ನು ಕೇಳಿಸಿಕೊಳ್ಳಲು ಜಾಗರೂಕ ರಾಗಿರುವರು. ಇವರು ಒಂದು ವಿಶೇಷವಾದ ಆತ್ಮಿಕ ಔತಣವನ್ನು ಪಡೆಯುವರು. ಇದು ವಿಶೇಷವಾಗಿರುವದು, ಕಾರಣ ಅದು ಒಂದು ವಿಶೇಷ ಸಂದರ್ಭವಾಗಿದ್ದು ಅವರ ಆಸಕ್ತಿ ಮತ್ತು ಭಕ್ತಿ ತೋರ್ಪಡಿಸಿದುದಕ್ಕಾಗುವ ವಿಶೇಷ ಬಹುಮಾನವಾಗುವದು. ಅದು ವಿಶೇಷ ಸಹ, ಯಾಕಂದರೆ ಆ ಮನೆಯ ಯಜಮಾನನು ಅವರ ಸೇವಕನಾಗಲು ತಿರುಗಿಕೊಳ್ಳುವನು. ಆತನು ಆಶೀರ್ವಾದ ಮತ್ತು ಕೃಪಾ ಐಶ್ವರ್ಯಗಳ ಬೀಗದ ಕೈಯನ್ನು ಹೊಂದಿರುವನು ಮತ್ತು ಬೇರೊಂದೆಡೆ ವಿವರಿಸಿರುವಂತೆ ತನ್ನ ಬೊಕ್ಕಸದಿಂದ ಅಂದರೆ ತನ್ನ ಭೋಜನವಸ್ತುಗಳ ಉಗ್ರಾಣದಿಂದ ಸತ್ವಶಾಲಿಯೂ ರಸವತ್ತಾಗಿಯೂ ಇರುವ ಹೊಸ ಮತ್ತು ಹಳೆಯ

(ರುಚಿ)ಪದಾರ್ಥಗಳನ್ನು ಹೊರತರುವನು. ನಂಬಿಗಸ್ತರು ಖಂಡಿತವಾಗಿಯೂ ಅವರಿಗೆ ಹಿಂದೆಂದೂ ಒದಗಿಸಲಾಗಿರದಂಥ ರಾಜೌತಣವನ್ನು ಪಡೆಯುವರು.

ಈ ಸಂಗತಿಗಳು ಈಗಾಗಲೇ ನೆರವೇರಿರುವದೆಂಬ ಅಂಶವನ್ನು ನಾವು ಎತ್ತಿಹಿಡಿದಿರುವೆವು. ಹಳೆ ಒಡಂಬಡಿಕೆಯ ಪ್ರವಾದನೆಗಳು ಸೂಚಿಸಿರುವಂತೆ ಆ ಬಾಗಿಲುತಟ್ಟುವಿಕೆ ಅಥವಾ ಕರ್ತನ ಪ್ರತ್ಯಕ್ಷತೆಯ ಘೋಷಣೆಯನ್ನು 1875ನೇ ಇಸವಿಯಿಂದ ಮಾಡಲಾಗುತ್ತಿದ್ದು ಅದು ಈಗಲೂ ನಡೆಯುತ್ತಿರುವದು. ಸಾಮ್ಯದಲ್ಲಿ ಹೇಳಿರುವ ಬಾಗಿಲತಟ್ಟುವಿಕೆಯು ಕೆಲವು ಕ್ಷಣಗಳ ಕಾಲ ಮಾತ್ರವಿರುವದೆಂಬುದು ಸಮಂಜಸವಾಗಿರುವದಾದರೂ ಅದರ ನೆರವೇರಿಕೆಯು ಸರಿಯಾಗಿ ವರುಷಗಳ ಕಾಲವನ್ನು ತೆಗೆದುಕೊಳ್ಳುವದು. ಆ ಮನೆಯ ಸೇವಕರು ಗಮನಕ್ಕೆ ತೆಗೆದುಕೊಳ್ಳುತ್ತಿರುವರು; ಕರ್ತನ ಪ್ರತ್ಯಕ್ಷತೆಯ ವಿಷಯಗಳಿಗೆ ತನ್ನ ಹೃದಯ ಮತ್ತು ಮನಸ್ಸುಗಳನ್ನು ತೆರೆಯುವ ಪ್ರತಿಯೊಬ್ಬನಲ್ಲಿಯೂ ವಾಗ್ದಾನಮಾಡಲ್ಪಟ್ಟ ಆಶೀರ್ವಾದವು ನೆರವೇರಲ್ಪಡುವದು. ಅಂದರೆ ರಸವತ್ತಾದ ಆತ್ಮಿಕ ಮೃಷ್ಟಾನ್ನಭೋಜನವನ್ನು ಹೊಂದುವನು. ಹೇಗಂದರೆ ದೇವರ ಯೋಜನೆಯನ್ನು ಅರ್ಥಮಾಡಿಕೊಂಡು ಮನನಮಾಡಿಕೊಳ್ಳುವ ಮತ್ತು ತನ್ನ ಜೀವಾತ್ಮಕ್ಕೆ ಹಿಂದೆಂದೂ ದೊರೆಯದಂಥ ಬಲಪೋಣೆಗಳನ್ನು ಪಡೆಯುತ್ತಿರುವನು. ಯಜಮಾನನು ಸೇವಕರಿಗೆ ಮಾಡುತ್ತಿರುವ ಈ ಸೇವೆಯು ಒಂದು ವೈಯುಕ್ತಿವಾದ ಕಾರ್ಯ, ಸಾಮೂಹಿಕವಾದ ಸೇವೆ ಅಥವಾ ಔತಣವಲ್ಲ ವೆಂಬುದನ್ನು ಗ್ರಹಿಸಿಕೊಳ್ಳಬೇಕೆಂಬುದು ಪ್ರಕಟನೆ 3:20 ರಲ್ಲಿ ವ್ಯಕ್ತಪಡಿಸಲಾಗಿರುವದು. ಇಲ್ಲಿ ಕರ್ತನು ಲವದೋಕಿಯ ಹಂತವೆಂಬ ಹೆಸರಿಗಾಗಿರುವ ಕಡೆಯ ಹಂತದ ಸಭೆಗಾಗಿರುವ ಸಂದೇಶದ ಸಂಬಂಧದಲ್ಲಿ ಇದೇ ಘಟನೆಯನ್ನು ಹೀಗೆ ಸೂಚಿಸಿ ಹೇಳಿರುವನು: “ಇಗೋ, ಬಾಗಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರೂ ನನ್ನ ಶಬ್ಧವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟ ಮಾಡುವೆನು, ಅವನು ನನ್ನ ಸಂಗಡ ಊಟಮಾಡುವನು.”

## “ಸಾವಿರ ವರುಷಗಳು.... ರಾತ್ರಿಯ ಜಾವದಂತೆಯೂ ಅವೆ.”

ರಾತ್ರಿಕಾಲವನ್ನು ಅಳೆಯುವ ಯೆಹೂದ್ಯರ ಪುರಾತನ ಲೆಕ್ಕಾಚಾರದ ಪ್ರಕಾರ, ಎರಡನೆಯ ರಾತ್ರಿ ಪಹರೆಯು (ಜಾವ) ಹತ್ತು ಗಂಟೆಯಿಂದ ಎರಡು ಗಂಟೆಯವರೆಗೆ ಮತ್ತು ಮೂರನೆ ರಾತ್ರಿಯ ಪಹರೆಯು ಎರಡು ಗಂಟೆಯಿಂದ ಆರು ಗಂಟೆಯವರೆಗೆ ಇರುವದು. ಯಜಮಾನನನ್ನು ರಾತ್ರಿಯ ಯಾವ ಪಹರೆಯಲ್ಲಿ ನಿರೀಕ್ಷಿಸಬೇಕೆಂದು ಸಾಮ್ಯದಲ್ಲಿ ಹೇಳಿಲ್ಲ. ಅದು ವಿವಾದದ ವಿಷಯವಾಗಿತ್ತು; ಆತನು ವಿಳಂಬಮಾಡುವಷ್ಟರ ಪ್ರಮಾಣದಲ್ಲಿ ಸೇವಕರಲ್ಲಿ ನಂಬಿಗಸ್ತರಾದವರಿಗೆ ಅದು ಪರೀಕ್ಷೆಯಾಗಿರುವದು. ರಾತ್ರಿಯ ಮೊದಲನೇ ಪಹರೆಯಲ್ಲಿ ಸೇವಕರು ಜಾಗರೂಕರಾಗಿ ಎಚ್ಚರವಾಗಿರುವದು ಅನೇಕರಿಗೆ ಸುಲಭವಾಗಿ ಕಂಡುಬರುವದು, ಎರಡನೆಯದರಲ್ಲಿ ಅನೇಕರಿರುವದಿಲ್ಲ ಮತ್ತು ಮೂರನೆಯದರಲ್ಲಿ ಇನ್ನೂ ಬಹು ಕಡಿಮೆಯಿರುವರು. ಸಾಮ್ಯದಲ್ಲಿ ವ್ಯಕ್ತಗೊಳಿಸಿರುವ ಪ್ರಕಾರದಲ್ಲಿಯೇ ಮದಲಿಂಗನು ಹಿಂದಿರುಗಿ ಬರುವ ಮತ್ತು ಆ ರಾಜ್ಯದಲ್ಲಿ ಆಗ ತನ್ನ ನಂಬಿಗಸ್ತ ಮನೆತನದವರಿಗೆ ವೈಭವಯುತವಾದ ಸಂಗತಿಗಳನ್ನು ಕೊಂಡುತರುವ ವಿಷಯದಲ್ಲಿ ಕ್ರೈಸ್ತರು ಸಾಮಾನ್ಯವಾಗಿ ಆಲಸ್ಯವಾಗಿರುವದನ್ನು ನಾವು ಈದಿನದಲ್ಲೂ ಕಂಡಿರುವೆವು. ಚೀಯೋನಿನಲ್ಲಿಯೂ ಅನೇಕರು ನಿದ್ರಿಸುತ್ತಿರುವರು, ಅನೇಕರು ಪ್ರಪಂಚದ ಚಿಂತೆಗಳಿಂದಲೂ ಐಶ್ವರ್ಯದ ಮೋಸಗಳಿಂದಲೂ ತಮ್ಮ ಹೃದಯಗಳನ್ನು ಭಾರವಾಗ ಮಾಡಿಕೊಂಡಿರುವರು. ಲೌಕಿಕ ಜನರು ವ್ಯಾಪಾರ ಹಣ ಮತ್ತು ಉಲ್ಲಾಸಗಳನ್ನು ತಮ್ಮ ದೇವರುಗಳನ್ನಾಗಿ ಮಾಡಿಕೊಂಡಿರುವದು ಮಾತ್ರವಲ್ಲದೆ ತಮ್ಮ ಹೃದಯಗಳಲ್ಲಿ ನೀತಿಯನ್ನು ಪ್ರೀತಿಸುವವರಾಗಿದ್ದು ಕರ್ತನ ಸೇವಕರೆಂದು ಎಣಿಸಲ್ಪಡಬೇಕೆಂದು ಬಯಸುವ ಅನೇಕರೂ ಸಹ ಪ್ರಾಪಂಚಿಕ ಸಂಗತಿಗಳ ವಿಷಯದಲ್ಲಿ ತಲ್ಲೀನರಾಗಿ (ಹೃದಯದಲ್ಲಿ) ಕಡುಭಾರವನ್ನು ಹೊತ್ತಿರುವರು. ಅವರ ಹೃದಯಗಳು ಇವುಗಳಿಂದ ಪೂರ್ಣವಾಗಿ ತುಂಬಲ್ಪಟ್ಟಿದ್ದು ಮತ್ತು ಅವರ ಮನಸ್ಸುಗಳಲ್ಲಿ ಸಭೆಯ ವ್ಯವಸ್ಥಾಕ್ರಮ ಮತ್ತು ಉಲ್ಲಾಸ ಹಾಗು ವೈಯುಕ್ತಿಕ ಆಸಕ್ತಿಗಳು ಅತಿಯಾಗಿ ಆಕ್ರಮಿಸಿಕೊಂಡಿದ್ದು ಬಾಗಿಲುತಟ್ಟುವಿಕೆಯನ್ನು ಕೇಳಿಸಿಕೊಳ್ಳುವದು ಅವರಿಗೆ ಸಾಧ್ಯವಾಗಲಾರದು. ಯಜಮಾನನು ಪ್ರತ್ಯಕ್ಷನಾಗಿರುವುದು ಅವರು ತಿಳಿದುಕೊಳ್ಳಲಾರರು; ಕರ್ತನ ಜನರು ಬಹು ಕಾಲದಿಂದ ಕಾದುಕೊಂಡಿದ್ದು, “ನಿನ್ನ ರಾಜ್ಯವು ಬರಲಿ” ಎಂದು ಶ್ರದ್ಧೆಯಿಂದ ಪ್ರಾರ್ಥಿಸುತ್ತಿರುವ ಸಂಗತಿಯ ಈ ಅದ್ಭುತ ಘೋಷಣೆಗಳಿಗೆ ತಮ್ಮ ಹೃದಯಗಳನ್ನು ತೆರೆಯುವದಿಲ್ಲ. ಪರಿಣಾಮವಾಗಿ ನಮ್ಮ ಕರ್ತನ ಸಾಮ್ಯದಲ್ಲಿ ವ್ಯಕ್ತವಾಗಿರುವ ಮತ್ತು ದಾನಿಯೇಲನ ಪ್ರವಾದನೆಯಲ್ಲಿ ನಿರ್ದಿಷ್ಟವಾಗಿ ಹೇಳಿರುವ “ಕಾದುಕೊಂಡು ಸಾವಿರದ ಮುನ್ನೂರು ಮೂವತ್ತೈದು ದಿನಗಳ ಕೊನೆಯ ಮಟ್ಟಿಗೆ ತಾಳಿರುವವನು ಧನ್ಯನು.” (ದಾನಿಯೇಲ 12:12) ಎಂಬ ಒಂದು ದೊಡ್ಡ ಆಶೀರ್ವಾದವನ್ನು ಕಳಕೊಳ್ಳುವರು.

## ಆತನ ಪ್ರತ್ಯಕ್ಷತೆಯು ಲೋಕಕ್ಕೆ ತಿಳಿಯುವದಿಲ್ಲ

“ಕಳ್ಳನು ಬರುವ ಜಾವ ಮನೆಯ ಯಜಮಾನನಿಗೆ ತಿಳಿದಿದ್ದರೆ ಅವನು ಎಚ್ಚರವಾಗಿದ್ದು ತನ್ನ ಮನೆಗೆ ಕನ್ನಾಹಾಕ ಗೊಡಿಸುತ್ತಿರಲಿಲ್ಲವೆಂದು ತಿಳುಕೊಳ್ಳಿರಿ.”

ಇಲ್ಲಿ ಉಲ್ಲೇಖವಾಗಿರುವದು ಒಂದು “ಕಳ್ಳನಂತೆ ಬರುವದನ್ನು” ಮತ್ತು ಕನ್ನಾಹಾಕುವದು ಎಂಬುದರ ಗ್ರೀಕ್ ಮೂಲಕ ಅಕ್ಷರಾರ್ಥವು “ಅಗೆಯುವದು” ಎಂಬುದು. ಹಿಂದಿನ ಕಾಲದಲ್ಲಿನ ಅನೇಕ ಮನೆಗಳು ಕಲ್ಲಿನಿಂದ ಅಥವಾ ಇಟ್ಟಿಗೆಯಿಂದ ಕಟ್ಟಲ್ಪಡುತ್ತಿರಲಿಲ್ಲ; ಆದರೆ ಒಣಗಿದ ಮಣ್ಣಿನಿಂದ ಕಟ್ಟಲ್ಪಡುತ್ತಿತ್ತು. ಇವು ಪಾಶ್ಚಾತ್ಯದಲ್ಲಿ ಮತ್ತು ಮೆಕ್ಸಿಕೋದ ಕೆಲವು ಭಾಗಗಳಲ್ಲಿ (ಬಿಸಿಲಿನಲ್ಲಿ ಒಣಗಿಸಿದ) ಹಸಿಇಟ್ಟಿಗೆಯ ಮನೆಗಳೆಂದು

ಕರೆಯಲ್ಪಡುವ ಕಟ್ಟಡಗಳನ್ನು ಹೋಲುವದು. ಇಂಥಾ ಮನೆಯ ಒಳಹೊಕ್ಕಲು ಬಾಗಿಲನ್ನು ಒಡೆಯುವದಕ್ಕಿಂತಲೂ ಸುಲಭವಾಗಿ ಗೋಡೆಯಲ್ಲಿ ಅಗೆಯುವದು ಬಹು ಶೀಘ್ರವಾಗಿರುವದು. ಆ ಮನೆಯ ಯಜಮಾನನು ಅಥವ ಅದರ ಒಡೆಯನು ಕರ್ತನನ್ನು ಸೂಚಿಸುವದಿಲ್ಲ, ಯಾಕೆಂದರೆ ಸೂಚಿಸಲ್ಪಟ್ಟ ಮನೆಯು "ಈಗಿನ ಕಾಲದ ದುಷ್ಟ ಲೋಕ" ಅಂದರೆ ಈಗ ರೂಪುಗೊಂಡಿರುವ ಸಾಮಾಜಿಕ ವ್ಯವಸ್ಥಾಕ್ರಮಗಳನ್ನು ಉಲ್ಲೇಖಿಸುವದು. ಸಾಮಾನ್ಯವಾಗಿ ಈಗಿನ ಸಾಮಾಜಿಕ ಸಂಸ್ಥೆಗಳಿಗೆ ಒಡೆಯನಾಗಿ ಸೈತಾನನು "ಈ ಪ್ರಪಂಚದ ದೇವರೂ" "ಈ ಲೋಕದ ಅಧಿಪತಿ" ಆಗಿದ್ದರೂ ಇದು ಸೈತಾನನೆಂಬ ಅರ್ಥಬರುವದೆಂದು ನಿರ್ಣಯಿಸುವ ಅಗತ್ಯವಿಲ್ಲ. ಭೂಲೋಕ ಸಾಮ್ರಾಜ್ಯಗಳು ಅಂದರೆ ಅಧಿಕಾರದಲ್ಲಿರುವವರು, ದಾನಿಯೇಲನ ಅದ್ಭುತ ಪ್ರತಿಮೆಯ ಹತ್ತು ಕಾಲು ಬೆರಳುಗಳು ಮತ್ತು ನಾಲ್ಕನೆಯ ಮೃಗ ಇವುಗಳು ಈ ಮನೆಯ ಯಜಮಾನನನ್ನು ಸೂಚಿಸುವದೆಂದು ನಾವು ಬಹು ಸೂಕ್ತವಾಗಿ ಅರ್ಥಮಾಡಿಕೊಳ್ಳಬಹುದು.

ಎಚ್ಚರವಾಗಿರುವ ಆತನ ಸೇವಕರಿಂದ ಕೇಳಲ್ಪಡುವಂಥ, ಆದರೆ ನಿದ್ರಿಸುತ್ತಿರುವ ಮತ್ತು ಚಿಂತಾಭಾರಗಳಿಂದ ಕೂಡಿರುವ ಸೇವಕರಿಂದ ಅದು ಕೇಳಿಸಿಕೊಳ್ಳಲಾಗದಂಥ ಕರ್ತನ ಎರಡನೆಯ ಬರುವಿಕೆಯ ವಿಷಯವು ಮತ್ತು ಬಾಗಿಲತಟ್ಟುವಿಕೆಯು ಲೋಕಕ್ಕೆ ಸಂಪೂರ್ಣವಾಗಿ ತಿಳಿಯದಾಗಿರುವದು. ಇವರಿಗೆ ಆತನ ಪ್ರತ್ಯಕ್ಷತೆಯು ಹಂಬಲಿತನಾದ ಯಜಮಾನನ ಹಿಂದಿರುಗುವಿಕೆ ಮತ್ತು ಆತನಿಂದ ಸೇವೆಹೊಂದುವಂಥದ್ದಾಗಿರದೆ ಅದು, ವಿರೋಧಿಯು ಮನೆಯಲ್ಲಿ ಇಲ್ಲದಿರುವಾಗ ಆ ಮನೆಯನ್ನು ವಶಪಡಿಸಿಕೊಂಡು ಆತನ ಹಿತಾಸಕ್ತಿಗಳಿಗೆ ವಿರೋಧವಾಗಿ ಅದನ್ನು ಬಳಸಿಕೊಳ್ಳುವದಕ್ಕೆ ಸಂಬಂಧಿಸಿದಂಥದ್ದಾಗಿರುವದು. ಇವರಿಗೆ ಆತನು ಬರುವ ಕಾಲವು ತಿಳಿದಿದದ್ದೇಯಾದಲ್ಲಿ ಇವರು ತಮ್ಮನ್ನು ಕೆಲವು ವಿಧದಲ್ಲಿ ಬಲಪಡಿಸಿಕೊಂಡು ಈಗಿನ ಸಂಸ್ಥೆಗಳನ್ನು ರಕ್ಷಿಸಿಕೊಳ್ಳಲು ಮತ್ತು ಅವುಗಳು ನಿರಂತರವಾಗಿ ಮುಂದುವರೆಯುವಂತಾಗಲು ಪರಿಶ್ರಮಿಸುತ್ತಿದ್ದರು.

ಲೋಕದ ಮೇಲೆ ಕಳ್ಳನಂತೆ ಬರುವದು ನಿಶ್ಯಬ್ಧವಾಗಿ ಬರುವದನ್ನು ಅಂದರೆ ಯಾವ ಆಡಂಬರವೂ ಇಲ್ಲದೆ ಯಾವ ಘೋಷಣೆಯೂ ಅಥವಾ ಶಾಂತಿ ಕದಲುವ ಯಾವ ಗದ್ದಲವೂ ಇಲ್ಲದೆ ತಿಳಿಯದ ರೀತಿಯಲ್ಲಿ ಬರುವದನ್ನು ಸೂಚಿಸುವದು. ಬಲಿಷ್ಠನ ಮನೆಗೆ ಕನ್ನಾಹಾಕುವದು ಅಂದರೆ ಈಗಿನ ಸಾಮಾಜಿಕ, ನಾಗರಿಕ, ಧಾರ್ಮಿಕ, ರಾಜಕೀಯ ಹಣಕಾಸಿನ ಸಂಸ್ಥೆಗಳನ್ನು ಒಡೆದು ಹಾಕುವದು, ಆತನ ಸೇವಕರಿಗಾಗಿ ಮಾಡುತ್ತಿರುವ ಬಾಗಿಲು ತಟ್ಟುವಿಕೆಯಂತೆ, ಈಗಾಗಲೇ ನೆರವೇರಲ್ಪಡುತ್ತಾ ಇರುವದು. ಸಾಮಾಜಿಕ ಸಂಸ್ಥಾಪನಾಕ್ರಮಗಳು ಸಂಪೂರ್ಣವಾಗಿ ನೂತನ ಪ್ರಭುವಿನ ನಿಯಂತ್ರಣಕ್ಕೆ ಬಂದಿರುವದು. ಆತನು ತನ್ನ ಸೇನಾಬಲವನ್ನು ಸಜ್ಜುಗೊಳಿಸುತ್ತಿರುವನು, ಮತ್ತು ಮನುಷ್ಯರ ಕೋಪವೂ ತನ್ನ ಘನಕ್ಕೆ ಸಾಧಕವಾಗುವಂತೆ ಮಾಡಿ, ಆತನು ಸ್ವಾರ್ಥಭಾವದಿಂದ ಕಟ್ಟಲ್ಪಟ್ಟ ಸಂಘಸಂಸ್ಥೆಗಳೆಲ್ಲವನ್ನೂ ಕಿತ್ತೊಗೆಯುವ ತನ್ನ ಉದ್ದೇಶವು ನೆರವೇರುವಂತೆ ಮಾಡುವನು. ಅದರ ಬೀಳುವಿಕೆಯು ಬಹು ಘೋರವಾಗಿರುವದು–"ಅಂಥ ಸಂಕಟವು ಲೋಕ ಹುಟ್ಟಿದ್ದು ಮೊದಲುಗೊಂಡು ಇಲ್ಲಿಯವರೆಗೂ ಆಗಲಿಲ್ಲ." ಆದರೆ ಹಾಳುಪಾಳಾದ ಇವುಗಳ ಮೇಲೆ ರಾಜಾಧಿರಾಜನೂ ಕರ್ತರ ಕರ್ತನೂ ಆದವನು ಭವ್ಯವಾದ ದೇವರ ರಾಜ್ಯವನ್ನು ಎಬ್ಬಿಸುವನು; ಇದಕ್ಕಾಗಿ ಆತನವರೆಲ್ಲರೂ ಈಗಾಗಲೇ "ನಿನ್ನ ರಾಜ್ಯವು ಬರಲಿ" ಎಂದು ಪ್ರಾರ್ಥಿಸುತ್ತಿರುವರು. ಅದು ಕರ್ತನಿಂದ ಸ್ಥಾಪಿಸಲ್ಪಟ್ಟಾಗ ನಿಜವಾಗಿಯೂ ಅದು "ಸಮಸ್ತ ಜನಾಂಗಗಳ ಇಷ್ಟವಸ್ತು" ಆಗಿರುವದು. – ಹಗ್ಗಾಯ 2:7

## "ನೀವು ನೆನಸದಂತ ಗಳಿಗೆಯಲ್ಲಿ"

ಈ ಪಾಠದ ಮುಖ್ಯಾಂಶವು 40ನೇ ವಚನದಲ್ಲಿ ಸಾರಾಂಶವಾಗಿ ಹೇಳಿರುವದು: "ನೀವು ಸಹ ಸಿದ್ಧವಾಗಿರ್ರಿ. ನೀವು ನೆನಸದ ಗಳಿಗೆಯಲ್ಲಿ ಮನುಷ್ಯಕುಮಾರನು ಬರುತ್ತಾನೆ.." ಮನುಷ್ಯಕುಮಾರನು ಬರುವ ಕಾಲವು ಯಾರಿಗೂ ತಿಳಿಯ ಲಾಗದು; ಅದು ಮುಂದಾಗಿ ಕಲ್ಪಿಸಿಕೊಳ್ಳುವದಕ್ಕೆ ಬಿಡಲಾದ ವಿಷಯವಲ್ಲ. ಆತನ ಬಾಗಿಲುತಟ್ಟುವಿಕೆಯೇ ಆತನ ಪ್ರತ್ಯಕ್ಷತೆಯ ಮೊದಲ ಸೂಚನೆಯಾಗಿರುವದು. ಮತ್ತು ಅದು ಹೀಗೆಯೇ ನೆರವೇರಲ್ಪಟ್ಟಿರುವದು: ಕರ್ತನ ಬರುವಿಕೆಯು ಯಾವಾಗ ಆಗುವದೆಂದು ನಮ್ಮಲ್ಲಿ ಯಾರಿಗೂ ಮುಂದಾಗಿ ತಿಳಿದಿರಲಿಲ್ಲ; ಅದು ಸಂಭವಿಸಿದ ನಂತರವೇ ನಾವು ಬಾಗಿಲುತಟ್ಟುವಿಕೆಯನ್ನು ಕೇಳಿದ್ದೆವು ಹೇಗಂದರೆ, ನಾವು ಈಗಾಗಲೇ ಸುಗ್ಗಿಯ ಕಾಲದಲ್ಲಿದ್ದೇವೆಂದು ಮತ್ತು ಮನುಷ್ಯಕುಮಾರನ ಪ್ರತ್ಯಕ್ಷತೆಯ ದಿನಗಳಲ್ಲಿದ್ದೇವೆಂದು ಸಾರಿರುವ ಹಳೆ ಒಡಂಬಡಿಕೆಯ ಪ್ರವಾದಿಗಳ ಮೂಲಕವಾಗಿ ನಾವು ಆತನ ಧ್ವನಿಯನ್ನು ಕೇಳಿದೆವು. ಇಲ್ಲಿ ನಾವು ಮತ್ತಾಯ 24:37ರಲ್ಲಿ ಹೇಳಿರುವ ಕರ್ತನ ಈ ಮಾತುಗಳನ್ನು ನೆರವೇರಿಸಿದ್ದೇವೆ, "ನೋಹನ ದಿವಸಗಳು ಹೇಗಿದ್ದವೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯೂ (ಗ್ರೀಕ್ ಮೂಲದ: ಪರೋಷಿಯ) ಇರುವದು." ಈ ವಾಕ್ಯಭಾಗವು ತೋರಿಸುವದೇನಂದರೆ, ನೋಹನ ದಿನಗಳಲ್ಲಿ ಸಂಭವಿಸುವ ಘಟನೆಯ ಬಗ್ಗೆ ಲೋಕಕ್ಕೆ ಹೇಗೆ ತಿಳುವಳಿಕೆಯಿರಲಿಲ್ಲವೋ ಮತ್ತು ತಿಳುವಳಿಕೆಯಿಲ್ಲದವರಾಗಿ ಅವರು ತಿನ್ನುತ್ತಾ ಕುಡಿಯುತ್ತಾ ನೆಡುತ್ತಾ ಕಟ್ಟುತ್ತಾ ಇದ್ದರೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯ ದಿನಗಳು ಇರುವವು; ಲೋಕವು ಅತನ ಪ್ರತ್ಯಕ್ಷತೆಯ ವಿಷಯವನ್ನು ತಿಳಿಯದವರಾಗಿದ್ದು ಜೀವಿತದ ಸಾಧಾರಣ ಸಂಗತಿಗಳನ್ನು ಎಂದಿನಂತೆ ಮುಂದುವರೆಸಿಕೊಂಡು ಹೋಗುವರು. ಕೇವಲ "ಸಹೋದರರಾದ ನೀವುಗಳು" ಬಾಗಿಲುತಟ್ಟುವಿಕೆಯನ್ನು ಕೇಳಿ (ಆತನ) ಪ್ರತ್ಯಕ್ಷತೆಯನ್ನು ಗ್ರಹಿಸಿಕೊಂಡು ಆಶೀರ್ವಾದವನ್ನು ಹೊಂದುವಿರಿ.

ಈ ಸಾಮ್ಯವು ಕೇವಲ ಹನ್ನೆರಡು ಮಂದಿಗೆ ಮಾತ್ರವೋ ಅಥವಾ ಒಂದು ಸಾಮಾನ್ಯವಾದ ಅರ್ಥದಲ್ಲಿ ಶಿಷ್ಯರೆಲ್ಲರಿಗೂ ಅನ್ವಯಿಸುವದೋ, ಇಲ್ಲವೋ? ಎಂದು ಪೇತ್ರನು ವಿಚಾರಿಸಿದನು. ನಮ್ಮ ಕರ್ತನು ಒಂದು ಪ್ರಮಾಣದಲ್ಲಿ ಈ ಪ್ರಶ್ನೆಯನ್ನು ಉಪೇಕ್ಷಿಸಿ ಉತ್ತರವಾಗಿ ಹೀಗೆ ಹೇಳಿದ್ದನು: "ಹಾಗಾದರೆ ಯಜಮಾನನು ತನ್ನ ಮನೆಯವರಿಗೆ ಹೊತ್ತುಹೊತ್ತಿಗೆ ಆಹಾರ ಕೊಡಲಿಕ್ಕೆ ಅವರ

ಮೇಲಿಟ್ಟ ನಂಬಿಗಸ್ತನೂ ವಿವೇಕಿಯೂ ಆದಂಥ ಆಳು ಯಾರು?" ಈ ಸಾಮ್ಯವನ್ನು ಅರ್ಥಮಾಡಿಕೊಳ್ಳಲು ಸರಿಯಾದ ಸಮಯ ಬಂದಾಗ ಅದು ಸ್ಪಷ್ಟವಾಗಿ ಗ್ರಹಿಸಲ್ಪಡುವದೆಂದು ಇಲ್ಲಿ ಸೂಚಿತವಾಗಿರುವಂತೆ ತೋರುವದು: ಈ ಸಾಮ್ಯವು ನೆರವೇರುವಾಗ ಕರ್ತನು ಈ ಸಂಗತಿಯನ್ನು ಸೇವಕರೆಲ್ಲರ ಗಮನಕ್ಕೆ ತರಲು ಆ ಮನೆಯಲ್ಲಿ ಒಬ್ಬ ಸೇವಕನನ್ನು ನೇಮಿಸುವನು ಮತ್ತು ಇಂಥವನ ಮೇಲೆ ತನ್ನ (ವಿಷಯ ರವಾನಿಸುವ) ಕರ್ತವ್ಯವನ್ನು ನಿರ್ವಹಿಸುವದರ ಬಗ್ಗೆ ಕೆಲವು ಜವಾಬ್ದಾರಿಯು ನೆಲೆಸಿರುವದು. ನಂಬಿಗಸ್ತಿಕೆಯಿಂದ ಇದನ್ನು ನಿರ್ವಹಿಸಿದಲ್ಲಿ ಒಂದು ದೊಡ್ಡ ಆಶೀರ್ವಾದವು ಆತನಿಗೆ ಪ್ರತಿಫಲವಾಗಿ ದೊರೆಯುವದು, ಮತ್ತು ತನಗೆ ವಹಿಸಿದ ಕಾರ್ಯದಲ್ಲಿ ಅಪನಂಬಿಗಸ್ತನಾದಲ್ಲಿ ಕಠಿಣವಾದ ದಂಡನೆ ವಿಧಿಸಲಾಗುವದು. ಇಲ್ಲಿ ಸೂಚಿತವಾಗಿರುವದೇನಂದರೆ, ಆ ಸೇವಕನು ನಂಬಿಗಸ್ತನಾಗಿದ್ದಲ್ಲಿ ತನ್ನ ಸೇವೆಯಲ್ಲಿ ಮುಂದುವರಿಯುವನು, ಮತ್ತು ಅಪನಂಬಿಗಸ್ತನಾದಲ್ಲಿ ಅವನು ತಳ್ಳಿಹಾಕಲ್ಪಡುವನು ಅಲ್ಲದೆ ಬೇರೊಬ್ಬನು ಆ ಸ್ಥಾನವನ್ನು ಹಾಗು ಅದರ ಜವಾಬ್ದಾರಿಗಳನ್ನು ತೆಗೆದುಕೊಳ್ಳುವನೆಂಬದು.

## "ನಂಬಿಗಸ್ತನೂ ವಿವೇಕಿಯೂ ಆದ ಆ ಆಳು"

ನಮ್ಮ ಕರ್ತನ ಮಾತುಗಳು ಒಂದು ಸಮ್ಮಿಶ್ರವಾದ ಮನೆವಾರ್ತೆಯವನನ್ನು ಸೂಚಿಸುವದೆಂದು ಅಂದರೆ ಕೆಲವು ಸಂಖ್ಯೆಯಲ್ಲಿನ ಅಥವಾ ವರ್ಗದ ಸಹೋದರರು ಒಟ್ಟಾಗಿ ಈ ಸಾಮ್ಯದ ಮನೆವಾರ್ತೆಯವನಾಗಿ ರೂಪುಗೊಂಡಿರುವರೆಂದು ನಾವು ಸಹಜವಾಗಿಯೇ ವ್ಯಾಖ್ಯಾನಮಾಡಲು ಪ್ರಯತ್ನಿಸುವವರಾಗಿದ್ದೇವೆ. ಇಂಥಾ ಒಂದು ವ್ಯಾಖ್ಯಾನವನ್ನು ಮಾಡಲು ಪ್ರಯತ್ನಿಸುವಲ್ಲಿ ನಾವು ಹೇಗೂ ಕೆಲವು ತೊಡಕುಗಳನ್ನು ಎದುರಿಸುವವರಾಗಿದ್ದೇವೆ.

(1) ಇಂಥಾ ಒಂದು ವರ್ಗವು ಸಭೆಯಲ್ಲಿರುವುದೆಂಬುದನ್ನು ಕಲ್ಪಿಕೊಳ್ಳುವದಾದರೆ ಬೇರೆಡೆ ನಿರಾಕೃತವಾದಂಥದನ್ನು ಗುರುತಿಸಿದಂತಾಗುವದು ಅಂದರೆ ಸಭೆಯಲ್ಲಿ ಉಳಿದವರಿ – ಗಿಂತಲೂ ಭಿನ್ನವಾಗಿದ್ದು ಪ್ರತ್ಯೇಕವಾಗಿರುವ ಒಂದು ಸಭಾಸೇವಕ ಅಥವಾ ಅಧಿಕಾರಸ್ಥ ವರ್ಗವನ್ನು ಗುರುತಿಸಿದಂತಾಗುವದು, ಕಾರಣ ಈ ಮನೆವಾರ್ತೆಯವನು ಆ ಮನೆಯವರಿಗೆ ಅಂದರೆ ತನ್ನ ಜೊತೆ ಸೇವಕರಿಗೆ ಅನುದಿನಕ್ಕೆ ಬೇಕಾದ ಆಹಾರವನ್ನು ಒದಗಿಸಬೇಕಿರುವದು. ನಾವು ಎತ್ತಿಹಿಡಿದು ಹೇಳುವದೇನಂದರೆ, ಕ್ರಿಸ್ತನ ಸಭೆಯು ಸಭಾಸೇವಕರು ಮತ್ತು ಸಾಮಾನ್ಯರು ಎಂಬುದನ್ನು (ವರ್ಗಗಳನ್ನು) ಒಳಗೊಂಡಿರುವದಿಲ್ಲ, ಆದರೆ "ನೀವೆಲ್ಲರೂ ಕ್ರಿಸ್ತ ಯೇಸುವಿನಲ್ಲಿ ಒಂದಾಗಿರುವಿರಿ, ಮತ್ತು ಒಬ್ಬನೇ ನಿಮ್ಮ ಗುರುವು ಆತನು ಕ್ರಿಸ್ತನೇ." ಹೀಗಿರಲು ಕರ್ತನು ಆ ಸಮಯದಲ್ಲಿ ತನ್ನ ಸಭೆಯ ಒಬ್ಬ ಸದಸ್ಯನನ್ನು ಸಾಧನವಾಗಿ ವಿಶೇಷ ರೀತಿಯಲ್ಲಿ ಬಳಸುವನೆಂಬುದಾಗಿ ತಿಳಿಸಿರುವನೆಂದು ಕಲ್ಪಿಸಿಕೊಳ್ಳುವದರಲ್ಲಿ ಇದರ ಮೂಲತತ್ವದ ಉಲ್ಲಂಘನೆ ಯಾಗದು. ಕರ್ತನು ಆ ಸದಸ್ಯನ ಮೂಲಕವಾಗಿ ಸೂಕ್ತವಾದ ಸಂದೇಶವನ್ನು ಅಂದರೆ ಆ ಸಮಯಕ್ಕೆ ಸೂಕ್ತವಾದ ಆತ್ಮಿಕ ಪೋಷಣೆಯನ್ನು ಒದಗಿಸುವನು; ಕಾರಣ ಹಿಂದೆ ಹಲವಾರು ಸಮಯಗಳಲ್ಲಿ ಕರ್ತನು ವ್ಯಕ್ತಿಗಳನ್ನು ಇಂಥಾ ಒಂದು ವಿಧದಲ್ಲಿ ಬಳಸಿಕೊಂಡಿರುವನು. ದೃಷ್ಟಾಂತವಾಗಿ ಹೇಳುವದಾದರೆ, ಪೇತ್ರನು ಪಂಚಾಶತ್ತಮದಿನದಲ್ಲಿ ಮತ್ತು ಆನಂತರ ಕೊರ್ನೇಲ್ಯನ ಮನೆಯಲ್ಲಿ ಪರಲೋಕರಾಜ್ಯದ ಬೀಗದ ಕೈಯನ್ನು ಉಪಯೋಗಿಸಿದ್ದನು, ಅಲ್ಲದೆ ಈ ಎರಡು ಸ್ಥಳಗಳಲ್ಲಿಯೂ ಆತನು ವಿಶೇಷವಾದ ಸತ್ಯಾರ್ಥಗಳನ್ನು ಒದಗಿಸಿಕೊಡುವಕ್ಕೆ ಒಬ್ಬ ವಿಶೇಷ ಸೇವಕನಾಗಿ ಬಳಸಲ್ಪಟ್ಟಿದ್ದನು. ಇದು ಪೇತ್ರನು ಇತರ ಅಪೋಸ್ತಲರ ಮೇಲೆ ಒಡೆಯನಾಗಿರುವನೆಂಬದನ್ನಾಗಲಿ ಅಥವಾ ಸಭೆಯ ಮೇಲೆ ಒಡೆಯನಾಗಿರುವನೆಂಬದನ್ನಾಗಲಿ ಒಳಗೊಂಡಿರುವದಿಲ್ಲ, ಅದರೆ ಆತನು ಕೇವಲ ಒಬ್ಬ ಸೇವಕನೆಂಬದನ್ನು ಒಳಗೊಂಡಿರುವದು.

(2) ನಾವು ಎಷ್ಟು ಅಧಿಕವಾಗಿ ಈ ಸಂಕೇತವನ್ನು ಕರ್ತನ ಜನರಿಗೆ ಒಟ್ಟಾಗಿ ಅನ್ವಯಿಸಲು ಪ್ರಯತ್ನಿಸಬಹುದಾದರೂ ಅನೇಕ ಅಂಶಗಳು ವ್ಯಕ್ತಿಗಳ ಒಂದು ಗುಂಪಿಗೆ ಸರಿಹೊಂದಲಾಗದೆ ಹಾಗೆಯೇ ಉಳಿದುಕೊಳ್ಳುವದು. ದೃಷ್ಟಾಂತವಾಗಿ ಹೇಳುವದಾದರೆ, 42ನೇ ವಚನವು ಕಾಮನ್ ವರ್ಶನ್ ಎಂಬ ಭಾಷಾಂತರದಲ್ಲಿ ಅಂಥ ನಂಬಿಗಸ್ತನಾದ ಮನೆವಾರ್ತೆಯವನೆಂದು ಅನುವಾದಿಸಲಾಗಿದ್ದು, ಮತ್ತು ರಿವೈಸ್ಡ್ ವರ್ಶನ್ ಎಂಬ ಭಾಷಾಂತರದಲ್ಲಿ ಆ ನಂಬಿಗಸ್ತನಾದ ಮನೆವಾರ್ತೆಯವನೆಂದು ಅನುವಾದಿಸಲಾಗಿದ್ದು, ಇದು ನಿರ್ದಿಷ್ಟವಾಗಿ ಒಬ್ಬನನ್ನೋ ಎಂಬ ಅರ್ಥಬರುವಂತೆ ಸೂಚಿಸುವದಾಗಿದ್ದು ಈ ಶಬ್ದವು ಒಂದು ಸಂಖ್ಯೆಯವರನ್ನು ಅನಿಶ್ಚಿತವಾಗಿ ಸೂಚಿಸುವದಿಲ್ಲ. ಗ್ರೀಕ್ ಭಾಷಾಮೂಲವನ್ನು ತಿರುಗಿ ನೋಡುವದಾದರೆ ಈ ಅಂಶಕ್ಕೆ ಪ್ರಾಧಾನ್ಯತೆ ಸಹ ನೀಡಲಾಗಿದ್ದು ಇದನ್ನು ಎರಡು ರೂಪದಲ್ಲಿ ಸೂಚಿಸಲಾಗಿರುವದು. ಹೇಗಂದರೆ ನಂಬಿಗಸ್ತನೂ ವಿವೇಕಿಯೂ ಆದವನೆಂದು ಹೇಳಲ್ಪಟ್ಟಿರುವದು. ಈ ವಾಕ್ಯಭಾಗವನ್ನು ಕ್ರಿಸ್ತನಿಗೆ ಅನ್ವಯಮಾಡಲು ಸಾಧ್ಯವಾಗಿದ್ದಲ್ಲಿ ಇದಕ್ಕೆ ತೊಂದರೆ ಇರುವದಿಲ್ಲ, ಅಥವಾ ಇದನ್ನು ಸಂಪೂರ್ಣವಾಗಿ ಕ್ರಿಸ್ತನ ದೇಹಕ್ಕೆ ಅನ್ವಯಮಾಡಿದಲ್ಲಿ ಅಂದರೆ ಈ ಒಬ್ಬನನ್ನು ಕ್ರಿಸ್ತನ ದೇಹದ ಅನೇಕ ಅಂಗಗಳಿಗೆ ಒಟ್ಟಾಗಿ ಹೊಂದಿಸಿ ಹೇಳಿದ್ದಲ್ಲಿ ಇದಕ್ಕೆ ತೊಂದರೆ ಇರುತ್ತಿರಲಿಲ್ಲ, ಆದರೆ ತಿಳಿಸಲಾದ ಆ ಸೇವಕನು ಇತರ ಸದಸ್ಯರಿಗೆ ಅಂದರೆ ತನ್ನ ಜೊತೇ ಸೇವಕರಿಗೆ ಆಹಾರವನ್ನು ಒದಗಿಸಬೇಕಿರುವದರಿಂದ ಈ ಶಬ್ಧವು ಒಬ್ಬ ನಿರ್ಧಿಷ್ಟ ವ್ಯಕ್ತಿಗೆ ಸೀಮಿತವಾಗಿರುವದನ್ನು ಸೂಚಿಸಿದಂತೆ ತೋರುವದು. ಹೀಗಾದರೂ ನಾವು ಪೇತ್ರನ ವಿಷಯವಾಗಿ ಹೇಳಿದಂತೆ, ಆತನು ವಿಶೇಷವಾಗಿ ಬಳಸಲ್ಪಡುವನೆಂಬ ಕಾರಣಕ್ಕಾಗಿ ಆತನು ಸಹೋದರರ ಮೇಲೆ ಒಡೆಯನನ್ನಾಗಿ ಮಾಡಲ್ಪಡದ ಹಾಗೆಯೇ ಈ ವಾಕ್ಯಗಳಲ್ಲಿ ಯಾವನೊಬ್ಬನಾದರೂ ಸೂಚಿತವಾಗಿದ್ದಲ್ಲಿ ಅದು ಯಾವ ಅರ್ಥದಲ್ಲಿಯೂ ಆತನನ್ನು ಒಡೆಯನೆಂಬದನ್ನಾಗಲಿ ಅಥವಾ ಸರ್ವಾಧಿಕಾರಿಯೆಂಬದನ್ನಾಗಲಿ ಇಲ್ಲವೇ ಗುರುವೆಂಬದನ್ನಾಗಲಿ ಅಥವಾ ಆತನ ಪ್ರಭಾವವಿರುದನ್ನಾಗಲಿ ಒಳಗೊಂಡಿರುವದಿಲ್ಲ. ನಮಗೆ ಹೇಳಲು ಸಾಧ್ಯವಿರುವ ವಿಷಯವೆಂದರೆ, ಆ ಸೇವಕನಾಗುವ ಸೌಭಾಗ್ಯವು ಒಬ್ಬನಿಗೇ ಇರುವದೆಂದು ಮತ್ತು ಹಲವರು ಈ ಶಬ್ಧದ ನಿಜಾರ್ಥದಲ್ಲಿ ಆ

ಸ್ಥಾನವನ್ನು ತುಂಬಲು ಕಾಳಜಿಯಿಲ್ಲದವರೆಂಬದು. ಈ ಸಾಮ್ಯದಲ್ಲಿ ಸೂಚಿತವಾಗಿರುವಂತೆ ಆ ಸೇವಕನು ನಂಬಿಗಸ್ತನಾಗಿ ಕಂಡುಬಂದಲ್ಲಿ ಆ ಮನೆತನದವರಿಗೆ ಕಾಲಕಾಲಕ್ಕೆ ಬೇಕಾದ ಆಹಾರವನ್ನು ಒದಗಿಸಿಕೊಡುವ ಕಾರ್ಯವನ್ನು ವಹಿಸಿರಲಾಗಿ ಆತನಿಗೆ ಪ್ರಸ್ತುತ ಕಾಲದ ಸತ್ಯದ ಪ್ರತಿಯೊಂದು ವಿಶೇಷ ಲಕ್ಷಣಗಳನ್ನು ಹಂಚಿಕೊಡಲು ಹೆಚ್ಚುಹೆಚ್ಚಾಗಿ ವಹಿಸಿಕೊಡಲಾಗುವದು, ನೇಮಕವಾದವನು ಅಪನಂಬಿಗಸ್ತನಾದಲ್ಲಿ ಆ ಸೇವೆಯಿಂದ ಆತನನ್ನು ಕೆಳಗೆ ಇಳಿಸಲಾಗುವದು, ಮತ್ತು ಆ ಸೇವೆಯು ಆತನ ಉತ್ತರಾಧಿಕಾರಿಯಾದ ಬೇರೊಬ್ಬನಿಗೆ ಹಸ್ತಾಂತರ ಮಾಡಲ್ಪಡುವ ಸಂಭವವಿರುವದು.

"ಅಂಥವನನ್ನು ಅವನು ತನ್ನ ಎಲ್ಲಾ ಆಸ್ತಿಯ ಮೇಲೆ ನೇಮಿಸುವನು..." ಎಂದು ವ್ಯಕ್ತಪಡಿಸಿರುವದನ್ನು ಮುಂದೆ ಬರುವ ಪ್ರಭಾವ ಮಾನಗಳಿಗೆ ಅನ್ವಯಿಸುವದೆಂದು ಅರ್ಥಮಾಡಿಕೊಳ್ಳಬಾರದು. ಆದರೆ "ಸುಗ್ಗಿಯ ಕಾಲದ" ಉಳಿದ ಸಮಯಗಳಲ್ಲಿ ಕರ್ತನ "ಆಸ್ತಿಗಳನ್ನು" ಅಥವಾ ಸಂರಕ್ಷಿಸಬೇಕಾಗಿರುವ ಇಲ್ಲವೇ ಹಂಚಿಕೊಡಬೇಕಿರುವ ಸತ್ಯಾರ್ಥಗಳ ವಿಷಯಗಳನ್ನು ಹಂಚಿಕೊಡಲು ಮನೆವಾರ್ತೆಯಲ್ಲಿ ಸಾಮಾನ್ಯವಾಗಿರುವ ಹೆಚ್ಚು ಕೆಲಸಗಳನ್ನು ಅಥವಾ ಹೊಣೆಗಾರಿಕೆಗಳನ್ನು ವಹಿಸಿಕೊಡಲಾಗುವದೆಂದು ಅರ್ಥಮಾಡಿಕೊಳ್ಳಬೇಕು. ಇನ್ನೊಂದು ಮಾತಿನಲ್ಲಿ ಹೇಳುವದಾದರೆ, ಈ "ಸುಗ್ಗಿಕಾಲದಲ್ಲಿ" ಯಾವ ಮನೇವಾರ್ತೆಯವನ ಮೂಲಕವಾಗಿ ಕರ್ತನು ಪ್ರಸ್ತುತ ಸತ್ಯವನ್ನು ಹಂಚಿಸಿಕೊಡುತ್ತಿರುವನೋ ಅವನು ಜಾಗರೂಕನಾಗಿಯೂ ದೀನನಾಗಿಯೂ ನಂಬಿಗಸ್ತನಾಗಿಯೂ ಕಂಡುಬಂದಲ್ಲಿ ಆತನನ್ನು ಕರ್ತನು ತನ್ನ ಮನೆತನದವರ ಸೇವೆಯಲ್ಲಿ ಹೆಚ್ಚುಹೆಚ್ಚಾಗಿ ಅಂದರೆ "ಸುಗ್ಗಿಯ ಕಾಲದ" ಅಂತ್ಯದವರೆಗೂ ಬಳಸಿಕೊಳ್ಳುವನು.

## "ದೇವರ ಆಸ್ತಿಯ ಮೇಲೆ ಒಡೆಯನನ್ನಾಗಿ ಅಲ್ಲ"

ಈ ಸೇವಕನು ಒಡೆಯನಂತೆ ನಡಕೊಳ್ಳಬಾರದೆಂಬುದನ್ನು ಅಥವಾ ಆತನು ಗೌರವಿಸಲ್ಪಡಬಾರದೆಂಬುದನ್ನು ವಚನ 45ರಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿರುವದು. ತನಗೆ ನೇಮಕವಾದ ಕೆಲಸವನ್ನು ದುರುಪಯೋಗಮಾಡಿದಲ್ಲಿ ಅದು ಆತನನ್ನು ಬಿದ್ದುಹೋಗುವಂತೆ ಮಾಡುತ್ತದೆ. ನಿಜವಾಗಿಯೂ ಸಭೆಯ ಸೇವೆಮಾಡುವವನಾಗಿ ಕರ್ತನ ಬಂಡಾರದಿಂದ ಹೊತ್ತು ಹೊತ್ತಿಗೆ ಬೇಕಾದ ಆಹಾರವನ್ನು ಒದಗಿಸಿಕೊಡಲು ಪರಿಶ್ರಮಿಸುತ್ತಿರುವ ತನ್ನ ಸೇವಕನ ಬಗ್ಗೆ ಎಚ್ಚರಿಕೆಯಿಂದ ಗಮನಿಸುತ್ತಿಲು ಸಭೆಗೆ ಯಾವ ಸಮಯದಲ್ಲೂ ಅಗತ್ಯವಿರುವದಿಲ್ಲ. ಸಭೆಗೆ ಯಾವಾಗಲೂ ಅಪಾಯವು ಬರುತ್ತಿರುವದು ದೇವರ ಆಸ್ತಿಯ ಮೇಲೆ ಒಡೆತನ ಮಾಡಲು ಮತ್ತು ದೇವರ ವಾಕ್ಯಕ್ಕೆ ಬದಲಾಗಿ ತಮ್ಮ ಸ್ವಂತ ಜ್ಞಾನವನ್ನು ಅಥವಾ ಇತರ ಮನುಷ್ಯರ ಜ್ಞಾನವನ್ನು ಒದಗಿಸಿಕೊಡಲು ಯತ್ನಿಸುತ್ತಿರುವವರ ಮೂಲಕವಾಗಿಯೇ.

ಕರ್ತನ ಕಡೆಗಿರುವ ಆ ಸೇವಕನ ಹೊಣೆಗಾರಿಕೆಯು ಕರ್ತನ ಚಿತ್ತವನ್ನು ತಿಳಿದುಕೊಂಡಿರುವಷ್ಟರ ಮಟ್ಟಿಗೆ ಇರುತ್ತದೆಂದು ಮತ್ತು ಹೆಚ್ಚು ತಿಳುವಳಿಕೆ ಮತ್ತು ಅವಕಾಶಗಳು ಹೊಂದಿರುವಷ್ಟರ ಅನುಸಾರವಾಗಿ ಆತನು ಕರ್ತನಿಂದ ಅಧಿಕವಾಗಿ ನಿರೀಕ್ಷಿಸಲ್ಪಡುವನೆಂಬುದು ಕರ್ತನ ನಿಯಮವೆಂದು 47–48ನೇ ವಚನಗಳಲ್ಲಿ ವ್ಯಕ್ತವಾಗಿರುವಂತೆ ತೋರುತ್ತದೆ.

ತನ್ನಿಂದ ಇತರ ಸೇವಕರಿಗೆ ಒದಗಿಸಿಕೊಡಬೇಕಾದ ಒಬ್ಬ ನಿರ್ಧಿಷ್ಟ ವ್ಯಕ್ತಿಗೆ ಈ ಬುದ್ಧಿವಾತು ಸಾವಾನ್ಯವಾಗಿ ಅನ್ವಯವಾಗುತ್ತದೆಂದು ತೋರುತ್ತದಾದರೂ (ಮತ್ತಾಯ 24:45–51 ನೋಡಿ) ಈ ನಿಯಮವು ಒಂದು ಸಾಮಾನ್ಯವಾದ ಅರ್ಥದಲ್ಲಿ ಪ್ರತಿಯೊಬ್ಬ ಸೇವಕನಿಗೂ ತಾನು ಹೊಂದಲಿರುವ ಆಹಾರಪದಾರ್ಥಗಳ ವಿಷಯ ಅಥವಾ ಮನೆವಾರ್ತೆಯ ವಿಷಯ ಇವುಗಳಿಗೆ ಪ್ರತಿಯಾಗಿ ಅನ್ವಯವಾಗುವದೆಂಬುದನ್ನು ನಮಗೆ ನೋಡಲು ಸಾಧ್ಯ. ತಾನು ಏನನ್ನು ಪಡಕೊಂಡಿರುವನು ಅಥವಾ ಯಾವುದನ್ನು ಪಡಕೊಳ್ಳುವ ಅವಕಾಶವನ್ನು ಹೊಂದಿದ್ದನು ಮತ್ತು ಆ ಆಶೀರ್ವಾದವನ್ನು ಉಪಯೋಗಿಸಿದ ರೀತಿ ಇವುಗಳ ಅನುಸಾರ ಆತನ ಜವಾಬ್ದಾರಿಯು ನೆಲೆಸಿರುವದು. ಈ ದಿನದಲ್ಲಿರುವ ನಾವು ಪ್ರಸ್ತುತ ಸತ್ಯದ ಬೆಳಕಿನಲ್ಲಿ ಆನಂದ ಪಡುತ್ತಿರುವವರಾಗಿ ಕರ್ತನ ಎಂಥಾ ವಿಶೇಷವಾದ ಅನುಗ್ರಹದಲ್ಲಿ ಜೀವಿಸುತ್ತಿರುವೆವೆಂದರೆ, ಒಡೆಯನು ತನ್ನ ಬೊಕ್ಕಸದೊಳಗಿಂದ ನಮಗೆ ವಿತರಿಸುತ್ತಿರುವ ಹೊಸ ಮತ್ತು ಹಳೆಯ ವಸ್ತುಗಳ ವಿಷಯವಾಗಿ ಗ್ರಹಿಕೆಮಾಡಿಕೊಳ್ಳುತ್ತಿದ್ದು, ಇವುಗಳಿಗಾಗಿ ಹೆಚ್ಚು ಹೆಚ್ಚು ಕೃತಜ್ಞತೆ ಸಲ್ಲಿಸಲು ನಮಗೆ ಅನೇಕ ಕಾರಣಗಳಿರುವವು. ಮತ್ತು ಇದಕ್ಕೆ ಪ್ರತಿಯಾಗಿ, ಪ್ರತಿಯೊಬ್ಬನೂ ಇವುಗಳನ್ನು ಇತರರಿಗೆ ಹಂಚಿಕೊಡುವ ಸೌಭಾಗ್ಯವನ್ನು ಪಡೆದವನಾಗಿದ್ದು ತಾನು ಪಡೆದಿರುವ ಜ್ಞಾನದ ಪ್ರವಾಣಾನುಸಾರವಾಗಿ ಜವಾಬ್ದಾರಿಯನ್ನೂ ಹೊಂದಿರುವನು. ನಮ್ಮಲ್ಲಿ ಪ್ರತಿಯೊಬ್ಬನೂ ನಂಬಿಗಸ್ತನಾಗಿರಲು ಮತ್ತು ನಮ್ಮ ಕರ್ತನು ಮಗನಾಗಿರುವದಲ್ಲದೆ ಸೇವಕನಾಗಿಯೂ ಸಹ ಇರುವನೆಂಬುದನ್ನು ನೆನಪುಮಾಡಿಕೊಳ್ಳಲು ಕರ್ತನು ನಮಗೆ ಸಹಾಯಮಾಡುವನು. ಮತ್ತು ಮಕ್ಕಳಾಗಿದ್ದಾಗ್ಯೂ ನಾವು ಪಡೆದಿರುವ ಉತ್ಕೃಷ್ಟವಾದ ಸೌಭಾಗ್ಯವೆಂದರೆ ನಾವು ದೇವರ ವಿವಿಧ ಕೃಪೆಯ ವಿಷಯದಲ್ಲಿ ನಂಬಿಗಸ್ತರಾದ ಸೇವಕರುಗಳು ಅಥವಾ ಮನೆವಾರ್ತೆಯವರು ಆಗಿರುವಂಥದೇ!

*****



"ವಧಿತನಾದ ಕುರಿಯಾದಾತನು
ಬಲ ಐಶ್ವರ್ಯ ಜ್ಞಾನ ಸಾಮರ್ಥ್ಯ
ಮಾನ ಪ್ರಭಾವ ಸ್ತೋತ್ರಗಳನ್ನು
ಹೊಂದುವದಕ್ಕೆ ಯೋಗ್ಯನು
ಎಂದು ಹೇಳಿದರು.

ಇದಲ್ಲದೆ ಆಕಾಶದಲ್ಲಿಯೂ
ಭೂಮಿಯ ಮೇಲೆಯೂ
ಭೂಮಿಯ ಕೆಳಗೂ ಸಮುದ್ರದ
ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು
ಅಂದರೆ ಭೂಮ್ಯಾಕಾಶಸಮುದ್ರಗಳೊಳಗೆ
ಇರುವುದೆಲ್ಲವೂ ಸಿಂಹಾಸನಾಸೀನನಿಗೂ ಯಜ್ಞದ ಕುರಿಯಾದಾತನಿಗೂ
ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ
ಇರಲಿ ಎಂದು ಹೇಳುವುದನ್ನು ಕೇಳಿದೆನು."

**ಪ್ರಕಟನೆ 5:12, 13**